ಡಾ. ಸಿದ್ಧಯ್ಯ ಪುರಾಣಿಕರ
(‘ಕಾವ್ಯಾನಂದ’)
ಸಮಗ್ರ ನಾಟಕಗಳು

ಕನ್ನಡ ಮತ್ತು ಸಂಸ್ಕೃತಿ ಇಲಾಖೆ
ಕನ್ನಡ ಭವನ, ಜೆ.ಸಿ. ರಸ್ತೆ, ಬೆಂಗಳೂರು–560 002

Siddaiah Puranikara (Kavyananda) Samagra Natakagalu, by Siddaiah Puranika, Published by Dr. K.M. Gayatri, I.A.S, Director, Dept. of Kannada and Culture Kannada Bhavana, J.C. Road. Bengaluru-560002

ಈ ಆವೃತ್ತಿಯ ಹಕ್ಕು : **ಕನ್ನಡ ಮತ್ತು ಸಂಸ್ಕೃತಿ ಇಲಾಖೆ**

ಪ್ರಕಾಶಕರು :

ಕೆ.ಎಂ. ಗಾಯತ್ರಿ, ಭಾ.ಆ.ಸೇ
ನಿರ್ದೇಶಕರು
ಕನ್ನಡ ಮತ್ತು ಸಂಸ್ಕೃತಿ ಇಲಾಖೆ
ಕನ್ನಡ ಭವನ, ಜೆ.ಸಿ. ರಸ್ತೆ, ಬೆಂಗಳೂರು – 560 002

ಮೊದಲ ಮುದ್ರಣ	: ೨೦೦೯
ದ್ವಿತೀಯ ಮುದ್ರಣ	: ೨೦೨೫
ಪ್ರತಿಗಳು	: ೧೦೦೦
ಪುಟಗಳು	: XXIV + ೫೪೮
ಬೆಲೆ	: ರೂ.೨೭೦/–

First Print	: 2009
Second Print	: 2025
Copies	:1000
Price	: 270/-
Pages	: XXIV + 548

ಮುದ್ರಕರು
ಶ್ರೀ ಐಶ್ವರ್ಯ ಪ್ರಿಂಟ್ಸ್
ನಂ.೪, ೭ನೇ ಮುಖ್ಯರಸ್ತೆ, ಪಾಪಯ್ಯ ಗಾರ್ಡನ್,
ಬನಶಂಕರಿ ೩ನೇ ಹಂತ, ಬೆಂಗಳೂರು–೫೬೦ ೦೮೫
ಮೊಬೈಲ್ : ೯೮೮೬೨ ೧೦೫೫೮

ಪ್ರಕಾಶಕರ ಮಾತು

ಕನ್ನಡ ಓದುಗರಿಗೆ ಸುಲಭ ಬೆಲೆಯಲ್ಲಿ ಉತ್ತಮ ಕೃತಿಗಳು ಲಭ್ಯವಾಗಬೇಕೆನ್ನುವ ಉದ್ದೇಶದಿಂದ ಕರ್ನಾಟಕ ಸರ್ಕಾರದ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯು ಹಲವಾರು ಪ್ರಕಟಣಾ ಯೋಜನೆಗಳನ್ನು ರೂಪಿಸಿಕೊಂಡು ಕಾರ್ಯರೂಪಕ್ಕೆ ತರುತ್ತಿದೆ.

ಡಾ. ಸಿದ್ಧಯ್ಯ ಪುರಾಣಿಕರ ಜನ್ಮ ಶತಮಾನೋತ್ಸವದ ಅಂಗವಾಗಿ ಅವರ ಸಮಗ್ರ ಕಾವ್ಯ, ಸಮಗ್ರ ವಚನ, ಸಮಗ್ರ ನಾಟಕ ಮತ್ತು ಸಮಗ್ರ ಗದ್ಯದ ಕೃತಿಗಳನ್ನು ಪ್ರಕಟಿಸಲಾಗುತ್ತಿದೆ.

ಹೈದರಾಬಾದ್ ಕರ್ನಾಟಕದಲ್ಲಿ ಕನ್ನಡ ಕಾಣೆಯಾಗುತ್ತಿದ್ದ ಕಾಲದಲ್ಲಿ ಅದಕ್ಕೆ ಆಸರೆಯಾಗಿ ನಿಂತು ಕನ್ನಡವನ್ನು ಪುನರುಜ್ಜೀವಗೊಳಿಸಿದ ಡಾ. ಸಿದ್ಧಯ್ಯ ಪುರಾಣಿಕರು ನಿರ್ಜೀವವಾಗುತ್ತಿದ್ದ ಕನ್ನಡ ಸಂಘ–ಸಂಸ್ಥೆಗಳಿಗೆ ಜೀವ ತುಂಬಿದವರು. ಸರ್ಕಾರದ ಅಧಿಕಾರಿಯಾಗಿ ದಕ್ಷ, ಸ್ವಚ್ಛ ಮತ್ತು ನಿಸ್ಪೃಹ ಆಡಳಿತಗಾರರೆಂದು ಪ್ರಖ್ಯಾತಿ ಪಡೆದಿದ್ದರು.

ಡಾ. ಸಿದ್ಧಯ್ಯ ಪುರಾಣಿಕರು 'ಕಾವ್ಯಾನಂದ' ಕಾವ್ಯನಾಮದಿಂದ ಕವಿತೆ, ಕಥೆ, ಕಾದಂಬರಿ, ಪ್ರಬಂಧ, ವಿಮರ್ಶೆ, ಜೀವನ ಚರಿತ್ರೆ, ನಾಟಕ, ವಚನ ಸಾಹಿತ್ಯ ಹೀಗೆ ಸಾಹಿತ್ಯದ ವಿವಿಧ ಪ್ರಕಾರಗಳಲ್ಲಿ ಸುಮಾರು ೩೮ ಕೃತಿಗಳನ್ನು ರಚಿಸಿದ್ದಾರೆ. ಉತ್ತಮ ವಾಗ್ಮಿ, ವಿಮರ್ಶಕ ಮತ್ತು ವಿದ್ವಾಂಸರಾಗಿದ್ದ ಡಾ. ಸಿದ್ಧಯ್ಯ ಪುರಾಣಿಕರಿಗೆ ಅನೇಕ ಸಮ್ಮೇಳನಗಳ ಅಧ್ಯಕ್ಷತೆಯ ಗೌರವ, ಅಕಾಡೆಮಿ ಪ್ರಶಸ್ತಿ, ರಾಜ್ಯೋತ್ಸವ ಪ್ರಶಸ್ತಿ, ಬಿಲ್ವಾರ ಪ್ರಶಸ್ತಿ ಮುಂತಾದ ಪ್ರಶಸ್ತಿ ಪುರಸ್ಕಾರಗಳು ಸಂದಿವೆ. ಅನೇಕ ಕೃತಿಗಳು ಇತರ ಭಾಷೆಗಳಿಗೆ ಭಾಷಾಂತರಗೊಂಡಿವೆ.

ಕುವೆಂಪುರವರು ಡಾ. ಸಿದ್ಧಯ್ಯ ಪುರಾಣಿಕರು ಒಬ್ಬ ಅಪರೂಪದ ವ್ಯಕ್ತಿ ಎಂದು ಹೀಗೆ ಹೇಳಿದ್ದಾರೆ :

"ಜ್ಞಾನ, ಅಧಿಕಾರ, ವಿನಯ, ಸೌಜನ್ಯಶೀಲತೆಗಳು ಏಕತ್ರ ಸಮಾವೇಶಗೊಳ್ಳುವುದು ತುಂಬಾ ಅಪರೂಪ ಎಂಬುದು ನಮ್ಮೆಲ್ಲರ ಅನುಭವಕ್ಕೆ ಬಂದ ವಿಷಯವಾಗಿದೆ. ಇದಕ್ಕೆ ಅಪರೂಪವಾಗಿ ನಿಂತ ಪ್ರತಿಭಾಶೀಲ – ಸತ್ಪುರುಷರ ವಿರಳ ಪಂಕ್ತಿಯಲ್ಲಿ ನಿಂತಿದ್ದಾರೆ ಶ್ರೀ ಪುರಾಣಿಕರು. ಮೊದಲ ಬಾರಿಗೇ ಅವರು ನನ್ನನ್ನು ತಮ್ಮ ಬರವಣಿಗೆಯಿಂದ ಹೇಗೋ ಹಾಗೆ ಸುಸಂಸ್ಕೃತ ವ್ಯಕ್ತಿತ್ವದಿಂದಲೂ ಆಕರ್ಷಿಸಿದರು. ಆ ಆಕರ್ಷಣೆ ದಶಕಗಳ ಕಾಲ ಮಾಸದೆ ಹಾಗೆಯೇ ಉಳಿದಿದೆ."

ಈ ಎಲ್ಲಾ ಸಮಗ್ರ ಕೃತಿಗಳನ್ನು ಹೊರತರಲು ಸಹಕರಿಸಿದ ಇಲಾಖೆಯ ಅಧಿಕಾರಿ ಸಿಬ್ಬಂದಿಗೆ, ಕರಡುಪ್ರತಿಯನ್ನು ತಿದ್ದಲು ನೆರವಾದ, ವಿದ್ವಾಂಸರಾದ ಶ್ರೀ ಶಾ.ಮಂ. ಕೃಷ್ಣರಾಯ ಅವರಿಗೆ, ಈ ಸಂಪುಟಗಳನ್ನು ಅಂದವಾಗಿ ಮುದ್ರಿಸಿಕೊಟ್ಟ ಲಾವಣ್ಯ ಮುದ್ರಣದ ಮಾಲೀಕರು ಹಾಗೂ ಸಿಬ್ಬಂದಿ ವರ್ಗದವರಿಗೆ ಮತ್ತು ಈ ಎಲ್ಲ ಕೃತಿಗಳನ್ನು ಸಂಗ್ರಹಿಸಿ, ಮುದ್ರಿಸಲು ಅನುಮತಿ ನೀಡಿದ ಡಾ. ಸಿದ್ಧಯ್ಯ ಪುರಾಣಿಕರ ಪುತ್ರರಾದ ಶ್ರೀ ಪ್ರಸನ್ನಕುಮಾರ ಪುರಾಣಿಕ ಅವರಿಗೆ ನನ್ನ ಕೃತಜ್ಞತೆಗಳು.

ಕನ್ನಡದ ಧೀಮಂತ ಕವಿ, ವಿಮರ್ಶಕರಲ್ಲಿ ಒಬ್ಬರಾದ ಡಾ. ಸಿದ್ಧಯ್ಯ ಪುರಾಣಿಕರ ಸಮಗ್ರ ಕೃತಿಗಳು ಸುಲಭ ಬೆಲೆಯಲ್ಲಿ ಕನ್ನಡಿಗರಿಗೆ ಒದಗಿಸುವುದು ನಮ್ಮ ಆಶಯ. ಈ ಕೃತಿಗಳನ್ನು ಸಾಹಿತ್ಯಾಸಕ್ತರು ಪ್ರೀತಿಯಿಂದ ಸ್ವಾಗತಿಸುತ್ತಾರೆಂದು ನಂಬಿದ್ದೇವೆ.

–ಕೆ.ಎಂ. ಗಾಯತ್ರಿ, ಭಾ.ಆ.ಸೇ

ನಿರ್ದೇಶಕರು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ

ಬೆಂಗಳೂರು

ಮುನ್ನುಡಿ – ಮೊದಲ ಮುದ್ರಣ

ನನಗೆ ಪ್ರಿಯರೂ ಆತ್ಮೀಯರೂ ಆಗಿದ್ದ ಸಿದ್ಧಯ್ಯ ಪುರಾಣಿಕರ ಸಮಗ್ರ ಕಾವ್ಯ, ಸಮಗ್ರ ವಚನ ಸಂಪುಟಗಳ ನಂತರ ಈಗ ಅವರ ಸಮಗ್ರ ನಾಟಕಗಳ ಸಂಪುಟ ಹೊರಬರುತ್ತಿದೆ. ಇಂಥ ಸಂಪುಟಗಳ ಪ್ರಕಟಣೆ ಆಸಕ್ತರಿಗೆ, ಅಭ್ಯಾಸಿಗಳಿಗೆ, ಸಂಶೋಧಕರಿಗೆ, ಸಾಹಿತ್ಯ ಮತ್ತು ಇತಿಹಾಸ ಸಂರಕ್ಷಕರಿಗೆ ತುಂಬ ನೆರವಾಗುವಂಥ ಕಾರ್ಯ. ಈ ಮಹತ್ತ್ವದ ಕೆಲಸ ಕೈಕೊಂಡಿರುವ ಪುರಾಣಿಕರ ಅಭಿಮಾನೀ ಪುತ್ರ ಪ್ರಸನ್ನಕುಮಾರ ಅವರಿಗೆ ಮೊದಲು ಅಭಿನಂದನೆಗಳು. ಪ್ರಸ್ತುತ ಸಂಪುಟದ ಸಂಗ್ರಹ ಕಾರ್ಯ ಮುಗಿದೊಡನೆ ಅವರು ನನ್ನನ್ನು ಸಂಪರ್ಕಿಸಿ, ಈ ಸಂಪುಟಕ್ಕೆ ನಾನೇ ಮುನ್ನುಡಿ ಬರೆಯಬೇಕು, ಇದು ಡಾ. ಎಸ್. ವಿದ್ಯಾಶಂಕರ ಅವರ ಅಪೇಕ್ಷೆಯೂ ಆಗಿದೆ ಅಂದರು. ಮೊದಲು ಸ್ವಲ್ಪ ಸಂಕೋಚ ವ್ಯಕ್ತಪಡಿಸಿದೆ. ಆದರೆ ಪ್ರಸನ್ನರ ಪ್ರಸನ್ನ ಮನಸ್ಸಿನ ಆಗ್ರಹವು ಸಿದ್ಧಯ್ಯ ಪುರಾಣಿಕರ ಸದಾಶುದ್ಧ ಆತ್ಮದ ಅನುಗ್ರಹವೇ ಎಂದು ಭಾವಿಸಿ ಒಪ್ಪಿದೆ. ಈ ಇಬ್ಬರೂ ಆತ್ಮೀಯರಿಗೆ ನನ್ನ ಕೃತಜ್ಞತೆಗಳು.

ವಿವಿಧ ಪ್ರಸಂಗಗಳಲ್ಲಿ, ಬಗೆ ಬಗೆಯ ಒತ್ತಡ ಅಪೇಕ್ಷೆಗಳಿಗೆ ಉತ್ತರವಾಗಿ, ಬೇರೆ ಬೇರೆ ದೇಶ–ಕಾಲ–ಪರಿಸ್ಥಿತಿ–ಪ್ರಸಂಗಗಳ ಇತಿಹಾಸ, ಮನಃಸ್ಥಿತಿಗಳ ಸಾಂಸ್ಕೃತಿಕ ವಿಶ್ಲೇಷಣೆಯ ರೀತಿಯಲ್ಲಿ ನಿರೂಪಿತವಾಗಿರುವ ಕಾವ್ಯಾನಂದರ ನಾಟಕರೂಪದ ಸಾಹಿತ್ಯ ಸಂಪುಟ ಇದು. ಮುಖ್ಯವಾಗಿ ಮನೋಧರ್ಮದಿಂದ ಕವಿ, ವಚನಕಾರರೇ ಆಗಿದ್ದ ಸಿದ್ಧಯ್ಯ ಪುರಾಣಿಕರು ರಚಿಸಿದ ಒಟ್ಟು ೧೯ ನಾಟಕ, ರೂಪಕಗಳನ್ನು ಓದುವುದು, ವಿಂಗಡಿಸುವುದು, ವಿಮರ್ಶಿಸುವುದು ಸ್ವಲ್ಪ ಶ್ರಮದ ಮತ್ತು ಸಹನೆಯ ಕಾರ್ಯವೇ ಆಗಿತ್ತು. ಎಲ್ಲವನ್ನೂ ಓದಿದ ನಂತರ ಮನಸ್ಸು ತುಂಬಿರುವ ಈ ವೈವಿಧ್ಯ, ವಿಸ್ತಾರಗಳಿಗೆ ನಾನು ಬರೆಯುತ್ತಿರುವ ಅಕ್ಷರ ರೂಪದ ಪರಿಚಯಾತ್ಮಕವಾದ ಈ ಸಂಕ್ಷಿಪ್ತ ಮುನ್ನುಡಿ ಒಂದು ಪುಟ್ಟ ಕನ್ನಡಿ ಮಾತ್ರ ಎಂಬ ಅರಿವು ನನಗಿದೆ.

* * *

ಕಾವ್ಯಾನಂದ ಸಿದ್ಧಯ್ಯ ಪುರಾಣಿಕರು ಕನ್ನಡದ ಅಪೂರ್ವ, ಅಪಾರ ಸಾಹಿತ್ಯ ನಿಧಿಯಾಗಿದ್ದರು. ಅವರು ೧೯೩೨ ರಲ್ಲಿಯೇ ಅಂದರೆ, ತಮ್ಮ ಹದಿನಾಲ್ಕನೆಯ

ವಯಸ್ಸಿನಲ್ಲಿಯೇ 'ಬೆಳಗು' ಎಂಬ ಸುಶ್ರಾವ್ಯ ಶುದ್ಧ ನವಗೀತವೊಂದನ್ನು ರಚಿಸಿ ಪ್ರಕಟಿಸಿದ್ದರು. ಅದರ ಮೂಲಕ ಪ್ರಕೃತಿ ಪ್ರೇಮ, ಹೊಸ ರೂಪ, ಅಲಂಕಾರ, ರಾಗ, ಧ್ವನಿಗಳಿಂದ ಕೂಡಿದ

> 'ಇಂದಿನುಷೆ ತಂದಿಹಳು ಸೌಂದರ್ಯ ಸಂದೇಶ
> ಜಗದ ಜೀವಿಗಳದರ ವಿವಿಧ ವೇಷ
> ವಿಶ್ವಗರ್ಭವದೆಲ್ಲ ಒಂದೆ ಜೀವದ ಕೋಶ
> ವಿಶ್ವಮಾನವ ಮೈತ್ರಿ ಪ್ರಕೃತಿಯಾದೇಶ!'

ಎಂದು ಸಾರಿದ್ದರು. ಸಿದ್ಧಯ್ಯ ಪುರಾಣಿಕರು ಪ್ರಕೃತಿಮಾತೆಯ ಆ ವಿಶ್ವಮಾನವ ಸಂದೇಶವನ್ನು ತಮ್ಮ ಕರ್ಮ ಮತ್ತು ಧರ್ಮಮಯ ಬದುಕಿನುದ್ದಕ್ಕೂ ಸಾಧಿಸಿ ಪಾಲಿಸಿದರು. ತಮ್ಮ ನಾಲಗೆ, ಕೊರಳು, ಮಿದುಳು, ಹೃದಯಗಳನ್ನು ಕೊನೆಯ ವರೆಗೂ ಅಪರೂಪದ ವಿಶ್ವಮಾನವ ತತ್ತ್ವಕ್ಕೆ ಸಮರ್ಪಿಸಿಕೊಂಡಿದ್ದರು. ಪ್ರಪಂಚದ ಪ್ರತಿಯೊಬ್ಬ ವ್ಯಕ್ತಿಗೂ, ನೀನು ಏನೇ ಆದರೂ 'ಮೊದಲು ಮಾನವನಾಗು', ಆಗ ಮಾತ್ರ ಸಮಸ್ತ ವಿಶ್ವ ಶಿವಮಯವಾಗುತ್ತದೆ, ಅದೇ ಗುರಿಯಾಗಲಿ, ಗುರುವಾಗಲಿ ಎಂದಿದ್ದರು.

* * *

ಸಿದ್ಧಯ್ಯ ಪುರಾಣಿಕರು ಮೊದಲ ಸಲ ನನ್ನ ಹೃದಯ ಪ್ರವೇಶಿಸಿದ್ದು ೧೯೫೩–೫೪ ರಲ್ಲಿ. ಅವರು ೧೯೪೩ ರಲ್ಲಿ ಬರೆದಿದ್ದ 'ಸಲಾಮ್ ಸಾಬ್!' ಕವಿತೆ ನನ್ನ ಹಾಯ್‌ಸ್ಕೂಲ್ ಪಠ್ಯಗ್ರಂಥದಲ್ಲಿತ್ತು. ವಸ್ತು, ಚಿಂತನೆ, ವಿವರಣೆ, ಭಾಷೆಯ ನಾವೀನ್ಯದಿಂದಾಗಿ ಅದು ನಮ್ಮನ್ನು ಸೆಳೆದುಬಿಟ್ಟಿತ್ತು. ಕಡು ಬೇಸಗೆಯ, ನಡುಹಗಲು ರಣಗುಡುವ ಬಿಸಿಲ ಬೇಗೆಯಲ್ಲಿ ಕಿವಿ ಕೊರೆದು, ನಡುಗಿಸಿದ ತುರುಕ ತಿರುಕನೋರ್ವನ ನಾಟ್ಯಮಯ ಚಿತ್ರಣದ 'ಸಲಾಮ್ ಸಾಬ್' ಓದಿ ಪುರಾಣಿಕರೊಳಗಿನ ಪ್ರಭಾವಕಾರೀ ಕವಿಗೆ ನಾವೂ ಸಲಾಮ್ ಸಾಬ್ ಎಂದಿದ್ದೆವು.

> 'ಭಾರತದ ಬಡತನದ ಬಾವುಟದ ಚಿತ್ರದೊಲು!
> ಅಳಲು ಕರುಣೆಗೆ ಬರೆದ ಜೀವಂತ ಪತ್ರದೊಲು!'

ಕಂಡಿದ್ದ ಬಡ ತುರುಕ ತಿರುಕನ ಬಗ್ಗೆ ಪುರಾಣಿಕರು ಕೇಳಿದ, 'ಹುಟ್ಟಿನೊಳಗಿರಬಹುದು ಹಸಿದ ಹೊಟ್ಟೆಯಲಿ ಕುಲವುಂಟೆ?' ಎಂಬ ಪ್ರಶ್ನೆ ಈಗಲೂ ಭಾರತದಷ್ಟೇ ಬೃಹತ್ ಪ್ರಶ್ನೆಯಾಗಿ ಅನುರಣಿಸುತ್ತಿದೆ. ಇಂಥ ನ್ಯಾಯನಿಷ್ಠುರ ಕವಿತೆ ಕನ್ನಡದಲ್ಲಿ ಇನ್ನೊಂದಿಲ್ಲ ಎಂದೇ ನನ್ನ ಭಾವನೆ.

ಪುರಾಣಿಕರು ೧೯೭೦ರಲ್ಲಿ ಬೆಳಗಾವಿಯ ಜಿಲ್ಲಾಧಿಕಾರಿಯಾಗಿ ಬಂದರು. ಧಾರವಾಡದಲ್ಲಿದ್ದ ತಾರಾ ಪ್ರಕಾಶನದ ಪಂಚಾಕ್ಷರಿ ಹಿರೇಮಠ, ಸಾಹಿತ್ಯ ಮಂದಿರದ ಟಿ.ಡಿ. ಶಿವಲಿಂಗಯ್ಯ ಮೊದಲಾದ ಗೆಳೆಯರನ್ನು

ಕಾಣಲು ಆಗಾಗ ಬರುತ್ತಿದ್ದರು. ಅಂಥ ಸಂದರ್ಭಗಳಲ್ಲಿ ಇಲ್ಲಿ ನಡೆಯುತ್ತಿದ್ದ ಕಾರ್ಯಕ್ರಮಗಳಲ್ಲಿ ಅವರ ಒಡನಾಟದ ಸುಖ ನಮಗೆ ಲಭಿಸುತ್ತಿತ್ತು. ೧೯೯೧ ಅಕ್ಟೋಬರ್ ೧೦ ರಂದು ಬೆಂಗಳೂರಿನ ತಮ್ಮ 'ಶ್ರೀಗಿರಿ'ಯಲ್ಲಿ ಅವರು ನೀಡಿದ ಆತಿಥ್ಯ ಈಗಲೂ ರುಚಿಕರವಾಗಿ ನೆನಪಿದೆ. ಅಂದು ಪುರಾಣಿಕರು ಪ್ರೀತಿಯಿಂದ ನೀಡಿದ್ದ 'ಮರುಳಸಿದ್ಧನ ಕಂತೆ' ನನ್ನಲ್ಲಿ ಅವರನ್ನು ತುಂಬಿದೆ.

* * *

ಸಿದ್ಧಯ್ಯ ಪುರಾಣಿಕರು ಪರಿಶುದ್ಧ ಸಾಂಸ್ಕೃತಿಕ ಮನಸ್ಸಿನಿಂದ ತುಂಬಿ ತುಳುಕುತ್ತಿದ್ದ ವ್ಯಕ್ತಿ. ಕಾವ್ಯವನ್ನು ಸಂಪೂರ್ಣ ವಾಙ್ಮಯವೆಂದೇ ಪರಿಗ್ರಹಿಸಿ ಸಾಹಿತ್ಯದ ಎಲ್ಲ ಪ್ರಕಾರಗಳಲ್ಲಿ ಅವರು ಬರವಣಿಗೆ ಮಾಡಿದರು. ಅವರ ವಚನಗಳು ಅನುಪಮ. ಕತೆ, ಕಾದಂಬರಿ, ನಾಟಕ, ಜೀವನಚರಿತ್ರೆ, ಪ್ರವಾಸ ಸಾಹಿತ್ಯ, ಶಿಶು ಸಾಹಿತ್ಯ, ಅನುವಾದ ಮುಂತಾದ ಕ್ಷೇತ್ರಗಳಲ್ಲಿ ಅಸದೃಶ ಕೆಲಸ ಮಾಡಿದ್ದಾರೆ. ಹೈದರಾಬಾದ್ ಕಾಲೇಜಿನಲ್ಲಿ ಇನ್ನೂ ಬಿ.ಎ. ಓದುತ್ತಿದ್ದಾಗಲೇ ಬಸವಣ್ಣನವರ ಪಾವನ ಬದುಕನ್ನು ಕುರಿತು 'ಆತ್ಮಾರ್ಪಣ' ಎಂಬ ನಾಟಕವನ್ನು ರಚಿಸಿ, ತಾವೇ ಬಸವಣ್ಣನಾಗಿ, ಅದನ್ನು ಅತ್ಯಂತ ಯಶಸ್ವಿಯಾಗಿ ರಂಗಕ್ಕೆ ತಂದು, ಪುರಸ್ಕಾರವಾಗಿ ಸುವರ್ಣ ಪದಕ ಪಡೆದ ನಟ ಘಟ ಅವರು. ಇದಕ್ಕೂ ಪೂರ್ವದಲ್ಲಿ ಹೀಗೆಯೇ ಒಂದೆರಡು ನಾಟಕಗಳನ್ನು ರಚಿಸಿ, ಕಲಬುರಗಿಯಲ್ಲಿ ತಮ್ಮ ಮಿತ್ರರೊಂದಿಗೆ ರಂಗಕ್ಕೆ ತಂದ ಅನುಭವವೂ ಅವರಿಗೆ ನೆರವಾಗಿತ್ತು. ಆಗ ಬರೆದ ಆ ನಾಟಕಗಳು ಕಳೆದು ಹೋದದ್ದು ನೋವಿನ ಸಂಗತಿ.

ಪುರಾಣಿಕರು ಆತ್ಮೀಯರ, ಗುರುವರ್ಗದವರ, ಅಭಿಮಾನಿ ಮಿತ್ರರ ಆಗ್ರಹದಿಂದ ೧೯೪೨ ರಲ್ಲೇ 'ಆತ್ಮಾರ್ಪಣ' ನಾಟಕ ಪ್ರಕಟಿಸಿದ್ದಾರೆ. ಆ ವರೆಗೆ ವಿವಿಧ ಪತ್ರಿಕೆಗಳಲ್ಲಿ ಹಲವಾರು ಮಹತ್ವದ ಕವಿತೆಗಳು ಪ್ರಕಟವಾಗಿ ಕವಿ ಎಂದು ಖ್ಯಾತಿ ಬಂದಿದ್ದರೂ ಪುಸ್ತಕ ರೂಪದಲ್ಲಿ ಪ್ರಕಟವಾದ ಪುರಾಣಿಕರ ಮೊಟ್ಟ ಮೊದಲ ಕೃತಿ 'ಆತ್ಮಾರ್ಪಣ'. ಆ ಕೃತಿಗೆ ಅವರು ಬರೆದ ನಿವೇದನ ನುಡಿಗಳು ಬಸವ ತತ್ತ್ವಗಳ ದಾರ್ಶನಿಕ ನಿಲುವು, ಮಾನವಪ್ರೇಮ, ವಚನಗಳ ವಿಶ್ವರೂಪ, ನಾಟಕದ ಕಾರ್ಯ, ನಾಟಕಕಾರನ ಕರ್ತವ್ಯ ಮುಂತಾದ ವಿಚಾರಗಳನ್ನು ಚರ್ಚಿಸುವ ಉತ್ತಮ ಪ್ರಬಂಧವಾಗಿದೆ. ಆಗಿನಿಂದ ಬಸವಣ್ಣ ಮತ್ತು ಶರಣ ಸಾಹಿತ್ಯ ಅವರಿಗೆ ಉಸಿರು. ಬಸವಣ್ಣನ "ಜೀವನವು ವಿಶ್ವಸಂಸ್ಕೃತಿಗೆ ಕನ್ನಡವು ನೀಡಿದ ಕಾಣಿಕೆ. ನೋಡಿದಷ್ಟೂ ನವೋನವವಾಗಿ ತೋರುವ 'ಅಣ್ಣ'ನ ದಿವ್ಯ ಭವ್ಯ ಮೂರ್ತಿಸ್ವರೂಪದ ಪರಿಚಯವು ಕನ್ನಡ ಜನತೆಗೇ ಸರಿಯಾಗಿ 'ಆಗಬೇಕಾದಷ್ಟು' ಆಗಬೇಕಾಗಿರುವುದರ ಅತ್ಯಲ್ಪ ಭಾಗದಷ್ಟು ಸಹ ಆಗಿಲ್ಲ. ಅನ್ಯ ಪ್ರಾಂತಗಳಿಗೆ, ಪರರಾಷ್ಟ್ರಗಳಿಗೆ, ಆಗುವ ಆಶೆಯೆಲ್ಲಿ?" ಎಂಬ ಕೊರಗು ಪುರಾಣಿಕರಿಗೆ. ಬಸವಣ್ಣನನ್ನು ಜನತೆಯ ಅರಿವಿನ ಮಟ್ಟಕ್ಕೆ ತಲುಪಿಸಲು ನಾಟಕವೇ ಸೂಕ್ತ ಮಾಧ್ಯಮ ಎಂದು ನಿರ್ಧರಿಸಿ 'ಆತ್ಮಾರ್ಪಣ'ವನ್ನು

ರಚಿಸಿದ್ದಾರೆ. ಹೀಗೆ ಕಾವ್ಯ ಮತ್ತು ನಾಟಕಗಳನ್ನು ಸಮಾನವಾಗಿ ಪ್ರೀತಿಸಿ ಮುಂದಿನ ದಿನಗಳಲ್ಲಿ ಕಾವ್ಯನಾಟಕಗಳಲ್ಲಿ ಅಪ್ರತಿಮ ಯಶಸ್ಸು ಸಾಧಿಸಿದ ನಾಟ್ಯಕವಿ ಸಿದ್ಧಯ್ಯ ಪುರಾಣಿಕರು. ಬಸವಣ್ಣನ ಉನ್ನತ ಆದರ್ಶಪೂರ್ಣ ಮಹಿಮಾಮಯ ಜೀವನ, ಸಾಮಾನ್ಯ ಜನತೆಯ ಉದ್ಧಾರದ ಕಳಕಳಿ, ಸಮಾಜದ ಬಗ್ಗೆ ಲೇಖಕನಿಗಿರಬೇಕಾದ ಕರ್ತವ್ಯ, ನಾಟಕ ಮಾಧ್ಯಮದ ಸಾರ್ವಕಾಲಿಕತೆ ಮುಂತಾದ ವಿಷಯಗಳ ಬಗ್ಗೆ ಪುರಾಣಿಕರು ಇಟ್ಟುಕೊಂಡಿದ್ದ ಸರಳ, ಸ್ಪಷ್ಟ, ನೇರ, ನಿಷ್ಕಲುಷ, ವಿನಯಪೂರ್ಣ ಉದ್ದೇಶದ ಹಿನ್ನೆಲೆಯಲ್ಲಿಯೇ 'ಆತ್ಮಾರ್ಪಣ'ವನ್ನು ಪರಿಶೀಲಿಸಬೇಕು ಮತ್ತು ಸ್ವೀಕರಿಸಬೇಕು.

ಆಗಿನ ಕಾಲದಲ್ಲಿ ತಾವು ನೋಡಿದ, ಮೆಚ್ಚಿದ ಜನಪ್ರಿಯ ವೃತ್ತಿ ನಾಟಕಗಳನ್ನು, ಸಾರ್ವಜನಿಕರ ಮೇಲೆ ಅವು ಬೀರಿದ ಪ್ರಭಾವಗಳನ್ನು ಲಕ್ಷ್ಯದಲ್ಲಿಟ್ಟುಕೊಂಡು ಪುರಾಣಿಕರು ಈ ಸಾಹಿತ್ಯಸಮಾನ, ವೃತ್ತಿಪ್ರಧಾನ ನಾಟಕವನ್ನು ರೂಪಿಸಿಕೊಂಡಿದ್ದಾರೆ. ಮೂರು ಅಂಕಗಳಲ್ಲಿ ಚೆಲ್ಲುವರೆದಿರುವ ಈ ನಾಟಕದ ಎಲ್ಲ ದೃಶ್ಯಗಳಿಗೆ ಅವರು ಸ್ಪಷ್ಟವಾಗಿ 'ನೋಟ' ಎಂದೇ ಬರೆದಿದ್ದಾರೆ. ಬಹುಶಃ ರೂಪಕದ 'ದೃಶ್ಯ'ಕ್ಕಿಂತ ನಾಟಕದ 'ನೋಟ'ವೇ ಕಣ್ಣುಗಳಿಗೆ, ರಂಗಕ್ಕೆ ಹಾಗೂ ನೋಟಕರಿಗೆ ಹತ್ತಿರವಾಗುವ ಪದವೆನಿಸುತ್ತದೆ. ತಮ್ಮ ಇತರ ನಾಟಕಗಳಲ್ಲೂ ಈ 'ನೋಟ'ವನ್ನೇ ಅವರು ಎಲ್ಲೆಡೆ ಉಳಿಸಿಕೊಂಡಿದ್ದಾರೆ.

ಮಂಗಲಾಚರಣ ಅಥವಾ ಸ್ತುತಿಗೀತ, ಹಾಗೂ ಇತರ ಹಾಡುಗಳಿಗೆ ಪುರಾಣಿಕರು ಆ ಕಾಲದಲ್ಲಿ ಪ್ರಚಲಿತವಿದ್ದ ರಾಗ, ತಾಳ, ಲಯ, ಮಟ್ಟುಗಳನ್ನು ಸರಿಯಾಗಿ ಬಳಸಿಕೊಂಡಿದ್ದಾರೆ. ಅವರಿಗೆ ಶಾಸ್ತ್ರೀಯ, ಜಾನಪದ ಮತ್ತು ಸುಗಮ ಸಂಗೀತದ ಪ್ರೇಮ ಮತ್ತು ಪರಿಜ್ಞಾನ ಸಾಕಷ್ಟು ಇದ್ದಿತೆಂಬುದು ಸ್ಪಷ್ಟ. ಈ ಹಿನ್ನೆಲೆಯಲ್ಲಿಯೇ ವಿವಿಧ ಪಾತ್ರಗಳನ್ನು ಸೃಷ್ಟಿಸಿ, ಆ ನೆಪದಲ್ಲಿ ಬಗೆಬಗೆಯ ಹಾಡುಗಳನ್ನು ಬರೆದು ಜನರಂಜನೆಗೆ ಸಾಕಷ್ಟು ಸಾಮಗ್ರಿ ಒದಗಿಸಿದ್ದಾರೆ. ನಾಟಕಕಾರ ತನ್ನ ಕಥಾವಸ್ತುವನ್ನು, ಕಥಾನಾಯಕನನ್ನು ಸ್ತುತಿ ಮತ್ತು ಮೊದಲ ನೋಟದಲ್ಲಿಯೇ ಪ್ರತಿಷ್ಠಾಪಿಸಿಕೊಳ್ಳುವ ಸ್ಪಷ್ಟ ಪ್ರಯತ್ನ ಇಲ್ಲಿದೆ. ಬಸವಭಕ್ತಿ, ಶರಣವಚನಾಭಿಮಾನ, ತತ್ತ್ವ-ಭಾವಪ್ರಶಂಸೆಗಳು ಅತ್ಯುತ್ಸಾಹಕ್ಕೆ ಪಕ್ಕಾಗಿವೆ. ಹೀಗಾಗಿ ಪಾತ್ರಗಳ ಚರಿತ್ರಪೋಷಣೆ ಮತ್ತು ಮನೋಧರ್ಮಗಳ ಸಹಜ ವಿಕಸನಕ್ಕೆ ಇಲ್ಲಿ ಅವಕಾಶವೇ ಸಿಗದಂತಾಗಿದೆ. ಸ್ಥಳ, ಕಾಲ, ಪಾತ್ರ, ನೋಟಗಳ ಕ್ಷಿಪ್ರ ಬದಲಾವಣೆಯಿಂದಾಗಿ ಕಿರಿಕಿರಿಯೆನಿಸುತ್ತದೆ. ಕಾಲ, ಸ್ಥಳ ಮತ್ತು ಕ್ರಿಯೆಗಳ ಅನ್ವಿತಿಗೆ ಅನುವು ದೊರೆಯುವುದಿಲ್ಲ. ಆಗ ನಾಟಕದ ಅಪೇಕ್ಷಿತ ಪರಿಣಾಮ, ಪ್ರಭಾವಗಳು ಆತಂಕಗೊಳ್ಳುತ್ತವೆ. ನಾಟಕದಲ್ಲಿ ಸಹಜವಾಗಿ, ಕೆಲವು ಸಲ ತೇಪೆಗಳಂತೆ, ಬರುವ ಮಾತುಗಳು, ಹಾಸ್ಯ ಪ್ರಸಂಗಗಳು ಸಾಹಿತ್ಯಸಂವರ್ಧಕವೆನಿಸುವುದಿಲ್ಲ, ಆದರೆ ಜನರಂಜನೆ ಮತ್ತು ಜನನುಡಿಯ ಬಳಕೆಯಿಂದಾಗಿ ಮಹತ್ವದವಾಗುತ್ತವೆ. ಪಾತ್ರಗಳ ಆಗಮನ, ನಿರ್ಗಮನಗಳಲ್ಲಿ ಸಮಂಜಸತೆ ಉಳಿದಿಲ್ಲ.

ಸಂವಾದಗಳು ಅನೇಕ ಕಡೆ ಅನಗತ್ಯವಾಗಿ ದೀರ್ಘವಾಗಿವೆ, ಕೆಲವಂತೂ ೧–೨ ಪುಟಗಳಷ್ಟು ಲಂಬವಾಗಿವೆ, ಅತಿಸಂಸ್ಕೃತದ ಭಾರದಿಂದ ಬಾಗಿವೆ. ಅವು ಮನೋವೈಜ್ಞಾನಿಕವೆನಿಸುವುದಿಲ್ಲ. ಹೆಚ್ಚಿನವು ಕಾದಂಬರಿಯ ವಿವರಣಾತ್ಮಕ, ನಿರೂಪಣಾತ್ಮಕ ವರ್ಣನೆಗಳಂತಿವೆ. ಶರಣರ ವಚನಗಳನ್ನು ಸಂವಾದಗಳಲ್ಲಿ ತುಂಬಿಕೊಳ್ಳಲು ಯತ್ನಿಸಿದ್ದರಿಂದ ಮಾತಿನ ಸಹಜ ಗತಿ ಕುಂಟುತ್ತದೆ. ನಾಟಕಕಾರನ ಜೊತೆಗೆ, ಇಲ್ಲಿ ಬರುವ ಎಲ್ಲ ಪಾತ್ರಗಳೂ ಬಸವಣ್ಣನ ಪಾತ್ರವನ್ನು ಕಟ್ಟುವಲ್ಲಿ ಶ್ರಮಿಸುತ್ತವೆ. ಆದರೆ ಸ್ವತಃ ಬಸವಣ್ಣನ ಪಾತ್ರ ನಿರ್ವಹಣೆ ಈ ನಿಟ್ಟಿನಲ್ಲಿ ಯಶಸ್ವಿಯಾಗುವುದಿಲ್ಲ. ಪುರಾಣಿಕರು ಶರಣ ಸಾಹಿತ್ಯದ ಸಾರರೂಪ ಶೂನ್ಯಸಂಪಾದನೆಗಳನ್ನು ಮನಃಪೂರ್ವಕ ಆವಾಹನೆ ಮಾಡಿಕೊಂಡಿದ್ದರೆನಿಸುತ್ತದೆ, ಹೀಗಾಗಿ ನಾಟಕ ನಿರರ್ಗಳ ಪ್ರವಹಿಸುವ ಬದಲು, ಅಲ್ಲಲ್ಲಿ ತಡೆಯುತ್ತದೆ, ಎಡವುತ್ತದೆ, ಮಡುಗಟ್ಟುತ್ತದೆ.

ಏನಿದ್ದರೂ ಸಿದ್ಧಯ್ಯ ಪುರಾಣಿಕರ ಸದಿಚ್ಛೆಯಂತೆ, ಆಗಿನ ಕಾಲಧರ್ಮದ ಬೇಡಿಕೆಯಂತೆ ಬಸವಣ್ಣನ ಜೀವನವಿಧಾನ ಹಾಗೂ ಆದರ್ಶ ತತ್ತ್ವಗಳನ್ನು ಅಭಿಮಾನಪೂರ್ವಕವಾಗಿ ಬೋಧಿಸುವ ತನ್ನ ಉದ್ದೇಶದಲ್ಲಿ ಈ ಸಂಗೀತ ನಾಟಕ ಯಶಸ್ವಿಯಾಗಿದೆ. ಆ ಕಾಲದಲ್ಲಿಯೇ ನಾಡಿನಲ್ಲಿ ಹಲವಾರು ಕಡೆ ರಂಗದ ಮೇಲೆ ಪ್ರಯೋಗಗೊಂಡು ಜನಪ್ರಿಯವಾಗಿದ್ದ 'ಆತ್ಮಾರ್ಪಣ' ನಾಟಕವನ್ನು ಈಗಲೂ ನಮ್ಮ ವೃತ್ತಿನಾಟಕರಂಗದವರು ಸರಳವಾಗಿ ರಂಗಕ್ಕೆ ಅಳವಡಿಸಬಹುದಾದ ಸಾಧ್ಯತೆ ಇದರಲ್ಲಿದೆ.

* * *

ಸಿದ್ಧಯ್ಯ ಪುರಾಣಿಕರ ಒಟ್ಟು ನಾಟಕಗಳು ೧೮ ಪ್ರಕಟವಾದ ಕ್ರಮದಲ್ಲಿ ಅವು ಈ ಕೆಳಗಿನಂತಿವೆ:

(೧) ಆತ್ಮಾರ್ಪಣ :	೧೯೪೨ :	ಬಸವೇಶ್ವರ ಜೀವನ ಗಾಥೆ
(೨) ರಜತರೇಖೆ :	೧೯೬೨	
೨.೧ ಮಧುಮಹೋತ್ಸವ	:	ಮಧುಮಾಸದ ರೂಪವಿಲಾಸ
೨.೨ ಮೋಹನಮಂತ್ರ	:	ಗಾಂಧೀ ಜಯಂತಿ
೨.೩ ಮಾಯಾಕೋಲಾಹಲ	:	ಅಲ್ಲಮಪ್ರಭುವಿನ ಮಾಯಾವಿಜಯ

೨.೪ ಷಾನಿಗೆ ಶ್ರದ್ಧಾಂಜಲಿ	:	ಮಹಾಮಾನವ ಬರ್ನಾರ್ಡ್ ಷಾ
೨.೫ ತುಂಗಭದ್ರೆ–ಮಂಗಲೆ	:	ತುಂಗಭದ್ರಾ ಜಲಾಶಯ ಗೀತೆ
೨.೬ ದುಃಖಸೇತು	:	ಬಿ.ಎಂ.ಶ್ರೀ ಅನುವಾದದ ಕವಿತೆ ಆಧರಿಸಿ
೨.೭ ರಜತರೇಖೆ	:	ಮೇಘಮಾಲಾ ವೈಭವ
೨.೮ ಗಿರಿಜೆಯ ಗೆಲವು	:	ಹರಿಹರನ ಗಿರಿಜಾ ಕಲ್ಯಾಣ ಸ್ಮೃತಿ
(೩) ಭಾರತವೀರ : ೧೯೬೩	:	ಗುಪ್ತ ಸಾಮ್ರಾಟ ನರಸಿಂಹ ಬಾಲಾದಿತ್ಯ
(೪) ಭಗ್ನನೂಪುರ : ೧೯೮೪		
೪.೧ ಭಗ್ನನೂಪುರ : ತಮಿಳು	:	ಶಿಲಪ್ಪದಿಕಾರಂ ಮಹಾಕಾವ್ಯ ಕಥೆ
೪.೨ ಕಾಶ್ಮೀರದ ಕವಯಿತ್ರಿ : ಉರ್ದೂ	:	ಫಾರ್‌ಸೀ ಕಾವ್ಯ ಕಥೆ
೪.೩ ನಿರ್ಬಂಧನ : ಕನ್ನಡ	:	ಕೌಶಿಕ ಅಕ್ಕಮಹಾದೇವಿ ಕಥೆ
(೫) 'ಸಮಗ್ರ ನಾಟಕ'ದಲ್ಲಿ ಮೊದಲ ಸಲ	:	೨೦೧೦
೫.೧ ಭ್ರಮರದೂತ	:	ರಾಧಾಕೃಷ್ಣ ಉದ್ಧವ ಕಥೆ
೫.೨ನೇಯಬೇಕು, ರಾಮನ ನೆನೆಯಬೇಕು	:	ಸಂತ ಕಬೀರ ಜೀವನ
೫.೩ ಮಹಾದೇವಿ ಮಾರಯ್ಯ	:	ಶರಣ ದಂಪತಿ
೫.೪ ಅಮೀರ ಖುಸ್ರೋ	:	ಉರ್ದೂ ಹಿಂದೀ ಕವಿ
(೬) ನ್ಯಾಯನಿರ್ಣಯ : ೧೯೮೬	:	ಮಕ್ಕಳ ನಾಟಕ

* * *

ಸಿದ್ಧಯ್ಯ ಪುರಾಣಿಕರು ಮೊದಲಿನಿಂದಲೂ ತಮ್ಮ ಭಾವಕೋಶ ಮತ್ತು ವಿಚಾರಕೋಶಗಳನ್ನು ಸಮಾನವಾಗಿ ಪರಿಪುಷ್ಟಗೊಳಿಸಿಕೊಳ್ಳುತ್ತ ಬಂದ ರಾಷ್ಟ್ರವಾದೀ ಲೇಖಕರು. ತಮ್ಮ ಮಾತು, ಕೃತಿಗಳಿಗೆ ಪೂರ್ವಸಿದ್ಧತೆಯ ಸಮರ್ಥನೆಯನ್ನು,

ಪುರಾವೆಗಳನ್ನು ಸಂಗ್ರಹಿಸಿದ ನಂತರವೇ ಕಾರ್ಯಪ್ರವೃತ್ತರಾಗುತ್ತಿದ್ದುದು ಅವರ ಬರವಣಿಗೆಗಳಿಂದ ವಿದಿತವಾಗುತ್ತದೆ. ಬಸವಣ್ಣನನ್ನು ಕುರಿತು 'ಆತ್ಮಾರ್ಪಣ' ನಾಟಕ ಬರೆಯುವಾಗಲೂ ಕೇವಲ ಬಸವಾಭಿಮಾನಕ್ಕೆ ತುತ್ತಾಗದೇ ಆ ಬಗೆಗಿನ ಸಂಪೂರ್ಣ ವಚನ ಸಾಹಿತ್ಯ, ಪೂರಕ ಸಾಹಿತ್ಯ ಹಾಗೂ ಇತಿಹಾಸದ ದಾಖಲೆಗಳನ್ನು ಪರಿಶೀಲಿಸಿಯೇ ಅವರು ತಮ್ಮ ನಿಲುವುಗಳನ್ನು ರೂಪಿಸಿಕೊಂಡಿದ್ದಾರೆ. ನಂತರದ ದಿನಗಳಲ್ಲಿ ಬಾನುಲಿಗಾಗಿ ಹಲವು ರೂಪಕಗಳನ್ನು ರಚಿಸುವಾಗಲೂ ಇಂಥ ಸಿದ್ಧತೆ ಮಾಡಿಕೊಂಡೇ ಮುಂದೆ ಸಾಗಿದ್ದರು. ಹೀಗಾಗಿ ಅವರ ರಚನೆಗಳು ಅವರ ನಂತರ ಬಂದ ರೂಪಕ ಲೇಖಕರಿಗೆ ಈಗಲೂ ಒಂದು ರೀತಿಯ ಬೆರಗು, ಬೆಡಗು, ಆಹ್ವಾನ, ಆನಂದದ ಮೊತ್ತವಾಗಿಯೇ ಕಾಣುತ್ತವೆ.

ಸಿದ್ಧಯ್ಯ ಪುರಾಣಿಕರು ೧೯೬೩ ರಲ್ಲಿ ಪ್ರಕಟಿಸಿದ 'ಭಾರತವೀರ' ಸಹ 'ಆತ್ಮಾರ್ಪಣ'ದ ರೀತಿಯಲ್ಲಿಯೇ ರಚಿತವಾದ, ಮೂರು ಅಂಕಗಳನ್ನೊಳಗೊಂಡ ಇನ್ನೊಂದು ಪೂರ್ಣಾವಧಿ ನಾಟಕ. ಇದರ ಹಿನ್ನೆಲೆಯಲ್ಲಿಯೂ, ಕೇವಲ ಆರೇಳು ತಿಂಗಳುಗಳ ಅವಧಿಯಲ್ಲಿಯೇ, ಅವರು ಸಾಕಷ್ಟು ಪೂರ್ವಸಿದ್ಧತೆ ಮಾಡಿಕೊಂಡಿದ್ದರು ಎಂಬುದು ಅವರ ಬಿನ್ನಹ ನುಡಿಗಳಿಂದ ವ್ಯಕ್ತವಾಗುತ್ತದೆ. ಕನ್ನಡ ನಾಡು ನುಡಿ ಸಾಹಿತ್ಯ, ಶರಣ ಸಂಪ್ರದಾಯಗಳನ್ನು ಪ್ರೀತಿಸಿದಷ್ಟೇ ಆಳವಾಗಿ ಭಾರತೀಯ ಸಮಗ್ರತೆಯನ್ನೂ ಪ್ರೀತಿಸಿದ ವಿರಳ ಸಾಹಿತಿ ಸಿದ್ಧಯ್ಯ ಪುರಾಣಿಕರು. ಇಂಥವರ ಚಿಂತನೆಯ ರೀತಿಯೇ ಭಿನ್ನವಾಗಿರುತ್ತದೆ. ಜಾತಿ, ಧರ್ಮ, ಕಾಲ, ಭಾಷೆ, ಪ್ರದೇಶ ಮುಂತಾದುವನ್ನು ಮೀರಿದ ಏಕಾತ್ಮ ರಾಷ್ಟ್ರದ ಕಲ್ಪನೆ ಹಾಗೂ ಕಟ್ಟುವಿಕೆ ಅವರ ಉದ್ದೇಶವಾಗಿರುತ್ತದೆ. ಅವರ ದೃಷ್ಟಿಯಲ್ಲಿ ಇಡೀ ದೇಶವೇ ಒಂದು ಕುಟುಂಬ. ಭಾರತದ ಅನ್ಯಾನ್ಯ ಭಾಷೆಗಳಲ್ಲಿ ಕಾಲಕಾಲಕ್ಕೆ ಇಂಥ ರಾಷ್ಟ್ರೀಯ ಲೇಖಕರು ಮೂಡಿ ಬಂದಿದ್ದಾರೆ; ತಮ್ಮ ಚಿಂತನೆ, ಬರವಣಿಗೆಗಳ ಮೂಲಕ ಜನಜಾಗೃತಿ ಮಾಡಿದ್ದಾರೆ. ಗಳಗನಾಥ, ಶರತ್‌ಚಂದ್ರ, ದ್ವಿಜೇಂದ್ರಲಾಲ್ ರಾಯ್, ಘಾಲಿಬ್, ಜಯ್‌ಶಂಕರ್ ಪ್ರಸಾದ್, ಮೈಥಿಲೀಶರಣ್ ಗುಪ್ತ ಮುಂತಾದವರು ಈ ಬಗೆಯ ಲೇಖಕರು. ಚೀನ ದೇಶವು ೧೯೬೦ ಅಕ್ಟೋಬರ್ ೨೦ ರಂದು ಹಿಮಾಲಯದ ನೇಫಾ, ಲದ್ದಾಖ್ ಭಾಗಗಳಲ್ಲಿ ಅನಿರೀಕ್ಷಿತ ಆಕ್ರಮಣ, ದಾಳಿಗಳನ್ನು ಆರಂಭಿಸಿ ಭಾರತಕ್ಕೆ ವಿಶ್ವಾಸದ್ರೋಹ ಮಾಡಿತು. ಆಗ ದೇಶದ ಶಾಂತಿ, ನೆಮ್ಮದಿ ಕದಡಿತು. ಅಂಥ ಹೊತ್ತಿನಲ್ಲಿ ರಾಷ್ಟ್ರದ ಸಮಗ್ರತೆಯನ್ನು ಲಕ್ಷಿಸಿ ನಮ್ಮ ಸೈನಿಕರು ಹೋರಾಡಿದರು. ಎಲ್ಲ ವರ್ಗದ ಜನರು ತಮ್ಮ ತಮ್ಮ ರೀತಿಯಲ್ಲಿ ನಾಡಿನ ಶಕ್ತಿಯನ್ನು, ಆತ್ಮವಿಶ್ವಾಸವನ್ನು ಬಲಗೊಳಿಸುವ ಪ್ರಯತ್ನ ಮಾಡಿದರು. ಲೇಖಕರು, ಕವಿಗಳು ತಮ್ಮ ಬರವಣಿಗೆಗಳ ಮೂಲಕ ಜನರಲ್ಲಿ ಭಾವಾತ್ಮಕ, ನೈತಿಕ ಸ್ಥೈರ್ಯವನ್ನು ತುಂಬಲೆತ್ನಿಸಿದರು. ಅಂಥ ಸಂದರ್ಭದಲ್ಲಿ ಸಿದ್ಧಯ್ಯ ಪುರಾಣಿಕರು ರಚಿಸಿದ ಅಪರೂಪದ ಐತಿಹಾಸಿಕ ಜಾಗೃತಿ ನಾಟಕ 'ಭಾರತವೀರ'. 'ಆತ್ಮಾರ್ಪಣ'ದಂತೆ ಕಲಾವಿಲಾಸಿಗಳು ಈ ನಾಟಕವನ್ನು ಸಹ ಬೇರೆ ಬೇರೆ ಊರುಗಳಲ್ಲಿ ರಂಗದ ಮೇಲೆ ಪ್ರಯೋಗಿಸಿದ್ದಾರೆ.

ಪುರಾಣಿಕರ ರಾಷ್ಟ್ರಭಾವ ಮತ್ತು ಪ್ರಸ್ತುತ ನಾಟಕದ ರಚನೋದ್ದೇಶವನ್ನು ಅರಿಯಲು ಅವರ 'ಬಿನ್ನಹ'ದ ಕೆಲವು ಮಾತುಗಳನ್ನು ನಾನು ಉಲ್ಲೇಖಿಸಲೇಬೇಕು: "ಆದಿಯಿಂದಲೂ ಎಲ್ಲ ಸುಲಿಗೆಗಾರರ ದುರಾಶಾಪೂರಿತ ದೃಷ್ಟಿ ಈ ದೇಶದ ಮೇಲೆ! ಪೀತವರ್ಣದವರು, ಶ್ವೇತವರ್ಣದವರು, ಏಷ್ಯಾದವರು, ಯುರೋಪಿನವರು – ಎಲ್ಲರೂ ಏರಿ ಬಂದರು ಈ ದೇಶದ ಮೇಲೆ. ಇಂದೂ ಏರಿ ಬಂದಿದ್ದಾರೆ ಚೀಣೀಯರು!" "ಗೆದ್ದುದಕ್ಕಿಂತ ನಾವು ಸೋತುದೇ ಹೆಚ್ಚಾಗಿ ನಮಗೆ ಕಾಣುವಂತಾಗಿರುವುದು ನಾವು ನಮ್ಮ ಇತಿಹಾಸವನ್ನು ನಿರ್ಲಕ್ಷಿಸಿರುವುದಕ್ಕೆ ಸಾಕ್ಷಿ." "ಈಗಲಾದರೂ ನಾವು ನಮ್ಮ ವಿಜಯಗಳ ಉತ್ಸಾಹವರ್ಧಕ, ಸಾಹಸೋತ್ತೇಜಕ ಘಟನೆಗಳನ್ನು ಚಿತ್ರಿಸಿ ನಮ್ಮ ಯುವಜನಾಂಗದಲ್ಲಿ ಎಂಥ ಗಂಡಾಂತರವನ್ನೂ ಎದುರಿಸಿ ಚೆದುರಿಸಬಲ್ಲ ಮನೋದಾರ್ಢ್ಯವನ್ನು, ಕೆಚ್ಚೆದೆಯನ್ನು, ಕಲಿತನವನ್ನು, ಸಾಹಸಪ್ರಿಯತೆಯನ್ನು ಪ್ರಚೋದಿಸಬೇಕು." "ನಮ್ಮಲ್ಲಿ ಸತ್ವೋದ್ರೇಕವಾಗಬೇಕು. ವೀರಾವೇಶ ಉಕ್ಕಬೇಕು, ರಾಷ್ಟ್ರ ರಕ್ಷಣೆಗಾಗಿ ಶಸ್ತ್ರದೀಕ್ಷೆ ಪಡೆದು ಸಿಂಹನಾದಗೈಯುವ ಸಾಹಸ ಭೀಮತನ ಸಿಡಿದೇಳಬೇಕು." "ಇದನ್ನು ಸಾಧಿಸುವಲ್ಲಿ ನಮ್ಮ ವಿಜಯಗಳನ್ನು ವರ್ಣಿಸುವ ಸಾಹಿತ್ಯ ಸಹಕಾರಿಯಾಗುತ್ತದೆ. ಆ ದಿಶೆಯಲ್ಲಿ ಅಲ್ಪ ಪ್ರಯತ್ನವೊಂದು ಈ ಕೃತಿ." "ಚೀಣೀಯರ ಯುದ್ಧದಾಹ ಸ್ನೇಹದ ಹೃದಯಕ್ಕೇ ಗುಂಡಿಟ್ಟು ಹೊಡೆಯಿತು.... ರಾಷ್ಟ್ರ ರಕ್ಷಣೆಯ ಪ್ರಯತ್ನಗಳಿಗೆ ನೆರವಾಗಬಲ್ಲ ನಾಟಕವೊಂದನ್ನು ಬರೆಯಬೇಕೆಂಬ ಸಂಕಲ್ಪ ಆಗಲೇ ಉದಿಸಿತು ಮನದಲ್ಲಿ."

ಪುರಾಣಿಕರು ಈ ಕೃತಿಯನ್ನು ಕಲ್ಪಿತ ಭಾವೋದ್ರೇಕದಿಂದ ರಚಿಸಲಿಲ್ಲ. ತಕ್ಷಣ "ಭಾರತದ ಇತಿಹಾಸದ ಮೇಲೆ ಉಪಲಬ್ಧವಿದ್ದ ಉದ್ಗ್ರಂಥಗಳನ್ನೆಲ್ಲ ಉಚಿತ ವಸ್ತುವಿನ ಶೋಧಕ್ಕಾಗಿ ಓದಿದುದಾಯಿತು. ಇಂದಿನ ಪರಿಸ್ಥಿತಿಗೆ ಎಲ್ಲ ದೃಷ್ಟಿಯಿಂದಲೂ ಹೊಂದಿಕೊಳ್ಳಬಲ್ಲ ವಸ್ತುವನ್ನೇ ಹುಡುಕಬೇಕೆಂಬ ಹಟ ಆರು ತಿಂಗಳುಗಳ ಅವಧಿಯಲ್ಲಿ ಫಲಿಸಿತು. ಮಿಹಿರಕುಲನನ್ನು ಎರಡು ಸಲ ಸೋಲಿಸಿದ ಬಾಲಾದಿತ್ಯನ ಮೇಲಾದ ವಸ್ತು ಹಸ್ತಗತವಾಯಿತು." ಕವಿಯಾಗಿ ಪ್ರಸಿದ್ಧರಾಗಿದ್ದ ಸಿದ್ಧಯ್ಯ ಪುರಾಣಿಕರು ಇತಿಹಾಸದ ಅಧ್ಯಯನದ ಆಸಕ್ತಿಯನ್ನು ನಿರಂತರ ಉಳಿಸಿಕೊಂಡು ಬಂದಿದ್ದಾರೆ. ಬೌದ್ಧಕಾಲದ ಗುಪ್ತ ಸಾಮ್ರಾಜ್ಯದ ಚರಿತ್ರೆಯಲ್ಲಿ ಅಷ್ಟು ಗಮನ ಸೆಳೆಯದೇ ಉಳಿದಿದ್ದ ನರಸಿಂಹ ಗುಪ್ತ ಬಾಲಾದಿತ್ಯನ ಚರಿತ್ರೆಯ ಒಳಹೊಕ್ಕು ಹಾಸುಗಳ ತೆಳುಬೆಳಕ ಬಟ್ಟೆಯನ್ನು ದಟ್ಟವಾಗಿ ನೆಯ್ದು ಬೆಳಗಿಸಿದ್ದಾರೆ. ಬಾಲಾದಿತ್ಯನ ಪತ್ನಿ ಮಿತ್ರಾದೇವಿ, ಮತ್ತು ಮಾಳವದ ವೃದ್ಧ ದೊರೆ ಯಶೋಧರ್ಮನ ಪತ್ನಿ ರಾಜ್ಯಲಕ್ಷ್ಮಿಯ ಪಾತ್ರಗಳ ಹೆಚ್ಚಳದ ಮೂಲಕ ಸಮಸ್ತ ಭಾರತೀಯ ನಾರೀಕುಲವನ್ನು ಎಚ್ಚರಿಸಲೆತ್ನಿಸಿದ್ದಾರೆ. ಹೂಣ ದೊರೆ ಮಿಹಿರಕುಲನ ನೃಶಂಸ, ಕ್ರೂರ, ವಿಶ್ವಾಸಘಾತಕ ನಡೆಯನ್ನು ಖಂಡಿಸಿದ್ದಾರೆ.

ಪುರಾಣಿಕರು ಈ ನಾಟಕದ ಎಲ್ಲ ಪಾತ್ರಗಳಲ್ಲಿ ಗಾಢ ರಾಷ್ಟ್ರಪ್ರೇಮವನ್ನು ತುಂಬಿದ್ದಾರೆ. ಬಾಲಾದಿತ್ಯನ ರಾಜಗುರು ವಸುಬಂಧುವಿನ ಮಾತು ತುಂಬ

ಮಾರ್ಮಿಕವಾಗಿವೆ, ಭಾರತೀಯ ಜನಜೀವನಕ್ಕೆ ಸದಾ ಕಾಲ ಅರ್ಥ ಬೆಳಗಿಸುವಂತಿವೆ. "ಭಿನ್ನತೆಯ ಭಾವನೆ ಬೇರೂರಿರುವವರೆಗೆ ಭಾರತಕ್ಕೆ ವೈರಿ ಭಯ ತಪ್ಪದೆಂದು ತಿಳಿಯಿರಿ. ಗುಪ್ತ ಸಮ್ರಾಟರ ರಾಜ್ಯ, ಮಹಾರಾಜ ಯಶೋಧರ್ಮರ ರಾಜ್ಯ, ಈ ಭರತಭೂಮಿಯ ಇನ್ನುಳಿದ ಭಾಗಗಳಲ್ಲಿರುವ ಬೇರೆ ಬೇರೆ ರಾಜ್ಯಗಳು ಭಾರತವನ್ನು ಬಿಟ್ಟು ಬದುಕಿವೆಯೆ? ಭಾರತಕ್ಕೆ ಆಘಾತ ಒದಗಿದರೆ ಈ ರಾಜ್ಯಗಳು ಆ ಆಘಾತದಿಂದ ಉಳಿದುಕೊಳ್ಳಬಲ್ಲುವೆ? ಭಾರತಮಾತೆಯ ಒಂದು ಅಂಗಕ್ಕೆ ಗಾಯವಾದರೆ ಉಳಿದ ಅಂಗಗಳಿಗೆ ನೋವಾಗುವುದಿಲ್ಲವೆ? ಶರೀರದ ಯಾವ ಅಂಗ ದುರ್ಬಲವಾದರೂ ಸಮಗ್ರ ಶರೀರವೇ ದುರ್ಬಲವಾಗುವುದಿಲ್ಲವೆ?" "ದೇಶದ ರಕ್ಷಣೆ ಸರ್ವರ ಹೊಣೆ. ದೇಶ ಸುರಕ್ಷಿತವಾಗಿದ್ದರೆ ಸರ್ವರೂ ಸುರಕ್ಷಿತ." "ಭಾರತದ ವೈಶಿಷ್ಟ್ಯ 'ಅವಿಭಕ್ತಂ ವಿಭಕ್ತೇಷು' ಎಂಬ ಸೂತ್ರದಲ್ಲಿದೆ.... ಮಳೆಬಿಲ್ಲಿನ ಬಣ್ಣ ಹಲವಾದರೂ ಮಳೆಬಿಲ್ಲು ಒಂದೇ; ನವಿಲುಗರಿಯ ಬಣ್ಣ ಹಲವಾದರೂ ನವಿಲು ಒಂದೇ; ಭಾರತದಲ್ಲಿರುವ ರಾಜ್ಯಗಳು, ಧರ್ಮಗಳು, ಭಾಷೆಗಳು, ವೇಷಗಳು ಹಲವಾದರೂ ಭಾರತ ಒಂದೇ. ಭಾರತದ ಯಾವ ಭಾಗಕ್ಕೆ ಗಂಡಾಂತರ ಪ್ರಾಪ್ತವಾದರೂ ಸಮಗ್ರ ಭಾರತಕ್ಕೆ ಗಂಡಾಂತರ ಪ್ರಾಪ್ತವಾದಂತೆ! ಈಗ ನಮ್ಮಲ್ಲಿರುವ ಭಿನ್ನತೆಗಳೆಲ್ಲ ಬಯಲಾಗಬೇಕು. ಭಾರತೀಯರೆಲ್ಲ ಭಾರತದ ರಕ್ಷಣೆಗಾಗಿ ಬದ್ಧಕಂಕಣರಾಗಬೇಕು."

ಗುಪ್ತ ಸಾಮ್ರಾಟನ ಧರ್ಮಗುರು ವಸುಬಂಧುವಿನ ಪಾತ್ರದಲ್ಲಿ ಸ್ವತಃ ಸಿದ್ಧಯ್ಯ ಪುರಾಣಿಕರೇ ಒಡನುಡಿಯುತ್ತಿದ್ದಾರೆ. ಮಿತ್ರಾದೇವಿಯಲ್ಲಿಯೂ ಪುರಾಣಿಕರ ಮಾತೃಹೃದಯವೇ ಭಾರತಮಾತೆಯಾಗಿ ಮಿಡಿಯುತ್ತಿದೆ: "ಸೋದರಿಯರೆ, ಸ್ತ್ರೀಶಕ್ತಿಯ ಸಹಾಯವಿಲ್ಲದೆ ಸ್ವಾತಂತ್ರ್ಯ ರಕ್ಷಣೆ ಸಾಧ್ಯವಾಗುವುದೆ? ವೀರಮಾತೆಯರು ನೀವು, ವೀರಪತ್ನಿಯರು ನೀವು, ವೀರಪುತ್ರಿಯರು ನೀವು! ನೀವಿಂದು ಶೌರ್ಯಸಂಜೀವಿನಿಯರಾಗಬೇಕು, ಚೈತನ್ಯದಾಯಿನಿಯರಾಗಬೇಕು..." ಮತಿರಾಮ ಎಂಬ ಒಬ್ಬ ಸಾಮಾನ್ಯ ನಾಗರಿಕ, ಗುಪ್ತಚರ ದೂತನಂಥ ಪಾತ್ರಗಳಲ್ಲಿಯೂ ಸಿದ್ಧಯ್ಯ ಪುರಾಣಿಕರು ದೇಶಾವತಾರ ತಾಳುತ್ತಾರೆ: "ಸದಾ ಜಾಗರೂಕತೆಯೇ ಬಿಡುಗಡೆಯ ಬೆಲೆ; ಸದಾ ಸಿದ್ಧತೆಯೇ ಬಿಡುಗಡೆಯ ಬೆಲೆ; ಬೆವರು, ಕಣ್ಣೀರು, ರಕ್ತಗಳೇ ಬಿಡುಗಡೆಯ ಬೆಲೆ! ಹೆಚ್ಚೇನು, ಗಂಡಸುತನವೇ ಬಿಡುಗಡೆಯ ಬೆಲೆ!"

ಹೂಣರಲ್ಲಿ ಪರೋಕ್ಷವಾಗಿ ವಾಯವ್ಯ ಭಾಗದ ಭಾರತದ ಎಲ್ಲ ವೈರಿಗಳನ್ನು, ಅವರು ತಮ್ಮ ಸೈನ್ಯ ಶಿಬಿರ ತೆರೆಯಲು ಆಕ್ರಮಿಸಿದ 'ಉತ್ತರ ಗಡಿಗೆ ಹೊಂದಿದ ಚಿಕ್ಕ ಭಾಗವೊಂದನ್ನು' ಸಹ ಉಲ್ಲೇಖಿಸಿ ಪಾ. ಆ. ಕಾಶ್ಮೀರದ ಕಡೆಗೆ ಓದುಗರ ಲಕ್ಷ್ಯ ಸೆಳೆಯುತ್ತಾರೆ. ನಾಟಕದ ಕೊನೆಯಲ್ಲಿ, ವೈರಿಗಳ ಹಸ್ತಕ್ಷೇಪದಿಂದ ಆ ಶಿಬಿರ ಭಾಗವನ್ನು ಮುಕ್ತಗೊಳಿಸಿ, ಅಲ್ಲಿಯ ಅರಸುಕುಮಾರನನ್ನು ನಿಜವಾದ ಭಾರತೀಯನೆಂದು ಪರಿಗಣಿಸಿ, ಕಾಪಾಡುವ ಸಾಮ್ರಾಟನನ್ನು ಭಾರತವೀರ ಎಂದು

ಪುರಾಣಿಕರ ಗುರುವಾಣಿ ಉದ್ಘೋಷಿಸುತ್ತದೆ.

ದೇಶಭಕ್ತಿ, ಶೌರ್ಯ, ತ್ಯಾಗ, ಭಾವೈಕ್ಯಗಳ ಸಂದೇಶ ನೀಡುವ ಈ ನಾಟಕ ಸಹ ಕತ್ತಲೆಗೆ ಸರಿದಿದ್ದ ಇತಿಹಾಸದ ಪುಟಗಳನ್ನು ಬೆಳಕಿಗೆ ತರುವ, ಉಜ್ಜ್ವಲ ರಾಷ್ಟ್ರಭಕ್ತಿ ಮೆರೆಯುವ ಸದುದ್ದೇಶದ ಪ್ರಯತ್ನವೇ ಆಗಿದೆ. ಈ ರೀತಿಯಲ್ಲಿ ಸಿದ್ಧಯ್ಯ ಪುರಾಣಿಕರು ವಿಶ್ವಮಾನವೀಯ ತಳಹದಿಯ ಮೇಲೆ ಬೆಳೆದ ಕರ್ನಾಟಕದ ಭಾರತೀಯ ನಾಗರಿಕರು, ಕನ್ನಡದಲ್ಲಿ ಬರೆದ ಭಾರತೀಯ ನಾಟಕಕಾರರು. ಕನ್ನಡದ ಕಣ್ಣುಗಳಿಂದ ಸಮಸ್ತ ಭಾರತವನ್ನು ದಿಟ್ಟಿಸಿದ ಪುರಾಣಿಕರಂಥ ಭಾರತಪ್ರೇಮಿಯ ನಾಟಕಗಳು ಇತರ ಭಾರತೀಯ ಭಾಷೆಗಳಿಗೆ ಅನುವಾದಗೊಳ್ಳುವಂಥ ವ್ಯವಸ್ಥೆಯಾಗಬೇಕು.

* * *

ಸಿದ್ಧಯ್ಯ ಪುರಾಣಿಕರಿಗೆ ಆಧುನಿಕ ರಂಗಭೂಮಿ ಮತ್ತು ನಾಟಕಗಳ ಪರಿಚಯವಾಗಲಿ, ವಿದೇಶಗಳಲ್ಲಿ ರಂಗಕ್ಕೆ ಬರುತ್ತಿದ್ದ ವಿನೂತನ ಪ್ರಯೋಗಗಳ ಸಂಪರ್ಕವಾಗಲಿ ಅಷ್ಟಾಗಿ ಆಗಿರಲಿಲ್ಲವೆನಿಸುತ್ತದೆ. ಆದರೂ ಅವರ ಒಳಮನಸ್ಸಿನಲ್ಲಿ ಸಹಜವಾಗಿ ಸ್ಫುರಿಸುತ್ತಿದ್ದ ನಾಟಕಪ್ರೇಮ ಅವರಿಂದ ಹಲವಾರು ಬಗೆಯ ನಾಟಕಗಳನ್ನು ಬರೆಸಿದೆ. ಇಂಥ ತುಡಿತದಿಂದಾಗಿ ಅವರು ಆಗಾಗ ಬಾನುಲಿಯವರ ಆಗ್ರಹಕ್ಕೆ ಅಥವಾ ರಂಗಮಿತ್ರರ ಸ್ನೇಹಕ್ಕೆ ಒಲಿದು ವಿವಿಧ ವಿಷಯಗಳ ಬಗ್ಗೆ ನಾಟಕ ರೂಪಕ ರಚಿಸುತ್ತಲೇ ಬಂದಿದ್ದಾರೆ.

ಆತ್ಮವಿಶ್ವಾಸ ತುಂಬಿದ ಸಿದ್ಧಯ್ಯ ಪುರಾಣಿಕರ ಅನುಭವೀ ಅಭ್ಯಸ್ತ ಪರಿಣತ ಕಾವ್ಯಾನಂದ ಕವಿ ಅವರ ವಚನಸಾಹಿತ್ಯ, ಕತೆ, ಕಾದಂಬರಿ ಎಲ್ಲದರ ಮೇಲೆ ಆವರಿಸಿ ನಿಂತಿದ್ದಾನೆ. ಈ ಕವಿ–ಪ್ರಭಾವದಿಂದಾಗಿ ಅವರು ರಂಗನಾಟಕಗಳಿಗಿಂತ ಧ್ವನಿತರಂಗ ನಾಟಕಗಳಲ್ಲಿ ಹೆಚ್ಚು ಮಿಂಚಿದ್ದಾರೆ.

'ಆತ್ಮಾರ್ಪಣ' ಮತ್ತು 'ಭಾರತವೀರ' ಈ ಎರಡು ನಾಟಕಗಳನ್ನು ಹೊರತುಪಡಿಸಿ ಪ್ರಸ್ತುತ ಸಂಪುಟದಲ್ಲಿರುವ ಇತರ ಎಲ್ಲ ನಾಟಕ ರೂಪಕಗಳು ಬಾನುಲಿಗಾಗಿ ಬರೆದುವುಗಳೇ. ಅವುಗಳ ಯಶಸ್ವೀ ಪ್ರಸಾರಣದಿಂದಾಗಿ ಉತ್ತೇಜಿತರಾಗಿ ಪುರಾಣಿಕರು ಹೊಸ ಹೊಸ ವಸ್ತು, ಶೈಲಿ, ಗೀತ ರೂಪಗಳನ್ನು ಬಳಸಿ ಉತ್ಸಾಹದಿಂದ ರೂಪಕಗಳಿಗೆ ಪ್ರಾಣರೂಪ ನೀಡಿದ್ದಾರೆ. ಇವನ್ನು ಓದಿ ಅಥವಾ ಮಿತ್ರಮಂಡಳಿಗಳಲ್ಲಿ ಚರ್ಚಿಸಿ ಆನಂದಿಸಬಹುದೇ ಹೊರತು ರಂಗದ ಮೇಲೆ ಅಭಿನಯಿಸಿ ಆಸ್ವಾದಿಸುವುದು ಅತ್ಯಂತ ದುಸ್ತರ, ಕಷ್ಟಕರ. ಇವುಗಳಲ್ಲಿ ಕೆಲವನ್ನು ನೃತ್ಯ ಗೀತ ರೂಪಕಗಳಾಗಿ ರಂಗಕ್ಕೆ ಅಳವಡಿಸಬಹುದಾಗಿದೆ. ನೃತ್ಯ, ಸಂಗೀತ, ಸಾಹಿತ್ಯ, ಸಂದೇಶಗಳನ್ನು ಏಕಕಾಲಕ್ಕೆ ರಂಗದ ಮೇಲೆ ಪ್ರದರ್ಶಿಸುವ

ಪುರಾಣಿಕರ ಪ್ರಯತ್ನ ಸ್ತುತ್ಯ. ಈ ಬಾನುಲಿ ರೂಪಕಗಳ ರಚನೆಯಲ್ಲಿ ಅವರು ತೋರಿದ ಸಾಹಿತ್ಯಧರ್ಮ ಮತ್ತು ರಚನಾಕರ್ಮಗಳಲ್ಲಿ ಅವರಿಗೆ ಅಪಾರ ಯಶಸ್ಸು ಸಿಕ್ಕಿದೆ. ರೂಪಕದಿಂದ ರೂಪಕಕ್ಕೆ ಗಟ್ಟಿಗೊಳ್ಳುತ್ತ ಹೋದ ಅವರ ಸೃಜನಶೀಲ ಆತ್ಮವಿಶ್ವಾಸ ಅತುಲನೀಯವಾದುದಾಗಿತ್ತು.

* * *

ಪುರಾಣಿಕರ ರೂಪಕ ಸೃಷ್ಟಿಯನ್ನು ವಿಷಯದ ದೃಷ್ಟಿಯಿಂದ ವಿವಿಧ ದೃಷ್ಟಿಕೋನಗಳಿಂದ ಪರಿಗಣಿಸಬಹುದಾಗಿದೆ. ಅವನ್ನು ಒಂದೊಂದು ಸ್ಪಷ್ಟ ವಿಷಯದ ಖಚಿತ ಚೌಕಟ್ಟಿನಲ್ಲಿ ನಾಮಕರಣಗೊಳಿಸುವುದು ಮಾತ್ರ ಖಂಡಿತ ಸಾಧ್ಯವಿಲ್ಲ. ಒಂದೊಂದರಲ್ಲಿ ಹಲವು ವಿಷಯಗಳು ಕಲಾತ್ಮಕವಾಗಿ ಮಿಲನಗೊಂಡಿರುವುದು ಅವುಗಳ ವೈಶಿಷ್ಟ್ಯ.

ಶಿವಶರಣರನ್ನು ಕುರಿತು ಬರೆದ ಪೂರ್ಣಾವಧಿ ನಾಟಕ 'ಆತ್ಮಾರ್ಪಣ'ವಂತೂ ಸರಿಯೇ. ಶರಣ ಕವಿಗಳ ಕೃತಿಗಳನ್ನು ಆಧರಿಸಿ ರಚಿಸಿದ ಅವರ ರೂಪಕಗಳು ವಿಶಿಷ್ಟವಾಗಿವೆ. 'ಮಾಯಾಕೋಲಾಹಲ' ಚಾಮರಸನ 'ಪ್ರಭುಲಿಂಗ ಲೀಲೆ'ಯಲ್ಲಿ ಬರುವ ಅತ್ಯಂತ ಮನೋಹರ, ನಾಟಕೀಯ ಪ್ರಸಂಗವನ್ನು ಆಧರಿಸಿ ರಚಿತವಾಗಿದೆ. ಪ್ರಭು ಮಾಯೆಯನ್ನು ಜಯಿಸಿದ 'ರಮಣೀಯ', 'ನಿತಾಂತ ಸುಂದರ' ಪ್ರಸಂಗದ, ಬಯಲುಸ್ವರೂಪಿ ಅಲ್ಲಮನನ್ನು ಬಂಧಿಸುವಲ್ಲಿ ವಿಫಲಳಾದ ಮಾಯೆಯ ಮನೋರಂಜಕ, ಕಾವ್ಯಾತ್ಮಕ ಭಾಗದ ರೂಪಕ ಇದು.

'ಗಿರಿಜೆಯ ಗೆಲವು' ('ಗಿರಿಜಾಕಲ್ಯಾಣ') ಗೀತರೂಪಕವು ಪುರಾಣಿಕರ ಪ್ರಾಚೀನ ಸಾಹಿತ್ಯಾಧ್ಯಯನ, ಮನನ, ಚಿಂತನ, ಅವರ ನಿರ್ದಿಷ್ಟ ನಿಲುವುಗಳನ್ನು ದ್ಯೋತಿಸುತ್ತವೆ. "ಕಾಳಿದಾಸನ 'ಕುಮಾರಸಂಭವ' ಮತ್ತು ಹರಿಹರನ 'ಗಿರಿಜಾಕಲ್ಯಾಣ'ಗಳು ಸಂಸ್ಕೃತ, ಕನ್ನಡ ಸಾಹಿತ್ಯಗಳ ಅಲಂಕಾರಪ್ರಾಯವಾಗಿ ಉಳಿದುಬಂದಿವೆ, ಉಳಿಯುವುವು ಕಲ್ಪಾಂತಸ್ಥಾಯಿಯಾಗಿ. ಅವುಗಳ ಅಧ್ಯಯನದ ಜೊತೆಗೆ ಇಂದಿನ ಚಿಂತನವು ಸೇರಿ ಈ ಗೀತನಾಟಕ ರೂಪುಗೊಂಡಿದೆ." ಎಂಬ ಅವರ ಆರಂಭದ ನುಡಿಗಳೇ ಅವರನ್ನು ಸ್ಪಷ್ಟಪಡಿಸುತ್ತವೆ. ಇಲ್ಲಿ ಬರುವ ಹಿಮ್ಮೇಳ ಗೀತಗಳು, ನೃತ್ಯಗಾನಗಳು, ಭಾವಸಂವಾದಗಳು ಪುರಾಣಿಕರ ಪ್ರತಿಭೆಯ ಪ್ರತಿರೂಪಗಳು. 'ಗಿರಿಜಾಕಲ್ಯಾಣ' ಮೊದಲಿನ ರೂಪಕದ ಸಂಕ್ಷಿಪ್ತ ಸಂಗೀತ ರೂಪಕವಾಗಿ ಪ್ರಶಂಸೆಗೊಂಡಿತ್ತು. ಅದು ರಾಷ್ಟ್ರೀಯ ಪ್ರಸಾರಕ್ಕಾಗಿ ಆಯ್ಕೆಗೊಂಡು ಭಾರತದ ಎಲ್ಲ ಭಾಷೆಗಳ ಆಕಾಶವಾಣಿ ಕೇಂದ್ರಗಳಿಂದ ಪ್ರಸಾರವಾದ ಪ್ರಪ್ರಥಮ ಕನ್ನಡ ಗೇಯನಾಟಕವಾಗಿತ್ತು. ಅಂದಿನಿಂದ ಅವರ ಆಸಕ್ತಿ ಆತ್ಮವಿಶ್ವಾಸವಾಗಿ ಪರಿಣಮಿಸಿ, ಬಾನುಲಿಯ ಬೇಡಿಕೆ ಬಂದಾಗಲೆಲ್ಲ ರೇಡಿಯೋ ನಾಟಕಗಳನ್ನು ಬರೆಯುತ್ತಲೇ ಬಂದುದನ್ನು ಪ್ರೀತಿಯಿಂದ ನೆನೆದಿದ್ದಾರೆ.

'ನಿರ್ಬಂಧನ'ವನ್ನು ಪುರಾಣಿಕರು 'ಅಕ್ಕಮಹಾದೇವಿಯ ಅಮರ ಜೀವನದ ಅರುಂಧತೀ ದರ್ಶನ' ಎಂದು ಕರೆದಿದ್ದಾರೆ. ವಚನಗಳನ್ನು ಬಳಸಿಕೊಳ್ಳುತ್ತ ಅಕ್ಕನ ಸಮಗ್ರ ಜೀವನವನ್ನು ಕಣ್ಣಿಗೆ ಕಟ್ಟುವಂತೆ ಚಿತ್ರಿಸುವ ಸಫಲ ಪ್ರಯತ್ನ ಇಲ್ಲಿದೆ. ಅಕ್ಕನ ಗುರು ಗುರುಲಿಂಗದೇವರ ಮೂಲಕ ಅಕ್ಕನ ವ್ಯಕ್ತಿತ್ವವನ್ನು ಕಟ್ಟುವ ಸ್ತುತ್ಯ ಪ್ರಯತ್ನವಿದೆ. ತನ್ನನ್ನು ತೊರೆದು ಹೊರಟಿದ್ದ ಮಹಾದೇವಿಯ ಬಗ್ಗೆ ಯಾವುದೇ ಕಟು ಭಾವವನ್ನು ಮನದಲ್ಲಿ ಉಳಿಸಿಕೊಳ್ಳದೇ, ತಾನು ಮಾಡಿದ ಪ್ರಮಾದವನ್ನು ಮನಸಾರೆ ಒಪ್ಪಿ, ಕ್ಷಮೆ ಕೋರುವ ರೀತಿಯಲ್ಲಿ ಅಂಗಲಾಚುವ ಉಡುತಡಿಯ ದೊರೆ ಕೌಶಿಕನ ಪಾತ್ರ ಸಂರಚನೆ ವಿನೂತನವೆನಿಸುತ್ತದೆ. ಕೊನೆಯಲ್ಲಿ ಕದಳೀವನ ಪ್ರವೇಶಿಸಿ ಅಕ್ಕಮಹಾದೇವಿ ತನ್ನ ಚೆನ್ನಮಲ್ಲಿಕಾರ್ಜುನನ ಶ್ರೀಪಾದದಲ್ಲಿ ಇಂಬುಗೊಳ್ಳಲು ಅನುಗೊಳ್ಳುತ್ತಿದ್ದಾಗ, ಅಕಸ್ಮಾತ್ತಾಗಿ ಉಡುತಡಿಯ ಕೌಶಿಕ ಅಲ್ಲಿ ಕಾಷಾಯಾಂಬರಧಾರಿಯಾಗಿ ಪ್ರವೇಶಿಸುತ್ತಾನೆ. ಅವನು ಅಕ್ಕನನ್ನು ಗುರು ಎಂದು ಕರೆಯುತ್ತಾನೆ, ತಾನು ಈಗ ದೊರೆತನವನ್ನು ತೊರೆದು ಬಂದ ವಿರಾಗಿಯಾಗಿದ್ದು, ತಾನೂ ಮಲ್ಲಿಕಾರ್ಜುನನನ್ನು ಸ್ವೀಕರಿಸುವೆ, ವರಿಸುವೆ; ಅಕ್ಕನ ಆದರ್ಶದ ಬೆಳಕಿನಲ್ಲಿ ತನ್ನ ಬಾಳನ್ನೂ ಬೆಳಗಿಸಿಕೊಳ್ಳುತ್ತೇನೆ ಎಂದು ಹೇಳುತ್ತಾನೆ. ಅಕ್ಕ ಅವನನ್ನು 'ಆತ್ಮಶ್ರೀರಾಜ್ಯದ ಪ್ರಭುಗಳಾಗಿ ಶೋಭಿಸಿರಿ' ಎಂದು ಹರಸಿ ಕಳಿಸುತ್ತಾಳೆ. ಕೌಶಿಕನ ಮನಃಪರಿವರ್ತನೆ, ಕೌಶಿಕ ಮಹಾದೇವಿಯರ ಮುಖಾಮುಖಿ, ಅಕ್ಕನ ಔದಾರ್ಯಪೂರ್ಣ ಕ್ಷಮಾಶೀರ್ವಾದದ ವಸ್ತುಸೃಷ್ಟಿ ಪುರಾಣಿಕರ ಅದ್ಭುತ ಮಾನವೀಯ ಕಲ್ಪನಾಶಕ್ತಿಯ ಔನ್ನತ್ಯಕ್ಕೆ ಉದಾಹರಣೆಯಾಗಿದೆ.

'ಮಹಾದೇವಿ ಮಾರಯ್ಯ' ಬಸವಣ್ಣ ಮತ್ತು ಕಲ್ಯಾಣದ ಕೀರ್ತಿಯನ್ನು ಕೇಳಿ ಕಾಶ್ಮೀರದಿಂದ ಕಲ್ಯಾಣದವರೆಗೆ ನಡೆದು ಬಂದ ರಾಜದಂಪತಿಗಳ ಕಾಯಕ, ದಾಸೋಹದ ಮಣಿಹದ ಮಹಿಮೆಯನ್ನು ಚಿತ್ರಿಸುವ ಕಿರು ರೂಪಕ. ಬಸವಣ್ಣ ಸ್ವತಃ ಅವರ ಬಾಗಿಲಿಗೆ ಬಂದು, ತಾನಾಗಿ ಬೇಡಿ ಅಂಬಲಿ ಮಜ್ಜಿಗೆ ಸಾರು ಉಣ್ಣುವ, ಮತ್ತು ಆ ನಂತರದ ವಿಶಿಷ್ಟ ಪ್ರಸಂಗದ ಚಿತ್ರಣ ಇಲ್ಲಿದೆ.

* * *

ನಾನು ಮೊದಲೇ ಹೇಳಿದಂತೆ, ಪುರಾಣಿಕರದು ವಿಶಾಲ ಸ್ತರದಲ್ಲಿ ಚಿಂತಿಸಿದ ಭಾರತೀಯ ಮನಸ್ಸು. ಈ ಕಾರಣದಿಂದಾಗಿಯೇ ಅವರು ವಿಶಾಲ ಭಾರತದ ಕಾಶ್ಮೀರದಿಂದ ಕನ್ಯಾಕುಮಾರಿಯವರೆಗಿನ ಕ್ಷೇತ್ರ, ಧರ್ಮ, ಭಾಷೆ, ಸಾಹಿತ್ಯ, ಕಾಲಖಂಡಗಳ ವಿಶಿಷ್ಟ ವ್ಯಕ್ತಿತ್ವಗಳನ್ನು ಆಯ್ಕೆ ಮಾಡಿಕೊಂಡು ಆ ಮೂಲಕ ತಮ್ಮ ಹೃದಯವನ್ನು ಇನ್ನಷ್ಟು ಸಮೃದ್ಧಗೊಳಿಸಿಕೊಂಡರು, ಆ ಸಮೃದ್ಧಿಯ ನೈವೇದ್ಯವನ್ನು ಕೃತಿರಚನೆಯ ನೆಪದಲ್ಲಿ ಸಮಸ್ತ ಸಹೃದಯರಿಗೆ ಅರ್ಪಿಸಿದರು. ಇದಲ್ಲದೆ ತಮ್ಮ ಹೃದಯಕ್ಕೆ ತಟ್ಟಿದ ವಿದೇಶೀ ಭಾಷಾ ಕೃತಿಕಾರರನ್ನು, ಕೃತಿಗಳನ್ನು ಕುರಿತು ಸಹ ಬರೆದು ತಮ್ಮ ಲೇಖನ ಕ್ಷೇತ್ರವನ್ನು ವಿಸ್ತರಿಸಿಕೊಂಡರು.

'ಮೋಹನ ಮಂತ್ರ' "ಗಾಂಧೀ ಜಯಂತಿಯ ದಿನ ಸನಾತನ ವಿನೂತನಗಳ ಸಂಗಮದಂತಿದ್ದ ಮನೆಯೊಂದರಲ್ಲಿ ನಡೆದ ಚರ್ಚೆಯೊಂದರ ಚಿತ್ರ." ಹಳೆಯ, ಇಂದಿನ ಮತ್ತು ಹೊಸ ತಲೆಮಾರಿನವರನ್ನು ತಮ್ಮ ಮಧುರ ಭಾವಗೀತಾತ್ಮಕ ರೂಪಕ ಗೃಹದಲ್ಲಿ ಕೂಡಿಸಿ ಗಾಂಧೀಜಿ ಬಗ್ಗೆ ತಮಗಿದ್ದ ಅಪಾರ ಗೌರವವನ್ನು ವ್ಯಕ್ತಪಡಿಸಿದ್ದಾರೆ. ಹೊಸ ತಲೆಮಾರಿನ ಮಧುಕರನ ನೋವು, ಕಳಕಳಿ, ಪ್ರಶ್ನೆಗಳಲ್ಲಿ ಪುರಾಣಿಕರ ಧ್ವನಿ ಹರಳುಗಟ್ಟಿದೆ:

'ಗೋಡಸೆಯು ಕೊಂದದ್ದು ಒಂದೆ ಸಲ ಗಾಂಧಿಯನು
ನಿತ್ಯವೂ ಅವನಾತ್ಮ ಕೊಲ್ಲುವಿರಿ ನೀವು!
ಬಾಪು ಭಕ್ತಿಯ ನಟಿಸಿ ಬಾಪುವಿನ ಹೆಸರಿನಲೆ
ಶೋಷಣೆಯ ಸತ್ರವನು ನಡೆಸಿಹಿರಿ ನೀವು!
ಹಸಿದ ಜೀವಿಗಳಸುವ ತೊರೆಯಲನುವಾದರೂ
ಕಳ್ಳಪೇಟೆಯ ಕಾಳು ಹೊರಗೆ ಬರದು!
ಕೈಮಗ್ಗ ಗಿರಣಿಗಳು ಹಗಲಿರುಳು ಬಟ್ಟೆಯನು
ನೆಯ್ದರೂ ದುಡಿವವರ ಮೈಯು ಬರಿದು!
ಇಂದಿಗೂ ಹರಿಜನರ ಮುಟ್ಟಲಿಕೆ ಹಿಂದೆಗೆವ
ಅಜ್ಜ ಹಾಡುತಲಿಹನು ಗಾಂಧಿಸ್ತುತಿಯ!
ಇಂದಿಗೂ ಕಾರ್ಮಿಕರ ಪಾಲುಗಾರಿಕೆ ಒಪ್ಪ–
ದಂಥ ಅಪ್ಪನು ಗೈವ ಗಾಂಧಿ–ನುತಿಯ!
ಇಂದಿಗೂ ಮಡಿವಂತಿಕೆಯ ಬಿಡದ ತಾಯಿಯೇ
ಯಾವ ಬಾಯಲಿ ಗೈವೆ ಗಾಂಧಿಸ್ತವನ?
ಅನುಸರಿಸದಲೆ ಅವನ ತತ್ತ್ವಗಳ ಏಕಿಂತು
ದುರುಪಯೋಗವ ಮಾಡಿಕೊಳುವಿರವನ?'

'ಅಮೀರ ಖುಸ್ರೋ' ಧರ್ಮಗಳ, ಭಾಷೆಗಳ, ಸಾಹಿತ್ಯ ಸಾರಗಳ ಸಂಗಮವನ್ನು ಪ್ರೋತ್ಸಾಹಿಸುವ ಅಪರೂಪದ ರೇಡಿಯೋ ರೂಪಕ. ಹದಿಮೂರನೆಯ ಶತಮಾನದಲ್ಲಿ ತುರ್ಕ ತಂದೆ, ಹಿಂದೂ ತಾಯಿಯ ಪುತ್ರನಾಗಿ ಉತ್ತರದ ಪಟಿಯಾಲಿಯಲ್ಲಿ ಜನಿಸಿದ್ದ, 'ಎಲ್ಲರನ್ನೂ ಎಲ್ಲವನ್ನೂ ಸಮಾನವಾಗಿ ಪ್ರೀತಿಸಿದ', 'ಭಾರತೀಯತೆಯ ಬುನಾದಿಯನ್ನು ಭದ್ರಪಡಿಸಿದ', ಉರ್ದು, ಹಿಂದವೀ, ಫಾರಸೀ, ಸಂಸ್ಕೃತ ಭಾಷಾವಿದ್ವಾಂಸನಾಗಿದ್ದ, ಪ್ರತಿಭಾಶಾಲಿ ಕವಿ, ಗದ್ಯಲೇಖಕ, ಇತಿಹಾಸಕಾರ, ರಾಜನೀತಿಜ್ಞ, ಸೈನಿಕ, ಮುತ್ಸದ್ದಿ, ಸೂಫೀ, ಸಂಗೀತಜ್ಞ, ಮಾನವತಾವಾದಿ ಅಮೀರ್ ಖುಸ್ರೋನ ಜೀವನವನ್ನು ಆಪ್ತವಾಗಿ ವಿವರಿಸಲು

ದಿಲ್ಲೀ ನಗರ ಮತ್ತು ಯಮುನಾ ನದಿಗಳನ್ನು ಸಹ ನಿರೂಪಕವತ್ ಪಾತ್ರಗಳನ್ನಾಗಿ ಮಾಡಿಕೊಂಡಿದ್ದಾರೆ.

'ನೇಯಬೇಕು, ರಾಮನ ನೆನೆಯಬೇಕು' ಮಹಾತ್ಮ ಕಬೀರನ ಜೀವನಗಾಥೆ. ಹದಿನಾಲ್ಕನೆಯ ಶತಮಾನದಲ್ಲಿ ಆಗಿಹೋದ ಸ್ವಾಮಿ ರಾಮಾನಂದರ ಶಿಷ್ಯ ಕಬೀರನು ರಾಮ ರಹೀಮರನ್ನು ಏಕಾಕಾರಗೊಳಿಸಿ ಹಿಂದೂ ಮುಸ್ಲಿಮ್ ಐಕ್ಯವನ್ನು ಬೋಧಿಸಿ ಬದುಕಿದ, ಗುರುಕೃಪೆಯಿಂದ ಸಾಧಕ, ಸಿದ್ಧ, ಸಂಬುದ್ಧನಾದ ಕಾಯಕಜೀವಿ ಮಹಾಪುರುಷ. ಕಬೀರನ ಆಯ್ದ ಮೂಲ ಹಿಂದೀ 'ಪದ್'ಗಳ ಬಳಕೆಯಿಂದ ಈ ರೂಪಕ ಸಂಪುಷ್ಟವಾಗಿದೆ.

'ಭ್ರಮರದೂತ' ಹಿಂದೀ ಭಕ್ತಿಕಾವ್ಯದ ಒಂದು ವಿಶಿಷ್ಟ ಕಾವ್ಯಭಾಗವಾದ 'ಭ್ರಮರ್‌ಗೀತ್' ಪರಂಪರೆಯ ಉದ್ಭವದ ಹಿನ್ನೆಲೆಯನ್ನು ವಿವರಿಸಲು ರಚಿತವಾದ ರೂಪಕ. ನಿರ್ಗುಣ ಭಕ್ತಿಯ ಪ್ರತಿಪಾದಕ ಉದ್ಧವ ಹಾಗೂ ಸಗುಣ ಭಕ್ತಿಯ ಸಾಗರವೇ ಆಗಿದ್ದ ಅವನ ಆಪ್ತ ಮಿತ್ರ ಕೃಷ್ಣರ ಸಂವಾದಗಳು, ಸಂಪೂರ್ಣ ಸಗುಣ ಭಕ್ತಿರಸನಿಮಜ್ಜಿತ ರಾಧೆ, ಗೋಪಿಯರ ಪಾತ್ರಗಳು ಈ ರೂಪಕದ ಮೆರುಗನ್ನು ಹೆಚ್ಚಿಸಿವೆ.

'ಕಾಶ್ಮೀರದ ಕವಯಿತ್ರಿ' ಕನ್ನಡದ ಅಕ್ಕಮಹಾದೇವಿಯನ್ನು ಮತ್ತೆ ಮತ್ತೆ ನೆನೆಯುವಂತೆ ಮಾಡುವ ಅದ್ಭುತ ಕವಯಿತ್ರಿ, 'ಅಲ್ಲಾನ ಒಲವಿನ ದಾರಿಯಲ್ಲಿ ಕಾಲಿರಿಸಿದ್ದ' ವಿರಾಗಿಣಿ, ಚೆಲುವೆ, ಕಾಶ್ಮೀರದ ಗೌರವ ಹೆಚ್ಚಿಸಿದ ಹಬ್ಬಾ ಖಾತುನ್‌ಳ ವ್ಯಕ್ತಿತ್ವ ಚಿತ್ರಿಸುವ ರೂಪಕ. ತನ್ನ ಪ್ರಥಮ ಪ್ರೇಮಿ ಕಮಾಲ್‌ನ ಒಲವಿನ ಕರೆ, ಮದುವೆಯಾದ ಗಂಡ ಅಜೀಜ್‌ನ ಪಾಶವೀ ಪತಿತ್ವ, ನಂತರ ಅವಳನ್ನು ಮೋಹಿಸಿ, ಒತ್ತಾಯಿಸಿ, ಅಪಹರಿಸಿದ ಕಾಶ್ಮೀರದ ದೊರೆ ಯೂಸುಫ್ ಶಾಹ್‌ನ ಉನ್ಮತ್ತ ಕಾಮಗಳ ತೂಗುಯ್ಯಾಲೆಗಳಲ್ಲಿ ಕನಸು, ವಾಸ್ತವತೆ, ಹುಚ್ಚಾಟಗಳ ಮಧ್ಯೆ ನಲುಗಿದ ಜೀವ ಹಬ್ಬಾ ಖಾತುನ್. ಅತ್ಯಂತ ಸುಂದರ ವಾಚನೀಯ ಕಾವ್ಯಾತ್ಮಕ ರೂಪಕ ಇದು.

'ಭಗ್ನ ನೂಪುರ' ಮೂರನೆಯ ಶತಮಾನದಲ್ಲಿ ರಚಿತವಾದ ಪ್ರಖ್ಯಾತ ಪ್ರಥಮ ತಮಿಳು ಮಹಾಕಾವ್ಯ 'ಶಿಲಪ್ಪದಿಕಾರಂ'ದ ಕಥಾನಕವನ್ನು ಆಧರಿಸಿದ ಸುಂದರ ಕನ್ನಡ ನಾಟ್ಯ ರೂಪ. ಚೇರ ದೊರೆ ಶೆಂಗುಟ್ಟವನ ಸೋದರ ಇಳಂಗೋ ಇದರ ಕರ್ತೃ. ಚೋಳರ ರಾಜಧಾನಿಯಾಗಿದ್ದ ಕಾವೇರಿಪಟ್ಟಿನಂ(ಪುಹಾರ್)ದ ಆಗರ್ಭ ಶ್ರೀಮಂತ ತರುಣ ವರ್ತಕ ಕೋವಲನ್. ಅವನ ಪತ್ನಿ ಕನ್ನಗಿ ಲೋಕೋತ್ತರ ಲಾವಣ್ಯವತಿ, ಸದ್ಗುಣರಾಶಿ, ಶುಭಮತಿಸಂಪನ್ನೆ, ಶೀಲೋನ್ನತಿಪೂರ್ಣೆ, ಅಸದಳ ಪ್ರೀತಿಪ್ರಾಪ್ತೆ. ಇಷ್ಟೆಲ್ಲ ಇದ್ದರೂ ತನ್ನ ಪತಿಗೆ ಪ್ರಿಯವೆನಿಸುವ ನರ್ತನಕಲೆಯನ್ನೂ ಸಾಧಿಸಿ ಅವನ ಒಲವಿನ ಏಕಮಾತ್ರ ಒಡತಿಯಾಗಬೇಕೆಂಬ ಹಂಬಲ ಅವಳಿಗೆ. ಕಾಲಿಗೆ ಕಾಲ್ಗಡಗ(ನೂಪುರ)ವನ್ನು ಕಟ್ಟಿಕೊಂಡು, ಕುಣಿತದ ಕಲಿಕೆಯ ಆರಂಭದಿಂದಲೇ

ಅಪಶಕುನಗಳನ್ನು ಕಾಣುತ್ತ, ಸೋಲುತ್ತ, ಕನ್ನಗಿ ಪಡುವ ಪಡಿಪಾಟಲು; ನೃತ್ಯನಿಪುಣೆ ಮಾಧವಿಯ ಪ್ರೇಮ–ಕಾಮ–ಪಾಶದಲ್ಲಿ ಮಣಿಮೇಖಲೆ ಎಂಬ ಮಗಳನ್ನು ಪಡೆದರೂ, ಎಲ್ಲವನ್ನೂ ಪಡೆದು ಎಲ್ಲವನ್ನೂ ಕಳೆದುಕೊಳ್ಳುವ ಕೋವಲನ ದುರಂತ, ಈ ಸದ್ಗುಣಿ ಪತಿ–ಪತ್ನಿಯರ ಜೀವನದ ದಾರಿಯಲ್ಲಿ ಬರುವ ಎಲ್ಲರನ್ನೂ ಸುತ್ತಿಕೊಳ್ಳುವ ಅನಾಹುತಗಳ ಜಾಲ ಈ ರೂಪಕದಲ್ಲಿ ಕಣ್ಣಿಗೆ ರಾಚುವಂತೆ ಚಿತ್ರಿತವಾಗಿದೆ.

'ಷಾನಿಗೆ ಶ್ರದ್ಧಾಂಜಲಿ' ೯೪ ವರ್ಷ ಬದುಕಿದ್ದ, ಪ್ರಖ್ಯಾತ ಇಂಗ್ಲಿಷ್ ನಾಟಕಕಾರ, ಚಿಂತಕ ಜಾರ್ಜ್ ಬರ್ನಾರ್ಡ್ ಷಾ ನಿಧನ ಹೊಂದಿದ ಸುದ್ದಿ ತಿಳಿದೊಡನೆ ಬರೆದ ಹೊಸ ಬಗೆಯ, ನವೀನ ವಿಷಯ ಸಂಗ್ರಹದ ಮಹತ್ತ್ವದ ರೂಪಕ. ಹಲವಾರು ವರ್ಷಗಳವರೆಗೆ ವೈಚಾರಿಕ ಜಗತ್ತನ್ನು ಆಳಿದ ಬರ್ನಾರ್ಡ್ ಷಾ ಜೀವನಕ್ಕೆ ತನ್ನದೇ ಆದ ಅರ್ಥ ನೀಡಿದ ಸ್ವತಂತ್ರಮತಿ, ನಿರಂಕುಶಮತಿ, ಮಹಾಮಾನವನಾಗಿದ್ದ. ಪುರಾಣಿಕರು ಶಾನನ್ನು ಬಹುವಾಗಿ ಪ್ರೀತಿಸಿದ್ದರು. ಶಾನ ಕೃತಿಗಳನ್ನು ಕನ್ನಡಿಸುವುದು, ಅವನ ನಾಟಕಗಳನ್ನು ಕನ್ನಡದಲ್ಲಿ ಕನ್ನಡಿಗರಿಗಾಗಿ ಆಡುವುದು, ಆಗಾಗ ಅವನ ಬಗ್ಗೆ ಚರ್ಚಿಸುವುದು ಇವೇ ಶಾನಿಗೆ ಸ್ಮಾರಕವಾಗಬೇಕು ಎಂದು ಅಭಿಮಾನಪೂರ್ವಕ ಶ್ರದ್ಧಾಂಜಲಿ ಸಲ್ಲಿಸಿದ್ದಾರೆ.

'ದುಃಖಸೇತು' ಬಿ.ಎಂ. ಶ್ರೀಕಂಠಯ್ಯ ಅವರು ಕನ್ನಡಿಸಿದ, ೧೯೨೬ ರಲ್ಲಿ ಪ್ರಕಟಿತ 'ಇಂಗ್ಲಿಷ್ ಗೀತಗಳು' ಸಂಕಲನದ ಒಂದು ಪ್ರಸಿದ್ಧ ಶೋಕಗೀತ. ಥಾಮಸ್ ಹುಡ್‌ನ 'ದಿ ಬ್ರಿಜ್ ಆಫ್ ಸೈಜ್' ಎಂಬ ೧೦೬ ಸಾಲುಗಳ ಕವಿತೆಯಲ್ಲಿ ಸುಂದರಿ ಅನಾಥ ತರುಣಿಯೊಬ್ಬಳು ಹೊಳೆಗೆ ಹಾರಿ ಆತ್ಮಹತ್ಯೆ ಮಾಡಿಕೊಳ್ಳಬೇಕಾಗಿ ಬಂದ ಹೃದಯವಿದ್ರಾವಕ ಪ್ರಸಂಗದ ಕರುಣಾಪೂರ್ಣ ಚಿತ್ರವೊಂದರ ಅತ್ಯಂತ ಪ್ರಭಾವಕಾರೀ ವರ್ಣನೆಯಿದೆ. ಆಚಾರ್ಯ ಶ್ರೀ ಅವರು ಮಾಡಿದ ಅನುವಾದ ಮೂಲದಷ್ಟೇ ಯಶಸ್ವಿಯಾಗಿದೆ. ಸಿದ್ಧಯ್ಯ ಪುರಾಣಿಕರು ಹೀಗೆ ಒಂದು ಕವಿತೆಯನ್ನು ಆರಿಸಿಕೊಂಡು ಅದರ ವಸ್ತುವನ್ನು ತಮ್ಮ ನಾಟಕಕ್ಕೆ ಬಳಸಿಕೊಂಡ ರೀತಿ ಅದ್ಭುತ, ಅನನ್ಯ. ಥಾಮಸ್ ಹುಡ್ ಅವರ ಮೂಲ ಕವಿತೆ, ಬಿ. ಎಂ. ಶ್ರೀ ಅವರ ಅನುವಾದ ಎರಡಕ್ಕೂ ಸರಿಸಾಟಿಯಾಗಿ ನಿಲ್ಲುವಂಥ ಗೀತ ರೂಪಕ ಪುರಾಣಿಕರದು. ಹೊಳೆ ದಂಡೆಗೆ ಬಂದಾಗ ಅನಾಥ ಕನ್ಯೆಯೊಬ್ಬಳ ಕಳೇವರವನ್ನು ಕಂಡು, ಕನಲಿದ ಉಷಾ ಮತ್ತು ಆಶಾ ಹೆಸರಿನ ಇಬ್ಬರು ಗೆಳತಿಯರು ಮಾತನಾಡಿಕೊಳ್ಳುವಂತೆ ಕಲ್ಪಿಸಿಕೊಂಡ ಪುರಾಣಿಕರ 'ದುಃಖಸೇತು' ಎಂಥ ಲೇಖಕನಿಗೂ ಆಹ್ವಾನವಾಗುವಂಥ ಬರವಣಿಗೆ. ಇಲ್ಲಿ ಕಾವ್ಯ, ಕಥೆ, ಅನುಭವ, ಭಾವಪ್ರದರ್ಶನ, ಗೀತ, ಕಾರುಣ್ಯ, ಜೀವನ ಚಿಂತನ ಎಲ್ಲ ಇದೆ. ಇಡೀ ಕವಿತೆಯನ್ನು ಭಾರತೀಕರಣಗೊಳಿಸಿ ಮಾನವೀಯ ಹಿನ್ನೆಲೆಯಲ್ಲಿ ಯೌವನ, ಪ್ರೇಮ, ಸೌಂದರ್ಯ, ವಂಚನೆ, ಹೆಣ್ಣು ಮಗು ವಹಿಸಬೇಕಾದ ಕಾಳಜಿ ಮುಂತಾದುವನ್ನು ಮನಂಬುಗುವಂತೆ ಚಿತ್ರಿಸಿದ್ದಾರೆ. 'ಸಂಯಮನವಾಭರಣ ಸ್ತ್ರೀ ಜನ್ಮಕೆ!' ಎಂದು ಎಚ್ಚರಿಕೆ ನೀಡುತ್ತಾರೆ:

'ಮುಟ್ಟು ಮೆಲ್ಲನೆ ಗೆಳತಿ, ತಟ್ಟು ಮೆಲ್ಲನೆ ಗೆಳತಿ,
ಮೈಯೊರೆಸಿ ಸರಿಪಡಿಸಿ ಎದೆಯಲ್ಲಿ ಕೈಮುಗಿಸಿ
ಕಳುಹಿಸವಳನು ಅವನ ಬಳಿಗೆ– ಚಿನುಮಯನ ಬಳಿಗೆ!
ನೊಂದು ಬಂದಿಹಳಿವಳು ತಂದೆ ಸ್ವೀಕರಿಸು
ಕುಂದನೆಣಿಸದ ಕರುಣ–ಸಿಂಧು ಸ್ವೀಕರಿಸು!'

ಇಡೀ ರೂಪಕದ ಪದ ಪದದಲ್ಲಿ ಕರುಣೆಯ ಕಟ್ಟೆ ಕಟ್ಟುವ, ಕಟ್ಟೆ ಒಡೆಯುವ ಕ್ರಿಯೆ ತುಂಬಿ ತುಳುಕಿದೆ.

* * *

'ಮಧುಮಹೋತ್ಸವ', 'ತುಂಗಭದ್ರೆ–ಮಂಗಲೆ', 'ರಜತರೇಖೆ' ರೂಪಕಗಳು ಪುರಾಣಿಕರ ಭಾವವಿಲಾಸವನ್ನು ಹಿಡಿದಿಡುವ ಪ್ರಯತ್ನದ ಫಲಗಳು. ಪಂಪನನ್ನು ಓದಿ ಅರಗಿಸಿಕೊಂಡಿದ್ದ ಪುರಾಣಿಕರು ಅವನಿಂದ ಪಡೆದ 'ಮಧುಮಹೋತ್ಸವ' ಪದಕ್ಕೆ ಕೃತಜ್ಞರಾಗಿದ್ದಾರೆ. ಮೇಳ, ಹಾಡು, ಕೋಲಾಟ, ಕಥೆ, ನಿಸರ್ಗಪ್ರೇಮ ತುಂಬಿರುವ ಈ ಕೃತಿಯಲ್ಲಿ ಅಲ್ಲಲ್ಲಿ ಕುವೆಂಪು ಛಾಯೆ ಕಾಣುವುದು ಕೂಡ ಸೊಗಸಿನ ಭಾಗವೇ. 'ತುಂಗಭದ್ರೆ–ಮಂಗಲೆ' ಕುರಿತು "ತುಂಗಭದ್ರಾ ಜಲಾಶಯವು ನಮ್ಮ ನಾಡಿನ ನವೋದಯದ ಪ್ರತೀಕ, ನಮ್ಮ ಸಾಹಸದ ಸಂಕೇತ. ಬರದೊಡನೆ, ಕೊರತೆಯೊಡನೆ ನಾವು ನಡೆಸಿರುವ ಹೋರಾಟದಲ್ಲಿ ನಮಗೆ ದೊರೆತಿರುವ ಸಫಲತೆಯ ಸ್ಮಾರಕ" ಎನ್ನುವ ಪುರಾಣಿಕರು ಇಲ್ಲಿ ಸಂಗಮಿಸುವ ನದಿಗಳು, ಭೂಮಿ, ಯೋಜನೆ, ವೆಚ್ಚ ಇತ್ಯಾದಿ ಚರಿತ್ರೆಯನ್ನು ಹೃದಯಂಗಮವಾಗಿ ಬರೆದಿದ್ದಾರೆ. ಕಲ್ಪನಾವಿಲಾಸ, ಕಾವ್ಯವೈಭವ, ಭಾಷಾಸೌಂದರ್ಯ ಒಟ್ಟಾಗಿ ಮೇಳವಿಸಿದ ಪರಿ ಮೆಚ್ಚುವಂತಿದೆ. 'ರಜತರೇಖೆ' ಕವಿ, ತತ್ವದರ್ಶಿ, ವಿಜ್ಞಾನಿ, ನರ್ತಕಿ, ರಾಜಕಾರಣಿ, ವ್ಯಾಪಾರಿ, ವಿರಹಿಣಿಯರ ರೂಪದಲ್ಲಿ ಪುರಾಣಿಕರು ಮಿಂಚು, ಗುಡುಗು, ಮೇಘಮಾಲೆಗಳ ಸೃಷ್ಟಿ ಸೌಂದರ್ಯವನ್ನು ಮೆಚ್ಚುವ, ಅದನ್ನು ಹೃದಯದಲ್ಲಿ ತುಂಬಿಕೊಳ್ಳುವ, ಹಾಗೂ ಪರೋಕ್ಷವಾಗಿ ಸೃಷ್ಟೀಶನಿಗೆ ಕೃತಜ್ಞತೆ ಹೇಳುವ ಮಾನವಪ್ರೇಮದ ಸುಂದರ ಗೀತರೂಪಕ. ಈ ನಾಟಕಗಳಲ್ಲಿ ಅಲ್ಲಲ್ಲಿ ರಂಗಪ್ರಯೋಗ, ಭಾಷೆ ಮತ್ತು ಸಾಹಿತ್ಯಕ್ಕೆ ಸಂಬಂಧಪಟ್ಟ ಕೆಲವು ದೋಷಗಳು, ಸ್ಖಾಲಿತ್ಯಗಳು ನುಸುಳಿಕೊಂಡಿವೆ, ಆದರೆ ಅವು ರಸಾಸ್ವಾದನಕ್ಕೆ ಅಡ್ಡಿಯಾಗುವುದಿಲ್ಲ ಎಂಬುದು ಸಮಾಧಾನ.

೧೯೮೬ ರಲ್ಲಿ ಪ್ರಕಟವಾಗಿದ್ದ ಪುರಾಣಿಕರ 'ನ್ಯಾಯ ನಿರ್ಣಯ' ಎಂಬ ಮಕ್ಕಳ ನಾಟಕವೂ ಒಳ್ಳೆಯ ನಾಟಕವೇ. ಅದು ಸಹ ಈ ಸಂಪುಟದಲ್ಲಿ ಸೇರಿದ್ದರೆ ಇದರ ಸೂಕ್ತತೆ ಹೆಚ್ಚುತ್ತಿತ್ತು.

* * *

ಸಿದ್ಧಯ್ಯ ಪುರಾಣಿಕರದು ಕವಿಹೃದಯ, ಸ್ತ್ರೀಹೃದಯ, ಮಾತೃಹೃದಯ. ಭಾರತೀಯ ಮಹಿಳೆ, ಭಾರತೀಯ ಆತ್ಮ ಅವರಿಗೆ ಪೂಜನೀಯ. ರಂಗಪ್ರಯೋಗಕ್ಕಾಗಿ ಬರೆದ ಅಥವಾ ಬಾನುಲಿ ಪ್ರಸಾರಕ್ಕಾಗಿ ಬರೆದ ಅವರ ಎಲ್ಲಾ ನಾಟಕಗಳಲ್ಲಿ ಕಾವ್ಯ, ಸಾಹಿತ್ಯ, ಅಧ್ಯಾತ್ಮ, ಸಾಮಾಜಿಕ ಸೇವೆ, ಶೌರ್ಯ, ಹೋರಾಟ, ಇತಿಹಾಸ ನಿರ್ಮಾಣ, ಕುಟುಂಬ ವತ್ಸಲತೆ, ದುರಂತ ಸಹನೆ ಮೊದಲಾದ ಕ್ಷೇತ್ರಗಳಲ್ಲಿ ಒಂದಿಲ್ಲ ಒಂದು ರೀತಿಯಲ್ಲಿ ಅವರು ಭಾರತೀಯ ಮಹಿಳೆ ಮಾಡಿದ ತ್ಯಾಗ, ಸಲ್ಲಿಸಿದ ಸೇವೆ, ಪಟ್ಟ ಪಾಡು, ಏರಿದ ಎತ್ತರಗಳನ್ನು ಉಚ್ಚ ಸ್ವರದಲ್ಲಿಯೇ ಬಿತ್ತರಿಸಿ ಗೌರವಿಸಿದ್ದಾರೆ. 'ಭಗ್ನ ನೂಪುರ'ಕ್ಕೆ ಬರೆದ ಅವರ ನಿವೇದನ ನುಡಿಯ ಕೆಲವು ಮಾತು ಅವರ ಸಮಗ್ರ ಮಾತೃವ್ಯಕ್ತಿತ್ವವನ್ನೇ ಬೆಳಕಾಗಿಸುವಂತಿವೆ: "ಈ ಮೂರು ನಾಟಕಗಳನ್ನು ತುಂಬಿ ನಿಂತಿರುವವರು ಮೂವರು ಮಹಾಮಹಿಳೆಯರು – ತಮಿಳುನಾಡಿನ ಕನ್ನಗಿ, ಕಾಶ್ಮೀರದ ಹಬ್ಬಾ ಖಾತುನ್ ಮತ್ತು ಕರ್ನಾಟಕದ ಅಕ್ಕಮಹಾದೇವಿ! ಮೂವರ ವ್ಯಕ್ತಿತ್ವವೂ ಮೂದೆರನಾದುದು, ವೈಶಿಷ್ಟ್ಯಪೂರ್ಣವಾದುದು, ಉದ್ದೀಪನಕಾರಿಯಾದುದು. ಕನ್ನಗಿಯ ಕೆಚ್ಚು, ಹಬ್ಬಾಳ ಏರಿಳಿತಗಳ ಸಂಗಮ, ಅಕ್ಕನ ಸತಿ–ಪತಿ ಭಾವದ ಪರಾಕಾಷ್ಠೆ – ಒಂದೊಂದೂ ರೋಮಾಂಚನಕಾರಕ ! ನನಗೆ ಬರುವಷ್ಟು ಭಾಷೆಗಳಲ್ಲಿರುವ ಸಾಹಿತ್ಯಗಳಲ್ಲಿ ನನಗೆ ಸಾಧ್ಯವಾದಷ್ಟು ಕೃತಿಗಳನ್ನು ಓದಿ ಸ್ತ್ರೀ ಸತ್ವದ ಸಹಸ್ರ ಮುಖಗಳನ್ನು ಕಂಡುಕೊಳ್ಳಲು ಪ್ರಯತ್ನಿಸಿದ್ದೇನೆ. ಬಹಳ ಹಿಂದೆ ನನ್ನ ಮನಸ್ಸನ್ನು ಸೆರೆಹಿಡಿದ ಕಾರ್ಡಿನಲ್ ನ್ಯೂಮನ್ನನ ಈ ವಾಕ್ಯ ಇದಕ್ಕೆ ಪ್ರೇರಕ: 'If the soul is to go into higher spiritual blessedness, it must become woman; yes, how ever manly that may be among men.' ಇದರೊಡನೆ ಶಿವಶರಣರು ಹೆಣ್ಣಿಗಿತ್ತ ಗೌರವದ ಸ್ಥಾನವನ್ನು ಅರಿತ ಮೇಲೆ ಆತ್ಮವನ್ನು ಹೆಣ್ಣಾಗಿಸಿಕೊಳ್ಳುವ ಹಂಬಲ ಇನ್ನೂ ಹೆಚ್ಚಿತು."

* * *

ಸಿದ್ಧಯ್ಯ ಪುರಾಣಿಕರ ಹೃದಯವನ್ನು, ಮಸ್ತಿಷ್ಕವನ್ನು ಅರಿತು ಆ ಮೂಲಕವೇ ಅವರ ಬರವಣಿಗೆಗಳ ಹೃದಯದಲ್ಲಿ ಪ್ರವೇಶಿಸುವ, ಅವರನ್ನು ತಿಳಿಯುವ ಪ್ರಯತ್ನ ಮಾಡಬೇಕು, ಮಧುರ ಬಾಂಧವ್ಯ ಸಾಧಿಸಬೇಕು. ಆಗ ಸಹಜ ಸಹೃದಯ ಸಾಧಾರಣೀಕರಣ ಸಾಧ್ಯವಾಗುತ್ತದೆ. ಪ್ರತಿಯೊಬ್ಬ ಲೇಖಕನನ್ನು ತಿಳಿಯಲು, ಪ್ರತಿರೂಪಿಸಿಕೊಳ್ಳಲು ಎಲ್ಲ ಸಹೃದಯರೂ ಮಾಡಬೇಕಾದ ಕಾರ್ಯ ಇದು.

'ಈ ನಾಡಿನೊಳು ನೀನು ನೆಮ್ಮದಿಯ ಪಡೆಯದಿರೆ

ಬೇರಾವ ನಾಡಿನಲು ಪಡೆಯಲಾರೆ

ಈ ನುಡಿಯ ಬಲದಿಂದ ಮೇಲ್ಮೆಯನು ಪಡೆಯದಿರೆ

ಬೇರಾವ ನುಡಿಯೊಳೂ ಪಡೆಯಲಾರೆ'

ಎಂದು ಕನ್ನಡ ನಾಡು, ನುಡಿಯನ್ನು ಸರ್ವಸ್ವವೆಂದು ಭಾವಿಸಿ ಆರಾಧಿಸಿದ್ದ ಸಿದ್ಧಯ್ಯ ಪುರಾಣಿಕರು ಒಮ್ಮೆ ಸಮಾಧಾನ, ಸಂಕೋಚ, ಸಂಶಯ, ವ್ಯಂಗ್ಯ ತುಂಬಿದ ಧ್ವನಿಯಲ್ಲಿ 'ಕಾವ್ಯಾನಂದ ಕಾಣೆಯಾಗಿದ್ದಾನೆ' ಎಂದು ಬರೆದುಕೊಂಡಿದ್ದರು. ಇಲ್ಲ, ಕಾವ್ಯಾನಂದರು ಕಾಣೆಯಾಗಿಲ್ಲ, ಕಾಣೆಯಾಗುವುದಿಲ್ಲ. ಅವರ ಸತ್ತ್ವ, ಸ್ವತ್ತ್ವಗಳು ಕಾಣೆಯಾಗುವ ದ್ರವ್ಯ ಅಲ್ಲ. ಕಾವ್ಯಾನಂದರು ಕಥಾನಂದ, ನಾಟ್ಯಾನಂದ, ವಚನಾನಂದ, ಜೀವನಾನಂದರಾಗಿ ಸದಾ ಕಾಲ ಕನ್ನಡದ ಚೇತನವಾಗಿ ಉಳಿಯುವಂಥವರು. ಅಂಥ ಚೇತನವನ್ನು ಆಸ್ವಾದಿಸುವ ಭಾಗ್ಯವಂತರ ಹೃದಯರಂಗದ ಮೇಲೆ ಕಾವ್ಯನಾಟ್ಯಾನಂದ ರಸ ಅಭಿನೀತಗೊಂಡು ವ್ಯಾಪಿಸುವಂತಾಗಲಿ.

'ಹೂಮನೆ', ಶ್ರೀದೇವಿನಗರ, ವಿದ್ಯಾಗಿರಿ, ಧಾರವಾಡ – ೫೮೦ ೦೦೪

– **ಸಿದ್ಧಲಿಂಗ ಪಟ್ಟಣಶೆಟ್ಟಿ**

ಪರಿವಿಡಿ

ಪ್ರಕಾಶಕರ ಮಾತು III

ಮುನ್ನುಡಿ V

೧. ಆತ್ಮಾರ್ಪಣೆ ೧

೨. ರಜತ ರೇಖೆ ೧೧೧

i. ಮಧು ಮಹೋತ್ಸವ ೧೧೪

ii. ಮೋಹನ ಮಂತ್ರ ೧೨೯

iii. ಮಾಯಾ ಕೋಲಾಹಲ ೧೩೯

iv. ಷಾನಿಗೆ ಶ್ರದ್ಧಾಂಜಲಿ ೧೫೯

v. ತುಂಗಭದ್ರೆ-ಮಂಗಲೆ ೧೭೨

vi. ದುಃಖ ಸೇತು ೧೮೪

vii. ರಜತ ರೇಖೆ ೧೯೬

viii. ಗಿರಿಜೆಯ ಗೆಲವು (ಗಿರಿಜಾ ಕಲ್ಯಾಣ) ೨೦೩

೩. ಭಾರತ ವೀರ ೨೪೭

೪. ಭಗ್ನ ನೂಪುರ

i. ಭಗ್ನ ನೂಪುರ ೩೨೧

ii. ಕಾಶ್ಮೀರದ ಕವಯಿತ್ರಿ ೩೫೯

iii. ನಿರ್ಬಂಧನ ೩೯೭

೬. ಭ್ರಮರ ದೂತ

i. ಭ್ರಮರ ದೂತ ೪೩೩
ii. ನೇಯಬೇಕು ರಾಮನ ನೆನೆಯಬೇಕು ೪೫೩
iii. ಮಹಾದೇವಿ ಮಾರಯ್ಯ ೪೬೬
iv. ಅಮೀರ ಖುಸ್ರೋ ೪೭೭

೭. ಅನುಬಂಧಗಳು

ಅನುಬಂಧ ೧ – ಪ್ರಕಾಶಕರ ಮಾತು ೫೦೧
ಅನುಬಂಧ ೨ – ಮುನ್ನುಡಿಗಳು ೫೦೪
ಅನುಬಂಧ ೩ – ನಿವೇದನೆಗಳು ೫೨೦
ಅನುಬಂಧ ೪ – ಡಾ. ಸಿದ್ಧಯ್ಯ ಪುರಾಣಿಕರ ಜೀವನ ವಿವರ ೫೩೪
ಅನುಬಂಧ ೫ – ಡಾ. ಸಿದ್ಧಯ್ಯ ಪುರಾಣಿಕರ ಸಾಹಿತ್ಯಸೂಚಿ ೫೩೬
ಅನುಬಂಧ ೬ – ಛಾಯಾಚಿತ್ರಗಳ ವಿವರ
ಅ) ಆತ್ಮಾರ್ಪಣ ೫೪೩
ಆ) ಗಿರಿಜಾ ಕಲ್ಯಾಣ ವಿಶೇಷ ಸಂಗೀತ ರೂಪಕ ೫೪೫

ಆತ್ಮಾರ್ಪಣ

ಅರ್ಪಣೆ

ನನ್ನ ತಂದೆ

ಪಂಡಿತ ಕಲ್ಲಿನಾಥಶಾಸ್ತ್ರಿಗಳವರು

ನನ್ನ ತಾಯಿ

ದಾನಮ್ಮನವರು

ಇವರ ಚೆನ್ನಡಿಗಳಿಗೆ

–ಕಾವ್ಯಾನಂದ

ಪಾತ್ರ ಪರಿಚಯ

ಸಂಗಮನಾಥ

ಬಸವಣ್ಣ

ಬಿಜ್ಜಳ

ಪ್ರಭುದೇವ

ಹರಳಯ್ಯ

ಮಂಚಣ್ಣ

ಚನ್ನಬಸವ

ಸಿದ್ಧರಾಮ

ಮಧುವರಸ

ಮಾದರಸ

ಬಲದೇವ

ಸಿದ್ಧರಸ

ಜಗದೇವ

ಮಾಚಿದೇವ

ಜಾತವೇದಮುನಿ

ಬಾಲಬಸವ

ಶೀಲವಂತಯ್ಯ

ಗಿರಿಜಾ

ನೀಲಾಂಬಿಕೆ

ಗಂಗಾಂಬೆ

ನೀಲಲೋಚನೆ

ಗೌರಿ

ಕಲಾವತಿ

ಶಾರದೆ

ಮಾದಲಾಂಬಿಕೆ

ಅಕ್ಕಮಹಾದೇವಿ

ತಿರುಕಂಭಟ್ಟ, ವಡ್ಡ, ಕಳ್ಳ, ಹಿರೇಮಣಿ, ಕುಡುಕ, ಮುಂತಾದವರು.

ಆತ್ಮಾರ್ಪಣ

ಸ್ತುತಿ

ಜಗಜ್ಯೋತಿ ಬಸವೇಶ ಜಯಮುಕ್ತಿಕೋಶ
ಜಗದಾದಿ ದೇಶಿಕನೆ ಅಭಯವನು ನೀಡೈ ॥**ಪ**॥
ಜಯಭಕ್ತಿ ಯುಗಪುರುಷ ಜಯಭಕ್ತ ಪರುಷ
ದಯಧರ್ಮದುತ್ಕರ್ಷ ಜನಹೃದಯ ಹರುಷ
ಜಯಕಾರಿ, ಭಯಹಾರಿ, ವಿಶ್ವಮಂಗಲಕಾರಿ ॥೧॥
ಕಲ್ಯಾಣಕರ ಮೂರ್ತಿ ಕಲ್ಯಾಣ ಕೀರ್ತಿ
ಕಲ್ಯಾಣ ಸಂಸ್ಕೃತಿಯ ಆಂತರಿಕ ಸ್ಫೂರ್ತಿ
ಸಲ್ಲಲಿತ ವಚನಗಳ ವಲ್ಲಭನೆ ಶರಣು ॥೨॥
ಶಿವಶಕ್ತಿ ಸುಕುಮಾರ ಪರಮಾವತಾರ
ಭುವನ ವಂದಿತ ವೀರ ನವ ಕ್ರಾಂತಿಕಾರ
ಭವ ಮತದ ಉದ್ಧಾರ ಭಾರತಿಯ ಹಾರ ॥೩॥

೨

ರಾಗ : ಹಮೀರ ತಾಳ : ತ್ರಿತಾಲ ಚಾಲ : ಪಿಯಾಕೆ ದರಸಲಿನ

ಪಾಲಿಸು ಜಯ ದಯಧರ್ಮಿ ಓ ವಿಶ್ವಜ್ಯೋತಿ
ಕಾಲದೇಶಗಳ ಮೀರಿದ ಶರಣ ॥**ಪ**॥
ದೀನರ ದಲಿತರ ಪ್ರಾಣಾಧಾರ । ಮಾನವ ದುಃಖಹಾರ ॥೧॥
ಭೂಮ್ಯಾಕಾಶದಿ ಬಸವನ ನಾಮವು । ಪ್ರೇಮಕ್ಕೆ ಪಾರಾವಾರ ॥೨॥
ನಿನ್ನಯ ಗೀತೆಯೆ ವಿಶ್ವ ಸಂಗೀತವು । ಸನ್ನುತ ಸತ್ಯದಸಾರ ॥೩॥

ಮೊದಲನೆಯ ಅಂಕ

ನೋಟ ೧

(ಬಾಗೆವಾಡಿಯಲ್ಲೊಂದು ಬೀದಿ. ಕರದಿ ತಬಕಗಳೊಡನೆ ಗಂಗೆ ಗೌರಿಯರು)

ಗಂಗಾ : ಹಾಗಾದರೆ ಗೌರಿ, ಮಾತಾ ಮಾದಲಾಂಬಿಕಾದೇವಿಯವರ ಪುಣ್ಯ ಗರ್ಭದಿಂದ ಜನಿಸಿದ ಕಂದಯ್ಯನು ಕಾರುಣಪುರುಷನೆಂದೇ ನಿನ್ನ ಅಭಿಪ್ರಾಯವೆ?

ಗೌರಿ: ನಿಸ್ಸಂದೇಹವಾಗಿ. ನಿನಗೆ ಗೊತ್ತಿಲ್ಲವೆ ಗಂಗಾ? ಮಾದಲಾಂಬಿಕಾದೇವಿಯವರು ಶ್ರೀ ನಂದಿಕೇಶ್ವರನನ್ನು ಪೂಜಿಸಿ ಪುತ್ರರತ್ನವನ್ನು ಪಡೆದಿರುವರು. ನಂದಿನಾಥನೆ ಅವರಿಗೆ ಮಗುವಾಗಿ ಜನಿಸಿರುವನೆಂದು ಎಲ್ಲರ ತಿಳಿವಳಿಕೆ. ಬಾಲ ದಿನಮಣಿಯಂತೆ ತೇಜಸ್ವಿಯಾದ ಆ ಕಂದಯ್ಯನನ್ನು ನೋಡಿದರೆ ಈ ಮಾತಿನ ಸತ್ಯತೆಯು ಮನದಟ್ಟಾಗುವದು. ತಿಂಗಳಿನ ಬೆಳಕನ್ನು ತಂಗಾಳಿಯಲ್ಲಿ ತೆಯ್ದು ಬೊಂಬೆ ಮಾಡಿದಂತಿರುವ ಆ ದೇಹದ ಕಾಂತಿ, ಶಾಂತಿಯೇ ಶಿರಿರೂಪ ತೊಟ್ಟಂತಿರುವ ಆ ನಗೆಮೊಗ, ಬೆಳಕಿನ ಬಿತ್ತುಗಳಂತಿರುವ ಕಣ್ಣುಗಳು ಇವೆಲ್ಲ ನನ್ನ ನಿನ್ನಂಥವರ ಮಕ್ಕಳಲ್ಲಿರುವದು ಸಾಧ್ಯವೇ?

ಗಂಗಾ : ಗೆಳತಿ, ಅರಸರ ಮಕ್ಕಳು ರೂಪವಂತರಾಗಿರುವದು ಸಹಜವೇ.

ಗೌರಿ : ಬರಿಯ ರೂಪವಂತನಷ್ಟೇ ಅಲ್ಲ, ಮಾದಲಾಂಬೆಯ ಮಗುವು ಮಹಿಮಾವಂತನೂ ಅಹುದು. ಹುಟ್ಟಿದ ಕೂಸು ಲಿಂಗವನ್ನು ಧರಿಸಿದ ಮೇಲೆಯೇ ಕಣ್ಣು ತೆರೆಯುವದು ಹುಡುಗಾಟವೆ? ಈತನು ಮಹಾಪುರುಷನಾಗಲೇ ಬೇಕು.

ಗಂಗಾ : ಹಾಗಾದರೆ ಬಾಗೇವಾಡಿಯ ಭಾಗ್ಯದ ಬಾಗಿಲು ತೆರೆದಂತಾಯಿತು.

ಗೌರಿ: ಬರಿಯ ಬಾಗೇವಾಡಿಯದೇ ಏಕೆ? ಅಖಿಲ ಮಾನವಕೋಟಿಯ ಭಾಗ್ಯದ ಬಾಗಿಲು ತೆರೆಯಿತೆಂದೇ ತಿಳಿ! ನಡೆ, ನಾಮಕರಣೋತ್ಸವಕ್ಕೆ ತಡವಾಗುತ್ತದೆ. ಸೀಮಂತಿನಿಯರೆಲ್ಲರೂ ಬಂದಿರಬಹುದು.

(ತೆರೆ ಏಳುವದು)

ನೋಟ ೨

(ಮಾದರಸನ ಮನೆಯಲ್ಲಿ ಮೀರಿದ ಸಂಭ್ರಮ)

ಮಾದರಸ : ಇನ್ನು ಹೊತ್ತುಗಳೆಯಬೇಡಿರಿ, ತೀವ್ರ ಕಾರ್ಯ ಮುಗಿದು ಹೋಗಲಿ!

ಗಂಗಾ : ಪ್ರಭುಗಳೇ ನಾವೀಗ ಮಾತೆಯ ದಾರಿಯನ್ನೇ ನೋಡುತ್ತಲಿರುವೆವು.

ಮಾದರಸ : (ಒಳಗೆ ನೋಡಿ) ದೇವಿ!.... ದೇವಿ!....

ಮಾದಲಾಂಬೆ : (ಕೂಸನ್ನು ಕೈಗಳ ಮೇಲೆ ಮಲಗಿಸಿ ಲೀಲೆಯಿಂದ) ನನ್ನ ಕಣ್ಗಳ ಪುಣ್ಯ ಕಂದಯ್ಯ, ಕಣ್ಣು ತೆರೆ! ಇದೊ ನನ್ನನ್ನು ನೋಡು ನಾನು ನಿನ್ನ ತಾಯಿ! ಅಲ್ಲವೇ ಕಂದಯ್ಯ ? ಇಂದು ನಿನ್ನ ನಾಮಕರಣೋತ್ಸವವಿದೆ. ಹೇಳು ಮಗು–ನಿನ್ನನ್ನು ಏನೆಂದು ಕರೆಯೋಣ? ಯಾವ ಹೆಸರನ್ನಿಡೋಣ? ಹೇಳುವದಿಲ್ಲವೇ! ಮಾತನಾಡುವದಿಲ್ಲವೆ? ಇದೋ, ನಿನಗಿದೇ ಮದ್ದು. (ಮುದ್ದಿಸಿ ನಟ್ಟಾಲಿಯಿಂದ ನೋಡಿ) ಅರಳೆಲೆಯ ಗರುವ! ಮಾಗಾಯ ಮದದಾನೆ! ತೆಳುಗುರುಳ ತಂಗಾಳಿ! ಭಸಿತದ ಸಸಿ! ಕರತಳದ ಕಾಮ! ನನ್ನ ಪ್ರೀತಿಯ ಪಾರಿಜಾತ! (ಮಂದಹಾಸದಿಂದ) ಇಂದಿಗೆ ನನ್ನ ಬಂಜೆತನ ಹಿಂಗಿತು; ನಾನು ತಾಯಿಯಾದೆ–ಸ್ತ್ರೀಜನ್ಮದ ಸಾಫಲ್ಯವನ್ನು ಪಡೆದೆ. (ಹೊರಳಿ) ಮುತ್ತೈದೆಯರೆ, ಸಕಲವೂ ಸಿದ್ಧವಿದೆಯೇ?

ಗೌರಿ : ದೇವಿಯವರೆ, ಪೂಜಾಪರಿಮಳ ದ್ರವ್ಯಗಳನ್ನು ಸಿದ್ಧವಾಗಿರಿಸಿದ್ದೇವೆ. ತೊಟ್ಟಿಲನ್ನು ಅಲಂಕರಿಸಿ ರೇಶಿಮೆಯ ಹಾಸಿಗೆಯನ್ನು ಹಾಸಿದ್ದೇವೆ. ಹೂಮಾಲೆಗಳನ್ನು ಹೆಣೆದು ಮುತ್ತಿನ ಟೊಪ್ಪಿಗೆ, ಜರತಾರಿಯ ಅಂಗಿಗಳನ್ನು ಅಣಿಗೊಳಿಸಿದ್ದೇವೆ. ಇನ್ನುಳಿದಿರುವದು– ಹಾಂ.... ಇತ್ತ ಈ ಆಸನದ ಮೇಲೆ ಕುಳಿತುಕೊಳ್ಳಿರಿ; ನಿಮಗೆ ಆರತಿ ಎತ್ತುವೆವು. (ಆರತಿ ಎತ್ತಿ ಮಗುವಿಗೆ ಅಂಗಿ ಟೊಪ್ಪಿಗೆ ತೊಡಿಸಿ ಹೂಮಾಲೆ)

ಮಾದರಸ : ಸುಮಂಗಲೆಯರೇ, ಇನ್ನು ತಡಮಾಡಬೇಡಿರಿ. ಕಲಾವತಿ, ನೀನು ಮಗುವನ್ನು ತೊಟ್ಟಿಲಲ್ಲಿ ಹಾಕಬಹುದಲ್ಲವೆ?

ಕಲಾವತಿ : ಕ್ಷಮಿಸಿ ಪ್ರಭುಗಳೇ, ಈ ಕಾರ್ಯಕ್ಕೆ ಗಿರಿಜೆಯೇ ಯೋಗ್ಯಳು

ಮಾದಲಾಂಬೆ : ಅದೇಕೆ ಕಲಾವತಿ? ನೀನೇಕೆ ಒಲ್ಲೆ?

ಗಂಗಾ : ಅದರಲ್ಲಿ ವಿಶೇಷವೇನಿದೆ ದೇವಿಯವರೆ? ನಾವು ಕೊಡುವ ಪೆಟ್ಟುಗಳನ್ನು ಸಹಿಸಲು ಗಿರಿಜೆಯ ಬೆನ್ನು ಕಟ್ಟಿಯಿದೆ 'ಗಿರಿಜೆ' ಎಂದರೆ ಕಲ್ಲಿನಿಂದ ಹುಟ್ಟಿದವಳು (ಎಲ್ಲರು ನಗುವರು)

ಗಿರಿಜೆ : ಸಾಕು ಗಂಗಾ ನಿನ್ನ ಕೊಂಕು ಚೇಷ್ಟೆ! ನಾನು ವಯಸ್ಸಾದವಳೆಂದು ನಿನಗಿಷ್ಟು ಬಡಿವಾರವೇನು? ಹರೆಯದವಳಾದರೇನು? ನನ್ನ ಕಳೆ ನಿನಗೆಂದಿಗೂ

ಬರದು! (ಮತ್ತೆ ನಗುವರು)

ಗಿರಿಜೆ : (ಸಿಟ್ಟಿಗೆದ್ದು) ಈ ಹುಡಿಗೆಯರ ಹಗರಣಕ್ಕೆ ನನ್ನ ಮೈಯಲ್ಲಿ ಬೆಂಕಿಯಾಗುತ್ತದೆ.

ಮಾದಲಾಂಬೆ : ಹೆದರಬೇಡ ಗಿರಿಜಕ್ಕಾ – ನಾನು ನಿನ್ನ ಪಕ್ಷವಹಿಸುತ್ತೇನೆ. ತೆಗೆದುಕೊ ಮಗುವನ್ನು.

ಗಿರಿಜೆ : (ತೆಗೆದುಕೊಂಡು) ಶಾರಿ, ಗಂಗೆ, ಗೌರಿ, ಎಲ್ಲರೂ ಕೇಳಿರಿ; ನೀವೀಗ ನನ್ನನ್ನು ಹೊಡೆದದ್ದಾದರೆ ಮನೆ ಮುಟ್ಟುವದರೊಳಗಾಗಿ ನಿಮ್ಮ ಮೈ ಮೆತ್ತಗಾಗುವದು.

ಶಾರದೆ : ಹಾಗೆಯೇ ಆಗಲವ್ವ ಹಿರಿಯಕ್ಕ! ಹೆಸರೇನಿಡಬೇಕು ದೇವಿಯವರೆ;

ಮಾದಲಾಂಬೆ : ನಂದಿನಾಥನ ವರದಿಂದ ಹುಟ್ಟಿದ ಕಂದನಿಗೆ ಬೇರೆ ಹೆಸರೆ?

ಮಾದರಸ : ಬಹು ಯೋಗ್ಯ ಜಾತವೇದ ಮುನಿಗಳೂ ಇದನ್ನೇ ಸೂಚಿಸಿದ್ದಾರೆ! ಗಿರಿಜಾ, 'ಬಸವರಾಜ' ಎಂದು ತೊಟ್ಟಿಲಲ್ಲಿ ಹಾಕು.

ಗಿರಿಜೆ : (ಹಿಂದೆ ಮುಂದೆ ನೋಡುತ್ತ) ಬಸವರಾಜ, ಬಸವರಾಜ; (ಎಲ್ಲರೂ ಬೆನ್ನು ಬಡೆಯಲು) ಸಾವಕಾಶ ಬಡಿಯಿರೇ, ಸಾಕು ನಿಮ್ಮ ಬಿನ್ನಾಣ. (ಸಿಟ್ಟಿಗೇಳಲು ಸಂತೈಸುತ್ತ)

ಗೌರಿ : ಸಾಕು ಬಿಡಿರೇ ಕಿಡಿಗೇಡಿತನ ಹೋಗಲಿ ಬಿಡು ಗಿರಿಜಕ್ಕ, ಬಹಳ ಪೆಟ್ಟು ಹತ್ತಿತೇನು ಆ? ಈ ಹುಡುಗಿಯರಿಗೆ ಬುದ್ಧಿಯಿಲ್ಲ. ಪಾಪ, ಎಳೆಮೈಗೆ ಎಷ್ಟು ನೋವಾಯಿತೋ?

ಗಂಗಾ : ಇರಲಿ ಬಿಡೇ ಗೌರಿ, ಗಿರಿಜಕ್ಕನನ್ನು ಆಡಿಸ್ಯಾಡುವದೆ? ಗಿರಿಜಕ್ಕ. ಜೋಗುಳ ಹಾಡು;

ಗಿರಿಜೆ : (ಮೋರೆ ಸೊಟ್ಟಮಾಡಿ) ನನಗೆ ಬರೋದಿಲ್ಲ.

ಕಲಾವತಿ : (ಅಣಕಿಸುತ್ತ) ನ–ನ–ಗೆ–ಬರೊ–ದಿಲ್ಲ! ಎಂದು ಬರಬೇಕು? ಮುದಿಕಿಯಾದ ಮೇಲೆಯೆ? ಹೂಂ– ಅನ್ನಿರಿ.

ಜೋ–ಜೋ–ಮಲಗಯ್ಯಾ ಬಸವರಾಜ!

ಪೊಡವಿ ತೊಟ್ಟಿಲ ಕಟ್ಟಿ ಕಡಲ ಹಾಸಿಗೆ ಹಾಸಿ

ಒಡೆಯ ಬಸವನಿಟ್ಟು ಮೃಡಕನ್ನಿಕೆಯರು ತೂಗಿ ॥೧॥

ಜೋ–ಜೋ ಗಗನದ ಸತ್ತಿಗೆ ಸೂರ್ಯ ಚಂದ್ರರ ರತ್ನ

ಝುಗಝುಗಿಪ ತಾರೆಗಳ ಮುತ್ತಿನ ಸರಕಟ್ಟಿ ॥೨॥

ಜೋ-ಜೋ ಅಸಮ ಮಹಿಮನೆ ಜೋ-ಬಸವರಾಜನೇ ಜೋ

ವಸುಧೆಯನೆ ಬೆಳಗಯ್ಯ ಅಸಮಾಕ್ಷ ಸುತ ಜೋ ॥೩॥

ಜೋ-ಜೋ

ಶಾರದೆ : ಗಿರಿಜಕ್ಕಾ, ಗಂಡನ ಹೆಸರು ಹೇಳೆ!

ಕಲಾ : ಹೌದು ಗಿರಿಜಕ್ಕಾ, ಬಹಳ ದಿನಗಳಾದವು ಮಾವನ ಹೆಸರು ಕೇಳದೆ

ಗಿರಿಜೆ : ನಾನು ಹೇಳೋದಿಲ್ಲ.

ಎಲ್ಲರೂ : ನಾವು ಬಿಡೋದಿಲ್ಲ. (ಸುತ್ತು ಮುತ್ತಿ ಜಗ್ಗಾಡುವರು.)

ಗಿರಿಜೆ : ಗಿರಿಜಾಕಾಂತ ಬಿಡಿರೇ, ಕಾಡಬೇಡಿರಿ!

ಗಂಗಾ : ಉಹುಂ - ಒಗಟಿಟ್ಟು ಹೇಳು.

ಗಿರಿಜೆ : ಇಲ್ಲದ ಜಂಭ ಕೊಚ್ಚಬೇಡಿರಿ. ನನಗೆ ಒಗಟ ಗಿಗಟ ಬರೋದಿಲ್ಲ.

ಮಾದಲಾಂಬೆ : ಈಗ ನೀವೆಲ್ಲರೂ ಹೆಸರು ಹೇಳಿರಿ.

ಗೌರಿ : ಮಾವಿನ ವನ ತಂಪು, ತಾವರೆ ಬನ ಕಂಪು, ಕೋಕಿಲ ಗಾನ ಇಂಪು, ನನಗಿಂತ ಗೌರೀಕಾಂತ ಕೆಂಪು. (ಎಲ್ಲರೂ ಒಬ್ಬೊಬ್ಬರಾಗಿ ಕಾಲ್ದೆಗೆಯುವರು.) ದೇವಿಯವರೇ, ಅವರೆಲ್ಲ ಓಡಿದರು. ನನ್ನೊಬ್ಬಳಿಂದಲೇ ಹೆಸರು ಹೇಳಿಸಿಕೊಂಡಿರಿ. (ಸಿಟ್ಟಾಗಿ ಹೋಗುವಳು.)

ಮಾದರಸ : (ತೊಟ್ಟಿಲ ಸಮೀಪಕ್ಕೆ ಬಂದು) ದೇವಿ, ಇಂದು ನಮ್ಮ ಕತ್ತಲೆ ಮನೆಗೆ ಜ್ಯೋತಿ ದೊರೆಯಿತು. ನನ್ನ ಹೃದಯ ಬತ್ತಿದ ಸರೋವರವು ತಿಳಿನೀರಿನಿಂದ ತುಂಬಿತು. (ತೊಟ್ಟಿಲು ತೂಗಿ) ಮಲಗು ಕಂದಾ, ನಿದ್ರಿಸು ನಯನಾನಂದ! (ಹೋಗುವರು.)

ಜಾತವೇದಮುನಿ : (ಪ್ರವೇಶಿಸಿ) ವಸುಧೆಯನ್ನು ಉದ್ಧರಿಸಬಂದ ಬಸವಾ! ನಿನ್ನ ಜೀವನ ಕಾರ್ಯದ ನೆನಪು ಕೊಡಲು ನಾನು ಬಂದಿದ್ದೇನೆ. ವಿಶ್ವಧರ್ಮವನ್ನು ಸ್ಥಿರಗೊಳಿಸಲು ಬಂದ ವಿಶ್ವ ಜೀವಜ್ಯೋತಿ! ಜಗತ್ತು ನಿನಗಾಗಿ ಕಾದಿದೆ; ತನ್ನನ್ನು ಉದ್ಧರಿಸಲು ಕರಮುಗಿದು ಕರೆಯುತ್ತಲಿದೆ. ಅದರ ಕರೆಯನ್ನು ನಿರಾಕರಿಸಬೇಡ. ನಿನಗೆ ನನ್ನ ಹರಕೆಯಿದೆ. ಸಂಗಯ್ಯನ ಆಣತಿಯಂತೆ ನಿನಗೆ ಲಿಂಗಧಾರಣೆ ಮಾಡಲು ಬಂದಿದ್ದೇನೆ. (ಲಿಂಗಧರಿಸಿ) ಮಹಾನುಭಾವಿ ಬಸವಾ, ನಾನಿನ್ನು ಹೋಗುವೆನು. ನಿನ್ನ ದಾರಿಯನ್ನೇ ಕಾಯುತ್ತಲಿರುವೆ, ಬೇಗ ಬಾ!

(ತೆರೆ ಏಳುವುದು)

ನೋಟ ೩ ಬಿಜ್ಜಳನ ಒಡ್ಡೋಲಗ

ಬಿಜ್ಜಳ : ನಮ್ಮ ಈ ಕೃತ್ಯವು ನಮ್ಮ ಪ್ರಜೆಗಳಿಗೆ ಒಪ್ಪಿತವಾಗುವುದೆಂದೇ ನಮ್ಮ ವಿಶ್ವಾಸ. ರಾಜ್ಯವಾಳಲು ಅಸಮರ್ಥರಾದ ಅರಸರು ಸಿಂಹಾಸನದ ಮೇಲಿರುವದು ರಾಷ್ಟ್ರಕ್ಕೆ ವಿಪತ್ತು, ಪ್ರಜೆಗಳಿಗೆ ಗಂಡಾಂತರ. ಚಾಳುಕ್ಯರಾಯರ ಬಗ್ಗೆ ನಮಗೂ ಉತ್ಕಟವಾದ ಅಭಿಮಾನವಿದೆ. ಸೋಮೇಶ್ವರರಾಯನಲ್ಲಿ ದೌರ್ಬಲ್ಯವೊಂದನ್ನುಳಿದು ಬೇರಾವ ದುರ್ಗಣವನ್ನೂ ನಾವರಿಯೆವು. ಆದರೆ ಅದೊಂದೇ ರಾಜ್ಯಕ್ಕೆ ಮೃತ್ಯುವಿನ ಮುಂಗೆಲಸ ಮಾಡುತ್ತಲಿದ್ದಿತು! ಸಾಮ್ರಾಜ್ಯವೇ ತುಂಡು ತುಂಡಾಗುವುದರಲ್ಲಿದ್ದಿತು. ಕಾರಣ ಈ ಸ್ಥಿತಿಯು ಬಂದೊದಗಬಾರದೆಂದು ಚಾಳುಕ್ಯರಾಯರು ಪ್ರಜಾವತ್ಸಲ ಪ್ರತಾಪಶಾಲಿ ಅರಸರಾಗಿರುವವರೆಗೆ ನಿಸ್ಸೀಮ ಸ್ವಾಮಿಭಕ್ತರಾಗಿದ್ದ ನಾವು ಹೇಡಿ ಸೋಮೇಶ್ವರರಾಯನನ್ನು ಕಿತ್ತೊಗೆದು ಸಾಮ್ರಜ್ಯವನ್ನು ವಿನಾಶದ ದವಡೆಯೊಳಗಿಂದ ಉಳಿಸಲು ಮನಸ್ಸು ಮಾಡಿದೆವು. ಇದು ಅನ್ಯಾಯವಲ್ಲವಷ್ಟೆ?

ಬಲದೇವ : ಮಹಾರಾಜ, ಸಾಮ್ರಾಜ್ಯಲಕ್ಷ್ಮಿಯು ಹೇಡಿಯ ಹೆಂಡತಿಯಾಗಿ ಎಂದಿಗೂ ಇರಲಾರಳು. ಪ್ರಬಲ ವೈರಿಗಳಿಂದ ಸುತ್ತಲ್ಪಟ್ಟು ತತ್ತರಿಸುತ್ತಲಿರುವ ಕನ್ನಡನಾಡಿನ ರತ್ನ ಸಿಂಹಾಸನವನ್ನು ಸುಭದ್ರಗೊಳಿಸಲೆಂದೆ ತಾವು ಮುಂದೆ ಬಂದಿರಲ್ಲವೆ? ಇದಕ್ಕಾಗಿ ನಮ್ಮ ನಾಡವರೆಲ್ಲರೂ ತಮಗೆ ಕೃತಜ್ಞರು.

ಬಿಜ್ಜಳ : ಬಲದೇವ, ಸಿದ್ಧರಸರ ಬಲವಿಲ್ಲದಿದ್ದರೆ ಬಿಜ್ಜಳರಾಜನಿಗೆ ಜಯವು ಆಗಸಮಲ್ಲಿಗೆಯಾಗಿ ಉಳಿಯುತ್ತಿದ್ದಿತು. ತಮ್ಮಿಬ್ಬರಿಗೆ ಆವ ಪ್ರತಿಫಲವನ್ನು ಕೊಡಲಿ? ಸಾಮ್ರಾಜ್ಯದ ಶ್ರೇಷ್ಠತಮ ಅಧಿಕಾರಗಳಾದ ಮುಖ್ಯಮಂತ್ರಿತ್ವ ಹಾಗೂ ಮುಖ್ಯ ಸೇನಾನಾಯಕತ್ವಗಳನ್ನು ತಮಗೆ ಕೊಟ್ಟಿರುವೆ. ಸಂತುಷ್ಟರಾಗಿ ಸಾಮ್ರಾಜ್ಯದ ಸೇವೆಮಾಡಬೇಕು.

ಬಲದೇವ : ಮಹಾರಾಜರ ಈ ಔದಾರ್ಯಕ್ಕಾಗಿ ನನ್ನ ಹೃದಯ ತುಂಬಿ ಬಂದಿದೆ. ಕೊನೆಯವರೆಗೂ ಸ್ವಾಮಿನಿಷ್ಠ ಪ್ರಜಾಸೇವಕನಾಗಿ ದುಡಿಯುವೆನು. ಇದೇ ನನ್ನ ಪ್ರತಿಜ್ಞೆ.

ಸಿದ್ಧರಸ : ಪ್ರಭುಗಳ ಕೃಪೆಗೆ ಪಾತ್ರನಾಗಲು ಯಾವಾಗಲು ಯತ್ನಿಸುವೆನು.

ಮಂಚಣ್ಣ : (ಮೋರೆ ಗಂಟುಹಾಕಿ ತನ್ನಲ್ಲಿ) ಮಂತ್ರಿತ್ವವು ಬಲದೇವನಿಗಾಯಿತು. ಸೇನಾನಾಯಕತ್ವವು ಸಿದ್ಧರಸನಿಗಾಯಿತು, ನಿನಗೇನುಳಿಯಿತು, ಮಂಚಣ್ಣ?

ಬಿಜ್ಜಳ : ಮಂಚಣ್ಣ ನೀವು ನಮಗೆ ಆಪ್ತಾಲೋಚಕರಾಗಿದ್ದುಕೊಂಡು ಕಾರ್ಯಮಾಡಬೇಕು.

ಮಂಚಣ್ಣ : (ವಂದಿಸಿ) ಮಹಾರಾಜಾಧಿರಾಜರ ಕೃಪೆಗಾಗಿ ಅತ್ಯಂತ ಭಕ್ತಿಯಿಂದ ವಂದಿಸುವೆನು. ಮಹಾರಾಜಾಧಿರಾಜ ಕಲಚೂರ್ಯಕುಲಸಾರ್ವಭೌಮ ಬಿಜ್ಜಳ ಮಹಾರಾಜರಿಗೆ ಜಯವಾಗಲಿ!

ಬಿಜ್ಜಳ : ಯುದ್ಧದಲ್ಲಿ ಮಡಿದ ಎಲ್ಲ ವೀರರ ಕುಟುಂಬ ಸಂರಕ್ಷಣೆಯ ವ್ಯವಸ್ಥೆಮಾಡಲು ಅಪ್ಪಣೆ ಕೊಟ್ಟಿದೆ. ಇನ್ನುಳಿದ ಎಲ್ಲ ವೀರರಿಗೂ ಅವರವರ ಯೋಗ್ಯತಾನುಸಾರವಾಗಿ ಅಧಿಕಾರಗಳು ಕೊಡಲ್ಪಟ್ಟಿವೆ.

ಸಭಿಕರು: (ಹಿಗ್ಗಿ) ಮಹಾರಾಜಾಧಿರಾಜ ಬಿಜ್ಜಳ ಮಹಾರಾಜರಿಗೆ ಜಯವಾಗಲಿ!

(ತೆರೆ ಏಳುವುದು.)

ನೋಟ ೪

(ಮಾದರಸನ ಮನೆಯ ಉಪವನ)

ಅಕ್ಕನಾಗಮ್ಮ : ಏನಣ್ಣ ಬಸವಣ್ಣ? ಏನಾದವು ಆ ನಿನ್ನ ದೊಡ್ಡ ದೊಡ್ಡ ಮಾತುಗಳು? ಕೃತ್ರಿಮ ಜಾತಿಭೇದವನ್ನು ಮೀರಿ ಸರ್ವ ಸಮಾನತೆಯನ್ನು ಸ್ಥಾಪಿಸಬೇಕೆಂದು ಮುಂತಾಗಿ ಏನೇನೋ ಗುಡ್ಡದಂಥ ಕಲ್ಪನೆಮಾಡಿಕೊಂಡಿದ್ದೆ. ಇಂದು ಮುಂಜಿ ಮುಗಿದುಹೋದರೆ ನೀನು ಬ್ರಾಹ್ಮಣ ಶೂದ್ರ ಭೇದಕ್ಕೆ ಕಟ್ಟು ಬೀಳುವಿಯಲ್ಲ?

ಬಸವ : ಯಾರೆಂದರು ನಾನು ಉಪನಯನಕ್ಕೆ ಒಪ್ಪಿರುವೆನೆಂದು? ಅದೆಂದಿಗೂ ಆಗದ ಮಾತು!

ನಾಗಲಾಂಬಿಕೆ : ತಂದೆಯು ಬಲಾತ್ಕರಿಸಿದರೆ?

ಬಸವ : ಮುಂದೇನು? ಮನೆಯನ್ನು ತೊರೆದು ಗುರುಗಳಾದ ಜಾತವೇದ ಮುನಿಗಳ ಹತ್ತಿರ ಹೋಗುವೆ. ನೀನೇನ ಮಾಡುವೆ?

ನಾಗಲಾಂಬಿಕೆ : ನಿನ್ನ ನೆರಳಾಗಿ ಬರುವೆ.

(ತೆರೆ ಏಳುವುದು)

ನೋಟ ೫

(ಮಾದರಸನ ಮನೆಯ ಹಾದಿ)

ಪೆದ್ದಂಭಟ್ಟ : (ಯೋಚಿಸುತ್ತ) ಮಾದರಸನ ಮನೆಯಲ್ಲಿ ಬಸವರಾಜನ ಮುಂಜಿ–ಅರಮನೆಯಲ್ಲಿ ಊಟ–ಕೈತುಂಬ ದಕ್ಷಿಣೆ – ಹೂಂ – ಸುಗ್ಗಿ, ಬ್ರಾಹ್ಮಣರಿಗೆ ವಸಂತಕಾಲ.

ಗುಂಡಂಭಟ್ಟ : (ಬಂದು ಅವನ ಮೂಗು ಹಿಡಿದೆತ್ತಿ) ಪೆದ್ದಂಭಟ್ಟರೇ, ಏನು ವಿಚಾರ ನಡೆಸಿದ್ದೀರಿ? ಮನಸ್ಸೀಗ ಮಾದರಸನ ಅಡುಗೆ ಮನೆಯಲ್ಲಿ ಸುಳಿದಾಡುತ್ತಿರಬಹುದಲ್ಲವೆ?

ಪೆದ್ದ : ಓಹೋ – ಗುಂಡಂಭಟ್ಟರೇನು? ಬನ್ನಿ. (ಹೊಟ್ಟೆ ಮುಟ್ಟಿ ತನ್ನಲ್ಲಿ) ತುತ್ತಿನ ಚೀಲ ಸಂಪೂರ್ಣ ಬರಿದು ಮಾಡಿದಂತಿದ್ದಾರೆ ಕಂಠದವರಿಗೂ ತುಂಬಲು. (ಪ್ರಕಾಶ) ಭಟ್ಟರೇ, ಡೊಳ್ಳು ಜೊಳ್ಳು ಬಿದ್ದಿದೆಯಲ್ಲ?

ಗುಂಡ : (ಅಚ್ಚರಿಯಿಂದ) ಅದಾವ ಡೊಳ್ಳು?

ಪೆದ್ದ : (ಅವನ ಹೊಟ್ಟೆ ಬಾರಿಸಿ) ಇದೊ – ಈ ಡೊಳ್ಳು – ಈ ಮಹಾರಾಯ ಡೊಳ್ಳು – ಅಲ್ಲಲ್ಲ – ಹಂಪೆಯ ವಿರೂಪಾಕ್ಷನ ನಗಾರಿ!

ಗುಂಡ : ಹಿ ಹಿ ಹಿ – ಅದೇನು ಬಿಡಿ, ಇಪ್ಪತ್ತು ನಾಲ್ಕು ತಾಸು ಬೆಳೀತಾಧ ಇರತದ. ಲೋ. ಗೋಪ್ಯಾ.......

ಗೋಪ್ಯಾ : (ಬಂದು) ಅಪ್ಪಾ, ಹಸಿವೆ– ಊಟ – ತಿಂಡಿ.

ಪೆದ್ದ : (ದುರ ದುರ ನೋಡಿ) ಭಟ್ಟರೆ ಇವನು ನಿಮ್ಮ ಚಿ–ರಂ–ಜೀ–ವಿ?

ಗುಂಡ : ಹಾಂ–ಹಾಂ–ಇವನೇ ನಮ್ಮ ಜೇಷ್ಠ ಪುತ್ರ.

ಪೆದ್ದ : (ತನ್ನಲ್ಲಿ) ಜ್ಯೇಷ್ಠ ಪುತ್ರನೋ ಜ್ಯೇಷ್ಠಾದೇವಿಯ ಪುತ್ರನೊ? ತಂದೆಗೆ ಸರಿಯಾಗಿ ಎಂಥ ಕಾಮ ಹುಟ್ಟೀಯೋ ಮಹರಾಯಾ! ತಂದೆಯ ಬಿರುದು.... ಹುಂ (ಪ್ರಕಾಶ) ಛೇ – ಅಡ್ಡಿಯಿಲ್ಲ. – ಬಹಳ ಸಲಕ್ಷಣ ಇದ್ದಾನ ಕುಮಾರ. (ಗೋಪ್ಯಾ ತಲೆತಗ್ಗಿಸಿ ಬೆರಳು ಮುರಿಯುವನು) ಇವನಿಗೆ ವಯಸ್ಸೆಷ್ಟು?

ಗುಂಡ : ಮೊನ್ನೆ ಕಡಲೆಗಡಬಿನ ಹುಣ್ಣಿಮಿಗೆ ಹನ್ನೆರಡು ಪೂರ್ತಿ.

ಪೆದ್ದ : ವಿದ್ಯಾ ಗಿದ್ಯಾ ಕಲಿಸಿರೇನು?

ಗುಂಡ : ವಿದ್ಯಾ? ಅದು ಅಲ್ಲ ನೈವೇದ್ಯ!

ಪೆದ್ದ : ಮೆಚ್ಚಿದೆ ಭಟ್ಟರೆ-ನಮ್ಮ ಭಟ್ಟ ಸಮಾಜಕ್ಕೆ ನೀವು ಬಹುಬೆಲೆಯುಳ್ಳ ಸೇವೆಯನ್ನು ಸಲ್ಲಿಸಿದಿರಿ. ಭಟ್ಟರು ಭೋಜನ ಸಾಮ್ರಾಜ್ಯದ ಚಕ್ರವರ್ತಿಗಳಾಗಿರುವವರೆಗೆ ನಮಗೆ ಘನತೆಯಿತ್ತು, ಗೌರವವಿತ್ತು, ಮನ್ನಣೆಯಿತ್ತು ನಾಡಿನಲ್ಲಿ! ಈಗ ಕಾಲ ವಿಪರೀತವಾಗಿದೆ. ನಮ್ಮ ತಾತ ಮುತ್ತಂದಿರಷ್ಟು ನಮ್ಮಿಂದ ಉಣ್ಣುವದಾಗುವುದಿಲ್ಲ. ನಮ್ಮಿಂದಾದಷ್ಟು ಗೋಪ್ಯಾನಿಂದಾಗುವುದಿಲ್ಲ, ಗೋಪ್ಯಾ ಉಂಡಷ್ಟು ಮುಂದಿನ ಭೂಪರಿಂದಾಗುವುದಿಲ್ಲ! ದಿನೇ ದಿನೇ ವೃದ್ಧಾಂಗತವಾಗುತ್ತಲಿರುವ ಈ ಅಧಃಪಾತವನ್ನು ನೋಡಿ ನನಗೆ ರಾತ್ರಿ ನಿದ್ರೆ ಸಹ ಬರುವುದಿಲ್ಲ ಭಟ್ಟರೇ! ನಮ್ಮ ಭೋಜನಶಕ್ತಿಯು ಹ್ರಾಸವಾಗಿಯೇ ನಾವು ದುರ್ಗತಿಗೀಡಾಗಿದ್ದೇವೆ- ಪುನಃ ಸತತ ಪ್ರಯತ್ನ ಹಾಗೂ ಶಾಸ್ತ್ರೋಕ್ತವಾದ ಭೋಜನ ಶಿಕ್ಷಣದ ಮೂಲಕ ಭೋಜನಶಕ್ತಿಯ ವಿಕಾಸವನ್ನುಂಟು ಮಾಡಿದರೇ ನಮ್ಮ ಉದ್ಧಾರ. ತುಪ್ಪದ ಸಮುದ್ರಕ್ಕೆ ಭಟ್ಟರನ್ನು ಬಿಟ್ಟರೆ ಅಂಬುಧಿಗೆ ಅಗಸ್ತ್ಯರನ್ನು ಬಿಟ್ಟಂತಾಗುತ್ತಿದ್ದಿತು. ಬೆಟ್ಟದ ಪ್ರಮಾಣದಲ್ಲಿ ಬಿದ್ದ ಕಡುಬಿನ ರಾಶಿಗೆ ಭಟ್ಟರನ್ನು ಬಿಟ್ಟರೆ ಇಂದ್ರನ ವಜ್ರಾಯುಧದಿಂದ ಹೊಯ್ದಂತಾಗುತ್ತಿದ್ದಿತು! ಎಲ್ಲಿ ಹೋದವು ಆ ಸೌಭಾಗ್ಯದ ದಿನಗಳು? ಎಲ್ಲಿ ಹೋಯಿತು ಆ ಭಟ್ಟಸಮಾಜದ ಸುವರ್ಣಯುಗ? ಎಲ್ಲಿ ಹೋಯಿತು ಆ ನಮ್ಮ ಪೂರ್ವಜರ ಪರಾಕ್ರಮ? ಈಗ ನಿಜವಾದ ಭಟ್ಟರು ಸಿಗುವದೇ ಇಲ್ಲ ಗುಂಡಂಭಟ್ಟರೇ- ಉಳಿದಿರುವ ನಾವೆಲ್ಲರೂ ಸಾಮಾನ್ಯ ಭಟ್ಟರು ನೀವೊಬ್ಬರೂ, ಮೂಲೀಮನಿಯ ತಿರುಕಂಭಟ್ಟರೂ ಸಾಹಸಮಾಡಿದರೆ ನಿಜವಾದ ಭಟ್ಟರಾಗಬಹುದು. ನಿಮ್ಮಿಬ್ಬರ ಮೇಲೆಯೇ ಅಖಿಲಭಟ್ಟಸಮಾಜದ ಆಶೆ ಆಕಾಂಕ್ಷೆಗಳೆಲ್ಲ ನಿಂತಿವೆ! (ದಮ್ಮು ಹತ್ತಿ ನಿಲ್ಲುವನು. ತಿರುಕಂಭಟ್ಟನು ಗಾಬರಿಯಿಂದ ಬರುವನು)

ತಿರುಕ : ಇಲ್ಲಿ ಅಂವಾ ಬಂದಿದ್ದನೇನ್ರಿ? ಅಂವಾ ಬಂದಿಲ್ಲ ಇಲ್ಲಿ?

ಪೆದ್ದ : ಯಾರು ಭಟ್ಟರೇ ಹೀಗೇಕೆ ಪೇಚಾಡುವಿರಿ?

ತಿರುಕ : ಅಂವಾರೀ ಕೋರೀಶೆಟ್ಟಿ ಸೊಟ್ಟ ೨೦೦ ಹೊನ್ನುಗಳಿಗಾಗಿ ಎತ್ತಹೋದರೂ ಬಿಡಲೊಲ್ಲ!

ಶೆಟ್ಟಿ : (ಪ್ರವೇಶಿಸಿ) ಹಾಂ- ಎಲ್ಲಾ ಭಟಜೀಗಳೂ ಇಲ್ಲಿಯೇ ಇದ್ದಾರೆ. ಲೆಕ್ಕಾ ಚುಕ್ತಾ ವಸೂಲಮಾಡಿ ಬಿಡುತ್ತೇನೆ. (ಮುಂದೆ ಬಂದು) ಭಟ್ಟರೇ ನಮ್ಮ ಲೆಕ್ಕಾ!

ತಿರುಕ : (ಬೆಚ್ಚಿ) ಶೆಟ್ಟರೇನು? ಹಿಹಿ- ಶರಣಾರ್ಥೆಪೋ- ಇವತ್ತು ಹೊತ್ತು ಮುಳುಗುವದರೊಳಗೆ....

ಶೆಟ್ಟಿ : ಅದೆಲ್ಲಾ ಆಗದು ಭಟ್ಟರೇ- ಈಗ ಕೊಟ್ಟೇ ಕಾಲುಕೀಳಿರಿ.

ಗುಂಡ : ನನ್ನ ಮಾತು ಕೇಳಿರಿ ಶೆಟ್ಟರೇ ... ... ಇವತ್ತು.........

ಶೆಟ್ಟಿ : ಏನು ಗುಂಡಂಭಟ್ಟರೇನು? ಒಳ್ಳೇ ಸಂಪನ್ನರು. ಹಿಂದೊಮ್ಮೆ

ಲೆಕ್ಕಾಮಾಡಿ ಮೂರು ಜೊತೆ ಮೊಚ್ಚೆ ಹರಿದ ಮೇಲೆಯೇ ಕೊಟ್ಟಿರಿ. ನಿಮ್ಮನ್ನು ನಂಬಿದರೆ ಆಯ್ತಲ್ಲ?

ಪೆದ್ದ : ಶೆಟ್ಟರೇ– ಹೇಳಬೇಕಾದುದನ್ನೇ ಇವರು ಹೇಳಲಿಲ್ಲ ಇಲ್ಲಿ ಕೇಳಿರಿ. ಇವತ್ತು ಬಸವರಾಜನ ಮುಂಜಿಗೆ ಹೊರಟಿದ್ದೇವೆ. ಯಥೇಚ್ಛ ದಕ್ಷಿಣೆ ದೊರೆಯುತ್ತೆ. ನಿಮ್ಮ ಲೆಕ್ಕಾ ಯಾಕೆ ಉಳಿಸೋಣ? ಇವತ್ತು ಹೊತ್ತು ಮುಳುಗುವದರೊಳಗಾಗಿ... ಯಾಕ್ರಿ ಭಟ್ಟರೆ?

ತಿರುಕ : ನನ್ನಾಣೆ, ದೇವರಾಣೆ ಜನಿವಾರದಾಣೆ!

ಶೆಟ್ಟಿ : ಪೆದ್ದಂಭಟ್ಟರೇ– ನೀವು ಮಧ್ಯಸ್ಥರಾದಲ್ಲಿ ಬಿಟ್ಟು ಹೊರಟಿದ್ದೇನೆ. ಪೆದ್ದಂಭಟ್ಟರು ಅಪದ್ಧಂಭಟ್ಟರಾದೀರಿ! (ಹೋಗಲು)

ತಿರುಕ : ಈ ಶೆಟ್ಟೀದು ಎಷ್ಟು ಸೊಕ್ಕು! ಇವತ್ತು ಹಣೆಗೆ ತೂತು ಬೀಳುವಂತೆ ಒಗೆಯೋಣ

(ಹೋಗುವರು. ತೆರೆ ಏಳುವುದು)

ನೋಟ ೬

(ಮಾದರಸನ ಮನೆಯಲ್ಲಿ ಉಪನಯನ ಸಂಭ್ರಮ)

ತಿರುಕಂಭಟ್ಟ : (ಹರುಕು ಮುರುಕು ಮಂತ್ರ ಹೇಳುತ್ತ) ಹಾಂ ಪ್ರಭುಗಳೇ, ಮುಂಜಿಯ ಮುಹೂರ್ತವು ಸಮೀಪಿಸಿತು. ತೀವ್ರ ಬಸವರಸರನ್ನು ಕರೆಯಿರಿ.

ಮಾದರಸ : (ಒಳಗೆ) ಬಸವಾ, ಬಸವರಸಾ, ಬಸವರಾಜ, ಬಾ ಮಗು ಬೇಗ ಬಾ?

ಬಸವಾ : (ಪ್ರವೇಶಿಸಿ) ವಂದಿಸುವೆ ತಂದೆ (ಚರಣಕ್ಕೆರಗುವನು)

ಮಾದರಸ : ಚಿರಂಜೀವಿಯಾಗು ಮಗು? (ಎಬ್ಬಿಸಿ ತಬ್ಬಿಕೊಳ್ಳುವನು)

ಬಸವ : ಅಪ್ಪಾ, ಇಂದು ಮನೆಯಲ್ಲಿ ವಿಶೇಷ ಸಂಭ್ರಮವೇಕೆ?

ಮಾದರಸ : ನಿನಗೆ ಗೊತ್ತಿಲ್ಲವೆ ಮಗು? ನಿನ್ನ ಉಪನಯನ ಸಂಸ್ಕಾರವಿಂದು. ನಿನಗಿಂದು ದ್ವಿಜತ್ವ ಪ್ರಾಪ್ತವಾಗುವದು.

ಬಸವ : ಇಂದು ನಾನು ಬ್ರಾಹ್ಮಣನಾಗುವೆನಾದರೆ ಇದುವರೆಗೆ ನಾನಾವ ಜಾತಿಯವನಿದ್ದೆ?

ಮಾದರಸ : ಇದುವರೆಗೂ ನೀನು ಶೂದ್ರನೆಂದೇ ಗಣಿಸಲ್ಪಡುವಿ ಕುಮಾರಾ. ಜನ್ಮದಿಂದೆಲ್ಲರೂ ಶೂದ್ರರಾಗಿಯೆ ಹುಟ್ಟುತ್ತಾರೆ. ಸಂಸ್ಕಾರಬಲದಿಂದ ದ್ವಿಜತ್ವವು ಪ್ರಾಪ್ತವಾಗುತ್ತದೆ.

ಬಸವ : ಅಪ್ಪಾ – ಯಾವ ಕುಲದವನೆ ಆಗಲಿ, ಸಂಸ್ಕಾರಬಲದಿಂದ ಬ್ರಾಹ್ಮಣನಾಗಬಹುದೆ?

ಮಾದರಸ : ಎಲ್ಲರೂ ಬ್ರಾಹ್ಮಣರು ಹೇಗಾಗಬಲ್ಲರು? ಕೇವಲ ಬ್ರಾಹ್ಮಣ ಕುಲೋತ್ಪನ್ನರಾದ ಬಾಲಕರು ಮಾತ್ರ ಸಂಸ್ಕಾರಬಲದಿಂದ ಬ್ರಾಹ್ಮಣ್ಯವನ್ನು ಪಡೆಯುತ್ತಾರೆ.

ಬಸವ : ಬ್ರಾಹ್ಮಣ ಕುಮಾರರ ಶೂದ್ರತ್ವವನ್ನು ಕಳೆದು ಅವರಿಗೆ ದ್ವಿಜತ್ವವನ್ನು ತಂದುಕೊಡಬಲ್ಲ ಈ ಉಪನಯನ ಸಂಸ್ಕಾರವು ಸರ್ವಜಾತಿಯ ಸಕಲ ಜೀವಾತ್ಮರಿಗೆ ಬ್ರಾಹ್ಮಣ್ಯವನ್ನೇಕೆ ತಂದುಕೊಡಬಾರದು.?

ಮಾದರಸ : ಪುರೋಹಿತರೆ, ಈ ಪ್ರಶ್ನೆಗೆ ನೀವೇ ಉತ್ತರಕೊಡಬೇಕು.

(ಭಟ್ಟರಿಬ್ಬರೂ ಒಬ್ಬರೊಬ್ಬರಿಗೆ ನೀ ಹೇಳು ನೀ ಹೇಳೆಂದು ಸನ್ನೆ ಮಾಡುವರು)

ಮಾದರಸ : ತಿರುಕಂಭಟ್ಟರೇ............

ತಿರುಕ : (ಧಿಗ್ಗನೆಂದು) ಓಹೋ – ಅವಶ್ಯವಾಗಿ ಮಹಾಪ್ರಭು. (ಬಸವನಿಗೆ) ಬಸವರಸರೆ, ಸಂಸ್ಕಾರಬಲದಿಂದ ಎಲ್ಲರೂ ಬ್ರಾಹ್ಮಣರು ಹೇಗಾಗುತ್ತಾರೆ? ಶಾಸ್ತ್ರಗಳು ಸಾರುವಂತೆ ಬ್ರಾಹ್ಮಣರು ಪರಮಾತ್ಮನ ಮುಖದಿಂದಲೂ, ಕ್ಷತ್ರಿಯರು ಬಾಹುಗಳಿಂದಲೂ, ವೈಶ್ಯರು ತೊಡೆಗಳಿಂದಲೂ, ಶೂದ್ರರು ಪಾದಗಳಿಂದಲೂ, ಹುಟ್ಟಿರುವಾಗ....

ಬಸವ : ಸಾಕು ಪುರೋಹಿತರೇ ಮನುಷ್ಯತ್ವದ ಅವಹೇಳನ! ಬ್ರಾಹ್ಮಣ ಶೂದ್ರ ಭೇದಕ್ಕೆ ಜನ್ಮವೇ ಮಾನದಂಡವಾದರೆ ಕರ್ಣದಲ್ಲಿ ಜನಿಸಿದವರುಂಟೆ ಜಗದೊಳಗೆ? ಹೇಳಿರಿ ಪುರೋಹಿತರೇ ನೀವು ಕರ್ಣದಲ್ಲಿ ಜನಿಸಿದವರೋ ಅಥವಾ ಆಕಾಶದಿಂದ ಉದುರಿ ಬಿದ್ದವರೊ?

ಗುಂಡ : ಹಾಗಲ್ಲ ಬಸವರಸ – ಭಗವಂತನೇ ಹೇಳಿಲ್ಲವೆ? "ಚಾತುರ್ವರ್ಣಂ ಮಯಾಸೃಷ್ಟಂ ಗುಣಕರ್ಮ ವಿಭಾಗತಃ" ಪರಮಾತ್ಮನೇ ಗುಣ ಕರ್ಮಗಳಿಗನುಸಾರವಾಗಿ ನಾಲ್ಕೂ ವರ್ಣದವರನ್ನು ಹುಟ್ಟಿಸಿದ್ದಾನೆ ಇಷ್ಟೆ!

ಬಸವ : ಗುಣಕರ್ಮಗಳಿಗನುಸರಿಸಿಯೇ ಆಗಲಿ – ನಾಲ್ಕು ವರ್ಣಗಳ ಮಾನವರೆಲ್ಲರೂ ಪರಮಾತ್ಮನ ಮಕ್ಕಳೇ ಅಲ್ಲವೆ?

ಗುಂಡ : ಹೌದು, ಸಹಜ.

ಬಸವ : ಬ್ರಾಹ್ಮಣನೇ ಆಗಲಿ, ಶೂದ್ರನೇ ಆಗಲಿ, ವೇದಗಳನ್ನೋದುವವನೇ ಆಗಲಿ, ಜೋಡುಗಳನ್ನು ಹೊಲಿಯುವವನೇ ಆಗಲಿ, ಎಲ್ಲರ ಶರೀರ ಧರ್ಮ ಜೀವಧರ್ಮಗಳು ಒಂದೇ ಅಲ್ಲವೆ?

ತಿರುಕ : ನಿಸ್ಸಂದೇಹ – ನಸಂಶಯಂ

ಬಸವ : ಹಾಗಾದರೆ ಸಂಸ್ಕಾರಬಲದಿಂದಿವರೆಲ್ಲರಲ್ಲಿ ಅನ್ನೋದಕ, ಶರೀರ ಸಂಬಂಧಗಳು ನಡೆಯುವಂತೆ ಮಾಡಬಹುದಲ್ಲವೆ?

ಇಬ್ಬರೂ : ಛೇ ಛೇ! ಶಾಂತಂ ಪಾಪಂ! ಹಾಗೆ ಮಾಡಿದರೆ ಕುಲವೆಲ್ಲ ಕೆಟ್ಟು ಹೋಗುವದು?

ಬಸವ : ಕುಲ, ಕುಲ! ಮಾತುಮಾತಿಗೆ ಕುಲ! ಒಳ್ಳೇದು ಪುರೋಹಿತರೇ, ನಿಮ್ಮ ಧರ್ಮದ ಪ್ರಕಾರ ಕೆಳಗಿನ ವರ್ಣದವರು ಮುಕ್ತಿಯನ್ನು ಹೇಗೆ ಸಂಪಾದಿಸಬೇಕು?

ತಿರುಕ : ಓಹೋ – ಬಹು ಸುಲಭಮಾರ್ಗ! ಕ್ಷತ್ರಿಯರಿಗೆ ಯಜ್ಞ ಯಾಗ, ವೈಶ್ಯರಿಗೆ ಬ್ರಾಹ್ಮಣ ಸಂತೃಪ್ತಿ, ಶೂದ್ರರಿಗೆ ಬ್ರಾಹ್ಮಣ ಸೇವೆ – ನಮಗೆ ಹೋಮ, ಹವನ, ಮೃಷ್ಟಾನ್ನಭೋಜನ, ವೇದಾಧ್ಯಯನ, ಧ್ಯಾನ, ಮೌನ, ಜಪ, ತಪ, ಶಾಂತಿ, ಶಮೆ ದಮೆ ವಿವೇಕ ವಿರಕ್ತಿ......

ಬಸವ : ನಿಲ್ಲಿಸಿರಿ, ನಿಲ್ಲಿಸಿರಿ ಪುರೋಹಿತರೇ ನಿಮ್ಮ ಉಪನ್ಯಾಸವನ್ನು! ಯಾವ ತತ್ತ್ವವು ಜಗತ್ತಿನ ತಂದೆಯಾದ ಪರಮಾತ್ಮನ ಮಕ್ಕಳನ್ನು ದೂರವಿಡಲು ಕಲಿಸುತ್ತದೆಯೋ, ಯಾವ ತತ್ತ್ವವು ಪರಮಾತ್ಮನ ಪ್ರೀತಿಸಂಪಾದನೆಗಾಗಿ ಹಿಂಸಾಮಯ ಕರ್ಮಗಳನ್ನು ಮಾಡಲು ಪ್ರೋತ್ಸಾಹಿಸುತ್ತದೆಯೋ, ಯಾವ ತತ್ವವು ಮಾನವ ಜನಾಂಗವನ್ನೆಲ್ಲ ತುಂಡು ತುಂಡಾಗಿ ಖಂಡಿಸಲು ಹೇಳುತ್ತದೆಯೋ ಆ ಅನರ್ಥಕಾರಕ ತತ್ವಕ್ಕೆ ತಲೆಬಾಗಿ ನಾನು ಉಪನಯನ ಮಾಡಿಸಿಕೊಳ್ಳಲಾರೆ! ಸರ್ವ ಸಮಾನತೆಯನ್ನು ಬೋಧಿಸುವ, ಸಕಲ ಜೀವಾತ್ಮರಿಗೆ ಲೇಸನೇ ಬಯಸುವ, ಅಖಂಡಮಾನವಕೋಟಿಯ ಕಲ್ಯಾಣವನ್ನೇ ಚಿಂತಿಸುವ ಶಿವಧರ್ಮದ ಉದ್ಧಾರಕ್ಕಾಗಿ, ಪ್ರಚಾರಕ್ಕಾಗಿ, ಪ್ರಸಾರಕ್ಕಾಗಿ ನಾನು ಹೊರಡುತ್ತೇನೆ. ಅಪ್ಪಣೆ ಕೊಡಿರಿ.

ಭಟ್ಟರು : ಅಯ್ಯೋ–ಅಯ್ಯೋ– ಇದೇನನ್ನು ನಡೆಸಿದಿರಿ ಬಸವರಸರೇ! ಮಾತಾಪಿತೃಗಳನ್ನು ತ್ಯಜಿಸುವುದೆ? ಶಾಂತಂ, ಪಾಪಂ........

ಬಸವ : ಪುರೋಹಿತರೆ, ನನ್ನ ಸತ್ಯ ಧರ್ಮಶೋಧನಪಥದಲ್ಲಿ ನನ್ನ ತಾಯಿ ತಂದೆಗಳು ಅಡ್ಡಬಂದರೂ ನಾನವರನ್ನು ಮೀರಿ ಹೋಗಲೇ ಬೇಕು. ನನ್ನನ್ನು ತಡೆಯಬೇಡಿರಿ. ಜಾತವೇದ ಮುನಿಗಳು ನನ್ನ ದಾರಿಕಾಯುತ್ತಿರಬಹುದು. ನಾನು ಹೊರಡಲೇಬೇಕು.!

ಮಾದರಸ : ಬಸವಾ, ಬಸವಾ, ಇದೇನನ್ನು ನಡೆಸಿರುವೆ? ನನ್ನಕಡೆಗೆ ನೋಡು ಮಗು! ನಿನ್ನ ಮಮತೆಯ ತಾಯಿತಂದೆಗಳನ್ನು ತೊರೆದು ಹೋಗಬೇಡ ಮಗು. ಅನಂತಕಾಲದ ಪೂರ್ವಾರ್ಜಿತ ಪುಣ್ಯವೇ ಫಲಿಸಿ ನಿನ್ನನ್ನು ಪಡೆದೆನೆಂದು ಹಿಗ್ಗಿ ನಲಿದಾಡಿದೆ. ನನ್ನ ವಂಶವನ್ನು ಬೆಳಗುವ ವಿಭೂತಿಪುರುಷನು ಬಂದನೆಂದು ಹೆಮ್ಮೆಯಿಂದ ಜಗತ್ತನ್ನೇ ಮರೆತಿದ್ದೆ. ನನ್ನ ಜೀವನದ ಏಕಮಾತ್ರ ಆಶಾಂಕುರವೆಂದು ನಿನ್ನನ್ನು ಪ್ರಾಣಕ್ಕಿಂತಲೂ ಹೆಚ್ಚಾಗಿ ಪ್ರೇಮದಿಂದ ಜೋಪಾನ ಮಾಡಿದೆ. ಬಸವಾ, ನನ್ನನ್ನು ಬಿಟ್ಟು ಹೊರಟುಹೋಗುವಿಯಾ? (ಒಳಗೆ ನೋಡಿ) ದೇವಿ, ಮಾದಲಾಂಬಿಕೆ! ನಿನ್ನ ಕುಮಾರನು ಗೃಹತ್ಯಾಗಕ್ಕೆ ಸಿದ್ಧನಾಗಿದ್ದಾನೆ. ಬೇಗ ಬಾ! ಈತನಿಗೆ ತಿಳಿ ಹೇಳು, ಸಂತೈಸು, ಸಮಾಧಾನಪಡಿಸು!

ಮಾದಲಾಂಬಿಕೆ : (ಓಡಿಬಂದು ಮಗುವನ್ನು ಬಿಗಿದಪ್ಪಿ) ಕಂದಾ, ಬೇಡ–ಹೋಗಬೇಡ! ನನ್ನನ್ನು ತೊರೆದು ಹೋಗಬೇಡ! ವರ್ಷಾವಧಿ ನಂದಿಕೇಶ್ವರನನ್ನು ಅನನ್ಯಶರಣತೆಯಿಂದ, ಅತುಲಭಕ್ತಿಯಿಂದ ಅರ್ಚಿಸಿ ನಿನ್ನನ್ನು ಪಡೆದಿದ್ದೇನೆ. ಬಂಜೆಯೆಂಬ ಕರುಳು ಕೊರೆಯುವ ಶಬ್ದವನ್ನು ಹೊರಲಾರದೆ ನನ್ನ ಸಾತ್ವಿಕ ಪ್ರೇಮದಿಂದ ನಂದಿಕೇಶನನ್ನೊಲಿಸಿ ನಿನ್ನನ್ನು ಹಡೆದಿದ್ದೇನೆ. ಮಗು! ನವಮಾಸಗಳವರೆಗೆ ನಿನ್ನನ್ನು ಗರ್ಭದಲ್ಲಿ ಜೋಪಾನ ಮಾಡಿದ್ದೇನೆ. ಏಳು ವರ್ಷಗಳವರೆಗೆ ನನ್ನ ತೊಡೆಗಳಮೇಲೆ ಲಾಲನ ಪೋಷಣ ಮಾಡಿದ್ದೇನೆ. ನನ್ನ ಮನೆಯ ನಂದಾದೀಪ ನೀನು; ನಮ್ಮ ಸತಿಪತಿಗಳಿಬ್ಬರ ಸರ್ವಸ್ವ ನೀನು; ನನ್ನ ಮುತ್ತೈದೆತನದ ಬಳ್ಳಿಯು ಬಿಟ್ಟ ಒಂದೇ ಒಂದಾದ ಹೂವು ನೀನು. ಹೋಗದಿರು ಕಂದಾ! ಏಕೆ ಹೋಗುವೆ? ಎಲ್ಲಿಗೆ ಹೋಗುವೆ? ಯಾರು ನಿನ್ನನ್ನು ರಕ್ಷಿಸುವವರು? ನಿನಗೆ ಆರೈಕೆ ಮಾಡುವರಾರು? ಪ್ರೀತಿಯಿಂದ ಸಾಕಿ ಸಲಹುವವರಾರು? 'ಮಗುವೇ' ಎಂದು ನಿನ್ನನ್ನು ಕರೆಯುವವರಾರು? (ಕಂಠಬಿಗಿದು ಬರಲು ಕಣ್ಣೀರಾಗಿ ಕರುಳಿನ ಕಳವಳವು ಹೊರಬೀಳುವದು.)

ಬಸವ : (ತಾಯಿಯನ್ನು ತಕ್ಕೈಸಿ) ಮಾತೆ, ಸಮಾಧಾನಚಿತ್ತಳಾಗು. ನಾನು ಮಾನವಸೇವೆಗಾಗಿ ಹೊರಟರೆ ನಿನ್ನ ಕಣ್ಣುಗಳು ನೀರಿನಿಂದ ತುಂಬಬೇಕೆ? ಅವ್ವಾ, ನನ್ನನ್ನು ಹಡೆಯುವದು ನಿನ್ನ ಸ್ವಾಧೀನದಲ್ಲಿತ್ತು. ಆದರೆ ನನ್ನ ಜೀವನದ ಕಾರ್ಯವನ್ನು ನಿರ್ಧರಿಸುವ ಅಧಿಕಾರ ನಿನಗಿಲ್ಲ. ಆ ಅಧಿಕಾರ ನನಗೂ ಇಲ್ಲ. ನನ್ನ ಜೀವನದ ಕಾರ್ಯವನ್ನು ನಿಯಮಿಸುವ ಅಧಿಕಾರ ದೇವನಿಗಿದೆ. ಆತನು ಆಜ್ಞೆ ಮಾಡಿದಂತೆ ನಾನು ಕಾರ್ಯಮಾಡುವವನು. ಮಾನವಕೋಟಿಯು ನಿಯಮಿಸಿದ ಸೇವೆಮಾಡಲು ನಾನು ಹೋಗಲೇಬೇಕು! ನಾನು ನಿನಗಾಗಿ ಅಲ್ಲ; ನೀನು ನನಗಾಗಿ ಅಲ್ಲ; ನಾನೂ, ನೀನೂ, ತಂದೆಯೂ ಜಗತ್ತಿನ ಸಲುವಾಗಿ ಎಂದು ತಿಳಿ. ವಿಶ್ವಜೀವಿಗಳ ದುಃಖಭಾರವನ್ನು ತಗ್ಗಿಸಲು ಎಲ್ಲರೂ ತಮ್ಮ ತಮ್ಮ ಕರ್ತವ್ಯಪಾಲನೆ ಮಾಡಲೇಬೇಕು. ನನಗೆ ಶಿವನ ಅಪ್ಪಣೆಯಾಗಿದೆ; ಗುರುವಿನ ಆಜ್ಞೆಯಾಗಿದೆ; ಜಗತ್ತಿನ ಕರೆ ಬಂದಿದೆ; ಮಾನವತೆಯ ಮೊರೆ ಬಂದಿದೆ. ನಾನು ಹೋಗಲೇಬೇಕು!

ನನ್ನನ್ನು ಲಾಲಿಸಿ ಪಾಲಿಸಿದ ನಿಮ್ಮಿಬ್ಬರ ಪ್ರೇಮಮೂರ್ತಿಗಳನ್ನು ಕೊನೆಯವರೆಗೆ ನೆನೆಯುವೆನು. ಪುನಃ ನಿಮ್ಮ ದರ್ಶನಕ್ಕಾಗಿ ಬರುವೆನು, ಮಗನರೂಪದಲ್ಲಿ ಅಲ್ಲ, ಕೂಡಲಸಂಗಯ್ಯನ ದೂತನಾಗಿ! ನಾನಿನ್ನು ಹೊರಡುವೆ, ಇಬ್ಬರೂ ನನ್ನನ್ನು ಹರಸಿ ಕಳಿಸಿಕೊಡಿರಿ. (ಚರಣಕ್ಕೆರಗಲು ಎತ್ತಿ ಆಲಿಂಗಿಸಿ)

ಮಾದರಸ : ಮಹಾಕಾರುಣಿಕ ಬಸವಾ-ನಿನ್ನ ಮಹಿಮೆಯ ಅರಿವು ಇಲ್ಲದ ನಾವು ಸುಮ್ಮನೇ ಬಡಬಡಿಸಿದೆವು. ನಮ್ಮ ಮಗನೆಂಬ ಮೋಹದಿಂದ ಕಣ್ಣೀರು ಕರೆದೆವು. ನೀನು ನಮ್ಮ ಮಗನಲ್ಲ; ಸಂಗಯ್ಯನ ಮಗ – ಇಡೀ ಮಾನವಕೋಟಿಯ ಉದ್ಧಾರಮೂರ್ತಿ! ನಿನ್ನ ಕಾರ್ಯಕ್ಕೆ ತಡೆಹಾಕುವವರು ನಾವಾರು? ಹೋಗಿಬಾ ವಿಶ್ವ ಜೀವಜ್ಯೋತಿ! ನೀನೆಲ್ಲಿದ್ದರೂ ನಮ್ಮ ಹೃದಯದ ಹರಕೆಗಳು ನಿನ್ನ ನೆರಳಾಗಿ, ಮೈಗಾವಲಾಗಿ ಹಿಂಬಾಲಿಸುವವು. ನೀನು ಕೈಕೊಂಡಿರುವ ಮಹತ್ಕಾರ್ಯದಲ್ಲಿ ಸಫಲತೆಯನ್ನು ನೀಡೆಂದು ಪರಮಾತ್ಮನನ್ನು ಪ್ರಾರ್ಥಿಸುತ್ತ ನಾವಿಬ್ಬರೂ ನಿನ್ನ ಅಗಲಿಕೆಯ ದುಃಖವನ್ನು ಮರೆಯುವೆವು. ನಿನ್ನ ವಿಶ್ವಪ್ರೇಮವನ್ನು ನಮ್ಮಿಬ್ಬರ ಸಲುವಾಗಿಯೇ ನಿರ್ಬಂಧಿತವಾಗಿರಿಸಲಾರೆವು; ನಿನ್ನ ಒಲವಿನ ಹೊನಲು ದೇವಗಂಗೆಯಾಗಿ ಹರಿದು ಜೀವಜಂತುಗಳೆಲ್ಲವನ್ನೂ ತೊಳಗಿ ಬೆಳಗಿಸಲಿ! ಅದು ಮುಟ್ಟಿದ ಮಣ್ಣೆಲ್ಲ ಚಿನ್ನವಾಗಲಿ, ರನ್ನವಾಗಲಿ! ಹೋಗಿಬಾ ಮಹಾನುಭಾವಿ! ನೀನಿತ್ತ ವಚನದಂತೆ ನಮ್ಮ ಅವಸಾನಕ್ಕೆ ಮೊದಲು ಇನ್ನೊಮ್ಮೆ ಮೊಗದೋರು- ಇದೇ ನಮ್ಮ ಕೊನೆಯ ಆಶೆ!

ಬಸವ : ಧನ್ಯನಾದೆ ತಂದೆ! ನಿನ್ನ ಬಯಕೆಯು ಬೇಗ ಕೈಗೂಡಲಿ. (ತಾಯಿಯನ್ನು ತಬ್ಬಿಕೊಂಡು) ಮಾತೆ! ನಿನಗೆ ಗೊತ್ತಿಲ್ಲದಂತೆಯೇ ನನಗೆ ವಿಶ್ವಪ್ರೇಮದ ಪಾಠವನ್ನು ಕಲಿಸಿಕೊಟ್ಟ ಪ್ರೇಮಮೂರ್ತಿ! ನಿನ್ನ ವಾತ್ಸಲ್ಯದ ವಿದ್ಯಾಲಯದಲ್ಲಿ ನನಗೆ ವಿಶ್ವಕುಟುಂಬತ್ವದ ಅರಿವನ್ನುಂಟುಮಾಡಿಕೊಟ್ಟ ಭಗವತಿ! ನನ್ನನ್ನು ಆನಂದದಿಂದ ಆಶೀರ್ವದಿಸಿ ಬೀಳ್ಕೊಡು-ನಿನ್ನ ಕಣ್ಣೆದುರಿನಿಂದ ನಾನು ದೂರವಿದ್ದಾಗ ನಿನ್ನ ವಿಶ್ವವ್ಯಾಪಿ ಪ್ರೇಮನಯನದಿಂದ ನನ್ನ ಚಲನ ವಲನಗಳನ್ನು ನಿರೀಕ್ಷಿಸುತ್ತ ನನಗೆ ರಕ್ಷಾಕವಚವಾಗಿರು! ನನ್ನ ಉಸಿರಿನಲ್ಲಿ ಉಸಿರಾಡಿಸಿ, ನನ್ನ ಆಶೆಯಲ್ಲಿ ಆನಂದಿಸಿ, ನಿರಾಶೆಯಲ್ಲಿ ನಿಟ್ಟುಸಿರಾಗಿ, ನಗೆಯಲ್ಲಿ ನಕ್ಕು, ಅಳುವಿನಲ್ಲಿ ಅತ್ತು, ಗೆಲುವಿನಲ್ಲಿ ಹಿಗ್ಗಿ, ಸೋಲಿನಲ್ಲಿ ಕುಗ್ಗಿ, ನನ್ನ ಜೀವನದಲ್ಲೆಲ್ಲ ವ್ಯಾಪಿಸು! ನಿನ್ನ ಅನಂತ ಅಪಾರ ಪ್ರೇಮ ಸಂಸ್ಮರಣವು ನನ್ನ ಜೀವನದ ಜ್ಯೋತಿ! ತಾಯಿ! ನಿನ್ನ ಹಸನ್ಮುಖದ ಹರಕೆಗಳನ್ನು ಕರುಣಿಸಿ ಕಳಿಸೌ! (ಉಕ್ಕುವ ಗದ್ಗದದೊಡನೆ ಚರಣಕ್ಕೆರಗಲು ಮೇಲೆತ್ತಿ ಮುತ್ತಿಟ್ಟು)

(ಬಸವನು ಹೊರಡಲನುವಾಗಲು ಓಡಿಬಂದು)

ನಾಗಲಾಂಬಿಕೆ : ನನ್ನನ್ನು ತೊರೆಯದಿರು ತನಿವಗೆಯ ತಮ್ಮಯ್ಯ ನಾ ನಿನ್ನ ಮೈನೆರೆಳೆಂದು ಮೊದಲೇ ಹೇಳಿರುವೆನಲ್ಲವೆ? ನಿನ್ನ ಮಾನವಸೇವೆಯಲ್ಲಿ ನನಗಾವ

ಪಾಲನ್ನು ಕೊಡುವುದಿಲ್ಲವೆ? ಬರುವೆ ನಾ ನಿನ್ನೊಡನೆ ಬರಲಿ ಸಿರಿ, ಬರಲಿ ಉರಿ, ಬರಲಿ ಭುವಿಯ ವಿಪತ್ತುಗಳೆಲ್ಲ!

ಮಾದಲಾಂಬೆ : (ಹೌಹಾರಿ) ಇದೇನು ಮಗಳೇ, ನೀನೂ ಹೋಗುವಿಯಾ? ಹೆತ್ತೊಡಲಿಗೆ ಹುಡಿ ಹೊಯ್ದು ಇಬ್ಬರೂ ಹೊರಟು ಹೋಗುವಿರಾ? ನಾವೇನ ನೋಡಿ ದಿನಗಳೆಯಬೇಕಮ್ಮ!

ಮಾದಲಾಂಬಿಕೆ : ಹೋಗಿ ಬಾ ಕಂದಯ್ಯ! ನೀನು ಸಂಗಯ್ಯನ ಮಗನೆಂದು ತಿಳಿದೂ ನನ್ನ ಮಗನೆಂಬ ಮೋಹವನ್ನು ಮರೆಯಲಾರೆ; ನನ್ನ ತಾಯ್ತನದ ತಿಳುವಳಿಕೆಯನ್ನು ತೊರೆಯಲಾರೆ. ನನ್ನ ಮಗನು ವಿಶ್ವೋದ್ಧಾರಕನಾಗುವದನ್ನು ನೋಡುವುದಕ್ಕಿಂತಲೂ ನನಗೆ ಹೆಚ್ಚಿನ ಆನಂದವಿನ್ನೇನಿದೆ? ನಿನ್ನನ್ನು ಸಂತೋಷದಿಂದ ಕಳಿಸಿಕೊಡುತ್ತೇನೆ. ಎಲ್ಲಿದ್ದರೂ ಬೆಳೆದು ದೊಡ್ಡವನಾಗಪ್ಪ! ನೀನು ಎಲ್ಲಿಗೆ ಹೋದರೂ ನಿನ್ನ ಹೆತ್ತಕರುಳು ಹಿಂಬಾಲಿಸಿ ಬರುವದು ಹೋಗಿಬಾರಪ್ಪ, ದೀರ್ಘಾಯುಷ್ಮಂತನಾಗು!

ನಾಗಲಾಂಬೆ : ಮಾತೆ, ಇನ್ನು ಮುಂದಿನ ನಿನ್ನ ಬಾಳಿಗಾಗಿ ಕುದಿಯದಿರು. ಬಸವಣ್ಣನನ್ನು ಹಡೆದ ದಿನವೇ ನಿನ್ನ ಜೀವನವು ಪಾವನವಾಯಿತು. ಆತನನ್ನು ಇದುವರೆಗೆ ಲಾಲಿಸಿ ಪಾಲಿಸಿದ ನಿನ್ನ ಬಾಳು ತಾಯ್ತನಕ್ಕೇ ಸಾರ್ಥಕ್ಯವನ್ನೂ ಗೌರವವನ್ನೂ ತಂದು ಕೊಟ್ಟಿತು. ಬಸವಣ್ಣನು ನೀನು ಜಗತ್ತಿಗೆ ಕೊಟ್ಟಿರುವ ಸರಿಯಿಲ್ಲದ ಹಿರಿಯಕಾಣಿಕೆ. ಆತನ ಕಾರ್ಯದಲ್ಲಿ ಲೆಕ್ಕವಿಲ್ಲದಷ್ಟು ದುಕ್ಕಗಳು ಬರಬಹುದು. ಆತನ ದುಕ್ಕಗಳ ನಂಜಿನಲ್ಲಿ ನನ್ನ ಅಕ್ಕರತೆಯ ಸಕ್ಕರೆಯನ್ನು ಬೆರೆಸಿ ಆತನ ಬಾಳಿಗೆ ಒಂದಿನಿಸು ಸವಿಯನ್ನು ತಂದುಕೊಡಲು ಹೋಗುತ್ತೇನೆ. ನನ್ನ ಬಾಳನ್ನೂ ಬೆಳಗಿಕೊಳ್ಳಲು ಹೋಗುತ್ತೇನೆ. ಸಂತೋಷದಿಂದ ಬೀಳ್ಕೊಡಿರಿ!

ಮಾದರಸ : ನಿನ್ನಂಥ ಧನ್ಯರಿನ್ನುಂಟೆ ಮಗಳೆ? ನೀನು ನಿನ್ನ ತಮ್ಮನ ಜೀವನಸ್ಫೂರ್ತಿಯಾಗಿ ಹಿಂಬಾಲಿಸಮ್ಮ. ನಿಮ್ಮಿಬ್ಬರಿಗೂ ಸಂಗಯ್ಯನೇ ಸಾಕು ತಂದೆಯಾಗಲಿ! (ಇಬ್ಬರನ್ನು ವಂದಿಸಿ ಅಕ್ಕನು ಹೊರಡುವಳು. ಮಾದರಸ ಮಾದಲಾಂಬಿಕೆಯರು ನೀರೂರಿದ ನಿಮೀಲಿತ ಕಣ್ಣುಗಳಿಂದ ನೋಡುತ್ತ ನಿಲ್ಲುವರು. ಬಸವ ನಾಗಲಾಂಬಿಕೆಯರು ಬೀಳ್ಕೊಂಡು ಒಂದೊಂದೇ ಭಾರವಾದ ಹೆಜ್ಜೆಗಳನ್ನು ಹಾಕುತ್ತ ಹಾಡುತ್ತ ಹೋಗುವರು.)

ರಾಗ : ಭೈರವ ತಾಳ : ಜಲದೆಕ್ಕಾ ಚಾಲ : ಜಾಗೋ ಬ್ರಿಜ ರಾಜಕುವರ...

ತಂದೆ ನೀನು ತಾಯಿ ನೀನು । ಬಂಧು ನೀನು ಬಳಗ ನೀನು ॥ಪ॥

ಎನಗೆ ನೀನಲ್ಲದೆ । ಮತ್ತಾರು ಇಲ್ಲವಯ್ಯ । ಕೂಡಲ ಸಂಗಮ

ದೇವ । ಹಾಲಲದ್ದು ನೀರಲದ್ದು ॥೧॥

(ದಂಪತಿಗಳು ನೆಟ್ಟ ನೋಟದಿಂದ ನೋಡುತ್ತಿರಲು ಮರೆಯಾಗುವರು, ತೆರೆ ಬೀಳುವದು)

ನೋಟ ೭ ಬಾಗೇವಾಡಿಯಲ್ಲೊಂದು ಬೀದಿ

ಶೆಟ್ಟಿ : (ಖಾತೆ ತೆರೆದು ಪಾನುಗಳನ್ನು ತಿರುವಿಹಾಕುತ್ತಾ) ಭಟಜೀಗಳೆಲ್ಲ ಇಲ್ಲೇ ಬರುತ್ತೇವೆ ಅಂತಾ ಹೋಗ್ಯಾರ. ಇಲ್ಲೇ ಕಾಯ್ಕೊಂಡು ನಿಲ್ಲುತ್ತೇನೆ. ಇಂದೇನು, ಎಲ್ಲಾ ಲೆಕ್ಕಾ ವಸೂಲಾಗಿಬಿಡುತ್ತದೆ. ಪೆಟ್ಟಿಗೆ ತುಂಬಿತು! ೨೦೦ ಹೊನ್ನು ನಗದಿ ಇನ್ನೂರು ಹೊನ್ನು! (ಖಾತೆ ಕೆಳಗಿಟ್ಟು ಲಟಿಗೆ ಹಾಕಿ) ಅಂಗಡಿ ಬಿಚ್ಚಿ ಹಾಕಿಸೇ ಬಿಡೋಣ!

(ಮತ್ತೊಂದು ಬದಿಯಿಂದ ತಿರುಕ ಗುಂಡಭಟ್ಟರು ಬರುವರು)

ತಿರುಕ : ಏನು ಗುಂಡಂಭಟ್ಟರೆ, ಎಲ್ಲಾ ಕೆಲಸ ಕೆಟ್ಟುಹೋಯಿತು. ಎಲ್ಲಾ ಆಶೆಗಳೆಲ್ಲಾ ನಾಶವಾಗಿ ಹೋದವು. ಏನು ತಲೆತಿರುಕ ಹುಡಗನ್ರಿ ಅವಾ ಬಸವರಾಜ?

ಗುಂಡ : ಅವನ ತಲೆತಿರುಕೋ ನಿಮ್ಮ ಬುದ್ಧಿಹರಕೊ? ಭಟ್ಟರೇ ಬಸವರಸನು ಕೇಳಿದ ಪ್ರಶ್ನೆಗಳಿಗೆ ಉತ್ತರಕೊಡಬೇಕಾಗಿ ಬಂದಾಗ ನಿಮ್ಮ ಬಾಯಿಯೇಕೆ ಬತ್ತಿತು?

ತಿರುಕ : ಅದೂನ ಖರೇನ ಭಟ್ಟರೆ – ಖರೇನ ಹೇಳಬೇಕಂದರೆ ಬಸವರಸ ಮಹಾಪುರುಷ ಈ ವಯಸ್ಸಿನಲ್ಲಿ ಇಂಥ ಬ್ರಹ್ಮಜ್ಞಾನ!

ಗುಂಡ : ಆತನಿಗೆ ಬ್ರಹ್ಮಜ್ಞಾನ, ನಿಮಗೆ ನಡುಬೀದ್ಯಾಗ ಅಪಮಾನ!

ತಿರುಕ : ಅದೇಕೆ ಭಟ್ಟರೆ, ಹೀಗೆ ಹೇಳುವಿರಿ?

ಗುಂಡ : ಶೆಟ್ಟಿಗೆ ಲೆಖ್ಖಾ ಕೊಡುವೆನೆಂದು ಹೇಳಿದ್ದಿರಲ್ಲ, ಮರೆತಿರೇನು?

ತಿರುಕ : (ಹಾರಿಬಿದ್ದು) ಎಲ ಇವನ! ಅಂವಾ ಶೆಟ್ಟಿ ಬಂದಾನೇನ್ರಿ ಇಲ್ಲಿ? ಅವನತಲೆ ಬೋ– ಅಂವಾ ಸಾಢೇಸಾತಶನಿರಿ ಭಟ್ಟರೇ–

ಗೋಪ್ಯಾ : ಅಪ್ಪಾ; ಹೊಟ್ಟೆ ಬಹಳ ಹಸಿದಿದೆ; ಅಂಗಡಿಯಲ್ಲಿ ತಿನ್ನಲಿಕ್ಕೆ ಏನಾದರೂ ಕೊಡಿಸು.

ಗುಂಡ : ಥೂ ಖೋಡಿ! ಇದ್ದ ಗಂಡಾಂತರ ಪಾರಾಗಿಹೋದರೆ ಸಾಕಾಗೆಧ – ಇವನ ಕಿರಿ ಕಿರಿ ಬೇರೆ ಮತ್ತೆ!

ತಿರುಕ : ಭಟ್ಟರೇ – ಏನಾದರೂ ಗುಳಿಗಿ ಒಗೆದು ಪಾರಾಗಬೇಕಲ್ಲ?

ಗುಂಡ : ಅದರ ಕಾಳಜಿ ಬಿಡಿರಿ, ಭಟ್ಟರಿಗೂ ಶೆಟ್ಟರಿಗೂ ಬಿದ್ದದೆ ಕುಸ್ತಿ ಎರಡೂ ಸರಿಜೋಡಿ ಉದ್ರಿ) ಯಾರು ಬೀಳುತ್ತಾರೋ ನೋಡೋಣ.

ಶೆಟ್ಟಿ : (ಮುಂದೆ ಬಂದು) ಭಟ್ಟರೇ – (ಭಟ್ಟರು ಹಾರಿಬೀಳುವರು) ಹಣ!

ತಿರುಕ : ಮಹಾರಾಯಾ, ಇದ್ದ ಸಂಗತಿಯನ್ನೆಲ್ಲ ನಾಚಿಕೆಯಿಲ್ಲದೆ, ಮುಚ್ಚುಮರೆಯಿಲ್ಲದೆ ಬಿಚ್ಚಿಹೇಳುತ್ತೇನೆ. ಆ ಮುಠ್ಠಾಳ ಹುಡುಗ, ಉದ್ಧಟ ಹುಡುಗ, ತಲೆತಿರುಕ ಹುಡುಗ ಮುಂಜಿ ಮಾಡಿಸಿಕೊಳ್ಳಲಿಲ್ಲ. ದಕ್ಷಿಣಾ ದೂರೇ ಉಳಿಯಿತು; ಹೊಟ್ಟೆಯಲ್ಲಿ ಡೊಂಬರ ಆಟ ನಡೆದಿದೆ. ಕಾಗೆ ಮಂತ್ರಪಠಣ ನಡೆಸಿದೆ. ಮನೆಯಲ್ಲಿ ಒಡಕು ಕಾಳಿಲ್ಲ. ಆಕೀನೂ ನಮ್ಮ ದಾರಿಕಾಯುತ್ತ ಉಪವಾಸ ಕುಳಿತಿರಬಹುದು. ಕೊಡೋದು ಕೊಟ್ಟೀರಿ. ಇನ್ನಷ್ಟು ಸಾಮಾನು ಕೊಡಿರಿ. ನಮ್ಮ ಮೋರೆ ನೋಡಿ ಕೊಡಬೇಡ್ರಿ– ಪಾಪ, ಈ ಗೋಪ್ಯಾನ ಮುಖ ನೋಡಿ ಕೊಡ್ರಿ. ಕೂಸು ಹಸಿದು ಕಂಗಾಲಾಗಿದೆ. (ಗೋಪ್ಯಾ ಅಳುಮೋರೆ ಮಾಡುವನು.) ಅಳಬೇಡ ಬಿಡು ಗೋಪ್ಯಾ, ಶೆಟ್ಟರು ಬಹಳ ದಯಾವಂತರು; ಧರ್ಮಾತ್ಮರು; ಯಾಕ್ರಿ ಭಟ್ಟರೆ?

ಗುಂಡ : ನಿಸ್ಸಂದೇಹ ಭಟ್ಟರೇ ಇವರಂಥಾ ಪುಣ್ಯಾತ್ಮರನ್ನೂ ದಯಾಮೂರ್ತಿಗಳನ್ನೂ ನಾನು ನೋಡಿಯೇ ಇಲ್ಲ; ಕಂಡೂ ಇಲ್ಲ, ಕೇಳಿಯೂ ಇಲ್ಲ. (ಶೆಟ್ಟಿ ಶೆಟೆದು ನಿಲ್ಲುವನು. ಭಟ್ಟರು ಒಬ್ಬರನ್ನೊಬ್ಬರು ನೋಡಿ ಕಣ್ಣು ಚಿವುಟುವರು.)

ತಿರುಕ : ಬಹಳ ಹೇಳುವದೇನು ಶೆಟ್ಟರೇ – ಇದುವರೆಗೆ ಕೊಟ್ಟದ್ದು ಸುಳ್ಳು, ಇಂದುಕೊಡುವದೇ ಖರೆ. ದೊಡ್ಡ ಗಂಡಾಂತರದೊಳಗಿಂದ ಪಾರು– ಮಾಡಿಧಾಂಗ ಆಗತದ. ಹಿಂದಿನದೂ ಇಂದಿನದೂ ಎಲ್ಲಾ ಲೆಖ್ಖಾ ಹಚ್ಚಿ ಇಡಿರಿ, ಜನ್ಮವಿದ್ದರೆ ಕೊಟ್ಟು ಮುಟ್ಟಿಸುತ್ತೇವೆ. ಇಲ್ಲದಿದ್ರೆ ನಮ್ಮ ಮಕ್ಕಳು ಯಾಕ್ರಿ ಭಟ್ಟರೆ?

ಗುಂಡ : ಓಹೋ ನಿಸ್ಸಂದೇಹ, ನಮ್ಮ ಮಕ್ಕಳಿಂದಾಗದಿದ್ದರೆ ಅವರ ಮಕ್ಕಳು! ಸಹಜ,

ಶೆಟ್ಟಿ : ಏನು ಭಟ್ಟರೆ ಮೋಜು ನಡೆಸಿದಿರೇನು? ಹಿಂದಿನ ಸಾಲವೇ ಅಳುತ್ತದೆ; ಮತ್ತೆ ಬೇಕಂತೆ! ಹೂಂ – ಇವತ್ತು ಕೊಟ್ಟು ಮುಂದೆ ಸಾಗಿರಿ. ಇಲ್ಲದಿದ್ದರೆ ಆಳು ಹಚ್ಚೇನು!

ಗುಂಡ : ಏ ಏ ಏ ಶೆಟ್ಟಿ, ಬಾಯಿ ಬಿಗಿಹಿಡಿದು ಮಾತನಾಡು. ನೀನು ನಮ್ಮನ್ನು ಕೇಳಲಿಕ್ಕೆ ಸಂಬಂಧವೇ ಇಲ್ಲ. ನಮ್ಮನ್ನು ಆವಾಗ ತರುಬ ಬೇಕಾಗಿತ್ತು. ನಮ್ಮಲ್ಲಿ ವಿಶ್ವಾಸವಿಲ್ಲದೆ ಪೆದ್ದಂಭಟ್ಟರ ಮಧ್ಯಸ್ಥಿಕೆ ಬೇಡಿದ್ದೆ. ಹೋಗು ಅವರನ್ನೇ ಕೇಳಿಕೋ ಅವರ ಕೈಯಲ್ಲಿ ನಾವೆಲ್ಲ ಲೆಕ್ಕಾಕೊಟ್ಟು ಬಿಟ್ಟಿದ್ದೇವೆ.

ತಿರುಕ : ಏ ಶೆಟ್ಟಿ ! ಮೈಮೇಲಿನ ಎಚ್ಚರದಿಂದ ಮಾತಾಡು! ಹೋಗು ನಿನ್ನ ಆ ವಿಶ್ವಾಸದ ಪೆದ್ದಂಭಟ್ಟರನ್ನು ಕೇಳು– ನೋಡು ದೊಡ್ಡ ದೊಡ್ಡ ಮಾತನಾಡಿ ಚಕ್ರಕೊಟ್ಟರು ಗಂಟಿಗೆ!

ಶೆಟ್ಟಿ : (ಕಕ್ಕಾವಿಕ್ಕಿಯಾಗಿ) ಅಲ್ರೀ ಭಟ್ಟರೆ – ಇದೇ ಈಗ ಇವತ್ತು ಬಾಕಿ ಕೊಡೋದಾಗುವುದಿಲ್ಲ; ಇನ್ನಷ್ಟು ಸಾಮಾನುಕೊಡ್ರಿ ಅಂತಾ ಬೇಡಿಕೊಂಡಿರಿ....

ತಿರುಕ : ಏ ಏ ಏ ಶೆಟ್ಟಿ; ಬಾಯಿಮುಚ್ಚು – ಅಪ್ಪನ್ನಬೇಡಿಕೋತಿದ್ವೆಂತೆ! ಪರಮಾತ್ಮನೇ ಪ್ರತ್ಯಕ್ಷ ಆಗಿನಿಂತಾನ ಎದುರಿಗೆ; ನಾವು ಕೈಮುಗಿದು ನಿಂತೀವಿ ವರಾ ಕೇಳಲೇಕ ! ಹುಂ........

ಶೆಟ್ಟಿ : ಅಲ್ರಿ ಭಟ್ಟರೆ – ಇವತ್ತು ಕೊಡೋದಾಗದಿದ್ದರೆ ಮುಂದೆ ಎಂದಾದರೂ ಕೊಡಿರಿ. ಸಾವಕಾಶ ಈಗೇನೂ ಅವಸರವಿಲ್ಲ. ನಿಮ್ಮ ಮೇಲೆ ಇದ್ರ ಎಲ್ಲಿಗೆ ಹೋಗುತ್ತದೆ ದುಡ್ಡು? ನೀವೂ ಮನಿಯವರೇ ಇದ್ದೀರಿ; ತಿಳಿದಾಗ ಕೊಡಿರಿ.

ಗುಂಡ : ಏ ಶೆಟ್ಟಿ, ಆಗಲೇ ಕೊಟ್ಟುಬಿಟ್ಟೇವೋ ನಾವು – ನಿನಗೆ ಎಷ್ಟು ಸಾರೆ ಕೊಡಬೇಕು?

ಶೆಟ್ಟಿ : ಹಾಗಾದರೆ ಪೆದ್ದಂಭಟ್ಟರ ಕೈಯಲ್ಲಿ ಕೊಟ್ಟೀರಾ?

ತಿರುಕ : ಪೆದ್ದಂಭಟ್ಟರ ಕೈಯಲ್ಲಿ ಅಲ್ಲ; ನಿನ್ನ ಕೈಯಲ್ಲೇ ಕೊಟ್ಟೀವಿ. ತೆಗೆದುಕೊಂಡು ಮತ್ತೆ ತಿರುಗಿಬೀಳುವಿಯೇನು? ವಾಹರೇ ಶೆಟ್ಟಿ – ಬಲು ಖೊಟ್ಟಿ ಇದ್ದೀಯೇಳು ನೀನು?

ಶೆಟ್ಟಿ : ಆಯ್ತು ಭಟ್ಟರಿಗೆ ಉದ್ರಿಕೊಟ್ಟದ್ದೇ ನನ್ನ ತಪ್ಪು! (ಹೊರಡುವನು)

ಗೋಪ್ಯಾ : ಶೆಟ್ಟರೇ, ಬರಿಯ ಭಟ್ಟರಿಗಷ್ಟೇ ಅಲ್ಲ – ಯಾರಿಗೆ ಉದ್ರೀ ಕೊಟ್ಟರೂ ನಿಮ್ಮ ಹಣೆಯಬರಹ ಇಷ್ಟೆ! ಕೇಳಿಲ್ಲವೆ? ಉದ್ದರಿಯ ಕೊಟ್ಟಣ್ಣ ಹದ್ದಾದ ಕಾಗ್ಯಾದ । ಎದ್ದೆದ್ದು ಬೊಗಳುವ ನಾಯಾದ ಮೈಲಾರ । ಗೊಗ್ಗಯ್ಯನಾದ, ಎಂದು?

ತಿರುಕ : ಹೋಗಪೋ ಶೆಟ್ಟಿ, ನಿನ್ನ ಸಂಗಡ ವ್ಯವಹಾರ ಮಾಡಿದ್ದೇ ತಪ್ಪಾಯ್ತು. ನಿನ್ನ ಹಣ ಮುಳುಗಿಸೋದಿಲ್ಲ. ನಿನ್ನ ಮಾತಿಗೆ ಸಿಟ್ಟುಬಂದು ಹೇಳಿದೆವು; ಇದ್ದಾಗ ಕೊಟ್ಟು ಮುಟ್ಟಿಸುವೆವು.

ಗೋಪ್ಯಾ : ನಡೆಯಿರಿ ಅಪ್ಪಾ, ಇನ್ನೊಂದು ಅಂಗಡಿಗೆ ಹೋಗೋಣ– ಇವನದೊಂದೇ ಅಂಗಡಿಯೇ ನಮಗೆ?

(ತೆರೆ ಏಳುವದು)

ನೋಟ ೮

ಸಂಗಮೇಶ್ವರ ದೇವಾಲಯದ ಸುತ್ತಲಿನ ಹೂದೋಟ.

(ಬಸವಣ್ಣನವರು ಪುಷ್ಪ ಕರಂಡವನ್ನು ಹಿಡಿದು ಹೂಕೊಯುತ್ತ ಬರುತ್ತಾರೆ.)

ಬಸವ : (ಹೂ ಕೊಯ್ಯುತ್ತ) ಸುಪ್ರಭಾತ ಸಮಯದಲ್ಲಿ ಅರ್ತಿಯಲ್ಲಿ ಲಿಂಗವ ನೆನೆದರೆ ತಪ್ಪುವವು ಅಪಮೃತ್ಯು, ಕಾಲಕರ್ಮಂಗಳಯ್ಯ! ದೇವಪೂಜೆಯ

ಮಾಟ, ದುರಿತಬಂಧನದೋಟ! ಶಂಭು ನಿಮ್ಮಯ ನೋಟ, ಹೆರೆಹಿಂಗದ ಕಣ್ಬೇಟ! ಸದಾ ಸನ್ನಿಹಿತನಾಗಿ ಶರಣೆಂಬುವದು, ನಂಬುವದು. ಜಂಗಮಾರ್ಚನೆಯ ಮಾಟ, ಕೂಡಲಸಂಗಯ್ಯನ ಕೂಟ, (ಅವಲೋಕಿಸಿ) ಎನಿತು ಪ್ರಸನ್ನವಾಗಿದೆ. ಪ್ರಶಾಂತ ಮನೋಹರ ಪ್ರಭಾತವಿದು! ಹಕ್ಕಿಗಳಿಗೆ ಹಾಡು ಕಲಿಸಿ, ಹೂಗಳಿಗೆ ನಗೆಯ ತರಿಸಿ, ಕತ್ತಲೆಯ ತೆರೆಯ ಸರಿಸಿ ಅರುಣನು ಆಗಮಿಸುತ್ತಲಿದ್ದಾನೆ. ಆದರೆ ನನಗೆ ಮಾತ್ರ, ಓ ತಂದೆ, ನಿಮ್ಮ ನೆನಹಾದಾಗಲೇ ಉದಯ, ನಿಮ್ಮ ಮರಹಾದಾಗಲೇ ಅಸ್ತಮಾನ! ಎನಗೆ ನಿಮ್ಮ ನೆನಹೇ ಜೀವನ, ಪ್ರಾಣ! ಆದರೂ, ಹೊತ್ತಾರೆ ಎದ್ದು ಅಗ್ಘವಣಿ ಪತ್ರೆಯ ತಂದು, ಹೊತ್ತು ಹೋಗದ ಮುನ್ನ ಪೂಜಿಸು ಲಿಂಗವ. ಹೊತ್ತು ಹೋದಬಳಿಕ ನಿನ್ನನಾರು ಬಲ್ಲರು? ಹೊತ್ತು ಹೋಗದ ಮುನ್ನ, ಮೃತ್ಯು ಒಯ್ಯದ ಮುನ್ನ, ತೊತ್ತುಗೆಲಸವ ಮಾಡು ಕೂಡಲಸಂಗಮದೇವನ. (ಸುತ್ತುನೋಡಿ) ಅಹಾ, ಏನಿದು ಹೂಗಳ ಹಸರು! ಎನಿತೊಂದು ಜಾತಿಯ ಹೂಗಳು! ಒಂದರ ಅಂದಚಂದ ಇನ್ನೊಂದಕ್ಕಿಲ್ಲ. ಎಲೆಲೆ ಮಲ್ಲಿಗೆ, ನೀನಿಂದು ಲಿಂಗಯ್ಯನ ಸಿರಿಮುಡಿಗೆ ನರುಗಂಪಿನ ಹೊಸ ಮಲರುಗಳನ್ನು ನೀಡೌ! ಓ ಸಂಪಿಗೆಯೆ, ತುಂಬಿಗಳು ಮೂಸದ ಮೀಸಲು ಕುಸುಮಗಳನ್ನಿಂದು ಸಂಗಯ್ಯನ ಅಂಗಶೃಂಗಾರಕ್ಕೆ ಕರುಣಿಸೌ! ಪಚ್ಚೆ, ಪಡ್ಡಳಿ, ಪಾದರಿ, ಪಾರಿಜಾತ ಜಾಜಿಗಳೇ, ನೀವೂ ಕೂಡಲಸಂಗಯ್ಯನ ಪೂಜೆಗೆ ನೆರವಾಗಿರಿ!

ನಾಗಲಾಂಬಿಕೆ : (ತುಂಬಿದ ಕರಂಡದೊಡನೆ ಬಂದು) ಬಸವಣ್ಣ –ಕುಸುಮಗಳನ್ನಾಯುವದು ಮುಗಿದಿಲ್ಲವೆ? ಇದೊ ನನ್ನ ಕರಂಡ ತುಂಬಿ ಹೊರಚೆಲ್ಲುತ್ತಿದೆ.

ಬಸವ : ನೀನು ನೀರೆರೆದು ಬೆಳೆಸಿದ ಹೂಬಳ್ಳಿಗಳು ನಿನಗೆ ಹೂ ಕೊಡುವೆನಕ್ಕ? ನಿನ್ನ ಒಲವನ್ನು ನೆನೆದೇ ಕುಸುಮಗಳು ಹಿಗ್ಗಿ ಬಾಯ್ದೆರೆಯುತ್ತವೆ. ಅವುಗಳ ಸುರಭಿತ ಹೃದಯಗಳು ಬಿರಿಯುತ್ತವೆ.

ನಾಗಲಾಂಬೆ : ನನ್ನ ಇರುವಿಕೆಯು ನಿನ್ನ ಹರುಷಕ್ಕೆ ಕಾರಣವಾದರೆ ನನಗದೇ ಮುಕ್ತಿ ಬಸವಣ್ಣ! ಅದೋ, ಉಳ್ಳಲರ್ದ ಮೊಲ್ಲೆಗಳಿಂದ ಕಂಪಿಸುವ ಮಲ್ಲಿಕಾಮಾನಿನಿಯು ಚನ್ನ ಸಂಗನ ಪೂಜೆಗೆ ನನ್ನಲರುಗಳನೊಯ್ಯುವುದಿಲ್ಲವೆ? ಎಂದು ಖಿನ್ನಳಾದಂತಿದೆ. ನಾನು ಹೋಗಿ ಅವಳ ಬಯಕೆಯನ್ನು ಪೂರೈಸುವೆನು. (ಹೋಗುವಳು ಒಳಗಿನಿಂದ ಜಾತವೇದಮುನಿ) ಬಸವಣ್ಣ, ಬಸವರಾಜ!

ಬಸವ : ಗುರುದೇವ ಇದೊ ಬಂದೆ. (ತೆರೆ ಏಳುವದು. ಹಿಂದೆ ಸಂಗಮೇಶ್ವರನ ಭವ್ಯದೇಗುಲ) ಸದ್ಗುರುವೆ ತಮ್ಮ ಪಾದಕೆ ಶರಣು! (ಪೊಡಮಡಲು ಹಿಡಿದೆತ್ತಿ)

ಜಾತವೇದಮುನಿ : ಜಯ ನಿನಗೆ ಜಗಜ್ಯೋತಿ! (ಕಾಗದವೊಂದನ್ನು ತೆಗೆದು) ಇದೇನಿದೆ ನೋಡು;

ಬಸವ : (ಓದುವನು ಕಾಗದ ಕೈಯಿಂದ ಕಳಚಿ ಬೀಳುವದು) ಇದೇನು ಗುರುದೇವ! ಲಗ್ನಪತ್ರ - ಅಲ್ಲಲ್ಲ ವಿಘ್ನಪತ್ರ! ಮದ್ಗುರುವೆ, ಸದ್ಗುರುವೆ, ನೀವು ನನ್ನನ್ನು ಮಾಯಾಸಂಬಂಧಕ್ಕೆ ಪ್ರೇರೇಪಿಸುವದೆ? ಜನಿತಕ್ಕೆ ತಾಯಾಗಿ ಹೆತ್ತಳು ಮಾಯೆ! ಕೂಟಕ್ಕೆ ಸ್ತ್ರೀಯಾಗಿ ಕೂಡಿದಳು ಮಾಯೆ! ಮೋಹಕ್ಕೆ ಮಗುವಾಗಿ ಹುಟ್ಟಿದಳು ಮಾಯೆ! ಇದಾವ ಪರಿಯಲ್ಲಿ ಕಾಡಿಹಿತು ಮಾಯೆ! ಈ ಮಾಯೆಯ ಕಳೆವರೆ ಎನ್ನಳವಲ್ಲ-ನೀವೆ ಬಲ್ಲಿರಿ, ಕೂಡಲಸಂಗಮದೇವಾ!

ಜಾತವೇದಮುನಿ : ಬಸವಯ್ಯ ಸ್ತ್ರೀಯೆಂದರೆ ಮಾಯೆಯೆಂಬ ಮನದುಬ್ಬೆಗವೇಕೆ? ಸ್ತ್ರೀಯು ಮುಕ್ತಿಗೆ ದಾರಿಯೂ ಆಗಬಲ್ಲಳು. ಜೀವನೋಪಕಾರಿಯೂ ಆಗಬಲ್ಲಳು! ಸಿರಿಯಾಳ ಚೆಂಗಳೆಯರು, ಸಿಂಧುಬಲ್ಲಾಳರು ಮದುವೆಯಾಗಿಯೇ ಮೋಕ್ಷವನ್ನು ಸಾಧಿಸಲಿಲ್ಲವೆ? ವಿವಾಹವು ಮಾನವನ ಜೀವನಕ್ಕೆ ತೊಡಕಾಗದೇ ತೊಡವಾಗಬಲ್ಲುದು ಬಸವರಸ-ಹಾಗಾಗುವಂತೆ ನೋಡಿಕೊಳ್ಳುವುದು ನಮ್ಮ ಕರ್ತವ್ಯ. ಸನ್ಯಾಸವು ಸಾಮಾನ್ಯರ ತುತ್ತಲ್ಲ, ಸಮಷ್ಟಿಜೀವನದ ಗುರಿಯಲ್ಲ, ಸೃಷ್ಟಿಯ ಉದ್ದೇಶವಲ್ಲ. ಸಾಮೂಹಿಕ ಸನ್ಯಾಸವನ್ನು ಬೋಧಿಸಿದ ಧರ್ಮಗಳು ನೈತಿಕ ಅಧಃಪಾತಕ್ಕೆ ಕಾರಣವಾದುದನ್ನು ನೀನರಿಯೆಯಾ? ನೀನು ಸಂಸಾರಿಯಾಗಿಯೇ ಸಂಸಾರದ ಎಲ್ಲ ಜೀವಿಗಳಿಗೂ ಸುಲಭವಾಗಿಯೇ ಸನ್ಮಾರ್ಗವನ್ನು ತೋರುವ ಶಿವಮತವನ್ನು ಹರಡಬೇಕಾಗಿದೆ. ವಿವಾಹಕ್ಕೆ ಅಳುಕದೆ ಸಂತೋಷದಿಂದ ಒಪ್ಪಿಗೆಯನ್ನು ಕೊಡು ಬಸವಯ್ಯ!

ಬಸವ : ಗುರುದೇವ, ಹಗೆಯಲ್ಲಿ ಬಿದ್ದವರ ಮೇಲೆ ಒರಳ ನೂಂಕುವರೆ? ಕೋಳದ ಮೇಲೆ ಸಂಕೋಲೆಯನಿಕ್ಕುವರೆ? ಬೆಂದಹುಣ್ಣ ಕಂಬಿಯಲ್ಲಿ ಕೀಸುವರೆ? ಕೂಡಲಸಂಗಯ್ಯ ಕಾಡುವಕಾಟ ಸಿರಿಯಾಳಂಗಲ್ಲದೆ ಸೈರಿಸಬಹುದೆ? ದೇವಾ. ಸಿರಿಯಾಳ ಚಂಗಳೆಯರು ಹೋದ ಹಾದಿಯಲ್ಲಿ ನಾನು ಹೋಗಬಹುದೆ? ಆನೆ ಆ ಹಾದಿಯಲ್ಲಿ ಹೋಯಿತ್ತೆಂದರೆ ಆಡು ಆ ಹಾದಿಯಲ್ಲಿ ಹೋಗಬಹುದೆ?

ಜಾತವೇದ : ಬಸವಣ್ಣ, ನೀನು ಸಾಮಾನ್ಯ ನಾನೆಂದು ನಟಿಸುವ ಮಾತಂತಿರಲಿ, ವಿವಾಹವು ಶಿವನ ಮದಕರಿಯೂ ಸಾಮಾನ್ಯಕುರಿಯೂ ಕೂಡಿಯೇ ಹೋಗಬಹುದಾದ ಸುಲಭಮಾರ್ಗ, ಸುರಕ್ಷಿತಮಾರ್ಗ, ಜೀವನದಿಂದ ಓಡಿಹೋಗುವುದನ್ನು ಬೋಧಿಸುವ ಧರ್ಮ ಮಾನವಕೋಟಿಗೆ ಗಮ್ಯವಲ್ಲ ಬಸವಯ್ಯ-ಜೀವನವನ್ನೇ ನಂಬಿ ದೇವತ್ವವನ್ನು ಪಡೆಯಲು ಕಲಿಸುವ ಶಿವಧರ್ಮವೇ ಇಂದು ಜಗತ್ತಿಗೆ ಬೇಕಾಗಿದೆ. ಅದರ ಉದ್ಧಾರಕ್ಕಾಗಿಯೇ ಮೈವೆತ್ತಿರುವ ನೀನು ಮೊದಲು ಮದುವೆಯಾಗಿಯೇ ಧರ್ಮಸಂಗ್ರಾಮದಲ್ಲಿ ಧುಮ್ಮಿಕ್ಕಬೇಕು!

ಬಸವ: ನಿಮ್ಮ ಕರುಣದ ಕಂದನಿಗೆ ದೋಷವೆಲ್ಲಿಯದೋ ದುರಿತವೆಲ್ಲಿಯದೋ ಸಂಗಯ್ಯ? ಲಗ್ನವೆಲ್ಲಿಯದೋ ವಿಘ್ನವೆಲ್ಲಿಯದೋ ಸಂಗಯ್ಯ? ನಿಮ್ಮ ಮಾಣದೇ

ನೆನವಂಗೆ ಭವಕರ್ಮವೆಲ್ಲಿಯದೋ ಕೂಡಲಸಂಗಮದೇವಾ? ಆದರೆ ತಮ್ಮ ಪಾವನ ಪದಪದ್ಮಗಳನ್ನಗಲಿ ಹೋಗಲು ಮನವೊಪ್ಪದು ತಂದೆ?

ಜಾತವೇದ : ನನ್ನ ಕಾರ್ಯವು ಇಷ್ಟಕ್ಕೆ ಮುಗಿಯಿತು ಬಸವಣ್ಣ – ಇನ್ನೂ ನಿನ್ನ ಲೋಕೋದ್ಧಾರದ ಕಾರ್ಯ ಉಳಿದಿದೆ. ಕಲ್ಯಾಣಮೂರ್ತಿ ಬಸವಾ! ಜಾತಿ ಜಾತಿಗಳ ದ್ವಂದ್ವ ಹೋರಾಟದಿಂದ ಕಂಗೆಟ್ಟು ಕಳವಳಿಸುವ ಮಾನವಕೋಟಿಯು ಆಶಾಪೂರ್ಣ ದೃಷ್ಟಿಯಿಂದ ನಿನ್ನ ಕಡೆಗೆ ನೋಡುತ್ತಲಿದೆ. ಉಚ್ಚವರ್ಣ–ದವರೆನಿಸಿಕೊಳ್ಳುವವರ ಅಹಂಕಾರ, ಶ್ರೀಮಂತರ ಠೇಂಕಾರ, ದುರ್ಜನರ ಮನೋವಿಕಾರ, ಪಾಶವೀಶಕ್ತಿಗಳ ಹುಂಕಾರಗಳಿಂದ ದೆಸೆಗೆಟ್ಟ ಮಾನವಲೋಕದ ಚೀತ್ಕಾರಧ್ವನಿಯನ್ನು ಕೇಳು! ದಾರಿದ್ರ್ಯದ ದವಡೆಯಲ್ಲಿ ಸಿಕ್ಕು ಕುರುಡು ಧರ್ಮಗಳ ಕಟ್ಟಳೆಗಳಿಗೆ ಬಲಿಬಿದ್ದು, ಸವಾರ್ಥಪರಾಯಣ ಸಮಾಜದ ಅಂಧಪರಂಪರೆಗಳಲ್ಲಿ ಬಂಧಿಸಲ್ಪಟ್ಟು, ಅರಸರ ಅರಾಜಕತೆಗೆ ಆಹುತಿಯಾಗಿ ನುಗ್ಗುನುಗ್ಗಾಗಿ ಹೋಗಿರುವ ಮೂಕಜನತೆಯ ಕರುಣ ಕ್ರಂದನವನ್ನು ಕೇಳು! ಇದನ್ನೆಲ್ಲ ಕಣ್ಣಾರೆ ಕಂಡು ಕಿವಿಯಾರೆ ಕೇಳಿ ಇಲ್ಲಿಯೇ ನಿನ್ನ ಜೀವನವನ್ನು ಕಳೆಯುವ ಹವ್ಯಾಸಕ್ಕೆ ಮನಸೋಲಬೇಡ ಬಸವಯ್ಯ! ನನ್ನ ಜೀವನವನ್ನೇ ಅನುಕರಿಸಲೆಂದು ನಾನು ನಿನಗಾಗಿ ಇನಿತುದಿನ ಆಸಕ್ತಿ ವಹಿಸಿಲ್ಲ. ನೀನು ನೂತನ ಸಮಾಜಸಂಸ್ಕರಣ ಕಾರ್ಯಮಾಡಬೇಕಾಗಿದೆ, ಸರ್ವ ಧರ್ಮ ಸಮನ್ವಯ ಕರ್ತೃವಾಗಬೇಕಾಗಿದೆ ಜಗತ್ತನ್ನೇ ಎದುರಿಸಿ ನಿಂತಿರುವ ಸಮಸ್ಯೆಗಳನ್ನು ಬಿಡಿಸಬೇಕಾಗಿದೆ. ಇವುಗಳಿಗಾಗಿ ಏಕಾಂತವಾಸವನ್ನು ಬಿಟ್ಟು ಲೋಕಜೀವಿಗಳೊಡನೆ ವಾಸಮಾಡು! ಹಿಂದೆಗೆಯಬೇಡ–ನಿನ್ನಿಂದ ಪ್ರಪಂಚದ ಸಮಸ್ತ ಪ್ರಾಣಿಗಳ ಕಲ್ಯಾಣವಾಗಲಿ!

ಬಸವ : ಗುರುದೇವ, ತಮ್ಮ ಆಜ್ಞೆ ನನ್ನ ತಲೆಯಮೇಲೆ! ತಾವು ನನ್ನಲ್ಲಿ ನೆಲೆಸಿ ನುಡಿಸಿದಂತೆ ನುಡಿದು, ತಾವು ಕರವಿಡಿದು ನಡೆಸಿದಂತೆ ನಡೆದು ಬರುವೆ. ತಮ್ಮ ಕಾರುಣ್ಯದೃಷ್ಟಿಗೆ ಮಾತ್ರ ನಾನು ದೂರವಾಗದಿರಲಿ– ಇದೊಂದೇ ನನ್ನ ಕೋರಿಕೆ!

ಜಾತವೇದ : ಬಸವಯ್ಯ, ಸಂಗಯ್ಯನು ನಿನ್ನ ಅಂಗರಕ್ಷಕನಾಗಿ ಹಿಂಬಾಲಿಸುವನು. ಚಿಂತಿಸದಿರು – ಧೈರ್ಯದಿಂದ ಸಾಗಿ ಸನಾತನ ಸಾಂಪ್ರದಾಯ ಶರಣಮಾನವತೆಯನ್ನು ನಿನ್ನ ಬಾಹುಬಲದಿಂದ ಶತಶತಮಾನಗಳಾಚೆಯೂ ನಿತ್ಯ ನೂತನವಾಗಿ ತೋರಬಲ್ಲ ವಿಚಾರ ಕ್ರಾಂತಿಯಲ್ಲಿ ತೂರಿ ಬಿಡು! ನಿನ್ನ ಜೀವನವೊಂದು ಮಾನವ ಸಮಸ್ಯೆಗಳ ಪ್ರಯೋಗಶಾಲೆಯಾಗಿ ಸೃಷ್ಟಿಯಿರುವವರೆಗೆ ಸರ್ವ ತತ್ವನಿಷ್ಠರನ್ನೂ ತಲೆದೂಗಿಸಲಿ!

ನಾಗಲಾಂಬೆ : (ಬಂದು) ಏನು ನಡೆದಿದೆ ಬಸವಣ್ಣ ಗುರುಗಳೊಡನೆ– ಬಹು ಪ್ರಫುಲ್ಲನಾಗಿ ತೋರತೊಡಗಿರುವಿ. ಇದೇನು? (ಕಾಗದವನ್ನೆತ್ತಿ) ಓಹೋ – ಬಲದೇವ ಮಾವಯ್ಯನ ಮಗಳೊಡನೆ ಮದುವೆ ! (ಹಿಗ್ಗಿ) ನಡೆಯಣ್ಣ, ತೀವ್ರ

ಅತ್ತಿಗೆಯ ಹತ್ತಿರಕೆ! ಎಂತಲೇ ಇಷ್ಟು ಸಂತಸಗೊಂಡಿರುವೆಯಲ್ಲವೆ? ಅತ್ತಿಗೆ, ಅತ್ತಿಗೆ, ಹಚ್ಚು ಬಸವನ ಗೊತ್ತಿಗೆ! (ನಗುವಳು)

ಜಾತವೇದಮುನಿ : ಅಕ್ಕನಾಗಮ್ಮ, ಆ ಕಾಗದವನ್ನು ಪೂರ್ಣ ಓದು ಕೆಳಗೇನು ಬರೆದಿದೆ ಗೊತ್ತಿಲ್ಲವೆ? ಶಿವಸ್ವಾಮಿಯೊಡನೆ ನಿನ್ನದೂ ಮದುವೆ ಒಂದೇ ಹಂದರದಲ್ಲಿ!

ನಾಗಲಾಂಬೆ : ಗುರುಗಳಾದವರಿಗಿದೇ ಕಾರ್ಯವೇನೊ ! (ಹುಸಿಮುನಿಸಿನಿಂದ ಹೊರಟುಹೋಗುವಳು. ಜಾತವೇದಮುನಿಗಳೂ ಬಸವನೂ ನಗುತ್ತ ನಿಲ್ಲುವರು. ತೆರೆಬೀಳುವದು)

(ಕಲ್ಯಾಣದಲ್ಲಿ ರಾಯಬೀದಿ)

ಮಂಚಣ್ಣ : (ಅವಸರವಸರವಾಗಿ) ಬಲದೇವಯ್ಯನು ಕಾಲವಶನಾದನು! ಮಂತ್ರಿಪದವು ಬರಿದಾಗಿದೆ- ಅದಕ್ಕೆ ನನ್ನನ್ನು ಬಿಟ್ಟರೆ ಇನ್ನಾರು ಯೋಗ್ಯರು? ನಮ್ಮಾಕಿಗೆ ಮಂತ್ರಿಯಾಗುವೆನೆಂದು ಹೇಳಿಬಿಟ್ಟೆ. ಅವಳೂ ಅಂತಃಪುರದ ಸ್ತ್ರೀಯರೊಡನೆ ಇಂದು ರಾಜಸಭೆಗೆ ಬರುವಳು. ಬಿಜ್ಜಳಮಹಾರಾಜರು ನನ್ನನ್ನು ಮಂತ್ರಿಯಾಗಿ ಆರಿಸುವರು. ನನ್ನ ತಲೆಯ ಮೇಲೆ ಕಿರೀಟ ಮೆರೆಯುವುದು. ನನ್ನ ಟೊಂಕಕ್ಕೆ ರತ್ನಖಚಿತ ಖಡ್ಗವು ನೇತಾಡುವದು-ನನ್ನ ಕೊರಳಲ್ಲಿ ಮುತ್ತಿನಸರ ಜೋತಾಡುವವು - ನನ್ನ ಆಸನ ರಾಜನ ಬಲಭಾಗದಲ್ಲಿ ಶೋಭಿಸುವದು. ಇಷ್ಟೆಲ್ಲ ಸಿಂಗಾರಾಗಿ ಉನ್ನತಾಸನದ ಮೇಲೆ ಠೀವಿಯಿಂದ ಕುಳಿತಿರುವುದನ್ನು ನನ್ನ ಹೆಂಡತಿ ನೋಡಿದಳೆಂದರೆ ಮನದಲ್ಲಿ ನಡುಗಿ ಮನೆಯಲ್ಲಿ ಹೆದರಿಸಿಕೊಳ್ಳುವದನ್ನಾದರೂ ಬಿಟ್ಟಾಳು. (ವಿಚಾರಿಸಿ) ಉಹುಂ-ಇದು ಮಾತ್ರ ಸಾಧ್ಯವಿಲ್ಲ. ಮಂತ್ರಿಯಾದರೇನಾಯ್ತು? ಅಡುಗೆಮನೆಯ ತಂತ್ರಿಯೆದುರು ಮಂತ್ರ ಸಾಗುವುದೆ?

(ಹೋಗುವನು ತೆರೆ ಏಳುವುದು)

ನೋಟ ೯ ಬಿಜ್ಜಳನ ಒಡ್ಡೋಲಗ

(ಚಿಂತಾಕ್ರಾಂತನಾದ ಬಿಜ್ಜಳನ ಚಿತ್ತವನ್ನು ಗಾಯನ ವಾದನಗಳಿಂದ ಸಂತೋಷಗೊಳಿಸಲೆತ್ನಿಸುತ್ತಾನೆ ಆಸ್ಥಾನ ಸಂಗೀತವಿದ್ವಾಂಸ)

ರಾಗ : ಪಟ್ಟ ದೀಪ ತಾಳ : ತ್ರಿತಾಲ ಚಾಲ: ಪಿಯಾನಾಹಿ ಆವೇ...

ಏತಕಾಗಿ ಈ ಕಾತರ ಭಾವದೊಳು ಬಳಲುತಿಹೆ ॥ಪ॥

ಏನ ಬಯಸುವೇ ಮನದಿ ತಾನಾಗಿಯೇ ಬರುವದು।

ಜನತಾಧಿಪಾ ತೊರೆ ಚಿಂತೆಯಾ ॥ ಏತಕಾಗಿ...

ಬಿಜ್ಜಳ : ನಿಲ್ಲಿಸಿರಿ, ಆಸ್ಥಾನ ಪಂಡಿತರೇ ನಿಲ್ಲಿಸಿರಿ. ಇಂದು ನನ್ನ ಮನಸ್ಸು ಸಂಗೀತದ ಸಮ್ಮೋಹನದಿಂದಲೂ ಶಾಂತವಾಗದಷ್ಟು ಚಿಂತೆಯಿಂದ ಕೂಡಿದೆ. ಸಂಗೀತವೂ ಮಾನವನ ಮನದ ಕಳವಳವನ್ನು ಕಳೆಯಲಾರದಾದರೆ ಇನ್ನಾವ ಗತಿ?

ಸಿದ್ಧರಸ : ಶಾಂತಿಯು ಒಳಗಿನಿಂದಲೇ ಚಿಮ್ಮಬೇಕಲ್ಲದೆ ಹೊರಗಿನಿಂದ ಹರಿದುಬರುವದು ಬಹು ಕಷ್ಟ ಮಹಾರಾಜ.

ಬಿಜ್ಜಳ : ರಾಜ್ಯದಲ್ಲಿ ಅಶಾಂತಿ ನೆಲೆಗೊಂಡಿರುವಾಗ ನನಗೆ ಶಾಂತಿಯೆ ಸಿದ್ಧರಸನಾಯಕರೆ? ನಾವು ಸಿಂಹಾಸನವನ್ನಾಕ್ರಮಿಸಿದ ಸದುದ್ದೇಶವು ಸಾಮಾನ್ಯ ಜನತೆಗೆ ತಿಳಿಯುವುದು ಹೇಗೆ? ಅವರ ಹೃದಯಗಳನ್ನಿನ್ನೂ ಅನುತಾಪವು ಆವರಿಸಿದೆ – ಆದರ್ಶ ಪ್ರಭುತ್ವವನ್ನು ಸಾಗಿಸುತ್ತ ಬಂದಿದ್ದ ಚಾಳುಕ್ಯವಂಶದ ಬಗ್ಗೆ; ರಾಜ್ಯ ಕ್ರಾಂತಿಯಿಂದುಂಟಾದ ಪ್ರಕ್ಷುಬ್ಧ ವಾತಾವರಣವೊಂದು ಕಡೆ; ಮತಮತಗಳ ಕೋಲಾಹಲವಿನ್ನೊಂದು ಕಡೆಗೆ ಜನತೆಯ ಅಂತಃಕರಣವನ್ನು ಕೆಣಕಿ ಕಲಕಿವೆ. ಸಾಮಾಜಿಕ ವ್ಯವಸ್ಥೆಯು ಹಳೆಯಕಾಲದ ಹಿಡಿತ, ಹೊಸಕಾಲದ ಮಿಡಿತಕ್ಕೆ ಸಿಕ್ಕು ಹೊಯ್ದಾಡುತ್ತಲಿದೆ. ಇಂಥ ಸಂಧಿಕಾಲದಲ್ಲಿ ನಮ್ಮಬಲಗೈಯಾಗಿದ್ದ ಬಲದೇವರು ಬಯಲಾಗಿ ಹೋದರು! ಸೇನಾಪತಿಗಳೆ. ನೀವು ಸೈನ್ಯದಿಂದ ವೈರಿಸೈನ್ಯವನ್ನು ಜಯಿಸಿದ್ದಾಯಿತು, ಈಗ ಮುತ್ಸದ್ಧಿತನದಿಂದ ಪ್ರಜೆಗಳ ಹೃದಯಗಳನ್ನು ಗೆಲ್ಲಬೇಕಾಗಿದೆ. ಈಗಿರುವ ರಾಜಕೀಯ, ಧಾರ್ಮಿಕ, ಸಾಮಾಜಿಕ ಅವ್ಯವಸ್ಥೆ, ಅಪರಾಜ್ಯಗಳಿಗೆ ಆಹುತಿಯಾಗಿ ಕುಸಿಯುತ್ತಿರುವ ನಮ್ಮ ಪ್ರಜಾಲೋಕವನ್ನು ಮೇಲೆತ್ತಿ ಶಾಂತಿ, ತುಷ್ಟಿ, ಸುಖ, ಸಮೃದ್ಧಿಗಳ ಸುರಾಜ್ಯದಲ್ಲಿ ಸಂಸ್ಥಾಪಿಸಬಲ್ಲ, ಜನಹೃದಯ ಸಾರ್ವಭೌಮನಾಗಿ ಸಾಮ್ರಾಜ್ಯದ ಭಾಗ್ಯವಿಧಾತನಾಗಬಲ್ಲ ಮಹಾಪುರುಷನೊಬ್ಬನು ಬರಿದಾಗಿರುವ ಮಂತ್ರಿಪದವನ್ನು ಅಲಂಕರಿಸಬೇಕಾಗಿದೆ. ಆ ಹೃದಯಶಕ್ತಿಗಾಗಿಯೇ ನನ್ನ ಹೃದಯವೂ ಹಾತೊರೆದು ಕಾತರಗೊಂಡಿದೆ.

ಸಿದ್ಧರಾಸ : ಬಲದೇವ ಮಂತ್ರಿಗಳ ಅಕಾಲಮರಣದಿಂದ ಸಾಮ್ರಾಜ್ಯವೇ ಶೋಕಿಸುತ್ತಿದೆ ಮಹಾರಾಜ! ಆದರೆ ದೇವರು ಗಂಡಾಂತರಗಳನ್ನು ಹುಟ್ಟಿಸಿದಾಗ ಅವುಗಳಿಂದ ಪಾರಾಗುವ ಸಾಧನ ಸಂಪತ್ತಿಯನ್ನೂ ಹುಟ್ಟಿಸಿರುತ್ತಾನೆ. ಈಗ ಕನ್ನಡ ಸಾಮ್ರಾಜ್ಯಕ್ಕೆ ಸಾವು ಉಳಿವಿನ ಸಮಸ್ಯೆಯು ಎದುರಾಗಿ ನಿಂತಿದೆ. ರಾಜ್ಯದ ಅಂತರಂಗವನ್ನೇ ಕೆಣಕಿ ಅಶಾಂತಿಯು ಆಡಳಿತದ ಶಕ್ತಿಗಳಿಗೆ ಆಹ್ವಾನವನ್ನೀಯ ತೊಡಗಿದೆ! ಇದನ್ನು ಪ್ರತಿಭಟಿಸಿ, ಜಯಿಸಿ, ರಾಜ್ಯಕ್ಕೆ ನವಜೀವನದ ಪ್ರಾಣ ಪ್ರತಿಷ್ಠಾಪನೆ ಮಾಡಬಲ್ಲ ಮಹಾಪುರುಷನೂ ಇಂದಿಲ್ಲ ನಾಳೆ ಬರಬಹುದು. ಯಾವ ದಿಕ್ಕಿನಲ್ಲಿ ಯಾವ ಮಿಂಚು ತಲೆದೋರುವುದೋ ಯಾರು ಬಲ್ಲರು ಮಹಾರಾಜ? ರಾಜ್ಯದ ಮಧ್ಯದಲ್ಲಿಯೇ ರಾಜ್ಯವನ್ನುಳಿಸುವ ಶಕ್ತಿಯು ಇದ್ದೇ ಇರುತ್ತದೆ. ಶಕ್ತಿಯನ್ನು ಗುರುತಿಸುವದೂ ದೊಡ್ಡಶಕ್ತಿ !

ಒಬ್ಬ ಸಭಿಕ : ಮಹಾಪ್ರಭುಗಳು ಚಿತ್ತೈಸಬೇಕು – ಗತಿಸಿದ ಸರ್ವ ಜನಾದರಣೀಯ ಅಮಾತ್ಯಶ್ರೇಷ್ಠರಾದ ಬಲದೇವರಸರ ಸೋದರಳಿಯಂದಿರಾದ ಬಸವರಸರು ಸಂಗಮೇಶ್ವರದಲ್ಲಿ ಜಾತವೇದಮುನಿಗಳ ಹತ್ತಿರ ವ್ಯಾಸಂಗ ಮಾಡಿದವರಿದ್ದು ಅವರ ಪಾಂಡಿತ್ಯದ ಪ್ರಭೆಯು ಇದಾಗಲೇ ದಿಗಂತ ವಿಶ್ರಾಂತ ಕೀರ್ತಿಯನ್ನು ಗಳಿಸಿದೆ. ಅವರ ಮಾವಂದಿರ ಸ್ಥಾನಕ್ಕೆ ಅವರನ್ನೇ ಆರಿಸಿದರೆ ಒಳಿತೆಂದು ಸಭಿಕರ ಅಭಿಪ್ರಾಯ–ಪ್ರಭುಗಳು ವಿಚಾರಿಸಬೇಕು.

ಬಿಜ್ಜಳ : ಅತ್ಯಂತ ಸೂಕ್ತವಾದ ಸಲಹೆ. ಆದರೆ ಅವರು ಮಂತ್ರಿಪದ ಸ್ವೀಕರಿಸಬಹುದೆ?

ಭಟ : (ಪ್ರವೇಶಿಸಿ) ಮಹಾರಾಜರಿಗೆ ವಿಜಯವಾಗಲಿ! ನಗರದ ತ್ರಿಪುರಾಂತಕೇಶ್ವರ ದೇವಾಲಯವನ್ನು ಬಿಚ್ಚುವಾಗ ಈ ತಾಮ್ರಪಟವು ದೊರೆತಿದೆ. ಪ್ರಭುಗಳ ಅವಗಾಹನೆಗಾಗಿ ತಂದೆ.

ಬಿಜ್ಜಳ : ಮಂಚಣ್ಣ ಇದು ಓದಿ ಹೇಳಿರಿ.

ಮಂಚಣ್ಣ : (ತನ್ನಲ್ಲಿ) ಇವತ್ತು ಯಾರ ಮೋರೆ ನೋಡಿ ಎದ್ದೆ ಮಹಾರಾಯಾ – ನನ್ನ ಬಣ್ಣ ಬೈಲಿಗೆ ಬೀಳುವ ಪ್ರಸಂಗ ಬಂದಿತಲ್ಲ! ಆಗಲಿ ಬುಡಬುಡಿಕೆ ಬಾರಿಸೋಣ (ಪ್ರಕಾಶ) ಆಂ – ಹಾಂ – ಶ್ರೀ ಗಣೇಶಾಯನಮಃ...............

ಸಿದ್ಧರಸ : ಮಂಚಣ್ಣನವರೇ, ಇದು ಪಾಠಶಾಲೆಯಲ್ಲ, ರಾಜಸಭೆ, ನೀವು ಹಿಡಿದಿರುವುದು ಮೂಲಾಕ್ಷರ ಪಟವಲ್ಲ – ತಾಮ್ರಪಟ! ಶಿಲಾಶಾಸನ ತಾಮ್ರಪಟಗಳಲ್ಲಿ ಶ್ರೀ ಗಣೇಶಾಯನಮಃ ಇರುತ್ತದೆಯೆ?

ಮಂಚಣ್ಣ : (ತನ್ನಲ್ಲಿ) ಸೇನಾಪತಿಗಳಿಗೇಕೆ ಸಿಟ್ಟುಬಂತು ಮಹಾರಾಯಾ? ತಿಳಿಯಿತು. ಈ ಒರಟು ಸೇನಾಪತಿಗೆ ತನ್ನ ಹೆಸರು ಬರಬೇಕೆಂಬ ಆಶೆಯಿದ್ದಂತೆ ತೋರುತ್ತದೆ. ಆಗಲಿ. ಯಾರ ಹೆಸರು ಬಂದರೇನು? ನನ್ನ ಮಾನ ಉಳಿದರೆ ಸಾಕು (ಪ್ರಕಾಶ) ತಪ್ಪಿದೆ ಸೇನಾಪತಿಗಳೇ, ನನ್ನ ದೃಷ್ಟಿ, ಹಿಹಿ, ಸ್ವಲ್ಪ ಮಧ್ಯಮ (ದಿಟ್ಟಿಸಿನೋಡಿ) ಮಹಾದಂಡಾಧೀಶ್ವರ ಸಿದ್ಧರಸ ನಾಯಕರು ಬರೆಸಿಕೊಟ್ಟ ತಾಮ್ರ ಪಟವೇನೆಂದರೆ..........

ಸಿದ್ಧರಸ : ಏನಿದು ಅಸಂಬದ್ಧ ಪ್ರಲಾಪ ಮಂಚಣ್ಣನವರೇ –ನನ್ನ ಹೆಸರಿದೆಯೋ ಅದರಲ್ಲಿ?

ಮಂಚಣ್ಣ : (ತನ್ನಲ್ಲಿ) ಎಲ ಇವನ–ತನ್ನ ಹೆಸರು ಹೇಳಿದರೂ ಸಿಟ್ಟಿಗೆ ಬರುವನಲ್ಲ? ಹಾಂ– ತಿಳಿಯಿತು. ಮಹಾರಾಜರಿಗೆ ಸಲ್ಲತಕ್ಕ ಮಾನ ತಾನು ಕಸಿದುಕೊಂಡರೆ ಅವರು ಸಿಟ್ಟಾಗಬಹುದೆಂದು.... ಅಲೆಲೆ ಬೆರಕಿ! (ಪ್ರಕಾಶ) ಮತ್ತೆ

ತಪ್ಪಿದೆ ಸೇನಾಪತಿಗಳೇ.... ಈಗ ಸರಿಯಾಗಿ ತಿಳಿಯಿತು. ಶ್ರೀಮನ್ಮಹಾರಾಜಾಧಿರಾಜ ಬಿಜ್ಜಳ ಮಹಾರಾಜರು ಬರೆಸಿಕೊಟ್ಟ ತಾಮ್ರಪಟವೇ............

ಬಿಜ್ಜಳ : ಏನಿದು ವಿಸಂಗ ಮಂಚಣ್ಣ? ನನ್ನ ಹೆಸರಿದೆಯೊ ಅದರಲ್ಲಿ?

ಮಂಚಣ್ಣ : (ಜನಾಂತಿಕ) ಪ್ರಭುಗಳಿಗೂ ನನ್ನ ಮೇಲೆ ದಯಬರಲಿಲ್ಲ! ಈ ಸ್ವಾರ್ಥಮಯ ಜಗತ್ತಿನಲ್ಲಿ ಯಾರಿಗೆ ಯಾರೂ ಇಲ್ಲ. ತನ್ನ ಸಹಾಯ ತಾನೇ ಮಾಡಿಕೊಳ್ಳಬೇಕು! (ಪ್ರಕಾಶ) ಪುನಃ ದೃಷ್ಟಿದೋಷವಾಯಿತು ಪ್ರಭುಗಳೇ – ಈಗ ನಿಚ್ಚಳವಾಯಿತು. ಅಪ್ತಾಲೋಚನಪ್ರವೀಣ ಕೊಂಡೆಯ ಮಂಚಣ್ಣನು ಶಕೆ ೭೫೨ ರಲ್ಲಿ ಬರೆಸಿದ ತಾಮ್ರಪಟವೇನೆಂದರೆ.............

ಬಿಜ್ಜಳ : ಮಂಚಣ್ಣ! ನಿನ್ನ ತಲೆ ತಿರುಗಿದೆಯೊ ಅಥವಾ ಬುದ್ಧಿ ಭ್ರಮಿಸಿದೆಯೊ? ೭೫೨ರಲ್ಲಿ ನೀನು ಯಾವ ಜಗತ್ತಿನಲ್ಲಿದ್ದಿ? ಆ ಸಮಯಕ್ಕೆ ನಿಮ್ಮ ಮುತ್ತಜ್ಜನಾದರೂ ಹುಟ್ಟಿದ್ದನೊ?

ಮಂಚಣ್ಣ : ಮಹಾರಾಜ ನನಗೀಗ ಭಯಂಕರ ಜ್ವರ, ಮೈ ನಡುಗುತ್ತಿದೆ, ಬುದ್ಧಿ ಮಂಕಾಗಿದೆ, ಹಾಯ್! ಹಸಿವೆ, ನೀರಡಿಕೆ, ನಿದ್ದೆ, ಕನಸು, ಎಚ್ಚರ.....! (ಕುಳಿತಲ್ಲಿ ಕುಸಿದು ಬೀಳುವನು)

ಬಿಜ್ಜಳ : ಸಾಕು ಮಂಚಣ್ಣ, ಬಾಯಿಮುಚ್ಚು! ನಿನಗೆ ಸನ್ನಿಪಾತವೇರಿದಂತೆ ಕಾಣುತ್ತದೆ. ಭಟ್ಟರೇ ನೀವು ಓದಿ ಹೇಳಿರಿ.

ಮಂಚಣ್ಣ : (ಜನಾಂತಿಕ) ಒಳ್ಳೇ ಯುಕ್ತಿಯಿಂದ ಪಾರಾದೆ ಮಹಾರಾಯಾ! ಮೂಲಾಕ್ಷರಗಳನ್ನು ಬಿಟ್ಟು ಮುಂದಿನ ಶಬ್ದವು ತಲೆಯಲ್ಲಿ ಹೊಕ್ಕಿಲ್ಲ ತಾಮ್ರಪಟ ಓದುವದೆ? ಅರುಹಂತಾ!

ಭಟ್ಟ : (ಸ್ವಗತ) ಈ ಪೀಡೆ ನಮಗೇಕೆ ಬಂದಿತೂ ಅಂದೆ! ಈ ಮಂಚಣ್ಣ ಕನ್ನಡ ಓದಿ ಕೆಟ್ಟ. ದೇವವಾಣಿಯಾದ ಸಂಸ್ಕೃತದಲ್ಲಿ ಓದಿದ್ದರೆ ಯಾರಿಗೂ ಸಂಶಯಬರುತ್ತಿರಲಿಲ್ಲ; ಎಲ್ಲರೂ ನಂಬುತ್ತಿದ್ದರು. (ಪ್ರಕಾಶ) ಓಂ ಪೂರ್ಣಮದಃ ಪೂರ್ಣಮಿದಂ ಪೂರ್ಣಾತ್ಪೂರ್ಣಮದು.................

ಬಿಜ್ಜಳ : ಸಾಕು ನಿಲ್ಲಿಸಿರಿ ಭಟ್ಟರೇ–ನಿಮ್ಮ ಬುದ್ಧಿಯು ಪೂರ್ಣವಿದೆ! ಬಿಜ್ಜಳ ಮಹಾರಾಜನ ಓಲಗದಲ್ಲಿ ತಾಮ್ರಪಟವನ್ನೋದುವಷ್ಟು ಸುಮರ್ಥರಾದ ಪಂಡಿತರಿಲ್ಲವೆ? ಇವರನ್ನು ಕಟ್ಟಿಕೊಂಡು ನಾನು ಆದರ್ಶಪ್ರಭುತ್ವದ ಕನಸು ಕಾಣುತ್ತಲಿದ್ದೇನೆ! ರಾಜಸಭೆಗೆ ಕಲಂಕ, ರಾಷ್ಟ್ರದ ಅಪಕೀರ್ತಿ!

ಸಿದ್ಧರಸ : ಮಹಾಪ್ರಭುಗಳು ಚಿತ್ತೈಸಬೇಕು, ನನಗೀಗ ನೆನಪಿಗೆ ಬಂದಿತು. ಬಲದೇವಯ್ಯನ ಮರಣಕಾಲಕ್ಕೆ ಬಂದ ಬಸವರಾಜರು ಇಲ್ಲಿಯೇ ಇದ್ದಾರೆ, ಪ್ರಭುಗಳು ಕರೆಯಿಸಿಕೊಂಡರೆ ಅವರು ಈ ಪಟವನ್ನು ಓದಿ ಹೇಳುವರು.

ಬಿಜ್ಜಳ : (ಆನಂದದಿಂದ) ಸರಿಯಾಗಿ ನೆನಪು ಮಾಡಿದಿರಿ ಸೇನಾಪತಿಗಳೇ – ಎಲೋ ಮಾವುತಾ! (ಮಾವುತನು ಬಂದು ಬಾಗುವನು) ತೀವ್ರ ಹೋಗಿ ಬಸವರಾಜರನ್ನು ಆನೆಯಮೇಲೆ ಕರೆದುತಾ (ಹೋಗಲು) ಸೇನಾಪತಿಗಳೇ – ಬಸವರಸರನ್ನು ಕಾಣಲು ನನ್ನ ಹೃದಯವು ಅದೇಕೋ ತವಕಿಸುತ್ತಲಿದೆ. ಅವರನ್ನು ಕರೆಯಿಸಿಕೊಳ್ಳಲು ನೆಪವೂ ಚೆನ್ನಾಗಿ ಸಿಕ್ಕಿತು. ಆದರೆ ಅವರು ಮಂತ್ರಿತ್ವವನ್ನು ಸ್ವೀಕರಿಸಬಹುದೆ?

ಸಭಿಕರು : ಮಹಾರಾಜ, ಅವರು ಮಂತ್ರಿಪದ ಸ್ವೀಕರಿಸಲೇಬೇಕು. ನಮ್ಮೆಲ್ಲರ ಇಚ್ಛೆಗೆ ಅವರು ವಿರೋಧಿಸಿ ವರ್ತಿಸಲಿಕ್ಕಿಲ್ಲ!

ಬಿಜ್ಜಳ : ಹಾಗಾದರೆ ಒಳಿತೇ ಆಗುವುದು.

ಮಂಚಣ್ಣ : (ಜನರ ಕಡೆಗೆ) ನೋಡಿದಿರಾ ಸಿದ್ಧರಸರ ಕಾರಸ್ಥಾನವನ್ನು? ಬಲದೇವನ ಸ್ಥಾನಕ್ಕೆ ಅವನ ಅಳಿಯನನ್ನು ತರಲು ಪ್ರಯತ್ನ ಹೂಂ– ನಾನಿರಲು ಅನ್ಯರು ಮಂತ್ರಿಗಳೇ ಶಕ್ಯವಿಲ್ಲ!

ಬಸವರಾಜ : (ಪ್ರವೇಶಿಸಿ) ಪ್ರಭುಗಳಿಗೆ ವಿಜಯವಾಗಲಿ!

ಬಿಜ್ಜಳ : (ಎದ್ದು ಕರವಿಡಿದು) ದಯಮಾಡಿಸಿರಿ ಬಸವರಾಜ ಈ ಆಸನವನ್ನು ಅಲಂಕರಿಸಿರಿ. ಸಿದ್ಧರಸನಾಯಕರಿಂದ ತಮ್ಮ ವಿಷಯ ತಿಳಿದು ಅತ್ಯಾನಂದವಯಿತು. ತಮ್ಮ ಅಗಾಧವಾದ ಪಾಂಡಿತ್ಯಕ್ಕೆ ಪ್ರತಿಯಿಲ್ಲವಂತೆ!

ಬಸವ : ಮಹಾರಾಜರು ನನ್ನನ್ನು ಹೊಗಳಿ ಹೊನ್ನಶೂಲಕ್ಕೇರಿಸಬಾರದು! ಶರಣರ ಶಿಶು ನಾನು, ಭಕ್ತರ ಮನೆಯ ಬಳಗದೊತ್ತು ನಾನು. ಎನಗಿಂತ ಕಿರಿಯರಿಲ್ಲ!

ಬಿಜ್ಜಳ : ತಮ್ಮ ಸೌಜನ್ಯವು ತಮಗೆ ಭೂಷಣಪ್ರದವೇ ಬಸವರಾಜ! ಇರಲಿ, ಈ ತಾಮ್ರಪಟವನ್ನಷ್ಟು ಓದಿ ಹೇಳುವಿರಾ?

ಬಸವ : ಪ್ರಭುಗಳ ಇಚ್ಛೆ ! (ಓದುವನು)

ನಮಸ್ತುಂಗ ಶಿರಶ್ಚುಂಬಿ ಚಂದ್ರಚಾಮರ ಚಾರವೇ

ತ್ರೈಲೋಕ್ಯ ನಗರಾರಂಭ ಮೂಲಸ್ತಂಭಾಯ ಶಂಭುವೇ॥

ಸ್ವಸ್ತಿ.

ಶ್ರೀಮನ್ಮಹಾರಾಜಾಧಿರಾಜ ರಾಜಪರಮೇಶ್ವರ ತ್ರಿಲೋಕಮಲ್ಲ ತೈಲಪ ಮಹಾರಾಜರು ತ್ರಿಪುರಾಂತಕೇಶ್ವರ ದೇವಾಲಯದ ಜೀರ್ಣೋದ್ಧಾರಕ್ಕಾಗಿ ಮುನ್ನೂರುಲಕ್ಷ ಹೊನ್ನುಗಳನ್ನು ಸಿಂಹಾಸನದ ಕೆಳಗೆ ಭದ್ರವಾಗಿರಿಸಿ ದಾನ ಬರೆದುಕೊಟ್ಟ ದತ್ತಿ ಪತ್ರ!

ಮಂಚಣ್ಣ : ಸುಳ್ಳು, ಸುಳ್ಳು, ಕೆಟ್ಟ ಕರಿಯ ಸುಳ್ಳು! ಸಿಂಹಾಸನದ ಕೆಳಗೆ ಎಲ್ಲಿಯಾದರೂ ದ್ರವ್ಯವಿರುತ್ತದೆಯೆ? ಮಹಾರಾಜರು ಇದನ್ನು ಪರೀಕ್ಷಿಸಿಯೇ ತೀರಬೇಕು!

ಬಿಜ್ಜಳ : ಸೇವಕರೇ, ಸಿಂಹಾಸನವನ್ನೆತ್ತಿರಿ!

(ಸೇವಕರು ಸಿಂಹಾಸನವನ್ನೆತ್ತುವರು – ನೂರಾರು ಹೊನ್ನಿನ ಕೊಡಗಳು ಹೊರಬೀಳುವವು ಎಲ್ಲರೂ ಬೆಪ್ಪಾಗಿ ಬೆರಗಾಗಿ ನೋಡುವರು.)

ಬಿಜ್ಜಳ : ಆಶ್ಚರ್ಯ! ಬಸವರಾಜರು ಹೇಳಿದ್ದು ಸತ್ಯವಿದೆ. ಬಿಜ್ಜಳನ ಬರಿಯ ಭಂಡಾರವು ಇಂದು ತುಂಬಿ ಹೊರಸೂಸುವಂತಾಯಿತು! ಬಸವರಾಜ, ತಮ್ಮ ಉಪಕಾರವನ್ನು ನಾನೆಂದಿಗೂ ಮರೆಯಲಾರೆ! ಬಲದೇವ ಸಿದ್ಧರಸರು ರಾಜ್ಯವನ್ನು ಜಯಿಸಿಕೊಟ್ಟರು; ನೀವು ರಾಯಬೊಕ್ಕಸವನ್ನು ಹೊನ್ನಿನಿಂದ ತುಂಬಿದಿರಿ! ಬಲದೇವರ ಮರಣದಿಂದ ನನ್ನ ರಾಜ್ಯಕ್ಕೇ ಮರಣ ಬಂದಂತಾಗಿದೆ. ತಾವು ಅವರ ಬರಿದಾದ ಸ್ಥಾನವನ್ನು ಸ್ವೀಕರಿಸಿ ನನ್ನನ್ನು ಸಂಕಟದಿಂದ ಪಾರುಮಾಡಬೇಕೆಂದು ಆಶಿಸುತ್ತೇನೆ. ನನ್ನ ರಾಜ್ಯದ ಉದ್ಧಾರವು ನಿಮ್ಮಿಂದಲೇ ಆಗಬೇಕೆಂದು ನನ್ನ ಅಂತರಾತ್ಮವು ಹೇಳತೊಡಗಿದೆ!

ಬಸವರಾಜ : ಮಹಾರಾಜ! ಮಂತ್ರಿತ್ವವು ನನ್ನ ಜೀವನಕಾರ್ಯಕ್ಕೆ ತೊಡಕಾಗಬಹುದೆಂಬ ಭಯ ನನಗೆ. ಆಧಿಕಾರಕ್ಕೆ ಅಂಜುವೆನು ನಾನು ಪ್ರಭುಗಳೇ – ಅದೊಂದು ಬೇಡಿ, ಬಂಧನ!

ಸಭಿಕರು : ಆಗದು, ಬಸವರಸರೇ – ನಮ್ಮೆಲ್ಲರ ಸಲುವಾಗಿ, ಬಿಜ್ಜಳ ಮಹಾರಾಜರ ಸಾಮ್ರಾಜ್ಯದ ಸಮಸ್ತ ಪ್ರಜೆಗಳ ಸಲುವಾಗಿ ತಾವು ಮಂತ್ರಿಪದ ಸ್ವೀಕರಿಸಲೇಬೇಕು!

ಬಿಜ್ಜಳ : ನೋಡಿದಿರಾ ಬಸವರಾಜ? ನನ್ನ ಪ್ರಜಾಲೋಕವೆಲ್ಲ ಬಲದೇವರ ಸ್ಥಾನದಲ್ಲಿ ಅವರ ಅಸಾಮಾನ್ಯ ವ್ಯಕ್ತಿತ್ವದ ಅಳಿಯಂದಿರನ್ನು ನೋಡಬಯಸುತ್ತಿದೆ. ಅದರ ಕರೆಯನ್ನು ನಿರಾಕರಿಸಬೇಡಿರಿ. ತಮ್ಮ ಜೀವನಕಾರ್ಯವೇನಿದ್ದರೂ ಅದಕ್ಕೆ ತಡೆಯಾಗದಂತೆ ನಡೆಯುವೆ.

ಬಸವ : ಮಾನವಸೇವೆಯೇ ನನ್ನ ಧರ್ಮ, ಪ್ರಭುಗಳೇ–

ಬಿಜ್ಜಳ : (ಆನಂದದಿಂದ ಉಬ್ಬಿ) ಧನ್ಯನಾದೆ, ಬಸವರಾಜ! ನನ್ನ ಪ್ರಜೆಗಳ ಸೌಭಾಗ್ಯ ಸೂರ್ಯನು ಇಂದು ಉದಯವಾದನು. ಸೇವಕರೇ, ಮಂತ್ರಿಪದದ ಕಿರೀಟ, ಖಡ್ಗಗಳನ್ನು ತನ್ನಿ! (ಸೇವಕರು ಸುವರ್ಣತಬಕದಲ್ಲಿ ಕವಚ, ಖಡ್ಗ, ಕಿರೀಟಗಳನ್ನು ತರುವರು. ಬಿಜ್ಜಳನು ತನ್ನ ಕೈಯಿಂದ ಬಸವನ ತಲೆಯ ಮೇಲೆ ಕಿರೀಟ ಧರಿಸಿ ಟೊಂಕಕ್ಕೆ ಖಡ್ಗವನ್ನು ಕಟ್ಟುವನು) ಇಂದಿನಿಂದ

ಬಸವರಸರು ಸಾಮ್ರಾಜ್ಯದ ಪ್ರಧಾನ ಮಂತ್ರಿಗಳೂ, ರಾಯಭಾಂಡಾರಾಧ್ಯಕ್ಷರೂ, ಮಹಾದಂಡನಾಯಕರೂ ಆಗಿ ಕಾರ್ಯಮಾಡುವರು.

ಸಭಿಕರು : ಕಲಚೂರ್ಯಕುಲ ಸಾರ್ವಭೌಮ ಬಿಜ್ಜಳಮಹಾರಾಜರಿಗೆ ವಿಜಯವಾಗಲಿ! ಮಹಾಮಂತ್ರೀಶ್ವರ ಬಸವರಾಜದೇವರಿಗೆ ಜಯವಾಗಲಿ!

ಮಂಚಣ್ಣ : (ಮೋರೆ ಗಂಟುಹಾಕಿ) ಎಲ್ಲರೂ ಕುಟಿಲರು! ನನ್ನ ಯೋಗ್ಯತೆಯು ಒಬ್ಬರಿಗೂ ತಿಳಿಯಲೊಲ್ಲದು. ಆಗಲಿ, ಪ್ರಸಂಗ ಬಂದಾಗ ನನ್ನ ಕೈ ತೋರಿಸುವೆನು! (ಸುಂದರಿಯರು ಹೂಮಳೆಗರೆವರು; ಮಂಗಲವಾದ್ಯಗಳು ಮೊಳಗುವವು.

(ತೆರೆ ಬೀಳುವುದು)

ನೋಟ ೧೦ ಸೊನ್ನಲಾಪುರದಲ್ಲಿ ಒಡ್ಡರ ಓಣಿ

ಹನುಮ : ಏ–ಇನ್ನಾದರೂ ಬಾಯಿ ಮುಚ್ಚುವಿಯೋ ಏನು ಬೇಕೋ ಕಜ್ಜಾಯ?

ಗ್ಯಾನಿ : ಯಾಕ? ಮುಚ್ಚುವದಿಲ್ಲ. ಇನ್ನೂ ಮಂದಿಯಂತಾಗ ನನಗೆ ದುಡಿದು ಹಾಕಿದ್ರ ಇನ್ನೂ ಉರೀತಿದ್ದಿ. ವಸ್ತಾವಡಿವಿ ಮಾಡಿಸಿದ್ರಂತೂ ಬೆಟ್ಟಕ್ಕೆ ಹಾರತಿದ್ದಿ!

ಹನುಮ : ಈಗೇನು ಬಿಡ್ತೀನೇನು ಬೆಟ್ಟಕ್ಕೆ ಹಾರದ?

ಗ್ಯಾನಿ : ಅವ್ವಯ್ಯಾ! ಅಟ್ಟಕ್ಕೆ ಹಾರದ ಬೆಕ್ಕು ಬೆಟ್ಟಕ್ಕೆ ಹಾರಿತಂತೆ! ಹೊಟ್ಟೆಗೆ ಸರಿಯಾಗಿ ಕೂಳು ಹಾಕುವದೇ ಆಗಲೊಲ್ಲದು; ಮ್ಯಾಲೆ ಅರ್ಭಟ ಬಹಳ. ನಿನ್ನ ಮದುವೆಮಾಡಿಕೊಂಡು ನಾನು ಮಂದಿಯಂತೆ ಉಣಲಿಲ್ಲ, ಉಡಲಿಲ್ಲ, ತೊಡಲಿಲ್ಲ, ಹಬ್ಬಿಲ್ಲ, ಹುಣಿವಿಲ್ಲ! ಇಂಥಾಪರಿಯಿಂದ ಮದಿವಿಯಾಕ ಮಾಡಿಕೋಬೇಕೊ? ನೆರೆಮನಿ ನರಸಪ್ಪನ್ನ ನೋಡಬಾರದೆ? ಮನೆತನಕ್ಕೆ ಏನೇನು ಅರಕಳಿ ಬೀಳಧಾಂಗ ಸಂಸಾರಾ ಸಾಗಿಸಿಗೊಂಡು ಹೋಗ್ತಾನೆ. ನಿನಗೇನು ಆಗ್ಯೆತೊ ದುಡಿಯದೆ ಇರೋಕೆ.

ಹನುಮ : ಏ, ಆ ನರಸ್ಯಾನ ಪೌರುಷಾ ಏನು ಕೊಚ್ಚತೀ? ಅಂವಾ ಏನು ತಾನು ದುಡಿದದ್ದು ಉಣತಾನ? ಹೆಂಡತಿ ಕಡೆಯಿಂದ ದುಡ್ಡು ಸಿಕ್ಕಿತು, ಕುಂತು ಹೊಡೀತಾನ ರಿಣಗೂಳ. ಪುಗಸೆಟ್ಟೆ ದುಡ್ಡುಸಿಕ್ಕರೆ ನಾನೂ ಹಗಲು ದೀವಟಿಗಿ ಹಿಡಿಸೇನು? ನೀನ ಏನಾದೂ ತಂದೀಯೇನು ತವರು ಮನೆಯಿಂದ ಇದು ಒಂದು ಸುಟ್ಟಮೋರೆ ಒಂದು ಕಟ್ಟಿಕೊಂಡು ಬಂದೀನೋಡು – ದುರುದುರು ಉರೀತಾನ ಇರತೈತೆ ಯಾವಾಗಲೂ. ಇಂಥಾ ರತಿಗೆ ಇನ್ನೂ ವಸತಾ ಒಡವೆ ಬೇಕಂತೆ!

ಅಹಾ, ಏನು ರೂಪ, ಎಂಥಾ ಚೆಲುವಿಕಿ! ಇದರ ಮೇಲೆ ಎಂಥಾ ಆಶಾ ಇಟ್ಟೇದಿ ವಸ್ತಾಬೇಕಂತೆ ವಸ್ತಾ – ಇನ್ನೊಬ್ಬರ ಮನ್ಯಾಗ ಆಗಿದ್ರ ನುಚ್ಚು ಹಾಕತಿದ್ದಿಲ್ಲ, ನುಚ್ಚು!

ಗ್ಯಾನಿ : ನಾನಾದಲ್ಲೇ ನಿನಗೆ ಕಾಸಿಗೆ ಕಾಸು ಕೂಡಿಟ್ಟು ಕೂಳು ಕಾಣಿಸುತ್ತೇನೆ ಇನ್ನೊಬ್ಬಾಕಿ ಚಲ್ಲಕ ದಿಮಿದಿಮಿ ಸಿಕ್ಕಿದ್ರ ನಿನಗೆ ಕರಕು ತಿನಿಸುತಿದ್ದಳು ಕರಕು. ಕೈಲೆದುಡಿಯೋದು ಆಗದಿದ್ದರೂ ಹ್ಯಾವಾ ಮಾತ್ರ ಬೇಕಾದಷ್ಟು. ನಾಚಿಕಿ ಆದ್ರೂ ಬರುತ್ತೋ ಇಲ್ಲೋ ಹೊಟ್ಟಿಗೆ ಕೂಳುಹಾಕಿದ್ದು ಹಂಗಿಸೇಕೆ– (ಕಣ್ಣೀರು ತೆಗೆಯುವಳು)

ಹನುಮ : ಅಕೊ, ನೋಡ್ರೆಪಾ– ನಾನೇನು ಬಡಿದೀನೆ – ಹೊಡೆದೀನೆ? ಕಣ್ಣೀರು ನೋಡ್ರಿ.

ಗ್ಯಾನಿ : ನೀನು ಬಡಿದರೆ ನನಗೆ ದುಕ್ಕ ಇಲ್ಲ. ಪೆಟ್ಟಿಗಿಂತಾ ನುಡಿದ ಪೆಟ್ಟು ಹೆಚ್ಚು. ನಾನು ಈ ಮನ್ಯಾಗ ಹೊಟ್ಟೆ ಕೂಳಿಗೆ ಹೊರೆಯಾಗಿ ಕುಳಿತಂತೆ ಆಗಿದೆ. ನನಗೆ ಹಾಕಿದ ಕೂಳು ದಂಡವೆಂದಮೇಲೆ ನಾನು ಹುಟ್ಟಿದ್ದೇ ತಪ್ಪು! (ಬಿಕ್ಕಳಿಸುವಳು)

ಹನುಮ : ಅಳಬ್ಯಾಡ ಬಿಢ ನೀಹೇಳಿಧಾಂಗ ಕೇಳತೀನಿ ಮಹಾರಾಯಳ. ಕಣ್ಣೀರು ಒರೆಸಿಕೋ – ಕುಲು ಕುಲು ನಗಬಾರದೇ ಒಮ್ಮೆ – (ಸಂತೈಸಿ ಗಲ್ಲವನ್ನಲುಗಿಸುವನು)

ಗ್ಯಾನಿ : ಹುಸಿಮುನಿಸಿನಿಂದ ಕೆನ್ನೆಗೆ ಹೊಡೆದು ಸಾವಿರಕೊಟ್ಟರೂ ನೀನು ಮನುಷ್ಯ ಅಲ್ಲ ಹೋಗು. ದುಡಿಯಲಿಕ್ಕೆ ಹೋಗದೆ ಬಣ್ಣದ ಮಾತು ಆಡು ಅಂದರೆ ಬೇಕಾದಷ್ಟು.

ಹನುಮ : (ಹಿಗ್ಗಿನಿಂದ) ಅಯ್ಯ ಬಡೀಬ್ಯಾಢ ಮಂದಿ ನೋಡ್ಯಾರು!

ಭರಮಣ್ಣ : (ಪ್ರವೇಶಿಸಿ) ಏನೋ ಹನುಮಂತ ಗುದ್ಯಾಡಿಧಾಂಗ ಆಯ್ತು. ಬಡಿದಾಡಿದಿರೇನು?

ಹನುಮ : (ತಾನೇ ಬಡೆದವನಂತೆ ನಟಿಸುತ್ತ) ಭರವಣ್ಣನೇನು – ಇಲ್ಲ ಬಾ – ಈಕಿ ಯಾಕೋ ಹಟಾ ಮಾಡಿದಳು, ಯಾಕೋ ಸಿಟ್ಟು ಬಂತು ಎರಡು ಏಟ ಬಡಿದುಬಿಟ್ಟೆ.

ಭರಮ : ಎಲೆ ಇವನ – ಬಳಿ ಸಪ್ಪಳ ಆಗುತ್ತಿತ್ತಲ್ಲೊ?

ಹನುಮ : (ತನ್ನಲ್ಲಿ) ಅಯ್ಯೋ ಇವನ – ಇವ ಕೇಳ್ಯಾನಪೋ– (ಪ್ರಕಾಶ) ಭರಮಣ್ಣ – ಒಂದು ಮಾತು ಐತೆ. ನೀ ಯಾರ ಮುಂದೂ ಹೇಳೋದಿಲ್ಲ ಅಂದ್ರೆ ಹೇಳ್ತೇನೆ.

ಭರಮ : ಇಲ್ಲ ಹೇಳು.

ಹನುಮ : ನೀ ಹೇಳ್ತೀಯೆಪಾ!

ಭರಮ : ಇಲ್ಲ ಹೇಳೋ ಹನುಮಂತಾ.

ಹನುಮ : ಹೇಳೋದಿಲ್ಲವೆ ಹಾಗಾದರೆ?

ಭರಮ : ಇಲ್ಲಾ ಅಂತ ಎಷ್ಟು ಸಾರೆ ಹೇಳಲಿ?

ಹನುಮ : (ನಗುತ್ತ) ಆಕೇ ಬಡದಳೋ ಭರಮಣ್ಣ!

ಭರಮ : ಹೆಣ್ಣು ಮಕ್ಕಳೆಲ್ಲಿಯಾದರೂ ಗಂಡ್ನ ಬಡಿತಾರನಲೆ ಹುಚ್ಚು?

ಹನುಮ : ಸಿಟ್ಟೀಲೆ ಅಲ್ಲೋ ಭರಮಣ್ಣ – ಪ್ರೀತಿಲೇ ಬಡಿತಾರ. ಸಿಟ್ಟಿಲೆ ಹೊಡೆದರೆ ಸೊಂಟಾ ಮುರಿತಿದ್ದೆ. ನೀನೂ ಎಂದೂ ನಿನ್ನ ಹೆಂಡತಿ ಕಡೆಯಿಂದಾ ಬಡಿಸಿಕೊಂಡಿಲ್ಲೇನು?

ಭರಮ : ಇಲ್ಲಪಾ ಮಹಾರಾಯಾ!

ಹನುಮ : ಅಂದಲ್ಲೇ ಇಷ್ಟು ಸೊರಗೀಯಪಾ. ಪ್ರೀತಿ ಏಟು ಸಹಿತ ತಿನದಿದ್ದರೆ ಸಂಸಾರದಾಗ ಎಲ್ಲಿಯ ಸುಖಾ ತಗಿ. ಇವತ್ತು ನಾಳೆ ಹೆಂಡತಿ ಕೈಯಿಂದ ಬಡಿಸಿಕೊಳ್ಳುವದೂ, ಒಂದು ದೊಡ್ಡಸ್ತನಾ ಭರಮಣ್ಣ. ಅವರು ಓದಸೋಮಾಸ್ಗಾರ ಇಂದ್ಧಾಂಗ ಪಾ. ಈಕಿ ಮೊದಲು ಬಂದಳಲ್ಲ, ನೆನಪೈತೇನು ನಿನಗೆ?

ಭರಮ : ಹೂಂ ಗೊತ್ತಿದೆ.

ಹನುಮ : ನಮ್ಮದು ದೊಡ್ಡ ಬಳಗ – ನಿನಗೆ ಗೊತ್ತಿದೆಯಲ್ಲ ಭರಮಣ್ಣ? ಆ ಗದ್ದಲ ಈಕಿಗೆ ಸರಿಬೀಳಲಿಲ್ಲ. ಬಂದ ಮಾರನೇ ದಿವಸ (ಅಂಗೈಯಲ್ಲಿ ಗೀರು ಹಾಕಿ) ಕೀಂಕ್! ಪಾಲು ತೊಗೊಂಡು ಬೇರೆಯಾಗು ಅಂದಳು!

ಭರಮ : ಮುಂದೆ?

ಹನುಮ : ನನ್ನ ಹೊಟ್ಯಾಗ ಹುರು ಹುರು ಅಂತಪಾ. ಹಡೆದ ತಾಯಿ ತಂದೆ ಇಟ್ಟು ಬೇರೆಯಾಗಬೇಕಾದ್ರ ಜೀವಾ ಒಲ್ಲೆ ಅನಿಸಿತು. ಈಕೆ ಹೇಳೇ ಹೇಳಿದಳು, ನಾನು ಸುಮ್ಮನೆ ಇದ್ದೇಇದ್ದೆ. ಕಡೆಗೆ ಒಂದು ದಿನ ಕೊಟ್ಟಳ್ಲಲ ಕೆನ್ನೆಗೆ! ಹನುಮ್ಯಾ ಬಂದನ ಹಾದಿಗೆ!

ಭೀಮ : ಏನು ಮಾನಗೇಡಿ ಆದೀಯೋ ಹನುಮಂತ? ಇಂಥಾ ಸುದ್ದಿ ಮಂದೀಮುಂದೆ ಹೇಳ್ತಾರೆ?

ಹನುಮ : ಅಂದರೆ ನೀನು ಹೆಂಡತಿಕಡೆಯಿಂದ ಬಡಿಸಿಕೊಂಡ ಸುದ್ದಿ ಮುಚ್ಚಿಡತೀ ಅಂದಾಗ ಆತಲ್ಲ? ನೀನೂ ಬಡಿಸಿ ಕೊಂಡೀದೆಪೋ–

ಭರಮ : ಅದೇನೆ ಇರ್ಲಿ ಬಿಡೋ – ನೀನುಮಾತ್ರ ಗ್ಯಾನವ್ವನ್ನ ಬಡಕೋತ ಹಗಲೆಲ್ಲಾ ಗುದ್ಯಾಡಬೇಡ! ಈ ಬಾಳಿವೆ ನನಗೇನೂ ಚಂದ ಕಾಣೋದಿಲ್ಲ.

ಹನುಮ : ಇಷ್ಟೊತ್ತು ನಾನೇನು ಹೇಳಿದೆ? ನಾನು ಬಡಿದಿಲ್ಲಪಾ–ನಾನು ಬಡಿದೀನಿ ಅಂದ್ರ ಜನರಾದರೂ ನಂಬ್ಯಾರ? ನಿನಗಾದರೂ ಯಾಕೆ ಸಂಸಯಬಂತೂ ಅಂತೀನಿ. ಕೇಳು ಆಕೀನ?

ಬರಮ : ತಂಗೀ ಏನಿದು ಸುದ್ದಿ?

ಗ್ಯಾನಿ : ನೋಡಪ್ಪಾ ಎಣ್ಣಾ, ಮನ್ಯಾಗ ಒಡಕ ಕಾಳು ಇಲ್ಲ. ದುಡಿಯಾಕ ಹೋಗಂದರೆ ಗುದ್ಯಾಟ!

ಬರಮ : ದುಡಿಯದಿದ್ದರೆ ಹೇಗೋ ಹನುಮಂತ? ದುಡಿಯೋದು ಗಂಡ ಸರ ಕೆಲಸ; ಅಳೋದ ಹೆಂಗಸರ ಕೆಲಸ!

ಹನುಮ : ನನ್ನ ಮೈಯಾಗ ನೆಟ್ಟಗಿಲ್ಲ ಭರಮಣ್ಣ –ಕೈ ಕಾಲು ಹರಿಯೋದಂದರೆ ಅಳತೆಯಿಲ್ಲ!

ಗ್ಯಾನಿ : ನೋಡಪ್ಪಾ ನೋಡು ದುಡಿತದ – ಸುದ್ದೀ ಎತ್ತಿದಕೂಡಲೇ ಮೈ ಬೇನೆ ಸುರುವು,

ಹನುಮ : ಇಲ್ಲ ಭರಮಣ್ಣ, ನಾ ದುಡಿಯಾಕ ಹೆದರೋದಿಲ್ಲ – ಹೋರೇವ ಇಲ್ಲ ಊರಾಗ,

ಬರಮ : ಇದಕೇಕೆ ಚಿಂತೆ? ಮುದ್ದುಗೌಡರು ಸುಗಲಾದೇವಿಯ ಮಕ್ಕಳು ಸಿದ್ರಾಮ ಸ್ವಾಮೇರು ಕೆರೆ ಕಟ್ಟಿಸತೊಡಗಿದ್ದಾರೆ. ಅವರಿಗೆ ಈಸಬೇರ ಪರತ್ಯಕ್ಷ ಆಗಿ ಹಣಿಗಣ್ಣು ಕೊಟ್ಟಾನ. ಅವರ ಕೈ ಹಿಡಿಯೋರೇ ಇಲ್ಲ. ಬೇಕಾದಷ್ಟು ಕೆಲಸ; ಬೇಡಿದಷ್ಟು ಕೂಲಿ. ನಡೆಯಿರಿ.

ಹನುಮ : ಏ ಲಗು ನಡೀಯ, ಬುತ್ತಿ ಕಟ್ಟು. (ಹೋಗುವರು)

(ತೆರೆ ಏಳುವದು.)

ನೋಟ ೧೧

ಸೊಲ್ಲಾಪುರದ ಹೊರಗೆ ಅಡವಿ-ಕೆರೆ ಕಡಿಯುವ ನೋಟ

(ಕೆಲವರು ಮಣ್ಣು ಕಡಿಯುವರು. ಕೆಲವರು ಕಲ್ಲು ಒಡೆಯುವರು; ಹನುಮನು ಮಣ್ಣು ತುಂಬಿ ಕೊಡುವನು; ಗ್ಯಾನಿಯು ಹೊತ್ತು ಹಾಕುವಳು. ಹಿರೇಮಣಿಯು ಹಿರಿಯತನ ಮಾಡುತ್ತ ದರ್ಪದಿಂದ)

ಹಿರೇಮಣಿ : ಏ ಹುಡುಗರ್‍ಥ ಲಗೂ ಲಗೂ ಕೆಲಸಮಾಡ್ರಿ ಹೀಗೆ ದುಡಿದರೆ ಕೂಲಿ ಯಾರ ಕೊಡಬೇಕು?

ಹನುಮ : (ಭರಮನಿಗೆ) ಏನಿದು ಭರಮಣ್ಣ? ಇವನೇ ಕೂಲಿಕೊಟ್ಟು ಕೆರೆ ಕಡಿಸಿಧಾಂಗ ಕಾಣಿಸ್ತೈತೆ. ಜಂಬದ ಕೋಳಿ ಇದ್ಧಾಂಗ ಅದಾನ ತೆಗಿ ಇವ.

ಭರಮ : (ಕಲ್ಲು ಒಡೆಯುತ್ತ) ಮಾಲಕರು ಎಲ್ಲಿ ಇರತಾರೋ ಏನೋ, ಈ ನಡುವೆ ಓಡ್ಯಾಡೋ ನಾಯಕುನ್ನಿಗಳ ಬೊಗಳಾಟವೇ ಬಹಳ ಹನುಮಂತ. ದೇವರು ವರಾ ಕೊಟ್ಟರೂ ಪೂಜಾರಿ ಪರಸಾದ ಕೊಡೋದಿಲ್ಲಂತೆ! (ಹಿರೇಮಣಿಗೆ) ಬೀರಣ್ಣ, ಯಾಕೋ ಕೆಲಸ ಹುರುಪಿಲೆ ಸಾಗಲೊಲ್ಲದು. ಒಂದು ಹಾಡು ಹಾಡಬಾರದ.

ಹಿರೇಮಣಿ : ಹೌದು ಭರಮಪ್ಪ. ಹಾಡು ಹಾಡಿಕೋತ ಬದಕುಮಾಡಿ, ಹಾಡು ಹಾಡಿಕೋತ ದಿನಗಳೆದು, ಹಾಡು ಹಾಡತಾಽ ಹಾದೀ ಹಿಡಿಯಬೇಕು ಒಂದು ದಿವಸ. ಈ ಪರಪಂಚದಾಗ ಹಾಡಿ ನಕ್ಕು ಹೋದವನೇ ಗೆದ್ದಾವ ಹೂಂ-ಅನ್ನಿರಿ.

(ಹಿರೇಮಣಿಯು ತಾಳಕ್ಕೆ ಸರಿಯಾಗಿ ಕುಣಿಯುತ್ತ ಹಾಡುವನು. ಉಳಿದವರು ತಾಳಕ್ಕೆ ಸರಿಯಾಗಿ ಕಲ್ಲು ಕಟೆಯುತ್ತ, ಮಣ್ಣು ಕಡಿಯುತ್ತ, ಪುಟ್ಟಿ ತುಂಬುತ್ತ, ಹೊರಿಸುತ್ತ ಹಿಂದೆ ಹಾಡುವರು ಹಾಡುವದೂ ಕೆರೆಯ ಕೆಲಸವೂ ಒಂದಾಗಿ ಅಂದವಾಗಿ ಸಾಗುವವು.)

ಹರನೇ ನಿಮ್ಮಾಟ ಬಲ್ಲವರಾರಾರಾರೆಂದು
ಗುರುವೇ ನಿಮ್ಮಾಟ ಬಲ್ಲವರಾರಾರಾರೆಂದು ॥ಪ॥

ಹರಣೂ ಪಿಡ್ಡವ್ವೆಯ ಹರಕು ದ್ವಾಸಿಗೆ ಪೋಗಿ
ಕೆರೆಯಾ ಮಣ್ಣನು ಕಡಿದು ತುಂತುಂತುಂಬೆಂದು ॥೧॥

ಹರನೇ... ಕುಂಬಾರ ಗುಂಡಯ್ಯನ ಗಡಗೀ ಸಪ್ಪಳ ಕೇಳಿ
(ಎಲ್ಲರೂ ಎದ್ದು ಕುಣಿಯುತ್ತ) ಬಿಡದೇ ನಿ ಕುಣಿದೆಯಲ್ಲೊ
ಥೈ ಥೈ ಥೈ ಎಂದು ॥೨॥

ಹರನೇ..............

ಹನುಮ : ಅಲಲ ಭರಮಣ್ಣಾ, ನಡಾ ಸೆಟೀತಪ. ಛೇ ನಿನ, ನೆಲಾ ಗಟ್ಟಿ ಬಿತ್ತು ಬಿಡೋ–

ಭರಮ : ಜಗ್ಗು ದುಡಿದು ಬಿಟ್ಟುಬಿಡು ಸರದಾರ! ಈ ಹರೇದಾಗ ಗುದ್ದಲೀಲೆ ಕಡಿದು ಅಲ್ಲಾ, ಕಾಲೀಲೆ ಒದ್ದರ ನೀರು ಬರಬೇಕು!

ಹಿರೇಮಣಿ : ಈಗಿನ ಹರೇದ ಹುಡುಗರನ್ನ ಏನಕೇಳ್ತೀ ಬೀರಪ್ಪಾ ಒದ್ದರೆ ನೆಲದಲ್ಲಿ ಅಲ್ಲ; ಕಣ್ಣಾಗ ನೀರು ಬರುತಾವ. ನಡೀರಿ– ಊಟಾಮಾಡೋಣ.

ಹನುಮ : ಏಣ ಏ – ಲಗು ಬುತ್ತಿ ತೊಗೊಂಡು ಬಾ ಹೋಗು. (ಹೋಗುವಳು. ಎಲ್ಲರೂ ಕೂಡ್ರುವರು. ಎಲ್ಲರೂ ತಮ್ಮ ತಮ್ಮ ಬುತ್ತಿ ಬಿಚ್ಚಿ ಒಬ್ಬರಿಗೊಬ್ಬರು ನೀಡುವರು.)

ಹನುಮ : ಏ, ಬಿಸಿ ಅನ್ನಾ ಕಟ್ಟಿದ್ದೆಲ್ಲ, ನೀಡು.

ಗ್ಯಾನಿ: ಆಗಲೇ ನೀಡಿ ಇಟ್ಟಿದ್ದೇನೆ. ಎದುರಿಗೆ ಇಟ್ಟೀನಿ.

ಹನುಮ : ಒಂದು ತುಸಾ ತುಪ್ಪಾ ನೀಡು.

ಗ್ಯಾನಿ : ಏನದು?

ಹನುಮ : (ಬೆದರಿ) ಇಲ್ಲ, ಇಲ್ಲ, ಅನ್ನಕ್ಕೆ 'ಉಪ್ಪು' ಅಂದೆ

ಗ್ಯಾನಿ : ಏನು ಉಪ್ಪಾಗಿಲ್ಲ? ಸೆರಿ ಉಪ್ಪು ಹಾಕೀನಿ

ಹನುಮ : ಇಲ್ಲೇಳು, ಅನ್ನ ಸುಡುತ್ತಿತ್ತು, 'ಉಃಫ್' ಅಂದೆ.

ಭರಮಣ್ಣ : (ಬುತ್ತಿ ಬಿಚ್ಚಿ) ಅಯ್ಯೋ ಹಣೇಬರಹವೇ!

ಹಿರೇಮಣಿ : ಯಾಕೋ ಭರಮಪ್ಪ?

ಭರಮ : ನಮ್ಮಾಕಿ ಬರೇ ತಂಗುಳ ರೊಟ್ಟೀ ಕಟ್ಯಾಳ – ಪಲ್ಲೆ ಸಹಿತ ಇಲ್ಲ! ಇವತ್ತು ಪಲ್ಲಕ್ಕಿ ಸೇವಿ!

ಹಿರೇಮಣಿ : ನಮ್ಮಾಕಿ ಏನು ಕಳಿಸ್ಯಾಳ? (ನೋಡಿ) ಅಯ್ಯೋ ದೇವ್ರ! ಹುಳಿನುಚ್ಚು ಕಾರಪುಡಿ. ಮಜ್ಜಿಗೆ ಕೂಡಾ ಇಲ್ಲ! ಛೇ – ಗ್ಯಾನವ್ವನೇ ಒಳ್ಳೆ ಹೆಣಮಗಳು ಎಗಿ. ಎಲ್ಲಾ ಅಡಿಗಿ ತಂದಾಳ. ನಮ್ಮ ಮನೆಯೊಳಗಿನವೆಲ್ಲಾ ಏನು ಪಿಸಾಸಿಗಳು!

ಗ್ಯಾನಿ : ನೋಡಪ್ಪ ಎಣ್ಣ – ಈತ ಎಂದಾರ ದುಡಿದದ್ದರೊಳಗೇ ಇಷ್ಟೆಲ್ಲಾ ಆಗಬೇಕು. ದಿನಾ ಸರಿಯಾಗಿ ದುಡಿದರೆ ಹಾಲುಸಕ್ಕರಿ ಉಣಿಸೇನು! (ಎಲ್ಲರೂ ಉಂಡು ಕೈತೊಳೆಯುವರು)

(ಪ್ರಭುದೇವರು ಹಾಡುತ್ತ ಬರುವರು.)

ರಾಗ : ಮಾಂಡ ತಾಳ : ಖವಾಲಿ

ನಾರು ಬೇರಿನ ಕುಟಿಲ ಕುಹಕದ ।

ಕಪಟ ಯೋಗವಲ್ಲಿದು ನಿಲ್ಲಿರೋ ॥ಪ॥

ಕಾಯಸಮಾಧಿ ಕರಣಸಮಾಧಿ।

ಜೀವಸಮಾಧಿಯಲ್ಲ ನಿಲ್ಲಿಭೋ।

ನಿಜಸಹಜ ಸಮಾಧಿ ಗುಹೇಶ್ವರ ॥೧॥

ಪ್ರಭು : ಅಯ್ಯಾ, ಈ ಕೆರೆಯನ್ನು ಕಟ್ಟಿಸುವವರಾರು? (ಒಡ್ಡರು ಎದ್ದು ನಿಂತು)

ಭರಮ : ಸಿದ್ರಾಮ ಸ್ವಾಮೇರು ಕಟ್ಟಿಸುತ್ತಾರ ದೇವರು.

ಪ್ರಭು : ತನುವೆಂಬ ಏರಿಗೆ ಮನವೆಂಬ ಕಟ್ಟೆ, ಆಚಾರವೆಂಬ ಸೋಪಾನ, ಪರಮಾನಂದವೆಂಬ ಜಲವ ತುಂಬಿ ಕೆರೆಯ ಕಟ್ಟಲರಿಯದೆ, ನೂಲಸಂಕಲೆಯನ್ನು ಕಡಿದು ಕಾಲಿಗೆ ಕನಕದ ಸರಪಳಿಯನ್ನು ಕೀಲಿಸಿಕೊಳ್ಳುವ ಕಾಳುಮತಿಯವನಂತೆ, ಸಿದ್ಧರಾಮಯ್ಯನು ನೆಲವನಗಿಸಿ ಬರಿದೆ ಬಳಲುತ್ತಿರುವನಲ್ಲ! ನಾನು ಬಂದ ಕಾರ್ಯಮಾಡುವೆನು. (ಒಡ್ಡರಿಗೆ) ಒಳಗೆ ತೊಳೆದು ಜಲವ ತುಂಬಲರಿಯದ ಅರೆಮರುಳ, ನೆಲನಶೋಧಿಸಿ ನೆಲೆಯನರಿಯದೆ, ಕೆರೆಯ ಕಟ್ಟಿಸುವ ಒಡ್ಡರಾಮಯ್ಯನೆಲ್ಲಿರುವನು ಹೇಳಿರಿ?

ಒಡ್ಡರು : ಏ ಏ ಅಯ್ಯನವರೆ. ನಾಲಿಗಿ ಬಿಗಿಹಿಡಿದು ಮಾತನಾಡಿರಿ. ನಮ್ಮಪ್ಪನಿಗೆ ಅಲ್ಲದ ಮಾತಾಡಿದರೆ ಕಲ್ಲು ಹಚ್ಚೇವು ಕಲ್ಲು!

ಪ್ರಭು : ಅದರಲ್ಲಿ ವಿಶೇಷವೇನಿದೆ? ನೀವೆಲ್ಲ ಸಣ್ಣ ಒಡ್ಡರು, ಅವನೊಬ್ಬ ದೊಡ್ಡ ಒಡ್ಡನು; ನೀವು ಕಾಡು ಒಡ್ಡರು, ಅವನೊಬ್ಬ ಸುಧಾರಿಸಿದ ಒಡ್ಡ!

ಒಡ್ಡರು : ಅಲೆ, ಅಲೆ, ಮತ್ತೆ ಅಲ್ಲಾದದ್ದು ಅಂತಾನ ಈ ಅಯ್ಯಪ್ಪ. ಕಲ್ಯಾಣಪ್ಪನ ಪರಸಾದಕೊಡ್ರಿ ಈತನಿಗೆ. (ಒಡ್ಡರು ಕಲ್ಲು ಎಸೆಯುವರು. ಅವರಿಗೇ ಪೆಟ್ಟು ಹತ್ತಲು ಚೀರಿ) ಅಯ್ಯೋ - ಸತ್ತೆವು - ಸ್ವಾಮೇರ ಮೋಸಗಾರ-ಮಾಯಗಾರ!

ಸಿದ್ಧರಾಮ : (ಪ್ರವೇಶಿಸಿ) ಏನಿದು ಗದ್ದಲ? ಭರಮಣ್ಣಾ, ಏಕೆ ಕೂಗಿದೆ?

ಭರಮ : ಎಪ್ಪಾ, ಈತ ಯಾರೋ ಗಿಡಗಾರ ಇರಬೇಕು ದೇವರು. ನಿಮಗೆ ಅಲ್ಲಾದದ್ದು ಅನ್ನಲು ನಾವು ಕಲ್ಲು ಒಗೆದೆವು; ಆದರೆ ಪೆಟ್ಟು ನಮಗೇ ಬಿದ್ದವು.

ಸಿದ್ಧರಾಮ : ಕಪಟ ವೇಷದ ಮಾಯಾವಿ! ಸಿದ್ಧರಾಮನ ಸಮ್ಮುಖದಲ್ಲಿ ನಿನ್ನ ಚೇಷ್ಟೆಗಳೇ? ನನ್ನನ್ನು ಜರದೆಯ? ನೆನಪಿಡು, ನಿನ್ನ ನಾಲಗೆ ಸಹಸ್ರ ಹೋಳಾದೀತು!

ಪ್ರಭು : ಸಂಸಾರಿಗಳಿಗಿಂತ ಸಾಸಿರಮಡಿ ಸಿಟ್ಟೇಕಯ್ಯ ನಿನಗೆ? ಯೋಗಿಯಾದ ನಿರಾಶೆವಂತಗೆ ಇಷ್ಟೊಂದು ಕೋಪಾಟೋಪ., ರೋಷಾವೇಶಗಳೇತಕ್ಕೆ? ಯೋಗಿಗಳೂ ಕ್ರೋಧವನ್ನು ಜಯಿಸಿರುತ್ತಾರೆಂದು ಕೇಳಿದ್ದೇನೆ. ನಿನಗಂತೂ ಕೋಪವೂ ಮೂಗಿನ ಮೇಲೆಯೇ ಕುಣಿಯುತ್ತದೆ.

ಸಿದ್ಧರಾಮ : ಜಗತ್ತಿನ ಭೋಗರಾಶಿಯನ್ನು ಕಾಲಿನಿಂದ ತುಳಿದು ಸರ್ವಸಂಗ ವಿದೂರನಾದ ನನ್ನನ್ನು ಸಂಸಾರಿಯೆಂದು ಕರೆಯುವ ನೀನಾರು?

ಪ್ರಭು : ನಾನೊಬ್ಬ ಪಥಿಕ! ಒಬ್ಬ ಹೆಂಡತಿ, ನಾಲ್ಕು ಮಕ್ಕಳ ಚಿಕ್ಕ ಸಂಸಾರವನ್ನು ತ್ಯಜಿಸಿ (ಸುತ್ತ ತೋರಿ) ಈ ದೊಡ್ಡ ಸಂಸಾರವನ್ನು ಕೊರಳಿಗೆ ಹಾಕಿಕೊಂಡ ನೀನಾರು?

ಸಿದ್ಧರಾಮ : ಏನು, ದೇವಾಲಯಗಳನ್ನು ಕಟ್ಟಿಸುವದು ಸಂಸಾರವೆ? ಅವು ಪರಮಾತ್ಮನ ನಿವಾಸಸ್ಥಾನಗಳಲ್ಲವೆ?

ಪ್ರಭು : ದೇಹವೇ ದೇಗುಲವಾಗಿರಲು ಬೇರೆ ಮತ್ತೆ ದೇಗುಲವೇಕಯ್ಯ? ಹೇಳಲಿಲ್ಲ ಕೇಳಲಿಲ್ಲ ಗುಹೇಶ್ವರ, ನೀನು ಕಲ್ಲಾದರೆ ನಾನೇನಪ್ಪೆನಯ್ಯ? ಸಿದ್ಧರಾಮಯ್ಯ, ಕಲ್ಲದೇವರ ಮಾಡಿ, ಕಲ್ಲು ಮನೆಯನು ಮಾಡಿ ಆ ಕಲ್ಲು ಕಲ್ಲಮೇಲೆ ಕೆಡೆದರೆ ದೇವರೆತ್ತ ಹೋದರೋ!

ಸಿದ್ಧರಾಮ : (ಕೆರಳಿ) ಏನು ಕಪಿಲಸಿದ್ಧ ಮಲ್ಲಿಕಾರ್ಜುನನು ಕಲ್ಲೆ? ಅಭದ್ರ ವಚನಗಳಿಗೆ ತಡೆಯಿರಲಿ–ಕೆದರದಿರು ನನ್ನ ಕಿಡಿಗಣ್ಣಿನ ವಡವಾಗ್ನಿ ಜ್ವಾಲೆ!

ಪ್ರಭು : ಓಹೊ ನನ್ನನ್ನು ಸುಡುವಿಯಾ ಸಿದ್ಧರಾಮಯ್ಯ? ಇದರಂತೆ ಈಗಾಗಲೇ ಎಷ್ಟು ಜನರನ್ನು ಸುಟ್ಟಿರುವೆ? ಹಿಂಸಾಕರ್ಮಗಳೇ ನಿನ್ನ ಯೋಗವೆಂದು ತೋರುತ್ತದೆ. ಸಿದ್ಧರಾಮ ಇಂಥ ಹಿಂಸಾರತನು ಯೋಗಿಯಲ್ಲ ಭವರೋಗಿ!

ಸಿದ್ಧರಾಮ : ಹೆಚ್ಚು ಹರಟದಿರು –ಸಾವನ್ನು ಸ್ವಾಗತಿಸು! (ಉರಿಗಣ್ಣ ತೆರೆಯಲು ಉರಿಯೇ ಹೊರಡುವುದಿಲ್ಲ.) ಎಲ ಇದೇನು? ತ್ರಿಲೋಕಗಳನ್ನು ದಹಿಸಬಲ್ಲ ನನ್ನ ಹಣೆಗಣ್ಣು ಈ ಮಹಾತ್ಮನನ್ನು ನೋಡಿದೊಡನೆಯೇ ನಂದಿ ಹೋಯಿತಲ್ಲ! (ಅಡಿಗೆರಗಿ) ಕ್ಷಮಿಸೆನ್ನ ಕಪಿಲಸಿದ್ಧ? ನಾ ನಿನ್ನನರಿಯದೆ ಕೆಟ್ಟೆ! ನಟ್ಟಡವಿಯೊಳಗೆ ಇರುಳು ಹಗಲೆನ್ನದೆ ನಾನು 'ಅಯ್ಯ' ಎಂದು ಅರಸುತ್ತ ಹೋದರೆ, 'ನಾನಿದ್ದೇನೆ, ಬಾ ಮಗು! ಎಂದು ಕರೆದೆನ್ನ ಕಂಬನಿ ತೊಡೆದು ನಿಜವ ತೋರಿದ ದೇವರ ಪಾದವಿಂದೆನ್ನಲ್ಲಿಗೆ ನಡೆದುಬಂದರೆ ನಾನರಿಯದೆ ಮರುಳುಗೊಂಡೆನು!

ಕರುಣಾಳು ಗುರುವರ! ನಿನ್ನ ಅಂಗಾಲ ಕೋಪಕ್ಕೆ ನನ್ನ ನೊಸಲು ತಂಪು ತಳಿವೆ – ಕೃಪೆದೋರು, ಕಾಪಾಡು! ಎನ್ನ ಭರಭಾರ ನಿಮ್ಮದು – ಎನ್ನ ಹಾನಿ ವೃದ್ಧಿ ನಿಮ್ಮದು – ಕೊಲ್ಲುಕಾಯಿ, ನಿಮ್ಮಧರ್ಮದವ ನಾನು!

ಪ್ರಭು : (ಮೇಲೆತ್ತಿ ಸಂತೈಸುತ್ತ) ಶುದ್ಧ ಸಾತ್ವಿಕ ಶಿವಯೋಗಿ ಶಾಂತನಾಗು. ನಾನು ಅಲ್ಲಮಪ್ರಭು. ನಿನಗೆ ಹಿತವನ್ನು ಕೋರಲೆಂದೇ ಬಂದೆ ಸತಿಸುತ ಮಾತೆ ಪಿತರನ್ನು ತೊರೆದು ಕೆರೆಬಾವಿ ದೇಗುಲಗಳನ್ನು ಕಟ್ಟಿಸುವುದು ಹಸನಮಾಡಿದ ಹರಗಿದ ಹೊಲದಲ್ಲಿ ಕಸವ ಬಿತ್ತಿದಂತೆ. ಕೆರೆ ದೇಗುಲಗಳೆಲ್ಲವೂ, ಹಿಂದಣ ಅಡಿವಜ್ಜೆಗೊಳಗು, ಕರ್ಮಕಾಂಡ ಯೋಗಂಗಳೆಲ್ಲವೂ ಭವದ ತೆಕ್ಕೆಗೆ ಒಳಗು. ಹಿಂದಣ ಮುಂದಣ ಸಂದನಳಿದು ಗುಹೇಶ್ವರ ಲಿಂಗದಲ್ಲಿ ಸಂದಿರಬೇಕು ಸಿದ್ಧರಾಮಯ್ಯ!

ಸಿದ್ಧರಾಮ : ಕೈಯಲ್ಲಿ ಹಿಡಿದು ಕಾಂಬುದು ಕರ್ಮಪೂಜೆಯಲ್ಲವೆ? ಮನದಲ್ಲಿ ನೆನೆದು ಮಾಡುವದೆಲ್ಲವು ಕಾಯದ ಕರ್ಮವಲ್ಲವೆ? ಭಾವಶುದ್ಧವನರಿದ ಪರಿ ಇನ್ನಾವುದು ಹೇಳಾ?

ಪ್ರಭು : ಇಷ್ಟಲಿಂಗ ಪ್ರಾಣಲಿಂಗದ ಭೇದವನಾರು ಬಲ್ಲರು ಹೇಳಾ ಅಂತರಂಗವೆಂಬ ಶಬುದಕ್ಕೆ ಬಹಿರಂಗವು ಮುಂದುಗೊಂಡಿಪ್ಪುದು ಮನವನೆಡೆಗೊಂಡ ಲಿಂಗವು ವಿಚಾರ ವ್ಯಾಕುಳಕ್ಕೆ ಒಳಗಾಗಬಾರದೆಂದು ಮನ ಭಾವ ನೋಟವ ತಂದು ಕರಸ್ಥಲದಲ್ಲಿ ನಿಕ್ಷೇಪಿಸಿ, ಅಂತರಂಗ ಬಹಿರಂಗವೆಂಬುದನರಿಯದೆ ಅನಿಮಿಷನಾಗಿಪ್ಪನಾ ಶರಣನು. ಪ್ರಾಣಲಿಂಗದ ಪ್ರಸನ್ನಮುಖವ ನೋಡಿ ಪರಿಣಾಮಿಸಲೋಸುಗ ಕರತೇಜವೆಂಬ ದರ್ಪಣವ ಹಿಡಿದು ಇರ್ಪ ನೋಡ ಗುಹೇಶ್ವರ ಲಿಂಗದಲ್ಲಿ ನಿಜವನೈದಿಹನೆಂದರೆ ಕುರುಹುವಿಡಿದು ಕುರುಹುಗೆಡಬೇಕು ಸಿದ್ಧರಾಮಯ್ಯ. ಷಟ್ಸ್ಥಲದಂತುವ ಸಂಧಿಸಿ ಒಂದು ಮಾಡಿಕೊಂಡಿಪ್ಪ ಕರಸ್ಥಲದನುವನು ಗುಹೇಶ್ವರನ ಶರಣ ಸಂಗನಬಸವಣ್ಣ ಬಲ್ಲ. ನಡೆ, ಕಲ್ಯಾಣದಲ್ಲಿ ಮಾನವೋದ್ಧರಣ ಕಾರ್ಯವು ವೇಗವಾಗಿ ಸಾಗಿದೆ; ಬಸವ ಮಹಾತ್ಮನ ಭಕ್ತಿಯ ಬೆಳಗು ದಿಗಂತದಿಂದ ದಿಗಂತದವರೆಗೆ ಹಬ್ಬಿ ದಿಕ್ಕುದಿಕ್ಕಿನ ಶರಣರು ಕಲ್ಯಾಣಕ್ಕೆ ಬರತೊಡಗಿದ್ದಾರೆ. ಬಸವಣ್ಣನ ಸಕಲ ಲೋಕದ ಜನಕ್ಕೆ ಹಿತವನೇ ಬಯಸುವ ಮತದ ಸಂವರ್ಧನೆಗಾಗಿ ನಾವೂ ನಮ್ಮ ಸೇವೆ ಸಲ್ಲಿಸೋಣ! ಆತನ ಮಹತ್ತರವಾದ ಮಾನವ ಸೇವೆಯಲ್ಲಿ ನಾವೂ ಕಾಯ ಸವೆಸಿ ಮೇಲುಗತಿಯನ್ನು ಪಡೆಯೋಣ!

ಸಿದ್ಧರಾಮ : ಪ್ರಭುವೇ, ನೀನೊಲಿದು ಸಂಗನಬಸವಣ್ಣನ ಶ್ರೀ ಪಾದವ ತೋರುವೆನೆಂಬ ಮಾತಿಗೆ ಮಾರುವೋದೆನು ಬಸವನ ಬೇಗ ತೋರಿ ಸಲಹು ತಂದೆ!

ಪ್ರಭು : ನಿನ್ನನ್ನೂ ಅಲ್ಲಿಗೆ ಕರೆದೊಯ್ಯಲೆಂದೇ ಬಂದಿರುವೆನು ರಾಮಯ್ಯ! ಕಲ್ಯಾಣವನ್ನು ಕಂಡು ಕಂಗಳೂ ಕೃತಾರ್ಥವಾಗುವವು! ಶಿವಾನುಭವ ಮಂಟಪದ ಶರಣ ಸಂದೋಹವನ್ನು ಕಂಡು ನಿನ್ನ ಹೃದಯವು ಉಕ್ಕೇರುವದು. ಎಲ್ಲೆಲ್ಲಿಯ ಶರಣರು! ಎತ್ತೆತ್ತಣ ಶರಣೆಯರು! ಕಲ್ಯಾಣವಿಂದು ಮಂಗಳಪುರ. ರಾಮಯ್ಯ ಇದಾಗಲೇ ಎಷ್ಟೋಜನ ಸತ್ಯ ಶರಣರು ಬಂದಿದ್ದಾರೆ. ಇನ್ನೂ ಎಷ್ಟೋ ಜನ ಮಹಾನುಭಾವರು, ಮಹಾಮಾತೆಯರು ಬರುವವರಿದ್ದಾರೆ. ಎಲ್ಲ ನಾಡಿನವರು, ಎಲ್ಲ ಕುಲದವರು ಎಲ್ಲ ಕಾಯಕದವರು ಅಲ್ಲಿ ಕಾಣುವರು ಒಂದೆ ಎತ್ತರದಲ್ಲಿ! ಇಂಥ ಪತಿತೋದ್ಧಾರದ ಪತಾಕೆಯನ್ನು ಯಾರೂ ಎತ್ತಿರಲಿಲ್ಲ; ಇಂಥ ಭುವಿ ಜೀವಿಗಳನ್ನೆಲ್ಲ ಬಾಂಧವ್ಯದಲ್ಲಿ ಬಿಗಿಯುವ ಭಕ್ತಿಯ ಬಾವುಟವನ್ನು ಯಾರು ಏರಿಸಿರಲಿಲ್ಲ; ಇಂಥ ಅರಿವಿಂಗಾಶ್ರಯವಾದ ಅನುಭಾವದ ಅಸಮಧ್ವಜವನ್ನು ಯಾರೂ ಹಾರಿಸಿರಲಿಲ್ಲ! ನಡೆ, ಸಿದ್ಧರಾಮಯ್ಯ, ಇಂಥ ಜಗತ್ತಿನ ಕತ್ತಲೆಯನ್ನು ಕಳೆದು ಬುದ್ಧಿ ಹೃದಯಗಳಿಗೆ ಬೆಳಕು ಶಾಂತಿಗಳನ್ನೀವ ಧರ್ಮ ಜ್ಯೋತಿಯನ್ನು ಯಾರೂ ಹೊತ್ತಿಸಿರಲಿಲ್ಲ!

(ಹೋಗುವರು)

ಎರಡನೆಯ ಅಂಕ

ನೋಟ ೧

(ನೀಲಾಂಬಿಕೆ ಗಂಗಾಂಬಿಕೆಯರು ಮಾತನಾಡುತ್ತ ಕುಳಿತಿದ್ದಾರೆ)

ಗಂಗಾಂಬಿಕೆ : ಸಾಂದ್ರವಾಗಿ ಹರಗಣ ಭಕ್ತಿಯ ಮಾಳ್ಪನೆಂತವ್ವ ಮಾದಲಾಂಬಿಕಾನಂದನನು! ಸಾಂದ್ರವಾಗಿ ಬಿಜ್ಜಳನರಮನೆಯ ನ್ಯಾಮಾಳ್ಪನೆಂತವ್ವ ಮಾದರಸರ ಮೋಹದ ಮಗನು! ಲಿಂಗಾರ್ಚನೆ ಲಿಂಗತೃಪ್ತಿ ಅನುಗೈವನೆಂತವ್ವ ಗಂಗಾಪ್ರಿಯ ಕೂಡಲಸಂಗನ ಶರಣ!

ನೀಲಾಂಬಿಕೆ : ಈ ತ್ರಿವಿಧ ಕಾಯಕನಿರತನಾಗಿ ತ್ರಿಲೋಕಪೂಜಿನಾದ ಸಂಗಯ್ಯನ ಮಗನ ಸೇವೆಯಿಂದ ಸಾಯುಜ್ಯಸುಖವನ್ನು ಸಾಧಿಸಿಕೊಳ್ಳುವಂತೆ ನನ್ನನ್ನು ಸಂತೋಷದಿಂದ ಸ್ವಾಗತಿಸಿದ ನಿನ್ನ ಆರಾಧನೆಯೇ ನನ್ನ ಧನ್ಯತೆ ಯಕ್ಕಾ!

ಗಂಗಾಂಬಿಕೆ : ಹೀಗೇಕೆ ನುಡಿವೆ ತಂಗಿ? ಈಶನ ಮೀಸಲಪ್ಪ ಭಕ್ತನಾದ ಮಾದಲಾಂಬಿಕಾನಂದನನ ವಿಶ್ವ ಪ್ರೇಮವಾಹಿನಿಗೆ ನಾವಿಬ್ಬರೂ ಎರಡು ದಂಡೆಗಳಿದ್ದಂತೆ. ಪ್ರವಾಹವು ತಡೆಯಿಲ್ಲದೆ ಸಾಗಿ ಜಗತ್ತಿನ ಜೀವರಾಶಿಗಳೆಲ್ಲವನ್ನೂ ತಣಿಸಿ ಕೃಪಾಸಾಗರ ಸಂಗಯ್ಯನಡಿಗಳನ್ನೇ ಸೇರಬೇಕು. ಅದರ ಎರಡೂ ಅಂಚುಗಳ ಅಲೆಗಳಷ್ಟೇ ಸಾಕು ನಮ್ಮಿಬ್ಬರೆದೆಗಳನ್ನು ತೊಯ್ಯಿಸಲಿಕ್ಕೆ ಇದುವೇ ನಮ್ಮಿಬ್ಬರ ಧನ್ಯತೆ.

ಅಕ್ಕನಾಗಮ್ಮ : (ಪ್ರವೇಶಿಸಿ) ಗಂಗಾಂಬೆ ನೀವಿಬ್ಬರೇ ಧನ್ಯರಲ್ಲ ನಿನ್ನನ್ನು ಬಸವಣ್ಣನಿಗೆ ಧಾರೆಯೆರೆದು ಬಲದೇವನೂ, ನೀಲಾಂಬೆಯನ್ನು ಬಸವಣ್ಣನ ಮಹಿಮೆಗೆ ಮರುಳಾಗಿ ಆತನಿಗೆ ಅರ್ಪಿಸಿ ಬಿಜ್ಜಳಮಹಾರಾಜರೂ ಧನ್ಯರಾಗಿದ್ದಾರೆ, ಅವನ ಅಡಿಗಳನ್ನು ಸೇವಿಸಿ ನಾನೂ ಧನ್ಯಳಾಗಿದ್ದೇನೆ. ಎನ್ನ ಕುಲ, ಛಲ, ತನು, ಮನ, ಭಾವ ಸೂತಕಗಳ ಕಳೆದ ಬಸವಣ್ಣ. ಎನ್ನ ಅರುಹು ಮರಹಿನ ಸಂಶಯವ ಬಿಡಿಸಿ, ಎನ್ನ ತನ್ನಲ್ಲಿ – ತನ್ನ ನನ್ನಲ್ಲಿ ಇಂಬಿಟ್ಟುಕೊಂಡ ಬಸವಣ್ಣ. ನಿಜ ನಿರ್ವಯಲ ಸಮಾಧಿಯ ನಿಜನಿವಾಸದ ಬಾಗಿಲು ತೋರಿದ ಬಸವಣ್ಣ. ಬಸವಣ್ಣಪ್ರಿಯ ಕೂಡಲ ಚನ್ನಸಂಗಯ್ಯನ ಹೃದಯಕಮಲದಲ್ಲಿ ಸಮವಾಗಿರಿಸಿದ ಎನ್ನ ತಂದೆ ಸಂಗನಬಸವಣ್ಣ ಹೆಚ್ಚೇನು–ಬಸವನನ್ನು ಪಡೆದು ಜಗತ್ತೂ ಧನ್ಯವಾಯಿತು!

ಬಸವ : (ಪ್ರವೇಶಿಸಿ) ತಪ್ಪಿದೆ ಅಕ್ಕಾ – ನಿಮ್ಮನ್ನು ಪಡೆದು ನಾನು ಮಾತ್ರ ನಿಜವಾಗಿಯೂ ಧನ್ಯನಾದೆ. ಅಕ್ಕ ನೀನು ಅಕ್ಕರತೆಗೆ ಆಗರ, ಗಂಗಾ ನೀಲೆಯರೊಲವಿನ ಸುನೀಲಗಂಗಾಪ್ರವಾಹಕ್ಕೆ ನೀನು ಕೂಡಿದಾಗ ಬಸವನ ತ್ರಿವೇಣಿಸಂಗಮವು ಸಿದ್ಧವಾಯಿತು. ಈ ಸಂಗಮದಲ್ಲಿ ನಿತ್ಯ ನಲಿದೇ ಸಂಗಯ್ಯನ ಸೇವೆಗೆ ಶಕ್ತಿಬರುವದು

ನನಗೆ. ಬಸವ ಬಿಜ್ಜಳರನ್ನು ಬಾಂಧವ್ಯ ಬಂಧನದಲ್ಲಿ ಬಿಗಿದಿರುವ ಬಳ್ಳಿ, ನೀಲಾ - ಬಸವನ ಮನೆಯಲ್ಲಿ ನಿನ್ನ ಅರಮನೆಯ ವೈಭವವಾವುದೂ ಇಲ್ಲ. ಇಲ್ಲಿರುವುದು ಸೇವೆಯೊಂದೆ-ನಿನಗೆ ಇಲ್ಲಿಯ ಬಾಳು ಸೊಗಸುವುದೆ?

ನೀಲಾ : ನಿಮ್ಮ ಕೈಪಿಡಿಯದ ಮುನ್ನ ತಾಯಿ, ತಂದೆಗಳೆನಗೆ, ನಿಮ್ಮ ಕೈಪಿಡಿಯದ ಮುನ್ನ ಬಂಧುಬಳಗವೆನಗೆ, ನಿಮ್ಮ ಕೈಪಿಡಿದಂದೆಲ್ಲರು ಸತ್ತರು, ದೇವಾ, ಅರಮನೆಯ ಆಲಸಜೀವನದಿಂದ ನನ್ನ ಇಲ್ಲಿಯ ಸೇವೆಯು ಅಪೂರ್ಣವೆನಿಸಿದೆ. ಆದರೂ ಸೇವಾಪ್ರದೀಪದಿಂದಲೇ ನನ್ನ ಬಾಳನ್ನು ಬೆಳಗಬೇಕೆಂದಿರುವ ನನಗೆ ಈ ಅಪೂರ್ಣತೆಯನ್ನು ಹೋಗಲಾಡಿಸುವವರೆಗೆ ಸಮಾಧಾನವಿಲ್ಲ!

ಬಸವ : ನಿನ್ನ ಸೇವೆ ಅಪೂರ್ಣವಲ್ಲ ನೀಲಾ ಅಪೂರ್ವವಾದುದು!

ನೀಲಾ : ಈ ಹೊಗಳಿಕೆಗೆ ಜ್ಞಾನಿಗಳೂ, ತಮ್ಮ ವಚನಗಳ ಬೆಳಗಿನಿಂದ ನಾರೀಲೋಕಕ್ಕೆ ದಾರಿತೋರುತ್ತಿರುವವರೂ ಆದ ಮಾತಾಯಿ ನಾಗಮ್ಮಾ ನನ್ನಿಯ ಅಕ್ಕ ಗಂಗಾಂಬೆಯರೇ ಪಾತ್ರರು, ದೇವಾ! ನನ್ನನ್ನು ಹೊಗಳಿ ನಾಚಿಕೆಗೊಳಿಸುವಿರೇಕೆ?

ಬಸವ : ಹುಚ್ಚಿ ನೀನು ವಚನಗಳನ್ನು ರಚಿಸದಿದ್ದರೇನಾಯಿತು? ನಿನ್ನ ಮೌನದಲ್ಲಿ ಕೋಟಿವಚನಗಳ ರಮ್ಯತೆಯಿದೆ, ರಮಣೀಯತೆಯಿದೆ; ನಿನ್ನ ಮಿತವಾದ ಮಾತುಗಳಲ್ಲಿ ಅನಂತ ವಚನಗಳ ಮಾಧುರ್ಯವಿದೆ; ಸೌಂದರ್ಯವಿದೆ; ನಿನ್ನ ಸತ್ಯಶುದ್ಧ ಸೇವೆಯಲ್ಲಿ ಸಾವಿರ ವಚನಗಳ ಸಾರಸರ್ವಸ್ವವು ಅಡಕವಾಗಿದೆ. ನಿನ್ನ ನಾಲಗೆಯು ವಚನವಿದ್ಯಾ ನಟಿಯ ಏಕಾಂತ ಲಾಸ್ಯದ ರಂಗಸ್ಥಳ, ನಿನ್ನ ನಡೆಯು ಶರಣರ ಶ್ರೇಷ್ಠ ತತ್ವಗಳ ಪ್ರತ್ಯಕ್ಷ ಪ್ರಯೋಗಶಾಲೆ! ನಿನ್ನ ನಿಜಭಕ್ತಿಯುತ ಸೇವೆ, ಗಂಗೆಯ ಗಾಢಪ್ರೇಮ, ಅಕ್ಕನ ಆಳವಾದ ಅಕ್ಕರತೆ..... ನಾನು ಸುದೈವಿ ಸಂಗಯ್ಯ!

ಅಕ್ಕನಾಗಮ್ಮ : ಇವೆಲ್ಲಕ್ಕೂ ಅನುಭವ ಮಂಟಪದ ಅರಿವಿನ ಅಮೃತ ಶರಧಿಯೇ ಕಾರಣವಲ್ಲವೆ ಬಸವಣ್ಣ? ನಮ್ಮ ಬಾಳಿನಲ್ಲಿ ಬೆಳಕಿನ ಕಣವೊಂದು ಹುಟ್ಟಿದ್ದರೆ ಅದು ನಿನ ಜೀವನಜ್ಯೋತಿಯ ಕಿಡಿಯೊಂದು - ಅನುಭವಮಂಟಪದ ಜ್ಞಾನದೀಪದ ಕುಡಿಯೊಂದು!

ಬಸವ : ಅನುಭವಮಂಟಪವೀಗ ಪ್ರಾಣವಿಲ್ಲದ ದೇಹವಕ್ಕ! ಅದರ ಪೀಠವನ್ನು ಮಹಾಪ್ರಭುವೊಬ್ಬನು ಅಲಂಕರಿಸಿದಾಗಲೇ ನಮ್ಮೆಲ್ಲರ ಸೂಕ್ಷ್ಮ ಲೋಪ ದೋಷಗಳ ನಿವಾರಣೆ. ಅವನ ಬರವಿಗಾಗಿ ಪ್ರಾಣಪಕ್ಷಿ ದೆಸೆದೆಸೆಗಳೆಲ್ಲವನ್ನೂ ಹುಡುಕಿ ಹಾರೈಸುತ್ತಲಿದೆ. (ಪರವಶನಾಗಿ)

ರಾಗ : ದುರ್ಗಾ ತಾಳ : ಜಲದೇಕ್ಕಾ

ಹೊಲಬುಗೆಟ್ಟ ಶಿಶುವು ತನ್ನ । ತಾಯನರಸುವಂತೆ।

ಬಳಿದಪ್ಪಿದ ಪಶುವು ತನ್ನ । ಹಿಂಡನರಸುವಂತೆ ॥ಪ॥

ಬಯಸುತಿರ್ದೆನಯ್ಯ ನಿಮ್ಮ । ಶರಣರ ಬರವನು॥

ಬಯಸುತಿರ್ದೆನಯ್ಯ ನಿಮ್ಮ । ಭಕ್ತರ ಬರವನು ॥೧॥

ದಿನಕರನುದಯಕ್ಕೆ ಕಮಲ । ವಿಕಸಿತವಾದಂತೆ ಎನಗೆ ।

ನಿಮ್ಮ ಶರಣರ ಬರವು । ಕೂಡಲಸಂಗಮದೇವ ॥೨॥

ಅಕ್ಕನಾಗಮ್ಮ : ಸೂರ್ಯನುದಯ ತಾವರೆಗೆ ಜೀವಾಳ. ಚಂದ್ರನುದಯ ನೈದಿಲೆಗೆ ಜೀವಾಳ, ಕೂಡಲಸಂಗನ ಶರಣರ ಬರವೇ ನನಗೆ ಪ್ರಾಣಜೀವಾಳ!

ಗಂಗಾ : ದೇವಾ, ನಮ್ಮ ನಾರೀವರ್ಗದ ಉದ್ಧಾರಕ್ಕಾಗಿ ಮಹಾದೇವಿಯೊಬ್ಬಳು ಬರುವುದಿಲ್ಲವೆ? ಶರಣೆಯರ ಬಳಗವೂ ಈಗ ಮಾತಾಯಿಯೊಬ್ಬಳ ಬರವನ್ನೇ ನಿರುಕಿಸುತ್ತಲಿದೆ.

ಬಸವ : ಬಂದೇಬರುವಳು ಅಕ್ಕಾ – ಯಾವುದೇ ದೇಶದ, ಯಾವುದೇ ಕಾಲದ, ಯಾವುದೇ ಧರ್ಮದ ಯೋಗಿನಿಯರನ್ನು ಸರಿಗಟ್ಟಿ ನಿಲ್ಲಬಲ್ಲ ಕಲ್ಯಾಣದ ಶರಣೆಯರ ಬಳಗಕ್ಕೆ ಹಿರಿಯಕ್ಕನಾಗಿ ಬೆಳಗಬಲ್ಲ ಮಹಾದೇವಿಯೊಬ್ಬಳು ನಿಶ್ಚಯವಾಗಿ ಬರುವಳು. ಅಕ್ಕನ ಆಗಮನದಿಂದ ನಮ್ಮ ಶರಣೆಯರಲ್ಲಿ ನವಜೀವನದ ಸಂಚಾರವಾಗುವದು – ಹೊಸಹುಟ್ಟು ತಲೆದೋರಿ ಕಲ್ಯಾಣದ ಶರಣೆಯರು ವಿಶ್ವವಂದ್ಯರಾಗುವರು.

ನಾಗಲಾಂಬೆ : ಬಸವಣ್ಣ ನಿನ್ನ ಆತ್ಮೀಯ ಆಕರ್ಷಣ ಶಕ್ತಿಯೇ ಆಗಾಧವಾದುದು. ಜಂಬೂದ್ವೀಪದ ಸಕಲ ಭಾಗಗಳಿಂದ ಶರಣರು ಸಾವಿರ ಸಾವಿರವಾಗಿ ಬರುತ್ತಲಿರುವದು ಯಾರ ಶಕ್ತಿಯ ಫಲ? ಅಯ್ಯಾ ವೈಷ್ಣವರಾದವರು ವಿಷ್ಣುವಂ ಬಿಟ್ಟು ಕಳೆದು ಲಿಂಗಭಕ್ತರಾದರು ಕೆಲವರು. ಅಯ್ಯ ಜೈನರಾದವರು ತಮ್ಮ ಜಿನಧರ್ಮವಂ ಬಿಟ್ಟು ಕಳೆದು ಶಿವಲಿಂಗಭಕ್ತರಾದರನೇಕರು. ಅಯ್ಯಾ ದ್ವಿಜರಾದವರು ತಮ್ಮ ಕರ್ಮಂಗಳ ಬಿಟ್ಟು ಕಳೆದು ಶಿವಲಿಂಗಭಕ್ತರಾದರನೇಕರು. ಶಿವಲಿಂಗವ ಬಿಟ್ಟು ಇವ ಹಿಡಿದವರುಳ್ಳರೇ ಹೇಳಿರಯ್ಯ. ಸಕಲ ದೈವಂಗಳಿಗೆ, ಸಕಲ ಸಮಯಂಗಳಿಗೆ ಘನಮಹಿಮನೆಂದು ನಿಮಗೆ ನಾನು ಶರಣುವೊಕ್ಕೆನಯ್ಯ ಬಸವಪ್ರಿಯ ಕೂಡಲ ಚನ್ನಸಂಗಮದೇವಾ.

ಬಸವ : ಅಕ್ಕಾ – ನೀನು ನನ್ನನ್ನು ಹೊಗಳಿ ಹೊನ್ನ ಶೂಲಕ್ಕೇರಿಸಬೇಡ. ಎಲ್ಲ ಸಂಗಯ್ಯನ ಇಚ್ಛೆ. ಅದಕ್ಕೆ ತಲೆಬಾಗಿ ಜಗಚ್ಚಕ್ರವು ಉರುಳುವದು. ನಾವೂ ಆ ಇಚ್ಛೆಯ ಸ್ಪಂದನಗಳಿಗೆ ಕುಣಿಯುವ ಬೊಂಬೆಗಳು. ಲಿಂಗಯ್ಯನನ್ನೇ ಅರ್ಚಿಸಿ ನಮ್ಮ ಕಾರ್ಯಕ್ಕೆ ಬಲವನ್ನೂ ಗೆಲವನ್ನೂ ಕೋರೋಣ ನಡೆಯಿರಿ.

ರಾಗ : ಮಿಶ್ರಪಹಾಡಿ ತಾಳ : ವಾಲಿ ಚಾಲ : ಆದಿ ಬೀಜ ಏಕ......

ಆಡಿ ಕಾಲು ದಣಿಯವು, ನೋಡಿ ಕಣ್ಣು ದಣಿಯವು, ಮಾಡಿ ಕೈ ದಣಿ
ಯವು ॥ ಹಾಡಿ ನಾಲಿಗೆ ದಣಿಯದು, ಇನ್ನೇವೆ ॥ ಕಾಲುದಣಿಯವು ॥
ನಾ, ನಿಮ್ಮ ಕೈಯಾರೆ ಪೂಜಿಸಿ । ಮನದಣಿಯಲೊಲ್ಲದು, ಇನ್ನೇವೆ,
ಇನ್ನೇವೆ ॥ ಕಾಲು ದಣಿಯವು ॥ ಕೂಡಲ ಸಂಗಮದೇವ ಕೇಳಯ್ಯ ।
ನಿಮ್ಮುದರವ ಬಗೆದಾನು ಹೋಗುವ ಭರವೆನಗೆ ॥ ಕಾಲು ದಣಿಯವು ॥

ನಾಗಲಾಂಬೆ : ಬಹು ಸುಂದರ ಗೀತೆ ಬಸವಣ್ಣ. ಆದರೆ ನಮ್ಮ ನೀಲಾಂಬಿಕೆಯು ನಿನಗಿಂತಲೂ ಸುಂದರವಾಗಿ ಹಾಡುತ್ತಾಳೆ. ಇದಕ್ಕೆ ಉತ್ತರವಾಗಿ ಒಂದು ವಚನ ಹಾಡು ನೀಲಾಂಬೆ!

ನೀಲಾಂಬೆ : ಇಲ್ಲ ತಾಯಿ – ನಾನೇನ ಹಾಡಬಲ್ಲೆ?

ಗಂಗಾಂಬೆ : ಇಲ್ಲ ತಂಗಿ – ನೀನು ಹಾಡಲೇ ಬೇಕು. ನನ್ನಾಣೆ ಹಾಡಬೇಕು.

ನೀಲಾಂಬೆ : ರಾಗ : ಮಿಶ್ರಪೀಲು ತಾಳ : ಖವಾಲಿ

ಎನ್ನ ಕಾಯವ ದಂಡಿಗೆಯ ಮಾಡಯ್ಯ । ಎನ್ನ ಶಿರವ ಸೋರೆಯ ಮಾಡಯ್ಯ ॥ಪ॥ ಎನ್ನ ನರವ ತಂತಿಯ ಮಾಡಯ್ಯ ಎನ್ನ ಬೆರಳ ಕಡ್ಡಿಯ ಮಾಡಯ್ಯ ॥೧॥ ಬತ್ತೀಸರಾಗವ ಹಾಡಯ್ಯ । ಉರದಲೊತ್ತಿ ಬಾರಿಸು ಕೂಡಲ ಸಂಗಯ್ಯ ॥೨॥

ಬಸವ : ನೀಲಾ, ಈ ವಚನವನ್ನು ಎಂದು ಕಲಿತೆ? ನಿನ್ನ ಮುಖದಿಂದ ಬಂದ ವಚನಗಳು ಅಪೂರ್ವ ಶೋಭೆಯನ್ನು ಪಡೆಯುತ್ತವೆ; ನಿನ್ನ ಮಂಜುಳ ಕಂಠದಿಂದ ಬಂದು ಕಸವೂ ಕೂಡ ರಸವಾಗುತ್ತದೆ. ಅಕ್ಕಾ ನಾನು ಸೋಲನ್ನು ಒಪ್ಪಿದೆ. ನಡೆಯಿರಿ, ಲಿಂಗಯ್ಯನ ಪೂಜೆಗೆ! (ಹೋಗುವರು)

(ಪ್ರಭು ಸಿದ್ಧರಾಮರ ಪ್ರವೇಶ)

ಪ್ರಭು : ಸಿದ್ಧರಾಮಯ್ಯ! ಕಲ್ಯಾಣದ ವೈಭವವನ್ನು ನೋಡಿದೆಯಾ? ಕಲ್ಯಾಣವಿಂದು ಸತ್ಯದ ಸಾಗರ, ಭಕ್ತಿಗೆ ತವರ್ಮನೆ, ಮುಕ್ತಿಗೆ ಮುಖ, ಪುಣ್ಯದ ಪುಂಜ, ಅಭಿನವಕೈಲಾಸ! ಈ ಕಲ್ಯಾಣವೆಂಬ ಪ್ರಣತೆಯಲ್ಲಿ ಭಕ್ತಿರಸವೆಂಬ ತೈಲವನೆರೆದು ಅಚಾರವೆಂಬ ಬತ್ತಿಗೆ ಬಸವಣ್ಣನೆಂಬ ಜ್ಯೋತಿಯ ಮುಟ್ಟಿಸಲು ತೊಳಗಿ ಬೆಳಗುತಿರ್ದುದಯ್ಯ ಶಿವನ ಪ್ರಕಾಶ! ಈ ಪ್ರಕಾಶದೊಳಗೊಪ್ಪುತ್ತಿರುವರು ಅಸಂಖ್ಯಾತ ಭಕ್ತರು. ಭಕ್ತರಿದ್ದ ನೆಲವೇ ಅವಿಮುಕ್ತ ಕ್ಷೇತ್ರ! ಶರಣರ ಮನೆಯಂಗಳವೇ ವಾರಣಾಸಿ! (ಮುಂದೆ ಬಂದು) ನೋಡಿದೆಯಾ, ಎಂಥ ಶಾಂತಿ ಪಸರಿಸಿದೆ ಬಸವಣ್ಣನವರ ಮನೆಯಲ್ಲಿ! ಪ್ರಪಂಚದ ಪ್ರಾಣಿಕೋಟಿಯ ಪುನರುತ್ಥಾನಕ್ಕಾಗಿ ಬಂದ ಪರಮ ಕಾರುಣಿಕನ ಶಾಂತಿ ಸದನವಿದೆಂದು ನೋಡಿದೊಡನೆಯೇ

ಹೇಳಬಹುದಲ್ಲವೆ? ಕಲ್ಯಾಣವು ಶರಣರ ಮಹಾಮನೆ; ಇದನ್ನು ಕಟ್ಟಿದಾತ ಬಸವಣ್ಣ! ಶರಣಗುರು ಬಸವಣ್ಣ, ಪ್ರಮಥನಾಯಕ ಬಸವಣ್ಣ, ಸತ್ಯಶುದ್ಧ ನಿತ್ಯ ನಿಜೈಕ್ಯ ಬಸವಣ್ಣ; ಕವಿಪಂಡಿತ ಗಾಯಕ ಚಕ್ರವರ್ತಿ ಬಸವಣ್ಣ, ರುದ್ರಲೋಕವ ಮರ್ತ್ಯಲೋಕಕ್ಕೆಳೆದು ತಂದಾತ ಬಸವಣ್ಣ! ಇಂತಹ ಬಸವಣ್ಣನ ಭಕ್ತಿಯನು ಒರೆದೊರೆದು ನೋಡಿ, ಪ್ರಬಲಿತವಮಾಡುವ ಆಶ್ವಪತಿ, ಗಜಪತಿ, ನರಪತಿರಾಯ, ರಾಜಾಧಿರಾಜ ಬಿಜ್ಜಳರಾಯ! ಸಿದ್ಧರಾಮಯ್ಯ, ಇಂದು ಕಲ್ಯಾಣವು ಜಗತ್ಕಲ್ಯಾಣಕ್ಕಾಗಿ ಕಂಕಣ ಕಟ್ಟಿದೆ; ಮಾನವಲೋಕದ ಕಲ್ಯಾಣವು ಕಲ್ಯಾಣದ ಶರಣರಿಂದಲೇ ಆಗಬೇಕಾಗಿದೆ; ಬಸವರಸನಿಂದಲೇ ವಸುಧೆಯ ಉದ್ಧಾರವಾಗಬೇಕಾಗಿದೆ!

ಸಿದ್ಧರಾಮ : ಪ್ರಭುವೆ, ನಿಮ್ಮ ಸಂಗನಬಸವಣ್ಣ ಬಂದು ಕಲ್ಯಾಣದಲ್ಲಿ ಮನೆಯ ಕಟ್ಟಿದರೆ ಮರ್ತ್ಯಲೋಕವೆಲ್ಲವು ಭಕ್ತಿಸಾಮ್ರಾಜ್ಯವಾಯಿತ್ತು! ಆ ಮನೆಗೆ ತಲೆಬಾಗಿ ಹೊಕ್ಕವರೆಲ್ಲರೂ ನಿಜಲಿಂಗಪದವನ್ನು ಪಡೆದರು. ಕಪಿಲಸಿದ್ಧ ಮಲ್ಲಿನಾಥ, ನಾನು ನೋಡಲೆಂದು ಹಲಕಾಲ ತಪಿಸಿದ ಸಂಗನಬಸವಣ್ಣನ ಮಹಮನೆಗೆ ನಮೋ ನಮೋ ಎಂದು ಬದುಕಿದೆನು!

(ಮತ್ತೊಂದು ಬದಿಯಿಂದ ಚನ್ನಬಸವನು ಬರುವನು)

ಚನ್ನಬಸವ : ದಯಮಾಡಿಸಿರಿ ಮಹಾನುಭಾವರೆ! ಬಹುದೂರದಿಂದ ಬಳಲಿ ಬಂದಂತಿದೆ. ಸಂಕೋಚಕ್ಕೆ ಕಾರಣವಿಲ್ಲ; ಒಳಗೆ ನಡೆಯಿರಿ. ನಿರ್ಮಲೋದಕವನ್ನು ಮಿಂದು ಲಿಂಗಾರ್ಚನೆಯನ್ನು ತೀರಿಸಿಕೊಳ್ಳಿರಿ.

ಪ್ರಭು : (ರಾಮಯ್ಯನಿಗೆ) ರಾಮಯ್ಯ – ಬಸವರಾಜದೇವರ ಅಳಿಯ ಚನ್ನಬಸವಯ್ಯನೀತ. ಸ್ವಲ್ಪ ವಿನೋದಮಾಡಿ ಇವರಿಬ್ಬರ ಅಂತರಂಗದ ಉಜ್ವಲತೆಯನ್ನು ಹೊರಗೆಡಹೋಣ. (ಚನ್ನಬಸವನಿಗೆ) ಇವರು ಸೊನ್ನಲಾಪುರದ ಸಿದ್ಧರಾಮಯ್ಯ, ನನ್ನನ್ನು ಅಲ್ಲಮನೆಂದು ಕರೆಯುತ್ತಾರೆ. ನಾವಿಬ್ಬರೂ ತೀವ್ರ ಬಸವರಸರನ್ನು ಕಾಣಬೇಕಾಗಿದೆ.

ಚನ್ನಬಸವ : (ಒಳಗೆ ನೋಡಿ) ಬಸವಣ್ಣ, ಬಸವರಸಾ, ಬಸವಿದೇವಾ ಸೊನ್ನಲಾಪುರದಿಂದ ಸಿದ್ಧರಾಮದೇವರೂ ಪ್ರಭುದೇವರೂ ದಯಮಾಡಿಸಿದ್ದಾರೆ. ಬೇಗಬಾ! (ಒಳಗಿನಿಂದ ಉತ್ತರವಿಲ್ಲ) ಮಹಾನುಭಾವರೆ, ಬಸವರಸರು ಲಿಂಗಾರ್ಚನೆಗೆ ಕುಳಿತಿರಬಹುದು. ತಾವು ನಡೆಯಿರಿ!

ಪ್ರಭು : (ರಾಮಯ್ಯನಿಗೆ) ನೋಡಿದೆಯಾ ಸಿದ್ಧರಾಮಯ್ಯ– ಬಸವಣ್ಣನ ಲಿಂಗಪೂಜಾ ಪಾರವಶ್ಯವನ್ನು? ಇನ್ನು ಸ್ವಲ್ಪ ಕಾಡಿ ಬಸವಣ್ಣನ ಬಗೆಯ ಸೊಬಗನ್ನು ಬೈಲಿಗೆಳೆಯೋಣ. (ಪ್ರಕಾಶ) ಚನ್ನಬಸವಯ್ಯ, ನಾವೇನೂ ಕಾಡಿ ಪದಾರ್ಚನೆಯ ಮಾಡಿಸಿಕೊಂಡು, ಒಡಲ ಕಕ್ಕುಲತೆಗೆ ಅಶನವನುಂಡು, ವ್ಯಸನದ ಕಕ್ಕುಲತೆಗೆ ಹಣವ ಬೇಡಿ, ಕೊಟ್ಟರೆ ಕೊಂಡಾಡಿ ಕೊಡದಿದ್ದರೆ ದೂರಿಕೊಂಡು ಹೋಗುವ

ಜಂಗಮರಲ್ಲ! ಮಮಕಾರವು ಮುಗುಳೊಡೆದ ಮಂತ್ರಿಗಳ ಮನೆಯಲ್ಲಿ ನಮಗೇಕೆ ಪ್ರವೇಶ? ಬಾಗಿಲಲ್ಲಿ ನಿಂತು ಬಾಯಿಬಿಟ್ಟು ಕರೆದರೂ ಬಾರದ ಬಸವಣ್ಣನ ಬಣ್ಣ ಬಯಲಿಗೆ ಬಿದ್ದಿತು!

ಸಿದ್ಧರಾಮ : ಚನ್ನಯ್ಯ- ನಾವು ಬಂದದ್ದರಿಂದ ಮಹಾಮಂತ್ರೀಶ್ವರರಾದ ಬಸವಣ್ಣನವರಿಗೆ ತೊಂದರೆಯಾಗಿರಬಹುದಲ್ಲವೆ? ಅವರು ದೊಡ್ಡವರು, ಅವರಿಗೆ ತೊಂದರೆ ಕೊಡಲು ನಮಗೆ ಇಷ್ಟವಿಲ್ಲ. ಪ್ರಭುವೇ, ನಡೆಯಿರಿ. ನಮಗಿಲ್ಲಿ ನಿಲ್ಲುವದು ಸಲ್ಲದು.

ಚನ್ನಬಸವ : ಮಹಾತ್ಮರೇ - ಬಸವಣ್ಣನೇ ನಾನಾಗಿ ಪ್ರಾರ್ಥಿಸುತ್ತೇನೆ ಆತನ ತಪ್ಪನ್ನು ಕ್ಷಮಿಸಿರಿ. ಇದೇ ಈಗ ಕರೆದುತರುತ್ತೇನೆ. (ಸ್ವಲ್ಪ ಮುಂದೆ ಹೋಗಿ) ಬಸವರಸಾ- ಕೂಡಲ ಚನ್ನಸಂಗನ ಶರಣರು ಪ್ರಭುದೇವರು ಸಿದ್ಧರಾಮಯ್ಯನವರು ಕೋಪಿಸಿ ನಿಂತಿದ್ದಾರೆ. ತಿಳಿಯಬಾರದೆ? ಕಣ್ಣರಿಯದಿದ್ದರೂ ಕರುಳರಿಯದೆ?

ಬಸವ : (ಬೇಗಬಂದು ಅಡಿಗೆರಗಿ) ಪ್ರಭುವೇ, ಬಂದೆಯಾ ಹಗಲಿರುಳು ನಿನ್ನ ಬರವನೇ ಹಾರೈಸಿ ಹಲುಬುತ್ತಲಿದ್ದೆ! ಅಹಾ, ಇಂದೆನ್ನ ಒಡೆಯನ ಆಗಮನವಾಯಿತು. ಎನ್ನ ಪ್ರಭುವಿನ ಬರವೇ ನನ್ನ ಪ್ರಾಣದ ಬರವಾಯಿತು! ಸಾಸಿವೆಯ ಮೇಲೆ ಸಾಗರವನ್ನಿರಿಸಿದಂತಾಯಿತು! ಆನಂದದಿಂದ ನಲಿನಲಿದಾಡುವೆನು! ಕೂಡಲಸಂಗನ ಶರಣರು ಬಂದರೆ ಉಬ್ಬಿ ಕೊಬ್ಬಿ ಹರುಷದೊಳೋಲಾಡುವೆನು?

ಪ್ರಭು : ಬಸವಯ್ಯ - ಅದೆಷ್ಟೋ ಹೊತ್ತು ಬಾಗಿಲಲ್ಲಿ ಬಂದು ನಿಂತರೂ ಲಕ್ಷ್ಯಕ್ಕೆ ಬರಲಿಲ್ಲ; ಈಗ ಬಣ್ಣದ ಮಾತುಗಳನ್ನಾಡಿದರೆ ಮನದ ನೋವು ಮಾಯವಾಗಬಲ್ಲುದೆ?

ಬಸವ : ಎನ್ನ ತಪ್ಪು ಅನಂತಕೋಟಿ; ನಿಮ್ಮ ಸೈರಣೆಗೆ ಲೆಕ್ಕವಿಲ್ಲ. ಇನ್ನು ತಪ್ಪಿದೆನಾದೊಡೆ ನಿಮ್ಮ ಪಾದವೇ ಸಾಕ್ಷಿ. ದೇವಾ, ನಾನು ಮರವೆಯ ಮರುಳು ನೀನು ಅರುಹಿನ ತಿರುಳು; ನಾನು ರಂಜಕ, ನೀನು ನಿರಂಜನ; ನಾನು ಪಶು, ನೀನು ಪಶುಪತಿ. ನಾನು ಮದದಲ್ಲಿ ಭ್ರಮಿಸಿ ತಪ್ಪಿದ್ದನ್ನು ನೀನು ನಿನ್ನ ಗುಣದಿಂದ ಕ್ಷಮಿಸು ತಂದೆ! ನನ್ನ ಕೊರತೆಯನ್ನು ನೋಡದಿರು. ಪ್ರಪಂಚದ ಡಂಭಿನಲ್ಲಿ ಎನ್ನದೊಂದು ರೂಪವಮಾಡಿ ನೀವಿರಿಸಿರುವಿರಿ; ಮಾವಿನಕಾಯಿಯೊಳಗೊಂದು ಎಕ್ಕೆಯ ಕಾಯಿ ನಾನು ಆದರೇನಾಯ್ತು?

ರಾಗ : ಬಹಾರ ತಾಳ : ತ್ರಿತಾಲ

ಮೇರು ಗುಣವನರಸುವದೇ ಕಾಗೆಯಲ್ಲಿ? ಪರುಷ ಗುಣವನರಸುವದೆ

ಕಬ್ಬುನದಲ್ಲಿ?॥ ಸಾಧು ಗುಣವನರಸುವದೇ ಅವಗುಣಿಯಲ್ಲಿ? ಚಂದನ

ಗುಣವನರಸುವದೆ? ತರುಗಳಲ್ಲಿ ॥೧॥ ಸರ್ವಗುಣ ಸಂಪನ್ನ ಲಿಂಗವೇ,

ನೀನೆನ್ನಲ್ಲಿ । ಅವಗುಣವನರಸುವದೇ ಕೂಡಲಸಂಗಯ್ಯಾ? ॥೨॥

ಪ್ರಭುವೆ, ನೀನು ನನ್ನನ್ನು ಕ್ಷಮಿಸದಿದ್ದರೆ ಯಾರು ನನ್ನನ್ನು ರಕ್ಷಿಸುವವರು? ಒಲೆಹತ್ತಿ ಉರಿದೊಡೆ ನಿಲಬಹುದಲ್ಲದೆ ಧರೆಹತ್ತಿ ಉರಿದೊಡೆ ನಿಲ್ಲಬಹುದೆ? ಏರಿ ನೀರುಂಬೊಡೆ, ಬೇಲಿ ಕೆಯಿಮೇವೊಡೆ, ನಾರಿಯಾ ಮೊಲೆಹಾಲು ವಿಷವಾಗಿ ಕೊಲುವಡೆ ಇನ್ನಾರಿಗೆ ದೂರುವೆ?

ಸಿದ್ಧರಾಮ : ಬಸವಿದೇವಾ, ಇಷ್ಟೆಲ್ಲ ಮಾತನಾಡುವ ನೀವು ಇಷ್ಟು ಹೊತ್ತು ನಮ್ಮನ್ನು ದಾರಿಕಾಯಿಸಿದ್ದೇಕೆ?

ಬಸವ : ನನ್ನನ್ನು ಕ್ಷಮಿಸಿರಿ; ಲಿಂಗಾರ್ಚನೆಯಲ್ಲಿ ಮೈಮರೆತಿದ್ದ ನಾನು ತಮ್ಮನ್ನು ದಾರಿಕಾಯಿಸಿದ್ದಕ್ಕಾಗಿ ನನ್ನನ್ನು ಕ್ಷಮಿಸಿರಿ.

ಪ್ರಭು : ಜಂಗಮವೆ ಹೊರಗಿರಲು ಒಳಗೆ ಲಿಂಗಾರ್ಚನೆ ಆವುದಯ್ಯ? ಪ್ರಾಣವ ಹೊರಗಿರಿಸಿ ಎಡೆಯಾಡುವ ದೇಹವುಂಟೆ? ಶರಣರು ಬಂದು ಬಾಗಿಲಲ್ಲಿ ನಿಂದಿರಲು ತನ್ನ ತಾ ಮರೆದವರ ಕಂಡರೆ ನಮ್ಮ ಗುಹೇಶ್ವರಲಿಂಗ ಮೆಚ್ಚನು!

ಬಸವ : ಮುನ್ನೂರರವತ್ತುದಿನ ಸಾಧನೆಯಮಾಡಿ ಕಳನೇರಿ ಕೈಮರೆದಂತಾಯಿತ್ತೆನ್ನ ಭಕ್ತಿ! ಜಂಗಮಲಿಂಗವಾಗಿ ಬಂದು ನೀವಿರುತ್ತಿರಲು ಸ್ಥಾವರಕ್ಕೆ ಮೆಚ್ಚಿ ಮರುಳಾದೆನು. ಇಂದೆನ್ನ ತಪ್ಪು ತಿಳಿಯಿತು. ಪ್ರಭುವೆ, ನಿಮ್ಮ ಶರಣರಿಗಿನ್ನು ತ್ರಿಕರಣವನೊಪ್ಪಿಸಿ ಶುದ್ಧನಾಗುವೆ. ಹೊನ್ನಿನೊಳಗೊಂದೊರೆಯ, ಸೀರೆಯೊಳಗೊಂದೆಳೆಯ ಇಂದಿಂಗೆ ನಾಳಿಂಗೆ ಬೇಕೆಂದೆನಾದರೆ ನಿಮ್ಮಾಣೆ. ನಿಮ್ಮ ಶರಣರಿಗಲ್ಲದೆ ಮತ್ತೊಂದನರಿಯೆ. ಪ್ರಭುವೆ, ತನುವ ಬೇಡಿದೊಡೀವೆ ಮನವ ಬೇಡಿದೊಡೀವೆ ಧನವ ಬೇಡಿದೊಡೀವೆ ಶರಣರಿಗೆ.

ಪ್ರಭು : ಬಸವಣ್ಣ, ಸಚರಾಚರವೆಲ್ಲವು ಗುಹೇಶ್ವರನ ದಾನ; ಚತುರ್ದಶ ಭುವನಂಗಳೆಲ್ಲವು ಲಿಂಗದ ಸೊಮ್ಮು - ನೀನೇನಕೊಟ್ಟು ಭಕ್ತನಾದೆ? ಅನಿತ್ಯವನು ನಿತ್ಯಕ್ಕರ್ಪಿಸಿ ಭಕ್ತನಾದೆನೆಂದರೆ ಅದು ಅಜ್ಞಾನ, ಮೇಲಾಗಿ ಹಮ್ಮಿನ ಭಕ್ತಿ ಕರ್ಮಕ್ಕೆ ಮೊದಲು ಮಾಡುವೆನೆಂಬ ಮಮಕಾರ ನಿನ್ನಲ್ಲಿರಲು ಭಕ್ತನು ಹೇಗಾಗಬಲ್ಲೆ?

ಬಸವ : ದೇವಾ, ನಿಮಗೆ ಮಾಡಿದೆನೆಂದು ನುಡಿದು ನಾನು ಕೆಟ್ಟ ಕೇಡಿಂಗೆ ಕಡೆಯಿಲ್ಲ. ಮಾಡಿದೆನೆಂಬುದು ಮನದಲ್ಲಿ ಹೊಳೆದರೆ ಏಡಿಸಿ ಕಾಡಿತ್ತು ಶಿವನ ಡಂಗುರ. ಮಾಡಿದೆನೆನ್ನದಿರಾ ಲಿಂಗಕ್ಕೆ; ಮಾಡಿದೆನೆನ್ನದಿರಾ ಜಂಗಮಕ್ಕೆ ಮಾಡಿದೆನೆಂಬುದು ಮನದಲ್ಲಿಲ್ಲದಿರೆ ಬೇಡಿದ್ದನೀವ ಕೂಡಲಸಂಗಮದೇವ. ಎನ್ನ ಸುಜ್ಞಾನ ಸತ್ಪಥದರ್ಶಕ ಗುರುವೆ! ಎನ್ನ ತಪ್ಪ ಸೈರಿಸಿ, ಭಕ್ತಿಯನ್ನು ಸ್ವೀಕರಿಸಿ ಉದ್ಧರಿಸಿರಿ.

ಚನ್ನಬಸವ : ಮಹಾನುಭಾವರೆ, ನಾನೂ ನಿಮಗೆ ಶಿರಬಾಗಿ ಬೇಡುವೆ. ನಮ್ಮ ತಪ್ಪನ್ನು ಮರೆದು ಶೂನ್ಯಸಿಂಹಾಸನವನ್ನು ಅಲಂಕರಿಸಿ ನಮಗೆ ಧೃವತಾರೆಯಂತೆ ಮಾರ್ಗದರ್ಶಕರಾಗಿರಿ. ಪ್ರಾಣವಿಲ್ಲದ ದೇಹದಂತಿರುವ ಅನುಭವ ಮಂಟಪದಲ್ಲಿ ಚೈತನ್ಯಕಳೆಯನ್ನು ತುಂಬಿ ಬಸವಣ್ಣನು ಕೈಕೊಂಡಿರುವ ತೊಡಕುಗಳಿಂದ ತುಂಬಿದ ಕಠಿಣಕಾರ್ಯವನ್ನು ಸಾಂಗಗೊಳಿಸಿರಿ!

ಪ್ರಭು : (ಓರೆಯಾಗಿ) ನೋಡಿದೆಯಾ ಸಿದ್ಧರಾಮಯ್ಯ ಸೂರ್ಯ ಚಂದ್ರರಂತೆ ಬೆಳಗುವ ಈ ತೇಜೋಮೂರ್ತಿಗಳನ್ನು? ನಾಳೆ ಇದೇ ಚನ್ನಣ್ಣನಿಂದ ನಿನಗೆ ಇಷ್ಟಲಿಂಗದೀಕ್ಷೆಯಾಗುವದು. (ಪ್ರಕಾಶ) ಆಗಲಯ್ಯಾ, ನಡೆಯಿರಿ, ನಡೆಯಲ್ಲಿ ಹೇಗಿದ್ದರೂ ನುಡಿಯಲ್ಲಿ ಚತುರರಿದ್ದೀರಿ!

ಬಸವ : (ಹಿಗ್ಗಿ) ಅಹಾ, ನನ್ನ ಹಾರಿಹೋದ ಹರಣವು ತಿರುಗಿ ಬಂದಂತಾಯಿತು! ಹೀಗೆ ಬನ್ನಿ ತಂದೆ!

(ತೆರೆ ಬೀಳುವುದು)

ನೋಟ–೨

(ಕಲ್ಯಾಣದ ಹೊರಗೆ ಒಂದು ತೋಟ–ಎದುರಿಗೆ ದೊಡ್ಡ ಹುತ್ತ ಇನ್ನೊಂದು ಕಡೆಗೆ ಬನ್ನಿಯಮರದ ಕೆಳಗೆ ಕಲ್ಲನಾಗರ)

ಲಕ್ಷ್ಮಿಯು ತನ್ನ ಮಗ ಚೆನ್ನಮಲ್ಲನೊಡನೆ ಹಾಲುಹೊಯ್ಯಲು ಹೊರಟಿದ್ದಾಳೆ. ನಾಗರ ಪಂಚಮಿಯ ನಿಮಿತ್ತ ಹೊಸಸೀರೆ, ಕೊರಳಲ್ಲಿ ನೂಲಮಾಲೆ, ತಲೆಯಮೇಲೆ ಬುಟ್ಟಿ. ಗಂಡನು ಹಿಂಬಾಲಿಸಿ ಬರುತ್ತ:–

ಗಂಡ : ಏನೇ – ಇದೆತ್ತ ಸಾಗಿರುವಿ?

ಲಕ್ಷ್ಮಿ : ಗೊತ್ತಿಲ್ಲವೆ ನಿನಗೆ? ನಾಗರಪಂಚಮಿ ಇವತ್ತು. ನಾಗಪ್ಪನಿಗೆ ಹಾಲು ಹೊಯ್ಯಲು ನಡೆದಿದ್ದೇನೆ.

ಗಂಡ : ಹುಚ್ಚೀ, ಇಂಥ ಕಿರುಕುಳದೇವರನ್ನು ನಂಬಬಾರದೆಂದು ಬಸವಣ್ಣನವರು ಹೇಳಿರುವುದನ್ನು ಕೇಳಿಲ್ಲವೇನು? ಹಬ್ಬವಿದ್ದರೆ ಮನೆಯಲ್ಲಿಯೇ ಉಣ್ಣಲಿಕ್ಕೇನಾಗಿದೆ ನಿನಗೆ?

ಲಕ್ಷ್ಮಿ : (ರೇಗಿ) ಬಸವಣ್ಣ, ಬಸವಣ್ಣ ಬಸವಣ್ಣ ! ದಿನಾ ನೀನು ಆತನ ಸುದ್ದಿ ಹೇಳೋದು ಕೇಳಿ ಕೇಳಿ ಸಾಕಾಗಿ ಹೋಯ್ತು ಎಲ್ಲಿದ್ದ ಎದ್ದು ಬಂದಾ ಅಂತೀನಿ ಈತ ಜನರ ತಲಿಕೆಡಿಸಾಕ? (ಬುಟ್ಟಿ ಕೆಳಗಿಟ್ಟು) ಬಸವಣ್ಣ ಹೇಳೋದಾದರೂ ಏನು? ಒಂದೂ ಉಳಿಯದಂತೆ ಹೇಳು.

ಗಂಡ : ಬಸವಣ್ಣನವರು ಇಬ್ಬರು ಮೂವರು ದೇವರಿಲ್ಲ, ದೇವನೊಬ್ಬನೇ ಎಂದು ಹೇಳುತ್ತಾರೆ.

ಲಕ್ಷ್ಮಿ : ಅಯ್ಯ, ತಗಿಯು ನೀನು ಇರೋದು ಒಬ್ಬ ದೇವರು, ಕಾಯೋದು ಹದಿನಾಲ್ಕು ಲೋಕ! ಒಬ್ಬಾತನ ಕಡೆಯಿಂದ ಹ್ಯಾಗ ನೀಗೀತು ಜಗತ್ತಿನ ಕೆಲಸ? ಅದಕ ಹಿರೇರು ಮಾರೆವ್ವ, ಮಸಣೆವ್ವ, ಮಾಳವ್ವ, ಕಾಳವ್ವ, ಬೀರಪ್ಪ, ಭರಮಪ್ಪ ಅನ್ನೋ ನೂರಾರು ದೇವರನ್ನು ಮಾಡ್ಯಾರ. ನೀನು ಆಡಿದ ಮಾತು ಫಕ್ಕನೆ ಆ ಕೆಂಡದಂಥ ಹಿಂಡುದೇವರು ಕೇಳಿದರೆ ಹಿಂಡ್ಯಾವು ಜೀವಾನ! ಮತ್ತೇನು ಹೇಳ್ಯಾನ ಬಸವಣ್ಣ? ಆತಹೇಳಿದ್ದಕ ಉತ್ತರ ಸಜ್ಜ !

ಗಂಡ : ಸತ್ಯವನ್ನೇ ನುಡಿಯಿರಿ, ಹುಸಿಯ ನುಡಿದು ತಪ್ಪುವ ಪ್ರಪಂಚಿಯ ದೇವನೊಲ್ಲ ಎಂದಿದ್ದಾರೆ.

ಲಕ್ಷ್ಮಿ : ಬರೇ ಖರೇನ ಹೇಳಿದರೆ ಸುಳ್ಳು ಪರದೇಶಿ ಆಗಬೇಕಂತೇನು?

ಗಂಡ : ಕಳವು ಮಾಡಬೇಡವೆಂದು ಅಣ್ಣನವರ ಉಪದೇಶ!

ಲಕ್ಷ್ಮಿ : ಹೊಟ್ಟಿ ಹೇಗೆ ಸಾಗಬೇಕಂತೆ ಆ ಉದ್ಯೋಗ ಮಾಡೋರದು?

ಗಂಡ : ಸತ್ಯಶುದ್ಧಕಾಯಕವಮಾಡಿ ಒಡಲನ್ನು ಹೊರೆಯಬೇಕು.

ಲಕ್ಷ್ಮಿ : ಅವ್ವ ನೋಡೆ! ತನ್ನಂತೆ ಕುರ್ಚಿಯಮೇಲೆ ಕುಳಿತು ಕಾರಭಾರಾ ಮಾಡೋ ಕಾಯಕ ಎಲ್ಲರಿಗೂ ಸಿಗಬೇಕಲ್ಲ?

ಗಂಡ : ಹೆಣ್ಣುಮಕ್ಕಳನ್ನು ಮನ್ನಿಸಿ ಗೌರವಿಸಿರೆಂದು ಅಣ್ಣನವರ ಹೇಳಿಕೆ.

ಲಕ್ಷ್ಮಿ : ಬಸವಣ್ಣ ಭಾಳ ಚೆಲೋಮಾತ ಹೇಳ್ಯಾನ. ಇನ್ನೂ ಇಂಥಾ ಹತ್ತು ಮಾತು ಹೇಳಲಿ! ಅಲ್ಲಾ ಅಂದ್ರೆ ಛೀ ಅನ್ನು.

ಗಂಡ : (ಜನರ ಕಡೆಗೆ) ಹೇಗಿದೆ ಇವಳ ಹರುಕುಮುರುಕು ಚುರುಕುಬುದ್ಧಿ? (ಪ್ರಕಾಶ) ಮುಂದೆ ಕೇಳು. ಸತಿಯರಿಗೆ ಸಲಿಗೆಕೊಡಬೇಡಿರೆಂದು ಬಸವಣ್ಣನವರ ಬೋಧೆ!

ಲಕ್ಷ್ಮಿ : ಬಸವಣ್ಣ ಎಷ್ಟು ದೊಡ್ಡಾತ ಅದಾನಂದ್ರೂ ಈ ಮಾತು ಹೇಳಿದ್ದು ಅಲ್ಲ ನೋಡು! ಆತ ಹೆಣ್ಣು ಹಡೆದಿಲ್ಲ ಅಂತ ಕಾಣಿಸ್ತೈತೆ.

ಗಂಡ : ಹೊಲದಲ್ಲಿ ಗುದ್ದಲಿಯ ಮೊನೆ, ಮನೆಯಲ್ಲಿ ಕದಿರಿನ ಮೊನೆ ತಿರುಗುತ್ತಿರಬೇಕೆಂದು ಅಣ್ಣನವರು ಹೇಳಿದ್ದಾರೆ. ಶುದ್ಧ ಕೈನೂಲಿನಿಂದ ನೆಯ್ದ ಬಟ್ಟೆಗಳನ್ನೇ ಧರಿಸಿರೆಂದು ಹೇಳುತ್ತಾರೆ.

ಲಕ್ಷ್ಮಿ : ನೀನು ಹೊರು ಗುದ್ದಲಿ; ನಾನು ಮುಟ್ಟೋದಿಲ್ಲ ರಾಟಿ! 'ಜಿ. ಯ್' ಅಂತಾ ರಾಟೀತಿರುವೋ ದರಿದ್ರ ಹೋರೆ ನಾನು ಮಾಡಲಾರೆ! ಕೈನೂಲಿನ ಉರುಟುಬಟ್ಟೆಯೆಂದರೆ ನನ್ನ ಮೈಯೆಲ್ಲ ಉರಿಯುತ್ತದೆ!

ಗಂಡ : ಲಿಂಗಧಾರಣೆಯಾಗಿ ಮುಕ್ತಿಪಡೆಯಿರೆಂದು ಅಣ್ಣನವರ ಸಂದೇಶ!

ಲಕ್ಷ್ಮಿ : ನಮಗೆ ಲಿಂಗಪ್ಪ ಅಚ್ಚಿ ಬರೋದಿಲ್ಲ ಅದರ ಸುದ್ದಿಗೆ ಹೋಗಬ್ಯಾಡ, ದ್ಯಾಮವ್ವ ಇದ್ದರೆ ಸಾಕು!

ಗಂಡ : ಹಣೆಗೆ ವಿಭೂತಿಯೇ ಶೃಂಗಾರವೆಂದು ಅಣ್ಣನ ವಚನ.

ಲಕ್ಷ್ಮಿ : ಬಂಡಾರಕ ಒಡ್ಡಿದ ಹಣೆಯನ್ನು ಬೂದಿಗೆ ಒಡ್ಡಲಿಕ್ಕೆ ನಾನೇನು ಸನ್ಯಾಸಿಯೆ? ಮನಿತುಂಬ ಮಕ್ಕಳು, ಬೆಲ್ಲಾ ಒಡೆಯೋ ಕಲ್ಲಿನಂಥ ನೀನೊಬ್ಬ ಗಂಡಾ, ಕಂಣಾಗ ತೂಗಲೊಲ್ಲದೇನು?

ಗಂಡ : ಇವು ಯಾವ ಮಾತು ಕೇಳದಿದ್ದರೂ ಚಿಂತೆಯಿಲ್ಲ; ಈ ಹಾದೀ ಬೀದಿ ಕಲ್ಲಿಗೆ ಪೂಜೆಮಾಡೋದು ಒಂದು ಬಿಟ್ಟುಬಿಡೂ ಅಂತೀನಿ. ನಾಗಪ್ಪಗೆ ಹಾಲು ಹೊಯ್ಯಬೇಡ, ನಡಿ ಮನಿಗೆ!

ಲಕ್ಷ್ಮಿ: ಅಯ್ಯ ಸಿಸ್! ನಿನ್ನ ಮಾತಿಗೆ ಹೆದರಿಕೇ ಬರತಿದ್ದೀತು ನನಗೆ! ಹಿರೇರು ನಡಿಸಿಕೊಂಡುಬಂದ ನಡಾವಳಿ ಬಿಡೋದೆ? ಯಾವ ಊರಿಂದಾ ಬಂದನೋ ಮಾರಾಯ ಬಸವಣ್ಣ! (ಪುಟ್ಟಿ ಹೊತ್ತು) ಯಾವ ಊರಿಗೆ ಹೋದರೂ, ಯಾವ ಓಣಿಗೆ ಹೋದರೂ, ಕುಟ್ಟುವಲ್ಲಿ, ಬೀಸುವಲ್ಲಿ, ಮನೆಯಲ್ಲಿ, ಹೊಲದಲ್ಲಿ ದೊಡ್ಡವರು, ಸಣ್ಣವರು, ಹೆಂಗಸರು ಗಂಡಸರು 'ಬಸವಣ್ಣ' 'ಬಸವಣ್ಣ' 'ಬಸವಣ್ಣ' ಅಂತಾ ಹುಚ್ಚೆದ್ದು ಕುಣೀತಾರ! ನಡಿಯಲೋ ಚನ್ನಮಲ್ಲ, ನಾಗಪ್ಪ ಬಂತು, ಹಾಲು ಹೊಯ್ಯೋಣ ಕೂಡ್ರು. (ನಾಗಪ್ಪನನ್ನು ತೊಳೆದು ಸುಣ್ಣಬರೆದು ಕೊಬ್ಬರಿ ಬಟ್ಟಲಿನಲ್ಲಿ ಹಾಲುತುಂಬಿ) ಹಿಡಿ ಚೆನ್ನಮಲ್ಲ ಹೊಯ್ಯಿ!

ಚಿನ್ನಮಲ್ಲ : ನನ್ನ ಪಾಲು, ನಮ್ಮವ್ವನ ಪಾಲು, ನಮ್ಮಮ್ಮನ ಪಾಲು, ನಮ್ಮಜ್ಜನ ಪಾಲು..........

ತಂದೆ : ಲೇ ಕುಲಗೇಡಿ! ಬರೇ ಅವರ ಹೆಸರಲೇ ಹಾಲುಹೋಯ್ತೀದಿ, ನನ್ನ ಮರೆತೇಬಿಟ್ಟೇನು?

ಲಕ್ಷ್ಮಿ : ನಾಗಪ್ಪಗ ಹಾಲು ಹೊಯ್ಯಾರದು ಅಂದಾತಗೆ ಇದರ ಚಿಂತಿ ಯಾಕಬೇಕೊ?

ಚನ್ನಮಲ್ಲ : ನಮ್ಮಪ್ಪನ ಪಾಲು, ನಮ್ಮ ಅಕ್ಕನ ಪಾಲು, ನನ್ನ ಹೆಂಡತಿ ಪಾಲು ನನ್ನ ಮಕ್ಕಳ ಪಾಲು, ನನ್ನ............

ತಂದೆ : (ನಕ್ಕು) ಲೇ ಚೆನ್ನಮಲ್ಲ, ನಿನಗಿನ್ನೂ ೮ ವರ್ಷ ತುಂಬಿಲ್ಲಾ, ಹೆಂಡರು ಮಕ್ಕಳೂ ಆದರೇನು?

ಚೆನ್ನಮಲ್ಲ : ನಮ್ಮ ತಂಗಿ ಪಾಲು, ತಮ್ಮನ ಪಾಲು............ (ಒಮ್ಮೆಲೇ ಚಿಟ್ಟನೇ ಚೀರಿ) ಅಯ್ಯೊ ಅಯ್ಯೋ ಅಪ್ಪಾ, ಹಾವು! ಹಾವು! (ಓಡುವನು)

ತಂದೆ : ಎಲೆ ಇವನ? ಬಡಿಯಲಿಕ್ಕೆ ಏನೂ ಇಲ್ಲವಲ್ಲ? ಕಲ್ಲಲೆ ಕಲ್ಲು! ಚೆನ್ನಮಲ್ಲ, ಕಲ್ಲು ತಾರಲೆ!

ಲಕ್ಷ್ಮಿ : ಅಯ್ಯಯ್ಯ, ಓಡಿಹೋಗುತ್ತದು, ಲಗೂ ಬಡೀಯೇ

ಗಂಡ : ಬಡಿಯಾಕ ಏನೂ ಇಲ್ಲ! ಕೈಲೆ ಬಡೀಲಾ?

ಲಕ್ಷ್ಮಿ : ಆ ಕಲ್ ನಾಗಪ್ಪನ್ನಾದರೂ ತೊಗೊಂಡು ಹೊಡಿಯು !

ಗಂಡ : ಎಲೆ ನಿನ್ನ! ನಿನ್ನ ದೇವ್ರಲ್ಲೇನೇ ಅದು?

ಲಕ್ಷ್ಮಿ : ಅಯ್ಯ ದೇವ್ರೇ ! ಇಂಥಾ ಪರಸಂಗದಾಗ ದೇವ್ರೆಲ್ಯೊ ದಿಂಡ್ರೆಲ್ಯೊ? ನೀ ಹೊಡೆಯದಿದ್ದರೆ ನಾನು ಹೊಡೆಯುತ್ತೇನೆ. (ನಾಗಪ್ಪನನ್ನು ಕಿತ್ತು ಹೊಡೆಯುವಳು, ಹಾವು ಸಾಯುವುದು)

ಗಂಡ : ಜೀವಂತ ದೇವ್ರೂ ಸತ್ತಿತು ಕಲ್ಲದೇವರೂ ಸತ್ತಿತು ನಡಿ! ಅದು ಒಡೆದೇ ಹೋಯ್ತಲ್ಲ?

ಬಸವ : (ಪತ್ರ ಪುಷ್ಪಗಳನ್ನೆತ್ತುತ್ತ ಬರುವರು ಮತ್ತೊಂದು ಬದಿಯಿಂದ ಹುತ್ತ ನೋಡಿ ಜಾನಿಸಿ)

ರಾಗ : ಮಿಶ್ರಪ ಹಾಡಿ ತಾಳ : ಖವಾಲಿ

ಚಾಲ : ಧಿರೇ ಗಾಡಿ ಹಾಕರೇ ಎಂಬಂತೆ

ಹುತ್ತವ ಬಡಿದಡೆ, ಹಾವು ಸಾಯಬಲ್ಲುದೆ ಅಯ್ಯ?
ಘೋರ ತಪವ ಮಾಡಿದೊಡೇನು?
ಅಂತರಂಗ ಆತ್ಮ ಶುದ್ಧವಿಲ್ಲದವರನೆಂತು
ನಂಬುವನಯ್ಯ ಕೂಡಲಸಂಗಮದೇವ? ॥೧॥

(ಸಮೀಪಕ್ಕೆ ಬರುವರು. ಮೂವರೂ ವಂದಿಸುವರು) ಅಯ್ಯಾ, ನೀವಾರು? ಇದೇನು? ಹಾವು ಸತ್ತು ಬಿದ್ದಿದೆಯಲ್ಲ? ಗಾಬರಿಗೊಂಡಂತಿರುವಿರಲ್ಲ?

ಗಂಡ : ದೇವರೂ, ಹಾಲು ಹೊಯ್ಯುವಾಗ ಹಾವು ಬಂತು, ನಾಗಪ್ಪನನ್ನೇ ಕಿತ್ತಿ ಹೊಡೆದೆವು.

ಬಸವ : ಕಲ್ಲನಾಗರ ಕಂಡರೆ ಹಾಲನೆರೆಯೆಂಬರು, ದಿಟದನಾಗರ ಕಂಡರೆ ಕೊಲ್ಲೆಂಬರಯ್ಯ! ಉಂಬ ಜಂಗಮ ಬಂದರೆ ನಡೆ ಎಂಬರು, ಉಣ್ಣದ ಲಿಂಗಕ್ಕೆ ಬೋನವ ಹಿಡಿ ಎಂಬರಯ್ಯ! ನಮ್ಮ ಕೂಡಲಸಂಗನ ಶರಣರ ಕಂಡು ಉದಾಸೀನ ಮಾಡಿದರೆ ಕಲ್ಲುತಾಗಿದ ಮಿಟ್ಟೆಯಂತಪ್ಪರಯ್ಯ. ಅಯ್ಯಾ ಕಾಳಸರ್ಪವನ್ನು ಪೂಜಿಸುವದರಿಂದ ಯಾರಿಗಾದರೂ ಮುಕ್ತಿಯಾಗುವದೆ? ಕಲ್ಲನಾಗರಕ್ಕೆ ಹಾಲನ್ನೆರೆದು ದಿಟದನಾಗರವನ್ನು ಕೊಲ್ಲುವದು ಎಂಥ ಅಪಹಾಸ್ಯದ ಮಾತು? ಇದನ್ನು ಬಿಟ್ಟು ಲಿಂಗದೇವನನ್ನು ಪೂಜಿಸಿದರೆ ಇಲ್ಲಿ ಸುಖವೂ (ಮೇಲೆ ತೋರಿ) ಅಲ್ಲಿ ಮುಕ್ತಿಯೂ ಲಭಿಸುವವು.

ಗಂಡ : ನಂದೂ ಅದೇ ವಿಚಾರವಿದೆ ದೇವ್ರು. ಆದರೆ ಇಲ್ಲಿದ್ದಾಳೆ ನೋಡಿರಿ ಇದಿರುಹೆಣ್ಣು. ನಾನು ರೊಟ್ಟಿ ಮಾಡೆಂದರೆ ತಾನು ಗಿಟ್ಟಿಮಾಡ್ತಾಳ; ನಾನು ಈಶ್ವರಗುಡಿಗೆ ಹೋಗೋಣವೆಂದರೆ ತಾನು ಕೆಂಚವ್ವನಿಗೆ ಕುಬಸಾ ಏರಿಸಲು ಹೋಗುತ್ತಾಳೆ; ನಾನು ಅಯ್ಯನವರಿಗೆ ನೀಡೋಣ ಅಂದ್ರೆ ತಾನು ಗೊಗ್ಗಯ್ಯನಿಗೆ ಉಣ್ಣಿಸುತ್ತಾಳೆ; ಭಸ್ಮ ಧರಿಸು ಅಂದ್ರೆ ಭಂಡಾರ ಬಡಕೊಳ್ಳುತ್ತಾಳೆ!

ಬಸವ : (ಜನಾಂತಿಕ) ಗಂಡ ಶಿವಲಿಂಗದೇವರ ಭಕ್ತ, ಹೆಂಡತಿ ಮಾರಿ ಮಸಣಿಯ ಭಕ್ತೆ; ಗಂಡ ಕೊಂಬದು ಪಾದೋದಕ ಪ್ರಸಾದ, ಹೆಂಡತಿ ಕೊಂಬುದು ಸುರೆ ಮಾಂಸ! ಭಾಂಡ ಭಾಜನ ಶುದ್ಧಿ ಇಲ್ಲದವರ ಭಕ್ತಿ ಹೆಂಡದಮಡಿಕೆಯ ಹೊರಗೆ ತೊಳೆದಂತೆ! (ಲಕ್ಷ್ಮಿಗೆ) ಅಮ್ಮಾ, ಈ ವಿಷಯದಲ್ಲಿ ನೀನು ನಿನ್ನ ಪತಿಯ ಅಭಿಪ್ರಾಯದಂತೆ ನಡೆಯುವದು ಬಹುಯೋಗ್ಯ.

ಲಕ್ಷ್ಮಿ : ಇಲ್ರಿ ಎಪ್ಪಾ, ಈತ ಯಾವದಾದರೂ ತೀರ ಅತಿ ಮಾಡ್ತಾನ. ನಮ್ಮ ಹುಡುಗರು ಎಲ್ಯಾದರೂ ಬಿದ್ದು ಹೆದರಿ ಬಂದರೆ ಕರವುಗಲ್ಲಿಗೆ ಎಣ್ಣಿಸಹಿತ ಹಾಕಬಾರದೇನ್ರಿ? ಮಕ್ಕಳಿಗೆ ಮೈಲಿ ಎದ್ದರೆ ದ್ಯಾಮವ್ವನಿಗೆ ಉಡಿಸಹಿತ ತುಂಬಿಸಬಾರದೇನ್ರಿ?

ಬಸವ : ತಾಯಿ! ನೀನು ಹೇಳುವ ದೇವರು ದೇವರಲ್ಲ. ಜಗತ್ತಿಗೆ ತಂದೆಯಾದ ದೇವನೊಬ್ಬನೇ. ಆತನ ಗುರುತೇ ಲಿಂಗ. ಅದನ್ನೇ ಭಕ್ತಿಯಿಂದ ಪೂಜಿಸಿದರೆ ನಿಮಗೆ ಸುಖವಾಗುವುದು. ಇದನ್ನು ಬಿಟ್ಟು ಅರಗುತಿಂದರೆ ಕರಗುವ, ಉರಿಯಕಂಡರೆ ಮುರುಟುವ, ಅವಸರ ಬಂದರೆ ಮಾರುವ, ಅಂಜಿಕೆ ಬಂದರೆ ಹೂಳುವ ದೈವಗಳನ್ನು ಪೂಜಿಸುವದು ಹುಚ್ಚುತನ! ಹಾಳು ಮೊರಡಿಗಳಲ್ಲಿ, ಊರ ದಾರಿಗಳಲ್ಲಿ, ಕೆರೆ ಬಾವಿ ಹೂ ಗಿಡಮರಗಳಲ್ಲಿ, ಗ್ರಾಮದ ಮಧ್ಯಗಳಲ್ಲಿ, ಚೌಪಥ ಪಟ್ಟಣಪ್ರದೇಶದಲ್ಲಿ, ಹಿರಿಯಾಲದಮರದಲ್ಲಿ ಮನೆಯಮಾಡಿ ಕರೆವೆಮ್ಮೆಯ, ಹಸುಗೂಸು, ಬಸಿರೆ, ಬಾಣಿತಿ, ಕುಮಾರಿ, ಕೊಡಗೂಸೆಂಬವರ ಹಿಡಿದುಂಬ ತಿರಿದುಂಬ ಮಾರಯ್ಯ, ಬೀರಯ್ಯ, ಅಂತರ, ಬೆಂತರ, ಕಾಳಯ್ಯ, ಮಾರಯ್ಯ, ಮಾಳಯ್ಯ, ಕೇತಯ್ಯಗಳೆಂಬ ನೂರುಮಡಿಕೆಗೆ ಕೂಡಲಸಂಗಮದೇವ ಶರಣೆಂಬುದೊಂದು ದಡಿ ಸಾಲದೆ?

ಆದ್ದರಿಂದ ದೇವರ ದೇವನಾದ ಲಿಂಗಯ್ಯನನ್ನೇ ನಂಬಿ ಪೂಜಿಸಿರಿ.

ಲಕ್ಷ್ಮಿ : ಮಾರಿ, ಮಸಣಿ ಅನ್ನೋವು ಎಲ್ಲಾ ಸುಳ್ಳೇನ್ರಿ?

ರಾಗ : ಸೋಹನಿ ತಾಳ : ಜಲದೇಕ್ಕಾ ಚಾಲ : ಕುಲವ ಬಿನತ ಡಾರಡಾರ ಎಂಬಂತೆ

ಮಾರಿ ಮಸಣಿ ಎಂಬವು ಬೇರೆ । ಇರುವುದಿಲ್ಲ ಕಾಣಿರೋ ।
ಮಾರಿ ಮಸಣಿ ಎಂದರೇನು? ॥ಪ॥
ಕಂಗಳುತಪ್ಪಿ ನೋಡಲು ಮಾರಿ । ನಾಲಗೆ ತಪ್ಪಿ ನುಡಿಯೆ ಮಾರಿ।
ಕೂಡಲಸಂಗಯ್ಯನ । ನೆನಹ ಮರೆದರೆ ಮಾರಿ ॥೧॥

ಲಕ್ಷ್ಮಿ : ಎಪ್ಪಾ, ಇದುವರೆಗೂ ನಾವು ತಪ್ಪುದಾರಿ ತುಳಿದೆವು. ಇನ್ನಾದರೂ ನಮಗೆ ಲಿಂಗಾ ಧರಿಸಿ ಉದ್ಧಾರಮಾಡಿರಿ.

ಗಂಡ : (ಆನಂದದಿಂದ) ದೇವರು–ಈಕೆಗೆ ಇಂಥಾ ಸದ್ಬುದ್ಧಿ ತಂದುಕೊಟ್ಟ ನಿಮ್ಮ ಉಪಕಾರ ಬಹಳ ಆಯ್ತು. ನಮ್ಮ ಮನೆಯವರೆಲ್ಲರಿಗೂ ಲಿಂಗದೀಕ್ಷೆಕೊಟ್ಟು ಉದ್ಧಾರಮಾಡಿರಿ! (ಎಲ್ಲರೂ ಪೊಡಮಡುವರು)

ಬಸವ : ಏಳಿರಿ–ಇದರಲ್ಲಿ ನನ್ನ ದೊಡ್ಡಸ್ತಿಕೆ ಏನೂ ಇಲ್ಲ. ನಿಮ್ಮೆಲ್ಲರ ಕಲ್ಯಾಣವೇ ನನ್ನ ಕಲ್ಯಾಣ, ಅದೇ ನನ್ನ ಧರ್ಮ. ಇಂದು ನೀವೆಲ್ಲರೂ ಅನುಭವ ಮಂಟಪಕ್ಕೆ ಬನ್ನಿರಿ. ಅಲ್ಲಿ ತ್ರಿಭುವನಗುರು ಪ್ರಭುದೇವರಿಂದ ನಿಮಗೆ ಲಿಂಗ ದೀಕ್ಷೆಯಾಗುವದು. (ಹೋಗುವನು)

ಗಂಡ : (ಹಿಗ್ಗಿ ಕುಣಿಯುತ್ತ)

ಪದ

ಎಂಥಾತ ಬಸವಣ್ಣ । ಜಗದಣ್ಣ । ಎಂಥಾತ ಬಸವಣ್ಣ॥
ಚಿಂತೆಯ ಕಳೆಯುತ ಶಾಂತಿಯ ನೀಡಿದ ॥ಪ॥
ಬಡವ ಬಗ್ಗರಕೈಯ । ಪ್ರೀತಿಲೆ । ಹಿಡಿದು ಮೇಲೆತ್ತುವಾತ।
ಕೆಡಕು ಹಾದಿಯ ಬಿಡಿಸಿ ಒಡನೇ ಲಿಂಗಕೊಟ್ಟ ॥೧॥
ಹೆಂಡತಿ : ಭಂಡಾರವನು ಬಿಡಿಸಿ । ಹಣೆಗೆ । ವಿಭೂತಿಯನು ಧರಿಸಿ।
ಗುಂಡುಕಲ್ಲುಗಳ ಹಿಂಡುದೇವರನೊಡೆದ ॥೨॥

ನೋಟ ೩ ಅನುಭವ ಮಂಟಪ

(ಮಧ್ಯಪೀಠದ ಮೇಲೆ ಪ್ರಭುದೇವರು, ಬಲಕ್ಕೆ ಬಸವಣ್ಣ, ಎಡಕ್ಕೆ ಎತ್ತರದಲ್ಲಿ ಚನ್ನಬಸವಣ್ಣ, ಎದುರಿಗೆ ಲಿಂಗದೀಕ್ಷೆ ಹೊಂದಿದ ಸಿದ್ಧರಾಮ – ಒಂದುಕಡೆ ವಿವಿಧ ಕಾಯಕನಿರತ ಶರಣಗಣ, ಮತ್ತೊಂದು ಕಡೆಗೆ ಸಾಲಾಗಿ ಕುಳಿತು ರಾಟಿ ನೂಲುತ್ತ ಅನುಭಾವ ಚರ್ಚೆಯಲ್ಲಿ ಆಸಕ್ತಿಯನ್ನು ವಹಿಸಿ ಕೇಳುವ ಶರಣೆಯರ ಬಳಗ.)

ಪ್ರಭು : ಚನ್ನಣ್ಣ, ನಮ್ಮ ತಾತ್ವಿಕ ಹೋರಾಟವು ಸಿದ್ಧರಾಮಣ್ಣನಿಗೂ ಒಪ್ಪಿತವಾದದ್ದು ನಮ್ಮ ಸುದೈವ.

ಬಸವ : ಪ್ರಭುವೇ, ಇಂದಿನ ಲಿಂಗದೀಕ್ಷೆಯು ನಮ್ಮ ಕ್ರಾಂತಿಕಹಳೆಯ ಮೊದಲನೆಯ ಮೊಳಗು! ಸಿದ್ಧರಾಮಣ್ಣನಂತಹ ವಿಭೂತಿಪುರುಷರು ನಮ್ಮ ಬೆಂಬಲಕ್ಕೆ ದೊರೆತದ್ದು ನಮ್ಮ ಪರಮಭಾಗ್ಯ!

ಸಿದ್ಧರಾಮ : (ಎದ್ದು) ಗುರು ಚನ್ನಣ್ಣ, ಪ್ರಭುವರ, ಬಸವಣ್ಣನವರೇ –ನನ್ನ ಜೀವನದಲ್ಲಿ ನಾನಿದನ್ನು ಮಂಗಲದಿನವೆಂದು ತಿಳಿಯುತ್ತೇನೆ. ಹೃದಯಪೂರ್ವಕವಾಗಿ ನಾನಿಂದು ವೀರಶೈವ ತತ್ವವನ್ನು ಒಪ್ಪಿಕೊಂಡಿದ್ದೇನೆ. ಇಂದು ನನ್ನ ಹೃದಯದಲ್ಲಿ ಆವುದೋ ಒಂದು ಅನಿರ್ವಚನೀಯ ಆನಂದಸಾಗರದ ತರಂಗಸಂಗೀತವು ತುಂಬಿದಂತಿದೆ; ಮನಸ್ಸನ್ನು ಧನ್ಯತೆಯು ಆವರಿಸಿದೆ! ಪ್ರಪಂಚದ ಪ್ರಾಣಿಕೋಟಿಯ ಸೇವೆಗಾಗಿ ಹೊರಟಿರುವ ಶರಣರ ಬಳಗದಲ್ಲಿ ನನ್ನನ್ನೂ ಒಬ್ಬ ಬಂಧುವನ್ನಾಗಿ ಬರಮಾಡಿಕೊಂಡ ತಮಗೆ ನಾನು ಚಿರಋಣಿ! ತಮ್ಮೆಲ್ಲರ ಶ್ರೀಪಾದಗಳಿಗೆ ನಮೋ ನಮೋ ಎಂದು ಬದುಕಿದೆ! (ಕೂಡ್ರುವನು)

ಸತ್ಯಕ್ಕ : (ಎದ್ದು) ಪ್ರಭುದೇವರ ಪಾದಕ್ಕೆ ಪೊಡಮಡುವೆ! ರೆಮ್ಮವ್ವೆ ತಾಯಿಯವರು ನಿನ್ನೆ ಒಂದು ಸುಂದರವಾದ ವಚನವನ್ನು ಹಾಡಿದರು. ಅದನ್ನು ಪ್ರಭುಗಳು ತಿದ್ದಿ ಸರಿಪಡಿಸಬೇಕು!

ಪ್ರಭು : ರೆಮ್ಮವ್ವೆತಾಯಿಯ ವಚನಗಳನ್ನು ನಾನು ತಿದ್ದುವದೇ ಸತ್ಯಕ್ಕ? ಓದಿ, ಹೇಳು.

ಸತ್ಯಕ್ಕ : ನಾ ತಿರುಹುವ ರಾಟಿಯ ಕುಲ ಜಾತಿಯ ಕೇಳಿರಣ್ಣ! ಅಡಿಯಣ ಹಲಿಗೆ ಬ್ರಹ್ಮ, ತೋರಣ ವಿಷ್ಣು, ನಿಂದ ಬೊಂಬೆ ಮಹಾರುದ್ರ, ರುದ್ರನ ಬೆಂಬಳಿಯವೆರಡು ಸೂತ್ರದಕರ್ಣ; ಅರಿವೆಂಬ ಕದಿರು, ಭಕ್ತಿಯೆಂಬ ಕಯ್ಯಲ್ಲಿ ತಿರುಹಲಾಗಿ ಸುತ್ತಿತ್ತು ನೂಲು, ಕದಿರುತುಂಬಿತ್ತು. ರಾಟಿಯ ತಿರುಹಲಾರೆ. ಎನ್ನ ಗಂಡ ಹುಟ್ಟಿಹ. ಇನ್ನೇವೆ ಕದಿರರೆಮ್ಮಿಯೊಡೆಯ ಗುಮ್ಮೇಶ್ವರಾ?

ಪ್ರಭು : ಕ್ರಾಂತಿಕಾರಕ ವಚನ ಸತ್ಯಕ್ಕ! ಶತಮಾನಗಳು ಕಳೆದಂತೆಲ್ಲ ಇದರ ಮಹತ್ವ ಹೆಚ್ಚಾಗುವದು! ವೃತ್ತಿಯನ್ನು ತತ್ವಮಯ ಮಾಡಿಸುವ ಸತ್ಯಶರಣೆ ರೆಮ್ಮವ್ವೆ! ಕದಿರಿನ ನಾದದಲ್ಲಿ ಸ್ವರ್ಗದ ಸಂಗೀತವನ್ನು ಆಲಿಸಿದ ಜೀವನ್ಮುಕ್ತೆ.

ರೆಮ್ಮವ್ವೆ : ಪ್ರಭುಗಳು ನನ್ನನ್ನು ಈ ಪರಿ ಹೊಗಳಬಾರದು. ಹೊಗಳಿಕೆಗೆ ಪಾತ್ರವಾದ ವಚನವಿಲ್ಲಿದೆ. ಲಿಂಗಮ್ಮ ತಾಯಿಯ ವಚನವೊಂದನ್ನು ಲಾಲಿಸಬೇಕು. "ಕೈಲಾಸ ಮರ್ತ್ಯಲೋಕವೆಂಬರು. ಕೈಲಾಸವೆಂದರೇನೊ? ಮರ್ತ್ಯವೆಂದರೇನೊ? ಅಲ್ಲಿಯು ನಡೆಯು ಒಂದೆ, ಇಲ್ಲಿಯ ನಡೆಯು ಒಂದೆ. ಅಲ್ಲಿಯ ನುಡಿಯು ಒಂದೆ, ಇಲ್ಲಿಯ ನುಡಿಯು ಒಂದೆ. ಕೈಲಾಸದವರ ದೇವರ್ಕಳೆಂಬರು; ಮರ್ತ್ಯಲೋಕದವರೆ ಮಹಾಗಣಂಗಳೆಂಬರು. ಸುರಲೋಕದೊಳಗೆ ಸಾಸಿರಕಾಲಕ್ಕಲ್ಲದೆ ಅಳಿವಿಲ್ಲ; ನರಲೋಕದೊಳಗೆ ಸತ್ತು ಸತ್ತು ಹುಟ್ಟುವದು. ಇದ ಕಂಡು ನಮ್ಮ ಶಿವಶರಣರು ನರಲೋಕ ಸುರಲೋಕಗಳ ತೃಣವೆಂದು ಭಾವಿಸಿ, ಭವವ ದಾಂಟಿ. ಮಹಾಬೆಳಗನೆ ಕೂಡಿ ಬಯಲಾದರಯ್ಯ ಅಪ್ಪಣ್ಣಪ್ರಿಯಚನ್ನಬಸವಣ್ಣ."

ಪ್ರಭು : ಲಿಂಗಮ್ಮನು ಶರಣರಿಗಿಂತಲೂ ಒಂದು ಹೆಜ್ಜೆ ಮುಂದೆ ಸಾಗಿದಳು ಸಿದ್ಧರಾಮಯ್ಯ.

ಸಿದ್ಧರಾಮ : ನಿಜ ಪ್ರಭುಗಳೇ– ಹೆಣ್ಣು ಹೆಣ್ಣಲ್ಲ – ಹೆಣ್ಣು ರಾಕ್ಷಸಿಯಲ್ಲ – ಹೆಣ್ಣು ಪ್ರತ್ಯಕ್ಷ ಕಪಿಲಸಿದ್ಧಮಲ್ಲಿಕಾರ್ಜುನ.

ಗಂಗಾಂಬೆ : ಹೆಣ್ಣುಗಂಡಿನ ಭೇದವನ್ನು ಸತ್ಯಕ್ಕನು ಬಣ್ಣಿಸಿದ ಬಗೆ ಹೀಗೆ ಪ್ರಭುವೆ. "ಮೊಲೆ ಮುಡಿ ಇದ್ದುದೇ ಹೆಣ್ಣೆಂದು ಪ್ರಮಾಣಿಸಲಿಲ್ಲ. ಕಾಸೆ ಮೀಸೆ ಕಠಾರವಿದ್ದುದೇ ಗಂಡೆಂದು ಪ್ರಮಾಣಿಸಲಿಲ್ಲ. ಅದು ಜಗದ ಹಾಹೆ. ಬಲ್ಲವರ ನೆಲೆಯಲ್ಲಿ ಏತರ ಹಣ್ಣಾದರೂ ಮಧುರವೇ ಕಾರಣ. ಅಂದವಿಲ್ಲದ ಕುಸುಮಕ್ಕೆಯು ವಾಸನೆಯೆ ಕಾರಣ. ಇದರಂದವ ನೀನೆ ಬಲ್ಲೆ –ಶಂಭುಜಕ್ಕೇಶ್ವರ."

ಬಸವ : ಶರಣೆಯರ ಸ್ವಾನುಭಾವದ ಪರಂಜ್ಯೋತಿಗೆ ಪ್ರಣಾಮಗಳು, ಪ್ರಭುವೆ.

ಪ್ರಭು : ಪ್ರಣಾಮಗಳನ್ನು ಸಲಿಸುವೆಯಂತೆ ತಡೆ ಬಸವಣ್ಣ. ನೀಲಾಂಬಿಕಾತಾಯಿ, ಇಂದು ನಿನ್ನ ವಚನವಾವುದೂ ಇಲ್ಲವೆ?

ನೀಲಾಂಬೆ : ನನ್ನದೆಂದು ಹೇಳಿಕೊಳ್ಳುವ ವಚನವಾವುದಿದೆ ಪ್ರಭುಗಳೇ? ಎಲ್ಲ ಶರಣೆಯರಂತೆ ನನ್ನದೊಂದು ವಾಣಿಯಿಲ್ಲ ನಾನೊಂದು ಪ್ರತಿಧ್ವನಿಯಂತೆ.

ಸತ್ಯಕ್ಕ : ಇಲ್ಲ ಪ್ರಭುಗಳೆ – ನೀಲಮ್ಮತಾಯಿಯವರ ಹೊಸ ವಚನವೊಂದು ನನಗೆ ಗೊತ್ತಿದೆ. "ಉತ್ತರಕೋಣೆಯಲ್ಲಿರ್ಪ ಚಿತ್ತಜಾರಿಯ ಕಂಡ ಭಕ್ತ ಅಸತ್ಯ–ವಿಷಯಕ್ಕಾನುವನೆ? ಇನಿದಾದ ಚಿನಿಪಾಲು ಪೀರ್ವರಸಂಚೆ ಹುಳಿಗಂಗಗೊಡುವುದೆ? ಬಸವಪ್ರಿಯ ಕೂಡಲಸಂಗಮದೇವಾ."

ಪ್ರಭು : ಹೇಗಿದೆ ಬಸವಣ್ಣ ಈ ವಚನ? ಇದರ ಅನುಭಾವಜ್ಯೋತಿಗೆ ಅರ್ಪಿಸುವುದಿಲ್ಲವೆ ಪ್ರಣಾಮಗಳನ್ನು? (ಎಲ್ಲರೂ ನಗುವರು. ನೀಲಾಂಬೆ ಲಜ್ಜಾನತ–ಮುಖಿಯಾಗುವಳು.)

ಬಸವ : ಶಿವಾನುಭವವೆಲ್ಲಿದ್ದರೂ ಶರಣಾಗತ ನಾನದಕ್ಕೆ ಪ್ರಭುವೆ.

ಚನ್ನಬಸವಣ್ಣ : ನೀನೇನನೂ ಹೇಳುವುದಿಲ್ಲವೆ ಅವ್ವಾ?

ಅಕ್ಕನಾಗಮ್ಮ : ಎನ್ನ ತನು ಚನ್ನಬಸವಣ್ಣನ ಬಯಲ ಬೆರಸಿತ್ತು. ಎನ್ನ ಮನ ಸಂಗನಬಸವಣ್ಣನ ನಿಜಪದವ ಬೆರಸಿತ್ತು. ಎನ್ನ ಪ್ರಾಣ ಪ್ರಭುದೇವರ ಬಯಲ ಬೆರಸಿತ್ತು. ಬಸವಣ್ಣಪ್ರಿಯ ಚನ್ನಸಂಗನ ಶರಣರು ಒಬ್ಬರೊಬ್ಬರೊಂದೊಂದ ಹಂಚಿಕೊಂಡ ಕಾರಣ ಎನಗೇನೂ ಇಲ್ಲದೆ ಮಹಾಘನದಲ್ಲಿ ನಿಜನಿವಾಸಿಯಾಗಿದ್ದೆನು.

ಬಸವ : ಎಂಥ ಸುಂದರ ವಚನವಿದಕ್ಕಾ–ನನಗೆ ಸಹ ಹೇಳಿರಲಿಲ್ಲವಲ್ಲ?

ಕಿನ್ನರಿಯ ಬೊಮ್ಮಯ್ಯ : (ಪ್ರವೇಶಿಸಿ) ಪ್ರಭುವೆ, ಹೊರಗೆ ಅಕ್ಕನೊಬ್ಬಳು ಬಂದುನಿಂತು ಪ್ರವೇಶಕ್ಕಾಗಿ ಅನುಮತಿಯನ್ನು ಬೇಡುತ್ತಲಿದ್ದಾಳೆ. ಒಳಗೆ ಕರೆದು ತರಲು ಅಪ್ಪಣೆಯೆ?

ಪ್ರಭು : ಓಹೊ–ಅಕ್ಕನು ಬಂದಳೆ? ತೀವ್ರ ಕರೆದುತನ್ನಿರಿ. ಎಲ್ಲರ ಅಕ್ಕರೆಯ ಅಕ್ಕನಿಂದು ಬಂದಳು. ಕಲ್ಯಾಣದ ಸೌಭಾಗ್ಯ.

ಬಸವ : ಪ್ರಭುವೇ, ಅಕ್ಕನ ವೃತ್ತಾಂತವೇನು? ಅವಳಾವಳೋ ಮಹಾದೇವಿಯೇ ಇರಬೇಕು? ನಮ್ಮ ನಾರೀಜೀವನದ ಪಾವನಮೂರ್ತಿಯಾಗಲು ಯಾರ ಸಲುವಾಗಿ ನಾನು ದಿನದಿನವೂ ದಾರಿಕಾಯುತ್ತಲಿದ್ದೆನೋ, ಆ ಮಹಾದೇವಿಯೇ ಬಂದಿರುವಳೆ?

ಪ್ರಭು : ನಿಜ ನುಡಿದೆ ಬಸವಯ್ಯ, ಉಡುತಡಿಯಲ್ಲಿ ನಿರ್ಮಲ ಸುಮತಿಯರ ಪುಣ್ಯಗರ್ಭದಿಂದ ಉದಯಿಸಿ, ಕಾಮದಕರೆಯನ್ನು ನಿರಾಕರಿಸಿ, ಚೆನ್ನಮಲ್ಲಿಕಾರ್ಜುನನನ್ನೇ ಮದುವೆಯಾಗುವ ಶಪಥತೊಟ್ಟು, ಬಿಡುಮುಡಿಯ ಬಿಟ್ಟು, ಭಾವಯೋಗಿಣಿಯಾಗಿ ಬಂದಿದ್ದಾಳೆ. ಅಧ್ಯಾತ್ಮಸಾಗರದ ಅನರ್ಘ್ಯರತ್ನ ಅಕ್ಕ ಮಹಾದೇವಿಯೇ ಬಂದಿದ್ದಾಳೆ. ಆಕೆಗೆ ಕೆಲವು ಪ್ರಶ್ನೆಗಳನ್ನು ಹಾಕಿ ಪರೀಕ್ಷಿಸುವೆನು; ಆಗ ನೋಡುವಿರಿ ಅಕ್ಕನ ಆಳವಾದ ಅನುಭಾವದ ಉಜ್ವಲತೆಯನ್ನು!

ಮಹಾದೇವಿ : (ಪ್ರವೇಶಿಸಿ) ಬಸವಾದಿಪ್ರಮಥರಿಗೆ ಶರಣಾರ್ಥಿ!

ಬಸವ : ದಯಮಾಡಿಸು ಅಕ್ಕಾ, ನಿನ್ನ ಬರವನ್ನೇ ನೆನೆಯುತ್ತಲಿದ್ದೆವು ಅರಸುತ್ತಿದ್ದ ಬಳ್ಳಿ ಕಾಲ ತೊಡಕಿದಂತಾಯಿತು!

ಪ್ರಭು : ಯವ್ವನವನೊಳಕೊಂಡ ಸತಿ ನೀನು ಇತ್ತಲ್ಲೇಕೆ ಬಂದೆಯವ್ವ? ಸತಿ ಎಂದರೆ ಮುನಿಯುವರು ನಮ್ಮ ಶರಣರು. ನಿನ್ನ ಪತಿಯ ಕುರುಹು ಹೇಳಿದರೆ ಬಂದು ಕುಳ್ಳಿರು, ಅಲ್ಲದಿರೆ ತೊಲಗು ತಾಯೆ!

ಮಹಾದೇವಿ : ಗುರುವೇ ತೆತ್ತಿಗನಾದ, ಲಿಂಗವೇ ಮದುವಳಿಗನಾದ, ನಾನೇ ಮದುವಳಿಗೆಯಾದೆನು. ಈ ಭುವನವೆಲ್ಲವರಿಯಲು ಅಸಂಖ್ಯಾತಶರಣರೆನಗೆ ತಾಯಿತಂದೆಗಳು. ಕೊಟ್ಟರು ಪ್ರಭುವಿನಮನೆಗೆ, ಸಾದೃಶ್ಯವಪ್ಪ ವರನ ನೋಡಿ. ಇದು ಕಾರಣ ಚನ್ನಮಲ್ಲಿಕಾರ್ಜುನ ಗಂಡನೆನಗೆ, ಮಿಕ್ಕಿದ ಲೋಕದ ಗಂಡರೆನಗೆ ಸಂಬಂಧವಿಲ್ಲವಯ್ಯ ಪ್ರಭುವೆ!

ಪ್ರಭು : ಚನ್ನಮಲ್ಲಿಕಾರ್ಜುನನೊಡನೆ ನಿನ್ನ ಮದುವೆಯೆ? ಇದೆಂಥ ಸೋಜಿಗದ ಮದುವೆ ಅಕ್ಕಾ?

ಮಹಾದೇವಿ : ಪಚ್ಚೆಯ ನೆಲಗಟ್ಟು, ಕನಕದ ತೋರಣ, ವಜ್ರದ ಕಂಬ, ಹವಳದ ಚಪ್ಪರವನಿಕ್ಕಿ ಮದುವೆಯ ಮಾಡಿದರೆನ್ನವರೆನ್ನ ಮದುವೆಯ ಮಾಡಿದರು! ಕಂಕಣ ಕೈದಾರ ಸ್ಥಿರಸೇಸೆಯನಿಕ್ಕಿ ಚನ್ನಮಲ್ಲಿಕಾರ್ಜುನನೆಂಬ ಗಂಡಗೆನ್ನ ಮದುವೆಯ ಮಾಡಿದರು!

ಬಸವ : ಅಕ್ಕಾ, ನೀನು ಹೆಣ್ಣುಮಗಳು; ಸಮಾಜರೂಢಿಯನ್ನು ಎದುರಿಸಿ, ಕಾಮಕ್ರೋಧಗಳನ್ನು ಮೆಟ್ಟಿ, ವೀರ ವಿರತಿಯನ್ನು ಸಾಧಿಸಲು ಅಬಲೆಯಾದ ನಿನ್ನಲ್ಲಿ ಸಾಮರ್ಥ್ಯವಿದೆಯೆ?

ಅಕ್ಕ : ಕಾಮನ ಗೆಲಿದೆನು ಬಸವಾ ನಿಮ್ಮ ದಯದಿಂದೆ! ಹೇಮವ ಗೆಲಿದೆನು ಬಸವಾ, ನಿಮ್ಮ ದಯದಿಂದೆ! ನಾಮದಲ್ಲಿ ಹೆಂಗುಸಾದೊಡೇನು? ಭಾವಿಸಲು ಗಂಡುರೂಪು! ಜವ್ವನದ ಹೊರಮಿಂಚಿನಲ್ಲಿ ನಿಮ್ಮಕಣ್ಣಿಗೆ ತೋರ್ಪ ಕಾಮನನುರುಹಿದ ಭಸ್ಮವ ನೋಡಿರಣ್ಣ.

ಬಸವ : ಮಹಾದೇವಿಯಕ್ಕ! ಇಂದು ನೀನು ಜಗತ್ತಿಗೆ ಒಂದು ಅಪೂರ್ವವಾದ ಸಂದೇಶವನ್ನಿತ್ತೆ; ಅವಿಚಾರಪರವಾದ ಸಮಾಜವು ನಿರ್ಮಿಸಿದ್ದ ಲಿಂಗಭೇದಕ್ಕೆ ಇಂದು ನೀನು ಕಿಚ್ಚನ್ನು ಹಚ್ಚಿದೆ! ಅಧ್ಯಾತ್ಮಸಾಧನೆಯಲ್ಲಿ ಹೆಣ್ಣು ಗಂಡಿನ ಭೇದವಿಲ್ಲೆಂದು ಸಾರಿ ಧಾರ್ಮಿಕ ಜಗತ್ತಿನಲ್ಲಿ ಹೊಸ ಯುಗವನ್ನು ಸ್ಥಾಪಿಸಿದೆ. ಅಕ್ಕಾ, ಸಮಾಜವು ಸ್ತ್ರೀಯರಿಗಾಗಿ ಕಲ್ಪಿಸಿದ ಅಸಹನೀಯವಾದ ಪಾರತಂತ್ರ್ಯದ ಪಾಶವನ್ನು ನಿನ್ನ ವೀರ ವಿರತಿಯ ಕೂರಲಗಿನಿಂದ ಚೂರು ಚೂರಾಗಿ ಕತ್ತರಿಸಿ ಚಲ್ಲಿದೆ ! ನಾರೀವರ್ಗದ ಸ್ವಾತಂತ್ರ್ಯಯುಗದ ಉದಯರಾಗವನ್ನು ಹಾಡಿದೆ! ಅಕ್ಕಾ, ನಿನ್ನ ಜೀವನದ ಜಯಭೇರಿ ಮೊಳಗಲಿ; ನಿನ್ನ ಸಾಧನೆ ಸಿದ್ಧಿಸಲಿ, ಭವಿಷ್ಯತ್ಕಾಲದ ಸಕಲ ನಾರೀಲೋಕವು ನಿನ್ನನ್ನು ತನ್ನ ಆರಾಧ್ಯ ಮೂರ್ತಿಯೆಂದು ಆರಾಧಿಸಲಿ!

ಪ್ರಭು : ಅಕ್ಕಾ, ನೀನಿನ್ನೂ ಚಿಕ್ಕವಳು, ಸುಕುಮಾರಿ. ಈಗಲೇ ಇಂಥ ಕಠೋರ ವೈರಾಗ್ಯವನ್ನು ತಾಳಿ ನಿನ್ನ ಕಾಯವನ್ನು ಕಂದಿಸುವುದೇಕೆ?

ಮಹಾದೇವಿ :

ರಾಗ : ಗೌಡಮಲ್ಲಾರ ತಾಳ : ತ್ರಿತಾಲ ಚಾಲ : ಆಯೆ ಬದರಿಯಾ ಬರಸನಲಾಗೆ

ಕಾಯ ಕರ್ರನೆ ಕಂದಿದರೇನಯ್ಯ?। ಕಾಯ ಮಿರ್ರನೆ ಮಿಂಚಿದರೇ
ನಯ್ಯ? ॥ಪ॥ ಅಂತರಂಗ ಶುದ್ಧವಾದಬಳಿಕ । ಚನ್ನಮಲ್ಲಿಕಾ
ರ್ಜುನ ಒಲಿದ । ಕಾಯವು ಹೇಗಿದ್ದರೇನಯ್ಯ? ॥೧॥

ಚನ್ನಬಸವ : ಆದ್ಯರ ಅರುವತ್ತು ವಚನಕ್ಕೆ ದಣ್ಣಾಯಕರ ಇಪ್ಪತ್ತು ವಚನ. ದಣ್ಣಾಯಕರ ಇಪ್ಪತ್ತು ವಚನಕ್ಕೆ ಪ್ರಭುದೇವರ ಹತ್ತು ವಚನ. ಪ್ರಭುದೇವರ ಹತ್ತು ವಚನಕ್ಕೆ ಅಜಗಣ್ಣನ ಐದು ವಚನ. ಅಜಗಣ್ಣನ ಐದು ವಚನಕ್ಕೆ ಕೂಡಲ ಚನ್ನಸಂಗಯ್ಯನಲ್ಲಿ ಬೆರಸಿ ಬೇರಿಲ್ಲದಿಪ್ಪ ಮಹಾದೇವಿಯಕ್ಕಗಳ ಒಂದು ವಚನ ಕಾಣಾಪ್ರಭುವೆ!

ಸಿದ್ಧರಾಮ : ಅಹುದಹುದು ಮತ್ತೇನು? ಮರಹಿಂಗೆ ಹಿರಿದು ಕಿರಿದುಂಟಲ್ಲದೆ ಅರುಹಿಂಗೆ ಹಿರಿದು ಕಿರಿದುಂಟೆ? ಕಪಿಲಸಿದ್ಧಮಲ್ಲಿನಾಥ ಮಹಾದೇವಿಯಕ್ಕನ ನಿಲವಿಂಗೆ ಶರಣೆಂದು ಶುದ್ಧನಾದೆನು ಕಾಣಾ ಚನ್ನಬಸವಣ್ಣ!

ಪ್ರಭು : ತನುಗುಣ ನಾಸ್ತಿಯಾಗಿ ಲಿಂಗಸಂಗಿಯಾದಳು. ಮನಗುಣ ನಾಸ್ತಿಯಾಗಿ ಅರಿವು ಸಂಗಿಯಾದಳು. ಭಾವಗುಣ ನಾಸ್ತಿಯಾಗಿ ಮಹಾಪ್ರಭೆ ತಾನಾದಳು. ತಾನಿದಿರೆಂಬೆರಡಳಿದು ಗುಹೇಶ್ವರಲಿಂಗದಲ್ಲಿ ಸ್ವಯಲಿಂಗವಾದ ಮಹಾದೇವಿಯಕ್ಕಳ ನಿಲವಿಂಗೆ ಶರಣೆನುತಿರ್ದೆನು!

ಬಸವ : ಅಜಕೋಟಿ ವರುಷದವರೆಲ್ಲರೂ ಹಿರಿಯರೆ? ಹುತ್ತೇರಿ ಬೆತ್ತಬೆಳೆದ ತಪಸ್ವಿಗಳೆಲ್ಲರೂ ಹಿರಿಯರೆ? ನಡುಮುರಿದು, ಗುಡುಗೂರಿ, ತಲೆನಡುಗಿ, ನೆರೆತೆರೆ ಹೆಚ್ಚಿ, ಮತಿಗೆಟ್ಟು, ಒಂದನಾಡ ಹೋಗಿ ಒಂಬತ್ತನಾಡುವ ಅಜ್ಞಾನಿಗಳೆಲ್ಲರೂ ಹಿರಿಯರೆ? ಅನುವರಿದು, ಘನವಬೆರಸಿ, ಹಿರಿದು ಕಿರುದಿನ ಭೇದವ ಮರೆದು, ಕೂಡಲಸಂಗಯ್ಯನಲ್ಲಿ ಬೆರಸಿ ಬೇರಿಲ್ಲದಿಪ್ಪ ಹಿರಿಯತನ ನಮ್ಮ ಮಹಾದೇವಿಯಕ್ಕಂಗಾಯಿತ್ತು!

ಮಹಾದೇವಿ : ನನ್ನನ್ನು ಬರಿದೆ ಹೊಗಳದಿರು ಬಸವಣ್ಣ! ನಿಮ್ಮ ಅಂಗದ ಆಚಾರವ ಕಂಡು, ನಿಮ್ಮ ಮನದ ಸುಜ್ಞಾನವ ಕಂಡು, ನಿಮ್ಮ ಸದ್ಭಕ್ತಿಯ ತಿಳಿದು ಎನ್ನ ನಿಜ ಸಾಧ್ಯವಾಯಿತ್ತಯ್ಯ ಬಸವಣ್ಣ! ಎನ್ನ ಭಕ್ತಿ ನಿಮ್ಮ ಧರ್ಮ, ಎನ್ನ ಜ್ಞಾನ ಪ್ರಭುದೇವರ ಧರ್ಮ; ಎನ್ನ ಪರಿಣಾಮ ಚನ್ನಬಸವಣ್ಣನವರ ಧರ್ಮ; ಈ ಮೂವರು ಒಂದೊಂದ ಕೊಟ್ಟರೆ ಎನಗೆ ಮೂರು ಭಾವವಾಗಿತ್ತು, ಈ ಮೂರನ್ನು ನಿಮ್ಮಲ್ಲಿ ಸಮರ್ಪಿಸಿದ ಬಳಿಕ ಎನಗಾವ ಜಂಜಡವಿಲ್ಲ. ಚನ್ನಮಲ್ಲಿಕಾರ್ಜುನದೇವರ ನೆನಹಿನಲ್ಲಿ ನಿನ್ನ ಕರುಣದ ಸಿಶು ನಾನು ಕಾಣಾ ಬಸವಣ್ಣ! ಪ್ರಭುವೆ! ಎನ್ನ ಮುಕ್ತಿಯ ಸ್ಥಳವಾವುದು?

ಪ್ರಭುದೇವ : ನೀನಾನೆಂಬ ಉಭಯಸಂಗವಳಿದು, ತಾನು ತಾನಾದ ತ್ರಿಕೂಟವೆಂಬ ಮಹಾಗಿರಿಯ ತುಟ್ಟತುದಿಯ ಮೆಟ್ಟಿ ನೋಡಲು ಬಟ್ಟ ಬಯಲು ಕಾಣಬಹುದು ನೋಡಾ. ಅ ಬಯಲ ಬೆರಸುವರೆ ತ್ರಿಕೂಟಗಿರಿಯೊಳಗೊಂದು ಕಾಣಬಾರದ ಕದಳಿಯುಂಟು ನೋಡಾ, ಆ ಕದಳಿಯ ಕಳದಲ್ಲಿ ಒಳಹೊಕ್ಕು ನೋಡಲು ತೊಳಗಿ ಬೆಳಗುವ ಜ್ಯೋತಿಯುಂಟು ನೋಡಾ! ನಡೆ ಅಲ್ಲಿಗೆ ತಾಯೆ! ಗುಹೇಶ್ವರಲಿಂಗದಲ್ಲಿ ನಿನಗೆ ಪರಮಪದವಿ ಸ್ವಯವಹುದು.

ಮಹಾದೇವಿ : ಸಂಗನಬಸಬಣ್ಣ, ಶರಣಾರ್ಥಿ! ಪ್ರಭುದೇವರ ಶ್ರೀಪಾದಕ್ಕೆ ಶರಣಾರ್ಥಿ! ಚೆನ್ನಬಸವಣ್ಣನ ಚೆನ್ನಡಿಗಳಿಗೆ ಶರಣಾರ್ಥಿ! ಎಲ್ಲ ಶಿವಶರಣರಿಗೆ ಶರಣಾರ್ಥಿ! ಮನ್ನಣೆಯ ಶರಣೆಯರಿಗೆಲ್ಲ ಶರಣಾರ್ಥಿ! ನಾನು ಶ್ರೀಶೈಲಕ್ಕೆ ಹೊರಡುವೆನು. ನಿಮ್ಮ ಮುಡಿಗೆ ಹುವ್ವ ತರುವೆನಲ್ಲದೆ ಹುಲ್ಲತಾರೆನು! ನನ್ನನ್ನು ಆಶೀರ್ವದಿಸಿ ಕಳಿಸಿಕೊಡಿರಿ! ನೋವಿಲ್ಲದ ಕೇಡಿಲ್ಲದ ರೂಹಿಲ್ಲದ ಚೆನ್ನಮಲ್ಲಿಕಾರ್ಜುನನು ನನಗೆ ಒಲಿಯುವಂತೆ ಆಶೀರ್ವದಿಸಿರಿ.

ಬಸವ : ಹೋಗಿಬಾ ಮಾತಾಯಿ! ನಿನ್ನ ಸಂಕಲ್ಪ ಸಿದ್ಧಿಸಲಿ!

ಅಕ್ಕನಾಗಮ್ಮ : ಇಷ್ಟುಬೇಗನೆ ಹೊರಟುಬಿಟ್ಟೆಯಾ ಅಕ್ಕ? ಎಲ್ಲಿದ್ದರೂ ನಿನ್ನ ಅಂತರಂಗದ ಬೆಳಕು ನಮ್ಮ ಬಾಳ ಬೆಳಗಲಿ, ಹೋಗಿಬಾರಮ್ಮ ಮಲ್ಲಿನಾಥನ ವಲ್ಲಭೆಯಾಗಿ ಅಮರಳಾಗು.

ಮಹಾದೇವಿ : ನಿನ್ನ ಆಶೀರ್ವಾದಕ್ಕೆ ನನ್ನ ಸಂಕಲ್ಪವನ್ನು ಸಿದ್ಧಿಗೊಳಿಸುವ ಶಕ್ತಿ ಬರಲಕ್ಕಾ–ಹೋಗಿಬರುವೆ. ಮತ್ತೊಮ್ಮೆ ಶರಣಾರ್ಥಿ ನಿಮ್ಮೆಲ್ಲರಿಗೆ. (ಹೊರಡುವರು. ಎಲ್ಲರೂ ಎದ್ದು ಕಳಿಸಲು ಹೋಗುವರು. ಹೋಗುತ್ತಿರುವಾಗಲೇ ತೆರೆಬೀಳುವುದು.)

ನೋಟ ೪

ಕಲ್ಯಾಣನಗರದಲ್ಲಿ ಬಸವರಾಜನ ಮನೆಗೆ ಹೋಗುವ ಬೀದಿ

(ಸಮಯ ರಾತ್ರಿ ೧೨ ಘಂಟೆ. ಇಬ್ಬರು ಕಳ್ಳರು ಕಳ್ಳ ಹೆಜ್ಜೆಗಳನ್ನಿಡುತ್ತ ಕಳ್ಳದನಿಯಲ್ಲಿ ಮಾತನಾಡುತ್ತ ಬರುವರು. ಮೊದಲನೆಯವ ಬಡಕ, ಚತುರ; ಎರಡನೆಯವ ದೊಡ್ಡ ಆಳು, ಹುಂಬ.)

ಮೊದಲನೇ ಕಳ್ಳ : (ಮೆಲ್ಲನೆ) ಲೇ –ಸಾವಕಾಶ – ಹಾಂ – ಹಗುರಾಗಿ ಹೆಜ್ಜೆ ಹಾಕು! ಕಾವಲುಗಾರರು ನೋಡಿದರೆ ಕಾಲಿಗೆ ಕಬ್ಬಿಣಕಡಗ ಬಂದಾವು!

ಎರಡನೇ ಕಳ್ಳ : ಅವಾ ಯಾವ ಕಾವಲುಗಾರನಪಾ ನನ್ನ ಕಾಲಿಗೆ ಬೇಡಿ ಹಾಕಾವ? ಗುದ್ದಿ ಸಾಯಬಡಿದೇನು!

ಮೊದಲನೆ : ಲೇ ಹುಂಬ! ನಿನ್ನ ಸಂಗಡ ಕಳವಿಗೆ ಬರುವದೂ ಸೆರೆಮನೆಗೆ ಕನ್ನಾ ಹಾಕೋದೂ ಎಲ್ಲಾ ಒಂದೇ! ಹುಚ್ಚೆ, ನಾವು ಕಳವು ಮಾಡಾಕ ಬಂದೀವಿ. ಕಾಳಗಾ ಮಾಡಾಕ ಅಲ್ಲ! ಇಡೀ ಕಲ್ಯಾಣಪಟ್ಟಣದಾಗ ನೀನೊಬ್ಬನೇ ಶೂರ ಅಂತಾ ತಿಳಿದೀ ಏನು? ಸಿಕ್ಕರೆ ಸೀಳಿ ಹಾಕುವವರು ಅದಾರ!

ಎರಡನೆ : ಇರಲಿ ಬಿಡೋ – ನಿನ್ನ ಮಾತೇ ನಡಿಯಲಿ, ಇವತ್ತು ಯಾರ ಮನೆಗೆ ಕನ್ನಾ?

ಮೊದಲನೆ : ಇತಾತ ಬಾ. (ಮೆಲ್ಲನೆ) ಮಂತ್ರಿ ಬಸವಣ್ಣನವರ ಮನೆಗೆ.

ಎರಡನೆ : (ಒಮ್ಮೆಲೆ ಬೆಚ್ಚಿ) ಲೇ – ಲೇ – ಪಾಪಿ! ಊರೆಲ್ಲಾ ಅವರನ್ನು ದೇವರಂತಾ ತಿಳಿದು ಪೂಜಾ ಮಾಡುತ್ತದೆ. ಅಂತಾ ದೇವರಂತಾ ಮಹಾರಾಯನ ಮನಿಗೆ ಕನ್ನಾ ಹಾಕುವದೆ? ನನ್ನ ಹೆಂಡತಿಯಂತೂ ಅವರ ಗುಣಾ ದಿನಾಲು ತಾಸುಗಟ್ಟಲೆ ಕತಿಮಾಡಿ ಹೇಳುತ್ತಾಳೆ. ನಮ್ಮ ಓಣಿಯೊಳಗಿನ ಹೆಣ್ಣುಮಕ್ಕಳು ದಿನಾರಾತ್ರಿ ಅವರ ಪದಗಳನ್ನೇ ಹಾಡ್ತಾರೆ! ಅವರ ಮನಿಗೆ ಕನ್ನಾ? ಒಲ್ಲೆಪಾ!

ಮೊದಲನೆ : ಅಬಾಬಾಬಾ–ಎಂಥಾ ದೊಡ್ಡ ದೊಡ್ಡ ಧರ್ಮದ ಮಾತು ಆಡಾಕ ನಿಂತೆಲ್ಲೋ? ನನಗೆ ಹೆದರಿಕೀನ ಬಂತು ಬಿಡು ಲೇ ಮಬ್ಬು! ಇಂಥ ಡೌಲಿನ ಮಾತನಾಡುವವ ನೀನು ಕಳವು ಮಾಡಾಕ ಯಾಕೆ ಬಂದಿ? ಹುಚ್ಚೆ, ಕಳ್ಳರಿಗೆ ಯಾವದೂ ಧರ್ಮಾ ಇಲ್ಲ; ಕಳ್ಳತನವೇ ಅವರ ಧರ್ಮ! ಅವರಿಗೆ ಯಾರೂ ಗೆಳೆಕಾರ ಇಲ್ಲ; ರೊಕ್ಕಾನ ಅವನ ಗೆಳೆಯ!

ಎರಡನೆ : ಅದೆಲ್ಲಾ ಸರಿ, ಆದರೆ ಈ ದೊಡ್ಡ ನೀರು ನಮಗ್ಯಾಕ ಅಂತಾ ನನ್ನ ಇಚ್ಯಾರ. ಯಾವದಾದರೂ ಸಾಧಾರಣಮನೆಗೆ ಕನ್ನಾಹಾಕಿದರೆ ಸಾಕು. ನಮಗೇನು ಗುಡ್ಡದಷ್ಟು ಸಂಪತ್ತುಬೇಕಾಗಿದೆ? ಹೆಂಡಕ, ಗಾಂಜಿಗೆ ಆದರೆ ಸಾಕು. ನಾಳೆ ನಮಗೆ ಕಳವು ಮಾಡಾಕ ಬರೋದಿಲ್ಲ?

ಮೊದಲನೆ : ಲೇ, ಮಾಡಿದರೆ ದೊಡ್ಡ ಕಳವು ಮಾಡಬೇಕು; ನೋಡಿದರೆ ದೊಡ್ಡ ಊರು ನೋಡಬೇಕು; ಆಡಿದರೆ ದೊಡ್ಡ ಆಟಾ ಆಡಬೇಕು; ಮಾಡಿದರೆ ದೊಡ್ಡ ಮದಿಘಿ ಮಾಡಬೇಕು; ಬೇಡಿದರೆ ದೊಡ್ಡ ವರಾ ಬೇಡಬೇಕು; ಕಡಿದರೆ ರುಂಡಾನ ಕಡಿಯಬೇಕು; ಹೊಡೆದರೆ ಅರಸನ ಖಜಾನೀನ ಹಾರಿಸಬೇಕು!

ಎರಡನೆ : ಹಾಗಾದರೆ ಬಸವಣ್ಣ ರಾಜಾ ಬ್ಯಾರೆ ಅಲ್ಲ? ರಾಜಾನ ಮನೀಗೆ ಕನ್ನಾಹಾಕೋಣ ನಡಿ!

ಮೊದಲನೆ : ಎಲೆ ಇವನ, ರಾಜಾ ಅವರ ಮುಂದೆ ಲಾಗಾ ಹೊಡೆದರೆ ಸೈ! ರಾಜಾನ ದುಡ್ಡಿಗೆ ಅಳತಿ ಇದ್ದೀತು; ಬಸವಣ್ಣನವರ ಹತ್ತರ ಪರಸುಬಟ್ಟಲು ಐತೆ!

ಎರಡನೆ : ಪರಸುಬಟ್ಟಲ? ಅದು ಯಾತಕ್ಕೆ ಬರುತ್ತದೆ? ಹೆಂಡಾ ಕೂಡಿಯಾಕೋ ಹುಗ್ಗಿ ಉಣ್ಣಾಕೊ?

ಮೊದಲನೆ : ಅರಬರವ ಇದ್ಧಾಂಗ ಅದೀಯಪಾ ನೀನು! ಪರಸುಬಟ್ಟಲಾ ಬೇಡಿದ್ದು ಕೊಡುತ್ತದೆ.

ಎರಡನೆ : ಆಂ – ಬೇಡಿದ್ದು ಕೊಡುತ್ತದೆಯೊ? ಗಾಂಜಿ ಕೊಡುತ್ತದೆಯೇನು?

ಮೊದಲನೆ : ಇವಾ ಎಂಥಾ ತಿಳಿಗೇಡಿ ಅದಾನಪಾ? ಲೇ, ಬಂಗಾರ ಕೊಡುತ್ತೋ! ಅದನ್ನು ಎಬ್ಬಿಸಿಬಿಟ್ಟೆವೆಂದರೆ ನಮಗ್ಯಾಕ ಬಡತನ?

ಎರಡನೆ : ಬಂಗಾರಾ ಕೊಡುತ್ತ? ಹಾಗಾದೆ ನಮ್ಮಾಕಿಗೆ ಬುಗುಡಿ ಬೆಂಡೋಲಿ ಮಾಡಿಸಿದೆನೇ!

ಮೊದಲನೆ : ಬುಗುಡಿ ಬೆಂಡಾಲಿ ಏಟರಮಾತಲೆ? ಬಂಗಾರದ ಮನಿ ಕಟ್ಟಿಸೋಣ!

(ಇಷ್ಟರಲ್ಲಿ ಕಾವಲುಗಾರನು ಕೂಗಿ ಜನನ್ನು ಎಚ್ಚರಿಸುತ್ತ ಬರುವನು)

ಮೊದಲನೆ : ಲೇ– ಹಾಗೇ ಹೊರಟೆಯಲ್ಲ? ಕಾವಲುಗಾರ! ಕೌನೆಳು ನೋಡಿಕೋ – ಬಾ ಇತ್ತ.

(ಇಬ್ಬರೂ ಕತ್ತಲಲ್ಲಿ ಅಡಗುವರು – ಎರಡನೆ ಕಳ್ಳನಿಗೆ ಸೀನುಬರುವದು.)

ಎರಡನೆ : (ಸೀನು ಬಿಗಿಹಿಡಿದು) ಲೇ – ನನಗೆ ಸೀ–ಸೀ– ಸೀ–ನು ಬಂ–ಆಂಕ್ಛ (ಮೋರೆಮೇಲೆತ್ತಿ ಸೀನಲೆತ್ನಿಸುವನು. ಮೊದಲನೆಯ ಕಳ್ಳನು ಬಾಯಿಮುಚ್ಚುವನು)

ಮೊದಲನೆ : ಲೇ, ಬುದ್ದಿಗೇಡಿ, ಯಾರ ಜೀವಾ ತೊಗೋಬೇಕೆನ್ನುವಿ? (ಅವನು ಸೀನಲೆತ್ನಿಸುವನು; ಇವನು ಬಿಗಿಹಿಡಿಯುವನು. ಇದೇ ಗುದ್ದಾಟದಲ್ಲಿ ಕಾವಲುಗಾರನು ಸಮೀಪದಲ್ಲಿ ಹಾಯ್ದು ಕೂಗುತ್ತ ಹೋಗುವನು.)

ಕಾವಲುಗಾರ : ಎಲ್ಲರೂ ಬಾಗಿಲುಮುಚ್ಚಿ ಮಲಗಿರಿ! ಎಚ್ಚರಿಕೆಯಿಂದ ಮಲಗಿರಿ! ಕಳ್ಳರು ಬಂದಾರೂ!

ಮೊದಲನೆ ಕಳ್ಳ : (ಎರಡನೆಯವನ ಬಾಯಿ ಇನ್ನಿಷ್ಟು ಬಿಗಿಹಿಡಿದು) ದಯಮಾಡಿ ಇನ್ನೊಂದು ಗೊಂಬಿಹೊತ್ತು ಬಿಗಿಹಿಡಿ ಮಹಾರಾಯಾ–ನಿನ್ನ ಕಾಲು ಬೀಳುತ್ತೇನೆ ಇಲ್ಲದಿದ್ದರೆ ನಮ್ಮಿಬ್ಬರ ತಲೆ ಉಳಿಯುವುದಿಲ್ಲ (ಇಣಿಕಿ ಹಾಕಿ) ಹೋದ ತಾಯಿಗಂಡ! ಹಾಂ–ಸೀನಪಾ, ಸೀನು ಸಾಕಾಗುವವರೆಗೆ ಸೀನು! (ಅವನು ಒಂದೇಸವನೆ ಸೀನುವನು.) ತುಸಾ ಸೀನಲೇ ಇವತ್ತು ದೆವ್ವ ಬಡಕೊಂಡವರು ಮಾಡಿಧಾಂಗ ಮಾಡ್ತೀಯಲ್ಲ?

ಎರಡನೆ : ರಾತ್ರಿ ಚಳಿಯಾಗ ತಿರುಗಿ ನೆಗಡಿ ಆಗ್ಯೆತೆಲೆ!

ಮೊದಲನೆ : ಬಲು ಸೂಕ್ಷಮಿ ಆದಿಬಿಡಪಾ–ನಿನಗ್ಯಾಕಲೆ ನೆಗಡಿ? ಕಪ್ಪಿಕೂಡಾ ನೆಗಡಿ ಅಂತಿತ್ತಂತೆ! (ಮೇಲೆ ನೋಡಿ) ಎಲೆ ಇವನ ! ಬಸವಣ್ಣನವರ ಮನೆ ಹತ್ತರ ನಿಂತೀವಲ್ಲಲೆ? ತಾ ಕನ್ನಗಟಿಗಿ! (ಇಬ್ಬರು ಕೂಡಿ ಕನ್ನಹಾಕುವರು) ಹಾಂ–ತಯಾರಾತು. ನೀನು ಒಳಗೆ ಹೋಗಿ ಹುಡುಕ್ಯಾಡಿ ಪರಸುಬಟ್ಟಲಾ ತೊಗೊಂಡು ಬಾ; ನಾನಿಲ್ಲೆ ಬಾಗಿಲು ಕಾಯ್ತಾ ಇರತೀನಿ.

ಎರಡನೆ : ಛೇ – ನಾ ಒಲ್ಲೆಪಾ – ನನ್ನ ಬುದ್ದಿ ಬಲು ಮದಡು – ನಂದು ಕುರಿತೆಲೀಲೇ – ನನಗೆ ಇದೆಲ್ಲಾ ಜಿನಗು ಕೆಲಸ ಬರೋದಿಲ್ಲ ಬಿಡು. ನೀನೇ ಹೋಗು; ನಾನು ಬಾಗಿಲ ಕಾಯ್ತೀನಿ.

ಮೊದಲನೆ : ಅಲಲಲ – ನಿನ್ನ ಬಾಗಿಲಕಾಯಲು ಹಚ್ಚಿದರೇನಪಾ ಸರ್ಪಕಾವಲು ಇಟ್ಟಾಂಗ! ಊಟಾಮಾಡ್ತಾನ ನಿದ್ದೀಮಾಡೋ ನೀನು ಬಾಗಿಲಾ ಕಾಯ್ತಿಯಾ? ಗಂಗಾಳದೊಳಗೆ ಪಲ್ಲೆ ನೀಡಿ ರೊಟ್ಟೀ ತರೋದರೊಳಗೆ ತೂಕಡಿಸಿ ಬಿದ್ದು ಹಲ್ಲು ಮುರಕೊಂಡರೂ ನಿನಗೆ ಬುದ್ಧಿ ಬರಲಿಲ್ಲ. ಮೇಲಾಗಿ ಇದು ಮಂತ್ರಿಮನಿ, ಬಿಚ್ಚುಗತ್ತಿ ಪಹರಾ ಐತೆ. ಜೀವ ಬ್ಯಾಡಾಗಿದ್ರ ನೀನು ಇರು.

ಎರಡನೆ : ಎವ್ವಲೇ – ನಾನೊಲ್ಲೆಪಾ ಬಾಗಿಲು ಕಾಯೋ ಕೆಲಸ! ನಾನೇ ಒಳಗೆ ಹೋಗುತ್ತೇನೆ. (ಅವನು ಕನ್ನ ಹಾಕಿದ ಕಡೆಗೆ ಹೋಗುವನು; ಇವನು ಅಡಗಿ ನಿಲ್ಲುವನು; ತೆರೆ ಏಳುವದು)

ಹಿಂದೆ ಬಸವನ ಶಯ್ಯಾಗೃಹ. ಬಸವಣ್ಣನು ಮಂಚದಮೇಲೆ ಕುಳಿತು ಸ್ವಲ್ಪ ಯೋಚಿಸುತ್ತಿದ್ದು:

ಬಸವ : ಹೊಯ್ದವರೆನ್ನ ಹೊರೆದವರೆಂಬೆನು. ಬೈಯ್ದವರೆನ್ನ ಬಂಧುಗಳೆಂಬೆನು. ಆಳಿಗೊಂಡವರೆನ್ನ ಆಳ್ದರೆಂಬೆನು. ಹೊಗಳಿದವರೆನ್ನ ಹೊನ್ನ ಶೂಲದಲ್ಲಿಟ್ಟವರು, ಕೂಡಲಸಂಗಮದೇವ!

(ಮೊದಲನೆಯ ಕಳ್ಳ ಕೈಮಾಡಿ ಕರೆಯುವನು; ಎರಡನೆಯ ಕಳ್ಳ ಬಂದು)

ಎರಡನೇ ಕಳ್ಳ : ಅವರಿನ್ನೂ ಎದ್ದಾರಲೇ – ಮೇಲಾಗಿ ಇದು ಮಲಗೋಮನಿ. ಇಲ್ಲಿ ಏನು ಸಿಗುತ್ತದೆ? ಎರಡನೇ ಮನಿ ನೋಡೋಣ ನಡಿ.

ಮೊದಲನೇ : ಎರಡನೇ ಮನಿ ಕನ್ನಾಹಾಕೋದರೊಳಗೆ ಬೆಳಗಾಗುತ್ತದೆ. ಅವರು ಮಲಗುವವರೆಗೆ ಇಲ್ಲೇ ಅಡಗಿ ಕೂಡ್ರೋಣ. (ಇಬ್ಬರೂ ಅಡಗಿ ಕೂಡ್ರುವರು. ಎರಡನೆಯ ಕಳ್ಳ ಮಲಗಿಬಿಡುವನು.)

ಬಸವ : ಶ್ರೇಯಾಂಸಿ ಬಹುವಿಘ್ನಾನಿ! ಮನುಷ್ಯನು ಯಾವುದಾದರೊಂದು ಸತ್ಕಾರ್ಯಕ್ಕೆ ಕೈಹಾಕಿದನೆಂದರೆ ಅನಿರೀಕ್ಷಿತವಾದ ಅನಂತ ವಿಘ್ನಗಳು ಅವನನ್ನೂ ಎದುರಿಸಿ ನಿಲ್ಲುವವು. ಕೆಲವರು ವಿಚಾರಭಿನ್ನತೆಯಿಂದ, ಕೆಲವರು ದ್ವೇಷದಿಂದ, ಕೆಲವರು ಅಸೂಯೆಯಿಂದ, ಕೆಲವರು ಸ್ವಾರ್ಥಸಾಧನೆಯ ಸಲುವಾಗಿ, ಕೆಲವರು ತಿಳಿದು, ಕೆಲವರು ತಿಳಿಯದೆ ಬೇಕೆಂತಲಾದರೂ ವಿರೋಧಮಾಡುತ್ತಾರೆ! ಸಂಗಯ್ಯಾ, ನನಗೆ ಎಂಥ ದುರ್ಧರ ಕಾರ್ಯವನ್ನೊಪ್ಪಿಸಿದೆ? (ವಿಚಾರಮಾಡಿ) ಮನುಷ್ಯನು ಜೀವಿಸಬೇಕಾದರೆ ಕಷ್ಟ ಸಹಿಸಲೇಬೇಕು; ತಾನು ಜೀವಿಸುವುದರ ಸಂಗಡ ಅನ್ಯಜೀವಿಗಳ ಹಿತಕ್ಕಾಗಿ ಹೆಣಗತೊಡಗಿದರಂತೂ ತನ್ನ ಸುಖ, ಕೀರ್ತಿ, ಮಾನಗಳ ಹವ್ಯಾಸವನ್ನು ತೊರೆಯಲೇಬೇಕು. ಸುಖವು ದುಃಖವನ್ನು ಎದುರಿಸುವುದರಲ್ಲಿ; ಸುಖವು ತನ್ನವರ ದುಃಖವನ್ನು ದೂರಮಾಡುವುದರಲ್ಲಿ; ಸುಖವು ಅನ್ಯರ ಸುಖವನ್ನು ನೋಡಿ ಸಂತಸಗೊಳ್ಳುವುದರಲ್ಲಿ! ಸಂಗಯ್ಯಾ, ನಿನ್ನ ಕೃಪೆಯಿಂದ ನಾನು ಪರಮಸುಖಿಯಾಗಿದ್ದೇನೆ. (ಪುನಃ ಜಾನಿಸಿ) ನನಗಾವ ದುಃಖವಿದೆ? ಮಂತ್ರಿತ್ವವಿದೆ, ಮನ್ನಣೆಯಿದೆ, ಅಧಿಕಾರವಿದೆ. ಐಶ್ವರ್ಯವಿದೆ; ಬಾಯಿಂದ ಹೊರಟ ಆಜ್ಞೆಯನ್ನು ಮೇಲಾಗಿ ಪರಿಪಾಲಿಸಲು ಸಿದ್ಧರಾದ ಸೇವಕರಿದ್ದಾರೆ. ಆದರೂ ಮನಸ್ಸಿಗೆ ಸಂತೋಷವಿಲ್ಲ; ಹೃದಯಕ್ಕೆ ಶಾಂತಿಯಿಲ್ಲ! ಜಗತ್ತಿನ ಅಸಂಖ್ಯಾತ ಅಣ್ಣತಮ್ಮಂದಿರು ಅಜ್ಞಾನದಲ್ಲಿ ಕೊಳೆಯುತ್ತಲಿದ್ದಾರೆ; ಅಗಣಿತ ಜನರಿಗೆ ಧರ್ಮವಿಲ್ಲ, ದೇವರಿಲ್ಲ; ಅದೆಷ್ಟೋ ಜನರು ಉಚ್ಚವರ್ಗದವರ ವಿಲಾಸ ವಸ್ತುಗಳನ್ನು ಪೂರೈಸುವದಕ್ಕಾಗಿ ಶಾಶ್ವತದಾಸವರ್ಗಕ್ಕೆ ಸೇರ್ಪಡೆಯಾಗಿದ್ದಾರೆ! ಧರ್ಮವು ಮೇಲ್ವರ್ಗದವರ, ಸಿರಿವಂತರ ಚರಣಗಳನ್ನು ತೊಳೆಯುವ ದಾಸಿಯಾಗಿದೆ; ದೇವರು ಅನ್ಯಾಯ ಕ್ರೌರ್ಯಗಳಿಗೆ ಆಗರವಾದ ಉಚ್ಚವರ್ಗಗಳ ಕೈಗೊಂಬೆಯಾಗಿದ್ದಾನೆ! ದೇವರ ನೆವಮಾಡಿ ಪ್ರಾಣಿಗಳನ್ನು ಕೊಲ್ಲುತ್ತಾರೆ. ನಾಲಗೆಯ ಇಚ್ಛೆಗೆ ಮೆಲ್ಲುತ್ತಾರೆ. ಲಕ್ಷಾವಧಿ ದೀನದಲಿತರ, ಪತಿತಪದಹೃತರ ಹೃದಯಭೇದಕ ದುಃಖದಾರಿದ್ರ್ಯಗಳಮೇಲೆ ಇಂದಿನ ಸಿರಿವಂತರ ಸಮಾಜಮಂದಿರವು ನಿಂತಿದೆ; ಅದಕ್ಕೆ ನಮ್ಮ ಶರಣರು ಸುರಂಗ ಹಚ್ಚಿದ್ದಾರೆ! ಸಂಗಯ್ಯನ ಕೃಪೆಯಿದ್ದರೆ ನನ್ನ ಜನ್ಮದಲ್ಲಿಯೇ ಸತ್ಯ, ಶಾಂತಿ, ಸಮತೆ, ದಯೆ, ತ್ಯಾಗ, ಸೇವೆ, ಪ್ರೇಮ, ತುಷ್ಟಿಗಳ ತಳಹದಿಯಮೇಲೆ ಸುಂದರವಾಗಿ ಕಟ್ಟಿದ ಸಮಾಜಮಂದಿರವನ್ನು ಕಾಣುವೆನು.

ನೀಲಾಂಬೆ : (ಪ್ರವೇಶಿಸಿ) ದೇವಾ, ಇನ್ನೂ ಎಷ್ಟು ಹೊತ್ತು ಹೀಗೆಯೇ ಜಾಗರಣೆ ಮಾಡುವಿರಿ? ಅರ್ಧರಾತ್ರಿಯು ಮೀರಿಹೋಯಿತು. ದಿನಾಲು ಇದರಂತೆ ಜಾಗರಣೆ ಮಾಡುತ್ತ ಹೋದರೆ ತಮ್ಮ ಶರೀರ ಸ್ಥಿತಿ ಏನಾಗಬೇಕು? ಯಾವಾಗಲೂ ಏನೋ ವಿಚಾರದಲ್ಲಿಯೇ ಇರುವಿರಲ್ಲ? ಒಮ್ಮೆ ಉಸುರ್ಗರೆಯುವಿರಿ, ಒಮ್ಮೆ ಕಣ್ಣೀರು ಸುರಿಸುವಿರಿ, ಒಮ್ಮೆ ವಚನಗಾನದಲ್ಲಿ ತಲ್ಲೀನರಾಗುವಿರಿ, ಒಮ್ಮೆ ಲಿಂಗಾರ್ಚನೆಯಲ್ಲಿ ತನ್ಮಯರಾಗುವಿರಿ. ನಿಮಗೆ ವಿಶ್ರಾಂತಿ ಬೇಡವೇ? ನಿದ್ರೆ ಬೇಡವೆ?

ಬಸವ : ನೀಲಾ, ಸಂಗಯ್ಯನು ನಿಯಮಿಸಿದ ಕಾರ್ಯವು ಕೊನೆಗಾಣುವವರೆಗೆ ನಿದ್ರೆ ಎಲ್ಲಿಂದ ಬರಬೇಕು ?

ನೀಲಾ : ನಾಥ, ಪುನಃ ನನ್ನ ಮೂಢ ಪ್ರಶ್ನೆಯನ್ನು ಕ್ಷಮಿಸಿರಿ. ತಮ್ಮ ಚರಣಸನ್ನಿಧಿಯಲ್ಲಿ ಇಷ್ಟು ದಿನ ಕಳೆದರೂ ನನ್ನ ದೃಷ್ಟಿಯು ಮನೆಯನ್ನು ದಾಟಿ ಹೊರಗಿನ ಅನಂತವಾದ ಜಗತ್ತನ್ನು ಕಾಣುವಷ್ಟು ವಿಶಾಲವಾಗಲಿಲ್ಲ. ಅದಿರಲಿ, ತಮ್ಮ ಇಂದಿನ ಚಿಂತೆಗೆ ಕಾರಣವು ನನಗೂ ಗೊತ್ತಾಗಿದೆ. ತಮ್ಮ ಮೇಲೆ ರಾಯಬೊಕ್ಕಸವನ್ನು ಬರಿದು ಮಾಡಿದ ಅಪವಾದ ಬಂದಿತ್ತಂತೆ, ಸಿಕ್ಕ ಸಿಕ್ಕವರಿಗೆ ಹಣ ಕೊಟ್ಟು, ಕೂಡಲಸಂಗಯ್ಯನ ಕೃಪೆಯಿಂದ ಅದು ದೂರಾಯಿತೆಂದು ಕೇಳಿ ಸಂತೋಷವಾಯಿತು.

ಬಸವ : ಊರ ಮುಂದೆ ಹಾಲ ಹಳ್ಳ ಹರಿಯುತ್ತಿರಲಿ, ವಾಳಿಯಾವಿನ ಬೆನ್ನಹರಿಯಲದೇಕಯ್ಯ? ಲಜ್ಜೆಗೆಡಲೇಕೆ? ನಾಣುಗೆಡಲೇಕೆ? ಕೂಡಲಸಂಗಯ್ಯ-ನುಳ್ಳನ್ನಕ್ಕ ಬಿಜ್ಜಳನ ಭಾಂಡಾರವೆನಗೇಕೆ? ನೀಲಾ, ಹೊಲೆ ಹೊಲೆಯರ ಮನೆಯ ಹೊಕ್ಕಾದರೆಯೂ, ಸಲೆ ಕೈಕೂಲಿಯ ಮಾಡಿಯಾದರೂ ನಿಮ್ಮ ನಿಲವಿಂಗೆ ನಿಲುವೆನಲ್ಲದೆ ಬಿಜ್ಜಳ ಭಾಂಡಾರದ ಒಡಕು ಕವಡೆಗೆ ಕೂಡ ಕೈಹಚ್ಚಲಿಕ್ಕಿಲ್ಲವೆಂದು ಪ್ರತಿಜ್ಞೆಮಾಡಿದ್ದೇನೆ. ಆದರೂ ಚಾಡಿಕಾರರು ಪ್ರತಿನಿತ್ಯ ಹೊಸ ಹೊಸ ಅಪವಾದಗಳನ್ನು ಹೊರಿಸುತ್ತಾರೆ ಮಾಡಲೇನು?

ನೀಲಾ : ದೇವಾ, ತಮ್ಮಂಥ ಲೋಕಸೇವಾ ದೀಕ್ಷಾಚಾರ್ಯರು ಅಪವಾದಗಳಿಗೆ ಅಂಜಿದರೆ ಹೇಗೆ? ಮಹಾದೇವಿಯಕ್ಕನು ಹೇಳಿಲ್ಲವೆ?

ರಾಗ : ಮಾಲ ಕಂಸ ತಾಳ : ತ್ರಿತಾಲ

ಚಾಲ : 'ಕೋಯಲೆಯ ಬೋಲೆ ಅಂಬುವಾ ಹಾರಪರಾ' ಎಂಬಂತೆ

ಬೆಟ್ಟದ ಮೇಲೊಂದು ಮನೆಯಮಾಡಿ
ಮೃಗಗಳಿಗಂಜಿದೊಡೆಂತಯ್ಯ? ॥ಪ॥
ಸಮುದ್ರದ ತಡಿಯಲೊಂದು ಮನೆಯ ಮಾಡಿ
ನೊರೆ ತೆರೆಗಳಿಗಂಜಿದೊಡೆಂತಯ್ಯ?
ಸಂತೆಯೊಳಗೆ ಒಂದು ಮನೆಯ ಮಾಡಿ
ಶಬ್ದಕ್ಕೆ ನಾಚಿದೊಡೆಂತಯ್ಯ ॥೧॥
ಚೆನ್ನಮಲ್ಲಿಕಾರ್ಜುನ ದೇವ ಕೇಳಯ್ಯ
ಲೋಕದೊಳಗೆ ಸ್ತುತಿ ನಿಂದೆಗಳು ಬಂದರೆ

ಶರಣನು ಮನದಲ್ಲಿ ಕೋಪವ ತಾಳದೆ

ಸಮಾಧಾನಿಯಾಗಿರಬೇಕು ॥೨॥

ಬಸವ : ನೀಲಾ, ಅಕ್ಕನ ವಚನಗಳನ್ನೆಂದು ಕಲಿತೆ? ಸಮಯಕ್ಕೆ ಸರಿಯಾದ ಶಾಂತಿಪ್ರದ ವಚನ! ಎಂಥ ತ್ರಿಕಾಲಾಬಾಧಿತ ತತ್ವವಿದೆ, ಸತ್ಯವಿದೆ ಈ ವಚನದಲ್ಲಿ? ನೀಲಾ, ಇಂದಿನಿಂದ ನಾನು ಅಪವಾದ, ನಿಂದೆಗಳಿಗೆ ಅಂಜುವದನ್ನು ಬಿಟ್ಟುಬಿಟ್ಟೆ. ನನ್ನ ಮಾನಾಪಮಾನಗಳೆಲ್ಲ ಸಂಗಯ್ಯನವೇ ಆಗಿರಲು ಅಂಜಲೇಕೆ?

ರಾಗ : ಭೀಮಪಲಾಸರಿ ತಾಳ : ತ್ರಿತಾಲ ಚಾಲ : ನೌಬತಬಾಜೆಹರಿನಾಮಕಿ

ಎನ್ನ ವಾಮಕ್ಷೇಮ ನಿಮ್ಮದಯ್ಯ

ಎನ್ನ ಹಾನಿವೃದ್ಧಿ ನಿಮ್ಮದಯ್ಯ ॥ಪ॥

ಎನ್ನ ಮಾನಪಮಾನವು ನಿಮ್ಮದಯ್ಯ

ಬಳ್ಳಿಗೆ ಕಾಯಿ ದಿಮ್ಮಿತ್ತೆ?

ಕೂಡಲಸಂಗಮದೇವಾ ॥೧॥

ನಡೆ, ನೀಲಾ, ರಾತ್ರಿಯು ಬಹಳವಾಯಿತು. ಪುನಃ ಬೆಳಗಿನ ಲಿಂಗಾರ್ಚನೆಗೆ ಏಳಬೇಕು. ನೀನಿನ್ನು ಮಲಗು. (ಇಬ್ಬರೂ ತಮ್ಮ ತಮ್ಮ ಮಂಚದ ಮೇಲೆ ಮಲಗುವರು)

ಮೊದಲನೆಯ ಕಳ್ಳ : (ಮಲಗಿದ್ದ ಎರಡನೇಯವನನ್ನು ನೋಡಿ) ಎಲೆ ಇವನ? ಈ ಹೆಣಾ ಹ್ಯಾಗ ಎಬ್ಬಿಸಬೇಕಪ್ಪಾ? ಜಗ್ಗಿ ಕೂಗುವಂತಿಲ್ಲ. ಇವರಿಗೆ ಈಗಾದ್ರೂ ನಿದ್ದೆಹತ್ತಿದೆಯೋ ಇಲ್ಲೊ? ಇವರೆಂಥಾ ಮಂತ್ರಿ ಅಂತೀನಿ. ದರ್ಬಾರದಾಗ ಕುಂತಲ್ಲೇ ಗೊರಕಿಹೊಡಿಯೋ ಮಂತ್ರಿಗಳೇ ಭಾಳಮಂದಿ. ಇವರಿಗೆ ರಾತ್ರಿ ಸತೆ ನಿದ್ದಿ ಇರಬಾರದ? (ಇಣಿಕಿಹಾಕಿ) ಹಾಂ-ಮಲಗ್ಯಾರ. ಲೇ ಟೊಣಪಾ (ಮೂಗು ಹಿಡಿದು ಎಬ್ಬಿಸುವನು.)

ಎರಡನೆ : ಹಾಂ - ಯಾರಲೇ ಅವಾ. (ಆಕಳಿಸಿ ಮಲಗಲೆತ್ನಿಸುವನು.)

ಮೊದಲ : ಲೇ, ಇದು ನಿನ್ನ ಗುಡಿಸಲು ಅಲ್ಲ, ಬಸವಣ್ಣನವರ ಮನಿ; ಏಳಲೇ.

ಎರಡನೇ : (ಕಣ್ಣು ತಿಕ್ಕುತ್ತ) ಊಹುಂ- ನನಗೆ ನಿದ್ದೇ ಬಂದೈತೆಲೆ (ಮತ್ತೆ ಮಲಗುವನು.)

ಮೊದಲನೆ : ಇವನನ್ನು ಹೇಗೆ ಎಬ್ಬಿಸಬೇಕಾಯ್ತು? (ವಿಚಾರಿಸಿ) ಹಾಂ-ತಿಳಿಯಿತು. (ಮತ್ತೆ ಮೇಲೆತ್ತಿ) ಲೇ - ಗಾಂಜಿ ಬೇಕಿಲ್ಲೇನು ನಿನಗೆ ಗಾಂಜಿ?

ಎರಡನೇ : (ಎದ್ದು) ಹಾಂ–ಎಲ್ಲಿದೆ?

ಮೊದಲನೆ : ಒಳಗೆ ಹೋಗು, ಅವರು ಮಲಗಿದ್ದಾರೆ. ಸಿಕ್ಕರೆ ಪರಸು ಬಟ್ಟಲ, ಇಲ್ಲದಿದ್ರೆ ನೀಲಮ್ಮನವರ ದಾಗೀನಾ ದೋಚಿಕೊಂಡು ಬಾ ಹೋಗು. ಪರಸುಬಟ್ಟಲಾ ಹುಡುಕಿ ನೋಡು. (ಎರಡನೇ ಕಳ್ಳನು ಒಳಗೆ ತೂಕಡಿಸುತ್ತ, ಮುಗ್ಗರಿಸುತ್ತ ಹೋಗಿ ಪರಸುಬಟ್ಟಲವೆಂದು ತಿಳಿದು ಘಂಟೆಯೊಂದನ್ನು ಮುಚ್ಚಿ ತರುವನು)

ಎರಡನೆಕಳ್ಳ : (ಜಿಗಿದಾಡುತ್ತ) ಸಿಕ್ಕಿತು, ಪರಸುಬಟ್ಟಲ ಸಿಕ್ಕಿತು ಕೇ ಹುಹು.

ಮೊದಲನೆ : ಎಲ್ಲಿ? ಎಲ್ಲಿ? (ಎರಡನೆ ಕಳ್ಳ ತಂದದ್ದನ್ನು ಬೈಲಿಗೆ ತೆಗೆಯುವನು. ಘಂಟೆ! ಮೊದಲನೆಯ ಕಳ್ಳ ಹಣೆ ಗಟ್ಟಿಸಿಕೊಂಡು) ಗಂಟಿ ತಂದೇನಪ ಸೂರ? ಜಂಗು ಒಂದು ನೋಡಿಕೋ ಎಲ್ಲಿಯಾದರೂ. ಹೊರಡುವಿಯಂತೆ ಜಂಗು ಕಟಿಕೊಂಡು ಮಂಗ್ಯಾನಂತೆ 'ರೇವಣಸಿದ್ಧೇಶ್ವರಪ್ರಭೋ' ಎಂದು ಗಂಟಿ ಬಾರಸ್ತಾ! ಬಾ.

ಎರಡನೆ : ಅಲ್ಲಲ್ಲೇ, ಅದು ಪರಸುಬಟ್ಟಲ ಕಂಡಾಗಾತಲೆ! ನಾನು ಮೊದಲ ಹೇಳಲಿಲ್ಲ ನಂದು ಕುರಿತೆಲಿ ಅಂತಾ?

ಮೊದಲನೆ : ನಿನ್ನ ಕರಕೊಂಡು ಬಂದದ್ದೇ ನನ್ನ ತಿಳಿಗೇಡಿತನಾ ಆಯ್ತು. ಬಾ ನಿಲ್ಲು ಇಲ್ಲಿ – ನಾನೇ ಹೋಗುತ್ತೇನೆ (ಒಳಗೆ ಹೋಗಿ ಅತ್ತಿತ್ತ ಹುಡುಕಾಡಿ ನೀಲಾಂಬಿಕಾದೇವಿಯವರ ಆಭರಣಗಳಿಗೆ ಕೈಹಾಕುವನು. ಅವರು ಎಚ್ಚತ್ತು ಭಯದಿಂದ ಕೈಕೊಡಹಿ.)

ನೀಲಾಂಬೆ : ಅಯ್ಯೋ –ಕಳ್ಳರು! ಕಳ್ಳರು! ನಾಥ, ಏಳಿರಿ.

ಬಸವ : (ಧಿಗ್ಗನೆದ್ದು) ಯಾರವರು? (ನೋಡಿ) ನೀಲಾ, ಇದೇನನ್ನು ಮಾಡಿದೆ? ಆಭರಣಗಳನ್ನು ಕೊಡದೇ ಕೈಕೊಡಹಿದೆಯಾ? ಅಯ್ಯೋ, ಅವರಿಗೆ ಎಷ್ಟು ನೋವಾಯಿತೊ! ಒಡನಿರ್ದ ಸತಿಯೆಂದು ನೆಚ್ಚಿರ್ದೆನಯ್ಯಾ! ಕೊಡು ಕೊಡೆಲೆ ಚಾಂಡಾಲಗಿತ್ತಿ. ಅವರ ಕೈ ನೊಂದುದು. ಕಳ್ಳನ ಮನೆಗೊಬ್ಬ ಬಲುಗಳ್ಳ ಬಂದರೆ ಕೂಡಲಸಂಗಯ್ಯನಲ್ಲದೆ ಬೇರಲ್ಲ. (ಆಭರಣಗಳನ್ನು ಬಿಚ್ಚಿ) ಅಣ್ಣಾ, ನಿನಗೆ ಆಭರಣಗಳು ಬೇಕಾಗಿವೆಯಲ್ಲವೆ? ತೆಗೆದುಕೋ ಇವುಗಳನ್ನು! (ಕೊಡ ಹೋಗುವನು ಕಳ್ಳನು ಮೊಳಕಾಲೂರಿ)

ಕಳ್ಳ : ಎಪ್ಪಾ, ನನ್ನನ್ನು ನಾಚಿಸಿ ಕೊಲ್ಲಬೇಡ್ರಿ ದೇವ್ರು! ತಂದೆ, ನಿಮ್ಮ ಮನಿಗೆ ಕನ್ನಾಹಾಕಿ ಕಳವುಮಾಡುವ ಕೆಟ್ಟಬುದ್ಧಿಯಿಂದ ಬಂದವನಿಗೆ ತಿರುಗಿ ನೀವೇ ಈ ರೀತಿ ಕರುಣಾ ತೋರಿಸೋದೆ? ಜಗತ್ತಿನಾಗ ಎಲ್ಲಿಯೂ ಕೇಳಿಲ್ಲ ಎಪ್ಪಾ ಇಂಥಾ ಮಹಾತ್ಮರ ಸುದ್ದಿ. ನನ್ನ ಮ್ಯಾಲೆ ದಯಾ ತೋರಿಸಬ್ಯಾಡ್ರಿ ದೇವರು.

ಜಗತ್ತಿನಾಗ ನಾನು ಮಾಡದ ಪಾಪ ಉಳಿದಿಲ್ಲ. ನನ್ನ ಬಾಳ್ವಿ ಮಂದಿ ಗೋಣು ಮುರಿಯೋದರೊಳಗೇ ಕಳೆಯಿತು. ಅಯ್ಯೋ–ಕೊನೆಗೆ ಎಂಥಾ ನೀಚಕೆಲಸಾ ಮಾಡಿದೆ? ದೇವರಮನಿಗೆ ಕನ್ನಾ ಹಾಕಿ ಪಾರ್ವತೆಮ್ಮನವರಂಥಾ ನೀಲಮ್ಮ ತಾಯಿಯವರ ಒಡವಿಗೆ ಕೈಹಾಗಿದೆ. ಅಯ್ಯೋ–ನನಗೆ ಯಮರಾಯ ಯಾವ ಬೆಂಕಿ ಕೊಂಡದಾಗ ಚೆಲ್ಲತಾನೋ ದೇವರೇಬಲ್ಲ. ಇನ್ನು ಮಂದಿಗೆ ನನ್ನ ಕಪ್ಪು ಮೋರೆ ತೋರಿಸಲಾರೆ. ಇಂಥಾ ಪಾಪಿ ಜೀವಾ ಇಡಲಾರೆ. (ಕಠಾರಿ ಹಿರಿದು) ಯಾವ ಧರ್ಮಕ್ಕೂ, ಯಾವ ದೇವರಿಗೂ ಬಾಗದೆ ಸೊಕ್ಕಿ ಕೆಟ್ಟಕೆಲಸದಲ್ಲೇ ಬೆಳ್ಳಗಾದ ಈ ತಲಿ ನಿಮ್ಮ ಪಾದದ ಹುಡಿಯಾಗ ಕೆಡುವುತ್ತೇನೆ. ನನಗೆ ನಿಮ್ಮ ಹುಡಿಬಡಿದು ನರಕಾ ಆದರೂ ತಪ್ಪಲಿ. (ಕೊರಳು ಕೊಯ್ಯಹೋಗುವನು. ಬಸವನು ಕಸಿದು)

ಬಸವ : ಅಣ್ಣಾ, ಇದೆಂಥ ಹುಚ್ಚು ಹೋರೆ ನಡೆಸಿರುವೆ? ನಿನ್ನ ನೆತ್ತರಿನ ಒಂದು ಹನಿಯು ಭೂಮಿಯ ಮೇಲೆ ಬಿದ್ದರೆ ನಾನು ನರಕಕ್ಕೆ ಹೋದೇನು. ಆದದ್ದಾಯಿತು. ಇನ್ನಾದರೂ ಒಳ್ಳೆಯ ಹಾದಿಯನ್ನು ತುಳಿ. ನೀನು ಮಾಡಿದ ಪಾಪಗಳಿಗೆ ಲೆಕ್ಕವಿರಲಿಕ್ಕಿಲ್ಲ; ಆದರೆ ಸಂಗಯ್ಯನ ಕರುಣೆಗೂ ಅಳತೆಯಿಲ್ಲ. ಎಲೆವೊ, ಎಲೆವೋ ಪಾಪ ಕರ್ಮವ ಮಾಡಿದವನೇ, ಎಲೆವೋ ಎಲೆವೋ ಬ್ರಹ್ಮಹತ್ಯವ ಮಾಡಿದವನೇ! ಒಮ್ಮೆ ಶರಣೆನ್ನೆಲೋ ಒಲಿದೊಮ್ಮೆ ಶಿವಶರಣೆನ್ನಿರಯ್ಯ! ಒಂದು ಸೊಲ್ಲಿಂಗೆ ಮುಕ್ತಿಸಿದ್ಧಿ! ಅಣ್ಣಾ, ಸಂಗಯ್ಯನು ಭಕ್ತರ ಅಂಗಳು ಕಸ ಹೊಡೆಯಲೂ ಸಿದ್ಧ. ಆತನನ್ನೇ ಶರಣುಹೊಕ್ಕು, ಆತನನ್ನೇ ನಂಬಿ ಪೂಜಿಸು! ನಿನಗೆ ಕಲ್ಯಾಣವಾಗುವದು.

ಎರಡನೇ ಕಳ್ಳ : (ಬಡಬಡ ಬಂದು) ಲಗೂ ಬಾರಲೇ, ಬೆಳಗಾಗ್ತಾ ಬಂತು. ಇನ್ನೂ ಏನೂ ಸಿಗಲಿಲ್ಲೇನು?

ಮೊದಲನೆ : ಎಪ್ಪಾ, ಇವನೂ ಒಬ್ಬ ಕೊಲೆಗಡಕನ್ರಿ. ನಾನೇ ಕರಕೊಂಡು ಬಂದಿದ್ದೆ ಕಳವುಮಾಡಲು. (ಎರಡನೇ ಕಳ್ಳನಿಗೆ) ಯಾಕೋ ಎಣ್ಣಾ ಪಿಳಿಪಿಳಿ ಕಣ್ಣೇ ಬಿಡುತ್ತೀ? ಅಣ್ಣನವರ ಪಾದದಲ್ಲಿ ಬಿದ್ದು ಹೊರಳಾಡು. ನಿನ್ನ ಕುಲಕೋಟೀ ಉದ್ಧಾರ ಆಗುತ್ತದೆ. (ಅವನು ಬೆಪ್ಪಾಗಿ ನಿಲ್ಲುವನು ಇವನು ಕಸುವಿನಿಂದ ಅವನನ್ನು ಬಸವಣ್ಣನ ಪಾದಗಳಲ್ಲಿ ಕೆಡಹುವನು.)

ಎರಡನೇ ಕಳ್ಳ : (ಎದ್ದು) ಅಲಾಲಾಲಾ – ನನ್ನ ಕಣ್ಣಿಗೆ ಅಂಜನಾ ಹಚ್ಚಿದಾಂಗ ಆಯ್ತು ನೋಡೋ – ನನ್ನ ತಿಳಿಗೇಡಿತನಾ ಎಲ್ಲಾ ಮಟಾ ಮಾಯಾ ಆಯ್ತು. ನನ್ನ ಕುರಿತೆಲಿ ಓಡಿಹೋಯ್ತು. ಎಪ್ಪಾ, ನಾವು ಮಾಡಿದ ಪಾಪಾ ಹೇಳಲಿಕ್ಕೆ ಒಂದು ಬಾಯಿ ಸಾಲೋದಿಲ್ಲ ದೇವರು. ನಮಗೆ ಬುದ್ಧಿಮಾತು ಹೇಳಿ ದಾರಿಗೆ ಹಚ್ಚಿರಿ. ಇನ್ನೊಮ್ಮೆ ದೇವರ ಆಣಿಯಾಗಿ ತಪ್ಪು ಕೆಲಸಾ ಮಾಡುವುದಿಲ್ಲ. ನಮಗ ನೀವೇ ತಾಯಿ ತಂದಿ, ನೀವೇ ಗುರು! (ಅಡ್ಡಬೀಳುವರು)

ಬಸವ : (ಎಬ್ಬಿಸಿ) ಚಿಂತಿಸಬೇಡಿರಿ. ನಿಮ್ಮೆಲ್ಲರಿಗೂ ಲಿಂಗದೀಕ್ಷೆಯನ್ನು ಮಾಡಿಸಿ ಶಿವನನ್ನು ಕಾಣುವ ದಾರಿಯನ್ನು ತೋರಿಸಿಕೊಡುವೆನು. ಇಷ್ಟೇ ನೆನಪಿಡಿರಿ. ಕಳಬೇಡ, ಕೊಲಬೇಡ, ಹುಸಿಯ ನುಡಿಯಲು ಬೇಡ, ಅನ್ಯರಿಗೆ ಅಸಹ್ಯಪಡಬೇಡ, ತನ್ನ ಬಣ್ಣಿಸಬೇಡ, ಇದಿರ ಹಳಿಯಲು ಬೇಡ, ಇದೇ ಅಂತರಂಗ ಶುದ್ಧಿ, ಇದೇ ಬಹಿರಂಗ ಶುದ್ಧಿ, ಇದೇ ನಮ್ಮ ಕೂಡಲಸಂಗಯ್ಯನನ್ನೊಲಿಸುವ ಪರಿ!

ಇಬ್ಬರೂ : ಅಹಾ – ನಾವಿಬ್ಬರೂ ಇವತ್ತು ಮನುಷ್ಯರಾದೆವು!

ಪದ : (ಧಾಟಿ – ಶಿವಶಂಭೋಮಹಾದೇವ)

ನಮ್ಮಪ್ಪ ಬಸವಣ್ಣ ನಮ್ಮವ್ವ ನೀಲಮ್ಮ

ಪರದೇಶಿ ನಾವಲ್ಲ ಥೈ ಥೈ ಥೈ ॥ಪ॥

ಕೊಲೆ ಸುಲಿಗೆಗಳ ಬಿಡಿಸಿ ಕಳವು ಕವಡನು ಕಳೆದು

ತಿಳಿವನು ನೀಡಿದ ಜೈ ಜೈ ಜೈ ॥

ನಾವೂ ಮನಸೇರೊಳಗ ಬಂದೆವು ಬಸವನ ಬಳಗ

ಜೀವಿಗಳೆಲ್ಲರದು ಸೈ ಸೈ ಸೈ ॥

(ಹಾಡುತ್ತ ಕುಣಿಯತೊಡಗುವರು. ಬಸವ ನೀಲಾಂಬೆಯರು ನಗುತ್ತ ನೋಡುತ್ತ ನಿಲ್ಲುವರು. ತೆರೆ)

ಮೂರನೆಯ ಅಂಕ

ನೋಟ ೧

(ಹರಳಯ್ಯನ ಮನೆ. ಹರಳಯ್ಯನು ಕುಳಿತು ಚರ್ಮಕಾಯಕದಲ್ಲಿ ಆಸಕ್ತನಾಗಿದ್ದಾನೆ.)

ಹರಳಯ್ಯ : ಸ್ಥೂಲ, ಸೂಕ್ಷ್ಮ, ಕಾರಣಗಳೆಂಬ ಮೂರುಕಂಭವ ನೆಟ್ಟು, ಆಗುಹೋಗೆಂಬ ದಡಿಗೋಲಿನಲ್ಲಿ ಅಗಡದ ಎಮ್ಮೆಯ ಚರ್ಮವ ತೆಗೆದು, ಉಭಯ ನಾಮವೆಂಬ ನಾರಿನಲ್ಲಿ ತಿತ್ತಿಯನೊಪ್ಪವಮಾಡಿ, ಭಾವವೆಂಬ ತಿಗುಡಿನಲ್ಲಿ ಸರ್ವಸಾರವೆಂಬ ಕಾರದ ನೀರಹೊಯ್ದು, ಅಟ್ಟೆಯ ದುರ್ಗುಣವಕೆಟ್ಟು ಮೆಟ್ಟುವರೆ ಅವರಿಗೆ ಮೆಟ್ಟಿಸಬಂದೆ ಮೆಟ್ಟಡಿಯಚಪ್ಪಲ. (ಸ್ವಲ್ಪ ಹೊತ್ತು ಹಾಗೆಯೆ ಕೆಲಸಮಾಡಿ ಎದ್ದು) ಕಾಯಕದಲ್ಲಿ ನಿರತನಾದರೆ ಮನಸ್ಸು ಎಷ್ಟು ಪ್ರಪುಲ್ಲವಾಗುತ್ತದೆ, ಪ್ರಸನ್ನವಾಗುತ್ತದೆ? ಜಗತ್ತಿನ ಸರ್ವ ವಿಕಾರಗಳನ್ನು ಕಳೆದೊಗೆದು ಚಿತ್ತವು ಪರಿಶುದ್ಧವಾಗುತ್ತದೆ, ಪವಿತ್ರವಾಗುತ್ತದೆ? ಕಾಯಕವೇ ಕೈಲಾಸವೆಂದುದು ಶರಣರ ಅಮೃತವಾಣಿ. ಎಂಥ ಅಪೂರ್ವ ತತ್ವ! ಇದರಲ್ಲಿ ಎಂಥ ರಹಸ್ಯವಿದೆ! ನುಲಿಯ ಚಂದಯ್ಯನವರಂತೂ ಕಾಯಕದಲ್ಲಿ ನಿರತನಾದರೆ ಗುರುದರುಶನವನ್ನಾದರೂ ಮರೆಯಬೇಕು, ಲಿಂಗಪೂಜೆಯನ್ನಾದರೂ ತೊರೆಯಬೇಕು, ಜಂಗಮದ ಹಂಗು ಸಹ ಹರಿಯಬೇಕೆಂದು ಅಪ್ಪಣೆಕೊಡಿಸಿದ್ದಾರೆ. ಎಷ್ಟು ಸ್ವಲ್ಪ ದಿವಸಗಳಲ್ಲಿ ಎಂಥ ಅಭೂತಪೂರ್ವಕ್ರಾಂತಿ! ಈ ಕ್ರಾಂತಿಯ ಸೀಮಾಪುರುಷರು ಬಸವಣ್ಣನವರು. ಅಹಾ, ಆ ಕಲ್ಯಾಣಮೂರ್ತಿ ಬಸವಣ್ಣನವರ ನಾಮಸ್ಮರಣಮಾತ್ರದಿಂದ ಮನಸ್ಸಿನ ಮಲಿನತೆಯು ದೂರವಾಗುತ್ತದೆ. ದುಷ್ಟವಿಚಾರಗಳು ದೂರ ತೊಲಗುತ್ತವೆ; ಹೃದಯವು ನಿರ್ಮಲವಾಗುತ್ತದೆ; (ಒಳಗೆ ನೋಡಿ) ಏ ಶೀಲಾ, ಶೀಲಯ್ಯ ಓ ಶೀಲವಂತಯ್ಯ!

ಶೀಲ : (ಪ್ರವೇಶಿಸಿ) ಅಪ್ಪಾ, ನನ್ನನ್ನು ಏನು ಕಾರಣ ಕರೆದೆ?

ಹರಳ : ಶೀಲವಂತಾ ಬಸವಣ್ಣನವರ ನೆನಪಾಗಿ ಮನಸ್ಸಿನಲ್ಲಿ ಭಕ್ತಿಯ ಆವೇಗವು ಹೆಚ್ಚಿದೆ. ನೀನು ಬಸವಣ್ಣನವರ ವಚನಗಳನ್ನು ಬಹು ಸುಂದರವಾಗಿ ಹಾಡುವಿಯಲ್ಲವೆ? ಒಂದೆರಡು ವಚನಗಳನ್ನು ಹಾಡು ಮಗು-ಬುದ್ಧಿ ಹೃದಯಗಳಲ್ಲಿ ಒಮ್ಮೆಗೇ ಬೆಳಕು ಬೀಳುವದು!

ಶೀಲ : ಅಪ್ಪಾ, ಬಸವಣ್ಣನವರ ವಚನಗಳೆ? ಅಹಾ, ಅವು ವಚನಗಳಲ್ಲ; ಅನುಭಾವದ ಕಿಡಿಗಳು, ಮಿಂಚಿನ ಕುಡಿಗಳು. ಅವರ ಆಳವಾದ ಅರಿವಿನಿಂದ ಆರಿಸಿ ತೆಗೆದ ಅಣಿಮುತ್ತುಗಳು, ಅಮೃತದ ತುತ್ತುಗಳು, ಬೆಳಕಿನ ಬಿತ್ತುಗಳು! ತನುಸಾರಾಯ, ಮನಸಾರಾಯ, ಭಾವಸಾರಾಯನಲ್ಲವೆ ಬಸವಣ್ಣ? ವಿಶ್ವ ಜೀವಜ್ಯೋತಿ, ಮಹಾಕಾರುಣಿಕ, ಭಕ್ತಿಭಾಂಡಾರಿ! ಆದರೂ ಎಷ್ಟು ವಿನಯ! ಎಂಥ ಕಿಂಕರಭಾವ! ಸರಸಸಜ್ಜನತೆ ಅಪ್ಪಾ, ಈ ವಚನವನ್ನು ಕೇಳಿರುವಿಯೇನು?

ರಾಗ : ಮುಲ್ತಾನಿ ತಾಳ : ಜಲದೇಕ್ಕಾ ಚಾಲ : ಗೋವಿಂದಸೋ....

ಕರಗಿಸಿ ಎನ್ನ ಮನದ । ಕಾಳಿಕೆಯ ಕಳೆಯಯ್ಯ ॥ಪ॥

ಒರೆಗೆ ಬಣ್ಣಕ್ಕೆ ತಂದು । ಪುಟವಿಕ್ಕಿ ನೋಡಯ್ಯ ॥೧॥

ಕಡಿಹಕ್ಕೆ ಬಡಿಹಕ್ಕೆ ತಂದು । ಎನ್ನ ಕಡಿಯಾಣಿಯ ಮಾಡಿ ॥೨॥

ಶರಣರ ತೊಡಿಗೆಯ ಮಾಡಿ । ಸಲಹು ಕೂಡಲಸಂಗಮದೇವಾ ॥೩॥

ಹರಳ : ಅಹಾ-ಮುತ್ತಿನಂತಹ ಮಾತು! ಇನ್ನೊಂದು ಹೇಳು ಮಗೂ, ವಚನಗಳನ್ನು ಕೇಳಿದಷ್ಟೂ ಕೇಳಬೇಕೆನ್ನಿಸುತ್ತದೆ; ಎಷ್ಟು ಕೇಳಿದರೂ ತೃಪ್ತಿಯಿಲ್ಲ!

ಶೀಲ : ವಚನಗಳ ಪ್ರಭಾವವೇ ಅಂತಹುದು ಅಪ್ಪಾ! ಅಣ್ಣನವರೇ ಹೇಳಿಲ್ಲವೆ? ಹಾಲತೊರೆಗೆ ಬೆಲ್ಲದ ಕೆಸರು, ಸಕ್ಕರೆಯ ಮಳಲು, ತವರಾಜದ ನೊರೆ ತೆರೆಯಂತೆ ಆದ್ಯರ ವಚನವಿರಲು ಬೇರೆ ಬಾವಿಯ ತೋಡಿ ಉಪ್ಪನೀರುಂಬುವನ ವಿಧಿಯಂತೆ ಆಯಿತ್ತೆನ್ನ ಮತಿ!

ಹರಳ : ಹೌದು ಕುಮಾರಾ! ಆದ್ಯರ ವಚನ ವೇದ್ಯರಿಗಲ್ಲದೇ ಸಾಧ್ಯವಾಗದು. ಆದ್ಯರ ವಚನ ಪರುಷ ಕಂಡಯ್ಯ! ಅಧರಕ್ಕೆ ಕಹಿ, ಉದರಕ್ಕೆ ಸಿಹಿ! ಕೂಡಲಸಂಗನ ವಚನ ಬೇವಸವಿದ್ದಂತೆ. ಇರಲಿ, ಆ 'ಕಂಡಭಕ್ತರಿಗೆ' ಹಾಡು!

ಶೀಲ :

ರಾಗ : ಮಿಶ್ರಕಾಫಿ ತಾಳ : ಖವಾಲಿ ಚಾಲ : ಗೋರಿಧೀರೆ ಚಲೋ...

ಕಂಡಭಕ್ತರಿಗೆ । ಕೈಯ ಮುಗಿವಾತನೇ ಭಕ್ತ ॥ಪ॥

ಮೃದುವಚನಗಳೇ ಸಕಲ ಜಪಂಗಳಯ್ಯ
ಮೃದುವಚನಗಳೇ ಸಕಲ ತಪಂಗಳಯ್ಯಾ ॥೧॥

ಸದುವಿನಯವೇ ಸದಾಶಿವನೊಲುಮೆ
ಅಯ್ಯಾ ಕೂಡಲಸಂಗಮದೇವ ॥೨॥

ಹರಳ: ವೀರಶೈವಾಚಾರದ ನೀತಿಯ ನೆಲಗಟ್ಟು ಈ ವಚನ ಶೀಲಯ್ಯ ಬಸವಣ್ಣನವರು ಹೀಗೆ ನುಡಿದಿರುವರಷ್ಟೇ ಅಲ್ಲ, ಅವರು ನಿತ್ಯಜೀವನದಲ್ಲಿ ಇದನ್ನು ಸಂಪೂರ್ಣ ಆಚರಿಸಿ ತೋರಿದವರು.

(ಒಳಗೆ ಬಸವಣ್ಣನವರು ಹಾಡುತ್ತ ಹೋಗುವುದನ್ನು ಕೇಳುವರು)

ರಾಗ : ಮಾರವಾ ತಾಳ : ತ್ರಿತಾಲ ಚಾಲ : ಕೋನನಗರಮೇಜಾಯೆಬಸಿರವಾ

ಅಪ್ಪನು ನಮ್ಮ ಮಾದಾರ ಚನ್ನಯ್ಯ

ಬೊಪ್ಪನು ನಮ್ಮ ಡೋಹರ ಕಕ್ಕಯ್ಯಾ ॥ಪ॥

ಚಿಕ್ಕಯ್ಯನೆ ನಮ್ಮಯ್ಯ ಕಾಣಿರಯ್ಯ

ಅಣ್ಣನು ನಮ್ಮ ಕಿನ್ನರಿಯ ಬೊಮ್ಮಯ್ಯ

ಎನ್ನನೇತಕ್ಕೆ ಅರಿಯಿರಿ

ಕೂಡಲಸಂಗಮದೇವ? ॥೧॥

ಶೀಲ : (ಆಲಿಸಿ) ಅಪ್ಪಾ ಬಸವಣ್ಣನವರು! ಇಲ್ಲಿಯೇ ಸಮೀಪದಲ್ಲಿ ಹೋಗುತ್ತಲಿದ್ದಾರೆ! ಈ ದೇವವಾಣಿ ಅವರದೇ ಅಲ್ಲವೆ? ಓಡಿಹೋಗಿ ಕರೆತರುವೆನು; ತೀವ್ರ ಆಸನವನ್ನು ಸಿದ್ಧಗೊಳಿಸಿರಿ! (ಹರಳಯ್ಯನು ಆಸನ ತರಲು ಒಳಗೆ ಹೋಗುವನು. ಶೀಲನು ಹೋಗಿ ಬಸವಣ್ಣನವರೊಡನೆ ಬಂದು.) ಹೀಗೆ ದಯಮಾಡಿಸಿರಿ ಮಹಾನುಭಾವರೇ! ಬಡವರ ಮನೆಯಲ್ಲಿ ತಮ್ಮ ಪದರಜವನ್ನು ಕೆಡಹಿ ಪುನೀತಗೊಳಿಸಿರಿ.

ಬಸವ : ಶೀಲವಂತಯ್ಯಾ, ನೀವು ಬಡವರೆ? ಅಲ್ಲಲ್ಲ; ಮನೆ ನೋಡಾ ಬಡವರು; ಮನ ನೋಡ ಸಿರಿವಂತರು! ಧನ ನೋಡಾ ಬಡವರು; ಘನಮನಸಂಪನ್ನರು! ಉಪಮಿಸಬಾರದ ಉಪಮಾತೀತರು, ಕೂಡಲಸಂಗಮದೇವಾ ನಿಮ್ಮ ಶರಣರು! ಭಕ್ತಿಯಿಲ್ಲದ ಬಡವನು ನಾನು ಶೀಲಯ್ಯ! ಕಕ್ಕಯ್ಯನ ಮನೆಯಲ್ಲಿ ಬೇಡಿದೆ, ಚನ್ನಯ್ಯನ ಮನೆಯಲ್ಲಿ ಬೇಡಿದೆ, ಹರಳಯ್ಯನ ಮನೆಯಲ್ಲಿ ಬೇಡಿದೆ, ಎಲ್ಲ ಪುರಾತನರು ನೆರೆದು ಭಕ್ತಿ ಭಿಕ್ಷೆಯನ್ನು ನೀಡಿದರೆ ಎನ್ನ ಹೃದಯಪಾತ್ರೆಯು ತುಂಬಿತ್ತು!

ಹರಳಯ್ಯ : (ಒಳಗಿನಿಂದ ಕಂಬಳಿಸಹಿತ ಬಂದು) ಭಗವಾನ್, ಭಗವಾನ್, ನಿಮ್ಮ ಶ್ರೀಪಾದಕ್ಕೆ ಶರಣು!

ಬಸವ : ಶರಣು, ಹರಳಯ್ಯ ತಂದೆ; ಶರಣು, ಶರಣು, ಶಿವಶರಣು!

ಹರಳ : ಅಯ್ಯೋ ಬಸವರಸರೇ, ಇದೇನನ್ನು ಮಾಡಿದಿರಿ? ನನಗೆ'

ತಮ್ಮಡಿಯ ತೊತ್ತಾದ ನನಗೆ, ತಾವು ಮೂರುಸಲ ಶರಣೆನ್ನಬಹುದೆ? ಹಾಯ್, ಅನರ್ಥವಾಯಿತು, ಮಹತ್ಪಾಪವು ಸಂಭವಿಸಿತು! ನಾನು ಒಂದು ಸಲ ಶರಣೆಂದರೆ ತಾವು ಮೂರು ಸಲ –ಅಯ್ಯೋ ಅನಾಹುತವೇ!

ಬಸವ : ಹರಳಯ್ಯ ತಂದೆ! ಇದೇಕೆ ಉದ್ವೇಗಗೊಂಡಿರುವೆ? ಉತ್ತಮ ಕುಲದಲ್ಲಿ ಹುಟ್ಟಿದೆನೆಂಬ ಕಷ್ಟತರದ ಹೊರೆಯ ಹೊರಿಸದಿರು ಹರಳಯ್ಯ! ನೀನು ನನಗಿಂತ ಹಿರಿಯ!

ಶೀಲ : ಅದು ಹೇಗೆ ಮಹಾತ್ಮಾ? ಜೋಡುಹೊಲೆಯುವ ಕಾಯಕ ಮಾಡುವೆವಲ್ಲ?

ಬಸವ : ಕಾಯಕದಲ್ಲಿ ಕುಲಭೇದವಿಲ್ಲ ಶೀಲಯ್ಯ! ಪುರುಷಾರ್ಥಸಾಧನೆಗಾಗಿ ಕಾಯಕ. ಸತ್ಯಶುದ್ಧ ಕಾಯಕವು ಯಾವುದಾದರೂ ಸರಿಯೆ. ಕಾಯಕದಿಂದ ಮನುಷ್ಯನ ವ್ಯಕ್ತಿತ್ವವು ಮೇಲು ಕೀಳೆಂದೆಣಿಸುವದು ಮಹತ್ಪಾಪ! ದೇವಸಹಿತ ಭಕ್ತ ಮನೆಗೆ ಬಂದರೆ ಕಾಯಕವಾವುದೆಂದು ಬೆಸಗೊಂಡೆನಾದರೆ ನಿಮ್ಮಾಣೆ, ನಿಮ್ಮ ಪ್ರಮಥರಾಣೆ! ಕೂಡಲಸಂಗಮದೇವಾ, ಭಕ್ತರಲ್ಲಿ ಕುಲವನರಸಿದರೆ ನಿಮ್ಮ ರಾಣೀವಾಸದಾಣೆ! ಹರಳಯ್ಯ, ನೀನು ನನಗೊಬ್ಬನಿಗೇ ಅಲ್ಲ, ಜಗತ್ತಿಗೇ ಮಾನ್ಯನು!

ಶೀಲ : ಭಗವಾನ್ ಮಾನವಲೋಕದ ಮೇಲು ಕೀಳು, ಶ್ರೇಷ್ಠ ಕನಿಷ್ಠ, ಉಚ್ಚ ನೀಚ ಭಾವನೆಗಳಿಗೆ ಕೊಡಲಿಯನ್ನೇ ಎತ್ತಿದೆ. ಆದರೆ ಈ ಉದಾತ್ತ ವಿಶಾಲ ತತ್ವವು ಜನಜೀವನದಲ್ಲಿ ಬೆರೆತುಹೋಗಬಹುದೆ ಅಥವಾ ಮಾತಿನಲ್ಲಿಯೆ ಉಳಿಯುವುದೆ? ಜಗತ್ತಿನಲ್ಲಿ ಪ್ರಚಲಿತವಿರುವ ಎಲ್ಲ ಕುಲಜಾತಿಗಳಲ್ಲಿ ಪರಸ್ಪರ ಅನ್ನೋದಕ ಶರೀರಸಂಬಂಧಗಳು ನಡೆದಾಗಲೇ ಈ ತತ್ವವು ಕಾರ್ಯರಂಗಕ್ಕಿಳಿದಂತಾಗುವುದಿಲ್ಲವೆ?

ಬಸವ : ನನ್ನ ಆದರ್ಶಲೋಕದ ಸುವರ್ಣಸ್ವಪ್ನವೇ ಅದಲ್ಲವೆ, ಶೀಲಯ್ಯ? ನನ್ನ ಅಂತರಂಗದ ತಪಸ್ಸೆಲ್ಲ ಅದೊಂದು ಕನಸನ್ನು ನನಸಾಗಿಸುವುದಕ್ಕಾಗಿ! ಯಾವಕಾಲಕ್ಕೆ ಆಗುವದೋ ಯಾರು ಬಲ್ಲರು? ಸಂಗಮನಾಥನ ಕೃಪೆಯಿದ್ದರೆ ಒಂದಿಲ್ಲ ಒಂದು ದಿನ ಅದೂ ನೆರವೇರಬಹುದು. ಅಂದಿನ ದಿನವೇ ವಿಶ್ವದಲ್ಲೆಲ್ಲ ಸರ್ವಸಮತಾಭಾವದ ಸ್ವಾತಂತ್ರ್ಯಭೇರಿ ಮೊಳಗುವುದು. ಮನುಷ್ಯಲೋಕದಿಂದ ದಾಸ್ಯ, ಬೌದ್ಧಿಕ ಪಾರತಂತ್ರ್ಯ, ವಿಷಮತೆ, ದ್ವೇಷ, ಮೇಲುಕೀಳುಗಳ ಕಾಳಕೂಟ, ಮಾತ್ಸರ್ಯ, ಕುಲದಛಲ, ವರ್ಣಭ್ರಾಂತಿಗಳೆಲ್ಲ ಮಾಯಾವಾಗುವುವು! ಹರಳಯ್ಯ, (ತಬ್ಬಿಕೊಂಡು) ಹೋಗಿಬರುವೆ. ಖಿನ್ನನಾಗದಿರು, ಸಂತಪ್ತನಾಗದಿರು; ನಾನು ಯೋಗ್ಯವಾದುದನ್ನೇ ಮಾಡಿರುವೆ. ಶರಣರ ಶಿಶು ನಾನು; ನೀನು ಹಿರಿಯ, ನಾನು ಕಿರಿಯ. ಶೀಲಾ, ಹೋಗಿಬರುವೆ. (ಇಬ್ಬರೂ ಕಳಿಸಬರುವರು) ನೀವಿನ್ನು ನಿಲ್ಲಿರಿ, ಪ್ರೇಮದ ಪುತ್ಥಳಿಗಳೇ, ಶರಣಾರ್ಥಿ! (ಹೋಗುವನು)

ಹರಳ : ಬಸವಣ್ಣ, ಬಸವಣ್ಣಾ, ಇದೇನು? ಪುನಃ ಶರಣಾರ್ಥಿ! ಎಲಾ ಪಾಪಾತ್ಮಾ, ದುಷ್ಟ ಹರಳಯ್ಯ, ನೀನು ಪುನಃ ಕಲ್ಲಿನಕಂಭದಂತೆ ಇಂತು ಜಗಜ್ಯೋತಿ ಬಸವಣ್ಣನಿಂದ ಶರಣಾರ್ಥಿ ಎನ್ನಿಸಿಕೊಂಡೆಯಾ? ಪಾಪಿ, ಯಾವ ನರಕಯಾತನೆಯನ್ನು ಅನುಭವಿಸಬೇಕೆಂದು ನಿನ್ನ ಕಾಲ ಮೇಲೆ ನೀನೇ ಕಲ್ಲು ಚೆಲ್ಲಿಕೊಳ್ಳುತ್ತಲಿರುವೆ? ಯಾವ ವಿನಾಶದ ಬಾಯಿಗೆ ತುತ್ತಾಗಬೇಕೆಂದು ಹೀಗೆ ಸೊಕ್ಕಿನಿಂದ ಮೈಮರೆತು ವರ್ತಿಸುತ್ತಿರುವೆ? ಹೇಗೆ ಮಾಡಲಿ? ಯಾರಿಗೆ ಮೊರೆಹೋಗಲಿ? ಈ ಪಾಪವನ್ನು ಹೇಗೆ ತೊಳೆದುಕೊಳ್ಳಲಿ? (ನೆಲಕ್ಕೆ ಬೀಳುವನು.)

ಶೀಲಾ : (ತಂದೆಯನ್ನೆತ್ತಿ ಸಂತೈಸುವ ಸ್ವರದಲ್ಲಿ) ಅಪ್ಪಾ, ಅಪ್ಪಾ, ಎದ್ದೇಳು; ಶಾಂತನಾಗು! ಕೃತಕರ್ಮಕ್ಕಾಗಿ ಪಶ್ಚಾತ್ತಾಪಪಟ್ಟದ್ದಾಯಿತು. ಈಗೇನಾಗಿದೆ? ಬಸವಣ್ಣನವರು ಕರುಣಾಸಾಗರರು; ದಯಾಮೂರ್ತಿಗಳು. ಅವರ ಅಂಗಳದಲ್ಲಿಯೇ ಬಿದ್ದು ಅಂಗಲಾಚಿ ಕ್ಷಮೆಯ ಭಿಕ್ಷೆಯನ್ನು ಬೇಡಿಕೊಂಡರಾಯಿತು!

ಹರಳ : (ಎದ್ದು ವಿಚಾರಿಸಿ) ಹಾಂ – ತಿಳಿಯಿತು. (ಶೀಲನಿಗೆ) ಶೀಲಯ್ಯ, ನೀನು ನಡೆ. ಲಿಂಗಾರ್ಚನೆಗೆ ಸಿದ್ಧತೆಗಳನ್ನು ಮಾಡು. (ಶೀಲನು ಹೋಗಲು) ಈ ನನ್ನ ಸುಟ್ಟದೇಹಕ್ಕೆ ಅಲ್ಲವೇ ಭಗವಾನನು ವಂದಿಸಿದ್ದು? ಚರ್ಮವನ್ನೇ ಸುಲಿದು ತೆಗೆದು ಚಮ್ಮಾವುಗೆಗಳಿಗೆ ಹೊದಿಸಿ, ಅಣ್ಣನವರ ಪಾದಗಳಿಗೆ ತೊಡಿಸಿ ಪಾಪಭರದಿಂದ ಮುಕ್ತನಾಗುವೆನು. (ತೆರೆ ಬೀಳುವುದು)

(ಮುಂದೆ ರಾಜಮಾರ್ಗ)

ನೋಟ ೨

ರಾಜವೀಥಿ – ಮಾರ್ಗಕ್ಕೆ ಹೊಂದಿ ಮಧುವರಸನ ಮನೆ

(ಇಬ್ಬರು ಕುಡುಕರು ಕುಡಿದು ಪೇಚಾಡುತ್ತ ಬರುವರು)

ದುರಗ : ಲೇ ಹುಲಗಾ, ನಮ್ಮ ರೊಕ್ಕಾಕೊಟ್ಟು ನಾವು ಎಂಡಾಕುಡಿದರೆ ಮಂದೀಗೆಷ್ಟಲೆ ಹೊಟ್ಟೀಕಿಚ್ಚು? ನಮ್ಮ ಸುಖಾನೋಡಿ ಸಾಯತಾರ ಹೊಟ್ಟಿ ಉರಿದು. ಉಳಿದವರದೆಲ್ಲ ಕಾಟ ಹಾಳತಾಗ ಐತೆ. ಆ ನಿಂಗವಂತರದೇ ಭಾಳ ಆಗ್ಯೆತೆಲೆ ಧಿಮಾಕ? ಉಳಿದವರು ನಮ್ಮ ಉಸಾಬರಿಗೇ ಬರೋದಿಲ್ಲ; ನಮ್ಮನ್ನ ನೋಡಿದರೆ ಹೆದರಿ ದೂರ ಹಾರತಾರ. ಇವರು ಮಾತ್ರ ಬಂದಕೂಡ್ಲೆ ಬೋಧಾ ಮಾಡಾಕ ಸುರುವು ನಾವೇನಾದರೂ ಅವರಿಗೆ ಕುಡೀಬ್ಯಾಡಾ ಅಂತಾ ಹೇಳ್ತೀವೆ? ಕುಡೀತೀವಿ ಅಂದರೆ ರೊಕ್ಕಾ ಕೊಡಾಕೂ ಸಜ್ಜು ಅದೀವಿ. ಕುಡಿಯೋದು ಬರದಿರಬೇಕಲ್ಲ ಬರಮಾ ಅವರ ಬೋಕ್ಯಾಗ ಕಸಬರಿಗೀಲೆ!

ಹುಲಗ : ಭೇಷ್ ಮಾತಾಡಿದಿ ನೋಡು ನೀನು. ಪುನ್ನೇವು ಬೇಕಲೇ ಎನ್ನಾ ಈ ಅಮುರತ ಸಿಗಬೇಕಾದರೆ, ಹಿಂದೆ ಪಡದಬಂದಿರಬೇಕು ಅಪ್ಪನಲೋಕದಾಗ. ಹೌದಾದ್ರ ಹೌದನ್ನು ಅಲ್ಲಾದ್ರ ಅಲ್ಲಾ ಅನ್ನು - ಎನ್ನ, ದುರಗನ್ನ!

ದುರಗ : ನಾಕೂಮಂದಿಗೆ ಸೋಬಸಾಮಾತು ಆಡಿದಿ ನೋಡು ನೀನು. ರೊಕ್ಕಾ ಅಂದರೆ ಬಿದ್ದು ಸಾಯೋ ಹಕ್ಕಲ ಸಾವಕರ್‍ರು ನಾವು ಕುಡಿಯೋದು ನೋಡಿ ದಕ್ಕಾಗ್ಯಾರ. ರೊಕ್ಕ ಅದು ಭಾಳ ಇರಬಾರದು; ಇದ್ದರ ದುಕ್ಕ, ಸೋಸಿನೋಡು ಇದರ ಲೆಕ್ಕ! ನಮ್ಮಾಕಿ ತವರುಮನ್ಯಾಗಿಂದ ಹಮ್ಮಿಣಿ ತುಂಬ ರೊಕ್ಕಾ ಹೆಡಗಿತುಂಬ ವಸ್ತ್ರಾ ತಂದಿದ್ದಳಲ್ಲಾ, ಅವೆಲ್ಲಾ (ಮಗಿತೋರಿಸಿ) ಈ ಅವ್ವಗಿಟ್ಟು ಅಡ್ಡಬಿದ್ದೆ. ಮಟಾಮಾಯ!

ಹುಲಗ : ಸರದಾರ ಕೆಲಸಾಮಾಡಿದಿ ನೋಡು ನೀನು. ಕುಡುಕರು ಸುಮಾರಲ್ಲ ನೋಡು. ನಮ್ಮವ್ವ ಸಣ್ಣಾಕಿ ಆದರೆ ನಾವು ಸಣ್ಣವರಾದೇವ? ಅವ್ವಾ ಸಂಣವ್ವ ಅಲ್ಲ ಈಕಿ. ದೂರ ಈಕಿ ನೆಲಿ. ನಿದ್ದೀತರಸಾಕ, ಹೇಣ್ತಿ ಮರಸಾಕ, ಬಾಳವಿ ಬಿಡಸಾಕ, ಬಾಯಿಮ್ಯಾಲೆ ಬಡಿಸಾಕ ಜಗಳಾ ಕೊಡಸಾಕ ಅವ್ವ ಹಿರದ ಕತ್ತಿ!

ದುರಗ : ಅದಕಂತನ ನಾನು ಈ ಅವ್ವನ್ನ ಗಟ್ಟಿ ನಂಬಿಬಿಟ್ಟೀನಿ. ಏಸು ಮಂದಿ ಜಗ್ಗಿದರೆ ಬಿಟ್ಟೇನಪಾ ಈ ಅವ್ವನ ಸೆರಗನಾ? ಹುಟ್ಟಬೇಕು ಇಲ್ಲೆ, ಸಾಯಬೇಕು ಇಲ್ಲೆ. ಅವ್ವನ್ನ ನಂಬಿ ಕೆಟ್ಟವರಿಲ್ಲ ಹುಲಗಾ - ನಂಬದ ಉಳದವರೂ ಇಲ್ಲ. ಅವ್ವ ಬಲುತಂಪು ಕುಡಿದರೆ ಬಾಯಿಗೆ ಕಂಪು, ಕಣ್ಣಿಗೆ ಜಂಪು.

ಹುಲಗ : ಹಗಲಿನ ಹೆಂಡಕ್ಕ ಹ್ಯಾಗಲೆ ಗತಿ?

ದುರಗ : ಅದಕ್ಯಾಕ ಚಿಂತಿ? ನಮ್ಮಾಕಿ ಗುಳಿದಾಳಿ ಉಳಿದಿತ್ತು. ಅದಕ್ಕೆ ನಮ್ಮಕೈಬಿತ್ತು. ಇನ್ನೂ ತರತೀನಿ ತೊಗೊ - ಉಟ್ಟ ಸೀರಿ ಉಳಿಸಿದರೆ ಹೆಂಡಾ ಯಾಕ ಕುಡೀಬೇಕು? ಅಲ್ಲದುಪದ್ದೋತಿ- ಅವ್ವಗ ಅಪಮಾನ ಆದೀತು. ಮತ್ಯಾಕ ತಡ, ಕುಡೀ ಕುಡೀ, ಜೋಲಿ ಹೊಡೀ ಹೊಡೀ, ನೆಲ ಹಿಡೀ ಹಿಡೀ (ಇಬ್ಬರೂ ಕುಡಿಯುತ್ತ)

ಹುಲಗ : ಅವ್ವನಮ್ಯಾಗ ಒಂದು ಹಾಡರ ಹೇಳಲೇ-

ದುರಗ : ಲೇ, ಈಪದಾ ಕಲಕೋ. ನಾನು ಕಟ್ಟಿದ್ದು ಕೋತೆ ಇದು.

ಎಂಡವನು ಕುಡಿದಾತ ಎಂಡತಿಗೆ ಗಂಡಾದ

ಪಿಂಡವನು ಬೆಳೆಸಿ ತುಂಡಾದ ಲೋಕಕ್ಕೆ

ಗಂಡಾದನೆಂದಾ ಜಗಭಂಡ ॥ ಈಚಲಮರದವ್ವಾ ಜೈ !

ಹುಲಗ : ಹೆಂಡದ ಮಗಿಯವ್ವಾ ಜೈ !

ದುರಗ : ಚಿಪ್ಪಕ್ಕ ಚಿಪ್ಪಣ್ಣಿ ಜೈ, ಜೈ!

ಬಸವ : (ಪ್ರವೇಶಿಸಿ) ಹರಳಯ್ಯನ ಸರಳಜೀವನ, ಶರಣಜೀವನವು ಎಷ್ಟು ತಿಳಿಯಾದುದು! (ಮುಂದೆ ನೋಡಿ) ಓಹೋ ಇಲ್ಲಿ ಇಬ್ಬರು ಅಣ್ಣಂದಿರು ಸುರಾಪಾನದಲ್ಲಿ ಮಗ್ನರಾಗಿದ್ದಾರೆ. ಶಿವಶಿವಾ ಜಗತ್ತಿನಲ್ಲಿ ಎಷ್ಟೊಂದು ದುಷ್ಟ ವ್ಯಸನಗಳು? ಒಬ್ಬ ಮಾನವನಿಗೆ ಎಷ್ಟು ಪ್ರಕಾರದ ವಿನಾಶಕಾರಕ ವ್ಯಸನಗಳು? ಅಂಗದಿಚ್ಛೆಗೆ ಮದ್ಯ ಮಾಂಸವ ಸೇವಿಸುವರು, ಕಂಗಳಿಚ್ಛೆಗೆ ಪರವಧುವ ನೆನೆವರು. ಅದರಲ್ಲಿ ಸುರಾರಾಕ್ಷಸಿಯಂತೂ ಜನಜಂಗುಳಿಯ ಜೀವನವನ್ನೇ ಹಿಂಡಿಬಿಟ್ಟಿದ್ದಾಳೆ. ಈ ಭಯಂಕರ ವ್ಯಸನದಿಂದ ಬಿಡುಗಡೆಹೊಂದದೆ ನಾಡಿನ ನಾಡಿಗಳಲ್ಲಿ ಹೊಸ ನೆತ್ತರು ಹರಿಯದು. ಅಗಲಿ, ಇವರನ್ನು ಎಚ್ಚರಿಸುವೆನು. (ಮುಂದಕ್ಕೆ ಹೋಗಿ) ಅಣ್ಣಂದಿರೆ, ನೀವು ಯಾರು? ಇದೆಂಥ ಪಾಪ ಕಾರ್ಯವನ್ನು ನಡೆಸಿರುವಿರಿ?

ಹುಲಗ : (ಗದಗದ ನಡುಗುತ) ಲೇ, ಮಂತ್ರಿ ಬಸವಣ್ಣನವರು! ಮರಣ ಬಂತು ನಮಗೆ (ಇಬ್ಬರು ಓಡಲೆತ್ನಿಸುವರು)

ಬಸವ : (ಕೈಹಿಡಿದು ನಿಲ್ಲಿಸಿ) ಭಯಪಡಬೇಡಿರಿ; ನಾನು ನಿಮ್ಮವನೇ ಇದ್ದೇನೆ. ನೀವು ಈ ಕೆಟ್ಟ ಚಟಕ್ಕೆ ಬಿದ್ದು ವ್ಯರ್ಥವಾಗಿ ನಾಶವಾಗಿ ಹೋಗುವುದನ್ನು ನಾನು ನೋಡಲಾರೆ. ಅಣ್ಣಂದಿರೆ, ನೀವು ಹಿಡಿದ ಮಗಿಯನ್ನೇ ನಂಬಿ ಲಕ್ಷ ಸಂಸಾರಗಳು ಮಣ್ಣುಗೂಡಿ ಹೋಗಿವೆ, ಇನ್ನೂ ಹೋಗುತ್ತಲಿವೆ. ಈ ಮಗಿಯಲ್ಲಿ ನೀವು ಕುಡಿಯುವುದು ಹೆಂಡವನ್ನಲ್ಲ, ನಿಮ್ಮ ಕುಡುಕತನಕ್ಕೆ ತುತ್ತಾಗಿ ದೈನ್ಯದಿಂದ ಗೋಳಿಟ್ಟು ಅಳುವ ನಿಮ್ಮ ಹೆಂಡರುಮಕ್ಕಳ ಕಣ್ಣೀರನ್ನು! ಕರುಳಿನ ನೀರನ್ನು ಹೆಂಡತಿಯನ್ನು ಉಪವಾಸ ಒರಲಿಸಿ, ಮಕ್ಕಳ ಮೈಮುಚ್ಚಲು ಹರಕುಬಟ್ಟೆಯತುಂಡು ಇಲ್ಲದಂತೆ ಎಲ್ಲವನ್ನೂ ಈಚಲಮರಕ್ಕೆ ಎಡೆಮಾಡಿ, ನಿಮ್ಮ ಮಾನವನ್ನು ಕವಡೆಗಿಂತ ಕಡೆಮಾಡಿ ಬೀದಿಯ ಹುಡಿಯಲ್ಲಿ ಕತ್ತೆಗಳಂತೆ ಹೊರಳಾಡಿ, ನೀವು ಹುಟ್ಟಿದ ಕುಲವನ್ನೂ, ನೀವಿದ್ದ ದೇಶವನ್ನೂ, ಮನುಷ್ಯಜನ್ಮವನ್ನೂ ಹೊಲೆಗೆಡಿಸುವ ನಿಮ್ಮ ನಾಚಿಕೆಗೇಡಿಕೆಲಸಕ್ಕೆ ಏನೆನ್ನಲಿ? ವಿಚಾರಮಾಡಿರಿ ಅಣ್ಣಂದಿರೆ! ಅಡಗ ತಿಂಬುವಿರಿ ಕಣಕದಡಿಗೆ ಇರಲಿಕ್ಕೆ, ಸೇವಿಸುವಿರಿ ಸುರೆಯ ಹಾಲುಸಕ್ಕರೆ ಇರಲಿಕ್ಕೆ! ಈ ಬಚ್ಚಲ ನೀರಿಗೆ ಮೆಚ್ಚಿದವರ ಸಂಗಯ್ಯ ಮೆಚ್ಚುವನೆ? ಇನ್ನಾದರೂ ಈ ನರಕದಿಂದ ದೂರ ಉಳಿಯಿರಿ! (ಹತ್ತರಿದ್ದ ದುರಗನ ತಲೆಯಮೇಲೆ ಕೈಯಿಡುವರು. ಅವನು ಗದಗದ ನಡುಗಿ ಕಾಲಮೇಲುರುಳಿ)

ದುರಗ : ಎಪ್ಪಾ, ನಮ್ಮ ಮುಚ್ಚಿದ ಕಣ್ಣು ತೆರೆಸಿದ ದೇವರೇ! ನಮ್ಮನ್ನು ಎಂಥಾ ಹೊತ್ತಿಗೆ ದಾರಿಗೆ ಹಚ್ಚಿದಿರಿ? ನನ್ನ ಸಂಪತ್ತೆಲ್ಲಾ ಈ ಹುಳಿ ರಸಕ್ಕಾಗಿ ಸೂರೆಮಾಡಿದೆ. ನಾನು ಹೋದಾಗ ಹೆಂಡತಿ ಹೊಟ್ಟೆಗಿಲ್ಲದೆ ಹಾಸಿಗೆ ಹಿಡಿದಿದ್ದಳು; ಹುಡುಗರು ಹಪಾ ಹಪಾ ಅಂತಾ ಅಳತಿದ್ದವು. ದನಕರುಗಳೆಲ್ಲಾ ಮೇವು ನೀರು ಇಲ್ದ ಕಣ್ಣುಮುಚ್ಚಿ ನಿಂತಿದ್ದವು. ಈ ಪಾಪಿ ಇಷ್ಟಕ್ಕೂ ಕಣ್ಣು ತೆರೀದ ಹೆಂಡತಿ ತಾಳೀ ಸಹಿತ

ಹರಕೊಂಡು ಬಂದಿದ್ದಾ. ಅಯ್ಯೋ ಎಂಥಾ ಪಾಪಾದಾಗ ಬೀಳತಿದ್ದೆ; ಇನ್ನೊಂದು ಸ್ವಲ್ಪ ತಡೆದಿದ್ದರೆ ಇದನ್ನು ಮಾರಿಬಿಡುತ್ತಿದ್ದೆ. ಎಪ್ಪ, ನಿಮ್ಮದಯದಿಂದಾ ಉಳೀತು. ಇದನ್ನ ಮತ್ತೆ ಹೆಂಡತಿ ಕೊರಳಿಗೆ ಕಟ್ಟಿ ಹೊಸಾ ಸಂಸಾರಾ ಹೂಡುತ್ತೇನೆ. ಹೆಂಡಾ ನಾನು ಬಿಟ್ಟದ್ದು ಅಲ್ಲದ ಕಂಡವರೆಲ್ಲರಿಗೂ ತಿಳಿಹೇಳಿ ಬಿಡಿಸ್ತೇನೆ. ಲೇ ಹುಲಗ, ಬೆಪ್ಪಾಗಿ ನಿಂತೆಯೇಕೆ? ಪಾದಕ್ಕೆ ಬೀಳು (ಅವನು ಬೆಪ್ಪಾಗಿ ನಿಲ್ಲಲು ಅವನನ್ನು ಕಾಲಮೇಲೆ ಕೆಡಹುವನು)

ಹುಲಗಾ : (ಹರ್ಷದಿಂದ) ಎಪ್ಪಾ, ನಿಮ್ಮ ಪಾದ ತಗುಲಿ ನನ್ನ ಪಾಪವೆಲ್ಲಾ ಹೋಯ್ತು. ನಮ್ಮನ್ನು ತಿರುಗಿ ಇಂಥಾ ಕೆಲಸಕ್ಕೆ ಹೋಗದಂತೆ ಏನಾದರೂ ಕಟ್ಟು ಹಾಕಿರಿ!

ಬಸವ : ಚಿಂತಿಸಬೇಡಿರಿ, ನಿಮಗೆ ಪ್ರಭುದೇವರಿಂದ ಲಿಂಗ ಕಟ್ಟಿಸಿ ಇಲ್ಲಿ ಸುಖವನ್ನೂ (ಮೇಲೆ) ಅಲ್ಲಿ ಮುಕ್ತಿಯನ್ನೂ ಪಡೆಯುವ ದಾರಿ ತೋರಿಸಿಕೊಡುವೆನು. ನಡೆಯಿರಿ, ಹೋಗೋಣ.

ಇಬ್ಬರೂ : (ಟಣ್ಣನೇ ಜಿಗಿದು) ದೇವರೇ– ಇವತ್ತು ನಮ್ಮನ್ನ ಉದ್ಧಾರ ಮಾಡಿದಿರಿ! (ಹೋಗುವರು)

(ಇದೆಲ್ಲವನ್ನು ಮನೆಯಲ್ಲಿ ನಿಂತು ನೋಡಿದ ಮಧುವರಸನು ಮುಂದೆ ಬಂದು)

ಮಧುವರಸ : ಭಾಪು, ಬಸವಣ್ಣಾ, ಭಾಪು! ಒಳ್ಳೆಯ ಉದ್ಧಾರ ಕಾರ್ಯವನ್ನು ನಡೆಸಿರುವೆ! ಎಂಥ ವಿಪರೀತ ಕಾಲ! ನಾಲ್ಕಾರು ವರ್ಷಗಳಲ್ಲಿ ಎಂಥ ಧರ್ಮಗ್ಲಾನಿ? ಎಲ್ಲಿಯ ಬಸವನೋ, ಎಲ್ಲಿಯ ಅಲ್ಲಮನೋ, ಎಲ್ಲಿಯ ಪ್ರಭುದೇವನೋ, ಎಲ್ಲರೂ ಒಟ್ಟಾಗಿ ಸೇರಿ ಕಲ್ಯಾಣದ ವಾತಾವರಣವನ್ನು ಕಲುಷಿತ ಮಾಡತೊಡಗಿದ್ದಾರೆ! ಈ ಧರ್ಮಲಂಡರ ಹಾವಳಿಯಿಂದ ಬಿಜ್ಜಳನ ರಾಜ್ಯದಲ್ಲಿ ವರ್ಣ, ಕುಲ, ಗೋತ್ರ ಸೂತ್ರಗಳಿಗೆಲ್ಲ ದಾಳಿಬಂದಿದೆ! ಹೊಲೆಯರು, ಮಾದರು, ಕುಡುಕರು, ಕಳ್ಳರೊಡನೆ ಉಚ್ಚವರ್ಗದವರ ಊಟೋಪಚಾರ! ಅಯ್ಯೋ ಸಮಾನತೆಯ ಸ್ವರೂಪವೆ! ಈ ಧಾರ್ಮಿಕ ಗಂಡಾಂತರವನ್ನು, ಈ ವಿಷಕಾರಕ ಪಂಥವನ್ನು ಬಗ್ಗುಬಡಿಯಲೇಬೇಕು! ಸನಾತನ ಧರ್ಮವನ್ನು ರಕ್ಷಿಸಲೇಬೇಕು!

ಹರಳಯ್ಯ : (ಪ್ರವೇಶಿಸಿ) ಬಸವಣ್ಣನವರು ನನಗೆ ಹೆಚ್ಚು ಸಾರೆ ಶರಣೆಂದು ಹೋದಾಗಿನಿಂದ ನನ್ನ ಮನಸ್ಸು ಕುದಿಯತೊಡಗಿದೆ ಹೃದಯಕ್ಕೆ ಶಾಂತಿಯಿಲ್ಲ, ಸ್ವೈರಣೆಯಿಲ್ಲ. ಈಗ ನನ್ನ ತೊಡೆಯ ಚರ್ಮ ತೊಡಿಸಿ ತಂದಿರುವ ಈ ಆವುಗೆಗಳನ್ನು ಆ ಮಹಾತ್ಮನ ಶ್ರೀಚರಣಗಳಿಗೆ ಅರ್ಪಿಸಿ ಪಾಪದ ಹೊರೆಯಿಂದ ಮುಕ್ತನಾಗುವೆನು.

ಮಧುವರಸ : ಯಾರವನು ಎದುರಿಗೆ ಬರುತ್ತಿರುವವನು? ಯಾರು? ಹರಳಯ್ಯ! ಶೂದ್ರ, ಶ್ವಪಚ! ಭೂಸುರನಾದ ನನ್ನ ಅಂಗಳದಲ್ಲಿ ನಿರ್ಭೀತಿಯಿಂದ ಪ್ರವೇಶಿಸುವಷ್ಟು ಹೊಲೆಯನಿಗೆ ಧೈರ್ಯವೆ? ಹರಳಾ, ದೂರ ಸರಿದು ನಿಲ್ಲು, ಗಾಳಿಯು ನಿನ್ನ ಕಡೆಯಿಂದಲೇ ಬೀಸತೊಡಗಿದೆ! ಎಲಾ, ಏನು ಅನ್ಯಾಯವಿದು? ಬ್ರಾಹ್ಮಣ್ಯಕ್ಕೆ ಬೆಲೆಯೇ ಇಲ್ಲವೆ? ಇದೆಲ್ಲ ಆ ಕುಟಿಲ ಕಾರಸ್ಥಾನಿ ಬಸವನ ಹಾವಳಿಯ ಫಲ?

ಹರಳಯ್ಯ : ದೊರೆಗಳೇ, ನನ್ನನ್ನು ಬೇಕಾದಷ್ಟು ಬೈಯಿರಿ: ಆದರೆ ವಿಶ್ವಭೂತಿಯಾದ ಬಸವಣ್ಣನವರನ್ನು ಮಾತ್ರ ನಿಂದಿಸಬೇಡಿರಿ! ಶಿರಬಾಗಿ ಬೇಡುವೆನು.

ಮಧುವರಸ : ಅಬ್ಬಾ, ಆ ಬಸವನು ಇಷ್ಟೊಂದು ತಲೆ ತಿರುಗಿಸಿದ್ದಾನೆಯೋ ನಿಮ್ಮೆಲ್ಲರಿಗೆ? ಒಳ್ಳೇದು, ನೀನು ಹೊರಟಿರುವುದಾದರೂ ಎಲ್ಲಿಗೆ?

ಹರಳಯ್ಯ : ದೊರೆಗಳೆ, ಮೊನ್ನೆ ಬಸವಣ್ಣನವರು ನಾನು 'ಶರಣು' ಎಂದುದಕ್ಕೆ ಪ್ರತಿಯಾಗಿ 'ಶರಣು, ಶರಣು, ಶಿವಶರಣು' ಎಂದು ಮೂರುಸಲ ವಂದಿಸಿ ಹೋದರು. ಅದರಿಂದ ದುಃಖಿತನಾದ ನಾನು ಈ ಪಾದರಕ್ಷೆಗಳನ್ನು ನನ್ನ ತೊಡೆಯಚರ್ಮದ ಹೊದಕೆಯೊಡನೆ ಸಿದ್ಧಗೊಳಿಸಿ ಅವರಿಗೆ ಅರ್ಪಿಸಿ ಪಾಪ ಮುಕ್ತನಾಗಲು ಹೊರಟಿದ್ದೇನೆ.

ಮಧುವರಸ : (ನಕ್ಕು) ಓಹೋ – ಅಂತಾ ದೊಡ್ಡ ಮಹಾತ್ಮನು ಒಮ್ಮೆ ಹೆಚ್ಚು ಸಲ ಶರಣೆಂದದ್ದಕ್ಕೆ ಈ ರೀತಿ ನಿನ್ನ ದೇಹವನ್ನು ದಂಡಿಸಿದೆಯೇನು? ಒಳ್ಳೇ ಭಕ್ತಿ! ಹೋಗು, ಆ ಡಾಂಭಿಕ ಬಸವನಿಗೆ ಅರ್ಪಿಸು; ನಿನ್ನ ಕುಲಕೋಟಿಯನ್ನೆಲ್ಲ ಉದ್ಧರಿಸುವನು! ಹುಚ್ಚೆ, ಸಂಕರಪಂಥಿಯಾದ ಬಸವನ ಮೇಲೆ ಇಟ್ಟ ಭಕ್ತಿಯನ್ನೇ ಭಗವಾನನ ಮೇಲೆ ಇಟ್ಟಿದ್ದರೆ..... ಹೂಂ ಶೂದ್ರನ ಸಂಗಡ ಹೆಚ್ಚಿನ ಉಪದ್ವ್ಯಾಪವಾದರೂ ಏಕೆ? ನೀವಿಬ್ಬರೂ ನೀರಿಲ್ಲದ ಭಾವಿಯಲ್ಲಿ ಬೀಳಿರಿ! ಕಲ್ಯಾಣಕ್ಕೆ ನನ್ನ ಅವಶ್ಯಕತೆ ಕಂಡುಬಂದಾಗ ನನ್ನ ಕೈ ತೋರಿಸುವೆನು! (ಒಳಗೆ ಹೋಗುವನು)

ಹರಳಯ್ಯ : (ನಕ್ಕು) ಕತ್ತೆ ಬಲ್ಲುದೆ ಕತ್ತುರಿಯ ಪರಿಮಳವ! ಹಂದಿ ಬಲ್ಲುದೆ ಶ್ರೀಗಂಧದ ಬೆಲೆಯ? ಮಂಗ ಬಲ್ಲುದೆ ಮಾಣಿಕ್ಯದ ಮಹತ್ವವನ್ನು? ಇಂಥ ಮದೋನ್ಮತ್ತರು ಬಲ್ಲರೆ ಬಸವಣ್ಣನವರ ಮಹಿಮೆಯನ್ನು? ಹೋಗಲಿ, ನಾನೀಗ ಅಣ್ಣನವರ ಮನೆಗೆ ಹೋಗುವೆನು. (ತೆರೆ ಏಳುವುದು)

(ಹಿಂದೆ ಬಸವಣ್ಣನವರ ಮನೆ)

ನೋಟ ೩

ಬಸವಣ್ಣನವರ ಮನೆ. ಸಮಯ ಸಂಜೆ

(ಮಗನಾದ ಬಾಲಸಂಗಯ್ಯನು ಮಡಿದ ದುಃಖದಲ್ಲಿ ನೀಲಾಂಬಿಕಾದೇವಿಯವರು ಕಂಬನಿಗರೆಯುತ್ತ ಕುಳಿತಿದ್ದಾರೆ.)

ನೀಲಾಂಬೆ : ನನ್ನ ಸುಖದುಃಖ ವಿಚಾರಿಪ ಮಕ್ಕಳಾರು? ನನ್ನ ಮಾನ ಬಹುಮಾನ ಮಾಡ್ವ ಮೋಹದಳಿಯರಾರು? ಕಂದನಿಲ್ಲದ ಬಾಲೆ ನಾನು! ಅಂದ ಚಂದದಾನಂದ ಮುಖದೋರಯ್ಯಾ ಬಸವಪ್ರಿಯ ಕೂಡಲಸಂಗಮದೇವಾ!

ಬಸವ : (ಪ್ರವೇಶಿಸಿ) ಮಡಿದ ಮಗನಿಗಾಗಿ ಇನ್ನೂ ಎಷ್ಟು ದಿವಸ ಮರುಗುವಿ ನೀಲಾ? ಜೀವನದ ಅನಂತ ತಾಕಲಾಟಗಳ ಹೊಡೆತದಿಂದ ಹೌಹಾರುವ ನನ್ನ ಹೃದಯಕ್ಕೆ ನಿನ್ನ ಹಸನ್ಮುಖದ ಮೆಲ್ನಗೆಯೇ ಮರುಜೀವಣಿ! ನಾನು ಕೈಕೊಂಡ ಕಾರ್ಯದಲ್ಲಿ ಎದುರಾಗುವ ಎಡರುಗಳಿಗೆ ಎದೆಗೊಡುವ ಎದೆಗಾರಿಕೆ ನನ್ನಲ್ಲಿ ಬರಲು ನಿನ್ನ ಸುಧಾರಸಪೂರ್ಣ ಮಧುರವಚನಗಳೇ ಸಂಜೀವಿನಿ! ಪುತ್ರಮೋಹದಿಂದ ನೀನು ದುಃಖಿಸಿದರೆ ಮಡಿದ ಕಂದಯ್ಯನು ಮರಳಿ ಬರುವನೆ? ಇಷ್ಟು ದಿನಗಳವರೆಗೆ ಶೋಕಿಸಿದುದು ಸಾಕು; ಇನ್ನು ಶೋಕ ಮೋಹಗಳನ್ನು ಮರೆತು ಎಂದಿನಂತೆ ಪ್ರಸನ್ನಳಾಗು!

ನೀಲಾ : ದೇವಾ, ಸಂಗಯ್ಯನು ನನಗೆ ಪುತ್ರನನ್ನೇ ಕೊಡದಿದ್ದರೆ ಚೆನ್ನಾಗಿತ್ತು. ತಾನಾಗಿಯೇ ಸರ್ವಾಂಗಸುಂದರ ಸುಕುಮಾರನನ್ನು ಅನುಗ್ರಹಿಸಿ, ಐದು ವರ್ಷಗಳವರೆಗೆ ನನ್ನನ್ನು ತಾಯಿಯೆಂದೆನಿಸಿ ಮತ್ತೆ ಪುತ್ರಹೀನಳನ್ನಾಗಿ ಮಾಡಬೇಕೆ? ಹಡೆದೊಡಲು ಬಂಜೆಯಾಗಬೇಕೆ? ಮನೆಯ ತುಂಬೆಲ್ಲ ತನ್ನ ಸವಿನುಡಿಗಳನ್ನು ತುಂಬುತ್ತ, ಮನೆಯಲ್ಲೆಲ್ಲ ವ್ಯಾಪಿಸಿ ನಲಿಯುತ್ತ ಕುಣಿಯುತ್ತ, ಕಂಗಳಿಗೆ ಹಬ್ಬವನ್ನುಂಟುಮಾಡುತ್ತಲಿದ್ದ ಕಂದಯ್ಯನು ಕಣ್ಮರೆಯಾಗಿ ನನಗೆ ಮನೆಯು ಬರಿದಾಗಿ ಕಾಣತೊಡಗಿದೆ. ನನ್ನ ತೊಡೆ ತೋಳು ತುಟಿಗಳು ತೆರವಾಗಿ ತಾಪಕೊಡತೊಡಗಿದೆ! ಪ್ರಭುದೇವರು ಸಹ ತೇಜಸ್ವಿಯಾದ ಬಾಲಸಂಗಯ್ಯನನ್ನು ನೋಡಿ ಇವನು ವಿಶ್ವವಿಭೂತಿಯಾಗುವನೆಂದು ನುಡಿದಿರಲಿಲ್ಲವೆ? ಅಕ್ಕನಾಗಮ್ಮನವರೂ, ಅವರ ಪತಿ ಶಿವಸ್ವಾಮಿಯವರೂ ಬಾಲಸಂಗಯ್ಯನ ಮರಣದಿಂದ ಭ್ರಾಂತರಾಗಿಹೋಗಿದ್ದಾರೆ! ಅಕ್ಕ ಗಂಗಾಂಬೆಯರು ದಿಕ್ಕುಕಾಣದಾಗಿದ್ದಾರೆ! ಇಂಥ ತೇಜೋರಾಶಿ ಸುಕುಮಾರನನ್ನು ಇಷ್ಟು ಚಿಕ್ಕವಯಸ್ಸಿನಲ್ಲಿಯೇ ಸಂಗಯ್ಯನು ಕಸಿದುಕೊಳ್ಳಬೇಕೆ?

ಬಸವ : ಕೊಂಡರೇನಾಯಿತು ನೀಲಾ? ಅರಳಿದ ಕುಸುಮವಿದ್ದಂತೆ ಮೊಗ್ಗೆಯನರ್ಪಿಸಿಕೊಂಡ ಶಿವನು; ಪಕ್ವಫಲವಿದ್ದಂತೆ ಕಸುಗಾಯ ಕೊಯ್ದುಕೊಂಡ ಶಿವನು! ಲಿಂಗದೊಡೆವೆ ಲಿಂಗಕ್ಕೆ ಸಾರಿತ್ತಾಗಿ ಬಂದಿತ್ತೆಂಬ ಪರಿಣಾಮವಿಲ್ಲ!

ಬಾರದೆಂಬ ದುಃಖವಿಲ್ಲ! ಬಾಲಸಂಗಯ್ಯನು ಮಡಿದರೇನಾಯಿತು? ತಾಯಿಯಾಗಿ ಆಡಿಸಿ, ನಗಿಸಿ, ಮುದ್ದಿಸಿ, ಲಾಲಿಸಿ ಪಾಲಿಸಲು ನಿನಗೆ ಬೇರೆ ಮಕ್ಕಳೇ ಇಲ್ಲವೆ? ಒಬ್ಬ ಮಗನ ತಾಯಿಯಾಗಬೇಡ ನೀಲಾ! ಇಡೀ ಪ್ರಪಂಚದ ದೀನ ದುಃಖಿತರ, ಬಡಬಗ್ಗರ ಅನಾಥ ಬಾಲಕರೆಲ್ಲರ ತಾಯಿಯಾಗು ವಿಶ್ವಮಾತೆಯಾಗು! ತಾಯಿ ತಂದೆಗಳನ್ನು ಕಳೆದುಕೊಂಡ ಪರದೇಶಿ ಮಕ್ಕಳೆಷ್ಟಿಲ್ಲ? ಬಿಕ್ಕೆಬೇಡಿ ಹೊಟ್ಟೆತುಂಬುವ ನಿರ್ಗತಿಕ ಬಾಲಕರೆಷ್ಟು ಬೇಕು? ಸಮಾಜದ ಪಾಪಕಾರ್ಯಗಳಫಲವಾಗಿ ಹುಟ್ಟಿ ಬೀದಿಗೆ ಎಸೆಯಲ್ಪಡುವ ಬಾಲಕರೆಷ್ಟುಬೇಕು? ಇನ್ನು ನೀನು ಇಂಥ ಅನಾಥ, ಪರದೇಶಿ, ನಿರ್ಗತಿಕ ಬಾಲಕರೆಲ್ಲರ ಮಾತೆಯಾಗಿ ಅವರ ಸಂಗೋಪನ, ಶಿಕ್ಷಣಕಾರ್ಯವನ್ನು ಕೈಕೊಳ್ಳಬಾರದೇಕೆ? ನಿನ್ನೆ ನನಗೊಬ್ಬ ಅನಾಥನಾಗಿ ಅಲೆಯುತ್ತಿದ್ದ ತಾಯಿತಂದೆಗಳಿಲ್ಲದ ೫ ವರ್ಷದ ಕಂದನೊಬ್ಬನು ಸಿಕ್ಕಿದ್ದಾನೆ. ಇಬ್ಬರು ಬಾಲಕಿಯರು ದೊರೆತಿದ್ದಾರೆ. ಅವರನ್ನು ನೋಡಿ ನಿನ್ನ ದುಃಖ ಮರೆ, ಅವರ ತಾಯಿಯಾಗಿ ಬಂಜೆತನ ನೀಗು!

ನೀಲಾ : ದೇವಾ ನನ್ನ ನಿರಾಶಾಮಯ ಜೀವನದಲ್ಲಿ ಒಮ್ಮೆಗೆ ಬೆಳಕು ಕೆಡಹಿದಿರಿ! ದಿಕ್ಕು ತೋರದೆ ದುಃಖಸಾಗರದಲ್ಲಿ ಮುಳುಗಿದ್ದ ನನಗೆ ದಾರಿ ತೋರಿದಿರಿ! ತೀವ್ರ ಕರೆದುತನ್ನಿರಿ ಆ ಮಕ್ಕಳನ್ನು! (ಬಸವನು ಹೊರಗೆ ಹೋಗಿ ಕರೆದುತರುವನು. ನೀಲಾಂಬೆಯು ಓಡಿಹೋಗಿ ಮಗುವನ್ನೆತ್ತಿಕೊಂಡು) ಕಂದಾ, ನಿನ್ನ ತಂದೆತಾಯಿಗಳು ಎಲ್ಲಿರುವರಪ್ಪಾ? (ಬಸವನು ಬಾಲಕನಿಗೆ ಸನ್ನೆಮಾಡುವನು.)

ಬಾಲ: (ನೀಲಾಂಬೆಯನ್ನು ತೋರಿ) ತಂದೆ ನೀನು, ತಾಯಿ ನೀನು, ಬಂಧು ನೀನು, ಬಳಗ ನೀನು – ಎನಗೆ ನೀನಲ್ಲದೇ ಮತ್ತಾರೂ ಇಲ್ಲ ಕೂಡಲಸಂಗಮದ ದೇವಾ, ಹಾಲಲದ್ದು, ನೀರಲದ್ದು!

ನೀಲಾಂಬೆ : (ಕಂದನನ್ನು ಬಿಗಿದಪ್ಪಿ) ಕಂದಯ್ಯಾ, ಹೌದಪ್ಪಾ ಹೌದು. ನಾನು ನಿನ್ನ ತಾಯಿ. (ಬಾಲಕಿಯರಿಗೆ) ಪ್ರೇಮದ ಪುತ್ರಿಯರೇ–ಒಳಗೆ ನಡೆಯಿರಿ ನಿಮಗೆ ಊಟಮಾಡಿಸುತ್ತೇನೆ! (ಬಸವನಿಗೆ) ನಾಥ, ಒಬ್ಬ ಗಂಡುಮಗನನ್ನು ಕಸಿದುಕೊಂಡು ಸಂಗಯ್ಯನು ಒಬ್ಬ ಗಂಡುಮಗುವನ್ನೂ ಇಬ್ಬರು ಹೆಣ್ಣು ಮಕ್ಕಳನ್ನೂ ಕೊಟ್ಟನು (ಮಂದಹಾಸದಿಂದ) ಮತ್ತೆ ಮೂವರುಮಕ್ಕಳ ಜನನಿಯಾದೆ!

ಬಸವ : (ನಕ್ಕು) ಇನ್ನೂ ಈ ಸಂಖ್ಯೆ ಸಾವಿರಗಟ್ಟಳೆ ಬೆಳೆಯಬಹುದು. ಅದಕ್ಕಾಗಿ ಸಿದ್ಧಳಿರು! ಇಂದು ನಾನು ಆ ಮಗುವಿಗೆ ಕಷ್ಟಪಟ್ಟು ವಚನ ಕಲಿಸಿದ್ದು ಸಾರ್ಥಕವಾಯಿತು.

ನೀಲಾಂಬೆ : ಇಂದು ನಾನು ಶೋಕಿಸಿದ್ದೂ ಸಾರ್ಥಕವಾಯಿತು! (ಮಕ್ಕಳೊಡನೆ ಒಳಗೆ ಹೋಗುವಳು)

ಬಸವ : "ನೀಲಾ" ಎಂಥ ಪ್ರೇಮಮೂರ್ತಿ ಇವಳು! ಆ ಹೆಸರಿನಲ್ಲಿಯೇ ಸಮ್ಮೋಹನವಿದೆ! ನೀಲ, ನೀಲಾ, ನೀಲಾ!

ಹರಳಯ್ಯ : (ಪ್ರವೇಶಿಸಿ) ಶರಣು, ಶರಣು, ಶಿವಶರಣು-ಶಿವಸ್ವರೂಪಿ ಬಸವಯ್ಯಾ - ಈ ಬಡವನ ಮೇಲೆ ಅನುಗ್ರಹವಿಟ್ಟು ಈ ಪಾದರಕ್ಷೆಗಳನ್ನು ತೊಡಿಸಲು ತಮ್ಮ ಶ್ರೀಪಾದಗಳನ್ನು ಕೊಡಿರಿ! (ಪಾದರಕ್ಷೆಗಳನ್ನು ತೆಗೆಯುವನು.)

ಬಸವ : ಇಂದೇಕೆ ಈ ಪಾದರಕ್ಷೆಗಳು ಹರಳಯ್ಯ ಕಕ್ಕಾ? ಇದೇತರ ಚರ್ಮ ಮೇಲೆ ಹೊದಿಸಿರುವದು?

ಹರಳ : ಮೊನ್ನೆ ತಾವು ಹೆಚ್ಚುಸಲ ಶರಣೆಂದುದಕ್ಕಾಗಿ ಈ ಪಾದರಕ್ಷೆಗಳು ಭಗವಾನ್? ಮೇಲೆ ಹೊದಿಸಿರುವುದು ನನ್ನ ತೊಡೆಯ ಚರ್ಮ!

ಬಸವ : (ಚಕಿತನಾಗಿ) ಏನು ತೊಡೆಯ ಚರ್ಮವೆ? (ಗದ್ಗದಿತಸ್ವರದಲ್ಲಿ) ಹರಳಯ್ಯಾ, ಹರಳಯ್ಯಾ - ಎಂಥ ಘೋರಕೃತ್ಯವನ್ನು ಗೈದಿರುವೆ! ಈ ಪವಿತ್ರ ಪಾದರಕ್ಷೆಗಳನ್ನು ನನಗೆ ಮೆಟ್ಟಿಸಲು ತಂದಿರುವೆಯಾ? ಜಗದ್ವಂದ್ಯಶರಣಾ, ನಿನ್ನ ಪಾವನವಾದ ಮೈದೊಗಲಿನಿಂದ ನಿರ್ಮಿತವಾದ ಈ ಆವುಗೆಗಳನ್ನು ನಾನು ಮೆಟ್ಟಿದ್ದಾದರೆ ನನ್ನ ವಂಶಜರು ಕೂಡ ನರಕಕ್ಕೆ ಹೋಗಲಿಕ್ಕಿಲ್ಲವೆ? ಹರಳಯ್ಯ ಕಕ್ಕ, ಇವುಗಳನ್ನು ಮೆಟ್ಟುವ ಯೋಗ್ಯತೆಯು ನನಗೇಕೆ? ಸಂಗಯ್ಯ, ಪ್ರಭುದೇವರನ್ನುಳಿದು ಇನ್ನಾರಿಗೂ ಇಲ್ಲ! ಸಂಗಮನಾಥನಿಗೆ ಸಲ್ಲಬೇಕಾದ ಈ ಆವುಗೆಗಳನ್ನು ಕಾಲಮೇಲಲ್ಲ, ಇದೋ ಶಿರಸ್ಸಿನ ಮೇಲೆ ಧರಿಸುತ್ತೇನೆ! (ತಲೆಯ ಮೇಲಿಟ್ಟುಕೊಂಡು) ನಿಮ್ಮ ಶರಣರ ಚಮ್ಮಾವುಗೆಗೆ ಈ ಪೃಥ್ವಿ ಸರಿಬಾರದಯ್ಯ ಕೂಡಲಸಂಗಮದೇವ!

ಹರಳಯ್ಯ : (ಆವುಗೆಗಳನ್ನು ಕಸಿದು) ಭಗವಾನ್, ಇದೇನು? ಈ ಕೀಳನ ತೊಡೆಯ ಚರ್ಮ ತಮ್ಮ ತಲೆಯ ಮೇಲೆ! ಅಯ್ಯೋ ಕೆಟ್ಟೆ, ಮತ್ತಿಷ್ಟು ರಸಾತಳಕ್ಕಿಳಿದೆ; ಮತ್ತೊಂದು ಮಹಾಪಾತಕವನ್ನು ಮಾಡಿದೆ!

ಬಸವ : ಹರಳಯ್ಯಕಕ್ಕಾ, ನೀನು ಕೀಳನಲ್ಲ ಶರಣ, ಭುವನಪಾವನ ಶರಣ! ಶರಣ ನಿದ್ರೆಗೈದಡೆ ಜಪ, ಶರಣ ಎದ್ದು ನಡೆದರೆ ಶಿವರಾತ್ರಿ, ಶರಣ ನುಡಿದುದೇ ಶಿವತತ್ವ, ಶರಣನ ಕಾಯವೇ ಕೈಲಾಸ! ಹರಳಯ್ಯ, ನಿನ್ನ ಕಾಯಚರ್ಮದ ಆವುಗೆಗಳನ್ನು ಹೊತ್ತು ನಾನು ಕೈಲಾಸಸುಖವನ್ನು ಅನುಭವಿಸಿದೆ. ಇವುಗಳನ್ನು ಮನೆಗೆ ಒಯ್ದು ಸಂಗಮನಾಥನ ಆವುಗೆಗಳೆಂದು ಸುರಕ್ಷಿತವಾಗಿಡಿರಿ. ಇವುಗಳಿಂದ ಜಗತ್ತಿನ ಪಾಪಭಾರವು ತಗ್ಗುವುದು!

ಹರಳಯ್ಯ : ತಂದೆ, ಈ ಬಡವನ ಕಾಣಿಕೆಯನ್ನು ನಿರಾಕರಿಸುವಿರಾ? ಪಾತಾಳದಲ್ಲಿ ನನ್ನನ್ನು ಕೈಬಿಡುವಿರಾ?

ಬಸವ : ಹರಳಯ್ಯ, ನಿನ್ನ ಈ ಕಾರ್ಯದಿಂದ ನಿನ್ನೊಬ್ಬನನ್ನಷ್ಟೇ ಅಲ್ಲ, ನಿನ್ನ ಕುಲಕೋಟಿಯನ್ನೆಲ್ಲ ಉದ್ಧರಿಸಿರುವೆ! ಮಾನವಜೀವನಕ್ಕೇ ದಿವ್ಯತೆಯನ್ನು ತಂದಿರುವೆ! ನನಗೆ ಆನಂದವನ್ನುಂಟುಮಾಡುವ ಇಚ್ಛೆ ನಿನಗಿದ್ದರೆ ಇವುಗಳನ್ನು ಮನೆಯಲ್ಲಿ ಜೋಕೆಯಿಂದಿರಿಸಿರಿ. ಇವುಗಳ ಸೋಂಕಿನಿಂದ ಪಾತಕಿಗಳೂ ಪುಣ್ಯಜೀವಿಗಳಾಗುವರು.

ಹರಳಯ್ಯ : ಶರಣು ಶರಣ ಗುರುಬಸವಯ್ಯ – ನನ್ನನ್ನು ಉದ್ಧರಿಸುವವರು ತಾವಿರಲು ನಾನೇಕೆ ಚಿಂತಿಸಲಿ? ನನಗೆ ಅಪ್ಪಣೆಕೊಡಿರಿ.

ಬಸವ : ಹರಳಯ್ಯಕಕ್ಕ – ರಾತ್ರಿಬಹಳವಾಗಿದೆ – ಇಂದು ಇಲ್ಲಿಯೇ ಲಿಂಗಾರ್ಚನೆ ತೀರಿಸಿಕೊಳ್ಳಿರಿ. ಉದಯಕ್ಕೆ ಹೋಗುವಿರಂತೆ. (ತನ್ನಲ್ಲಿ) ನನ್ನಲ್ಲಿ ಇವರ ಭಕ್ತಿಯ ಸಾಸಿವೆಯ ಷಡ್ಭಾಗಕೂಡ ಇಲ್ಲವಲ್ಲ! ಇರಿಸಿಕೊಂಡು ಭಕ್ತರಾದರೆಮ್ಮವರು! ಜರೆಸಿಕೊಂಡು ಭಕ್ತರಾದರೆಮ್ಮವರು! ತರಿಸಿಕೊಂಡು ಭಕ್ತರಾದರೆಮ್ಮವರು! ಕೊರೆಸಿಕೊಂಡು ಭಕ್ತರಾದರೆಮ್ಮವರು! ನಾನು ಮಾತ್ರ ವೇಷಗಾರನಾಗಿಯೇ ಉಳಿದೆ!

(ಇಬ್ಬರೂ ಹೋಗುವರು. ತೆರೆ ಏಳುವುದು)

ನೋಟ ೪

(ಮಧುವರಸನ ಉದ್ಯಾನವನ. ಸಮಯ ಉಷಃಕಾಲ. ಮಧುವರಸನ ಮಗಳು ನೀಲಲೋಚನೆ ಶಿಲಾಪೀಠದ ಮೇಲೆ ಕುಳಿತು ನಿಸರ್ಗ ನಿರೀಕ್ಷಣೆಯಲ್ಲಿ ತಲ್ಲೀನಳಾಗಿದ್ದಾಳೆ)

ನೀಲಲೋಚನೆ : ಅಹಾ, ಇಂದು ನಿಸರ್ಗಸುಂದರಿಯು ಎಷ್ಟು ರಮಣೀಯವಾಗಿದ್ದಾಳೆ! ವಸಂತನ ಆಗಮನದಿಂದ ಜಗತ್ತಿನಲ್ಲಿ ಅಡಗಿಕುಳಿತಿದ್ದ ಚೇತನವು ಚೆಲುವಾಗಿ ಹೊರಬಿದ್ದಿದೆ; ಎತ್ತ ನೋಡಿದರೂ ಸೌಂದರ್ಯವು ಸೂರೆಗೊಂಡಿದೆ! ಜಗತ್ತು ಶಾಂತವಾಗಿದೆ, ಬೆಳಗಿನ ಸವಿನಿದ್ದೆಯಲ್ಲಿ ಮೈಮರೆತು ಮೌನವಾಗಿದೆ! ಸೃಷ್ಟಿಕಮಲವೇ ಅರಳಿದೆಯೆಂಬಂತೆ ಎಲ್ಲೆಡೆಯಲ್ಲಿಯೂ ನರುಗಂಪು ಸೂಸಿ ತಂಗಾಳಿಬೀಸತೊಡಗಿದೆ! ಈ ಪರಿಮಳವೇ ಪ್ರೇಮದ ಪ್ರತೀಕವಿರಬಹುದೆ?

ರಾಗ : ಖಂಬಾವತಿ ತಾಳ : ತ್ರಿತಾಲ ವಿರಾ

ವಸುಧೆಯೆ ಕುಸುಮವು ಅನುರಾಗ ರಾಗವು

ಪ್ರೇಮವೆ ಪರಾಗವು, ಫಲ ವಿರಾಗವು ॥ಪ॥

ಜಡಸೃಷ್ಟಿಯಾ ಜಡಜವು ಬಿರಿಯೆ

ಹುಡಿ ಮಣ್ಣಿದುವೆ ಪ್ರೇಮಪರಾಗವು ॥೧॥

ಚೆಲುವ ಚೆಲ್ಲಿ ಒಲವನು ಹರಡಿ

ನಲಿವನು ಚಿಮ್ಮಿಸಿ ಬಂದ ಬಸಂತನು ॥೨॥

ನಗುತಿರೆ ಜಗವೆಲ್ಲ ಬಗೆ ಖಿನ್ನವಿದೆಯಿಂದು

ಸಿಗನೆ ಸಂತಸವೀವ ಸೊಬಗುಗಾರ? ॥೩॥

ಅದೋ ಆ ಭೋಗಿಸಂಕುಲ! (ಎದ್ದು ಒಂದೊಂದನ್ನೇ ನೋಡುತ್ತ) ಮಲ್ಲಿಗೆಯು ಮಾವಿನಮರವನ್ನು ಅಪ್ಪಿ ಸುಖವಾಗಿದೆ; ನಾಗಲತೆಯು ಪೂಗವೃಕ್ಷವನ್ನು ಆಲಿಂಗಿಸಿ ಮೈಮರೆತಿದೆ; ಆ ಪಾರಿವಾಳದ ಜೋಡಿ ಪ್ರೇಮಸಮಾಧಿಯಲ್ಲಿ ಪರವಶವಾಗಿದೆ; ಕೊಕ್ಕಿನಲ್ಲಿ ಕೊಕ್ಕು, ರೆಕ್ಕೆಯಲ್ಲಿ ರೆಕ್ಕೆಗಳನ್ನಿರಿಸಿ ನವಿಲುಗಳು ಕೇಕೆಹಾಕಿ ಕುಣಿಯುತ್ತ. ಜಗತ್ತಿನಲ್ಲಿ ಎಲ್ಲ ವಸ್ತುಗಳಿಗೂ ಜೊತೆಯಿದೆ ನಾನೊಬ್ಬಳೇ ಏಕಾಂಗಿಯಾಗಿ ಉಳಿಯಬೇಕೆ? (ಚಿಂತಿಸಿ) ಅವನಿನ್ನೂ ಬರಲಿಲ್ಲವಲ್ಲ? ದಿನಾಲು ಇದೇ ಸಮಯಕ್ಕೆ ಸರಿಯಾಗಿ ಶಿವಪೂಜೆಗಾಗಿ ಪುಷ್ಪಗಳನ್ನೊಯ್ಯಲು ಬರುತಿದ್ದವನು ಇಂದು ಇದುವರೆಗೂ ಏಕೆ ಬಂದಿರಲಿಕ್ಕಿಲ್ಲ? ಎಂಥ ಮೋಹನಾಕಾರ ಅವನದು? ಅವನು ಯಾವ ಕುಲದವನಾಗಿರಬಹುದು? ಮೈಮೇಲಿನ ಕೈನೂಲಿನ ಸಾಮಾನ್ಯವಸ್ತ್ರಗಳನ್ನು ನೋಡಿದರೆ ಯಾವುದೋ ಒಂದು ಬಡಕುಟುಂಬದಲ್ಲಿ ಜನಿಸಿರಬೇಕೆಂದು ತೋರುತ್ತದೆ. ಆದರೆ ಆ ಕಳೆ, ಆ ತೇಜಸ್ಸು, ಆ ಸೌಂದರ್ಯ ಸಾಮಾನ್ಯರಲ್ಲಿರುವುದು ಸಾಧ್ಯವೆ? ಯಾವಕುಲದವನೇ ಆಗಿರಲಿ, ಅವನು ನನ್ನ ಮನವನ್ನು ಮಾರುಗೊಂಡ, ನನ್ನ ಒಲವನ್ನು ಸೂರೆಗೊಂಡ ಸುಂದರನು! ಅವನ ಕೈ ಹಿಡಿಯುವ ಸೌಭಾಗ್ಯವು ನನ್ನದಾಗಿರಬಹುದೆ? ಕುಲದ ಪ್ರಶ್ನೆ ಅಡ್ಡಬಂದರೆ ಹೇಗೆ? ಉಂ– ಒಲವಿಗೆ ಕುಲವೆಲ್ಲಿದೆ? ಮೇಲಾಗಿ ಪತಿತಪಾವನ ಬಸವಣ್ಣನವರು ಜಾತಿಯ ಭೂತಕ್ಕೆ ಮಂತ್ರವಾದಿಗಳಾಗಿ ಬಂದಿದ್ದಾರೆ. ನಾನಿಂದು ಆ ಸುಂದರನನ್ನು ಮಾತನಾಡಿಸಿಯೇಬಿಡುವೆ!

ಶೀಲವಂತ: (ಮತ್ತೊಂದು ಬದಿಯಿಂದ ಹೂಗಳನ್ನು ಕೊಯ್ಯುತ್ತ ಬರುವನು)

ರಾಗ : ಯಮನ ತಾಳ : ತ್ರಿತಾಲ ಚಾಲ : ಲಾಗೆಹೃದಯಿಹುರಹುರ.

ಸಂಗದಿಂದಲ್ಲದೆ ಅಗ್ನಿ ಹುಟ್ಟದು

ಸಂಗದಿಂದಲ್ಲದೆ ಬೀಜಮೊಳೆದೋರದು ॥ಪ॥

ಸಂಗದಿಂದಲ್ಲದೆ ದೇಹವಾಗದು

ಸಂಗದಿಂದಲ್ಲದೆ ಸರ್ವಸುಖ ತೋರದು
ಚನ್ನಮಲ್ಲಿಕಾರ್ಜುನದೇವಯ್ಯ ॥೧॥
ನಿಮ್ಮ ಶರಣರ ಅನುಭಾವ ಸಂಗದಿಂದ
ಆನು ಪರಮಸುಖಿಯಾಗಿ
ಬದುಕಿದೆನಯ್ಯಾ ಪ್ರಭುವೆ ॥೨॥

(ಹಾಡುತ್ತ ಹೂಕೊಯ್ಯುವನು)

ನೀಲಲೋಚನೆ : (ತನ್ನಲ್ಲಿ) ಅಹಾ, ಎಂಥ ಸುಂದರವಾದ ವಚನವಿದು! 'ಸಂಗದಿಂದಲ್ಲದೆ ಸರ್ವಸುಖ ತೋರದು!' ನನ್ನ ಹೃದಯದ ಹಂಬಲವೇ ಹಾಡಾಗಿ ಹರಿದಂತಿದೆ! ದೇವಾ, ಈ ಸುಂದರಾಂಗನ ಜೀವನಸಂಗಿಯಾಗಲು ಕುಲವು ಕಂಟಕವಾದರೆ ಹೇಗೆ?

ಶೀಲವಂತ : (ಮೊದಲನೆಯ ಹಾಡನ್ನು ಮುಗಿಸಿ ಮಧುರವಾಗಿ ವಚನವಿದನ್ನು ತನ್ನಷ್ಟಕ್ಕೆ ತಾನೇ ಅಂದುಕೊಳ್ಳುವನು.) ವ್ಯಾಸ ಬೊಯಿತಿಯ ಮಗ; ಮಾರ್ಕಾಂಡೇಯ ಮಾತಂಗಿಯ ಮಗ; ಮಂಡೋದರಿ ಕಪ್ಪೆಯ ಮಗಳು; ಕೌಂಡಿಲ್ಯನೆಂಬ ಋಷಿ ನಾಯಿಂದ ಕಾಣಿಭೋ! ಸಾಕ್ಷಾತ್ ಅಗಸ್ತ್ಯ ಕಬ್ಬಿಲ, ದೂರ್ವಾಸ ಮಚ್ಚಿಗ, ಕಶ್ಯಪ ಕಮ್ಮಾರ, ಕುಲವನರಸದಿರಿ ಭೋ! ಕುಲದಿಂದ ಮುನ್ನೇನಾದಿರಿ ಭೋ! ನಮ್ಮ ಕೂಡಲಸಂಗನ ವಚನವಿದು; ಶ್ವಪಚೋಪಿಯಾದರೇನು? ಶಿವಭಕ್ತನೇ ಕುಲಜನು!

ನೀಲಲೋಚನೆ : (ಹಿಗ್ಗಿ) ಎಂಥ ಉದಾತ್ತ ತತ್ವ? ನಾನಿಂದು ಕುಲದ ತೊಡಕನ್ನೂ ಕಡಿದೊಗೆದೆ; ಜಾತಿಯ ಪ್ರೇತಕ್ಕೆ ಅಗ್ನಿಸಂಸ್ಕಾರವನ್ನು ಮಾಡಿದೆ! (ಸಮೀಪಕ್ಕೆ ಹೋಗಿ) ಸುಂದರಾ, ನೀನಾರೆಂದು ನಾನು ಕೇಳಬಹುದಲ್ಲವೆ?

ಶೀಲ : (ಹಿಂದಕ್ಕೆ ಸರಿದು) ಸಮೀಪಕ್ಕೆ ಬರಬೇಡಿರಿ; ನಾನು ಹರಳಯ್ಯನ ಮಗ ಶ್ವಪಚ!

ನೀಲಾ : ಹಿಂದಕ್ಕೆ ಸರಿಯದಿರು ಸುಂದರಾ! ಶ್ವಪಚನಾದರೇನಾಯಿತು? ಇದೇ ಈಗ ನೀನೇ ಹೇಳಲಿಲ್ಲವೆ – 'ಶ್ವಪಚೋಪಿಯಾದರೇನು? ಶಿವಭಕ್ತನೇ ಕುಲಜನು' ಎಂದು ಬಸವಣ್ಣನವರ ವಚನವಲ್ಲವೆ ಅದು? ಬಸವಭಕ್ತನಾದ ನೀನು ಬಸವತತ್ವಕ್ಕೆ ವಿರೋಧವಾಗಿ ವರ್ತಿಸುವದೆ?

ಶೀಲ : ಅಮಾತ್ಯನಂದಿನಿ! ಬಸವತತ್ವಗಳು ನಿನಗೆ ಮಾನ್ಯವಿರುವುವೆ? ಬಸವಣ್ಣನವರ ತತ್ವಗಳಂತೆ ನಡೆಯಲು ನೀನು ಸಿದ್ಧಳಿರುವೆಯಾ?

ನೀಲ : ಹೃದಯಪೂರ್ವಕವಾಗಿ! ನಿನ್ನ ಹೆಸರೇನು ಸುಂದರಾ?

ಶೀಲ : ನನ್ನ ಹೆಸರು ಶೀಲವಂತಯ್ಯ; ನಿನ್ನ ಹೆಸರು?

ನೀಲ : ನನ್ನ ಹೆಸರು ನೀಲಲೋಚನೆ. (ಲಜ್ಜೆಯಿಂದ) ನೀಲಾ-ಶೀಲಾ, ಎಂಥ ಸುಂದರಜೋಡಿ! ಶೀಲಾ, ನಮ್ಮಿಬ್ಬರ ಹೃದಯಗಳು ಒಂದಾಗಿ, ನಮ್ಮಿಬ್ಬರ ದೈವಗಳು ಒಂದು ಮತ್ತೊಂದರಲ್ಲಿ ಮಿಲಿತವಾಗಿ, ನಮ್ಮಿಬ್ಬರ ಜೀವನಗಳು ಸಮರಸವಾಗಿ, ನಾವಿಬ್ಬರೂ ಒಂದೇ ಸಂಸಾರಪಕ್ಷಿಯ ಎರಡು ರೆಕ್ಕೆಗಳಾದರೆ ಮಾತಿನಲ್ಲಿಯೇ ಊಳಿದ ಬಸವಣ್ಣನವರ ತತ್ವವು ಕೃತಿಯಲ್ಲಿ ಬಂದಂತಾಗುವುದಿಲ್ಲವೆ?

ಶೀಲ : (ಚಕಿತನಾಗಿ) ನೀಲಾ............

ನೀಲ : (ನಿಶ್ಚಯದಿಂದ) ಶೀಲಾ, ಇದೇಕೆ ಚಕಿತನಾಗಿರುವೆ? ನಿನ್ನಲ್ಲಿ ತತ್ವಕ್ಕಾಗಿ ಕುರುಡುಸಮಾಜದ ಪೊಳ್ಳು ಕಟ್ಟಳೆಗಳನ್ನು ಕಾಲಿನಿಂದ ತುಳಿದು ಬಸವ ತತ್ವದ ವಿಜಯಘೋಷವನ್ನು ಮಾಡುವ ಧೈರ್ಯವಿದೆಯೆ? ಎದೆಗಾರಿಕೆ ಇದೆಯೆ? ಅಥವಾ, ನೀನೂ ತಿಳಿಯಿಲ್ಲದ ಸಮಾಜವು ಕಲ್ಪಿಸಿರುವ ಜಾತಿಪಂಥಗಳ ಕೊಳಚೆ ನೀರಿನಲ್ಲಿ ಅಂಜುಬುರುಕನಂತೆ ಈಸಬಯಸುವಿಯಾ? ನಿನ್ನನ್ನೂ ಮೊದಲನೆಯದಿನ ನೋಡಿದಾಗಲೇ ನನ್ನ ಮನದನ್ನನೆಂದು ಮನಸ್ಸಿನಲ್ಲಿಯೇ ವರಿಸಿದ್ದೇನೆ. ನೀನು ಮನಸ್ಸುಮಾಡಿದರೆ ನಾವಿಬ್ಬರೂ ಬಸವಣ್ಣನವರ ವಿಶ್ವಧರ್ಮದ ಕಲ್ಯಾಣವಾಣಿಯಿಂದ ನಿದ್ರಿತಜಗತ್ತನ್ನು ಎಚ್ಚರಿಸಬಲ್ಲೆವು!

ಶೀಲ : ನೀಲಾ, ನಾನು ಸಮಾಜವನ್ನು ಎದುರಿಸಲು ಹೆದರುವುದಿಲ್ಲ. ಅಣ್ಣನವರು ಇದಾಗಲೇ ಭವಿಷ್ಯ ನುಡಿದಿದ್ದಾರೆ; ಅವರ ಭವಿಷ್ಯವಾಣಿಯು ಸುಳ್ಳಾಗಲಿಕ್ಕಿಲ್ಲ! ನೀಲಾ, ನೀನು ನಿಜ ನುಡಿಯುವಿಯಾ? ನಮ್ಮಿಬ್ಬರ ಪ್ರೇಮಸಂಬಂಧವು ಹಿಂದೂಧರ್ಮವನ್ನು ತುಂಡುತುಂಡಾಗಿ ಕತ್ತರಿಸಿರುವ, ಸಮಾಜದಲ್ಲಿ ನೆಲೆಗೊಂಡಿರುವ ಅನ್ಯಾಯ, ಅಸಹನೆ, ವಿಷಮತೆ, ಅಸೂಯೆ, ಮೇಲುಕೀಳುಗಳಿಗೆ ಕಾರಣವಾದ ವರ್ಣವ್ಯವಸ್ಥೆಯನ್ನು ವಿಧ್ವಂಸಗೊಳಿಸಿದರೆ ನಮ್ಮಂಥ ಧನ್ಯರು ಜಗತ್ತಿನಲ್ಲಿ ಮತ್ತಾರು? ನಾವಿಬ್ಬರೂ ವಿವಾಹಸಂಬಂಧಕ್ಕೆ ಕೈಹಾಕಿದರೆ ನಮ್ಮ ಮೇಲೆ ಎಂಥ ದುರ್ಧರಪ್ರಸಂಗಳು ಬರಬಹುದೆಂಬುದನ್ನು ನಾನು ಬಲ್ಲೆ. ಆದರೆ ಜಾತಿ ಪಂಥಕುಲಗಳೆ ಪೈಶಾಚಿಕ ಆಡಳಿತಕ್ಕೆ ಸಿಕ್ಕು ಮೌನದಿಂದ ಮೊರೆಯಿಡುತ್ತಿರುವ ಮಾನವತೆಯ ಕಣ್ಣೀರನ್ನು ನಾವು ಒರೆಸಬಲ್ಲೆವಾದರೆ ನಮ್ಮ ಪ್ರಾಣದಾನಕ್ಕೂ ನಾವು ಸಿದ್ಧರಾಗಲೇಬೇಕು. ಜಗತ್ತಿನಲ್ಲಿ ಸಮಾನತೆಯ ಸಸಿಯು ಹಸಿರಾಗಿ ಉಳಿಯಬೇಕಾದರೆ ನಮ್ಮ ರಕ್ತ ಬಸಿಯಲೇಬೇಕು! ಧರ್ಮಸಮಾಜಗಳ ನೀತಿ ವ್ಯವಸ್ಥೆಗಳಲ್ಲಿ ಹಿಂದೆ ಕಂಡರಿಯದ ಕ್ರಾಂತಿಯನ್ನು ಮಾಡಿ ಬಸವಣ್ಣನವರ ಸತ್ಯ-ಧರ್ಮಕ್ಕೆ ಅಮರತ್ವವನ್ನು ತಂದುಕೊಡಲು ನಾವು ಸರ್ವಸಂಕಟಗಳಿಗೆ ಸನ್ನದ್ಧರಾಗಬೇಕು! ಆದರೆ ನೀಲಾ, ನಿನ್ನ ತಂದೆಯು ಕಟ್ಟುಸನಾತನಿ; ನಮ್ಮಿಬ್ಬರ ಮದುವೆಗೆ ಸಮ್ಮತಿಸಬಹುದೆ?

ನೀಲ : ಚಿಂತಿಸಬೇಡ ಶೀಲಾ! ನಮ್ಮಿಬ್ಬರ ಪ್ರೇಮವು ಪರಿಶುದ್ಧವಿದ್ದರೆ, ಪ್ರೇಮದಲ್ಲಿ ಮಾನವನ ಕಲ್ಲೆದೆಯನ್ನು ಕೂಡ ಕರಗಿಸಬಲ್ಲ ಶಕ್ತಿಯಿದ್ದರೆ, ನಮ್ಮಿಬ್ಬರ ಪ್ರೇಮಕ್ಕೆ ವಿಜಯವೇ ಪ್ರಾಪ್ತವಾಗುವುದು! ಪ್ರೇಮಕ್ಕೆ ಸೋಲಿಲ್ಲ, ಶೀಲಾ! ಇದೋ, ಆ ಶಿಲಾಪೀಠವು ಕೈಬೀಸಿ ಕರೆಯುತ್ತಲಿದೆ. ಬಾ, ಅಲ್ಲಿ ಕುಳಿತು ನಾವಿಬ್ಬರೂ ಪ್ರೇಮಪರಮಾತ್ಮನ ಮುಂದೆ ಪ್ರತಿಜ್ಞೆ ಮಾಡೋಣ!

(ಇಬ್ಬರೂ ಶಿಲಾವೇದಿಕೆಯ ಮೇಲೆ ಕುಳಿತು ಪ್ರತಿಜ್ಞೆ ಮಾಡುವರು.)

(ಇಬ್ಬರೂ ಒಂದೊಂದು ವಾಕ್ಯ ಅಂದು ಮುಗಿಸುವರು)

"ದೇವ ದೇವ ಬಿನ್ನಪವ ಅವಧಾರು! ವಿಪ್ರ ಮೊದಲು ಅಂತ್ಯಜ ಕಡೆಯಾಗಿ ಶಿವಭಕ್ತರಾದವರನೆಲ್ಲ ಒಂದೇ ಎಂಬೆ! ಹಾರುವ ಮೊದಲು ಶ್ವಪಚ ಕಡೆಯಾಗಿ ಭವಿಗಳಾದವರನೆಲ್ಲ ಒಂದೇ ಎಂಬೆ! ಹೀಗೆಂದು ನಂಬುವದೆನ್ನ ಮನವು, ಹೀಗೆಂದು ನುಡಿಯುವದೆನ್ನ ಮನವು. ಇದರಲ್ಲಿ ಕಿಂಚಿತ್ತು ತಪ್ಪಿದರೆ ನೀನಂದೇ ಮೂಗಕೊಯ್ಯಿ, ಕೂಡಲಸಂಗಮದೇವ!"

(ತೆರೆ ಬೀಳುವುದು)

ನೋಟ ೫

(ರಾಜಮಾರ್ಗಕ್ಕೆ ಹೊಂದಿ ಮಧುವರಸನ ಮನೆ. ಸಮಯ ಸೂರ್ಯೋದಯ)

ಮಧುವರಸ : (ಅಂಗಳದಲ್ಲಿ ಅಡ್ಡಾಡುತ್ತ) ಕಲ್ಯಾಣದಲ್ಲಿ ವರ್ಣಸಂಕರದ ಬಿರುಗಾಳಿಯು ಬೀಸಿ ಸನಾತನ ಧರ್ಮದ ಹಡಗವು ಹೊಯ್ದಾಡಹತ್ತಿದೆ. ಆ ಬುದ್ಧಿಗೇಡಿ ಬಿಜ್ಜಳನಿಗೆ ಇದರ ಲಕ್ಷ್ಯವೇ ಇಲ್ಲ. ಹೆಸರಿಗೆ ಮಾತ್ರ ವರ್ಣನಿಷ್ಠೆಯನ್ನು ತೋರಿಸುತ್ತ ಬಸವನ ಸರ್ವಕಾರ್ಯಗಳನ್ನು ಸುಮ್ಮನೇ ನೋಡುತ್ತ ಕುಳಿತಿದ್ದಾನೆ. ನಾನೂ ದಾರಿ ಕಾಯುತ್ತಲಿದ್ದೇನೆ. ಪ್ರಸಂಗಬಂದರೆ ಕಲ್ಯಾಣದಲ್ಲಿ ಕೂಡಿರುವ ಸಂಕರ ಪಂಥಿಗಳನ್ನೆಲ್ಲ ಪಾತಾಳಕ್ಕೆ ತುಳಿಯುವವನು ನಾನೇ.

ಹರಳಯ್ಯ : (ಪ್ರವೇಶಿಸಿ–ತನ್ನಲ್ಲಿ) ಬಸವಣ್ಣನವರ ಕಿಂಕರಭಾವನೆಯು ಎಷ್ಟು ಅಗಾಧವಾದುದು? ತಮ್ಮನ್ನು ಅವರು ಕಿಂಕರನೆಂದು ತಿಳಿದರೂ ನಮಗೆ ಅವರೇ ಶಂಕರ!

ಮಧುವರಸ : ಏನೋ ಹರಳಯ್ಯ, ಆವುಗೆಗಳನ್ನು ಹಾಗೆಯೇ ತಂದೆಯಲ್ಲ? ಸಿಗಲಿಲ್ಲವೇನು ನಿನಗೆ ನಿನ್ನ ದೇವರು ಬಸವಣ್ಣ?

ಹರಳ : ದರ್ಶನವಾಗಿದ್ದರು ದೊರೆಗಳೇ; ಆದರೆ ಈ ಆವುಗೆಗಳನ್ನು

ಸ್ವೀಕರಿಸದೆ ಇವನ್ನು ಸಂಗಮನಾಥನ ಆವುಗೆಗಳೆಂದು ತಿಳಿದು ಮನೆಯಲ್ಲಿಡಲು ಹೇಳಿದ್ದಾರೆ.

ಮಧು : ಅಬ್ಬಾ, ಅಂಥ ಮಹತ್ವವಿದೆಯೋ ಅವುಗಳಲ್ಲಿ? ಆ ಬಸವನಿಗೆ ಇವುಗಳನ್ನು ಮೆಟ್ಟುವ ಧೈರ್ಯವಾಗಲಿಲ್ಲವೆ? ತಾ, ನಾನು ಮೆಟ್ಟುವೆನು!

ಹರಳ : ಬೇಡ ದೊರೆಗಳೇ, ಬಸವಣ್ಣನವರೇ ಇವುಗಳನ್ನು ತಲೆಯ ಮೇಲಿಟ್ಟುಕೊಂಡು ಹಾಗೆಯೇ ಕಳಿಸಿದ್ದಾರೆ.

ಮಧು : ಚೆನ್ನಾಯಿತು; ಬಸವನು ತಲೆಯಮೇಲಿಟ್ಟುಕೊಂಡರೆ ನಾನು ಕಾಲಲ್ಲಿ ಮೆಟ್ಟಿಕೊಳ್ಳುತ್ತೇನೆ. (ಆವುಗೆಗಳನ್ನು ಕಸಿದು) ಹೋಗು– ಇವುಗಳಲ್ಲಿ ಅಂಥ ಮಹತ್ವವಿದ್ದರೆ ನನಗಾದ ಪ್ರಾಯಶ್ಚಿತ್ತವನ್ನು ನಾನು ಅನುಭವಿಸಲು ಸಿದ್ಧನಿದ್ದೇನೆ!

ಹರಳ : ಅಯ್ಯೋ– ಒಂದರ ಹಿಂದೊಂದರಂತೆ ನನ್ನ ಪಾಪರಾಶಿಯು ಬೆಳೆಯತೊಡಗಿತಲ್ಲ! ಕೊನೆಗೆ ನನ್ನ ಗತಿ ಏನಾಗುವುದೋ! ಆಗಲಿ ದೊರೆಗಳೇ– ಮನಸ್ಸಿಗೆ ಬಂದಂತೆ ಮಾಡಿರಿ. ವಿನಾಶಕಾಲೇ ವಿಪರೀತಬುದ್ಧಿ – ನಾನು ಹೋಗುವೆ! (ಹೋಗುವನು)

ಮಧು : (ನಕ್ಕು) ಎಂಥ ಮೂಢನಂಬಿಕೆಯಿದೆ ಈ ಕೀಳು ಕುಲದವರಲ್ಲಿ? ಆ ಚಾಣಾಕ್ಷ ಬಸವನು ಈ ಕುರುಡುನಂಬುಗೆಯ ಲಾಭ ಪಡೆಯತೊಡಗಿರುವನಲ್ಲವೆ? ಸಂಗಮನಾಥನವೆಂದು ಅವನೇ ಹೇಳಿರುವ ಈ ಆವುಗೆಗಳನ್ನೇ ಮೆಟ್ಟಿ ಅವನ ಅನುಯಾಯಿಗಳೆಲ್ಲರ ಮುಂದೆ ತಿರುಗಾಡಿ ಬರುವೆನು ! (ಮೆಟ್ಟುವನು. ಮೈಯಲ್ಲಿ ಬೆಂಕಿ ಹತ್ತಿದಂತಾಗಿ ಉರಿಯತೊಡಗುವುದು. ಆವುಗೆಗಳನ್ನು ಬೀಸಾಡಿ) ಅಯ್ಯೋ– ಉರಿ, ನೋವು, ಬಾಧೆ! ಮೈಯೆಲ್ಲ ಧಗಧಗಿಸಿ ಉರಿಯತೊಡಗಿದೆ! ಅಯ್ಯೋ, ಪ್ರಾಣಸಂಕಟ! ನೀರು, ನೀರು! (ಜನರು ನೀರು ತಂದು ಸುರುವಿದಂತೆಲ್ಲ ಮೈಯುರಿ ಹೆಚ್ಚಾಗುವದು) ಹಾಯ್, ನೀರು ಹಾಕಿದಂತೆಲ್ಲ ಕಿಚ್ಚುಸುರುವಿದಂತಾಗುತ್ತದೆ. ಕರಗಿದ ಸೀಸವನ್ನು ಹೊಯ್ದಂತಾಗುತ್ತದೆ. ಕಾಯ್ದ ಹಂಚಿನಮೇಲೆ ನೀರು ಸುರುವಿದಂತೆ ಹಾಕಿದ ನೀರೆಲ್ಲ ಉಗಿಯಾಗಿ ಹಾರತೊಡಗಿದೆ! ಅಯ್ಯೋ ಕೆಟ್ಟೆ, ಬೆಂಕಿಯ ಸಂಗಡ ಚೆಲ್ಲಾಟವಾಡಿ ಕೆಟ್ಟೆ! ನಾನಿನ್ನು ಬದುಕಲಾರೆ, ನೀಲಾ, ನನ್ನ ಪ್ರಾಣಪದಕವೇ ಬಾ! ಸಾಯುವ ಮೊದಲೊಮ್ಮೆ ನಿನ್ನ ಮುದ್ದುಮೊಗವನ್ನು ತೋರಿಸು!

ನೀಲಾ : (ಮನೆಯೊಳಗಿಂದ ಓಡಿಬಂದು) ಅಪ್ಪಾ, ಅಪ್ಪಾ, ಇದೇನು ಮನೆಯ ಮುಂದೆ ನೀರು ಹಳ್ಳವಾಗಿ ಹರಿಯತೊಡಗಿದೆಯಲ್ಲ? ಇಂದೆಂಥ ಮೈಯುರಿ, ಅಪ್ಪಾ? ನೀನು ಬದುಕುವದಿಲ್ಲವೆ? ನೀನು ಸಾಯಲೇಬೇಕೆ? ಬೇಡ ಅಪ್ಪಾ, ನನ್ನನ್ನು ಅನಾಥಳನ್ನಾಗಿ ಮಾಡಿ ಹೋಗಬೇಡ! (ಜನರಿಗೆ) ಯಾರಾದರೂ ನನ್ನ ಪ್ರೀತಿಯ ಪಿತನ ಪ್ರಾಣವನ್ನುಳಿಸಿಕೊಳ್ಳಿರಿ!

(ಜನರು ನೀರು ಸುರಿದೇ ಸುರಿಯುವರು, ಸುರಿದಂತೆಲ್ಲ ಮೈಯುರಿ ಹೆಚ್ಚಾಗುವುದು)

ಮಧುವರಸ : (ಕಂಪಿಸುವ ಸ್ವರದಲ್ಲಿ) ಸಾಕುಮಾಡಿರಿ ಅಣ್ಣಂದಿರೆ! ಈ ಪಾಪಿಗೆ ಇನ್ನು ಉಳಿಗಾಲವಿಲ್ಲ! ನನ್ನ ಸಾವು ಸಮೀಪಿಸುತ್ತಲಿದೆ. ನನ್ನ ಕಣ್ಣೆದುರಿಗೆ ನಾನು ಮಾಡಿದ ಪಾಪಕೃತ್ಯವು ಕರಾಳರೂಪದಲ್ಲಿ ನಿಂತು ಅಣಕಿಸುತ್ತಲಿದೆ! ಅಯ್ಯೋ– ಯಮಲೋಕದ ಭಯಾನಕ ದೃಶ್ಯ! ಸತ್ತೆ, ಸತ್ತೆ!

(ಮನೆಗೆ ನೀರು ಒಯ್ಯುತ್ತಲಿದ್ದ ಶೀಲವಂತಯ್ಯನು ಓಡಿಬಂದು ಕೊಡವನ್ನೆತ್ತಿ)

ಶೀಲ : ದೊರೆಗಳೇ ಸೈರಿಸಿರಿ; ಸೈರಿಸಿರಿ! (ನೀರು ಸುರಿಯುವನು; ಉರಿಯು ತಣ್ಣಗಾಗುವುದು.)

ಮಧು : ಅಹಾ, ಯಾರಿವನು ಮಹಾನುಭಾವಿ? ಸಹಸ್ರಾವಧಿ ಕೊಡ ನೀರಿನಿಂದ ಶಾಂತವಾಗದೆ ನನ್ನ ಶರೀರವನ್ನೆಲ್ಲ ಒಳಗೇ ದಹಿಸತೊಡಗಿದ್ದ ಈ ಜ್ವಲನವನ್ನು ಒಂದೇ ಕೊಡ ನೀರಿನಿಂದ ನೊಂದಿಸಿದ ಮಹಾತ್ಮಾ, ನಿನ್ನ ಉಪಕಾರವನ್ನು ಹೇಗೆ ತೀರಿಸಲಿ?

ನೀಲಾ : ಶೀಲಾ, ಶೀಲಾ, ನಿನಗಾರು ಹೇಳಿದರು ಈ ಸುದ್ದಿಯನ್ನು? ನನ್ನ ತಂದೆಯ ಪ್ರಾಣವನ್ನುಳಿಸಲು ದೇವದೂತನಂತೆ ಬಂದೆಯಲ್ಲ? (ತಂದೆಗೆ ಅಚ್ಚೆಯಿಂದ) ಅಪ್ಪಾ, ಅಪ್ಪಾ, ಇವನು ಹರಳಯ್ಯನ ಮಗ ಶೀಲವಂತಯ್ಯ; ಇವನೇ ನನ್ನ ಹೃದಯೇಶ್ವರ! ಅಪ್ಪಾ, ನಿನ್ನನ್ನು ಕೇಳದೆ ನನ್ನನ್ನು ಶೀಲವಂತಯ್ಯನಿಗೆ ಮಾರಿಕೊಂಡಿದ್ದೇನೆ; ಇವನೇ ನನ್ನ ಪತಿಯೆಂದು ಮನಸ್ಸಿನಲ್ಲಿಯೇ ವರಿಸಿದ್ದೇನೆ; ನನ್ನ ಹೃದಯಮಂದಿರದಲ್ಲಿ ಶೀಲನ ಮೂರ್ತಿ ಸ್ಥಾಪಿತವಾಗಿಹೋಗಿದೆ; ಇನ್ನು ಅನ್ಯಮೂರ್ತಿಗಳಿಗೆ ಅಲ್ಲಿ ಸ್ಥಳವಿಲ್ಲ! ಅಪ್ಪಾ, ಹರಳಯ್ಯನ ಕುಲವನ್ನೆಣಿಸಬೇಡ; ಅವನದು ಶರಣಕುಲ! ನಿನ್ನ ಪ್ರಾಣವನ್ನುಳಿಸಿದ ಶೀಲಯ್ಯನ ಉಪಕಾರವನ್ನು ಹೇಗೆ ತೀರಿಸಲಿ! ಎಂದು ಚಿಂತಿಸಿದೆಯಲ್ಲವೆ? ನನ್ನನ್ನು ಹರಳಯ್ಯನ ಮನೆಗೆ ಧಾರೆಯೆರೆದುಕೊಟ್ಟು ಈ ಉಪಕಾರವನ್ನು ತೀರಿಸಿಬಿಡಿರಿ, ನನ್ನ ಪ್ರಾರ್ಥನೆಯನ್ನು ಮನ್ನಿಸಿರಿ, ಸೆರಗೊಡ್ಡಿ ಬೇಡುತ್ತೇನೆ.

ಮಧುವರಸ : (ಪಶ್ಚಾತ್ತಾಪದಿಂದ) ಶೀಲಾ, ಶೀಲಾ, ನನ್ನ ಪ್ರಾಣವನ್ನುಳಿಸಲು ಬಂದ ದೇವತಾಸ್ವರೂಪೆ! ನನ್ನ ಅಪರಾಧವನ್ನು ನಿನ್ನ ತಂದೆಯಪರವಾಗಿ ಕ್ಷಮಿಸಿಬಿಡು! ಅಯ್ಯೊ, ಆ ಪುಣ್ಯಮೂರ್ತಿ ಹರಳಯ್ಯನಿಗೆ ಎಂಥ ಕಠೋರ ಶಬ್ದಗಳನ್ನಾಡಿದೆ! ನಾನು ಶ್ರೇಷ್ಠ ಕುಲದವನೆಂಬ ಅಹಂಕಾರದಿಂದ ಸೊಕ್ಕಿದ ಕೋಣನಂತೆ ಸಮಾಜದ ದೀನ ಬಾಂಧವರನ್ನು ಕಾಲಲ್ಲಿ ತುಳಿಯುತ್ತ ತಿರುಗಾಡಿದೆ! ಪಾಪದ ಭೀತಿಯಿಲ್ಲದೆ, ಕರುಣೆಯ ಲವಲೇಶವಿಲ್ಲದೆ, ನಾನು ಮೇಲೆಂಬ ಕುತ್ಸಿತ ಭಾವನೆಯಿಂದ ಪ್ರೇರಿತನಾಗಿ ಕೊಬ್ಬಿ, ಕಣ್ಮುಚ್ಚಿ, ಪಶುವಾಗಿ ಕುಣಿದಾಡಿದೆ! ಈ ನನ್ನ ನಿರ್ಲಕ್ಷ್ಯನಾಟ್ಯದ ಕೆಳಗೆ ಸಿಕ್ಕು ಎಷ್ಟು ಜನ ಬಡವರ, ಎಷ್ಟು ಜನ ಕಾಯಕರ್ಮಿಗಳ,

ಎಷ್ಟು ಜನ ಒಕ್ಕಲುಮಕ್ಕಳ, ಎಷ್ಟು ಜನ ದೀನರ, ಎಷ್ಟು ಜನ ನಿರ್ದೋಷಿಮಾನವರ ಮೈಯ್ಯೆಲುವುಗಳು ಮುರಿದು ಪುಡಿ ಪುಡಿಯಾಗಿರುವುವೊ ಕಾಣೆ! ಹರಳಯ್ಯಾ, ನಿನ್ನನ್ನು ನಾನು ಬಾಯಿಗೆ ಬಂದಂತೆ ಹೀಯಾಳಿಸಿದೆ; ಆದರೆ ನಿನ್ನ ಮಗನಿಂದಲೇ, ನಿನ್ನ ಮನೆಯ ನೀರಿನಿಂದ– ಅಲ್ಲಲ್ಲ ಗಂಗಾಜಲದಿಂದಲೇ ನನ್ನ ಪ್ರಾಣ ಉಳಿಯಿತು! ಹರಳಯ್ಯಾ, ಹರಳಯ್ಯ, ಎಲ್ಲಿರುವೆ? (ದುಃಖಿಸುವನು)

ಹರಳ : (ಓಡಿಬಂದು) ದೊರೆಗಳೇ, ನನ್ನನ್ನು ಏಕೆ ಕರೆಸಿದಿರಿ? ಯಾವ ಸೇವೆ ಮಾಡಬೇಕಾಗಿದೆ? ತಮ್ಮ ಸರ್ವಕಾರ್ಯಗಳನ್ನು ಮಾಡಲು ಸಿದ್ಧನಿದ್ದೇನೆ.

ಮಧು : (ಕಾಲಮೇಲೆ ಬಿದ್ದು) ಪುಣ್ಯಮೂರ್ತಿ ಹರಳಯ್ಯ! ನಿನ್ನ ಪಾದಧೂಳಿಯಲ್ಲಿ ಹೊರಳಿ ಪ್ರಾರ್ಥಿಸುತ್ತೇನೆ. ನನ್ನ ಅಕ್ಷಮ್ಯ ಅಪರಾಧವನ್ನು ಕ್ಷಮಿಸಿಬಿಡು! ಪಶ್ಚಾತ್ತಾಪದಿಂದ ನನ್ನ ಹೃದಯವು ಹುರುಪಳಿಸಿದೆ; ಕ್ಷಮೆಯ ಶೀತಲ ಜಲದಿಂದ ಅದನ್ನು ನಂದಿಸು, ಶಾಂತಗೊಳಿಸು!

ಹರಳ : (ಮೇಲೆತ್ತಿ) ಇದೇನು ದೊರೆಗಳೇ, ತಾವು ಈ ಕೀಳುಕುಲದವನಿಗೆ ನಮಸ್ಕರಿಸುವುದೆ?

ಮಧು : ನೀನು ಕೀಳನಲ್ಲ, ಹರಳಯ್ಯ–ನಾನು ಕೀಳನು. ಪರಮಾತ್ಮನ ಮಕ್ಕಳನ್ನು ನಾಯಿ ನರಿಗಳಿಗಿಂತ ಕಡೆಯಾಗಿ ಕಂಡು, ಶೂದ್ರ, ದಾಸ, ಶ್ವಪಚರೆಂದು ಹೀಯಾಳಿಸಿ, ಅವರ ಗೋರಿಗಳ ಮೇಲೆ ನನ್ನ ವಿಲಾಸ ವಿಭ್ರಮದ ರಥವನ್ನೆಳೆದುಕೊಂಡು ಹೊರಟಿದ್ದ ನಾನು ಕೀಳನು! ನಿನ್ನಂಥ ಪಾವನಮೂರ್ತಿಯನ್ನು ಬಾಯಲ್ಲಿ ಹುಳುಗಳು ಬೀಳುವಂತೆ ನಿಂದಿಸಿ ಬಸವಣ್ಣನವರನ್ನು ಜರೆದ ನಾನು ಕೀಳನು! ಈ ತಪ್ಪಿಗಾಗಿ ನನ್ನ ಮಗಳನ್ನು ನಿನ್ನ ಮಗನಿಗೆ ಮದುವೆ ಮಾಡಿಕೊಡಲು ಬಂದಿರುವೆ. ಸ್ವೀಕರಿಸಿ ಬಸವಣ್ಣನವರ ವಿಶ್ವಸಂರಕ್ಷಕ ತತ್ವವನ್ನು ಸತ್ಯಲೋಕಕ್ಕೆ ಇಳಿಸಿರಿ. ಅದಕ್ಕೆ ಅಮರತ್ವವನ್ನು ತಂದುಕೊಡಿರಿ; ನನ್ನನ್ನು ನಿಮ್ಮ ಅಪ್ತನನ್ನಾಗಿಸಿಕೊಳ್ಳಿರಿ!

ಹರಳ : ನೀಲಾ, ಶೀಲಾ, ನೀವಿಬ್ಬರೂ ಸತಿಪತಿಗಳಾಗಲು ಸಿದ್ಧರಿರುವಿರಾ?

ನೀಲಾ : ಮಾವಯ್ಯಾ, ಬಸವತತ್ವ ವಿಜಯಕ್ಕಾಗಿ, ಶುದ್ಧಪ್ರೇಮದ ಜಯಕ್ಕಾಗಿ, ನಾವಿಬ್ಬರೂ ದಂಪತಿಗಳಾಗಲು ನಿಶ್ಚಯಿಸಿ ಪ್ರೇಮಪರಮಾತ್ಮನ ಮುಂದೆ ಪ್ರತಿಜ್ಞೆಮಾಡಿದ್ದೇವೆ!

ಮಧುವರಸ : ಧನ್ಯನಾದೆ, ನಡೆಯಿರಿ–ಈಗಲೇ ಬಸವಣ್ಣನವರ ಒಪ್ಪಿಗೆ ಪಡೆದು ವಿವಾಹಕಾರ್ಯವನ್ನು ನೆರವೇರಿಸೋಣ.

(ಹೋಗುವರು; ತೆರೆ ಏಳುವದು)

ನೋಟ ೬

ಮಂಚಣ್ಣನ ಮನೆ. ಮಂಚಣ್ಣ, ಅವನ ಹೆಂಡತಿ

ಮಂಚಣ್ಣ : ನಿನಗೆ ಆಗಿರುವದಾದರೂ ಏನು ಹೇಳೆ? ಸುಮ್ಮನೇ ಸೆಟಗೊಂಡರೆ ಏನುಮಾಡಲಿ?

ಹೆಂಡತಿ : (ಮುನಿಸಿನಿಂದ) ಆಗೋದು ಏನು? ಅಪಮಾನ! ನೀವು ಮಂತ್ರಿ ಆಗಲಿಲ್ಲ; ನಾನು "ಮಂತ್ರಿಯ ಹೆಂಡತಿ ಬಂದಳು ದಾರಿಬಿಡಿರೇ!" ಎಂದು ಅಪಹಾಸ್ಯಮಾಡುವ ಓಣಿಯ ಹೆಂಗಸರಿಗೆ ಬುದ್ಧಿಗಲಿಸಲಿಲ್ಲ! ನಿಮ್ಮ ಮಾತನ್ನು ನಂಬಿ ನನ್ನ ಗಂಡ ಮಂತ್ರಿಯಾಗುತ್ತಾನೆಂದು ಅವರಿಗೆ ನಾನು ಹೇಳಿದ್ದೇ ತಪ್ಪು!

ಮಂಚಣ್ಣ : ಮಾಡಿದ ಪ್ರಯತ್ನಗಳೆಲ್ಲವೂ ಮಣ್ಣು ಮುಕ್ಕಿದರೆ ಮಾಡಲೇನು? ಬಸವಣ್ಣನಮುಂದೆ ಯಾರ ಆಟವೂ ಸಾಗುವಂತಿಲ್ಲ – ಆತ ಮಹಿಮಾವಂತ!

ಹೆಂಡತಿ : ನಿನ್ನೆ ನಡೆದ ಸುದ್ದಿಯನ್ನೂ, ಇವತ್ತು ನಡೆಯಲಿರುವ ಸಂಗತಿಯನ್ನೂ ಅರಸರಿಗೆ ತಿಳಿಸಿ ರೇಗಿಸಬೇಕು?

ಮಂಚಣ್ಣ : ಅದೇನೇ ಸುದ್ದಿ?

ಹೆಂಡತಿ : ಹೋಗ್ರಿ, ನಿಮಗೆ ಊರು ಸುಟ್ಟರೂ ಎಚ್ಚರವಿರುವುದಿಲ್ಲ! ನಿನ್ನೆ ಮಧುವರಸರು ಮನೆಯವರೆಲ್ಲರೊಡನೆ ಲಿಂಗದೀಕ್ಷೆ ಹೊಂದಿ ವೀರಶೈವರಾದರು; ಇವತ್ತು ಹರಳಯ್ಯನ ಮಗನೊಂದಿಗೆ ಮಧುವರಸರ ಮಗಳ ಲಗ್ನ! ಇಂಥ ಧರ್ಮವಿರುದ್ಧವಾದ ಕಾರ್ಯಗಳು ನಡೆದರೂ ಅರಸರು ಸುಮ್ಮನಿರುವರೆ?

ಮಂಚಣ್ಣ : ಆಂ – ಮಧುವರಸರ ಮಗಳೊಡನೆ ಹರಳಯ್ಯನ ಮಗನ ಲಗ್ನ? ಮಾಡಿಸಿದವರು ಬಸವಣ್ಣ! ಏ– ಇನ್ನು ಚಿಂತೆಬಿಡು– ನಾನು ಮಂತ್ರಿಯಾದೆ! ನಾನು ಎದುರು ನೋಡುತ್ತಿದ್ದ ಪ್ರಸಂಗವು ತಾನಾಗಿಯೇ ಬಂದಿತು! ಜನತೆಯನ್ನೆಲ್ಲ ಬಸವಣ್ಣನವರ ವಿರುದ್ಧ ಎಬ್ಬಿಸಿ ಕೂಡ್ರಿಸುವೆ; ಬಸವಣ್ಣನವರ ಬಗ್ಗೆ ಬಿಜ್ಜಳರಾಯನ ಕೋಪವನ್ನು ಕೆರಳಿಸಿ, ಅವರನ್ನು ಕಿತ್ತೊಗೆದು ನಾನು ಮಂತ್ರಿಯಾಗುವೆ! ನಿಶ್ಚಯ!

ಹೆಂಡತಿ : (ಆನಂದದಿಂದ) ನಿಜವಾಗಿ ಹೇಳುವಿರಾ? ಬಸವಣ್ಣನವರಿಗೆ ಮಂತ್ರಿಪದದ ಕಿರೀಟ ಖಡ್ಗವನ್ನು ಕೊಟ್ಟಂತೆ ಬಿಜ್ಜಳಮಹಾರಾಜರು ನಿಮಗೂ ಕೊಡುವುದನ್ನು ಅಂತಃಪುರದ ಸ್ತ್ರೀಯರೊಡನೆ ನಾನು ನೋಡುವೆನೆ?

ಮಂಚಣ್ಣ : (ಬೀಗಿ) ಅದರಲ್ಲೇನು ಸಂಶಯ? ಅದರ ಅನುಕರಣ ಈಗ ಆಗಿಯೇ ಹೋಗಲಿ! ಇದೋ, ನೀನು ಈ ಪೀಠದಮೇಲೆ ಕುಳಿತು ಬಿಜ್ಜಳರಾಜನಾಗಿ ಮಾತನಾಡು; ಉಳಿದದ್ದೆಲ್ಲ ನಾನು ಮಾಡುವೆ!

ಹೆಂಡತಿ : (ರಾಜನ ಠೀವಿಯಲ್ಲಿ ಕುಳಿತು) ಸೇನಾಪತಿಗಳೇ, ನನ್ನ ಪ್ರಜಾ ಲೋಕದ ಮಂಗಲಮೂರ್ತಿಯಾಗಬಲ್ಲ ಮಹಾವ್ಯಕ್ತಿಯೊಂದು ಬರಿದಾದ ಮಂತ್ರಿಪದವನ್ನು ಅಲಂಕರಿಸಬೇಕಾಗಿದೆ.

ಮಂಚಣ್ಣ : (ಸೇನಾಪತಿಯ ಸ್ಥಳದಲ್ಲಿ ಕುಳಿತು) ರಾಜ್ಯದ ಮಧ್ಯದಲ್ಲಿ ರಾಜ್ಯವನ್ನು ಉಳಿಸಬಲ್ಲ ಶಕ್ತಿ ಇದ್ದೇ ಇರುತ್ತದೆ ಮಹಾರಾಜ; ಇಂದಿಲ್ಲ ನಾಳೆ ತಮಗೆ ಆ ಶಕ್ತಿಯ ಪರಿಚಯವಾಗುವದು. (ಮತ್ತೆ ಸಭಿಕರಸ್ಥಳದಲ್ಲಿ ಕುಳಿತೆದ್ದು) ಮಹಾಪ್ರಭುಗಳು ಚಿತ್ತೈಸಬೇಕು. ಆಪ್ತಾಲೋಚನಪ್ರವೀಣನಾದ ಕೊಡೆಯ ಮಂಚಣ್ಣನು ಮನೆಯಲ್ಲಿ ವ್ಯಾಸಂಗನಿರತನಾಗಿದ್ದಾನೆ, ಆತನ ಪಾಂಡಿತ್ಯದ ಕೀರ್ತಿಯು ಈಗಾಗಲೇ ದಿಕ್ಕು ದಿಕ್ಕುಗಳಲ್ಲಿ ಹಬ್ಬಿದೆ. ಆತನೇ ಮಂತ್ರಿಯಾದರೆ ಒಳಿತೆಂದು ಎಲ್ಲ ಸಭಿಕರ ಇಚ್ಛೆ. ಪ್ರಭುಗಳು ವಿಚಾರಿಸಬೇಕು! (ನಂತರ ಭಟನಾಗಿ ಬಂದು) ಮಹಾರಾಜರಿಗೆ ವಿಜಯವಾಗಲಿ! ತ್ರಿಪುರಾಂತಕನ ಕೆರೆಯನ್ನು ಕಟ್ಟಿಸುವಾಗ ಈ ತಾಮ್ರಪಟವು ಸಿಕ್ಕಿದೆ. ಮಹಾರಾಜರ ಅವಗಾಹನೆಗಾಗಿ ತಂದಿದ್ದೇನೆ!

ಹೆಂಡತಿ : ಭಟ್ಟರೇ, ಇದನ್ನು ಓದಿ ಹೇಳಿರಿ.

ಮಂಚಣ್ಣ : (ಭಟ್ಟನಾಗಿ) ಓಂ ಪೂರ್ಣಮಿದಂ ಪೂರ್ಣಮದಃ ಪೂರ್ಣಾತ್ಪೂರ್ಣ...........

ಹೆಂಡತಿ : (ರೇಗಿ) ಸಾಕು ಭಟ್ಟರೇ ಬಾಯಿಮುಚ್ಚಿರಿ; ನಿಮ್ಮ ಬುದ್ಧಿಯೂ ಪೂರ್ಣವಿದೆ! ಬಿಜ್ಜಳರಾಯನ ದರ್ಬಾರದಲ್ಲಿ ಈ ಲಿಪಿಯನ್ನು ಓದಬಲ್ಲ ಒಬ್ಬರಾದರೂ ಪಂಡಿತರಿಲ್ಲವೆ? ರಾಜಸಭೆಗೆ ಕಲಂಕ, ರಾಷ್ಟ್ರದ ಅಪಕೀರ್ತಿ!

ಮಂಚಣ್ಣ : (ಸೇನಾಪತಿಯಾಗಿ) ಪ್ರಭುಗಳು ಚಿತ್ತೈಸಬೇಕು. ಮಂಚಣ್ಣನೇ ಈ ಲಿಪಿಯನ್ನು ಓದಬಲ್ಲನು!

ಹೆಂಡತಿ : ಎಲೋ ಮಾವುತಾ!

ಮಂಚಣ್ಣ : (ಕರಜೋಡಿಸಿ) ಮಹಾರಾಜ!

ಹೆಂಡತಿ : ತೀವ್ರಹೋಗಿ ಮಂಚ..... (ನಾಚಿ ನಿಲ್ಲುವಳು)

ಮಂಚಣ್ಣ : ಮಂಚವೋ ಪಲ್ಲಂಗವೋ ಹೊರಸೊ? ಪೂರಾ ಹೆಸರು ಅನ್ನೇ, ಇಲ್ಲಿ ಯಾರು ಇದ್ದಾರೆ?

ಹೆಂಡತಿ : ಹೋಗ್ರಿ ಅಂದ್ರೆ – ನನಗೆ ನಾಚಿಕೆಬರುತ್ತದೆ. (ಗಂಭೀರಳಾಗಿ).......... ರನ್ನು ಆನೆಯಮೇಲೆ ಕರೆದುತಾ!

ಮಂಚಣ್ಣ : (ಬಾಗಿ) ಮಹಾದಾಜ್ಞೆ ! (ಹೋಗಿ ಮತ್ತೆ ಮಂಚಣ್ಣನಾಗಿ ಬರುವನು)

ಹೆಂಡತಿ : ದಯಮಾಡಿಸಿರಿ ಮಂಚ..... (ನಾಲಿಗೆಕಚ್ಚಿ) ನವರೇ - ನಿಮ್ಮ ಪಾಂಡಿತ್ಯಕ್ಕೆ ಪ್ರತಿಯಿಲ್ಲವಂತೆ!

ಮಂಚಣ್ಣ : (ನಗುತ್ತ) ಮಹಾರಾಜರು ನನ್ನನ್ನು ಹೊಗಳಬಾರದು. ತಮ್ಮ ಶಿಶು ನಾನು, ಸೇವಕ ನಾನು...................

ಹೆಂಡತಿ : (ನಾಚಿ) ಹೋಗ್ರಿ, ಹೀಗೆಲ್ಲಾ ಅಂದ್ರೆ ನಾನು ಇಳಿದೇ ಬಿಡ್ತೇನೆ ಪೀಠ! ನನ್ನ ಶಿಶು ಅಂದರೇನು?

ಮಂಚಣ್ಣ : ನೀನೀಗ ನನ್ನ ಹೆಂಡತಿಯಲ್ಲೇ, ಬಿಜ್ಜಳಮಹಾರಾಜ! ಇದೆಲ್ಲಾ ನಟನೆ! ಅಂದಕೂಡಲೆ ನಾನು ನಿನ್ನ ಮಗನಾದೆನೆ?

ಹೆಂಡತಿ : ಇರಲಿ ಮಂ...........ನಿಮ್ಮ ಹೆಸರಿನವರೇ, (ತಡೆದು) ನಾನೊಲ್ಲೆ ಈ ಪೀಠ (ಇಳಿದು ಒಳಗೆ ಹೋಗಲು)

ಮಂಚಣ್ಣ : ಪ್ರಭುಗಳ ಇಚ್ಛೆ!

(ಹೋಗುವನು ತೆರೆ ಏಳುವದು)

ನೋಟ ೭

(ಅನುಭವ ಮಂಟಪ ಬಸವ, ಸಿದ್ಧರಾಮ, ಪ್ರಭು, ಚೆನ್ನಬಸವ, ಹರಳಯ್ಯ, ಮಧುವರಸ, ನೀಲಾ, ಶೀಲರು ಇರುತ್ತಾರೆ)

ಬಸವ : ನೀಲಾ, ಶೀಲಾ, ನೀವಿಬ್ಬರೂ ಮನಃಪೂರ್ವಕವಾಗಿ ಸತಿಪತಿಗಳಾಗಲು ಒಪ್ಪಿರುವಿರಾ?

ಶೀಲ : ದೇವಾ, ತ್ರಿಕರಣಪೂರ್ವಕವಾಗಿ ಸರ್ವಸಮಾನತೆ, ಅತಿವರ್ಣ ಅತ್ಯಾಶ್ರಮ ಧರ್ಮದ ವಿಜಯಕ್ಕಾಗಿ ನಾವಿಬ್ಬರೂ ವಿವಾಹವಾಗಲು ನಿಶ್ಚಯಿಸಿದ್ದೇವೆ. ಸಮ್ಮತಿಸಬೇಕು. (ಬಸವನು ಪ್ರಭುಗಳಕಡೆಗೆ ನೋಡುವನು.)

ಪ್ರಭು : ಬಸವಣ್ಣಾ ಕಾರ್ಯವೇನೋ ಮಹತ್ತರವಾದುದು; ಆದರೆ ಅದಕ್ಕೆ ಸರಿಯಾದ ಸಮಯವಿನ್ನೂ ಬಂದಿದೆಯೋ ಇಲ್ಲವೋ ಹೇಳಲಾರೆ! ನಿಮ್ಮ ಮೇಲೆ ದುರ್ಧರಪ್ರಸಂಗ ಬರಬಾರದು, ಇಷ್ಟೆ!

ಬಸವ : ಸತ್ಕಾರ್ಯಕ್ಕೆ ಸಮಯದ ಪ್ರಶ್ನೆಯೆಲ್ಲಿ ಪ್ರಭುವೆ? ಮಾಡಿದ್ದೇ ಮಂಗಲದಿನ! ನನಗೇತರ ಭಯ? ನಾಳೆ ಬಪ್ಪುದು ನನಗಿಂದೇ ಬರಲಿ, ಇಂದು ಬರ್ಪುದು ಈಗಲೇ ಬರಲಿ! ಮರಣವೇ ನನಗೆ ಮಹಾನವಮಿ! ಯಾರು ಮುನಿದು

ಎಮ್ಮನೇನ ಮಾಡುವರು? ಊರು ಮುನಿದು ಎಮ್ಮನೇನ ಮಾಡುವುದು? ನಮ್ಮ ಕುನ್ನಿಗೆ ಕೂಸ ಕೊಡಬೇಡ? ನಮ್ಮ ಸೊಣಗಂಗೆ ತಳಿಗೆಯಲಿಕ್ಕಬೇಡ! ಆನೆಯ ಮೇಲೆ ಹೋಹನ ಶ್ವಾನ ಕಚ್ಚಬಲ್ಲುದೆ, ನಮಗೆ ನಮ್ಮ ಕೂಡಲಸಂಗಯ್ಯನಿರುವವರೆಗೆ?

ಸಿದ್ಧರಾಮ : ಬಸವಣ್ಣ, ನೀನು ಕಟ್ಟಿದ ಸಮಾಜದ ಸುವರ್ಣಮಂದಿರಕ್ಕೆ ರತ್ನಕಲಶವನ್ನಿಡುವ ಈ ಕಾರ್ಯವಾಗಿಯೇ ತೀರಬೇಕು. ಅತಿಸಮೀಪದ ಶುಭ ಮುಹೂರ್ತವೊಂದನ್ನು ನೋಡಿರಿ!

ಬಸವ :

ರಾಗ : ಘರಜ ತಾಳ : ಜಲದೇಕ್ಕಾ ಚಾಲ : ಬ್ರಿಜಕಿನಾರ ಘರಜಿಗಾಯೆ

ಎಮ್ಮವರು ಬೆಸಗೊಂಡರೆ
ಶುಭಲಗ್ನವೆನ್ನಿರಯ್ಯ
ರಾಶಿ ಕೂಟ ಋಣ ಸಂಬಂಧ
ಉಂಟೆಂದು ಹೇಳಿರಯ್ಯ ॥ಪ॥

ಚಂದ್ರಬಲ ತಾರಾಬಲ
ಉಂಟೆಂದು ಹೇಳಿರಯ್ಯ
ನಾಳಿನದಿನಕಿಂದಿನ ದಿನ
ಲೇಸೆಂದು ಹೇಳಿರಯ್ಯ
ಕೂಡಲಸಂಗಮದೇವನ
ಪೂಜಿಸಿದ ಫಲ ನಿಮ್ಮದಯ್ಯ ॥೧॥

ಶೀಲಾ, ನೀಲಾ, ನೀವಿಬ್ಬರೂ ಈ ಪುಷ್ಪಹಾರಗಳನ್ನು ಒಬ್ಬರೊಬ್ಬರ ಕೊರಳಿಗೆ ಹಾಕಿ ತತ್ವಕ್ಕಾಗಿ ವಿವಾಹವಾದೆವೆಂದು ಪ್ರತಿಜ್ಞೆಮಾಡಿರಿ!

ಶೀಲ : ಶಿವಶರಣರ ಪಾದಸಾಕ್ಷಿಯಾಗಿ ನಾನು ಅತಿವರ್ಣ ತತ್ವವಿಜಯಕ್ಕಾಗಿ ನೀಲಳನ್ನು ಲಗ್ನವಾಗಿದ್ದೇನೆ (ಹಾಕುವನು)

ಬಸವ : ಪ್ರಭುವೇ, ನೂತನ ವಧೂವರರನ್ನು ಆಶೀರ್ವದಿಸಿರಿ!

ಪ್ರಭು : ನೀಲಾ, ಶೀಲಾ, ವಿವಾಹವು ವಿಶ್ವಪ್ರೇಮಕ್ಕಾಗಿ; ತುಚ್ಛ ಕಾಮಕ್ಕಾಗಿಯಲ್ಲ! ವಿವಾಹವು ವಿಶ್ವ ಕುಟುಂಬತ್ವದ ಭಾವನೆಯನ್ನು ಅರಳಿಸುವುದಕ್ಕಾಗಿ, ವಿಷಯ ಲಾಲಸೆಯನ್ನು ಕೆರಳಿಸುವುದಕ್ಕಾಗಿಯಲ್ಲ, ನಿಮ್ಮಿಬ್ಬರ ಪ್ರೇಮವು ಕಾಮದ ಎಲ್ಲೆಯನ್ನು ಮೀರಿ ಪ್ರಗತಿಯ ಪೀಠವಾಗಲಿ! ಈ ಸ್ಥಿತಿಯನ್ನು ದಾಟಿದಮೇಲೆ ಶರಣಸತಿ ಲಿಂಗಪತಿ ಭಾವ! ಸತಿಭಕ್ತೆಯಾದರೆ ಹೊಲೆಗಂಜಲಾಗದು; ಪತಿಭಕ್ತನಾದರೆ

ಕುಲಕ್ಕಂಜಲಾಗದು. ಸತಿಪತಿಯೆಂಬ ಅಂಗಸುಖ ಹಿಂಗಿ ಲಿಂಗವೇ ಪತಿಯಾದ ಬಳಿಕ ಸತಿಗೆ ಪತಿಯುಂಟೆ? ಪತಿಗೆ ಸತಿಯುಂಟೆ? ನಿಮ್ಮಿಬ್ಬರ ಜೀವನವು ಉಜ್ವಲವಾಗಲಿ!

(ತೆರೆ ಬೀಳುವುದು)

ನೋಟ ೮

ರಾಜಮಾರ್ಗ – ಮಂಚಣ್ಣ, ಭಟ್ಟರು ಮಾತನಾಡುತ್ತ ಬರುವರು.

ಮಂಚಣ್ಣ : ಹಾಂ– ಭಟ್ಟರೇ, ನಾವು ದಾರಿ ಕಾಯುತ್ತಲಿದ್ದ ಸಮಯವು ತಾನಾಗಿಯೇ ಬಂದಿತು, ವರ್ಣವಿರೋಧಕರು ತಾವಾಗಿಯೇ ತಮ್ಮ ಕಾಲ ಮೇಲೆ ಕೊಡಲಿ ಚೆಲ್ಲಿಕೊಂಡರು. ಈಗ ನಾವು ಜನತೆಯನ್ನು ರೊಚ್ಚಿಗೆಬ್ಬಿಸಿ, ಬಿಜ್ಜಳರಾಜನಲ್ಲಿಗೆ ಕರೆದೊಯ್ದು, ಸಂಕರಪಂಥಿಗಳಿಗೆ ತಕ್ಕ ಶಿಕ್ಷೆವಿಧಿಸಿ ಬಸವನನ್ನು ಮಂತ್ರಿಪದದಿಂದ ಕಿತ್ತೊಗೆಯುವಂತೆ ಒತ್ತಾಯಪಡಿಸಹಚ್ಚೋಣ!

ಭಟ್ಟ : ಇಷ್ಟು ಮಾಡಿಸದಿದ್ದರೆ ಈ ಬಸವನ ಹಾವಳಿಯು ತಗ್ಗುವದಿಲ್ಲ ಮಂಚಣ್ಣನವರೇ– ಶಾಂತಂ ಪಾಪಂ. ವರ್ಣಸಂಕರಕ್ಕೂ ಅಳತೆಬೇಡವೆ? ಊರ ಪ್ರಮುಖ ಗೃಹಸ್ಥರನ್ನೆಲ್ಲ ಕರೆದೊಯ್ಯೋಣ ನಡೆಯಿರಿ. ಸುಮ್ಮನಾದಿರಲ್ಲ? ಯಾವ ವಿಚಾರ ನಡೆಸಿರುವಿರಿ?

ಮಂಚಣ್ಣ : ಏನೂ ಇಲ್ಲ, ಬಿಜ್ಜಳರಾಜರು ಬಸವಣ್ಣನವರನ್ನು ಕಿತ್ತೊಗೆಯುವದು ಖಂಡಿತ. ಆಮೇಲೆ ನಾನು ಮಂತ್ರಿಯಾಗಬೇಕೋ ಅಥವಾ ನಾನೇ ಮಂತ್ರಿಯಾಗಬೇಕೋ? ಇದೇ ವಿಚಾರ!

ಭಟ್ಟ : ಮಂಚಣ್ಣನವರೇ, ಈ ಸ್ವಾರ್ಥವನ್ನು ಬಿಡಿರಿ! ನಾನು ದರ್ಬಾರದ ಮುಖ್ಯಪಂಡಿತ; ಮಂತ್ರಿಯಾಗುವ ಹಕ್ಕು ನನಗಿದೆ!

ಮಂಚಣ್ಣ : ಭಟ್ಟರೇ, ನಿಮ್ಮ ತಲೆ ಕೆಟ್ಟಿದೆಯೊ? ಬಸವನ ವಿರುದ್ಧ ಅಪಪ್ರಚಾರ ಸಾಗಿಸಿಕೊಂಡು ಬಂದು ಅವನನ್ನು ತಳ್ಳುವದಕ್ಕಾಗಿ ಬಡಿದಾಡುವವ ನಾನು! ಆಪ್ತಾಲೋಚಕ ನಾನು! ರಾಜ ಜೈನ– ನಾನೂ ಜೈನ. ಮಂತ್ರಿಯಾಗುವ ಹಕ್ಕು ನನಗಿದೆ!

ಭಟ್ಟ : ರಾಜನು ಜೈನನಾದರೇನಾಯಿತು? ಈಗ ನಿವೃತ್ತನಾಗುವ ಬಸವಣ್ಣ ಮೊದಲು ಬ್ರಾಹ್ಮಣ! ಕಾರಣ ಮಂತ್ರಿಯಾಗುವವನು ನಾನು!

ಮಂಚಣ್ಣ : ಹುಚ್ಚುಭಟ್ಟರೇ – ಮಂತ್ರ ಓದಿದವರೆಲ್ಲಿಯಾದರೂ ಮಂತ್ರಿಗಳಾಗುತ್ತಾರೆಯೆ? ಅದಕ್ಕೆ ರಾಜಕಾರಣದ ಬಲಬೇಕು! ಮಂತ್ರಿಯಾಗುವ ಬಾಧ್ಯತೆ ನನಗಿದೆ!

ಭಟ್ಟ : ರಾಜನಿಗೆ ಚತುರಂಗಬಲವಿದ್ದರೆ ನಮಗೆ ಪಂಚಾಂಗ ಬಲವಿದೆ ನಾನು ಮಂತ್ರಿಯಾಗಲು ಯೋಗ್ಯ!

ಮಂಚಣ್ಣ : ಪಂಚಾಂಗ ಓದಿ ಮಂತ್ರಿಯಾಗಲಿಕ್ಕೆ ದರ್ಬಾರದಲ್ಲಿ ಜಾತಕ ಬರೆಯುವ ಕಾರ್ಯವಿರುತ್ತದೆಯೆ? ತಲೆಯಲ್ಲಿ ತುಣುಕು ಮಿದುಳಿದೆಯೋ ಅಥವಾ ನೀರು ಖೊಬ್ಬರಿಯಿಲ್ಲದ ತೆಂಗಿನಕಾಯಿಯೋ ನಿಮ್ಮ ತಲೆ?

ಭಟ್ಟ : ಏ ಅಬ್ರಹ್ಮಣ್ಯಂ ನಾನು ಮಂತ್ರಿಯಾದರೆ ಒಳಿತು; ಇಲ್ಲದಿದ್ದರೆ ನಮ್ಮಿಬ್ಬರಲ್ಲಿ..................

ಮಂಚಣ್ಣ : ಏ– ಏ– ಹಾಗೆ ಮಾಡಬೇಡಿರಿ. ನಮ್ಮಿಬ್ಬರಲ್ಲಿ ಒಡಕು ಹುಟ್ಟಬಾರದು; ಒಡಕು ಎಲ್ಲಿದೆಯೋ ಅಲ್ಲಿ ಕೆಡಕು ಕಟ್ಟಿಟ್ಟಗಂಟು. ಮೊದಲು ಬಸವಣ್ಣನನ್ನು ಮಂತ್ರಿಪದದಿಂದ ತಳ್ಳೋಣ, ಆ ಮೇಲೆ ದಿನಾಲು ಒಬ್ಬರಂತೆ ಸರತಿಯಮೇಲೆ ಮಂತ್ರಿಗಳಾಗೋಣ!

(ಹೋಗುವರು ತೆರೆ ಏಳುವುದು)

ನೋಟ ೯

(ಬಿಜ್ಜಳನ ಮನೆ. ಒಳಗೆ ಮಂಚಣ್ಣ, ಭಟ್ಟ. ಹೊರಗೆ ಜನಸಂದಣಿ)

ಬಿಜ್ಜಳ : ಹರಳಯ್ಯ ಮಧುವರಸರ ಶರೀರ ಸಂಬಂಧವು ವರ್ಣಾಶ್ರಮ ಧರ್ಮಕ್ಕೆ ಭಯಂಕರವಾದ ಆಘಾತವನ್ನುಂಟುಮಾಡಿದೆಯೆಂಬುದು ನಿಜ ಮಂಚಣ್ಣಾ! ಆದರೆ ಪರಸ್ಪರ ಸಮ್ಮತಿಯಿಂದ ಆ ಕಾರ್ಯವಾಗಿದೆ. ಮನಸ್ಸು ಒಪ್ಪುವುದೇ ಮತ. ಮಧುವರಸನು ಮತಾಂತರವಾದುದೂ, ಹರಳಯ್ಯನೊಡನೆ ಶರೀರ ಸಂಬಂಧ ಬೆಳೆಸಿದುದೂ ಅವನ ಹೃದಯಕ್ಕೆ ಒಪ್ಪಿತವಾದ ಮಾತು. ಹೀಗೆ ಮಾಡಲು ಎಲ್ಲರಿಗೂ ವ್ಯಕ್ತಿಸ್ವಾತಂತ್ರ್ಯವಿದೆ!

ಮಂಚಣ್ಣ : ವ್ಯಕ್ತಿ ಸ್ವಾತಂತ್ರ್ಯವು ಸಾಮೂಹಿಕ, ಸಾರ್ವಜನಿಕ ಶಾಂತತೆ, ಸ್ವಾಸ್ಥ್ಯಗಳಿಗೆ ಭಂಗ ತಂದರೆ ಅದಕ್ಕೆ ಕಾರಣರಾದವರನ್ನು ಶಿಕ್ಷಿಸುವುದು ರಾಜನ ಕರ್ತವ್ಯ ಪ್ರಭುಗಳೇ! ಬಸವಣ್ಣನವರು ಮಂತ್ರಿ ಸ್ಥಾನದಲ್ಲಿದ್ದುಕೊಂಡು ಈ ವರ್ಣವಿರೋಧಕ ಕಾರ್ಯವನ್ನು ಸಾಗಿಸುತ್ತಿರುವುದರಿಂದ ಹರಳಯ್ಯ ಮಧುವರಸರ ಉದಾಹರಣೆಯನ್ನೇ ಸಾಮಾನ್ಯರನೇಕರು ಅನುಕರಿಸುವ ಸಂಭವವಿದೆ! ಹಾಗೆ ಆದದ್ದಾದರೆ ಪ್ರಜಾಲೋಕದಲ್ಲಿ ಹಾಹಾಕಾರವೇಳುವದು. ಇದೊಂದೇ ಕಾರ್ಯದಿಂದ (ಹೊರಗೆ ತೋರಿಸಿ) ಇದಿಷ್ಟು ಜನರು ಕ್ಷೋಭೆಗೊಂಡು ಈ ಕಾರ್ಯ ಮಾಡಿದವರನ್ನು, ಅವರು ಅನ್ಯರಿಗೆ ಮಾದರಿಯಾಗದಂತೆ, ನಿರ್ಮೂಲಮಾಡಿರೆಂದು ಬೇಡಿಕೊಳ್ಳಲು ಬಂದಿದ್ದಾರೆ!

ಜನರಲ್ಲಿ ಒಬ್ಬ : ಮಹಾಪ್ರಭುಗಳೇ–ನಮ್ಮ ಪ್ರಾಣಕ್ಕಿಂತಲೂ ಪ್ರಿಯವಾದ

ವರ್ಣಾಶ್ರಮ ಧರ್ಮವು ನೆಲಸಮವಾಗುತ್ತಿರುವದನ್ನು ನೋಡುತ್ತ ನಾವು ಶಾಂತಿಯಿಂದಿರಲಾರೆವು! ಕಲ್ಯಾಣನಗರದಲ್ಲಿ ಬೇರುಬಿಟ್ಟಿರುವ ಈ ವಿಷವೃಕ್ಷವನ್ನು ಸಣ್ಣದಿರುವಾಗಲೇ ಪ್ರಭುಗಳು ಕೀಳಿಸಿ ಚೆಲ್ಲಬೇಕು!

ಭಟ್ಟ : ಮಹಾರಾಜ! ಇದನ್ನು ಹೀಗೆಯೇ ಬೆಳೆಯಗೊಟ್ಟರೆ ನಾಳಿನ ಸ್ಥಿತಿ ಕಠಿಣವಾಗಬಹುದು! ಬಸವನು ಎಲ್ಲರನ್ನು ತನ್ನ ಮತಕ್ಕೆ ತಿರುಗಿಸಿ ತಾನೇ ರಾಜ್ಯವನ್ನು ಆಕ್ರಮಿಸಿಕೊಳ್ಳಬಹುದು! ಬಸವನ ಕೆಚ್ಚು ಮುರಿಯಲು ಇದೇ ಸದವಕಾಶ! ಸುವರ್ಣಸಮಯ!

ಮಂಚಣ್ಣ : ಮಹಾರಾಜ! ಪ್ರಜೆಗಳ ಶಾಂತಿಸುಖಗಳೇ ರಾಜ್ಯದ ಅಡಿಗಲ್ಲು! ಬಸವಣ್ಣನೊಬ್ಬನ ಸಲುವಾಗಿ ಪ್ರಜೆಗಳ ಕ್ಷೋಭವನ್ನು ಬೆಳೆಯಗೊಡಬೇಡಿರಿ! ಅದು ರಾಜ್ಯಕ್ಕೆ ಮೃತ್ಯು!

ಜನರಲ್ಲಿ ಒಬ್ಬ : ಮಹಾರಾಜ! ತಮಗೆ ರಾಜ್ಯದ ಬಹುಸಂಖ್ಯಾಕ ಪ್ರಜೆಗಳು ಬೇಕೋ ಅಥವಾ ಒಬ್ಬಿಬ್ಬ ಸುಪ್ರತಿಷ್ಠಿತ ವ್ಯಕ್ತಿಗಳು ಬೇಕೋ ವಿಚಾರಿಸಿರಿ! ನಾವು ಬೇಕಾಗಿದ್ದರೆ ನಮ್ಮ ವಿಶ್ವಾಸದ ಧರ್ಮವನ್ನು ಕೆಡಿಸಿರುವ ಹರಳಯ್ಯ ಮಧುವರಸರನ್ನು ಈ ಸುದ್ದಿ ಎಲ್ಲ ಕಡೆಗೆ ಹರಡುವ ಮೊದಲೇ ಶೂಲಕ್ಕೇರಿಸಿ ಇಲ್ಲದಂತೆ ಮಾಡಬೇಕೆಂದು ಪ್ರಾರ್ಥಿಸುತ್ತೇವೆ!

ಬಿಜ್ಜಳ : (ನಿಟ್ಟುಸಿರಿಟ್ಟು) ಎಂಥ ಕಠಿಣಸಮಸ್ಯೆಯು ಎದುರಾಗಿ ನಿಂತಿತು? (ಜನರಿಗೆ) ನೀವು ಹೋಗಿರಿ, ನಿಮ್ಮ ಹೃದಯ ಸಂತಾಪಕ್ಕೆ ಕಾರಣವಾದ ವಿಷಯವನ್ನು ಸಹಾನುಭೂತಿಯಿಂದ ವಿಚಾರಿಸುವೆವು! (ಎಲ್ಲರೂ ಹೋಗಲು) ಒಂದುಕಡೆಗೆ ನನ್ನ ವಿಶ್ವಾಸದ, ನಿಷ್ಠೆಯ, ಪ್ರೇಮಮೂರ್ತಿ ಬಸವಣ್ಣನವರು; ಇನ್ನೊಂದು ಕಡೆಗೆ ರೊಚ್ಚಿಗೆದ್ದಿರುವ ನನ್ನ ಪ್ರಜಾಲೋಕ! ಇವರಲ್ಲಿ ಯಾರನ್ನು ಕಡೆಗಣಿಸಲಿ? ಎಂಥ ಕಠಿಣ ಪ್ರಶ್ನೆಯು ಎದುರಾಯಿತಲ್ಲ? ಬಸವಣ್ಣನವರನ್ನು ತಳ್ಳಿಬಿಡಲೊ? ನನ್ನ ರಾಜ್ಯವನ್ನು ವಿನಾಶದ ದವಡೆಯೊಳಗಿಂದ ಬಿಡಿಸಿ ಸಮೃದ್ಧ, ಸುಖಭರಿತ ರಾಷ್ಟ್ರವನ್ನಾಗಿ ಮಾಡಿದ ಉಪಕಾರಿಗಳು; ನನ್ನ ನಂಬುಗೆ, ಪ್ರೇಮಗಳಿಗೆ – ಅಪಾರವಾದ ಆದರಕ್ಕೆ ಪಾತ್ರರಾದವರು! ನನ್ನ ಪ್ರಜಾಲೋಕವನ್ನು ನಿರ್ಲಕ್ಷಿಸಲೊ? ಒಬ್ಬ ವ್ಯಕ್ತಿಗಾಗಿ ಕೋಟಿ ಜೀವಿಗಳ ಧಾರ್ಮಿಕ ಭಾವನೆಗಳನ್ನು ಘಾಯಗೊಳಿಸುವುದೆ? ಅವರ ಕ್ಷೋಭೆಯೇ ರಾಜ್ಯಕ್ಕೆ ಮೃತ್ಯುವಲ್ಲವೆ? ವರ್ಣಾಶ್ರಮ ಧರ್ಮವನ್ನು ವಿಧ್ವಂಸಗೊಳಿಸಬೇಕೆ? ಸಾವಿರಾರು ವರ್ಷಗಳಿಂದ ನಡೆದುಬಂದಿರುವ ಸಮಾಜವ್ಯವಸ್ಥೆಯನ್ನು ತ್ಯಜಿಸುವುದು ಹೇಗೆ? ಬಸವಣ್ಣ ಬೇಕು, ಪ್ರಜೆಗಳು ಬೇಕು, ವರ್ಣವ್ಯವಸ್ಥೆ ಬೇಕು–ಹರಳಯ್ಯ ಮಧುವರಸರು?........ ಪ್ರಜೆಗಳ ಕ್ಷೋಭೆಗೆ ಕಾರಣರಾದ ಇವರನ್ನೇ ಕೊಲೆಮಾಡಿಸಿಬಿಡಲೊ?.............

(ತೆರೆ ಬೀಳುವುದು)

ನೋಟ ೧೦

ರಾಜಮಾರ್ಗ (ಮಾಚಿದೇವ, ಜಗದೇವರು ತ್ವರೆಯಿಂದ)

ಮಾಚಿದೇವ : ಜಗದೇವಾ, ಕುತಂತ್ರಿಗಳು ಕಾರಸ್ಥಾನವನ್ನು ಹೂಡಿದ್ದಾರೆ–ಹರಳಯ್ಯ ಮಧುವರಸರನ್ನು ಶೂಲಕ್ಕೇರಿಸಲು! ಕಲ್ಯಾಣದ ಕ್ಷಿತಿಜವು ರಕ್ತಮಯವಾಗುವ ಕಾಲ ಬಂದಿತು! ಇಂದು ರಾಜಸಭೆಯಲ್ಲಿ ಹರಳಯ್ಯ ಮಧುವರಸರ ವಿಚಾರಣೆಯಿದೆ! ಬಸವಣ್ಣನವರು ಮಂತ್ರಿಗಳು; ರಾಜ್ಯಶಾಸನಗಳಿಗೆ ಕಟ್ಟುಬಿದ್ದವರು! ಕುತಂತ್ರಿಗಳ ಮಿಥ್ಯಾರೋಪಗಳನ್ನು ಕೇಳಿ ಶರಣರ ಮರಣದಂಡನೆಗೆ ಸಮ್ಮತಿಸಿದರೆ? ಬಹುಂ – (ತಲೆ ಕೊಡಹಿ) ಆಗದು–ನಾನಿರುವಾಗ, ನೀನು ಜೀವಂತನಿರುವಾಗ ಶರಣರ – ಅದರಲ್ಲಿಯೂ ಹರಳಯ್ಯ ಮಧುವರಸರ ಕೊಲೆಯೆ? ಶಕ್ಯವಿಲ್ಲ; ನಡೆ– ದರ್ಬಾರಕ್ಕೆ ಹೋಗಿ ಶರಣರಿಗೆ ಶೂಲವು ಪ್ರಾಪ್ತವಾಗದಂತೆ ನೋಡಿಕೊಳ್ಳೋಣ!

ಜಗದೇವ : ವೀರ ಮಾಚಿದೇವತಂದೆ! ನಮ್ಮ ಧರ್ಮದಂತೆ ನಾವು ಆಚರಿಸಿದರೆ ಮರಣದಂಡನೆಯೆ? ಅಸಂಭವ! ಇದೆಂದಿಗೂ ಆಗದ ಮಾತು! ಮರಣದಂಡನೆಯೇಕೆ? ಹರಳಯ್ಯ ಮಧುವರಸರಿಗೆ ಕೂದಲು ಕೊಂಕಾಗದಂತೆ ನೋಡಿಕೊಳ್ಳೋಣ ನಡೆಯಿರಿ! ನಮ್ಮ ತತ್ವದಂತೆ ನಾವು ನಡೆದರೆ ಯಾರಿಗಾದರೂ ಏಕೆ ಅಸಂತೋಷ? ಏಕೆ ಸಂತಾಪ, ನಮ್ಮ ಧಾರ್ಮಿಕ ವಿಷಯಗಳಲ್ಲಿ ಕೈಹಾಕಲು ಬಿಜ್ಜಳನಿಗೆ ಯಾವ ಅಧಿಕಾರವಿದೆ?

(ಹೋಗುವರು. ತೆರೆ ಏಳುವುದು)

ನೋಟ ೧೧

(ಬಿಜ್ಜಳನ ಒಡ್ಡೋಲಗ–ಹರಳಯ್ಯ ಮಧುವರಸರ ವಿಚಾರಣೆ)

ಬಿಜ್ಜಳ : ಬಸವರಾಜ! ನಿಮ್ಮ ಜಾತಿಸಂಕರದ ಕಾರ್ಯವು ತನ್ನ ಅಂತಿಮಸೀಮೆಯನ್ನು ಮುಟ್ಟಿತು; ನಿಮ್ಮ ನಿನ್ನಿನಕಾರ್ಯವು ಸನಾತನಧರ್ಮದ ಹೃದಯವನ್ನೇ ನಡುಗಿಸಿದೆ! ನಿಮ್ಮ ಸಮಾಧಾನವೇನು?

ಬಸವ : ನನ್ನ ಧರ್ಮವು ಯಾವುದನ್ನು ಸತ್ಯವೆಂದು ಆಚರಿಸಲು ಅರುಹುತ್ತದೆಯೋ ಅದನ್ನೇ ನಾನು ಮಾಡಿದ್ದೇನೆ ಪ್ರಭು!

ಬಿಜ್ಜಳ : ನಿಮ್ಮ ಧರ್ಮವು ಹೊಲೆಹದಿನೆಂಟು ಜಾತಿಗಳಲ್ಲಿ ಶರೀರ ಸಂಬಂಧ ಬೆಳೆಸಲು ಹೇಳುವುದೊ?

ಬಸವ : ಕುಲವೊಂದೇ ಶರಣರಿಗೆ ಪ್ರಭು! ಮನುಷ್ಯಜಾತಿಯೆಲ್ಲ ಒಂದೇ ಕುಲ, ಈಗ ಕಂಡುಬರುವ ನೂರಾರು ಜಾತಿಗಳೆಲ್ಲ ಮನುಷ್ಯನ ಸ್ವಾರ್ಥ ಪ್ರೇರಿತವಾದವುಗಳು!

ಭಟ್ಟ : ಬಸವೇಶಾ, ವೇದಗಳಲ್ಲಿ ಚಾತುರ್ವರ್ಣ್ಯವು ಹೇಳಲ್ಪಟ್ಟಿದೆ.

ಬಸವಣ್ಣ : ವೇದಕ್ಕೆ ಒರೆಯಕಟ್ಟುವೆ; ಶಾಸ್ತ್ರಕ್ಕೆ ನಿಗಳವನಿಕ್ಕುವೆ; ಆಗಮದ ಮೂಗಕೊಯ್ಯುವೆ; ತರ್ಕದ ಬೆನ್ನಬಾರನೆತ್ತುವೆ – ಕೂಡಲಸಂಗಮದೇವಾ, ಮಾದಾರ ಚನ್ನಯ್ಯನ ಮನೆಯಲುಂಡ ಕಾರಣ!

ಮಂಚಣ್ಣ : ಬಸವಣ್ಣನವರೇ – ಹರಳಯ್ಯನಂಥ ಕುಲಹೀನನ ಮಗನಿಗೆ ಮಧುವರಸರಂಥ ಕುಲಶ್ರೇಷ್ಠರ ಮಗಳನ್ನು ಕೊಟ್ಟು ಮದುವೆಯೆ?

ಬಸವ : ಆವಕುಲದವನಾದೊಡೇನು? ಶಿವಲಿಂಗವಿದ್ದವನೇ ಕುಲಜನು. ಕುಲವನರಸುವರೇ ಶರಣರಲ್ಲಿ ಜಾತಿಸಂಕರವಾದಬಳಿಕ? "ಶಿವೇಜಾತ ಕುಲೇಧರ್ಮ ಪೂರ್ವಜನ್ಮ ವಿವರ್ಜಿತಃ । ಉಮಾಮಾತಾ ಪಿತಾರುದ್ರ ಈಶ್ವರಃ ಕುಲಮೇವಚ॥" ಎಂಬುದಾಗಿ ಒಕ್ಕುದ ಕೊಂಬೆನವರಲ್ಲಿ ಕೂಸಕೊಡುವೆ, ಸರ್ವರೂ ರುದ್ರಗಣಗಳೆಂಬೆ; ಸರ್ವರೂ ಸದ್ಭಕ್ತರೆಂಬೆ. ಅವರಲ್ಲಿ ಕುಲವ ನೋಡದೆ ಆಚಾರವ ನೋಡಿ ಅವರಿಂಗೆ ಬೇಕಾದ ಹೆಣ್ಣು ಕೊಟ್ಟು, ತಮಗೆ ಬೇಕಾದ ಹೆಣ್ಣು ತಂದುಕೊಂಬುದು–ಇದು ನನ್ನ ಧರ್ಮ!

ಬಿಜ್ಜಳ : ಬಸವರಸರೇ – ನೀವು ಏನೇ ಹೇಳಿದರೂ ಕುಲಗೆಡಿಸುವ ನಿಮ್ಮ ವ್ಯವಹಾರವು ಕ್ಷಮ್ಯವಲ್ಲ!

ಬಸವ : ಪ್ರಭುವೇ– ನೆಲನೊಂದೇ ಹೊಲಗೇರಿ ಶಿವಾಲಯಕ್ಕೆ; ಜಲವೊಂದೇ ಶೌಚಾಚಮನಕ್ಕೆ; ಕುಲ ಒಂದೇ ತನ್ನ ತಾನರಿದವಂಗೆ; ಫಲ ಒಂದೇ ಷಡುದರ್ಶನ ಮುಕ್ತಿಗೆ! ನಿಲವು ಒಂದೇ ಕೂಡಲಸಂಗಮದೇವಾ, ನಿಮ್ಮನರಿದವಂಗೆ!

ಬಿಜ್ಜಳ : ಮಂತ್ರಿಗಳೇ, ನಿಮ್ಮ ಈ ವಿಪ್ಲವಕಾರಕ ತತ್ವವನ್ನು ನಾನು ಒಪ್ಪಲು ಸಿದ್ಧನಿಲ್ಲ. ಸನಾತನ ಧರ್ಮವಿರುದ್ಧವಾದ ಇಂಥ ಭಯಾನಕ ಕಾರ್ಯಗಳನ್ನು ಮಾಡಲು ಅನುವುಗೊಟ್ಟರೆ ನನ್ನ ಪ್ರಜಾಲೋಕವು ರೊಚ್ಚಿಗೇಳಬಹುದು; ರಾಜ್ಯದಲ್ಲಿ ಅಶಾಂತಿ ಪರ್ವವು ನೆಲೆಗೊಳ್ಳಬಹುದು!

ಬಸವ : ಯಾವ ತತ್ವವನ್ನು ಆಚರಣೆಗೆ ತರುವದರಿಂದ ಅಂತ್ಯದಲ್ಲಿ ಸರ್ವರ ಹಿತವೂ ನೆರವೇರುವುದೋ ಆ ತತ್ವಪ್ರಸಾರದ ಕಾರ್ಯದಲ್ಲಿ ಮೊದಲು ಸಾರ್ವಜನಿಕ ವಿರೋಧವು ಉಂಟಾದರೂ ಅದಕ್ಕೆ ಅಂಜಬಾರದು ಪ್ರಭುಗಳೇ! ಅಂಜಲೇಕೋ ಲೋಕ ವಿಗುರ್ಭಣೆಗೆ? ವೈಯಕ್ತಿಕ ಸ್ವಾರ್ಥದ ಲವಲೇಶವೂ ಇಲ್ಲದೆ ಜನತೆಯ ಹಿತಕ್ಕಾಗಿ ಮಾಡುವ ಕಾರ್ಯದಲ್ಲಿ ಅಜ್ಞಾನಜನ್ಯ, ಅಂಧಶ್ರದ್ಧೆಯ ವಿರೋಧವು ಬಂದರೆ ಅಂಜಲೇಕೋ ಕೂಡಲಸಂಗಮದೇವಾ, ನಿಮ್ಮ ಆಳಾಗಿ!

ಬಿಜ್ಜಳ : ರಾಜನೀತಿಯೇ ನನ್ನ ಧರ್ಮ ಬಸವರಸರೇ! ನಿಮ್ಮ ಧರ್ಮ ಬೇರೆ, ನನ್ನ ಧರ್ಮ ಬೇರೆ. ನೀವು ಧರ್ಮಕ್ಕೆ ತಲೆಬಾಗಿ ನಡೆದು ಧರ್ಮವೀರರಾದರೆ ನಾನು ರಾಜ್ಯಶಾಸನಗಳಿಗೆ ತಲೆಬಾಗಿ ನಡೆದು ರಾಜನ ಕರ್ತವ್ಯವನ್ನು ಪರಿಪಾಲಿಸಬೇಕಾಗಿದೆ! ಬಹುಸಂಖ್ಯಾತರ ಇಚ್ಛೆಗೆ ವಿರುದ್ಧವಾಗಿ ನಾನೇನನ್ನೂ ಮಾಡಲಾರೆ! ನಿಮ್ಮ ಮೇಲೆ

ನನಗೆ ಅಪಾರವಾದ ಪ್ರೇಮವಿದೆ; ಆದರೆ ನಿಮ್ಮೊಬ್ಬರ ಸಲುವಾಗಿ ನಿಮ್ಮ ತತ್ವದಿಂದ ಸಂತಪ್ತರಾಗಿರುವ ಲಕ್ಷಾವಧಿ ಪ್ರಜೆಗಳ ಇಚ್ಛೆಯನ್ನು ಮೀರಲಾರೆ. ಅವರ ಧಾರ್ಮಿಕ ಭಾವನೆಗಳಿಗೆ ಆಘಾತವಾಗದಂತೆ ನೋಡಿಕೊಳ್ಳಬೇಕು; ನಾನು ರಾಜಧರ್ಮ ಪರಿಪಾಲಿಸಲೇಬೇಕು.

ಭಟ್ಟ : ಮಹಾರಾಜ, ಹಿಂದೂ ಧರ್ಮಶಾಸ್ತ್ರವು ಹೇಳುವ ವರ್ಣಾಶ್ರಮಗಳನ್ನು ರಕ್ಷಿಸುವುದೇ ರಾಜನ ಧರ್ಮ.

ಬಿಜ್ಜಳ : ವರ್ಣಧರ್ಮಿಗಳೆಲ್ಲರ ಹೃದಯಗಳಿಗೆ ಅದ್ಭುತ ಆಘಾತವನ್ನುಂಟುಮಾಡಿದ ಹರಳಯ್ಯ ಮಧುವರಸರನ್ನು - ಅವರ ಇರುವಿಕೆಯು ಪ್ರಜಾಕ್ಷೋಭಕ್ಕೆ ಕಾರಣವಾಗದಂತೆ-ಶೂಲಕ್ಕೇರಿಸಲು ನಿರ್ಧರಿಸಿದ್ದೇವೆ.

ಮಾಚಿದೇವ : (ರೋಷದಿಂದ) ಅಸಂಭವ, ಬಿಜ್ಜಳಭೂಪಾಲ, ಅಸಂಭವ! ಶರಣರ ರಕ್ತದ ಒಂದು ಹನಿಯು ಕೂಡ ಭೂಮಿಗೆ ಬೀಳುವುದು ಅಸಂಭವ! ನಮ್ಮ ಧರ್ಮದಂತೆ ನಾವು ನಡೆದರೆ ಮರಣದಂಡನೆಯೆ? ನಮ್ಮ ತತ್ವದಂತೆ ನಡೆಯಲು ನಮಗೆ ಸರ್ವ ಸ್ವಾತಂತ್ರ್ಯವಿದೆ!

ಬಿಜ್ಜಳ : ನಿಮ್ಮ ಸ್ವಾತಂತ್ರ್ಯಕ್ಕೆ ಸೀಮೆಯಿದೆ ಮಾಚರಸರೇ- ನಿಮ್ಮ ತತ್ವ ಪ್ರಸಾರದ ಕಾರ್ಯದಲ್ಲಿ ನೀವು ವಹಿಸಿರುವ ಮೇರೆಮೀರಿದ ಸ್ವಾತಂತ್ರ್ಯವು, ಕೈಕೊಂಡಿರುವ ಉಗ್ರೋಪಾಯಗಳು ನನ್ನ ರಾಜ್ಯದ ಅಸಂಖ್ಯಾತ ಪ್ರಜೆಗಳ ಅಶಾಂತಿಗೆ ಕಾರಣವಾಗಿವೆ! ರಾಜನಾದ ನಾನು ಎಲ್ಲ ಪ್ರಜೆಗಳ ಹಿತಸಂರಕ್ಷಣೆ ಮಾಡುವುದು ನನ್ನ ಕರ್ತವ್ಯ!

ಬಸವ : ಮಾಚರಸರೆ - ಸ್ಪೈರಣೆಯಿಂದ ವರ್ತಿಸಿರಿ! ಮಹಾರಾಜ, ನನ್ನದೊಂದು ವಿಜ್ಞಾಪನೆಯನ್ನು ಮನ್ನಿಸಿರಿ. ಇಷ್ಟು ಸಣ್ಣ ಅಪರಾಧಕ್ಕಾಗಿ ಹರಳಯ್ಯ ಮಧುವರಸರನ್ನು ಶೂಲಕ್ಕೇರಿಸಿ ಶರಣರ ರೋಷವನ್ನು ಕಟ್ಟಿಕೊಳ್ಳಬೇಡಿರಿ. ಮರಣದಂಡನೆಯು ಮಹದನರ್ಥಕ್ಕೆ ಕಾರಣವಾಗಬಾರದು! ಸೌಮ್ಯಶಿಕ್ಷೆ ವಿಧಿಸಿರಿ. ಪರಿಸ್ಥಿತಿಯು ಸ್ವಾಧೀನತಪ್ಪಿ ವಿಕೋಪಕ್ಕೆ ಹೋಗದಿರಲಿ! ಹಾವಿನ ಹೆಡೆಗಳ ಕೊಂಡು ಕೆನ್ನೆಯ ತುರಿಸಿಕೊಂಬಂತೆ, ಉರಿವ ಕೊಳ್ಳಿಯ ಕೊಂಡು ಮಂಡೆಯ ಸಿಕ್ಕ ಬಿಡಿಸುವಂತೆ, ಹುಲಿಯ ಮೀಸೆಯ ಹಿಡಿದು, ಒಲೆದುಯ್ಯಲೆಯನಾಡುವಂತೆ, ಕೂಡಲಸಂಗನ ಶರಣರೊಡನೆ ಮರೆದು ಸರಸವಾಡಿದರೆ ಸುಣ್ಣದಕಲ್ಲ ಮಡಿಲಲ್ಲಿ ಕಟ್ಟಿಕೊಂಡು ಮಡುವ ಬಿದ್ದಂತೆ!

ಮಂಚಣ್ಣ : ಬಸವಣ್ಣನವರೇ - ನೀವು ಮಂತ್ರಿಸ್ಥಾನದಲ್ಲಿದ್ದು ಒಂದು ಪಕ್ಷವನ್ನು ವಹಿಸಿ ಹೀಗೆ ಮಾತನಾಡುವದು ಸರಿಯಲ್ಲ; ನಿಮ್ಮ ಮಾತುಗಳಲ್ಲಿ ಬಂಡಾಯದ ಧ್ವನಿ ಕೇಳಿಬರುತ್ತದೆ!

ಬಸವ : ಏನು ಬಂಡಾಯವೆ? ಸಾಧ್ಯವಿಲ್ಲ ಮಂಚಣ್ಣನವರೇ! ಒಂದು ವೇಳೆ ಬಂದರೂ ನನ್ನ ದೇಹದಲ್ಲಿ ಪ್ರಾಣವಿರುವತನಕ, ನನ್ನ ವಾಣಿಯಲ್ಲಿ

ಶಕ್ತಿಯಿರುವತನಕ ಸರ್ವಸಾಹಸಮಾಡಿ ಅದನ್ನು ತಡೆಯುವೆ! ಎಂದೆಂದಿಗೂ ನಾನು ಬಿಜ್ಜಳರಾಜರ ಭೃತ್ಯನು. ಸ್ವಾಮಿ ಭೃತ್ಯಸಂಬಂಧಕ್ಕೆ ಆವುದು ಪಥವೆಂದರೆ ದಿಟವ ನುಡಿವುದು-ನುಡಿದಂತೆ ನಡೆವುದು; ನುಡಿದು ಹುಸಿವ, ನಡೆದು ತಪ್ಪುವ ಪ್ರಪಂಚಿಯನೊಲ್ಲ ಕೂಡಲಸಂಗಮದೇವ!

ಬಿಜ್ಜಳ : ಬಸವರಸರೇ- ನಾವು ರಾಜಧರ್ಮದಂತೆ, ಆಡಳಿತದ ಶಾಸನಗಳಂತೆ, ಹರಳಯ್ಯ-ಮಧುವರಸರನ್ನು ಶೂಲಕ್ಕೇರಿಸಿಯೇ ತೀರುವೆವು!

ಮಾಚಿದೇವ : ಆಗದು ಬಿಜ್ಜಳಮಹಾರಾಜ - ಈ ಕಾರ್ಯವಾದರೆ ಪ್ರಳಯವಾಗುವುದು ಖಂಡಿತ!

ಬಸವ : ಶರಣರೇ- ನಿಮ್ಮ ಆತ್ಮಶಕ್ತಿಯನ್ನು ಕ್ರೋಧಕ್ಕೆ ಮಾರಿಕೊಳ್ಳಬೇಡಿರಿ! ಹರಳಯ್ಯ-ಮಧುವರಸರ ಮರಣಕ್ಕಾಗಿ ಚಿಂತಿಸಬೇಡಿರಿ! ಕ್ರಾಂತಿಕಾಳಿಯು ತನ್ನ ಮಕ್ಕಳನ್ನೇ ಮೊದಲು ನುಂಗಿಯಾದರೂ ಎಲ್ಲರ ಕಲ್ಯಾಣಮಾಡಿದರೆ ಸಂತೋಷವೇ! ಪರಿಶುದ್ಧವಾದ ಕ್ರಾಂತಿಯಲ್ಲಿ ಪಾಪರಹಿತ ಪುಣ್ಯಜೀವಿಗಳೂ ಬಲಿಬೀಳಬೇಕಾದರೆ ಕಳವಳವೇಕೆ? ಬಲಿಗಾಗಿ ಭಯಪಡುವವನು ಕಲಿಯೆ? ಕಲಿಯ ಕೈಯ ಕೈದುವಿನಂತಿರಬೇಕಯ್ಯ! ಎಲುದೋರಿ ನರ ಹರಿದರೂ, ಕರುಳು ಕುಪ್ಪಳಿಸಿದರೂ ಧೃತಿಗೆಡಲೇಕೆ ಮಾಚಯ್ಯ? ಸತ್ಯಕ್ಕಾಗಿ ಹೋರುವವನು ಸಾವಿನೊಡನೆ ಸರಸವಾಡಲು ಹಿಂದೆಗೆಯುವನೆ? ತ್ಯಾಗದಲ್ಲಿ ತಲೆ ಹರಿದುಬಿದ್ದು ಬೊಬ್ಬಿಡಲದಕ್ಕೊಲಿವ ಕೂಡಲಸಂಗಮದೇವ! ಹರಳಯ್ಯ ಮಧುವರಸರು ಧನ್ಯರು. ಅವರು ಆದರ್ಶಸಾಧನೆಗಾಗಿ ಆತ್ಮಾರ್ಪಣ ಮಾಡಿ ಅಮರತ್ವವನ್ನು ಪಡೆಯಲು ಹೋಗತೊಡತಿದ್ದಾರೆ. ಮರಣಮಯ ಜೀವನಕ್ಕಿಂತ ಜೀವನಮಯಮರಣ ಮೇಲು-ಮಾಚಯ್ಯ! ಉಚ್ಚ ಧ್ಯೇಯಸಾಧನೆಯಲ್ಲಿ ಲೇಸೆನಿಸಿಕೊಂಡು ಐದು ದಿನ ಬದುಕಿದರೇನು? ಲೇಸೆನಿಸಿಕೊಂಡು ನಾಲ್ಕುದಿನ ಬದುಕಿದರೇನು? ಲೇಸೆನಿಸಿಕೊಂಡು ಮೂರುದಿನ ಬದುಕಿದರೇನು? "ಜೀವಿತಂ ಶಿವಭಕ್ತಾನಾಂ ವರಂ ಪಂಚದಿನಾನಿ ಚ। ಅಜಕಲ್ಪ ಸಹಸ್ರೇಭ್ಯೋ ಭಕ್ತಿಹೀನಂತು ಶಾಂಕರಿ॥" ಎಂದುದಾಗಿ ಕೂಡಲಸಂಗನ ಶರಣರವಚನದಲ್ಲಿ ಲೇಸೆನಿಸಿಕೊಂಡು ಒಂದುದಿನ ಬದುಕಿದರೇನು? ಕಾರಣ ಶರಣರೇ, ಇವರ ಮರಣಕ್ಕಾಗಿ ಕೆರಳಿ ಕ್ರೋಧವಶರಾಗಬೇಡಿರಿ! ಹರಣಹೋದರೂ ಪಾಶವೀಶಕ್ತಿಗೆ ಶರಣುಹೋಗಬೇಡಿರಿ! ಹರಳಯ್ಯ ಮಧುವಸರೆ, ನಮಗೆ ಅತ್ಯಂತಪ್ರಿಯವಾದ ಶಿವತತ್ವದ ಸಲುವಾಗಿ ನೀವು ಆತ್ಮಾರ್ಪಣಕ್ಕೆ ಸಿದ್ಧರಾದಿರಿ! ನೀವು ನೆಟ್ಟಿರುವ ಸಮಾನತೆಯ ಸಸಿಗೆ, ನೀವು ಬೆಳೆಸಿರುವ ಕ್ರಾಂತಿಲತೆಗೆ ನಿಮ್ಮ ಪಾವನಶರೀರದ ಕೆನ್ನೀರನ್ನೇ ಎರೆದು ಅದಕ್ಕೆ ಶಾಶ್ವತತೆಯನ್ನು ನೀಡಿದಿರಿ!

ಮಧುವರಸ : ವೀರ ಮಾಚಯ್ಯ! ಶರಣಸಂದೋಹವೇ, ಕಲ್ಯಾಣ ಮೂರ್ತಿ ಬಸವಣ್ಣ! ನಮ್ಮ ಆದರ್ಶಸಾಧನೆಯ ತಪಸ್ಸಿನ ಚಿತೆಯಲ್ಲಿ ನಮ್ಮ ಪ್ರಾಣಗಳು ಹುಲ್ಲುಕಡ್ಡಿ! ವೀರಶೈವ ಧರ್ಮಕ್ರಾಂತಿಯಲ್ಲಿ ಮೊದಲನೆಯಸಲ 'ಆತ್ಮಾರ್ಪಣ' ಮಾಡುವ ಭಾಗ್ಯವು ನಮ್ಮ ಪಾಲಿಗೆ ಬಂದುದಕ್ಕಾಗಿ ನಮ್ಮ ಹೃದಯಗಳನ್ನು

ವಿಷಣ್ಣತೆಯಲ್ಲ, ಧನ್ಯತೆಯು ಆವರಿಸಿದೆ! ನನ್ನ ಹೃದಯವು ಎಂದಿಗಿಂತಲೂ ಇಂದು ಹೆಚ್ಚು ಪ್ರಸನ್ನವಾಗಿದೆ, ಪ್ರಶಾಂತವಾಗಿದೆ, ಆನಂದದಿಂದ ಕೂಡಿದೆ! ನನ್ನ ಕಣ್ಣೆದುರಿಗೀಗ ಮೃತ್ಯುದೇವತೆಯ ಕರಾಳಚಿತ್ರವಿಲ್ಲ; ಶಿವ ಸಾಯುಜ್ಯದ ವಿಶ್ವಮೋಹಕ ದೃಶ್ಯವಿದೆ! ಅಲ್ಲಲ್ಲ, ಬೆಳಗಿನೊಳಗಣ ಮಹಾಬೆಳಗಿನ ಅನಂತತೆಯ ಅನುಭವದ ಆನಂದಲೋಕವಿದೆ! ಬಸವತತ್ತ್ವದ ಕಲ್ಪವೃಕ್ಷವು ಕಮರಿಹೋಗದಂತೆ ಅದಕ್ಕೆ ನಮ್ಮ ನೆತ್ತರಿನ ಬತ್ತದ ನೀರನ್ನೆರೆದು ಶಾಶ್ವತತೆಯನ್ನು ತಂದುಕೊಡಲು ಕರೆಯಬಂದ ವಿಶ್ವಕಲ್ಯಾಣವಾಣಿಯೇ ನಾವು ಏರಲು ಹೊರಟಿರುವ ಶೂಲ! ಶರಣರೇ, ನಾವು ಆನಂದದಿಂದ ಅದನ್ನು ಆಹ್ವಾನಿಸುತ್ತೇವೆ; ನಾವು ಶೂಲವನ್ನೇರುವುದು ಶರಣಶಕ್ತಿಯ ಅವಹೇಳನವಲ್ಲ- ವಿಜಯವಾಣಿ! ಶರಣರದು ಪಾಶವೀಶಕ್ತಿಯಲ್ಲ, ವಿಶ್ವಪ್ರೇಮದ ಶಾಶ್ವತಶಕ್ತಿ. ಆ ಶಕ್ತಿಯ ಸತ್ವಸಂರಕ್ಷಣೆಗಾಗಿಯೇ ಶೂಲವೇರಲು ಹೊರಟಿದ್ದೇವೆ; ಶರಣಾರ್ಥಿ.

ಹರಳಯ್ಯ : ಶರಣರೇ ನಾವಿಂದು ಧರ್ಮದ ಆತ್ಮಾರ್ಪಣದ ಅಲ್ಲಲ್ಲ, ಪರಮಾತ್ಮಾರ್ಪಣದ ವೇದಿಕೆಯಮೇಲೆ ನಿಂತು ಆತ್ಮನ ಅಧೋಗತಿಗೆ ಕಾರಣವಾದ ಶಕ್ತಿಗಳನ್ನೇ ಶೂಲಕ್ಕೇರಿಸಲು ಹೊರಟಿದ್ದೇವೆ! ಇದು ನಮ್ಮ ಸುದೈವ. ನೀವು ಮಾತ್ರ ಶಾಂತಿಯಿಂದ ವರ್ತಿಸಿರಿ; ಅಹಿಂಸೆಯ ತತ್ವವನ್ನೇ ದೃಢವಾಗಿ ನಂಬಿರಿ! ಶಾಂತಿ ಅಹಿಂಸೆಗಳೇ ನಿಮ್ಮ ಆದರ್ಶ; ಸೈರಣೆಯೇ ನಿಮ್ಮ ಶಸ್ತ್ರ; 'ಆತ್ಮಾರ್ಪಣ'ವೇ ನಿಮ್ಮ ಸಮರಭೇರಿ! ನಮ್ಮ ಮರಣಕ್ಕಾಗಿ ಚಿಂತಿಸಬೇಡಿರಿ; ನಮ್ಮ ದೇಹಗಳಿಂದ ಚೆಲ್ಲಿದ ರಕ್ತದಲ್ಲಿ, ನಮ್ಮ ದೇಹದಿಂದಾದ ಹುಡಿಮಣ್ಣಿನಲ್ಲಿ ಲಕ್ಷ ಶರಣರು ಹುಟ್ಟಿಬಂದು ಈ ವಿಶ್ವಧರ್ಮದ ಕೀರ್ತಿಧ್ವಜವನ್ನೆತ್ತಿಹಿಡಿದು, ಇದರ ಸಿಂಹನಾದದಿಂದ ಜಗತ್ತನ್ನು ಎಚ್ಚರಿಸುವರು! ಹೋಗಿಬರುವೆವು, ಶರಣಾರ್ಥಿ!

ಬಿಜ್ಜಳ : ಪಾರುಪತ್ಯಗಾರ, ಇವರನ್ನು ಇಂದೇ ಶೂಲಕ್ಕೇರಿಸಿರಿ! ಆ ದೃಶ್ಯವನ್ನು ನೋಡಲು ಸರ್ವರಿಗೂ ಅಪ್ಪಣೆಯಿದೆ. ವರ್ಣವಿರೋಧಕರಿಗಾಗುವ ಪ್ರಾಯಶ್ಚಿತ್ತವನ್ನು ಎಲ್ಲರೂ ಕಣ್ಮುಟ್ಟ ನೋಡಲಿ!

ಬಸವ : ಹರಳಯ್ಯ ಮಧುವರಸ! ಜಗತ್ತಿನ ಇತಿಹಾಸದಲ್ಲಿಯೇ ನಿಮ್ಮ ಆತ್ಮಸಮರ್ಪಣವು ಪ್ರಾತಃಸ್ಮರಣೀಯ ಪರಂಜ್ಯೋತಿಯಾಗಿರಲಿ! ಸಂಚಿತಕರ್ಮ ಉಂಡಲ್ಲದೇ ತೀರದು, ಪ್ರಾರಬ್ಧಕರ್ಮ ಭೋಗಿಸಿದಲ್ಲದೇ ಹೋಗದು. ಕರ್ಮ ಫಲಗೂಡಿ ಕೂಡಲಸಂಗಮದೇವಂಗೆ ಆತ್ಮನೈವೇದ್ಯವ ಮಾಡಿದವನೇ ಧನ್ಯನು! (ಅಪ್ಪಿ ಕಂಠಬಿಗಿದು) ಶರಣರೇ, ಹೋಗಿಬನ್ನಿರಿ!

(ತೆರೆ ಬೀಳುವುದು)

ನೋಟ ೧೨

(ಕಲ್ಯಾಣದಲ್ಲಿ ಒಂದು ಓಣಿ)

ಮಾಚಯ್ಯ : ಜಗದೇವ ! ಕಲ್ಯಾಣದಲ್ಲಿ ಆಗಬಾರದ ಕೆಲಸವು ಆಗಿಹೋಯಿತು! ಅಸಂಖ್ಯಾತಶರಣರ ಪಾದಧೂಳಿಯಿಂದ ಪವಿತ್ರವಾದ ಕಲ್ಯಾಣನಗರವು ಶಿವಭಕ್ತರ ರಕ್ತಸಿಂಚನೆಯಿಂದ ಇಂದು ಭೀಕರವಾಗಿದೆ; ಭೀಷಣವಾಗಿದೆ! ಹರಳಯ್ಯ ಮಧುವರಸರಂಥ ನಿರ್ದೋಷಿ, ನಿರ್ಮಲ ಶರಣರಿಗೆ ಇಂಥ ಗತಿಯೆ? ಅಯ್ಯೋ- ಅವರನ್ನು ಶೂಲಕ್ಕೇರಿಸಿದ ಸನ್ನಿವೇಶವನ್ನು ನೆನೆಸಿಕೊಂಡರೆ ನನ್ನ ತಲೆಯು ಸಿಡಿದುಹೋಗುತ್ತದೆ! ಆ ನಿರಪರಾಧಿಗಳಿಗಾದ ಕರುಳು ಕೊರೆಯುವ ದುರ್ಗತಿಯನ್ನು ನೆನೆಸಿಕೊಂಡರೆ ಈಗಲೇ ಹೋಗಿ ಬಿಜ್ಜಳನನ್ನು ಅವನ ಕುಹಕ ಆಪ್ತಾಲೋಚಕರನ್ನೂ ಗಂಟಲು ಕಡಿದು ಕೊಲ್ಲಬೇಕೆನ್ನಿಸುತ್ತದೆ! ಜಗದೇವಾ, ಈಗಾಗಲೇ ಅವರ ಪ್ರಾಣಗಳನ್ನು ಮನಸ್ಸಿನಲ್ಲಿಯೇ ಎಷ್ಟೋಸಲ ಹಿಂಡಿದ್ದೇನೆ! ಕೃತಿಯಲ್ಲಿಯೂ ಹಿಂಡಿ ತೋರಿಸುವೆ! ಬಸವಣ್ಣನವರ ಆಜ್ಞೆಯ ಗೆರೆಯನ್ನಿಂದು ದಾಟಿದೆ! ಬಿಜ್ಜಳನ ಪಾಪದ ಬಟ್ಟಲವು ಇಂದು ಪೂರ್ತಿತುಂಬಿತು! ಇನ್ನು ಅವನನ್ನು ಜೀವಂತ ಉಳಿಯಗೊಡುವುದು ನಮ್ಮ ನಿರ್ಜೀವತ್ವಕ್ಕೆ ನಿದರ್ಶನ! ನೀನು ಸಿದ್ಧನಿರುವೆಯಾ?

ಜಗದೇವ : ಮಾಚಯ್ಯಾ, ಕೇವಲ ಸ್ವಸಂತೋಷದಿಂದ ಶರೀರಸಂಬಂಧವನ್ನು ಮಾಡಿದ ತಪ್ಪಿಗಾಗಿ ಯಾವ ರಾಕ್ಷಸನೂ ಇಂಥ ಕೊಲೆಗಡುಕರಿಗೆ ಮಾತ್ರ ಕೊಡಬಹುದಾದ ಶಿಕ್ಷೆಯನ್ನು ವಿಧಿಸಲಾರನು! ಬಿಜ್ಜಳನ ಪ್ರತೀಕಾರಕ್ಕಾಗಿ ನನ್ನ ಪ್ರಾಣದ ಮುಡಿಪನ್ನು ಕಟ್ಟಿಟ್ಟೆ! ಶಿವಶರಣರ ಪವಿತ್ರದೇಹದಿಂದ ಚೆಲ್ಲಿದರಕ್ತವು ಆರುವುದರೊಳಗಾಗಿ ಬಿಜ್ಜಳನ ಶಿರಚ್ಛೇದವಾಗಲೇಬೇಕು!

ಮಾಚಯ್ಯ : ಜಗದೇವ! ಕಲ್ಯಾಣನಗರದ ಸರ್ವಜಾತಿಯ ನಿವಾಸಿಗಳು ಎಳಹೂಟೆಯ ಆ ಭಯಾನಕ ದೃಶ್ಯವನ್ನು ನೋಡಿ ಕಣ್ಣೀರಿನ ಕಾಲುವೆ ಹರಿಸಿ ಗೋಳಿಟ್ಟು ಅತ್ತರು; ಅನೇಕ ಶರಣರು ಕಣ್ಣುಗಳಿಂದ ರಕ್ತಬರುವಂತೆ ರೋಧಿಸಿದರು! ನನ್ನ ತಲೆ ಉನ್ಮತ್ತವಾಗಿಹೋಗಿದೆ! ನಾವು ಇನ್ನು ಲಜ್ಜೆಗೆಟ್ಟು ಈ ದೇಹಗಳನ್ನು ಹೊತ್ತಾದರೂ ಏನು ಪ್ರಯೋಜನ? ನನ್ನ ಕ್ರೋಧದ ಕಿಚ್ಚು ಬಿಜ್ಜಳನ ಬಿಸಿರಕ್ತದಿಂದಲೇ ಶಾಂತವಾಗಬೇಕು! ನಡೆ, ಬಸವಣ್ಣನವರಿಗೆ ನಮ್ಮ ಈ ಕೊನೆಯ ನಿರ್ಧಾರವನ್ನು ತಿಳಿಸೋಣ! ಅವರು ಒಪ್ಪಿದರೆ ಸರಿ, ಇಲ್ಲವಾದರೆ ನಾವಿಬ್ಬರೇ ಈ ನಿಶ್ಚಿತಕಾರ್ಯವನ್ನು ಕೊನೆಗಾಣಿಸೋಣ! ಬಸವಣ್ಣ, ಸಿದ್ಧರಾಮ, ಪ್ರಭುದೇವ, ಚನ್ನಬಸವಣ್ಣ –ಇವರಲ್ಲಿ ಯಾರೇ ನಮ್ಮ ಇಚ್ಛೆಗೆ ಅಡ್ಡಬಂದರೂ ಅವರ ಆಜ್ಞೆಯನ್ನು ಉಲ್ಲಂಘಿಸಿಯೇ ಮುಂದೆ ಸಾಗೋಣ!

(ಹೋಗುವರು ತೆರೆ ಏಳುವುದು)

ನೋಟ ೧೩

(ಬಸವಣ್ಣನವರ ಮನೆ. ಪ್ರಭು, ಚನ್ನಬಸವಣ್ಣ, ಸಿದ್ಧರಾಮ, ನೀಲಾಂಬೆ)

ಬಸವ : ಪ್ರಭುವೆ, ಕಲ್ಯಾಣದ ಪ್ರಶಾಂತಸುಧಾಕಾಸಾರವು ಇಂದು ರಕ್ತದ ಹೊಂಡವಾಯಿತು; ನರಕದ ಕುಂಡವಾಯಿತು! ಕಲ್ಯಾಣನಗರವು ಇಂದು ಕಟುಕರ ಕೇರಿಯಾಯಿತು! ನನಗೇಕೋ ಭಯವಾಗತೊಡಗಿದೆ! ಇಂದಿನ ಅಮಾನುಷವಾದ ಭೀಕರ ದೃಶ್ಯವನ್ನು ಕಂಡ ಶರಣರ ಕ್ರೋಧದ ಕಿಚ್ಚೆಲ್ಲ ಕೆರಳಿ ಕಿಡಿ ಕಿಡಿಯಾಗುವುದೋ ಕಾಣೆ; ಅವರ ಸ್ವಾಭಿಮಾನವೆಲ್ಲಿ ಸಿಡಿದೇಳುವುದೋ ನಾನರಿಯೆ! ಶರಣರ ರೋಷವನ್ನು ಹೇಗೆ ಶಾಂತಗೊಳಿಸಲಿ?...... (ಮಾಚರಸ ಜಗದೇವರು ಬರುವರು)

ಮಾಚಯ್ಯ : ಬಸವಣ್ಣನವರೇ – ಇನ್ನು ತಾವು ನಮ್ಮನ್ನು ಶಾಂತಗೊಳಿಸುವ ಗೊಡವೆಗೇ ಬರಬೇಡಿರಿ! ನಿಮ್ಮ ಶಾಂತಿಬೋಧೆಗೆ ಕಿವಿಗೊಟ್ಟು ನಾವು ಹರಳಯ್ಯ ಮಧುವರಸರಂಥ ಅಲೌಕಿಕ ಶರಣರನ್ನು ತ್ಯಾಗಿಗಳನ್ನು ಕಳೆದುಕೊಂಡೆವು. ಬಿಜ್ಜಳನ ಪೈಶಾಚಿಕ ಕೃತ್ಯವನ್ನು ಕಂಡೂ ಇನ್ನು ಶಾಂತಿಯಿಂದಿರುವುದು ಸಾಧ್ಯವಿಲ್ಲ!

ಬಸವ : ಸಮಾಧಾನಚಿತ್ತರಾಗಿರಿ ಮಾಚಯ್ಯ! ತನಗೆ ಮುನಿವವರಿಗೆ ತಾ ಮುನಿಯಲೇಕಯ್ಯ? ಅವರಿಗಾದೊಡದೇನು? ತನಗಾದೊಡದೇನು? ಮನದ ಕೋಪ ತನ್ನ ಅರುಹಿನ ಕೇಡು; ತನುವಿನ ಕೋಪ ತನ್ನ ಹಿರಿತನದ ಕೇಡು! ಮನೆಯೊಳಗಣ ಕಿಚ್ಚು ಮನೆಯ ಸುಟ್ಟಲ್ಲದೆ ನೆರೆಮನೆಯ ಸುಡುವುದೆ? ಶಾಂತರಾಗಿ ಯೋಚಿಸಿರಿ!

ಮಾಚಯ್ಯ : ಅಣ್ಣನವರೇ – ಇದು ಶಾಂತಿ, ಅಶಾಂತಿ, ಹಿಂಸೆ, ಅಹಿಂಸೆಗಳ ವ್ಯರ್ಥವಾದ ವಾದದಲ್ಲಿ ಹೊತ್ತುಗಳೆಯುವ ಸಮಯವಲ್ಲ! ನಿಮ್ಮ ತತ್ವಜ್ಞಾನದ ಚರ್ಚೆ ನಿಮಗೇ ಇರಲಿ! ನಮ್ಮನ್ನು ತಡೆಯಬೇಡಿರಿ! ನಮ್ಮ ಕೋಪದ ಕಾಡುಗಿಚ್ಚು ಬಿಜ್ಜಳನ ವಂಶವನ್ನು ಸುಟ್ಟಮೇಲೆಯೇ ಶಾಂತವಾಗುವುದು!

ಬಸವ : ಮಾಚಯ್ಯ! ಸ್ವಲ್ಪ ತಾಳ್ಮೆಯಿಂದ ವಿಚಾರಿಸಿರಿ! ಬಿಜ್ಜಳನು ತನ್ನ ರಾಜಧರ್ಮವನ್ನು ಪರಿಪಾಲಿಸಿದನು! ಅವನು ಮಾಡಿದ್ದು ಪಾಪಕೃತ್ಯವೇ ಆಗಿದ್ದರೆ ಅವನು ಮಾಡಿದ ಮಹತ್ಪಾಪವು ಧೂಮಕೇತುವಿನಂತೆ ಅವನನ್ನು ಹಿಂಬಾಲಿಸುವುದು! ಆದರೆ ನೀವೂ ಬಿಜ್ಜಳನನ್ನೇ ಅನುಕರಿಸಿ ಆಸುರೀಶಕ್ತಿಗೆ ಶರಣುಹೋಗಬೇಡಿರಿ! ಕ್ರೋಧದಿಂದ ಕ್ರೋಧವು ಹೆಚ್ಚುತ್ತದೆ! ಕ್ರೋಧದ ಬೆಂಕಿಯನ್ನು ಸೈರಣೆಯ ಶಾಂತಿಜಲದಿಂದ ನಂದಿಸದಿದ್ದರೆ ನಾವು ಇಷ್ಟು ದಿವಸಗಳವರೆಗೆ ಅವಿಶ್ರಾಂತ ಶ್ರಮಪಟ್ಟು ಕಟ್ಟಿರುವ ಶರಣಸಂಸ್ಕೃತಿಯ ಸುಂದರ ಮಂದಿರವು ಸುಟ್ಟು ಸೂರೆಯಾದೀತು! ಜಗತ್ತನ್ನೇ ತನ್ನ ತೋಳ್ಸೆರೆಯಲ್ಲಿ ಆಲಿಂಗಿಸಲು ಹೊರಟಿರುವ ನಮ್ಮ ಧರ್ಮವು ನಿಮ್ಮ ಹಿಂಸಾಕರ್ಮದಿಂದ ರಸಾತಳಕ್ಕಿಳಿಯದಿರಲಿ! ಇದುವರೆಗೆ ನಿಷ್ಕಲಂಕಿತವಾಗಿ ನಡೆದುಬಂದಿರುವ ನಮ್ಮ ಪತಿತೋದ್ಧಾರದ ಪವಿತ್ರಕಾರ್ಯವು ಬಿಜ್ಜಳನ ರಕ್ತಪಾತದಿಂದ ಕಲಂಕಿತವಾಗದಿರಲಿ! ಮಾಚಯ್ಯ! ಹಿಂಸಾವಾದದ ತಳಹದಿಯ ಮೇಲೆ ಕಟ್ಟಿದ ಧರ್ಮದ ಗುಡಿಯು ಎಷ್ಟು ದಿನ ಬದುಕಬಲ್ಲುದು?

ಅದರಿಂದ ಹೊರಡುವ ಪಾಪನಿಶ್ವಾಸದ ಉರಿಯಲ್ಲಿ ತನ್ನಿಂದ ತಾನೇ ಸುಟ್ಟು ಬೂದಿಯಾಗುವುದು! ಆ ಪಾಪದ ಫಲವನ್ನು ಮುಂದಿನ ಜನಾಂಗಗಳು ಶತ ಶತಮಾನಗಳವರೆಗೆ ಅನುಭವಿಸಿಯೇ ತೀರಬೇಕಾಗುವುದು! ಸ್ವಲ್ಪ ವಿಚಾರಿಸಿರಿ!

ಮಾಚಯ್ಯ : ಅಹಿಂಸೆಯು ನಮ್ಮ ಆದರ್ಶ; ಆದರೆ ಆತ್ಮಸಂರಕ್ಷಣವು ನಮ್ಮ ಧರ್ಮ. ಅಣ್ಣನವರೆ! ಆತ್ಮಸಂರಕ್ಷಣೆಯ ಪ್ರಸಂಗದಲ್ಲಿಯೂ ಅಹಿಂಸೆಯನ್ನು ಅನುಸರಿಸಿದ್ದಾದರೆ ಜಗತ್ತಿನಿಂದ ನಾವು ಅಳಿದುಹೋಗಲು ತಡವಾಗಲಿಕ್ಕಿಲ್ಲ! ನೀವು ಬಿಜ್ಜಳನಿಗೆ ಇಷ್ಟೇಕೆ ಅಂಜುವಿರೋ ತಿಳಿಯದಾಗಿದೆ!

ಬಸವ : ನಾನು ಬಿಜ್ಜಳನಿಗೆ ಅಂಜುವುದೆ? ಆನೆ ಅಂಕುಶಕ್ಕಲ್ಲದೆ ಅಂಜುವುದೇ ಅಯ್ಯ, ಮಾಣದೇ ಸಿಂಹದ ನಖವೆಂದು ಅಂಜುವುದಲ್ಲದೆ? ಆನೀ ಬಿಜ್ಜಳಂಗಂಜುವೆನೇ ಅಯ್ಯ? ಕೂಡಲಸಂಗಮದೇವ, ನೀನು ಸರ್ವಜೀವ ದಯಾಪಾರಿಯಾದಕಾರಣ, ನಿನಗಂಜುವೆನಲ್ಲದೆ? ದಯವೇ ಧರ್ಮದ ಮೂಲ ಮಾಚಯ್ಯ! ಬಿಜ್ಜಳನೂ ದಯಾಪಾತ್ರನು.

ಜಗದೇವ : ಎರಡು ನಿರ್ದೋಷಿ ಜೀವಿಗಳನ್ನು ಸಾವಿನಬಾಯಿಗೆ ಕಳಿಸುವಾಗ ದಯೆಯ ಪ್ರಶ್ನೆ ಅಡ್ಡಬರಲಿಲ್ಲ; ಬಿಜ್ಜಳನ ಕೊಲೆಗೆ ಮಾತ್ರ ಅಡ್ಡಬರಬೇಕು! ಈ ದಾಕ್ಷಿಣ್ಯಭಾವವೇಕೆ ಬಸವಣ್ಣನವರೆ?

ಬಸವ : ನ್ಯಾಯನಿಷ್ಠುರ, ದಾಕ್ಷಿಣ್ಯಪರ ನಾನಲ್ಲ! ಲೋಕವಿರೋಧಿ, ಶರಣನಾರಿಗೂ ಅಂಜುವವನಲ್ಲ! ಕೂಡಲಸಂಗಮದೇವರ ರಾಜತೇಜದಲ್ಲಿಪ್ಪನಾಗಿ!

ಮಾಚಯ್ಯ : ಹಾಂ – ಆ ರಾಜತೇಜವೇ ನಮಗೀಗ ಬೇಕಾಗಿದೆ ಅಣ್ಣನವರೇ! ಆತ್ಮಸಂರಕ್ಷಣೆ, ನಮ್ಮ ಸಮಾಜದ ಗೌರವ ಸಂರಕ್ಷಣೆ. ನಮ್ಮ ಸ್ವಾಭಿಮಾನದ ಸಂರಕ್ಷಣೆಯ ಪ್ರಶ್ನೆ ಬಂದಾಗ ಅಹಿಂಸೆಯಿಂದ ಯಾವ ಲಾಭವೂ ಇಲ್ಲ! ಆಗ ದುಷ್ಟರನ್ನು ದಂಡಿಸಲೇಬೇಕು! ಕಲಿದೇವರಭಕ್ತನಾದ ನಾನು ಒಂದು ಕೈಯಲ್ಲಿ ಶಾಂತಿ, ಅಹಿಂಸೆಗಳನ್ನೂ ಮತ್ತೊಂದು ಕೈಯಲ್ಲಿ ಖಡ್ಗವನ್ನೂ ಹಿಡಿದಿದ್ದೇನೆ. ರುಂಡಕ್ಕೆ ಪ್ರತಿಯಾಗಿ ರುಂಡ, ರಕ್ತಕ್ಕೆ ಪ್ರತಿಯಾಗಿ ರಕ್ತ ಇದೇ ನನ್ನ ಮಂತ್ರ!

ಬಸವ : ದುಷ್ಟರನ್ನು ದಂಡಿಸುವುದು ನಮ್ಮ ಧರ್ಮ ನಿಜ ಮಾಚಯ್ಯ! ಆದರೆ ದುಷ್ಟರನ್ನು ದುಷ್ಟತನದಿಂದಲೇ ದಂಡಿಸಬೇಕೆಂಬ ನಿರ್ಬಂಧವಿಲ್ಲ; ಕ್ರೋಧವನ್ನು ಶಾಂತಿಯಿಂದ, ಶತ್ರುವನ್ನು ಮೈತ್ರಿಯಿಂದ, ದುಷ್ಟರನ್ನು ಪ್ರೇಮದಿಂದ, ಹಿಂಸೆಯನ್ನು ಅಹಿಂಸೆಯಿಂದ, ಪಾಪವನ್ನು ಪುಣ್ಯದಿಂದ ಜಯಿಸಬೇಕು– ಇದೇ ಶರಣಧರ್ಮ; ಇದೇ ವಿಶ್ವಧರ್ಮ; ಇದೇ ನಿಜವಾದ ರಾಜತೇಜ! ಮಾಚಯ್ಯ; ಸಾವಧಾನವಾಗಿ ವಿಚಾರಿಸಿರಿ; ನಾವು ದುಷ್ಟರ ದುಷ್ಟತನವನ್ನು ದ್ವೇಷಿಸಬೇಕಲ್ಲದೆ ಅವರ ದೇಹವನ್ನಲ್ಲ; ನಾವು ಬಿಜ್ಜಳನ ಪಾಪಕೃತ್ಯವನ್ನು ತಿರಸ್ಕರಿಸಬೇಕಲ್ಲದೇ ಅವನ ಮಾಂಸ ರಕ್ತಗಳಿಂದ ಕೂಡಿದ ಶರೀರವನ್ನಲ್ಲ! ಅವನ ಶರೀರವನ್ನು ತುಂಡರಿಸಿ ಅವನ ಪಾಪಮಯ ಆತ್ಮವನ್ನು ಹಾಗೆಯೇ ಉಳಿಯಗೊಟ್ಟರೆ ನಾವು ಸೋತಂತೆಯೇ ಸರಿ! ಅವನ ದೇಹವನ್ನುಳಿಸಿ ಅವನ ಆತ್ಮವನ್ನು ಪಾಪಬಂಧನದಿಂದ ಮುಕ್ತಮಾಡಿದಾಗಲೇ ನಮಗೆ

ವಿಜಯ! ಈ ಕಾರ್ಯವನ್ನು ತಲೆಗಡಿದು ಅಲ್ಲ, ಒಲಿದು ಮಾಡಬೇಕು. ಶರಣರ ಅಮೃತವಾಣಿಯಿದು. ಒಲಿದು ಒಲಿಸಿಕೊಳ್ಳಬೇಕು, ಒಲಿದಲ್ಲದೆ ಅಲ್ಲ!

ಜಗದೇವ : ಬಸವಣ್ಣನವರೇ, ನಿಮ್ಮ ಈ ತತ್ವವು ನಿಮ್ಮೊಬ್ಬರಿಗೆ ಮಾತ್ರವೇ ಆಚರಿಸಲು ಸಾಧ್ಯವಿದೆ! ಈ ಆತ್ಯಂತಿಕ ಅಹಿಂಸೆಯ ತತ್ವವು ವೈಯಕ್ತಿಕ ಸದ್ಗುಣವೇ ಹೊರ್ತು ಸಾಮೂಹಿಕ ಸದ್ಗುಣವಲ್ಲ. ಇದು ವ್ಯಷ್ಟಿಜೀವನಕ್ಕೆ ಉಪಯುಕ್ತವಾದುದೇ ಹೊರ್ತು ಸಮಷ್ಟಿಜೀವನಕ್ಕಲ್ಲ! ಸಾಮಾನ್ಯರಾದ ನಮಗೆ ಇದರಿಂದ ಯಾವ ಪ್ರಯೋಜನವೂ ಇಲ್ಲ! ಇಡೀ ಜನಾಂಗವೇ ಈ ತತ್ವವನ್ನು ಅನುಸರಿಸಿದರೆ ರಾಷ್ಟ್ರವೆಲ್ಲ ನಿರ್ವೀಣ್ಯವಾಗಿ ಹೋದೀತು; ಸಮಾಜವು ನಿಸ್ತೇಜ, ನಿರ್ವೀರ್ಯವಾಗಿ ಹೋದೀತು! ಮಾಚಯ್ಯ, ಏನು ವಿಚಾರಿಸುವಿರಿ? ಹರಳಯ್ಯ ಮಧುವರಸರ, ಅಮಾನುಷವಾದ ಹತ್ಯಾಕಾಂಡದ ದುರಂತ ದೃಶ್ಯವನ್ನು ಸ್ಮರಿಸು! ಬಿಜ್ಜಳನ ಕೊಲೆಗಾಗಿ ಕತ್ತಿಯನ್ನು ಹಿರಿ!

ಮಾಚಯ್ಯ : ಬಸವಣ್ಣನವರೇ, ನಿಮ್ಮ ಅತ್ಯಂತಿಕ ಅಹಿಂಸೆಯ ತತ್ವವು ನಿಮಗೇ ಮೀಸಲಾಗಿರಲಿ! ಸಾಮಾಜಿಕವಾಗಿ ಧಾರ್ಮಿಕ ಕ್ಷೇತ್ರದಲ್ಲಿ, ಸಾಮೂಹಿಕ ಜೀವನದಲ್ಲಿ ಅದು ಅವ್ಯವಹಾರ್ಯವಾದುದು. ನಮಗೆ ಬೇಕಾಗಿರುವುದು ಸಮಾಜದ ಗೌರವರಕ್ಷಣೆ; ಪಾಪಿಗಳ ಅನ್ಯಾಯಕ್ಕೆ ಪ್ರತೀಕಾರ! ನನ್ನ ಕಾರ್ಯಕ್ಕೆ ಶಿವಧರ್ಮದ ಬೆಂಬಲವೂ ಇದೆ. ಶಿವಭಕ್ತರ ಕೊಲೆಯಾಗುವುದಂತಿರಲಿ, ಶಿವನಿಂದಕರಿಗೂ ತಕ್ಕ ಪ್ರಾಯಶ್ಚಿತ್ತವನ್ನು ವಿಧಿಸಲು ತಿಳಿಸುವ ಗಣಾಚಾರದಂತೆ ನಾವು ಶಿವಶರಣರ ಕೊಲೆ ಮಾಡಿಸಿದ ಬಿಜ್ಜಳನ ಸಂಹಾರಕ್ಕಾಗಿ ಹೊರಡುತ್ತೇವೆ. ಶರಣಾರ್ಥಿ (ಹೋಗುವರು)

ಬಸವ : (ಹಿಂಬಾಲಿಸಿ) ಮಾಚಯ್ಯ-ಮಾಚರಸ! ಬೇಡಿರಿ, ರಕ್ತಪಾತಕ್ಕೆ ಮನಸ್ಸುಮಾಡಿ ಮಾರಣಮಂತ್ರವನ್ನು ಜಪಿಸಿ ಸಮಾಜದ ಹಣೆಗೆ ರಕ್ತದ ಕುಂಕುಮವಿಡಬೇಡಿರಿ! ಕೋಪವು ಪಾಪದ ನೆಲಗಟ್ಟು, ಕೆರಳು ನಾಶದ ಕರುಳು, ರೋಷ ನೆಮ್ಮಲು ಮೋಸ! ಮಾಚರಸಾ......! (ತೆರೆಯಲ್ಲಿ ಮಾಚರಸ ಜಗದೇವರ ಗರ್ಜನೆ. "ರುಂಡಕ್ಕೆ ಪ್ರತಿಯಾಗಿ ರುಂಡ; ರಕ್ತಕ್ಕೆ ಪ್ರತಿಯಾಗಿ ರಕ್ತ!" ಢಣ್.....ಢಣ್..... ಢಣ್.....ಮಾಚರಸನ ಘಂಟಾನಾದ!) ಹೋದರು ರಕ್ತಪಿಪಾಸೆಯಿಂದ ಉನ್ಮತ್ತರಾಗಿ ಆತ್ಮಶಕ್ತಿಯ ಅವಹೇಳನಸ್ವರೂಪವಾದ ಸೇಡು ತೀರಿಸಿಕೊಳ್ಳುವ ಕಾರ್ಯಕ್ಕೆ ಹೋದರು! ಬಸವಾ, ನಿನ್ನ ಕಾರ್ಯವು ಇಲ್ಲಿಗೆ ನಿಂತಿತು! ತಿರುಗಿ ಎಂದು ತಲೆಯೆತ್ತುವುದೋ ಕಾಣೆ! ಅಯ್ಯೋ-ಏನನ್ನು ಮಾಡಲು ಆರಂಭಿಸಿ ಏನನ್ನು ಮಾಡಿಬಿಟ್ಟೆ! ಜಗತ್ತಿನಲ್ಲಿ ಇನ್ನು ಮುಂದೆ ರಕ್ತಪಾತ ಮಾನವಸಂಹಾರವು ಆಗಬಾರದೆಂದು ಹೊರಟಿದ್ದ ನಾನು ಪ್ರಪಂಚಕ್ಕೆ ಮತ್ತೊಮ್ಮೆ ಮಾನವರಕ್ತದ ಸ್ನಾನವನ್ನು ಮಾಡಿಸಿದೆ! ಸ್ವಾರ್ಥಸಾಗರದಲ್ಲಿ ಮುಳುಮುಳುಗಿ ಏಳುತ್ತಲಿದ್ದ ಜನತೆಯನ್ನು ಮೇಲೆತ್ತಲೆಂದು ಹೊರಟ ನಾನು ನಿರ್ದೋಷಿ ಬಂಧುಗಳ ರುಧಿರವಾಹಿನಿಯಲ್ಲಿ ನನ್ನವರನ್ನು ನೂಕಿಬಿಟ್ಟೆ! (ಕಂಠಬಿಗಿದು) ಸಂಗಮನಾಥ! ಈ ದುರ್ಬಲ ಬಸವನು ನೀನಿತ್ತು ಕಳಿಸಿದ್ದ ಸಂದೇಶವನ್ನು ಜಗತ್ತಿಗೆ ಬೀರಲಾರದೇ ಹೋದನು! ಪ್ರಭುವೇ, ತಾವು ಭಾರತದಲ್ಲೆಲ್ಲ ಸಂಚರಿಸಿ ತಮ್ಮ ಲೋಕೋದ್ಧಾರದ ಕಾರ್ಯವನ್ನು ಮುಂದುವರಿಸಿರಿ! ಚನ್ನಬಸವಯ್ಯ,

ಕಲ್ಯಾಣದಲ್ಲಿ ನನಗೆ ಸ್ಥಳವಿಲ್ಲ! ನಾನು ಸಂಗಯ್ಯನಲ್ಲಿಗೆ ಹೊರಡುವೆ; ನೀನು ಶರಣರ ಸೇನಾಪತಿಯಾಗಿದ್ದುಕೊಂಡು ನನ್ನ ಕಾರ್ಯವನ್ನು ಮುಂದುವರಿಸು! ಮಾಚಯ್ಯನ ಮಾತುಗಳಿಂದ ನನ್ನ ಹೃದಯವು ಸಹಸ್ರ ಹೋಳುಗಳಾಗಿದೆ; ಸರ್ವ ಸಾಹಸಮಾಡಿ ಬಿಜ್ಜಳನ ಕೊಲೆಯಾಗದಂತೆ ಯತ್ನಿಸು! ನಿನ್ನ ಶಕ್ತಿಮೀರಿ ಆ ಕಾರ್ಯ ನಡೆದುಹೋದರೆ ಕಲ್ಯಾಣದಲ್ಲಿ ಕೂಡಿರುವ ಶರಣರನ್ನೆಲ್ಲ ಸುರಕ್ಷಿತಸ್ಥಳಕ್ಕೆ ಸಾಗಿಸಿಕೊಂಡು ಹೋಗು! ಇನ್ನು ಮೇಲೆ ಅವರು ಅನುಭವಮಂಟಪದಲ್ಲಿ ಕಂಡುಹಿಡಿದ ವಿದ್ಯೆಯನ್ನು ನಾಡಿನಲ್ಲೆಲ್ಲ ಹರಡುವ ಕಾರ್ಯಮಾಡಲಿ! ನೀಲಾ, (ಕಣ್ಣುತುಂಬಿ) ನೀಲಾ, ನನ್ನ ಜೀವನದ ಜೀವಾಳವೇ– ನಾನಿನ್ನು ಹೊರಡುವೆ! ನೀನು ನಿನ್ನ ಇಷ್ಟಲಿಂಗಯ್ಯನನ್ನೇ ಸಾಕ್ಷಾತ್ಕರಿಸಿ ಅಲ್ಲಿಯೇ ಬೆರೆತು ಬಯಲಾಗು! ನನ್ನನ್ನು ಬೀಳ್ಕೊಡಿರಿ–ನನಗೆ ಅತ್ಯಂತ ಪ್ರಿಯವಾದ ತತ್ವದ ಸಲುವಾಗಿ ನಾನಿಂದು ಕಲ್ಯಾಣವನ್ನು ತೊರೆದು ಹೋಗುವೆ! ನನ್ನವರಿಂದಲೇ ತ್ಯಜಿಸಲ್ಪಟ್ಟವನಾಗಿ, ನನ್ನವರನ್ನು ಮೆಚ್ಚಿಸುವ ಸಾಮರ್ಥ್ಯವು ಇಲ್ಲದಂತಾಗಿ, ನನ್ನ ತತ್ವದ ಸತ್ಯತೆಯನ್ನು ನನ್ನವರಿಗೇ ಮನಗಾಣಿಸಿಕೊಡುವುದು ಸಾಧ್ಯವಾಗದೆ, ನಿರಾಶೆಯಿಂದ ಜಗತ್ತನ್ನು ಬಿಟ್ಟು ಹೊರಡುವೆನು! ಜಗವನ್ನು ನಂದನವನವನ್ನಾಗಿ ಮಾಡಬೇಕೆಂದು ಬಯಸಿ ಅದೆಷ್ಟೋ ಎಣಿಕೆಹಾಕಿದೆ; ಅದು ಮಸಣವಾಯಿತು! ಇದು ನಂದನವನವಾಗುವವರೆಗೆ ಸತ್ಯಲೋಕವಾಗುವವರೆಗೆ ಸತ್ಯ ಧರ್ಮದ ಅನುಯಾಯಿಯಾಗುವವರೆಗೆ, ಸಹಸ್ರಸಾರೆ ಹುಟ್ಟಿಬರುವೆ! ಬೇರೆ ಬೇರೆ ದೇಶಗಳಲ್ಲಿ, ಬೇರೆ ಬೇರೆ ಕಾಲಗಳಲ್ಲಿ, ಬೇರೆ ಬೇರೆ ರೂಪದಿಂದ ಬಂದು ಮಾನವಸೇವೆಯನ್ನು ಮುಂದುವರಿಸುವೆನು! ನಿಮ್ಮೆಲ್ಲರಿಗೆ ಶರಣಾರ್ಥಿ! (ಹೋಗುತ್ತ) ಅರಸುವಿಚಾರ ಸಿರಿಯು ಶೃಂಗಾರ ಸ್ಥಿರವಲ್ಲ ಮಾನವಾ! ಕೆಟ್ಟಿತ್ತು ಕಲ್ಯಾಣ, ಹಾಳಾಯ್ತು ನೋಡಾ! ಒಬ್ಬ ಜಂಗಮದ ಅಭಿಮಾನದಿಂದ ಚಾಲುಕ್ಯರಾಯನ ಆಳಿಕೆ ತೆಗೆಯಿತ್ತು. ಕೂಡಲಸಂಗಮದೇವಾ, ಸಂದಿತ್ತು ನಿಮ್ಮ ಕವಳಿಗೆ.

(ಎಲ್ಲರೂ ವಿಸ್ಮಿತರಾಗಿ, ದುಃಖದಿಂದ ಮೂಕತೆವಡೆದು ನೋಡುತ್ತ ನಿಲ್ಲುವರು. ಒಮ್ಮೆ ಎಲ್ಲರನ್ನು ನೋಡಿ, ಎರಡು ಹನಿ ನೀರುದುರಿಸಿ, ಎಲ್ಲರಿಗೆ ಕರಮುಗಿದು ಬಸವರಸರು ಮಿಂಚಿನಂತೆ ಮಾಯವಾಗುವರು.)

ಪ್ರಭು : ಬಸವಾ ಬಯಲಾದೆಯಾ! ಕಲ್ಯಾಣದ ಸೌಭಾಗ್ಯಸೂರ್ಯನು ಇಂದು ಅಸ್ತಂಗತನಾದನು! ಮಾನವಕೋಟಿಯ ಮಂಗಲಮೂರ್ತಿಯು ಮಾಯವಾದನು! ಕಲ್ಯಾಣದ ಪ್ರಣತಿಯಲ್ಲಿ ಜಾಜ್ವಲ್ಯಮಾನವಾಗಿ ಬೆಳಗಿದ ವೀರಶೈವದ ವಿಶ್ವಜ್ಯೋತಿಯು ಶಾಂತವಾಯಿತು! (ಹೋಗುವರು)

ಸಿದ್ಧರಾಮ : ಕನ್ನಡ ನಾಡಿನ ಕೀರ್ತಿಸಾರ್ವಭೌಮನು ಕಣ್ಮರೆಯಾದನು! ಪ್ರಾಣಿಕೋಟಿಯ ಕಲ್ಯಾಣಮೂರ್ತಿಯು ನಮಗೆ ಎರವಾದನು! ಬಡವರ ದೀನರ ಭಾಗ್ಯವಿಧಾತನು ಬಯಲಾದನು! (ಹೋಗುವನು.)

ಚೆನ್ನಬಸವ : ವಿಶ್ವವಿಭೂತಿಯು ಅಂತರ್ಧಾನನಾದನು! ಸತ್ಯ ಧರ್ಮ ಜ್ಯೋತಿಯು ಪ್ರಪಂಚಕ್ಕೆಲ್ಲ ಪ್ರಕಾಶವನ್ನು ನೀಡಿ ವಿಶ್ವಗರ್ಭದಲ್ಲಿ ಲೀನವಾಯಿತು! (ಹೋಗುವನು)

ನೀಲಾಂಬೆ : ನನ್ನ ಪತಿದೇವರು ಸಂಗಮನಾಥನ ಸಲುವಾಗಿ ಅಷ್ಟು ದೂರ ಏಕೆ ಹೋದರೋ ಕಾಣೆ! ಅಲ್ಲಿದ್ದ ಸಂಗಯ್ಯನು ಇಲ್ಲಿಲ್ಲವೆ? ನಾನು ಇಷ್ಟಲಿಂಗದಲ್ಲಿಯೇ ಬಯಲಾಗುವೆನು! (ಹೋಗುವಳು. ಗಂಗಾಂಬೆ ನಾಗಲಾಂಬಿಕೆಯರು ಧಾವಿಸಿಬರುವರು.)

ಗಂಗಾಂಬೆ : (ಬಿಕ್ಕಿಸುತ್ತ) ನಾವು ಬರುವ ಮೊದಲೇ ತೊರೆದುಹೋದೆಯಾ ನಾಥ? ಕಲ್ಯಾಣವನ್ನು ಕೆಡಿಸಲೆಂದೇ ಕಟ್ಟಿದ್ದೆಯಾ ದೇವ? ತಾಯಿ ನಾಗಮ್ಮ ಮಡಿವಾಳಣ್ಣಂಗ್ಯಾಕೆ ಬಾರದವ್ವಾ ಕರುಣರಸ? ಮಡಿವಾಳಣ್ಣಂಗ್ಯಾಕೆ ಬಾರದವ್ವ ಸ್ಥೈರಣೆಯರಸ? ಮಡಿವಾಳಣ್ಣಂಗ್ಯಾಕೆ ಬಾರದವ್ವಾ ಮಹತ್ವದ ದಯಾರಸ? ಮಡಿವಾಳಣ್ಣಂಗ್ಯಾಕೆ ಬಾರದವ್ವಾ ಗಂಗಾಪ್ರಿಯ ಕೂಡಲಸಂಗನ ಶರಣನ ಪ್ರಾಣದಾನರಸ? ಹಾಯ್ ವಿಧಿಯೆ ಕಲ್ಯಾಣ ಸಂಸ್ಕೃತಿಯನ್ನು ನುಂಗಲು ಎಷ್ಟು ದಿನಗಳಿಂದ ಹೊಂಚುಹಾಕಿದ್ದೆ? (ಹೋಗುವಳು)

ನಾಗಲಾಂಬೆ : ಬಸವಣ್ಣಾ, ಭುವಿಯ ಕತ್ತಲೆ ಪೂರ್ಣ ಅಳಿಯದ ಮುನ್ನವೇ ಬೆಳಗಿನೊಳು ಬಯಲಾದೆಯಾ? ಇನ್ನೆಲ್ಲಿಯ ಭಕ್ತಿ? ಇನ್ನೆಲ್ಲಿಯ ಸಮತೆ? ಇನ್ನೆಲ್ಲಿಯ ಶರಣಗೋಷ್ಠಿಗಳಣ್ಣ? ನೀವು ಮರ್ತ್ಯಕ್ಕೆ ಬಂದು ನಿಂದರೆ ಭಕ್ತಿಯ ಬೆಳವಿಗೆ ದೆಸೆದೆಸೆಗೆ ಪಸರಿಸಿತಯ್ಯಾ! ಸ್ವರ್ಗ, ಮರ್ತ್ಯ, ಪಾತಾಳದೊಳಗೆಲ್ಲ ನಿಮ್ಮ ಭಕ್ತಿಯ ಬೆಳವಿಗೆಯ ಘನವನಾರುಬಲ್ಲರು? ಅಣ್ಣಾ, ಶಶಿಧರನಟ್ಟಿದ ಮಣಿಹವು ಪೂರೈಸಿತ್ತೆಂದು ನೀವು ಲಿಂಗೈಕ್ಯವಾದರೆ ನಿಮ್ಮೊಡನೆ ಭಕ್ತಿ ಹೋಯಿತ್ತಯ್ಯಾ! ನಿಮ್ಮೊಡನೆ ಸದಾಚಾರ ಹೋಯಿತ್ತಯ್ಯಾ! ನಿಮ್ಮೊಡನೆ ಅಸಂಖ್ಯಾತರು ಹೋದರು! ಅಣ್ಣಾ, ಮರ್ತ್ಯಲೋಕದ ಮಹಾಮನೆಯು ಶೂನ್ಯವಾಯಿತು! ಅಯ್ಯಾ ಬಸವಣ್ಣ, ಎನ್ನನೊಯ್ಯದೆ ಹೋದೆಯಲ್ಲ? ಪಂಚಪರುಷಮೂರುತಿ ಬಸವಣ್ಣ, ಬಸವಣ್ಣಪ್ರಿಯ ಚನ್ನಸಂಗಯ್ಯಂಗೆ ಪ್ರಾಣಲಿಂಗವಾಗಿ ಹೋದೆಯಲ್ಲ ಸಂಗನಬಸವಣ್ಣ? ಹಾಯ್ ಹಾಳುಗವಿಯೆ, ನಿನ್ನನ್ನು ನೆಚ್ಚಿ ಕುಳಿತು ಅಣ್ಣನ ಮೋರೆ ಸಹ ನೋಡಲಾರದಾದೆ! ನಿನ್ನನ್ನು ನಂಬಿದ ತಪ್ಪಿಗೆ ನಿನ್ನ ಕತ್ತಲೆಯನ್ನೆಲ್ಲ ನನ್ನೆದೆಯಲ್ಲಿ ತುಂಬಿದೆ! (ವೇಗವಾಗಿ ಹೋಗುವಳು. ಬಸವಣ್ಣನ ಮನೆ ಬರಿದಾಗಿ, ಶೂನ್ಯವಾಗಿ, ನಿಶ್ಯಬ್ದ ಗಂಭೀರವಾಗಿ ಮೌನದಿಂದ ಶೋಕಿಸುವಂತೆ ತೋರುವುದು. ತುಸು ಹೊತ್ತು ರಂಗಭೂಮಿ ನಿರ್ಜನವಾಗಿ, ನೀರವವಾಗಿ, ಮಸುಕಾಗಿದ್ದು ತೆರೆ ಏಳುವುದು!)

(ಹಿಂದೆ ಸಂಗಮನಾಥನಗುಡಿ – ಕೃಷ್ಣಾಮಲಾಪಹಾರಿಗಳು ಒಂದನ್ನೊಂದು ಅಪ್ಪಿವೆ. ಪ್ರಕೃತಿಯು ಗಂಭೀರವಾಗಿದೆ. ತರುಲತಾವಳಿಗಳೂ ಶೋಕರಸದಲ್ಲಿ ಅದ್ದಿ ತೆಗೆದಂತಿವೆ! ಬಸವಣ್ಣನವರು ಭಾರವಾದ ಹೆಜ್ಜೆಗಳನ್ನು ಹಾಕುತ್ತ ಹಾಡುತ್ತ ಬರುತ್ತಾರೆ.)

ರಾಗ : ಗುಜ್ಜರಿ ತೋಡಿ ತಾಳ : ತ್ರಿತಾಲ ಚಾಲ : ಬನರೇ ಷರಕಾ ಜಾನ್ನರೆ ಮಾಯೆ....

ಬರಿದೇ ಬಳಲಿದೆ ಆಶೆಯ ಮಾಯೆಯ
ಬಿಸಿಲುಗುದುರೆಯಾ ಬೆನ್ನನು ಹತ್ತಿ ॥ಪ॥
ತತ್ವವಿಜಯಕಾಗಿ ತೊತ್ತಾಗಿ ಬಾಳಿದೆ
ಮೃತ್ಯುವಾಯಿತದು! ಸತ್ಯಶರಣರಿಗೆ ॥೧॥
ಒಲವ ವಿಶ್ವಜೀವಜಾಲಗಳಿಗೆಲ
ಕಲಿಸಹೊರಟವನು। ಕೊಲೆಯ ಕಲಿಸಿದೆ ॥೨॥

(ಭಕ್ತಿನಿರ್ಭರರಾಗಿ ಸಂಗಮೇಶ್ವರಮೂರ್ತಿಯ ಎದುರು ನಿಂತು) ಸಂಗಮನಾಥ! ನೀನಿತ್ತ ಸಂದೇಶವನ್ನು ವಸುಧೆಯಲ್ಲಿ ಪಸರಿಸಲಾಗದೇ ಹಸುಳೆಯಂತೆ ಹೇಡಿಯಾಗಿ ಓಡಿಬಂದಿರುವೆನು! ನಿನ್ನ ಗೀತೆಯನ್ನು ಯಾವ ಸ್ವರದಲ್ಲಿ ಹಾಡಬೇಕೆಂದು ತಿಳಿಯದೇ ಹೌಹಾರಿ ಬಂದಿದ್ದೇನೆ! ಎನ್ನೊಡೆಯ, ಎನ್ನೊಲವೆ, ಎನ್ನ ಗತಿಮತಿ ಸಂಗಯ್ಯ, ಕರೆದುಕೋ ಕನಲಿ ಬಂದಿರುವ ನಿನ್ನ ಕಂದಯ್ಯನನ್ನು! ಕಲ್ಯಾಣವು ತನ್ನ ಕರಾಳವದನದೊಡನೆ ನನ್ನನ್ನು ಕಳಿಸಿಕೊಟ್ಟಿತು ದೇವಾ! ನಿನ್ನಡಿಯ ಹುಡಿಯಲ್ಲಿ ಹೊರಳಿ ಬೇಡುವೆ– ಈ ನಿನ್ನ ದೀನ ಭಕ್ತನನ್ನು ಕರೆದುಕೋ! ಜಗತ್ತನ್ನು ಉದ್ಧರಿಸಿ ಪುಣ್ಯದ ಪ್ರಕಾಶವಾಗಿ ಬಾರೆಂದು ಹೇಳಿಕಳುಹಿದ್ದೆ– ಇದೋ ಕೊಲೆಗಾರನಾಗಿ ಪಾಪದ ಕತ್ತಲೆಯಾಗಿ ಬಂದಿದ್ದೇನೆ! ವಿಶ್ವವೀಣೆಯ ಹರಿದ ತಂತಿಗಳನ್ನು ಸರಿಗೊಳಿಸಿ, ವಿಶ್ವಸಂಗೀತದ ಅಪಸ್ವರಗಳನ್ನು ಕಳೆದೊಗೆದು, ಜಗತ್ಕಲ್ಯಾಣ ಗೀತೆಯನ್ನು ಹಾಡಿಬರಲು ಕಳಿಸಿದ್ದೆ; ಇದೋ – ವಿಶ್ವವೀಣೆಯ ಉಳಿದ ತಂತಿಗಳಲ್ಲಿ ಮತ್ತೆ ಕೆಲವನ್ನು ಹರಿದು, ವಿಶ್ವಸಂಗೀತದಲ್ಲಿ ಮತ್ತೆ ಹಲವು ರೋದನಸ್ವರಗಳನ್ನು ಕೂಡಿಸಿ, ಸಂಹಾರಗೀತೆಯನ್ನು ಹಾಡಿಬಂದಿರುವೆ! ನಾನು ಹೇಗಿದ್ದರೂ ನಿನ್ನವನನ್ನಾಗಿ ಮಾಡಿಕೊಳ್ಳಯ್ಯಾ ತಂದೆ! ನನ್ನ ಪಾಪ ಪುಣ್ಯ ನಿನ್ನವು; ನನ್ನ ತಪ್ಪು ಒಪ್ಪು ನಿನ್ನವು; ನನ್ನ ಜಯಾಪಜಯ ನಿನ್ನವು! ನನ್ನನ್ನು ನನ್ನ ಗಳಿಕೆಯೊಡನೆ ಕರುಣೆಯಿಂದ ಕರವಿಡಿದು ಕರೆದುಕೋ ತಂದೆ! ನೀ ಹುಟ್ಟಿಸಿದಲ್ಲಿ ಹುಟ್ಟಿ, ನೀ ಕೊಂದಲ್ಲಿ ಸಾಯದೆ, ಎನ್ನಳವೆ ಅಯ್ಯ ನೀವಿರಿಸಿದಲ್ಲಿ ಇರದೆ, ಎನ್ನ ವಶವೇ ಅಯ್ಯಾ? ಅಕಟಕಟಾ, ಎನ್ನವನೆನ್ನವನೆನ್ನಯ್ಯಾ ಕೂಡಲಸಂಗಮದೇವಯ್ಯಾ! ಅಯ್ಯಾ, ಅಯ್ಯಾ ಎಂದು ಕರೆಯುತ್ತಲಿದ್ದೇನೆ! ಅಯ್ಯಾ, ಅಯ್ಯಾ ಎಂದು ಒರಲುತ್ತಲಿದ್ದೇನೆ! ಓ ಎನ್ನಲಾಗದೇ ಅಯ್ಯ? ಜಜ್ಜನೆ ಜರಿದೆ, ಬಿಬ್ಬನೆ ಬಿರಿದೆ – ನಾನೊಬ್ಬನೇ ಉಳಿದೆ – ನಿಮ್ಮ ಶರಣರನಗಲಿದ ಕಾರಣ! ಈಗೆನ್ನ ಆಪತ್ತು ಸುಖ ದುಃಖ ನೀವೇ ಕಂಡಯ್ಯ; ಮತ್ತಾರೂ ಇಲ್ಲ! ನಿಮ್ಮ ಶ್ರೀಚರಣವನ್ನೇ ನೆರೆನಂಬಿ ಬಂದಿರುವೆ ತಂದೆ. ಭವರೋಗವೈದ್ಯನೆಂದು ನಾ ನಿಮ್ಮ ಮರೆಹೊಕ್ಕೆ; ಕರುಣಿಸು ಲಿಂಗತಂದೆ! ಜಯ ಜಯ ಶ್ರೀಮಹಾದೇವ, ಜಯ ಜಯ ಶ್ರೀ ಮಹಾದೇವ, ಜಯ ಜಯ ಶ್ರೀ ಮಹಾದೇವ! (ಬೀಳುವನು.)

ಸಂಗಮನಾಥ : (ಲಿಂಗವನ್ನು ಸೀಳಿ ಮೇಲೆದ್ದು) ಎದ್ದೇಳು ಬಸವಾ, ವ್ಯಸನಪಡಬೇಡ! ನೀನು ಮಾಡಿದ ಕಾರ್ಯವೇ ಜಗತ್ತಿಗೆ ಬೇಕಾಗಿತ್ತು! (ಇಳಿದು ಬಂದು ಬಸವನನ್ನೆತ್ತಿ) ಭಯ ಬೇಡ ಬಸವಣ್ಣ, ಹರಳಯ್ಯ ಮಧುವರಸರ ಪ್ರಾಣವನ್ನುಳಿಸಿದ್ದರೆ ನನ್ನ ಉದ್ದೇಶ ಪೂರ್ಣವಾಗುತ್ತಿರಲಿಲ್ಲ. ಅವರ ಆತ್ಮಾರ್ಪಣವೇ ಜಗತ್ತಿಗೆ ಆದರ್ಶವಾಗಬೇಕಾಗಿದೆ! ಶಾಂತನಾಗು, ಬಾ, ನನ್ನನ್ನು ನಿನ್ನ ಬಾಹುಗಳಲ್ಲಿ ಬಿಗಿದಪ್ಪು!

ಬಸವ : (ಸಂಗಯ್ಯನ ಕಾಲುಗಳನ್ನು ಅಪ್ಪಿ) ಅಹಾ, ತಂದೆ – ಕಡೆಗೊಮ್ಮೆ ಕರುಣದಿಂದ ನೋಡಿದೆಯಾ ಈ ಕಂದನನ್ನು? ಬೆಳಗು–ಬೆಳಗು– ಅಹಾ–ಬೆಳಗಿನೊಳಗಣ ಮಹಾಬೆಳಗು! ಅಹಾ ಆನಂದಾನುಭವವೇ– ಅಮೃತಾನುಭವವೇ! ಸಂಗಯ್ಯ, ಸಂಗಯ್ಯ, ನನ್ನನ್ನು ನಿನ್ನುದರದಲ್ಲಿ ಬೈಚಿಟ್ಟುಕೋ!

ಸಂಗಯ್ಯ : (ತಲೆಯಮೇಲೆ ಹಸ್ತವನ್ನಿಟ್ಟು) ಬಸವಣ್ಣ, ಇಂದಿನಿಂದ ನಿನ್ನನ್ನು ಜಗತ್ತಿನ ಜೀವಿಗಳೆಲ್ಲರೂ ಅಣ್ಣನೆಂದು ಆದರಿಸಿ ಆರಾಧಿಸುವರು! ಬಹು ಬಳಲಿ ಬಂದಿರುವೆ–ಬಾ. (ಬಸವನು ಕಾಲುಗಳನ್ನಪ್ಪಿ ಮಂಡಿಯೂರಿ ಕುಳಿತಿರಲು ತುಸುಬಾಗಿ ಅವನ ತಲೆಯ ಮೇಲೆ ಕರವನ್ನಿಟ್ಟು ನಿಲ್ಲುವನು. ಎರಡೂ ಬದಿಯಿಂದ ಅಪ್ಸರೆಯರು ಹೂಮಾಲೆಗಳನ್ನು ಹಿಡಿದು ಹಾಡುತ್ತ ಬಂದು ಎರಡೂ ಬದಿಗೆ ಸಾಲಾಗಿ ಕಲಾತ್ಮಕವಾಗಿ ನಿಲ್ಲುವರು. ಇಬ್ಬರು ಬಸವ ಸಂಗಮನಾಥರಿಗೆ ಮಾಲೆ ಹಾಕಿ ಎರಡೂ ಬದಿಗೆ ಕರ ಜೋಡಿಸಿ ನಿಂತು ಹಾಡುವರು. ಮೇಲಿನಿಂದ ಪುಷ್ಪವೃಷ್ಟಿ.)

ರಾಗ : ದೇಶ್ ಕಾರ್ ತಾಳ : ತ್ರಿತಾಲ ಚಾಲ : ಝುನನನ ಝುನನನ ಬಾ ಬಾರೇ

ಜಯ ಜಯ ಜಯ ಜನತಾಪ್ರೇಮಿ
ಜಯತು ಕೃಪಾಕರ
ಚಾರುವಚನನಾರೀನೀರ, ಶಿವಾನುಭವ ಶಾಸ್ತ್ರಸಾರ ॥ಪ॥
ವಿಶ್ವಕುಟುಂಬದ ಭಾವನೆ ಬೆಳೆಸಿ
ವಿಶ್ವಧರ್ಮವನು ಶಾಶ್ವತಗೊಳಿಸಿದ ॥೧॥
ಜಯ ಜಯ.....
ದೇವಲೋಕವನು ಭೂಮಿಗೆ ಬರಿಸಿ
ಜೀವರಾಶಿಗಳ ಪಾವನಮಾಡಿದಾ ॥೨॥
ಜಯ ಜಯ......
ಮಸಣವದಾಗಿದ್ದ ವಸುಧೆಯ ನಂದನ–
ವೆಸಗಿದಾತ ಘನತಾರಕಬಸವಾ ॥೩॥
ಜಯ ಜಯ........

(ಹಾಡುತ್ತಿರುವಾಗಲೇ ತೆರೆ ಬೀಳುವುದು)

ರಜತರೇಖೆ

ಎಡೆ

ಧಾರವಾಡದ ದಿವ್ಯ ಜ್ಯೋತಿ

ತ್ರಿವಿಧ ದಾಸೋಹಮೂರ್ತಿ

ಕನ್ನಾಡಿನ ಧವಲಕೀರ್ತಿ

ಪರಮಪೂಜ್ಯ ಮೃತ್ಯುಂಜಯ ಮಹಾಸ್ವಾಮಿಗಳವರ

ಅಡಿಗಳಿಗೆ ಎಡೆ

ಈ ಅಲ್ಪ ಕೃತಿ.

ಮಧು ಮಹೋತ್ಸವ

ಮಧುಮಾಸದ ರೂಪವಿಲಾಸವನ್ನು ಕುರಿತು ಕೃತಿ ರಚಿಸದ ಕವಿಯೂ ಉಂಟೆ? 'ಮೃತ್ತಿಕೆಯ ಮೈಮಲರಿ ಕಸಕಡ್ಡಿಯೂ ಅಲರಿ' ಆನಂದಕ್ಕೆ ಉಕ್ಕುಬರುವ ಆ ಕಾಲವನ್ನು ಹಿನ್ನೆಲೆಯಾಗಿಟ್ಟುಕೊಂಡು ಹೆಣೆದ ಗೀತರೂಪಕ 'ಮಧುಮಹೋತ್ಸವ'. ಈ ಸುಂದರ ಶೀರ್ಷಿಕೆ ಪಂಪನಿಂದ ತಿರಿದು ತಂದುದು. ಈ ರೂಪಕ ಇಷ್ಟೊಂದು ಜನಪ್ರಿಯವಾಗಲು ಅವನ ಅನುಗ್ರಹವೇ ಕಾರಣವಾಗಿರಬೇಕು.

ಕತೆಗಾರ :ಕತ್ತೆತ್ತಿ ನೋಡು–

ಮತ್ತೆ ಮೈಮುರಿಯುತ್ತ ಬಂದ ವಸಂತ.

ವಸಂತ ಬಂದ. ವಸಂತ ಬಂದ.

ಹೇಗೆ ಬಂದ? ಹೀಗೆ–

ಚಳಿಯೊಡ್ಡು ಜಾರೆ

ತಂಗಾಳಿ ತಲೆದೋರೆ

ಪೂಗಳ ಕಂಪು ಮೀರೆ

ಭೃಂಗಂ ನಲಿದು ಪಾರೆ

ಕೋಗಿಲೆಯ ದನಿ ಸಾರೆ

ಮಾಮರಗಳು

ತಳಿರುಗಳ ಪೇರೆ

ವಿರಹಿಗಳ ಬಾಯಾರೆ

ಸುಖೀಗಳ ತಾಪಮಾರೆ

ಮದನಂಗೆ ಬಲವೇರೆ

ಮುನಿಗಳ ಮುದಂ ಮೀರೆ

ಭೂವಲಯಕ್ಕೆ ವಸಂತಾಗಮಂ

ಮನೋರಾಗಮಂ

ಮಾಡುತ್ತೈತರುತಿರ್ದುದು!

ವಿಜಯನಗರದ ವಿರೂಪಾಕ್ಷ ಪಂಡಿತನು ಕಂಡ ವಸಂತಾಗಮನದ ಚಿತ್ರವಿದು. ಇಂದು ಅದೇ ಸೊಬಗಿನ ಸುಗ್ಗಿ ಬಂದಿದೆ–ಹೊಸ ಅಂದ ಚೆಂದಗಳೊಡನೆ. ಸ್ವಾಗತಿಸಿರಿ, ಮೇಳದವರೇ ಸ್ವಾಗತಿಸಿರಿ.

ಮೇಳ : ಋತುರಾಜ, ಋತುರಾಜ

ಬಾಬಾಬಾಬಾ ನಾಡೊವಜ ॥ಪ॥

ನವಪಲ್ಲವ-ನವಿರಾಂತಳು ಧರೆ
ಸುಯ್ಗಂಪಿದೊ ತೆರೆ ತೆರೆ ತೆರೆ
ಮರಮರದಲಿ ಹೊಸಬಾಳಿನ ಕರೆ
ವಿಕಸಿತವಾಯಿತು ವಿಶ್ವದ ಮುಕುಲಿತ
ಸದುಹೃದಯ ಸರೋಜ
ಋತುರಾಜ ಋತುರಾಜ
ಬಾಬಾಬಾಬಾ ನಾಡೊವಜ ॥
ಮೌನವ ತೊರೆದಳು ವನದಲಿ ಕೋಕಿಲ
ಪಂಚಮದಿಂಚರ ಮಂಜುಲ ಪ್ರಾಂಜಲ
ಕುಂಜ ಕುಂಜದಲಿ ಗುಂಜಾರವ ಕುಲ
ಎತ್ತುವೆ ಚಿಗುರಿನ ಚಂಚಲ ಗೊಂಚಲ-
ಮಿಂಚಿನ ನೀರಾಜ
ಋತುರಾಜ ಋತುರಾಜ
ಬಾಬಾಬಾಬಾ ನಾಡೊವಜ ॥
ಹರ್ಷರೋಮದೊಲು ಹಸಿರು ಬೆಳೆಯುತಿದೆ
ಯೌವನ ಮದದೊಲು ತಳಿರು ಹೊಳೆಯುತಿದೆ
ಸುಪ್ತ ಚೇತನದ ನಿದ್ದೆ ತಿಳಿಯುತಿದೆ
ದಿನದಿನ ಹೆಚ್ಚುತಲಿದೆ ದಿನನಾಥನ
ತನುಕಾಂತಿಯು ತೇಜ
ಋತುರಾಜ ಋತುರಾಜ
ಬಾಬಾಬಾಬಾ ನಾಡೊವಜ ॥

ಕತೆಗಾರ : ವಸಂತನನ್ನು ಎದುರುಗೊಳ್ಳಲು ವಾಸಂತಿ ಶೃಂಗರಿಸಿಕೊಳ್ಳುತ್ತಲಿದ್ದಾಳೆ.

ಕವಿ : ಅಹುದು.

ಮರಂದರಸದಿ ಮಿಂದು, ಕುಸುಮವೃಂದ ಖಚಿತ ವಸ್ತ್ರವ
ಧರಿಸಿ, ಕರದಿ ಮಧುವ ತಳೆದು, ಭುವನ ಮೋಹನಾಸ್ತ್ರವ
ಕಮಲನಯನದಲ್ಲಿ ತಳೆದು ತೆರೆದು ರೂಪಸತ್ರವ,
ಕಾಣುತಿಹಳು ಎಲ್ಲ ಕಡೆಗೆ ಪ್ರಾಣಪ್ರಿಯನ ಚಿತ್ರವ
ಯಾರು? ವಾಸಂತಿ
ನೀರೆ ರಸವಂತಿ
ಕೋರಿ ವಿರಹಾಗ್ನಿ ಶಾಂತಿ ॥
ಪ್ರಣಯಕಂಪ ತೋರೆ ಮನದಿ ವನಕೆ ವನವೆ ಚಿಗುರಿತು
ವಿರಹವ್ಯಥೆಯು ಪುಟಿಯೆ ಒಳಗೆ ಹೊರಗೆ ಮೊಗ್ಗೆ ಬಿರಿಯಿತು
ಪ್ರೇಮಗಾನ ಉಕ್ಕೆ ಒಳಗೆ ಹೊರಗೆ ಪರಮೆ ಮೊರೆಯಿತು
ಹೃದಯ ಪ್ರಿಯನ ಬಯಸೆ ಹೊರಗೆ ಕೀರ ಕೀರಿ ಕರೆಯಿತು
ವಾಸಂತಿಯ ವಿರಹ ಮಾಗಿ
ಋತುರಾಜನ ಉದಯವಾಗಿ
ಎತ್ತೆತ್ತಲು ಮಕರಂದವು
ಏನಂದವು ಬಲುಚೆಂದವು
ಆನಂದವೆ ಆನಂದವು ॥
ಇವರ ಪ್ರೇಮಪೂಜೆಗಾಗಿ ನದಿಯ ನೀರು ತಿಳಿಯಿತು
ಚವರಿ ಬೀಸಲೆಂದು ಫಣಿಯು ತನ್ನ ಪರೆಯ ಕಳೆಯಿತು
ದಾಡಿಮಗಳು ಬಿರಿದು ಬೀಜ ಸೇಸೆಯಾಗಿ ಸುರಿಯಿತು
ಸಿರಿಕಂಡದ ಕಂಪು ಧೂಪ ಧೂಮ್ರವಾಗಿ ಹರಿಯಿತು.
ಇಂತು ವಸಂತಾಗಮ
ಪ್ರಿಯೆಪ್ರಿಯರ ಸಮಾಗಮ
ಏನಂದವು ಬಲುಚೆಂದವು
ಮಧುಬಿಂದುವು ಸುಖಸಿಂಧುವು
ಆನಂದವೆ ಆನಂದವು ॥

ಕತೆಗಾರ : ಬರುವನಿದೊ, ಬೆಡಗಿನ ಕಡವರ ಬಸಂತ!

ಮೇಳ : ಬರುವನಿದೊ ಬಸಂತರಾಜ
ಬೆಡಗಿನೊಡನೆ ಬರುವನು
ಸಡಗರದಲಿ ಬರುವನು
ಬನಕೆ ದಿನಕೆ ಜನಕೆ ದನಕೆ
ನವಜೀವನ ತರುವನು
ಸಂಜೀವನ ತರುವನು ॥
ಬೆಟ್ಟ ಹತ್ತಿ ಕಣಿವೆಯಿಳಿದು
ಸುತ್ತಿಸುಳಿದು ಬರುವನು
ಚಿತ್ತ ಚೋರ ಬರುವನು
ಎತ್ತ ಹೊದೊಡತ್ತ ಮತ್ತೆ
ಚೆಲುವ ಚಿಗಿಸಿ ಬರುವನು
ಅಲರ ನಗಿಸಿ ಬರುವನು ॥
ಹೃದಯದಲ್ಲಿ ಮಧುರ ಸುರಿಸಿ
ರಸವ ಹರಿಸಿ ಬರುವನು
ರತಿಯ ಬರಿಸಿ ಬರುವನು
ಹೂವುಗಳಲಿ ಮಧುವನಿರಿಸಿ
ಮುದವ ತರಿಸಿ ಬರುವನು
ಸುಧೆಯ ಸುರಿಸಿ ಬರುವನು ॥
ಚಂದ್ರಕಳೆಯ ಬೆಳಗಿ ತೊಳೆದು
ಅಮೃತ ನೀಡಿ ಬರುವನು
ಜಡತೆ ನೀಗಿ ಬರುವನು
ತರಣಿಗಿರುವ ತೇಜ ಬಲಿಸಿ
ತೇಜ ನೀಡಿ ಬರುವನು
ಓಜ ಬೇಡಿ ಬರುವನು ॥

ಆಸೆಗಳನು ಅರಳಿಸುವನು
ಮುದಮಲರಿಸಿ ಬರುವನು
ಎದೆ ಹಸುರಿಸಿ ಬರುವನು
ಪ್ರೀತಿಗಳ ಕೆರಳಿಸುವನು
ಮಿಲನ ವಾರ್ತೆ ತರುವನು
ಶುಭ ಮುಹೂರ್ತ ಬರುವನು ॥
ಹಿಗ್ಗುವುದು ನಿಸರ್ಗ ನಿಯಮ-
ವೆಂದು ಸಾರಿ ಬರುವನು
ಸೌಖ್ಯ ಸಾರ ಬರುವನು
ಜೀವನ ಸೌಂದರ್ಯ ಪಥದ
ಪಥಿಕನೀಗ ಬರುವನು
ವ್ಯಥೆಯ ನೀಗೆ ಬರುವನು ॥
ನಮೋ ನಮೋ ವಸಂತರಾಜ
ನವಜೀವನ ನಾಯಕ
ನವೀನ ಶಕ್ತಿದಾಯಕ
ನೀಡು ನಮಗೆ ನಿನ್ನ ನಲವ
ಓ ಪಾವನ ಪಾವಕ
ಅಮರ ಗೀತ ಶ್ರಾವಕ ॥

ಕತೆಗಾರ : ಬಂದ, ಬಂದ, ಬಂದೇ ಬಿಟ್ಟ ಬಸಂತರಾಯ. ನಿತಾಂತರಮ್ಯ ಲತಾಂತ ಮಾಲೆಯನ್ನು ಧರಿಸಿ, ಗಂಧಭರಿತ ಮಂದಮರುತನನ್ನೇರಿ ರುಚಿರ ಖಚರ ನಿಚಯದ ಮಧುರ ಸ್ವರದಲ್ಲಿ ಮಾತನಾಡುತ್ತ ಹಿಗ್ಗಿನ ಲಗ್ಗೆಯಾಗಿ ಬಂದ. ಕೋಗಿಲೆ, ಮೌನ ಮುರಿದು ಏನು ಹಾಡುತ್ತಲಿರುವೆ? ನಿನ್ನ ಕೊರಲು ಸರಿಯಾಯಿತೆ? ಹಾಡು, ಮಾಗಿಯ ದುಗುಡ ಮರೆತು ಹೋಗುವಂತೆ ಹಾಡು; ಸುಗ್ಗಿಯ ಹೃದಯ ಅರಳಿ ಪರಿಮಳಿಸುವಂತೆ ಹಾಡು.

ಕೋಕಿಲ : ಕೂಹು ಕೂಹು

ಕೇಳು ಕೇಳು ಬನದ ರೂಹು ॥
ಇಂದು ಮತ್ತೆ ಬನದ ಬಿನದ
ಎಲ್ಲ ಕಡೆಗೆ ಪ್ರೇಮನಿನದ
ಬನ್ನಿ ಬನ್ನಿ ಮುದವ ತನ್ನಿ
ಒಲವ ತನ್ನಿ ಒಲವೆ ನನ್ನಿ
ಒಲವಿನೊಸಗೆ ಎಸಗ ಬನ್ನಿ
ನಮ್ಮ ನಿಮ್ಮ ಕೊಡುಗೆ ತನ್ನಿ
ಬಾರೆ ತುಂಬಿ ನಾದ ತುಂಬಿ
ನಾದ ತುಂಬಿ ಮೋದ ತುಂಬಿ
ಶುಕಿಯೆ ಬಾರ ಸಖಿಯೆ ಬಾರ
ಕುಕಿಲು ಬಾರ ಸುಖವ ತಾರ
ಕಮಲೆ ಬಾರೆ ವಿಮಲೆ ಬಾರೆ
ಅತುಲ ರೂಪರತಿಯೆ ಬಾರೆ
ಬನದೊಡೆಯನು ಬಂದ ಬನ್ನಿ
ಬನದೇವಿಯ ಪೂಜೆ ಬನ್ನಿ
ಕೂ ಹು ಕೂ ಹು
ಕೂ ಹು ಕೂ ಹು
ಕೇಳು ಕೇಳು
  ಬನದ ರೂಹು ॥

ಮಲ್ಲಿಕಾ : ಬಂದೆ ಬಂದೆ ತಂದೆ ತಂದೆ

ಇಂದೆ ಬಿರಿದ ಮಲ್ಲಿಗೆ
  ಇದೇ ಬಿರಿದ ಮಲ್ಲಿಗೆ

ಮಗಮಗಿಸುವ ಮಲ್ಲಿಗೆ
ಝುಗಝುಗಿಸುವ ಮಲ್ಲಿಗೆ
ಬಗೆ ತಣಿಸುವ ಮಲ್ಲಿಗೆ
ಹೇಳು ಸಖಿ ನಾದ ಸುಖಿ
ಕರೆದೆ ನನ್ನನೆಲ್ಲಿಗೆ? ॥

ಕೋಕಿಲ : ವನದದೇವಿ ವನದರಾಜ
ಪ್ರಣಯಪೂಜೆ ಪ್ರಿಯ ಸಖಿ
ಪ್ರಣಯ ಪೂಜೆ ಪ್ರಿಯ ಸಖಿ

ಮಲ್ಲಿಕಾ : ಇಳೆಯ ಹಿಗ್ಗೆ ಬುಗ್ಗೆಯಾಗಿ
ಬಂತು ಹಾಡು ಗಾಯಕಿ ॥

ಕೋಕಿಲ : ಗಾಳಿಯಲ್ಲಿ ತೂಗಿಬಾಗಿ
ಮಣಿದು ಮಣಿದು ಪ್ರಿಯಸಖಿ
ಮಣಿದು ಮಣಿದು ಪ್ರಿಯಸಖಿ
ಲಲಿತಲಾಸ್ಯವಾಡುಬಾರೆ
ಓ ಲತಾ ನರ್ತಕಿ ॥

ಕಮಲ : ನಾನು ಅರಳಿ ಅಮೃತಕಲಶ-
ವಾಗಿ ನಿಲುವೆ ಮಲ್ಲಿಗೆ
ನಿಮ್ಮ ನಿಮ್ಮ ಹೃದಯ ಸುಧೆಯ
ಹನಿಸಿರಲ್ಲಿ ಮೆಲ್ಲಗೆ ॥
ನಮ್ಮ ಒಡೆಯ ಒಡತಿಯಿಂದು
ಬೆರೆವ ದಿನದ ಕಾಣಿಕೆ
ನನ್ನ ನಿನ್ನ ಜನ್ಮ ಸಫಲ
ತ್ಯಾಗದಲ್ಲೆ ಮಲ್ಲಿಕೆ ॥

ಮಧುಕರ : ಜಯವೆನ್ನಿರಿ ಜಯವೆನ್ನಿರಿ
ವಾಸಂತಿಯ ದೊರೆಗೆ
ಮಂಗಳಕರ ಧರೆಗೆ
ನಮ್ಮೆಲ್ಲರ ಸಿರಿಗೆ
ಭುವಿಜೀವನ ವನನಾಥಗೆ
ಚಿರಯೌವನದಾತಗೆ
ಆನಂದದ ದೂತಗೆ
ಮಧುರಸ ಸಂಪ್ರೀತಗೆ
ಜಯವೆನ್ನಿರಿ.......... ॥

ಕತೆಗಾರ : ಇತ್ತ ಬನ್ನಿ, ವಾಸಂತಿಯ ವಿರಹಗಾನವನ್ನಷ್ಟು ಕೇಳಿ:– ॥

ವಾಸಂತಿ : ನಿನಗಾಗಿ ಬಗೆಮಾಗಿ
ನಿಂತಿಹೆನು ನಲ್ಲ
ಲತೆಗಳಲಿ ತಲೆಬಾಗಿ
ನೋಂತಿಹೆನು ನಲ್ಲ ॥
ಎದೆಯ ವಿಕಲ ಮುಕುಲಮಾಯ್ತು
ಹೃದಯ ಕಂಪ ಸಂಪಿಗೆ
ಬಗೆಯ ಬಯಕೆ ಭೃಂಗವಾಯ್ತು
ನಿನ್ನ ಉಸಿರ ಕಂಪಿಗೆ ॥
ಚಿರಪ್ರತೀಕ್ಷೆ ಪಕ್ಷಿಯಾಯ್ತು
ದಿಕ್ಕುದೆಸೆಯ ಶೋಧಿಸೆ
ಮದನ ವ್ಯಥೆಯೆ ನದಿಯು ಆಯ್ತು
ಹಗಲಿರುಳೂ ರೋದಿಸೆ ॥
ಪ್ರೀತಿಯಾಯ್ತು ಕೇತಕೀ
ಗರಗಸದೊಲು ಕೊರೆಯಲು

ವ್ಯಾಕುಲವೇ ಕೋಕಿಲಾಯ್ತು
ನಿನ್ನ ಕೂಗಿ ಕರೆಯಲು ॥
ಓ ಪ್ರಿಯತಮ ಸುಂದರತಮ
ಏಕೆನ್ನನು ಮರೆವೆ?
ಕೆಲಕಾಲವೆ ಕೆಲೆದಾಡುತ
ಬಹುಕಾಲವು ತೊರೆವೆ? ॥

ಕೋಕಿಲ : ಅಹುದು ದೊರೆಯೆ ಬನದ ಸಿರಿಯೆ
ಯಾತಕಿವಳ ತೊರೆವೆ?
ಹಾಡಲೆಂದೆ ಹುಟ್ಟಿದೆನಗೆ
ಮೌನವ್ರತವ ತರುವೆ?
ವರುಷಕೆರಡು ಮಾಸ ಮಾತ್ರ
ನಮ್ಮ ಬಳಿಗೆ ಬರುವೆ
ಉಳಿದ ದಿನಗಳಲ್ಲಿ ನಮ್ಮ
ಇರವದೊಂದು ಇರವೆ?

ವಸಂತ : ನನ್ನೆದೆಯ ನೋವುಗಳ ನಾನೆ ಬಲ್ಲೆನು ನಲ್ಲೆ
ನನಗಿಷ್ಟವೇ ನಿನ್ನನಗಲಿ ಬಾಳುವುದು?
ನನ್ನ ನರನಾಡಿಯಲಿ ಜೀವ ಜೀವಾಳದಲಿ
ಬೆರೆತವಳ ವಿರಹವನದೆಂತು ತಾಳುವುದು?
ನನ್ನ ನಿಟ್ಟುಸಿರುಗಳೆ ಬಿರುಗಾಳಿಯಾಗುವುವು
ರಭಸದಲಿ ನುಗ್ಗುವುವು ನಿನ್ನನರಸಿ
ನನ್ನ ದುಃಖಾಶ್ರುಗಳೆ ಮಳೆಯಾಗಿ ಸುರಿಯುವುವು
ನಿನ್ನ ತನುಸಂಸ್ಪರ್ಶಕಾಗಿ ಹಾರೈಸಿ ॥
ನನ್ನ ಬಡಬಡಿಕೆಯೇ ಗುಡುಗಾಗಿ ಕೇಳುವುದು
ದುಃಸ್ವಪ್ನ ಕಾಣಿಸಲು ನಿನ್ನ ಬಗ್ಗೆ

ನನ್ನೆದೆಯ ವ್ಯಾಕುಲವದುಲ್ಕೆಯಾಗಿಳಿಯುವುದು
ಧಗಧಗಿಸೆ ಒಳಗುರಿವ ಬೇಗುದಿಯ ಬುಗ್ಗೆ ॥

ವಾಸಂತಿ : ಒಂದು ಕರದಿ ಪ್ರೇಮವಿತ್ತು
ಒಂದು ಕರದಿ ವಿರಹವಿತ್ತು
ಯಾವ ಗುರಿಯು ಯಾವ ಗೊತ್ತು?

ವಸಂತ : ಯಾರು ಬಲ್ಲರವನ ಜಿತ್ತು?

ವಾಸಂತಿ : ಅಲ್ಲ ಬಾಳು ಅಲ್ಲ ಮೃತ್ಯು
ಯಾವ ಫಲವು ಪ್ರೇಮವಿತ್ತು?

ವಸಂತ : ಯಾರು ಬಲ್ಲರವನ ಚಿತ್ತು

ವಾಸಂತಿ : ಏನು ಚಿತ್ತೊ ನಾವು ಮಾತ್ರ
ಚಿರವಿಯೋಗಿಯಾದೆವು!

ವಸಂತ : ದೈವದಾಟದಿಂದ ಅಕಟ
ಕ್ಷಣಿಕ ಭೋಗಿಯಾದೆವು!

ಕವಿ : ನೀವು ಸಹಿತ ನಲುಮೆಗಿಂಥ
ಸ್ವಾರ್ಥಪರ ಅಪಾರ್ಥವ
ಕೊಟ್ಟು ತರಲು ಬಹುದೆ ಭುವಿಯ
ಬಾಳಿಗೇ ಅನರ್ಥವ?
ವರುಷವರುಷ ಬರುವ ವಿರಹ–
ದಿಂದ ಸಕಲ ಲೋಕಕೆ
ಲೇಸ ತರುವ ನಿಮ್ಮ ಪ್ರೇಮ
ಧನ್ಯ! ಶೋಕವೇತಕೆ?
ಬೇಡಿ ಕಾಡಿ ಫಲವ ಬಯಸಿ
ಪತಿತವಹುದೆ ಪ್ರೇಮವು?

ರಾಗವಲ್ಲ ತ್ಯಾಗಯೋಗ
ಭೋಗರಹಿತ ಪ್ರೇಮವು!
ನಿಮ್ಮ ಹೃದಯ ವೇದನಾ
ಜಗದ ಜೀವ, ಚೇತನಾ
ಮಿಲನಕಿಂತ ವಿರಹ ಮಧುರ
ಇರಲಿ ಪ್ರೀತಿಯಾತನಾ!

ವಸಂತ ವಾಸಂತಿ : ಇರಲಿ ಇರಲಿ ಚಿರವಿಯೋಗ
ತರಲಿ ತರಲಿ ತಿರೆಗೆ ಸೊಬಗ
ಹೃದಯ ವ್ಯಥೆಯೆ ಹೊರಗೆ ಹರುಷ-
ವಾಗಿ ಹರಿಯಲಿ!
ನಮ್ಮ ದುಃಖ ಜಗಕೆ ಸೌಖ್ಯ-
ವಾಗಿ ಸುರಿಯಲಿ!
ಜಗವು ಚಿಗಿಯಲಿ
ಹೊಗರು ನೆಗೆಯಲಿ
ಸೊಗವು ಚಿಮ್ಮಲಿ
ನಗೆಯು ಹೊಮ್ಮಲಿ ॥ ಇರಲಿ ಇರಲಿ......

ಸಖಿಯರಿಂದ ಕೋಲಾಟ : ಮಧುಮಯ ವನ
ಮುದಮಯ ಮನ
ಮದಮಯವೀ ಜೀವನ
ಸುಧಾಪೂರ್ಣ ಜೀವನ
ಬಾರೆ ಸಖಿ ಚಂದ್ರಮುಖಿ
ಮಾಡು ನವ್ಯನರ್ತನ
ತೋಂತ ತಜನ
ತೋಂತ ತಜನ
ಝುನನ ಝುನನ ಝುಣಝುಣ

ನಾಟ್ಯವಾಡು

ಗೀತ ಹಾಡು

ತನನ ತನನ ತನನನ ॥

ಒಬ್ಬ ಸಖಿ : ಆಯ್ತು ಅಮೃತ ಸಿಂಚನಾ

ಅಹಹ ರೋಮಾಂಚನಾ

ಏನು ನಿನ್ನ ವಾಂಛನಾ

ಹೇಳು, ಬೇಡ ವಂಚನಾ॥

ಇನ್ನೊಬ್ಬ ಸಖಿ : ಜೀವವಾಯ್ತು ತರಹರ

ಕಟ್ಟು ಕಟ್ಟು ನೂಪುರ

ವಾದ್ಯ ನುಡಿಸು ಸುಮಧುರ

ಗೆಳತಿ ಕುಣಿವ ವಾಂಛನಾ

ಅಹಹ ರೋಮಾಂಚನಾ

ಆಯ್ತು ಅಮೃತ ಸಿಂಚನಾ ॥

ಎಲ್ಲರೂ : ಕುಣಿಯುತಿದೆ ಹಿಮಮಣಿಯ ಮೇಲಿದೊ

ಬಾಲಸೂರ್ಯನ ಕಿರಣವು

ಬಾಲಸೂರ್ಯನ ಕಿರಣವು

ಕುಣಿಯುತಿದೆ ಮನ್ಮನದ ಮೇಲಿದೊ

ಪ್ರಿಯನ ಸ್ವಪ್ನದ ಹರಿಣವು

ಸ್ವಪ್ನಹರಿಣದ ಚರಣವು

ಕುಣಿಯುತಿವೆ ಬುವಿ ಬಯಲು ಬಾನಲಿ

ಬೆಳಕು ಗಾಳಿಯು ಗಂಧವು

ಬೆಳಕು ಗಾಳಿಯು ಗಂಧವು

ಕುಣಿಯುತಿದೆ ಬಗೆವಾಡದಲಿ ಸಖಿ

ಪ್ರಣಯ ಕಂಪನ ಸ್ಪಂದವು

ಪ್ರಣಯ ಕಂಪನ ಸ್ಪಂದವು
ಹಾಡು ಹಾಡೆಲೆ ಬೇಡು ಬೇಡೆಲೆ
ಮಧುಮಹೋತ್ಸವ ಜೀವನ
ಮಧು ಮಹೋತ್ಸವ ಜೀವನ
ಕುಣಿದು ಮಣಿಯುತ ಮಣಿದು ಕುಣಿಯುತ
ಸರ್ವಜನ ಸಂಜೀವನ
ಸರ್ವಸುಖ ಸಂಜೀವನ ॥

ಮೋಹನ ಮಂತ್ರ

ಗಾಂಧಿ ಜಯಂತಿಯ ದಿನ ಸನಾತನ ವಿನೂತನಗಳ ಸಂಗಮದಂತಿದ್ದ ಮನೆಯೊಂದರಲ್ಲಿ ನಡೆದ ಚರ್ಚೆಯೊಂದರ ಚಿತ್ರವಿದು. ಹಳೆಯ ತಲೆಮಾರಿನ ಅಜ್ಜ ಆರ್ಯಕೀರ್ತಿ; ಅವನ ಮಗ ಸತ್ಯಪಾಲ, ಸೊಸೆ ಸತ್ಯಭಾಮೆಯರು ಇಂದಿನ ತಲೆಮಾರಿನವರು; ಅವನ ಮೊಮ್ಮಗ ಮಧುಕರ, ಮೊಮ್ಮಗಳು ಮಧುವತಿಯರು ಹೊಸ ತಲೆಮಾರಿನವರು.

ಆರ್ಯಕೀರ್ತಿ : ಇಂದು ರಾಷ್ಟ್ರದ ತಂದೆ ಗಾಂಧಿಯುದಿಸಿದ ದಿನವು
ಯುಗಯುಗದ ಇತಿಹಾಸದಲ್ಲೆ ದೈವೀ ಕ್ಷಣವು
ನವಿರೇಳುತಿದೆ ತನುವು ಹೊರೆಯೇರುತಿದೆ ಮನವು
ಹಿಗ್ಗಿ ಹಾಡುತಲಿಹುದು ಧಾರುಣಿಯ ಜನವು ॥
ಭಾರತಕುಲೋತ್ತುಂಗ ಸತ್ಯೇಂದ್ರ ಪರಿಪೂತ
ಸ್ವಾತಂತ್ರ್ಯ ಶಿಲ್ಪಿ ನಲ್ಮೆಯ ದೇವದೂತ
ಪತಿತ ಮಾನವಕುಲಕೆ ಪಥವ ತೋರಿಸಿದಾಗ
ಹರಿಜನರ ಗಿರಿಜನರ ಭಾಗ್ಯವಿಧಾತ ॥

ಸತ್ಯಭಾಮೆ : ನಮೋ ಬಾಪು ವಿಶ್ವದೀಪ
ನಮೋ ಶಾಂತಿರೂಪ
ಇಳೆಯ ತಾಪ ಕಳೆದ ಬಾಪು
ನಮೋ ಧೂತಪಾಪ॥

ಸತ್ಯಪಾಲ : ಮೃತರಾಷ್ಟ್ರದಲಿ ಮತ್ತೆ ಜೀವಕಳೆಯನು ತುಂಬಿ
ಭೀರುಗಳ ವೀರರನು ಮಾಡಿದಾತ
ದಾಸ್ಯಪಂಕದಿ ನವ್ಯ ಸ್ವಾತಂತ್ರ್ಯ ಕಾಮನೆಯ
ಕಮಲಕುಟ್ಮಲವನ್ನು ಬಿರಿಸಿದಾತ
ಸತ್ಯ ಪ್ರೇಮದ ಬಲದಿ ಸಾಮ್ರಾಜ್ಯಶಕ್ತಿಯನು
ಜಯಿಸಿ ಸ್ವಾಧೀನತೆಯ ಗಳಿಸಿದಾತ
ಹಳ್ಳಿಗರ ಕಾರ್ಮಿಕರ ಕೃಷಿಜನರ ರೋಗಿಗಳ
ಹಿತದೊಳಾಸಕ್ತಿಯನು ಬೆಳೆಸಿದಾತ
ಜಾತಿವಾದದ ಭೂತಚೇಷ್ಟೆಗಳನಡಗಿಸಿದ
ಮಾಂತ್ರಿಕನು ಪರಿಶುದ್ಧ ಪ್ರೇಮರೂಪ
ವಿಶ್ವವಂದಿತನಾಗಿ ಭುವಿಜನದ ಭಾಷ್ಪಗಳ
ಕಾಣಿಕೆಯ ಕೈಕೊಂಡ ವಿಶ್ವದೀಪ!

ಸತ್ಯಭಾಮೆ : ಜಯತು ಜಯತು ಗಾಂಧಿಗೆ

ನಮ್ಮ ನಾಡ ತಂದೆಗೆ ॥

ಸಪ್ತಮಹಾವ್ರತಗಳನ್ನು ಕಲಿಸಿದಾ ಪ್ರವಾದಿಗೆ

ಹೆಣ್ಣುತನಕೆ ಕಣ್ಣನಿತ್ತ ನಮ್ಮ ನ್ಯಾಯವಾದಿಗೆ

ತ್ಯಾಗಸೇವೆ ಶಾಂತಿ ಸಮತೆ ಸತ್ಯಶಿವದ ಹಾದಿಗೆ

ಸರ್ವರನ್ನು ಕರೆದುಕೊಂಡ ದಿವ್ಯಧರ್ಮಬೋಧಿಗೆ॥

ಸಪ್ತಶರಧಿಯಲ್ಲಿ ಅವನ ಚಿತೆಯಭಸ್ಮ ಕೂಡಿದೆ

ಲೋಕದೆಲ್ಲ ಮೂಕ ಜನವು ಶೋಕ ಗೀತೆ ಹಾಡಿದೆ

ನೂರು ನಾಡು ಜಾತಿಗಳನು ಒಂದೆ ಬಳಗ ಮಾಡಿದೆ

ಗುಂಡು ಹಾಕಿದವಗೆ ನಮಿಸಿ ರಾಮನಾಮ ಹಾಡಿದೆ ॥

ನಮ್ಮ ನೂರು ದೋಷಗಳಿಗೆ ನಿನ್ನ ನೀನೆ ನವೆಸಿದೆ

ನಮ್ಮ ಮೇಲ್ಮೆಗಾಗಿ ನಿಮಿಷ ನಿಮಿಷ ತನುವ ಸವೆಸಿದೆ

ವೈರಿಗಳಿಗು ಸಕಲಶುಭವ ಸರ್ವಸುಖವ ಬಯಸಿದೆ

ಕೊನೆಗೆ ನಮ್ಮ ನಾಡ ಬೇಡಿ ಕಡಿದು ಶುಭವ ಗೆಲಿಸಿದೆ

ಮೂವರೂ : ಯುಗಪುರುಷ ಗಾಂಧಿಯೆ

ಜನವಿನುತ ಗಾಂಧಿಯೆ

ಹೊಸಬಾಳ ನಾಂದಿಯೆ

ಜಯ ಜಯತು ಗಾಂಧಿಯೆ

ಓ ವಿಶ್ವ ಬಂಧುವೆ

ಓ ನಾಡ ತಂದೆಯೆ

ಕಾರುಣ್ಯ ಸಿಂಧುವೆ

ಜಯಜಯತು ಗಾಂಧಿಯೆ

ಮಧುಕರ : ಮಡಿದ ಗಾಂಧಿಗೆ ಜೊಳ್ಳು ನುಡಿಯ ಪೂಜೆಯ ಸಲಿಸಿ

ಕೃತಕೃತ್ಯರಾಗುವಿರ ತಾಯ್ತಂದೆಗಳಿರ?

ಗಾಂಧಿ ಚಿತ್ರಕೆ ನಮಿಸಿ ಗಾಂಧಿ ತತ್ತ್ವವ ಮರೆದು
ಗಾಂಧಿ ಭಕ್ತಿಯ ಮೆರೆದು ಧನ್ಯರಾಗುವಿರ?

ಸತ್ಯಪಾಲ : ನಮ್ಮ ನಡೆನುಡಿಗಳಲಿ ನೀನಾವ ಭೇದವನು
ಕಂಡೆ ಉಂಡಾಡಿಯೇ ಬಂಡುಗಾರ?
ಗಾಂಧೀಜಿ ದರ್ಶನದಿ ವಿಶ್ವಾಸವಿಲ್ಲದೆಯೆ
ಬಾಪುವಿನ ಭಕ್ತರನು ಜರೆವ ಕ್ರೂರ!

ಮಧುಕರ : ಗೋಡಸೆಯು ಕೊಂದದ್ದು ಒಂದೆ ಸಲ ಗಾಂಧಿಯನು
ನಿತ್ಯವೂ ಅವನಾತ್ಮ ಕೊಲ್ಲುವಿರಿ ನೀವು!
ಬಾಪು ಭಕ್ತಿಯ ನಟಿಸಿ ಬಾಪುವಿನ ಹೆಸರಿನಲೆ
ಶೋಷಣೆಯ ಸತ್ರವನು ನಡೆಸಿಹಿರಿ ನೀವು!
ಹಸಿದ ಜೀವಿಗಳಸುವ ತೊರೆಯಲನುವಾದರೂ
ಕಳ್ಳಪೇಟೆಯ ಕಾಳು ಹೊರಗೆ ಬರದು!
ಕೈಮಗ್ಗ ಗಿರಣಿಗಳು ಹಗಲಿರುಳು ಬಟ್ಟೆಯನು
ನೆಯ್ದರೂ ದುಡಿವವರ ಮೈಯು ಬರಿದು!
ಇಂದಿಗೂ ಹರಿಜನರ ಮುಟ್ಟಲಿಕೆ ಹಿಂದೆಗೆವ
ಅಜ್ಜ ಹಾಡುತಲಿಹನು ಗಾಂಧಿಸ್ತುತಿಯ!
ಇಂದಿಗೂ ಕಾರ್ಮಿಕರ ಪಾಲುಗಾರಿಕೆ ಒಪ್ಪ-
ದಂಥ ಅಪ್ಪನು ಗೈವ ಗಾಂಧಿ-ನುತಿಯ!
ಇಂದಿಗೂ ಮಡಿವಂತಿಕೆಯ ಬಿಡದ ತಾಯಿಯೇ
ಯಾವ ಬಾಯಲಿ ಗೈವೆ ಗಾಂಧಿಸ್ತವನ?
ಅನುಸರಿಸದಲೆ ಅವನ ತತ್ತ್ವಗಳ ಏಕಿಂತು
ದುರುಪಯೋಗವ ಮಾಡಿಕೊಳುವಿರವನ?

ಸತ್ಯಪಾಲ : ನಮಗೆ ಪೂರ್ಣಭಕ್ತರೆಂಬ
ಹೆಮ್ಮೆ ಹೇವವಿಲ್ಲವು

ನಮ್ಮದಿದು ವಿಕಾಸಮಾರ್ಗ
ಹಿಂಸೆಯಾಟವಲ್ಲವು
ರಕ್ತ ಮೂಲ ಕ್ರಾಂತಿ ಭ್ರಾಂತಿ
ಗಾಂಧೀವಾದವಲ್ಲವು
ಹೃದಯತಿದ್ದೆ ಭಾವಶುದ್ಧಿ
ಸುಲಭಸಾಧ್ಯವೆಲ್ಲವು

ಮಧುಮತಿ : ಕ್ರಿಸ್ತ ಕೃಷ್ಣ ಬುದ್ಧ ಬಸವ
ಬಂದು ಹೋದರೆನಿಬರು
ಸಂತ ಸಾಧು ಭಕ್ತ ಮುಕ್ತ-
ರಾಗಿ ಹೋದರೆನಿಬರು
ಎನಿತು ಜನರ ಹೃದಯಗಳನು
ತಿದ್ದಿ ಹೋದರಾ ಜನ?
ಗಾಂಧಿ ಬದುಕಿದಾಗ ಸಹಿತ
ಶುದ್ಧರಾದರೆನಿತು ಜನ?
ಅವನ ಕಣ್ಣ ಮುಂದೆ ಹಿಂಸೆ
ಕಾಳಸಂತೆ ಮೋಸವು
ನಡೆಯಲಿಲ್ಲೆ? ಉರಿಯಲಿಲ್ಲೆ
ದಂಗೆಯಿಂದ ದೇಶವು?

ಮಧುಕರ : ಮನ ಪರಿವರ್ತಿಸಿ ಯುಗ ಪರಿವರ್ತನೆ
ಮಾಡುವೆವೆಂಬುದು ಮೂಢತನ!
ಆರ್ಥಿಕ ವಿಷಮತೆ ಸ್ವಾರ್ಥದ ವಿಷಲತೆ
ತೊಲಗಿಸಲಾರದು ಹೇಡಿತನ!
ಕ್ರಾಂತಿಯ ಕಾಳಿಯು ಕರೆಯುತಲಿಹಳದೊ
ಕೆಂಪು ನಾಲಗೆಯ ಚಾಚುತಲಿ!

ಉಳಿದ ವಾದಗಳು ಓಡಿಹೋಗುತಿವೆ
ತಮ್ಮ ಅಬಲತೆಗೆ ನಾಚುತಲಿ!
ಬನ್ನಿರಿ ಬನ್ನಿರಿ ಸ್ವಾಗತ ಕೋರಲು
ಕೆಂಪುಕ್ರಾಂತಿಯೀ ದೇವತೆಗೆ!
ಅರ್ಥ ಮೂಲವದು ಮಾನವಕುಲವಿದು
ಆರ್ಥಿಕ ಸಮತೆಯ ಮೂರುತಿಗೆ!

ಸತ್ಯಪಾಲ : ಹೊಟ್ಟೆಗಾಗಿಯೆ ಗೇಣು ಬಟ್ಟೆಗಾಗಿಯೆ ಎಲ್ಲ
ರಟ್ಟೆಗಳು ದುಡಿಯುವುದು ನಿಜವು ಸುತನೆ
ಹೊಟ್ಟೆಯೊಂದನೆ ನಂಬಿ ಕೆಟ್ಟು ಹೋಗಿದೆ ಲೋಕ
ಬುದ್ಧಿ ಹೃದಯಕೆ ಬೆಲೆಯೆ ಇಲ್ಲವೆ ಸುತನೆ?
"ಸಮವೊ ಪ್ರಪಾ ಸಹ ಅನ್ನ ಭಾಗಃ"
ಎಂಬ ಉಕ್ತಿಯೆ ನಮ್ಮ ಧ್ಯೇಯವಾಕ್ಯ
ಅದಕಾಗಿ ದುಡಿಯೋಣ ಸಫಲತೆಯ ಪಡೆಯೋಣ
ಕೆಡದಿರಲಿ ಅದರಲ್ಲಿ ಸೌಹಾರ್ದಸಖ್ಯ
ಬುವಿ-ಬಾಳ-ಬೀಣೆಯಿಂದಿಂದು ಕ್ರಂದನ ಸ್ವರವೆ
ಬರುತಲಿದೆ-ನೊಂದವರ ಚೀತ್ಕಾರ ಧ್ವನಿಯು!
ಆದರಿದು ಶಾಶ್ವತವೆ? ಇಂದಿಲ್ಲ ನಾಳೆ ಸಿರಿ-
ಸಂಪದವು ಬಂದೀತು-ಸಂತಸದ ಕೆನೆಯು!
ಅರ್ಥಕಾಮಗಳಾಗ ಜೀವಲತೆಗಾಗುವುವೆ
ನೆಲಜಲವು ಜೀವಕಣ ಬೆಳಕುಗಾಳಿ?
ಆಗ ಜೀವಿತವನ್ನು ಮೇಲುಮೇಲಕೆ ಒಯ್ಯ-
ಬಲ್ಲುದೊಂದೇ-ಅದುವೆ ಗಾಂಧೀಪ್ರಣಾಲಿ!
ನೆನಪಿರಲಿ ನಮ್ಮಲ್ಲಿ ಧರ್ಮಾರ್ಥ ಕಾಮಮೋ
ಕ್ಷಗಳೆಂಬ ನಾಲ್ಮೊಗದ ಪುರುಷಾರ್ಥವಿಹುದು

ಧರ್ಮದಿಂದಲಿ ಕಾಮ ಅರ್ಥ ಭೋಗವಗಳಿಸಿ
ಮೋಕ್ಷಪಡೆವುದೆ ಬಾಳ ಪರಮಾರ್ಥವಿಹುದು.

ಮಧುಕರ : ದೇವಧರ್ಮ ಬುದ್ಧಿ ಹೃದಯ
ಹೊಟ್ಟೆ ತುಂಬಿದವರಿಗೆ
ಧರ್ಮ ವಿದ್ಯೆ ಕಲೆಗು ಕೂಡ
ಅರ್ಥಬೇಕು ಮೊದಲಿಗೆ
ಧರೆಯ ಸುಖದ ಭೋಗವೆಲ್ಲ
ಧನಿಕ ಜನರ ಪಾಲಿಗೆ
ತತ್ವ ನೀತಿ ನಿಯತಿ ನಿಯಮ
ಹಸಿದ ಒಡಲ ಕೂಲಿಗೆ!
ಸಿರಿಯ ಹೆಚ್ಚಿಸುವುದು, ಧರೆಯ
ಸಕಲ ಸುಖವ ಸವಿವುದು!
ಟೊಳ್ಳು ತತ್ವ ಜೊಳ್ಳು ನೀತಿ-
ಗಾಗಿ ಏಕೆ ನವೆವುದು?

ಮಧುಮತಿ : ಸತ್ಯವೊಂದೇ-ಸಿರಿಯು!
ಅದುವೆ ಬಾಳಿನ ಗುರಿಯು!
ಅದುವೆ ಸೌಖ್ಯದ ಸರಿಯು
ಚೆಲುವು ನನ್ನಿಯ ಝುರಿಯು
ಅರ್ಥ ಕಾಮವೆ ಬಾಳು
ಉಳಿದುದೆಲ್ಲವು ಗೋಳು
ಮೊದಲು ದೊರೆಯಲಿ ಕೂಳು
ಆಗ ತತ್ವವ ಹೇಳು!

ಇಬ್ಬರೂ : ಮಾನಸಶಾಸ್ತ್ರದ ಮೂಲ ಸೂತ್ರವಿದು
ಅರ್ಥ ಕಾಮಗಳೆ ಮಾನವನ

ಜೀವನ-ಚಾಲಕ-ಶಕ್ತಿ ದ್ವಯಗಳು
ಉಳಿದುದೆಲ್ಲವೂ ಅಜ್ಞಾನ!

ಸತ್ಯಭಾಮೆ : ಮಾತೃವಾತ್ಸಲ್ಯವನು ನಿರ್ವ್ಯಾಜ ಪ್ರೇಮವನು
ಅಕಲಂಕ ಸ್ನೇಹವನು ಕಾರುಣ್ಯವನ್ನು
ಅರ್ಥಕಾಮದ ಕೇಳಿಯೆಂದು ಹೀಯಾಳಿಸುವೆ
ನಂಬಿ ನಿನ್ನುದ್ರಿಕ್ತ ತಾರುಣ್ಯವನ್ನು!
ವಿಸ್ತೀರ್ಣ ರಾಜ್ಯದಲಿ ಭೋಗ ಸಾಮ್ರಾಜ್ಯದಲಿ
ಮೆರೆಯಲಿಲ್ಲವೆ ಹಿಂದೆ ಭೂವರರು ಮಗುವೆ?
ಅವರು ಭೋಗದ ಬಲದಿ ನೀಗಿದರೆ ತೃಷ್ಣೆಯನು
ರಾಗ ಅನುರಾಗಕ್ಕೆ ಸಮನಲ್ಲ ಮಗುವೆ!
ಮಾನವನ ಪಶುವೃತ್ತಿಯಿಂದ ಮನುಜಗೆ ಮುಕ್ತಿ-
ಯಿಲ್ಲ, ಬಾಳಿನ ಬೆಲೆಗಳಿಂದ ಕಂದ!
ವ್ಯಕ್ತಿಯಂತಃಸತ್ವವರಳಿಸದೆ ಹೊಂದಿಸಿದ
ಯೋಜನೆಯು ಫಲಿಸುವುದೆ-ಎನ್ನ ಆನಂದ?
ಭೋಗಲಾಲಸೆಯೊಡನೆ ತ್ಯಾಗಯೋಗದ ಅಂಶ
ಬೆರೆತಿಹುದು ಮಾನವನ ಮನದ ಕೊನೆಯಲ್ಲಿ
ಅದನು ಕುಂದಿಸಬೇಡ, ಅದುವೆ ನಿರ್ಮಲ ಪ್ರೇಮ,
ಸ್ನೇಹ, ಬಲಿದಾನಗಳ ಕೊನರಿಸುವುದಿಲ್ಲಿ!
ಕೂಳ ಹೋರಾಟದಲಿ ಬಾಳ ಬೆಲೆಗಳನೆಲ್ಲ
ಭಸ್ಮವಾಗಿಸಬೇಡ, ವೀರಪುತ್ರ!
ಬಾಳ ಹೋರಾಟದೀ ಕಾಳಸರ್ಪದ ಹೆಡೆಯೊ-
ಳಿಹುದು ಸೌಹಾರ್ದದೀ ಅನರ್ಘ್ಯರತ್ನ!
ಇದು ಬಾಪು ಬೋಧಿಸಿದ ಪರಮಾನುಭವಸಾರ

ಇದೆ ಬಾಳ ಸಹಕಾರವನಕುಲಕೆ ಚೈತ್ರ!
ಇದು ಈಗ ನಾಡಿನಲಿ ವಿಫಲವಾಗಿದೆ, ನಿಜವು,
ಇದಕೆ ಹೊಣೆ ಅವನಲ್ಲ–ನಾವು ಪುತ್ರ!
ಎಂಥ ಉನ್ನತ ತತ್ವವಿದ್ದರೇನಾಗುವುದು
ವ್ಯಕ್ತಿ ವ್ಯಕ್ತಿಯು ಅದನು ಅನುಸರಿಸದನಕ?
ನಮ್ಮ ದೋಷದಿ ನಾವು ಅವನ ದರ್ಶನ ವಿಫಲ–
ಗೊಳಿಸಿ ರೇಗಿದರಾಯ್ತೆ ನರಕ ನಾಕ?
ಆತನೊಮ್ಮೆಯು ಖ್ಯಾತಿಭೋಗವಿಭ್ರಮಕಾಗಿ
ನಿಮಿಷ ಸಹ ಬಿಡಲಿಲ್ಲ ಕಠಿನ ಕರ್ತವ್ಯ!
ಬಡವಗಿಂತಲು ಬಡವನಾಗಿ ಗುಡಿಸಲಿನಲ್ಲಿ
ಹರಕು ಚಾಪೆಯ ಮೇಲೆ ದುಡಿದ ಭವ್ಯ!
ನಿರ್ಭಾಗ್ಯ ರೈತನಿಗೆ ಸಿಕ್ಕದೌಷಧ ಸಹಿತ
ಗ್ರಹಿಸಲಿಲ್ಲವ ತನ್ನ ಶುಶ್ರೂಷೆಗಾಗಿ!
ಚಳಿಗಾಳಿ ಮಳೆಯಲ್ಲಿ ಅರ್ಧವಸನವ ಧರಿಸಿ
ತೆಯ್ದ ತನ್ನಿರವನ್ನು ಈ ದೇಶಕಾಗಿ
ಸುಮ್ಮನೇ ಬಿಮ್ಮಿನಲಿ ಹಮ್ಮಿನಲಿ ಈ ಜಗದ
ಪರಮೋಚ್ಚ ಪುರುಷನನು ಬೀಗಳೆಯಬೇಡ
ಅವನ ದಾರಿಯೆ ಸರಿಯು, ಅದುವೆ ಸೃಷ್ಟಿಯ ಗುರಿಯು
ಬೇರೆ ದಾರಿಯ ಮಗನೆ ತುಳಿಯ ಬೇಡ!

ಮಧುಕರ : ಕಣ್ಣು ತೆರೆಸಿದೆ ಮಾತೆ ಮಾಂಗಲ್ಯದಾತೆ!
ಮೋಹನನ ಮಂತ್ರವನು ತಿಳಿಸಿ ಮೌಢ್ಯವನಳಿಸಿ
ದುರ್ಮಾರ್ಗಗಾಮಿತ್ವ ಬಿಡಿಸಿ ತಿಳಿ ಬೆಳೆಸಿ
ಸುಮತಿ ಮಮತೆಯನುಣಿಸಿ ಸಮತೆಯನು ಅಳವಡಿಸಿ
ಅವನ ಅಡಿದಾವರೆಗೆ ಸಿರ ಬಾಗಿಸಿ–
ಕಣ್ಣು ತೆರೆಸಿದೆ ಮಾತೆ ಮಾಂಗಲ್ಯದಾತೆ!

ಮಧುಮತಿ : ಮೋಹನನ ಮಂತ್ರವೇ ತಾರಕವು ಜಗಕೆಲ್ಲ
ಬೇರೆ ವಾದವು ಹೊಲ್ಲ ಬೇರೆ ಮಾರ್ಗವೆ ಇಲ್ಲ ॥
ಪಾವನಾತ್ಮಕರಾಗಿ ಸೇವೆಗೈವುದೆ ಮಂತ್ರ
ತ್ಯಾಗ ತಪ ಪ್ರೀತಿ ಶಮೆ ಸಂಯಮನ ತಂತ್ರ
ಪ್ರತಿ ವ್ಯಕ್ತಿ ಸೋದರ-ಸಮಾನ-ಸರ್ವಸ್ವತಂತ್ರ
ಸತ್ಯಪ್ರೀತಿಯ ಪುತ್ರನಲ್ತು ಬರಿಯಂತ್ರ ॥
ಆಸುರೀ ಶಕ್ತಿಗಳ ಸತ್ಯದಿಂದಲಿ ಜಯಿಸು
ವೈರ ದ್ವೇಷಗಳನ್ನು ಪ್ರೇಮದಿಂ ಜಯಿಸು
ಉಚ್ಚಧ್ಯೇಯಕೆ ತಕ್ಕ ಸಾಧನವನಾಶ್ರಯಿಸು
ಕರ್ತವ್ಯವನು ಮಾಡಿ ಬಾಧ್ಯತೆಯ ಗಳಿಸು
ಎಲ್ಲರೂ : ನಿತ್ಯ ವಿಕಸನ ಸೃಜನ ಶೀಲ ಜೀವನವ
ಪಡೆಯೆ ನಿತ್ಯದಿ ಪಠಿಸು ಮೋಹನನ ಮಂತ್ರವ

ಮಾಯಾ ಕೋಲಾಹಲ

ಚಾಮರಸನನ 'ಪ್ರಭುಲಿಂಗ ಲೀಲೆ' ಯಲ್ಲಿ ಪ್ರಭು ಮಾಯೆಯನ್ನು ಜಯಿಸಿದ ಪ್ರಸಂಗವು ಅತ್ಯಂತ ರಮಣೀಯವಾದುದು. ಅದರ ನಾಟಕೀಯತೆ ನಿತಾಂತ ಸುಂದರವಾದುದು. ಅದನ್ನು ಆಧರಿಸಿ ಬರೆದ ಇದರಲ್ಲಿ ಲೇಶವಾದರೂ ಲೇಸಿದ್ದರೆ ಅದು ಮೀಸಲು ಚಾಮರಸನಿಗೆ.

ಕೈಲಾಸದಲ್ಲಿ ಭಗವಾನ್ ಶಂಕರನ ಒಡ್ಡೋಲಗ

ದೇವಗಣಗಳ ವೃಂದಗೀತ

ಜಯ ಜಯ ಜಯ ಜಗದೀಶ್ವರ ಓ ಪರಾತ್ಪರ

ಅಭಯಂಕರ ಶಿವಶಂಕರ ಪಾರ್ವತೀಶ್ವರ ॥ ಜಯ ಜಯ...

ಗಂಗಾಧರ ಗೌರೀವರ ಸರ್ವಸುಖಕರ

ಕರುಣಾಕರ ಚರ್ಮಾಂಬರ ತ್ರಿಪುರ ಸಂಹರ ॥ ಜಯ ಜಯ...

ಶಿವಸುಂದರ ಹಿಮಮಂದಿರ ಕಾಲಕಂಧರ

ಮಂಗಲಕರ ರಕ್ಷಿಸು ಹರ ಚಂದ್ರಶೇಖರ ॥ ಜಯ ಜಯ...

ಹರ ಹರ ಮಹಾದೇವ, ಹರಹರ ಮಹಾದೇವ

ಹರ ಹರ ಹರ ಮಹಾದೇವ.........

ನಾಮಘೋಷನಿನಾದ ನಿಂತ ಮೇಲೆ ಮೃದುಹಾಸ್ಯದೊಡನೆ ಹರನಾಸ್ಯವನ್ನು ನೋಡುತ್ತ ಜಗಜ್ಜನನಿ ಪಾರ್ವತಿ ಪ್ರಶ್ನೆ ಹಾಕುವಳು–

ಪಾರ್ವತಿ : ದೇವದೇವ, ನಿನ್ನ ನಾಮ ಸಂಕೀರ್ತನದ ಪುಣ್ಯಪ್ರಭಾವದಿಂದ ನಿನ್ನ ಒಡ್ಡೋಲಗದಲ್ಲಿ ನೆರೆದ ಈ ಘನಮಹಿಮರೆಲ್ಲರೂ ಇನ್ನು ಭವಕ್ಕೆ ಬಾರದೆ ನಿತ್ಯಸುಖಿಗಳಾಗಿರುವರೋ ಇಲ್ಲವೆ ಇವರಿಗೂ ನಿಜ ಸುಖದ ನೆಲೆಯೇ ಇಲ್ಲವೊ?

ಪರಮೇಶ್ವರ : ದೇವಿ, ನಾಮರೂಪಕ್ರಿಯೆಗಳನ್ನು ಗೆಲ್ಲಬಲ್ಲವರ ಹೊರತು ಉಳಿದವರಾರಿಗೂ ನಿತ್ಯ ಸತ್ಯ ಸುಖವು ಸಿಕ್ಕದು. ಅದು ಕಾರಣ ಭೂಲೋಕದಲ್ಲಿ ಮಾನವ ಶರೀರಧಾರಿಗಳಾಗಿ ಜನಿಸಿ ಸಾಧಕರಾಗಿಯೇ ಸತ್ಯವನ್ನರಿತು ನಿತ್ಯಸುಖವನ್ನು ಪಡೆಯಬೇಕಾಗುವುದು

ಪಾರ್ವತಿ : ಭೂಲೋಕದಲ್ಲೀಗ ನಿಜದ ನೆಲೆಯನ್ನು ತೋರುವ ಗುರುವಾರು?

ಪರಮೇಶ್ವರ: ಸುಜ್ಞಾನಿ ನಿರಹಂಕಾರರ ಸುಪುತ್ರನೂ, ನನ್ನ ನಿಜಸ್ವರೂಪನೂ, ಸಕಲ ಮಾಯೆಯನ್ನು ಇಲ್ಲೆನಿಸಿದವನೂ ಆದ ಅಲ್ಲಮನು.

ಪಾರ್ವತಿ : ಅವನೇನು ನಾನರಿಯದ ಅಲ್ಲಮನೆ? ಅವನನ್ನು ಸೋಲಿಸುವುದು ಅದಾವ ಘನವಿಷಯ ಸ್ವಾಮಿ?

ಪರಮೇಶ್ವರ: ಹೇಗೆ ಸೋಲಿಸುವೆ?

ಪಾರ್ವತಿ : ನನ್ನ ತಾಮಸ ಕಳೆಯಾದ ಮಾಯೆಯನ್ನು ಕಳಿಸಿ.

ಪರಮೇಶ್ವರ: ಸಾಧ್ಯವಿಲ್ಲ.

ಪಾರ್ವತಿ : ಸಾಧ್ಯವಿದೆ ಸ್ವಾಮಿ, ನನ್ನ ಮಾಯೆಗೆ ಮರುಳಾಗದವರಿಲ್ಲ.

ಪರಮೇಶ್ವರ: ಅಲ್ಲಮನು ಇದ್ದಾನೆ.

ಪಾರ್ವತಿ : ನೋಡುವೆ

ಪರಮೇಶ್ವರ: ನೋಡಬಹುದು.

ಪಾರ್ವತಿ : ಮಾಯೆ, ಮಾಯೆ!

ಮಾಯೆ : (ಧಾವಿಸಿ ಬಂದು) ಬಂದೆ ತಾಯೆ!

ಝುನನ ಝುನನ ತೋಂತ ತಜನ
ನನ್ನ ಮೃದುಲ ನರ್ತನ
ಲಲಿತ ಲಾಸ್ಯ ನೂತನ
ಸುರರ ನರರ ಜಿಹ್ವೆಯಲ್ಲಿ
ನನ್ನ ನಾಮ ಕೀರ್ತನ!
ನಾನು ಮಾಯೆ ನಾನು ಮೋಡಿ
ನಾನು ಜಗದ ಮೋಹನ
ನಾನು ಪ್ರಣಯ ಸ್ಪಂದನ
ನಾನು ಪಾಶ ನಾನು ಮೋಸ
ನಾನು ರೂಪ ಯೌವನ!
ಬೆಸಸು ತಾಯೆ ಬಂದೆ ಮಾಯೆ
ಏನು ಕರೆದ ಕಾರಣ
ಗೈಯಲಾರ ಮರ್ದನ
ನನ್ನ ಶಕ್ತಿಯುಕ್ತಿ ಭಕ್ತಿ
ಎಲ್ಲ ನಿನಗೆ ಅರ್ಪಣ!

ಪಾರ್ವತಿ : ಮಾಯೆ, ಮರ್ತ್ಯಲೋಕಕ್ಕೆ ಹೋಗು, ನಿನ್ನ ಶಕ್ತಿ ಸರ್ವಸ್ವದೊಡನೆ ಹೋಗು, ನಿನ್ನ ಸಕಲ ಸಮ್ಮೋಹನದೊಡನೆ ಹೋಗು! ಅಲ್ಲಮನ ಮೇಲ್ಮೆಯನ್ನು ಇಲ್ಲೆನಿಸಿ ಬಾ! ಅವನನ್ನು ನಿನ್ನ ದಾಸನನ್ನಾಗಿ ಮಾರ್ಪಡಿಸಿ ನನ್ನ ಶಪಥವನ್ನು ಸಫಲಗೊಳಿಸಿ ಬಾ!

ಮಾಯೆ : ಇದಾವ ಘನಕಾರ್ಯ ತಾಯೆ? ಇದೊ, ಹೊರಟೆ! ನನ್ನ ನೂಪುರ ಧ್ವನಿಗೆ, ಸಣ್ಣಗೆಜ್ಜೆ ಸ್ವನಕ್ಕೆ ಇದಾಗಲೆ ಮರ್ತ್ಯದ ಮುನಿಗಳ ಚಿತ್ತ ತತ್ತರಿಸುತ್ತಲಿರಬಹುದು!

'ಝುನನ ಝುನನ ಝುಂ, ಛನನ ಛನನ ಛಂ' ಎಂಬ ಮಧುರ ಮಾದಕ ಸ್ವರವನ್ನು ತೆರೆತೆರೆಯಾಗಿ ತೇಲಿಸುತ್ತ ತೆರೆಯತ್ತ ತೆರಳುವಳು.

ಪರಮೇಶ್ವರ : ಕತ್ತಲೆಯ ಮೊತ್ತವು ಬೆಳಕನ್ನು ಮುತ್ತಲು ಹೊರಟಿತು.

ಹ್ಹ ಹ್ಹ ಹ್ಹ ಹ್ಹ!

ಕತೆಗಾರ : ಭಾವಿಸಲು ಮಮಕಾರ ಮೋಹಿನಿ

ದೇವಿಯರ ಬಸುರಿನಲ್ಲಿ ವರರಾ-

ಜೀವಲೋಚನೆ ರಚಿತರಂಜನೆ ಸಕಲ ಸಂಪನ್ನೆ

ದೇವದಾನವ ಮಾನವರುಗಳ

ಡಾವಣಿಯ ದನವಾಗಿ ಕಟ್ಟುವ

ಭಾವೆ ಮಾಯಾದೇವಿ ಹುಟ್ಟಿದಳಖಿಲ ವಿಭವದಲಿ!

ಇತ್ತ ಮಾಯೆ ಹುಟ್ಟಿದಳು, ಅತ್ತ ಬೆತ್ತಬಿದಿರಿಡಿದಿರ್ದ, ಹುತ್ತ ಬೆಳೆದ ಸಮಾಧಿವಂತರ ಚಿತ್ತ ಸಂಚಲವಾಗಿ ನೆನಹಿನ ನೇಮ ನೆಲೆಗೆಟ್ಟಿತು; ಕಾಮ ಗ್ರಹವಿಕಾರತೆ, ವಿಷಯವಿಕಳತೆ ಮುತ್ತಿ ಮುರುಟಿಸಿತು ಸಕಲ ಸಿದ್ಧ ಸಾಧಕರನ್ನು! ಅವರು ದೂರ್ವಾಸನ ಉಪದೇಶದಂತೆ ಅಲ್ಲಮನನ್ನು ಭಜಿಸಲು

ಅವರ ವಿಷಮವ್ಯಾಕುಲತೆ ದೂರಾಗುವುದು... ಮಾಯೆಗೆ ಜಗವ ಝೋಂಪಿಸುತ ಜವ್ವನವು ಅಂಕುರಿಸಿತು. ಮನದ ಮಾತಿನ ರೀತಿಗಳು

ಕಣ್ಣಿನಲಿ ಕುಡಿಯಿಟ್ಟುವು; ಕೈಗಳ ಸಂಜ್ಞೆಗಳು ಹುಬ್ಬಿನಲಿ ಕೊನರಿ

ದುವು; ಸೊಬಗಿನ ಸೌಮ್ಯತೆಯ ಸಂಗ್ರಹವು ಮೊಲೆಗಳಲಿ ಮೊನೆ-

ದೋರಿದುದು! ಆ ನಟನೆ, ಆ ನಿಲವು, ಆ ನಡೆವ ಗತಿ, ಗಮಕ,

ಆ ನಯನ, ಆ ನೋಟ, ಆ ನವೀನತೆ-ಎಲ್ಲವೂ ಮಮಕಾರ ಭೂಪಾಲ-

ನಿಗೆ ಚಿಂತೆಯನ್ನೇ ಹೆಚ್ಚಿಸಿದುವು-ಇಂಥ ಕನ್ಯೆಗೆ ಅದೆಂಥ ವರನನ್ನು

ತರುವುದೆಂದು, ಮಮಕಾರ ಮೋಹಿನಿಯರಿಗೆ ತಕ್ಕ ಗುರು ಅಹಂಕಾರಾಚಾರ್ಯರು. ಅವರು ಬಂದು ಬೆಸಸಿದರು-'ಮಾಯೆ ಮಧು- ಕೇಶ್ವರನನ್ನು ಪೂಜಿಸಿ ಅನುರೂಪನಾದ ವರನ ವರವನ್ನು ಪಡೆಯಲಿ'ಎಂದು.

ಈಗ ಬನವಾಸಿಯ ಮಧುಕೇಶ್ವರ ದೇವಾಲಯಕ್ಕೆ ಬನ್ನಿ-ಮಾಯೆಯ

ಲಲಿತ ಲಾಸ್ಯದ ಲೀಲಾವಿಲಾಸವನ್ನು ನೋಡಲು.

ಮಧುಕೇಶ್ವರ ದೇವಾಲಯದ ರಂಗಮಂಟಪದಲ್ಲಿ

ಮೇಳದವರ ಗೀತ, ವಾದ್ಯಕಾರರ ಪಾರ್ಶ್ವವಾದ್ಯ

ಗಳಿಗೆ ತಕ್ಕಂತೆ ಮಾಯೆಯ ಮೋಹಕ ನೃತ್ಯ

ಮೇಳ : ಕುಣಿ ಕುಣಿ ಷೋಡಶಿ

ಕುಣಿ ಪೌರ್ಣಿಮಾ ಶಶಿ

ಕುಣಿ ಮಧುಕ-ಪ್ರೇಯಸಿ

ಕುಣಿವುದೆಲ್ಲ ಬನವಸಿ-ಕುಣಿ ಕುಣಿ...

ತೆರೆಯ ತಲೆಯ ಕಿರಣದಂತೆ

ತೊರೆಯ ತಟದ ಹರಿಣದಂತೆ

ತಟಿಲ್ಲತೆಯ ಚರಣದಂತೆ

ಝುನನ ಝುನನ ಷೋಡಶಿ

ಕುಣಿ ಪೌರ್ಣಿಮಾ ಶಶಿ-ಕುಣಿ, ಕುಣಿ.....

ವರ್ಷಋತು ಮಯೂರಿಯಂತೆ

ಶರದಿಂದು ಚಕೋರಿಯಂತೆ

ಸುಗ್ಗಿಯ ಕಲಕೀರೆಯಂತೆ

ಹರ್ಷವೇರಿ ಷೋಡಶಿ

ಕುಣಿ ಧರೆಯ ಊರ್ವಶಿ-ಕುಣಿ, ಕುಣಿ....

ಕುಣಿ ಕಲಾವಿಲಾಸಿನಿ

ರಾಗರತಿ ಪ್ರಕಾಶಿನಿ

ಪ್ರಣಯ ಸುಮ ವಿಕಾಸಿನಿ

ಕುಣಿವ ಹಾಗೆ ಊರ್ವಶಿ

ಕುಣಿ ಪೌರ್ಣಿಮಾ ಶಶಿ-ಕುಣಿ, ಕುಣಿ.......

ಕತೆಗಾರ : ಇಂತು ಮಾಯಾದೇವಿಯು ತಾಳದಲಿ ತರಹರಿಸಿ, ಮೆಲ್ಲನೆ ಮೇಳದಲಿ ಮೈನಿಗುರಿ, ಕರಸಂಚಾಳಿಯಲಿ ಚಳಬಳಿಸಿ, ತಿರುಪಿನ ಮಡುಪಿನಲಿ ಮಣಿದು, ತೋಳ ಮೈಯಲಿ ತೊನೆದು, ನೋಟದ ಥಾಳದಲ್ಲಿ ಧವಳಿಸಿ, ನೇಮ-ನೆಲೆ-ಪಯ-ಪಾಡು-ಪಲ್ಲಟ-ಸೀಮೆ-ಸೊಗಸು-ಬೆಡಗು-ಬಿನ್ನಣ

-ರಾಮಣೀಯತೆ-ರೇಖೆ-ತಿರುಪಿನೊಡನೆ ರತಿಯ ರೀತಿಯಲ್ಲಿ ದಿವಿಜರಾಜನ ಸತಿಯ ಸರಣಿಯಲ್ಲಿ, ಕಮಲಜನ ಭಾರತಿಯ ಭಾವದಲ್ಲಿ, ಆದಿ ನಾರಾಯಣಿಯ ನಟನೆ-ಪಾರ್ವತಿಯ ಪಾವನ ಗತಿಯಲ್ಲಿ ಲಾಸ್ಯಲೀಲಾಲೋಲೆಯಾಗಿರಲು ಮಾಯಾ ಕೋಲಾಹಲನಾದ ಅಲ್ಲಮನು ಕೋಮಳದ ಸರ್ವಾಂಗ ಭಂಗಿಯ ಸೌಮ್ಯತೆಯ ಸುಂದರಾಕಾರವನ್ನು ಧರಿಸಿ ಬಂದು ದೇಗುಲದ ಬಾಗಿಲಲ್ಲಿ ನಿಂತು ಮೃದಂಗದ ತರಂಗ ಮಾಲೆಯನ್ನು ತೇಲಿಸುವನು.
ಕಿವಿಗೊಟ್ಟು ಕೇಳಿ!..... ನಾಂಕಿಟ ತಕತರಿ... ಕಿಟತಕ ನಾಂಕಿಟ.... ತಕತರಿ ಕಿಟತಕ.... ನಕಧರಿ ಕಿಟತಕ....ತ. ಧಿ. ತಕಧಿನ್ನ.... ತೋಂ. ತ. ಧಿಗಿಣಿ ತೋಂ....ಧಿ. ತಕ. ಧಿನ್ನ ತೊಂ...ತಧಿಗಿ.....ಣತೊಂ ತ... ತ. ಕಧಿಕಿತ..
ಧಿಗಿಣ ತೊಂ....

ಈ ಮೃದಂಗನಾದಮಾಧುರ್ಯಕ್ಕೆ ಮನಸೋತಳು ಮಾಯೆ! ಅವಳ ಹೃದಯ ತರಹರಿಸುವುದು, ಗತಿ ತಡವರಿಸುವುದು. ಸಖಿಯರನ್ನು ಕೂಗುವಳು-

ಮಾಯೆ : ಕಾಮರೇಖೆ, ಕಳಾವಿಳಾಸಿ, ಪ್ರೇಮಕಾರಿಣಿ, ರಾಗಿ, ಲೋಭಿಣಿ, ಭೋಗಿ, ಮದಮಾನಿ-ನಿಲ್ಲಿಸಿರಿ, ನಿಲ್ಲಿಸಿರಿ ನಿಮ್ಮ ರಾಗಾಲಾಪವನ್ನು! ನಾನಿನ್ನು ಕುಣಿಯಲಾರೆ, ನಿಲ್ಲಲಾರೆ, ತಲ್ಲಣಿಸಿದೆ-ಝಲ್ಲೆಂದಿತೆದೆ! ಯಾರಿವನು ಮಾಯಾವಿ-ಮಾಯೆಯನ್ನೇ ಮರುಳುಗೊಳಿಸಿದ ಮಾಯಾವಿ? ಇವನ ಮೃದಂಗ ವಾದನವನ್ನು ಕೇಳುತ್ತಲೇ ಕಾರಮುಗಿಲಿನ ಗರ್ಜನೆಯ ಕಿವಿಯಾರೆ ಕೇಳಿದ ಸೋಗೆಯಂತಾಯಿತೆನ್ನ ಸ್ಥಿತಿ! ಹೋಗಿರಿ, ಸಖಿಯರೆ ಹೋಗಿರಿ-ಒಲಿಸಿ ಕರೆದು ತನ್ನಿರವನ!

ಕಾಮರೇಖೆ : ಅಗಲಿ ದೇವಿ, ಈಗಲೇ ಕರೆತರುವೆವು. (ನೇವುರದ ನಲ್ಲುಲಿ ಚೆಲ್ಲುತ್ತ ಹೋಗುವರು)

ಮಾಯೆ : ಇಂದೇಕೆ ಹೀಗಾಯಿತೆನಗೆ? ಇದೆಂಥ ಉನ್ಮಾದಕರ ಅನುಭವ!

ಸುಮ್ಮಸುಮ್ಮನೆ ಜುಮ್ಮೆನುತಿದೆ ಮೈ

ಒಮ್ಮೆಗೆ ನವಿರೇಳುವುದು!

ಮನದ ಕೊನೆಯಲಿ ಕಂಪನ ಕುಣಿವುದು

ಸವಿನೋವಾವುದೊ ಬಹುದು!

ರೋಮರೋಮದಲಿ ವ್ಯಾಮೋಹವು ಸಖಿ

ನಾಡಿನಾಡಿಯಲಿ ಮಿಂಚು!

ಅಂಗವಿದಾಯಿತು ಅನಂಗನ ರಂಗವು

ಏನಿದು ಕಾಮನ ಹೊಂಚು!

ಕತೆಗಾರ : ಇತ್ತ ಮಾಯೆ ಮನಸಿಜನ ಮಾಯೆಗೆ ಸಿಕ್ಕು ನೋಯುತ್ತಲಿರುವಾಗ ಅತ್ತ ಅವಳ ಸಖಿಯರು ಮದ್ದಳೆಯ ಅಲ್ಲಮನನ್ನು ಒಡತಿಗಾಗಿ ಒಲಿಸುತ್ತಲಿದ್ದಾರೆ.

ಪ್ರೇಮಕಾರಿಣಿ : ಆವದೇಶದ ಪುರುಷನೈ ನೀನು?

ಅಲ್ಲಮ : ದೇಶವೆಮ್ಮದು ಪರದೇಶ.

ಕಾಮರೇಖೆ : ನಿನಗಾವ ಹೆಸರೈ?

ಅಲ್ಲಮ : ಬಿರಿದಿನ ಬಿಂಕಕಾರರ ವಾಸಿಗರ ಅಲ್ಲೆನಿಸುವ, ಇಲ್ಲೆನಿಸುವ ಅಲ್ಲಮ.

ಮದಮಾನಿ : ನೀನಾವ ಠಾವಿನಲ್ಲಿಪ್ಪೆಯೈ?

ಅಲ್ಲಮ : ಲೇಸು ಮಾಡುವ ಠಾವುಗಳಲ್ಲಿ ಅಭಿಲಾಷೆಯಿಲ್ಲದೆ ಇಹೆವು. ಸುಖವಾಸಿಗಳು ನಾವು.

ಕಳಾವಿಳಾಸಿ : (ಹಿಗ್ಗಿ) ಒಳ್ಳಿತಾಯಿತು. ನೀನಿನ್ನು ಅಲ್ಲಿಗಿಲ್ಲಿಗೆ ಹೋಹ ಬುದ್ಧಿಯ ಬಿಟ್ಟು ಎಮ್ಮೊಡತಿಯ ಸಮೀಪದಲಿ ಎಮ್ಮೆಲ್ಲರೋಪಾದಿಯಲಿ ಬಲ್ಲ ವಿದ್ಯಾವಸ್ತುಗಳೊಡನೆ ಸುಖವಾಗಿದ್ದು ಬಿಡು.

ಭೋಗಿ : ಸುಮ್ಮನೇಕಿರುವೆ ಅತಿಥಿ? ರಾಜಕುಮಾರಿಯ ಕರೆಯನ್ನು ನಿರಾಕರಿಸಬಹುದೆ? ದೇವಿ, ದೇವಿ.....

–ನೂಪುರದ ಝುಣ ಝುಣತ್ಕಾರದೊಡನೆ ಓಡಿಬರುವಳು ಮಾಯೆ–

ಮಾಯೆ : ಯಾಕೆ ಕರೆದೆ ಭೋಗಿ? ಇವರಾರು ಮೃದಂಗ ಯೋಗಿ?

ರಾಗಿಣಿ : ಮೃದಂಗಯೋಗಿಯೂ ಅಹುದು, ನಾಟ್ಯಾನುರಾಗಿಯೂ ಅಹುದು, ಸುಖಭೋಗಿಯೂ ಅಹುದಂತೆ! ನಿನಗೆ ತಕ್ಕ ನಾಟ್ಯಾಚಾರ್ಯನಲ್ಲವೆ ದೇವಿ?

ಮಾಯೆ : (ಅಲ್ಲಮನತ್ತ ಅರ್ಥಪೂರ್ಣ ದೃಷ್ಟಿಯನ್ನು ಬೀರಿ) ಅವರ ಇಂಗಿತವನ್ನು ನಾನೇನು ಬಲ್ಲೆ ರಾಗಿಣಿ?

ರಾಗಿಣಿ : ಅವರ ಇಂಗಿತ ತಿಳಿಯಲೊಲ್ಲದೆ? ಹೀಗೆ ಬಾ, ದೇವಿ–ಈ ಹೊಂಬಟ್ಟಲದಲ್ಲಿ ಸಂತವೀಳ್ಯವನ್ನಿಟ್ಟು ಸಲ್ಲಿಸವರಿಗೆ! (ಅವಳ ಕೈಯಲ್ಲಿ ಹೊಂಬಟ್ಟಲವನ್ನಿಟ್ಟು ತಾನೇ ಕೈವಿಡಿದು ಕರೆದೊಯ್ದು) ಸ್ವೀಕರಿಸಿದನು ಸುಖಭೋಗಿಯೆ, ನಿರಾಕರಿಸದಿರು

ಒಪ್ಪು, ಒಲ್ಲೆನ್ನದಿರು!

ಅಲ್ಲಮ : (ತನ್ನಲ್ಲಿ) ನನ್ನನ್ನು ಜಯಿಸಲು ಬಂದ ಮಾಯೆ. ನನಗೇ ಮರುಳಾದ ಹಾಗಿದೆ. ಆಗಲಿ, ಇವಳ ಆತುರವನ್ನು ಕೆಣಕಿ, ಕಾತರವನ್ನು ಕೆರಳಿಸಿ, ವ್ಯಾಮೋಹವನ್ನು ಅರಳಿಸಿ ನರ–ನಟ–ನಾಟಕವನ್ನಾಡುವೆನು ಕೆಲಕಾಲ! (ರಾಗಿಣಿಯತ್ತ

ಹೊರಳಿ) ಕೃತಾರ್ಥನಾದೆ ಕನ್ನಿಕೆ, ರಾಜೀವಲೋಚನೆಯಾದ ರಾಜನಂದಿನಿಯ ಕಮಕಮಲದಿಂದ ಬಂದ ತಾಂಬೂಲವನ್ನು ಪಡೆದು ಕೃತಾರ್ಥನಾದೆ.

ಸಖಿಯರೆಲ್ಲ : (ಕೈಪರೆಯಿಟ್ಟು) ಸಂತೋಷ, ಸಂತೋಷ ಸುಂದರ ಮೃದಂಗಧಾರಿ, ನಮಗೆಲ್ಲ ತೀರದ, ತೀರವಿಲ್ಲದ ಸಂತೋಷ. ನಮ್ಮೊಡತಿಯ ನವೀನ ನಾಟ್ಯಾಚಾರ್ಯ, ನಡೆ ನಮ್ಮೊಡನೆ ನಾಗವಾಸಕ್ಕೆ!

ಅಲ್ಲಮ : ನಡೆಯಿರಿ ಒಲವಿನ ವಲ್ಲರಿಗಳೆ, ಲಾವಣ್ಯದ ಲತೆಗಳೆ!

ಕತೆಗಾರ : ಮಾಯೆಯ ಅಭಿಲಾಷೆಯಂತೆ ಮಮಕಾರ ಭೂಪಾಲನು

ಅಲ್ಲಮನನ್ನು ಮಾಯೆಯ ನಾಟ್ಯಾಚಾರ್ಯನನ್ನಾಗಿ ನಿಯಮಿಸುವನು. ಮಾಯಾದೇವಿಗೀಗ ಮುಗಿಲು ಮೂರೇ ಬೆರಳು! ಕನ್ಯಾಮಾಡದಲ್ಲಿ ಕುಳಿತು ಕನಸು ಕಾಣುತ್ತಲಿದ್ದಾಳೆ.

ಮಾಯೆ : (ಆಹ್ಲಾದಮಯಿಯಾಗಿ ಹಾಡುತ್ತಾಳೆ)

ಮನವೆ ಮೂರ್ಛೆ ತಿಳಿ
ಹೃದಯ ಮದವೆ ಇಳಿ
ಪ್ರಾಣ ಸಖನ ಬಳೀ
ಜೋಕೆಯಿಂದ ಸುಳಿ ॥

ಪ್ರೇಮಚಂದಿರನ ಎಳೆತ ಸೆಳೆತವಿದು
ಚಿತ್ತಸಾಗರದ ಕ್ಷೋಭೆ
ಮುಂದೆ ಕಾಣುತಿದೆ ಅನತಿದೂರದಲಿ
ಮಿಲನ ಮಂದಿರದ ಶೋಭೆ!
ಮನವೆ ಮೂರ್ಛೆ ತಿಳಿ...

(ಒಳಗೆ ನಾಗವಾಸದಲ್ಲಿ ಮೃದಂಗವಾದನ)

ನಾ ಧಿನ್ ಧಿನ್ನಾ ನಾ ಧಿನ್ । ಧಿನ್ನಾ । ತಕ ಧಿನ್ । ಧಿನ್ನಾ ।
ಕಿಟತಕ ಧಿನ್ । ಧಿನ್ನಾ । ತಾಂ, ತ। ತಕಧಿನ । ತಕಿಟತ ।
ಧಕಧಿನ । ಝುಂಂಂ। ತಕಿಟಿತ । ತಕಧಿನ । ಝುಂಂಂ ।
ತಕಿಟಿತ । ತಕಧಿನ । ಝುಂಂಂ......

ಮಾಯೆ : (ಪರವಶಳಾಗಿ) ಓ, ಜೀವಿತೇಶ್ವರನ ಝುಂಕಾರ ! ಪ್ರಣಯ ಪ್ರಣವ ಓಂಕಾರ! ಮನವೆ, ಉನ್ಮತ್ತವಾಗದಿರು! ತನುವೆ, ತಪ್ತವಾಗದಿರು! ಜನ್ಮ ಜನ್ಮಾಂತರದ ಕನಸು ಕೈಸಾರಿ ಬಂದಿದೆ! ಹಲವು ಜನುಮಗಳ ಹಂಬಲವೇ ಹೆಜ್ಜೆಯಿಡುತ್ತ ಬರುತ್ತಲಿದೆ! ಎದೆಯ ವಾಂಛಿತವೇ ಮೃದಂಗಕಾರನ ಲಾಂಛನ ಧರಿಸಿ ಬರತೊಡಗಿದೆ! ಎಚ್ಚರೆಚ್ಚರ ಒಲವೆ! ಜೋಕೆ, ಬಲುಜೋಕೆ ಚೆಲುವೆ! ಕಾತರದಿಂದ ಕಾರ್ಯ ಕೆಡದಿರಲಿ!

–ನಾಗವಾಸದಲ್ಲಿ ನಾಟ್ಯಪಾಠ–

ಅಲ್ಲಮ : ಮಾಯಾದೇವಿ

ಮಾಯೆ : ಸ್ವಾಮಿ.

ಅಲ್ಲಮ : ನೀನೆ ಸ್ವಾಮಿನಿ, ನಾನೆ ಸೇವಕ ದೇವಿ,

ಮಾಯೆ : ಹಾಗೆನ್ನದಿರು ಹೃದಯೇಶ್ವರ, ನಾನಿನ್ನ ಚರಣದಾಸಿ

ಅಲ್ಲಮ : ಮೇರೆ ಮೀರದಿರು ರಾಜಕುಮಾರಿ!

ಮಾಯೆ : ಮೇರೆದಪ್ಪಿದೆ ಪ್ರೇಮ ಮೃದಂಗಧಾರಿ!

ಅಲ್ಲಮ : ಅದು ಕಲೆಯ ಪ್ರೇಮವಾಗಲಿ ಅರಸುಗುವರಿ.

ಮಾಯೆ : ಕಲೆಯ ಪ್ರೇಮ ಕಲೆಗಾರನ ಪ್ರೇಮವಾಗಿ ಪರಿಣಮಿಸದೆ ಸ್ವಾಮಿ?

ಅಲ್ಲಮ : ಗುರುಶಿಷ್ಯ ಸಂಬಂಧದ ಗೌರವ ಭಂಗವಾಗದಿರಲಿ ಮಾಯಾದೇವಿ!

ಮಾಯೆ : ಶಿಷ್ಯಳ ಸರ್ವಸ್ವವನ್ನು ಸ್ವೀಕರಿಸು, ಗುರುವರ!

ಅಲ್ಲಮ : ಈ ವಾದವಿಲ್ಲಿಗೆ ನಿಲ್ಲಲಿ ದೇವಿ–ಇನ್ನು ಪಾಠ ಪ್ರವಚನ ಪ್ರಾರಂಭವಾಗಲಿ! ನಾಟ್ಯಕಲೆಯ ಸೃಷ್ಟಾರ ಸದಾಶಿವ. ಅಂತೆಯೇ ಅವನು ತಾಂಡವಪ್ರಿಯ ನಟರಾಜನೆನಿಸಿದ್ದಾನೆ. ನಾಟ್ಯಕಲೆಯು ಭಕ್ತಿಮುಕ್ತಿದಾಯಕವಾದುದು.

ಮಾಯೆ : ಪ್ರೇಮ ಸಿದ್ಧಿಪರದಾಯಕವೂ ಅಲ್ಲವೆ ಸ್ವಾಮಿ?

ಅಲ್ಲಮ : ಪ್ರೇಮದ ಪರಾಕಾಷ್ಠತೆಯೇ ಭಕ್ತಿ, ಭಕ್ತಿಯ ಸಿದ್ಧಿಯೇ ಮುಕ್ತಿ ಮಾಯಾದೇವಿ.

ಮಾಯೆ: ಎಂದ ಮೇಲೆ ಮುಕ್ತಿ ಸೋಪಾನದ ಮೊದಲ ಮೆಟ್ಟಲೇ ಪ್ರೇಮವಲ್ಲವೆ ಸ್ವಾಮಿ?

ಅಲ್ಲಮ : ಹೌದು, ಪ್ರೇಮ-ಕಾಮವಲ್ಲ, ಸಾಕಿಲ್ಲಿಗೆ. ಕೇಳು, ನಾಟ್ಯ

ಶಾಸ್ತ್ರದ ಪ್ರಕಾರ ಕಂಠದಿಂದ ಸಂಗೀತವನ್ನು ಸೂಸುತ್ತ, ಅದರ

ಅರ್ಥವನ್ನು ಹಸ್ತಾಭಿನಯಗಳಿಂದ ಹೊಮ್ಮಿಸುತ್ತ, ಅದರ ಭಾವವನ್ನು ನಯನಲೀಲೆಯಿಂದ ನಿದರ್ಶಿಸಬೇಕು.

ಪದವಿನ್ಯಾಸದಿಂದ ತಾಳಗತಿಯನ್ನು ತೋರುತ್ತ ನರ್ತಿಸಬೇಕು

ಯತೋ ಹಸ್ತಃ ತತೋ ದೃಷ್ಟಿಃ ಯತೋ ದೃಷ್ಟಿಃ

ತತೋ ಮನಃ ಯತೋ ಮನಃ ತತೋ ಭಾವೊ

ಯತೋ ಭಾವ ಸ್ತತೋ ರಸಃ

ಇದು ಶಾಸ್ತ್ರ . ಆದರೆ ಶಾಸ್ತ್ರಜ್ಞಾನವೊಂದೇ ಸಾಲದು ಕಲೆಯನ್ನು ಒಲಿಸಿಕೊಳ್ಳಲು. ಭಕ್ತಿನಿರ್ಭರತೆ ಬೇಕು. ಕುಂಬಾರ ಗುಂಡಯ್ಯನಂತೆ ಭಕ್ತಿ ಪರವಶರಾಗಿ ಕುಣಿಯಬೇಕು. ಆಗ ದೇವದೇವನೂ ಆವೇಶಗೊಂಡು ಕುಣಿಯುವನು, ಮೆಚ್ಚುವನು ಒಲಿಯುವನು.

ಮಾಯೆ : ನನ್ನ ದೇವನನ್ನು ಮೆಚ್ಚಿಸಲು, ಒಲಿಸಲು ಈ ನಾಟ್ಯಸಾಲದು

ಸ್ವಾಮಿ.

ಅಲ್ಲಮ : ಇನ್ನೆಂಥ ನಾಟ್ಯ ಬೇಕು ಮಾಯಾದೇವಿ?

ಮಾಯೆ : ತನುತನುವ ತಳ್ಕೆನ್ನಿಸಿ, ಫಣಿ ಫಣಿಯ ಮುಂಡಾಡಿ, ಬಿದ್ದೆದ್ದು

ಹೊಯ್ದಾಡಿ, ಹಾಗೊಮ್ಮೆ ಹೀಗೊಮ್ಮೆ ತೂಗುತ್ತ ಬಾಗುತ್ತ

ಕುಣಿವ ನಾಗನೃತ್ಯ ಬೇಕು ಸ್ವಾಮಿ.

ನೀನೆ ನಾಗ ಸಖ ನಾನೆ ನಾಗಿಣಿ

ನೀರ ಬಾರ ಕುಣಿ ಕರೆವೆ ರಾಗಿಣಿ

ಕುಣಿವ ಬಾರ ತಳೆದು ಗೆಜ್ಜೆ

ತಾಳಮೇಳ ಕಿಂಕಿಣಿ

ಹರಿಯಲೆಲ್ಲ ಕಡೆಗೆ ರಾಗ

ನಾಟ್ಯರಸ ತರಂಗಿಣಿ!

ಅಲ್ಲಮ : ನಾನು ಕಲಿಸಬಂದುದು ಈ ನಾಟ್ಯವನ್ನಲ್ಲ ಮಾಯಾದೇವಿ!

ಮಾಯೆ : ನಾನು ಕಲಿಯಬೇಕೆಂದಿರುವುದು ಇದೇ ನಾಟ್ಯವನ್ನೇ, ಸ್ವಾಮಿ!

ಅಲ್ಲಮ : ಈ ನಾಟ್ಯವನ್ನು ನಾನೇ ಕಲಿತಿಲ್ಲ, ನಿನಗೆಂತು ಕಲಿಸುವೆ ರಾಜ ಕುಮಾರಿ?

ಮಾಯೆ : ನಿನಗೆ ಬರದಿದ್ದರೆ ನಾನೆ ಕಲಿಸುವೆ. ಎಲ್ಲಿ, ಕೈನೀಡು ಸ್ವಾಮಿ.

ಅಲ್ಲಮ : (ನಕ್ಕು) ನಾನು ಬಂದಿರುವುದು ಮಾಯೆಯ ಗುರುವಾಗಿ, ಶಿಷ್ಯನಾಗಿಯಲ್ಲ ಮಮಕಾರ ನಂದಿನಿ!

ಮಾಯೆ : 'ಶಿಷ್ಯಾದಿಚ್ಛೇತ್ ಪರಾಜಯಂ' ಗುರುವರ!

ಅಲ್ಲಮ : ಮೊದಲು ಗುರುವಿಗೆ ತಕ್ಕ ಶಿಷ್ಯಳಾಗು ಮಾಯಾದೇವಿ.

ಮಾಯೆ : ಗುರುವಿಗೆ ತಕ್ಕ ಶಿಷ್ಯಳೇ ನಾನು ಸ್ವಾಮಿ. ದೇವದಾನವ ಮಾನವರೆಲ್ಲ ಯಾರ ಓರೆನೋಟವೊಂದಕ್ಕಾಗಿ ಹಾರೈಸಿ ಹಂಬಲಿಸುತ್ತಲಿರುವರೋ ಆ ತ್ರಿಲೋಕಸುಂದರಿ ನಾನು ಇಂಥ ಸುರಸುಂದರಿ ಸರ್ವಾರ್ಪಣಕ್ಕಾಗಿ ಸಿದ್ಧಳಾಗಿ ಸಮ್ಮುಖದಲ್ಲಿ ನಿಂತಿರುವಾಗ ನಿರಾಕರಿಸದಿರು ಸ್ವಾಮಿ!

ಅಲ್ಲಮ : ಸಕಲ ಮಾಯೆಯ ಇಲ್ಲೆನಿಸಿದ ಅಲ್ಲಮನಿಗಾಗಿ ಹಾರೈಸಿ ಹತಾಶಳಾಗದಿರು ಮಾಯಾದೇವಿ.

ಮಾಯೆ : ಹತಾಶಳಾಗುವ ಹೆದರಿಕೆಯೇ ಇಲ್ಲ ಮಾಯಾದೇವಿಗೆ ಸ್ವಾಮಿ. ತನ್ನ ಅಭಿಲಾಷೆಯನ್ನಿಂದು ಈಡೇರಿಸಿಕೊಂಡೇ ತೀರುವಳಾಕೆ.

ಅಲ್ಲಮ : ಅಸಂಭವ, ಅಶಕ್ಯ!

ಮಾಯೆ : ಅದೆಂತು ಅಸಂಭವ ಅನಂಗ ಸುಂದರಾ? ನೀನಿರುವುದೀಗ

ಮಾಯಾಮಂದಿರದಲ್ಲಿ! ಇಲ್ಲಿಂದ ಏಳು ಬಾಗಿಲುಗಳೂ ಭದ್ರವಾಗಿ ಮುಚ್ಚಲ್ಪಟ್ಟಿವೆ! ಹೊರಗೆ ಬಲವಾದ ಕಾವಲಿದೆ, ಒಳಗೆ,

ಇದೋ ನನ್ನ ಬಹುಪಾಶದ ಬಿಗಿಯಾದ ಬಂಧನವಿದೆ! ಹೇಗೆ

ಪಾರಾಗುವೆ ಪ್ರಿಯಕರ? ಪಾರಾಗು ನೋಡುವೆ ಪ್ರಾಣೇಶ್ವರ!

(ಅಪ್ಪ ಹೋಗುವಳು. ಧೊಪ್ಪನೆ ಕೆಡೆವಳು. ಅಲ್ಲಮನು ಅಲ್ಲಿಲ್ಲ!)

ಹಾಯ್ ವಿಧಿಯೆ, ಕೈಗೆ ಬಂದ ತುತ್ತು ಬಾಯ್ಗೆ ಬಾರದೆ

ಹೋಯಿತೆ! ಪ್ರಿಯನನಪ್ಪಲು ಹೋದ ಕೈ ಬಯಲನಪ್ಪಿತೆ!

ಹಾಯ್ ನೊಂದೆ, ಬರಿದೆ ಬೆಂದೆ...ತಾಳಲಾರೆ...ತಾಳಲಾರೆ.

(ಸಖಿಯರು ಬಾಗಿಲ ತೆರೆದು ಬಂದು ಎಬ್ಬಿಸಿ ಉಪಚರಿಸುವರು)

ಕಳಾವಿಳಾಸಿ : ಏನಾಯಿತು, ಏನಾಯಿತು ದೇವಿ?

ಮಾಯೆ : ಇನ್ನೇನಾಗಬೇಕು? ಆಗುವುದೆಲ್ಲ ಆಗಿ ಹೋಯಿತು. ಮಾಯೆಗೆ

ಪರಾಭವವಾಯಿತು! ಮಾಯೆಯ ಮಾನಭಂಗವಾಯಿತು,

ತೇಜೋವಧೆಯಾಯಿತು, ಸರ್ವಸ್ವ ನಾಶವಾಯಿತು!

ಮದಮಾನಿ : ನಿನ್ನನ್ನು, ತ್ರಿಭುವನ ಮೋಹಿನಿಯಾದ ನಿನ್ನನ್ನು ನಿರಾಕರಿಸಿ

ದನೆ ಆ ನೀರಸಾಗ್ರಣಿ? ಎಲ್ಲಿರುವನಾ ಪಾಷಾಣಹೃದಯಿ ದೇವಿ?

ಮಾಯೆ : ಬಯಲ ಬೆರೆದನೋ ಗಾಳಿಗೂಡಿದನೋ ಬೆಳಕಿನಲ್ಲಿ ಬೆಳಕಾಗಿ

ಮಿಲಿತವಾದನೋ ನಾನರಿಯೆ ಸಖಿ. ಅಪ್ಪಲೆಂದು ಮುಂದಾದೆ,

ಧೊಪ್ಪನೆ ಕೆಡೆದೆ! ಕನಸು ಕನಸೌ ಕೆಳದಿ-ಮಾಯೆಯನ್ನೇ

ಮಾಯೆಗೆ ಸಿಲುಕಿಸಿದ ಮಹ ಮಾಯಾವಿಯ ಕೋಲಾಹಲ

ಕೆಳದಿ! ಕೆಟ್ಟೆ, ಅಯ್ಯೋ ಕೆಟ್ಟೆ! ಜನಪತಿಯ ಮಗಳಾಗಿಯೂ

ಜಗದೇಕ ಸುಂದರಿಯಾಗಿಯೂ ಒಬ್ಬ ಮೃದಂಗಕಾರನನ್ನೂ

ಮೋಹಿಸದಾದೆ! ಹಾಯ್ ವಿಧಿಯೆ, ತೇಜೋವಧೆಯೆ!

ಹೇಗೆ ಬದುಕಿರಲಿ ಸಖಿ, ಈ ಅಪಮಾನವನ್ನು ಸಹಿಸಿಕೊಂಡು

ಹೇಗೆ ಬದುಕಿರಲಿ! ನೀನಾದರೂ ಕರೆದುಕೊಳ್ಳಲಾರೆಯಾ

ಮೃತ್ಯುದೇವತೆ? (ಶೋಕ ಉಕ್ಕಿ ಬರಲು ಬಿಕ್ಕುವಳು .)

ವಿಮಳೆ : (ಹಠಾತ್ತಾಗಿ ಪ್ರವೇಶಿಸಿ) ಜನಪತಿಯ ಸುತೆಗೆ ಸಲ್ಲದೀ ಶೋಕ ವಿಹ್ವಲತೆ ಮಾಯಾದೇವಿ!

ಮಾಯೆ : (ಬೆರಗು ಬೆರೆತ ಸ್ವರದಲ್ಲಿ) ದಯಮಾಡು ದೇವಿ. ನೀನಾ-ರೆಂಬುದನರಿಯೆ, ಆದರೆ ನಿನ್ನನ್ನು ನೋಡುತ್ತಲೇ ಅದೇಕೋ ನನ್ನ ನಿರಾಶೆಯ ನಿಶೆಯಲ್ಲಿ ಆಶೆಯ ಶಶಿಕಿರಣ ಮೂಡಿ ಬರತೊಡಗಿವೆ.

ಕರುಣಿಸು, ಕಾಪಾಡು.

ವಿಮಳೆ : ನಾನು ವಿಮಳೆ, ಮಾಯೆ! ನಿನಗೆ ನಿನ್ನ ನಿಜಸ್ವರೂಪದ

ನೆನಹು ನೀಡಲು ಜಗನ್ಮಾತೆಯು ನನ್ನನ್ನು ಕಳಿಸಿದ್ದಾಳೆ. ನೀನು ಜಗದ ತಾಯಿಯ ತಾಮಸಕಳೆ. ಶಿವಕಳೆಯಾದ ಅಲ್ಲಮನನ್ನು ಸೋಲಿಸಲು ಆಜ್ಞಪ್ತಳಾಗಿ ಬಂದ ನೀನೆ ಅಲ್ಲಮನಲ್ಲಿ ಅನುರಕ್ತ ಳಾಗಿ ಪರಮೇಶ್ವರಿಯ ಶಪಥವನ್ನು ವಿಫಲಗೊಳಿಸಬಹುದೆ?

ಮಾಯೆ : (ಏನೋ ಹೊಳೆದಂತಾಗಿ) ಅಹುದು ವಿಮಳೆ, ಪೂರ್ವಜನ್ಮದ ವಿಸ್ಮರಣೆಯುಂಟಾಗಿ ಪರಮೇಶ್ವರಿಯ ಪಣವನ್ನೇ ಮರೆತು ಬಿಟ್ಟಿರುವೆನಲ್ಲ! ನನಗಾವ ಶಿಕ್ಷೆ ಕಾದಿದೆಯೋ ಕೈಲಾಸದಲ್ಲಿ!

ವಿಮಳೆ : ಇನ್ನೂ ಕಾಲ ಕೈಮೀರಿ ಹೋಗಿಲ್ಲ ಮಾಯೆ, ಇನ್ನಾದರೂ ಮದ್ದಳೆಯ ಅಲ್ಲಮನನ್ನು ಗೆದ್ದು ಪರಮೇಶ್ವರಿಯ ಶಪಥವನ್ನು ಸಫಲಗೊಳಿಸು.

ಮಾಯೆ : (ರೋಮಾಂಚಿತಳಾಗಿ ತನ್ನಲ್ಲಿ) ಮದ್ದಳೆಯ ಅಲ್ಲಮ, ನನ್ನ ಪ್ರಿಯತಮ! (ಅವಳ ಕಿವಿಯಲ್ಲಿ ಅವನ ಮೃದಂಗ ತರಂಗಗಳು

ತಾಕಲಾಡುವುವು-ತಾಂ-ತಧಿ-ತಕಧಿನ್ನ-ತಟಿಕಿತ್ತ-ತಕಧಿನ್ನ-ತಕತಧಿ-ನಕಧಿನ್ನ-ಧಿನಕಧಿ-ತಕಧಿನ್ನ. ಧಿಮಿಕಿಟ ತಕಧಿನ್ನ-ಧಿತಕಧಿ-ನಕಧಿನ್ನ...) ಆಹಾ ಆ ಮೃದುಗ

ನುಣ್ಗತಿ ಗಭೀರ ಗತಿಗಳೆ! ಮಧುರಗತಿ ಸುಖಗತಿ ನವೀನ ಗತಿಗಳೆ! ಅಹಾ ಆ ಮೋಹನಾಕಾರವೆ! ಆ ಸುಂದರಾಂಗ ನನ್ನು ಸೋಲಿಸಲು ಭುವಿಗೆ ಬಂದಿರುವೆನೆ ನಾನು? ಉಹು ಸಾಧ್ಯವಿಲ್ಲ; ನಾನೇ ಸೋತು ಹೋಗಿದ್ದೇನೆ, ನೋಲಿಸುವ ದೆಂತು? (ವಿಮಳೆಯತ್ತ ಹೊರಳಿ) ವಿಮಳೆ, ನೀನು ಹೇಳುವ ಈಶ್ವರನ ನಿಜಸ್ವರೂಪನಾದ ಅಲ್ಲಮನೆತ್ತ, ಈ ಮದ್ದಳೆಯ ಅಲ್ಲಮನೆತ್ತ?

ವಿಮಳೆ : ಭಾವಭ್ರಮಿತ ಬುದ್ಧಿಯ ಬಿಟ್ಟು ವಿಚಾರಿಸು ಮಾಯೆ! ನೋಟ ಮಾತ್ರದಿಂದ ಮೂಜಗದ ಬೇಟೆಯಾಡುವ ಮಾಯೆಯ ಬೇಟ ನಾಟದ ಅಲ್ಲಮನು ಮದ್ದಳೆಯ ಅಲ್ಲಮನೆ? ಬಯಲಿನಲ್ಲಿ ಬಯಲಾಗಿ ಹೋದ ಅಲ್ಲಮನು ಮದ್ದಳೆಯ ಅಲ್ಲಮನೆ? ನಡೆ ಕಡೆಯ ಪ್ರಯತ್ನ ಮಾಡು! ಅಲ್ಲಮನನ್ನು ಸೋಲಿಸಿ ಪರಮೇಶ್ವರಿಯ ಪಣವನ್ನು ಸಫಲಗೊಳಿಸು! ನಡೆ ಅಲ್ಲಮ ನೆಡೆಗೆ.

ಮಾಯೆ : (ಹಿಗ್ಗಿ) ಅಲ್ಲಮನೆಡೆಗೆ ಕರೆದೊಯ್ಯುವಿಯಾ ವಿಮಳೆ?

ವಿಮಳೆ : ಹೌದು; ಆದರೆ ಅವನನ್ನು ಸೋಲಿಸಲಿಕ್ಕಾಗಿ, ಅವನಿಗೆ ಸೋಲಲಿಕ್ಕಾಗಿ ಅಲ್ಲ!

ಮಾಯೆ : ಅವನು ನನಗೇ ಸೋಲಲಿ, ನಾನೇ ಅವನಿಗೆ ಸೋಲಲಿ ಅವನು ನನ್ನನ್ನು ಕೂಡಿದರೆ ಸಾಕು, ಮಾತೆಯ ಮಾತು ಗೆಲ್ಲವುದು, ಅಲ್ಲವೆ ವಿಮಳೆ?

ವಿಮಳೆ : ಒಪ್ಪಿದೆ.

ಮಾಯೆ : ಹಾಗಾದರೆ ನಡೆ. ನೀನೂ ನಿನ್ನ ಚತುರೋಕ್ತಿಗಳಿಂದ ನನಗೆ ನೆರವಾಗಬೇಕು, ನನಗವನು ಒಲಿಯುವಂತೆ ಯತ್ನಿಸಬೇಕು.

ವಿಮಳೆ : ಆಗಲಿ, ಹೋಗುವ ಬನ್ನಿ.

ಕತೆಗಾರ : ವಿಮಳೆ, ಮಾಯೆ, ಕಾಮರೇಖೆ ಕಳಾವಿಳಾಸಿ ಮೊದಲಾದವರು ಅಡವಿ ಅಡವಿ ಅಲೆಯುತ್ತ ನಡೆದಿದ್ದಾರೆ. ಗುಡುಗು, ಸಿಡಿಲು, ಮಳೆ

ಗಾಳಿಯಲ್ಲಿ ಎಡಹುತ್ತ ತಡವರಿಸುತ್ತ ಸಾಗಿದ್ದಾರೆ–

ಮಾಯೆ : (ಸೋತ ಸ್ವರದಲ್ಲಿ) ನಾನಿನ್ನು ನಡೆಯಲಾರೆ ವಿಮಳೆ, ಕಾಲೊಡೆ

ದುದು! ಮೈ ಸೆಡೆದುದು! ಅಲ್ಲಮಾ, ಅಲ್ಲಮಾ, ಎಲ್ಲಿರುವೆ

ಅಲ್ಲಮಾ, ಎಲ್ಲಿರುವೆ ಪ್ರಿಯತಮಾ–ಹೃದಯ ನಭದ

ಚಂದ್ರಮಾ!

ವಿಮಳೆ : ಪ್ರಭುವೆ–ವಿರಾಗವಿಭುವೆ, ಈ ಅಬಲೆಯರ ಸಂಕಷ್ಟವೂ

ಕರಗಿಸದಾಯಿತೆ ನಿನ್ನ ಮನದ ಕಾಠಿನ್ಯವನ್ನು? ಮೈದೋರು

ಪ್ರಭುವೆ, ಮೊಗದೋರು ಶುಭವೆ!

ಅಲ್ಲಮ : (ಅಲ್ಲಿಯೇ ಪ್ರಕಟವಾಗಿ) ಯಾರನ್ನು ಅರಸುತ್ತಿರುವೆ ವಿಮಳೆ?

ವಿಮಳೆ : (ಸಂತಸದಿಂದ) ಇನ್ನಾರನ್ನು ಪ್ರಭುವೆ? ನಿನ್ನನ್ನೆ–ಈಸು ದಿನ

ಮಾಯಾದೇವಿಯ ಮನವೊಲಿಸಿ ಕೊನೆಯಲ್ಲಿ ಘಾಸಿ ಮಾಡಿದ ನಿನ್ನನ್ನೇ!

ಅಲ್ಲಮ : ಆರು ಮೊದಲಲಿ ಬಯಸ ಹೇಳಿದರು? ಯಾರು ಕಾಣುತ

ಕರೆಸ ಹೇಳಿದರು? ಯಾರು ಬಾರದ ಬಯಸಿ ಕಾಮಿಸಿ ಬಳಲ ಹೇಳಿದರು?

ಮಾಯೆ : (ಕೆರಳಿ) ಈಶ ಸೇವೆಯೊಳಿದ್ದ ಮುಗುದೆಯ ಬೀಸಿ ಜಾಲವ

ಬಲೆಗೆ ಸಿಲುಕಿಸಿ ಮೋಸಗೊಳಿಸುತ ತೊರೆದ ಧೂರ್ತ! ಯಾರ ತಪ್ಪೆಂದೆನ್ನ ಕೇಳ್ವೆಯ?

ಅಲ್ಲಮ : ಧೂರ್ತತನ ಅಲ್ಲಮನದೋ ಮಾಯೆಯದೊ, ಸಕಲ ಸಾಧಕ ಸಿದ್ಧ ಮುನಿಗಳನ್ನು ಕೇಳು ಮಾಯಾಂಗನೆ!

ಮಾಯೆ : ಆ ಬೂದಿಬಡಕರನ್ನೇನ ಕೇಳುವುದು? ನಿನ್ನನ್ನೇ ಕೇಳುವೆ ಅಲ್ಲಮಾ!

ಅಲ್ಲಮ : ಅಲ್ಲಮನಿಗೆ ಗೊತ್ತಿರುವುದು ವಿರತಿಯೊಂದೇ ಮಾಯಾಂಗನೆ!

ಮಾಯೆ : ಬಲ್ಲೆ ನಿನ್ನಯ ವಿರತಿಗಿರತಿಯ ಅಲ್ಲಮಾ! ನೆನಪಿರಲಿ, ನಾನು ಮೂಜಗವ ಸುತ್ತಿರುವ, ಮುತ್ತಿರುವ ಮಾಯೆ! ಹರಿಯೆದೆಯ ಮೆಟ್ಟಿದೆನು, ಹರನ ಅರ್ಧಾಂಗವನ್ನು ತಳಿದಿಹೆನು, ಬ್ರಹ್ಮನ ಬಾಯ ಮುದ್ರಿಸಿಹೆನು! ಸುರನರೋರಗರೆಂಬ ಮರವೆಯ ಮರುಳ ತಂಡವನೆನ್ನ ತೊತ್ತಿರ ಶರಣು ಹೊಗಿಸಿಹೆನು! ಆ ಕಾನನದ ಮರುಳರ, ಈ ಅಲ್ಲಮನ ವಿರತಿಯ ತೂರಲಾರೆನೆ ಗಾಳಿಪಟ ಮಾಡಿ?

ಅಲ್ಲಮ : ಬರಿ ಮಾತನಾಡದಿರು ಮಾಯೆ! ಹರಿಹರಬ್ರಹ್ಮಾದಿಗಳನ್ನು ಆಡಿಸುವೆ, ರೋರಾಡಿ ಕಾಡುವೆನೆಂಬೆ, ನಿನ್ನನ್ನು ನಾನಾ ರೀತಿಯಲ್ಲಿ ಯಾರು ಆಡಿಸುತ್ತಿಹರು ಬಲ್ಲೆಯಾ?

ಮಾಯೆ : (ಮೆತ್ತಗಾಗಿ) ಯಾರನ್ನು ಯಾರು ಆಡಿಸುವರೆಂಬ ವಿಚಾರ-ವಂತಿರಲಿ ಪ್ರಿಯಕರ, ಕೃಪಾಕರ, ಕರುಣೆದೋರಿಯಾದರೂ ಮಾಯೆಯ ಮನದಾಸೆಯನ್ನು ಈಡೇರಿಸು ಜೀವಿತೇಶ್ವರ!

ಅಲ್ಲಮ : ಬಂದ ದಾರಿಯಿಂದ ಹಿಂದಿರುಗುವುದೆ ಹಿತ ನಿನಗೆ, ಗತಿ ನಿನಗೆ

ಮಾಯೆ! ಸುಮ್ಮನೆ ಕಾಡಿ ಬೇಡಿ ಬಾಡದಿರು!

ಮಾಯೆ : (ಕಪಟ ಭಕ್ತಿಯನ್ನು ನಟಿಸುತ್ತ) ನಿನ್ನ ಸನ್ನಿಧಿಯಲ್ಲಿದ್ದು ನಿನ್ನಿಂದ ಶಿವತತ್ತ್ವಾನುಭವವನ್ನು ತಿಳಿದು ನಿನ್ನೊಡನೆ ಶಿವನ ಆಸ್ಥಾನವನ್ನು ಸೇರಲೆಂದು ಬಂದಿರುವೆ ಸ್ವಾಮಿ! ಸ್ವೀಕರಿಸು, ಸ್ವೀಕರಿಸು, ನಿರಾಕರಿಸದಿರು ಸ್ವಾಮಿ-ನಿನ್ನನ್ನೇ ನಂಬಿ ಬಂದವಳ ನಿರಾಕರಿಸದಿರು!

ಅಲ್ಲಮ : ಚಿನ್ನವೊಂದೇ ಅಕ್ಕಸಾಲೆಯಲ್ಲಿ ಆಭರಣವಾಗಬಲ್ಲುದು ಮಾಯೆ, ಮಿಕ್ಕ ಧಾತುವಲ್ಲ!

ವಿಮಳೆ : ನಿನ್ನ ಪಾದದ ಪರುಷಸ್ಪರ್ಶದಿಂದ ಮಾಯೆಯೆಂಬ ಲೋಹವೂ ಸುವರ್ಣವಾಗದೇ ಸ್ವಾಮಿ? ಅವಳಲ್ಲಿ ಹುರುಳಿಲ್ಲದಿರಬಹುದು, ನಿನ್ನಲ್ಲಿ ಕರುಣೆಯೂ ಇಲ್ಲವೆ? ನಿನ್ನ ಕರುಣವೇ ಅವಳ ಹರಣ ಪ್ರಭುವೆ!

ಅಲ್ಲಮ : ವಿಮಳೆ, ನಿನ್ನ ಹೆಸರಿಗೆ ತಕ್ಕಂತೆ ಚತುರೋಕ್ತಿಯನ್ನೇ ಆಡಿದೆ, ಆದರೆ ಪರುಷವನ್ನು ಸ್ಪರ್ಶಿಸುವ ವಸ್ತು ಕಬ್ಬುನವಾದರೂ ಆಗಿದ್ದರೆ ಚಿನ್ನವಾದೀತು-ಹಳೆಹಂಚೆಲ್ಲಿಯಾದರೂ ಪರುಷದ ಸೋಂಕಿನಿಂದ ಹೊನ್ನಾಗಬಲ್ಲುದೆ?

ಮಾಯೆ : (ವ್ಯಥಿತಳಾಗಿ) ನಾನು ಕಬ್ಬುನಕ್ಕಿಂತಲೂ ಕೀಳೆ? ಹಳೆ ಹಂಚೆ? ಅವಹೇಳನದ ಅತಿರೇಕವಿದು ವಿಮಳೆ! ನನಗಿನ್ನು ಮರಣವೇ ಶರಣು ವಿಮಳೆ!

ವಿಮಳೆ : ನೀನು ಮುಟ್ಟಿದ ಮಣ್ಣೂ ಚಿನ್ನವಾದೀತು ಪ್ರಭುವೆ! ಮನಸು ಬಂದೋಪಾದಿಯಲಿ ಮಾಯೆಯ ಕಾದು ರಕ್ಷಿಸು! ಹೆಣ್ಣೆಂದು ಹೀಯಾಳಿಸದಿರು. ಕನ್ಯೆಯೆಂದು ಕಡೆಗಣಿಸದಿರು! ನಿನ್ನ ಘನತೆಗಿದು ಸಲ್ಲದು. ನಿನ್ನ ಶಕ್ತಿಯಲ್ಲಿ ನಿನಗೆ ವಿಶ್ವಾಸವಿಲ್ಲವೆ? ಮಾಯೆಯ ಸಂಗಕ್ಕೆ ಅಂಜುವಿಯೇಕೆ? ನಿರಂಜನನಲ್ಲವೆ ನೀನು? ನಿರ್ವಿಕಲ್ಪ, ನಿರ್ಲೇಪ, ನಿರ್ವಿಕಾರನಲ್ಲವೆ ನೀನು?

ಅಲ್ಲಮ : ವಿಮಳೆ, ನೀನೂ ಭ್ರಮಿತಳಾಗಿ ಮಾತನಾಡಿದರೆ ಹೇಗೆ? ಕೂಡಬಲ್ಲ ವಸ್ತುಗಳಿದ್ದರೆ ತಾವಾಗಿಯೇ ಕೂಡಿಕೊಳ್ಳುವುವು. ಇದು ಸೃಷ್ಟಿಯ ನಿಯಮ. ತರಣಿ ತಮಗಳೆಂದಾದರೂ ಒಂದಾಗುವುವೆ? ಒಂದಿದ್ದಲ್ಲಿ ಇನ್ನೊಂದು ಇರದೆಂಬುದನ್ನು ಅರಿಯೆಯಾ? ಹೋಗಿರಿನ್ನು, ನಾನು ಹೊರಟೆ!

ಮಾಯೆ : (ಮುನಿದು) ಹೋಗುವಿಯೆಲ್ಲಿಗೆ ಮಾಯಾವಿ ! ಬಿಡೆ ನಿನ್ನ, ಬಿಡೆ ನಿನ್ನ!

ಅಲ್ಲಮ : (ಗಹಗಹಿಸಿ) ಬಯಲ ಬಂಧಿಸುವಿಯಾ ಮಾಯೆ? ಹ ಹ್ಹ ಹ್ಹ.....

(ಹೋಗುವನು. ಅವನ ಗಹಗಹಿಕೆ ಕಾನನದಲ್ಲಿ ಹರಡಿ ಪ್ರತಿಧ್ವನಿಸುವುದು; ಅಲ್ಲಿಂದ ಅಲೆಯಲೆಯಾಗಿ ಏರಿ ಕೈಲಾಸದಲ್ಲಿಯೂ ಮಾರ್ದನಿಗುಡುವುದು! ಶಂಕರನೂ ದನಿಗೂಡಿಸುವನದಕ್ಕೆ....)

–ಕೈಲಾಸದಲ್ಲಿ–

ಪರಮೇಶ್ವರ : ಹ ಹ್ಹ ಹ್ಹ.... ಹ ಹ್ಹ ಹ್ಹ......

ಪಾರ್ವತಿ : (ಮ್ಲಾನಳಾಗಿ) ನನ್ನ ಶಪಥ ವಿಫಲವಾದುದಕ್ಕೆ ಈ ಉಪ ಹಾಸವೆ ದೇವ?

ಪರಮೇಶ್ವರ : ನಾನು ಮೊದಲೇ ಹೇಳಿರಲಿಲ್ಲವೆ ದೇವಿ, ಸೋಲು ನಿಶ್ಚಿತವೆಂದು? ಆತ್ಮನನ್ನು ಗೆಲ್ಲುವುದು ಮಾಯೆಯಿಂದಲ್ಲ; ತಾಮಸೋಪಾಯದಿಂದಲ್ಲ, ಆತ್ಮರತಿಯಿಂದ, ಸಾತ್ವಿಕ ಸಂಪತ್ತಿನಿಂದ. ನಿನ್ನ ಸಾತ್ವಿಕ ಕಳೆಯನ್ನೀಗ ಭೂಮಿಗೆ ಕಳಿಸು, ನಿರ್ಮಲ ಸುಮತಿಯರ ಮಗಳಾಗಿ ಜನಿಸಿ, ಮಹಾದೇವಿಯೆನಿಸಿ, ಮಾಯಾ ಕೋಲಾಹಲನಾದ ಅಲ್ಲಮ–ನನ್ನೇ ವಾದದಲ್ಲಿ ಜಯಿಸಿ, ಮಾಯೆಯಂತೆ ನಿನ್ನ ಮಂಡೆಗೆ ಹುಲ್ಲ ತಾರದೆ ಹೂವ ತರುವಳು.

ಪಾರ್ವತಿ : (ಹರ್ಷಿತಳಾಗಿ) ಆಗಲಿ ಸ್ವಾಮಿ, ಹಾಗೆಯೇ ಆಗಲಿ! ಆಗ–ಲಾದರೂ ಜಗದ ಜೀವಿಗಳು ತಾಮಸದಿಂದ ಸಾತ್ವಿಕದತ್ತ ಸಾಗುವುದನ್ನು ಕಲಿತಾರು!

ಪರಮೇಶ್ವರ : ಹಾಗೆ ಸಾಗಲು ಸರ್ವರಿಗೂ ಸ್ವಾತಂತ್ರ್ಯವಿದೆ ಶರ್ವಾಣಿ ಮನಸ್ಸಿದ್ದವರಿಗೆ ಮುಕ್ತದ್ವಾರವಿದೆ, ನೇರ ದಾರಿಯಿದೆ.

ದೇವಗಣ : (ಹಿಗ್ಗಿ)

ಜಯ ಜಯ ಜಯ ಜಗದೀಶ್ವರ ಓ ಪರಾತ್ಪರ!
ಅಭಯಂಕರ ಶಿವಶಂಕರ ಪಾರ್ವತೀಶ್ವರ!

ಗಂಗಾಧರ ಗೌರೀವರ ಸರ್ವಸುಖಕರ
ಕರುಣಾಕರ ಚರ್ಮಾಂಬರ ತ್ರಿಪುರ ಸಂಹರ
ಶಿವಶಂಕರ ಹಿಮಮಂದಿರ ಕಾಲಕಂಧರ
ಮಂಗಲಕರ ರಕ್ಷಿಸು ಹರ ಚಂದ್ರಶೇಖರ

ವೃಂದಗೀತ ಸಾಗುತ್ತಿರುವಂತೆ

ತೆರೆ

ಷಾನಿಗೆ ಶ್ರದ್ಧಾಂಜಲಿ

ಜಾರ್ಜ ಬರ್ನಾರ್ಡ ಷಾ ಅರ್ಧ ಶತಮಾನದವರೆಗೆ ವೈಚಾರಿಕ ಜಗತ್ತಿನ ಅರಸರಲ್ಲೊಬ್ಬನಾಗಿ ಆಳಿದ. ಅವನ ಸಾಹಿತ್ಯದಲ್ಲಿ ಶಾಶ್ವತವಾದುದೆಷ್ಟು, ಸಮಸಾಮಯಿಕವಾದುದೆಷ್ಟು ಎಂಬ ಬಗ್ಗೆ ಭಿನ್ನಾಭಿಪ್ರಾಯವಿದೆಯಾದರೂ ಅವನೊಬ್ಬ ಮಹಾಮಾನವನೆಂಬ ಬಗ್ಗೆ ಎರಡು ಅಭಿಪ್ರಾಯವಿದ್ದಂತಿಲ್ಲ. ಅವನನ್ನು ತಮ್ಮ ತಮ್ಮ ಅಭಿರುಚಿಗಳಿಗೆ ಅನುಗುಣವಾಗಿ ಕಂಡ ಕೆಲವರ ವಿಚಾರಮಥನವಿದು. ಷಾನು ತೀರಿದ ವರ್ತಮಾನ ಬಂದಾಗ ನಡೆದುದು.

ಉಷಾರಾಣಿ : ಏನಿದು ಶಿಶಿರಕುಮಾರ, ಮಾಗಿಯಂತೆಯೇ ಮ್ಲಾನವಾಗಿಹುದಲ್ಲ ಮುಖ ನಿನ್ನದು? ಯಾವಾಗಲೂ ಏನಾದರೊಂದು ವ್ಯಸನವಿದ್ದೇ ಇರುವುದಲ್ಲ ನಿನಗೆ? ವ್ಯಸನವಿಲ್ಲದಲ್ಲಿ ವ್ಯಸನವನ್ನು ಹುಟ್ಟಿಸಿಕೊಳ್ಳುವಲ್ಲಿ ನಿಷ್ಣಾತ ನೀನು.

ಶಿಶಿರಕುಮಾರ : ಅಹುದು ಉಷಾರಾಣಿ, ನಾನು ಹುಟ್ಟಿದ ಹೊತ್ತೇ ಅಂತಹದೆಂದು ತೋರುತ್ತದೆ. ತೀವ್ರಾನುಭವ ನನ್ನ ಸ್ವಭಾವವಾಗಿಬಿಟ್ಟಿದೆ. ನನ್ನಂಥ ನೋವಿನ ಜೀವಿಗೆ ತನ್ನ ಮೃದುಲ ಹಾಸ್ಯದಿಂದ, ವಿಚಾರ ಲಾಸ್ಯದಿಂದ ಔತಣವನ್ನೀಯುತ್ತಿದ್ದ ಜಾರ್ಜ್ ಬರ್ನಾರ್ಡ ಷಾನ ನಿಧನವಾರ್ತೆ ಕಿವಿಗೆ ಬಿದ್ದಾಗಿನಿಂದ ನೋವಿನ ಬಾವಿಗೆ ಹೊಸ ಸೆಲೆಯೊಡೆದಂತಾಗಿದೆ.

ಉಷಾ : ಇದಾವ ಘನ ವಿಷಯ? ತೊಂಬತ್ತು ನಾಲ್ಕು ವರ್ಷದ ಮುದುಕ ತುಂಬು ಬಾಳನ್ನು ಬಾಳಿ ತುಂಬು ಕಳಚಿದ ಕಳಿತ ಹಣ್ಣಿನಂತೆ ಉದುರಿ ಹೋದರೆ ಹೌಹಾರಿಬಿಟ್ಟೆಯಾ? ಇನ್ನೂ ನೂರುವರ್ಷ ಇರಬೇಕಾಗಿದ್ದಿತೇ ನಿನ್ನ ಷಾ ನಿನಗಾಗಿ?

ಶಿಶಿರ : ನನಗಾಗಿ ಮಾತ್ರವಲ್ಲ, ಜಗತ್ತಿನ ಸಲುವಾಗಿಯೂ ಅವನಿನ್ನೂ ಕೆಲಕಾಲವಿರಬೇಕಾಗಿದ್ದಿತು.

ಉಷಾ : ನಾನೊಪ್ಪೆನಿದನ್ನು. ಇನಿತೊಂದು ಜಾಗತಿಕ ಮಹತ್ವವಿರಲು ಮಹಾತ್ಮಗಾಂಧಿಯೆ ಅವನು? ಅವನೊಬ್ಬ ನಾಟಕಕಾರ, ಇದಕ್ಕೂ ಹೆಚ್ಚಾಗಿ ಟೀಕಾಕಾರ! ಇನ್ನೇನು?

ತಾರಾನಾಥ : ವಿಷಯಾಂತರ ಮಾಡದಿರು ಉಷಾ. ಷಾನು ಗಾಂಧೀಜಿಗೆ ಸರಿ ಸಮಾನನೆಂದು ಶಿಶಿರ ಹೇಳಿಲ್ಲ. ಗಾಂಧೀಜಿಯವರ ಬಗ್ಗೆ ಷಾ ನಿಗೂ ಅಪಾರವಾದ ಆದರವಿದ್ದಿತೆಂಬುದನ್ನು ನೀನು ಬಲ್ಲೆ. ಬಾಪೂಜಿಯ ಕೊಲೆಯಾದಾಗ ಅವನು ತೆಗೆದ ಉದ್ಗಾರವನ್ನು ಮರೆತೆಯಾ.

ಉಷಾ : ಅದೇನೇ ಇರಲಿ, ಅವನು ತನ್ನ ನಾಟಕಗಳಲ್ಲಿ ಹೆಣ್ಣಿನ ಗೇಲಿ ಮಾಡಿರುವುದನ್ನು ನೋಡಿದ ಯಾವ ವನಿತೆ ಅವನ ಬಗ್ಗೆ ಆದರ ತಳೆದಾಳು? ಅವನ 'ಮಿಸೆಸ್ ವಾರನ್ಸ ಪ್ರೊಫೆಶನ್' ನೀನು ಓದಿಲ್ಲವೆ? ಗಾಂಧೀಜಿಯವರಂತೆ ಅವನೇನು ಸ್ತ್ರೀ ಸಮಾಜದ ಉದ್ಧಾರಮೂರ್ತಿಯೆ? ಸ್ತ್ರೀಯ ಜೀವನಧಾರೆ ನಿಸರ್ಗದ ಅಂಧ ಕ್ಷೋಭೆಯಂತೆ! ಅವನ 'ಮಾನವ ಮತ್ತು ಅತಿಮಾನವ' ನಾಟಕ ಓದಿಲ್ಲವೆ ನೀನು?

ತಾರನಾಥ : ತಪ್ಪು ತಿಳಿಯದಿರು ಉಷಾ. ಮತ್ತೆ ಮತ್ತೆ ಷಾ ಬಾಪೂರನ್ನು ಹೋಲಿಸಲು ಹವಣಿಸದಿರು. ಇಬ್ಬರ ದಾರಿಯೇ ಬೇರೆ. ಷಾನ ಮರಣವಾರ್ತೆಯನ್ನು ಕೇಳಿದ ಬ್ರಿಟನ್ನಿನ ಸ್ತ್ರೀಯರನೇಕರು ಶೋಕಿಸಿದ ಸಂಗತಿಯನ್ನು ನೀನು ಓದಲಿಲ್ಲವೆ ಪತ್ರಿಕೆಗಳಲ್ಲಿ? ಎರಡು ದಶಕಗಳಿಗೆ ಮೊದಲೇ ಅವರಿಗೆ ಮತದಾನದ ಅಧಿಕಾರ ದೊರಕಿಸಲು ಆಂದೋಲನ ನಡೆಸಿದವರಲ್ಲಿ ಅಗ್ರಗಣ್ಯನವ. ಅವನು ನಾರೀವರ್ಗದ ವೈರಿ ಹೇಗೆ? ನೀನು ಬೆರಳಿಟ್ಟು ತೋರಿದ ನಾಟಕದಲ್ಲಿ ಅಬಲೆಯರ ಅಧಃಪಾತವನ್ನವನು ಅಷ್ಟು ನಿರ್ಭಯವಾಗಿ, ನಿರ್ದಾಕ್ಷಿಣ್ಯವಾಗಿ ಚಿತ್ರಿಸದಿದ್ದರೆ ಅದಕ್ಕೆ ಪರಿಹಾರೋಪಾಯವೆಂದು ಶಾಸನವೊಂದು ಹುಟ್ಟುತ್ತಿದ್ದಿತೆ? ಬ್ರಿಟನ್ನಿನ ಸಾಮಾಜಿಕ ಶಾಸನಗಳ ಹಿಂದೆ ಷಾನ ವಿಚಾರಧಾರೆಯ ಪ್ರಭಾವವಿದ್ದೇ ಇದೆಯೆಂದು ತಿಳಿ. ಅದಕ್ಕೇ ಕವಿ ಕಲಾವಿದರು ವಿಶ್ವದ ಪ್ರಚ್ಛನ್ನ ಶಾಸನಕಾರರೆಂದು ಹೇಳುವುದು.

ಸೂರ್ಯಕಾಂತ : ಷಾ ಪ್ರತಿಭಾಶಾಲಿಯೆಂಬುದರಲ್ಲಿ ಸಂಶಯವಿಲ್ಲ ತಾರಾನಾಥ, ಆದರೆ ಅವನು ಇಷ್ಟೊಂದು ಪ್ರಭಾವಶಾಲಿಯೆಂದು ಒಪ್ಪುವುದು ಸಾಧ್ಯವಿಲ್ಲ. ತನಗೆ ಕೊನೆಗೂ ಆ ಪ್ರಭಾವಶಾಲಿತ್ವ ದೊರೆಯಲಿಲ್ಲವೆಂದು ಷಾ 'ಸಿನಿಕ್' ಆದನೆಂದು ಹೇಳುತ್ತಾರೆ. ಅವನ ವಿಡಂಬನ ಪ್ರಧಾನ ವಾಕ್ಯಗಳನ್ನು, ನಗೆ ನುಡಿಗಳನ್ನು ಓದಿ ಎಲ್ಲರೂ ನಕ್ಕರೆಂಬುದೇನೋ ನಿಜ, ಆದರೆ ಅವುಗಳ ಬಗ್ಗೆ ಗಂಭೀರವಾಗಿ ವಿಚಾರಿಸಿದವರೆಷ್ಟು ಜನ? ಅವನ ಮಂತ್ರ ಅವನಿಗೇ ತಿರುಗಿತು. ಅವನು ಎಲ್ಲರ ಗೇಲಿ ಮಾಡಿದ, ಬರಬರುತ್ತ ಎಲ್ಲರೂ ಅವನು ಬರೆದುದೆಲ್ಲ ಹುಡುಗಾಟವೆನ್ನುವಷ್ಟರ ಮಟ್ಟಿಗೆ ಹಗುರಾಗಿ ಕಾಣತೊಡಗಿದರು ಅವನ ಬರವಣಿಗೆಯನ್ನು. ಷಾನ ವ್ಯಕ್ತಿತ್ವದ ದುರ್ಬಲಾಂಶವೇ ಇದು.

ತಾರಾನಾಥ : ಷಾನಂಥ ಅರಿವಿನ ದೊರೆಗಳ ಹಿರಿಮೆಯನ್ನು ಅನುಯಾಯಿಗಳ ಸಂಖ್ಯೆಯಿಂದ ಅಳೆಯುವುದು ಬೇಡ ಸೂರ್ಯಕಾಂತ. ಅಂಕಿ ಸಂಖ್ಯೆಗಳ ಮಾನದಂಡ ರಾಜಕೀಯ ಕ್ಷೇತ್ರದಲ್ಲಿ ಸರಿಯಾಗಿ ತೋರಬಹುದು. ಆದರೆ ರಾಜಕಾರಣವು ದ್ವಿತೀಯ ಶ್ರೇಣಿಯವರ ಕಾರ್ಯರಂಗ. ರಾಜಕಾರಣದಲ್ಲಿ ಮಾತ್ರ ಮಿಗಿಲೆನಿಸಿ ಮರೆದು ಹೋದವರೆಷ್ಟಿಲ್ಲ ಸೃಷ್ಟಿಯಲ್ಲಿ? ಜನಮನದಲ್ಲಿ ಸ್ಥಾನವೆಷ್ಟಿದೆ ಅಂಥವರಿಗೆ? ಲೋಕನಾಯಕರಲ್ಲಿ ಎರಡು ವಿಧ: ಜನನಾಯಕರು ಹಲವರು, ವಿಚಾರ ನಾಯಕರು ಕೆಲವರು. ಮೊದಲಿನವರು

ಜನನಾಯಕರಾಗಿಯೂ ಜನಮನದಿಂದ ಅಳಿಸಿ ಹೋಗಬಹುದು, ಆದರೆ ಎರಡನೆಯವರು ಜನನಾಯಕರಾಗದಿದ್ದರೂ ಜನಮನದಲ್ಲಿ ಸ್ಥಿರವಾಗಿ ನೆಲೆಸುವರು ವಾಲ್ಮೀಕಿ ವ್ಯಾಸ ಕಾಳಿದಾಸರಂತೆ, ಪಂಪ–ಹರಿಹರ–ಕುಮಾರವ್ಯಾಸರಂತೆ, ಷೇಕ್ಸಪಿಯರ್–ಷಾರಂತೆ!

ಚಂದ್ರಕಾಂತ : ಅನುಯಾಯಿಗಳ ಸಂಖ್ಯೆ ಅದಂತಿರಲಿ ತಾರಾನಾಥ. ಅದಾವ ಹೊಸತನವನ್ನು ತೋರಿದ್ದಾನೆ, ಹೊಸ ವಿಚಾರವನ್ನು ಬೀರಿದ್ದಾನೆ ನಿನ್ನ ಷಾ? ಅವನ 'ಜೀವನ ಶಕ್ತಿ'೧ ಬರ್ಗ್‌ಸನ್ನನ 'ಜೀವ ಸತ್ವ'೨; ಅವನ ಅತಿಮಾನವವಾದವೂ ಹೊಸದಲ್ಲ, ಒಂದಿಲ್ಲ ಒಂದಿಲ್ಲ ಒಂದು ರೂಪದಲ್ಲಿ ಅವನಿಗಿಂತಲೂ ಮೊದಲೇ ಉದಯವಾಗಿದ್ದಿತು. ನಾಟಕ ಕಲೆಯಲ್ಲಿ ಇಬ್ಸೇನನಿಗಿಂತ ಅವನು ಮುಂದೆ ಹೋಗಿಲ್ಲ. ಅವನ ಹೊಸತನ ಯಾತರಲ್ಲಿ?

ತಾರಾನಾಥ : ಮತ್ತೊಂದು ಮೃಗಜಲದ ಬೆನ್ನುಹತ್ತದಿರು ಚಂದ್ರಕಾಂತ ಹೊಸತನವೆನ್ನುವುದೊಂದು ಭ್ರಮೆಯ ತಿರುಗಣಿ. ಷಾನು ಶೋಪನ್ ಹಾರ್,ನೀಟ್ಸೆ,ಇಬ್ಸೇನ್,ಸ್ಟ್ರಿಂಡ್‌ಬರ್ಗ್,ಟಾಲಸ್ಟಾಯ್,ಸ್ಯಾಮುಯೆಲ್ ಬಟ್ಲರ್ ಮತ್ತು ದಾರ್ಶನಿಕ ಆರ್ಥಿಕ, ಸಾಹಿತ್ಯಿಕ ಜಗತ್ತಿನ ಇನ್ನೂ ಅನೇಕ ಹಿರಿಹುದ್ದರಿಗಳಿಗೆ ಋಣಿಯೆಂದು ಅನೇಕರು ತಿಳಿದಿದ್ದಾರೆ. ಸ್ವತಃ ಷಾನೆ ತನ್ನ ಋಣಸಂಬಂಧವನ್ನು ಪ್ರಾಂಜಲ ಮನಸ್ಸಿನಿಂದ ಒಪ್ಪಿಕೊಂಡಿದ್ದಾನೆ. ಆದರೆ ಈ ಸಾಹಿತ್ಯಿಕ ವಂಶಾವಳಿಯನ್ನು ಬಹುದೂರ ಎಳೆಯದಿರಲು ಅವನೇ ಎಚ್ಚರಿಕೆಯನ್ನು ಕೊಟ್ಟಿದ್ದಾನೆ. ಒಂದಿಲ್ಲೊಂದು ರೂಪದಲ್ಲಿ ಇವರೆಲ್ಲರಿಗೆ ಋಣಿಯಾಗಿಯೂ ಷಾನು ಸ್ವತಂತ್ರಮತಿ, ನಿರಂಕುಶಮತಿ. ಅವನು ಯಾರಿಂದಲೂ ತನ್ನ ನೈತಿಕ ಪ್ರಣಾಲಿಯನ್ನು ಎರವಲಾಗಿ ಪಡೆಯದಿದ್ದುದೇ ಅವನ ವಿನೂತನತೆಗೆ ನಿದರ್ಶನ. ಯಾವ ಸಿದ್ಧಾಂತಗಳ ಮಾನದಂಡದಿಂದಲೂ ಅವನು ಒಳಿತು–ಕೆಡುಕುಗಳ ನಿರ್ಣಯಕ್ಕೆ ಕೈಹಾಕಲಿಲ್ಲ. ಜೀವನಕ್ಕೆ ತನ್ನದೇ ಆದ ಅರ್ಥವನ್ನಿತ್ತಿದ್ದಾನೆ; ವಸ್ತುಗಳಿಗೆ ತನ್ನವೇ ಆದ ನೆಲೆ ಬೆಲೆಗಳನ್ನು ನೀಡಿದ್ದಾನೆ. ನೀಟ್ಸೇನ ಮೇಲೆ ಅವನು ಬರೆದ ಪ್ರಬಂಧದಲ್ಲಿ ದಾರ್ಶನಿಕನಾದವನು ಜೀವನವನ್ನು

1) Life Force

2) Elan Vital

ಅನಿಯಂತ್ರಿತವಾಗಿ ನೋಡಬೇಕೆಂದು ಸ್ಪಷ್ಟವಾಗಿ ಹೇಳಿದ್ದಾನೆ. ಸಂಪ್ರದಾಯ ಶರಣನೆಂದಿಗೂ ಸ್ವತಂತ್ರ ಆಲೋಚಕನಾಗಲಾರ. ಸಾಂಪ್ರದಾಯಿಕ ಮೌಲ್ಯಮಾಪಕನಲ್ಲ ಜಿ. ಬಿ. ಷಾ.

ಚಂದ್ರಕಾಂತ : ಅವನು ಅದಾವ ವಸ್ತುವಿಗೆ ತನ್ನ ಸ್ವತಂತ್ರ ಮೌಲ್ವಿತೆಯನ್ನಿತ್ತಿರುವನೋ ನಾನರಿಯೆ.

ತಾರನಾಥ : ಬೇರೆ ವಸ್ತುಗಳೇಕೆ, ಜೀವನವನ್ನೇ ತೆಗೆದುಕೊಳ್ಳೋಣ ಚಂದ್ರಕಾಂತ. ಜೀವನವು ನಾವೆಲ್ಲರೂ ತಿಳಿದಿರುವಂತೆ ನಿತ್ಯ ಸತ್ಯವಾದ ಆದ್ಯ ವಸ್ತುವಾದರೂ ಅದರ ಬಗ್ಗೆ ಆಲೋಚಕರ ಅಭಿಪ್ರಾಯಗಳಲ್ಲಿ ಅದೆಷ್ಟು ಅಂತರ! ಜೀವನವು ಅವಿಚಾರಪರ, ತಿರಸ್ಕರಣೀಯವೆನ್ನುವವರೂ ಇದ್ದಾರೆ–ಶೋಪನ್‌ಹಾರನಂತೆ; ಅದೊಂದು ಅಮೃತನಿರ್ಝರವೆನ್ನುವವರೂ ಇದ್ದಾರೆ ವ್ಹಿಟ್‌ಮನ್ನನಂತೆ. ಷಾನು ಜೀವನದ ದೂಷಕನೂ ಅಲ್ಲ, ಅಂಧ ಉಪಾಸಕನೂ ಅಲ್ಲ. ಅದು ಅವಿಚಾರಪರವಿದೆಯಾಗಿ ತ್ಯಾಜ್ಯವೆಂದು ಶೋಪನ್‌ಹಾರ ಹೇಳಿದರೆ ಜೀವನವನ್ನು ಅವಿಚಾರಪರವೆನ್ನುವ ವಿಚಾರ ಶಕ್ತಿಯಲ್ಲಿಯೇ ಏನೋ ನ್ಯೂನತೆಯಿರಬೇಕೆನ್ನುತ್ತಾನೆ ಷಾ; ವಿಚಾರವನ್ನು ವಿರೋಧಿಸಿಯಾದರೂ ಜೀವನವನ್ನು ಹಿಂಬಾಲಿಸಿರೆನ್ನುತ್ತಾನೆ ಷಾ; ವಿಚಾರಕ್ಕಿಂತ ಜೀವನವು ದೊಡ್ಡದು, ಅದನ್ನು ನಿರಾಕರಿಸಬೇಡ, ಜೀವನಶಕ್ತಿ ಎಲ್ಲಕ್ಕಿಂತ ದೊಡ್ಡ ತತ್ತ್ವ ಅದೊಂದೇ ಸತ್ಯ, ಅದನ್ನು ಸ್ವೀಕರಿಸು ಎನ್ನುತ್ತಾನೆ ಷಾ.

ಸೂರ್ಯಕಾಂತ : ಬರಿ ಬದುಕುವುದೇ ಚರಮಗಮ್ಯವೋ ನಿನ್ನ ಷಾನಿಗೆ? ಬದುಕಿಗೆ ಬದುಕುವುದೊಂದನ್ನುಳಿದು ಬೇರೆ ಗುರಿಯೇ ಇಲ್ಲವೆ ಷಾನ ದೃಷ್ಟಿಯಲ್ಲಿ?

ತಾರಾನಾಥ : ಏಕಿಲ್ಲ? ಯುಗಯುಗಗಳಿಂದಲೂ ಜೀವನಶಕ್ತಿಯು ಪ್ರಕೃತಿಯ ಪ್ರಯೋಗಶಾಲೆಯಲ್ಲಿ ಜನನ ಮರಣಗಳ ಪ್ರಯೋಗದ ಮೂಲಕ ಜೀವಿಗಳ ಉತ್ತಮತ್ವದ ವಿಕಾಸಕ್ಕೆ ಸಹಾಯಕವಾಗಬಲ್ಲ ಸಾಧನಗಳ ಶೋಧ ನಡೆಸಿದೆ. ಉತ್ತರೋತ್ತರ ಊರ್ಧ್ವಗತಿಯೇ ಗುರಿ. ಆ ಗುರಿಗೆ ಬಾಗಿ ಬದುಕಿರೆಂದು ಹೇಳುತ್ತಾನೆ ಷಾ.

ಸೂರ್ಯಕಾಂತ : ಇದು ಡಾರ್ವಿನ್ನನ ವಿಕಾಸವಾದ. ಷಾನ ಮೇಲ್ಮೆಯೇನಿದರಲ್ಲಿ?

ತಾರಾನಾಥ : ಇದು ಗ್ರಹಿಕೆಯ ತಪ್ಪು ಸೂರ್ಯಕಾಂತ. ಡಾರ್ವಿನ್ನನ ವಿಕಾಸವಾದವನ್ನು ಷಾನಷ್ಟು ಕಠೋರವಾಗಿ ಯಾರು ಖಂಡಿಸಿಲ್ಲ. ಅದು ಆತ್ಮರಹಿತವಾದುದು. ಅದೊಂದು ಬಗೆಯ ಅದೃಷ್ಟವಾದ–

ಸೌಂದರ್ಯ, ಜ್ಞಾನ, ಶಕ್ತಿ, ಆದರ್ಶ, ಗೌರವ ಆಶೋತ್ತರಗಳ ನಿರ್ದಯ ದಮನವೇ ಅದರ ಅಂತರಾರ್ಥವೆಂದವನು ವಾದಿಸಿದ್ದಾನೆ. ಅದೊಂದು ಅರ್ಥವಿಲ್ಲದ ಆಕಸ್ಮಿಕಗಳ ಉದ್ದೇಶರಹಿತ, ದೈವಹೀನ, ಧರ್ಮಶೂನ್ಯ೧ ಸ್ಪರ್ಧಾ ಪ್ರಧಾನ ಆಯ್ಕೆ! ಕಾರಣ ಕಾರ್ಯತತ್ವದಲ್ಲಿಯೂ ಷಾನಿಗೆ ವಿಶ್ವಾಸವಿಲ್ಲ. ಕೇವಲ ಆಕಸ್ಮಿಕಗಳನ್ನುಳಿದು ಬೇರೆಲ್ಲ ಸಂದರ್ಭಗಳಲ್ಲಿಯೂ ಗುರಿ, ಉದ್ದೇಶ, ಫಲಾಪೇಕ್ಷೆಗಳು ಕಾರಣ ಸ್ವರೂಪವನ್ನು ನಿರ್ಧರಿಸುತ್ತವೆ. ಷಾನು ಸೃಜನಶೀಲ ನಿರ್ಮಾಣಕ್ಷಮ ವಿಕಾಸವಾದಿ. ಜೀವನ ವಿಕಸನ, ಸೃಜನಮೂಲ ಜೀವ ವಿಕಸನದಲ್ಲಿ ಅವನಿಗೆ ವಿಶ್ವಾಸ. ಅತಿಮಾನವನ ನಿರ್ಮಾಣ ಅದರ ಗುರಿ.

ಶಿಶಿರಕುಮಾರ: ನೀಟ್ಸೇ ಮೊದಲಾದವರೂ ಅತಿಮಾನವ ವಾದವನ್ನು ಪ್ರತಿಪಾದಿಸಿರುವರಲ್ಲ? ಷಾನ ವೈಶಿಷ್ಟ್ಯವೇನು?

ತಾರಾನಾಥ : ನೀಟ್ಸೇನ ಅತಿಮಾನವ ಅತಿದಾನವ ಶಿಶಿರಕುಮಾರ ಅದೊಂದು ವಿಚಿತ್ರ ಪ್ರಾಣಿ. ಬಲೋಪಾಸನೆಯೊಂದೇ ಗುಣ ಗಮ್ಯವದಕ್ಕೆ. ಬಲದಾಯಕವಾದುದೆಲ್ಲವೂ ಒಳ್ಳೆಯದು ಬಲಸಂವರ್ಧಕವಲ್ಲದುದು ಎಲ್ಲವೂ ಕೆಡಕು ಅವನ ದೃಷ್ಟಿಯಲ್ಲಿ. ಆಸುರೀ ಶಕ್ತಿಯಾದರೂ ಸರಿಯೆ, ಶಕ್ತಿ ಬೇಕು, ಬಲ ಬೇಕು. ಷಾನ ಅತಿಮಾನವ ಖಲಬಲದ ಭೀಕರಾಕಾರವಲ್ಲ, ಸಂಯಮನದ ಸಾಕಾರ ಮೂರ್ತಿ; ಶರೀರದ ಸಂಕೋಲೆಗಳನ್ನೆಲ್ಲ ಕಡಿದೊಗೆದು ಮೂರ್ತಿಮಂತವಿಚಾರವಾಗಿರುವ ಧೀರೋದಾತ್ತ; ಸನ್ಮತಿಯ ಸ್ರೋತಸ್ವಿನಿ ಶುದ್ಧ ಸ್ಫುರಣ ತರಂಗಿಣಿಗಳ ಹೃದಯಂಗಮ ಸಂಗಮ. 'ಮರಳಿ ಮೆಥುಸೆಲಾಕ್ಕೆ' ಎಂಬ ನಾಟಕದಲ್ಲಿ ಆದಮ್ ಮತ್ತು ಕೇನರ (Adam and Cain) ತುಲನ ತೋಲನದ ಮೂಲಕ ನೀಟ್ಸೇನ ಮತ್ತು ತನ್ನ ಅತಿಮಾನವರಲ್ಲಿರುವ ಅಂತರವನ್ನು ತೋರಿಸಿದ್ದಾನೆ ಷಾ. ಆದಮ್ ಮತ್ತು ಈವ್ಹ್ ಆದಿ ಸ್ತ್ರೀ-ಪುರುಷರು; ಕೃತಕ ನಾಗರಿಕತೆಯು ಕಾಲಕ್ರಮದಲ್ಲಿ ನೆಯ್ದಿರುವ ರೂಢಿ

---

1) "To call this 'natural selection' is a blasphemy, possibility to many to whom nature is nothing but a casual agree gation of inert and matter, but eternally impossible to the spirits and souls of the righteous."

ಪರಂಪರೆಗಳ ಜೇಡಜಾಲದಲ್ಲಿ ಸಿಲುಕದವರು. ಅವರು ತಮ್ಮ ಜೀವನ ಸಮಸ್ಯೆಗಳನ್ನು ಇನ್ನಾರ ಸಲಹೆ ಸಹಾಯಗಳೂ ಇಲ್ಲದೆ ತಾವೇ ತಮ್ಮ ಅನುಭವದಿಂದಲೇ ಬಿಡಿಸಿಕೊಳ್ಳಬೇಕಾಗಿದ್ದಿತು; ಯಾವುದೊಂದು ಸಂಚಿತ ಆರ್ಜವದ ಆಧಾರವಿಲ್ಲದ ಮೂಲಕ ತ್ವರಿತ ಗತಿಯಿಂದಲೂ ಸಾಗಬೇಕಾಗಿದ್ದಿತವರು; ಅವರ ಬುದ್ಧಿಯ ಬೆಳವಣಿಗೆ ಬಹಳವಾಗಿರಲಿಲ್ಲ. ಅಂತೆಯೇ ವಿಕಾಸಕ್ಕೆ ಅಧೀನವಾಗದೆ ಅದರ ಉತ್ಪತ್ತಿಗೆ ಕಾರಣವಾಗುವ ಇಚ್ಛಾಶಕ್ತಿಯು ಹೆಚ್ಚು ಪ್ರಖರವಾಗಿದ್ದಿತು ಅವರಲ್ಲಿ. ಅವರು ನಶ್ವರದಿಂದ ಶಾಶ್ವತವನ್ನು ಜಯಿಸಿದರು, ಪ್ರಜೋತ್ಪತ್ತಿಯಿಂದ ಮೃತ್ಯುವನ್ನು ಜಯಿಸಿದರು. ಆದರೆ ಪ್ರಜೋತ್ಪತ್ತಿಯೊಡನೆ ನವೀನ ಸಮಸ್ಯೆಗಳೂ ಉದ್ಭವಿಸುತ್ತ ನಡೆದುವು. ಒಬ್ಬ ಆದಮ್ ಒಬ್ಬ ಈವ್ಗೆ ಪ್ರತಿಯಾಗಿ ಅನೇಕ ಆದಮ್ ಅನೇಕ ಈವ್ವರು ಉದಿಸಿದರು. ತತ್ಫಲವಾಗಿ ಪರಸ್ಪರ ಅವಿಶ್ವಾಸವೂ ಅವಿಶ್ವಾಸದಿಂದ ಪ್ರೇಮಸಂಶಯವೂ, ಪ್ರೇಮಸಂಶಯದಿಂದ ಮಾನವ ಸಂಸ್ಕೃತಿಯ ಮೂಲ ಸಂಸ್ಥೆಯಾದ ಮದುವೆಯೂ ಮೈದೋರಿದುವು. ಸಂಸ್ಕೃತಿಗಳ ಸಂಘರ್ಷಣಕ್ಕಾರಂಭವಾಯಿತು. ನೀಟ್ಸೇನ ಅತಿಮಾನವವಾದದ ಪ್ರತೀಕದಂತಿರುವ ಕೇನನು ನವೀನ ಜೀವನಕ್ಕಾಗಿ ಹಂಬಲಿಸುವನು, ಸರ್ವಜ್ಞನೊಬ್ಬನ ಸ್ವಪ್ನವನ್ನು ಕಾಣುವನು, ಸುರನರೋರಗರೆಲ್ಲರನ್ನೂ ಆಳಲಪೇಕ್ಷಿಸುವ ವಿಜಿಗೀಷು ವೃತ್ತಿಯವನಾಗುವನು. ಆದರೆ ಆದಮ್ ಶಾಂತಿಪ್ರಿಯ ಕೃಷಿಜೀವಿ, ಆದಮನ ಶಾಂತಿಮೂಲ ಸಂಸ್ಕೃತಿಯೇ ಕೇನನ ವಿನಾಶಮುಖಿ ಸಂಸ್ಕೃತಿಗೆ ದಾರಿ ಮಾಡಿಕೊಟ್ಟುದು ಹೇಗೆಂಬುದನ್ನು ಮಾರ್ಮಿಕವಾಗಿ ಚಿತ್ರಿಸಿದ್ದಾನೆ ಷಾ. ಈಗಲಾದರೂ ತಿಳಿಯಿತೆ ನೀಟ್ಸೇ ಷಾರಲ್ಲಿರುವ ಅಂತರ?

ಚಂದ್ರಕಾಂತ : ವಿಕಾಸವು ಪ್ರಕೃತಿಯ ಆಯ್ಕೆಯಿಂದಲೇ ಮುಂದುವರಿಯಲಿ, ಜೀವನ ಶಕ್ತಿಯ ಉತ್ಕಟೇಚ್ಛೆಯಿಂದಲೇ ಮುಂದೆ ಸಾಗಲಿ, ಅದರಿಂದ ಇಂದಿನ ನಮಗಾವ ಪ್ರಯೋಜನ? ಈಗ ನಮ್ಮೆದುರು ನಿಂತಿರುವ ನಮ್ಮ ಬಾಳಿನ ಬಗ್ಗೆ ನಿನ್ನ ಷಾನ ಸಂದೇಶವೇನು? ಆಶಾವಾದವೋ ನಿರಾಶಾವಾದವೊ?

ತಾರಾನಾಥ : ಷಾನು ಅಖಂಡ ಅದಮ್ಯ ಆಶಾವಾದಿ–ನಿರಾಶೆಯನ್ನು ಸರಿ ನಸುನಗುತ್ತ ಸ್ವಾಗತಿಸುವ ಆಶಾವಾದಿ.

ಉಷಾ : ನನಗಿದೊಂದೂ ಅರ್ಥವಾಗುತ್ತಿಲ್ಲ ತಾರಾನಾಥ! ಷಾನೊಬ್ಬ ಶುಷ್ಕ ಪ್ರವಾದಿ, ಜೀವನದ ರಂಜಕತೆಯ ಶತ್ರು, ಅದರ

ಭಾವನಾ ಸಂಪತ್ತಿನ ವೈರಿ, ಅಷ್ಟೇಕೆ ಮದುವೆ, ಸತಿಪತಿಗಳ ಸಮರ ಸಂಪ್ರೀತಿಗಳ ಹಗೆ! ಅವನ ಕನಸಿನ ಲೋಕದಲ್ಲಿ ನೀತಿ ನಡಾವಳಿಗಳಿಲ್ಲ, ಪ್ರೀತಿ ಗೀತಗಳಿಲ್ಲ, ವಿವಾಹ-ಕುಟುಂಬ ಸ್ನೇಹ ಸಂಬಂಧಗಳಿಲ್ಲ. ರಂಜನೆಯಿಲ್ಲ, ಕಲ್ಪನಾವಿಲಾಸವಿಲ್ಲ ಭಾವನಾ ವಿನ್ಯಾಸವಿಲ್ಲ-ಅದೊಂದು ಬರಡು ಜೀವಿಗಳ ಜಗತ್ತು.

ತಾರಾನಾಥ : ಒಂದೇ ಸಲಕ್ಕೆ ಬಹಳ ಬಾಣಗಳನ್ನು ಬಿಟ್ಟೆ ಉಷಾ. ಒಂದೊಂದನ್ನೇ ಪ್ರತ್ಯೇಕವಾಗಿ ಎದುರಿಸುವೆ. ಷಾನು ಜೀವನದ ಲಘು ರಂಜಕತೆ, ಭಾವನಾಪರವಶತೆ, ಕನಸುಣಿತನಗಳ ಹಗೆಯಿದ್ದುದು ನಿಜ; ಆದರೆ ಜೀವನದ ನೈಜ ಸ್ಫುರಣಗಳ ಶತ್ರುವಲ್ಲ. ಬುದ್ಧಿಗೂ ಬೆಲೆ ಬಹಳವಿಲ್ಲ ಅವನಲ್ಲಿ. ಆದರೆ ಜೀವನ ಶಕ್ತಿ ಹಾಗೂ ಅದರ ನೈಜ ಸ್ಫುರಣಗಳಲ್ಲಿ ಅವನಿಗೆ ಅಚಲ ವಿಶ್ವಾಸವಿದೆ. ಅವು ಸತ್ಯ, ಉಳಿದುವು ಮಿಥ್ಯವೆನ್ನುತ್ತಾನೆ ಅವನು. ಅವನು ಪ್ರೇಮವೇ ಆದರ್ಶವೆಂಬುದರ ವೈರಿ, ಪ್ರೇಮದ ವೈರಿಯಲ್ಲ. ಪ್ರೇಮವೇ ಬೇಡವೆಂದು ಅವನೆಂದೂ ಅಂದಿಲ್ಲ, ಪ್ರೇಮದ ಪ್ರೇಮ ಬೇಡವೆನ್ನುತ್ತಾನೆ. ಯುದ್ಧವೇ ಬೇಡವೆನ್ನುವುದಿಲ್ಲ-ಟಾಲಸ್ಟಾಯಿಯಂತೆ, ಯುದ್ಧದ ಮೋಹ ಬೇಡವೆನ್ನುತ್ತಾನೆ. ಪ್ರೇಮಕ್ಕಾಗಿ ಪ್ರೇಮ, ರೋಮಿಯೋ ಆ್ಯಂಟೊನೀ ಜಾತಿಯ ಪ್ರೇಮ ಬೇಡವೆನ್ನುತ್ತಾನೆ; ಆದರೆ ಜೀವನ ಶಕ್ತಿಯ ಪ್ರೇಮ ಉದ್ದೇಶಕ್ಕೆ ಅನುಗುಣವಾದ ಪ್ರೇಮ ಬೇಕೆನ್ನುತ್ತಾನೆ. ಇದರಂತೆಯೇ ಅಂಧ ಹಾಗೂ ಪರಂಪರಾಗತ ನೀತಿನೇತಿ ಬೇಡವೆನ್ನುತ್ತಾನೆ; ಆದರೆ ಸ್ವತಂತ್ರಮತಿ ಅನಿಯಂತ್ರಿತವಾಗಿ ಒಪ್ಪುವ ನೀತಿಪರತೆ ಬೇಕೆನ್ನುತ್ತಾನೆ. ಜೀವನಶಕ್ತಿಗೆ ಜೀವಸೃಷ್ಟಿ ಅನಿವಾರ್ಯವಾದ ಅವಶ್ಯಕತೆ. ಆದರೆ ಜೀವನಾದ್ಯಂತ ಎರಡು ಜೀವಿಗಳನ್ನು ಬಿಡಲಾಗದ ಬಂಧನದಲ್ಲಿರಿಸುವ ವಿವಾದ ಅಂಥ ಅನಿವಾರ್ಯವಾದ ಅವಶ್ಯಕತೆಯಲ್ಲವೆನ್ನುತ್ತಾನೆ.

ಉಷಾ : ತಡೆ ತಾರಾನಾಥ, ಹೆಣ್ಣೆಂದರೆ ಹೆರಿಗೆಯ ಯಂತ್ರವೆಂದೇ ನಿನ್ನ ಷಾನ ಅಭಿಪ್ರಾಯವೇನು?

ತಾರಾನಾಥ : ಇಲ್ಲ ಉಷಾ, ಹೆಣ್ಣಿನ ಬಗ್ಗೆ ಷಾನ ಕಲ್ಪನೆ ಮಹೋದಾತ್ತವಾದುದು. ಈ ಮೊದಲು ನಾನು ವಿವರಿಸಿದ ಆದಮ್ ಮತ್ತು ಈವ್ಹರ ತುಲನೆಯಲ್ಲಿ ಈವ್ಹನ ಬಗ್ಗೆ ಹೇಳುತ್ತ 'ಆದಮ್ ಮತ್ತು ಕೇನ್ ಇಬ್ಬರೂ ಭಯದ ದಾಸರು; ಆದರೆ ಈವ್ಹ್ ಮಾತ್ರ ಆಶಾಮೂರ್ತಿ! ಪುರುಷರು ಸ್ವರ್ಗವನ್ನು ನರಕವನ್ನಾಗಿ ಮಾಡುತ್ತಿರಲಿ, ಸ್ತ್ರೀ ಮಾತ್ರ ದಾರುಣವಾದ ಪ್ರಸವವೇದನೆಯನ್ನು ಅನುಭವಿಸುತ್ತ

ಹೊಸ ಸೃಷ್ಟಿಯ ಹೊಂಗನಸನ್ನು ಕಾಣುತ್ತಲಿರುತ್ತಾಳೆ; ಇಂದಿನ ನಿರಾಶೆಯು ಅದೆಷ್ಟೇ ನಿಜ ಗಾಡಾಂಧಕಾರಮಯವಾಗಿರಲಿ, ಮುಂದೆ ಹೊಸ ಹೊಸ ಹಸುಗೂಸುಗಳು, ಹುಟ್ಟುವ ಹಿಗ್ಗಿನಲ್ಲಿ ಹೊಸ ಆಸೆಯ ಬೆಳಕು ಕಾಣುತ್ತಾಳೆ ಎಂದಿದ್ದಾನೆ. ಈ ಹೆಣ್ಣಿನ ಕಲ್ಪನೆ ಸಾಮಾನ್ಯವಾದುದೇ?

ಉಷಾ : ನೀನು ಹೀಗೆ ಹೇಳುವಿ, ಷಾನ ಸಾಹಿತ್ಯ ಓದಿದ ಇನ್ನೂ ಕೆಲವರು ಅವನೊಬ್ಬ ನೀರಸ, ಶುಷ್ಕ ಶೃಂಗಾರ ವಿರೋಧಿ ನೀತಿಬೋಧಕನೆನ್ನುತ್ತಾರೆ. ಅವನು ಹೆಣ್ಣುತನವನ್ನೇ ಹೀಯಾಳಿಸುವವನೆನ್ನುತ್ತಾರೆ. ಯಾವುದು ನಿಜ.

ತಾರಾನಾಥ : ಅವರೆಲ್ಲ ಷಾನನ್ನು ಸರಿಯಾಗಿ ಅರ್ಥಮಾಡಿಕೊಳ್ಳದ ಜನ ಉಷಾ. ಷಾನು ಜೀವಶಾಸ್ತ್ರಜ್ಞ, ಅರ್ಥಶಾಸ್ತ್ರಜ್ಞ, ಸಮಾಜವಾದಿ ಸಾಹಿತಿ. ಅವನು ಸ್ತ್ರೀತ್ವಕ್ಕೆ ಸದ್ಯದಲ್ಲಿ ಸಲ್ಲುತ್ತಲಿರುವ ತೋರಿಕೆಯ ಪೂಜೆ, ವ್ಯಾವಹಾರಿಕ ದಾಸ್ಯದಿಂದ ಸಂತುಷ್ಟನಾಗುವುದು ಹೇಗೆ? ನೀನೇ ಹೇಳು ಉಷಾ, ಸದ್ಯಕ್ಕೆ ಸ್ತ್ರೀಗೆ ಇರುವ ಸ್ಥಾನವೇನಿದೆ ಸಮಾಜದಲ್ಲಿ? ಪುರುಷರು 'ರೂಪರಾಣಿ, ಪ್ರೇಮವಾಣಿ' ಯೆಂದವಳನ್ನು ಹೆಚ್ಚು ಕಡಿಮೆ ಆರಾಧಿಸುತ್ತಾರೆ. ಆದರೆ ಅವಳ ಸಾಮಾಜಿಕ ಸ್ಥಾನಮಾನಗಳ ಪ್ರಶ್ನೆ ಬರುತ್ತಲೇ ಅವಳನ್ನು ನೂರು ಬಂಧನಗಳಲ್ಲಿ ಬಿಗಿದು ಪಾರತಂತ್ರ್ಯ ಪರಾವಲಂಬನಗಳಲ್ಲಿ ನೂಕಿಬಿಡುತ್ತಾರೆ! ಇಂಥ ಪ್ರೇಮ, ಇಂಥ ಶೃಂಗಾರ, ಇಂಥ ನಾರೀಗೌರವ ಷಾನಿಗೆ ಬೇಕಿಲ್ಲ. ಇವನ್ನು ವಿರೋಧಿಸಿದ ಷಾನೇ ಸ್ತ್ರೀಯರ ಆರ್ಥಿಕ ಸ್ವಾವಲಂಬನ ರಾಜಕೀಯ ಬಾಧ್ಯತೆಗಳಿಗಾಗಿ ಹಗಲಿರುಳು ಹೋರಾಡಿದ್ದಾನೆ. ಸ್ತ್ರೀಯರಿಗೆ ಷಾ ಹೇಳುವುದಿಷ್ಟು- 'ರೋಮಾನ್ಸ ಅಲ್ಲ, ಫೈನಾನ್ಸ ಬೇಡಿರಿ, ಫ್ರಾಂಚಾಯ್ಜ ಬೇಡಿರಿ!'

ಚಂದ್ರಕಾಂತ : ಎಳ್ಳಷ್ಟೂ ರೋಮಾನ್ಸ್ ಇಲ್ಲದ ಜೀವನ ಅದೆಂಥ ಜೀವನ ತಾರಾನಾಥ? ಶೃಂಗಾರವೆಲ್ಲ ಚಂದ್ರಕಾಂತಿಯೆನ್ನುವನಂತೆ ನಿಮ್ಮ ಷಾ. ಕಾಳು ರಸತುಂಬಿಕೊಳ್ಳುವುದಕ್ಕೆ ಸೂರ್ಯಕಾಂತಿ ಎಷ್ಟು ಅಗತ್ಯವೋ ಜೀವನಫಲ ಪಕ್ವವಾಗುವುದಕ್ಕೆ ಚಂದ್ರಕಾಂತಿಯೂ ಅಷ್ಟೇ ಅಗತ್ಯವಾದುದೆಂಬುದನ್ನು ಒಪ್ಪಲಿಲ್ಲ ಅವನು.

ತಾರಾನಾಥ : ಷಾನಿಗಿಂತ ಜಾಣನಾಗಲು ಹವಣಿಸುತ್ತಲಿರುವೆ ಚಂದ್ರಕಾಂತ. ಸಂತೋಷ, ನೀನು ನಿಜವಾದ ಷಾ-ಶಿಷ್ಯ. ಸ್ವಲ್ಪ ಯೋಚಿಸು. ನೀನು ಶೃಂಗಾರವೆಂದು ತಿಳಿದುಕೊಂಡಿರುವುದೆಲ್ಲ ಕಾಮದ ಬಾಹ್ಯ ಚೇಷ್ಟೆಗಳು ಮಾತ್ರ. ಷಾನು ಕಾಮವನ್ನು ತಿರಸ್ಕರಿಸಲಿಲ್ಲ. ಅದೊಂದು

ಜೀವನಶಕ್ತಿಯ ಪ್ರಬಲ ಪ್ರಸ್ಫುರಣ. ಬುದ್ಧಿಭಾವನೆಗಳಿಗಿಂತ ಸ್ಫುರಣಗಳಿಗೆ ಷಾನು ಹೆಚ್ಚು ಮಹತ್ವವಿತ್ತಿರುವನೆಂದು ಇದಾಗಲೇ ಹೇಳಿದ್ದೇನೆ. ಅವು ಎಂದಿಗೂ ತ್ಯಾಜ್ಯವಲ್ಲ, ತಿರಸ್ಕರಣೀಯವಲ್ಲ. ಕಾಮವೂ ತ್ಯಾಜ್ಯವಲ್ಲ. ಅದು ಸ್ತ್ರೀಪುರುಷರಿಗೆ ಬೇಕಿರಲಿ, ಬೇಕಿರದಿರಲಿ, ಜೀವನಶಕ್ತಿಯ ವಿಕಸನಕ್ಕೆ ಅತ್ಯಗತ್ಯವಾದುದು. ಅದರ ಮೂಲಕವೇ ಸೃಷ್ಟಿಯ ಹೊಸ ಪ್ರಯೋಗಗಳು ನಡೆಯಬೇಕು. ಕಾರಣ ನಾವು ಸುಮ್ಮನೇ ಕುಳಿತರೂ ಅದು ಸುಮ್ಮನಿರದು. ಅದು ಕಾಮವನ್ನು ಪ್ರಚೋದಿಸಿದಾಗ ಅದನ್ನು ಎದುರಿಸುವುದು ಯಾವ ಸ್ತ್ರೀಪುರುಷರಿಗೂ ಸಾಧ್ಯವಿಲ್ಲ; ಅದು ಪ್ರಚೋದಿಸದಿದ್ದಾಗ ಕಾಮದಿಂದ ಸ್ತ್ರೀಪುರುಷರಾರೂ ಆಕರ್ಷಿತರಾಗುವುದಿಲ್ಲ. ಎಂದ ಮೇಲೆ ಶೃಂಗಾರಾದಿಗಳು ಅನಾವಶ್ಯಕವಲ್ಲವೆ? ಅನಾವಶ್ಯಕವಾದುದು ಅನುಸರಣೀಯವೆ?

ಉಷಾ : ರೂಪಲಾವಣ್ಯಗಳು ಶೃಂಗಾರದ ಆಶ್ರಮದಲ್ಲಿ ಅರಳುತ್ತ ಬಂದಿವೆ. ಶೃಂಗಾರಕ್ಕೆ ಸುರಂಗ ಹಚ್ಚಿದರೆ ಸೌಂದರ್ಯ ಸಾಧನೆಯ ಗತಿ?

ತಾರಾನಾಥ : ಷಾನ ಮತದಂತೆ ಸೌಂದರ್ಯವು ಜೀವನಶಕ್ತಿಯ ಸೃಷ್ಟಿಕಾರ್ಯದ ಚರಮಗಮ್ಯವಲ್ಲ. ಹಾಗಿದ್ದಿದ್ದರೆ ವಿವಿಧ ಜಾತಿಯ ಸುಂದರ ಪಶು ಪಕ್ಷಿಗಳನ್ನು ಸೃಜಿಸಿದ ಮೇಲೆ ಅದು ಮಾನವನ ಸೃಷ್ಟಿಗೆ ಕೈ ಹಾಕುತ್ತಿರಲಿಲ್ಲ. ಯಾವ ಮಾನವನೂ ಸೃಷ್ಟಿಯ ಸುಂದರತಮ ಪಕ್ಷಿಯಷ್ಟು ಸುಂದರನಾಗಿಲ್ಲ. ಸೃಷ್ಟಿಯ ಉದ್ದೇಶ. ಸೌಂದರ್ಯವಲ್ಲ, ಸ್ವಾತ್ಮಾನುಭೂತಿ (self consciousness). ಈ ಉದ್ದೇಶ ಈಡೇರುವಂತೆ ಅದು ಹೊಸ ಹೊಸ ಪ್ರಯೋಗಗಳನ್ನು ಮಾಡುತ್ತ ಹೊರಟಿದೆ. ಮುಂದೆ ಮಾನವಜೀವಿಯೂ ಈ ಪ್ರಯೋಗಕ್ಕೆ ಅಯೋಗ್ಯನೆಂದು ಕಂಡುಬಂದರೆ ಅವನನ್ನೂ ತ್ಯಜಿಸಿ ಬೇರೊಂದು ಹೊಸ ಸೃಷ್ಟಿಗೇ ಕೈಹಾಕಬಹುದು ಅದು. ಆ ಹೊಸ ಸೃಷ್ಟಿಯೇ ಅತಿಮಾನವ ಸಮಾಜ. ಪರಿಪೂರ್ಣ ಆತ್ಮಾನುಭೂತಿಯನ್ನು ಪಡೆದ ಅತಿಮಾನವ ಸೃಷ್ಟಿ ಸಂಭವನೀಯ. ಇದು ಷಾನ ಸಂದೇಶ.

ಚಂದ್ರಕಾಂತ : ಮಾನವ ಜನಾಂಗದ ಭವಿತವ್ಯದ ಬಗ್ಗೆ ಇಷ್ಟೊಂದು ಆಶಾವಾದಿಯಾಗಿದ್ದ ಷಾನು ಸಂಸಾರಸುಖದ ಬಗ್ಗೆ ಇಷ್ಟೊಂದು ಉದಾಸೀನನಾಗಿದ್ದುದು, ಉಪೇಕ್ಷೆಯಿಂದಿದ್ದುದು ಸೋಜಿಗದ ಸಂಗತಿಯಲ್ಲವೆ?

ತಾರಾನಾಥ : ಮತ್ತೊಂದು ತಪ್ಪು ತಿಳಿವಳಿಕೆಯಿದು ಚಂದ್ರಕಾಂತ. ಷಾನು ಸುಖವನ್ನೂ ಉಪೇಕ್ಷಿಸಿರುವನೆ? ಪ್ರತಿಯೊಂದು ಕೃತಿಯ

ಬೆಲೆಯನ್ನೂ ಅದು ಸುಖದ ಮೇಲೆ ಮಾಡುವ ಪರಿಣಾಮದ ಮಾನದಿಂದ ಕಟ್ಟಬೇಕೆನ್ನುವ ಷಾನು ಸುಖದ ವಿರೋಧಿಯೆ? ಷಾನು ಗಂಭೀರನಾಗಿದ್ದ. ನಿಜ. ಇದಕ್ಕೆ ಕಾರಣ ಸುಖದ ಉಪೇಕ್ಷೆಯಲ್ಲ. ಜೀವನವು ಹಗುರಾಗಿ ಕಾಣುವ ವಸ್ತುವಲ್ಲ, ಅತ್ಯುದಾತ್ತವಾದುದು; ಅದನ್ನು ಗಂಭೀರವಾಗಿಯೇ ಉಪಯೋಗಿಸಿಕೊಳ್ಳಿರೆನ್ನುತ್ತಾನೆ ಷಾ. ಕರ್ತವ್ಯವೂ ಒಂದು ಆನಂದವೆಂದು ಆದರ್ಶವಾದಿಗಳು ತಿಳಿದರೆ ಆನಂದವೂ ಒಂದು ಕರ್ತವ್ಯವೆಂದು ಷಾ ತಿಳಿದಂತಿದೆ. ಅಷ್ಟೇಕೆ, ನಿರಾಶೆಯನ್ನೂ ಕರ್ತವ್ಯವೆಂದು ಸ್ವಾಗತಿಸಲು ಸಿದ್ಧನವನು. ಅವನೊಬ್ಬ ವ್ಯಾವಹಾರಿಕ ಅನುಭಾವಿ (Practical Mystic).

ಸೂರ್ಯಕಾಂತ : ಹಾಗಾದರೆ ನಾವೆಲ್ಲ ಷಾನ ಬಗ್ಗೆ ಇಲ್ಲದ ಸಲ್ಲದ ಹೊಲ್ಲ ಕಲ್ಪನೆಗಳನ್ನು ಕಟ್ಟಿಕೊಂಡು ಕುಳಿತಿದ್ದೇವೆಂದ ಹಾಗಾಯಿತು.

ತಾರಾನಾಥ : ಅದರಲ್ಲಿ ಸಂದೇಹವೇನಿದೆ? ನನ್ನ ನಿನ್ನಂಥವರ ಮಾತದಂತಿರಲಿ, ಎಂಥೆಂಥವರೂ ಹೊರತಿಲ್ಲ ಇದಕ್ಕೆ. ಷಾನ ವೈಶಿಷ್ಟ್ಯವೇ ಅದು. ಅವನೊಂದು ಒಡೆಯಲಾಗದ ಒಗಟ, ಬಿಡಿಸಲಾಗದ ಬೆಡಗಿನ ವಚನ. ಅವನು ಏನು ಅಹುದು, ಏನು ಅಲ್ಲ? ಸಾಹಿತಿ, ರಾಜಕಾರಣಿ, ಕಲಾವಿಮರ್ಶಕ, ಫೇಬಿಯಾನ್ ಪ್ರಭೇದದ ಸಮಾಜವಾದಿ, ಅರ್ಥಶಾಸ್ತ್ರಜ್ಞ, ಪ್ರಾಣಿಶಾಸ್ತ್ರ ಪಾರಂಗತ, ಮೂರ್ತಿಭಂಜಕ, ದಾರ್ಶನಿಕ, ಪತ್ರಿಕಾ ಲೇಖಕ, ಸ್ವತಂತ್ರ ನೀತಿ ಪ್ರಣಾಲಿಯ ಪ್ರತಿಪಾದಕ, ಪ್ರಚಾರಕ, ಮಾತುಗಾರ, ಸೃಜನಶೀಲ ವಿಕಾಸವಾದಿ, ಶಾಕಾಹಾರವಾದಿ–ಇನ್ನೂ ಏನೇನೋ! ಇಷ್ಟೊಂದು ವಿಷಯಗಳ ಬಗ್ಗೆ ಬರೆದ ಇವನಲ್ಲಿ ಎಲ್ಲಿಯೋ ಒಂದು ವಿರೋಧಾಭಾಸ ತಲೆದೋರಿದ್ದರೆ ಆಶ್ಚರ್ಯವಿಲ್ಲ. ಆದರೆ ಸೂಕ್ಷ್ಮಮತಿಗಳಿಗೆ ಸುಸಂಬದ್ಧತೆ ತೋರದಿರದು ಷಾನ ಕೃತಿಗಳಲ್ಲಿ. ಅತಿಮಾನವವಾದಿಯಾಗಿದ್ದೂ ಅವನು ಸಾಮಾನ್ಯ ಮಾನವರ ಬಗ್ಗೆ ಅನಾದರವುಳ್ಳವನಾಗಿರಲಿಲ್ಲ. ಸಾಮಾನ್ಯ ಮಾನವರ ಜೀವನ ವಿಕಾಸಕ್ಕೆ ಆತಂಕವಾಗಿ ನಿಂತಿರುವ ಅಡೆ ತಡೆಗಳನ್ನು ಸಮಾಜವಾದದಿಂದ ಹೋಗಲಾಡಿಸಲು ಹವಣಿಸಿದನವನು. ಆದರೆ ಅವನಿಗೆ ಬೇಕಾಗಿದ್ದುದು ಸಮಾಜವಾದವಲ್ಲ; ಸೃಜನಶೀಲ ವಿಕಾಸ. ಇದನ್ನರಿಯದವರು ಷಾನನ್ನು ಒಂದೇ ಉಸಿರಿನಲ್ಲಿ ಅತಿಮಾನವ ಸಾಮಾನ್ಯ ಮಾನವರಿಬ್ಬರ ಬಗ್ಗೆಯೂ ಮಾತನಾಡುವುದನ್ನು ಕಂಡು ಇದು ಷಾನ ವಿಚಾರಸರಣಿಯ ವಿಸಂಗತತೆಯೆಂದು ಭ್ರಮಿಸುವುದುಂಟು. ಷಾನನ್ನು ಸರಿಯಾಗಿ ಅರ್ಥಮಾಡಿಕೊಳ್ಳಿರಿ. ಷಾನು ಜೇಸಸ್‌ನ ವ್ಯಕ್ತಿತ್ವಕ್ಕೆ ಮಣಿಯುತ್ತಾನೆ,

ಆದರೆ ಕ್ರೈಸ್ತ ಮತವನ್ನು ಒಪ್ಪುವುದಿಲ್ಲ; ಯಾವುದನ್ನು ನಾವು ಠೋಕುಗಟ್ಟಲೆಯಲ್ಲಿ ಶಾಸನವೆಂದು ಕರೆಯುವೆವೋ ಅದರ ಚಿಲ್ಲರೆ ಅಂಗಡಿಯೇ ಅಪರಾಧವೆಂದು ವಾದಿಸುತ್ತಾನೆ; ವಿಶ್ವಾಸದಿಂದ ಅವನು ರಿಪಬ್ಲಿಕನ್, ಆದರೆ ಆಧುನಿಕ ಪ್ರಜಾತಂತ್ರದಲ್ಲಿ ಅವನಿಗೆ ವಿಶ್ವಾಸವಿಲ್ಲ, ಇಂದಿನ ಚಿಕಿತ್ಸಾ ಕ್ರಮವು ಜಾದೂಗಾರಿಕೆಯ ಅಂಗವೊಂದು ಎನ್ನುತ್ತಾನೆ; ಜೀವನಾದ್ಯಂತ ವಿಜ್ಞಾನಕ್ಕೆದುರಾಗಿ ಹೋರಾಡಿದವನೂ ಅವನೇ, ನಮ್ಮ ಸಂಸ್ಥೆಗಳನ್ನೆಲ್ಲ ನೈಜ ವೈಜ್ಞಾನಿಕ ತಳಹದಿಯ ಮೇಲೆ, ನೈಸರ್ಗಿಕ ಇತಿಹಾಸದ ಆಧಾರದ ಮೇಲೆ ಪುನರ್ರಚಿಸಬೇಕೆಂದು ಪ್ರತಿಪಾದಿಸಿದವನೂ ಅವನೇ; ಅವನಷ್ಟು ಸ್ತ್ರೀಯರ ಗೇಲಿ ಮಾಡಿದವರು ಇನ್ನಾರಿಲ್ಲ, ಆದರೆ ಅವರ ಹಕ್ಕುಬಾಧ್ಯತೆಗಳಿಗಾಗಿ ಅವನಷ್ಟು ಹೋರಾಡಿದವರೂ ಇಲ್ಲ; ಕ್ರಾಂತಿಯ ಕಹಳೆಯನ್ನು ಊದಿದವನೂ ಅವನೇ, ಅರಾಜಕತೆ, ಉಚ್ಛೃಂಖಲ ವೃತ್ತಿಗಳನ್ನು ಖಂಡಿಸಿದವನೂ ಅವನೆ; ಸಲಹೆಗಾಗಿ ಬಂದ ಸಂಪ್ರದಾಯವಿರೋಧಿ ಸ್ತ್ರೀಯರಿಗೆ ಅತ್ಯಂತ ಸಾಂಪ್ರದಾಯಕವಾದ ಸಲಹೆಯಿತ್ತ ಎಂದರೆ ಮದುವೆಯಾಗಿರೆಂದ, ಆದರೆ ತಾನೇ ಮದುವೆಯ ವಿರುದ್ಧ ವಾದಿಸಿದ; ಅರಾಜಕತೆಯ ಪೂಜಾರಿಯಿವನೆಂದು ತಿಳಿದು ಬಳಿಗೆ ಬಂದವರಿಗೆ ಶುಷ್ಕ ವೈಧಾನಿಕ ಆಂದೋಲನದ ಸಲಹೆಯಿತ್ತು ಕಳಿಸಿದ; ತಾನು ಮಹಾಮೇಧಾವಿಯೆಂದು ಪ್ರಾಮಾಣಿಕವಾದ ಹೆಮ್ಮೆಯನ್ನು ತೋರಿದ ತಾನೇ ಮತಿಯ ನ್ಯೂನತೆಗಳನ್ನೂ ಎತ್ತಿ ತೋರಿ, ಮಾನವ ಆಕಾಂಕ್ಷೆಗಳ ಮೂಲದಲ್ಲಿ ಚಲಿಸುತ್ತ ತನ್ನ ಮಾನವಯಂತ್ರ ಸಾಮಗ್ರಿಗಿಂತಲೂ ಮಹೋನ್ನತವಾದ ಉದ್ದೇಶವನ್ನು ಇರಿಸಿಕೊಂಡಿರುವ ಜೀವನಶಕ್ತಿಯ ಗುಣಗಾನ ಮಾಡಿದ. ಇವೆಲ್ಲ ತೋರಿಕೆಯ ವಿಪರ್ಯಾಸಗಳು, ವಿರೋಧಾಭಾಸಗಳು. ಆದರೆ ಬಲ್ಲವರಿಗೆ ಈ ಎಲ್ಲ ವಿರೋಧಾಭಾಸಗಳ ಹಿಂದೆ ಅವನ ಸುಸಂಬದ್ಧತೆಯ ಸೂರ್ಯರಶ್ಮಿಗಳೂ ಗೋಚರಿಸದಿರವು.

ಉಷಾ : ಅದೇನೆ ಇರಲಿ, ಷಾನು ಬಹಳ ಜಂಭದಕೋಳಿ, ತಾರಾನಾಥ. ತನ್ನ ಪೌರುಷವನ್ನು ತಾನೇ ಕೊಚ್ಚಿಕೊಳ್ಳುವಲ್ಲಿ ಅವನನ್ನು ಮೀರುವವರಿಲ್ಲ.

ತಾರನಾಥ : ಇಲ್ಲ ಉಷಾ, ಕೀರ್ತಿಕಾಮಿನಿಯನ್ನು ಕಡೆಗಣಿಸಿದನವನು, ಕಾಮಿಸಲಿಲ್ಲ. ಹೊಗಳುವವರನ್ನು ಕಂಡರೆ ಹುದುಗುವ ಸ್ವಭಾವ ಅವನದು. ಯಾರಾದರೂ ತನ್ನ ಅಭಿಪ್ರಾಯ ಸರಿಯೆಂದು ಸೈಯೆನ್ನ ಬಂದರೆ ಅದು ತಪ್ಪೆಂದು ತಾನೇ ಸಾಧಿಸಿಬಿಡುತ್ತಿದ್ದನು;

ತಪ್ಪೆಂದು ಬಂದರೆ ಒಪ್ಪೆಂದು ವಾದಿಸುತ್ತಿದ್ದನು. ಜನಾನುರಾಗಕ್ಕಾಗಿ ಅವನೆಂದಿಗೂ ಅಗ್ಗವಾಗಲಿಲ್ಲ.

ಶಿಶಿರ : ಅವನು ತನ್ನ ತಪ್ಪನ್ನು ಒಪ್ಪಿಕೊಂಡಿರುವನೆ? ತಾನು ವಾದಿಸಿದ್ದೇ ಸರಿಯೆಂಬ ಹಟಮಾರಿಯಲ್ಲವೇ ಅವನು?

ತಾರನಾಥ : ಏಕೆ ಒಪ್ಪಿಲ್ಲ? ತಾನು ನಂಬಿದ್ದ ತನ್ನ ಪ್ರಗತಿವಾದವು ತಪ್ಪಾದುದೆಂದು ತಾನೇ ಒಪ್ಪಿಕೊಂಡನು. ತನ್ನನ್ನು ತಾನು ತಿದ್ದಿಕೊಳ್ಳದವನು ಅನ್ಯರನ್ನು ತಿದ್ದಬಲ್ಲನೆ?

ಉಷಾ : ನಿಜವಾಗಿಯೂ ಷಾ ಮಹಾಮಾನವ ತಾರಾನಾಥ. ಅವನು ಕೇವಲ ಕುಚೋದ್ಯಗಾರನಲ್ಲ, ಮಹಾಪುರುಷ.

ಶಿಶಿರ : ಏನಾದರೂ ಷಾನ ಸ್ಮಾರಕ ಸೂಚಿಸು ತಾರಾನಾಥ.

ತಾರಾನಾಥ : ಕಲ್ಲುಮಣ್ಣುಗಳ ಸ್ಮಾರಕ ಸಲ್ಲದು ಷಾನಿಗೆ ಶಿಶಿರ, ಅವನ ಕೃತಿಗಳನ್ನು ಕನ್ನಡಿಸುವುದು, ಅವನ ನಾಟಕಗಳನ್ನು ಕನ್ನಡದಲ್ಲಿ ಕನ್ನಡಿಗರಿಗಾಗಿ ಆಡುವುದು, ಅವನ ಬಗ್ಗೆ ಆಗಾಗ ಚರ್ಚಿಸುವುದು–ಇವೇ ಸ್ಮಾರಕ ಷಾನಿಗೆ.

ಎಲ್ಲರೂ : ಒಪ್ಪಿದೆವು. ನಮ್ಮ ಜನ್ಮದಲ್ಲಿ ಒಂದಾದರೂ ಷಾನ ನಾಟಕವನ್ನು ಕನ್ನಡದಲ್ಲಿ ಆಡಿ ತೋರಿಸುವೆವು. ಇದೇ ನಮ್ಮ ಶ್ರದ್ಧಾಂಜಲಿ ಷಾನಿಗೆ.

ತುಂಗಭದ್ರೆ-ಮಂಗಲೆ

ತುಂಗಭದ್ರಾ ಜಲಾಶಯವು ನಮ್ಮ ನಾಡಿನ ನವೋದಯದ ಪ್ರತೀಕ, ನಮ್ಮ ಸಾಹಸದ ಸಂಕೇತ. ಬರದೊಡನೆ, ಕೊರತೆಯೊಡನೆ ನಾವು ನಡೆಸಿರುವ ಹೋರಾಟದಲ್ಲಿ ನಮಗೆ ದೊರೆತಿರುವ ಸಫಲತೆಯ ಸ್ಮಾರಕ. ಇಂಥ ಯೋಜನೆಗಳನ್ನು ಆಧಾರವಾಗಿಟ್ಟು ಕೊಂಡು ಏನಾದರೂ ಬರೆಯಬಹುದೆ? ಬರೆಯಬಹುದೆಂಬುದಕ್ಕೆ ಇದೊಂದು ನಿದರ್ಶನ.

ನೀರಿನಲ್ಲಿ ಭಾರವಾದ ವಸ್ತು ಮುಳುಗುವ ಸದ್ದು... ಜಗದ ಜೀವಿಗಳೆಲ್ಲ ಪ್ರಾಣಸಂಕಟದಿಂದ ಗೋಳಿಡುವ ಸದ್ದು.... ದೇವತೆಗಳು ವಿಷ್ಣುವಿಗೆ ಮೊರೆಯಿಡುವ ಸ್ವರ :

ಪೊರೆ ಮುರಾರಿ ಪೊರೆ ಮುರಾರಿ

ಹಿರಣ್ಯಾಕ್ಷ ಲೋಕವ

ಕಡಲಿಗೆಸೆದು ಹರಡಿಸಿಹನು

ಲೋಕದಲ್ಲಿ ಶೋಕವ!

ನರಕವಾಯ್ತು ಮರ್ತ್ಯವಿಂದು

ಉಳಿಸನಿನ್ನು ನಾಕವ

ನೀನೆ ಗತಿಯು ನೀನೆ ಮತಿಯು

ಉಳಿಸು ಮರ್ತ್ಯಲೋಕವ!

ವರಾಹದ ವಿಜಯೋನ್ಮಾದ ನಾದ....ರಸಾತಳದಿಂದ ಪೃಥ್ವಿಯನ್ನೆತ್ತಿ ತರುತ್ತಿರುವ ಸದ್ದು.... ಜಗತ್ತಿನ ಜೀವಿಗಳ ಸಂತಸದ ಸ್ವರ:

ನಮೋ ನಿನಗೆ ಹರಿಯೆ ದೊರೆಯೆ

ನಮಿಪೆ ಭವವು ಹರಿಯೆ

ಸೊಗದ ಸರಿಯೆ ಜಗದ ಸಿರಿಯೆ

ಮರೆಯೆ ನಿನ್ನ ಮರೆಯೆ!

ವರಾಹವು ತೇಕುತ್ತಿರುವ ಸದ್ದು.....ಆ ಮೇಲೆ ಕತೆಗಾರನ ಸ್ವರ:

ಕತೆಗಾರ : ವಿಷ್ಣು ವರಾಹವಾಗಿ ವಿಶ್ವವನ್ನೆತ್ತಿ ಮತ್ತೆ ಪ್ರಸ್ತಾಪಿಸಿ ವರಾಹಗಿರಿಯ ಮೇಲೆ ಕುಳಿತು ದಣಿವಾರಿಸಿಕೊಳ್ಳುತ್ತಲಿದ್ದಾನೆ. ಶ್ರಮ-ಸ್ವೇದ ಎರಡೂ ಕೋರೆದಾಡೆಗಳಿಂದ ಇಳಿಯತೊಡಗಿದೆ. ಉದ್ದ ಕೋರೆಯಿಂದಿಳಿದ ಬೆಮರು ತುಂಗೆಯಾಗಿ, ಭದ್ರ ಕೋರೆಯಿಂದಿಳಿದ ಬೆಮರು ಭದ್ರೆಯಾಗಿ ಅವಳಿ ನದಿಗಳ ಉಗಮವಾಗುತ್ತದೆ. ಪಶ್ಚಿಮ ಘಟ್ಟದ ಗಂಗಾಮೂಲದಲ್ಲಿ ಹುಟ್ಟಿದ ಈ ಎರಡೂ ನದಿಗಳು ಒಂದನ್ನೊಂದು ಅರಸುತ್ತ ಕೂಡಲಿ ಕ್ಷೇತ್ರದವರೆಗೆ ಒಂದನ್ನೊಂದು ಕೂಡದೆಯೇ ಹರಿಯುತ್ತವೆ. ಅಲ್ಲಿ ಎರಡರ ಮಧುರ ಮಿಲನ.

ಭದ್ರೆ : ಬಾ ತಂಗೆ, ತುಂಗೆ! ಒಂದೆ ಮೂಲದಲ್ಲಿ ಮೂಡಿ, ಒಂದೆ ತಾಯ

ತೊಡೆಯಲಾಡಿ ಇದುವರೆಗೂ ಅಗಲಿ ಅಲೆದಾಯ್ತು. ಇನ್ನಾದರೂ ಸಂಗಮಿತರಾಗಿ ಸಾಗೋಣ ಬಾ–ಆಡುತೊಂದೇ ಮಾತ, ಹಾಡುತೊಂದೇ ಗೀತ, ಆಗುತೊಂದೇ ಪ್ರೀತಿಸ್ರೋತ!

ತುಂಗೆ : ಬಂದೆ ಭಗಿನಿ, ಭದ್ರೆ! ಬಾ, ಬಿಗಿದಪ್ಪು–ನನ್ನ ಅಸ್ತಿತ್ವವೆಲ್ಲ ಲಯವಾಗಿ ನಿನ್ನ ವ್ಯಕಿತ್ವದಲ್ಲಿ ಲೀನವಾಗುವ ಹಾಗೆ ಅಪ್ಪು! ಹೆಸರಿನಲ್ಲಿ ಮಾತ್ರ ತುಂಗೆಭದ್ರೆಯೆಂಬ ಭೇದ ಉಳಿಯಲಿ!

ಭದ್ರೆ : ಹೆಸರಿನಲ್ಲಾದರೂ ಹೇಗೆ ಉಳಿಯುತ್ತದೆ ಭೇದ ಭಗಿನಿ? ಇನ್ನು ನಮ್ಮಿಬ್ಬರ ಸಂಗಮಿತ ರೂಪಕ್ಕೆ 'ತುಂಗಭದ್ರೆ'ಯೆಂಬ ಸಂಯುಕ್ತ ನಾಮವೇ ಶೋಭಿಸುವುದು. ನಮ್ಮಿಬ್ಬರ ದ್ವೈತವು ಅದ್ವೈತವಾಗಿ ಪರಿವರ್ತಿತವಾದ ಈ ಪವಿತ್ರ ಸ್ಥಾನಕ್ಕೆ 'ಕೂಡಲ' ಎಂಬ ಸಾರ್ಥಕ ನಾಮ ಬಂದು ಮುಂದೆ ಇಲ್ಲಿಗೆ ಅದ್ವೆತಕೇಸರಿ ಆದ್ಯ ಶಂಕರಾಚಾರ್ಯರು ಆಗಮಿಸಿ ಇದನ್ನು ಅದ್ವೈತ ಸಿದ್ಧಾಂತದ ನಂದನವನವನ್ನಾಗಿ ಮಾರ್ಪಡಿಸುವರು. 'ಕೂಡಲಿ'ಯು ಜೀವಿಗಳು ಶಿವನನ್ನು ಕೂಡುವುದರ ಸಂಕೇತ ಸ್ಥಾನವಾಗಿ ಶೋಭಿಸುವುದು. ಇದೊ, ಶಂಕರ ಭಗವತ್ಪಾದರ ಅಮೃತವಾಣಿ, ಅಭಯವಾಣಿ.

ವೃಂದಗೀತ : ಮನೋಬುದ್ಧ್ಯಹಂಕಾರಚಿತ್ತಾನಿ ನಾಹಂ

ನ ಚ ಶ್ರೋತ್ರ ಜಿಹ್ವೇ ನ ಚ ಪ್ರಾಣ ನೇತ್ರೇ

ನ ಚ ವ್ಯೋಮಭೂಮಿರ್ನತೇಜೋ ನ ವಾಯು–

ಶ್ಚಿದಾನಂದ ರೂಪಃ ಶಿವೋಹಂ ॥

ನಮೇ ದ್ವೇಷ ರಾಗೌ ನಮೇ ಲೋಭ ಮೋಹೌ

ಮದೋ ನೈವ ಮೇ ನೈವ ಮಾತ್ಸರ್ಯ ಭಾವಃ

ನ ಧರ್ಮೋ ನ ಚಾರ್ಥೋ ನ ಕಾಮೋ ನ ಮೋಕ್ಷ–

ಶ್ಚಿದಾನಂದ ರೂಪಃ ಶಿವೋಹಂ ಶಿವೋಹಂ ॥

ತುಂಗಭದ್ರೆಯ ತರಂಗ ಸಂಗೀತ ಸ್ವಲ್ಪ ಹೊತ್ತು ಸಾಗುತ್ತದೆ. ಮೇಲೆ ಮತ್ತೊಂದು ನದಿ ಬಂದು ಕೂಡುತ್ತದೆ.

ಕುಮುದ್ವತಿ : ವಂದಿಸುವೆ ತುಂಗೆ, ದಕ್ಷಿಣದ ಗಂಗೆ.

ತುಂಗಭದ್ರೆ : ಬಾ, ಕುಮುದ್ವತಿ! ನನ್ನನ್ನೇಕೆ ಗಂಗಾಮಾತೆಯೊಡನೆ ಹೋಲಿಸುವೆ? ಹರಜಟಾಜೂಟದಿಂದ ನರಕುಲೋದ್ಧಾರಕ್ಕಾಗಿ ಧರೆಗಿಳಿದ ದೇವಗಂಗೆಯೆತ್ತ, ನಾನೆತ್ತ?

ಕುಮುದ್ವತಿ : ಗಂಗೆಯ ಘನತೆ ಶುಚಿಯಲ್ಲಿದ್ದರೆ ತುಂಗೆಯ ಹಿರಿಮೆ ರುಚಿಯಲ್ಲಿ. 'ಗಂಗಾ ಸ್ನಾನ ತುಂಗಾ ಪಾನ'ವೆಂಬುದು ಪ್ರಸಿದ್ಧವಾಗಿಯೇ ಇದೆ.

ವರದೆ : ಅಹುದು ಅಕ್ಕಾ, ಇಲ್ಲದಿದ್ದರೆ ನಾವೆಲ್ಲ ನಿನ್ನನ್ನೇಕೆ ಆಶ್ರಯಿಸುತ್ತಿದ್ದೆವು?

ತುಂಗಭದ್ರೆ : (ಹೊರಳಿ ನೋಡಿ) ವರದೆ, ಕಾಮದೆ, ಸುಖದೆ, ಶುಭದೆ– ನೀನೂ ನನ್ನನ್ನು ಹೊಗಳಿ ಹೊನ್ನ ಶೂಲಕ್ಕೇರಿಸುವುದೆ? ನೀವು ನನ್ನನ್ನಾಶ್ರಯಿಸಿದಿರಿ, ನಾನು ಸೋದರಿ ಕೃಷ್ಣೆಯನ್ನಾಶ್ರಯಿಸುವೆನು. ಯಾತಕ್ಕಾಗಿ? ಸಮುದ್ರನಾಥನನ್ನು ಸೇರಲಿಕ್ಕಾಗಿ! ನೀವೂ, ನಾನೂ, ಕೃಷ್ಣೆಯೂ ಸತೃಷ್ಣೆಯರಲ್ಲವೆ ಸಮುದ್ರನಾಥನಿಗಾಗಿ?

ಹರಿದ್ರಾ : ಅಕ್ಕಾ, ನಿನ್ನ ಮತ್ತು ಸಮುದ್ರನಾಥನ ಶುಭಲಗ್ನಕ್ಕೆ ಹರಿದ್ರಾಲೇಪನ ಬೇಕಷ್ಟೆ? ನಾನು ನಿಮಗೆ ಹರಿದ್ರಾಲೇಪನವಾಗಿ ಬಂದಿರುವೆನು. ನನಗೂ ನಿನ್ನುಡಿಯಲ್ಲಿ ಎಡೆ ಕೊಡುವಿಯಾ?

ತುಂಗಭದ್ರೆ : ಬಾ ಹರಿದ್ರೆ, ತುಂಗಭದ್ರೆ ಹರಿದ್ರೆಗೆ ಎಡೆಗೊಡಳೆ? ತುಂಗ ಭದ್ರೆ ಮಾತ್ರ ಸಮುದ್ರರಾಜನ ಸತಿ, ಹರಿದ್ರೆ, ವರದೆ, ಕುಮುದ್ವತಿಯರಲ್ಲವೆ?

ಕುಮುದ್ವತಿ : ಹಾಗಲ್ಲ ಅಕ್ಕಾ, ನೀನವನ ಪಟ್ಟದ ರಾಣಿ, ನಾವು ಹಾವುರಾಣಿಯರು (ನಗೆ).

ತುಂಗಭದ್ರೆ : (ಹುಸಿ ಮುನಿಸಿನಿಂದ) ನೀವೆಲ್ಲ ಹೀಗೆ ತಿಳಿಯುವುದಾದರೆ ನಿಮ್ಮ ಸಂಗವೇ ಬೇಡ ಹೋಗಿ! ನಾನೇನೋ ನಿಮ್ಮನ್ನು ಎಡಬಲಗಳಲ್ಲಿ ಇರಿಸಿಕೊಂಡೇ ಕಡಲೊಡೆಯನೆಡೆಗೆ ಹೋಗಬೇಕೆಂದಿದ್ದೆ. ಈಗಲೇ ನಿಮಗೆ ಈ ಭಾವನೆ ಬಂದರೆ ಮುಂದೇನು ಗತಿ?

ವರದೆ : ಶಾಂತಂ ಪಾಪಂ! ನಾವು ಪರಿಹಾಸಕ್ಕಾಗಿ ಆಡಿದುದೇ ಪರಮಾರ್ಥವಾಯಿತೇನಕ್ಕ? ನಿನ್ನ ಬಗ್ಗೆ ದುರ್ಭಾವವೆ? ಛೀ ಛೀ! ನಿನ್ನ ವಿಶಾಲ ಹೃದಯದ ಅಸೀಮ ಪ್ರೇಮವನ್ನೇ ಬಯಸಿ ಬಂದಿರುವ ನಾವು ಹಿಂದಿರುಗುವೆವೆ? ಸಾಧ್ಯವಿಲ್ಲ! ನಿನ್ನ ಮೂಲಕವೇ ನಾವು ಸಾಗರಪತಿಯನ್ನು ಸೇರಬೇಕು. ಇಲ್ಲದಿದ್ದರೆ ಇಲ್ಲ. 'ನದೀ ಮುಖೇನೇವ ಸಮುದ್ರಮಾವಿಶತ್.'

ವೇದಾವತಿ : ನನ್ನನ್ನೂ ನಲ್ಲನೆಡೆಗೆ ಕರೆದೊಯ್ಯುವಿರಾ ಸಪತ್ನಿಯರೆ?

ತುಂಗಭದ್ರೆ : ಬಾ ತಂಗಿ, ಮಂಗಲಾಂಗಿ! ನಿನ್ನ ಹೆಸರೇನು?

ವೇದಾವತಿ : ನಾನು ವೇದಾವತಿ. ನಿನ್ನಂತೆ ನಾನೂ ಮೊದಲು ಎರಡಾಗಿದ್ದೆ ಅಗಲಿ ಎರಡಾಗಿದ್ದೆ, ಕೂಡಿ ಒಂದಾಗಿದ್ದೇನೆ. 'ವೇದಾ' ಮತ್ತು

'ಅವತಿ'ಯರು 'ತುಂಗೆ' ಮತ್ತು 'ಭದ್ರೆ'ಯರಂತೆ ಬೇರೆ ಹುಟ್ಟಿ ಒಬ್ಬರನ್ನೊಬ್ಬರು ಅರಸಿ ಅಲೆದು ಸಮ್ಮಿಲಿತರಾ 'ವೇದಾವತಿ'ಯ ರೂಪದಲ್ಲಿ ನಿನ್ನೆದುರು ನಿಂತಿದ್ದಾರೆ!

ಹರಿದ್ರಾ : ನಿಂತಿದ್ದಾರೆ? ಒಂದಾದ ಮೇಲೂ ಬಹುವಚನ ಪ್ರಯೋಗವೆ ಇನ್ನೂ ನಿಮ್ಮ ದ್ವೈತಭಾವವಳಿದಿಲ್ಲವೆಂದು ತೋರುತ್ತದೆ!

ತುಂಗಾಭದ್ರೆ : ಇದರಲ್ಲಿ ಅರಿದೇನಿದೆ ಹರಿದ್ರಾ? ಇದೇ ತುಂಗಾತಟದ ಶಾಂಕರ ಸಿದ್ಧಾಂತದ ಸನ್ಮಾರ್ಗದರ್ಶಕರಾದ ವಿದ್ಯಾರಣ್ಯ ಮುನಿಗಳು ತಾಯಿ ಭುವನೇಶ್ವರಿಯ ವರದಿಂದ ಸುವರ್ಣವೃಷ್ಟಿಯನ್ನು ಸುರಿಸಿ ಕನ್ನಡಿಗರ ಸಾಮ್ರಾಜ್ಯ ಸ್ಥಾಪನೆಗೆ ಸ್ಫೂರ್ತಿಯಾಗಿವರು. ಅದ್ವೈತ ದರ್ಶನದ ಅಧ್ವರ್ಯುಗಳಿಂದ ಆರಂಭವಾಗಿ ವಿಜಯನಗರದಲ್ಲಿಯೇ ಮುಂದೆ ಪ್ರೌಢದೇವರಾಯನ ಕಾಲದಲ್ಲಿ ನೂರೊಂದು ವಿರತರು ಶಕ್ತಿ ವಿಶಿಷ್ಟಾದ್ವೈತದ ಬಾವುಟವನ್ನೇರಿಸುವರು. ತದನಂತರ ವ್ಯಾಸಕೂಟ ದಾಸಕೂಟದಿಂದ ದ್ವೈತದರ್ಶನದ ದುಂದುಭಿಯು ಮೊಳಗುವದು. ಎರಡು ಒಂದಾಗವುದೂ, ಒಂದು ಮತ್ತೆ ಎರಡಾಗುವುದೂ ಆದಿರೂಪದ ಲೀಲಾವಿಲಾಸ ಮಾತ್ರ. ಬಲ್ಲವರಿಗೆ ಬೆರಗೆ ಇಲ್ಲಿ?

ವೇದಾವತಿ : ಬೆರಗೆಲ್ಲಿಗೆ ಅಕ್ಕಾ? ಕಾಶಿಯ ವಿಶ್ವನಾಥ ಗಂಗೆಯರೂ ಹಂಪೆಯ ವಿರೂಪಾಕ್ಷ ತುಂಗೆಯರೂ ದ್ವೈತಾದ್ವೈತಗಳೆಡಕ್ಕೂ ಪ್ರತೀಕವಾಗಿ ನಿಂತಿದ್ದಾರೆ. ಸಂಯೋಗವಾದುದು ಅದ್ವೆತ, ವಿಯೋಗವಾದರೆ ದ್ವೆತ. ಜೀವನವು ನಿಯೋಗ ಸಂಯೋಗಗಳ ನೆಳಲು ಬೆಳಕಿನ ಕಣ್ಣುಮುಚ್ಚಾಲೆ, ಛಾಯಾಛಾಯೆಯ ಚಿನ್ನಾಟ ತಾನೆ?

ತುಂಗಭದ್ರೆ : ಅಹುದು, ಒಪ್ಪಿದೆ. ಇನ್ನು ತ್ವರೆಮಾಡಿರಿ, ಸಮುದ್ರನಾಥನ ಸನ್ನಿಧಿಯನ್ನು ಸೇರಲು ತವಕಿಸುತ್ತಲಿದೆ ನನ್ನೆದೆ.

ಕುಮುದ್ವತಿ : ವಿರಾಮವಿನಿಸೂ ಬೇಕಿಲ್ಲವೆ ನಿನಗೆ? ನಿನ್ನ ನಿರಂತರ ಪ್ರವಾಹಕ್ಕೆ ನಿಮಿಷಮಾತ್ರವೂ ವಿರಾಮವಿರದೆ ಅಕ್ಕಾ?

ತುಂಗಭದ್ರೆ : ನಾನು ನಿಲ್ಲುವುದೆ? ವಿಶ್ವವೇ ಬೆಚ್ಚಿಬಿದ್ದೀತು, ನನ್ನ ಪ್ರೇಮಭರಕ್ಕೆ. ಅದರೆದೆಯು ಅದುರಿ ಕಣಗಳು ಸಿಡಿದು ತಾರೆಗಳ ಮುಖವನ್ನು ಮುಸುಕಿಬಿಟ್ಟಾವು! ನಾನು ಗತಿಶೀಲೆ, ನಾನು ನಿರಂತರವಾಹಿನಿ, ನಾನು ಉನ್ಮತ್ತ ಪ್ರೇಮಯೋಗಿನಿ! ನಾನು ನಿಲ್ಲಲಾರೆ, ನಿಲ್ಲಲಾರೆ!! ಮುಂದುವರಿಯಿರಿ.

ಕುಮುದ್ವತಿ : ಇದಾಗಲೇ ಮೂರು ಮೈಲು ಬಂದಾಯ್ತು! ಇನ್ನೂ ಎಲ್ಲಿಹನೋ ಆ ಸಾವಿರ ಸತಿಯರ ಸಮುದ್ರನಾಥ!

ತುಂಗಭದ್ರೆ : ಬೇಸರಗೊಳ್ಳದಿರಿ ಸೋದರಿಯರೆ. ಇನ್ನೊಂದು ನೂರುಮೈಲು ನಡೆದರಾಯಿತು, ಕೃಷ್ಣೆಯನ್ನು ಕೂಡಿಕೊಳ್ಳುವೆವು. ಅವಳ ಆಶ್ರಯ ದೊರೆತ ಮೇಲೆ ನಮ್ಮ ಮಾರ್ಗಾಯಾಸವೆಲ್ಲ ಮಾಯವಾಗುವುದು. ಹರಿಯಿರಿ, ಮುಂದುವರಿಯಿರಿ!

(ಹೊಳೆ ಹರಿಯುವ ಸ್ವರ-ತರಂಗ ಸಂಗೀತ)

ಕತೆಗಾರ : ಅಂದಿನಿಂದ ಇದೇ ರೀತಿ ಹರಿಯುತ್ತ ಬಂದಿದ್ದುವು ಈ ನದಿಗಳು. ಇವುಗಳ ತಟಗಳ ಮೇಲೆ ತಪೋವನಗಳು ಉದಿಸಿ ಭಕ್ತಿ ಜ್ಞಾನ ವೈರಾಗ್ಯಗಳ ತ್ರಿವೇಣಿಗಳೆನಿಸಿದುವು; ರಾಜ್ಯ ಸಾಮ್ರಾಜ್ಯಗಳು ಉದಿಸಿ ಅಳಿದು ಕಾಲಗರ್ಭದಲ್ಲಿ ಲೀನವಾದುವು; ರಗಳೆ ಷಟ್ಪದಿ-ವಚನ-ಕೀರ್ತನೆಗಳ ಝುಂಕಾರಗಳಂತೆಯೇ ರಣ ಕೋಲಾಹಲ-ರೋದನ ಸ್ವರಗಳೂ ಕೇಳಿಸಿದುವು; ಅಲ್ಲಲ್ಲಿ ಆಗೊಬ್ಬ ಈಗೊಬ್ಬ ಅರಸ ಕಟ್ಟಿಸಿದ ಕಟ್ಟೆಗಳ ಕೆಳಗೆ ಆಯಾ ಕಟ್ಟಿನಲ್ಲಿ ತೋಟಪಟ್ಟಿಗಳು, ಗದ್ದೆ ಹೊಲಗಳು ಪಚ್ಚೆಪೆಯಿರುಗಳೊಡನೆ ಪರಿಶೋಭಿಸಿದಂತೆಯೇ ಭೀಷಣ ಬರಗಾಲದ ಹೃದಯವಿದ್ರಾ-ವಕವಾದ ಚಿತ್ರಗಳೂ ಕಾಣಿಸಿದುವು; ಕ್ಷೇತ್ರಗಳು ಉದಿಸಿದುವು, ಕ್ಷಾಮಗಳು ನರ್ತಿಸಿದುವು! ಕುಧರಧರರದನದಿಂದ ಉದಿಸಿದ ಈ ನದಿಯ ದಂಡೆಯ ಮೇಲೆಯೆ 'ನದಿಯ ದಂಡೆಯಲ್ಲಿ ನಿಂತು ನೀರಡಿಕೆಯೆಂದರು' ಎಂಬ ನಾಣ್ನುಡಿಗೆ ನಿದರ್ಶನವಾಗಿ ರಾಯಚೂರು, ಬಳ್ಳಾರಿ, ಕರ್ನೂಲ ಜಿಲ್ಲೆಗಳ ನಿವಾಸಿಗಳು ಕ್ಷಾಮಗಳ ಕಾರ್ಮೋಡಗಳ ಕರಿನೆರಳಿನಲ್ಲಿ ಒಮ್ಮೊಮ್ಮೆ ಕುಡಿಯುವ ನೀರಿಗೂ ಗತಿಯಿಲ್ಲದಂತೆ ಬಾಳಿದರು? ಕಿವಿಗೊಟ್ಟು ಕೇಳಿ!

ಒಮ್ಮೆಗೆ ಶ್ರಮಿಕರ 'ಹೋ ಹೋ, ಹೈ ಸೊ' ಎಂಬ ಸದ್ದು. ಕಲ್ಲೊಡೆಯುವ ಸಿಡಿಮದ್ದಿನ, ಒಡೆವ ಕಲ್ಲು ಸಿಡಿಯುವ ಸದ್ದು. ಗಾರೆಯನ್ನು ಅರೆಯುವ ಯಂತ್ರಗಳ ಸದ್ದು. ಹಾರೆ ಗುದ್ದಲಿಗಳ ಸದ್ದು.

ವರದೆ : ಇದಾವ ಗೊಂದಲ, ಇದೇನು ಕೋಲಾಹಲ? ಇದೆಂಥ ಗಡಿಬಿಡಿಯಕ್ಕಾ? ಹೇಳು, ಏಕೆ ಸುಮ್ಮನಾದೆ? ನಿಮಿಷಕ್ಕೊಮ್ಮೆ 'ನಾ ನಿಲ್ಲಲಾರೆ, ನಾ ನಿಲ್ಲಲಾರೆ' ಎಂದು ನುಡಿಯುತ್ತಿದ್ದ ನೀನು ಒಮ್ಮೆಗೆ ತಟಸ್ಥಳಾಗಿ ಬಿಟ್ಟೆಯಲ್ಲ? ಹೇಳು, ಏನಾಯಿತು ಏಕೆ ನಿಂತೆ? ಏಕೆ ನಿಶ್ಚಲಳಾದೆ? ಮಾತಾಡು, ಅಕ್ಕಾ ಮಾತಾಡು!

ತುಂಗಭದ್ರಾ : (ನಿಟ್ಟುಸಿರಿಟ್ಟು) ರಾಜ್ಯ ಸಾಮ್ರಾಜ್ಯಗಳ ಏಳು ಬೀಳುಗಳ

ಬಿರುಗಾಳಿಗಳನ್ನು ಕಂಡಿದ್ದೆ, ಕದನ ಕೋಲಾಹಲಗಳನ್ನು ಕೇಳಿದ್ದೆ, ಬರಗಾಲಗಳ ಭಯಂಕರತೆಯನ್ನು ನೋಡಿದ್ದೆ. ಶಾಸ್ತ್ರಾರ್ಥ, ತತ್ತ್ವಾರ್ಥಗಳ ಗಂಭೀರ ಘೋಷವನ್ನು ಆಲಿಸಿದ್ದೆ. ಆದರೆ ಮಾನವನ ಮತಿ ವಿಜಯದ ಈ ಅಪೂರ್ವ ದೃಶ್ಯವನ್ನು ನೋಡಿರಲಿಲ್ಲ; ಅವನ ವಿಜಿಗೀಷು ವೃತ್ತಿಯ ಈ ವಿಜಯ ವೈಭವವನ್ನು ಕಂಡಿರಲಿಲ್ಲ! ಇದು ಅಭೂತಪೂರ್ವ! ವಿಜಯನಗರದ ನರೇಶರು ಸಹ ನನ್ನನ್ನು ಪೂರ್ಣ ತಡೆದು ನಿಲ್ಲಿಸಿರಲಿಲ್ಲ. ಚಿಕ್ಕ ಪುಟ್ಟ ಕಟ್ಟೆಗಳನ್ನು ಕಟ್ಟಿ ನನ್ನ ಒಂದು ಅಂಶ ಮಾತ್ರವನ್ನು ತಡೆದಿದ್ದರು. ಆದರೆ ಈಗ ನನ್ನ ಅಧಿಕಾಂಶವನ್ನೇ ಇಲ್ಲಿ–ಪಂಪಾನಾಥನ ಪದತಲದಲ್ಲಿ, ಪಂಪಾಕ್ಷೇತ್ರದ ಸಮೀಪದಲ್ಲಿ ಕಟ್ಟಿ ನಿಲ್ಲಿಸುವ ಕಾರ್ಯದಲ್ಲಿ ವಿಜಯಿಯಾಗಿದ್ದಾನೆ ಸ್ವತಂತ್ರ ಭಾರತದ ಸಾಹಸಪ್ರಿಯ ಮಾನವ! ಇದೋ, ನಾಲ್ಕು ಸಾವಿರ ಅಡಿ ಉದ್ದ, ೧೬೫ ಅಡಿ ಎತ್ತರ, ೧೫೦ ಅಡಿ ಅಗಲವಾದ ಕಟ್ಟೆಯನ್ನು ಕಟ್ಟಿದ್ದಾನೆ! ನಾನಿದನ್ನು ಭೇದಿಸಿ ಮುನ್ನುಗ್ಗಲಾರೆ! ಸಮುದ್ರನಾಥನನ್ನು ಸೇರಲಾರೆ! ಹಾಯ್, ವಿಧಿಯೆ!

ಹರಿದ್ರಾ : ನಮ್ಮೆಲ್ಲರ ನೀರೆಲ್ಲ ನಿಂತುಬಿಟ್ಟರೆ ಇಲ್ಲಿಯ ಜನರ ಗತಿಯೇನಕ್ಕ? ಸುತ್ತುಮುತ್ತಲಿನ ನಿವಾಸಿಗಳು ಎತ್ತ ಹೋಗುವರು?

ತುಂಗಭದ್ರೆ : ಇಷ್ಟು ಮುಂಜಾಗ್ರತೆಯಿಲ್ಲವೆ ಮಾನವರಿಗೆ? ಎರಡೂ ನಿಟ್ಟಿಗೆ ಬೆಟ್ಟವಿರುವಲ್ಲಿ ನಮ್ಮನ್ನು ಕಟ್ಟಿ ಕೆಡಹಿದ್ದಾರೆ. ನಮ್ಮ ನೀರಿನಲ್ಲಿ ಮುಳುಗುವ ೭೩ ಹಳ್ಳಿಗಳಿಗೆ ಪ್ರತಿಯಾಗಿ ೭೭ ಹೊಸ ಹಳ್ಳಿಗಳನ್ನು ಹೊಸ ರೀತಿಯಲ್ಲಿ ಕಟ್ಟಿಸಿ ಇಲ್ಲಿದ್ದವರನ್ನೆಲ್ಲ ಅಲ್ಲಿಗೆ ಸ್ಥಳಾಂತರಿಸಿ ಬಿಟ್ಟಿದ್ದಾರೆ. ಇನ್ನು ನಮ್ಮ ಬಾಳು ಗೋಳು! ಇದುವರೆಗೆ ಸ್ವೇಚ್ಛೆಯಿಂದ ನಮಗೆ ಬೇಕಾದ ದಾರಿಯಲ್ಲಿ, ಗತಿಯಲ್ಲಿ, ಪಾತಳಿಯಲ್ಲಿ, ಆಳದಲ್ಲಿ, ಅಗಲದಲ್ಲಿ ಹರಿದ ನಾವಿನ್ನು ಮಾನವರು ತಮ್ಮ ಅನುಕೂಲಕ್ಕಾಗಿ ಕೊರೆದುಕೊಂಡ ಕಾಲವೆಗಳಲ್ಲಿ, ಅವನು ಬಿಟ್ಟಾಗ ಬಿಟ್ಟನಿತು ಹರಿಯಬೇಕು! ಹಾಯ್ ಪಾರತಂತ್ರ್ಯವೆ!

ವೇದಾವತಿ : ನಾವಿನ್ನು ಸಮುದ್ರನಾಥನ ಸಂಗಸುಖದಿಂದ ವಂಚಿತರಾದೆವೆ?

ವರದಾ : ಸಮುದ್ರನಾಥನು ನಮ್ಮ ಸೆರೆ ಬಿಡಿಸಲು ಬರುವದಿಲ್ಲವೆ?

ಕುಮುದ್ವತಿ : ಹುಚ್ಚಿ, ಗಂಡಸರೆಂದಾದರೂ ಒಬ್ಬಳನ್ನೇ ನೆಚ್ಚಿ ಕೂಡ್ರುವರೆ? ಸಮುದ್ರರಾಜನಿಗೆ ಸತಿಯರಿಗೇನು ಕೊರತೆ? ನಾವಿಲ್ಲದೆ ನಡೆಯದೇ ಅವನ ಸಂಸಾರ?

ತುಂಗಭದ್ರೆ : ಹಾಗೆನ್ನದಿರು ತಂಗಿ, ಸಮುದ್ರನಾಥನು ಬಂದಾದರೂ ಮಾಡಬೇಕೇನು? ಜಲಧಿಯನ್ನೇ ಜಿಗಿದ ಹನುಮನುದಿಸಿದ ನಾಡಲ್ಲವೆ ಇದು? ಸಮುದ್ರಕ್ಕೇ ಸೇತುವೆಯನ್ನು ಕಟ್ಟಿದವರು ಸಮುದ್ರರಾಜನಿಗೆ ಅಂಜುವರೆ?

ವೇದಾವತಿ : ನೀನೆನ್ನುವುದಾದರೂ ಏನು ಅಕ್ಕಾ? 'ಹುಟ್ಟಿದುದೊಂದು ಬೆಟ್ಟದಲ್ಲಿ, ಕೊಳೆಯಿರಿನ್ನು ಬೇರೊಂದು ಬೆಟ್ಟದಲ್ಲಿ' ಎಂದೆ?

ವರದಾ : ನಾವಿನ್ನು ಈ ಸೆರೆಮನೆಯಲ್ಲಿಯೇ ಕೊರಗಬೇಕೆ? ನಮ್ಮ ಲಲಾಟ ಲಿಖಿತದಲ್ಲಿ ಪ್ರೇಮಸುಖವಿಲ್ಲದಿದ್ದರೆ ಹೋಗಲಿ, ಸ್ವಾತಂತ್ರ್ಯವೂ ಬೇಡವೆ ಸ್ವತಂತ್ರ ಭಾರತದಲ್ಲಿ?

ಹರಿದ್ರಾ : ಪ್ರೇಮವಿಲ್ಲದಿದ್ದರೆ ಹೋಗಲಿ, ಸ್ವಾತಂತ್ರ್ಯವೊಂದೇ ಸಾಕಂತೆ ಇವಳಿಗೆ! ಯಾತರ ಸ್ವಾತಂತ್ರ್ಯ? ಮನಬಂದ ಪರಿಯಲ್ಲಿ ಹರಿದಾಡುವ ಸ್ವಾತಂತ್ರ್ಯವೆ? ಎಲ್ಲಿದೆ ಸ್ವಾತಂತ್ರ್ಯ? ದೇವರಿಗೂ ಸುಮ್ಮನೆ ಕುಳಿತಿರಿಲು ಸ್ವಾತಂತ್ರ್ಯವಿಲ್ಲ. ಸೃಷ್ಟಿಕಾರ್ಯ ಬೆಂಬತ್ತಿದೆ. ಪ್ರೇಮಬಂಧನದಲ್ಲಿರುವ ಸುಖಕ್ಕಿಂತ ಅಧಿಕವಾದ ಸುಖವಿದೆಯೇ ಸ್ವಾತಂತ್ರ್ಯದಲ್ಲಿ?

ಕುಮುದ್ವತಿ : ಓಹೋ, ಇವಳಿಗೆ ಇನ್ನೂ ಇನಿಯನ ಪ್ರೇಮಪಾಶದ ಕನಸು! ಹಾರಿ ಹೋಗು ಸಖಿ ಈ ಕಟ್ಟೆಯನ್ನು–ಇದರಾಚೆ ಸಮುದ್ರರಾಜನ ತೆರೆದ ತೋಳುಗಳು ನಿನಗಾಗಿಯೇ ಕಾದಿವೆ. (ನಗೆ)

ಹರಿದ್ರಾ : ನಿಮಗೆ ನಗೆ, ನನಗೆ ಹೊಗೆ! ನೊಂದವಳ ನೋವ ನೋಯದವರೆತ್ತ ಬಲ್ಲರು?

ವರದಾ : ಅಹಾ, 'ನಾನು ಹರಿದ್ರಾಲೇಪನ ಮಾತ್ರ'ವೆಂದು ಬಂದವಳು ಎಲ್ಲರಿಗಿಂತ ಮುಂದೆ ಹೋಗಿರುವಳಲ್ಲ ಪ್ರೇಮಪಥದಲ್ಲಿ! ಸಮುದ್ರರಾಜನ ಸಾವಿರ ಸತಿಯರಲ್ಲಿ ಇವಳೊಬ್ಬಳೆ ನಿಜ ಪ್ರೇಮವತಿ, ನಾವೆಲ್ಲ ವಿಲಾಸವತಿಯರು! ಅಲ್ಲವೆ ಹರಿದ್ರಾ?

ತುಂಗಭದ್ರೆ : ಸುಮ್ಮನೆ ಏಕೆ ವಾದಿಸುವಿರಿ ಸೋದರಿಯರೆ? ಕಾರ್ಮೋಡಗಳು ಕವಿದು ಬರುತ್ತಲಿವೆ; ಗುಡುಗು, ಸಿಡಿಲುಗಳು ಜಡಿಮಳೆಯು ಜಯಭೇರಿಯಾಗಿ ಮೊಳಗುತ್ತಲಿವೆ; ಮಿಂಚುಗತ್ತಿಗಳ ಹೊಯ್ಲುಗಳು ಕಣ್ಣು ಕೋರೈಸುತ್ತಿವೆ; ನಾವು ಸೆರೆಸಿಕ್ಕ ಸುದ್ದಿ ಕೇಳಿ ಸಮುದ್ರನಾಥನು ಮೇಘರಾಜನನ್ನು ಕಳಿಸಿರುವ ಹಾಗಿದೆ ನಮ್ಮ ನೆರವಿಗೆ! ಈ ಸುಸಂಧಿಯನ್ನು ಕಳೆದುಕೊಳ್ಳಬೇಡಿರಿ! ಸರ್ವಸಾಹಸ ಮಾಡಿ ಈ ಕಟ್ಟೆಯನ್ನೊಡೆದು ಸ್ವಾತಂತ್ರ್ಯವನ್ನು ಮರಳಿ ಪಡೆಯಲು ಸಿದ್ಧರಾಗಿರಿ! ಹೂಂ, ಧುಮ್ಮಿಕ್ಕಿರಿ!

(ಜಡಿಮಳೆಯ, ಗುಡುಗಿನ, ಸಿಡಿಲಿನ ಅಬ್ಬರ, ಕಟ್ಟೆಯಿಂದ ಧೋ ಧೋ ಎಂದು ನೀರು ಧುಮ್ಮಿಕ್ಕುವ ಸದ್ದು. ಮತ್ತೆ ನೀರವತೆ)

ತುಂಗಭದ್ರೆ : (ಹತಾಶಳಾಗಿ) ಸೋಲಿನ ಮೇಲೆ ಸೋಲು, ಅಪಮಾನದ ಮೇಲೆ ಅಪಮಾನ! ಪಂಪಾಪತೇ, ಇನಿತು ಯುಗಗಳಿಂದ ನಿನ್ನ ಪದಯುಗಳ ಪ್ರಕ್ಷಾಳನಗೈದ ನನಗೆ ಈ ಪರಾಭವವೆ? ಈ ತೇಜೋವಧೆಯೆ? ಭುವನೇಶ್ವರಿ, ಬಂಧನಾಶನಕರೀ, ರಿಪುಕ್ಷಯಕರೀ, ತ್ರೈಲೋಕ್ಯ ರಕ್ಷಾಕರೀ, ಮೋಕ್ಷದ್ವಾರ ಕಪಾಟನಕರೀ ಕೃಪೆದೋರು, ಕಾಪಾಡು! ಈ ಬಂಧನ ಮಂದಿರದಲ್ಲಿ ನಾನಿರಲಾರೆ! ಮಾನಭಂಗಿತಳಾಗಿ ಬದುಕಲಾರೆ! ಸಮುದ್ರನಾಥನನ್ನಗಲಿ ಜೀವಿಸಲಾರೆ! ಇರಲಾರೆ, ಇರಲಾರೆ!

(ಮೂರ್ಛೆ ಬಂದು ಬೀಳುವಳು. ತೇಜೋರೂಪಿಯೋರ್ವಳು ತಲೆದೋರುವಳು)

ತೇಜೋರೂಪೆ : ಹೆಸರು ತುಂಗಭದ್ರೆ ಆದರೆ ಅಂತರಂಗದಲ್ಲಿ ಅಭದ್ರೆ!

ತೇಜೋರೂಪೆ : (ಚೇತರಿಸಿಕೊಂಡೆದ್ದು) ಉರಿಯುವ ಗಾಯಕ್ಕೆ ಉಪ್ಪೆರಚುವ ನೀನಾರು ಆಗಂತುಕೆ?

ತೇಜೋರೂಪೆ : ನಿನ್ನ ಅಂತಃಸತ್ವದ ಆಕಾರ ನಾನು ತುಂಗಭದ್ರೆ! ನಿನಗೆ ಸ್ವಸ್ವರೂಪ ವಿಸ್ಮೃತಿಯಾಗಿ ನಿನ್ನ ಬಾಯಿಂದ ಸಲ್ಲದ ಸೊಲ್ಲುಗಳು ಬರತೊಡಗಲು ಕೇಳಿ ತಾಳಲಾಗದೆ ಹೊರಬಿದ್ದು ಬಂದಿದ್ದೇನೆ–ನಿನ್ನ ದುಃಖ ಭ್ರಾಂತಿಜನ್ಯವಾದುದೆಂದು ತಿಳಿಸಲು ಬಂದಿದ್ದೇನೆ.

ತುಂಗಭದ್ರೆ : ಪ್ರೇಮವಿಹ್ವಲೆಯನ್ನು ಭ್ರಾಂತಳೆಂದು ಕರೆಯಬಹುದೆ? ಪ್ರೇಮವೂ ಭ್ರಾಂತಿಯೆ?

ತೇಜೋರೂಪೆ : ಪ್ರೇಮವು ಭ್ರಾಂತಿಯಲ್ಲ–ಮಿಲನ ಮಾತ್ರ ಪ್ರೇಮದ ಗುರಿ, ಮಿಲನದಲ್ಲಿ ಪರಿಣಮಿಸದ ಪ್ರೇಮ ದುಃಖದಾಯಕವಾದುದು, ಎಂಬ ಭಾವನೆ ಮಾತ್ರ ಭ್ರಾಂತಿ! ಸಮುದ್ರನಾಥನ ಸಂಗಸುಖ ತಪ್ಪುತ್ತಲೆ ಮೂರ್ಛಿತಳಾಗುವುದೆ ಮಾರ್ಗವೆ ತುಂಗಭದ್ರೆ?

ತುಂಗಭದ್ರೆ : ಹೆಣ್ಣಿನ ಹೃದಯವನ್ನರಿತ ನೀನೂ ಹೀಗೆ ಹೇಳುತ್ತಿರುವುದು ಅಚ್ಚರಿಯಲ್ಲವೆ ತೇಜೋರೂಪೆ?

ತೇಜೋರೂಪೆ : ಹೆಣ್ಣಿನ ಹೃದಯ ನಿನಗೇ ತಿಳಿದಂತಿಲ್ಲ ತುಂಗಭದ್ರೆ. ಹೆಣ್ಣಿನ ಹೃದಯಕ್ಕೆ ಭೋಗಕ್ಕಿಂತ ತ್ಯಾಗವೇ ಹೆಚ್ಚು ಪ್ರಿಯವಾದುದೆಂಬುದನ್ನು ನೀನು ಮರೆತಂತಿದೆ. ನೀನು ನಂಬಿರುವಂತೆ ಸಮುದ್ರನಾಥನ ಸಮಾಗಮವೇ ನಿನ್ನ ಧನ್ಯತೆಯೆಂದು ಇಟ್ಟುಕೊಳ್ಳೋಣ. ಆಗ

ನಿನಗೆ ದೊರೆವುದಾದರೂ ಏನು? ನಿನ್ನ ಅಸ್ತಿತ್ವದ ಅಳಿವು! ಆದರೆ ಆ ಶೂನ್ಯದಲ್ಲಿಯೇ ಪೂರ್ಣತೆಯನ್ನು ಪಡೆಯುತ್ತದೆ ಪ್ರೇಮ! ಅಲ್ಲವೆ?

ತುಂಗಭದ್ರೆ : ಅಹುದು, ಶಲಭಗೆ ದೀಪಶಿಖಿಯಲ್ಲಿಯೇ ಶಾಂತಿ ದೊರೆಯುವಂತೆ ಪ್ರೇಮಿಗೂ ಅಸ್ತಿತ್ವದ ಅಳಿವಿನಲ್ಲಿಯೇ ಸಂಸಾರದ ಸರ್ವೋಚ್ಚಸುಖ ಸಿಕ್ಕುತ್ತದೆ. ಪ್ರೇಮದ ರಹಸ್ಯವೇ ಅದು. ಪ್ರೇಮದ ನಿಜವಾದ ಅರ್ಥ ತ್ಯಾಗ!

ತೇಜೋರೂಪೆ : ಆ ತ್ಯಾಗವನ್ನೇ ನೀನೀಗ ತೋರಬೇಕಾಗಿದೆ ತುಂಗಭದ್ರೆ!

ತುಂಗಭದ್ರೆ : ಯಾವ ತ್ಯಾಗ?

ತೇಜೋರೂಪೆ : ಸ್ವಾರ್ಥತ್ಯಾಗ!

ತುಂಗಭದ್ರೆ : (ಚಕಿತಳಾಗಿ) ನಾನು ಸ್ವಾರ್ಥಿಯೆ?

ತೇಜೋರೂಪೆ : (ನಿರ್ಧಾರದ ಸ್ವರದಲ್ಲಿ) ಲಕ್ಷಾವಧಿ ಮಾನವರು, ಕೋಟ್ಯಾವಧಿ ಸಸ್ಯ ಶಿಶುಗಳು, ಪಶುಪಕ್ಷಿಗಳು ನಿನ್ನನ್ನು ಕೈ ಮಾಡಿ ಕರೆಯುತ್ತಲಿದ್ದರೂ ಕೇವಲ ನಿನ್ನ ಸುಖಕ್ಕಾಗಿ 'ಸಮುದ್ರನಾಥ, ಸಮುದ್ರನಾಥ!' ಎಂದು ಬಡಬಡಿಸುತ್ತಿರುವುದು ಸ್ವಾರ್ಥವಲ್ಲದೆ ಇನ್ನೇನು?

ತುಂಗಭದ್ರೆ : ಇವರೇಕೆ ನನ್ನನ್ನು ಕರೆಯುತ್ತಿದ್ದಾರೆ?

ತೇಜೋರೂಪೆ : ಇದು ನೋಡು-ರಾಯಚೂರಿನಿಂದ ಕರ್ನೂಲಿನವರೆಗೆ ಕಾಣುತ್ತಿರುವ ಭರತಭೂಮಿಯ ಭಾಗವಿದು ಹಿಂದಿನ ದಂಡಕಾರಣ್ಯ. ಆಗ ಸಿರಿಯ ಬೀಡಾಗಿದ್ದ ಇದು ಈಗ ಬರದ ತವರಾಗಿದೆ! ರಾಯಚೂರು ಜಿಲ್ಲೆಯೊಂದರಲ್ಲಿಯೇ ಸುಮಾರು ೨೫೦ ಚದುರ ಮೈಲುಗಳಷ್ಟು ಭಾಗ ಕುಡಿಯುವ ನೀರಿನ ಕೊರತೆಯಿಂದ ನಿರ್ಜನವಾಗಿ ಹೋಗಿದೆ! ಉಳಿದ ಭಾಗ ಬೆಲೆಯುಳ್ಳ, ಬೆಳೆಯುವ ಭೂಮಿಯಾದರೂ ಮಳೆಯ ಕೊರತೆಯಿಂದ ಬಂಜೆಯಾಗಿದೆ! ಇದೇ ಕಾರಣದಿಂದಲೇ ಈ ಜಿಲ್ಲೆಯಲ್ಲಿ ೧೮೦೪, ೧೮೨೩, ೧೮೫೪, ೧೮೬೬, ೧೮೭೭, ೧೮೯೭ರಲ್ಲಿ ೧೯೦೫, ೧೯೨೧, ೧೯೨೨, ೧೯೨೫, ಮತ್ತು ೧೯೨೮ರಲ್ಲಿ ಭೀಕರವಾದ ಬರ ಬಿದ್ದು ಶೋಕದ ಹೊನಲುಗಳನ್ನೇ ಹರಿಸಿಬಿಟ್ಟಿತು.! ಈಗಲೂ ನಾಲ್ಕು ವರ್ಷಕ್ಕೊಮ್ಮೆಯಾದರೂ ದುರ್ಭಿಕ್ಷ ದುಷ್ಕಾಲಗಳ ಹಾವಳಿಯಿದ್ದೇ ಇರುತ್ತದೆ ಈ ಜಿಲ್ಲೆಯಲ್ಲಿ! ಬಳ್ಳಾರಿ ಕರ್ನೂಲ ಜಿಲ್ಲೆಗಳಲ್ಲಿಯೂ ಇದೇ ಹೃದಯ ವಿದ್ರಾವಕ ಸ್ಥಿತಿಯಿದೆ! ಈ ಮೂರು ಜಿಲ್ಲೆಗಳ

ಲಕ್ಷಾವಧಿ ಕ್ಷಾಮ ಸಂತ್ರಸ್ತ ಜನರು ನಿನ್ನನ್ನು ಕರೆಯುತ್ತಲಿದ್ದಾರೆ! ನೀರಿನ ಭಿಕ್ಷೆಯನ್ನು ಬೇಡುತ್ತಲಿದ್ದಾರೆ! ನೀಡು ನೀರನ್ನು, ತುಂಗಭದ್ರೆ, ನೀಡು ನೀರನ್ನವರಿಗೆ!

ತುಂಗಭದ್ರೆ : ನಾನು ನೀರನ್ನು ನೀಡಿದರೆ?

ತೇಜೋರೂಪೆ : ನೀನು ಧಾರಾಳವಾಗಿ ನೀರು ನೀಡಿದರೆ ಇಲ್ಲಿಂದ ಬರ ತಳ ಕೀಳುವುದು! ಸಾವಿರ ಸಾವಿರ ಎಕರೆ ಕಬ್ಬು, ಸಾವಿರ ಸಾವಿರ ಎಕರೆ ನೆಲ್ಲು, ಸಾವಿರ ಸಾವಿರ ಎಕರೆ ನೆಲಗಡಲೆ, ಕಡಲೆ, ಹತ್ತಿ, ತೋಟಪಟ್ಟಿ, ಫಲವೃಕ್ಷಗಳು, ಹುಲ್ಲುಗಾವಲು, ಉರುವಲು, ಹಸಿರು ಗೊಬ್ಬರ ಸಸಿಗಳು, ಜೋಳ, ಸಜ್ಜೆ, ಬೇಳೆ, ಎಣ್ಣೆ ಕಾಳುಗಳ ಬೆಳೆಯದ್ದು ನಿಲ್ಲುವುದು! ಸರಕಾರಕ್ಕೆ ಅರ್ಧಕೋಟಿಯಷ್ಟು ಭೂಮ್ಯಾದಾಯ ಹೆಚ್ಚಾಗುವುದು; ದೇಶಕ್ಕೆ ಎರಡು ಲಕ್ಷ ಟನ್ನಿಗೂ ಹೆಚ್ಚು ಆಹಾರ ಒದಗುವುದು; ಉದ್ಯೋಗ ವಿಕಾಸಕ್ಕೆ ಒಂದೂವರೆ ಲಕ್ಷ ಕಿಲೋವ್ಯಾಟುಗಳಷ್ಟು ವಿದ್ಯುಚ್ಛಕ್ತಿ ದೊರೆಯುವುದು; ಹಳ್ಳಿಹಳ್ಳಿಗೂ ಸಂಪತ್ತು, ಸುಖ, ಶಾಂತಿ, ಪ್ರಕಾಶಗಳು ಪಸರಿಸುವುವು! ಇಂದು ಬೀಳುಬಿದ್ದಿರುವ ಈ ಭಾಗ ಮತ್ತೆ 'ಸುಜಲಾಂ, ಸುಫಲಾಂ, ಸಸ್ಯ ಶಾಮಲಾಂ' ಆಗಿ ಶೋಭಿಸುವುದು! ಇಂಥ ಅಪಾರವಾದ ಲೋಕೋಪಕಾರಕ್ಕಿಂತ ಸಮುದ್ರನಾಥನೊಡನೆ ಸರಸಸಲ್ಲಾಪ ಮಾಡುತ್ತ ಕಾಲ ಕಳೆಯುವುದು ಹೆಚ್ಚಿನದೆ? ನೀನೇ ಹೇಳು!

ತುಂಗಭದ್ರೆ : ನನ್ನನ್ನು ತಪ್ಪು ತಿಳಿದುಕೊಳ್ಳದಿರು ತೇಜೋರೂಪೆ! ಸಮುದ್ರನಾಥನ ಸಂಗಸುಖವನ್ನು ನನಗೆ ದೊರಕಿಸಿಕೊಟ್ಟವಳು ಸೋದರಿ ಕೃಷ್ಣೆಯು. ಅವಳ ಸಹವಾಸ ಸುಖವೂ ನನಗೆ ಎರವಾಯಿತಲ್ಲ!

ತೇಜೋರೂಪೆ : ಚಿಂತಿಸದಿರು ತುಂಗಭದ್ರೆ! ನಿನ್ನನ್ನು ತಾಯಿ ಭುವನೇಶ್ವರಿಯ ಪಾದಸನ್ನಿಧಿಯಲ್ಲಿ ತಡೆದು ನಿಲ್ಲಿಸಿರುವಂತೆ ಕೃಷ್ಣೆಯನ್ನು ತೃತೀಯ ಪಾಂಚವಾರ್ಷಿಕ ಯೋಜನೆಯಲ್ಲಿ ಛಾಯಾ ಭಗವತಿಯ ಹತ್ತಿರ ಕಟ್ಟಿ ನಿಲ್ಲಿಸುತ್ತಾರೆ! ಈಗ ನಿನ್ನ ಕೃಷ್ಣೆಯ ವಿಯೋಗವಾದಂತೆ ತೋರಿದರೂ ಆಗ ಕಾಲುವೆಗಳ ಕರಗಳಿಂದ ನೀವಿಬ್ಬರೂ ಒಬ್ಬರನ್ನೊಬ್ಬರು ತಬ್ಬಿ ಸುಖಿಸುವಿರಿ. ಜನಹಿತರತಿಯಲ್ಲಿಯೇ ಜೀವನದ ಸಾರ್ಥಕತೆಯೆಂಬ ಸತ್ಯವನ್ನು ಸಾರುತ್ತ ನಿಮ್ಮ ತಾಯತೋಳುಗಳಲ್ಲಿ ದಕ್ಷಿಣಾಪಥದ ಕ್ಷಾಮಪೀಡಿತ ಭಾಗಗಳನ್ನು ಪಾಲಿಸಿ ಪೋಷಿಸುತ್ತ, ಬಂಜೆ ಬಯಲನ್ನು ಬಂಗಾರದ ಬೀಡನ್ನಾಗಿ ಮಾಡುತ್ತ, ಹಸಿವೆ ಕೊರತೆಗಳ ಹಾವಳಿಯಿದ್ದಲ್ಲಿ ಸಮೃದ್ಧಿ ಸಂತೃಪ್ತಿಗಳ ಸುಧಾಧಾರೆಯನ್ನು ಹರಿಸುತ್ತ ಹಿಗ್ಗಿನಿಂದ ಬಾಳುವಿರಿ! ನಿಮ್ಮ ಈ ಲೋಕಕಲ್ಯಾಣನಿಷ್ಠೆಯನ್ನು

ನೋಡಿ ನಿಮ್ಮ ನಲ್ಲ ಕಡಲೊಡೆಯನೊಬ್ಬನೇ ಅಲ್ಲ, ಜಗದ್ವಂದ್ಯೆ ಭಾರತಮಾತೆಯೂ, ಶ್ರೀ ವಿರೂಪಾಕ್ಷ ಪಂಪಾಂಬಿಕೆಯರೂ, ಲಕ್ಷಾವಧಿ ಭಾರತೀಯರೂ ಹೆಮ್ಮೆಯಿಂದ ನಲಿದಾಡುವರು! ಸ್ವರ್ಗದಲ್ಲಿ ಶಂಕರ ಭಗವತ್ಪಾದರೂ, ವಿದ್ಯಾರಣ್ಯರೂ, ವಿದ್ಯಾನಗರದ ನರವರರೂ, ಹರಿಹರ ರಾಘವಾಂಕರೂ, ನೂರೊಂದು ವಿರತರೂ, ವ್ಯಾಸರಾಯ ದಾಸವರ್ಯರೂ, ರಾಘವೇಂದ್ರ ಯತಿವರರೂ ತಮ್ಮ ಪಾದರೇಣುವಿನಿಂದ ಪುನೀತವಾದ ಈ ಪ್ರದೇಶವು ಕ್ಷಾಮ ಬಾಧೆಯಿಂದ ಬಿಡುಗಡೆ ಪಡೆದುದನ್ನು ಕಂಡು ಹಿರಿಹಿರಿ ಹಿಗ್ಗುವರು! ಬಾಪೂಜಿಯವರ ಆತ್ಮಕ್ಕೆ ಸ್ವಲ್ಪವಾದರೂ ಶಾಂತಿ ಲಭಿಸುವುದು! ಮತ್ತೆ ಐದುನೂರು ವರ್ಷಗಳ ತರುವಾಯ ಈ ಭಾಗ ವಿಜಯನಗರದ ಉಚ್ಛ್ರಾಯ ಕಾಲದಲ್ಲಿದ್ದಂತೆ ಸಂಪದ್ಭರಿತವಾಗಿ ಮೆರೆಯುವುದೆಂಬ ಐತಿಹ್ಯ ನಿಜವಾಗುವುದು! ಇದಕ್ಕೂ ಹೆಚ್ಚಿನ ಸೌಭಾಗ್ಯವನ್ನೇನ ಬಯಸುವೆ?

ತುಂಗಭದ್ರೆ : ನನ್ನ ಭ್ರಾಂತಿನಿರಸವಾಗಿ ಶಾಂತಿ ದೊರೆಯಿತು ಭದ್ರೆ! ನಿನಗೆ ನನ್ನ ಅನಂತ ನಮನಗಳು.

ತೇಜೋರೂಪೆ : ತುಂಗಭದ್ರೆ ನೀನು ಇದುವರೆಗೆ ಕೇವಲ ತುಂಗಭದ್ರೆಯಾಗಿದ್ದೆ. ಇಂದಿನಿಂದ ನೀನು ತುಂಗಭದ್ರೆ ಮಂಗಲೆ! ನಾನಿನ್ನು ನಿನ್ನಲ್ಲಿ ಮುನ್ನಿನಂತೆ ಬೆರೆತು ಬಯಲಾಗುವೆ. ತುಂಗಭದ್ರೆಗೆ ಜಯವಾಗಲಿ! ತುಂಗಭದ್ರಾ ಜಲಾಶಯವನ್ನು ಕಟ್ಟಿದ ದೇಶಭಕ್ತಿಗೆ, ಅದನ್ನು ಪಡೆದ ದೇಶಕ್ಕೆ ಜಯವಾಗಲಿ! ಜನಶಂಕರಿಗೆ ಜಯವಾಗಲಿ, ಬನಶಂಕರಿಗೆ ಜಯವಾಗಲಿ, ಜೀವನಕ್ಕೆ ಜಯವಾಗಲಿ.

ವೃಂದಗೀತೆ :

ಜಯವಾಗಲಿ ಜಯ ನಿನಗೆ
ಜನಮಂಗಲೆ ತುಂಗೆ!
ಜಯಭದ್ರೆಗೆ ಜಯ ಸುರುಚಿರ
ಮಧುಸಲಿಲ ತರಂಗೆ!
ಜಯ ಶರ್ಮದೆ ಜಯ ಕಾಮದೆ
ಜಯ ಶ್ರೀಕರೆ ವರದೆ
ಓ ತುಂಗೆಯೆ ಓ ಭದ್ರೆಯೆ
ಓ ಮಂಗಲೆ ಸುಖದೆ!

ದುಃಖ ಸೇತು

ಆಚಾರ್ಯ 'ಶ್ರೀ' ಅವರು ಅನುವಾದಿಸಿರುವ ಇಂಗ್ಲಿಷ್ ಗೀತಗಳಲ್ಲಿ 'ದುಃಖ ಸೇತು'ವೂ ಒಂದು. ಅದರಲ್ಲಿ ಸೂಚ್ಯವಾಗಿ ಬಂದಿರುವ ಸಂಗತಿಯನ್ನು ವಿಸ್ತರಿಸಿ ಹೆಣೆದ ಸಂಭಾಷಣೆಯಿದು.

ಉಷಾ : ನಿಲ್ಲಿಲ್ಲಿ ನಲ್ ಗೆಳತಿ,
ಹೊಳೆಯ ತೀರದಿ ಸುಳಿದು ಕಳೆಯಬರೆ ಬೇಸರವ
ಕಂಡಾಯ್ತು ಕನ್ಯೆಯ ಕಳೇಬರವನಿಂದು!
ಯಾರಿವಳು ಅನಾಥೆ? ಈ ಜನ್ಮ ರೋಸಿ,
ವೇದನೆಯ ತಾಳದೆಯೆ ಮುಳುಗಿದಳು ಹೊಳೆಗೆ!

ಆಶಾ : ಯಾರಿಹಳೊ ಅಭಾಗಿನಿ!
ಮೆಲ್ಲನಿವಳನು ಮುಟ್ಟು, ಮರುಕದಿಂದೆತ್ತು!

ಉಷಾ : ಮುಟ್ಟಬಹುದೆ ಇವಳ?
ಎಳೆವಯದಿ ಹೊಳೆ ಹಾರಿ ಹರಣನೀಗಿಹ ಇವಳ
ಚಾರಿತ್ರ್ಯವೆಂತಹದೊ!

ಆಶಾ : ಸಂದೆಗವೆ ಸೋದರಿಯೆ?
ದುಡುಕಿ ಕಟ್ಟನು ಮೀರಿ ಕೆಟ್ಟವಳು ಇವಳೆಂದು,
ತಾನು ಮಾಡಿದ ಕರ್ಮ ತನ್ನ ಬೆನ್ನಲಿ ಬಂದು
ಸುಟ್ಟವಳು ಇವಳೆಂದು
ಇವಳ ದೋಷವನೆಣಿಸಿ ಬೀಗಳೆಯ ಬೇಡ!
ಏನವಳ ಪಾಪವೋ ಏನವಳ ಹೊಲ್ಲ ನಡೆಯೊ!
ಅದರೆಣಿಕೆಗಿದು ಹೊತ್ತೆ? ನಾವು ಜರೆವವರೆ?
ಏನು ಕೋಮಲ ಕಾಯ, ಎಂಥ ಹೊಸ ಪ್ರಾಯ!
ನೋಡಿದೋ, ಉಡಿಗೆ ತೊಯ್ದಂಟಿಹುದು
ಅಂಗಾಂಗಗಳಿಗೆಲ್ಲ! ಎದೆ ಕರಗಿ ಎತ್ತು ಬಾ!
ಸಂದೆಗವು ಬೇಡ, ಹಿಂದೆಗೆಯ ಬೇಡ!
ಸಾವು ನುಂಗಿದ ಇವಳ ದುರಿತ ದುಷ್ಕೃತ ತೊಳೆದು
ಉಳಿದಿಹುದು ತೊಳಗುತಿಹ ಹೆಣ್ತನವದೊಂದೆ!
ಏನು ಕರೆಗಳೆ ಇರಲಿ, ಹೆಣ್ಣು ಹುಟ್ಟಲ್ತೆ?

ಒರಸು ಆ ತುಟಿಗಳನ್ನು, ಕೆಸರೊಸರುತಿಹುದು!
ಕೆದರಿ ಹೋಗಿಹ ಕುರುಳ ಕಟ್ಟಿ ಸರಿಪಡಿಸು!

ಉಷಾ : ಆರಿವಳು? ಮನೆಯೆಲ್ಲಿ?

ಆಶಾ : ಬಲ್ಲವರು ಯಾರು?

ಉಷಾ : ತಂದೆ ತಾಯಿಗಳಿಲ್ಲೆ? ಅಕ್ಕತಂಗಿಯರಿಲ್ಲೆ?
ಅಣ್ಣತಮ್ಮಂದಿರಿಲ್ಲೆ? ಇವಳ ಅಕ್ಕರೆಯಾತ ಇವಳ ಹತ್ತಿರದಾತ ಇಲ್ಲವೇ ಇಲ್ಲವೆ?
ನಿರಿ ಹಿಡಿದು ನಡುವೇರಿ ತೊದಲು ನುಡಿಗಳ ಬೀರಿ
ಕೊರಗ ಕಳೆಯುವ ಕಂದನಾನಂದವಿಲ್ಲವೆ?

ಆಶಾ : ಇದ್ದರೀ ಗತಿಯೇಕೆ? ಇದ್ದರೂ ಎಲ್ಲಿಹರೊ!
ಅಹ, ಎಲ್ಲಿ ಅಡಗಿತೊ ನಮ್ಮ ನಾಡ ಜನಗಳ ಕರುಣೆ!
ಎಲ್ಲಿ ಮರೆಯಾಯ್ತೊ ಮಹಿಳೆಯರ ಮರುಕ!
ಹೆಣ್ಣು ಪೂಜೆಯ ಪಡೆವ ಸ್ಥಳದಿ ಸಂಚರಿಸುವರು
ದೇವತೆಗಳೆಂದವರು, ತಾಯಿಯೇ ದೇವರು–
ಸ್ವರ್ಗದಿಂ ಮಿಗಿಲಾಕೆಯೆಂದು ವಾದಿಸಿದವರು,
ಒಳಗೆ ಸುಳಿಯುವ ಆತ್ಮ ಹೆಣ್ಣಲ್ಲ ಗಂಡಲ್ಲ
ಒಂದೆಯೆಂದೊರೆದವರು, ಹೆಣ್ಣು ಹೆಣ್ಣಲ್ಲ
ಹೆಣ್ಣು ರಕ್ಕಸಿಯಲ್ಲ ಹೆಣ್ಣು ಪ್ರತ್ಯಕ್ಷ ಪರಮಾತ್ಮ,
ನಾರಿ ಸಗ್ಗಕೆ ದಾರಿಯೆಂದು ಸಾಧಿಸಿದವರು
ಕಟ್ಟಿದೀ ನಾಡಿನಲೆ ಅವರ ವಂಶದ ಸುತೆಯು
ಗತಿಗೆಟ್ಟು ಮತಿಗೆಟ್ಟು ಹೊಳೆಗೆ ಬಲಿಯಾದರೂ
ಕಣ್ದೆರೆದು ಒಬ್ಬರೂ ನೋಡದಿಹ ಸ್ಥಿತಿಯಾಯ್ತೆ!
ಅಯ್ಯೊ, ಏನನ್ಯಾಯ–ಎಂಥ ಗತಿ ಜನರಾಯ!
ತುಂಬಿದೀ ಊರಿನಲಿ ಮನೆ ಇವಳಿಗಿಲ್ಲ!

ತುಂಬಿದೀ ಜನರಲ್ಲಿ ನೆರೆ ಇವಳಿಗಿಲ್ಲ!
ದಿಕ್ಕಿಲ್ಲದ ಅನಾಥೆ! ಮರಣವೇ ಶರಣು!

ಉಷಾ : ಹೆತ್ತವಳ ಪ್ರೇಮ, ಒಡಹುಟ್ಟಿದರ ಪ್ರೇಮ,
ಕೂಡಿದನ ಪ್ರೇಮ, ಮಕ್ಕಳ ಪ್ರೇಮ–
ಯಾವುದೂ ಇವಳನ್ನು ತಡೆಯದೆಯೆ ಹೋಯ್ತೆ?
ನೂರು ದಾರಗಳೆಮ್ಮ ಕಟ್ಟಿಹವು ಈ ಜಗಕೆ!
ನೋವಿನಲೆ ಸವಿ ಕೊಡುವ, ದುಃಖದಲೆ ಸುಖವೀವ,
ನೈರಾಶ್ಯದಲ್ಲಿಯೇ, ಆಶಾವಿಲಾಸವನು ಕಾಣಿಸುವ
ಭುವಿಯ ಬಂಧನ ವೃಂದವೆಲ್ಲವನು ಹರಿದೊಗೆದು
ಹೊಳೆ ಹಾರುವನಿತಿವಳ ಹೆಣ್ಣೆದೆಯು ಕಲ್ಲಾಯ್ತೆ!
ಕಠೋರವಾಯಿತೆ ಇವಳ ಕುಸುಮ ಕೋಮಲಹೃದಯ!

ಆಶಾ : ನಿಷ್ಕರುಣದಲಿ ಸುಟ್ಟು ಉಗಿಯಾಗಿ ಹೋಗಿರದೆ
ಪ್ರೇಮಸಾಗರದಮೃತ? ದೀನರಕ್ಷಕ ದೇವ
ಕೇಳಿ ಕಾಪಾಡದಿರೆ ಹೊಳೆನೀರೆ ಗತಿಯಲ್ತೆ?
ಯಾರರಿಯಬಹುದಿವಳ ಬದುಕುವಾಸೆಯ ಸುಟ್ಟು
ಸೀಕರಿದ ಸಂಕಟದ ಬೆಂಕಿ ಯಾವುದು ಎಂದು?
ಯಾರು ಹೆಸರಿಸಬಹುದು ಅಸುವ ತ್ಯಜಿಸಲು ಅವಳ
ಮನವ ಶಿಲೆ ಮಾಡಿದಾ ವ್ಯಸನವಾವುದು ಎಂದು?
ಏನು ಬಂದಿತೊ ದುಃಖ ಏನು ಬಂತೊ ರೋಷ,
ಏನಾಯ್ತೊ ಮೋಸ– ಕ್ರೂರ ನಿರ್ಧಾರದಲಿ ಪ್ರಾಣ ನೀಗಿಹಳು!

ಉಷಾ : ಭಯಗಳಲಿ ಭಯ ಮರಣ ಭಯವೆಂದು ಹೇಳುವರು;
ಆಸೆಯಲಿ ಬದುಕುವಾಸೆಯೇ ಹಿರಿದೆನ್ನುವರು;
ಇಂಥ ಆಸೆಯ ಪಾಶವನ್ನು ಕತ್ತರಿಸುತ್ತ
ಸಾವನೇ ಸ್ವಾಗತಿಸಲೇನಾಯ್ತೊ ಇವಳಿಗೆ!

ಆಶಾ : ಬದುಕು ಬದುಕಿನೊಳಿಹುದು ಭೇದ ಉಷಾ!

ನಿತ್ಯ ನಂಜಿನ ಗುಟುಕು ಕುಡಿದು ಬದುಕುವ ಬಾಳಿಗಾರು
ಬಾಯ್ ಬಿಡಬಹುದು? ಬಡತನವೊ,

ಮತಿಯ ಜಡತನವೊ, ಕಾಮವನೆ ಪ್ರೇಮವೆಂದೆಣಿಸಿ

ಒಪ್ಪಿದ ತಪ್ಪೋ, ಮೋಸವೋ ಮೋಹವೋ

ವಂಚನೆಯೊ ರೋಷವೋ ಇವಳು ತಪ್ಪಿನ ದಾರಿ

ತುಳಿಯೆ ಕಾರಣವಾಗಿ ಹೊಲ್ಲನಡೆಗಿವಳನ್ನು

ಎಳೆದಿರಬಹುದು, ಕೆಳಗೆ ತುಳಿದಿರಬಹುದು!

ಮೋಸಗೊಳಿಸುವುದೇನು ಘನವಲ್ಲ ಅಬಲೆಯರ:

ಹುಟ್ಟಿನಿಂದಲೆ ಅವರು ಸರಳೆಯರು ಎರಳೆಯೊಲು.

ಇಂಥ ಸರಳೆಯರನ್ನು, ತರಳೆಯರನ್ನು ಒಲಿಸಿ

ಮರುಳ್ಮಾಡಿ ಕೂಡಿ ಬೇಡಾಗುತಲೆ ತ್ಯಜಿಸಿ

ದೂಷಿಸಿ ಬಹಿಷ್ಕರಿಸಿ ಬಿರುನುಡಿ ನಂಜನೂಡಿ

ನಲಿವ ನಿಷ್ಕರುಣಿಗಳ ನಡುವೆ ಬದುಕುವದೊಂದು ಬದುಕೆ?

ಯಾರು ಬಯಸುವರಕ್ಕ ಇಂಥ ಗೋಳಿನ ಬಾಳ?

ಕುಟಿಲ ಜನಗಳ ಕಪಟ ಕುಹಕಕ್ಕೆ ತುತ್ತಾಗಿ

ಬದುಕುವುದೆ ಭಾರವಾಗಿ, ನಿಸ್ಸಾರವಾಗಿ, ಘೋರವಾಗಿ,

ಹುಚ್ಚು ಹಿಡಿಸುವ ಹಾಳು ಬಾಳನ್ನೆ ಬೀಸಾಡಿ,

ಏನಿದೆಯೊ ಅರಿಯದಿಹ ಸಾವ ಕೆಳೆಯನೆ ಬಯಸಿ

ಎಲ್ಲಾದರೂ ಸರಿಯೆ ಎಂತಿದ್ದರೂ ಸರಿಯೆ–

ಈ ಲೋಕ ಬೇಡೆಂದು ಹೊಳೆಗೆ ಹಾರಿರಬಹುದು!

ಎಂಥ ನಾಡಿದು ಎಂಥ ಕಾಡಾಯಿತೊ!

ಉಷಾ : ಎಂಥ ಕಾಡಾಯಿತು?

ಆಶಾ : ದೈತ್ಯನಧಟನು ಜಯಿಸಿದಾ ಸೀತೆ,

ಲೋಕಮಾತೆಯ ಪಡೆದ ಈ ನಾಡು,
ಕೌರವಾನುಜನೆದೆಯ ಬಿಸಿರಕುತ ಬಾರದೆಯೆ
ಬಿಡುಮುಡಿಯ ಕಟ್ಟೆನೆಂದೊರೆದ ಅಗ್ನಿಯ ಕುವರಿ
ಪಾಂಚಾಲಿಯನು ಪಡೆದ ಈ ನಾಡು,
ಆತ್ರೇಯಿ ಗಾರ್ಗಿಯರ ಮೀರಾ ಮಹಾದೇವಿ-
ಹೆಸರಿಸಲು ನನ್ನೊಂದು ನಾಲಗೆಯು ಸಾಲದಿಹ
ವೀರ ವನಿತೆಯರ ವಿದುಷಿಯರ ಪಡೆದ ಈ ನಾಡು,
ಅಬಲೆಯರ ಮಾನವೇ ತಮ್ಮ ಪ್ರಾಣವು ಎಂದು
ಮಾನಿನಿಯ ಮಾನವನು ಕಾಯೆ ಖಡ್ಗವ ಹಿರಿದು
ರುಧಿರವಾಹಿನಿ ಹರಿಸಿ ಪ್ರಾಣವನೆ ಪಣಕಿಟ್ಟ
ಕಲಿಗಳೂ ಬಲಿಗಳೂ ನಲಿದುಲಿದ ಈ ನಾಡು-
ಕಾಮುಕರ ಪಶುತನಕೆ ತುತ್ತಾದ ಅಬಲೆಯರು
ಹೊಳೆ ಹಾರಿ ಸಾಯುವುದ ನೋಡುವಂತಾಯಿತು!
ಇದಕ್ಕಿಂತ ಇನ್ನೆಂಥ ಕಾಡ ಬೇಡುವೆ ಕೆಳದಿ?

ಉಷಾ : ಕಾಡಲ್ಲ, ಸುಡುಗಾಡು!
ಆತ್ಮಗಳ ಪ್ರೀತಿಗಳ ನೀತಿಗಳ ರೀತಿಗಳ
ವಿಶ್ವಾಸ ಸ್ನೇಹಗಳ ಸುಡುವ ಸುಡುಗಾಡು!
ಎಲ್ಲಿ ಅಂತಃಕರಣ ಉಕ್ಕೇರಿ ಹರಿಯಿತೋ,
ಎಲ್ಲಿ ಹರಿಬದೆಯೊಲವು ಮಲರಿ ಮಗಮಗಿಸಿತೋ,
ಎಲ್ಲಿ ಪುರುಷಪ್ರೇಮ ಬಲಿಪೀಠವೇರಿತೋ,
ಎಲ್ಲಿ ಬೆಲೆವೆಣ್ಣಿಗೂ ಚಾರುದತ್ತನ ನೈಜ
ಪ್ರೇಮ ದೊರೆಕೊಂಡಿತೋ-ಅಲ್ಲಿ
ಆ ನಿಜದ ನಾಡಿನಲಿ, ಆ ತ್ಯಾಗಭೂಮಿಯಲಿ,
ಆ ವೇದ ಗೀತೆಗಳ ವಚನಗಳ ನಾಡಿನಲಿ,

ಆತ್ಮಹತ್ಯೆಯೆ ಗತಿಯೆ ಹತಭಾಗ್ಯ ಹೆಣ್ಣಿಗೆ?
ಬೇರೆ ಗತಿ ಕಾಣಿಸದೆ ಹಾರಿದಳೆ ಹೊಳೆಗೆ!

ಆಶಾ : ಹಾರಿದಳು, ಮುಳುಗಿದಳು, ತೇಲಿದಳು, ಕೊಚ್ಚಿದಳು
ಕೊರೆವ ತೊರೆಯೊಳಗೆ! ಎಲೆವೊ ಕಾಮುಕ,
ಇವಳನೀಪರಿಯಲ್ಲಿ ಕೊಂದಿರುವ ಕಟುಕ,
ಇಲ್ಲಿ ಬಾ, ನೋಡು ಬಾ ಪಾಪಿಯೇ–
ಎಲ್ಲಿ ಬೆಚ್ಚಗೆ ಮಲಗಿ ಗೊರಕೆ ಹೊಡೆಯುತಿರುವೆ?
ಮತ್ತಾವ ಮುಗ್ಧೆಯನು ದುರ್ಗತಿಗೆ ದೂಡುತಿಹೆ?
ನೋಡು ಬಾ, ನಿನ್ನ ನೆಚ್ಚಿನ ಕನ್ಯೆ ಮಣ್ಣಾದುದನ್ನು!
ನಿನ್ನ ದುಷ್ಕೃತ್ಯದೀ ದುರಂತ ನಾಟಕವನ್ನು ನೋಡು ಬಾ!
ಇವಳೊಡನೆ ಮುಳುಗು ಬಾ, ಪಾಪಿ–
ಇವಳೊಡನೆ ಮುಳುಗು ಬಾ!

ಉಷಾ : ಶಂಕರನ ಸಿರಿಜಡೆಗೆ, ಸುಂದರಿಯ ನಿಡುಮುಡಿಗೆ
ಸೇರಲೆಂದರಳಿದ್ದ ಮಲ್ಲಿಗೆಯು ವಿಧಿವಶದಿ
ಬೀದಿಯಲಿ ಬಿದ್ದುರುಳಿ ಕಾಲತುಳಿತಕೆ ಸಿಕ್ಕಿ
ಹುಡಿಗೂಡಿ ಹೋದಂತೆ ಅರಮನೆಗಲಂಕಾರ–
ವಾಗಬಹುದಾಗಿದ್ದ ರೂಪರತಿಯಿವಳಿಂತು
ಕೆಸರಿನಲಿ ಕೆಸರಾಗಿ ಹೊರಳುವಂತಾಯಿತೆ!
ಹಾಯ್ ವಿಧಿಯೆ, ಹಾಯ್ ವಿಧಿಯೆ!

ಆಶಾ : ವಿಧಿ ಯಾರು? ಮಾನವನ ಪಾಪವನು
ದೈವದುಡಿಯಲಿ ಹಾಕಿ ಹೊಣೆಯ ತಪ್ಪಿಸಿಕೊಳುವ
ಆತ್ಮವಂಚನೆ ಬೇಡ! ಸದಸದ್ವಿವೇಕವನು
ಮನುಜಗಿತ್ತಿಹ ದೇವ ಅವನ ಪಾತಕಕೆಂತು
ಹೊಣೆಯಾಗುವನು ಗೆಳತಿ? "ಸುಕೃತ್ರಗೈ, ಸುಕೃತಗೈ"

ಯೆಂದು ಒಂದೇ ಸಮನೆ ಅಂತರಾತ್ಮನ ವಾಣಿ
ಎಚ್ಚರಿಸುತ್ತಿದ್ದರೂ ಪಾಪವನೆ ಪ್ರೀತಿಸುವ
ನರ ದೈವವನು ದೂರಿ ಪಾರಾಗಬಲ್ಲನೆ?
ಒಳ್ಪ ಗಳಿಸಲು ಕೊಟ್ಟ ಬುದ್ಧಿ ಬಲಗಳನೆಲ್ಲ
ಕೆಡುಕಿಗಾಗಿಯೆ ವ್ಯಯಿಸಿರೆನ್ನುವನೆ ಆ ದೇವ?
ಪ್ರೇರಿಪುದೆ ಆ ವಿಧಿಯು? ವಿಧಿ ಯಾರು?
ಧರ್ಮದಾಜ್ಞೆಯ ಮೀರಿ ನಡೆಯುವುದೆ ವಿಧಿಯು!
ಕಂಗಳಲಿ ತಪ್ಪಿ ನೋಡುವುದೆ ವಿಧಿಯು!
ಕಿವಿಗಳಲಿ ತಪ್ಪಿ ಕೇಳುವುದೆ ವಿಧಿಯು!
ಜಿಹ್ವೆಯಲಿ ತಪ್ಪಿ ನುಡಿಯುವುದೆ ವಿಧಿಯು!
ತನ್ನ ದುಷ್ಕರ್ಮಗಳೆ ತನಗೆ ವಿಧಿಯು!
ಇಂದ್ರಿಯಗಳಿಚ್ಛೆಯನು ಅಂಧನೊಲು ಓಲೈಸಿ
ಮಾಡಬಾರದ ಕೃತ್ಯ ಮಾಡುವುದೆ ವಿಧಿಯು!
ತನಗೆ ತಾನೇ ವಿಧಿಯು, ತನಗೆ ತಾನೇ ನಿಧಿಯು–
ಬೇರಾವ ವಿಧಿಯುಂಟು?

ಉಷಾ : ಹಾಗೆನ್ನದಿರು ಗೆಳತಿ! ತನ್ನ ತಪ್ಪಿಲ್ಲದೆಯೆ
ಅನ್ಯರನ್ಯಾಯಕ್ಕೆ ತುತ್ತಾದ ಈ ತರುಣಿ
ತನ್ನ ತಾನುದ್ಧರಿಸಿಕೊಳದೇಕೆ ಹೊಳೆಹಾರಿ
ಹರಣವನು ನೀಗಿಹಳು?

ಆಶಾ : ತಪ್ಪಿಲ್ಲವೆಂದೆಂತು ವಾದಿಸುವೆ ಉಷಾ?

ಉಷಾ : ತಪ್ಪುಗಾರಳೆ ಇವಳು? ತಪ್ಪು ಯಾವುದು ಇವಳ?

ಆಶಾ : ತನಗೆ ತಿಳಿಯದ ಹಾಗೆ ತನ್ನನೀ ನರಕಕ್ಕೆ
ಎಳೆದವನು ಎಂಥವನು, ಎಂಥ ಸಂಸ್ಕಾರಗಳ ಪಡೆದಿಹನು,
ಎಂಥ ಗಾಳಿಯನುಂಡು ಬೆಳೆದಿಹನು,

ಯಾವ ಶಿಕ್ಷಣವನ್ನು ಪಡೆದಿಹನು,
ಯಾವ ಉದ್ದೇಶದಲಿ ಬಂದಿಹನು,
ಪರಿಶುದ್ಧ ಪ್ರೇಮಿಯೋ ಬರಿ ಕಾಮ ಕಾಮಿಯೋ-
ಎಂಬುದನು ಪರಿಕಿಸದೆ ಮೊದಲ ಸೆಳೆತಕೆ ಸೋತು,
ಮೋಹ ಮಾಯೆಗೆ ಜೋತು, ಕ್ಷಣಿಕ ಸೌಖ್ಯಕೆ ಓತು
ಭೋಗಶೂಲಕೆ ನೇತುಬೀಳುವುದು ತಪ್ಪಲ್ತೆ?
ತಂದೆತಾಯ್ಗಳ ಸಹಿತ ಕೇಳದೆಯೆ ಕಣ್ಮುಚ್ಚಿ
ಯೌವನ ವಿಕಾರಕ್ಕೆ ವಶಳಾಗಿ ಕುರುಡಾಗಿ
ವಿಶ್ವಾಸಘಾತಕನ ನಂಬಿದುದು ತಪ್ಪಲ್ತೆ?
ಸಂಯಮನವಾಭರಣ ಸ್ತ್ರೀ ಜನ್ಮಕೆ!
ಸಂಯಮನ, ಶಮನ, ಲಾಲಸೆಯ ದಮನ,
ಪ್ರೇಮ ವ್ಯವಹಾರದಲ್ಲಿಯೂ ಸಾವಧಾನ-
ಇದು ಧರ್ಮ! ಇದನು ಮೀರಿದುದೆ ತಪ್ಪು!
ತಪ್ಪಿಗೀ ತಲೆದಂಡ!

ಉಷಾ : ಇವಳಿಗಿಂತಲು ಅಧಿಕ ಅಧಮತನಗೈದಂಥ
ಪಾಪಾತ್ಮ ಸುಖವಾಗಿ ಜೀವಿಸಿರೆ ಇವಳಿಗೇ
ಈ ಕ್ರೂರ ಶಿಕ್ಷೆಯೆ? ಈ ಘೋರ ದುರ್ಗತಿಯೆ?
ಇದು ಯಾವ ನ್ಯಾಯ?

ಆಶಾ : ಇದು ಹೃದಯಹೀನ ದಯಾಶೂನ್ಯ ಜನರು ನಂಬಿದ ನ್ಯಾಯ!
ಇಂಥ ಜನರಲಿ ಬೆಳೆದ ಅವನೇಕೆ ಸಾಯುವನು?
ಇವಳ ಕಡೆ ಬೆರಳಿಟ್ಟು ವ್ಯಭಿಚಾರಿಯೆಂದೊಮ್ಮೆ
ಪಾಪಾತ್ಮಳೆಂದೊಮ್ಮೆ ಮೂದಲಿಸಿ ಮಾತಾಡಿ
ಬರೆಯಿಟ್ಟು ಸುಟ್ಟಂತೆ ಅವನ ಸುಡುವವರಾರು?
ಅವನೇಕೆ ಹೊಳೆ ಹಾರಿ ಹರಣವನು ತೊರೆಯುವನು?

ಈ ಪಾಪ ಕಾರ್ಯವನೆ ಪೌರುಷದ ಗುರುತೆಂದು
ಗೌರವಿಸುವವರುಂಟು! ಇದಕ್ಕಾಗಿ ಅವನನ್ನು
ಖಂಡಿಸದೆ ದಂಡಿಸದೆ ಧನ್ಯವಾದಗಳನ್ನು
ಕೊಡುವವರಿಗೂ ಕೊರತೆಯಿಲ್ಲ ಈ ನಾಡಿನಲಿ!
ಇದು ನಮ್ಮ ಸಮಾಜದ ನಿಜರೂಪ!

ಉಷಾ : ಗತಿಯಾವುದು ಸಖಿ? ಸಬಲರೇನೇ ಪಾಪ-
ಗೈದರೂ ಪುಣ್ಯವದು, ಅಬಲೆಯರ ಪುಣ್ಯವೂ ಪಾಪ-
ಇದೆ ಗತಿಯೆ? ಕಾಮುಕರು ಉಳಿದು ಕಾಮಿನಿಯ-
ರಿವಳಂತೆ ಸಾಯುವುದೆ ಗತಿಯೆ?

ಆಶಾ : 'ಸಾಯಿ' ಎಂದೊರೆದಿಹರೆ ಇವಳಿಗಾರಾದರೂ?

ಉಷಾ : 'ಸಾಯಿ' ಎಂದೊರೆಯುವರು ಬೇಕೆ?
ಸಾಯಲಿಕು ಬೇರೊಬ್ಬರನುಮತಿಯು ಬೇಕೆ?

ಆಶಾ : ಬದುಕಲಿಕೆ ಬೇಕೆ ಬೇರೊಬ್ಬರನುಮತಿಯು?
'ಇರು' ಎಂದು ಹೇಳುವವರೂ ಬೇಕೆ?
ಸಮನಲ್ತೆ ಎಲ್ಲರಿಗೆ ಇರುವ ಅಧಿಕಾರ?
ಅದಕೇಕೆ ಇನ್ನೊಬ್ಬರನುಮತಿಯ ಕೋರುವುದು?

ಉಷಾ : ಇವಳಸುವ ತೊರೆದದ್ದು ತಪ್ಪೆ?

ಆಶಾ : ತಪ್ಪಲ್ಲದಿನ್ನೇನು? ಆ ದುರುಳ ಕಾಮುಕಗೆ
ಜೀವಿಸುವ ಅಧಿಕಾರವೆನಿತಿಹುದೊ
ಅದಕಿಂತ ಹೆಚ್ಚಾದ ಅಧಿಕಾರವಿರಲಿಲ್ಲೆ
ಈ ಮುಗ್ಧ ಕನ್ನಿಕೆಗೆ?

ಉಷಾ : ಮಾನಹಾನಿಯನೆಂತು ತಾಳಕೊಳ್ವುದು ಗೆಳತಿ?
ಜನದ ಸಂಚಿನ ನುಡಿಯನೆಂತು ಸಹಿಪುದು ಗೆಳತಿ?

ಆಶಾ : ಮಾನಹಾನಿಯು ಅವನಿಗಾಗಿಲ್ಲೆ? ಆ ಪಾಪಿಗಾಗಿಲ್ಲೆ?

ಅನುಚಿತವಗೈದವರೊಳೊಬ್ಬರಿಗೆ ಅಪಮಾನ ಒಬ್ಬರಿಗೆ
ಮಾನವೆ?

ಇಂಥ ಅನ್ಯಾಯಿಗಳ ಬಿರುನುಡಿಗೆ ಬೆಲೆಯುಂಟೆ?

ಸಹಿಸುವುದು ಅವುಗಳನು ಲೆಕ್ಕಿಸದೆ, ದುಃಖಿಸದೆ!

ಜಯಿಸುವುದು ಅನ್ಯಾಯಗಳ–ಸೋಲೊಪ್ಪದೆ!

ತಪ್ಪು ಮಾಡಿಹ ಮಕ್ಕಳನು ಕ್ಷಮಿಸಿ ಮನ್ನಿಸುವ

ತಂದೆಯೊಬ್ಬನೆ ಜಗಕೆ! ಅವನೊಬ್ಬನನು ನಂಬು!

ಮಾನವ ಸಮಾಜದಲಿ ಸ್ತ್ರೀ ಪುರುಷರಿಬ್ಬರಿಗೆ
ಭಿನ್ನ ನೀತಿಗಳುಂಟು; ಅವನ ಲೋಕದೊಳುಂಟೆ?
ಮನುಜಕೃತ ಶಾಸ್ತ್ರದಲಿ ಹೆಣ್ಣು ಗಂಡಿನ ಭೇದ–
ಈಶ್ವರನ ದೃಷ್ಟಿಯಲಿ ಭೇದಭಾವನೆಯುಂಟೆ?
ಅವನ ಕರುಣೆಯೊಳಿಲ್ಲ ಕುಲ–ಲಿಂಗ–ವಯ ಭೇದ!
ಗಂಡಿಗೊಂದಾಚಾರ ಹೆಣ್ಣಿಗೊಂದಾಚಾರ
ಎಂಬ ಕೃತ್ರಿಮ ಶಾಸ್ತ್ರ ಶಿವನೊಪ್ಪುವನೆ ಸಖಿಯೆ?
ಅವನನ್ನೆ ನಂಬುವುದು! ಕೃತ ಕರ್ಮಗಳನವನ
ಚರಣಗಳಿಗರ್ಪಿಸುತ ಕ್ಷಮೆಯ ಕೋರುವುದು!
ಅವನು ನಿಯಮಿಸಿದಂಥ ಕರ್ತವ್ಯ ಕರ್ಮವನು
ಶ್ರದ್ಧೆಯಿಂ ಶುದ್ಧಿಯಿಂ ಮಾಡುತ್ತ ಮಡಿಯುವುದು!
ಅನ್ಯಾಯಗಳ ಮುಂದೆ ಮಂಡೆಯನು ಬಗ್ಗಿಸದೆ
ಪ್ರತಿಭಟಿಸಿ ಜಯಿಸುವುದು, ದುಷ್ಕರ್ಮ ದಹಿಸುವುದು!
ಇದೆ ಗತಿಯು, ಇದೆ ಫಲವು, ಇದೆ ನಮ್ಮನೆಲ್ಲರನು
ದುಃಖ ನದಿ ದಾಟಿಸುವ ಸುಭಗ ಸೇತುವೆಯು!
ಇಲ್ಲದಿರೆ ಇವಳಂತೆ ಈ ದುಃಖನದಿಯಲ್ಲೆ
ಮುಳುಮುಳುಗಿ ಸಾಯುವುದೆ ನಮ್ಮ ಗತಿಯು!

ಉಷಾ : ಅಹುದಹುದು, ಇದುವೆ ಸೇತುವೆ ದುಃಖನದಿಗೆ.
ಇದನರಿಯದಲೆ ಜನದ ದೂಷಣೆಗೆ ಹೌಹಾರಿ
ಹೊಳೆಯ ಹಾರಿದ ತಂಗಿಯಿವಳ ಮೆಲ್ಲನೆ ಮುಟ್ಟು

ಮರುಕದಿಂದೆತ್ತು, ಸಖಿ, ಮರುಕದಿಂದೆತ್ತು!

ಆಶಾ : ಎತ್ತು ಗೆಳತಿ, ಅನುಕಂಪದೊಡನೆತ್ತು; ಅನುರಾಗದೊಡನೆತ್ತು.
ಕೈಕಾಲುಗಳ ಸವರಿ ಮೃದುವಾಗಿ ಮಡಿಸು;
ಜರೆಯುವರ ಹಳಿಯುವರ ಕೊರೆಯುವರ ತುಳಿಯುವರ
ನಂಜುನುಡಿಗಳ ಕೇಳಿ ರೊಚ್ಚಿನಲಿ ಕಚ್ಚಿ ತುಟಿಗಳ
ಬಿಟ್ಟ ಬಿರು ನೋಟವನು ರೆಪ್ಪೆಯಲಿ ಕವಿಸು!
ಬಿಡುಗಣ್ಣ ಬಾನವರು ಇವಳ ರೂಪವ ಕಂಡು
ಕರುಬಿದರೊ, ಮಮಕರಿಸಿ ಕೊಂಡೊಯ್ದರೋ ಕಾಣೆ!

ಉಷಾ : ಮುಂದೆ ಬಲ್ಲವರಾರು? ಇಂದಾಯ್ತು ಶಾಂತಿ,
ಸ್ಮಶಾನ ಶಾಂತಿ ! ದೇವ ಮಾಡುವುದಿರಲಿ
ನಾವು ಮಾಡುವ ಹಿಂಸೆ ನರಕವೀಲೋಕದಲಿ!
ದುಃಖಿಗಳ ಪಾಪಿಗಳ ಧಿಕ್ಕರಿಸುವೆವು ನಾವು–
ಧಿಕ್ಕರಿಸನಾ ದೇವ, ಸರ್ವರಕ್ಷಕ, ಜಗದ ತಂದೆ!

ಆಶಾ : ಅವನಿಗೇ ತಾಗೈದ ಅನುಚಿತವನೊಪ್ಪಿಸಲು
ಹೊರಟು ಹೋದಳೊ ಏನೊ! ಜೀವಿಸುವ ಧೀರತನ
ಸಾಲದೆಯೆ, ಭೀರುತನ ಬಲವಾಗೆ ಕಂಗೆಟ್ಟು
ಮರಣವನೆ ಮೊರೆವೊಕ್ಕಳೇನೋ! ವಿಸ್ತೀರ್ಣ
ಪೃಥ್ವಿಯಲಿ ತನಗಿರಲು ಅಡಿನೆಲವು ಸಿಗದಿರಲು
ಎದೆಯೊಡೆದು ಸದಮಲನ ಪದಪದ್ಮ ಸೇರಿದಳೊ!
ಮುಟ್ಟು ಮೆಲ್ಲನೆ ಗೆಳತಿ, ತಟ್ಟು ಮೆಲ್ಲನೆ ಗೆಳತಿ,
ಮೈಯೊರೆಸಿ ಸರಿಪಡಿಸಿ ಎದೆಯಲ್ಲಿ ಕೈಮುಗಿಸಿ
ಕಳುಹಿಸಿವಳನು ಅವನ ಬಳಿಗೆ–ಚಿನುಮಯನ ಬಳಿಗೆ!

ಇಬ್ಬರೂ : ನೊಂದು ಬಂದಿಹಳಿವಳು ತಂದೆ ಸ್ವೀಕರಿಸು
ಕುಂದನೆಣಿಸದ ಕರುಣ–ಸಿಂಧು ಸ್ವೀಕರಿಸು!

ರಜತ ರೇಖೆ

ಹಿನ್ನೆಲೆ : ಕಾರ್ಮೋಡ, ಮಿಂಚು, ಗುಡುಗು, ಸಿಡಿಲು. ಮೇಘಮಾಲೆಯನ್ನು ನೋಡಿ ವಿಭಿನ್ನ ಭಾವನೆಗಳು ಮೂಡುತ್ತವೆ ಕವಿ, ತತ್ವದರ್ಶಿ, ವಿಜ್ಞಾನಿ ಮೊದಲಾದವರಲ್ಲಿ.

ಕವಿ : ಸಜಲ ಶ್ಯಾಮಲ ಮೇಘಮಂಡಲ
ಸಬಲ ಕಾನನ ಶುಂಡಿಲ
ನೀಲಗಗನ ಕಳಿಂದನದಿಯಲಿ
ಬಿರಿದ ನೈದಿಲ ಕುಟ್ಮಲ
ಧರಣಿ ತರಣಿಯ ನೀಲಕುಂತಲ
ಜಲದ ಸಂಕುಲ ಕಮಲ
ಮಿಂಚು ಹೆಣಿಗೆಯು ಆಲಿಪುಷ್ಪವು
ಸಪ್ತವರ್ಣಿಯೆ ಬೈತಿಲ
ತೇಲು ತೇಲೆಲೆ ಮೇಘಮಾಲೆಯೆ
ರೂಪಲೀಲಾ ಲೋಲೆಯೆ
ತಿರೆಯ ತಣಿಸುವ ಚರವ ಕುಣಿಸುವ
ಸೃಷ್ಟಿ ಪೋಷಣ ಶೀಲೆಯೆ

ತತ್ವದರ್ಶಿ : ಅಂಬರಮೆಂಬುವ ಆತ್ಮನಿಗಂಟಿಹ
ಪುದ್ಗಲನಿವಹವು ಈ ಮೋಡ
ಕತ್ತಲೆ ಹೆತ್ತಿಹ ದೈತ್ಯರಂದದೀ
ಮೋಡವ ಹಾಡುವ ಕವಿ ನೋಡ!

ವಿಜ್ಞಾನಿ : ಯಂತ್ರಬಲದಿಂದಿಂಥ ಮೋಡಗಳ
ನಿರ್ಮಿಸಬಲ್ಲೆವು ನಾವೀಗ
ತಾಂತ್ರಿಕ ಬಲದಿಂ ಮೃತ್ಯು ಮೇಘಗಳ
ಶೋಧಿಸುತಿರುವೆವು ನಾವೀಗ!

ನರ್ತಕಿ : ಕುಣಿ ನವಿಲೆ ಕುಣಿ ಕುಣಿ!
ಮೇಘಮಾಲೆ ಗದರಿತಿದೊ
ಕುಣಿ ನವಿಲೆ ಕುಣಿ ಕುಣಿ
ಅಮೃತಬಿಂದು ಉದುರಿತಿದೊ

ಕುಣಿ ನವಿಲೆ ಕುಣಿ ಕುಣಿ
ಕುಣಿ ನವಿಲೆ ವನದ ನವಿಲೆ
ಕುಣಿವೆ ನಿನ್ನ ಜೊತೆಗೆ
ರಾಗ ಹೆಚ್ಚಿ ಸೋಗೆ ಬಿಚ್ಚಿ
ಕುಣಿ ಮಧುರ ಗತಿಗೆ
ಮಿಂಚಿನ ಆ ಗೊಂಚಲು
ಸಂಚಲಿಸುವ ಹಾಗೆ ಕುಣಿ
ಗುಡುಗು ಸಿಡಿಲ ವಾದ್ಯವು
ನುಡಿವ ಗತ್ತಿನೊಡನೆ ಕುಣಿ
ಮಳೆಯ ಹನಿಯ ಮುತ್ತಿಗೆ
ಇಳೆಯು ಹಿಗ್ಗುವಂತೆ ಕುಣಿ
ಮಣ್ಣ ಸುಪ್ತ ಪರಿಮಳ
ಹೊಮ್ಮಿ ಹರಡುವಂತೆ ಕುಣಿ
ಬಾರೆ ಸಖಿ ಮತ್ತ ಶಿಖಿ
ಮತ್ತೆ ಮತ್ತೆ ನರ್ತಿಸು
ಲಾಸ್ಯಕಿಂತು ಸ್ಫೂರ್ತಿಯಿತ್ತ
ಮೇಘಗಳನು ಕೀರ್ತಿಸು!

ರಾಜಕಾರಣಿ : ಘಾತವಾಯಿತೋ ಘಾತವಾಯಿತು
ಚುನಾವಣೆ ಕಾಲಕೆ ಮಳೆಯು ಬಂದಿತು!
ಮತದಾನಕ್ಕಿದೊ ದಾಳಿಯ ತಂದಿತು
ಮಂತ್ರಿಪದವಿಯನು ಮುಂದಕೆ ನೂಕಿತು
ಘಾತವಾಯಿತೋ ಘಾತವಾಯಿತು!
ಗೋಡೆಯ ಪಟಗಳು ತೊಳೆದು ಹೋಗುವುವು

ಕರಪತ್ರಿಕೆಗಳು ಬಳಿದು ಹೋಗುವುವು
ಅಯ್ಕೆಯ ಭಾಷಣ ಮರೆದು ಹೋಗುವುವು
ಇನಿತು ವೆಚ್ಚಗಳು ಬರಿದೆ ಹೋಗುವುವು
ಘಾತವಾಯಿತೋ ಘಾತವಾಯಿತು!

ವ್ಯಾಪಾರಿ : ಸರಕಿನ ಬಂಡಿಗಳೆಲ್ಲ ತೊಯ್ಯುವುವೊ
ಮಳೆ ಬಂದಿತು ಮಳೆ ಹಾಳಾಗ!
ಬರುವ ಲಾಭಕೂ ಮೂಲ ಗಂಟಿಗೂ
ಸೊನ್ನೆಯು ಬೀಳಲುಬಹುದೀಗ!
ಹೊಸಮನೆ ಕಟ್ಟುವುದರ್ಧಕೆ ನಿಂತಿದೆ
ಮುಗಿಯುವವರೆಗೀ ಮಳೆಬೇಡ
ಓ ಭಗವಂತನೆ ಅಂದಣ ಕೊಡಿಸುವೆ
ಮಳೆಯನು ನಿಲ್ಲಿಸು, ಮುಂದೂಡ!

ವಿರಹಿಣಿ : ಸಂದೇಶವಾವುದನು ತಂದಿರುವೆ ಬಂಧುವೆ
ಮೇಘಪುರುಷನೆ ಹಿತನೆ ಪ್ರೇಮದೂತ?
ಕೋಡಿ ಬಾಡಿದೆ ವಿರಹ ವೇದನೆಯ ಶಿಖಿಯಲ್ಲಿ
ತಂಪೆರಚು ಬಿತ್ತರಿಸಿ ಪ್ರಿಯಕರನ ಮಾತ!
ಅವನ ಅಭಿಲಾಷೆಯನು ಪ್ರೇಮ ಪರಿಭಾಷೆಯನು
ಮಧುರ ಮನದಾಸೆಯನು ತಿಳಿದಿರುವೆಯಾ?
ಅವನಿಂದ ಏನಾದರೊಂದು ಸಂದೇಶವನು
ಹಿತಬಂಧು ನೀ ಹೊತ್ತು ತಂದಿರುವೆಯಾ?

ತತ್ವದರ್ಶಿ : ಮೂಢ ಜನ ಮೂಢ ಮನ
ಮೂಢ ಚಿಂತನ!
ಮೂಢ ಬುದ್ಧಿ ಮೂಢ ಭಾವ
ಮೂಢ ಜೀವನ!

ಬಣ್ಣದ ಕನ್ನಡಕವಿಟ್ಟು
ಭುವಿಯ ನೋಡಿ ಭ್ರಮಿಪರು
ಬಯಕೆಯ ಬೆಂಬತ್ತಿ ಸುತ್ತಿ
ಬರಿದೆ ಬಳಲಿ ಶ್ರಮಿಪರು!

ಕವಿ : ಮೋಡ ಮೂಡಿ ಎಲರು ತೀಡಿ
ನಾದರಸವನು ಉಕ್ಕಿ
ತನಗೆ ತಿಳಿದ ಹಾಗೆ ತಾನೆ
ಹಾಡೆ ಎದೆಯ ಹಕ್ಕಿ
ಮೂಢತನವದೆಲ್ಲಿ ಬಂತು
ಹೇಳು ತತ್ವದರ್ಶಿ?
ಬಾಳ ಬಿಟ್ಟು ಬೇರೆ ತತ್ವ
ಉಂಟೆ ಬ್ರಹ್ಮಸ್ಪರ್ಶಿ?

ತತ್ವದರ್ಶಿ : ಎಲ್ಲ ತೋರ್ಕೆಯಾಚೆ ಇಪ್ಪ
ನಿತ್ಯ ವಸ್ತುವೊಂದೆ
ಅದುವೆ ಸತ್ಯ ಅದುವೆ ನಿತ್ಯ
ಅದುವೆ ತತ್ವವೆಂದೆ

ಕವಿ : ಆ ತತ್ವವಾ ಸತ್ಯವಾ ನಿತ್ಯ ನಿನ್ನಂತೆ
ಶುಷ್ಕ ರುಕ್ಷವದಲ್ಲ ತತ್ವದರ್ಶಿ
ಶಿವ ಸತ್ಯಸುಂದರನು ಆನಂದ ಮಂದಿರನು
ಪ್ರೇಮಸ್ವರೂಪನವ ಬ್ರಹ್ಮಸ್ಪರ್ಶಿ!
ಆನಂದದಿಂದುದಿಸಿ ಆನಂದದೆಡೆ ನಡೆದ
ಈ ವಿಶ್ವದೆದೆಯಲ್ಲಿ ಆನಂದಶರಧಿ
ಅನವರತ ಉಕ್ಕುತಿದೆ ಅದರ ತೆರೆಗಳೆ ಮೋಡ
ಹೂಮಿಡಿಯು ತರುಗಿರಿಯು ತೊರೆಯು ವನಧಿ

ಸುಂದರ ವಸುಂಧರೆಯ ಶುಭದ ವಸ್ತುಗಳೆಲ್ಲ
ಆ ಹಿಗ್ಗಿನಲೆಗಳೇ ವ್ಯಕ್ತರೂಪದಲಿ
ಆನಂದದಿಂ ಬಂದುದಾನಂದವೀಯುವುದು
ಸೌಂದರ್ಯವಾನಂದ ಸುಧೆಯು ಮೂಲದಲಿ॥
ಆ ಇಳೆಯ ಎದೆ ಹಿಗ್ಗೆ ಚೆಲುವಾಗಿ ಚಿಮ್ಮಿದೀ
ಮೋಡಗಳ ಗಾಡಿಯನು ನೋಡಿ ಹಾಡಿದರೆ
ನಲವೇರಿ ನರ್ತಿಸಲು ಬಯಸಿದರೆ ಮೌಢ್ಯವೆ?
ಮೂರ್ಖತೆಯೆ ಮನದನ್ನನನ್ನು ಬೇಡಿದರೆ?

ತತ್ವದರ್ಶಿ : ತಾಮಸದ ಪೂಜೆಯಿದು ಕತೆಕವಿತೆ ಚೆಲುವೆಂಬ
ಒಲವೆಂಬ ನಲವೆಂಬ ನೂರು ಹೆಸರಿನಲಿ!
ಒಂದೆ ಮೋಡವು ನೋಡಿದೆಲ್ಲರೆದೆಗಳಲೇಕೆ
ಭಿನ್ನ ಪ್ರತಿಕ್ರಿಯೆಗೈದುದಿಂದು ಇನಿತರಲಿ?
ವಿಷಯ ಸುಖದಸ್ಥಿರತೆ ಮಿಥ್ಯತೆಗೆ ಸಾಕ್ಷಿಯಿದು
ಒಂದೆ ಮೋಘಾವಳಿಯ ವಿವಿಧ ಪರಿಣಾಮ!
ಆತ್ಮಕಾಮನೆಯನ್ನೆ ಪ್ರಕೃತಿ ಪಲ್ಲಟಗಳಲ್ಲಿ
ಬಯಸಿ ಭ್ರಮಿಸುವ ಮೂಢ ಮತಿಯ ಸಂತಾನ!
ಕವಿದೃಷ್ಟಿಗೀ ಮೋಡ ಮೂಲ ಮೋದದ ಲೀಲೆ-
ಯಾಗಿ ಕಾಣಿಸಬಹುದು, ನನಗೆ ಕವಿಯೆ
ಮೇಘ ಮಾಯೆಯು ನಿಜದಿ ಮನುಕುಲವ ಮುಸುಕಿರುವ
ತಾಮಸದ ಪ್ರತಿರೂಪು ಕೇಳು ಕವಿಯೆ!

ಕವಿ : ಎಂಥ ಕಾರ್ಮೋಡಕೂ ಇಹುದೊಂದು ತಾತ್ವಿಕನೆ
ಸುತ್ತು ಮನವನು ಸೆಳೆವ ರಜತ ರೇಖೆ
ಇತ್ತಲಿದೊ ಬಾನ್ದೇವಿಯಾಂತ ಮಣಿಮಾಲೆಯೊಲು
ಮೂಡಿರುವ ಮಳೆಬಿಲ್ಲ ಸುವರ್ಣ ಲೇಖೆ!

ಜೀವನದ ಉಗಮವೇ ತಾಮಸದ ಮೂಲದಲಿ
ತಾಮಸವು ಸಾತ್ವಿಕದ ಸಿಪ್ಪೆ ತಾತ್ವಿಕನೆ!
ತಾಮಸವೆ ಗೊಬ್ಬರವು ಸಾತ್ವಿಕತೆ ಸಸ್ಯಾಳಿ
ಇದು ಶಿವನ ಸೃಷ್ಟಿಯ ರಹಸ್ಯ ಸಾತ್ವಿಕನೆ
ತಾಮಸವು ತಾಮಸವೆ ಆಗಿ ಉಳಿದರೆ ಮಾತ್ರ
ನಿನ್ನ ವಾದವು ಸರಿಯು ಓ ತತ್ವದರ್ಶಿ
ತಾಮಸದ ಕೆಸರಿನಲಿ ಕಲೆಯ ಕಮಲವು ಅರಳೆ
ಅದು ಬಾಳ ಬೆಳ್ಳಿಗೆರೆ ಓ ಬ್ರಹ್ಮಸ್ಪರ್ಶಿ!
ಇದ ನೆನೆದು ಉದಯಿಸಲಿ ಹೃದಯದಲಿ ಸದಯತೆಯು
ಮುದ ಶಿವನ ರಮಣೀಯ ಸೃಷ್ಟಿಯಲ್ಲಿ
ಈ ಜಗದ ಜೀವನದಿ ದೇವನಿಂಗಿತ ಕಾಂಬ
ಪಾವನತೆ ಬರಲೆಮ್ಮ ನವ ದೃಷ್ಟಿಯಲ್ಲಿ!

ತಾತ್ವಿಕ : ಒಪ್ಪಿದೆ ಕವಿ ಸುಂದರ ಭುವಿ
ಸುಂದರ ತರುಗಿರಿ ಚಂದ್ರ ರವಿ
ಸುಂದರವೀ ಮಾನವ ಜೀವನ
ಸವಿಸವಿ, ಬಾಳಿನ ಸೊಗವ ಸವಿ!
ಸವಿಯಾಗಿದ್ದರೆ ಶಿವನಿಗೆ ಪ್ರೀತಿಯು
ನಲಿಯದವನೆ ನಿಜವಾಗಿ ಭವಿ!
ನಲಿಯುವ ಜೀವಿಗಳಿಂದಲಿ ನಂದನ-
ವಾಗಲಿ ನಮ್ಮಯ ಚೆಲುವ ಭುವಿ!

ಗಿರಿಜೆಯ ಗೆಲವು
(ಗಿರಿಜಾ ಕಲ್ಯಾಣ)

ಕಾಳಿದಾಸನ 'ಕುಮಾರ ಸಂಭವ'

ಮತ್ತು ಹರಿಹರನ 'ಗಿರಿಜಾ ಕಲ್ಯಾಣ'ಗಳು

ಸಂಸ್ಕೃತ ಕನ್ನಡ ಸಾಹಿತ್ಯಗಳ ಅಲಂಕಾರಪ್ರಾಯವಾಗಿ ಉಳಿದುಬಂದಿವೆ, ಉಳಿಯುವುವು ಕಲ್ಪಾಂತಸ್ಥಾಯಿ-ಯಾಗಿ. ಅವುಗಳ ಅಧ್ಯಯನದ ಜೊತೆಗೆ ಇಂದಿನ ಚಿಂತನವು ಸೇರಿ ಈ ಗೀತನಾಟಕ ರೂಪುಗೊಂಡಿದೆ.

ತೆರೆ ಏಳುವ ಮುನ್ನ ತೆರೆಯ ಹಿಂಬದಿಯಲ್ಲಿ ಹಿಮ್ಮೇಳದ ಹಾಡು. ಅದಕ್ಕೆ ತಕ್ಕಂತೆ ರುದ್ರತಾಂಡವದ ಹೆಜ್ಜೆಯ ನೃತ್ಯ.

ಮೇಳ : ಜಯತ್ವದಭ್ರವಿಭ್ರಮಭ್ರಮದ್ಭುಜಂಗಮಸ್ಫುರತ್
ಧಗದ್ಧಗದ್ಧಿ ನಿರ್ಗಮತ್ಕರಾಲಭಾಲಹವ್ಯವಾಟ್
ಧಿಮಿ ಧ್ಧಿಮಿ ಧ್ಧಿಮಿ ಧ್ವನನ್ಮೃದಂಗ ತುಂಗ ಮಂಗಲ
ಧ್ವನಿಕ್ರಮ ಪ್ರವರ್ತಿತ ಪ್ರಚಂಡ ತಾಂಡವಃ ಶಿವಃ...

ಗೀತಧ್ವನಿ ನಿಲ್ಲುತ್ತದೆ. ನೃತ್ಯಧ್ವನಿ ಇನ್ನೂ ಹೆಚ್ಚಾಗುತ್ತದೆ. ತೆರೆ ಏಳುತ್ತದೆ. ನೃತ್ಯಮತ್ತ ಶಿವ ರುದ್ರತಾಂಡವವಾಡುತ್ತಿರುವುದು ಕಾಣುತ್ತದೆ. ಮತ್ತೆ ಹಿಮ್ಮೇಳದ ಹಾಡಿನೊಡನೆ ಪ್ರಚಂಡ ತಾಂಡವ ಮುಂದುವರಿಯುತ್ತದೆ:

ಮೇಳ– ದಹಿಸುತಿಹಳು ಅಲ್ಲಿ ಸತಿಯು
ಜ್ವಲಿಸುತಿಹುದು ಶಿವನ ಮತಿಯು
ಪುಟಿಯುತಿಹುದು ಮನದ ಖತಿಯು
ಬಂತು ಚರಣ ಕರಕೆ ಗತಿಯು
ಕುಣಿವ ಪ್ರಳಯ ಲೋಲನು
ಕುಣಿವ ಕಾಲಕಾಲನು!
ಕುಣಿವನಿದೋ ಕಾಲ ಕಾಲ
ಚರ್ಮಧಾರಿ ರುಂಡಮಾಲ
ಜ್ವಲಿಸೆ ಅಗ್ನಿಫಾಲ ಶೂಲ
ಪೂತ್ಕರಿಸುತಿರಲು ವ್ಯಾಲ
ಭೀತ ವಿಶ್ವಜಾಲವು
ಬಂತು ಪ್ರಳಯ ಕಾಲವು!
ಪಾದಹತಿಗೆ ಕಡಲು ಸಿಡಿಯೆ
ತೋಳಗತಿಗೆ ಬಯಲು ನುಡಿಯೆ
ದಿಗಿಭತತಿಯ ಕುಂಭ ಒಡೆಯೆ
ಶಬ್ದಮಾತ್ರದಿಂದ ಮಡಿಯೆ
ಕ್ಷುದ್ರ ಜೀವಜಾಲವು

ಬಂತು ಪ್ರಳಯ ಕಾಲವು!

ನಡುಗು ನಡುಗು ತಿಣ್ಣತಿರೆ

ಸಿಡಿಸಿಡಿಸಿಡಿ ನಭದ ತಾರೆ

ಗುಡುಗು ಗುಡುಗು ಕೈಯ ಡಮರೆ

ತುಳುಕು ತುಳುಕು ಜಟಾಧಾರೆ

ಉರಿಯಲಗ್ನಿ ಫಾಲವು

ಬಂತು ಪ್ರಳಯ ಕಾಲವು!

ಹಿಮ್ಮೇಳದ ಹಾಡು ನಿಲ್ಲುತ್ತದೆ. ತಾಳವಾದ್ಯಗಳು ಮಾತ್ರ ತ್ವರಿತಗತಿಯಿಂದ ಮುಂದುವರಿಯುತ್ತವೆ. ರುದ್ರನು ರಭಸವೇರಿ ಕುಣಿದು ಕುಣಿದು ಶಿಲಾಪೀಠದ ಮೇಲೆ ಯೋಗಸ್ಥನಾಗಿ ಕುಳಿತುಬಿಡುತ್ತಾನೆ. ತೆರೆ ಬೀಳುತ್ತದೆ. ಗಿರಿರಾಜನ ಅರಮನೆಯ ಉಪವನ ಕಂಗೊಳಿಸುತ್ತದೆ. ಅದೇ ಪ್ರಾಯದಲ್ಲಿ ಪದಾರ್ಪಣ ಮಾಡುತ್ತಲಿರುವ ಗಿರಿಜೆ ಮತ್ತು ಅವಳ ಸಖಿಯರು ಜಯೆ, ವಿಜಯೆ, ಛಾಯೆ, ಮಾಯೆಯರು ಕರಂಡಗಳನ್ನು ಹಿಡಿದು ಕೂಡಿ ಹಾಡುತ್ತ ಪ್ರವೇಶಿಸುತ್ತಾರೆ.

ಉಪವನದಲಿ ಅರಳಿವೆ ಬಾ

ಪಾರಿಜಾತ ಮಲ್ಲಿಗೆ

ತರುಲತೆಗಳು ನವಿರಾಂತಿವೆ

ಶುಕಪಿಕಗಳ ಸೊಲ್ಲಿಗೆ

ಅದೊ ತಳಿರಿನ ತಿಲ್ಲಾಣವು

ಅಲರಿನ ಅಲರಿಪುವು

ಇದೊ ಬಳ್ಳಿಯ ಅಭಿನಯಕಲೆ

ಮರಿದುಂಬಿಯ ಧ್ರುತವು

ವಲ್ಲರಿಯಲಿ ಉಯ್ಯಾಲೆಯ

ಆಡುತಲಿದೆ ಚಿಟ್ಟೆ

ಮಗಮಗಿಸುವ ಮೆಲ್ಲೆಲರಲಿ

ಬಣ್ಣದ ತೆರೆ ಹುಟ್ಟೆ

ಓ ಮಲ್ಲಿಗೆ ಓ ಸಂಪಿಗೆ

ಇರುವಂತಿಗೆ ಕೇಳು

ಹೂಬುಟ್ಟಿಯ ಹಿಡಿದಿರುವೆನು

ನೀನದರೊಳು ಬೀಳು........

ಈ ಹಾಡು ಸಾಗಿರುವಂತೆ ಗಿರಿಜೆ ವನಶ್ರೀ ವೈಭವವನ್ನು ನೋಡುತ್ತ ನೋಡುತ್ತ ಶಿಲಾಪೀಠವೊಂದರ ಮೇಲೆ ಕುಳಿತು ಶಿವಮಾನಸಪೂಜೆಯಲ್ಲಿ ಮಗ್ನಳಾಗಿಬಿಡುತ್ತಾಳೆ.

ಜಯೆ : ತುಂಬಿತೈ ಕರಂಡವು

ವಿಜಯೆ : ಜಿನುಗುತಿದೆ ಮಕರಂದವು

ಛಾಯೆ : ಬೇಗ ಕಟ್ಟು ದಂಡೆಯ

ಮಾಯೆ : ಅಲಂಕರಿಸು ಮಂಡೆಯ

ವಿಜಯೆ : ಎಲ್ಲಿ ಎಲ್ಲಿ ಗಿರಿಜೆಯು

ಜಯೆ : ಅಲ್ಲಿ ಅವಳ ಪೂಜೆಯು

ಛಾಯೆ : ಎಂಥ ಹುಚ್ಚು ಇವಳಿಗೆ

ಮಾಯೆ : ಗಿರಿರಾಜನ ಮಗಳಿಗೆ

ಇತ್ತ ಲಕ್ಷ್ಯವೇ ಇಲ್ಲದೆ ತನ್ನಷ್ಟಕ್ಕೆ ತಾನೇ ಹಾಡಿಕೊಳ್ಳುತ್ತಲಿದ್ದಾಳೆ ಗಿರಿರಾಜನ ತನುಜೆ:

ತೋರಿಯೂ ತೋರದೊಲು

ಕಾಲಾರಿ ಇರುವೆ

ನಿನ್ನನ್ನು ನೋಡದಿಹ

ಇರವೊಂದು ಇರವೆ?

ಹಕ್ಕಿಯುಲಿಯಲಿ ಕರೆವೆ

ಹೂವಾಗಿ ನಗುವೆ

ನವಿಲಾಗಿ ನರ್ತಿಸುವೆ

ವನವಾಗಿ ಜಿಗಿವೆ

ಏನೇನೊ ರೂಪಾಗಿ

ಕೈಮಾಡಿ ಕರೆವೆ

ಚೆಲುವಿನೀ ಪಟದಲ್ಲಿ

ನಲ್ಲೋಲೆ ಬರೆವೆ

ತೋರಿಯೂ ತೋರದೊಲು

ಕಾಲಾರಿ ಇರುವೆ

ನಿನ್ನನ್ನು ನೋಡದಿಹ

ಇರವೊಂದು ಇರವೆ.....

ಹಾಡುತ್ತ ಹಾಡುತ್ತ ಮತ್ತೆ ಅರ್ಧನಿಮೀಲಿತ ನಯನೆಯಾಗಿ ಧ್ಯಾನ ಮಗ್ನಳಾಗುವಳು. ಸಖಿಯರು ದೃಷ್ಟಿಸಿ–

ಜಯೆ : ಮೈಮರೆದು ಕುಳಿತಿಹಳು

ವಿಜಯೆ : ನಮ್ಮನೇ ಮರೆತಿಹಳು

ಛಾಯೆ : ತನ್ನನೂ ಮರೆತಿಹಳು

ಮಾಯೆ : ದೇವನಲಿ ಬೆರೆತಿಹಳು

ಜಯೆ : ಏಳೇಳು ಗಿರಿರಾಜ

ಮೇನೆಯರ ಪುತ್ರಿ

ಏಳೇಳು ಕರೆಯುತಿದೆ

ಗೆಳತಿಯರ ಮೈತ್ರಿ

ವಿಜಯೆ : ಚಲಿಸದಾಗಿಹಳು!

ಛಾಯೆ : ತವಸಿಯಾಗಿಹಳು!

ಮಾಯೆ : ಈ ವಯದಿ ಈ ಭಕ್ತಿ!

ಜಯೆ : ಇಂಥ ವಿರಕ್ತಿ!

ವಿಜಯೆ : ಯಾರಿಗಾಗಿ?

ಛಾಯೆ : ಇನ್ನಾರಿಗಾಗಿ?

ಮಾಯೆ : ಹಾಗೆಂದರೇನು ಸಖಿ

ಹೇಳಬಾರದೆ ಬಿಚ್ಚಿ

ಛಾಯೆ : ಮನದನ್ನಗಾಗಿಯೇ

ತಿಳಿಯದೇ ಹುಚ್ಚಿ

ಜಯೆ : ಇದಕೇಕೆ ಚಿಂತೆ ಸಖಿ

ಇವಳ ಕೈ ಹಿಡಿಯೆ

ಹರನು ಸಹ ಬಂದಾನು

ಇನ್ನಾರ ಗೊಡವೆ?

'ಹರ'ನೆಂಬ ನುಡಿಕೇಳಿ ರೋಮಾಂಚಿತಳಾದ ಗಿರಿಜೆ ಕಣ್ದೆರೆದು ಕೇಳುತ್ತಾಳೆ:

ಗಿರಿಜೆ : ನಿಜ ನುಡಿವೆಯಾ ಸಖಿಯೆ

ಹರ ಬರುವನೆಂದು?

ಚಿರಪ್ರತೀಕ್ಷೆಗೆ ಕೊನೆಗೆ

ಫಲ ತರುವನೆಂದು

ಜಯೆ : (ಕೈತಟ್ಟಿ) ಗೊತ್ತಾಯ್ತು ಗೊತ್ತಾಯ್ತು

ಚಿತ್ತಚೋರನ ಹೆಸರು

ಉಳಿದವರು ಒಟ್ಟಾಗಿ– ನಮಗೊಂದು ಹೆಸರು

ಕೆನೆಕೆನೆ ಮೊಸರು (ಕಿಲಕಿಲನೆ ನಗುವರು)

ಗಿರಿಜೆ : (ಹುಸಿಮುನಿಸಿನಿಂದ)

ಹೋಗಿರೇ ಹೋಗಿರಿ

ಹಗರಣವು ಸಾಕು

ವಿಜಯೆ : ಹಗರಣವು ಸಾಕಿನ್ನು

ಮದುವೆಯೇ ಬೇಕು

ಛಾಯೆ : ಕರೆದು ತನ್ನಿರೆ ಅವನ

ಮಾಯೆ : ಸನ್ಯಾಸಿ ಶಿವನ

ಗಿರಿಜೆ : (ಮತ್ತೆ ಪುಲಕಿತಳಾಗಿ)
ಸನ್ಯಾಸಿನಿಯಾಗಿಹನು
ಶಿವನೆನ್ನನುಳಿದು
ಸೋಮನೆಂದಾಗುವನೊ
ನನ್ನನ್ನು ತಳೆದು....
ಮತ್ತೆ ಧ್ಯಾನಮಗ್ನಳಾಗುತ್ತಾಳೆ

ಜಯೆ : ಮಗ್ನಳಾದಳು ಮತ್ತೆ
ಶಿವಧ್ಯಾನದಲ್ಲಿ

ವಿಜಯೆ : ಮುಳುಗಿ ಹೋದಳು ಮತ್ತೆ
ಚಿರ ಮೌನದಲ್ಲಿ
ತೆರೆಯ ಆಚೆಯಿಂದ ಮೇನಾದೇವಿಯ ಸ್ವರ
ಗಿರಿಜೆ ಗಿರಿಜಾ ಗಿರಿಯೆ
ಎನ್ನ ಒಲವಿನ ಸಿರಿಯೆ
ನನ್ನ ನಲವಿನ ತೆರೆಯೆ
ಬಾ ಮಗಳೆ ಎಲ್ಲಿರುವೆ

ಛಾಯೆ : ದೇವಿಯರು ಕರೆವರಿದೊ
ಏಳಮ್ಮ ಏಳು
'ತಾಯೆ, ತವರೇ ಬಂದೆ'
ಎಂದೊಮ್ಮೆ ಹೇಳು

ಮಾಯೆ : ಏಳು ಸಖಿ ಇಂದುಮುಖಿ
ಏಳೇಳು ಏಳು
ಇನ್ನು ತಡಮಾಡದಿರು

ಕೈ ಮುಗಿವೆನೇಳು

ಜಯೆ : ಏಳು ಹರನರಸಿಯೆ

ಕಾರುಣ್ಯ ಸರಸಿಯೆ

ವಿಜಯೆ : ಏಳು ಶರ್ವನ ಸುಖವೆ

ಓ ಮುಕ್ತಿ ಮುಖವೆ

ಅವರು ಕರೆಯುತ್ತಿರುವಂತೆ ತೆರೆ ಬೀಳುವುದು. ತಾರಕಾಸುರಪುರದ ರಾಜವೀಧಿ ಕಾಣುವುದು. ಉನ್ಮತ್ತ ತಾರಕನು ಮತ್ತು ಅವನ ಹಿಂಬಾಲಕರು ಪ್ರವೇಶಿಸಿ ವಿಕಟಾಟ್ಟಹಾಸದೊಡನೆ ವಿತಂಡ ನಾಟ್ಯವಾಡುವರು.

ತಾರಕ : ಶಿವಶಕ್ತಿಯರು ಅಗಲಿ

ನಾನೆ ಶಿವನಾದೆ

ಸುರನರರ ಕುಲಕೆಲ್ಲ

ಕಾಲಭೈರವನಾದೆ

ನಾನೆ ಅಜ ನಾನೆ ಹರಿ

ನಾನೆ ಹರನಾಗಿರುವೆ

ಮೂರು ಲೋಕಕ್ಕೆಲ್ಲ

ಗಂಡನಾಗಿರುವೆ

ಹೊಯ್ಯಿರೋ ಜಯಭೇರಿ

ದಿಕ್ತಟವು ಬಿರಿಯೆ

ಆಕಾಶವೇ ನಡುಗಿ

ತಾರೆಗಳು ಸುರಿಯೆ

ಹಿಂಬಾಲಕರು : ಕದನ ಪ್ರಚಂಡ

ದೈತ್ಯಕುಲ ಮಾರ್ತಾಂಡ

ಮೂರು ಲೋಕದ ಗಂಡ

ಅತುಲಬಲ ದೋರ್ದಂಡ

ತಾರಕಾಸುರ ಪರಾಕ್
ಬಹು ಪರಾಕ್ !
ನೀನೆತ್ತೆ ಕೋದಂಡ
ನಡುಗುವುದು ಬ್ರಹ್ಮಾಂಡ
ಇನ್ನೆಲ್ಲಿ ನಂಜುಂಡ
ನೀನೆ ಗಂಡರ ಗಂಡ
ತಾರಾಕಾಸುರ ಪರಾಕ್
ಬಹು ಪರಾಕ್ !
(ಕೇಕೆಹಾಕಿ ನಕ್ಕು ಹೋಗುವರು. ನಾರದರು ಬರುವರು.)

ನಾರದ : (ಉಸುರ್ಗರೆದು)
ಶಕ್ತಿ ವಿರಹಿತ ಶಿವನು
ಶಿವರಹಿತ ಶಕ್ತಿ
ಹೀಗೆ ಸಾಗಿದರುಂಟೆ
ಮನುಕುಲಕೆ ಮುಕ್ತಿ?
ಅವರ ಅಗಲಿಕೆಯಲ್ಲೆ
ತಾರಕನ ಉದಯ
ಅವರನೊಂದಾಗಿಸಲು
ಬಂದಿಹುದು ಸಮಯ
ಮಾಡುವೆನು ಯತ್ನವನು
ಅವರ ಸಂಯೋಗಕ್ಕೆ
ಹುಡುಕುವೆನು ಹಾದಿಯನು
ದುಷ್ಟ ಸಂಹಾರಕ್ಕೆ

ಹೋಗುವನು. ತೆರೆ ಏಳುವುದು. ಹಿಂದೆ ಗಿರಿರಾಜನ ಅರಮನೆ. ಚಿಂತಾಕ್ರಾಂತರಾದ ಗಿರಿರಾಜ ಮೇನೆಯರು ಮಗಳು ಗಿರಿಜೆಯನ್ನು ಕೇಳುತ್ತಲಿದ್ದಾರೆ.

ಗಿರಿರಾಜ : ಏಕೆ ಕೊರಗುವೆ ಮಗಳೆ
ಕರುಳಬಳ್ಳಿಯ ಮುಗುಳೆ
ಹಗಲಿರುಳು ತಪದಿ?

ಮೇನಾ : ಏಕೆ ಸೊರಗುವೆ ಮಗುವೆ
ನಮ್ಮ ಬಾಳಿನ ಸೊಗವೆ
ಯಾರದೋ ಜಪದಿ?

ಗಿರಿರಾಜ : ಯಾವುದೋ ಧ್ಯಾನದಲಿ
ಸರ್ವದಾ ಮೌನದಲಿ
ಮ್ಲಾನವಾಗಿರುವೆ!

ಮೇನಾ : ಹಸಿವೆ ತೃಷೆಗಳ ಮರೆದು
ನಿದ್ರೆ ನಗೆಗಳ ತೊರೆದು
ಬಾಡಿ ಹೋಗಿರುವೆ!

ಗಿರಿಜೆ : ನನ್ನ ಪ್ರೀತಿಯ ಪಿತನೆ
ನನಗಾವ ಚಿಂತೆ?
ನನ್ನ ಮೋಹದ ಮಾತೆ
ನಾನು ನಿಶ್ಚಿಂತೆ!

ಜಯೆ : ಸುಳ್ಳು ಸುಳ್ಳೋ ಸುಳ್ಳು
ಇವಳ ಈ ಸೊಲ್ಲು

ವಿಜಯೆ : ನಾನು ಸಾಕ್ಷಿಯ ನುಡಿವೆ
ಈ ಮಾತು ಸುಳ್ಳು

ಜಯೆ : ಎಲ್ಲಿ ಸರೋಜಮೆಲ್ಲಿ ವಿಮಲೋತ್ಪಲಮೆಲ್ಲಿ ಲತಾವಿತಾನದೊಳ್ವೆಲ್ಲಿ ಬನಂಗಳೆಲ್ಲಿ ಕೃತಕಾಚಳಮೆಲ್ಲಿ ವಿಶಾಲಮಪ್ಪ ತಣ್ಪೆಲ್ಲಿ ತಟಾಕಮೆಲ್ಲಿ ಪುಳಿನಸ್ಥಳಮೆಲ್ಲಿ ನದೀತಟಾಕ ತಾನೆಲ್ಲಿ ಭಕ್ತಿಮಿಗೆ ಭಾವಿಸಿ ಭರ್ಗನನೊಲ್ದು ಪೂಜಿಪಳ್!

ನಾರದರು ಹಠಾತ್ತಾಗಿ ಪ್ರವೇಶಿಸುವರು. ಎಲ್ಲರೂ ಎದ್ದು ನಿಲ್ಲುವರು.

ಗಿರಿರಾಜ ಮೇನೆಯವರು ಮೈಯಿಕ್ಕುವ ಮೊದಲೇ ನಾರದರು ಗಿರಿಜೆಗೆ ನಮಸ್ಕರಿಸಿ ಭಕ್ತಿಯಿಂದ ಹಾಡುವರು:

ನಾರದ : ಕರುಣಿಸು ಕರುಣಿಸು ಲೋಕಜನನಿ

ಸರ್ವಮಂಗಲೆ ಶಿವ ಕಲ್ಯಾಣಿ

ಆದಿಶಕ್ತಿಯೆ ಉಮೆ

ನೀಲಕಂಠನ ಭಾಮೆ

ಪರಮಪಾವನ ನಾಮೆ

ರುದ್ರಾಣಿ..........

ಆನಂದದಾಯಿನಿ

ತಾಯೆ ಕಾತ್ಯಾಯಿನಿ

ನಮಿಪೆ ದಾಕ್ಷಾಯಣಿ

ಕಲ್ಯಾಣಿ...

ಮತ್ತೆ ನಮಸ್ಕರಿಸುವನು

ಗಿರಿರಾಜ : (ಗಾಬರಿಯಾಗಿ)

ಏನಿದನುಚಿತ ಏನಿದನುಚಿತ

ದೇವಮುನಿವರ ಶ್ರೀಕರ!

ನನ್ನ ಮಗಳಿಗೆ ತಾವು ಮಣಿವುದೆ?

ಇದಾವ ರೀತಿ ಕೃಪಾಕರ!

ನಾರದ : ನಿಮ್ಮಾ ಸುತೆಯೇ ನಿಗಮಸಂಸ್ತುತೆ

ಲೋಕಮಾತೆಯು ಭೂವರ

ಶೂಲಧಾರಿಯ ಅರ್ಧನಾರಿಯ

ಮಾಡಿದಾಕೆಯು ಗಿರಿವರ

ಮೇನಾ : (ಅಚ್ಚರಿಯಿಂದ)

ತನ್ನ ಬಸಿರಲಿ ವಿಶ್ವಧರಿಸಿದ–

ಕೆನ್ನ ಬಸಿರಲಿ ಬಂದಳೆ?
ಜಗದ ತಾಯಿಗೆ ತಾಯಿಯಾಗುವ
ಭಾಗ್ಯ ನನಗಿರಲೆಂದಳೆ?

ಗಿರಿರಾಜ : (ಸಾಶಂಕನಾಗಿ)
ಹೌದೆ ಮುನಿವರ? ನಿಜವ ನುಡಿಯಿರಿ
ನಮ್ಮದೀ ಸೌಭಾಗ್ಯವೆ?
ನರರ ಬಸಿರಲಿ ವಿಶ್ವಮಾತೆಯು
ಬಂದಳೆಂಬುದು ಯೋಗ್ಯವೆ?

ನಾರದ : ಉದಯಾದ್ರಿ ನೇಸರನ ಚಂದಿರನ ಪಡೆದಿರಲು
ರಜತಾದ್ರಿ ಶಾಂಕರಿಯ ಪಡೆದುದರಿದೆ?
ದೇವತಾತ್ಮನು ನೀನು ಸಾಧ್ವಿ ಮೇನಾದೇವಿ
ನಿಮ್ಮ ಸುಕೃತದ ಸಿರಿಯು ಹೋಗುವುದೆ ಬರಿದೆ?
ಪೃಥ್ವಿ ಪಾವನವಾಯ್ತು ನಿಮ್ಮ ಜೀವನದಿಂದ
ಭೂಮಿ ಆಕಾಶಕ್ಕೆ ಬೀಗತನವಾಗಿ
ದಕ್ಷ ಪಾಪೋತ್ಪನ್ನ ರಾಕ್ಷಸರ ಹಾವಳಿಯು
ಅಡಗುವುದು ಗಿರಿಸುತಾ ಕಲ್ಯಾಣವಾಗಿ
ಕಳಿಸಿಕೊಡು ಗಿರಿರಾಜ
ಶಿವನೆಡೆಗೆ ಶಿವೆಯ
ಉಳಿಸು ತಾರಕನಿಂದ
ಸುರಲೋಕ ಭುವಿಯ

ಮೇನಾ : (ಹೌಹಾರಿ)
ತನುಜಾತೆಯ ಅಗಲುವೆನೆ
ಮುನಿನಾಥನೆ ಅಮರವಿನುತ?
ಎನ್ನಸುವಿನ ಅಸುವನು ನಿಜ

ಪುಣ್ಯದ ಬೆಳ್‌ಜಸವ
ಎನ್ನುಸಿರಿನ ಉಸಿರನು
ಲಾವಣ್ಯದ ವರಶಿಶುವ
ಸೆರಗೊಡ್ಡುವೆ ಕರುಣಾಳುವೆ
ಸೆರಗೊಡ್ಡುವೆ ಕರುಣಾಳುವೆ
ಗಿರಿಜೆಯ ಹರನೆಡೆಗೆ
ಕರೆದೊಯ್ಯುವ ಯೋಚನೆ ಬಿಡಿ
ಎರಗುವೆ ನಿಮ್ಮಡಿಗೆ!

ಗಿರಿಜಾಜ : (ಸಂತೈಸುತ್ತ)
ಪಂಕಪದ್ಮಕೆ ಸಿಂಪು ಮುತ್ತಿಗೆ
ತಾಯಿಯಾಗಿರುವಂದದಿ
ಜಗದ ತಾಯಿಗೆ ತಾಯಿಯಾಗಿಹೆ
ಹಿರಿಯರೆಸಗಿದ ಪುಣ್ಯದಿ
ಸಾಲದೇ ಸೌಭಾಗ್ಯವಿದು ಪ್ರಿಯೆ
ಏಕೆ ಸುಮ್ಮನೆ ಶೋಕಿಸಿ
ಮೂರು ಲೋಕದ ಶೋಕಹರಣಕೆ
ಅಡ್ಡಿಯಾಗುವೆ ರೂಪಸಿ?

ನಾರದ : ಲೋಕಕಲ್ಯಾಣಕ್ಕೆ ನಾಂದಿಯು
ಗಿರಿಸುತಾ ಕಲ್ಯಾಣವು
ನಿನ್ನ ಕನ್ಯಾದಾನ ತಾಯಿಯೆ
ವಿಶ್ವಕೇ ವರದಾನವು
ತಾರಕನ ತುಳಿತಕ್ಕೆ ಸಿಕ್ಕಿಹ
ಜೀವಕೋಟಿಯ ರಕ್ಷೆಗೆ
ತಾಯ ತ್ಯಾಗವೆ ಮೂಲವಾಗಲಿ

ಬಂದೆ ನಾನೀ ಭಿಕ್ಷೆಗೆ

ಮೇನಾ : ಹೆತ್ತೊಡಲು ಉರಿದರೂ

ತಣ್ಣಗಿರಲೀ ತಿರೆಯು

ತಾಯ ತ್ಯಾಗದಿ ತೊಳಗಿ

ಬೆಳಗಲೀ ಧರೆಯು

ಬಾ, ಮಗಳೆ, ಕೊನೆಗೊಮ್ಮೆ

ತಾಯಿಯನು ಅಪ್ಪು

ಶಂಕರನ ಶಶಿಧರನ

ಸತಿಯಾಗಿ ಒಪ್ಪು

ಗಿರಿಜೆ : (ಅಪ್ಪಿ) ತಾಯೆ ತವರೇ ಕರುಳೆ

ಮೇನೆ : (ಗದ್ಗದಿತಳಾಗಿ) ಮತ್ತೊಮ್ಮೆ ಕರೆ ಮಗಳೆ

ಗಿರಿಜೆ : ಮಾತೆಯೇ ಪ್ರೀತಿಯೇ

ಮೇನೆ : ನುಡಿಸು ತನುಜಾತೆಯೇ

ಗಿರಿಜೆ : ವಾತ್ಸಲ್ಯ ಜ್ಯೋತಿಯೇ

ಪೂತೆಯೇ ಖ್ಯಾತೆಯೇ

ಮೇನೆ : ಅಪ್ಪು ತನುಜಾತೆಯೇ

ಗಿರಿಜೆ : ತಾಯೆ ತವರೇ ಕರುಳೆ

ಮೇನೆ : ಮತ್ತೊಮ್ಮೆ ಕರೆ ಮಗಳೆ

(ತೆರೆ)

ಪುರಬೀದಿಯಲ್ಲಿ

ನಾರದ : ಎಲೆವೋ ತಾರಕ ಮಾರಕ ನೆನಪಿಡು

ಶಕ್ತಿಯು ಶಿವನನು ಬೆರೆಯುವಳು

ಸುರಸೇನಾನಿಗೆ ಜನ್ಮವನಿತ್ತು

ಅಹಿತರ ಕುಲವನು ಅಳಿಯುವಳು

ಜಯ ಜಗದೀಶ್ವರ ಜಯ ಜಗದೀಶ್ವರ

ಜಯ ಶಿವಶಂಕರ ಶಾಂಕರಿಗೆ

ಜಯ ಜಯ ಲೋಕದ ಮಾತಾಪಿತರಿಗೆ

ಜಯ ಗುಹವೈರಿ ಭಯಂಕರಗೆ

(ಹೋಗುವನು. ತೆರೆ ಏಳುವುದು)

ಗಿರಿರಾಜ, ಗಿರಿಜೆ, ಜಯೆ ವಿಜಯೆಯರ ಪ್ರವೇಶ. ಕೈಲಾಸಾಚಲ ಕಂದರದಲ್ಲಿ ಗಂಗಾನದಿಯ ದರ್ಶನ.

ಗಿರಿಜೆ : ದೇವದಾರುಗಳಡಿಯ

ತೋಯಿಸುವ ಸುರನದಿಯೆ

ಹರನಡಿಯ ತೊಳೆದಿತ್ತ ಬಂದಿರುವೆಯಾ?

ಆ ಲೋಕಪಾವನನ

ಆ ವಿಶ್ವಜೀವನನ

ಪಾದರೇಣುವ ಹೊತ್ತು ತಂದಿರುವೆಯಾ?

ನೀನೆ ಧನ್ಯಳು ಗಂಗೆ

ಮಾಂಗಲ್ಯಮಯೆ ತುಂಗೆ

ನೀಡು ನನಗೂ ನಿನ್ನ ಸೌಭಾಗ್ಯವ

ಓ ಸರ್ವಹಿತಕಾರಿ

ಚಂದ್ರಚೂಡನ ನಾರಿ

ತೋರು ನನಗೂ ಬೇಗ ಶಿವಮಾರ್ಗವ

ವಿಜಯೆ : (ಚಿಟ್ಟನೆ ಚೀರಿ)

ಹಾ ಸರ್ಪ ಹಾ ಸರ್ಪ

ಘಟಸರ್ಪ ದೊರೆಯೆ!

ಗಿರಿರಾಜ : ಎಲ್ಲಿಹುದು ಎಲ್ಲಿಹುದು

ಕೊಲ್ಲುವೆನು ವಿಜಯೆ!

ಗಿರಿಜೆ : ಶಂಕರಾಭರಣವಿದು
ಕೊಲ್ಲದಿರು ತಂದೆ!
ಏನು ಉರಗಾಧಿಪನೆ
ನೀನಿತ್ತ ಬಂದೆ?
(ಮದಗಜ ಬೃಂಹಿತ, ವ್ಯಾಘ್ರ ಗರ್ಜನೆ)

ಜಯೆ : ಮದ್ದಾನೆ ಹೆಬ್ಬುಲಿಯು
ಕಾಪಾಡು ದೊರೆಯೆ

ವಿಜಯೆ : ಕಾಪಾಡು ಕಾಪಾಡು
ಕಾಪಾಡು ದೊರೆಯೆ

ಗಿರಿರಾಜ : ಹೆಬ್ಬಾವು ಹೆಬ್ಬುಲಿಯು
ಮದಗಜದ ಬೀಡಿನಲಿ
ಎಂತು ಬಾಳುವೆ ಮಗಳೆ
ಈ ಘೋರ ಕಾಡಿನಲಿ?

ಗಿರಿಜೆ : ಹೆಬ್ಬಾವು ಸಬ್ಬನಿಗೆ
ಶೃಂಗಾರವಾಗಿ
ಹೆಬ್ಬುಲಿಯು ಮದಗಜವು
ಚರ್ಮಾಂಬರಾಗಿ
ಧನ್ಯಾತ್ಮರಾಗಿಹವು
ಅರ್ಪಣದಿ ತಂದೆ
ಇವರ ಸೌಭಾಗ್ಯವನೆ
ನಾ ಬೇಡಿ ಬಂದೆ!
(ಹತ್ತು ಅಡಿ ಮುಂದುವರಿಯಲು ಮುಂದೆ ಧ್ಯಾನಸ್ಥ
ಧೂರ್ಜಟಿಯ ದಿವ್ಯದರ್ಶನ)

ಗಿರಿರಾಜ : (ಹಿಗ್ಗಿ)

ಅದೊ ತನುಜೆಯೆ ಸದಮಳಮಿದೆ
ಆನಂದದ ಮೊದಲಿದೆ
ಶರಣರ ನಿಧಿ ಸುಧೆಯಿದೆ ಕೋ
ಪರಮಾರ್ಥದ ತುದಿಯಿದೆ
(ಮುಂದುವರಿದು ವಂದಿಸಿ)
ಮುನಿತತಿಗಳ ಮನವೆಯ್ದದ
ಘನತೇಜೋಮಯನೆ
ಸ್ವೀಕರಿಸೈ ಶ್ರೀನಿಧಿಯನು
ಓ ಮಂಗಲಮಯನೆ
(ಗಿರಿಜೆಯತ್ತ ಹೊರಳಿ)
ಇನ್ನಿವನೇ ನಿನ್ನಯ ಗತಿ
ನಿನ್ನಯ ಪತಿ ಸುತೆಯೆ
ಬರುವೆನು ನಾ ಕಲ್ಯಾಣಿಯೆ
ಓ ವೇದಸ್ತುತೆಯೆ

ಗಿರಿಜೆ : ಹರನೆನ್ನ ವರಿಸುವೊಲು
ಹರಸೆನ್ನ ತಂದೆ
ಹರಗಿಲ್ಲ ನನಗಿಹರು
ಒಳ್ಳೆ ತಾಯ್ತಂದೆ

ಗಿರಿರಾಜ : ನಿನ್ನ ತಪ ಸಿದ್ಧಿಸಲಿ
ಶಿವ ಸೃಷ್ಟಿ ವರ್ಧಿಸಲಿ
ಜಗದೆಲ್ಲ ಶಕ್ತಿಗಳು
ಶಿವಕಾಗಿ ಸ್ಪರ್ಧಿಸಲಿ
(ಹೋಗುವನು)

ಗಿರಿಜೆ : (ಕರ ಜೋಡಿಸಿ)

ಎವೆ ತೆರೆದು ನೋಡೆನ್ನ
ಶಿವಶಂಭು ಹರನೆ
ವಿರಹದುರಿಯಲಿ ಬೆಂದು
ಬಂದೆ ಶಂಕರನೆ
ನಿನ್ನ ನೆನಹೇ ಜೀವ-
ವಾಗಿ ದಿನಗಳೆದೆ
ನಿನ್ನ ನೇಹವೆ ನನ್ನ
ಉಸಿರಾಗಿ ಬೆಳೆದೆ
ಎವೆ ತೆರೆದು ನೋಡೆನ್ನ...
(ನೀರವವಾಗಿ ನೋಡುತ್ತ ನಿಲ್ಲುವಳು)

ವಿಜಯೆ : ಪೊಸಜಡೆಯೊಳ್ ತೊಡಂಕಿ

ಜಯೆ : ನೊಸಲೊಳ್ ನಡೆಪಾಡಿ

ವಿಜಯೆ : ಕಪೋಲ ಭಾಗದೊಳ್ ಪಸರಿಸಿ

ಜಯೆ : ಲೋಚನಂಗಳೊಳಮರ್ಚಿ

ವಿಜಯೆ : ತದಾಸ್ಯದೊಳೊಂದಿ

ಜಯೆ : ಕಂಠದೊಳ್ ಮಿಸುಗಿ ಭುಜಾಗ್ರದೊಳ್ ತೊಳಗಿ

ವಿಜಯೆ : ವಕ್ಷದೊಳಾಳ್ದು ಕರಂಗಳೊಳ್ ವಿರಾಜಿಸಿ

ಇಬ್ಬರೂ : ಪದದಲ್ಲಿ ಬಿಳ್ದುವು ಭವಾನಿಯ ಮಾನಿಯ ದೈನ್ಯದೃಷ್ಟಿಗಳ್

(ತೆರೆ)

(ವೈಕುಂಠಮಾರ್ಗದಲ್ಲಿ ನಾರದ ಪ್ರವೇಶ)

ನಾರದ : ಎಲೆವೊ ಎಲೆವೊ ತಾರಕ
ಎಲೆವೊ ಪಾಪ ಪ್ರೇರಕ

ಎಲೊ ಅನಿಷ್ಟಕಾರಕ
ನಿನ್ನ ಹಿಂಸೆ ನಿನ್ನನೇ
ಧ್ವಂಸಗೊಳಿಸಿ ಕುಣಿವುದು
ಮತ್ತೆ ಪ್ರೀತಿ ಶಾಂತಿ ಗೆದ್ದು
ಮೂರು ಲೋಕ ತಣಿವುದು
ಸುರನರರೇ ತಾಳಿರಿ
ತಾಳ್ಮೆಯಿಂದ ಬಾಳಿರಿ
ಬರುವ ಶಿಷ್ಟರಕ್ಷಕ
ಅದುವರೆಗೂ ತಾಳಿರಿ

(ನಿಷ್ಕ್ರಮಣ. ತೆರೆ ಏಳುವುದು. ಹಿಂದೆ ರತಿಮನ್ಮಥರ ಅಂತಃಪುರ)

ಮದನ : ಅಚ್ಚಳಿಯದ ಯೌವನ
ನಮ್ಮ ರಮ್ಯ ಜೀವನ

ರತಿ : ಶೃಂಗಾರವೆ ನಮ್ಮ ಉಸಿರು
ನಾವು ಪ್ರಣಯ ಪಾವನ

ಮದನ : ನಾನು ರಾಜ ಮನಸಿನ

ರತಿ : ನಾನು ರಾಣಿ ಕನಸಿನ

ಮದನ : ನಮ್ಮ ಸಾಮ್ರಾಜ್ಯವೆಲ್ಲ
ಆನಂದದ ಉಪವನ

ರತಿ : ಜೀವನವೇ ಝುಂಕಾರವು

ಮದನ : ನಮ್ಮಿಂದಲೆ ಕೆಳದಿ

ರತಿ : ಎಲ್ಲರ ಉರ ಅಂತಃಪುರ

ಮದನ : ನಮಗಾಗಿಯೆ ಕೆಳದಿ

ಇಬ್ಬರೂ : ಅಚ್ಚಳಿಯದ ಯೌವನ
ನಮ್ಮ ರಮ್ಯ ಜೀವನ

ಶೃಂಗಾರವೆ ನಮ್ಮ ಉಸಿರು
ನಾವು ಪ್ರಣಯ ಪಾವನ
(ನಾರದರ ಆಗಮನ)

ನಾರದ : ಕರ್ತವ್ಯದ ಕರೆ ಬಂದಿದೆ
ಸೌಂದರ್ಯದ ಬಳಿಗೆ
ಬಲಿದಾನದ ಮೊರೆ ಬಂದಿದೆ
ಅನುರಾಗದ ಬಳಿಗೆ

ಮದನ : ಏನಿದು ಒಗಟವು ಪಾವನ ರೂಪ
ನಿರ್ಜಿತ ಸಂತಾಪ?

ನಾರದ : ನೀನರಿಯೆಯ ಸ್ಮರ ಸುಂದರ ರೂಪ
ಸುರನರ ಸಂತಾಪ?

ಮದನ : ಹೇಳು ಮುನಿವರ ಶೋಕವಾವುದು
ಬಾನು ಬುವಿಗಳ ಜನರಿಗೆ
ಏನ ಮಾಡಲಿ ನಾನು ಬರಿಸಲು
ಸುಖದ ಸುಗ್ಗಿಯ ಅವರಿಗೆ?

ನಾರದ : ಏಳು ಮನ್ಮಥ ಕರ್ವುವಿಲ್ಲನು
ಕುಸುಮ ಬಾಣವ ಧರಿಸುತ
ಶೂಲಪಾಣಿಯ ತಪವ ಕೆಡಿಸಲು
ಹೊರಡು ಮೋಹವ ಹರಿಸುತ

ರತಿ : ಏಕಿಂಥ ಭಯಕಾರಿ ಕಾರ್ಯವನು ಬೆಸಸಿದಿರಿ
ಮದನನಿಗೆ ಮುನಿನಾಥ ಸೆರಗೊಡ್ಡುವೆ
ರುದ್ರನೊಡನೆಯೆ ಯುದ್ಧ! ಸಾವು ಕಾವಗೆ ಸಿದ್ಧ!
ಬೇರೆ ಕಾರ್ಯವ ಬೆಸಸಿ, ಅಡಿಗೆರಗುವೆ!

ನಾರದ : ಯೋಚಿಸು ಮಗಳೇ ಮನದಲಿ ಮೊದಲು

ಬಾಳಿನ ಬೆಲೆಯೇನೆಂದು
ಸರ್ವರು ದುಃಖದಿ ದಹಿಸುತಲಿರಲು
ಸುಖದಲಿ ಬಾಳಲು ಬಹುದೇ ಈರ್ವರು
ನಮ್ಮಿಷ್ಟಕೆ ನಾವೆಂದು?
ನೋಯಲಿ ಸಕಲರು ಸಾಯಲಿ ಸರ್ವರು
ಇರುವೆವು ಎನುವೆಯ ಸೊಗದೊಳಗಿಬ್ಬರು
ಮನೆಯಿದು ಜಗವೆಂದು?
ಎಲ್ಲರು ಸುಖಿಯಿರೆ ನೀವೂ ಸುಖಿಗಳು
ಎಲ್ಲರು ದುಕ್ಕದಿ ಬಿಕ್ಕುತಲಿರಲು
ನಿಮಗೆಲ್ಲಿಯ ಸುಖವು?
ಹೊರಡಲಿ ಮನ್ಮಥ ಹರನೆಚ್ಚರಿಯಲಿ
ಹುಟ್ಟಲಿ ಷಣ್ಮುಖ ತಾರಕನಳಿಯಲಿ
ಆಗೆಲ್ಲರಿಗೂ ಸುಖವು!

ಮದನ : ಮೋಹದ ಸತಿಯೆ
ಪ್ರೇಮದ ರತಿಯೆ
ತಳ್ಳಂಕವು ಬೇಡ
ಹೊರಡುವೆ ಹರನೆಡೆ
ಬರಲಿದೆ ಬಿಡುಗಡೆ
ಆತಂಕವು ಬೇಡ
ಕರುಣಿಯು ಹರನು
ಶಿವಶಂಕರನು
ಕ್ಷಮಿಸುವನೆನ್ನ
ಶೂಲಿಯ ಸಿಟ್ಟದು
ನನ್ನನ್ನು ಸುಟ್ಟರು

ನನಗಿಲ್ಲವು ಬನ್ನ
ನಗುತಿರೆ ಜಗವು
ನಮಗಿದೆ ಸೊಗವು
ನಗಿಸಲು ಜಗವನ್ನು
ಸಾವುದೆ ಜೀವ
ಹೊರಡುವ ಕಾವ
ಎಬ್ಬಿಸೆ ಶಿವನನ್ನು

ರತಿ : ಜನಹಿತದ ರತಿಯಲ್ಲಿ ರತಿಯು ಹಿಂದುಳಿಯುವಳೆ
ಪತಿಯೊಡನೆ ಹೊರಡುವಳು 'ಸತಿ' ಮೆಚ್ಚುವಂತೆ
ನಿರ್ಗುಣದಿ ಗುಣ ಕೊನರಿ ಯೋಗದಲಿ ಅನುರಾಗ
ಮುಗುಳೊಡೆದು ಧ್ಯಾನಸ್ಥ ಹರ ಬೆಚ್ಚುವಂತೆ!
ಬರುವೆನಾ ಮೋಹನದ ಬಿರುಗಾಳಿಯಂದದಲಿ,
ಬರುವೆ ಆಕರ್ಷಣದ ಸುಳಿಗಾಳಿಯಂತೆ!
ನಿನ್ನ ಗಾಡಿಗೆ ಮೋಡಿಯಾಗಿ ಕೂಡುವೆ ನಾನು
ಬರುವೆ ವಿರಹದ ಉರಿಯ ದಾಳಿಯಂತೆ!

ನಾರದ : (ಹಿಗ್ಗಿ)
ಅರಸುತಿದ್ದ ಬಳ್ಳಿಯಿಂದು
ಕಾಲ ತೊಡರಿತು
ಜಗದ ಜನದ ಮುಕ್ತಿಗಿಂದು
ಕಾಲ ಒದಗಿತು
ಧನ್ಯೆ ಧನ್ಯೆ ರತಿಯೆ ಸತಿಯೆ
ಸತಿಯ ತ್ಯಾಗದಲ್ಲಿ
ಹುಟ್ಟಲಿಹುದು ಸುಟ್ಟುಹೋದ
ಜಗದ ಸೌಖ್ಯವಲ್ಲಿ

ಜನಮಂಗಲ ರತಿಯ ತೋರಿ
ಪತಿಯ ದಾನವಿತ್ತ
ರತಿಯೆ ನಿನ್ನ ಮಾಂಗಲ್ಯವ
ಕಾಯ್ವುದುಮೆಯ ಹಸ್ತ
ಧನ್ಯ ಮದನ ಪುಣ್ಯ ಸದನ
ನಿನ್ನ ವಿಜಯ ಯಾತ್ರೆ
ನಿಜದಿ ಸುರರು ನರರಿಗೆಲ್ಲ
ಅಹುದು ಅಮೃತಪಾತ್ರೆ
ಸತಿಯ ರತಿಯ ರಕ್ಷೆಯಲ್ಲಿ
ವಿಜಯಿಯಾಗು ಕಾಮ!
ಶಿವನ ಜತೆಗೆ ಸ್ಮರಣ ಯೋಗ್ಯ-
ವಪ್ಪುದು ತವನಾಮ!

(ತೆರೆ)

ಕುಸುಮಾಕರದಲ್ಲಿ ಗಿರಿಜೆ. ಮುಂದಿರುವ ಹೂಗಳನ್ನು ಪವಣಿಸಿ ಮಾಲೆ ಹೆಣೆಯಲು ಹವಣಿಸಿ, ಹೆಣೆಯಲಾಗದೆ ನಿಲ್ಲಿಸಿ-

ಗಿರಿಜೆ : ಕಂಡೆ ನಾ ಕನಸಿನಲಿ ಕಾಲಾರಿಯ
ಸುಂದರಕೆ ಸುಂದರನ ಶಶಿಧಾರಿಯ
ವ್ಯೋಮಕೇಶನ ಶಿವನ
ಕೃತ್ತಿವಾಸನ ಭವನ
ಸರ್ವೇಶ ಶರ್ವನ
ಶುಭಕಾರಿಯ...ಕಂಡೆನಾ ಕನಸಿನಲಿ..
ಅರ್ಧನಾರಿಯ ಹರನ

ಪರಕೆ ಪರ ಶಂಕರನ

ಆನಂದ ಮಂದಿರನ

ಭಯಹಾರಿಯ... ಕಂಡೆ ನಾ ಕನಸಿನಲಿ...

(ಜಯೆ ವಿಜಯೆಯರು ಬಂದು ಹೂಬುಟ್ಟಿಯನ್ನಿಟ್ಟು)

ಜಯೆ : ಮಾಲೆ ಕಟ್ಟುವ ಕೈಯು

ಜಪಮಾಲೆ ಹಿಡಿಯಿತೆ?

ವಿಜಯೆ : ಮನದ ಅರಗಿಳಿ ಮತ್ತೆ

ಶಿವನಾಮ ನುಡಿಯಿತೆ?

ಗಿರಿಜೆ– **(ಕಾರಣಾಂತರವನ್ನು ನಟಿಸುತ್ತ)**

ಕಟ್ಟುವುದೆಂತೌ ಕುಸುಮಗಳ

ಮುಟ್ಟಲು ಕಂದುವ ಅಲರುಗಳ

ನೆಟ್ಟನೆ ನೋಡಲು ಬಾಡುವ, ನೆನೆಯಲು

ತೊಟ್ಟನೆ ಕೊರಗುವ ಅರಳುಗಳ

ಕಟ್ಟುವುದೆಂತೌ ಕುಸುಮಗಳ?

ಅನಿಲನು ಅಲುಗದ ರವಿಕರಪುಗದ

ಅಳಿಗಳು ವಾಸಿಸದಲರುಗಳ

ಬಗೆ ಬಗೆ ಬಣ್ಣದ ನಗುನಗುತಿರುವ

ಕಲ್ಪಿಸೆ ಕಮರುವ ಅರಳುಗಳ

ಕಟ್ಟುವುದೆಂತೀ ಕುಸುಮಗಳ?

ಜಯೆ : ಹೂವಿನ ಹಸ್ತವು ಹೂಗಳ ಸೋಂಕಲು

ಹೆದರುವುದೇತಕೆ ಗಿರಿಜಾತೆ?

ವಿಜಯೆ : ಶರ್ವನ ಪೂಜೆಗೆ ಹೊತ್ತಾಯಿತು ಹಿಡಿ

ಸಲಿಲಜ ಸೂತ್ರವ ಜಗವಿನುತೆ

(ಶತಪತ್ರ ಸೂತ್ರವನ್ನು ಹಿಡಿದು ಹೂಗಳನ್ನು ಪವಣಿಸುತ್ತ)

ಗಿರಿಜೆ : ಕಂಪಿನ ತವರೇ ಸಂಪಿಗೆಯೆ

ಸೇವಂತಿಗೆ ಇರುವಂತಿಗೆಯೆ

ಅಮಲೆಯೆ ಕಮಲೆಯೆ ಕೇದಗೆಯೆ

ಪಾದರಿ ಪಡ್ಡಳಿ ಮಲ್ಲಿಗೆಯೆ

ಪರಮನ ಪೂಜೆಗೆ ನೆರವಾಗಿರಿ ಸಿರಿ-

ಗಂಪಿನ ಸೊಂಪಿನ ಸುಮಕುಲವೆ

ನಿಮ್ಮಯ ಸೊಬಗಿಗೆ ಮನಸೋತಾದರು

ಶಿವನೆನಗೊಲಿಯಲಿ ಸುಮಕುಲವೆ

(ತೆರೆ ಏಳುವುದು. ಹಿಂದೆ ಯೋಗಸ್ಥ ಶಿವ. ಗಿರಿಸುತೆಯು ನಮಿಸಿ ಪೂಜೆಯನ್ನು ಪ್ರಾರಂಭಿಸುವಳು-ಜಯೆ ವಿಜಯೆಯರ ಹಿನ್ನೆಲೆ ಹಾಡಿನೊಡನೆ-)

ಜಯೆ ವಿಜಯೆ : ಮನದ ಮಂದಿರದಿ ಶಿವಸುಂದರ ಬಾ

ಶಿತಿಕಂಧರ ಬಾ

ಬಂಧುರ ಬಾ

ಪ್ರೇಮ ಪೌರ್ಣಿಮೆಯ ಚಂದಿರ ಬಾ

ಶಶಿಧರ ಬಾ ಪು-

ರಂಧರ ಬಾ....ಮನದ ಮಂದಿರದಿ

ಸ್ಮರಣಸರೋಜಕೆ ತರುಣಾರುಣ ಬಾ

ಮನನ ಮಯೂರಕೆ ನಭಗರ್ಜನ ಬಾ

ಚಿಂತನ ಚಕೋರ ಚಂದ್ರಕಿರಣ ಬಾ

ರೋಮರೋಮದಲಿ ಪ್ರೇಮೋನ್ಮಾದವ

ಪರಿಸಲು ಹರ್ಷರಸಾಯನ ಬಾ

ಶಿವಸುಂದರ ಬಾ

ಶಿತಿಕಂಧರ ಬಾ

ಬಂಧುರ ಬಾ...ಮನದ ಮಂದಿರದಿ

ಹೃದಯಾರಾಮಕೆ ಮಧುಮಾಸವೆ ಬಾ
ಹರುಷ ಸಾಗರಕೆ ವಿಧು ಹಾಸವೆ ಬಾ
ಜೀವನವನದಲಿ ಮಧುಕೋಶವೆ ಬಾ
ಸಚರಾಚರದಲಿ ತುಂಬಿಹ ಶಂಭುವೆ
ಸಕಲ ಸೃಷ್ಟಿ ಸಂಜೀವನ ಬಾ
ಶಿವಸುಂದರ ಬಾ
ಶಿತಿಕಂಧರ ಬಾ
ಬಂಧುರ ಬಾ
ಪ್ರೇಮಪೌರ್ಣಿಮೆಯ ಚಂದಿರ ಬಾ
ಶಶಿಧರ ಬಾ ಪುರಂಧರ ಬಾ....ಮನದ ಮಂದಿರದಿ

(ತೆರೆ ಬೀಳುವುದು)

(ಮದನನ ಜೈತ್ರಯಾತ್ರೆ. ರತಿ, ರತಿಪತಿ, ವಸಂತರ ಪ್ರವೇಶ. ಶುಕಪಿಕಗಳ ಮೆಲ್ಲುಲಿ)

ಮದನ : ಕುಸುಮಿತವಾಗಲಿ ಲತೆಲತೆಯೆಲ್ಲ
ವಿಕಸಿತವಾಗಲಿ ವನವನವೆಲ್ಲ
ಜಾಗೃತ ಪ್ರೇಮದ ಕಚಕುಳಿಯಿಂದಲಿ
ಕಂಪಿತವಾಗಲಿ ಮನವೆಲ್ಲ
ವಿಕಸಿತವಾಗಲಿ ವನವೆಲ್ಲ

ರತಿ : ನೆತ್ತರು ನರ್ತನ ಮಾಡಲಿ ನರದಲಿ
ತರಲಿತವಾಗಲಿ ತನುವೆಲ್ಲ
ರತಿಮನ್ಮಥರೀ ದಾಳಿಯ ತಾಳದೆ
ಬೆಚ್ಚಲಿ ಮನುಮುನಿಜನವೆಲ್ಲ
ವಿಕಸಿತವಾಗಲಿ ವನವನವೆಲ್ಲ

ಮದನ : ಸಂಗವ ಬಯಸಲಿ ಸಚರಾಚರವು

ಸುಸಿಲಾಡಲಿ ಕಣಕಣವೆಲ್ಲ
ಕಾಮನ ಹೂವಿನ ಕಣೆಗಳು ತಾಗಲು
ಸೋಲದ ಸಂಯಮಿ ಜನವಿಲ್ಲ
ವಿಕಸಿತವಾಗಲಿ ವನವನವೆಲ್ಲ

ವಸಂತ : ಅಳಿಗಳೆ ಗಿಳಿಗಳೆ ಕಳಕಂಠಗಳೆ
ಸ್ವರಮಯ ಮಾಡಿರಿ ಜಗವೆಲ್ಲ
ಹರನೆದೆ ಬೆಚ್ಚಿ ರಾಗವು ಹೆಚ್ಚಲಿ
ತೊಲಗಲಿ ತಪಯತಿತನವೆಲ್ಲ
ವಿಕಸಿತವಾಗಲಿ ವನವನವೆಲ್ಲ

ಮೇಳ : ಇದೊ ಮೃದು ಪಲ್ಲವ
ಹೊಗರನು ಚೆಲ್ಲುವ
ತಳಿರಿನ ತೊಳಗುವ ಚಾಮರವು
ಇದೊ ಮಧುಕೂಜನ
ನೀರಜ ವೀಜನ
ಹೊಂಗೇದಗೆ ಹೊಡೆ ತೋಮರವು
ಮುಂದಕೆ ಸಾಗಿರಿ
ಶಿವನನು ತಾಗಿರಿ
ಸೋಲನು ಒಪ್ಪಲಿ ವೈರಾಗ್ಯ
ಶಿವ ಶಿವೆಗೊಲಿಯಲಿ
ಅಶಿವವು ಅಳಿಯಲಿ
ಅರಳಲಿ ಸೃಷ್ಟಿಯಲಿ ಸೌಭಾಗ್ಯ

(ತೆರೆ ಏಳುವುದು. ತೆರೆ ಏಳುತ್ತಿರುವಂತೆ 'ಹರ ಓಂ ತತ್ಸತ್, ಹರ ಓಂ ತತ್ಸತ್' ಎಂಬ ನಾದ ತೇಲಿಬರುವುದು. ಹಿಂದೆ ಧ್ಯಾನನಿಮಗ್ನ ಭರ್ಗನ ತೇಜೋಮೂರ್ತಿ ವಿರಾಜಿಸುವುದು. ಮದನ, ರತಿ, ವಸಂತರು ಪ್ರವೇಶಿಸುವರು.)

ಮದನ : (ಮಣಿದು)

ಮನ್ನಿಸು ಅವಿನಯ
ಅಭವ ಹರ
ಪರಹಿತಕಾಗಿಯೆ
ತೊಡುವೆ ಶರ

ರತಿ : (ನಮಿಸಿ)

ನಮಿಪೆ ಜಗತ್ಪತಿ
ಪತಿಯನು ಕ್ಷಮಿಸು
ಕರುಣೆಯನುಣಿಸು
ಜಗವನು ತಣಿಸು

ಮದನ : (ಹೆದೆಯೇರಿಸಿ)

ಹೋಗು ಹೋಗು ಮದನಶರ
ತಾಗು ಹರನ ಮೋಹನ
ದಾಳಿಯನಿಡು ಉನ್ಮಾದನ
ಮುಟ್ಟು ತಟ್ಟು ತಾಪನೆ
ಇದೊ ಸ್ತಂಭನವಿದೊ ಶೋಷಣ
ಇದೊ ವಶೀಕರಣವು
ಹುಸಿಯಾದುವೆ ಕುಸುಮಾಯುಧ
ಎಂಥ ದರ್ಪ ಹರಣವು
ಸೋತೆ ಸೋತೆ ಸುಗ್ಗಿಯರಸ
ಕುಗ್ಗಿತೆನ್ನ ಧೈರ್ಯವು
ಮರಳಿರಿನ್ನು ಮ್ಲಾನ ಮುಖದಿ
ಇದು ಅಸಾಧ್ಯಕಾರ್ಯವು

ವಸಂತ : ಸೋಲೆಂಬ ಸೊಲ್ಲೇಕೆ

ಸೋಲರಿಯದಿಹ ಕಾಮ
ಎಸೆ ಕುಸುಮಬಾಣಗಳ
ಇಸು ಮತ್ತೆ ಕಾಮ

ಮದನ : (ಉಸುರ್ಗರೆದು)
ನಿಷ್ಫಲ ಉತ್ಪಲ ವಿಫಲ ಅಶೋಕವು
ಸೋತಿತು ಚೂತವು ಸ್ಮರಮಿತ್ರ
ಅಡಿಗೆರಗಿತು ಅರವಿಂದವು ಮಲ್ಲಿಗೆ
ನಿಲ್ಲದೆ ಹೋಯಿತು ಕ್ಷಣಮಾತ್ರ
ಕಬ್ಬಿನ ಬಿಲ್ಲಿದ ಮುರಿದೊಗೆಯುವೆನು
ಕುಸುಮಾಸ್ತ್ರಗಳನು ಬಿಸುಡುವೆನು
ನಾನೂ ಬೂದಿಯ ಬಳಿದುಕೊಳ್ಳುವೆನು
ಮೃಡನಡಿಯಲ್ಲಿಯೆ ಅಡಗುವೆನು

ವಸಂತ : (ಮುಂದೆ ನೋಡಿ)
ಓಹೋ ಮದನ
ಸೌಖ್ಯ ಸದನ
ಚಿಂತೆಯೇತಕಿನ್ನು
ಅದೋ ಮಾತೆ
ಶೈಲಜಾತೆ
ಬಹಳು ನಮನವೆನ್ನು
ಅವಳ ಕೃಪೆಯು
ದೊರೆಯೆ ತಪವು
ರತಿಗೆ ಶರಣು ಬರುವುದು
ಮೈಯನಿಕ್ಕು
ವರವು ಸಿಕ್ಕು

ಗೆಲವು ಉಕ್ಕಿ ಬರುವುದು

ಮದನ : ತಾಯೆ ತಾಯೆ
ಮೂಲ ಮಾಯೆ
ಕಾಯೆ ನಿನ್ನ ಕಂದನ
ಸೋಲನಪ್ಪಿ
ಸಮತೆ ತಪ್ಪಿ
ಪುಟಿಯುತಿಹುದು ಕ್ರಂದನ
(ಮೈಯಿಕ್ಕುವನು)

ಗಿರಿಜೆ : ಯಾವ ವ್ಯಸನ
ನಿನಗೆ ಮದನ?

ಮದನ : ಜಯಿಸದಾದೆ ಹರನ
ಹರಸು ತಾಯೆ ಸ್ಮರನ

ಗಿರಿಜೆ : ಹರನು ಸ್ಮರನ ಶರಕೆ ನಿಲುಕ
ಕಾಮನೆಗಳ ಕರಕೆ ಸಿಲುಕ

ಮದನ : ಶಕ್ತಿ ನೆರವು ನೀಡೆ ಶಿವನ
ಸೋಲಿಸುವುದಾವ ಘನ?

ಗಿರಿಜೆ : ಶಿವನ ಕೆಣಕಿ ಶಕ್ತಿ ಕುಸಿಯೆ
ಕೆಡಕು ಮೂಡಿ ಬಹುದು ಹುಸಿಯೆ?

ಮದನ : ಜಗದ ಹಿತಕೆ ಆಹುತಿಯನು
ಸಲಿಸಿ ಪಡೆವೆ ಸದ್ಗತಿಯನು
ನೆರವು ನೀಡು ಭುವನಮಾತೆ
ಜನಮಂಗಲದಾತೆ ಪೂತೆ

ಗಿರಿಜೆ : ಒಲಿದೆ ನಿನ್ನ ತ್ಯಾಗಕೆ
ಜನಮಂಗಲ ಯಾಗಕೆ

ಹೇಳು ವತ್ಸ ಯಾವ ನೆರವು
ಬೇಕು ನಿನಗೆ ಯಾವ ವರವು

ಮದನ : ನೋಟದೊಳು ಕೋಟಿ ಕುಸುಮಾಯುಧರು ಹುಟ್ಟುವೊಲು
ನೋಡುತ್ತ ನಿಲ್ಲಂಬೆ ಶಂಭುಶಂಕರನ
ಉದಮದದ ಯೌವನದ ರೂಪ ಲಾವಣ್ಯಗಳ
ರಾಶಿಯಲಿ ಮುಚ್ಚಿಬಿಡು ಧ್ಯಾನಸ್ಥ ಹರನ
ನೆರೆ ಬಂದ ತೊರೆಯಂತೆ ತೆರೆ ಮಸಗಿ ಮೇಲ್ವಾಯ್ದು
ಸೊಬಗು ಅಲ್ಲಾಡಿಸಲಿ ಶಿವನ ಮನವ
ಆ ರಸದ ನಿಮಿಷದಲಿ ಆ ಮಧುರ ಕ್ಷಣದಲ್ಲಿ
ಎತ್ತುವೆನು ನಾನೆನ್ನ ಕಮನೀಯ ಧನುವ

ಗಿರಿಜೆ : ಈ ಹಾದಿ ಸಾಧುವಲ್ಲೆಂದು ತಿಳಿದರು ಸಹಿತ
ವತ್ಸ ನಿನಗಾಗಿದನು ಅನುಸರಿಸುತಿಹೆನು
ಸುರನರರ ಹರಕೆಗಳೆ ರಕ್ಷೆಯಾಗಲಿ ನಿನಗೆ
ಇದೊ ಹರನ ನೋಟದಿಂದಾವರಿಸುತಿಹೆನು

(ಮದನನು ಹೆದೆಯನ್ನೇರಿಸಿ ಮೋಹನಾಸ್ತ್ರವನ್ನು ಬಿಡುವನು. ಅದು ಹರನನ್ನು ತಟ್ಟಲು ಹರನೆದೆ ನಸುವೆ ಕಂಪಿಸಿ, ಉರಿಗಣ್ಣು ತುಸುವೆ ತೆರೆದು ಉರಿ ತೆರೆತೆರೆಯಾಗಿ ಹೊರಡುವುದು.)

ಗಿರಿಜೆ : (ತಡಮಾಡದೆ)
ಹೇ ದೇವ ಹೇ ದೇವ
ನಿರ್ದೋಷಿಯೀ ಕಾವ
ದಹಿಸದಿರು ದಹಿಸದಿರು
ಸಹಿಸು ಸಂಹರಿಸದಿರು
ಕಾಪಾಡು ಓ ಶಂಭು
ರಕ್ಷಿಸು ಸ್ವಯಂಭು......
(ಪ್ರಾರ್ಥನೆ ಫಲಕಾರಿಯಾಗಲಿಲ್ಲ. ಕಾಲ ಕೈಮೀರಿ ಹೋಗಿದ್ದಿತು.

ಅರರೇ ಭುರ್ಭುಗು ಭಾಪುರೇ ಭುಗು ಭುಗು ಪ್ರಜ್ವಾಲೆ ಮಜ್ಜಯ್ಯ ದೇವುರೆ ಮೇಘಾನಲ ವಿಸ್ಫುಲಿಂಗಮಮಮ ಪ್ರದ್ಯೋತನಯ್ಯಯ್ಯ ಭೀಕರವಾಹಾ ಛಿಣಿ ಛಿಳ್ ಛಿಟಿಲ್ ಭಲರೆ ಭಾಳಾಭೀಳಮೆಂದೆಂದು ನಿರ್ಜರ ಲೋಕಂ ಬೆರಗಾಗೆ ಸುಟ್ಟುದು ವಿರೂಪಾಕ್ಷಾಕ್ಷಿ ಕಂದರ್ಪನಂ! 'ಲಾವಣ್ಯಂ ಲಯಮಾಯ್ತು, ವಿಭ್ರಮವಿಳಾಸಂ ಮಾಯಮಾಯ್ತಕ್ಕಟಾ' ಶಿವನೂ ಎದ್ದು ಹೋದ ಅಲ್ಲಿಂದ–ಗಿರಿಜೆಯತ್ತ ಹೊರಳಿ ಸಹ ನೋಡದೆ; ಉಕ್ಕಿದುದು ರತಿ ಪ್ರಳಾಪ......)

ರತಿ : (ಕಾಮನ ಮೇಲೆ ಕೆಡೆದು)

ಹಾ ಮದನ ಹಾ ಮನೋಹರ

ಹಾ ಮಕರಪತಾಕ ಹಾ ಮಹಾವಿಭ್ರಮ ಹಾ

ಹಾ ಮನ್ಮಥ ಹಾ ಸಮ್ಮದ

ಹಾ ಮತ್ಪ್ರಾಣೇಶ ಹಾ ವಿಳಾಸ ವಿನೋದಾ!

ಹರನೆತ್ತಣ ತಪ–

ಮೆತ್ತಣ ತಾರಕನ ಬಾಧೆ ಎತ್ತಣ ಬಿಸುಗಣ್

ಎತ್ತಣುರಿ ಎತ್ತಣಿರವಿದು

ಎತ್ತಣ ಕೋಟಲೆಯನೆನಗೆ ಮಾಡಿದೆ ಮದನಾ

(ದುಃಖದ ಅವೇಗವಿನ್ನೂ ಹೆಚ್ಚಾಗುವುದು)

ಮದನಾ ಮದನಾ ಮದನಾ

ಎಲ್ಲಿ ಹೋದೆ ಮೋಹನವದನಾ

ಎಲ್ಲಡಗಿದೆ ಪ್ರೇಮಸದನ

ಕರೆದೊಯ್ಯದೆ ಕುಂದರದನ

ಮದನಾ ಮದನಾ ಮದನಾ....(ಮೂರ್ಛೆಹೋಗುವಳು)

ಗಿರಿಜೆ : (ಎಬ್ಬಿಸಿ ಸಂತೈಸುತ್ತ)

ಮರುಗದಿರು ಕೊರಗದಿರು

ಮಗಳೆ ಚೆನ್ನಿಗಳೆ,

ಮದನನನು ಬದುಕಿಸಲು

ತಪಗೈವೆನೀಗಳೆ

ಸಾಧನವಸಾಧುವಿರೆ

ಸಾಧ್ಯ ಸಾಧಿಸದು

ಇದನರಿದ ಸುರನರಗೆ

ಕೇಡು ಬಾಧಿಸದು

ಸಾಧನೆಯ ಶುದ್ಧಿಗಿದೊ

ಹೊರಟೆ ನಾ ಮಗಳೆ

ನಿನಗಹುದು ಮಂಗಳವು

ಮಂಗಳದ ಮುಗುಳೆ

ರತಿ : (ಬಿಕ್ಕುತ್ತ)
ಕರುಣಿಸು ತಾಯೇ ತವರೇ
ಪರಿರಕ್ಷಿಸು ದಯೆಯೊಳೀಕ್ಷಿಸುಡುಗಿಸು ನೋವಂ
ಪರಿಹರಿಸು ದುಃಖಮಂ ವರ-
ಗಿರಿರಾಜತನೂಜೆ ಕಾದುಕೊಳ್ಳೆನ್ನಸುವಂ

ಗಿರಿಜೆ : (ನಿರ್ಧಾರದಿಂದ)
ತಾನಿದ್ದ ಸ್ಥಳಕಾನೆ ಬಂದರೂ ಕಡೆಗಣಿಸಿ
ಹೋಗಿಹನು ಹರನಿಂದು; ತಪದಿ ನಿಂದು
ನಾನಿರುವ ಸ್ಥಳದತ್ತ ತಾನೆ ಬರುವಂದದಲಿ
ಮಾಡುವೆನು ಸುತೆ, ತಾಳು ತಾಳ್ಮೆ ತಪವೆಂದು

ಜಯೆ-ವಿಜಯೆ : ತಾಯ ತಪ ಸಿದ್ಧಿಸಲಿ
ಮಂಗಳವು ವರ್ಧಿಸಲಿ
ಜಗದೆಲ್ಲ ಶಕ್ತಿಗಳು
ಶಿವಕಾಗಿ ಸ್ಪರ್ಧಿಸಲಿ

ತೆರೆ

ಗಿರಿಜೆಯ ಉಗ್ರ ತಪಸ್ಸು ಋತು ಬಂದು, ಋತು ತೆರಳಿ, ಬಿಸಿಲು ಮಳೆ ಚಳಿ ಕೆರಳಿ ಕಾಲಲೀಲೆ ಸಾಗುತ್ತದೆ. ಇವುಗಳತ್ತ ಚಿತ್ತವೇ ಇಲ್ಲದೆ ಅವಳ ಅನುಪಮ ತಪಸ್ಸು ಮುಂದುವರಿಯುತ್ತದೆ. ಆಯಾ ಕಾಲ ಬಂದಾಗ ಅದಕ್ಕೆ ತಕ್ಕ ಧ್ವನಿ.

ತೆರೆ ಏಳುತ್ತಿರುವಂತೆ 'ಓಂ ನಮಃ ಶಿವಾಯ' ಎಂಬ ನಾದ ತೇಲಿ ಬರುತ್ತದೆ. ಹಿಂದೆ ತಪೋಮಗ್ನ ಗಿರಿಜೆ, ಹೌಹಾರಿದ ಜಯೆ ವಿಜಯೆಯರು–

ನಿನ್ನ ಕಾಡೆನು ಇನ್ನು ಕಡೆಗಣಿಸೆ ಒಲವನ್ನು

ತಪ ಸಾಕು ಬೇಕಿನ್ನು ಪ್ರೇಮಪೂಜೆ

(ಹೋಗುವನು. ತೆರೆ ಏಳುವುದು. ಮತ್ತೆ ಗಿರಿಜೆಯ ತಪೋವನ. ಧ್ಯಾನ ನಿಮಗ್ನ ಗಿರಿಜೆ. ಜಯೆ ವಿಜಯೆಯರ ಪ್ರಾರ್ಥನೆ.)

ಜಯೆ–ವಿಜಯೆ : ಶಂಭುಶಂಕರ ಸ್ವಾಮಿ ಶುಭಕರ

ಒಲಿದು ಬಾ ಅಭಯಂಕರ

ತಪದಿ ಮಾಗಿಹ ಗಿರಿಜೆಗೋಸ್ಕರ

ಇಳಿದು ಬಾರೊ ಕೃಪಾಕರ

ಸರ್ಪಭೂಷಣ ನಿನಗೆ ಭೂಷಣ–

ವಲ್ಲ ಕರಗದ ಹೃದಯವು

ಓಡಿ ಬಾ ಹರ ಚಂದ್ರಶೇಖರ

ಆಗಿ ಒಲುಮೆಯ ಉದಯವು

ಶಂಭು ಶಂಕರ....

ವಟು– (ಪ್ರವೇಶಿಸಿ)

ಎನಿತು ಮೋಹನವೀ ತಪೋವನ

ಯಾರದಿದು ಪುಣ್ಯಾಶ್ರಮ

ಯಾರು ಯತಿಗಳು ಅತಿಥಿ ಬಂದಿಹೆ

ಬಳಲಿ ಯಾಚಿಸಿ ವಿಕ್ರಮ

(ಜಯೆ ವಿಜಯೆಯರು ಎದ್ದುಹೋಗಿ ಎದುರ್ಗೊಂಡು ಕರೆತಂದು ಉಚಿತಾಸನವಿತ್ತು ಕುಳ್ಳಿರಿಸಿ:)

ಜಯೆ : ಓ ಸಾಧು ಸ್ವೀಕರಿಸು ಅರ್ಘ್ಯವಿದು ಪಾದ್ಯವಿದು
ಮಧುರ ಮಧುಪರ್ಕವಿದನಾರೋಗಿಸು

ವಿಜಯೆ : ರಸಬಾಳೆ ನೇರಿಲವು ಮಾದಳವು ಪೇರಲವು
ವನವಿತ್ತ ಹಣ್ಣಿವನು ಆಸ್ವಾದಿಸು

ವಟು : ಸ್ವೀಕರಿಪೆನಾ ಮೇಲೆ
ಯಾರು ಈ ಗಿರಿಬಾಲೆ
ಏಕಿಂಥ ಎಳೆವಯದಿ ತಪಕೊಲಿದಳು?
ಬಿಸರುಹವ ಬಿಸಿಲಲ್ಲಿ
ಬಾಡಿಸುವ ತೆರದಲ್ಲಿ
ಸುಕುಮಾರಿಯಿವಳೇಕೆ ಸೊರಗುತಿಹಳು?

ವಿಜಯೆ : ನಿನಗೇತಕೆ ಇವಳ ಗೊಡವೆ
ಬೇಡಿದನಿತು ತಿನಲು ಕೊಡುವೆ
ಸವಿದು ಮುಂದೆ ಸಾಗು

ಜಯೆ : ಇಲ್ಲದ ಈ ಉಪದ್ವ್ಯಾಪ
ಸ್ಥಾನಕೊಪ್ಪದಿಹ ಪ್ರಲಾಪ
ತರವಲ್ಲವು ಹೋಗು

ವಟು : ಬೆಸಗೊಂಡೊಡೆ ದೋಷವೆ
ಮಾರುತ್ತರ ರೋಷವೆ
ಇದು ಎಲ್ಲಿಯ ನ್ಯಾಯವು?
ಇವಳಿನ್ನೂ ಕನ್ನೆ ಚನ್ನೆ
ತಪದಿ ತನ್ನ ಕಾಯವನ್ನೆ
ತೆಯ್ಯುವುದನ್ಯಾಯವು!

ವಿಜಯೆ : ಹೆಚ್ಚು ಹರಟೆ ಬೇಡ ವಟುವೆ!

ವಟು : ನನ್ನ ಮಾತು ಹರಟೆ ದಿಟವೆ?

ಜಯೆ : ಅಗ್ನಿಯ ಸುಗ್ಗಿಯು ಭೀಷಣಗ್ರೀಷ್ಮಂ

ವಿಜಯೆ : ದಳ್ಳುರಿಯಂತಿದೆ ಅನಿಲನ ಉಷ್ಣ.

ಜಯೆ : ಘರಿಘರಿಲೆನ್ನುತ ಸೀದುವು ವಿಹಗ

ವಿಜಯೆ : ಹುರಿವರಳೆದ್ದುವು ಮೃಗಕುಲ ಉರಗ

ಜಯೆ : ಛಿಳಿ ಛಿಟಿಲೆನುತಿಹ ಪಂಚಾಗ್ನಿಯಲಿ

ವಿಜಯೆ : ಎಂತುಳಿವಳೊ ಗಿರಿರಾಜನ ಕುವರಿ

ಜಯೆ : ಕರುಣಿಸು ವರುಣ

ವಿಜಯೆ : ಮಾಡುವೆ ಶರಣ

ಜಯೆ : ಬಾರದೆ ಕರುಣ

ವಿಜಯೆ : ತಪ್ಪಿಸು ಮರಣ

ತೆರೆಯಲ್ಲಿ : ಘುಳುಘುಳು ಘಳಘಳ ಘುಡುಘುಡು

ಘುಳು ಛಿಟಿಛಿಟಿ ಘಾರ್ಘುಳಂ ಧಡಂ ಧಾಂಧಡ ಧಿಂ

ಛಿಳಿಛಿಳಿ ಭಿಂಭಿಂ ಘಡಘಡ

ಘಳ ಘಡ ಘಡಿಲೆಂದು ಮೊಳಗು ಮೊಳಗಿತು ನಭದೊಳ್

ಸುರಿಮಳೆ ಧೋ ಧೋ ಎಂದು ಸುರಿಯುವುದು–ಅಂಬರವೆಲ್ಲ ಕರಗಿ ಸುರಿಯುವಂತೆ.

ಜಯೆ : (ನಡುಗುತ್ತ) ನಿಲ್ಲೆಲೆ ಮಳೆ

ವಿಜಯೆ : ನೆನೆಯಿತ್ತಿಳೆ

ಜಯೆ : ತುಂಬಿತು ಹೊಳೆ

ವಿಜಯೆ : ಸವೆದುದು ಶಿಳೆ

ಜಯೆ–ವಿಜಯೆ : ನಿಲ್ಲೆಲೆ ಮಳೆ ನಿಲ್ಲೆಲೆ ಮಳೆ.....

ತೆರೆಯಲ್ಲಿ : ಪುಟ್ಟಿತು ಚಳಿ ಬಳೆದುದು ಚಳಿ

ಕೊಟ್ಟುದು ಚಳಿ ಕೊಂಡುದೆಲ್ಲಮುಂ ಚಳಿಚಳಿಯೆಂ-
ದುಟ್ಟುದು ಚಳಿ ತೊಟ್ಟುದು ಚಳಿ
ಮೆಟ್ಟಿತು ಚಳಿ ಮುಟ್ಟಿತೆಲ್ಲ ಚಳಿ ಪೊಸಚಳಿಯೊಳ್!

ಜಯೆ : (ಇನ್ನಷ್ಟು ನಡುಗುತ್ತ)
ಎಂತುಳಿಯುವೆವೊ ಈ ಚಳಿಯಲ್ಲಿ
ಕೊರೆಯುವ ಕುಳಿರಿನ ಇಳೆಯಲ್ಲಿ

ಜಯೆ : ಎಂದಿಗೆ ಮುಗಿವುದೊ ಗಿರಿಜೆಯ ತಪವು

ವಿಜಯೆ : ಇನ್ನೆಂದಿಗೊ ಮಹಾದೇವನ ಕೃಪೆಯು

ಜಯೆ : ಕಲ್ಮನ ಕರಗಲಿ ಶಂಕರನ

ವಿಜಯೆ : ಕೃಪೆಯಾಗಲಿ ಅಭಯಂಕರನ

(ತೆರೆ ಬೀಳುವುದು. ವನವೀಥಿಯಲ್ಲಿ ವಟುವೇಷಧಾರಿ ಶಂಕರನ ಪ್ರವೇಶ)

ವಟು : (ಅತ್ಯುಗ್ರವೀ ತಪವು
ಬೇಡ ಬೇರೆಯ ನೆಪವು
ಹೊರಡುವೆನು ನಾನಿನ್ನು ಗಿರಿಸುತೆಯ ಬಳಿಗೆ
ಸುಟ್ಟು ಹೋಯಿತು ಕಾಮ
ವಿಜಯಿಯಾಯಿತು ಪ್ರೇಮ
ಹತ್ತಿರಕೆ ಬರುತಲಿದೆ ಅಮೃತಗಳಿಗೆ
ಕಾಡಿದೆನು ನಿನ್ನನ್ನು
ಬಾಡಿಸಿದೆ ನಿನ್ನನ್ನು
ಮನ್ನಿಸೆನ್ನನು ಗಿರಿಜೆ ನನ್ನ ಗಿರಿಜೆ

ವಿಜಯೆ : ಹರಟೆಯಲ್ಲ ಬಡಬಡಿಕೆಯು

ಜಯೆ : ಅಲ್ಲಅಲ್ಲ ಬುಡುಬುಡಿಕೆಯು

ವಟು : (ರೋರಾಡುತ್ತ)

ಶಾಂತಂ ಪಾಪಂ ಶಾಂತಂ ಪಾಪಂ

ಗಿರಿಜೆ : (ಕಣ್ದೆರೆದು)

ಯಾರಿವರು ಜಯೆ ವಿಜಯೆ?

ಜಯೆ : ಯಾರೊ ಸಖಿ, ನಾನರಿಯೆ

ವಿಜಯ : ಅತಿಥಿಯೆಂದಾದರಿಸೆ

ಏನೇನೊ ಗಳಹಿದನು

ವಿಜಯೆ : ವಟುವೆಂದು ಸತ್ಕರಿಸೆ

ಸಲ್ಲದುದನಾಡಿದನು

ಗಿರಿಜೆ : (ಕೈಮುಗಿದು)

ವಟುವೆ ಕಲಹ ಪಟುವೆ ಕೃಪೆಯ

ತೋರಿ ತೆರಳು ಬೇಗ

ತಪಕೆ ವಿಘ್ನ ತರುವುದುಚಿತವಲ್ಲ ಮರಳು ಈಗ

ವಟು : ತೆರಳುವೆ ತರಳೆ

ಕೋಮಲೆ ಸರಳೆ

ಮೊದಲೆನಗುತ್ತರ ಹೇಳು

ಯಾತಕೆ ತಪವು

ಯಾರದು ಜಪವು

ತೊರೆದಿದ ಸೊಗದಲಿ ಬಾಳು

ಈ ಸುಕುಮಾರತೆ

ಲಾವಣ್ಯದ ಲತೆ

ತಪದಲಿ ಬಾಡಿಸುತಿರುವೆ

ತಿಂಗಳ ಬೆಳಕಿನ

ಸೋಂಕಿಗೆ ಅಳುಕುವ

ತನುವಿಗೆ ವಲ್ಕಲ ತರವೆ?

ಗಿರಿಜೆ : ದುಸ್ಸಾಧ್ಯನಾರಾಧ್ಯ
ತಪದಿಂದಲೇ ಸಾಧ್ಯ
ವೇದ್ಯವಾಯಿತೆ ವಟುವೆ? ಮುಂದೆ ಸಾಗು!
ಅವನು ಒಲಿಯುವವರೆಗೆ
ಒಡ್ಡುವೆನು ತನು ಉರಿಗೆ
ಇದೆ ದಾರಿ ಗುರಿಗೆ, ನೀ ಸುಮ್ಮನೇ ಹೋಗು!

ವಟು : ತ್ರಿಪುರ ಸುಂದರಿ ತನ್ನ
ತಪದಿ ಜಪಿಸದ ಮುನ್ನ
ತಾನೆ ಒಲಿಯದ ಜಡನು; ದಡ್ಡನಾರು?
ಅವನೆಂಥ ನೀರಸನು
ಕಲ್ಲೆದೆಯ ಮಾನಿಸನು
ನಿನಗೆ ಒಲಿಯದ ದೊಡ್ಡ ಹೆಡ್ಡನಾರು?

ವಿಜಯ : ಹೆಡ್ಡನಲ್ಲ ದಡ್ಡನಲ್ಲ
ಒಡ್ಡ ವಟುವೆ ಕೇಳು
ಸೃಷ್ಟಿಯೊಡೆಯ ಶಿವನಿಗಾಗಿ
ತಪವಗೈಯುತಿಹಳು

ವಟು : (ಅಚ್ಚರಿಯನ್ನು ನಟಿಸಿ)
ಆ ಸ್ಮಶಾನವಾಸಿಗೆ
ಆ ಅಸಹ್ಯ ವೇಷಿಗೆ
ಒಲಿದೆಯೆಂತು ಕನ್ನೆ?
ಭಿಕ್ಕೆ ಬೇಡಿ ಬಾಳುವ
ಮುದಿಯೆತ್ತನು ಆಳುವ
ಒಲಿದೆ ಹುಚ್ಚನನ್ನೆ?
ಚರ್ಮವನ್ನೆ ಉಟ್ಟಿಹ

ಸರ್ಪಗಳನೆ ತೊಟ್ಟಿಹ
ಭೀಕರಾಕಾರನು!
ರುಂಡಮಾಲೆ ತಳೆದಿಹ
ಬೂದಿಯನ್ನೆ ಬಳಿದಿಹ
ಅಮೂಲ ವಿಕಾರನು!

ಗಿರಿಜೆ : ನಿಂದಿಸುವ ನೆವದಲ್ಲಿ ವಂದಿಸುವ ವಿಪ್ರನೆ
ಭುವನ ಭರಿತಗೆ ಬೇಕೆ ಬೇರೆ ಸಿರಿಯು?
ಸಂಪದವನೆಲ್ಲರಿಗೆ ಕೊಟ್ಟು ಬಡತನವನ್ನು
ತನಗಿರಿಸಿಕೊಂಡವಗೆ ಇನ್ನಾರು ಸರಿಯು?
ನೇತ್ರದಲ್ಲಿ ಅಗ್ನಿಯನು ಜಡೆಯಲ್ಲಿ ಜಲವನ್ನು
ಚರ್ಮದಲಿ ಪೃಥ್ವಿಯನ್ನು ಸರ್ಪದಲಿ ಪವನ
ಶಶಿಕಲೆಯೊಳಾಕಾಶವನು ತಳೆದು ರಾಜಿಸುವ
ವಿಶ್ವರೂಪನು ಅವನು ಜಗಜೀವನ!

ವಟು : ನೀನೇನೆ ಹೇಳಿದರು ನಾನೊಪ್ಪೆನೆಲೆ ಮುಗ್ಧೆ
ನೀನಿನಿಯಳವನಿಹನು ಘೋರವಿಷವು
ನೀನಬಲೆ, ಅವನುಗ್ರ; ನೀನು ಮೃದು, ಅವ ಕಠಿನ;
ನಿಮ್ಮಿಬ್ಬರಲಿ ಸಾಧ್ಯವಿಲ್ಲ ಸಮರಸವು.
ಬಿಟ್ಟುಬಿಡು ಅವನಾಸೆ, ಆ ಅಮಂಗಲನಾಸೆ.
ಅವನಿಗೇತಕೆ ಇಂಥ ಶ್ರೀರೂಪವು
ನಿನಗೆ ತಕ್ಕವನನ್ನು ಅರಸಿ ವರಿಸೆಲೆ ಚೆನ್ನೆ
ಕತ್ತಲೆಯನೊಲಿಯುವುದೆ ಮಣಿದೀಪವು?

ಗಿರಿಜೆ : (ಕಿವಿ ಮುಚ್ಚಿ)
ಏನಿದು ಸಖಿಯರೆ, ವಾರಿಜಮುಖಿಯರೆ
ನನ್ನಯ ತಪಕಿದೆ ಫಲವೆ!

ನಲ್ಲನ ನಿಂದೆಯ ಆಲಿಸಲಾರೆನು
ಹೊರಡುವೆ ಬೇಡೀ ಸ್ಥಲವೆ!
(ಹೊರಡುವಳು)

ವಟು : (ತಡೆಯಲಾಶಿಸಿ)
ನಿಲ್ಲೆಲೆ ಕೋಮಲೆ ನಿಲ್ಲೆಲೆ ಪ್ರೇಮಲೆ
ನಿಲ್ಲೆಲೆ ಒಲವಿನ ಮಾಲೆ

ಗಿರಿಜೆ : (ಕೆರಳಿ)
ಮನದಲಿ ಮಲಿನವು ನುಡಿಯಲಿ ಅನುಚಿತ
ವಟುವಿನ ವೇಷವು ಮೇಲೆ!

ವಟು : (ನಿಜರೂಪ ತೋರಿ)
ತೊಲಗೆಲೆ ಹುಸಿಯೆ ವಟುವಿನ ವೇಷವೆ
ಒಲವಿಗೆ ಮಣಿಯೆಲೆ ನಿಜವೆ!

ಗಿರಿಜೆ : (ನೋಡಿ ಮೈಯನೀಡಾಡಿ)
ಸತ್ಯನೆ ಶಿವನೆ ಓ ಸುಂದರನೆ
ಕೃಪೆದೋರಿದೆಯಾ, ನಿಜವೆ!

ಶಂಕರ : ಕೃಪೆಯಲ್ಲಿದು ಪ್ರಿಯೆ ಗಿರಿಜೆಯ ಗೆಲವಿದು
ಶರ್ವನ ಸೋಲಿದು ನಿಜದಿ.

ಗಿರಿಜೆ : ಪ್ರೇಮದಿ ಸ್ವಾಮಿಯೆ ಸೋಲೇ ಗೆಲವು
ಸೋಮನ ಗೆಲವಿದು ನಿಜದಿ

ಶಂಕರ : ಯಾರೇ ಗೆಲ್ಲಲಿ ಯಾರೇ ಸೋಲಲಿ
ಮಧುರತಮವು ಈ ಮಿಲನ

ಗಿರಿಜೆ : ಮದನನು ಬದುಕಲಿ ರತಿಯಳಲಳಿಯಲಿ
ಮುದಮಯವಾಗಲಿ ಭುವನ

ನಾರದ : (ಗಿರಿರಾಜ, ಮೇನಾದೇವಿ, ರತಿಮದನರೊಡನೆ ಪ್ರವೇಶಿಸಿ)

ಷಣ್ಮುಖನುದಿಸಲಿ ತಾರಕನಳಿಯಲಿ
ಅಗಲಿ ಸಂಕಟ ಹರಣ
ಬರದಿರಲೆಂದಿಗು ನಿಮ್ಮಿಬ್ಬರಲಿ
ಅಗಲಿಕೆ ಪಾವನ ಚರಣ

ಗಿರಿರಾಜ : (ಗಿರಿಜೆಯ ಕರವನ್ನು ಹರನ ಕರದಲ್ಲಿರಿಸಿ)

ಶಿವನ ಸೊಮ್ಮು ಶಿವನಿಗೆ
ಹರ್ಷವರ್ಷ ಅವನಿಗೆ

ಶಂಕರ : (ಪುಲಕಿತನಾಗಿ) ಶಿವದಿ ಶಕ್ತಿ ಸ್ಪಂದನ

ಗಿರಿಜೆ : (ಬಾಗಿ) ನಿನಗೆ-ಪ್ರಭುವೆ ವಂದನ

ನಾರದ : ಉದಿಸಲಿನ್ನು ನಂದನ

ರತಿ-ಮನ್ಮಥ : ಹರಿಯೆ ಅಸುರ ಬಂಧನ

ಜಯೆ-ವಿಜಯೆ : ಮುಗಿದು ಜನರ ಕ್ರಂದನ

ಗಿರಿರಾಜ-ಮೇನಾ : ಜಗವಾಗಲಿ ನಂದನ

ನಾರದ : (ಬಾಗಿ)

ಪ್ರಪಂಚ ಸೃಷ್ಟ್ಯುನ್ಮುಖ ಲಾಸ್ಯಕಾಯೈ
ಸಮಸ್ತ ಸಂಹಾರಕ ತಾಣ್ಡವಾಯೈ
ಜಗಜ್ಜನನ್ಯೈ ಜಗದೇಕ ಪಿತ್ರೇ
ನಮಃ ಶಿವಾಯೈಚ ನಮಃ ಶಿವಾಯ

ರತಿ- ಹೊಸ ಸೃಷ್ಟಿಯ ಲಾಸ್ಯವ
ತೋರು ತಾಯೆ ಶಾಂಭವಿ

ಮದನ- ಹೊಸ ಸೃಷ್ಟಿಯ ತಾಂಡವ
ಬೇಡುತಿಹುದು ಪ್ರಭುವೆ ಭುವಿ

ಗಿರಿಜಾಶಂಕರ– ತಥಾಸ್ತು

(ನಾರದರು ತಂಬೂರಿ ನುಡಿಸುವರು. ಉಳಿದವರು ಕೈಪರೆಯಿಕ್ಕುವರು. ಗಿರಿಜಾಶಂಕರರ ಲಾಸ್ಯ–ತಾಂಡವ ಮೇಳದ ಹಾಡಿಗೆ ಸರಿಯಾಗಿ ಸಾಗುವುದು)

ಮೇಳ : ಝುನ್ ಝುನನ ಝುನ್ ಝುನನ

ಗೆಜ್ಜೆಯ ಸ್ವರ–ಶಿವೆಯ

ಗೆಜ್ಜೆಯ ಸ್ವರ–ಉಮೆಯ

ಗೆಜ್ಜೆಯ ಸ್ವರ

ದಧಧಿನ್ ಗದಗಿನ

ಧಿನತುನ ಧೀನನ

ಹೆಜ್ಜೆಯ ಸ್ವರ–ಹರನ

ಹೆಜ್ಜೆಯ ಸ್ವರ–ಶಿವನ

ಹೆಜ್ಜೆಯ ಸ್ವರ

ನೂಪುರದ ಝುಂಕಾರ

ಪೈಜಣ ಝಣತ್ಕಾರ

ಕಂಕಣದ ಕಿಂಕಿಣಿಯ

ಝುಂಕಾರವು–ಮಧುರ

ಝುಂಕಾರವು ಮೃದುಲ

ಝುಂಕಾರವು

ಶಂಕರನ ಶಶಿಧರನ

ಗಿರಿಜಾಪ ಟಂಕಾರ

ಭಯಹಾರಿ ಜಯಕಾರಿ

ಓಂಕಾರವು–ಪ್ರಣವ

ಓಂಕಾರವು–ಶುಭದ

ಓಂಕಾರವು

ಬಹುಭಂಗಿ ಬಹುನ್ಯಾಸ

ಮೃದುಪಾದವಿನ್ಯಾಸ
ಗಿರಿಸುತೆಯ ಚಿರರುಚಿರ
ಮೃದುಲಾಸ್ಯವು-ಉಮೆಯ
ಪದಲಾಸ್ಯವು-ಮಧುರ
ಮದಲಾಸ್ಯವು
ಹರಿದಾಡೆ ಮೃದುಹಾಸ್ಯ
ತಳತಳಿಸೆ ಹರನಾಸ್ಯ
ನಡೆದಿರಲಿ ತಾಂಡನವು
ಮೃದುಲಾಸ್ಯವು-ಉಮೆಯ
ಪದಲಾಸ್ಯವು-ಸೌಖ್ಯ-
ಪ್ರದ ಲಾಸ್ಯವು
ಪದಗತಿಯ ಮೃದುಸ್ಪರ್ಶ
ಪಡೆದರಳೆ ಈ ವಿಶ್ವ
ನಡೆದಿರಲಿ ಕಡೆಯಿರದೆ
ಶುಭಲಾಸ್ಯವು-ಉಮೆಯ
ಪತಿಲಾಸ್ಯವು-ಶಿವೆಯ
ಶಿವಲಾಸ್ಯವು
ಅಡಿಗಡಿಗೆ ಹೊಸ ಹರ್ಷ
ಸುರಿದು ಅಮೃತದ ವರ್ಷ
ಕೊನೆಯಿರದೆ ನಡೆದಿರಲಿ
ಶಿವತಾಂಡವ-ದಹಿಸಿ
ದುಷ್ಕಾಂಡವ-ಬೆಳಗಿ
ಬ್ರಹ್ಮಾಂಡವ

(ತೆರೆ ಬೀಳುತ್ತಿರುವಂತೆ ಜಗತಃಪಿತರೌ ವಂದೇ ಪಾರ್ವತೀ ಪರಮೇಶ್ವರೌ ಎಂಬ ಉದ್ಘೋಷ.)

ಭರತವೀರ

ಪಾತ್ರ ಪರಿಚಯ :

ನರಸಿಂಹಗುಪ್ತಬಾಲಾದಿತ್ಯ	....	ಗುಪ್ತ ಸಾಮ್ರಾಟ
ಮಿತ್ರಾದೇವಿ	....	ಬಾಲಾದಿತ್ಯನ ಪತ್ನಿ
ರಾಜಮಾತೆ	....	ಬಾಲಾದಿತ್ಯನ ಮಾತೆ
ವಸುಬಂಧು	....	ಬಾಲಾದಿತ್ಯನ ಗುರು
ನಯಸಾರ	....	ಬಾಲಾದಿತ್ಯನ ಮಂತ್ರಿ
ಸಮರಸಿಂಹ	....	ಬಾಲಾದಿತ್ಯನ ಸೇನಾಪತಿ
ಯಶೋಧರ್ಮ	....	ಮಾಳವದ ಅರಸ
ರಾಜ್ಯಲಕ್ಷ್ಮಿ	....	ಯಶೋಧರ್ಮನ ಪತ್ನಿ
ಮಂತ್ರಸಾರ	....	ಯಶೋಧರ್ಮನ ಮಂತ್ರಿ
ಧುರಧೀರ	....	ಯಶೋಧರ್ಮನ ಸೇನಾನಿ
ಮಿಹಿರಕುಲ	....	ಹೂಣದೊರೆ
ಬಕ	....	ಮಿಹಿರಕುಲನ ಮಗ
ಈಶಾನವರ್ಮ	....	ಮೌಖಾರಿ ದೊರೆ
ಶೂರಸೇನ	....	ಕಾಶ್ಮೀರದ ದೊರೆ

ಇವರಲ್ಲದೆ ಮಿಹಿರಕುಲ ಶೂರಸೇನರ ಮಂತ್ರಿ ಸೇನಾಪತಿಗಳು, ಬೌದ್ಧ ಭಿಕ್ಷುಗಳು, ಮಿಹಿರಕುಲ ಬಾಲಾದಿತ್ಯರ ದೂತರು, ಪ್ರತೀಹಾರಿ, ಪ್ರಜೆಗಳು ಇತ್ಯಾದಿ.

ಮೊದಲನೆಯ ಅಂಕ

ನೋಟ ೧

(ಕಾಶ್ಮೀರದಲ್ಲಿ ಒಂದು ಬೌದ್ಧ ಸಂಘಾರಾಮ. ಬಹುಶಃ ಈಗಿನ ಲದ್ದಾಖ್ ಅದರ ಸ್ಥಳವಾಗಿರಬೇಕು. ತೆರೆ ಎದ್ದಾಗ ಹೆಮ್ಮರವೊಂದರ ಕೆಳಗಿರುವ ಉನ್ನತಾಸನದ ಮುಂದೆ ಕೆಲವು ಬೌದ್ಧ ಭಿಕ್ಷುಗಳು ಕುಳಿತು 'ಬುದ್ಧಂ ಶರಣಂ ಗಚ್ಛಾಮಿ, ಧರ್ಮಂ ಶರಣಂ ಗಚ್ಛಾಮಿ, ಸಂಘಂ ಶರಣಂ ಗಚ್ಛಾಮಿ' ಎಂದು ಪಠಿಸುತ್ತಿರುವುದು ಕಂಡುಬರುತ್ತದೆ. ಕೆಲವೇ ನಿಮಿಷಗಳಲ್ಲಿ ಅವರ ಗುರು ಆಗಮಿಸಲು ಎಲ್ಲರೂ ಎದ್ದು ನಿಂತು ಬಾಗಿ ಸ್ವಾಗತಿಸುತ್ತಾರೆ.)

ಗುರು : (ಆಸೀನರಾಗಿ) ಓಂ ನಮೋ ಭಗವತೇ ಬುದ್ಧಾಯ. ಧರ್ಮಪದದ ಪ್ರವಚನವನ್ನು ಮುಂದುವರಿಸುತ್ತೇವೆ. ಇಂದು ತಥಾಗತನ ತ್ರಿಕಾಲಾಬಾಧಿತ ತತ್ತ್ವವೊಂದನ್ನು ಬಿತ್ತರಿಸುತ್ತೇವೆ. ಈ ಮಹಾ ತತ್ತ್ವವೊಂದನ್ನು ಮನನ ಮಾಡಿಕೊಂಡರೂ ಸಾಕು–ಜಗತ್ತು ನಂದನವಾಗುತ್ತದೆ, ಜೀವನದಲ್ಲಿ ಆನಂದದ ಸ್ಪಂದನವಾಗುತ್ತದೆ.

"ನಹಿ ವೈರೇಣ ವೈರಾಣಿ ಶಾಮ್ಯಂತೀಹ ಕದಾಚನ

ಅವೈರೇಣ ಚ ಶಾಮ್ಯಂತಿ ಏಷ ಧರ್ಮಃ ಸನಾತನಃ"

ಎಂಬುದೇ ಆ ಮಹಾತತ್ತ್ವ–ಬೋಧಿಸತ್ವನ ಅಮರ ತತ್ತ್ವ : "ವೈರದಿಂದ ವೈರದ ಶಮನ ಸಾಧ್ಯವಿಲ್ಲ. ಅವೈರದಿಂದಲೇ ವೈರದ ಶಮನ ಸಾಧ್ಯ." ಎಂಥ ಉದಾತ್ತ ತತ್ವವಿದು!

ಭಿಕ್ಷುಗಳಲ್ಲಿ ಒಬ್ಬ : (ಎದ್ದುನಿಂತು) ಅವಿನಯವನ್ನು ಮನ್ನಿಸಬೇಕು ಗುರುದೇವ. ಮಾತಿನಲ್ಲಿ ಈ ತತ್ವ ಮೋಹಕವಾಗಿ ತೋರಿದರೂ ಕೃತಿಯ ಒರೆಗಲ್ಲಿಗೆ ಇದು ನಿಲ್ಲುವುದೆಂದು ನನಗೆನಿಸುವುದಿಲ್ಲ. ದೌರ್ಜನ್ಯದ ದಬ್ಬಾಳಿಕೆ ನಡೆದಾಗಲೂ ಶತ್ರುಭಾವವನ್ನು ತಾಳದೆ ಮಿತ್ರನಂತೆಯೇ ವರ್ತಿಸುವುದು ಎಷ್ಟರಮಟ್ಟಿಗೆ ಸಾಧ್ಯ?

ಗುರು : ಏಕೆ ಸಾಧ್ಯವಿಲ್ಲ? ಎಂಥ ದುರ್ಜನನಾದರೂ ಅವನೊಬ್ಬ ಮಾನವನೆಂಬುದನ್ನು ಮರೆಯದಿದ್ದರೆ ಸೌಜನ್ಯದಿಂದ ಅವನ ಹೃದಯ ಪರಿವರ್ತನೆ ಸಾಧ್ಯವಾಗುತ್ತದೆ.

ಇನ್ನೊಬ್ಬ ಭಿಕ್ಷು : (ಎದ್ದು) ಮೊದಲು ಮಾನವನಾಗಿ ಹುಟ್ಟಿ ಯಾವುದೋ

ದುಷ್ಟಶಕ್ತಿಯ ಸೆಳೆತಕ್ಕೆ ಒಳಗಾಗಿ ದಾರಿತಪ್ಪಿದವರ ಹೃದಯಪರಿವರ್ತನೆ ಸಾಧ್ಯವಾಗಬಹುದು ಗುರುದೇವ–ಹುಟ್ಟುತ್ತಲೇ ದಾನವನಾಗಿ ಹುಟ್ಟಿರುವ ಮಿಹಿರಕುಲನಂಥವರನ್ನು ಮಾನವರನ್ನಾಗಿ ಮಾಡುವುದು ಹೇಗೆ ಸಾಧ್ಯ?

ಗುರು : ಸಾಧ್ಯವಿದೆ. ಅಂಗುಲಿಮಾಲಾನ ಪರಿವರ್ತನೆ ಸಾಧ್ಯವಾಗಿರುವಾಗ ಮಿಹಿರಕುಲನ ಪರಿವರ್ತನೆ ಸಾಧ್ಯವಾಗದೆ?

ಮತ್ತೊಬ್ಬ ಭಿಕ್ಷು–(ಎದ್ದು) : ಗುರುದೇವ, ಭಗವಾನ್ ಬುದ್ಧನಿಂದ ಸಾಧ್ಯವಾದುದು ನಮ್ಮಿಂದ ಸಾಧ್ಯವಾಗಬಹುದೆ? ಆನೆ ಹೋದ ಹಾದಿಯಲ್ಲಿ ಆಡು ಹೋಗಲಾದೀತೆ? ಮದಾಂಧನೂ, ಮಹಾಪಾತಕಿಯೂ, ಮಹಾಕ್ರೂರನೂ ಆಗಿರುವ ಮಿಹಿರಕುಲನನ್ನು.... (ತೆರೆಯ ಹಿಂದಿನಿಂದ ಭಯಾನಕವಾದ ಸ್ವರ–"ಯಾವ ಕುನ್ನಿ ಮಿಹಿರಕುಲ ಮಹಾಪ್ರಭುಗಳನ್ನು ನಿಂದಿಸುತ್ತಲಿದೆ? ಕಟ್ಟಿರಿ ಆ ಕುನ್ನಿಯನ್ನು...!" ಸಂಘಾರಾಮದಲ್ಲಿ ಭಿಕ್ಷುಗಳೆಲ್ಲ ಭಯಭೀತರಾಗಿ "ಬುದ್ಧಂ ಶರಣಂ ಗಚ್ಛಾಮಿ" ಎಂದು ಉಚ್ಚಸ್ವರದಲ್ಲಿ ಉಚ್ಚರಿಸತೊಡಗುತ್ತಾರೆ. ಅಷ್ಟರಲ್ಲಿ ಮಿಹಿರಕುಲನ ಭೀಕರಾಕಾರದ ದೂತರು ಬಂದು ಎಲ್ಲರನ್ನೂ ಬಂಧಿಸುತ್ತಾರೆ.)

ಅಗ್ರದೂತ : ಮಿಹಿರಕುಲ ಮಹಾಪ್ರಭುಗಳನ್ನು ನಿಂದಿಸಿ ಬುದ್ಧನ ಶರಣುಹೊಕ್ಕು ಬದುಕಿಕೊಳ್ಳುವಿರಾ ಬಡಪಾಯಿಗಳೆ?

ಇನ್ನೊಬ್ಬ ದೂತ : ನಮ್ಮ ಪ್ರಭುಗಳ ರಾಜ್ಯದಲ್ಲಿಯೇ ಇದ್ದು ಅವರನ್ನೇ ತೆಗಳುವ ಈ ಕುನ್ನಿಗಳನ್ನು ಕತ್ತರಿಸಿ ಚೆಲ್ಲೋಣ.

ಅಗ್ರದೂತ : ಒಂದೇ ಏಟಿಗೆ ಕೊಂದುಬಿಟ್ಟರೆ ಸರಿಯಾಗಿ ಶಿಕ್ಷಿಸಿದಂತಾ–ಗುವುದಿಲ್ಲ. ಚಿತ್ರಹಿಂಸೆ ಮಾಡಿ ಕೊಲ್ಲೋಣ. ಚಿತ್ರಹಿಂಸೆ ಕೊಡದೆ ವಿರೋಧಿಗಳನ್ನು ಕೊಲ್ಲಕೂಡದೆಂಬ ಮಿಹಿರಕುಲ ಮಹಾಪ್ರಭುಗಳ ಮಹದಾಜ್ಞೆಯನ್ನು ಮರೆತೆಯಾ? ಹಾಕಿರಿ ಚಾಟಿಯ ಏಟನ್ನು! (ದೂತರು ಭಿಕ್ಷುಗಳಿಗೆಲ್ಲ ಚಾಟಿಯ ಏಟು ಹಾಕುವರು. ಭಿಕ್ಷುಗಳು ಏಟು ಬಿದ್ದಂತೆಲ್ಲ ಇನ್ನಷ್ಟು ಉಚ್ಚಸ್ವರದಲ್ಲಿ "ಬುದ್ಧಂ ಶರಣಂ ಗಚ್ಛಾಮಿ" ಎಂದು ಉಚ್ಚರಿಸುವರು. ಮಿಹಿರಕುಲನ ದೂತರು ಇನ್ನಷ್ಟು ರೇಗುವರು.)

ಅಗ್ರದೂತ : ಮತ್ತೆ ಬುದ್ಧನಿಗೆ ಶರಣೆನ್ನುವಿರಾ ಬುದ್ಧಿಹೀನರೆ! "ಮಿಹಿರಕುಲಂ ಶರಣಂ ಗಚ್ಛಾಮಿ" ಎಂದು ಬದುಕಿಕೊಳ್ಳಿರಿ!

ಬೌದ್ಧ ಗುರು : ಹರಣ ಹೋದರೂ ಶರಣೆನ್ನೆವು ಅಧರ್ಮಿಗಳಿಗೆ!

ಅಗ್ರದೂತ : ಹೀಗೆನ್ನುವ ನಿಮ್ಮ ನಾಲಿಗೆ ನುಚ್ಚು ನೂರಾದೀತು!

ಬೌದ್ಧಗುರು : ನಾಲಿಗೆಯೇಕೆ, ಸಮಗ್ರ ಶರೀರವೇ ನುಚ್ಚು ನೂರಾದರೂ ಬುದ್ಧನ ಭಕ್ತರು ಅನೀತಿಗೆ, ಅಧರ್ಮಕ್ಕೆ, ಅನ್ಯಾಯಕ್ಕೆ ಶರಣೆನ್ನುವುದು ಸಾಧ್ಯವಿಲ್ಲ!

ಅಗ್ರದೂತ : ಕೈಲಾಗದ ಕುನ್ನಿಗಳೆ, ನಿಮಗಿಷ್ಟು ಧೈರ್ಯವೆ ? ನಿಮಿಷಾರ್ಧದಲ್ಲಿ ನಿಮ್ಮನ್ನು ಜೀವಂತ ಸುಡಿಸಿಬಿಟ್ಟೇನು!

ಬೌದ್ಧಗುರು : (ನಸುನಕ್ಕು) ನಾವಿಷ್ಟು ಜನ ಸುಟ್ಟುಹೋದರೇನಾಯಿತು ರಾಜ ದೂತ, ಈ ವಿಶಾಲ ವಿಶ್ವದಲ್ಲಿ ಅಧರ್ಮವನ್ನು ಎದುರಿಸಿ ಜಯಿಸಬಲ್ಲವರು ಇಲ್ಲವೇ ಇಲ್ಲವೆಂದು ತಿಳಿದಿರುವೆಯಾ? ನೆನಪಿಡು, ದುರ್ಮಾರ್ಗಿಯಾಗಿರುವ ಮಿಹಿರಕುಲ ಇಲ್ಲವೆ ಸನ್ಮಾರ್ಗಕ್ಕೆ ಬರಬೇಕು, ಇಲ್ಲವೆ ತಾನೇ ಹೊತ್ತಿಸಿರುವ ಅಧರ್ಮದ ಅಗ್ನಿಕುಂಡದಲ್ಲಿ ತಾನೂ ದಗ್ಧನಾಗಬೇಕು! ಕೊನೆಗೆ ಜಯ ದೊರೆಯುವುದು ಧರ್ಮಕ್ಕೆ, ಅಧರ್ಮಕ್ಕಲ್ಲ!

ಮತ್ತೊಬ್ಬ ದೂತ : (ಕಿಡಿಕಿಡಿಯಾಗಿ) ನಿನ್ನ ಧರ್ಮ ನಿನಗೆ ಈ ಬಹುಮಾನ ತಂದಿದೆ. ತೆಗೆದುಕೋ...(ಬಲವಾಗಿ ಚಾಟಿಯಿಂದ ಹೊಡೆಯುವನು, ಹೊಡೆದಂತೆಲ್ಲ "ಬುದ್ಧಂ ಶರಣಂ ಗಚ್ಛಾಮಿ" ಎಂಬ ಉದ್ಘೋಷ ಉಕ್ಕಿಬರುವುದು.)

ಅಗ್ರದೂತ : ಇವರು ಚಾಟಿಯ ಏಟಿಗೆ ಮಣಿದಂತೆ ತೋರುವುದಿಲ್ಲ. ಮೊನ್ನೆ ಮಿಹಿರಕುಲ ಮಹಾಪ್ರಭುಗಳು ತಮ್ಮ ವಿನೋದಕ್ಕಾಗಿ ಏಳುನೂರು ಆನೆಗಳನ್ನು ಎತ್ತರದ ಶಿಖರಗಳ ಮೇಲಿನಿಂದ ಕೆಳಗೆ ನೂಕಿಸಿದಂತೆ ಈ ನಾಯಿಗಳನ್ನೂ ನೂಕಿಸಿ ಕೊಲ್ಲೋಣ! ನಡೆಯಿರಿ.

ದೂತರು : (ಕೈಕಟ್ಟಿ) ಬಹಳ ಒಳ್ಳೆಯ ವಿಚಾರ. ನಡೆಯಿರಿ. (ಭಿಕ್ಷುಗಳನ್ನು ಬಡಿಯುತ್ತ ಎಳೆದೊಯ್ಯುತ್ತಿರುವಂತೆ ತೆರೆ.)

ನೋಟ ೨

(ಕಾಶ್ಮೀರದಿಂದ ಭಾರತಕ್ಕೆ ಹೊರಟ ಬೇರೆ ಬೌದ್ಧ ಭಿಕ್ಷುಗಳು ಬರುತ್ತಾರೆ–ಭಯ ಬೆರೆತ ನಯನಗಳಿಂದ ಅತ್ತಿತ್ತ ನೋಡುತ್ತ ಮೆತ್ತಗೆ ನಡೆದುಕೊಂಡು ಬರುತ್ತಾರೆ.)

ಒಬ್ಬ : (ಉಸ್ಸೆಂದು ಉಸಿರ್ಗರೆದು) ಇನ್ನೂ ಎಷ್ಟು ದೂರವಿದೆಯೋ ಅಯೋಧ್ಯಾ ನಗರಿ!

ಇನ್ನೊಬ : ಬೋಧಿಗಯಾ ಅದಕ್ಕೂ ದೂರವಿರಬಹುದಲ್ಲವೆ?

ಒಬ್ಬ : ಯಾರು ಬಲ್ಲರು? ಬುದ್ಧ ಭಗವಾನನಿಗೆ ಜನ್ಮವಿತ್ತ ಪವಿತ್ರ ಭಾರತ ದೇಶದ ಯಾತ್ರೆಗಾಗಿ ಮೊದಲ ಸಲ ಹೊರಟಿದ್ದೇವೆ. ಆ ದೈತ್ಯ ಮಿಹಿರಕುಲನ ಹತ್ಯಾಕಾಂಡ ಪ್ರಾರಂಭವಾಗದಿದ್ದರೆ ಕಾಶ್ಮೀರದ ಗಿರಿ ಗುಹೆಗಳಲ್ಲಿಯೇ ದಿನಗಳೆಯುತ್ತಲಿದ್ದೆವು. ಈ ಪವಿತ್ರಯಾತ್ರೆಯ ಯೋಗ ದೊರೆಯುತ್ತಿರಲಿಲ್ಲ. ಇದಕ್ಕಾಗಿಯಾದರೂ ಮಿಹಿರಕುಲನನ್ನು ನೆನೆಯಬೇಕು ನಾವು.

ಮತ್ತೊಬ್ಬ : (ರೇಗಿ) ಆ ಪಾತಕಿಯ, ಘಾತುಕನ ಹೆಸರೆತ್ತದಿರಿ... (ತೆರೆಯ ಹಿಂದೆ ಮತ್ತೆ ಘೋರಸ್ವರ... "ಕಟ್ಟಿರೀ ಕುನ್ನಿಗಳನ್ನು... ಅಟ್ಟಿರಿ ಯಮಸದನಕ್ಕೆ!" ಭಿಕ್ಷುಗಳು ಭೀತರಾಗಿ ಚೆದುರುವರು. ಮಿಹಿರಕುಲನ ದೂತರು ಧಾವಿಸಿ ಬಂದು ಅತ್ತಿತ್ತ ನೋಡಿ)

ದೂತ : ಎತ್ತ ತಪ್ಪಿಸಿಕೊಂಡು ಹೋದರೋ ಈ ಬೂಟಾಟಿಕೆಯ ಭಿಕ್ಷುಗಳು. ಇವರನ್ನು ಬೆನ್ನಟ್ಟಿಕೊಂಡು ಕಾಡಿನಿಂದ ಕಾಡಿಗೆ ಕಂದರದಿಂದ ಕಂದರಕ್ಕೆ ಅಲೆಯಬೇಕಾಗಿ ಬಂದಿತಲ್ಲ.

ಇನ್ನೊಬ್ಬ ದೂತ : ಈ ಬಡಪಾಯಿಗಳನ್ನು ಬಂಧಿಸಿ ಯಾವ ಪುರುಷಾರ್ಥವನ್ನು ಸಾಧಿಸಬೇಕಾಗಿದೆಯೋ ಮಿಹಿರಕುಲ ಮಹಾರಾಜರಿಗೆ?

ಮತ್ತೊಬ್ಬ ದೂತ : ನಿನಗೆ ರಾಜಕಾರಣ ತಿಳಿಯದು ಬೆಪ್ಪೆ. ಈ ಬೌದ್ಧ ಭಿಕ್ಷುಗಳನ್ನು ಹಿಂಸಿಸಿ ಇಲ್ಲಿಂದ ಓಡಿಸಿ ಮಿಹಿರಕುಲ ಮಹಾಪ್ರಭುಗಳು ತಮ್ಮ ರಾಜ್ಯವನ್ನು ವಿಸ್ತರಿಸಿಕೊಳ್ಳಬೇಕೆಂದಿದ್ದಾರೆ.

ಮೊದಲಿನ ದೂತ : ಅವರ ಸಂಘಾರಾಮಗಳನ್ನು ಸೇರಿಸಿಕೊಳ್ಳುವುದರಿಂದ ರಾಜ್ಯ ಬೆಳೆಯುವುದೆ? ಅವು ಇದಾಗಲೇ ಮಿಹಿರಕುಲ ಭೂಪಾಲರ ರಾಜ್ಯದಲ್ಲಿಯೇ ಇವೆಯಲ್ಲ?

ಎರಡನೆಯ ದೂತ : ನಿಜ, ಈ ಸಂಘಾರಾಮಗಳಲ್ಲಿ ಏನಿದೆ ಮಣ್ಣು? ಇವುಗಳನ್ನು ಆಕ್ರಮಿಸಿಕೊಂಡು ಯಾವ ಪ್ರಯೋಜನ ಪಡೆಯಬಹುದು?

ಮೂರನೆಯವ : ಇಷ್ಟು ತಿಳಿಯದೇನೊ ತಲೆಯಿಲ್ಲದವನೆ-ಒಂದು ಆಕ್ರಮಣದಿಂದ ಇನ್ನೊಂದು ಆಕ್ರಮಣಕ್ಕೆ ದಾರಿ ದೊರೆಯುತ್ತದೆ.

ಮೊದಲಿನವ : ಇನ್ನಾವ ಹೊಸ ಆಕ್ರಮಣ?

ಮೂರನೆಯವ : ಯಾಕೆ ಅವಸರಪಡುವಿ? ಕೆಲದಿನಗಳಲ್ಲಿ ತಾನೇ ತಿಳಿಯುವದು, ನಡೆಯಿರಿ, ಆ ಭಿಕ್ಷುಕರ ಬೆನ್ನಟ್ಟಿ ಹೋಗೋಣ. ಪಾತಾಳವನ್ನು ಹೊಕ್ಕರೂ ಅವರನ್ನು ಬಂಧಿಸದೆ ಬಿಡೆವು. (ಹೋಗುವರು. ಹೋದ ತುಸು ಹೊತ್ತಿನಲ್ಲಿ ತೆರೆಯ ಹಿಂದೆ ಮಿಹಿರಕುಲನ ದೂತರು 'ಹಿಡಿಯಿರಿ, ಹೊಡೆಯಿರಿ' ಎಂದು ಕೂಗಿದುದು ಚಾಟಿಯ ಏಟುಗಳನ್ನು ಹಾಕಿದುದೂ, ಭಿಕ್ಷುಗಳು 'ಬುದ್ಧಂ ಶರಣಂ ಗಚ್ಛಾಮಿ' ಎಂದುದೂ, ಅದಕ್ಕೆ ಮಿಹಿರಕುಲ ದೂತರು ಗಹಗಹಿಸಿ ನಕ್ಕು ಮತ್ತೆ ಏಟು ಹಾಕಿದುದೂ ಕೇಳಿಬರುವುವು.)

(ತೆರೆ ಸಾವಧಾನವಾಗಿ ಮೇಲೇಳುವುದು)

ನೋಟ ೩

(ಅಯೋಧ್ಯೆಯಲ್ಲಿ ಮಗಧಾಧಿಪತಿ ಬಾಲಾದಿತ್ಯನ ಅಂತಃಪುರ. ಎರಡೂ ಬದಿಗೆ ರಾಜೋಚಿತವಾಗಿ ಅಲಂಕೃತವಾಗಿರುವ ಎರಡು ಮಂಚಗಳು. ತೆರೆ ಎದ್ದಾಗ ಎರಡೂ ಮಂಚಗಳಲ್ಲಿ ಎರಡು ವ್ಯಕ್ತಿಗಳು ಮಲಗಿರುವುದು ಮಸಕು ಮಸಕಾಗಿ ಕಾಣಿಸುತ್ತದೆ–ಮಣಿದೀಪದ ಮಂದ ಪ್ರಕಾಶದಲ್ಲಿ. ಮಧ್ಯರಾತ್ರಿಯ ಪ್ರಹರ ಮುಗಿದು ಮುಂದಿನ ದಿನದ ಆರಂಭವನ್ನು ಸೂಚಿಸುವ ಪ್ರಹರಿಯ ಧ್ವನಿ ಕಾಳರಾತ್ರಿಯ ನಿಶ್ಯಬ್ದತೆಯನ್ನು ಭೇದಿಸಿಕೊಂಡು ಬರುತ್ತದೆ. ಬಲಬದಿಯ ಮಂಚದಲ್ಲಿ ಮಲಗಿದ್ದ ವ್ಯಕ್ತಿ ದಿಗ್ಗನೆದ್ದು ಕೊಡಹಿ ಸುತ್ತಲೂ ನೋಡಿ–)

ಬಾಲಾದಿತ್ಯ : ಚಾಟಿಯ ಏಟು ಕೊಟ್ಟು ಎಬ್ಬಿಸಿದೆಯಾ ದುಃಸ್ವಪ್ನವೆ! ಎಂದಿಲ್ಲದ ದುಃಸ್ವಪ್ನ–ನಿದ್ರಾಭಂಗ! ಎನಿತು ಕರಾಳವೀ ಕಾಳರಾತ್ರಿ! ಇದರ ಭೀಕರತೆಗೆ ತಕ್ಕ ಭಯಂಕರ ಸ್ವಪ್ನ! ಎಲ್ಲಿಯೋ ದೂರದಲ್ಲಿ ಸೈತಾನೀ ಶಕ್ತಿಗಳ ಆರ್ಭಟ, ಅಟ್ಟಹಾಸ! ಆ ದೈತ್ಯ ಶಕ್ತಿಗಳ ದಾಳಿಗೆ, ದಬ್ಬಾಳಿಕೆಗೆ ತುತ್ತಾದ ನಿರ್ದೋಷಿ, ನಿರಪರಾಧಿ ಪ್ರಜೆಗಳ ಹಾಹಾಕಾರ! ಅದನ್ನು ಕಂಡು ಆ ಅಸುರೀಶಕ್ತಿಗಳ ಗಹಗಹಿಕೆ, ಕೇಕೆ, ಕೋಲಾಹಲ

ಕಂಡರೆ ಕೆರೆ ಬಾವಿ ದೇಗುಲಗಳನ್ನು ಕಟ್ಟುತ್ತಲಿರುವ ಸಂಭ್ರಮದ ಸ್ವಪ್ನಗಳನ್ನೇ ಕಾಣುತ್ತಲಿದ್ದ ಈ ಬಬಾಲಾದಿತ್ಯನಿಗೆ ಇಂದು ಈ ಅನಿಷ್ಟಸ್ವಪ್ನ ಕಾಣಲು ಕಾರಣ? ಸ್ವಪ್ನ ಸುಂದರಿ, ನಿನ್ನ ಮನೋಹರ ಮುಖವನ್ನು ಮರೆಮಾಡಿ ನನಗಿಂದು ನಿನ್ನ ವಿಕೃತ ರೂಪವನ್ನೇಕೆ ತೋರಿದೆ? ಯಾವ ಅನಾಹುತದ ಮುನ್‌ಸೂಚನೆಯಿದು? (ಇನ್ನೊಂದು ಮಂಚದ ಬಳಿ ಹೋಗಿ ಮಲಗಿರುವ ಸತಿಯನ್ನು ಎಬ್ಬಿಸುವಂತೆ ನಟಿಸಿ)

ಮಿತ್ರಾ, ಮಿತ್ರಾ!.... (ಎಂದು ಮೆಲ್ಲನೆ ಕರೆದು ತಡೆದು) ಬೇಡ, ಇವಳನ್ನು ಎಬ್ಬಿಸುವುದು ಬೇಡ. ಸುಂದರ ಸ್ವಪ್ನವೊಂದನ್ನು ಕಾಣುತ್ತ ಸುಖನಿದ್ರೆಯಲ್ಲಿರುವ ಇವಳನ್ನು ಎಬ್ಬಿಸುವುದು ಬೇಡ. ತ್ರಿಲೋಕವೀರ ತಾತಂದಿರಿದ್ದಾರೆ. ಅವರನ್ನೇ ವಿಚಾರಿಸುವೆ. (ಪ್ರಕಾಶ ಇನ್ನೂ ಪ್ರಖರವಾಗುತ್ತವೆ. ಗೋಡೆಗೆ ತೂಗುಬಿಟ್ಟಿರುವ ಸ್ಕಂದಗುಪ್ತನ ಚಿತ್ರ ಕಂಗೊಳಿಸುತ್ತದೆ– ಭಾರತಮಾತೆ ವರದಹಸ್ತವನ್ನಿರಿಸಿರುವ ಸ್ಕಂದಗುಪ್ತನ ಚಿತ್ರ.)

ತಾತ, ಹೂಣ ವಿಜೇತ! ಇಂದೇಕೆ ನಿಮ್ಮ ಸದಾಸಸ್ಮಿತ ಮುಖ ಗಹನ ಗಂಭೀರವಾಗಿ ತೋರುತ್ತಿದೆ? ನೀವು ಕಟ್ಟಿದ ಗುಪ್ತ ಸಾಮ್ರಾಜ್ಯಕ್ಕೆ ಶತ್ರುಭಯವೇನಾದರೂ ಸಂಭವಿಸಲಿದೆಯೆ? ಇಲ್ಲ ತಾತ, ನೀವೇ ಆಶೀರ್ವದಿಸಿ ಬೆಳೆಸಿದ ಈ ಬಾಲಾದಿತ್ಯನ ಬಾಹುಗಳಲ್ಲಿ ನೀವೇ ನೀಡಿದ ಸೋಲರಿಯದ ಶಸ್ತ್ರಾಸ್ತ್ರಗಳಿರುವವರೆಗೆ ನಿಮ್ಮ ಸಾಮ್ರಾಜ್ಯಕ್ಕೆ ವೈರಿಭಯವಿಲ್ಲ! (ಭಾರತಮಾತೆಯ ಚಿತ್ರದತ್ತ ಹೊರಳಿ) ಮಾತೆ, ಭುವನವಂದಿತ ಭಾರತ ಮಾತೆ, ನಿನ್ನ ಸಂತಾನ

ಸಿಂಹಸಂತಾನ. ಅವರ ಸಾಮ್ರಾಟನಾಗಿ ಈ ನರಸಿಂಹನಿರುವವರೆಗೆ ವೈರಿಗಳ ಕರಾಳಛಾಯೆ ನಿನ್ನ ಮೇಲೆ ಬೀಳಲಾರದು, ಬೀಳಲಾರದು! (ಉದ್ವೇಗ ಹೆಚ್ಚಲು ಉಚ್ಚ ಸ್ವರದಲ್ಲಿ) ನನ್ನ ಧಮನಿಗಳಲ್ಲಿ ರಕ್ತದ ಬಿಂದುವೊಂದು ಉಳಿದಿರುವವರೆಗೆ ನಿನ್ನ ಗೌರವಕ್ಕೆ, ಘನತೆಗೆ, ಸಾರ್ವಭೌಮಸ್ಥಾನಕ್ಕೆ ಚ್ಯುತಿ ಬರದು ತಾಯೆ, ಖಂಡಿತವಾಗಿ ಚ್ಯುತಿ ಬರದು!

ಮಿತ್ರಾದೇವಿ : (ಈ ಸ್ವರಕ್ಕೆ ಎಚ್ಚತ್ತು ಎದ್ದು ಬಂದು) ಆರ್ಯ, ತಮಗೇಕೆ ನಿದ್ರಾಭಂಗ ಸಂಭವಿಸಿತು? ಇಂದೇಕೆ ಉದ್ವಿಗ್ನರಾಗಿರುವಿರಿ?

ಬಾಲಾದಿತ್ಯ : ದುಃಸ್ವಪ್ನ ದೇವಿ, ದುಃಸ್ವಪ್ನ. ದೇಶದ ಮೇಲೆ ದೈತ್ಯಶಕ್ತಿಗಳ ದುರಾಕ್ರಮಣ ನಡೆದುದನ್ನು, ಧರ್ಮದ ಮೇಲೆ ಅಧರ್ಮದ ದಾಳಿ ನಡೆದುದನ್ನು, ಸತ್ಯದ ಮೇಲೆ ಅಸತ್ಯದ ಹಾವಳಿ ನಡೆದುದನ್ನು ತೋರಿದ ಘೋರ ಸ್ವಪ್ನ!

ಮಿತ್ರಾ : ಸ್ವಾಮಿ, ಬಿರುಗಾಳಿಗೆ ಮರ ಮುರಿದು ಬಿದ್ದಾವು, ಮೇರುಪರ್ವತಕ್ಕಾವ ಭಯ? ತಾವೇಕೆ ಕಳವಳಕ್ಕೊಳಗಾಗಬೇಕು?

ಬಾಲಾದಿತ್ಯ : ದೇವಿ, ನಾನು ಸುರಕ್ಷಿತನಾಗಿದ್ದರೆ ಸಾಕೆ? ನನ್ನ ನೆಚ್ಚಿನ ಪ್ರಜೆಗಳಲ್ಲಿ ಒಬ್ಬರು ದುಷ್ಟ ಶಕ್ತಿಗಳ ದಬ್ಬಾಳಿಕೆಗೆ ಒಳಗಾದರೂ ನಾನದನ್ನು ಸಹಿಸಿ ಸುಮ್ಮನಿರಬಲ್ಲೆನೆ? ನನ್ನ ಪ್ರಜೆಗಳೆಲ್ಲರೂ ಸುಖೀರಾಜ್ಯದ ಸುಮಧುರ ಫಲಗಳನ್ನು ಪಡೆಯಲೆಂದು ಹಗಲಿರುಳೂ ಜನಕಲ್ಯಾಣ ಕಾರ್ಯಗಳಲ್ಲಿಯೇ ನಿಮಗ್ನನಾಗಿರುವ ನನಗೆ ಅಕಸ್ಮಾತ್ ಯುದ್ಧಜ್ವಾಲೆಯೇನಾದರೂ ಹರಡಿ, ಈ ಪ್ರಜಾಹಿತ ಕಾರ್ಯಗಳೆಲ್ಲ ದಗ್ಧವಾಗಿ, ಪ್ರಜೆಗಳು ಮತ್ತೆ ಯುದ್ಧದ ವಿಷಫಲಗಳನ್ನು ಅನುಭವಿಸಬೇಕಾಗಿ ಬಂದುದನ್ನು ನೋಡುವ ಅಮಂಗಲ ಪ್ರಸಂಗವೇನಾದರೂ ಒದಗಿದರೆ ನಾನದನ್ನು ಸಹಿಸಬಲ್ಲೆನೆ?

ಮಿತ್ರಾ : ತಮ್ಮ ಸಾಮ್ರಾಜ್ಯದ ಗಡಿಗಳೆಲ್ಲ ಸುಭದ್ರವಾಗಿರುವಾಗ ತಮಗೇಕೆ ವ್ಯಾಕುಲ ಸ್ವಾಮಿ?

ಬಾಲಾದಿತ್ಯ : ಶಾಂತಿಕಾಲಕ್ಕೆ ತಕ್ಕಷ್ಟು ಸುಭದ್ರವಾಗಿವೆ ಮಿತ್ರಾ, ಸಮರಕಾಲಕ್ಕೆ ಸಾಕಾಗುವಷ್ಟು ಸುಭದ್ರವಾಗಿಲ್ಲ. ಪ್ರಜೆಗಳ ಸಾಂಪತ್ತಿಕ ಸ್ಥಿತಿಯನ್ನು ಉತ್ತಮಗೊಳಿಸುವ ಭರದಲ್ಲಿ ಹಿಮಗಿರಿಯವರೆಗೆ ಹಬ್ಬಿರುವ ಈ ಸಾಮ್ರಾಜ್ಯದ ಉತ್ತರದ ಗಡಿಗಳನ್ನು ಅಭೇದ್ಯವೆನಿಸುವಷ್ಟು ಸುಭದ್ರಗೊಳಿಸಲಾಗಲಿಲ್ಲ.

ಮಿತ್ರಾ : ಹಾಗಾದರೆ ರಾಷ್ಟ್ರರಕ್ಷಣೆಗೆ ಇಂದಿನಿಂದ ಪ್ರಥಮಸ್ಥಾನ ನೀಡಿರಿ ಸ್ವಾಮಿ–ರಾಷ್ಟ್ರದ ರಕ್ಷಣೆಗೆ ಆದ್ಯತೆಕೊಡಿರಿ! ಪ್ರಜಾಹಿತ ತಮ್ಮ ಕರ್ತವ್ಯವಾದರೆ ರಾಷ್ಟ್ರರಕ್ಷಣೆ ತಮ್ಮ ಧರ್ಮ. ಇಂದಿನಿಂದ, ಈ ಕ್ಷಣದಿಂದ ಸಮರ ಸಿದ್ಧತೆ ತಮ್ಮ ಸಂಪೂರ್ಣಲಕ್ಷ್ಯವನ್ನು ಸೆಳೆಯಲಿ!

ಬಾಲಾದಿತ್ಯ : ನಿಜ ನುಡಿದೆ ಮಿತ್ರಾ, ಸಂಪದ್ಭರಿತ ರಾಷ್ಟ್ರವನ್ನು ಕಟ್ಟುವಾಗ ಆ ಸಂಪತ್ತಿನ ಕಡೆಗೆ ಶತ್ರುಗಳ ಕಾಕದೃಷ್ಟಿಯಿಂದ ನೋಡುವ ಸಾಹಸ ಮಾಡದಂತೆ ಅದನ್ನು ಅಜೇಯ ಸೈನಿಕ ಶಕ್ತಿಯ ವಜ್ರವ್ಯೂಹದಲ್ಲಿ ಸುರಕ್ಷಿತವಾಗಿರಿಸಬೇಕೆಂಬುದನ್ನು ಇಂದು ಮನಗಂಡೆ. ಗಡಿರಕ್ಷಣೆಯ ಕಾರ್ಯವನ್ನು ಇದುವರೆಗೆ ಕಡೆಗಣಿಸಿದಂತೆ ಇನ್ನು ಕಡೆಗಣಿಸೆ. ಶತ್ರು ದಮನವೇ ಕರ್ಮ, ದೇಶ ರಕ್ಷಣೆಯೇ ಧರ್ಮ!

ಮಿತ್ರಾ : ಇದುವೆ ರಾಜಧರ್ಮದ ಮರ್ಮ.

ಬಾಲಾದಿತ್ಯ : ಒಪ್ಪಿದೆ, ಅಂತಃಪುರದ ಮಂತ್ರಿ ಒಪ್ಪಿದೆ. ಇಂದಿನಿಂದ ನನ್ನ ರಾಜ್ಯ ನೀತಿ ಹೊಸ ದಿಶೆಯಲ್ಲಿ ನಡೆಯುವುದು. ಈ ಸಾಮ್ರಾಜ್ಯದ ಸರ್ವಶಕ್ತಿಗಳನ್ನು ಸಂಘಟಿಸಿ ಈ ದೇಶ ಅಜಿಂಕ್ಯವಾಗುವಂತೆ ಮಾಡುವೆನೆಂದು ಇಂದು ಭಾರತಮಾತೆಯ ಪಾದಸಾಕ್ಷಿಯಾಗಿ ಪ್ರತಿಜ್ಞೆ ಗೈಯುವೆ! ಇದು ನೋಡು, ಇದುವರೆಗೆ ಗಂಭೀರವಾಗಿದ್ದ ತಾತನ ವದನವೀಗ ಪ್ರಸನ್ನವಾಗಿ ತೋರತೊಡಗಿದೆ. ನೆನಪಾಯಿತು, ನೀನು ಕಟ್ಟಿದ ಸಾಮ್ರಾಜ್ಯದ ಒಂದಂಗುಲವೂ ವೈರಿವಶವಾಗದಂತೆ ನೋಡಿಕೊಳ್ಳುವೆನೆಂದು ದೇವತಾ ಸ್ವರೂಪಿ ತಾತನಿಗೆ ವಚನವಿತ್ತಿದ್ದೆ. ಆದರೆ ತಾತನು ಹೊಡೆದೋಡಿಸಿದ್ದ ಹೂಣರು ಮತ್ತೆ ಮಿಹಿರಕುಲನ ನೇತೃತ್ವದಲ್ಲಿ ಕಾಶ್ಮೀರ, ಗಾಂಧಾರಗಳನ್ನು ಆಕ್ರಮಿಸಿಕೊಂಡರೂ ಸಹಜೀವನದ ತತ್ವದಂತೆ ಆ ಕಂಗಾಲರು ಅಲ್ಲಿಯಾದರೂ ಬದುಕಿಕೊಳ್ಳಲಿ–ಎಂದು ಇದುವರೆಗೆ ಅದನ್ನು ಅಲಕ್ಷಿಸಿದ್ದೆ. ಈ ನನ್ನ ಔದಾರ್ಯವನ್ನು ದೌರ್ಬಲ್ಯವೆಂದು ಗ್ರಹಿಸಿ ಆ ಮದಾಂಧ ಮಿಹಿರಕುಲನು ಈಗ ಈ ದೇಶವನ್ನೇ ನುಂಗಿ ನೀರು ಕುಡಿಯಲು ಹೊಂಚುಹಾಕುತ್ತಿರಬಹುದು. ನಾನು ಕಂಡ ದುಃಸ್ವಪ್ನಕ್ಕೆ ಇದೇ ಅರ್ಥ. (ಸ್ಕಂದಗುಪ್ತನ ಚಿತ್ರದೆದುರು ವೀರಮಂಡಿಯೂರಿ) ತಾತ, ಇದುವರೆಗಿನ ನನ್ನ ನಿರ್ಲಕ್ಷ್ಯವನ್ನು ಕ್ಷಮಿಸು. ನೀನು ಪ್ರಾರಂಭಿಸಿದ ಅಜೇಯ ಭಾರತ ನಿರ್ಮಾಣ ಕಾರ್ಯ ಪೂರ್ಣವಾಗುವವರೆಗೆ ನಿನ್ನ ಮೊಮ್ಮಗನಿಗೆ ವಿಶ್ರಾಂತಿಯಿಲ್ಲವೆಂದು ತಿಳಿ. ಆಶೀರ್ವದಿಸು ತಾತ, ಆಶೀರ್ವದಿಸು–ಈ ಮಹತ್ತರವಾದ ಮಣಿಹದಲ್ಲಿ ನನಗೆ ಅಖಂಡ ವಿಜಯ ಪ್ರಾಪ್ತವಾಗಲೆಂದು ನನ್ನನ್ನು ಆಶೀರ್ವದಿಸು. (ನಮಸ್ಕರಿಸುವನು)

ಮಿತ್ರಾ : (ತಾನೂ ನಮಸ್ಕರಿಸಿ) ನನ್ನ ಪತಿಯ ಕಾರ್ಯದಲ್ಲಿ ಸಹಕರಿಸಿ ಪತಿಗೆ ತಕ್ಕ ಸತಿಯಾಗುವಂತೆ ನನ್ನನ್ನೂ ಆಶೀರ್ವದಿಸು ತಾತ!

ಬಾಲಾದಿತ್ಯ : (ಹಿಗ್ಗಿ ಮೇಲೆದ್ದು ಮಿತ್ರಾದೇವಿಯನ್ನೂ ಮೇಲೆತ್ತಿ) ಮಿತ್ರಾ, ಮಿತ್ರಾ, ಈ ಕಾರ್ಯದಲ್ಲಿ ನೀನೂ ಸಹಕರಿಸುವೆಯಾ? ಹೇಗೆ?

ಮಿತ್ರಾ : ಈ ಸಾಮ್ರಾಜ್ಯದ ಸ್ತ್ರೀಶಕ್ತಿಯನ್ನು ಸಂಘಟಿಸಿ! ಇದುವರೆಗೆ ಮಂಗಳ ಗೌರಿಯ ಪೂಜೆ ಮಾಡುತ್ತಲಿದ್ದ ನಾನು ಇಂದಿನಿಂದ ಮಹಾಕಾಳಿಯ ಮಹಾದುರ್ಗೆಯ, ಮಹಿಷಾಸುರಮರ್ಧಿನಿಯ ಪೂಜೆ ಪ್ರಾರಂಭಿಸುವೆ. ಈ

ಸಾಮ್ರಾಜ್ಯದ ನನ್ನ ಸೋದರಿಯರೆಲ್ಲರೂ ಕೆರಳಿದ ಕೇಸರಿಣಿಯರಾಗುವಂತೆ ಅವರ ಆತ್ಮಶಕ್ತಿಯನ್ನು ಪುಟಗೊಳಿಸುವೆ! ರಣರಂಗದಲ್ಲಿ ಕಲಿತನದಿಂದ ಕಾದುವ ಪುರುಷಶಕ್ತಿಗೆ ಗೃಹರಂಗದ ಸ್ತ್ರೀಶಕ್ತಿ ಪಾವನರಕ್ಷೆಯಾಗಿ ಪರಿಣಮಿಸುವಂತೆ ಪ್ರಯತ್ನಿಸುವೆ!

ಬಾಲಾದಿತ್ಯ : ಸಾವಿತ್ರಿ ಸೀತೆಯರ ಸಂತಾನಕ್ಕೆ ತಕ್ಕ ಮಾತನಾಡಿದೆ ಮಿತ್ರಾ. ಯುದ್ಧ ಶಾಂತಿಗಳೆರಡರಲ್ಲೂ ನನಗೆ ಸ್ಫೂರ್ತಿಯಾಗಿ ನಿಂತಿರುವ ನಿನ್ನನ್ನು ಕೈಹಿಡಿದ ನಾನೇ ಧನ್ಯನು!

ಮಿತ್ರಾ : ಭಾರತವೀರ ಬಾಲಾದಿತ್ಯರ ಕೈಹಿಡಿದ ಮಿತ್ರಾ ಧನ್ಯಳಲ್ಲವೇನು? ನಡೆಯಿರಿ. ಇನ್ನಾದರೂ ವಿಶ್ರಮಿಸಿರಿ.

ಬಾಲಾದಿತ್ಯ : ವಿಶ್ರಮಿಸೆಂದು ಹೇಳದಿರು ಮಿತ್ರಾ, ಶ್ರಮಿಸೆಂದು ಹೇಳು!

ಮಿತ್ರಾ : ವಿಶ್ರಮಿಸದೆ ಈ ಕಾಳರಾತ್ರಿಯಲ್ಲಿ ಮಾಡುವಿರೇನನ್ನು?

ಕಾಲಾದಿತ್ಯ : ಇನ್ನೇನು, ಗುರುವರ ವಸುಬಂಧುಗಳು ಉಪ್ಪವಡಿಸುವ ಬ್ರಾಹ್ಮೀ ಕಾಲ ಸಮೀಪಿಸಿತು. ನಾನೂ ಸ್ನಾನಮಾಡಿ ಅವರ ದರ್ಶನಕ್ಕೆ ಹೋಗುವೆ. ನಾನು ಈ ದೇಶದ ಬಹಿರಂಗ ಸಾಮ್ರಾಜ್ಯದ ಸಾಮ್ರಾಟನಾದರೆ ಅವರು ಇದರ ಅಂತರಂಗ ಸಾಮ್ರಾಜ್ಯದ ಅಧ್ಯಕ್ಷರು. ಅವರ ಸಲಹೆಯನ್ನು ಪಡೆದೇ ಮುಂದಿನ ಕಾರ್ಯ ಪ್ರಾರಂಭಿಸುವೆನು.

ಮಿತ್ರಾ : ನಾನೂ ಗುರುಗಳ ದರ್ಶನಕ್ಕೆ ಬರಲೆ?

ಬಾಲಾದಿತ್ಯ : ಅಗತ್ಯವಾಗಿ.

(ಇಬ್ಬರೂ ಹೊರಡುವರು. ತೆರೆ ಬೀಳುವುದು)

ನೋಟ ೪

(ಅದೇ ಸಮಯಕ್ಕೆ ಅಯೋಧ್ಯೆಯಲ್ಲಿ ಇನ್ನೊಂದೆಡೆಗೆ-ರಾಜಮಾರ್ಗದಲ್ಲಿ ಮಿಹಿರುಕುಲನ ದೂತರ ಕಣ್ಣುತಪ್ಪಿಸಿ ಪಾರಾಗಿ ಬಂದ ಬೌದ್ಧಭಿಕ್ಷುಗಳು ಪ್ರವೇಶಿಸುತ್ತಾರೆ. ದಣಿದ ದೇಹ, ದಣಿದ ದೃಷ್ಟಿಗಳಿಂದ ದೈನ್ಯವೇ ದೇಹ ಧರಿಸಿದಂತೆ ತೋರುತ್ತಾರೆ.)

ಭಿಕ್ಷು ೧ : ಸಾವಿನ ದವಡೆಯನ್ನು ದಾಟಿ ಅಮರ ಅಯೋಧ್ಯಾನಗರಿಯನ್ನಂತೂ ಸೇರಿದೆವು. ಇಲ್ಲಿಯೂ ನಮಗೆ ಆಶ್ರಯ ದೊರೆಯದಿದ್ದರೆ ದೇವರೇ ಗತಿ!

ಭಿಕ್ಷು ೨ : ನಿನ್ನ ತಳ್ಳಂಕ ಶಂಕೆಯಾಗಿ ಹೊರಬಿದ್ದಿದೆ ಬಂಧು. ಇಂಥ ಶಂಕೆಗೆ ಆಸ್ಪದವೀಯಬೇಡ. ಸಂಶಯಾತ್ಮನಿಗೆ ಸುಖವಿಲ್ಲ. ಭಾರತದೇಶ ಆಶ್ರಯವನ್ನು

ಬಯಸಿ ಬಂದವರನ್ನು ಇಂದಿನವರೆಗೂ ಹಿಂದಕ್ಕೆ ಕಳಿಸಿಲ್ಲ–ತೆರೆದ ತೋಳುಗಳಿಂದ ಸ್ವಾಗತಿಸಿದೆ. ಅದರಲ್ಲೂ ಅಯೋಧ್ಯೆ ನಂಬಿ ಬಂದವರನ್ನು ನಿರಾಕರಿಸುವುದೆ? ನಿನಗಿಂಥ ಸಂದೇಹ ಬಂದಿತಾದರೂ ಏಕೆ?

ಭಿಕ್ಷು ೧ : ಮಿಹಿರಕುಲನ ಕ್ರೋಧಕ್ಕೆ ಗುರಿಯಾಗಬಾರದೆಂದು ಬಾಲಾದಿತ್ಯ ಮಹಾಪ್ರಭುಗಳು ಯೋಚಿಸಿದರೆ.....

ಭಿಕ್ಷು ೨ : (ನಡುವೆ ಬಾಯಿಹಾಕಿ) ಮಹಾವೀರ, ಮಹೋದಾರ ಬಾಲಾದಿತ್ಯ ಮಹಾಪ್ರಭುಗಳ ಉಜ್ವಲ ವ್ಯಕ್ತಿತ್ವವೇ ನಿನಗೆ ಅರ್ಥವಾಗಿಲ್ಲ ಸೋದರ. ಮಿಹಿರಕುಲನ ಕ್ರೋಧಕ್ಕೆ ಅಂಜುವರೆ ಭಯವೆಂದರೇನೆಂಬುದನ್ನರಿಯದ ಬಾಲಾದಿತ್ಯರು? ಮಿಹಿರಕುಲನೇನಾದರೂ ಮೂಢತನದಿಂದ ಮಗದಾಧಿಪತಿ ಬಾಲಾದಿತ್ಯರನ್ನು ಕೆಣಕಿದರೆ ತಮಸ್ಸು ತೇಜಸ್ಸನ್ನು ಕೆಣಕಿದಂತಾಗುವುದು.

ಭಿಕ್ಷು ೧ : ತಥಾಗತನ ತಾಯ್ನಾಡಿಗೆ ಯಾತ್ರಿಕರಾಗಿ, ಶಾಂತಿದೂತರಾಗಿ ಬರಬೇಕಾಗಿದ್ದ ನಾವು ನಿರಾಶ್ರಿತರಾಗಿ, ಯುದ್ಧಭೀತಿಯ ದೂತರಾಗಿ ಬರಬೇಕಾಯಿತು!

ಭಿಕ್ಷು ೨ : ನಿಜ. ಇದರಷ್ಟೇ ಇನ್ನೊಂದು ಮಾತು ನಿಜ: ಮಿಹಿರಕಲನು ನಮ್ಮ ನೆಪವನ್ನೇ ಮುಂದೆಮಾಡಿ ಬಾಲಾದಿತ್ಯರ ಮೇಲೇರಿ ಬಂದುದೇ ಆದರೆ ಎಂದೂ ಆಯುಧ ಹಿಡಿಯದ ನಮ್ಮ ಕೈಗಳೂ ಆಯುಧ ಧರಿಸಿ ಮಿಹಿರಕುಲನನ್ನು ಎದುರಿಸುವುವು!

ಭಿಕ್ಷು ೧ : ನಿಶ್ಚಯವಾಗಿ ಇದು ನನ್ನ, ಅಲ್ಲ, ನಮ್ಮ ಶಪಥ: ಬುದ್ಧ ಭಗವಾನನಿಗೆ ಜನ್ಮವಿತ್ತ ಭರತಭೂಮಿಯ ಮೇಲೆ ಯಾರೇ ವೈರಿಗಳು ಏರಿ ಬಂದರೂ ಬೌದ್ಧರೆಲ್ಲ ಯೋಧರಾಗಿ ಯುದ್ಧರಂಗಕ್ಕೆ ಧುಮುಕುವರು!

(ಹೋಗುವರು. ತೆರೆ ಏಳುವುದು. ಹಿಂದೆ ರಾಜಗುರು ವಸುಬಂಧುಗಳ ಆಶ್ರಯ ಕ್ರಮಕ್ರಮವಾಗಿ ಕಾಣತೊಡಗುವುದು. ತಮ್ಮ ಕುಟೀರದ ಮುಂದೆ ಬದ್ಧಪದ್ಮಾಸನಸ್ಥರಾಗಿ ಧ್ಯಾನಮಗ್ನರಾಗಿರುವ ದೇದೀಪ್ಯಮಾನ ಮುಖದ ವಸುಬಂಧುಗಳು ಕಾಣಿಸುವರು. ನಸುಹೊತ್ತಿನಲ್ಲಿ ನಿಮೀಲಿತನಯನರಾಗಿ ನುಡಿಯುವರು.)

ನೋಟ ೫

ವಸುಬಂಧು : ನಮೋ ಭಗವತೇ ಬುದ್ಧಾಯ, ಅರ್ಹಾಯ, ತಥಾ ಗತಾಯ...

ಬಾಲಾದಿತ್ಯ ಮಿತ್ರಾದೇವಿ : (ಪ್ರವೇಶಿಸಿ) ಪರಮಗುರುವಿಗೆ ಪೊಡಮಡುವೆವು.

ವಸುಬಂಧು : ವಿಜಯೀಭವ ಬಾಲಾದಿತ್ಯ, ಸುದೀರ್ಘ ಸುಮಂಗಲಿಯಾಗು ಮಿತ್ರಾದೇವಿ! ಈ ಸಮಯದಲ್ಲಿ ನೀವಿಲ್ಲಿಗೆ ಬರಲು ಕಾರಣ?

ಬಾಲಾದಿತ್ಯ : ಹಿಂದೆಂದೂ ಕಾಣದ ಕೆಟ್ಟ ಕನಸೊಂದನ್ನು ಕಂಡೆ ಗುರುದೇವ. ಸಾಮ್ರಾಜ್ಯಕ್ಕೆ, ಸ್ವಾತಂತ್ರ್ಯಕ್ಕೆ ಯಾವುದೋ ವಿಪತ್ತು ಒದಗಲಿದೆಯೆಂದು ಎನಿಸುತ್ತಿದೆ!

ವಸುಬಂಧು : ಇನ್ನಾವ ವಿಪತ್ತು? ಆ ಹೂಣರ ವಿಪತ್ತು! ನಿನ್ನ ತಾತನಿಂದ ಪರಾಭವ ಹೊಂದಿಯೂ ನಾಚಿಕೆಯಿಲ್ಲದೆ, ಮೊನ್ನೆ ತಾನೆ ಯಶೋಧರ್ಮರಿಂದ ಪರಾಜಿತರಾದರೂ ಲಜ್ಜೆಯಿಲ್ಲದೆ ಮತ್ತೆ ಮೇಲೇರಿ ಬರುವಂತಿದೆ ಆ ಪಾಪಿಗಳು! ತೋರಮಾನನ ಕ್ರೂರಪುತ್ರ ಮಿಹಿರಕುಲ ಈ ತಿಮಿರಕುಲಕ್ಕೆ ನಾಯಕ. ಆದರೆ ಭಯಬೇಡ ಬಾಲಾದಿತ್ಯ. ಬೆಳಕಿನ ಭೂಮಿ ಭಾರತ. ಭಾರತದ ಬೆಳಕಿನ ಮೇಲೆ ಕತ್ತಲೆಯ ದಾಳಿ ಹಿಂದೆ ಹಲವು ಸಲ ಆಗಿದೆ. ಈ ಬೆಳಕು ಕತ್ತಲೆಯ ಕೊಳುಗುಳದಲ್ಲಿ ಇಲ್ಲವೆ ಕತ್ತಲೆ ಬೆಳಕಿಗಂಜಿ ಪಲಾಯನ ಮಂತ್ರವನ್ನು ಜಪಿಸಿದೆ, ಇಲ್ಲವೆ ಬೆಳಕೇ ಕತ್ತಲೆಯನ್ನು ತನ್ನಂತೆ ಬೆಳಕನ್ನಾಗಿ ಮಾರ್ಪಡಿಸಿ ತನ್ನಲ್ಲಿಯೇ ಅರಗಿಸಿಕೊಂಡಿದೆ! ಜಗತ್ತಿನ ಕತ್ತಲೆಯೆಲ್ಲ ಒಟ್ಟಾಗಿ ದಾಳಿ ಮಾಡಿದರೂ ಒಂದು ಪುಟ್ಟ ದೀಪವನ್ನು ಆರಿಸಲಾರದು! ಭಾರತದ ಜಾಜ್ವಲ್ಯಮಾನವಾದ ಸ್ವಾತಂತ್ರ್ಯಜ್ಯೋತಿ ಆರುವುದೆ ಕತ್ತಲೆಯ ದಾಳಿಗೆ? ಬೆಳಕಿನ ಅಪ್ಪಳಿಕೆಗೆ ಕತ್ತಲೆ ಇಲ್ಲವೆ ಕಾಲ್ತೆಗೆಯುವುದು, ಇಲ್ಲವೆ ತಾನೂ ಬೆಳಕಾಗಿ ಭಾರತದಲ್ಲಿಯೇ ಬೀಡುಬಿಡುವುದು. ಇತ್ತ ನೋಡು, ಕಾಳರಾತ್ರಿಯ ಕಾಳಿಮೆ ಕರಗುತ್ತ ನಡೆದಿದೆ. ಎಲ್ಲಿಯೋ ಬೆಳಕಿನೊಡನೆ ಸಂಪರ್ಕವಾಗಿದೆ ಕತ್ತಲೆಗೆ. ಅದರ ಆಯುಷ್ಯ ತುಂಬಿಬಂದಿದೆ. ಅದರ ಬೆನ್ನೇರಿ ಬೆಳಕು ಬಂದೇ ಬರುವುದು. ನೀನು ಮಾತ್ರ ಸದಾ ಸಿದ್ಧನಾಗಿರು, ಸನ್ನದ್ಧನಾಗಿರು ಯುದ್ಧಕ್ಕೆ. ಯುದ್ಧ ಅನಿಷ್ಟವಾದುದು ನಿಜ. ಆದರೆ ಆತ್ಮರಕ್ಷಣೆ ಯುದ್ಧವಲ್ಲ-ಧರ್ಮ. ಧರ್ಮವನ್ನು ರಕ್ಷಿಸುವವನನ್ನು ಧರ್ಮ ರಕ್ಷಿಸುವುದು.

ಮಿತ್ರಾ : ಗುರುದೇವ, ತಮ್ಮ ಧರ್ಮಶಕ್ತಿ ರಾಜ್ಯಶಕ್ತಿಗೆ ಬೆಂಬಲವಾಗಿರುವವರೆಗೆ ಬಾಲಾದಿತ್ಯನಿಗೆ ಭಯವೆಲ್ಲಿ?

ವಸುಬಂಧು : ಸ್ತ್ರೀ ಶಕ್ತಿಯ ಸಂಕೇತದಂತಿರುವ ಮಿತ್ರಾದೇವಿ, ಈ ಎರಡು ಶಕ್ತಿಗಳಿಗೆ ಸ್ತ್ರೀ ಶಕ್ತಿಯೂ ಸೇರಿ ತ್ರಿವೇಣೀ ಸಂಗಮ ಸಿದ್ಧವಾಗಿದೆ. ಸ್ತ್ರೀಯ ಪ್ರೇರಕಶಕ್ತಿ, ಪುರುಷನ ಮಾರಕಶಕ್ತಿ, ಧರ್ಮದ ತಾರಕಶಕ್ತಿ ಮೂರೂ ಸೇರಿ ದೇಶವನ್ನು ರಕ್ಷಿಸಬಲ್ಲವು, ರಕ್ಷಿಸಬೇಕು.

ಬಾಲಾದಿತ್ಯ : ಈ ಮೂರು ಶಕ್ತಿಗಳೂ ಮುಪ್ಪುರಿಗೊಂಡು ಅಂತಕನ ಪಾಶವಾಗಿ ಮಿಹಿರಕುಲವನ್ನು ಹೆಡಮುರಿಗೆ ಕಟ್ಟಿ ಅಯೋಧ್ಯೆಗೆ ಎಳೆದು ತರಲಿ, ಗುರುದೇವ.

ವಸುಬಂಧು : ತಥಾಸ್ತು! ನೀನು ಯುದ್ಧದ ಸಿದ್ಧತೆ ಪ್ರಾರಂಭಿಸು; ಮಿತ್ರಾದೇವಿ ಮಹಿಳೆಯರನ್ನು ಸಂಘಟಿಸಲಿ; ನಾವು.........

ಬಾಲಾದಿತ್ಯ : (ಚಕಿತನಾಗಿ) ತಾವು........

ವಸುಬಂಧು : (ನಡುವೆ ಬಾಯಿಹಾಕಿ) ಹೌದು, ನಾವೂ ದೇಶರಕ್ಷಣೆಯ ಮಹಾಕಾರ್ಯದಲ್ಲಿ ಭಾಗವಹಿಸುವೆವು! ದೇಶ ದೇಹವಾದರೆ ಧರ್ಮ ಆತ್ಮ. ಆದುದರಿಂದ ದೇಶರಕ್ಷಣೆ ವಾಸ್ತವವಾಗಿ ಧರ್ಮರಕ್ಷಣೆಯೇ. ರಾಷ್ಟ್ರ ರಕ್ಷಣೆಗಿಂತ ಮಿಗಿಲಾದ ಧರ್ಮವೂ ಇದೆಯೆ? ಈಗ ರಾಷ್ಟ್ರವೇ ದೇವರು, ರಾಷ್ಟ್ರರಕ್ಷಣೆಯೇ ಧರ್ಮ, ಶತ್ರುಸಂಹಾರವೇ ಪೂಜೆ, ಸ್ವಾತಂತ್ರ್ಯವೇ ಪ್ರಸಾದ!

ಮಿತ್ರಾ : ಘನಘೋರ ಸಂಗ್ರಾಮದಲ್ಲಿಯೂ ಗುರುಗಳಿಗೆ ತಕ್ಕ ಕಾರ್ಯ ದೊರೆಯುವುದೆ ಗುರುದೇವ-ಅದೂ ಬುದ್ಧ ಭಗವಾನನ ಅನುಯಾಯಿಗಳಾದ ಗುರುಗಳಿಗೆ?

ವಸುಬಂಧು : ನ ಕ್ರೋಧೇನ ಜಯೇತ್ ಕ್ರೋಧಂ

ನ ಕಾಮೇನ ಜಯೇತ್ ಸ್ತ್ರೀಯಃ
ನೇಂಧನೇನ ಜಯೇದಗ್ನಿಃ
ನ ಪಾನೇನ ಜಯೇತ್ ಸುರಾಂ

ಭಗವಾನ್ ಬುದ್ಧದೇವನಿಗೆ ಜನ್ಮವಿತ್ತ ಪುಣ್ಯಭೂಮಿ, ಧರ್ಮಭೂಮಿ ಪವಿತ್ರಭೂಮಿ ಭಾರತಕ್ಕೆ ಗಂಡಾಂತರ ಒದಗಿದಾಗ ಈ ವಸುಬಂಧು ಕೈಕಟ್ಟಿ ಕುಳಿತುಕೊಳ್ಳುವನೆ ಮಿತ್ರಾದೇವಿ? ನಾವು ಬೌದ್ಧಮತಾವಲಂಬಿಯಾದರೂ ನಮ್ಮನ್ನು ರಾಜಗುರುವನ್ನಾಗಿ ಅಂಗೀಕರಿಸಿರುವ ಧೀರೋದಾರ ಗುಪ್ತ ಸಾಮ್ರಾಟರಿಗೆ ವಿಪತ್ತು ಉದ್ಭವಿಸಿದಾಗ ನಾವು ತಟಸ್ಥರಾಗಿರಬಲ್ಲೆವೆ? ಶಸ್ತ್ರದಿಂದಲ್ಲದಿದ್ದರೂ ಶಾಸ್ತ್ರದಿಂದ, ಶಕ್ತಿಯಿಂದಲ್ಲದಿದ್ದರೂ ಯುಕ್ತಿಯಿಂದ, ಬಾಹುಬಲದಿಂದಲ್ಲದಿದ್ದರೂ ಆತ್ಮಬಲದಿಂದ ಸ್ವರಾಜ್ಯರಕ್ಷಣೆಗೆ, ಸ್ವಾತಂತ್ರ್ಯ ರಕ್ಷಣೆಗೆ ನೆರವಾಗುವೆವು! ನೀವು ಕಟ್ಟಿಸಿಕೊಟ್ಟ ಸಂಘಾರಾಮವಿನ್ನು ಸಮರಾರಾಮವಾಗಿ ಕಾರ್ಯ ಮಾಡುವುದು! ನೀವು ನಿರ್ಭಯರಾಗಿ ಹೋಗಿ. ಜಯ ನಿಮ್ಮದು, ಜಯ ನಿಮ್ಮದು, ಜಯ ನಿಮ್ಮದು ಕೊನೆಗೆ!

ಬಾಲಾದಿತ್ಯ : ಗುರುದೇವ, ನಿಮ್ಮ ಅಪಾರ ಕರುಣೆ ನಮಗೆ ಅಭಯರಕ್ಷೆಯಾಗಿರುವವರೆಗೆ ಜಯ ನಮ್ಮದೆಂದು ನಮಗೂ ವಿಶ್ವಾಸವಿದೆ. ಜಯಪಡೆದೇ ತಮ್ಮ ದರ್ಶನಕ್ಕೆ ಬರುತ್ತೇವೆ. ಆಶೀರ್ವದಿಸಿ ಅಪ್ಪಣೆ ಕೊಡಿರಿ.

ವಸುಬಂಧು : (ಅಭಯಹಸ್ತವನ್ನೆತ್ತಿ) ವೀರರ ಖಡ್ಗಕಮಲದಲ್ಲಿ ಜಯಲಕ್ಷ್ಮಿಯ ನಿವಾಸ! ಹೋಗಿರಿ. ಈ ನಾಡು ವೀರರ ಬೀಡಾಗುವಂತೆ, ಕಲಿಗಳ ಕಣಜವಾಗುವಂತೆ ಮಾಡಿರಿ. ಎಚ್ಚರಿಕೆ, ಆಲಸ್ಯದಿಂದ ಅಮೃತವೂ ವಿಷವಾಗುತ್ತದೆ. ಸಂಗ್ರಾಮದ ಪ್ರಸಂಗದಲ್ಲಿಯಂತೂ ನಿಮಿಷ ನಿಮಿಷವೂ ಮಹತ್ವದ್ದು. ಅರೆಕ್ಷಣವನ್ನೂ ಆಲಸ್ಯದಲ್ಲಿ ಕಳೆಯದಿರಿ! ಸಮರಸನ್ನಾಹ ಹಗಲಿರುಳೆನ್ನದೆ ಸಾಗಲಿ! ಹೋಗಿಬನ್ನಿ, ಭಾರತಮಾತೆ ನಿಮಗೆ ವಿಜಯದ ವರದಾನವನ್ನು ನೀಡುವಳು! (ಅವರು ಬಾಗಿ ಹೋಗುವರು. ಅವರು ಹೋಗುತ್ತಲೆ ಬಾಲ ದಿನೇಶಬಿಂಬ ಪೂರ್ವದಿಗಂತದಲ್ಲಿ ರಕ್ತರಾಗದೊಡನೆ ರಂಜಿಸುವುದು. ಅದನ್ನು ಕಂಡು ಪುಲಕಿತರಾದ ವಸುಬಂಧುಗಳು), ಬಂದೆಯಾ ಬಾಲಾದಿತ್ಯ? ಬಾ, ನೀನು ಕತ್ತಲೆಯ ಬಿತ್ತರವನ್ನು ಹೊಡೆದೋಡಿಸಿ ಜಯಪ್ರಕಾಶ ಹರಡುತ್ತ ಬಂದಿರುವಂತೆ ಭರತವೀರ ಬಾಲಾದಿತ್ಯನೂ ಮಿಹಿರಕುಲನ ತಿಮಿರಕುಲವನ್ನು ಹೊಡೆದೋಡಿಸಿ ಈ ದೇಶದಲ್ಲಿ ಸ್ವಾತಂತ್ರ್ಯದ ಪ್ರಕಾಶವನ್ನು ಸ್ಥಿರಗೊಳಿಸುವ ಅವನಿಗೆ ಧೈರ್ಯ ನೀಡು, ಶಕ್ತಿ ನೀಡು, ಸಾಹಸ ನೀಡು!

(ಅವನ ಮಾತು ಮುಗಿಯುವ ಮುನ್ನವೇ ತೆರೆ ಬೀಳುವುದು.)

ನೋಟ ೬

(ಪುರವೀಥಿ. ಇಬ್ಬರು ಗುಪ್ತಚಾರರು ಪ್ರವೇಶಿಸುತ್ತಾರೆ. ಒಬ್ಬನ ಹೆಸರು ಮತಿರಾಮ, ಇನ್ನೊಬ್ಬನ ಹೆಸರು ಬಲರಾಮ)

ಮತಿರಾಮ : ಬೇಗ ಬೇಗ ನಡಿಯೋ ಬಲರಾಮ. ನಿನಗೆ ಬಲರಾಮ ಅಂತಾ ಯಾವ ಮುತ್ತೈದೆ ಹೆಸರಿಟ್ಟಿದ್ದಾಳಪ್ಪ! ಅಲ್ಲೋ, ನಿನಗಿಂತ ಮೂರು ತಿಂಗಳ ಮಗು ಜೋರಾಗಿ ನಡೆಯಬಹುದಲ್ಲೊ?

ಬಲರಾಮ : ಮೂರು ತಿಂಗಳ ಮಗು ನಡೆಯುತ್ತಂತೆ; ನಿನಗೆ ಮತಿರಾಮ ಅಂತಾ ಯಾವ ನಿಟ್ಟೈದೆ ಹೆಸರಿಟ್ಟಿದ್ದಾಳಪ್ಪ!

ಮತಿರಾಮ : ಅಲ್ಲಾ, ಈ ವಯಸ್ಸಿನಲ್ಲಿ ಇಷ್ಟು ವೇಗವಾಗಿ ನಡೆಯೋ ನೀನು ಮೂರು ತಿಂಗಳ ಮಗುವಾಗಿದ್ದಾಗ ಇನ್ನೇನು ನಡೆದಿದ್ದೀ. ಹೋಗಲಿ ಬಿಡು, ಈಗ ನಾವು ಹೊರಟಿರೋ ಕೆಲಸ ಬಹಳ ತುರ್ತಿನ ಕೆಲಸ. ನೆನಪಿದೆಯೋ ಇಲ್ಲೊ?

ಬಲರಾಮ : ನೆನಪಿರದೆ ಏನು? ನಿನ್ನೆ ತಾನೆ ನಮ್ಮ ಮಹಾರಾಜರು ಸಾಮ್ರಾಜ್ಯದ ತುಂಬಾ ತುರ್ತು ಪರಿಸ್ಥಿತಿಯನ್ನು ಸಾರಿದ್ದಾರೆ. ನಾನದನ್ನು ಇಷ್ಟು ಬೇಗ ಮರೆಯುವೆನೆ?

ಮತಿರಾಮ : ತುರ್ತುಪರಿಸ್ಥಿತಿ ತುರ್ತುಪರಿಸ್ಥಿತಿ ಅಂತಾ ಬಾಯಿಂದ ಬಡಬಡಿಸಿದರೆ ವೈರಿ ಓಡಿಹೋಗ್ತಾನೇನೊ? ಕೈ ಬೇಗ ಬೇಗ ಕೆಲಸ ಮಾಡಬೇಕು, ಕಾಲು ಬೇಗ ಬೇಗ ನಡೆಯಬೇಕು. ನಡೆ ಬೇಗ ಬೇಗ!

ಬಲರಾಮ : (ಆಕಳಿಸಿ) ಒಂದು ಜನ್ಮದಾಗ ಎಷ್ಟು ಸಲ ತುರ್ತುಪರಿಸ್ಥಿತಿ ಎದುರಿಸಬೇಕಪಾ ನಾವು? ಈ ದೇಶದ ಹಣೇಬರಹಾ ಯಾವ ಬೇವಾರ್ಸಿ ಬರೆದಾನೋ–ಯಾವಾಗ ಆದರೂ ಯಾರಿಂದ ಆದರೂ ದಾಳಿ ಇದರ ಮೇಲೇನೆ ಆಗುತ್ತೆ! ಎಷ್ಟು ಸಲ ಯುದ್ಧ ಮಾಡಬೇಕು ನಾವು?

ಮತಿರಾಮ : ಶಹಬ್ಬಾಸ್ ವೀರಾ, ನಿನ್ನನ್ನು ಬಲರಾಮ ಅನ್ನೋದರ ಬದಲು ದುರ್ಬಲರಾಮ ಅಂತಾ ಕರೆಯಬೇಕು ನೋಡು! ಒಂದು ಕತೆ ಹೇಳಲೆ?

ಬಲರಾಮ : (ಕಿವಿನಿಮಿರಿ) ಕತೆ ಹೇಳ್ತಿಯಾ? ಸ್ವಲ್ಪ ಕುಳಿತೇ ಹೇಳು, ನಾನೂ ಕುಳಿತೇ ಕೇಳ್ತೀನಿ.

ಮತಿರಾಮ : ಕುಳಿತುಕೋಬೇಡ, ಮಲಗಿಕೋ. ಮಂಕೆ, ಕತೆ ಕೇಳೋದಕ್ಕೆ ಕುಳಿತುಕೊಳ್ಳೋದ್ಯಾಕೆ? ನಿನ್ನ ಕಾಲು ನಡೆಯುತ್ತವೆಯೋ ಕಿವಿ ನಡೆಯುತ್ತವೆಯೋ?

ಬಲರಾಮ : ಹೇಳು ಮಹಾರಾಯ, ನಡೀತಾನೆ ಹೇಳು.

ಮತಿರಾಮ : ಒಬ್ಬ ತಂದೆಯಿದ್ದನಂತೆ...

ಬಲರಾಮ : (ನಡುವೆ ಬಾಯಿಹಾಕಿ) ಯಾರ ತಂದೆ?

ಮತಿರಾಮ : ನಿಮ್ಮ ತಂದೆಯೇನೂ ಅಲ್ಲ. ಮಂಕೆ, ಸುಮ್ಮನೆ ಕತೆ ಕೇಳ್ಬಾರದೆ? ನೀನು "ಹೂಂ ಹೂಂ" ಅನ್ನು. ಅಷ್ಟೇ ಸಾಕು.

ಬಲರಾಮ : (ಎಳೆದು) ಹೂಂ

ಮತಿರಾಮ : ಆ ತಂದೆ ತನ್ನ ಮಕ್ಕಳಿಗೆ ಬಹಳ ಆಸ್ತಿ ಗಳಿಸಿಟ್ಟು ಸತ್ತನಂತೆ.

ಬಲರಾಮ : ಆಸ್ತೀ ಬಿಟ್ಟೆ ಸತ್ತುಹೋದನೆ?

ಮತಿರಾಮ : ಇಲ್ಲ, ತನ್ನ ಸಮಾಧಿಯೊಳಗೆ ಹಾಕಿಸಿಕೊಂಡ. ಮಂಕೆ, ಸುಮ್ಮನೆ "ಹೂಂ" ಅನ್ನೋ.

ಬಲರಾಮ : (ಮುಖ ಪೆಚ್ಚುಮಾಡಿ ರಾಗವಾಗಿ) ಹೂಂ...

ಮತಿರಾಮ : ಆ ಆಸ್ತಿ ಆಸೆಗೆ ಆ ಮನೆಗೆ ಪದೇ ಪದೇ ಕಳ್ಳರು ಕನ್ನಾ ಹಾಕ್ತಿದ್ದರಂತೆ.

ಬಲರಾಮ : ಹೂಂ...

ಮತಿರಾಮ : ಅವನ ಮಕ್ಕಳೂ ಬಲರಾಮನಂಥೋರಂತೆ. 'ನಮ್ಮ ತಂದೆ ಯಾಕಾದರೂ ಈ ಆಸ್ತಿಗಳಿಸಿ ಹೋದನಪ್ಪಾ–ಈ ಆಸ್ತೀನೆ ಇರದಿದ್ದರ ನಮಗೆ ಕಳ್ಳರ ಕಾಟಾನೇ ಇರತಿರಲಿಲ್ಲ!' ಎಂದು ತಂದೆಯನ್ನೇ ಶಪಿಸಿದರಂತೆ.

ಬಲರಾಮ : ಹೂಂ....

ಮತಿರಾಮ : ಕತೆ ಮುಗೀತು.

ಬಲರಾಮ : ಮುಗಿದುಹೋಯ್ತೆ? ಈ ಕತೆ ಯಾಕೆ ಹೇಳಿದಿ ಈಗ?

ಮತಿರಾಮ : ಅಲ್ಲೋ, ನಮ್ಮ ಹಿರಿಯರು ನಮಗಾಗಿ ಇಷ್ಟೊಂದು ಸಂಪತ್ತಿನ ದೇಶ ಕಟ್ಟಿ ನಮಗೆ ಕೊಟ್ಟು, ಇದನ್ನು ಕಾಪಾಡಿಕೊಂಡು ಸುಖವಾಗಿ ಬದುಕಿರೆಂದು ಹೇಳಿ ಹೋಗಿದ್ದಾರೆ. ಇದು ಸಂಪತ್ತಿನ ದೇಶ ಅಂತಾ ಇದರ ಮೇಲೆ ಎಲ್ಲಾ ವೈರಿಗಳ ಕಣ್ಣಿದೆ. ಇದರ ಮೇಲೆ ದಾಳಿ ಮಾಡೋದು ಬಿಟ್ಟು ಮರಳುಗಾಡಿನ ಮೇಲೆ ಏರಿ ಹೋದಾರೇ ವೈರಿಗಳು? ಸಂಪತ್ತು ಬೇಕೆನ್ನುವವರು ಅದರ ಸಂರಕ್ಷಣೆಗೂ ಸಡ್ಡು ಹೊಡೆದು ಸಿದ್ಧರಾಗಿ ನಿಲ್ಲಬೇಕು. ಇದನ್ನು ಬಿಟ್ಟು ಸಂಪತ್ತಿನ ದೇಶ ಕಟ್ಟಿದವರನ್ನೇ ಬೇವಾರ್ಸಿಗಳೆಂದು ಬೀಗಳೆಯುವುದೆ? ನಡೆ, ಗೂಢಚಾರರಾದ ನಾವು ಗಾಳಿಯ ವೇಗದಲ್ಲಿ ಓಡಾಡಬೇಕು.

ಬಲರಾಮ : ದಾಳಿ ಬಂದಾಗ ಗಾಳಿ ವೇಗ ಬೇಕಪ್ಪೋ ಬೇಕು.

(ಇಬ್ಬರೂ ಲಗುಬಗೆಯಿಂದ ಹೋಗುವರು. ತೆರೆ ಏಳುವುದು)

ನೋಟ ೭

(ಹಿಂದೆ ಯಶೋಧರ್ಮನ ಅಂತಃಪುರ. ವಾರ್ಧಕ್ಯದಿಂದ ಕ್ಷೀಣನಾಗಿರುವ ಯಶೋಧರ್ಮ ಹಾಸಿಗೆಯಲ್ಲಿ ಹೊರಳುತ್ತಲಿರುವುದು ಕಾಣುತ್ತದೆ. ರಾಣಿ ರಾಜ್ಯಲಕ್ಷ್ಮಿ ಚಿಂತಾಕ್ರಾಂತಳಾಗಿ ಯಶೋಧರ್ಮನ ಅಡಿಯ ಕಡೆಗೊಂದು ಪೀಠದ ಮೇಲೆ ಮಂಡಿಸಿದ್ದಾಳೆ. ಮಂತ್ರಿ ಮಂತ್ರಸಾರ ಮತ್ತು ಸೇನಾಪತಿ ಧುರಧೀರರು ಉಚಿತಾಸನಗಳಲ್ಲಿ ಆಸೀನರಾಗಿದ್ದಾರೆ.)

ಯಶೋಧರ್ಮ : (ಹೊರಳುತ್ತ ನರಳುತ್ತ) ಸೇನಾಪತಿಗಳೇ, ಹತ್ತುವರುಷಗಳ ಹಿಂದೆ ಆ ಪಾಪಾತ್ಮನನ್ನು ಪ್ರಾಣಸಹಿತ ಬಿಟ್ಟುದೇ ನಮ್ಮ ತಪ್ಪಾಯಿತು. ನಾವು ಮನಸ್ಸು ಮಾಡಿದ್ದರೆ ಅಂದು ಅ ಮಿಹಿರಕುಲನ ಅಸ್ತಿತ್ವವನ್ನೇ ಅಳಿಸಿಬಿಡಬಹುದಾಗಿದ್ದಿತು. ವೈರಿಯನ್ನು ಉಳಿಸಬಾರದು, ವಿಷವೃಕ್ಷವನ್ನು ಬೆಳೆಸಬಾರದೆಂಬುದನ್ನು ಆ ಮದಾಂಧ ಮತ್ತೆ ಈ ಪವಿತ್ರಭೂಮಿಯ ಮೇಲೆ ದಾಳಿ ಮಾಡುವುದರ ಮೂಲಕ ನಮಗೆ ಮನಗಾಣಿಸಿಕೊಟ್ಟಿದ್ದಾನೆ.

ಧುರಧೀರ : ಈಗೇನಾಗಿದೆ ಮಹಾಪ್ರಭು, ನಮ್ಮ ಶೂರ ಸೈನಿಕರು ಆ ಮಿಹಿರಕುಲನ ವಂಶವೃಕ್ಷವನ್ನೇ ಬೇರುಸಹಿತ ಕಿತ್ತೆಸೆಯಲು ಕಾತರರಾಗಿದ್ದಾರೆ! ಅಪ್ಪಣೆಯಾಗಬೇಕು.

ಮಂತ್ರಸಾರ : ಸೇನಾಪತಿ ಧುರಧೀರರೆ, ನಮ್ಮ ಹಾಗೂ ನಮ್ಮ ಸೈನ್ಯದ ಶೌರ್ಯ ಸಾಹಸಗಳ ಬಗ್ಗೆ ಸಂಶಯ ವ್ಯಕ್ತಪಡಿಸುತ್ತಲಿರುವೆನೆಂದು ಭಾವಿಸದಿರಿ. ಮಿಹಿರಕುಲನ ಸೈನ್ಯಶಕ್ತಿ ಕಳೆದ ಹತ್ತು ವರ್ಷಗಳಲ್ಲಿ ಹತ್ತು ಪಟ್ಟು ಬೆಳೆದಿದೆ. ಸೈನ್ಯಶಕ್ತಿಯೇ ದೇವರು, ಯುದ್ಧವೇ ಧರ್ಮವೆಂದು ತಿಳಿದಿರುವ ಆ ರಕ್ಕಸನು ಈ ಸಲ ಅಭೂತಪೂರ್ವವಾದ ಯುದ್ಧದ ಸಿದ್ಧತೆಯೊಡನೆ ಭಾರತದ ಮೇಲೇರಿ ಬಂದಿದ್ದಾನೆ. ಅವನನ್ನು ಸೋಲಿಸುವುದು ಸುಲಭವಲ್ಲ.

ಯಶೋಧರ್ಮ : (ಸಂತಾಪದಿಂದ ಮೈಕೊಡಹಿ ಮೇಲೆದ್ದು ಕುಳಿತು) ಮಂತ್ರಿ ಮಂತ್ರಸಾರರೆ, ನೀವೆನ್ನುವುದಾದರೂ ಏನು? ಆ ನೀಚನು ನಮ್ಮ ಪುಣ್ಯಭೂಮಿಯನ್ನು, ಪಿತೃಭೂಮಿಯನ್ನು ಕಬಳಿಸುತ್ತ ನಡೆದಿರುವುದನ್ನು ಕಣ್ಣಾರೆ ಕಂಡು ಕೈಲಾಗದ ಹೇಡಿಯಂತೆ ಕೈಕಟ್ಟಿ ಕುಳಿತಿರಬೇಕೆಂದೆ?

ಮಂತ್ರಸಾರ : ಮಹಾಪ್ರಭುಗಳು ಮನ್ನಿಸಬೇಕು. ನನ್ನ ಅಭಿಪ್ರಾಯ ಅದಲ್ಲ. ಆ ಮದಾಂಧನು ಮಹಾಪ್ರಭುಗಳಿಂದ ಪಡೆದ ಪೆಟ್ಟನ್ನು ಮರೆತಿಲ್ಲ. ಆದುದರಿಂದಲೇ ಅವನು ಈ ಸಲ ನಮ್ಮ ರಾಜ್ಯದ ಮೇಲೆ ದಂಡೆತ್ತಿ ಬರುವ ಮೂರ್ಖತನ ಮಾಡಿಲ್ಲ–ಗುಪ್ತ ಸಾಮ್ರಾಜ್ಯದ ಗಡಿಗಳಲ್ಲಿ ನುಗ್ಗಲಿರುವನೆಂದು ನಮಗೆ ಬಂದಿರುವ ವರದಿಗಳಿಂದ ತಿಳಿದುಬಂದಿದೆ. ಆದುದರಿಂದ ಪ್ರತ್ಯಕ್ಷವಾಗಿ ನಮಗೆ ಸಂಬಂಧಿಸದ ಈ ಸಮರದಲ್ಲಿ ನಾವು ಕೈಹಾಕುವ ಅಗತ್ಯವಿಲ್ಲವೆಂದು ನನ್ನ ನಮ್ರ ನಿವೇದನ.

ವಸುಬಂಧು : (ಪ್ರವೇಶಿಸಿ) ನಿಮಗೆ ಸಂಬಂಧಿಸದಿದ್ದರೆ ಇದು ಯಾರಿಗೆ ಸಂಬಂಧಿಸಿದ ಯುದ್ಧ ಮಂತ್ರಿವರ್ಯರೆ?

ಯಶೋಧರ್ಮ : (ಎದ್ದೇಳಲು ಹೆಣಗುತ್ತ) ಗುರುವರ, ತಾವಿಲ್ಲಿಗೆ ಮುನ್‌ಸೂಚನೆ ಇಲ್ಲದೆ ಆಗಮಿಸಲು ಕಾರಣ?

ರಾಜ್ಯಲಕ್ಷ್ಮಿ : (ನಮಸ್ಕರಿಸಿ ಉನ್ನತಾಸನದಲ್ಲಿ ಕುಳ್ಳಿರಿಸಿ) ಗುರುದೇವ, ನಿರಾಶೆಯ ನಿಶೆಯಲ್ಲಿ ಆಶೆಯ ಕಿರಣದಂತೆ ಆಗಮಿಸಿರುವ ತಮ್ಮಿಂದಲಾದರೂ ನನ್ನ ಪತಿದೇವರಿಗೆ ಪೂರ್ಣಾರೋಗ್ಯ ಪ್ರಾಪ್ತವಾಗಲೆಂದು ಪ್ರಾರ್ಥಿಸುತ್ತೇನೆ.

ವಸುಬಂಧು : ಭಗವಂತನು ಮಹಾರಾಣಿ ರಾಜ್ಯಲಕ್ಷ್ಮಿದೇವಿಯವರ ಪ್ರಾರ್ಥನೆಯನ್ನು ಪೂರ್ಣಗೊಳಿಸಲಿ!

ಮಂತ್ರಸಾರ : (ಸಾಶಂಕಸ್ವರದಲ್ಲಿ ಸ್ವಗತ) ಹಿಂದೆಂದೂ ಆಗಮಿಸದ ಗುರುಗಳು ಇಂದೇಕೆ ಇಲ್ಲಿಗೆ ಆಗಮಿಸಿರಬಹುದು? ಗುಪ್ತಸಾಮ್ರಾಟರ ಗುರುಗಳು

ಮಿಹಿರಕುಲನಿಂದ ಗುಪ್ತಸಾಮ್ರಾಜ್ಯವನ್ನು ರಕ್ಷಿಸಲು ನಮ್ಮ ಮಹಾರಾಜರ ನೆರವನ್ನು ಪಡೆಯಲು ಬಂದಿರಬಹುದೆ? (ಪ್ರಕಾಶ) ಗುರುದೇವ, ಇದು ಯಾರಿಗೆ ಸಂಬಂಧಿಸಿದ ಯುದ್ಧವೆಂದು ಕೇಳಿದಿರಿ. ಯಾರ ರಾಜ್ಯದಲ್ಲಿ ವೈರಿ ನುಗ್ಗುವನೋ ಅವರಿಗೆ ಸಂಬಂಧಿಸಿದ ಯುದ್ಧವಿದು.

ವಸುಬಂಧು : ಈ ಭಾವನೆಯೇ ಭಾರತ ವರ್ಷವನ್ನು ಹಲವುಸಲ ವೈರಿಗಳ ದುರಾಕ್ರಮಣಕ್ಕೆ ಒಳಪಡಿಸಿದೆ, ಮಂತ್ರಿವರ್ಯರೆ. ಈ ಭಿನ್ನತೆಯ ಭಾವನೆ ಬೇರೂರಿರುವವರೆಗೆ ಭಾರತಕ್ಕೆ ವೈರಿಭಯ ತಪ್ಪದೆಂದು ತಿಳಿಯಿರಿ. ಗುಪ್ತಸಾಮ್ರಾಟರ ರಾಜ್ಯ, ಮಹಾರಾಜ ಯಶೋಧರ್ಮರ ರಾಜ್ಯ, ಈ ಭರತಭೂಮಿಯ ಇನ್ನುಳಿದ ಭಾಗಗಳಲ್ಲಿರುವ ಬೇರೆ ಬೇರೆ ರಾಜ್ಯಗಳು ಭಾರತವನ್ನು ಬಿಟ್ಟು ಬದುಕಿವೆಯೆ? ಭಾರತಕ್ಕೆ ಆಘಾತ ಒದಗಿದರೆ ಈ ರಾಜ್ಯಗಳು ಆ ಆಘಾತದಿಂದ ಉಳಿದುಕೊಳ್ಳಬಲ್ಲುವೆ? ಭಾರತಮಾತೆಯ ಒಂದು ಅಂಗಕ್ಕೆ ಗಾಯವಾದರೆ ಉಳಿದ ಅಂಗಗಳಿಗೆ ನೋವಾಗುವುದಿಲ್ಲವೆ? ಶರೀರದ ಯಾವ ಅವಯವ ದುರ್ಬಲವಾದರೂ ಸಮಗ್ರ ಶರೀರವೇ ದುರ್ಬಲವಾಗುವುದಿಲ್ಲವೆ?

ಯಶೋಧರ್ಮ : ಗುರುದೇವ, ಹತ್ತುವರ್ಷಗಳ ಹಿಂದೆ ಮಿಹಿರಕುಲನು ನಮ್ಮ ರಾಜ್ಯದ ಮೇಲೆ ಏರಿಬಂದಾಗ ಈ ಐಕ್ಯಮಂತ್ರವನ್ನು ತಾವು ಗುಪ್ತ ಸಾಮ್ರಾಟರಿಗೇಕೆ ಉಪದೇಶಿಸಲಿಲ್ಲ?

ವಸುಬಂಧು : ಮಹಾರಾಜ, ಹಳೆಯ ಗಾಯದ ಹಕ್ಕಳಿಯನ್ನು ಕೀಳುವುದು ಹಿತವಾದುದೇನೂ ಅಲ್ಲ. ಸಾಮಂತರಾಗಿದ್ದ ನೀವು ಸಾಮ್ರಾಟರ ವಿರುದ್ಧ ಯುದ್ಧ ಸಾರಿದಿರಿ. ಬೇರೊಂದು ಸಾಮ್ರಾಜ್ಯವನ್ನು ಕಟ್ಟುವ ಭ್ರಮೆಯಿಂದ ಇದ್ದ ಸಾಮ್ರಾಜ್ಯದ ಬುಡಕ್ಕೆ ಕೊಡಲಿಯ ಪೆಟ್ಟು ಕೊಟ್ಟಿರಿ. ತತ್ಪರಿಣಾಮವಾಗಿ ಇಬ್ಬರೂ ದುರ್ಬಲರಾದಿರಿ! ಈಗ ಮಿಹಿರಕುಲನು ಗುಪ್ತಸಾಮ್ರಾಜ್ಯದ ಗಡಿಗಳನ್ನು ಕಳ್ಳನಂತೆ ಪ್ರವೇಶಿಸಿದ್ದಾನೆ. ಏಕೆ? ನಿಮ್ಮ ಮತ್ತು ಗುಪ್ತಸಾಮ್ರಾಟರ ನಡುವೆ ತಲೆದೋರಿರುವ ಹಗೆತನದ ಲಾಭ ಪಡೆದು ಗುಪ್ತಸಾಮ್ರಾಜ್ಯವನ್ನು ಕಬಳಿಸುವುದಕ್ಕೆ! ಆದರೆ, ಅಲ್ಲಿಗೆ ಅವನ ರಾಕ್ಷಸೀ ಮಹತ್ವಾಕಾಂಕ್ಷೆ ನಿಲ್ಲುವುದೆಂದು ತಿಳಿದಿರುವಿರಾ? ಗುಪ್ತಸಾಮ್ರಾಜ್ಯದ ಪತನವಾದ ಮೇಲೆ ನಿಮ್ಮ ರಾಜ್ಯವನ್ನು ನುಂಗಿ ನೀರು ಕುಡಿಯದಿರುವನೆ ಅವನು? ನಿಮ್ಮ ರಾಜ್ಯವನ್ನು ನುಂಗಿದ ಮೇಲೆ ಸಮಗ್ರ ಭಾರತವನ್ನೇ ಸ್ವಾಹಾ ಮಾಡದಿರುವನೆ ಅವನು? ಯೋಚಿಸಿರಿ ಪ್ರಭುಗಳೆ, ಸಾವಧಾನದಿಂದ ಯೋಚಿಸಿರಿ. ದೇಶದ ರಕ್ಷಣೆ ಸರ್ವರ ಹೊಣೆ. ದೇಶ ಸುರಕ್ಷಿತವಾಗಿದ್ದರೆ ಸರ್ವರೂ ಸುರಕ್ಷಿತ. ದೇಶಕ್ಕೇ ಧಕ್ಕೆ ಬಂದರೆ?

ಯಶೋಧರ್ಮ : ಗುರುದೇವ, ತಾವು ಹೇಳುವುದಾದರೂ ಏನು? ನನ್ನ ಭುಜ ಬಲದಿಂದ ನಾನು ಸಂಪಾದಿಸಿಕೊಂಡಿರುವ ಈ ರಾಜ್ಯವನ್ನು ಮತ್ತೆ ಗುಪ್ತ ಸಮ್ರಾಜ್ಯಕ್ಕೆ ಅಧೀನಗೊಳಿಸಿ ಸಾಮಂತನಂತೆ ಸಾಮ್ರಾಟರ ಸೇವೆಗೆ ಸಿದ್ಧನಾಗೆಂದೆ?

ವಸುಬಂಧು : ಸುತರಾಂ ಅಲ್ಲ. ಭಾರತದ ವೈಶಿಷ್ಟ್ಯ 'ಅವಿಭಕ್ತಂ ವಿಭಕ್ತೇಷು' ಎಂಬ ಸೂತ್ರದಲ್ಲಿ ಸಾರವತ್ತಾಗಿ ಸೂಚಿತವಾಗಿದೆ. ಭಾರತದಲ್ಲಿ ಭಿನ್ನ ಭಿನ್ನ ರಾಜ್ಯಗಳಿದ್ದರೂ ಭಾರತದ ಏಕತ್ವಕ್ಕೆ, ಅಖಂಡತೆಗೆ, ಅವಿಭಕ್ತತೆಗೆ ಚ್ಯುತಿಯಿಲ್ಲ. ಇರಬಾರದು. ಮಳೆಬಿಲ್ಲಿನ ಬಣ್ಣ ಹಲವಾದರೂ ಮಳೆಬಿಲ್ಲು ಒಂದೇ; ನವಿಲುಗರಿಯ ಬಣ್ಣ ಹಲವಾದರೂ ನವಿಲು ಒಂದೇ; ಭಾರತದಲ್ಲಿರುವ ರಾಜ್ಯಗಳು, ಧರ್ಮಗಳು, ಭಾಷೆಗಳು, ವೇಷಗಳು ಹಲವಾದರೂ ಭಾರತ ಒಂದೇ. ಭಾರತದ ಯಾವ ಭಾಗಕ್ಕೆ ಗಂಡಾಂತರ ಪ್ರಾಪ್ತವಾದರೂ ಸಮಗ್ರ ಭರತಕ್ಕೆ ಗಂಡಾಂತರ ಪ್ರಾಪ್ತವಾದಂತೆ! ಈಗ ನಮ್ಮಲ್ಲಿರುವ ಭಿನ್ನತೆಗಳೆಲ್ಲ ಬಯಲಾಗಬೇಕು-ಭಾರತೀಯರೆಲ್ಲ ಭಾರತದ ರಕ್ಷಣೆಗಾಗಿ ಬದ್ಧಕಂಕಣರಾಗಬೇಕು.

ಯಶೋಧರ್ಮ : ನನಗೆ ನಿಜವಾಗಿಯೂ ನವದೃಷ್ಟಿಯನ್ನು ನೀಡಿದಿರಿ ಗುರುದೇವ! ಭರತಭೂಮಿಗೆ ವಿಪತ್ತು ಒದಗಿಬಂದಿರುವಾಗ ಹಳೆಯ ಹಗೆತನ ಹುಟ್ಟಳಿದುಹೋಗಿ ಬಂಧುರ ಬಂಧುಭಾವ ಒಡಮೂಡಬೇಕು. ಗುಪ್ತ ಸಾಮ್ರಾಟರು ನನ್ನ ಬಂಧುಗಳು; ಭರತಭೂಮಿಯ ಇನ್ನುಳಿದ ರಾಜ ಮಹಾರಾಜರೂ ನನ್ನ ಬಂಧುಗಳು; ಸಕಲ ಭಾರತೀಯರೂ ನನ್ನ ಬಂಧುಗಳು! ಇವರಲ್ಲಿ ಯಾರ ಮೇಲೆ ವಿಪತ್ತು ಎರಗಿದರೂ ನನ್ನ ಮೇಲೆಯೇ ಎರಗಿದಂತೆ. ಇದೋ ಹೊರಟೆ; ಆ ಮಿಹಿರಕುಲನಿಗೆ ಮತ್ತೊಮ್ಮೆ ಸೋಲಿನ ಶೂಲವಾಗಿ ಹೊರಟೆ; ನನ್ನ ನಿರ್ಬಲ ನರಗಳಲ್ಲಿ ಇನ್ನೂ ಕ್ಷತ್ರಿಯನ ರಕ್ತ ನರ್ತಿಸುತ್ತಲಿದೆಯೆಂಬುದನ್ನು ತೋರಿಸಲು ಹೊರಟೆ; ಭರತಭೂಮಿಯ ಗೌರವದ ರಕ್ಷಣೆಗಾಗಿ ಸಿಡಿಲಾಗಿ ಹೊರಟೆ! (ಎದ್ದು ಹೊರಡಲು ಯತ್ನಿಸುವನು. ಜೋಲಿಹೋಗಿ ಬಿದ್ದುಬಿಡುವನು)

ರಾಜ್ಯಲಕ್ಷ್ಮಿ : (ಓಡಿಹೋಗಿ ಹಿಡಿದೆತ್ತಿ) ನಾಥ, ಪ್ರಾಣನಾಥ, ಈ ಸ್ಥಿತಿಯಲ್ಲಿ ರಣರಂಗಕ್ಕೆ ಹೋಗುವಿರಾ? ಬೇಡ, ನಿಮ್ಮ ಖಡ್ಗವನ್ನು ನನ್ನ ಕೈಗೆ ಕೊಡಿರಿ. ನಾನು ರಣಭೈರವಿಯಾಗಿ ಹೋಗುವೆ: ಹಗೆಯ ಗಂಟಲನ್ನು ಸೀಳುವೆ; ಭಾರತದ ವೈರಿಗಳನ್ನು ಹೂಳುವೆ!

ವಸುಬಂಧು : ಯಶೋಧರ್ಮಭೂಪಾಲ, ರಾಜ್ಯಲಕ್ಷ್ಮೀದೇವಿಯರೆ-ನೀವೇ ರಣರಂಗಕ್ಕೆ ಧುಮುಕುವ ಅಗತ್ಯವಿಲ್ಲ. ನಿಮ್ಮ ನೈತಿಕ ಬೆಂಬಲವಿದ್ದರೂ ಸಾಕು. ಈಗ ನಡೆಯಲಿರುವ ಯುದ್ಧ ನಮ್ಮ ಯುದ್ಧ, ನಮ್ಮ ರಾಷ್ಟ್ರ ರಕ್ಷಣೆಗಾಗಿ ನಡೆದಿರುವ ಯುದ್ಧವೆಂಬ ಭಾವನೆ ನಿಮ್ಮಲ್ಲಿ ಒಡಮೂಡಿದೆಯಲ್ಲ ಅದೇ ಸಾಕು.

ಯಶೋಧರ್ಮ : ಗುರುದೇವ, ಭಾರತದ ರಕ್ಷಣೆಗಾಗಿ ನನ್ನ ಬಂಧುಗಳು ಯುದ್ಧಕ್ಕಾಗಿ ಸನ್ನದ್ಧರಾಗುತ್ತಲಿರುವಾಗ ನಾನು ನೋಟಕನಾಗಿ ಮೋಜು ನೋಡುತ್ತ ಕುಳಿತಿರಲೆ?

ಮಂತ್ರಸಾರ : ಮಹಾಪ್ರಭುಗಳ ಅಪ್ಪಣೆಯಾದರೆ ಗುಪ್ತ ಸಾಮ್ರಾಟರಿಗೆ ನಮ್ಮ ರಾಜಭಂಡಾರದಿಂದ ಧನಕನಕದ ಕಾಣಿಕೆಯನ್ನು ಕಳುಹಿಸಿಕೊಡುವೆನು.

ರಾಜ್ಯಲಕ್ಷ್ಮಿ : ನಾಡ ಸ್ತ್ರೀಶಕ್ತಿಯ ಸಂಕೇತವಾಗಿ ನಾನೂ ದೇಶರಕ್ಷಣೆಗೆ ನೆರವಾಗಿ ನಿಲ್ಲುವೆನು. ಯಾವ ರೀತಿಯಲ್ಲಿ ಎಂಬುದನ್ನು ಈಗ ವಿವರಿಸಲಾರೆ.

ಧುರಧೀರ : ಮಹಾಪ್ರಭುಗಳ ಅಪ್ಪಣೆಯಾದರೆ ನಾನು ನಮ್ಮ ವೀರ ಸೈನಿಕರೊಡನೆ ಗುಪ್ತಸಾಮ್ರಾಟರ ಸಹಾಯಕ್ಕಾಗಿ ಹೋಗುವೆನು.

ಮಂತ್ರಸಾರ : ಸೇನಾಧಿಪತಿಗಳೆ, ನನ್ನ ಕುಮಾರನನ್ನೂ ಕರೆದೊಯ್ಯಿರಿ.

ಯಶೋಧರ್ಮ : ನಿಜವಾಗಿಯೂ ಮಹೋತ್ಸಾಹಜನಕ ದೃಶ್ಯವಿದು. ದೇಶ ರಕ್ಷಣೆಯ ಪವಿತ್ರ ಕಾರ್ಯದಲ್ಲಿ ಪಾಲುಗೊಳ್ಳಲು ಸರ್ವರಿಗೂ ಸ್ವಾಗತವಿದೆ!

ವಸುಬಂಧು : ಯಶೋಧರ್ಮ ರಾಜ್ಯಲಕ್ಷ್ಮಿಯರ ಈ ರಾಷ್ಟ್ರಭಕ್ತಿ ನಮಗೆ ಯಶಸ್ಸನ್ನು ಸಂಪಾದಿಸಿಯೇ ತೀರುವುದು. ಧನ್ಯರು ನೀವು–ಆದರ್ಶ ರಾಜದಂಪತಿಗಳೆ. ನಿಮ್ಮ ರಾಷ್ಟ್ರಾಭಿಮಾನ ಮುಂದಿನ ಪೀಳಿಗೆಗಳಿಗೆ ದಾರಿದೀಪವಾಗಿರಲಿ!

ರಾಜ್ಯಲಕ್ಷ್ಮಿ : ಗುರುದೇವ, ಈ ದೇಶಕ್ಕೆ ತಮ್ಮಂಥ ಗುರುಗಳ ಮಾರ್ಗದರ್ಶನ ಸದಾ ದೊರೆಯುತ್ತಲಿರಲಿ!

ವಸುಬಂಧು : ನಿಮ್ಮಂಥ ಮಾತೆಯರಿರುವವರೆಗೆ ಈ ದೇಶಕ್ಕೆ ಯಾರ ಕೊರತೆಯೂ ಇರದು ತಾಯೆ! ನನ್ನ ಮಾತಿಗೆ ಮನ್ನಣೆಯಿತ್ತ ನಿಮ್ಮಿಬ್ಬರಿಗೂ ಧನ್ಯವಾದಗಳು.

(ಕೈಯೆತ್ತಿ ಹರಸುತ್ತಿರುವಂತೆ ತೆರೆ ಬೀಳುವುದು)

ನೋಟ ೮

(ಮತ್ತೆ ಪುರವೀಥಿಯಲ್ಲಿ ಬಲರಾಮ ಮತಿರಾಮರ ಪ್ರವೇಶ. ಬಲರಾಮ ಬಳಲಿದವನಂತೆ ಕಾಲೆಳೆಯುತ್ತ ಬರುತ್ತಾನೆ)

ಬಲರಾಮ : (ನರಳುತ್ತ) ಅಂತೂ ಅಯೋಧ್ಯೆಯ ಮುಖ ಮತ್ತೆ ಕಂಡೆವಪ್ಪ. ಮತ್ತೊಮ್ಮೆ ಹುಟ್ಟಿಬಂದ್ಹಾಂಗಾಯ್ತು!

ಮತಿರಾಮ : ಇದುವರೆಗೆ ಎಷ್ಟು ಸಲ ಸತ್ತು ಎಷ್ಟು ಸಲ ಮತ್ತೆ ಹುಟ್ಟಿರುವೆಯೋ ಬಲರಾಮ?

ಬಲರಾಮ : ನೀನು ಯಮದೂತನ್ಹಾಂಗ ನನ್ನ ಬೆನ್ನು ಹತ್ತಿರುವಾಗ ಸಾಯೋದಕ್ಕೂ ಕೊರತೆಯಿಲ್ಲ, ಹುಟ್ಟೋದಕ್ಕೂ ಕೊರತೆಯಿಲ್ಲ.

ಮತಿರಾಮ : ದೇಶಕ್ಕಾಗಿ ದುಡಿಯೋ ಭಾಗ್ಯ ಎಲ್ಲರಿಗೂ ಸಿಕ್ಕೋದಿಲ್ಲೋ ಬಲರಾಮ–ನಮಗೆ ಈ ಭಾಗ್ಯ ಸಿಕ್ಕಿರುವಾಗ ನೀನು ನರಳೋದು ನಾಚಿಕೆಗೇಡು ನೋಡು!

ಬಲರಾಮ : ಯಾರಿಗೆ ಬೇಕಾಗಿದೆ ಈ ಭಾಗ್ಯ? ನನ್ನ ಪಾಲಿನ ಭಾಗ್ಯಾನೂ ನೀನೇ ತಕ್ಕೋ ಬೇಕಾದರೆ. (ಕಾಲೆತ್ತಿ) ಇಲ್ಲಿ ನೋಡು, ಕಲ್ಲು, ಮುಳ್ಳು ನೆಟ್ಟು ನೆಟ್ಟು ಕಾಲು ನಾಲು ಬಡಿಸದ ಕುದುರೆ ಕಾಲಿಗಿಂತ ಕಡೆಯಾಗಿದೆ.

ಮತಿರಾಮ : ನಾವು ತಿಳಕೊಂಡು ಬಂದಿರೋ ವೈರಿಯ ಗುಟ್ಟುಗಳಿಂದ ನಮ್ಮ ಸೈನ್ಯಕ್ಕೆ ಲಾಭವಾಗಿ ನಮಗೆ ಯುದ್ಧದಲ್ಲಿ ಜಯ ಸಿಕ್ಕರೆ ನಾವು ಕಾಲೊಡೆದುಕೊಂಡುದು ಸಾರ್ಥಕವಾದಂತೆ ಬಲರಾಮ! ದೇಶವೇ ಅಳಿದರೆ ನಿನ್ನ ಕಾಲು ಉಳಿಯುವವೆ?

ಬಲರಾಮ : ಅಲ್ಲೋ ಮತಿರಾಮ, ಬಹಳ ದೊಡ್ಡ ದೊಡ್ಡ ಮಾತನಾಡಿದ ಕೂಡ್ಲೆ ದೊಡ್ಡ ಜಾಣ ಅಂತ ತಿಳಿದೀಯೇನೊ? ಯಾರು ರಾಜನಾದರೇನು, ರೈತನಿಗೆ ರಾಗೀ ಬೀಸೋದೇನಾದರೂ ತಪ್ಪತದೇನೋ? ಇಂದು ಬಾಲಾದಿತ್ಯ ಪ್ರಭುಗಳಿಗೆ ಕೈ ಮುಗಿತೀವಿ. ನಾಳೆ ಮಿಹಿರಕುಲ ಬಂದ್ರೆ ಅವನಿಗೆ ಕೈಮುಗೀತೀವಿ. ಕೈಮುಗೀಲಾಕೇ ಹುಟ್ಟಿರುವ ನಾವು ಕೈಮುಗೀತಾ ಹೊರಟರಾಯ್ತು.

ಮತಿರಾಮ : ಕೈ ಉಳಿದರೆ ತಾನೆ ಕೈಮುಗಿಯೋದು?

ಬಲರಾಮ : ಮಿಹಿರಕುಲ ಬಂದ ಕೂಡ್ಲೆ ನಮ್ಮ ಕೈ ಕಡಿಸಿಬಿಡ್ತಾನೇನು?

ಮತಿರಾಮ : ಹುಟ್ಟಿದ ದೇಶ ಹಡೆದ ತಾಯಿ ಒಂದೇ. ಹಡೆದ ತಾಯಿ ಕಾಯದ ಕೈ ಕೈಯಲ್ಲ–ಮರಗೈ! ಆ ಕೈ ಇದ್ದರೂ ಅಷ್ಟೇ ಇರದಿದ್ದರೂ ಅಷ್ಟೆ! ಒಂದು ಮಾತು ಹೇಳ್ತೀನಿ ಕೇಳ್ತೀಯಾ?

ಬಲರಾಮ : ನಿನ್ನ ಮಾತು ಎಂದು ಕೇಳಿಲ್ಲೊ ಮತಿರಾಮ?

ಮತಿರಾಮ : (ಬಲರಾಮನ ಜೊಂಡುಮೀಸೆ ಹಿಡಿದು) ಈ ಮೀಸೆ ಬೋಳಿಸಿ, ಸೀರೆ ಉಟ್ಟು, ಈ ಕೈಗೆ ಬಳೆಹಾಕಿಸಿಕೊಂಡುಬಿಡು. ನಿನ್ನನ್ನು ಯುದ್ಧಕ್ಕೂ ಕರೆಯೋದಿಲ್ಲ. ಕಷ್ಟಕ್ಕೂ ಕರೆಯೋದಿಲ್ಲ! ಒಂದಿಷ್ಟು ಅಡಿಗೆ ಮಾಡಲಿಕ್ಕೂ ಕಲಿತು ಬಿಡು. ಸುಖವಾಗಿ ಒಲೆಯ ಮುಂದೇ ಕುಳಿತಿರುವಿಯಂತೆ!

ಬಲರಾಮ : (ರೇಗಿ) ನನಗೆ ಗಂಡಸಾಗಿ ಇರೋದಕ್ಕೆ ಇಷ್ಟ ಇಲ್ಲಾ ಅಂತಾ ತಿಳಿದಿದ್ದೀಯೇನೊ?

ಮತಿರಾಮ : ವಾಹರೇ ಗಂಡಸೆ! ವೈರಿ ಬಂದರೂ ಕೈಮುಗೀತಾನಂತೆ, ಮತ್ತು ಗಂಡಸಾಗೀನೂ ಉಳೀತಾನಂತೆ! ಇದೆಂಥ ಗಂಡಸಪ್ಪ? ಹೆಂಗಸರೂ

ಯುದ್ಧಕ್ಕೆ ಸಿದ್ಧರಾಗ್ತಾ ಇದಾರೆ ಈಗ. ನಮ್ಮ ಹೆಂಗಸರೇನು ಗಂಡಸರಿಗಿಂತ ಕಡಿಮೆ ಇಲ್ಲ–ಗಂಡಾಂತರ ಬಂದಾಗ ಗಂಡುತನ ತೋರೋದ್ರೊಳಗೆ. ನೀನು ಗಂಡ್ನೂ ಅಲ್ಲ, ಹೆಂಗ್ಸೂ ಅಲ್ಲ–ಶಿಖಂಡಿ ಇದ್ದಾಂಗ ಕಾಣ್ತೀ.

ಬಲರಾಮ : ಬಾಯಿ ಬಿಗಿಹಿಡಿದು ಮಾತಾಡೋ ಮತಿರಾಮ–ಈ ಬಲರಾಮನಿಗೆ ಸಿಟ್ಟು ಬಂದಿತೆಂದರೆ...

ಮತಿರಾಮ : ಬಂದಿತೆಂದರೆ, ಅಂತಾ ಸಂಶಯ ಬೇಡ, ಬಂದುಬಿಡಲಿ ಸಿಟ್ಟು! ಬಲರಾಮ ಸಿಟ್ಟಿಗೆದ್ದದ್ದೂ ಒಮ್ಮೆ ನೋಡಲಿ ಈ ಪಾಪಿ ಕಣ್ಣು!

ಬಲರಾಮ : ಮತಿರಾಮ, ಯುದ್ಧದಲ್ಲಿ ನಿನಗಿಂತ ಒಬ್ಬ ವೈರಿ ಹೆಚ್ಚು ಕೊಲ್ಲದೆ ಹೋದರೆ ಈ ಬಲರಾಮ ನೀ ಹೇಳಿದಂತೆ ಬಳೇನ ಇಟ್ಟುಕೊಳ್ತಾನೆಂದು ತಿಳಿ!

ಮತಿರಾಮ : ಭಳಿರೆ ಬಲರಾಮ–ಮಾತಿನಲ್ಲಿ ಆಡಿದ್ದೂ ಕೃತಿಯಲ್ಲಿ ಮಾಡಿದ್ದೂ ಒಂದೇ ಇರಬೇಕು ನೋಡು! ನಡೆ ಮುಂದೆ, ನಡೆ ಮುಂದೆ, ನಡೆ ಮುಂದೆ ವೀರ! ಜಗ್ಗದೆಯೆ ಕುಗ್ಗದೆಯೆ ನುಗ್ಗಿ ನಡೆ ಧೀರ!

(ಹೋಗುವರು. ತೆರೆ ಏಳುವುದು)

ನೋಟ ೯

(ಬಾಲಾದಿತ್ಯನ ಒಡ್ಡೋಲಗ, ಬಾಲಾದಿತ್ಯ ಸಿಂಹಾಸನದ ಮೇಲೆ ಮಂಡಿಸಿದ್ದಾನೆ. ಬಲಗಡೆಗೆ ಮಂತ್ರಿ ನಯಸಾರ, ಎಡಗಡೆಗೆ ಸೇನಾಪತಿ ಸಮರಸಿಂಹ ಆಸೀನರಾಗಿದ್ದಾರೆ. ಕೋಶಾಧಿಕಾರಿಯೂ ಮಂತ್ರಿ ನಯಸಾರನ ಬಲಗಡೆಗೆ ಕುಳಿತಿದ್ದಾನೆ. ತೆರೆ ಎದ್ದಾಗ ಬಾಲಾದಿತ್ಯ ಲಕ್ಷ್ಯಗೊಟ್ಟು ಕೇಳುತ್ತಿರುವುದೂ, ಮಂತ್ರಿ ನಯಸಾರ ನಿಂತು ಹೇಳುತ್ತಲಿರುವುದೂ ಕಾಣಿಸುತ್ತಲಿದೆ)

ನಯಸಾರ : ಪರಮ ಭಟ್ಟಾರಕರು ಪರಾಂಬರಿಸಬೇಕು. ಎಲ್ಲರಿಂದಲೂ ಉತ್ತರಗಳು ಬಂದಿವೆ. ಮಹಾಪ್ರಭುಗಳ ರಾಯಸಗಳಿಗೆ ಮನ್ನಣೆ ಕೊಡದವರೂ ಉಂಟೆ? ಎಲ್ಲ ಕಡೆಯಿಂದಲೂ ಎಲ್ಲ ವಿಧದ ಸಹಾಯ ಸಹಕಾರಗಳ ಆಶ್ವಾಸನಗಳು ಬಂದಿವೆ. ಮೌಖಾರಿ ಮಹಾರಾಜ ಈಶಾನವರ್ಮರು ತಮ್ಮ ಗಜ ರಥ ಪದಾತಿಗಳ ಪ್ರಚಂಡ ಬಲದೊಡನೆ ತಾವೇ ಮಿಹಿರಕುಲನ ವಿರುದ್ಧ ಯುದ್ಧದಲ್ಲಿ ಭಾಗವಹಿಸುವುದಾಗಿ ಬರೆದು ಕಳುಹಿದ್ದಾರೆ. ವಂಗ, ಕಳಿಂಗ, ಶಕ, ಕುಶಾಣ, ವಾಕಾಟಕ ಪ್ರಭುಗಳೂ ಇದೇ ರೀತಿ ಆಶ್ವಾಸನಗಳನ್ನು ಕಳುಹಿಸಿದ್ದಾರೆ.

ಬಾಲಾದಿತ್ಯ : ವೀರ ಯಶೋಧರ್ಮರ ನೆರವನ್ನೂ ಕೋರಬಹುದಾಗಿದ್ದಿತು.

ನಯಸಾರ : ಗುಪ್ತಸಾಮ್ರಾಜ್ಯದ ವಿರುದ್ಧ ವಿದ್ರೋಹದ ವಿಷಬೀಜವನ್ನು ಬಿತ್ತಿದ ಯಶೋಧರ್ಮ ಮಹಾರಾಜರು ನಮಗೆ ನೆರವು ನೀಡುವರೆಂಬುದನ್ನು ನಂಬಲಾರೆ ಮಹಾಪ್ರಭು!

ಸಮರಸಿಂಹ : ಮುಪ್ಪನ್ನು ಅಪ್ಪಿ ಹಿಪ್ಪೆಯಾಗಿರುವ ಅವರ ನೆರವಿನಿಂದ ನಮಗಾಗುವ ಲಾಭವೂ ಅಷ್ಟಕ್ಕಷ್ಟೆ ಮಹಾಪ್ರಭು.

ಬಾಲಾದಿತ್ಯ : ಯಾರು ನೆರವು ನೀಡದಿದ್ದರೂ ಏಕಾಕಿಯಾಗಿಯಾದರೂ ಈ ರಾಷ್ಟ್ರವನ್ನು ರಕ್ಷಿಸುವೆನೆಂದು ಪ್ರತಿಜ್ಞೆ ಮಾಡಿಯಾಗಿದೆ. ಆದರೆ ಯುದ್ಧದಲ್ಲಿ ವಿಜಯ ಗಳಿಸುವುದು ಎಷ್ಟು ಮುಖ್ಯವೋ ಅಷ್ಟೇ ಈ ರಾಷ್ಟ್ರದ ಏಕತೆಯನ್ನು, ಅಖಂಡತೆಯನ್ನು ಕಾಪಾಡಿಕೊಳ್ಳುವುದೂ ಮುಖ್ಯವಾದುದು. ಆದುದರಿಂದ ಈ ಯುದ್ಧದಲ್ಲಿ ಎಲ್ಲರೂ ಭಾಗವಹಿಸಿ ಭಾರತವು ಅವಿಭಾಜ್ಯವಾದುದು, ಭಾರತವು ಅಖಂಡವಾದುದು, ಎಂಬುದನ್ನು ಸಿದ್ಧಪಡಿಸಬೇಕೆಂಬುದು ನಮ್ಮ ಮನದಾಸೆಯಾಗಿದೆ. ಈ ಪ್ರಸಂಗದಲ್ಲಿ ಪರಮಗುರು ವಸುಬಂಧುಗಳವರ ಮಾರ್ಗದರ್ಶನವೂ ಇಲ್ಲವಾಯಿತಲ್ಲ! ಅವರೆಲ್ಲಿಗೆ ದಯಮಾಡಿಸಿದರೋ ತಿಳಿಯದಾಯಿತಲ್ಲ!

ಪ್ರತೀಹಾರಿ : (ಪ್ರವೇಶಿಸಿ) ಪರಮಭಟ್ಟಾರಕರಿಗೆ ವಿಜಯವಾಗಲಿ! ಮಹಾರಾಜ ಯಶೋಧರ್ಮ ಭೂಪಾಲರ ರಾಜದೂತನು ಬಂದಿದ್ದು ಮಹಾಪ್ರಭುಗಳ ದರ್ಶನಕ್ಕೆ ಅನುಮತಿಯನ್ನು ಬೇಡುತ್ತಲಿದ್ದಾನೆ.

ಬಾಲಾದಿತ್ಯ : (ಉತ್ಸುಕತೆಯಿಂದ) ಯಶೋಧರ್ಮರ ರಾಜದೂತನೆ? ಬರಹೇಳು.

ಪ್ರತೀಹಾರಿ : ಅಪ್ಪಣೆ ಮಹಾಪ್ರಭು. (ಬಾಗಿ ಹೋಗುವನು. ಯಶೋಧರ್ಮನ ರಾಜದೂತನು ಪ್ರವೇಶಿಸುವನು. ಅವನ ಸ್ಫುರದ್ರೂಪವನ್ನು ಕಂಡು ಎಲ್ಲರ ಕುತೂಹಲ ಕೆರಳುವುದು.)

ರಾಜದೂತ : (ಬಾಗಿ ವಂದಿಸಿ) ಮಹಾಪ್ರಭುಗಳಿಗೆ ವಿಜಯವಾಗಲಿ. ಮಾಳವಾಧೀಶ ಯಶೋಧರ್ಮ ಮಹಾರಾಜರು ಈ ಪತ್ರವನ್ನು ಕಳಿಸಿದ್ದಾರೆ.

ಬಾಲಾದಿತ್ಯ : ಪ್ರಧಾನಿಗಳೆ, ಓಲೆಯನ್ನು ಓದಿ ಹೇಳಿರಿ.

ನಯಸಾರ : ಅಪ್ಪಣೆ ಮಹಾಪ್ರಭು. (ಓಲೆಯನ್ನು ಒಡೆದು ಅದರ ಮೇಲೆ ಒಮ್ಮೆ ದೃಷ್ಟಿ ಹರಿಸುವನು. ಅವನ ಮುಖದ ಮೇಲೆ ವಿವಿಧ ಭಾವಗಳು ಮೂಡಿ ಮರೆಯಾಗುವುವು. ಕೊನೆಗೆ ಗಂಭೀರವಾಗಿ ಓದತೊಡಗುವನು.)

"ಗುಪ್ತಸಾಮ್ರಾಟ ಶ್ರೀ ನರಸಿಂಹ ಗುಪ್ತ ಬಾಲಾದಿತ್ಯ ಮಹಾರಾಜರ ಸಮಕ್ಷಮಕ್ಕೆ–ಮಾಳವಾಧೀಶ ಯಶೋಧರ್ಮ ಭೂಪಾಲರ ವಿಜ್ಞಾಪನೆಗಳು.

ಇಂದು ಮತ್ತೆ ಈ ದೇಶವನ್ನು ಕಬಳಿಸಲು ಹೊಂಚುಹಾಕುತ್ತಲಿರುವ ಹೂಣ ದೊರೆ ಮಿಹಿರಕುಲನು ಈ ಹಿಂದೆಯೂ ಈ ದೇಶದೊಳಗೆ ನುಗ್ಗಿ ಬಂದಿದ್ದನೆಂಬುದನ್ನು ತಾವು ಮರೆತಿರಲಾರಿರಿ. 'ನಾವಿಬ್ಬರೂ ರಾಮ ಲಕ್ಷ್ಮಣರಂತೆ ಒಂದಾಗಿ ಈ ಕಬಂಧನ ಎರಡೂ ತೋಳುಗಳನ್ನು ಒಮ್ಮೆಗೆ ಕತ್ತರಿಸೋಣ' ಎಂದು ನಾವಂದು ತಮಗೆ ಕಳಿಸಿದ್ದ ಕೋರಿಕೆಯನ್ನೂ ತಾವು ಮರೆತಿರಲಾರಿರಿ. ಆ ಕೋರಿಕೆಯನ್ನು ಅಂದು ತಾವು ಒಪ್ಪಿದ್ದರೆ ಇಂದು ಈ ವಿಷಮ ಪ್ರಸಂಗ ಒದಗಿ ಬರುತ್ತಿರಲಿಲ್ಲ!...

ಬಾಲಾದಿತ್ಯ : (ಬೇಸರಪಟ್ಟುಕೊಂಡು) ಇದೇನು, ಆಪಾದನೆಯಿಂದಲೇ ಆರಂಭವಾಗಿದೆಯಲ್ಲ ಈ ಪತ್ರ?

ನಯಸಾರ : ಮುಂದೆ ಆಲಿಸಬೇಕು ಮಹಾಪ್ರಭು. (ಓದುವನು)

"...ತಾವಂದು ನಮಗೆ ಸಹಾಯವನ್ನು ನಿಷ್ಕಾರಣವಾಗಿ ನಿರಾಕರಿಸಿದರೂ ನಾವು ಅಸಹಾಯಶೂರರಾಗಿ, ಏಕಾಂಗವೀರರಾಗಿ ಈ ಮದಾಂಧ ಕಬಂಧನ ಒಂದು ತೋಳನ್ನು ಕತ್ತರಿಸಿ ಕಳಿಸಿದುದೂ ತಮಗೆ ಗೊತ್ತಿರುವ ವಿಷಯವೇ..."

ಬಾಲಾದಿತ್ಯ : (ರೇಗಿ) ಸಾಕು ನಿಲ್ಲಿಸಿರಿ ಪ್ರಧಾನಿಗಳೆ, ಅಹಂಮನ್ಯತೆಯ ಅತಿರೇಕದಿಂದ ಕೂಡಿರುವ ಈ ಪತ್ರವನ್ನು ಇಲ್ಲಿಗೇ ಮುಗಿಸಿಬಿಡಿರಿ.

ರಾಜದೂತ : ಮಹಾಪ್ರಭುಗಳು ಅವಿನಯವನ್ನು ಕ್ಷಮಿಸಬೇಕು. ಪತ್ರವನ್ನು ಪೂರ್ಣವಾಗಿ ಪರಾಂಬರಿಸಬೇಕು. ಪತ್ರದ ಕೊನೆಯಲ್ಲಿ ಸಹಾಯದ ಆಶ್ವಾಸನವಿದೆ.

ಬಾಲಾದಿತ್ಯ : ನಿನಗೆ ಹೇಗೆ ಗೊತ್ತು ಈ ಪತ್ರದೊಳಗಣ ವಿಷಯ? ನೀನೇನು ರಾಜದೂತನೊ ರಾಜನ ಆಪ್ತಾಲೋಚಕನೊ?

ರಾಜದೂತ : ಎರಡೂ ಅಹುದು ಮಹಾಪ್ರಭು! ದೇಶಕ್ಕೆ ದುರ್ಧರಪ್ರಸಂಗ ಒದಗಿ ಬರಲಿರುವಾಗ ನಮ್ಮ ಮಹಾರಾಜರ ಸಹಾಯವನ್ನು ಸ್ವೀಕರಿಸಿರಿ ನಿರಾಕರಿಸಬೇಡಿರಿ.

ಬಾಲಾದಿತ್ಯ : ನಿರಾಕರಿಸಿದರೆ?

ರಾಜದೂತ : ನಿರಾಕರಿಸಿದರೆ ನಿರಾಕರಿಸಿದವರಿಗೇ ನಷ್ಟ. (ಗಂಭೀರವಾಗಿ) ನಮ್ಮ ಮಹಾರಾಜರ ಸಹಾಯವಿಲ್ಲದೆ ತಾವು ಮಿಹಿರಕುಲನನ್ನು ಜಯಿಸಲಾರಿರಿ!

ಸಮರಸಿಂಹ : (ಕೆರಳಿ) ಮಹಾಪ್ರಭು, ತನ್ನ ಎಲ್ಲೆಯನ್ನು ಮೀರಿ ಮಾತನಾಡುತ್ತಲಿರುವ ಈ ರಾಜದೂತನನ್ನು ಬಂಧಿಸಿ ಸೆರೆಮನೆಗೆ ಕಳಿಸಲು ಅಪ್ಪಣೆಯಾಗಬೇಕು.

ರಾಜದೂತ : (ವಿಚಲಿತನಾಗದೆ) ರಾಜದೂತನನ್ನು ಸೆರೆಹಿಡಿಯಬಹುದೆಂದು ಸಾರ್ವಭೌಮರು ತೀರ್ಮಾನಿಸಿದರೆ ಆಗಬಹುದು!

ಬಾಲಾದಿತ್ಯ : ದಂಡನಾಯಕರೆ, ಸ್ವಾಮಿಕಾರ್ಯನಿಮಿತ್ತ ಬಂದ ರಾಜದೂತರನ್ನು ಬಂಧಿಸಬಾರದು. ರಾಜದೂತ, ಹಿಂದಿರುಗಿ ಹೋಗು. ಗುಪ್ತಸಾಮ್ರಾಟರು ಯಶೋಧರ್ಮರ ಸಹಾಯವಿಲ್ಲದೆಯೇ ಮಿಹಿರಕುಲನಿಗೆ ಮಣ್ಣು ಮುಕ್ಕಿಸಲು ಸಮರ್ಥರಿರುವರೆಂದು ನಿನ್ನ ದೊರೆಗೆ ತಿಳಿಸು.

ರಾಜದೂತ : ಮಹಾಪ್ರಭುಗಳೆ, ತಾವೀಗ ದೇಶದ ಹಿತದ ದೃಷ್ಟಿಯಿಂದ ತೀರ್ಮಾನವನ್ನು ಕೈಕೊಳ್ಳಬೇಕು-ಪ್ರತಿಷ್ಠೆಯ ದೃಷ್ಟಿಯಿಂದಲ್ಲ. ಈಗ ಘಟಿಸುವ ಅಲ್ಪ ಪ್ರಮಾದವೂ ಮುಂದೆ ಭೀಕರ ಪರಿಣಾಮಕ್ಕೆ ಕಾರಣವಾದೀತು!

ಬಾಲಾದಿತ್ಯ : (ಕಿಡಿಕಿಡಿಯಾಗಿ) ಗರ್ವಿಷ್ಠ ರಾಜನ ರಾಜದೂತನೂ ಗರ್ವಿಷ್ಠ! (ಇದೇ ಆಜ್ಞೆಯೆಂದು ಭಾವಿಸಿ ಪ್ರತೀಹಾರಿ ರಾಜದೂತನನ್ನು ಎಳೆದೊಯ್ಯಲು ಬರುತ್ತಾನೆ. ಅದನ್ನು ಕಂಡು ಹೌಹಾರಿದಂತೆ ಹಿಂದೆ ಸರಿದು)

ರಾಜದೂತ : ಪ್ರತೀಹಾರಿ, ನನ್ನನ್ನು ಮುಟ್ಟಬೇಡ!

ಪ್ರತೀಹಾರಿ : (ವ್ಯಂಗ್ಯವಾಗಿ) ಮುಟ್ಟದಿರಲು ನೀನೇನು ಹೆಂಗಸೆ?

ರಾಜದೂತ : (ಆಢ್ಯತೆಯನ್ನು ನಟಿಸಿ) ನಾನು ರಾಜದೂತನೆಂಬುದು ನೆನಪಿರಲಿ! (ಪ್ರತೀಹಾರಿ ಹಿಡಿಯ ಹೋಗುತ್ತಾನೆ. ರಾಜದೂತ ಲಗುಬಗೆಯಿಂದ ಹಿಂದೆ ಸರಿಯುತ್ತಾನೆ. ಈ ಗಡಿಬಿಡಿಯಲ್ಲಿ ರಾಜದೂತನ ತಲೆಯ ವಸ್ತ್ರ ಕಳಚಿ ಬೀಳುತ್ತದೆ. ಹೆಣ್ಣಿನ ತಲೆ ಕಾಣಿಸುತ್ತದೆ.)

ಪ್ರತೀಹಾರಿ : (ಹಿಂಜರಿದು) ಹೆಂಗಸು!

ಬಾಲಾದಿತ್ಯ : (ಚಕಿತನಾಗಿ) ಹೆಂಗಸು!

ನಯಸಾರ : (ಗುರುತು ಹಿಡಿದು) ಮಹಾಪ್ರಭು, ಇವರು ಯಶೋಧರ್ಮ ಭೂಪಾಲರ ಪಟ್ಟದರಸಿ ರಾಜ್ಯಲಕ್ಷ್ಮೀದೇವಿಯವರು!

ಬಾಲಾದಿತ್ಯ : (ಆಶ್ಚರ್ಯದಿಂದ) ಸಹೋದರಿ ರಾಜ್ಯಲಕ್ಷ್ಮೀದೇವಿಯವರೆ?

ರಾಜ್ಯಲಕ್ಷ್ಮಿ : ಹೌದು, ಬಂಧು ಬಾಲಾದಿತ್ಯ, ನಾನು ರಾಜ್ಯಲಕ್ಷ್ಮಿ.

ರಾಜಮಾತೆ : (ಗವಾಕ್ಷದಲ್ಲಿ ಎದ್ದು ನಿಂತು ಹಿಗ್ಗಿನಿಂದ) ಮಾಳವದ

ರಾಜ್ಯಲಕ್ಷ್ಮಿ ಮಗಧಕ್ಕೆ ವಿಜಯಲಕ್ಷ್ಮಿಯಾಗಿ ಬಂದಿದ್ದಾಳೆ. ಬಾ ಮಗಳೆ ನನ್ನ ಹತ್ತಿರ ಬಾ!

ಬಾಲಾದಿತ್ಯ : (ಯಶೋಧರ್ಮನ ಪತ್ರವನ್ನೆತ್ತಿ) ಮಾತೆ, ಯಶೋಧರ್ಮ ಭೂಪಾಲರ ಈ ಪತ್ರ–

ರಾಜ್ಯಲಕ್ಷ್ಮಿ : ಸೋದರ, ಅದು ಮಾಳವಾಧೀಶರು ಬರೆದ ಪತ್ರವಲ್ಲ ಅವರ ಹೆಸರಿನಲ್ಲಿ ನಾನು ಬರೆದ ಪತ್ರ. ಇಲ್ಲಿದೆ ಅವರು ಬರೆದ ಪತ್ರ. (ಕೊಡುವಳು. ಬಾಲಾದಿತ್ಯನೇ ಓದುವನು)

ಬಾಲಾದಿತ್ಯ : (ಓದುವನು)

ಪರಮ ಭಟ್ಟಾರಕ ಭಾರತ ಸಾಮ್ರಾಟ ಶ್ರೀ ನರಸಿಂಹಗುಪ್ತ ಬಾಲಾದಿತ್ಯ ಮಹಾರಾಜರ ಸನ್ನಿಧಿಗೆ–ಸಾಮಂತ ಯಶೋಧರ್ಮನ ವಿಜ್ಞಾಪನೆಗಳು.

ವೃಕ್ಷದ ವಿರುದ್ಧ ಸಿಡಿದೆದ್ದ ಶಾಖೆಯಂತೆ ಭಾರತದ ಅವಿಭಕ್ತತೆಯ ಏಕತ್ವದ ಸಂಕೇತವೆನಿಸಿರುವ ಗುಪ್ತಸಾಮ್ರಾಜ್ಯದಿಂದ ಸಿಡಿದು ಬೇರೆಯಾಗಿದ್ದ ನನಗೆ ಪರಮ ಗುರು ವಸುಬಂಧುಗಳು ದಾರಿ ತೋರಿದರು (ಪತ್ರ ಓದುವುದನ್ನು ಸ್ವಲ್ಪ ನಿಲ್ಲಿಸಿ – 'ಗುರುಗಳ ಕರುಣೆ ಅಲ್ಲಿಯವರೆಗೂ ಹರಿಯಿತೆ!' ಎಂದು ತನ್ನಷ್ಟಕ್ಕೆ ಹೇಳಿಕೊಂಡು ಮುಂದೆ ಸಾಗುವನು.)

"....ಭಾರತದಲ್ಲಿರುವ ಎಲ್ಲ ರಾಜ್ಯಗಳೂ ಒಂದು ಕೇಂದ್ರಶಕ್ತಿಗೆ ಅಧೀನವಾಗಿ ನಡೆದರೆ ಮಾತ್ರ ಅವುಗಳ ಮತ್ತು ಭಾರತದ ಕಲ್ಯಾಣ ಸಾಧ್ಯ. ಇಲ್ಲದಿದ್ದರೆ ಎಲ್ಲರೂ ದುರ್ಬಲರಾಗಿ ವೈರಿ ಮಾತ್ರ ಸಬಲನಾಗುವನು! ನಮ್ಮಿಬ್ಬರಲ್ಲಿದ್ದ ಅನೈಕ್ಯದ ಲಾಭ ಪಡೆದೇ ಮಿಹಿರಕುಲನಿಂದು ಮತ್ತೆ ಭಾರತದ ಮೇಲೇರಿ ಬರುವ ಹವಣಿಕೆಯಲ್ಲಿದ್ದಾನೆ ಇದನ್ನು ಸರ್ವಸಾಹಸ ಮಾಡಿ ತಡೆಯಬೇಕು!

ಭಾರತ ಸುರಕ್ಷಿತವಾಗಿದ್ದರೆ ಮಾತ್ರ ನಾವೆಲ್ಲರೂ ಸುರಕ್ಷಿತ! ಭಾರತದ ಯಾವ ಭಾಗದ ಮೇಲೆ ವೈರಿಯ ದಾಳಿಯಾದರೂ ಎಲ್ಲ ಭಾಗಗಳ ಮೇಲೆ ದಾಳಿಯಾದಂತೆ! ನನ್ನ ರಾಜ್ಯ ನಿನ್ನ ರಾಜ್ಯವೆಂಬ ಭಿನ್ನತೆಗಳೆಲ್ಲ ಈಗ ಬಯಲಾಗಬೇಕು. ಸಮಗ್ರ ಭಾರತದ ರಕ್ಷಣೆಗಾಗಿ ಸರ್ವರೂ ಸಿದ್ಧರಾಗಬೇಕು.

ಹೂಣರ ಹಾವಳಿಯನ್ನೊಮ್ಮೆ ಸಂಪೂರ್ಣವಾಗಿ ಸದೆಬಡಿಯುವ ಕಾರ್ಯವನ್ನು ಕೈಕೊಂಡಿರುವ ತಮಗೆ ನನ್ನ ಸಂಪೂರ್ಣ ಸಹಕಾರದ ಆಶ್ವಾಸನವನ್ನು ಈ ಪತ್ರದ ಮೂಲಕ ತಲುಪಿಸುತ್ತಲಿದ್ದೇನೆ. ನನ್ನ ಸೈನ್ಯ, ಕೋಶ, ನನ್ನ ರಾಜ್ಯದ ಸಮಸ್ತ ಸಾಧನ ಸಾಮಗ್ರಿಗಳೂ ರಾಷ್ಟ್ರರಕ್ಷಣೆಯ ಈ ಪವಿತ್ರ ಕಾರ್ಯಕ್ಕೆ ಮೀಸಲು!

ಈ ರಾಷ್ಟ್ರರಕ್ಷಣೆಯ ಸಂಗ್ರಾಮದಲ್ಲಿ ಪ್ರತ್ಯಕ್ಷವಾಗಿ ಭಾಗಿಯಾಗುವ ಭಾಗ್ಯ ನನಗಿಲ್ಲ. ವೃದ್ಧಾಪ್ಯ ಅಡ್ಡಬರುತ್ತಿದೆ. ಆದರೆ ಹೂಣ ವಿಜೇತ, ಪ್ರಚಂಡ ಪರಾಕ್ರಮಿ

ಸಾಮ್ರಾಟ್ ಸ್ಕಂದಗುಪ್ತರ ವಂಶಜರೂ ಮಹಾವೀರರೂ ಆದ ತಮ್ಮ ನಾಯಕತ್ವದಲ್ಲಿ ಭಾರತಕ್ಕೆ ವಿಜಯ ನಿಶ್ಚಿತವೆಂದು ನಂಬಿದ್ದೇನೆ.

ವಿಧೇಯ, ಯಶೋಧರ್ಮ

(ಪತ್ರ ಓದಿ ಬಾಲಾದಿತ್ಯನ ಕುತ್ತಿಗೆ ಬಿಗಿದು ಬರುವುದು. ಪತ್ರವನ್ನು ಕಣ್ಣುಗಳಿಗೆ ಹಚ್ಚಿ ಮುಚ್ಚಿಟ್ಟು) ಸೋದರಿ-ರಾಜ್ಯಲಕ್ಷ್ಮಿ, ರಾಷ್ಟ್ರಭಕ್ತಿಯ ಸುಳಿವ ಶಾಸನದಂತಿರುವ ಈ ಪತ್ರವನ್ನು ಬಚ್ಚಿಟ್ಟು ಆ ಪತ್ರವನ್ನು ಈ ವೇಷದಲ್ಲಿ ಕೊಡಲು ಕಾರಣ?

ರಾಜ್ಯಲಕ್ಷ್ಮಿ : ಬಂಧು ಬಾಲಾದಿತ್ಯನಿಗೆ ಅಂಟಿದ್ದ ಸಾಮ್ರಾಜ್ಯದ ಅಭಿಮಾನವು ಅಳಿದು ಅಖಂಡ ಭಾರತದ ಅಭಿಮಾನ ಉದಯಿಸಲಿ-ಎಂದು. ನೆನಪಿರಲಿ ಬಂಧು, ಗುಪ್ತ ಸಾಮ್ರಾಜ್ಯವೂ ಭಾರತದ ಒಂದು ಭಾಗ. ಈ ಒಂದು ಭಾಗ ಮಾತ್ರ ನಿನ್ನ ಅಭಿಮಾನಕ್ಕೆ ಅರ್ಹವಾದುದೇನಲ್ಲ. ಭಾರತದ ಬೇರೆ ಭಾಗಗಳೂ ಅಷ್ಟೇ ಅಭಿಮಾನಾರ್ಹವಾದವುಗಳು. ಎಲ್ಲ ಭಾಗಗಳೂ ಕೇಂದ್ರಶಕ್ತಿಗೆ ಅಧೀನವಾಗಿ ನಡೆಯುವುದು ಎಷ್ಟು ಅಗತ್ಯವೋ ಅಷ್ಟೇ ಕೇಂದ್ರವೂ ಎಲ್ಲ ಭಾಗಗಳ ಬಗ್ಗೆ ಆಸಕ್ತಿ, ಅಭಿಮಾನ ತಾಳುವುದೂ ಅಗತ್ಯ. ಇದರ ಮನವರಿಕೆ ನಿನಗಾಗಿದ್ದರೆ ನಾನು ಬಂದ ಕಾರ್ಯ ನೆರವೇರಿದಂತೆ.

ಬಾಲಾದಿತ್ಯ : ಸಂಪೂರ್ಣ ಮನವರಿಕೆಯಾಗಿದೆ ಸೋದರಿ. ನಾನು ಇಂದಿನಿಂದ ಸಮಗ್ರ ಭಾರತದ ಸೇನಾನಿ, ಭಾರತದ ಎಲ್ಲ ಭಾಗಗಳ ಅಭಿಮಾನಿ (ಎಲ್ಲರೂ ಹರ್ಷೋದ್ರೇಕದಿಂದ 'ಭಾರತವೀರ ಬಾಲಾದಿತ್ಯರಿಗೆ ಜಯವಾಗಲಿ ಎಂದು ಉದ್ಘೋಷಿಸುತ್ತಾರೆ .)

ರಾಜಮಾತೆ : (ಮತ್ತೆ ಗವಾಕ್ಷದಲ್ಲಿ ಎದ್ದು) ಬಾ ಮಗಳೆ, ಬಹಳ ಬಳಲಿ ಬಂದಿರುವೆ ವಿಶ್ರಾಂತಿ ಪಡೆ ನಡೆ.

ಮಿತ್ರಾ : (ತಾನೂ ಎದ್ದು) ಅವರ ಆದರ ಸತ್ಕಾರಕ್ಕೆ ನಾನಿದ್ದೇನೆ ಅತ್ತೆಯವರೆ.

ರಾಜಮಾತೆ : (ಮಿತ್ರಳ ಮೈದಡವಿ) ನೀನೇ ಉಪಚರಿಸಮ್ಮ, ನಡೆಯಿರಿ. (ಮೂವರೂ ಹೋಗುವರು. ಪ್ರತೀಹಾರಿ ಪ್ರವೇಶಿಸುವನು)

ಪ್ರತೀಹಾರಿ : (ಪ್ರವೇಶಿಸಿ)-ಪರಮ ಭಟ್ಟಾರಕರಿಗೆ ವಿಜಯವಾಗಲಿ! ಬೌದ್ಧಗುರುಗಳೊಬ್ಬರು ಪ್ರಭುಗಳ ಸಂದರ್ಶನಾಪೇಕ್ಷಿಗಳಾಗಿ ಆಗಮಿಸಿದ್ದಾರೆ.

ಬಾಲಾದಿತ್ಯ : ಗೌರವದೊಡನೆ ಕರೆದು ತಾ.

ಪ್ರತೀಹಾರಿ : ಮಹದಾಜ್ಞೆ (ಹೋಗುವನು. ಬೌದ್ಧಗುರುಗಳು ಬರುವರು)

ಬೌದ್ಧಗುರು : ಭಾರತರವಿ ಬಾಲಾದಿತ್ಯ ಮಹಾಪ್ರಭುಗಳಿಗೆ ಜಯವಾಗಲಿ!

ಬಾಲಾದಿತ್ಯ : (ಬಾಗಿ) ಅನುಗೃಹೀತನಾದೆ. ಈ ಆಸನವನ್ನು ಅಲಂಕರಿಸಿರಿ (ಬೌದ್ಧ ಗುರುಗಳು ಕುಳಿತುಕೊಳ್ಳಲು) ತಮಗೆ ನಾನಾವ ಸೇವೆಯನ್ನು ಸಲ್ಲಿಸಲಿ?

ಬೌದ್ಧಗುರು : ಆಶ್ರಯವನ್ನು ಯಾಚಿಸಬಂದಿದ್ದೇವೆ ಪ್ರಭುಗಳೆ, ಆಶ್ರಯ ನೀಡಿರಿ ನಮಗೆ. ತಾಮಸದ, ಹಿಂಸೆಯ, ರಕ್ತಪಿಪಾಸೆಯ, ಪಾಪ ಲಾಲಸೆಯ ಅಪರಾವತಾರವೆನಿಸಿದ ಮಿಹಿರಕುಲನ ಚಿತ್ರಹಿಂಸೆಯಿಂದ, ಅನಿಮಿತ್ತ ವೈರದಿಂದ, ಅವರ್ಣನೀಯ ಕ್ರೌರ್ಯದಿಂದ ಕಂಗೆಟ್ಟು ನಾವೂ ನಮ್ಮ ಅನುಯಾಯಿಗಳೂ ಎಂತೆಂತೋ ಪ್ರಾಣವನ್ನುಳಿಸಿಕೊಂಡು ತಮ್ಮ ಆಶ್ರಯವನ್ನು ಕೋರಿ ಬಂದಿದ್ದೇವೆ. ಆಶ್ರಯ ನೀಡಿ ಕಾಪಾಡಿರಿ!

ಬಾಲಾದಿತ್ಯ : ಚಿಂತಿಸಬೇಡಿರಿ. ತಾವೂ ತಮ್ಮ ಅನುಯಾಯಿಗಳೂ ಈ ಭರತ ಭೂಮಿಯಲ್ಲಿ ಸುಖವಾಗಿ ಇದ್ದುಬಿಡಿರಿ. ಭಾರತವು ಆಶ್ರಯ ಬೇಡಿ ಬಂದವರನ್ನು ಎಂದೂ ನಿರಾಕರಿಸಿಲ್ಲ, ಮುಂದೆಯೂ ನಿರಾಕರಿಸುವುದಿಲ್ಲ.

ನಯಸಾರ : ಮಹಾಪ್ರಭುಗಳು ಅವಿನಯವನ್ನು ಕ್ಷಮಿಸಬೇಕು. ನಾವೀಗ ಇವರಿಗೆ ಆಶ್ರಯವಿತ್ತುದಾದರೆ ಇದೇ ನೆಪವನ್ನು ಮುಂದೊಡ್ಡಿ ಮಿಹಿರಕುಲನು ನಮ್ಮ ಮೇಲೆ ಈಗಲೇ ಯುದ್ಧವನ್ನು ಸಾರಿಬಿಡಬಹುದು. ಹಾಗಾದರೆ ನಮ್ಮ ಸಮರ ಸಿದ್ಧತೆಗೆ ಸಮಯ ಸಾಲದಂತಾಗುವುದು.

ಸಮರಸಿಂಹ : ಇದನ್ನು ನಾನೂ ಅನುಮೋದಿಸುತ್ತೇನೆ ಮಹಾಪ್ರಭು!

ಬಾಲಾದಿತ್ಯ : ಮಂತ್ರಿಗಳೆ, ಸೇನಾಪತಿಗಳೆ, ಮಿಹಿರಕುಲ ಪರಾಭೂತನಾದ ಮೇಲೆ ಇವರಿಗೆ ಆಶ್ರಯದ ಅಗತ್ಯವೇ ಉಳಿಯುವುದಿಲ್ಲವಲ್ಲ? ಆಗ ಆಶ್ರಯ ನೀಡಿದರೆ ಆವ ಫಲ? ಅಗತ್ಯವಿದ್ದಾಗ ದೊರೆಯದ ಆಶ್ರಯಕ್ಕೆ ಬೆಲೆಯೆಲ್ಲಿ? ಒಣಗುವ ಪೈರಿಗೆ ಬರದ ಮಳೆ ಒಣಗಿದ ಪೈರಿಗೆ ಒದಗಿದರೆ ಯಾವ ಲಾಭ? ಭಾರತಧರ್ಮ ಅಭಯ ಬೇಡಿ ಬಂದವರಿಗೆ ಆಶ್ರಯ ನೀಡೆಂದು ಸಾರಿ ಸಾರಿ ಹೇಳುತ್ತಿದೆ. ಆ ಧರ್ಮವಾಣಿಗೆ ಕಿವಿಗೊಟ್ಟು ಇವರಿಗೆ ಆಶ್ರಯವನ್ನಿತ್ತಿದ್ದೇವೆ. ಬರುವ ಪರಿಣಾಮಕ್ಕೆ ಸಿದ್ಧರಾಗಿದ್ದೇವೆ.

ಬೌದ್ಧಗುರು : ಧರ್ಮವನ್ನು ಶರಣು ಹೊಕ್ಕ ಧರ್ಮಾತ್ಮ, ಧರ್ಮವು ತಮ್ಮನ್ನು ರಕ್ಷಿಸಲಿ! ಕೊನೆಗೆ ಧರ್ಮಕ್ಕೇ ಜಯ, ಅಧರ್ಮಕ್ಕಲ್ಲ; ಸತ್ಯಮೇವ ಜಯತೇ–ನಾನೃತಂ!

(ತೆರೆ)

ಎರಡನೆಯ ಅಂಕ

ನೋಟ ೧

(ಮಿಹಿರಕುಲನ ಒಡ್ಡೋಲಗ, ಮಿಹಿರಕುಲ, ಅವನ ಸೇನಾನಾಯಕ ಶುಂಭ, ಮಂತ್ರಿ ದುರ್ಬುದ್ಧಿ ಆಸೀನರಾಗಿದ್ದಾರೆ. ನರ್ತಕಿಯ ನೃತ್ಯ ನಡೆದಿದೆ– ಹಾಡಿನೊಡನೆ.)

ಹಾಡು :

ಮಿಹಿರಕುಲ ಅತುಲಬಲ
ಜಯಿಸಿ ಆಳು ಭೂತಲ ॥ ಪ ॥
ಲೋಕವೀರ ಸಮರಧೀರ
ಓ ಅನಂಗ ಸುಂದರ
ಭೂಮಿವರ ವೈರಿಹರ
ಓ ಉದಾರ ಬಂಧುರ ॥
ಮಿಹಿರಕುಲ ಅತುಲಬಲ
ಜಯಿಸಿ ಆಳು ಭೂತಲ!

ಮಿಹಿರಕುಲ : (ಮೀಸೆ ಹುರಿಗೊಳಿಸುತ್ತ ಮದ್ಯ ಸೇವಿಸುತ್ತ) ಭೇಷ್ ಭೇಷ್ ಕುಣಿ ನರ್ತಕಿ, ಇನ್ನೂ ಜೋರಾಗಿ ಕುಣಿ (ನರ್ತಕಿ ವೇಗವಾಗಿ ಕುಣಿಯುವಳು) ಇನ್ನೂ ಜೋರಾಗಿ ಕುಣಿ ಇನ್ನೂ ಇನ್ನೂ ಜೋರಾಗಿ ಕುಣಿ. (ಅವನು ಹೇಳಿದಂತೆ ನರ್ತಕಿ ವೇಗ ಹೆಚ್ಚಿಸುತ್ತಲೇ ಹೋಗುವಳು ಕೊನೆಗೆ ಬಿದ್ದುಬಿಡುವಳು. ಮಿಹಿರಕುಲ ಗಹಗಹಿಸಿ ನಕ್ಕು) ಬಿದ್ದು ಬಿಟ್ಟೆಯಾ? ಬಹಳ ಸಂತೋಷ. ಎಲ್ಲಿ ಗಾಯವಾಗಿ ರಕ್ತವೇನಾದರೂ ಹರಿಯಿತೆ?

ನರ್ತಕಿ : ತಮ್ಮ ಕೃಪೆಯಿಂದ ಗಾಯವೇನೂ ಆಗಲಿಲ್ಲ ಮಹಾಪ್ರಭು.

ಮಿಹಿರಕುಲ : ಹ್ಹ ಹ್ಹ ಹ್ಹ–ನಮ್ಮ ಕೃಪೆಯಿಂದ ನಿನಗೇನೂ ಆಗಲಿಲ್ಲ! ಮತ್ತೆ ಕುಣಿ, ಮತ್ತೆ ಕುಣಿ, ಇನ್ನೂ ಕುಣಿ, ಜೋರಾಗಿ ಕುಣಿ ಹುಂ–ಒತ್ತರದಿಂದ ನೃತ್ಯಮಾಡು. (ನರ್ತಕಿ ಮತ್ತೆ ಬೀಳುವಳು. ಅದನ್ನು ಕಂಡು ಜಿಗುಪ್ಸೆಯಿಂದ) ಎಷ್ಟು ದುರ್ಬಲಳಿದ್ದಾಳೆ ಈ ನರ್ತಕಿ! ನಮ್ಮ ಆಸ್ಥಾನದಲ್ಲಿ ದುರ್ಬಲರಿಗೆ ಸ್ಥಳವಿಲ್ಲ. ಸಾಕು ನೃತ್ಯ. ಇವಳನ್ನು ಕಳಿಸಿಬಿಡಿರಿ. (ನರ್ತಕಿ ನಮಸ್ಕರಿಸಿ ಹೊರಟುಹೋಗುವಳು.) ನಮಗೆ ನಿಜವಾಗಿಯೂ ಆನಂದವಾಗಬೇಕಾದರೆ ಯುದ್ಧ ಬೇಕು! ರಕ್ತದ ನದಿಗಳು ಹರಿಯುವುದನ್ನು ನಾವು ನೋಡಬೇಕು!

ದುರ್ಬುದ್ಧಿ : ಆ ಸುಸಂಧಿ ದೂರವಿಲ್ಲ ಮಹಾಪ್ರಭು! ಬಹುಬೇಗ ತಮ್ಮ ಮನದಾಸೆ ಈಡೇರುವುದು.

ಮಿಹಿರಕುಲ : (ಹಿಗ್ಗಿ) ಅದು ಹೇಗೆ?

ದುರ್ಬುದ್ಧಿ : ಗುಪ್ತಸಾಮ್ರಾಟ ಬಾಲಾದಿತ್ಯನು ತನ್ನ ಗಡಿಗಳಲ್ಲಿ ನಾವು ನುಗ್ಗಿರುವುದನ್ನೂ ಲೆಕ್ಕಿಸದೆ ನಮ್ಮ ರಾಜ್ಯದಿಂದ ಓಡಿಹೋಗಿರುವ ಬೌದ್ಧ ಗುರುಗಳಿಗೂ ಅವರ ಅನುಯಾಯಿಗಳಿಗೂ ಆಶ್ರಯವಿತ್ತಿದ್ದಾನೆ. ಅವರಿಗೆ ಆಶ್ರಯವಿತ್ತುದು ತಪ್ಪು, ಕೂಡಲೆ ಅವರನ್ನು ಹಿಂದಿರುಗಿಸಬೇಕೆಂದು ಹೇಳಿಕಳಿಸಿದರೆ 'ಅದಾಗದು, ಬಂದದ್ದೆಲ್ಲ ಬರಲಿ' ಎಂದು ಉತ್ತರ ಕಳಿಸಿದ್ದಾನೆ.

ಮಿಹಿರಕುಲ : (ಅವಡುಗಚ್ಚಿ) ಆ ಬಾಲಕ ಬಾಲಾದಿತ್ಯನಿಗೆ ಇಷ್ಟು ಧೈರ್ಯ ಬಂದಿದೆಯೆ? ಬಂದದ್ದು ಒಳ್ಳೆಯದೇ ಆಯಿತು. ಹಿಮಗಿರಿಯಿಂದ ಹರಿಯುತ್ತಿರುವ ಹೊಳೆಗಳೆಲ್ಲ ಕೆನ್ನೀರಿನಿಂದ ಕೆಂಪಾಗಿ ಹರಿಯುವುದನ್ನು ನೋಡಿ ನಲಿಯುವೆವು! ಅಹಾಹಾ, ಅದೆಷ್ಟು ಆಹ್ಲಾದಕರವಾಗಿ ತೋರಬಹುದು ಆ ದೃಶ್ಯ! ಆ ದೃಶ್ಯವನ್ನು ನೋಡಲು ನಾವು ಆತುರರಾಗಿದ್ದೇವೆ–ದುರ್ಬುದ್ಧಿ ಕಾತರರಾಗಿದ್ದೇವೆ! ಯುದ್ಧವನ್ನು ಸಾರಿಬಿಡೋಣ ಬಾಲಾದಿತ್ಯನ ಮೇಲೆ. ತಡವೇಕೆ? ಶುಭಸ್ಯ ಶೀಘ್ರಂ!

ದುರ್ಬುದ್ಧಿ : ಯುದ್ಧ ಸಾರುವುದಕ್ಕಿಂತ ಯುದ್ಧ ಸಾರದೆಯೇ ಸಮರ ಪ್ರಾರಂಭಿಸುವುದು ನಮಗೆ ಲಾಭಕರವಾದುದು ಮಹಾಪ್ರಭು. ಮೈಮರೆತ ವೈರಿಯ ಮೇಲೆ ಮುನ್‌ಸೂಚನೆಯಿಲ್ಲದೆಯೇ ದಾಳಿ ಮಾಡುವುದರಲ್ಲಿ ಬಹಳ ಪ್ರಯೋಜನವಿದೆ.

ಮಿಹಿರಕುಲ : (ಹಿಗ್ಗಿ) ಹೌದು–ಹೌದು, ಮಲಗಿದವರನ್ನು ಮೇಲೇಳುವ ಮುನ್ನವೆ ತುಂಡರಿಸಿ ರುಂಡ ಚೆಂಡಾಡಿಬಿಡಬಹುದು! ಸೇನಾಪತಿ ಶುಂಭ, ಸುಮ್ಮನೇಕೆ ಕುಳಿತಿರುವಿ!

ಶುಂಭ : (ಧಿಗ್ಗನೆದ್ದು ವಂದಿಸಿ) ಮಹದಾಜ್ಞೆಯ ದಾರಿಯನ್ನೇ ಕಾಯುತ್ತಲಿದ್ದೆ ಮಹಾಪ್ರಭು.

ಮಿಹಿರಕುಲ : ಹೆಸರಿಗೆ ತಕ್ಕ ಶುಂಭ, ಶಾಂತಿಗೆ ಮಾತ್ರ ನನ್ನ ಆಜ್ಞೆ ಬೇಕು, ಯುದ್ಧಕ್ಕೇಕೆ ಆಜ್ಞೆ? ಕಾಯಲು ಅನುಮತಿ ಬೇಕಲ್ಲದೆ ಕೊಲ್ಲಲು ಅನುಮತಿ ಬೇಕೆ? ನಿತ್ಯ ಸಹಸ್ರ ಜನರ ಶಿರಚ್ಛೇದನವಾದರೂ ಆಗದಿದ್ದರೆ ಮಿಹಿರಕುಲನಿಗೆ ನಿದ್ರೆ ಬರುವುದಿಲ್ಲವೆಂಬುದನ್ನು ಮರೆತೆಯಾ?

ಶುಂಭ : ಆ ಕಾರ್ಯ ನಿಯಮಿತವಾಗಿ ನಡೆದೇ ಇದೆ ಮಹಾಪ್ರಭು. ಆದರೆ ಯುದ್ಧ....

ಮಿಹಿರಕುಲ : ಯುದ್ಧ ನಿತ್ಯ ನಿಯಮಕ್ಕೆ ವಿರುದ್ಧವಾದುದೇನು? ಬೆಪ್ಪೆ, ಯುದ್ಧವೇ ರಾಜಧರ್ಮ, ಯುದ್ಧವೇ ವೀರಕರ್ಮ, ಯುದ್ಧವೇ ಮಿಹಿರಕುಲನ ಹೊಸ ಸಿದ್ಧಾಂತದ ಮರ್ಮ! ತಡವೇಕೆ? ಮೊಳಗಲಿ ರಣಕಹಳೆ, ಬೊಬ್ಬಿರಿಯಲಿ ರಣಭೇರಿ! (ಒಮ್ಮೆಗೆ ರಣವಾದ್ಯಗಳು ಅಬ್ಬರಿಸುವುದು. ಮಿಹಿರಕುಲ ನಲಿಯುತ್ತ) ಆನಂದ ಆನಂದ ಪರಮಾನಂದ! (ಅವನು ಕೇಕೆಹಾಕಿ ಕುಡಿಯುತ್ತ ಕುಣಿಯುತ್ತಿರುವಂತೆ)

(ತೆರೆ)

ನೋಟ ೨

(ನಗರವೀಥಿ–ಮತಿರಾಮ, ಬಲರಾಮರ ಪ್ರವೇಶ, ಬಲರಾಮನು ಓಡುತ್ತ ಬಂದು ಎಡವಿ ಬೀಳುತ್ತಾನೆ. ಮತಿರಾಮ ಅವನನ್ನು ಮೇಲೆತ್ತಿ–)

ಮತಿರಾಮ : ಅಲ್ಲೋ ಬಲರಾಮ, ಯಾವಾಗಲೂ ಕಾಲೆಳೆದುಕೊಂಡು ಬರೋವ್ನು ಇಂದೇನು ಆ ಜಲಧಿಯನೆ ಜಿಗಿದ ಆಂಜನೇಯನಾಗಿ ಬಿಟ್ಟೆಯಲ್ಲೊ?

ಬಲರಾಮ : (ಗಾಬರಿಗೊಂಡವನಂತೆ) ಬೇಗ ನಡೆಯೊ ಮತಿರಾಮ, ಆ ನೀಚರು ಇಲ್ಲಿಗೂ ಬಂದುಬಿಟ್ಟಾರು! ರಾಕ್ಷಸರು ಇದ್ದಾಂಗ ಇದ್ದಾರ ನೋಡೋ ಆ ಹೂಣರು!

ಮತಿರಾಮ : ಅವರು ರಾಕ್ಷಸರು ಇದ್ದಾಂಗ ಇದ್ದರೆ ನಾವೇನು ಕಡಿಮೆಯೇನೊ? ನೂರುಸಲ ರಾಕ್ಷಸರನ್ನು ಕೊಂದ ದೇವತೆಗಳೋ ನಾವು.

ಬಲರಾಮ : ಹಿಂದೆ ಹೇಗೆ ಕೊಂದಿದ್ರೋ ಮಹಾರಾಯಾ, ಇಂದು ಇವರನ್ನ ಕೊಲ್ಲೋದು ಆಗದ ಮಾತು ಬಿಡು. ಏನು ದಷ್ಟಪುಷ್ಟ ಜನ, ಎಂಥಾ ಆಯುಧ ಅವರವು! ಅಲ್ಲೊ–ಮುಂಗಾರ ಗುಡುಗು ಬಂದಾಂಗ ಬಂದಾರಲ್ಲೊ!

ಮತಿರಾಮ : ಅವರು ಗುಡುಗು ಬಂದಾಂಗ ಬಂದರೆ ನಾವು ಸಿಡಿಲು ಎರಗಿಧಾಂಗ ಎರಗೋಣ! ರಾಮ ಕೃಷ್ಣ ಭೀಮ ಅರ್ಜುನರ ಸಂತಾನ ನಾವು. ನೆನಪಿರಲಿ.

ಬಲರಾಮ : ನಮ್ಮ ಹೆಸರಿನೊಳಗ 'ರಾಮ' ಅಂತಾ ಇದ್ದ ಕೂಡ್ಲೆ ನಾವು ರಾಮ ಆಗಿ ಬಿಡ್ತೇವೇನೋ? ನಮ್ಮ ದೇಶದಾಗ ಮನಸ್ಯಾಹೇಗೋ ಇರಲಿ, ಹೆಸರು ಮಾತ್ರ ಜೋರಾಗಿ ಇರುತ್ತವೆ ನೋಡು!

ಮತಿರಾಮ : (ಬಲರಾಮನ ಮೋರೆ ತಿವಿದು) ಈ ಚಂದ್ರಾಮಗ ಬಲರಾಮ ಅಂತಾ ಇದ್ದಾಂಗ.

ಬಲರಾಮ : (ಸಿಟ್ಟಿಗೆದ್ದು) ನಾನೇನು ನನ್ನ ಹೆಸರಿಗೆ ತಕ್ಕಹಾಂಗ ಇಲ್ಲವೇನೊ

ಮತಿರಾಮ : ಬಿದ್ದು ಮಂಡೆ ಒಡೆದುಕೊಂಡ ಬಲರಾಮ, ಚೆನ್ನಿಗರಾಮ ಇನ್ನೊಮ್ಮೆ ಈ ಗಂಡಸ್ತನದ ಮಾತು ಅನ್ನಪಾ–ಈ ಪಾಪಿ ಕಿವಿ ಕೇಳಲಿ!

ಬಲರಾಮ : ಏ ಕೇಳ್ಳೋ, ಕಿವಿ ತೆರೆದು ಕೇಳು–ಈ ಬಲರಾಮ... ಈ ಬಲರಾಮ ... ಈ ಬಲರಾಮ....

ಮತಿರಾಮ : ಏನ್ಮಾಡ್ತಾನೆ ಈ ಬಲರಾಮ?

ಬಲರಾಮ : ಈ ಬಲರಾಮ ಈಗಿಂದೀಗಲೇ ಹೋಗಿ ನಾಲ್ಕು ಸೇರು ಗೋಧಿ ಒಂದು ಸೇರು ಬೇಳೆ ಧ್ವಂಸಮಾಡಿ ಬಿಡ್ತಾನೆ!

ಮತಿರಾಮ : ಭಾಪುರೆ ವೀರಾ, ನಿನ್ನಂಥವರು ಊರಿಗೆ ಹತ್ತುಮಂದಿ ಹುಟ್ಟಿದರೆ ಈ ದೇಶದ ಮೇಲೆ ಯಾರೂ ದಾಳಿ ಮಾಡೋದೆ ಬೇಕಿಲ್ಲ. ಈ ದೇಶಾನೆ ಒತ್ತಿಬೀಳುತ್ತೆ!

ಬಲರಾಮ : (ಬೇಸತ್ತ ದನಿಯಲ್ಲಿ) ಏನು ಮಾಡು ಅಂತಿಯೋ ಮಹಾರಾಯ. ಹೇಳು, ನೀ ಹೇಳಿಧಾಂಗ ಕೇಳ್ತಿನಿ.

ಮತಿರಾಮ : ಹೂಣರ ದಂಡು ಇನ್ನಷ್ಟು ಒಳಗೆ ನುಗ್ಗಿರೋ ವಿಷಯ ದೊರೆಗಳಿಗೆ ತಿಳಿಸಿ, ಈ ಗೂಢಚಾರರ ಕೆಲಸ ಕೆಲವು ಕಾಲ ನಿಲ್ಲಿಸಿ, ನಾವೂ ಸೈನ್ಯ ಸೇರಿ ಬಿಡೋಣ, ಯುದ್ಧಕ್ಕೆ ಹೋಗಿಬಿಡೋಣ.

ಬಲರಾಮ : (ಬೆದರಿ) ಸೈನ್ಯ–ಯುದ್ಧ! ಪೆದ್ದ, ಯುದ್ಧದ ಕಾಲದಲ್ಲಿ ಯಾರಾದರೂ ಸೈನ್ಯಕ್ಕೆ ಸೇರ್ತಾರೇನೊ? ಶಾಂತಿಕಾಲದಲ್ಲಾದರೆ ಸ್ವಲ್ಪ 'ಎಡ–ಬಲ–ಎಡ– ಬಲ–ಎಡ–ಬಲ' ಮಾಡಿ ಸುಗ್ರಾಸ ಭೋಜನ ಹೊಡೆದು ಸುಖವಾಗಿ ಮಲಗಿಬಿಡಬಹುದು.

ಮತಿರಾಮ : ಎಲ್ಲಿಹೋದ್ರೂ ಗೋದಿ ವೈರಿಯಾಗಿಯೇ ಹೋಗುವಿಯೆನ್ನು?

ಬಲರಾಮ : ನಾನು ಗೋಧಿಯ ವೈರಿಯೆ? ಹೊರಗೆ ಅವು ಇರಿವೆ, ಇಲಿ, ಹೆಗ್ಗಣಗಳ ಪಾಲಾಗಬಾರದೆಂದು.....

ಮತಿರಾಮ : ಈ ಎರಡು ಕಾಲಿನ ಹೆಗ್ಗಣ ಅವುಗಳನ್ನು ಹೊಟ್ಟೆಯಲ್ಲಿ ಹುದುಗಿಸಿಕೊಳ್ಳುತ್ತೆ. ಅಲ್ಲವೇನೊ?

ಬಲರಾಮ : ನಾನು ಹೆಗ್ಗಣಾ ಏನೊ?

ಮತಿರಾಮ : ಹೆಗ್ಗಣಾನೂ ನಾಲ್ಕು ಸೇರು ಒಮ್ಮೆಗೆ ತಿನ್ನೋದಿಲ್ಲೊ!

ಬಲರಾಮ : ನಾನು ಸೈನ್ಯಕ್ಕೆ ಸೇರತೀನಿ ಅಂದ್ರೆ ಸಾಕು–ನನ್ನನ್ನು ತೆಗಳೋ

ನೀನೇ ನನ್ನನ್ನು ಹೊಗಳ್ತೀ, ಹೌದೋ ಅಲ್ಲೊ?

ಮತಿರಾಮ : ಖಂಡಿತಾ ಹೊಗಳ್ತೇನೆ, ಬಾಯಿತುಂಬ ಹೊಗಳ್ತೇನೆ.

ಬಲರಾಮ : ಸೈನ್ಯಕ್ಕೆ ಸೇರಲಿಕ್ಕೇನೂ ನನ್ನ ಅಡ್ಡಿಯಿಲ್ಲ. ಆದರೆ ಒಂದೇ ವಿಷಯ.

ಮತಿರಾಮ : ಏನದು?

ಬಲರಾಮ : ಯುದ್ಧ ಅಂತಾ ಒಂದು ಹೆಜ್ಜೆ ಮುಂದಿಟ್ರೆ ಕಾಲುಗಳು ಎರಡು ಹೆಜ್ಜೆ ಹಿಂದಕ್ಕಿಡ್ತವೆ.

ಮತಿರಾಮ : ಕಾಲುಗಳಿಗೂ ಮನಸ್ಸಿಗೂ ಯುದ್ಧ ಅನ್ನು!

ಬಲರಾಮ : ಹೂಂ, ಈ ಯುದ್ಧ ಮಾಡೋರಿಗೆ ಏನೂ ಕೊರತೆ ಇಲ್ಲಾ ನೋಡು ಈ ದೇಶದಾಗ!

ಮತಿರಾಮ : ಅವರಿಗೆಲ್ಲಾ ಗುರು ನೀನು, ಅಲ್ವಾ?

ಬಲರಾಮ : ಮಹಾರಾಯಾ, ಯುದ್ಧಕ್ಕೇನೋ ಬರ್ತೀನಿ–ಆದರೆ ಒಂದು ಹೆಜ್ಜೆ ಮುಂದೆ ಬಂದ್ರೆ ಎರಡು ಹೆಜ್ಜೆ ಹಿಂದೆ ಹೋಗೋ ನನ್ನನ್ನು ಹೇಗೆ ಕರೆದೊಯ್ತೀಯೋ ನೀನೆ ಕರೆದೊಯ್ಯಿ.

ಮತಿರಾಮ : ಅದೇನೂ ಕಷ್ಟವಲ್ಲ–ನೀನೊಬ್ಬ ವೈರಿಯ ದಿಕ್ಕಿಗೆ ಬೆನ್ನುಮಾಡಿ ನಡೆ. ಮುಂದೆ ಒಂದು ಹೆಜ್ಜೆ ಇಡುತ್ತ ಹೋದಂತೆ ಹಿಂದಕ್ಕೆ ಎರಡು ಹೆಜ್ಜೆ ಹೋದರೆ ಹಗೆಯಿದ್ದಲ್ಲಿಗೆ ಹಾಯಾಗಿ ಮುಟ್ಟುವಿ!

ಬಲರಾಮ : (ರೇಗಿ) ವೈರಿಗೆ ಬೆನ್ನು ತೋರಿಸು ಅಂತಿಯಾ?

ಮತಿರಾಮ : ಈ ಸುಟ್ಟ ಮುಖಾ ತೋರಿಸೋಕೆ ನಾಚಿಕೆ ನಿಂಗೆ, ಬೆನ್ನಾದರೂ ತೋರಿಸು–!

ಬಲರಾಮ : (ಎದೆ ಸೆಟೆಸಿ) ಮುಖಾ ಮುಂದೆ ಮಾಡಿಯೇ ಹೊರಟೆ ಯುದ್ಧಕ್ಕೆ! ಇನ್ನು ಆ ಹೂಣರ ಸಮಾಧಿ ಆಯ್ತು ಅಂತಾ ತಿಳಿ!

ನಡೆ ಯುದ್ಧಕೆ, ನಡೆ ಯುದ್ಧಕೆ
ನಡೆ ಯುದ್ಧಕೆ ಯುವಕ!
ನರನರದಲಿ ಹರಿದಾಡಲಿ
ಹಗೆ ಗೆಲ್ಲುವ ತವಕ!

ಮತಿರಾಮ : ಭಳಿರೆ ಬಲರಾಮ! (ಬಲರಾಮ ಒಂದೊಂದೇ ಹೆಜ್ಜೆ ಹೆಮ್ಮೆಯಿಂದ ಇಡುತ್ತಿರುವಂತೆ) ಅಡಿಯ ಮುಂದಿಡೆ ಸ್ವರ್ಗ, ಅಡಿಯ

ಹಿಂದಿಡೆ ನರಕ ಮುಂದಿಟ್ಟ ಹೆಜ್ಜೆ ಹಿಂದಿಟ್ಟವ ಹೇಡಿ! ಹಗೆಯನ್ನು ಸೋಲಿಸಿಯೆ ಹಿಂದಿರುಗುವೆವು!

(ಹೋಗುವರು-ತೆರೆ ಏಳುವುದು)

ನೋಟ ೩

(ಅಯೋಧ್ಯೆಯ ಕೋಟೆಯ ಮೇಲೆ ಬಾಲಾದಿತ್ಯ, ಮಿತ್ರಾದೇವಿಯರು ನಿಂತಿದ್ದಾರೆ. ಹಿಂದೆ ಗುಪ್ತಸಾಮ್ರಾಟರ ಬಾವುಟ ಹಾರುತ್ತಿದೆ. ಕೆಳಗೆ ಒಂದೆಡೆಗೆ ಪುರುಷರು ಇನ್ನೊಂದೆಡೆಗೆ ಸ್ತ್ರೀಯರು ಸಮಾವೇಶಗೊಂಡಿದ್ದಾರೆ. ತೆರೆ ಏಳುತ್ತಿರುವಂತೆ ಮಹಾರಾಜಾಧಿರಾಜ 'ಬಾಲಾದಿತ್ಯ ಪ್ರಭುಗಳಿಗೆ ಜಯವಾಗಲಿ, ಭಾರತಮಾತೆಗೆ ಜಯವಾಗಲಿ' ಎಂಬ ಜಯಘೋಷ ಕೇಳಿಬರುತ್ತದೆ.)

ಬಾಲಾದಿತ್ಯ : ಪ್ರಿಯ ಪ್ರಜೆಗಳೆ, ಪ್ರತಿಯೊಂದು ತಲೆಮಾರಿನವರೂ ತಮ್ಮ ಸ್ವಾತಂತ್ರ್ಯವನ್ನು ತಾವೇ ರಕ್ಷಿಸಿಕೊಳ್ಳಬೇಕು. ಇದು ಅನಿವಾರ್ಯವಾದುದು. ಸ್ವಾತಂತ್ರ್ಯ ಬೇಕೆನ್ನುವವರು ಸ್ವಾತಂತ್ರ್ಯ ರಕ್ಷಣೆಗೆ ಸಿದ್ಧರಾಗಿರಲೇಬೇಕು. ಸ್ವಾತಂತ್ರ್ಯ ಶೂರರ ಸೊತ್ತು, ಹೇಡಿಗಳ ತುತ್ತಲ್ಲ. ವೀರರ ವಜ್ರೋಪಮ ವಕ್ಷಸ್ಥಲದಲ್ಲಿ ಸ್ವಾತಂತ್ರ್ಯ ಲಕ್ಷ್ಮಿ ವಾಸಿಸಬಯಸುತ್ತಾಳೆ, ಭೀರುಗಳ ಅಳ್ಳೆದೆಯಲ್ಲಿ ಅಲ್ಲ!

ಇಂದು ನಮ್ಮೆಲ್ಲರ ಸ್ವಾತಂತ್ರ್ಯಾಪಹರಣಕ್ಕಾಗಿ, ನಮ್ಮ ಪವಿತ್ರ ಮಾತೃಭೂಮಿಯ ಆಕ್ರಮಣಕ್ಕಾಗಿ ಹಿಂದೆ ಹಲವು ಸಲ ನಮ್ಮಿಂದ ಪರಾಜಿತರಾಗಿ ಪಲಾಯನ ಮಾಡಿದ್ದ ಹೂಣರು ಮತ್ತೆ ಮೇಲೇರಿ ಬಂದಿದ್ದಾರೆ. (ಬಾವುಟದ ಕಡೆಗೆ ಬೆರಳು ಮಾಡಿ) ಇಂದು ಮತ್ತೆ ಈ ಬಿಡುಗಡೆಯ ಬಾವುಟದ ರಕ್ಷಣೆಗಾಗಿ, ನಮ್ಮ ಆತ್ಮಗೌರವದ ರಕ್ಷಣೆಗಾಗಿ, ಸ್ವರ್ಗಕ್ಕಿಂತಲೂ, ನಮ್ಮ ಪ್ರಾಣಕ್ಕಿಂತಲೂ ನಮಗೆ ಪ್ರಿಯವಾದ ನಮ್ಮ ಪುಣ್ಯಭೂಮಿಯ ರಕ್ಷಣೆಗಾಗಿ ನಾವು ಸರ್ವತ್ಯಾಗಕ್ಕೂ ಸಿದ್ಧರಾಗಲೇಬೇಕು. ಸ್ವಾತಂತ್ರ್ಯವೇ ಸ್ವರ್ಗ, ಪಾರತಂತ್ರ್ಯವೇ ನರಕ! ಸ್ವಾತಂತ್ರ್ಯದ ಸ್ವರ್ಗದಿಂದ ಪಾರತಂತ್ರ್ಯದ ನರಕಕ್ಕೆ ಹೋಗಲು ನಿಮ್ಮಲ್ಲಿ ಯಾರಿಗಾದರೂ ಇಚ್ಛೆಯಿದೆಯೇ?

ಪುರುಷಸಮೂಹದ ಮುಂದಾಳು : ಈ ಇಚ್ಛೆಯುಳ್ಳ ತುಚ್ಛ ಜೀವಿ ಈ ಅಯೋಧ್ಯೆಯಲ್ಲಿ ಇರಲಾರನು ಮಹಾಪ್ರಭು. ಈ ಅಯೋಧ್ಯೆಯು ಸ್ವಾತಂತ್ರ್ಯ ಸ್ವರ್ಗವಾಗಿ, ದೇಶಗೌರವದ ದುರ್ಗವಾಗಿ ಇದುವರೆಗೆ ತಲೆಯೆತ್ತಿ ನಿಂತಿರುವಂತೆ ಇನ್ನು ಮುಂದೆಯೂ ನಿಲ್ಲುವುದು: ರಾಮ ಲಕ್ಷ್ಮಣ ಹನುಮ ಭೀಮರ ಭಕ್ತರ ರಕ್ತ ನೀರಾಗಿಲ್ಲ, ಶಕ್ತಿ ಕ್ಷೀಣವಾಗಿಲ್ಲ!

ನಮ್ಮ ನರನರಗಳಲ್ಲಿಯೂ ಧುರಧೀರತೆ ಹರಿಯುತ್ತಲಿದೆ ಸ್ವಾತಂತ್ರ್ಯಪ್ರೇಮ

ಪುಟಿಯುತ್ತಲಿದೆ, ರಾಷ್ಟ್ರನಿಷ್ಠೆ ನರ್ತಿಸುತ್ತಲಿದೆ ರಾಮ ಲಕ್ಷ್ಮಣರ ಆಣೆಯಾಗಿ ಈ ಶಪಥ ತೊಡುತ್ತೇವೆ.

ವೃಂದಗೀತೆ :

ಸ್ವತಂತ್ರನಾಗಿ ಹುಟ್ಟಿಹೆ
ಸ್ವತಂತ್ರನಾಗಿ ಬಾಳುವೆ
ಇಂದು ಶಸ್ತ್ರ ತಾಳುವೆ
ವೈರಿಗಳನು ಸೀಳುವೆ!
ಸ್ವತಂತ್ರನಾಗಿ ಹುಟ್ಟಿಹೆ
ಸ್ವತಂತ್ರನಾಗಿ ಬಾಳುವೆ
ಹಗೆಯ ಕರುಳ ಕೀಳುವೆ
ಹೂಣರನ್ನು ಹೂಳುವೆ!

ಮಿತ್ರಾದೇವಿ : (ಮಹಿಳೆಯರನ್ನುದ್ದೇಶಿಸಿ) ಸೋದರಿಯರೆ, ಸ್ತ್ರೀಶಕ್ತಿಯ ಸಹಾಯವಿಲ್ಲದೆ ಸ್ವಾತಂತ್ರ್ಯ ರಕ್ಷಣೆ ಸಾಧ್ಯವಾಗುವುದೆ? ವೀರಮಾತೆಯರು ನೀವು, ವೀರಪತ್ನಿಯರು ನೀವು, ವೀರಪುತ್ರಿಯರು ನೀವು! ನೀವಿಂದು ಶೌರ್ಯಸಂಜೀವಿನಿಯರಾಗಬೇಕು, ಚೈತನ್ಯದಾಯಿನಿಯರಾಗಬೇಕು ಅಗತ್ಯ ಬಿದ್ದರೆ ಮಿಹಿರಕುಲಮರ್ಧಿನಿಯರಾಗಬೇಕು! ರಾಷ್ಟ್ರರಕ್ಷಣೆಗಾಗಿ ಹೋರಾಡಲು ನಿಮ್ಮ ನಿಮ್ಮ ಸುತನನ್ನು, ಪತಿಯನ್ನು ಹುರಿದುಂಬಿಸಿರಿ! ಇಂದು ಮನೆ ಮನೆಯೂ ಸ್ವಾತಂತ್ರ್ಯದ ಅಭೇದ್ಯ ಕೋಟೆಯಾಗಬೇಕು, ಊರೂರು ವೀರ, ಸಮರಶೂರರ ಶಿಬಿರವಾಗಬೇಕು ಸ್ವಾತಂತ್ರ್ಯವೇ ದೇಶದೇವಿಯ ಮಾಂಗಲ್ಯ. ಆ ಮಾಂಗಲ್ಯದ ರಕ್ಷಣೆಗಾಗಿ ನೀವು ಸರ್ವತ್ಯಾಗಕ್ಕೂ ಸಿದ್ಧರಾಗುವಿರೆಂದು ನಂಬಿದ್ದೇನೆ.

ಸ್ತ್ರೀಸಮೂಹದ ಮುಂದಾಳು : ಮಹಾರಾಜ್ಞಿಯವರೆ, ಸ್ವತಂತ್ರ ದೇಶವೇ ನಮ್ಮ ಸಂತಾನಕ್ಕಾಗಿ ನಾವು ಉಳಿಸಿಹೋಗಬಹುದಾದ ಅತ್ಯಮೂಲ್ಯ ಆಸ್ತಿ, ಐಶ್ವರ್ಯ!

ಆ ಐಶ್ವರ್ಯವನ್ನು ರಕ್ಷಿಸಲು ನಮ್ಮ ಪತಿಸುತರ ಜೊತೆಗೆ ನಾವೂ ಸಮರಾಂಗಣಕ್ಕೆ ಹೋಗಲು ಸಿದ್ಧರಿದ್ದೇವೆ. ತೊಟ್ಟಿಲು ತೂಗುವ ಕೈ ದೇಶಕ್ಕೆ ಧಕ್ಕೆ ಬಂದಾಗ ಶಸ್ತ್ರ ಧರಿಸಲು ಬಲ್ಲುದೆಂಬುದನ್ನು ತೋರಿಸಲು ನಾವು ಆತುರರಾಗಿದ್ದೇವೆ. ಸೀತೆ ಊರ್ಮಿಳೆಯರ ವಂಶಜರಾದ ನಾವು ತ್ಯಾಗಕ್ಕೆ, ಬಲಿದಾನಕ್ಕೆ, ರಾಷ್ಟ್ರಕ್ಕಾಗಿ ರಕ್ತ ತರ್ಪಣಕ್ಕೆ ಹಿಂಜರಿಯುವೆವೆ? ರಣ ಗೆಲ್ಲುವವರೆಗೆ ನಾವು ದಣಿವಿಲ್ಲದೆ ದುಡಿಯುವೆವೆಂದು ಪಣ ತೊಟ್ಟಿರುವೆವು! ಕಂಕಣ ಕಟ್ಟಿರುವೆವು! ಪುರುಷಶಕ್ತಿಗೆ ಸಹಜ ಸ್ಫೂರ್ತಿಯಾಗಿ ನಿಲ್ಲುವೆವು. ಅಗತ್ಯಬಿದ್ದರೆ ರಣಭೈರವಿಯರಾಗಿ ಯುದ್ಧರಂಗಕ್ಕೂ ಧುಮುಕುವೆವು! ಪ್ರಳಯವಾಗಿ ಅಪ್ಪಳಿಸುವೆವು, ವಿಲಯಾಗ್ನಿಯಾಗಿ ದಹಿಸುವೆವು. ವೈರಿಯ ಹುಟ್ಟಳಿಸುವೆವು!

ಬಾಲಾದಿತ್ಯ : ಭಾರತದ ವೀರಪುತ್ರರೆ, ಧೀರಪುತ್ರಿಯರೆ, ದೇಶಾಭಿಮಾನದ ಈ ದೇದೀಪ್ಯಮಾನ ಪ್ರದೀಪಕ್ಕೆ ಪ್ರಣಾಮಗಳು! ಈ ನಿಮ್ಮ ರಾಷ್ಟ್ರಭಕ್ತಿ ನಮ್ಮ ಶಕ್ತಿ, ಅಜೇಯಶಕ್ತಿ! ಈ ಶಕ್ತಿ ದೇಶದಲ್ಲಿ ಜೀವಂತವಾಗಿರುವವರೆಗೆ, ಜ್ವಲಂತವಾಗಿರುವವರೆಗೆ ಯಾವ ಶಕ್ತಿಯೂ ಈ ದೇಶವನ್ನು ಆಕ್ರಮಿಸಲಾರದು! ಸೈನ್ಯದ ಸಮರಶಕ್ತಿಗೆ ನಾಗರಿಕರ ನಿರ್ಧಾರಶಕ್ತಿ ಸೇರಿದಾಗಲೇ ಎಂಥ ವೈರಿಯನ್ನಾದರೂ ಹಿಮ್ಮೆಟ್ಟಿಸಬಲ್ಲ ವಜ್ರವ್ಯೂಹ ಸಿದ್ಧವಾಗುತ್ತದೆ. ನಮ್ಮ ಯೋಧರ ಬಾಹುಬಲಕ್ಕೆ ನಿಮ್ಮ ರಾಷ್ಟ್ರಪ್ರೇಮ ಬಲ ಬೆಂಬಲವಾಗಿರಲಿ! ಈ ಯುದ್ಧದಲ್ಲಿ ಜಯ ನಮ್ಮದಾಗುವವರೆಗೆ ಎಲ್ಲರೂ ಯೋಧರೆ, ಎಲ್ಲರೂ ಸೈನಿಕರೇ! ಸೈನಿಕರ ಉಡುಪನ್ನು ಧರಿಸಿದವರು ಮಾತ್ರ ಸೈನಿಕರಲ್ಲ–ಗೃಹರಂಗದಿಂದ ರಣರಂಗದವರೆಗೆ ಮನೆಗಳಲ್ಲಿ, ಮಠಗಳಲ್ಲಿ, ಹೊಲಗದ್ದೆಗಳಲ್ಲಿ, ಕುಲುಮೆಗಳಲ್ಲಿ, ಗರಡಿಗಳಲ್ಲಿ–ಎಲ್ಲೆಡೆಗಳಲ್ಲಿ ನಡೆಯಬೇಕಾಗಿರುವ ಯುದ್ಧದ ಸಿದ್ಧತೆಯಲ್ಲಿ ಉತ್ಸಾಹದಿಂದ ಭಾಗವಹಿಸುವ ಎಲ್ಲರೂ ಸೈನಿಕರೇ. ನಾವು ನಿಶ್ಚಯವಾಗಿ ಪಡೆಯಲಿರುವ ವಿಜಯದಲ್ಲಿ ಇವರೆಲ್ಲರೂ ಪಾಲುಗಾರರು. ಆದುದರಿಂದ ರಣಗೆಲ್ಲುವೆವೆಂದು ಪಣತೊಡಿರಿ; ಸ್ವತಂತ್ರರಾಗಿ ಹುಟ್ಟಿದ ನಾವು ಸ್ವತಂತ್ರರಾಗಿಯೇ ಬಾಳುವೆವೆಂದು ಪಣತೊಡಿರಿ!

ಎಲ್ಲರೂ : ವೃಂದಗೀತೆ :

ಸ್ವತಂತ್ರನಾಗಿ ಹುಟ್ಟಿಹೆ

ಸ್ವತಂತ್ರನಾಗಿ ಬಾಳುವೆ

ಇಂದು ಶಸ್ತ್ರ ತಾಳುವೆ

ವೈರಿಗಳನು ಸೀಳುವೆ!

(ಎಂದು ಹುರುಪಿನಿಂದ ಹಾಡತೊಡಗುವರು. ಬಾಲಾದಿತ್ಯ, ಮಿತ್ರಾದೇವಿಯರು ಬಾವುಟದ ಕೆಳಗೆ ಹಸನ್ಮುಖಿಗಳಾಗಿ ನೋಡುತ್ತ ನಿಂತಿರುವರು. ರಣಕಹಳೆ ಮೊಳಗುವುದು, ಜಯಜಯಕಾರ ಉಕ್ಕೇರುವುದು.)

(ತೆರೆ)

ನೋಟ ೪

(ನಗರವೀಥಿಯಲ್ಲಿ ಒಂದೆಡೆಗೆ ಶಸ್ತ್ರಾಸ್ತ್ರಗಳ ರಾಶಿ. ಇನ್ನೊಂದೆಡೆಗೆ ಸೈನ್ಯಾಧಿಕಾರಿಯೊಬ್ಬ ಉಚ್ಚಸ್ವರದಲ್ಲಿ ಹೇಳುತ್ತಲಿದ್ದಾನೆ.)

ಸೈನ್ಯಾಧಿಕಾರಿ : ಶತ್ರು ಮೇಲೇರಿ ಬಂದಿದ್ದಾನೆ–ಶಸ್ತ್ರಗಳು ಇಲ್ಲಿವೆ. ಶಸ್ತ್ರ ಧರಿಸುವ ಸಾಮರ್ಥ್ಯವುಳ್ಳವರೆಲ್ಲ ಬನ್ನಿ, ಬಾಹುಬಲವುಳ್ಳವರೆಲ್ಲ ಬನ್ನಿ–ದೇಶರಕ್ಷಣೆಯ ಪವಿತ್ರ ಕರ್ತವ್ಯದಲ್ಲಿ ಪಾಲುಗಾರರಾಗಿರಿ!

(ಒಬ್ಬ ಒಕ್ಕಲಿಗ, ಅವನ ಮಗ, ಅವನ ಹೆಂಡತಿ ಬರುತ್ತಾರೆ. ಒಕ್ಕಲಿಗನ ಹೆಗಲ ಮೇಲೆ ನೇಗಿಲವಿದೆ)

ಒಕ್ಕಲಿಗ : (ನಿಂತು ಶಸ್ತ್ರಾಸ್ತ್ರಗಳ ಕಡೆಗೆ ನೋಡಿ) ಯುದ್ಧ ಯಾರ ಕೂಡ ಬುದ್ಧಿ?

ಸೈನ್ಯಾಧಿಕಾರಿ : ಹೂಣರೊಡನೆ–ನಮ್ಮ ದೇಶದಲ್ಲಿ ನುಗ್ಗಿ ಬಂದಿರುವ ಹೂಣರೊಡನೆ!

ಒಕ್ಕಲಿಗ : (ಮಗನ ಕಡೆ ತಿರುಗಿ) ದೇಶಕ್ಕೇ ದಾಳಿ ಬಂದಾಗ ನಾವಿಬ್ಬರೂ ರಂಟೆ ಹೊಡೆದರೆ ಆಗದಪ್ಪಾ. ನಾನು ಯುದ್ಧಕ್ಕೆ ಹೋಗುತ್ತೇನೆ, ನೀನು ನಿನ್ನ ಹಡೆದಾಕೆಯೊಡನೆ ಹೊಲ ಮನಿ ಸಾಗಿಸು–ನಾನು ಬರೋತನಕ.

ಮಗ : ಅಪ್ಪಾ, ವಯಸ್ಸಾದ ನಿನ್ನನ್ನು ಯುದ್ಧಕ್ಕೆ ಕಳಿಸಿ ನಾನು ಸುಖವಾಗಿರಲೆ? ಆಗದು, ನಾನೇ ಯುದ್ಧಕ್ಕೆ ಹೋಗುತ್ತೇನೆ.

ಒಕ್ಕಲಿಗ : ಆಗದಪ್ಪಾ–ದೇಶ ಉಳಿಸೋದು ಯಾರಿಗಾಗಿ? ಮಕ್ಕಳಿಗಾಗಿ! ನನ್ನ ರಟ್ಟೆ ಇನ್ನೂ ಗಟ್ಟಿ ಇವೆ. ನಾನೇ ಹೋಗ್ತೇನೆ. ನೀನಿದ್ದು ನಮ್ಮ ವಂಶಾ ಉಳಿಸು. (ಹೆಂಡತಿಯ ಕಡೆಗೆ ತಿರುಗಿ) ನೀನೇನಂತೀಯೆ?

ಹೆಂಡತಿ : ಗಂಡನ ಆಜ್ಞೆಯಂತೆ ಹೆಂಡತಿ ನಡೆಯೋದು. ನೀನು ರಣಕ್ಕೆ ಹೋದರೆ 'ದೇವಿ, ನನ್ನ ಮಾಂಗಲ್ಯ ಉಳಿಸು.' ಅಂತಾ ಬೇಡಿಕೊಳ್ಳುತ್ತೇನೆ; ಮಗ ಯುದ್ಧಕ್ಕೆ ಹೋದರೆ 'ತಾಯಿ, ನನ್ನ ಮನೀ ದೀಪಾ ಉಳಿಸು' ಅಂತಾ ಬೇಡಿಕೋತೇನೆ. ಯಾರಾದರೂ ಒಬ್ಬರು ಯುದ್ಧಕ್ಕೆ ಹೋಗಲೇ ಬೇಕು. ದೇಶಕ್ಕೆ ನಮ್ಮ ಮನಿ ಸೇವಾನೂ ಸಲ್ಲಬೇಕು.

ಮಗ : ನಾನೇ ಹೋಗ್ತೀನಪ್ಪಾ, ದೇಶ ರಕ್ಷಿಸೋ ಪುಣ್ಯದ ಕೆಲಸ ನನಗಿರಲಿ!

ಸೈನ್ಯಾಧಿಕಾರಿ : ವೀರಕುಮಾರ, ದೇಶ ರಕ್ಷಿಸಲು ಯುದ್ಧರಂಗಕ್ಕೆ ಹೋಗಬೇಕಾಗಿಲ್ಲ–ಹೊಲದಲ್ಲಿ ಹೆಚ್ಚು ಬೆಳೆಯುವುದೂ ದೇಶರಕ್ಷಣೆಯ ಕಾರ್ಯವೇ, ಯುದ್ಧ ಮಾಡುವುದೂ ಗದ್ದೆ ಮಾಡುವುದೂ ಎರಡೂ ಅಷ್ಟೇ

ಮಹತ್ವದ ಕಾರ್ಯಗಳು.

ಮಗ : ಆಗಲಿ ಅಪ್ಪಾ, ನೀನೇ ಹೋಗಿ ಬಾ–ಹೋಗಿ ಯುದ್ಧ ಗೆದ್ದು ಬಾ!

ಒಕ್ಕಲಿಗ : (ಶಸ್ತ್ರಾಸ್ತ್ರಗಳ ರಾಶಿಯೊಳಗಿಂದ ದೊಡ್ಡ ಖಡ್ಗವೊಂದನ್ನು ತೆಗೆದುಕೊಂಡು) ಸಮುದ್ರ ಕಟ್ಟಿ ರಾಕ್ಷಸರನ್ನ ಕೊಂದ ರಾಮನ ಮಕ್ಕಳು ನಾವು–ಹೂಣರಿಗೆ ಹೆದರುವೆವೆ? ಈ ಕತ್ತಿ ಹತ್ತು ಹೂಣರ ನೆತ್ತರ ಕುಡಿಯದೆ ಹಿಂದಿರುಗಿ ಬರಲಾರದು!

ಹೆಂಡತಿ : (ಸಣ್ಣಮುಖಮಾಡಿ) ನಿನಗೆ ಆರತಿ ಮಾಡದೆ ಕಳಿಸಬೇಕಾಯ್ತಲ್ಲ.

ಒಕ್ಕಲಿಗ : ಹೋಗಲಿ ಬಿಡು, ಗರತಿಯ ಮನಸೇ ಆರತಿ–ತರತೀನಿ ನಿನಗೆ ಕೀರತಿ.

ಹೆಂಡತಿ : ಹೂಣರು ಬಹಳ ಮೋಸಗಾರರಂತೆ, ಮೈತುಂಬ ಕಣ್ಣಾಗಿರು, ದೇವಿ ನಿನಗೆ ದೀರ್ಘಾಯುಷ್ಯ ಕೊಡಲಿ, ನನ್ನ ಮಾಂಗಲ್ಯ ಕಾಪಾಡಲಿ!

ಮಗ : (ಅಪ್ಪನನ್ನು ಅವಚಿಕೊಂಡು) ಅಪ್ಪಾ, ಹೂಣರ ನೆತ್ತರಿನ ನದಿಯಲ್ಲಿಯೇ ಹೂಣರ ಹೆಣ ತೇಲಿಸಿ ಬಾರಪ್ಪಾ! ಕಣದಲ್ಲಿ ನಿನ್ನ ಕೈ ಮೇಲಾಗಿದ್ದಂತೆ ರಣದಲ್ಲಿಯೂ ನಿನ್ನ ಕೈ ಮೇಲಾಗಿರಲಿ! ನೀನು ಗೆಲುವಿನ ಗುಡಿ ಹಿಡಿದು ಸಡಗರದಿಂದ ಬರುವುದನ್ನು ನೋಡುವ ಭಾಗ್ಯ ನಮ್ಮದಾಗಲಿ!

ತಂದೆ : ಮಗು, ಹಗೆಯನ್ನು ಸೀಳಿ ಹಿಮದಲ್ಲಿ ಹೂಳಿಯೇ ಬರುತ್ತೇನೆ. ನೀವಿಬ್ಬರೂ ನಿಶ್ಚಿಂತರಾಗಿ ನಿಮ್ಮ ಪಾಲಿನ ಕೆಲಸ ಮಾಡುತ್ತಿರ್ರಿ ಹೋಗಿ ಬರುವೆ. ದೇವರು ದೇಶವನ್ನು ರಕ್ಷಿಸಲು ನಮಗೆ ಶಕ್ತಿ ನೀಡಲಿ ಕಾಪಾಡಲಿ!

(ಹೊರಳಿ ನೋಡುತ್ತ ಹೋಗುವನು. ಮಗ ತಾಯಿಯರಿಬ್ಬರೂ ಅವನು ಹೋದತ್ತ ನೋಡುತ್ತ ನಿಂತಿದ್ದು ಅವನು ಕಾಣದಾಗಲು ಕಂಬನಿ ಒರೆಸಿಕೊಳ್ಳುತ್ತ ಹೋಗುವರು. ಸೈನ್ಯಾಧಿಕಾರಿಯ, ಕಣ್ಣಲ್ಲಿಯೂ ನೀರೂರುವುದು. ಕಣ್ಣೊರೆಸಿಕೊಂಡು...)

ಸೈನ್ಯಾಧಿಕಾರಿ : ಇಂಥ ಒಕ್ಕಲುಮಕ್ಕಳಿರುವ ಈ ದೇಶಕ್ಕೆ ಜಯವುಂಟು, ಭಯವಿಲ್ಲ! ಬನ್ನಿರಿ, ರಾಷ್ಟ್ರವಿಂದು ಕೂಗಿ ಕರೆಯುತ್ತಲಿದೆ, ಕಾಳಗವು ಕೈಬೀಸಿ ಕರೆಯುತ್ತಲಿದೆ! ಭುಜಬಲವುಳ್ಳವರು ಬನ್ನಿರಿ, ದೇಶರಕ್ಷಣೆಗಾಗಿ ಧಾವಿಸಿ ಬನ್ನಿರಿ!

(ನಾನಾ ಉದ್ಯೋಗಗಳ ಜನರು ಬರುವರು. ತಮತಮಗೆ ಬೇಕಾದ ಶಸ್ತ್ರ ಆರಿಸಿಕೊಂಡು ತೆರಳುವರು. ಕೊನೆಗೆ ಬಲರಾಮ, ಮತಿರಾಮ ಬರುವರು)

ಮತಿರಾಮ : ಏ ಬಲರಾಮ, ಬೇಗ ಬಾ ಅಂದರೆ ನೀನು ಬರಲಿಲ್ಲ. ಇಲ್ಲಿ

ನೋಡು, ಎಲ್ಲಾ ಶಸ್ತ್ರಾಸ್ತ್ರ ಮುಗಿದು ಒಂದು ಈಟಿ, ಒಂದು ಕತ್ತಿ ಮಾತ್ರ ಉಳಿದಿವೆ. ನಿನಗೆ ಈಟಿ ಬೇಕೊ, ಕತ್ತಿ ಬೇಕೊ?

ಬಲರಾಮ : (ಮುಖ ಸೊಟ್ಟುಮಾಡಿ) ನನಗೆ ಎರಡೂ ಬೇಡ.

ಮತಿರಾಮ : ನೀನು ಬರಿಗೈಯಿಂದಲೇ ಯುದ್ಧಕ್ಕೆ ಬರುವವನೇನು?

ಬಲರಾಮ : (ಆಢ್ಯತೆಯಿಂದ) ಇಲ್ಲಿಂದ ಶಸ್ತ್ರ ಒಯ್ದು ಯುದ್ಧಮಾಡಿದರೆ ಅದಾವ ಪೌರುಷನೋ ಮತಿರಾಮ? ನಾನು ವೈರಿಯ ಕೈಯ ಆಯುಧವನ್ನೇ ಕಸಿದುಕೊಂಡು ಅವನ ಆಯುಧದಿಂದಲೇ ಅವನನ್ನು ಕೊಲ್ಲುವೆನು!

ಮತಿರಾಮ : ನೀನು ವೈರಿಯ ಕಡೆಗೆ ಬೆನ್ನುಮಾಡಿ ಬರುವವನು. ಆಯುಧ ಹೇಗೆ ಕಸಿದುಕೊಳ್ಳುವಿ? ನಿನ್ನ ಬೆನ್ನಿಗೂ ಕೈ ಇವೆಯೇನೊ?

ಬಲರಾಮ : ನಾನು ವೈರಿಯ ಕಡೆಗೆ ಮುಖ ಮಾಡಿಯೇ ಬರ್ತೀನಿ ಅಂತಾ ಹೇಳಲಿಲ್ಲವೇನೊ?

ಮತಿರಾಮ : ಎಲ್ಲರಂತೆ ಬರೋವ್ನು ಎಲ್ಲರ್ಹಾಂಗ ಆಯುಧ ಹಿಡಿ. ಈ ಕತ್ತಿ ತಕ್ಕೊ. (ಕೊಡುವನು)

ಬಲರಾಮ : (ಅದರ ಧಾರೆ ತನ್ನ ಕಡೆಗೆ ಬರುವಂತೆ ಹಿಡಿದು) ಲೋ, ಮತಿರಾಮ, ಎಂಥ ನೀಚನೋ ನೀನು. ಎಂಥ ಕತ್ತಿ ಕೊಟ್ಟೆಯೋ ನನಗೆ! ಇದು ನನ್ನ ಕಡೆಗೇ ನೋಡ್ತಾ ಇದೆ ನೋಡೋ! ಹು ಹು, ಹೆದರಿಕೆ ಬರ್ತಾ ಇದೆಯೋ, ಹಿಡಿಯಲಾರೆ ಇದನ್ನು!

ಮತಿರಾಮ : ಅದು ಬೇಡ. ಈಟಿ ಹಿಡಿ (ಕೊಡುವನು)

ಬಲರಾಮ : (ಹಿಡಿಯಹೋಗಿ ಕೆಡಹಿ) ಎಷ್ಟು ಭಾರವಾಗಿದೆಯೋ ಇದು. ಇದನ್ನು ಮೇಲೆತ್ತಿ ಯುದ್ಧ ಮಾಡೋದು ಹೇಗೋ ಮಹಾರಾಯಾ!

ಮತಿರಾಮ : ಇದರ ಎರಡು ತೂಕ ಹುಗ್ಗಿ ಹೊಡಿ ಅಂದ್ರೆ ಹೊಡೀತಿ, ಇದನ್ನು ಎತ್ತಲು ಆಗುವುದಿಲ್ಲವೇನೋ?

ಬಲರಾಮ : ಹುಗ್ಗಿ ಹೂವಿನಾಂಗ ಇರುತ್ತೆ-ಇದರ್ಹಾಂಗ ಬಿರುಸಾಗಿರುತ್ತೇನೋ!

ಸೈನ್ಯಾಧಿಕಾರಿ : ಹಾಗಾದರೆ ಸೆರೆಮನೆ ಸಿದ್ಧವಿದೆ-ಅಲ್ಲಿ ಹೂವಿನಂಥ ಮುದ್ದಿ ಹೊಡೀತಾ ಬಿದ್ದಿರು.

ಬಲರಾಮ : (ಬೆಚ್ಚಿ) ಇಲ್ಲಾ ಬುದ್ಧಿ, ಇದೋ ಯುದ್ಧಕ್ಕೆ ಹೊರಟೆ. (ಕತ್ತಿ ಹಿಡಿದು ಹೊರಡುವನು. ಎಲ್ಲರೂ ಹೋಗುವರು.

(ತೆರೆ ಏಳುವುದು)

ನೋಟ ೫

(ರಣಾಂಗಣ. ಒಂದು ಬದಿಯಿಂದ ಬಾಲಾದಿತ್ಯ, ಸಮರಸಿಂಹ, ಈಶಾನವರ್ಮರು ಸೇನಾಸಮೇತ ಪ್ರವೇಶಿಸುತ್ತಾರೆ–'ಭಾರತಮಾತೆಗೆ ಜಯವಾಗಲಿ' ಎಂಬ ಉದ್ಘೋಷದೊಡನೆ)

ಬಾಲಾದಿತ್ಯ : (ಸೇನೆಯನ್ನುದ್ದೇಶಿಸಿ) ಯುದ್ಧವೆಂದರೆ ಮೈಯುಬ್ಬುವ ವೀರಯೋಧರೆ, ಭಾರತ ಸೈನಿಕರೆ, ಇಂದು ಈ ರಾಮ ಕೃಷ್ಣ, ಬುದ್ಧ ಮಹಾವೀರರ ಭೂಮಿಯ ಸತ್ವಪರೀಕ್ಷೆ, ಶಕ್ತಿಪರೀಕ್ಷೆಯಾಗಲಿದೆ! ಭಗವಂತನಿಗೆ ಪ್ರಿಯವಾದ ಈ ಭೂಮಿಯ ಮೇಲೆ ಮತ್ತೊಮ್ಮೆ ದೌರ್ಜನ್ಯ ದಾಳಿಮಾಡಿದೆ! ಈ ಭೂಮಿಯ ಮಣ್ಣು ಇನ್ನೂ ನಿರ್ವೀರ್ಯವಾಗಿಲ್ಲವೆಂಬುದನ್ನು ನಿಮ್ಮ ಅತುಲ ಪ್ರತಾಪದಿಂದ, ಪ್ರಖರ ಪರಾಕ್ರಮದಿಂದ ಸಿದ್ಧಗೊಳಿಸಿರಿ! ತಪಸ್ವಿಗಳ ಈ ದೇಶ ತೇಜಸ್ವಿಗಳ ಕೋಶವೂ ಅಹುದು, ಧರ್ಮವೀರರ ಈ ದೇಶ ನರವೀರಕಂಠೀರವರ ನಾಡೂ ಅಹುದೆಂಬುದನ್ನು ಇಂದು ನಿಮ್ಮ ದುರ್ದಮ್ಯವಾದ ದೋರ್ಬಲದಿಂದ ಪ್ರಚುರಪಡಿಸಿರಿ! ಈ ಹೂಣರ ಪ್ರಾಣಗಳನ್ನು ಕುಡಿಯಿರಿ–ದೇಶದ ಮೇಲೇರಿ ಬರುವವರಿಗೆ ದುರ್ಗತಿ ತಪ್ಪದೆಂಬುದನ್ನು ತೋರಿಸಿರಿ! ಲೋಹದ ಬಾಹು, ಉಕ್ಕಿನ ನರ, ವಜ್ರದ ಎದೆಯೊಡನೆ ಮುನ್ನುಗ್ಗಿರಿ! ನ್ಯಾಯ ನಮ್ಮ ಕಡೆಗಿದೆ, ಸತ್ಯ ನಮ್ಮ ಕಡೆಗಿದೆ, ಧರ್ಮ ನಮ್ಮ ಕಡೆಗಿದೆ–ಜಯ ನಮ್ಮ ಕಡೆಗೇ ಧಾವಿಸಿ ಬರುವುದೆಂಬ ಅಚಲ ವಿಶ್ವಾಸದೊಡನೆ ಮುನ್ನುಗ್ಗಿರಿ! ಭರತ ಮಾತೆಯ ವಾಹನ ಸಿಂಹ. ಸಿಂಹದ ಸಂತಾನ ನೀವು. ಸಿಂಹದಂತೆ, ಸಿಡಿಲಿನಂತೆ, ಅಗ್ನಿಯಂತೆ ನುಗ್ಗಿರಿ! ಹೂಣರ ಬೆನ್ನುಮೂಳೆ ನುಗ್ಗು ನುಗ್ಗಾಗುವಂತೆ ನುಗ್ಗಿರಿ! ನುಗ್ಗಿರಿ!

("ಭಾರತಮಾತೆಗೆ ಜಯವಾಗಲಿ", "ಭಾರತವೀರ ಬಾಲಾದಿತ್ಯರಿಗೆ ಜಯವಾಗಲಿ" ಎಂಬ ಉದ್ಘೋಷ ಉಕ್ಕೇರಿ ಬರುವುದು. ಇನ್ನೊಂದು ಕಡೆಯಿಂದ ಮಿಹಿರಕುಲ ಶುಂಭರ ಪ್ರವೇಶ)

ಮಿಹಿರಕುಲ : (ಹೂಣರಿಗೆ ತಕ್ಕಂತೆ ಕಿರಿಚಿ) ಬಾಯಿ ತೆರೆದಿದೆ ಮೃತ್ಯು–ಬಾ ಬಾಲಾದಿತ್ಯ! ನಿನ್ನ ಆಯುಷ್ಯ ತುಂಬಿ ಬಂದಿದೆ ಬಾ! ಬಹಳ ದಿನಗಳಿಂದ ರಾಜರಕ್ತಕ್ಕಾಗಿ ಹಸಿದಿದ್ದಾನೆ ಮಿಹಿರಕುಲ! ಇಂದು ರಾಜ ರಕ್ತದ ಮೇಜವಾನಿ ಅವನಿಗೆ! ಈ ಕುರಿಗಳನ್ನೆಲ್ಲ ಕತ್ತರಿಸಿ ಭೂತಗಣಕ್ಕೆ ಔತಣ ಕೊಡುವೆ! ಇಲ್ಲಿಂದ ಅಯೋಧ್ಯೆಯ ವರೆಗೆ ನೆತ್ತರಿನ ನದಿಗಳು ಹರಿಯುವುದನ್ನು ನೋಡಿ ನಲಿದಾಡುವೆ! ಅಯೋಧ್ಯೆಯ ಮೇಲೆ ನನ್ನ ವಿಜಯಧ್ವಜವನ್ನು ಹಾರಿಸಿ ಸಮಗ್ರ ಭಾರತದ ಸಾಮ್ರಾಟನಾಗಿ ಮೆರೆಯುವೆ! ಬಾ ಮುಂದಕ್ಕೆ ಬಾಲಾದಿತ್ಯ–ಬಾ ಮುಂದಕ್ಕೆ ನಿಮಿಷಾರ್ಧದಲ್ಲಿ ನಿನ್ನ ರುಂಡವನ್ನು ಚೆಂಡಾಡುವೆ!

ಬಾಲಾದಿತ್ಯ : ಮಾತಿನ ಮಲ್ಲತನ ಬೇಡ ಮಿಹಿರಕುಲ. ಈ ದೇಶದ ಸಾಮ್ರಾಜ್ಯದ ಮಹಿಳೆಯರೂ ಮೃತ್ಯುವಿನ ಮೇಲೆ ವಿಜಯ ಪಡೆದಿದ್ದಾರೆಂಬುದನ್ನು ಮರೆಯದಿರು! ನನಗೆ ಮೃತ್ಯುಭಯ ತೋರಿಸುವೆಯಾ–ಮೃತ್ಯುಂಜಯನ ಭಕ್ತನಿಗೆ? ಮಹಾಕಾಳಿಯ ಭಕ್ತನಿಗೆ? ಅನ್ಯರ ರಕ್ತ ಹೀರುತ್ತಲೇ ಬೆಳೆದಿರುವ ಕ್ರೂರ ದಾನವ, ನಿನ್ನ ರಕ್ತ ಹೀರಲು ಬಂದಿವೆ ಬಾಲಾದಿತ್ಯನ ಸೋಲರಿಯದ ಶಸ್ತ್ರಾಸ್ತ್ರಗಳು! ಭಾರತದ ಮೇಲೇರಿ ಬಂದವರಿಗೆ ಇಲ್ಲಿಯೇ ಸಮಾಧಿಯಾಗುವುದೆಂಬುದನ್ನು ತೋರಲು ಹಾತೊರೆದು ಬಂದಿವೆ ಸ್ಕಂದಗುಪ್ತನ ಶಸ್ತ್ರಾಸ್ತ್ರಗಳು, ನಿನ್ನ ತಂದೆಯ ಸೊಕ್ಕು ಮುರಿದ ಶಸ್ತ್ರಾಸ್ತ್ರಗಳು! ನನ್ನ ಆಯುಷ್ಯವಲ್ಲ, ನಿನ್ನ ಆಯಸ್ಸು ತುಂಬಿ ಬಂದಿದೆ. ಸಾವನ್ನು ಸ್ವಾಗತಿಸಲು ಸಿದ್ಧನಾಗು!

ಮಿಹಿರಕುಲ : (ಗಹಗಹಿಸಿ ನಕ್ಕು) ಈ ದೇಹದ ಒಂದೊಂದು ರೋಮವೂ ಒಬ್ಬೊಬ್ಬನ ರಕ್ತದಿಂದ ಬೆಳೆದಿದೆ ಬಾಲಾದಿತ್ಯ! ಇಂದು ನಿನ್ನ ರಕ್ತದಿಂದ ಅವುಗಳಿಗೆ ಮಜ್ಜನವಾಗಬೇಕಾಗಿದೆ! ಬರಿ ಮಾತೇಕೆ, ಬಾ ಮುಂದೆ!

ಬಾಲಾದಿತ್ಯ : ಇದೊ ಬಂದೆ, ಓ ಹೂಣ ಹೆಂದೆ!

(ಯುದ್ಧ ಆರಂಭವಾಗುವುದು. ಎರಡೂ ಬದಿಗೆ ಕದನ ಕೋಲಾಹಲ– ಖಡ್ಗಗಳ ಖಣಖಣತ್ಕಾರ. ಮಿಹಿರಕುಲ ಕೆಳಗುರುಳುವನು. ಬಾಲಾದಿತ್ಯ ಮೇಲೆರಗಿ ಕೊಲ್ಲುವುದರಲ್ಲಿರುವಾಗ ಮಿಹಿರಕುಲ ದೀನಸ್ವರದಲ್ಲಿ)

ಮಿಹಿರಕುಲ : ಕೊಲ್ಲದಿರು, ಕೊಲ್ಲದಿರು ಬಾಲಾದಿತ್ಯ. ಸಾಮಾನ್ಯ ಅಪರಾಧಿಯನ್ನೂ ಶೂಲಕ್ಕೇರಿಸುವ ಮುನ್ನ ನಿನ್ನ ಕೊನೆಯಾಸೆಯೇನೆಂದು ಕೇಳುತ್ತಾರೆ. ನೀನು ನನ್ನ ಕೊನೆಯಾಸೆಯೇನೆಂದು ಕೇಳುವುದಿಲ್ಲವೆ?

ಬಾಲಾದಿತ್ಯ : (ತಡೆದು) ಹೇಳು ಹೂಣದೊರೆ, ನಿನ್ನ ಕೊನೆಯಾಸೆ ಯಾವುದು ಹೇಳು! ಸೈನಿಕರೇ, ಬಂಧಿಸಿರಿ ಇವನನ್ನು. (ಮತಿರಾಮ ಬಲರಾಮರು ಬಂಧಿಸುತ್ತಾರೆ. ಬಲರಾಮನೀಗ ಮಹಾಶೂರನಂತೆ ವರ್ತಿಸುತ್ತಾನೆ. ಎದೆಯುಬ್ಬಿಸಿ ನಡೆಯುತ್ತಾನೆ. ಮಿಹಿರಕುಲನನ್ನು ಉರುಳಿಸಿ ಉರುಳಿಸಿ ರಟ್ಟೆ ಕಟ್ಟಿ ನಿಲ್ಲಿಸುತ್ತಾನೆ.)

ಮಿಹಿರಕುಲ : (ಮೋಸಬೆರೆತ ದೀನಸ್ವರದಲ್ಲಿ) ಪರಮಸಾಧ್ವಿಯೆಂದು ಹೆಸರಾಗಿರುವ ನಿನ್ನ ಮಾತೆಯ ದರ್ಶನ ಪಡೆದು ಪುನೀತನಾಗಿ ಸಾಯುವಾಸೆ ನನಗೆ ಬಾಲಾದಿತ್ಯ!

ಬಾಲಾದಿತ್ಯ : (ಆಶ್ಚರ್ಯದಿಂದ) ನನ್ನ ಮಾತೆಯ ಬಗ್ಗೆ ನಿನಗಿಷ್ಟು ಪೂಜ್ಯ ಭಾವನೆಯಿರುವುದು ನನಗೆ ಸೋಜಿಗವನ್ನುಂಟುಮಾಡಿದೆ ಮಿಹಿರಕುಲ!

ಮಿಹಿರಕುಲ : ನಿಜವಾಗಿಯೂ ನನಗೆ ಪೂಜ್ಯಭಾವನೆಯಿದೆ, ಬಾಲಾದಿತ್ಯ. ನಾನು ಮಾಡಬಾರದ ಪಾತಕಗಳನ್ನೆಲ್ಲ ಮಾಡಿದ್ದೇನೆ. ಪವಿತ್ರಾತ್ಮಳಾದ ರಾಜಮಾತೆಯ

ದರ್ಶನದಿಂದ ಸದ್ಗತಿ ಪಡೆದು ಸಾಯಬೇಕೆಂದಿದ್ದೇನೆ. ಅವರು ನಿನಗೆ ಮಾತ್ರ ತಾಯಿಯಲ್ಲ. ಅವರು ನಿನಗೂ ತಾಯಿ, ನನಗೂ ತಾಯಿ, ನಾವಿಬ್ಬರೂ ಅಣ್ಣ ತಮ್ಮಂದಿರು!

ಬಾಲಾದಿತ್ಯ : ಮಿಹಿರಕುಲ, ನಿನ್ನಾಸೆ ಪೂರೈಸುವವರೆಗೆ ನಿನಗೆ ಜೀವದಾನ ಮಾಡಿದ್ದೇನೆ!

ಮಿಹಿರಕುಲ : ನೀನು ನಿಜವಾಗಿಯೂ ಭಾರತವೀರ ಬಾಲಾದಿತ್ಯ!

(ತೆರೆ ಬೀಳುವುದು)

ನೋಟ ೬

(ರಾಜಮಾರ್ಗದಲ್ಲಿ ವಿಜಯಿಯಾಗಿ ಹಿಂದಿರುಗಿದ ಬಾಲಾದಿತ್ಯನ ಪ್ರವೇಶ. ಅವನ ಹಿಂದೆ ಸಮರಸಿಂಹ, ಈಶಾನವರ್ಮರು, ಸೈನಿಕರು ಬರುವರು. ಇನ್ನೊಂದು ಕಡೆಯಿಂದ ಆರತಿಗಳನ್ನು ಹಿಡಿದ ಸುಮಂಗಲೆಯರೊಡನೆ ಮಿತ್ರಾದೇವಿ ಪ್ರವೇಶಿಸುವಳು–ಕೆಳಗಣ ಸ್ವಾಗತಗೀತೆ ಹಾಡುತ್ತ)

ಬಾರಾ ಬಾರ ಭಾರತ ವೀರಾ

ಬಾರಾ ಭರತವೀರ ॥ಪ॥

ಹೂಣರ ಜಯಿಸಿ ಭಾರತ ರಕ್ಷಿಸಿ

ಯಶವನು ತಂದಿಹ ಧೀರ॥ ಅ.ಪ. ॥

ವೈರಿಮತ್ತಗಜಕೇಸರಿ ಬಾ ಬಾ

ಭಾರತಕುಲ ಕಂಠೀರವ ಬಾ

ಬಾರಾ ಬಾರಾ...

ಪರಮ ಪರಾಕ್ರಮಿ ಪ್ರಖರ ವಿಕ್ರಮಿ

ಭಾರತದೇಶದ ಗೌರವ ಬಾ....

ಬಾರಾ ಬಾರಾ.....

ಸಾಹಸಭೀಮ ಕಲಿ ನಿಸ್ಸೀಮ

ಅಜಿತವೀರ ಅರಿಭೈರವ ಬಾಬಾ

(ಸುಮಂಗಲಿಯರು ಆರತಿಯನ್ನೆತ್ತಿ ಪುಷ್ಪವೃಷ್ಟಿಯನ್ನು ಸುರಿಸುವರು)

ಮಿತ್ರಾದೇವಿ : ವೈರಿಮರ್ದನ ಮಾಡಿ ಭಾರತ ಗೌರವವನ್ನು ರಕ್ಷಿಸಿ ಜಯಮಾಲೆ ಧರಿಸಿ ಆಗಮಿಸಿದ ಪ್ರಭುಗಳಿಗೆ ಸುಸ್ವಾಗತ!

ಬಾಲಾದಿತ್ಯ : ನನ್ನ ಸ್ವಾಗತಕ್ಕಾಗಿ ಇಷ್ಟು ದೂರ ಬರಬೇಕೆನಿಸಿತೆ?

ಮಿತ್ರಾದೇವಿ : ರಣರಂಗಕ್ಕೇ ಬರಬೇಕೆನಿಸಿತ್ತು.

ಬಾಲಾದಿತ್ಯ : ಸುಮಂಗಲೆಯರು ಸಂಗ್ರಾಮಭೂಮಿಗೆ ಬರಬೇಕಾಗುವಷ್ಟು ಭಾರತ ಯೋಧರ ರಕ್ತ ನೀರಾಗಿಲ್ಲ ಮಿತ್ರಾ! ನಮ್ಮ ವೀರರ ನರಗಳಲ್ಲಿ ಇನ್ನೂ ಹನುಮ ಭೀಮರ ರಕ್ತ ಹರಿಯುತ್ತಲಿದೆ, ನೀವು ರಣರಂಗಕ್ಕೆ ಬರುವ ಅಗತ್ಯವಿಲ್ಲ. ಗೃಹರಂಗದಿಂದಲೇ ನಮ್ಮ ವಿಜಯಕ್ಕಾಗಿ ಪ್ರಾರ್ಥಿಸಿದರೆ ಸಾಕು. ನಿಮ್ಮ ಸದಾಶಯಗಳೇ ನಮಗೆ ರಕ್ಷಾಕವಚವಾಗಿ ವಿಜಯವನ್ನು ದೊರಕಿಸಿಕೊಡುವುವು! ನಡೆಯಿರಿ, ಮಾತೃದೇವಿ ದಾರಿ ಕಾಯುತ್ತಲಿರಬಹುದು.

(ಹೋಗುವರು. ತೆರೆ ಏಳುವುದು)

ನೋಟ ೭

(ಬಾಲಾದಿತ್ಯನ ಒಡ್ಡೋಲಗ. ಬಾಲಾದಿತ್ಯ ಸಿಂಹಾಸನದ ಮೇಲೆ, ಮಂತ್ರಿಸೇನಾಪತಿ, ಈಶಾನವರ್ಮರು ಉಚಿತಾಸನಗಳ ಮೇಲೆ. ರಾಜಮಾತೆ, ರಾಜ್ಯಲಕ್ಷ್ಮಿ ಸುಮಿತ್ರಾದೇವಿಯರು ಗವಾಕ್ಷದಲ್ಲಿ)

ಬಾಲಾದಿತ್ಯ : ಇಂದು ನಮಗೆ ಮಹಾನಂದಮಯ ದಿನ-ನಾವು ನಮ್ಮ ಪೂಜ್ಯ ತಾತಂದಿರಿಗೆ ಇತ್ತಿದ್ದ ವಚನವು ಪೂರ್ಣವಾದುದನ್ನು ಕಂಡ ಪುಣ್ಯದಿನ. ಈ ಮಹಾವಿಜಯಕ್ಕೆ ಕಾರಣರಾದ ಯಶೋಧರ್ಮ, ಈಶಾನವರ್ಮ ಭೂಪಾಲರಿಗೆ, ಮಂತ್ರಿ ಸೇನಾಪತಿಗಳಿಗೆ, ಸಾಮಂತ ಶ್ರೀಮಂತ ಧೀಮಂತರಿಗೆ ವೀರ ಯೋಧರಿಗೆ, ಧೀರ ಪ್ರಜೆಗಳಿಗೆ ಈ ಸಂದರ್ಭದಲ್ಲಿ ನಮ್ಮ ಮೆಚ್ಚುಗೆಯನ್ನು ವ್ಯಕ್ತಪಡಿಸುತ್ತೇವೆ. ಅಲ್ಲದೆ, ಯುದ್ಧದಲ್ಲಿ ಹತರಾದ ಯೋಧರ ಕುಟುಂಬ ರಕ್ಷಣೆಗಾಗಿ ತಕ್ಕ ವ್ಯವಸ್ಥೆ ಮಾಡಲು ಮತ್ತು ಗಣನೀಯವಾದ ಶೌರ್ಯ, ಸಾಹಸ ತೋರಿದ ಯೋಧರಿಗೆ ತಕ್ಕ ಸಂಭಾವನೆ ಕೊಡಲು ಸಂಬಂಧಪಟ್ಟ ಅಧಿಕಾರಿಗಳಿಗೆ ಆಜ್ಞೆ ಕಳಿಸಲಾಗಿದೆಯೆಂದು ಘೋಷಿಸುತ್ತೇವೆ. ಇಂದು ಭರತಮಾತೆಗೆ ವಿಶೇಷ ಪೂಜೆ ನಡೆಯಲಿ! ಮಿಹಿರಕುಲನನ್ನು ಕರೆದು ತನ್ನಿರಿ! (ಮತಿರಾಮ ಬಲರಾಮರು ಕರೆದು ತರುವರು. ಬಲರಾಮ ಈಗಲೂ ಕುಚೇಷ್ಟೆ ಮಾಡುತ್ತಲೇ ಬರುವನು.) ಮಿಹಿರಕುಲ, ಭೋಜನವಾಯಿತೆ?

ಮಿಹಿರಕುಲ : ಯಥೇಚ್ಛವಾಗಿ! ಆಹಾ, ಅದೆಷ್ಟು ರುಚಿಕರವಾದ ಭೋಜನ ನನ್ನ ದೇಶದಲ್ಲಿ ಒಮ್ಮೆಯೂ ಇಂಥ ಅಮೃತಾನ್ನವನ್ನು ಉಂಡಿರಲಿಲ್ಲ ನಾನು.

ಬಾಲಾದಿತ್ಯ : ಇನ್ನು ರಾಜಮಾತೆಯ ದರ್ಶನ ಪಡೆದು ಶೂಲವನ್ನೇರಲು ಸಿದ್ಧನಾಗು. (ಮೇಲಕ್ಕೆ ನೋಡಿ) ಮಾತೆ, ಈ ಖಲ-ಮಿಹಿರಕುಲ ಸಾಯುವಮುನ್ನ ನಿನ್ನ ದರ್ಶನ ಪಡೆಯಬೇಕೆಂದಿದ್ದಾನೆ. ದರ್ಶನ ಕೊಡು.

ರಾಜಮಾತೆ : (ಮೇಲೆದ್ದು) ನನ್ನ ದರ್ಶನವನ್ನೇಕೆ ಬಯಸಿದೆ ವತ್ಸ?

ಮಿಹಿರಕುಲ : (ಕಪಟ ಹರ್ಷವನ್ನು ಸೂಚಿಸಿ) ಇನ್ನೊಮ್ಮೆ ನನ್ನನ್ನು "ವತ್ಸ" ಎಂದು ಸಂಬೋಧಿಸಿರಿ ತಾಯೆ-ನನ್ನ ಪಾಪವೆಲ್ಲ ಪರಿಹಾರವಾಗುವುದು.

ರಾಜಮಾತೆ : ವತ್ಸ, ಹಿಂದೆ ಮಾಡಿದ ಪಾಪವೇನೇ ಇರಲಿ, ಇನ್ನು ಮುಂದಾದರೂ ಪುಣ್ಯಜೀವಿಯಾಗಿ ಬಾಳು!

ಮಿಹಿರಕುಲ : (ಹಿಗ್ಗಿ) ಮಾತೆ, ತಾವು ಕೃಪೆಯಿಟ್ಟು ನನಗೆ ಪ್ರಾಣದಾನ ನೀಡಿದರೆ ನಾನು ತಮ್ಮ ಈ ಅಮೃತಮಯ ಉಪದೇಶದಂತೆಯೇ ನಡೆಯುವೆನು. ತಮ್ಮ ಪಾದದಾಣೆಯಾಗಿ ಪುಣ್ಯಮಾರ್ಗದಲ್ಲಿ ನಡೆಯುವೆನು, ಕಲ್ಯಾಣ ಕಾರ್ಯಗಳಲ್ಲಿ ಆಯುಷ್ಯ ಕಳೆಯುವೆನು. ನನಗೆ ಪ್ರಾಣದಾನ ನೀಡಿರಿ! (ಇದ್ದಲ್ಲಿಯೇ ಉದ್ದಕ್ಕೆ ಬೀಳುವನು)

ರಾಜಮಾತೆ : ಎದ್ದೇಳು ವತ್ಸ, ನಿನಗೆ ಪ್ರಾಣಭಯವಿಲ್ಲ!

ಬಾಲಾದಿತ್ಯ : (ಚಕಿತನಾಗಿ) ಮಾತೆ, ಮಾತೆ, ಇದೇನನ್ನು ಮಾಡಿದಿರಿ? ವೈರಿಗೆ ಜೀವದಾನವೆ?

ನಯಸಾರ : ದಯವಿಟ್ಟು ಈ ಅಭಯದಾನವನ್ನು ಹಿಂದಕ್ಕೆ ತೆಗೆದುಕೊಳ್ಳಿರಿ ರಾಜಮಾತೆಯವರೆ-ಹಾವಿಗೆ ಹಾಲೆರೆಯದಿರಿ!

ಸಮರಸಿಂಹ : ಮಿಹಿರಕುಲ ಕ್ರೂರನಿದ್ದಷ್ಟೇ ಕಪಟಿಯೂ ಆಗಿದ್ದಾನೆ ತಾಯೆ. ಅವನ ಮಾತುಗಳಿಗೆ ಮೋಸ ಹೋಗಬೇಡಿರಿ!

ಈಶಾನವರ್ಮ : ನಾನೂ ಪ್ರಾರ್ಥಿಸಿಕೊಳ್ಳುವೆ ಮಾತೆ. ವೈರಿಗೆ ತೋರಿದ ಔದಾರ್ಯ ಈ ದೇಶಕ್ಕೆ ಹಲವು ಸಲ ವಿಪತ್ಪರಂಪರೆಯನ್ನು ತಂದಿದೆ! ಈ ದುಷ್ಟನಿಗೆ ರಕ್ಷಣೆ ನೀಡಬೇಡಿರಿ!

ರಾಜ್ಯಲಕ್ಷ್ಮಿ : (ಗವಾಕ್ಷದಲ್ಲಿ ಎದ್ದು ನಿಂತು) ನಾನೂ ಕರಜೋಡಿಸಿ ಕೋರುವೆ ರಾಜಮಾತೆ, ನನ್ನ ಪತಿದೇವರು ಮಾಡಿದ ತಪ್ಪು ಮತ್ತೆ ನಡೆಯದಿರಲಿ! ದಯೆ, ದಾಕ್ಷಿಣ್ಯಗಳು ಧರ್ಮಭೀರುಗಳಿಗಾಗಿ ಮಾತ್ರ. ಅಧರ್ಮಿಗಳಿಗೆ ದಯೆ ತೋರುವುದೆಂದರೆ ಧರ್ಮಕ್ಕೆ ಅಪಚಾರವೆಸಗಿದಂತೆ!

ಮಿಹಿರಕುಲ : (ಹುಸಿಗಂಬನಿ ಸುರಿಸುತ್ತ) ಇವರೆಲ್ಲರಿಗೆ ವಿರುದ್ಧವಾಗಿ ನನಗೆ ಜೀವದಾನ ಮಾಡಬೇಡಿರಿ ಮಾತೆ! ಇನ್ನೊಮ್ಮೆ ನನ್ನನ್ನು "ವತ್ಸಾ" ಎಂದು ಕರೆದು ಬಿಡಿರಿ! ನಾನು ಸಂತೋಷವಾಗಿ ಶೂಲವನ್ನೇರುತ್ತೇನೆ!

ರಾಜಮಾತೆ : (ನಿರ್ಧಾರದಿಂದ) ಒಮ್ಮೆ ನೀಡಿದ ಅಭಯದಾನ ಹುಸಿಯಾಗದು ವತ್ಸ-ನಿನಗೆ ಶೂಲವಿಲ್ಲ. ಬಾಲಾದಿತ್ಯ, ವತ್ಸೆ ರಾಜ್ಯಲಕ್ಷ್ಮೀ, ಈಶಾನವರ್ಮಭೂಪಾಲ, ಮಂತ್ರಿ, ಸೇನಾಪತಿಗಳೆ, ಬಂಧಿಸುವುದಷ್ಟೇ ಭಾರತವೀರರ ಲಕ್ಷಣವಲ್ಲ. ಬಂಧಿತರಿಗೆ ಬಿಡುಗಡೆ ನೀಡುವುದೂ ಅವರ ಹಿರಿಮೆ ಹೆಗ್ಗಳಿಕೆಯಾಗಿವೆ. ಸಾಮ್ರಾಟ ಸ್ಕಂದಗುಪ್ತರೂ ಬಂಧಿತ ವೈರಿಗೆ ಬಿಡುಗಡೆ ನೀಡಿದ್ದುದನ್ನು ಮರೆಯದಿರಿ. ಮಿಹಿರಕುಲನನ್ನೂ ಬಂಧಮುಕ್ತಗೊಳಿಸಿ ಅವನಿಗೂ ಒಳ್ಳೆಯ ದಾರಿಗೆ ಬರುವ ಒಂದು ಅವಕಾಶವನ್ನು ಕೊಡಿರಿ!

ಬಾಲಾದಿತ್ಯ : ತಮ್ಮ ಆಜ್ಞೆ ನನಗೆ ಶಿರಸಾ ಮಾನ್ಯ ತಾಯೆ!

ಮಿಹಿರಕುಲ : (ಹಿಗ್ಗಿ) ಬಾಲಾದಿತ್ಯ, ನೀನು ಪ್ರಚಂಡ ಪರಾಕ್ರಮಿಯಷ್ಟೇ ಅಲ್ಲ ಪುಣ್ಯಾತ್ಮನೂ ಅಹುದು. ರಾಜಮಾತೆಗೆ ತಕ್ಕ ಪುತ್ರರತ್ನ ನೀನು. ಮಾತೆ ನಿನಗಷ್ಟೇ ಮಾತೆಯಲ್ಲ, ನನಗೂ ಮಾತೆ! ಇಂದಿನಿಂದ ನಾವಿಬ್ಬರೂ ಒಂದೇ ತಾಯಿಯ ಮಕ್ಕಳು-ಬಂಧುಗಳು! ಕೈಕೂಡಿಸಿ ಬಂಧು ಬಾಲಾದಿತ್ಯ-ಕೈ ಕುಲುಕಿಸು. (ಬಾಲಾದಿತ್ಯನ ಕೈ ಹಿಡಿದುಕೊಳ್ಳುವನು. ಬಾಲಾದಿತ್ಯ ಧರ್ಮಸಂಕಟಕ್ಕೆ ಸಿಕ್ಕಿದವನಂತೆ, ಮನಸ್ಸಿಲ್ಲದ ಮನಸ್ಸಿನಿಂದ ಕೈಕುಲುಕಿಸುವನು. ಈಶಾನವರ್ಮ, ನಯಸಾರ, ಸಮರಸಿಂಹರು ಒಬ್ಬರನ್ನೊಬ್ಬರು ಶಂಕೆ ಬೆರೆತ ದೃಷ್ಟಿಯಿಂದ ನೋಡುವರು. ರಾಜಮಾತೆ ಮಾತ್ರ ಆನಂದಾಶ್ರುಪೂರ್ಣ ನೇತ್ರಗಳಿಂದ ನೋಡಿ ತೃಪ್ತಿಯನ್ನು ಸೂಸುವಳು)

ನೋಟ ೮

(ಮತಿರಾಮ ಬಲರಾಮರು ಪ್ರವೇಶಿಸುತ್ತಾರೆ. ಮತಿರಾಮ ಯೋಚನಾಮಗ್ನನಾಗಿ ತೋರುತ್ತಾನೆ; ಬಲರಾಮ ಸಿಟ್ಟಿನಿಂದ ಮೋರೆ ಸೊಟ್ಟಮಾಡಿಕೊಂಡಿರುತ್ತಾನೆ)

ಮತಿರಾಮ : (ಯೋಚನೆಯಿಂದ ಒಮ್ಮೆಗೆ ಎಚ್ಚೆತ್ತು) ಬಲರಾಮ, ಮಿಂಚಿ ಹೋದ ಮಾತಿಗಾಗಿ ಚಿಂತಿಸಿ ಫಲವಿಲ್ಲ. ಬರುವುದಕ್ಕೆ ಸಿದ್ಧರಾಗಿರೋಣ.

ಬಲರಾಮ : ಸಿದ್ಧರಾಗಿರೋಣ, ಸಿದ್ಧರಾಗಿರೋಣ, ಸಿದ್ಧರಾಗಿರೋಣ! ಸಾಕಾಯಿತು ಈ ಮಾತು ಕೇಳಿ ಕೇಳಿ! ಕೈಗೆ ಸಿಕ್ಕ ವೈರಿಯನ್ನು ಬಿಟ್ಟುಕೊಡೋದು, ಮತ್ತೆ ಯುದ್ಧಕ್ಕೆ ಸಿದ್ಧರಾಗಿರೆಂದು ಹುರಿದುಂಬಿಸೋದು! ಎಲ್ಲಿಯವರೆಗೆ ಸಿದ್ಧರಾಗಿರೋದು?

ಮತಿರಾಮ : ಎಲ್ಲಿಯವರೆಗೆ ನೀನು ಸ್ವತಂತ್ರನಾಗಿ ಇರಬೇಕೆನ್ನುವಿ?

ಬಲರಾಮ : ಎಲ್ಲಿಯವರೆಗೇನು? ಕೊನೆಯವರೆಗೆ!

ಮತಿರಾಮ : ಎಂದ ಮೇಲೆ ಬಿಡುಗಡೆಯ ಬೆಲೆ ಕೊಡಲಿಕ್ಕೂ ಕೊನೆಯವರೆಗೆ ಸಿದ್ಧನಾಗಿರಬೇಕು?

ಬಲರಾಮ : ಬಿಡುಗಡೆಯ ಬೆಲೆ ಎಷ್ಟು? ಒಮ್ಮೆ ಸರಿಯಾಗಿ ಹೇಳಿಯಾದರೂ ಬಿಡು.

ಮತಿರಾಮ : ಸದಾ ಜಾಗರೂಕತೆಯೇ ಬಿಡುಗಡೆಯ ಬೆಲೆ; ಸದಾ ಸಿದ್ಧತೆಯೇ ಬಿಡುಗಡೆಯ ಬೆಲೆ; ಬೆವರು, ಕಣ್ಣೀರು, ರಕ್ತಗಳೇ ಬಿಡುಗಡೆಯ ಬೆಲೆ! ಹೆಚ್ಚೇನು, ಗಂಡಸುತನವೇ ಬಿಡುಗಡೆಯ ಬೆಲೆ!

ಬಲರಾಮ : (ಮೀಸೆ ಹುರಿಗೊಳಿಸಿ) ಗಂಡಸುತನಕ್ಕೆ ಸಾಕ್ಷಿ ಇಲ್ಲಿದೆ!

ಮತಿರಾಮ : ಅದಿಷ್ಟೇ ಸಾಲದು. ಗುಂಡಿಗೆಯಲ್ಲಿ ದಿಟ್ಟತನವಿರಬೇಕು; ರಟ್ಟೆಯಲ್ಲಿ ಗಟ್ಟಿತನವಿರಬೇಕು; ಮೈಯಲ್ಲಿ ಜೆಟ್ಟಿತನವಿರಬೇಕು! ನಾಡನ್ನು ಕಾಪಾಡಲು ಕರೆ ಬಂದರೆ ಮೈಯುಬ್ಬಬೇಕು, ಹುಮ್ಮಸು ಹೊಮ್ಮಬೇಕು!

ಬಲರಾಮ : ಆಗಲಪ್ಪಾ, ಬಿಚ್ಚುಗತ್ತಿ ಹಿಡಿದುಕೊಂಡೇ ಬದುಕೋಣ! ಆಯಿತೆ ನಿನಗೆ ಸಮಾಧಾನ?

ಮತಿರಾಮ : ಆಯಿತು, ನಡೆ, ಮಿಹಿರಕುಲನ ಹಿಂದೆ ಹಿಂದೆಯೇ ಹೋಗೋಣ. ಅವನು ಏನೇನು ಒಳಸಂಚು ಹೂಡುವನೋ, ಹೊಂಚು ಹಾಕುವನೋ ಹಂಚಿಕೆ ಹಮ್ಮುವನೋ ತಿಳಿದು ತಕ್ಷಣ ನಮ್ಮ ಮಹಾರಾಜರಿಗೆ ತಿಳಿಸೋಣ.

(ಹೋಗುವರು. ತೆರೆ ಏಳುವುದು)

ನೋಟ ೯

(ಗುರು ವಸುಬಂಧುಗಳ ಆಶ್ರಮ ಕಂಗೊಳಿಸುತ್ತದೆ. ವಸುಬಂಧುಗಳೊಡನೆ ರಾಜ್ಯಲಕ್ಷ್ಮಿ, ಈಶಾನವರ್ಮರು ಮಾತನಾಡುತಲಿದ್ದಾರೆ. ರಾಜ್ಯಲಕ್ಷ್ಮಿ ಈಶಾನವರ್ಮರಿಬ್ಬರ ಮುಖದ ಮೇಲೂ ಮನಿಸಿನ ಛಾಯೆ ಕಂಡುಬರುತ್ತದೆ. ವಸುಬಂಧುಗಳ ಮುಖ ಎಂದಿನಂತೆ ನಿಸ್ತರಂಗ ಸರಸಿಯ ಸಲಿಲದಂತೆ ಪ್ರಶಾಂತ, ಪ್ರಸನ್ನ)

ರಾಜ್ಯಲಕ್ಷ್ಮಿ : ಗುರುದೇವಾ, ತಮ್ಮ ಉಪದೇಶದಂತೆ ಮಿಹಿರಕುಲನ ವಿರುದ್ಧ ನಡೆದ ಧರ್ಮಯುದ್ಧದಲ್ಲಿ ಸಾಮ್ರಾಟ ಬಾಲಾದಿತ್ಯರಿಗೆ ಸರ್ವವಿಧದಿಂದಲೂ ನಾವು ಸಹಕಾರ ನೀಡಿದೆವು. ಆದರೆ ಅದೆಲ್ಲ ವಿಫಲವಾಯಿತು! ಭಾರತಕ್ಕೊದಗಿದ್ದ ವಿಪತ್ತು

ಮತ್ತೆ ಮರುಹುಟ್ಟನ್ನು ಪಡೆಯಿತು. ನನ್ನ ಪತಿದೇವರು ಮಾಡಿದ ತಪ್ಪನ್ನೇ ಬಂಧು ಬಾಲಾದಿತ್ಯರೂ ಬೇಡವೆಂದು ನಾವು ಹೇಳಿದರೂ ಮಾಡಿಬಿಟ್ಟರು! ಜಯ ಪಡೆದೂ ಭಯ ತಪ್ಪಲಿಲ್ಲ ಭಾರತಕ್ಕೆ!

ವಸುಬಂಧು : ಕರುಣೆ, ಸ್ನೇಹ, ಔದಾರ್ಯ, ಸಹಾನುಭೂತಿಗಳು ಸದ್ಗುಣಗಳಾಗಿರುವುದು ನಿಜವಾಗಿದ್ದಲ್ಲಿ ರಾಜಮಾತೆಯರ ಮಾತಿಗೆ ಮನ್ನಣೆ ಕೊಟ್ಟು ಮಿಹಿರಕುಲನಿಗೆ ಬಾಲಾದಿತ್ಯರು ಜೀವದಾನ ಮಾಡಿದುದು ತಪ್ಪೆನಿಸಲಾರದು ವತ್ಸೆ.

ಈಶಾನವರ್ಮ : ಗುರುದೇವಾ, ಕಾಡುಕಿಚ್ಚಿನ ನಡುವೆ ಸಿಕ್ಕು ಸಾಯುತ್ತಲಿದ್ದ ಕಾರ್ಕೋಟಕನನ್ನು ನಳಚಕ್ರವರ್ತಿ ಸಾರಾಸಾರ ವಿಚಾರಮಾಡದೆ ಬದುಕಿಸಿದ. ಆ ದುಷ್ಟ ಸರ್ಪಕ್ಕೆ ದಯೆ ತೋರಿಸಿದುದರ ಪರಿಣಾಮವೇನಾಯಿತು? ಉಪಕಾರ ಮಾಡಿದವರನ್ನೇ ಕಚ್ಚುವುದು ಹುಟ್ಟುಗುಣ ಹಾವಿಗೆ. ಕಾರ್ಕೋಟಕನೂ ಉಪಕಾರ ಮಾಡಿದ ನಳಚಕ್ರವರ್ತಿಯನ್ನೇ ಕಚ್ಚಿ ದುಷ್ಟರಿಗೆ ದಯೆ ತೋರಿಸುವುದು ಧರ್ಮವಲ್ಲ, ದೌರ್ಬಲ್ಯವೆಂಬುದನ್ನು ಸಿದ್ಧಗೊಳಿಸಲಿಲ್ಲವೆ?

ವಸುಬಂಧು : ನಳಚಕ್ರವರ್ತಿಗೆ ಆ ಸರ್ಪದರ್ಶನದಿಂದ ಲಾಭವಾಯಿತೋ ಹಾನಿಯಾಯಿತೊ? ನೀವೇ ಹೇಳಿರಿ ಈಶಾನವರ್ಮರೆ.

ರಾಜ್ಯಲಕ್ಷ್ಮಿ : ಸರ್ಪ ಕಚ್ಚಿ ನಳನ ರೂಪ ವಿಕೃತವಾದುದರಿಂದ ಲೋಕ ಅವನನ್ನು ಗುರುತಿಸದಂತಾಗಿ ಅವನಿಗದು ಅನುಕೂಲವೇ ಆಗಿ ಪರಿಣಮಿಸಿತೆಂದ ಮಾತ್ರಕ್ಕೆ ನಾವೆಲ್ಲರೂ ಸುಮ್ಮ ಸುಮ್ಮನೆ ಸರ್ಪಗಳಿಂದ ಕಚ್ಚಿಸಿಕೊಳ್ಳಬೇಕೆ ಗುರುದೇವ?

ಈಶಾನವರ್ಮ : ಮುಖ್ಯ ಪ್ರಶ್ನೆ ಇದು ಗುರುದೇವ: ಧರ್ಮವನ್ನು ರಕ್ಷಿಸಿದವರನ್ನು ಧರ್ಮ ರಕ್ಷಿಸುತ್ತದೆ, ಅಧರ್ಮಿಗಳನ್ನಲ್ಲ. ಅಧರ್ವಿಗಳಿಗೂ ಧರ್ಮದ ರಕ್ಷೆ ದೊರೆಯಬೇಕೆ? ಅವರನ್ನು ಶಿಕ್ಷಿಸುವುದು ಧರ್ಮ, ರಕ್ಷಿಸುವುದು ಧರ್ಮವಾಗಲಾರದು!

ವಸುಬಂಧು : ಒಪ್ಪಿದೆ ಈಶಾನವರ್ಮ. ಶಿಶುಪಾಲನನ್ನು ವಧಿಸಬೇಕು. ಅದು ಧರ್ಮ. ಆದರೆ ಶಿಶುಪಾಲನಿಗೂ ತನ್ನ ತಪ್ಪನ್ನು ತಿದ್ದಿಕೊಳ್ಳುವ ಅವಕಾಶವನ್ನು ಕೊಡಬೇಕು. ಕೌರವನನ್ನು ಮರ್ದಿಸಬೇಕು, ಆದರೆ ಅವನನ್ನೂ ನೇರ ದಾರಿಗೆ ತರುವ ಎಲ್ಲ ಪ್ರಯತ್ನಗಳನ್ನೂ ಮೊದಲು ಮಾಡಬೇಕು, ತಪ್ಪು ಮಾಡದ ಮಾನವನಿಲ್ಲ ಈ ಲೋಕದಲ್ಲಿ. ಮೊದಲ ತಪ್ಪಿಗೇ ತಪ್ಪುಗಾರರನ್ನು ವಧಿಸಿಬಿಟ್ಟರೆ ಧರ್ಮಕ್ಕೆ ಅಂಥವರನ್ನು ಉದ್ಧರಿಸುವ ಅವಕಾಶವೇ ಉಳಿಯದಂತಾಗುವುದಿಲ್ಲವೆ? ಆದುದರಿಂದ ದುಷ್ಟರಿಗೆ ಕೊಟ್ಟ ಅವಕಾಶ ವಸ್ತುತಃ ಧರ್ಮಕ್ಕೆ ಕೊಟ್ಟ ಅವಕಾಶವಾಗಿದೆ. ಧರ್ಮದ ಶಕ್ತಿಗೂ ಮಣಿಯದ ದುಷ್ಟರಿಗೆ ದಂಡನೆಯ ಕೊನೆಯ ಉಪಾಯವಿದ್ದೇ ಇದೆಯಲ್ಲ.

ಈಶಾನವರ್ಮ : ಅದೇನೇ ಇರಲಿ ಗುರುದೇವ, ನಾವು ನೀಡಿದ ನೆರವನ್ನು ನಿರ್ಲಕ್ಷಿಸಿ, ನಮ್ಮ ಮಾತಿಗೆ ಬೆಲೆ ಕೊಡದೆ, ರಾಜಸಭೆಯಲ್ಲಿ ನಮ್ಮ ತೇಜೋವಧೆಗೈದ ಬಲಾದಿತ್ಯರಿಗೆ ನಾವಿನ್ನು ಸಹಕಾರ ನೀಡುವುದು ಸಾಧ್ಯವಿಲ್ಲ!

ವಸುಬಂಧು : ಒಮ್ಮೆಗೆ ಎಷ್ಟು ಕೆಳಗೆ ಇಳಿದುಬಿಟ್ಟೆಯಲ್ಲ ವತ್ಸ! ನೀನು ಹೇಳಿದಂತೆ ಕೇಳಿದರೆ ಮಾತ್ರ ಬಾಲಾದಿತ್ಯನಿಗೆ ನೆರವು ನೀಡುವಿಯಾ? ನೆರವು ನೀಡಿದುದು ಬಾಲಾದಿತ್ಯನಿಗೋ ಭಾರತ ರಕ್ಷಣೆಗೊ? ಭಾರತ ರಕ್ಷಣೆಯೆಂಬುದು ಬಡ್ಡಿಯ ವ್ಯವಹಾರವೆ? ರಾಷ್ಟ್ರಭಕ್ತಿಯನ್ನು ತಕ್ಕಡಿಯಲ್ಲಿಟ್ಟು ತೂಗಬಹುದೆ? ರಾಷ್ಟ್ರರಕ್ಷಣೆಯು ಪ್ರತಿಫಲಾಪೇಕ್ಷೆಯಿಲ್ಲದೆ ಮಾಡುವ ಪವಿತ್ರ ಕರ್ತವ್ಯ. ಈ ಕರ್ತವ್ಯ ಪಾಲನೆಯಿಂದ ದೊರೆಯುವ ದೈವೀಆನಂದವೇ ಅದರ ಅನುಪಮ ಪ್ರತಿಫಲ. ಆ ಆನಂದದ ಮುಂದೆ ಉಳಿದೆಲ್ಲ ವಿಷಯಗಳೂ ಕಃಪದಾರ್ಥ. ಆ ಆನಂದದ ಅಮೃತವನ್ನು ಕುಡಿದು ಅಮೃತಪುತ್ರರಾಗಿರಿ, ಅಮರ ಕೀರ್ತಿಗೆ ಪಾತ್ರರಾಗಿರಿ!

ರಾಜ್ಯಲಕ್ಷ್ಮಿ : ಫಲಾಪೇಕ್ಷೆಯಿಲ್ಲದೆ, ಸ್ವಾರ್ಥದ ಲವಲೇಶವೂ ಇಲ್ಲದೆ ನಾವು ರಾಷ್ಟ್ರರಕ್ಷಣೆಯ ಶಪಥ ತೊಟ್ಟಿದ್ದೇವೆ ಗುರುದೇವ. ಆದರೆ ಅನಾವಶ್ಯಕವಾಗಿ ರಾಷ್ಟ್ರಕ್ಕೆ ಗಂಡಾಂತರ ಮುಂದುವರಿಯುವಂತೆ ಮುಂದಾಳು ಮಾಡಿದರೆ ಹಿಂಬಾಲಕರ ಗತಿಯೇನು? ಪ್ರಜೆಗಳ ಸಂಕಷ್ಟಗಳಿಗೆ, ಕ್ಲೇಶ ನಷ್ಟಗಳಿಗೆ ಕೊನೆಯೇ ಇರಬಾರದೆ?

ವಸುಬಂಧು : ವತ್ಸೆ, ಈ ದೇಶವು ತೋರಿದ ದಯೆ ಹಾಗೂ ಔದಾರ್ಯಗಳನ್ನು ಕಡೆಗಣಿಸಿ ವಿಶ್ವಾಸಘಾತಕಿಯಾಗಿ ಮಿಹಿರಕುಲ ಮತ್ತೆ ದಂಡೆತ್ತಿ ಬಂದದ್ದಾದರೆ ಅವನ ವಿನಾಶ ನಿಶ್ಚಿತವೆಂದು ತಿಳಿ! ರಾಜಮಾತೆ ಬಾಲಾದಿತ್ಯರು ಈ ಸಲ ಅವನನ್ನು ಉಳಿಸುವ ಗೊಡವೆಗೆ ಹೋಗಲಿಕ್ಕಿಲ್ಲ. ಅವರು ಉಳಿಸಲೆತ್ನಿಸಿದರೂ ಅವನು ಉಳಿಯುವುದು ಸಾಧ್ಯವಿಲ್ಲ! ಧರ್ಮವು ನೀಡಿದ ರಕ್ಷಣೆಯನ್ನು ದುರುಪಯೋಗಿಸಿಕೊಳ್ಳುವ ದುಷ್ಟರನ್ನು ದೈವ ದಂಡಿಸುವುದು, ಕಾಲ ಧ್ವಂಸಗೊಳಿಸುವುದು! ಮಿಹಿರಕುಲನಿಗಿಂತಲೂ ಬಲಾಢ್ಯರಾಗಿದ್ದ ಖಳರನೇಕರು ಈ ಹಿಂದೆ ಹತರಾಗಿ ಹೋಗಿರುವಂತೆ ಮಿಹಿರಕುಲನೂ ನಾಶ ಹೊಂದುವನು. ಸಂದೇಹವಿಲ್ಲ ಇದರಲ್ಲಿ. ನೀವು ಮಾತ್ರ ನಿಶ್ಚಲ ರಾಷ್ಟ್ರಭಕ್ತಿಯೊಡನೆ ಅವನ ದಾಳಿಯನ್ನೆದುರಿಸಲು ಸನ್ನದ್ಧರಾಗಿರಿ, ನೆನಪಿರಲಿ, ಸ್ವಾತಂತ್ರ್ಯ ತರುವ ಸಂಕಟ ದಾಸ್ಯ ನೀಡುವ ಸುಖಕ್ಕಿಂತ ಸಾವಿರ ಪಾಲು ಶ್ರೇಯಸ್ಕರವಾದುದು! ಯುದ್ಧಕ್ಕಂಜಿ, ಕಷ್ಟ ಕ್ಲೇಶಗಳಿಗಂಜಿ, ಸುಖವಿಲಾಸಗಳಿಗೆ ಮನಸೋತು ದಾಸ್ಯವನ್ನು ಒಪ್ಪಿಕೊಳ್ಳುವ, ಅಪ್ಪಿಕೊಳ್ಳುವ ದುರ್ಬುದ್ಧಿ ಈ ದೇಶದಲ್ಲಿ ಎಲ್ಲಿಯೂ ತಲೆದೋರದಿರಲಿ! ತಲೆದೋರಿದರೂ ಅದನ್ನು ಆ ಕ್ಷಣ ಚಿವುಟಿ ಚೆಲ್ಲುವ ಮುಂಜಾಗ್ರತೆ, ದೂರದರ್ಶಿತ್ವ ಭಾರತೀಯರಲ್ಲಿ ಬೆಳೆಯಲಿ! ಭಾರತೀಯರಿಗೆ ಭಾರತವನ್ನು ರಕ್ಷಿಸುವ ಬಲವಿರಲಿ ಛಲವಿರಲಿ!

ರಾಜ್ಯಲಕ್ಷ್ಮಿ : ಕದಡಿದ ಬಗೆ ತಿಳಿಯಾಯಿತು ಗುರುದೇವ. ಬದುಕಿರುವವರೆಗೆ ಬಿಡುಗಡೆಯ ರಕ್ಷಣೆಗಾಗಿಯೇ ಹೋರಾಡುವೆವು, ಭಾರತದ ರಕ್ಷಣೆಗಾಗಿಯೇ ಹೆಣಗುವೆವು! ಬೇರಾವ ಬಯಕೆಯೂ ನಮಗುಳಿದಿಲ್ಲ.

ಈಶಾನವರ್ಮ : ನನ್ನದೂ ಇದೇ ನಿರ್ಧಾರ ಗುರುದೇವ-ದೇಶದ ಮೇಲೆ ದಾಳಿಯಾದಾಗಲೆಲ್ಲ ಈಶಾನವರ್ಮನನ್ನು ಯುದ್ಧಭೂಮಿಯಲ್ಲಿ ಕಾಣುವಿರಿ!

ವಸುಬಂಧು : ನಿಮ್ಮಂಥ ರಾಷ್ಟ್ರವೀರರ ನಿರ್ಧಾರದಲ್ಲಿಯೇ ನಾಡಿನ ಭಾಗ್ಯ ಭದ್ರವಾಗಿರುತ್ತದೆ ರಾಜ್ಯಲಕ್ಷ್ಮಿ ಈಶಾನವರ್ಮರೆ. ಕಿವಿಗೊಟ್ಟು ಕೇಳಿ ರಾಷ್ಟ್ರದೇವಿ ಅಭಯವೀಯುತ್ತಿದ್ದಾಳೆ- 'ಯಂ ಕಾಮಯೇ ತಂ ತುಮುಗ್ರಂ ಕರೋಮಿ' ಎಂದು ಆ ತಾಯಿ ನಿಮ್ಮನ್ನು, ಭಾರತೀಯರೆಲ್ಲರನ್ನು ರಿಪುಭಯಂಕರರನ್ನಾಗಿ ಮಾಡಲಿಂದು. ಹೋಗಿ ಬನ್ನಿರಿ ನಿಮಗೆ ಜಯವಾಗಲಿ!

(ಕೈಯೆತ್ತಿ ಹರಸುತ್ತಿರುವಂತೆ ತೆರೆ)

ಮೂರನೆಯ ಅಂಕ

ನೋಟ ೧

(ಅರಣ್ಯದಲ್ಲಿ ಮಿಹಿರಕುಲ-ದುರ್ಬುದ್ಧಿ-ಶುಂಭರು ಮಂತ್ರಾಲೋಚನೆ ನಡೆಸಿದ್ದಾರೆ)

ಮಿಹಿರಕುಲ : (ಕೈ ಹೊಸೆಯುತ್ತ) ಬಾಲಾದಿತ್ಯನನ್ನು ಬೂದಿಮಾಡಿ ಸಮಗ್ರ ಭಾರತದ ಸಾಮ್ರಾಟನಾಗದೆ ಶಾಂತಿಯಿಲ್ಲ ನನಗೆ! ಎಂಥ ಸಂಪದ್ಭರಿತದೇಶ! ಎಂಥ ಧಾನ್ಯಗಳು, ಎಂಥ ಪ್ರಾಣಿಗಳು! ನಿತ್ಯವೂ ಒಂದೊಂದು ವಿಧದ ಭಕ್ಷ್ಯ ಭೋಜ್ಯಗಳನ್ನು ತಿಂದು ತೇಗಬಹುದು. ಅಹಾ, ಆ ಬಾಲಾದಿತ್ಯನು ಉಣ್ಣಿಸಿದ ರಾಜಾನ್ನದ ರುಚಿಯೇ! ಅದು ನೆನಪಾದರೆ ನೀರೂರುತ್ತದೆ ನಾಲಿಗೆಯಲ್ಲಿ! ಇಂಥ ದೇಶವನ್ನು ಕಬಳಿಸದೆ ಬಿಡುವೆನೆ? ದುರ್ಬುದ್ಧಿ, ಶುಂಭ-ನಾವೀ ದೇಶವನ್ನು ನುಂಗಿ ನೀರು ಕುಡಿಯಲೇ ಬೇಕು!

ದುರ್ಬುದ್ಧಿ : ಮಹಾಪ್ರಭು, ನಮ್ಮ ಸೈನ್ಯವೆಲ್ಲ ಕರಗಿ ಹೋಗಿದೆ. ನಾವು ಬಂದ ಕಾಲಗುಣವೋ ನಿಂದ ನೆಲದಗುಣವೋ ತಿಳಿಯದು-ನಮ್ಮ ಸೈನಿಕರು ಈ ದೇಶವನ್ನೇ ಸ್ವದೇಶವನ್ನಾಗಿ ಮಾಡಿಕೊಂಡು ನಮ್ಮೊಡನೆ ಹಿಂದಿರುಗಲು ನಿರಾಕರಿಸಿಬಿಟ್ಟರು!

ಮಿಹಿರಕುಲ : ಬಹಳ ಒಳ್ಳೆಯದಾಯಿತು. ಅವರು ಭಾರತದಲ್ಲಿ ನಮ್ಮ ಗೂಢಚಾರರಾಗಿ ಕಾರ್ಯಮಾಡುವರು. ಹೂಣರು ಕೊನೆಗೆ ಹೂಣರಿಗೇ ನೆರವು ನೀಡುವರು. ಅವರೊಡನೆ ಸಂಪರ್ಕ ಉಳಿಸಿಕೊಂಡಿರಬೇಕು.

ದುರ್ಬುದ್ಧಿ : ಸಂಪರ್ಕ ಉಳಿಸಿಕೊಳ್ಳಲು ಸರ್ವ ಪ್ರಯತ್ನಗಳೂ ನಡೆದಿವೆ ಮಹಾಪ್ರಭು. ಆದರೆ ಸೈನ್ಯವಿಲ್ಲದೆ ಸಾಮ್ರಾಟ ಬಾಲಾದಿತ್ಯನನ್ನು ಸೋಲಿಸುವುದು ಹೇಗೆ?

ಮಿಹಿರಕುಲ : ಬಾಲಾದಿತ್ಯನ ಬೆಂಬಲಕ್ಕೆ ನಿಂತಿರುವ ಯಶೋಧರ್ಮ ಈಶಾನವರ್ಮ ಇತ್ಯಾದಿ ರಾಜರಲ್ಲಿ ಕೆಲವರನ್ನು ನಮ್ಮ ಕಡೆಗೆ ಒಲಿಸಿಕೊಳ್ಳಬೇಕು. ಒಡಕು ಹುಟ್ಟಿಸಿ ಒಡೆತನ ಪಡೆಯಬೇಕು.

ದುರ್ಬುದ್ಧಿ : ಆ ಪ್ರಯತ್ನಗಳನ್ನೂ ಮಾಡಿಯಾಯಿತು ಮಹಾಪ್ರಭು. ಆದರೆ ಅವು ಫಲಿಸಲಿಲ್ಲ. ಹಿಂದೆ ಅನೈಕಮತ್ಯದಿಂದ ಉದ್ಭವಿಸಿದ ಅನಾಹುತಗಳನ್ನು, ಅನಿಷ್ಟಗಳನ್ನು ಮನಗಂಡ ಭಾರತೀಯರಿಂದು ಬಾಲಾದಿತ್ಯನ ನಾಯಕತ್ವದಲ್ಲಿ ಒಡೆಯಲಾಗದ ಒಕ್ಕಟ್ಟನ್ನು ಸಾಧಿಸಿಕೊಂಡು ಅಜೇಯ ಶಕ್ತಿಯಾಗಿ ನಿಂತಿದ್ದಾರೆ.

ಮಿಹಿರಕುಲ : ಹಾಗಾದರೆ ನಾವು ನಮ್ಮ ದೇಶಕ್ಕೆ ಹೋಗೋಣ. ಅಲ್ಲಿ ಹೊಸ ಹೂಣ ಪಡೆಯನ್ನು ಸಿದ್ಧಪಡಿಸಿಕೊಂಡು ಮತ್ತೊಮ್ಮೆ ಬಾಲಾದಿತ್ಯನ ಮೇಲೆ ಬರಸಿಡಿಲಿನಂತೆ ಎರಗೋಣ!

ದುರ್ಬುದ್ಧಿ : ಅದೂ ಸಾಧ್ಯವಿಲ್ಲ ಮಹಾಪ್ರಭು. ತಮ್ಮ ಅನುಜರು ತಮ್ಮ ಸಿಂಹಾಸನವನ್ನು ಆಕ್ರಮಿಸಿಕೊಂಡಿದ್ದು ತಾವು ಅಲ್ಲಿಗೆ ಹೋದರೆ ತಮ್ಮನ್ನು ಯಮಸದನಕ್ಕೆ ಅಟ್ಟುವ ವ್ಯವಸ್ಥೆ ಮಾಡಿಕೊಂಡಿದ್ದಾರೆ.

ಮಿಹಿರಕುಲ : (ಕಿರುಚಿ) ಆ ನೀಚ ಅನುಜನು ಅಣ್ಣನಿಗೆ ದ್ರೋಹ ಬಗೆದನೆ! ಕುನ್ನಿಯನ್ನು ಮೊದಲು ಕೊಂದು ಆ ಮೇಲೆ ಬಾಲಾದಿತ್ಯನನ್ನು ಭಸ್ಮಗೊಳಿಸುತ್ತೇನೆ. (ಹೊರಡಲನುವಾಗುವನು, ಸೇನಾಪತಿ ತಡೆಯುವನು)

ಶುಂಭ : ಮಹಾಪ್ರಭುಗಳು ಅವಿನಯವನ್ನು ಕ್ಷಮಿಸಬೇಕು. ತಮಗೆ ತಮ್ಮ ಪ್ರಾಣದ ಪರಿವೆಯಿಲ್ಲದಿದ್ದರೂ ನಮಗೆ ಇದೆ. ನಾನು ಜೀವಂತನಾಗಿದ್ದು ನನ್ನ ಪ್ರಭುವನ್ನು ಮೃತ್ಯುವಿನ ಮನೆಗೆ ಕಳಿಸಲಾರೆ!

ಮಿಹಿರಕುಲ : (ಕುಸಿದು ಕುಳಿತು) ಇನ್ನಾವ ಮಾರ್ಗವೂ ಉಳಿದಿಲ್ಲವೆ ಮಿಹಿರ ಕುಲನಿಗೆ? ಯಾರ ಸ್ವರವನ್ನು ದೂರದಿಂದಲೇ ಕೇಳಿ ವೈರಿಗಳೆದೆ ಕಂಪಿಸುತ್ತಿತ್ತೋ ಆ ಮಿಹಿರಕುಲ ಅಸಹಾಯಕನಾಗಿ ಅರಣ್ಯವನ್ನು ಆಶ್ರಯಿಸುವಂತಾಯಿತೆ?

ದುರ್ಬುದ್ಧಿ : (ಏನೋ ಹೊಳೆದಂತೆ ಲಟಿಕೆ ಹೊಡೆದು) ಮಹಾಪ್ರಭು, ಒಂದು ಮಾರ್ಗ ಉಳಿದಿದೆ!

ಮಿಹಿರಕುಲ : (ಆತುರದಿಂದ) ಯಾವ ಮಾರ್ಗವದು?

ದುರ್ಬುದ್ಧಿ : ಕಾಶ್ಮೀರದ ರಾಜ ತಮ್ಮ ಸಾಮಂತ. ಈಗವನು ಸಾಮಂತತನವನ್ನು ಒಪ್ಪುವನೋ ಸ್ವಾತಂತ್ರ್ಯವನ್ನು ಸಾರುವನೋ ತಿಳಿಯದು. ಆದರೆ ಅವನು ಗುಪ್ತ ಸಾಮ್ರಾಟರ ಬಗ್ಗೆ ಒಳಗೊಳಗೇ ಅಸೂಯೆಯುಳ್ಳವನು. ಮಹತ್ವಾಕಾಂಕ್ಷಿ. 'ನೀನು ಸಹಾಯಮಾಡಿದರೆ ನಿನ್ನ ಸಹಾಯದಿಂದ ಬಾಲಾದಿತ್ಯನನ್ನು ಸೋಲಿಸಿ ನಿನ್ನನ್ನು ಸಮಗ್ರ ಭಾರತಕ್ಕೆ ಸಾಮ್ರಾಟನನ್ನಾಗಿ ಮಾಡುವೆವು' ಎಂದು ಮಹಾಪ್ರಭುಗಳು ಹೇಳಿಕಳಿಸಿದರೆ ಅವನು ನಿಶ್ಚಯವಾಗಿ ಈ ಪ್ರಲೋಭನಕ್ಕೆ ಒಳಗಾಗುವನು.

ಮಿಹಿರಕುಲ : (ಹಿಗ್ಗಿನಿಂದ ಹಾರಿ) ಭಲೆ ದುರ್ಬುದ್ಧಿ, ನಿನ್ನಂಥ ಮಂತ್ರಿ ನಮಗಿರುವುದು ನಮಗೆ ನಿಜವಾಗಿಯೂ ಹೆಮ್ಮೆಯ ವಿಷಯ. ಈಗಿಂದೀಗಲೇ ಹೋಗು, ಕಾಶ್ಮೀರಕ್ಕೆ ಹೋಗು. ಏನಾದರೂ ಮಾಡಿ ಕಾಶ್ಮೀರದ ರಾಜನನ್ನು ಈ ಮೋಸದ ಬಲೆಯಲ್ಲಿ ಹಾಕಿಬಿಡು. ಕಾಶ್ಮೀರ ಕೈಗೆ ಸಿಕ್ಕ ಮೇಲೆ ಭಾರತವನ್ನು ಆಕ್ರಮಿಸುವುದು ಅದಾವ ಘನವಿಷಯ? ಅಹಾಹಾ–ಮೊದಲು ಕಾಶ್ಮೀರ–ಆಮೇಲೆ ಭಾರತ! ಅಹಾಹಾ! (ಹಿಗ್ಗಿ ಕುಣಿದಾಡುವನು. ಅವನು ಕುಣಿಯುತ್ತಿರುವಂತೆ ತೆರೆ ಬೀಳುವುದು)

ನೋಟ ೨

(ನಗರವೀಥಿ. ಮತಿರಾಮ ಮತ್ತು ಬಲರಾಮರು ಪ್ರವೇಶಿಸುತ್ತಾರೆ. ಬಲರಾಮ ಯಥಾಪ್ರಕಾರ ಕಾಲೆಳೆಯುತ್ತ ಬರುತ್ತಾನೆ–ಗೊಣಗುತ್ತ, ಗೋಳಾಡುತ್ತ)

ಮತಿರಾಮ : ಮಹಾರಾಜರು ಮಿಹಿರಕುಲನನ್ನು ಜೀವಂತ ಬಿಟ್ಟುಕೊಟ್ಟಿದ್ದು ತಪ್ಪಾಯ್ತು ನೋಡು ಬಲರಾಮ.

ಬಲರಾಮ : ಅವನನ್ನು ಜೀವಂತ ಉಳಿಸಿ ನಮ್ಮನ್ನು ಕೊಲ್ಲತೊಡಗಿದ್ದಾರೆ.

ಮತಿರಾಮ : ಅದು ಹೇಗೆ?

ಬಲರಾಮ : ಮತಿರಾಮ, ನಾನು ಮೆಚ್ಚಿದ ಹುಡುಗಿ ಹಟಮಾರಿ ಹೆಂಗಸು ಕಣೋ.

ಮತಿರಾಮ : ಹಟಮಾರಿಯಲ್ಲದ ಹೆಂಗಸೂ ಹುಟ್ಯಾಳೇನೋ ಪ್ರಪಂಚ ಹುಟ್ಟಿದ ಮೇಲೆ? ಮುಂದೇನಾಯ್ತು ಹೇಳು!

ಬಲರಾಮ : ನೀನು ಯುದ್ಧ ಗೆದ್ದು ಬಂದರೇನೇ ನಿನ್ನ ಮದ್ವಿ ಆಗ್ತೀನಿ ಹಟಾ ಹಿಡಿದಿದ್ದಳು. ಯುದ್ಧ ಗೆದ್ದು ಬಂದೆ...

ಮತಿರಾಮ : ನೀನು ಗೆದ್ದು ಬಂದೆಯಲ್ಲವೆ ಯುದ್ಧಾನ?

ಬಲರಾಮ : (ಎದೆಯುಬ್ಬಿಸಿ) ಇನ್ನಾರು ಗೆದ್ದವರು? ಮತಿರಾಮ ಒಮ್ಮೆಯಾದರೂ ಒಪ್ಪೋ ನಿನ್ನ ಗೆಳೆಯನ ಪೌರುಷಾನ! ಇಂಥ ಗೆಳೆಯ ಏಳೇಳು ಜನ್ಮಕ್ಕೂ ಸಿಕ್ಕಾಕಿಲ್ಲ ನಿನಗೆ!

ಮತಿರಾಮ : ಸಿಕ್ಕದೆ ಇರ್ಲಿ ಅಂತಾ ದಿನಾ ದೇವರಿಗೆ ಬೇಡಿಕೋತೀನಿ ಮುಂದೇನಾಯ್ತು ಹೇಳು.

ಬಲರಾಮ : ಈ ವೀರಾಧಿವೀರ ಬಲರಾಮನ್ನ ಮೆಚ್ಚಿ ಮದುವೆಯಾದಳು ಅವಳು.

ಮತಿರಾಮ : ನೀ ಬಯಸಿದ್ದೇ ಆಯ್ತಲ್ಲೋ–ಅಳ್ತಿಯಾಕೋ?

ಬಲರಾಮ : ಹೊಸ ಹೆಂಡತಿ ಬಿಟ್ಟು ಈ ಮಿಹರಕುಲನ ಮೇಲೆ ಕಣ್ಣಿಟ್ಟು ಕಾಡು ಕಾಡು ತಿರುಗೋದು ಬಂದ್ರೆ ಅಳದೆ ನಗಬೇಕೇನೊ?

ಮತಿರಾಮ : ಹೇಗೆ ತಿರುಗೋದು ಬೇಡಾ ಅಂದ್ರೆ ಮತ್ತೆ ಆ ಮಿಹಿರಕುಲ ಮೇಲೇರಿ ಬರ್ತಾನೆ. ಆಗ ಮತ್ತೊಮ್ಮೆ ಯುದ್ಧಕ್ಕೆ ಹೋಗಬೇಕಾಗೋದಿಲ್ಲವೇನೊ?

ಬಲರಾಮ : (ಕಿವಿ ಮುಚ್ಚಿಕೊಂಡು) ರಾಮ ರಾಮ, ಏನೋ ತಾಯಿಹೊಟ್ಟೆ ತಣ್ಣಗಿತ್ತು ಅಂತಾ ಒಮ್ಮೆ ಯುದ್ಧಕ್ಕೆ ಹೋಗಿ ಬದುಕಿ ಬಂದೆ. ಇನ್ನೊಮ್ಮೆ ಯುದ್ಧಕ್ಕೆ ಹೋಗೋದೆ? ಸತ್ತರೂ ಸಾಧ್ಯವಿಲ್ಲ.

ಮತಿರಾಮ : ಯುದ್ಧಕ್ಕೆ ಹೋಗದೆ ಸಾಯುವುದಕ್ಕಿಂತ ಯುದ್ಧಕ್ಕೆ ಹೋಗಿ ಸಾಯೋಣ ಬಲರಾಮ! ಗಂಡಸಾಗಿ ಸಾಯೋದಕ್ಕೆ ಅಂಜಿದರೆ ಹೇಗೊ?

ಬಲರಾಮ : ಗಂಡಸಿಗೊಂದು ಹೆಂಗಸು ಬೇರೆ ಇರತಾಳಲ್ಲೊ. ಅವಳ ಸಲುವಾಗಿಯಾದರೂ ಬದುಕಬೇಕೋ ಬೇಡವೋ?

ಮತಿರಾಮ : ಆ ಹೆಂಗಸಿನ ಮಾನಾ ಮನೆಯೊಳಗೆ ಕುಳಿತು ಕಾಪಾಡ್ತೀಯಾ? ಅದು ಸಾಧ್ಯವೇ? ಹೆಂಗಸಿನ ಮಾನಾ ಕಾಪಾಡೋದು ರಣಭೂಮಿಯಲ್ಲೋ– ಮನೆಯಲ್ಲಿ ಅಲ್ಲಾ. ಪ್ರಾಣಕ್ಕಿಂತ ಮಾನ ಹೆಚ್ಚಿನದಲ್ವೆ ಹೆಂಗಸಿಗೆ?

ಬಲರಾಮ : ಮಾನ ಹೋದ ಮೇಲೆ ಮರಣ ಬಂದ ಹಾಗೆಯೇ ಅಂತಾ ಹಿರಿಯರು ಹೇಳಿಯೇ ಇದ್ದಾರೆ ಮತಿರಾಮ. ಮಾನಾ ಹೋದಮೇಲೆ ಮೀಸೆ ಹೊತ್ತು ಬದುಕಬೇಕಾದರೂ ಯಾಕೆ?

ಮತಿರಾಮ : ಹೀಗೆ ಬಾ ಹುಲಿರಾಯಾ! ನಡೆ, ಮಿಹಿರಕುಲನು ಕಾಶ್ಮೀರದ ರಾಜನೊಡನೆ ನಡೆಸಿರುವ ಒಳಸಂಚಿನ ಸುದ್ದಿ ಮಹಾರಾಜರಿಗೆ ತಿಳಿಸಿ ಮತ್ತೊಮ್ಮೆ ನಮ್ಮ ದೇಶಕ್ಕೆ ದಾಳಿ ಬರದಂತೆ ಮಾಡೋಣ!

ಬಲರಾಮ : ನಡೆ, ನಾವಿರುವವರೆಗೆ ಹೂಣರ ಹಂಚಿಕೆ ಹಣ್ಣಾಗದು!

(ಹೋಗುವರು. ತೆರೆ ಏಳುವುದು)

ನೋಟ ೩

(ಕಾಶ್ಮೀರದ ರಾಜನ ಒಡ್ಡೋಲಗ. ರಾಜ ಶೂರಸೇನ, ಮಂತ್ರಿ ಮತ್ತು ಸೇನಾಪತಿಗಳು ಮಾತ್ರ ಇದ್ದಾರೆ)

ಶೂರಸೇನ : ಮಂತ್ರಿಗಳೆ, ಮಿಹಿರಕುಲನ ಪರಾಜಯದಿಂದ ಬಾಲಾದಿತ್ಯನು ಮತ್ತಷ್ಟು ಬಲಿಷ್ಠನಾದನು. ಅವನ ಶಕ್ತಿ ವರ್ಧಿಸುತ್ತಿರುವುದನ್ನು ನೋಡಿ ನಮಗೆ ಸಹಿಸಲಾಗದಷ್ಟು ಸಂತಾಪವಾಗತೊಡಗಿದೆ.

ಮಂತ್ರಿ : ಮಹಾಬಲ ಮಿಹಿರಕುಲ ಇಷ್ಟು ಸುಲಭವಾಗಿ ಸೋಲುವನೆಂದು ನನಗೂ ಎನಿಸಿರಲಿಲ್ಲ ಮಹಾಪ್ರಭು.

ಸೇನಾಪತಿ : ಬಾಲಾದಿತ್ಯ ಮಹಾರಾಜರಿಗೆ ಯಶೋಧರ್ಮ ಈಶಾನವರ್ಮ ಭೂಪಾಲರು ಬೆಂಬಲವಾಗಿ ನಿಂತು ಜಯ ಗಳಿಸಿದರು ಮಹಾಪ್ರಭು.

ಶೂರಸೇನ : ಮೂರ್ಖರು, ತಮ್ಮ ಕೈಕಾಲುಗಳಿಗೆ ತಾವೇ ಸಂಕೋಲೆಯನ್ನು ತೊಡಿಸಿಕೊಂಡ ಮೂರ್ಖರು! ಸ್ವತಂತ್ರರಾಗುವುದನ್ನು ಬಿಟ್ಟು ಸಾಮ್ರಾಟನೊಬ್ಬನಿಗೆ ಸಾಮಂತರಾಗಿರಲು ಆಸೆಪಟ್ಟ ಮೂರ್ಖರು!

ಪ್ರತೀಹಾರಿ : (ಪ್ರವೇಶಿಸಿ) ಮಹಾರಾಜರಿಗೆ ಜಯವಾಗಲಿ. ಮಿಹಿರಕುಲ ಮಂತ್ರಿ ಮಹಾರಾಜರ ದರ್ಶನಕ್ಕಾಗಿ ಬಂದಿದ್ದಾರೆ.

ಶೂರಸೇನ : (ಆತುರದಿಂದ) ಬೇಗ ಬರಹೇಳು.

ದುರ್ಬುದ್ಧಿ : (ಪ್ರವೇಶಿಸಿ ಬಾಗಿ ವಂದಿಸಿ) ಮಹಾರಾಜಾಧಿರಾಜರಿಗೆ ಜಯವಾಗಲಿ.

ಶೂರಸೇನ : ಈ ಆಸನದಲ್ಲಿ ಮಂಡಿಸಿರಿ. ಮಂತ್ರಿ ದುರ್ಬುದ್ಧಿಗಳೆ, ನಾವೇನೂ ಸಾಮ್ರಾಟರಲ್ಲ, ನಮಗೆ ಮಹಾರಾಜಾಧಿರಾಜರೆಂದು ಸಂಭೋಧಿಸಿದ ಕಾರಣ?

ದುರ್ಬುದ್ಧಿ : ಬೇಗ ಸಾಮ್ರಾಟರಾಗಲಿರುವಿರಿ ಮಹಾರಾಜಾಧಿರಾಜ! ಸಮಗ್ರ ಭಾರತದ ಸಾಮ್ರಾಟರಾಗಲಿರುವಿರಿ!

ಶೂರಸೇನ : ಪರಿಹಾಸಗೈಯುತ್ತಿಲ್ಲವಷ್ಟೆ? ಬಾಲಾದಿತ್ಯರು ಸಾಮ್ರಾಟ-ರಾಗಿರುವವರೆಗೆ ನಾವು ಸಾಮ್ರಾಟರಾಗುವೆವೆಂಬುದು ಕೇವಲ ಕನಸಲ್ಲವೆ?

ದುರ್ಬುದ್ಧಿ : ಈ ಕನಸನ್ನು ನನಸಾಗಿಸಲೆಂದೇ ಮಿಹಿರಕುಲ ಮಹಾಪ್ರಭುಗಳು ನನ್ನನ್ನಿಲ್ಲಿಗೆ ಕಳಿಸಿದ್ದಾರೆ ಮಹಾರಾಜಾಧಿರಾಜ! ಕಾಲಲೀಲೆಗೊಳಗಾಗಿ ಹೇಗೋ ಪರಾಭೂತರಾಗಿರುವ ಮಿಹಿರಕುಲ ಮಹಾಪ್ರಭುಗಳ ಪರಾಕ್ರಮ ಕುಂದಿಹೋಗಿದೆಯೆಂದು ಭಾವಿಸದಿರಿ. ಸೋಲಿನ ಸೇಡು ತೀರಿಸಿಕೊಳ್ಳಲು ಅವರು ತಳಮಳಿಸುತ್ತಲಿದ್ದಾರೆ. ಅವರಿಗೆ ಬೇಕಾಗಿರುವುದು ಸಾಮ್ರಾಜ್ಯವಲ್ಲ, ಸೋಲಿನ ಸೇಡು. ನೀವು ನಮಗೆ ನೆರವಾದರೆ ನಮ್ಮ ಮಹಾರಾಜರು ಸೇಡು ತೀರಿಸಿಕೊಳ್ಳುವರು-ತಮಗೆ ಸಮಗ್ರ ಭಾರತದ ಸಾಮ್ರಾಟ ಪದವಿ ಸಿಕ್ಕುವುದು. ಈ ಸುವರ್ಣಸಂಧಿಯನ್ನು ಕಳೆದುಕೊಳ್ಳದಿರಿ. ಇದೋ, ಈ ಸ್ನೇಹಹಸ್ತವನ್ನು ಸ್ವೀಕರಿಸಿರಿ, (ಕೈಮುಂದೆ ಮಾಡುವನು. ಶೂರಸೇನ ಅನುಮಾನಿಸುತ್ತ ಮಂತ್ರಿ ಸೇನಾಪತಿಗಳತ್ತ ನೋಡುವನು.)

ಮಂತ್ರಿ: ಇಲ್ಲದುದಕ್ಕೆ ಆಸೆಮಾಡಿ ಇದ್ದುದನ್ನೂ ಕಳೆದುಕೊಳ್ಳುವಂತಾಗಬಾರದು ಮಹಾಪ್ರಭು! ಒಮ್ಮೆ ಸೋತ ಮಿಹಿರಕುಲ ದೊರೆಗಳು ಈ ಸಲ ಗೆಲ್ಲುವರೆಂಬುದು ಸಂಶಯಾಸ್ಪದ. ಮೇಲಾಗಿ, ಅವರು ಗೆದ್ದರೂ ತಾವು ಗೆದ್ದ ಸಾಮ್ರಾಜ್ಯವನ್ನು ತಾವಾಗಿಯೇ ಬಿಟ್ಟುಕೊಟ್ಟಾರೆ?

ಸೇನಾಪತಿ : ನಮ್ಮ ಪರಿಮಿತ ಸೈನ್ಯದ ಸಹಾಯದಿಂದ ಇವರು ಬಲಾಢ್ಯ ಬಾಲಾದಿತ್ಯರನ್ನು ಸೋಲಿಸುವರೆಂದು ಹೇಗೆ ನಂಬಬೇಕು ಮಹಾಪ್ರಭು?

ದುರ್ಬುದ್ಧಿ : (ಗಹಗಹಿಸಿ ನಕ್ಕು) ಇಂಥ ದುರ್ಬಲ ಹೃದಯದ ಮಂತ್ರಿ ಸೇನಾಪತಿಗಳಿದ್ದರೆ ಮಹಾರಾಜರು ಮಹಾರಾಜಾಧಿರಾಜರಾದಂತೆಯೇ! ಮಹತ್ವಾಕಾಂಕ್ಷೆಯುಳ್ಳವರು ಮಹಾ ಸಾಹಸಕ್ಕೂ ಸಿದ್ಧರಾಗಿರಬೇಕು. ಮಿಹಿರಕುಲರ ಮಹಾ ಸಾಹಸ ಮನೆ ಬಾಗಿಲಿಗೆ ಬಂದಿದೆ. ಸ್ವಾಗತಿಸಿ ಸಾಮ್ರಾಜ್ಯವನ್ನು ಗಳಿಸಿರಿ.

ಶೂರಸೇನ : ನೀವು ನೀಡುವ ಸಹಾಯಕ್ಕೆ ನಮ್ಮಿಂದ ಪ್ರತಿಫಲವನ್ನೇನಾದರೂ ಬಯಸುವಿರಾ?

ದುರ್ಬುದ್ಧಿ : ಬಹಳ ಸಣ್ಣ ಪ್ರತಿಫಲವನ್ನು ಮಾತ್ರ ಬಯಸುತ್ತೇವೆ, ಅಲ್ಲ ಬೇಡಿಕೊಳ್ಳುತ್ತಲಿದ್ದೇವೆ ಮಹಾರಾಜಾಧಿರಾಜ! (ನಕ್ಷೆಯೊಂದನ್ನು ತೆಗೆದು ಶೂರಸೇನನ ಮುಂದಿರಿಸಿ) ಇಲ್ಲಿ ನೋಡಿ, ತಮ್ಮ ರಾಜ್ಯದ ಈ ಉತ್ತರಗಡಿಗೆ ಹೊಂದಿ ಚಿಕ್ಕಭಾಗವೊಂದನ್ನು ನಮ್ಮ ಪ್ರಭುಗಳಿಗೆ ಸೈನ್ಯ ಶಿಬಿರ ತೆರೆದು ಹೂಣರ ಪಡೆಕಟ್ಟಲು ಬಿಟ್ಟುಕೊಡಿರಿ. ಕ್ಷಿಪ್ರದಲ್ಲಿಯೇ ಅಲ್ಲಿ ಪ್ರಬಲವಾದ ಹೂಣ ಪಡೆಯನ್ನು ಕಟ್ಟಿ, ತಾವು ನೀಡುವ ಸಹಾಯವನ್ನೂ ಪಡೆದು, ಆ ಬಾಲಾದಿತ್ಯನ ಬೆನ್ನೆಲುಬು ಮುರಿದು ತಮಗೆ ಸಂಪೂರ್ಣ ಭಾರತದ ಸಾಮ್ರಟರನ್ನಾಗಿ ಮಾಡುತ್ತೇವೆ. ನಮ್ಮ ಮಾತನ್ನು ನಂಬಿರಿ. ಮಿಹಿರಕುಲ ಮಹಾಪ್ರಭುಗಳು ಭಾರತದ ವೈರಿಗಳೆಂಬ ಅಪಪ್ರಚಾರಕ್ಕೆ ಕಿವಿಗೊಡದಿರಿ. ಅವರೂ ಶಿವನ ಭಕ್ತರಾಗಿಬಿಟ್ಟಿದ್ದಾರೆ, ಬ್ರಾಹ್ಮಣರ ರಕ್ಷಕರಾಗಿದ್ದಾರೆ, ಶಿವಾಲಯವೊಂದನ್ನು ಕಟ್ಟಿಸಬೇಕೆಂಬ ಹಂಬಲವುಳ್ಳವರಾಗಿದ್ದಾರೆ. ಹಿಂದೆ ಮುಂದೆ ನೋಡಬೇಡಿರಿ. ಈ ಗಡಿ ಸಂಧಾನಪತ್ರಕ್ಕೆ ರುಜು ಹಾಕಿ ಮುಂದಿನ ಮಹತ್ಕಾರ್ಯಕ್ಕೆ ಮಾರ್ಗ ಮಾಡಿಕೊಡಿರಿ!

ಶೂರಸೇನ : ನಿಮ್ಮ ಮಾತಿನಲ್ಲಿ ವಿಶ್ವಾಸವಿಟ್ಟು ರುಜು ಹಾಕುತ್ತಲಿದ್ದೇವೆ ದುರ್ಬುದ್ಧಿ, ವಿಶ್ವಾಸಘಾತುಕರಾಗುವುದಿಲ್ಲವಷ್ಟೆ?

ದುರ್ಬುದ್ಧಿ : ಛೆ, ಛೆ, ವಿಶ್ವಾಸಘಾತುಕತನವೆಂದರೇನೆಂಬುದೇ ಗೊತ್ತಿಲ್ಲ ನಮಗೆ, ಯಾವ ಅನುಮಾನವಿಲ್ಲದೆ ರುಜು ಹಾಕಿರಿ!

(ಶೂರಸೇನ ರುಜು ಹಾಕುತ್ತಿರುವಂತೆ ತೆರೆ ಬೀಳುವುದು)

ನೋಟ ೪

(ರಾಜವೀಥಿ–ದುರ್ಬುದ್ಧಿ ಪ್ರವೇಶಿಸುವನು)

ದುರ್ಬುದ್ಧಿ : (ಸಂಧಾನಪತ್ರವನ್ನು ನೋಡುತ್ತ) ಸಂಧಾನಪತ್ರ–ಅಲ್ಲಲ್ಲ–ಕಾಶ್ಮೀರದ ರಾಜನ ಪರಂಧಾಮಯಾತ್ರೆ ಪತ್ರ! ಎಷ್ಟು ಸುಲಭವಾಗಿ ನಮ್ಮ ಮೋಸದ ಬಲೆಯಲ್ಲಿ ಬಿದ್ದುಬಿಟ್ಟನಲ್ಲ ಶೂರಸೇನ. ಹೇಡಿಗೆ ಹೆಬ್ಬಯಕೆ ಸೇರಿದರೆ ಎಂಥ ಆತ್ಮಘಾತುಕವಾದ ಒಪ್ಪಂದಕ್ಕೂ ಒಪ್ಪುವನೆಂಬುದಕ್ಕೆ ಕಾಶ್ಮೀರದ ರಾಜ ನಿದರ್ಶನವಾಗಿದ್ದಾನೆ. ಇನ್ನೊಬ್ಬರು ತನಗಾಗಿ ರಾಜ್ಯ ಗೆದ್ದು ಕೊಡುವರೆಂದು ನಂಬುವವ ಹುಂಬನೇ ಸರಿ. ಇಂಥ ಹುಂಬರು, ಗಾಂಪರೂ ಇನ್ನೂ ಈ ದೇಶದಲ್ಲಿ ಉಳಿದಿರುವರೆಂದೇ ನಾವು ಒಳನುಗ್ಗಲು ಆಸ್ಪದ ಸಿಕ್ಕಿದೆ. ಆದುದರಿಂದ ಇಂಥವರನ್ನು ಹೀಯಾಳಿಸುವುದೂ ತಪ್ಪೇ. ಈ ಮಂಕುತಿಮ್ಮ ಕಾಶ್ಮೀರದ ರಾಜನಾಗಿ ಇದ್ದಿರದಿದ್ದರೆ ನಾನು ಮಿಹಿರಕುಲ ಭೂಪಾಲರಿಗೆ ಮೋರೆ ತೋರಿಸಲಿಕ್ಕಾಗುತ್ತಿತ್ತೆ? ಈಗ ಹೋಗಿ ಬೇಗ ಕಾಶ್ಮೀರವು ನಮ್ಮ ಕೈವಶವಾಗುವ ಉಪಾಯವನ್ನು ಹೂಡುವೆನು.

(ಹೋಗುವನು, ತೆರೆ ಏಳುವುದು)

ನೋಟ ೫

(ಅರಣ್ಯ. ಸಂಧಾನಪತ್ರವನ್ನು ಕೈಯಲ್ಲಿ ಹಿಡಿದು ಕುಣಿಯುತ್ತಿರುವ ಮಿಹಿರಕುಲ–ದುರ್ಬುದ್ಧಿ–ಶುಂಭರು)

ಮಿಹಿರಕುಲ : ಭಳಿರೇ ದುರ್ಬುದ್ಧಿ. ಮಂತ್ರಿಕುಲತಿಲಕ ನೀನು. ಭಾರತ ಸಾಮ್ರಾಟನಾಗಬೇಕೆಂಬ ನನ್ನ ಆಸೆಗಿಂದು ಹೊಸಜೀವ ತಂದೆ ನೀನು ಇನ್ನು ತಡವೇಕೆ? ಶ್ರೀನಗರದ ಮೇಲೆ ದಾಳಿ ಮಾಡಿ ಶೊರಸೇನನನ್ನು ಕಿತ್ತೊಗೆದು ಅವನ ಸಿಂಹಾಸನವನ್ನು ಆಕ್ರಮಿಸಿಕೊಂಡುಬಿಡೋಣ.

ದುರ್ಬುದ್ಧಿ : ಅವಸರಬೇಡ ಮಹಾಪ್ರಭು–ಅನ್ಯಾಯವನ್ನು ಮಾಡುವ ಮೊದಲು ಅನ್ಯಾಯಕ್ಕೆ ನ್ಯಾಯದ ಬಣ್ಣ ಬಳಿಯಬೇಕು. ನಮ್ಮ ನೀತಿ ತಮಗೆ ತಿಳಿಯದ ವಿಷಯವೆ? ಸುಳ್ಳಿಗೆ ಸತ್ಯದ ವೇಷ ಹಾಕಬೇಕು. ಅನ್ಯಾಯಕ್ಕೆ ನ್ಯಾಯದ ಒಪ್ಪ ಲೇಪಿಸಬೇಕು, ಉಪಕಾರಿಯೇ ಅಪರಾಧಿಯೆಂದು ಸಿದ್ಧಮಾಡಿ ಅವನನ್ನೇ ತಳ್ಳಿ ಅವನ ರಾಜ್ಯವನ್ನು ಆಕ್ರಮಿಸಬೇಕು!

ಮಿಹಿರಕುಲ : (ತಲೆದೂಗಿ) ಭಲೆ ದುರ್ಬುದ್ಧಿ, ನಿನ್ನ ಒಂದೊಂದು ಮಾತಿಗೂ ಒಂದೊಂದು ಲಕ್ಷ ಚಿನ್ನದ ನಾಣ್ಯ ಕೊಡಬೇಕೆನ್ನಿಸುತ್ತಿದೆ. ಆದರೆ

ಈ ಸ್ಥಿತಿಯಲ್ಲಿ ನಾವು ಏನನ್ನು ಕೊಡಬಲ್ಲೆವು? ಬೇಗ ಕಾಶ್ಮೀರ ಕೈವಶವಾಗುವ ಉಪಾಯವನ್ನು ಹೂಡು. ನಮಗೆ ಈ ಅಸಹ್ಯವಾದ ಅರಣ್ಯವಾಸ ಸಾಕಾಗಿದೆ. ಹಸಿದ ಹುಲಿಯಂತಾಗಿದ್ದೇವೆ. ಶ್ರೀನಗರವನ್ನು ಹೊಕ್ಕು ನರಬೇಟೆಯಾಡೋಣ. ನಮಗೆ ನೆತ್ತರಿನ ನೀರಡಿಕೆಯಾಗಿದೆ; ಹಿಂಸೆಯ ಹಸಿವೆಯಾಗಿದೆ! ಎಷ್ಟು ದಿನಗಳಾದುವು ರಕ್ತಪ್ರವಾಹವನ್ನು ನೋಡದೆ! ನಮಗೆ ಬೇಸರಾಗಿದೆ ದುರ್ಬುದ್ಧಿ, ತುಂಬ ಬೇಸರಾಗಿದೆ!

ದುರ್ಬುದ್ಧಿ : ಕೊಂಚ ತಾಳಿರಿ ಮಹಾಪ್ರಭು–ನಾನಿದೀಗಲೇ ಮುಂದಿನ ಮಾರ್ಗ ಹುಡುಕಿದ್ದೇನೆ.

ಮಿಹಿರಕುಲ : (ಆತುರದಿಂದ) ಯಾವ ಮಾರ್ಗವದು? (ದುರ್ಬುದ್ಧಿ ಕಿವಿಯಲ್ಲಿ ಏನನ್ನೋ ಹೇಳುವನು. ಮಿಹಿರಕುಲ ಹಿಗ್ಗಿ ಹಾರಿ) ಭಲೆ ಮಂತ್ರಿ, ನಿನ್ನ ತಂತ್ರಗಾರಿಕೆಯನ್ನು ಮೆಚ್ಚಿದೆವು. ಯಶ ಈ ತಂತ್ರಕ್ಕೆ ಕಟ್ಟಿಟ್ಟ ಗಂಟು. ಸೇನಾಪತಿ ಶುಂಭ–ಮಂತ್ರಿ ದುರ್ಬುದ್ಧಿಯ ಈ ಹಂಚಿಕೆ ಫಲಕಾರಿಯಾಗುವಂತೆ ಸಹಕರಿಸು!

ಶುಂಭ : ಮಹದಾಜ್ಞೆ ಮಹಾಪ್ರಭು, ಹೊಸ ಹೂಣ ಪಡೆ ಹೂಂಕರಿಸುತ್ತಲಿದೆ–ಮುನ್ನುಗ್ಗಲು ಮಹಾಪ್ರಭುಗಳ ಅಪ್ಪಣೆಯ ದಾರಿಯನ್ನೇ ಕಾಯುತ್ತಿದೆ.

(ತೆರೆ ಬೀಳುವುದು)

ನೋಟ ೬

(ರಾಜವೀಥಿ–ಮತಿರಾಮ ಬಲರಮರು ಪ್ರವೇಶಿಸುವರು)

ಬಲರಾಮ : ಮತಿರಾಮ, ಕೊನೆಗೂ ಕಾಶ್ಮೀರದ ರಾಜ ಅಡಕೊತ್ತಿನಲ್ಲಿ ಅಡಿಕೆ ಸಿಕ್ಕಹಾಗೆ ಸಿಕ್ಕುಬಿಟ್ಟ ನೋಡು.

ಮತಿರಾಮ : ಬಲರಾಮ, ಅಡಿಕೆ ಹುಟ್ಟೋದೇ ಅಡಕೊತ್ತಿನಲ್ಲಿ ಸಿಕ್ಕಿ ಅಮೇಲೆ ಹಲ್ಲುಗಳಲ್ಲಿ ಸಿಕ್ಕಿ ಸಾಯಲಿಕ್ಕೆ! ಈ ದೇಶದಲ್ಲಿ ಇಂಥಾ ದೇಶದ್ರೋಹಿಗಳು ಇನ್ನು ಹುಟ್ಟದೆ ಇರ್ಲಿ ಅಂತಾ ಭಗವಂತನ್ನ ಬೇಡಿಕೊಳ್ಳೋಣ.

ಬಲರಾಮ : ದೇವರು ಏನು ಕೊಟ್ಟರೂ ಕೊಡಲಿ, ಕೈಲಾಗದವರಿಗೆ ದೊಡ್ಡ ಆಸೆ ಕೊಡಬಾರದು ನೋಡು. ಆ ಆಸೆಗಾಗಿ ಎಂಥಾ ಹೇಸಿ ಕೆಲಸ ಮಾಡಲಿಕ್ಕೂ ಹೇಸೋದಿಲ್ಲ ಅವರು!

ಮತಿರಾಮ : (ಮೆಚ್ಚಿಗೆಯ ದನಿಯಲ್ಲಿ) ಎಷ್ಟು ಕೋಣನಾಗಿದ್ದವನು ಎಷ್ಟು ಜಾಣನಾಗಿಬಿಟ್ಟೆಯಲ್ಲೊ ಬಲರಾಮ! ಎಂಥ ಮುತ್ತಿನಂಥಾ ಮಾತಾಡಿಬಿಟ್ಟೆಯಲ್ಲೊ!

ಬಲರಾಮ : ನಿನ್ನ ಸಹವಾಸದಾಗಿದ್ದು ನಾನೂ ಜಾಣನಾದೆ ಕಣೋ–ಗಂಧದ ಮರದ ಹತ್ತಿರ ಹುಟ್ಟಿದ ಜಾಲೀಮರಾನೂ ಸುಗಂಧ ಬೀರೋದಿಲ್ವೆ?

ಮತಿರಾಮ : ಜಾಲಿಯ ಮರದ ಕೆಚ್ಚೂ ಬೇಕು, ಗಂಧದ ಮರದ ಕಂಪೂ ಬೇಕು ನಮಗೆ. ಇರಲಿ, ಕಾಶ್ಮೀರ ಕೈವಶಮಾಡಿಕೊಂಡು ಮಿಹಿರಕುಲ ಮತ್ತೆ ನಮ್ಮ ಮೇಲೂ ಏರಿಬರಬಹುದಲ್ಲವೆ?

ಬಲರಾಮ : ಬರದೆ ಬಿಡ್ತಾನೆಯೆ? ಆ ತಾಯಿಗ್ಗಂಡ ಎದ್ದಾಗ ಎರಗಲೂ ಹೇಸುವುದಿಲ್ಲ, ಬಿದ್ದಾಗ ಕೈ ಮುಗಿಯಲೂ ಹೇಸುವುದಿಲ್ಲ.

ಮತಿರಾಮ : ಅವನು ಕೈ ಮುಗಿಯುವುದೂ ಇಕ್ಕುಳ ಕೈಮುಗಿಯುವುದು ಒಂದೇ ಬಲರಾಮ. ಕತ್ತು ಹಿಚುಕೋಕೆ ಕೈ ಮುಗಿಯೋದು ಅವನು.

ಬಲರಾಮ : ನಮ್ಮ ಮಹಾರಾಜರ ಕತ್ತು ವಜ್ರದ ಕತ್ತು ಮತಿರಾಮ. ಆ ಕತ್ತಿಗೆ ಕೈ ಹಾಕಿದರೆ ಅವನ ಕೈಗಳೇ ಕತ್ತರಿಸಿ ಹೋಗುತ್ತವೆ.

ಮತಿರಾಮ : ಕೈಗಳೇಕೆ, ಕತ್ತೇ ಕತ್ತರಿಸಿ ಹೋಗುತ್ತದೆ. ಅವನ ಕತ್ತು ಕತ್ತರಿಸುವವರೆಗೆ ನಮಗೆ ನೆಮ್ಮದಿಯಿಲ್ಲ.

ಬಲರಾಮ : ಅವನ ಕತ್ತು ಕತ್ತರಿಸಿದ ಮೇಲೂ ನಮ್ಮ ಕತ್ತಿ ಹದನಾಗಿಯೇ ಇರಬೇಕು ಮತಿರಾಮ. ಬಿಚ್ಚುಗತ್ತಿಯ ನೆರಳಲ್ಲೇ ನೆಮ್ಮದಿ ನಮಗೆ.

ಮತಿರಾಮ : (ಹಿಗ್ಗಿ) ನನಗೇ ಗುರುವಾಗಿಬಿಟ್ಟೆಯಲ್ಲೋ ಬಲರಾಮ.

ಬಲರಾಮ : ನೀನು ನನ್ನ ಗುರು ಮತಿರಾಮ. ದೇಶ ಹಾಳಾದರೂ ಹಾಳಾಗಲಿ, ನಾನು ಬದುಕಬೇಕು ಅನ್ನೋ ಬುದ್ಧಿ ನನಗಿತ್ತು. ದೇಶ ಹಾಳಾದರೂ ನಾನು ಬದುಕಬಲ್ಲೆ ಅನ್ನೋದು ಭ್ರಮೆ! ನಾವು ದೇಶಕ್ಕಾಗಿ ಮಡಿದರೆ ಮಡದಿ ಮಕ್ಕಳನ್ನು ದೇಶ ಸಲಹುತ್ತೆ; ದೇಶ ಹಾಳಾದರೆ ಯಾರು ನಮ್ಮನ್ನು ಸಲಹೋರು?

ಮತಿರಾಮ : ಎಲ್ಲರಿಗೂ ಈ ಬುದ್ಧಿ ಬರಲಿ ಬಲರಾಮ. ನಡೆ, ಹೊತ್ತಾಯ್ತು ಇಷ್ಟರಲ್ಲಿ ಆ ಮಿಹಿರಕುಲ ಕಾಶ್ಮೀರವನ್ನೇ ಕಬಳಿಸಿರಬಹುದು. ನಮ್ಮ ಮಹಾರಾಜರಿಗೆ ಈ ಸುದ್ದಿ ತಿಳಿಸೋಣ ನಡೆ.

(ಹೋಗುವರು. ತೆರೆ ಏಳುವುದು)

ನೋಟ ೭

(ಕಾಶ್ಮೀರ ರಾಜನ ಒಡ್ಡೋಲಗ. ರಾಜ, ಮಂತ್ರಿ, ಸೇನಾಪತಿ)

ಮಂತ್ರಿ : ನನ್ನ ಅನುಮಾನ ನಿಜವಾಯಿತು ಮಹಾಪ್ರಭು.

ರಾಜ : ಯಾವ ಅನುಮಾನ?

ಮಂತ್ರಿ : (ಓಲೆಯೊಂದನ್ನು ಮುಂದಿರಿಸಿ) ಈ ಓಲೆಯನ್ನು ಅವಲೋಕಿಸಿರಿ ಮಹಾಪ್ರಭು.

ರಾಜ : ನೀವೇ ಓದಿ ಹೇಳಿ.

ಮಂತ್ರಿ : (ಓದುವನು)

ಪತ್ರ

ಪರಮಮಿತ್ರರಾದ ಶೂರಸೇನ ಮಹಾರಾಜರಿಗೆ, ಹೂಣ ಕುಲಚಕ್ರವರ್ತಿ ಮಿಹಿರಕುಲನು ಮಾಡುವ ವಿಜ್ಞಾಪನೆಗಳು. ನಮ್ಮ ನಿಮ್ಮ ಮೈತ್ರಿಯ ಉಪವನದಲ್ಲಿ ಯಾವಾಗಲೂ ನೂರು ಹೂಗಳು ಅರಳಿರಲೆಂದು ಹಾರೈಸುತ್ತೇವೆ. ನಮ್ಮ ಹಾರೈಕೆ ಹೀಗಿದ್ದೂ ನಿಮ್ಮ ಸೈನಿಕರು ನಿರ್ನಿಮಿತ್ತವಾಗಿ ನಮ್ಮ ಗಡಿಯೊಳಗೆ ನುಗ್ಗಿಬರುತ್ತಿರುವುದು ದುರದೃಷ್ಟಕರವಾದುದು. ನಮ್ಮ ನಿಮ್ಮ ಮಧುರ ಸಂಬಂಧಗಳು ಕೆಡಬಾರದೆಂದು ನಾವು ಸಂಯಮದಿಂದ ವರ್ತಿಸಿದಂತೆಲ್ಲ ನಿಮ್ಮ ಸೈನಿಕರ ಉಪಟಳ ಹೆಚ್ಚಾಗುತ್ತ ನಡೆದಿದೆ. ಆದುದರಿಂದ, ನಿಮ್ಮ ಸೈನಿಕರು ಇನ್ನೊಮ್ಮೆ ಮೇಲೇರಿ ಬಂದಲ್ಲಿ ನಿಮ್ಮ ಗಡಿಯೊಳಗೆ ನುಗ್ಗಿಯಾದರೂ ಅವರನ್ನು ದಂಡಿಸಲು ನಮ್ಮ ಸೈನ್ಯಕ್ಕೆ ಆಜ್ಞೆಯಿತ್ತಿದ್ದೇವೆ. ನೀವು ನಿಮ್ಮ ಸೈನಿಕರಿಗೆ ಸೂಕ್ತ ಆಜ್ಞೆಯನ್ನು ಕೊಡುವಿರಾಗಿ ನಂಬಿದ್ದೇವೆ.

ನಿಮ್ಮ ಸ್ನೇಹಾಕಾಂಕ್ಷಿ,

ಮಿಹಿರಕುಲ

ಶೂರಸೇನ : (ಸಂತಾಪದಿಂದ ಹಲ್ಲು ಕಡಿಯುತ್ತ) ನಾವು ಕೊಟ್ಟ ನೆಲದಲ್ಲಿ ನಿಂತು ನಮ್ಮನ್ನೇ ಅಪರಾಧಿಗಳನ್ನಾಗಿ ಚಿತ್ರಿಸುತ್ತಲಿರುವ ಈ ಮಿಹಿರಕುಲನ ಧೂರ್ತತನವೆಷ್ಟು!

ಮಂತ್ರಿ : ಅವನಲ್ಲಿ ದೌರ್ಜನ್ಯ ಧೂರ್ತತನಗಳು ಸರಿಬೆರಕೆಯಾಗಿವೆ ಮಹಾಪ್ರಭು.

ಶೂರಸೇನ : (ರೇಗಿ) ಈ ವಿಷಯವನ್ನು ನೀವು ಮೊದಲೇ ನಮಗೆ ತಿಳಿಸಲಿಲ್ಲವೇಕೆ?

ಮಂತ್ರಿ : ತಿಳಿಸುವ ಧೈರ್ಯವಾಗಲಿಲ್ಲ ಮಹಾಪ್ರಭು, ಕ್ಷಮಿಸಬೇಕು. ಸಾಮ್ರಾಟ ಬಾಲಾದಿತ್ಯರ ಕಾಲಿಗೆ ಬಿದ್ದು, ರಾಜಮಾತೆಯವರ ಔದಾರ್ಯದಿಂದ ಜೀವದಾನ ಪಡೆದು, ಅವರನ್ನೇ ನಾಶಗೊಳಿಸಲು ತಮ್ಮ ನೆರವು ಕೋರಲು ಬಂದ ಆ ದುರಾತ್ಮನ ಸ್ನೇಹ ಸ್ವೀಕರಿಸಲು ತಾವು ಆತುರರಾಗಿದ್ದಾಗ ತದ್ವಿರುದ್ಧವಾಗಿ ಹೇಳಲು ನನಗೆ ಧೈರ್ಯ ಸಾಲಲಿಲ್ಲ. ಆದರೂ, ಆಗಲೂ ನನ್ನ ಅನುಮಾನವನ್ನು ಸೌಮ್ಯವಾಗಿ ವ್ಯಕ್ತಗೊಳಿಸಿದ್ದೆ.

ಶೂರಸೇನ : ಸೇನಾಪತಿಗಳೆ, ಇನ್ನು ತಡಮಾಡಿದರೆ ಅನಾಹುತವಾಗುವುದು ಖಂಡಿತ. ಕೂಡಲೇ ಸೈನ್ಯವನ್ನೆಲ್ಲ ಸಜ್ಜುಗೊಳಿಸಿರಿ, ಅ ಮದಾಂಧನು ಮೇಲೇರಿ ಬರುವುದರೊಳಗಾಗಿ ನಾವೇ ಕೊಟ್ಟ ನಮ್ಮ ನೆಲದಿಂದ ಅವನನ್ನು ಹೊಡೆದೋಡಿ-ಸೋಣ! (ತೆರೆಯ ಹಿಂದೆ ವಿಕಟಾಟ್ಟಹಾಸ... ಕೋಲಾಹಲ....ಗಲಭೆ...ಗಡಿಬಿಡಿ....) ಏನು ಕೋಲಾಹಲವಿದು? ಯಾರ ವಿಕಟಾಟ್ಟಹಾಸವಿದು?ಆ ಏನು ಗದ್ದಲವಿದು?

ಮಿಹಿಕುಲ : (ದುರ್ಬುದ್ಧಿ ಶುಂಭರೊಡನೆ ಪ್ರವೇಶಿಸಿ) ನನ್ನನ್ನು ಹೊಡೆದೋಡಿಸುವಿಯಾ ಕುನ್ನಿ?

ಶೂರಸೇನ : (ಗದಗದ ನಡುಗಿ) ಇಲ್ಲ, ಇಲ್ಲ, ಕ್ಷಮಿಸಬೇಕು.

ಮಿಹಿರಕುಲ : ಮಿಹಿರಕುಲ ಕೊಲ್ಲುವುದನ್ನು ಮಾತ್ರ ಬಲ್ಲ-ಕ್ಷಮಿಸುವುದನ್ನಲ್ಲ. ಶುಂಭ, ಇವನನ್ನೂ ಇವನ ಮಂತ್ರಿ ಸೇನಾಪತಿಗಳನ್ನೂ ಎಳೆದೊಯ್ದು ಎತ್ತರವಾದ ಶಿಖರದಿಂದ ನೂಕಿ ಕೊಲ್ಲಿರಿ! ನಾನೇರಲಿರುವ ಈ ಸಿಂಹಾಸನಕ್ಕೆ ಇವರ ಬಲಿಯನ್ನೇ ಕೊಡಿರಿ! (ಎಳೆದೊಯ್ಯುವರು) ಏರುವೆನು ರಕ್ತರಂಜಿತ ಸಿಂಹಾಸನವನ್ನು! ಆ ಮೇಲೆ ಶ್ರೀನಗರದಲ್ಲಿ ನರಬೇಟೆಯನ್ನಾಡುವೆನು! ರಕ್ತದ ಓಕುಳಿಯನ್ನಾಡುವೆನು, ನನ್ನ ರಕ್ತದಾಹವನ್ನು ಹಿಂಗಿಸಿಕೊಳ್ಳುವೆನು! ತದನಂತರ, ತದನಂತರ ಆ ಬಾಲಾದಿತ್ಯನನ್ನು ತುಂಡು ತುಂಡಾಗಿ ಕತ್ತರಿಸಿ, ನುಚ್ಚುನೂರಾಗಿ ಕಡಿದು ಭಾರತದ ಚಕ್ರವರ್ತಿಯಾಗಿ ಮೆರೆಯುವೆನು! ಭೂಮಂಡಲವನ್ನೇ ಗೆದ್ದು ಆಳುವೆನು.

(ಹ್ಹಾ ಹ್ಹಾ ಹ್ಹಾ ಎಂದು ಗಟ್ಟಿಯಾಗಿ ನಗುತ್ತ ಸಿಂಹಾಸನದ ಒಂದೊಂದೇ ಮೆಟ್ಟಲು ಏರುವನು, ಅವನು ಏರುತ್ತಿರುವಂತೆ)

(ತೆರೆ ಬೀಳುವುದು)

ನೋಟ ೮

(ಅಯೋಧ್ಯೆಯ ರಾಜಬೀದಿಯಲ್ಲಿ ರಾಜಗುರು ವಸುಬಂಧುಗಳ ಪ್ರವೇಶ)

ವಸುಬಂಧು : (ಚಿಂತೆಯ ಛಾಯೆಯಿದ್ದರೂ ನಿರ್ಧಾರವನ್ನು ಬೀರುವ ಮುಖಮುದ್ರೆ) ಮತ್ತೊಂದು ಮಹಾಯುದ್ಧ ಬಾಲಾದಿತ್ಯನ, ಅಲ್ಲ ಭಾರತದ ಬಲಪರೀಕ್ಷೆ ಮಾಡಲು ಮುಂದೆ ಬಂದಿದೆ! ಬರಲಿ, ಭಾರತಕ್ಕಲ್ಲದೆ ಇನ್ನಾವ ದೇಶಕ್ಕೆ ಬರಬೇಕು ಇಂಥ ಸತ್ವಪರೀಕ್ಷೆಗಳು! ಬಂಗಾರದ ಭೂಮಿ ಭಾರತ. ಆಗಾಗ ಅಗ್ನಿಪರೀಕ್ಷೆ ಅಪರಿಹಾರ್ಯವೆಂದು ತೋರುತ್ತದೆ. ಒಂದು ದೃಷ್ಟಿಯಿಂದ ಇದು ಒಳ್ಳೆಯದೇ. ಪುಟವಿಕ್ಕಿದಂತೆಲ್ಲ ಚಿನ್ನ ಬಣ್ಣವೇರಿ ಥಳಥಳಿಸುವಂತೆ ಸತ್ವಪರೀಕ್ಷೆ ನಡೆದಾಗಲೆಲ್ಲ ಭಾರತದ ಬೆಳಕು ಇನ್ನಷ್ಟು ದೇದೀಪ್ಯಮಾನವಾಗುತ್ತಲೇ ಬಂದಿದೆ! ಬಿಡುಗಡೆಯ ಬಾವುಟದ ನೆರಳಿನಲ್ಲಿ ಬದುಕಬೇಕೆನ್ನುವವರು ಇಂಥ ಶತ್ರು ಸಂಘರ್ಷಣೆಗಳಿಗೆ ಸಿದ್ಧರಾಗಿರಲೇಬೇಕು! ವಿಷ್ಣುವಿನ ದಶಾವತಾರಗಳು, ಶಿವನ ದುಷ್ಟ ಸಂಹಾರಾವತಾರಗಳು ಏನನ್ನು ಸಾರುತ್ತವೆ? ದೈತ್ಯಶಕ್ತಿಗಳ ದಮನಕ್ಕಾಗಿ ಸದಾ ಸಿದ್ಧರಾಗಿರಬೇಕು ಎಂದಲ್ಲವೆ? ಹೌದು, ಅಸುರೀಶಕ್ತಿ ತಲೆಯೆತ್ತಿದಾಗಲೆಲ್ಲ ಅದರ ದಮನವಾಗಲೇಬೇಕು, ಮರ್ದನವಾಗಲೇಬೇಕು! ಶಕರೋ ಹೂಣರೋ ಚೀಣರೋ ಸೈತಾನರೋ ಪಾಷಾಣರೋ ಯಾರೇ ಬರಲಿ, ಎಂದೇ ಬರಲಿ, ಎಂಥ ಸಿದ್ಧತೆಯೊಡನೆಯೇ ಬರಲಿ– ಅವರ ಹಲ್ಲು ಮುರಿಯಲು ಭಾರತದ ವಜ್ರಮುಷ್ಠಿ ಸದಾ ಸಿದ್ಧವಾಗಿರಲೇಬೇಕು! ಸಿಂಹದೊಡನೆ ಸರಸವಾಡಿದ ಭರತನ ಸಂತಾನ ಸಿಂಹವಿಕ್ರಮಶಾಲೆಯಾಗಿ ಬಾಳಲಿ!

(ಹೋಗುವರು–ತೆರೆ ಏಳುವುದು)

ನೋಟ ೯

(ಬಾಲಾದಿತ್ಯನ ಅರಮನೆ, ರಾಜಮಾತೆ, ಬಾಲಾದಿತ್ಯ, ಮಿತ್ರಾದೇವಿಯರು ಮಾತನಾಡುತ್ತಿದ್ದಾರೆ)

ಬಾಲಾದಿತ್ಯ : ಮಾತೆ, ಮಿಹಿರಕುಲನು ಕ್ರೂರನಿರುವಷ್ಟೇ ಕಟಟಿಯೂ ಕುಟಿಲನು ಆಗಿರುವನೆಂಬುದು ಈಗಲಾದರೂ ನಿನಗೆ ಮನವರಿಕೆಯಾಯಿತೆ?

ರಾಜಮಾತೆ : (ಉಸಿರ್ಗರೆದು) ನಾನು ಮೋಸಹೋದೆ ಮಗು, ಅವನ ಸವಿಮಾತುಗಳಿಗೆ ಮೋಸಹೋದೆ! ಹಾವು ಹಾಲೆರೆದವರನ್ನು ಕಚ್ಚಲು ಹಿಂದೆಗೆಯದಂತೆ ಆ ದುರಾತ್ಮನು ಜೀವದಾನ ನೀಡಿದ ನಿನ್ನ ಮೇಲೆಯೇ ಮತ್ತೆ ದಂಡೆತ್ತಿ ಬಂದಿದ್ದಾನೆ. ನಾನು ರಾಜ್ಯಕಾರ್ಯದಲ್ಲಿ ಕೈ ಹಾಕಬಾರದಾಗಿದ್ದಿತು, ಆ ನೀಚನಿಗೆ ಪ್ರಾಣದಾನ ನೀಡಬಾರದಾಗಿದ್ದಿತು.

ಬಾಲಾದಿತ್ಯ : ಹಾಗೆ ಭಾವಿಸದಿರು ಜನನಿ. ದಯಾಮಯಿಯಾದ ನೀನು ಮಿಹಿರಕುಲನ ಮೋಸದ ಮಾತುಗಳನ್ನು ನಂಬಿದುದು ಸ್ವಾಭಾವಿಕ. ನಿನ್ನ ಆದೇಶದಂತೆ ಸೆರೆಸಿಕ್ಕಿದ್ದ ಮಿಹಿರಕುಲನ ಜೀವ ಉಳಿಸಿದುದಕ್ಕಾಗಿ ನನಗೆ ಎಳ್ಳಷ್ಟು ಪಶ್ಚಾತ್ತಾಪವಾಗಿಲ್ಲ. ಮತ್ತೊಂದು ಯುದ್ಧ ಮೈಮೇಲೆ ಬಂದಿದೆಯೆಂದು ವ್ಯಸನವೂ ಇಲ್ಲ. ನನ್ನ ರಣೋತ್ಸಾಹವನ್ನು ನೀನು ಬಲ್ಲೆ. ಮಿಹಿರಕುಲನೂ ಬಲ್ಲನು. ಆದರೆ ಪ್ರಜಾಭಿಪ್ರಾಯವೆಲ್ಲಿ ಪ್ರತಿಕೂಲವಾಗಿ ಪರಿಣಮಿಸಿದೆಯೋ ಎಂಬ ಸಂದೇಹ ನನ್ನನ್ನು ಬಾಧಿಸುತ್ತಿದೆ.

ಮಿತ್ರಾ : ದಯವೇ ಧರ್ಮದ ಸಾರ ಸ್ವಾಮಿ, ಧರ್ಮಸಮ್ಮತವಾದುದನ್ನೇ ಪೂಜ್ಯ ಅತ್ತೆಯವರೂ ತಾವು ಮಾಡಿರುವಾಗ ಪ್ರಜಾಭಿಪ್ರಾಯವೇಕೆ ಪ್ರತಿಕೂಲವಾಗಬೇಕು?

ಬಾಲಾದಿತ್ಯ : ಸಾಮಾನ್ಯ ಪ್ರಜೆಗಳು ಧರ್ಮಸೂಕ್ಷ್ಮಗಳನ್ನೆಂತು ಅರ್ಥಮಾಡಿ-ಕೊಳ್ಳಬಲ್ಲರು ಮಿತ್ರಾ? 'ಆ ಅಪಾತ್ರನಿಗೆ ನಿಷ್ಕಾರಣವಾಗಿ ಜೀವದಾನ ನೀಡಿ ನಮ್ಮ ಮಹಾರಾಜರು ನಮ್ಮ ಮೇಲೆ ಮತ್ತೊಂದು ಯುದ್ಧದ ಭಾರ ಹೇರಿದರು' ಎಂದು ಅವರು ಯೋಚಿಸಿದರೆ ತಪ್ಪೆ? ಹೀಗೆ ಯೋಚಿಸಿ ಈ ಸಲದ ಯುದ್ಧದಲ್ಲಿ ಅವರು ಔದಾಸೀನ್ಯವನ್ನು ತಳೆದರೆ ಗತಿ? ಪ್ರಜೆಗಳ ಸಕ್ರಿಯ ಸಹಕಾರವಿಲ್ಲದೆ ಯುದ್ಧವನ್ನು ಗೆದ್ದವರೂ ಉಂಟೆ?

ವಸುಬಂಧು : (ಪ್ರವೇಶಿಸಿ) ಪ್ರಜೆಗಳ ಸಹಾನುಭೂತಿ-ಸಹಾಯ ಸಹಕಾರಗಳ ಬಗ್ಗೆ ನಿಶ್ಚಿಂತನಾಗಿರು ಬಾಲಾದಿತ್ಯ. (ಎಲ್ಲರೂ ಅವಸರವಸರವಾಗಿ ಅಡಿಗೆರಗುವರು.)

ಬಾಲಾದಿತ್ಯ : ಗುರುದೇವ, 'ಇದು ಮಹಾರಾಜರ ಅಚಾತುರ್ಯದಿಂದ ಅನಾವಶ್ಯಕವಾಗಿ ಹೊರಿಸಲ್ಪಟ್ಟ ಯುದ್ಧ'ವೆಂಬ ಭಾವನೆ ನಮ್ಮ ಪ್ರಜೆಗಳಿಗೆ ಬಂದಿಲ್ಲವೆ? ಅವರು ಈ ಯುದ್ಧದಲ್ಲಿಯೂ ಮನಃಪೂರ್ವಕವಾಗಿ ಸಹಕರಿಸುವರೆ?

ವಸುಬಂಧು : ಈ ಭಾವನೆ ಬರುವಂತೆ ವೈರಿಯ ಗೂಢಚಾರರು ಅಪಪ್ರಚಾರ ಮಾಡಿದುದೇನೋ ನಿಜ. ಆದರೆ ನಿಸ್ಸೀಮ ರಾಜಭಕ್ತರಾದ ನಿನ್ನ ಪ್ರಜೆಗಳು ಈ ಅಪಪ್ರಚಾರಕ್ಕೆ ಕಿವಿಗೊಟ್ಟಿಲ್ಲ. ಇಷ್ಟೇ ಅಲ್ಲ, ಹೋದಸಲಕ್ಕಿಂತ ಈ ಸಲ ಹೆಚ್ಚು ರೊಚ್ಚಿನಿಂದ, ಕೆಚ್ಚಿನಿಂದ ಹೋರಾಡಲು ನಿರ್ಧರಿಸಿದ್ದಾರೆ. ಔದಾರ್ಯಕ್ಕೆ ಪ್ರತಿಯಾಗಿ ವಂಚನೆಯನ್ನು ವೈರವನ್ನು ತೋರಿರುವ ಆ ವಿಶ್ವಾಸಘಾತಕಿ, ಕೊಲೆಪಾತಕಿ ಮಿಹಿರಕುಲನ ಬಗ್ಗೆ ಅವರ ಸಾತ್ವಿಕ ಸಂತಾಪ ಸಿಡಿದೆದ್ದಿದೆ. ಆ ಕೃತಘ್ನನಿಗೆ ಒಂದು ಕೈ ತೋರಿಸಿಯೇ ಬಿಡಬೇಕೆಂದು ಅವರು ದೃಢಸಂಕಲ್ಪ ಮಾಡಿದ್ದಾರೆ. ಹೋದಹೋದಲ್ಲೆಲ್ಲ ಅವರ ರಣೋತ್ಸಾಹದ ದೃಶ್ಯಗಳನ್ನೇ ಕಂಡೆವು.

ಮಿತ್ರಾ : ಮಹಿಳೆಯರೂ ಅಷ್ಟೇ ಉತ್ಸಾಹಭರಿತರಾಗಿರುವರೆ ಗುರುದೇವ?

ವಸುಬಂಧು : ವತ್ಸೆ, ಮಹಿಳೆಯರ ಉತ್ಸಾಹವಂತೂ ವರ್ಣನಾತೀತವಾದುದು. ಗೃಹಿಣಿಯರಿಂದು ಕೇಸರಿಣಿಯಾಗಿದ್ದಾರೆ. ಪುರುಷರೊಡನೆ ಶೌರ್ಯದ ಸ್ಪರ್ಧೆಗೆ ನಿಂತಿದ್ದಾರೆ. ಮನೆ ಮನೆಗೂ ರಣಭೇರಿ ಮೊಳಗುತ್ತಲಿದೆ. ಎಂಥ ರೋಮಾಂಚಕ ದೃಶ್ಯಗಳವು.

ಬಾಲಾದಿತ್ಯ : (ಆತುರದಿಂದ) ಎಂಥ ದೃಶ್ಯಗಳು? ವಿಶದವಾಗಿ ಹೇಳಿರಿ ಗುರುದೇವ.

ಮಿತ್ರಾ : ನಾನೂ ಕೇಳಲು ಆತುರಳಾಗಿದ್ದೇನೆ ಗುರುದೇವ.

ವಸುಬಂಧು : ವಿವರಣೆ ಆ ದೃಶ್ಯಗಳಿಗೆ ಅಪಚಾರವೆಸಗಿದಂತೆ. ಜೀವಂತ ದೃಶ್ಯಗಳನ್ನೇ ನೋಡಿರಿ. ಬದಿಗೆ ಸರಿಯಿರಿ! (ಎಲ್ಲರೂ ಒಂದು ಬದಿಗೆ ಸರಿಯುವರು. ರಂಗಭೂಮಿಯ ದೀಪಗಳು ಆರುವವು. ತೆರೆ ಏಳುವುದು. ಹಿಂದೆ ಛಾಯಾನಾಟಕ ನಡೆಯುವುದು, ಒಂದೊಂದೇ ಪಾತ್ರಗಳು ಒಂದು ಬದಿಯಿಂದ ಬಂದು ತಮ್ಮ ಮಾತುಗಳನ್ನಂದು ಇನ್ನೊಂದು ಬದಿಗೆ ಹೋಗುವುವು. ಅದಕ್ಕೆ ಮೊದಲು ತೆರೆಯ ಹಿಂದೆ ಉಚ್ಚಸ್ವರ: "ಮತ್ತೊಮ್ಮೆ ರಾಷ್ಟ್ರರಕ್ಷಣೆಯ ಕರೆ ಬಂದಿದೆ! ನಿಮ್ಮ ಉತ್ತರವೇನು?" ಈ ಸ್ವರ ನಿಲ್ಲುತ್ತಲೇ ಪಾತ್ರಗಳು ಒಂದಾದಮೇಲೊಂದು ಪ್ರವೇಶಿಸುವುವು.)

ಬೇಸಾಯಗಾರ : ನಾನು ಬೇಸಾಯಗಾರ, ಭೂಮಿಸುತ, ಒಕ್ಕಲಿಗ (ಹೆಗಲ ಮೇಲಿನ ನೇಗಿಲನ್ನೆತ್ತಿ) ಇದು ನನ್ನ ಆಯುಧ! ಇದರಿಂದ ಯುದ್ಧ ಮಾಡುವ ಯೋಧರಿಗಾಗಿ, ಎಲ್ಲರಿಗಾಗಿ ಆಹಾರ ಬೆಳೆಯುವೆನು. ಅಗತ್ಯ ಬಿದ್ದರೆ ನೇಗಿಲ ಹಿಡಿದ ಈ ಕೈ ಗಂಡುಗೊಡಲಿ ಹಿಡಿಯುವುದು! (ಹೋಗುವನು)

ಕಮ್ಮಾರ : ನಾನು ಕಮ್ಮಾರ, (ಸುತ್ತಿಗೆಯನ್ನೆತ್ತಿ) ಇದು ನನ್ನ ಆಯುಧ. ಇದುವರೆಗೆ ಕುಡ, ಕೊಡಲಿ, ಕುಡುಗೋಲುಗಳನ್ನು ಬಡಿದ ಈ ಸುತ್ತಿಗೆ ಇನ್ನು ಈಟಿ, ಖಡ್ಗ, ಬಿಲ್ಲು ಬಾಣಗಳನ್ನು ಸಿದ್ಧಗೊಳಿಸುವುದು. (ಹೋಗುವನು)

ಬಡಿಗ : ನಾನು ಬಡಿಗ. (ಬಾಚಿಯನ್ನೆತ್ತಿ) ಇದು ನನ್ನ ಆಯುಧ. ಇದುವರೆಗೆ ರಂಟೆ ಕುಂಟೆಗಳನ್ನು ಕೆತ್ತಿದ ಇದು ಇನ್ನು ಯುದ್ಧ ವಾಹನಗಳನ್ನು ಸಿದ್ಧಗೊಳಿಸುವುದು. ಪ್ರಸಂಗ ಬಂದರೆ ಬಾಚಿಯನ್ನು ಹಿಡಿದ ಈ ಕೈ ಬಿಲ್ಲು ಬಾಣಗಳನ್ನು ಹಿಡಿಯುವುದು! (ಹೋಗುವನು)

ಕೂಲಿಕಾರ : ನಾನು ಕೂಲಿಕಾರ. (ಬಲಗೈಯನ್ನೆತ್ತಿ) ಈ ಗಟ್ಟಿ ರಟ್ಟೆ ನನ್ನ ಆಯುಧ. ಈ ರಟ್ಟೆಯಿನ್ನು ದೇಶರಕ್ಷಣೆಗಾಗಿ ದಣಿವರಿಯದೆ ದುಡಿಯುವದು. ಬೇಕೆನಿಸಿದರೆ ಬಿಚ್ಚುಗತ್ತಿ ಹಿಡಿಯಲೂ ಸಿದ್ಧ ಈ ಕೈ! (ಹೋಗುವನು)

ಗೃಹಿಣಿ : ನಾನು ಗೃಹಿಣಿ. (ಒನಕೆಯನ್ನೆತ್ತಿ) ಇದು ನನ್ನ ಆಯುಧ! ಬತ್ತ ಕುಟ್ಟುವ ಈ ಒನಕೆ ಅಗತ್ಯಬಿದ್ದರೆ ವೈರಿಗಳ ತಲೆಯನ್ನೂ ಕುಟ್ಟುವುದು! (ಹೋಗುವಳು)

ವರ್ತಕ : ನಾನು ವರ್ತಕ (ತಕ್ಕಡಿಯನ್ನೆತ್ತಿ) ಇದು ನನ್ನ ಆಯುಧ, ಬೆಲೆಗಳು ಹೆಚ್ಚದಂತೆ ಇದರ ಉಪಯೋಗ ಮಾಡುವೆನು. ಅಗತ್ಯಬಿದ್ದರೆ ತಕ್ಕಡಿ ಹಿಡಿದ ಈ ಕೈಯೇ ತೋಮರ ಹಿಡಿಯುವುದು! (ಹೋಗುವನು)

ಸನ್ಯಾಸಿ : ನಾನು ಸನ್ಯಾಸಿ, (ಕೃಷ್ಣಾಜಿನವನ್ನೆತ್ತಿ) ಇದು ನನ್ನ ಅಸ್ತ್ರ ರಾಷ್ಟ್ರಕ್ಕೆ ಗಂಡಾಂತರ ಬಂದಿರುವ ಈ ಸಮಯದಲ್ಲಿ ಕೃಷ್ಣಾಜಿನ ಹಿಡಿದ ಈ ಕೈಯೇ ಖಡ್ಗ ಧರಿಸಲು ಹಿಂಜರಿಯದು! (ಸನ್ಯಾಸಿ ನಿಂತಿರುವಂತೆ ಉಳಿದವರೂ ಬಂದು ಸೇರುವರು. ಸಾಲಾಗಿ ಸೇರಿ ಈ ಗೀತೆ ಹಾಡುತ್ತ ಹೋಗುವರು)

ಸ್ವತಂತ್ರನಾಗಿ ಹುಟ್ಟಿಹೆ

ಸ್ವತಂತ್ರನಾಗಿ ಬಾಳುವೆ

ಇಂದು ಶಸ್ತ್ರ ತಾಳುವೆ

ಹೂಣರನ್ನು ಹೂಳುವೆ!

(ಅವರು ಹೋಗುತ್ತಲೆ ಅರಮನೆಯ ತೆರೆ ಇಳಿಯುವುದು. ರಂಗಭೂಮಿಯ ದೀಪಗಳು ಹೊತ್ತಿಕೊಳ್ಳುವುವು. ಮೊದಲಿನಂತೆ ವಸುಬಂಧು, ಬಾಲಾದಿತ್ಯ, ರಾಜಮಾತೆ, ಮಿತ್ರಾದೇವಿಯವರು ಕಾಣಿಸಿಕೊಳ್ಳುವರು)

ಬಾಲಾದಿತ್ಯ : (ಪುಲಕಿತಗಾತ್ರನಾಗಿ) ದೇಶಕ್ಕೆ ದೇಶವೇ ಸ್ವಾತಂತ್ರ್ಯ ರಕ್ಷಣೆಗಾಗಿ ಸ್ವಯಂಪ್ರೇರಣೆಯಿಂದ ಸಿದ್ಧವಾಗುತ್ತಲಿರುವ ಮಹೋತ್ಸಾಹಜನಕ ದೃಶ್ಯ! ಗುರುದೇವ, ನನ್ನ ಮೈಯಲ್ಲಿ ಮಿಂಚು ಸಂಚರಿಸತೊಡಗಿದೆ. ನನ್ನ ಎದೆಯಲ್ಲಿ ಸಾವಿರ ಸಿಂಹಗಳ ಸಾಹಸ ಶೇಖರಿತವಾದಂತಾಗಿದೆ. ಆಶೀರ್ವದಿಸಿರಿ, ಈ ಸಲ ಹೂಣರ ಹಾವಳಿಯ ಹುಟ್ಟಳಿಸಿ ಬರುವೆನು. ಮಿಹಿರಕುಲನ ಬಲದ ಬೇರುಗಳನ್ನು ಸುಟ್ಟೊರೆಸಿ ಬರುವೆನು; ಭಾರತದ ಭದ್ರತೆಯ ಬಾವುಟವನ್ನು ಹಿಮಗಿರಿಯ ಮೇಲೆ ಹಾರಿಸಿ ಬರುವೆನು! ಈ ಯುದ್ಧದಲ್ಲಿ ಭಾರತದ ವೀರಯೋಧರು ತೋರುವ ಪರಾಕ್ರಮವು ಹೊಸ ವಿಕ್ರಮವನ್ನು ಸ್ಥಾಪಿಸುವುದು! ವೈರಿಮುಖದಿಂದಲೇ ಪ್ರಶಂಸೆಯನ್ನು ಪಡೆಯುವಂಥ ಪರಾಕ್ರಮವನ್ನು ಮೆರೆದು ಬರುವೆವು! ಆಶೀರ್ವದಿಸಿರಿ ಗುರುದೇವ, ಆಶೀರ್ವದಿಸಿರಿ. (ಬಾಗುವನು)

ವಸುಬಂಧು : (ಕೈಯೆತ್ತಿ) ವಿಜಯೀಭವ, ಭಾರತರವಿ ಬಾಲಾದಿತ್ಯ. ನಿನ್ನ ಶೌರ್ಯ ಸಾಹಸಗಳ ಕಥೆ ಮುಂದಿನ ತಲೆಮಾರುಗಳಿಗೆ ಸಂಜೀವಿನೀಶಕ್ತಿಯಾಗಿ

ಪರಿಣಮಿಸಲಿ! ನಿನ್ನ ರಾಷ್ಟ್ರಭಕ್ತಿ ಶತಶತಮಾನಗಳವರೆಗೆ ಭಾರತೀಯರಿಗೆ ದಾರಿದೀಪವಾಗಿ ಬೆಳಗಲಿ!

ಬಾಲಾದಿತ್ಯ : ಆಶೀರ್ವದಿಸು ಮಾತೆ (ರಾಜಮಾತೆಗೆ ನಮಸ್ಕರಿಸುವನು.)

ರಾಜಮಾತೆ : (ಕೊರಳು ತಬ್ಬಿ) ಈ ಕೊರಳು ಜಯಮಾಲೆ ಧರಿಸಲೆಂದೇ ಹುಟ್ಟಿದೆ ಬಾಲಾ, ಈ ಕೊರಳಿಗೆ ಮತ್ತೊಂದು ಜಯಮಾಲೆ ದೊರೆಯಲಿ!

ಮಿತ್ರಾ : (ಆರತಿ ಹಿಡಿದುಬಂದು ಆರತಿ ಬೆಳಗುತ್ತ ಹಾಡುವಳು)

ಹೋಗಿ ಬಾ ವೀರವರ

ತರಿದು ಬಾ ವೈರಿ ಶಿರ

ವೀರಪತ್ನಿಯೆನಿಸಿ ಮೆರೆವೆ

ಹಿಡಿದುದಕ್ಕೆ ನಿನ್ನ ಕರ!

ಪ್ರಾರ್ಥಿಸುವೆನು ನಿತ್ಯ ನಿನ್ನ

ಜಯಕೆ ಜೀವಿತೇಶ್ವರ

ಜಯಿಸಿ ಬಾ ವೈರಿಗಳನ್ನು

ಗೆದ್ದು ಬಾ ಧರ್ಮ ಧುರ!

ಹೋಗಿ ಬಾ ವೀರವರ!

(ಹಾಡು ಮುಗಿಯುತ್ತಿದ್ದಂತೆ ತೆರೆ)

ನೋಟ ೧೦

(ಅಯೋಧ್ಯಾನಗರಿಯ ಬೀದಿ. ರಣವಾದ್ಯಗಳು ಭೋರ್ಗರೆಯುತ್ತಿರಲು ಬಾಲಾದಿತ್ಯನ ಸೈನಿಕರು ಜಯ ಜಯಕಾರ ಮಾಡುತ್ತ ಒಂದು ಬದಿಯಿಂದ ಬಂದು ಇನ್ನೊಂದು ಬದಿಯಿಂದ ನಿರ್ಗಮಿಸುತ್ತಾರೆ. ಅವರಲ್ಲಿ ಕೊನೆಯವನಾದ ಒಕ್ಕಲಿಗ ಬರುತ್ತಾನೆ. ಅವನ ಬೆನ್ನು ಹಿಂದೆಯೇ ಅವನ ಮಗ ಮತ್ತು ಸೊಸೆ ಬರುತ್ತಾರೆ. ಸೊಸೆಯ ಕೈಯಲ್ಲಿ ಕೂಸಿದೆ)

ಮಗ : (ಕೈ ಜೋಡಿಸಿ) ದೇಶಕ್ಕಾಗಿ ಕತ್ತಿ ಹಿರಿಯುವ ಪುಣ್ಯ ಈ ಸಲ ನನಗೆ ಬಿಟ್ಟು ಕೊಡಪ್ಪಾ–ನಾನು ಯುದ್ಧಕ್ಕೆ ಹೋಗುವೆ.

ತಂದೆ : ಬೇಡ ಮಗು, ನಾನಿದ್ದೇನೆ. ನಾನಿನ್ನೂ ಗಟ್ಟಿಯಾಗಿದ್ದೇನೆ. ನನ್ನ ಕೈ ಕಾಲು ಗಟ್ಟಿಯಾಗಿ ಉಳಿದಿರುವವರೆಗೆ ನೀನು ಕಾಳಗಕ್ಕೆ ಹೋಗುವ ಅಗತ್ಯವಿಲ್ಲ.

ಮಗ : ನೀನು ಎಲ್ಲಿಯವರೆಗೆ ನಮಗಾಗಿ ದೇಶ ರಕ್ಷಿಸಲು ಹೋರಾಡಬೇಕಪ್ಪಾ- ದೇಶ ರಕ್ಷಿಸುವ ಭಾರ ಹರೆಯದವರಾದ ನಾವು ಹೊರಬೇಕು. ಮುಪ್ಪಿನವರಿಗೊಪ್ಪಿಸಿದರೆ ಒಪ್ಪುವನೆ ಶ್ರೀರಾಮ?

ತಂದೆ : ಒಪ್ಪದೆ ಏನು? ಮುಪ್ಪಿನ ಜಾಂಬವಂತ ಯುದ್ಧ ಮಾಡಲಿಲ್ಲವೆ?

ಮಗ : ಒಮ್ಮೆ ನೀನು ಯುದ್ಧಮಾಡಿ ನಿನ್ನ ಕರ್ತವ್ಯ ಪಾಲಿಸಿರುವೆಯಪ್ಪ. ಈ ಸಲ ನನಗೆ ಬಿಟ್ಟುಕೊಡು ಈ ಪುಣ್ಯಕಾರ್ಯವನ್ನು.

ತಂದೆ : ನನ್ನ ವಂಶದ ದೀಪ ನೀನು. ನಿನ್ನನ್ನು ಬಿರುಗಾಳಿಗೆದುರಾಗಿ ಕಳಿಸಲೆ?

ಸೊಸೆ : (ಮಗನತ್ತ ತೋರಿ) ವಂಶದ ದೀಪ ಇನ್ನೊಂದು ಹೊತ್ತಿಕೊಂಡಿದೆ ಮಾವಾ. ವಂಶದ ಬಗ್ಗೆ ಕಾಳಜಿ ಬೇಡ. ಈ ಸಲ ಈತ ಹೋಗಿಬರಲಿ. ನನಗೂ ವೀರನ ಹೆಂಡತಿಯೆನಿಸುವ ಆಸೆ.

ಮಗ : ಹೌದು ಅಪ್ಪಾ, ನಮ್ಮ ವಂಶದ ಬಳ್ಳಿಯ ಈ ಕುಡಿಯು ನಿನ್ನ ಕೈಯಲ್ಲಿರಲಿ. ಇದರ ಜೋಪಾನ ಮಾಡುತ್ತ ನೀನಿದ್ದುಬಿಡು. ನಾನು ಹೋಗಿ ಹಗೆಯ ಸೊಕ್ಕು ಇಳಿಸಿ ಬರುವೆನು.

ತಂದೆ : (ಕಂಠ ಬಿಗಿದು) ನಿನ್ನ ಹುರುಪಿನ ಮೇಲೆ ತಣ್ಣೀರು ಸುರಿಯಲಾರೆ. ಹೋಗಿ ಬಾರಪ್ಪ. ಶ್ರೀರಾಮ ನಿನ್ನನ್ನು ರಕ್ಷಿಸಲಿ. (ಮೊಮ್ಮಗನನ್ನು ಎತ್ತಿಕೊಂಡು) ಈ ದೀಪಕ್ಕೆ ಎಣ್ಣೆ ಎರೆಯುವ ಕಾರ್ಯ ನನ್ನದಾಗಿರಲಿ!

(ಹೋಗುವರು. ತೆರೆ ಏಳುವುದು)

ನೋಟ ೧೧

(ರಣರಂಗದಲ್ಲಿ ಬಾಲಾದಿತ್ಯನ ಬಿಡಾರ)

(ಬಾಲಾದಿತ್ಯ-ಸೈನಿಕರನ್ನು ಸಂಬೋಧಿಸಿ) ಭಾರತದ ವೀರಯೋಧರೆ, ನಿಮ್ಮ ರಣೋತ್ಸಾಹದ ಪ್ರದರ್ಶನಕ್ಕೆ, ಶೌರ್ಯ ಸಾಹಸಗಳ ಪ್ರಕಟಣೆಗೆ ಮತ್ತೊಂದು ಸುಸಂಧಿಯನ್ನು ಕಲ್ಪಿಸಿಕೊಟ್ಟ ಮಿಹಿರಕುಲನನ್ನು ಮೊದಲು ನೆನೆಯೋಣ! ನಮ್ಮ ಪರಾಕ್ರಮ ಪ್ರಕಟಣೆಯ ಈ ಅವಕಾಶವನ್ನು ಪೂರ್ಣವಾಗಿ ಉಪಯೋಗಿಸಿಕೊಳ್ಳೋಣ! ಒರೆಯಿಂದ ಹಿರಿದ ನಿಮ್ಮ ಖಡ್ಗ ವೈರಿಯ ಗುಂಡಿಗೆಯ ಬಿಸಿರಕ್ತ ಕುಡಿದೇ ಒರೆ

ಸೇರಲಿ! ಹಸಿದಿವೆ ನಿಮ್ಮ ಮಸೆದ ಖಡ್ಗಗಳು! ಅವುಗಳು ಇಂದು ವೈರಿಯ ಕರುಳು ತಿಂದು ರಕ್ತ ಕುಡಿದು ತೇಗಲಿ. ನಿಮ್ಮ ತೋಳ ತೀಟೆಯನ್ನು ತೀರಿಸಿಕೊಳ್ಳಲು ಇಂಥ ಅವಕಾಶಗಳು ಮತ್ತೊಮ್ಮೆ ಸಿಕ್ಕುವುದಿಲ್ಲ. ಪ್ರಳಯಾಗ್ನಿಯಂತೆ ಎರಗಿರಿ ಶತ್ರುಗಳ ಮೇಲೆ! ದಂಡಿಸಿರಿ, ಖಂಡಿಸಿರಿ, ತುಂಡು ತುಂಡಾಗಿ ಕತ್ತರಿಸಿ ಕೆಡಹಿರಿ ಈ ವಿಶ್ವಾಸ ಘಾತುಕರನ್ನು, ಪಾತಕಿಗಳನ್ನು! ಮಾನವಕುಲಕ್ಕೆ ಕಲಂಕಪ್ರಾಯರಿವರು, ಕುಠಾರಪ್ರಾಯರಿವರು! ಇವರನ್ನು ಧ್ವಂಸಗೊಳಿಸಿ ಮಾನವ ಜನಾಂಗವನ್ನೇ ಈ ದೈತ್ಯಶಕ್ತಿಯಿಂದ ಮುಕ್ತಗೊಳಿಸೋಣ. ಪಶುಗಳೂ ಸಹ ಉಪಕಾರಗೈದವರಿಗೆ ಅಪಕಾರವೆಸಗುವುಲ್ಲ. ಪ್ರಾಣದಾನ ಮಾಡಿದವರ ಮೇಲೇಯೇ ತಿರುಗಿ ಬಿದ್ದಿರುವ ಈ ಹೂಣ ಹದ್ದುಗಳು ಪ್ರಾಣಿಗಳಿಗಿಂತ ಕೀಳರು, ಕನಿಷ್ಠರು! ಇವರನ್ನು ನಿಗ್ರಹಿಸುವುದು ಕರ್ತವ್ಯ ಕರ್ಮ, ಇವರನ್ನು ಮರ್ದಿಸುವುದು ಧರ್ಮ! ಆದುದರಿಂದ ನಡೆಯಿರಿ, ಧೂರ್ಜಟಿಯ ಅಗ್ನಿನೇರದಿಂದ ಪುಟಿಯುವ ಜ್ವಾಲಾಮಾಲೆಯಂತೆ ನಡೆಯಿರಿ; ಮಹಾಕಾಳಿಯ ಶೂಲದಂತೆ ನಡೆಯಿರಿ; ಕಾಲಭೈರವರಂತೆ ನಡೆಯಿರಿ; ಭಾರತಕ್ಕೆ ವಿಜಯ ಪಡೆಯಿರಿ!

ಸಮರಸಿಂಹ : ಭಾರತಮಾತೆಗೆ–

ಎಲ್ಲರೂ : ಜಯವಾಗಲಿ!

ಸಮರಸಿಂಹ : ಭಾರತವೀರ ಬಾಲಾದಿತ್ಯ ಸಾರ್ವಭೌಮರಿಗೆ–

ಎಲ್ಲರೂ : ಜಯವಾಗಲಿ!

ಮಿಹಿರಕುಲ : (ಪ್ರವೇಶಿಸಿ ಗಹಗಹಿಸಿ ನಕ್ಕು) ಯಾವ ಜನ್ಮದ ಪುಣ್ಯದಿಂದಲೋ ಒಮ್ಮೆ ಜಯಶಾಲಿಯಾಗಿ ಇಂದು ಮತ್ತೆ ಜಯದ ಕನಸು ಕಾಣುತ್ತಲಿರುವ ಬಾಲಾದಿತ್ಯ. ಇನ್ನು ನೀನು ಈ ಜಗತ್ತಿನಲ್ಲಿ ಜೀವಿಸಿರುವುದೇ ಕೆಲವು ಕ್ಷಣಗಳು ಮಾತ್ರ! ಮಿಹಿರಕುಲನಿಂದು ನಿನ್ನ ಪ್ರಾಣಪಕ್ಷಿಗೆ ಗಿಡಗವಾಗಿ ಬಂದಿದ್ದಾನೆ! ಜಯದ ಮಾತನ್ನು ಮರೆ, ಸಾಯುವ ಮುನ್ನ ನಿನ್ನ ಆಸೆಯೇನಾದರೂ ಇದ್ದರೆ ತಿಳಿಸು. ಇಂದು ನಾನು ನಿನ್ನ ಆಸೆಯನ್ನು ತೀರಿಸಿ ಮುಯ್ಯಕ್ಕೆ ಮುಯ್ಯ ಮುಟ್ಟಿಸುವೆನು.

ಬಾಲಾದಿತ್ಯ : ನಿನ್ನ ಕರುಳಮಾಲೆ ಹಾಕಿಕೊಳ್ಳುವ ಆಸೆ ನನಗೆ ಮಿಹಿರಕುಲ. ಆ ಆಸೆಯನ್ನು ಪೂರೈಸಿಕೊಳ್ಳಲೆಂದೇ ಇಲ್ಲಿಗೆ ಬಂದಿದ್ದೇನೆ, ಪೂರೈಸಿಕೊಂಡೇ ಹಿಂದಿರುಗುತ್ತೇನೆ!

ಮಿಹಿರಕುಲ : (ಕಿರಿಚಿ) ಭಳಿರೇ ಬಾಲಾದಿತ್ಯ! ಬಾ, ಈಡೇರಿಸಿಕೋ ಬಾ ನಿನ್ನ ಆ ಆಸೆಯನ್ನು! ತಡೆದುಕೋ ಈ ಖಡ್ಗ ಪ್ರಹಾರವನ್ನು! (ಘನಘೋರ ಸಂಗ್ರಾಮ ಪ್ರಾರಂಭವಾಗುವುದು. ಬಾಲಾದಿತ್ಯ ಮಿಹಿರಕುಲರು ಜೀವದ ಹಂಗುದೊರೆದು ಹೋರಾಡುವರು. ಸ್ವಲ್ಪ ಹೊತ್ತಿನಲ್ಲಿಯೇ ಬಾಲಾದಿತ್ಯನ ಕೈ ಮೇಲಾಗುವುದು. ಮಿಹಿರಕುಲ ಮೃತ್ಯುವನ್ನು ತಪ್ಪಿಸಿಕೊಳ್ಳಲು ರಣರಂಗದಿಂದ ಕಾಲ್ದೆಗೆಯುವನು, ಅವನ ಹಿಂದೆ ಹೂಣಪಡೆಯೂ ಕಕ್ಕಾವಿಕ್ಕಿಯಾಗಿ, ಚಲ್ಲಾಪಿಲ್ಲಿಯಾಗಿ ಓಡತೊಡಗುವುದು)

ಬಾಲಾದಿತ್ಯ : (ಬೆಂಬತ್ತಿ) ಎಲವೋ ಹಂದೆ, ಎಲವೋ ಜೀವಗಳ್ಳ! ರಣರಂಗದಿಂದ ನಿರ್ಲಜ್ಜನಾಗಿ ಓಡಿಹೋಗುವಿಯಾ? ಬೆನ್ನಟ್ಟಿರಿವನನ್ನು! ಹೆಡೆಮುರಿಗೆ ಕಟ್ಟಿ ತನ್ನಿರಿ!

(ಹೀಗೆನ್ನುತ್ತ ತಾನೂ ಹಿಂಬಾಲಿಸಿ ಹೋಗುವನು. ತೆರೆ ಏಳುವುದು)

ನೋಟ ೧೨

(ನಿಬಿಡಾರಣ್ಯದಲ್ಲಿ ಮಿಹಿರಕುಲನೊಬ್ಬನೇ ತೇಕುತ್ತ, ಕಾಲೆಳೆಯುತ್ತ ಬೀಳುತ್ತ ಏಳುತ್ತ ಬರುತ್ತಾನೆ. ತೆರೆಯ ಆಚೆಯಿಂದ "ಮಾನವರೂಪಿ ದಾನವ ಮಿಹಿರಕುಲ ಓಡಿಹೋಗುತ್ತಲಿದ್ದಾನೆ! ಹಿಡಿಯಿರಿ ಅವನನ್ನು, ಹಿಡಿದು ಹೆಡೆಮುರಿಗೆ ಕಟ್ಟಿ ಕೆಡಹಿರಿ ಸಾಮ್ರಾಟ ಬಾಲಾದಿತ್ಯರ ಆಜ್ಞೆಯಿದು" ಎಂಬ ಸ್ವರ. ಆ ಸ್ವರ ಕೇಳುತ್ತಲೆ ಕಪ್ಪಿಡುತ್ತದೆ ಮಿಹಿರಕುಲನ ಮುಖ)

ಮಿಹಿರಕುಲ : (ತತ್ತರಿಸುತ್ತ) ಎತ್ತಹೋದರೂ ಮೃತ್ಯು ಬೆಂಬತ್ತಿ ಬರುವಂತೆ ಬೆನ್ನ ಹಿಂದೆಯೇ ಬರುತ್ತಲಿದ್ದಾರೆ ಬಾಲಾದಿತ್ಯನ ಸೈನಿಕರು! ನನ್ನ ಸೈನಿಕರೆಲ್ಲ ಎತ್ತ ಓಡಿಹೋದರೋ! ಜೀವಗಳ್ಳರು ಕೊನೆಗೆ ಕೈಕೊಟ್ಟರು! ಮಂತ್ರಿ, ಸೇನಾಪತಿ-ಎಲ್ಲಿ ಈಗ? ಆ ಸಮಯಸಾಧಕರು, ವಂಚಕರು, ದ್ರೋಹಿಗಳು. ಏನು ಮಾಡಲಿ, ಎಲ್ಲಿ ಹೋಗಲಿ, ಹೇಗೆ ಜೀವ ಉಳಿಸಿಕೊಳ್ಳಲಿ?

(ತೆರೆಯ ಹಿಂದಿನಿಂದ ಮತಿರಾಮ-ಬಲರಾಮರ ಸ್ವರ-"ಇನ್ನು ಪಾರಾಗಿ ಹೋಗಲಾರೆ ಮಿಹಿರಕುಲ! ಕಾಡಿನ ಸುತ್ತಲೂ ಕಾವಲಿದೆ, ಸಾಮ್ರಾಟ ಬಾಲಾದಿತ್ಯರ ಸುಗ್ರೀವಾಜ್ಞೆಯಿದು-ಶರಣು ಬಾ, ಇಲ್ಲವೆ ಮರಣಕ್ಕೆ ಸಿದ್ಧನಾಗು!")

ಮಿಹಿರಕುಲ : (ಅವಡುಗಚ್ಚಿ) ಶರಣು ಹೋಗುವುದೆ? ಅದೂ ಬಾಲಾದಿತ್ಯನಿಗೆ? ಸಾಧ್ಯವಿಲ್ಲ. ಸಾಧ್ಯವಿಲ್ಲ! ಸಾವು ಬಂದರೂ ಬರಲಿ, ಶರಣಾಗತನಾಗುವುದು ಬೇಡ. ನಾನಿಂದು ಏಕಾಕಿ, ಆದರೇನು? ಮಿಹಿರಕುಲನು ಮಿಹಿರಕುಲನೆ! ಕೊನೆಯವರೆಗೆ ಅಜಿತನಾಗಿಯೇ ಉಳಿಯುವನು ಮಿಹಿರಕುಲನು!

(ಮತ್ತೆ ಮತಿರಾಮ-ಬಲರಾಮರ ಸ್ವರ-ತೆರೆಯ ಮರೆಯಿಂದ "ಇನ್ನು ಐದು ನಿಮಿಷಗಳ ಅವಧಿ ನಿನಗೆ ಮಿಹಿರಕುಲ! ಬಯಲಿಗೆ ಬಂದು ಶರಣಾಗತನಾಗು-ಇಲ್ಲವೆ ಇದ್ದಲ್ಲಿಯೇ ಸಾವನ್ನಪ್ಪಲು ಸಿದ್ಧನಾಗು")

ಮಿಹಿರಕುಲ : (ಕೇಳಿ) ಸಾವನ್ನಪ್ಪಲು ಸಿದ್ಧನಾಗು! ಹೂಂ, ಸಿದ್ಧನಾಗಿಯೇ ಇದ್ದೇನೆ! ಛಲದಂಕಮಲ್ಲ ಮಿಹಿರಕುಲ ಸಾವಿಗೆ ಹೆದರುವನೆ? ಉರಿಬರಲಿ, ಸಿರಿಬರಲಿ-ಮಿಹಿರಕುಲ ಮಾತ್ರ ಮಿಹಿರಕುಲನಾಗಿಯೇ ಉಳಿಯುವನು!

(ಮತ್ತೆ ತೆರೆಯ ಹಿಂದೆ ನಿರ್ಧಾರದ ಸ್ವರ. "ನಯದ ನುಡಿಗೆ ಕಿವಿಗೊಡುವವನಲ್ಲ ಈ ಮದಾಂಧ ಮಿಹಿರಕುಲ! ಕಾಡಿಗೆ ಕಿಚ್ಚ ಹಚ್ಚಿರಿ! ಮತ್ತೊಂದು ಖಾಂಡವವನ ದಹನವಾಗಲಿ! ನಿಂತಲ್ಲಿಯೇ ಸುಟ್ಟುಹೋಗಲಿ ಶನಿ!")

ಮಿಹಿರಕುಲ : (ಕೇಳಿ ಬಿಳುಪೇರಿ) ಒಮ್ಮೆ ಪ್ರಪಂಚವನ್ನೇ ನಡುಗಿಸಿದ ಮಿಹಿರಕುಲನಿಂದು ಅರಣ್ಯದಲ್ಲಿ ಏಕಾಕಿಯಾಗಿ ಅಗ್ನಿಗೆ ಆಹುತಿಯಾಗಬೇಕು! ವಿಧಿವಿಲಾಸವಿದು, ಅಲ್ಲ ನನಗಾಗಿ ನಾನೆ ನಿರ್ಮಿಸಿಕೊಂಡ ಯಮಪಾಶವಿದು! ಬಿರುಗಾಳಿಯನ್ನು ಬಿತ್ತಿ ಪ್ರಳಯಾಗ್ನಿಯನ್ನು ಪಡೆದುಕೊಂಡೆ! ಮಂದಿಗೆ ವಿಷ ಉಣಿಸಹೋಗಿ ನಾನೇ ವಿಷ ಉಂಡೆ! ನನ್ನ ಪಾಪಕರ್ಮಗಳಿಗೆ ತಕ್ಕ ಪ್ರಾಯಶ್ಚಿತ್ತವನ್ನು ಈ ಜನ್ಮದಲ್ಲಿಯೇ ಅನುಭವಿಸುತ್ತಿದ್ದೇನೆ! ಈಗ ಪಶ್ಚಾತ್ತಾಪಪಟ್ಟು ಪ್ರಯೋಜನವೇನು? ನಿಷ್ಕರುಣೆಯಿಂದ ನಿರಪರಾಧಿಗಳನ್ನು ಕೊಂದು ಕೊಂದು ಕಲ್ಲಾಗಿರುವ ಈ ಎದೆ ಈ ಅಗ್ನಿಯಲ್ಲಿಯಾದರೂ ಕರಗಿ ಹರಿಯಲಿ! (ಸುತ್ತಲೂ ದಳ್ಳುರಿಯು ನಾಲಗೆ ಚಾಚುವುದು. ಅತ್ತ ನೋಡಿ) ಬನ್ನಿ, ಬೆಂಕಿಯ ನಾಲಗೆಗಳೆ ಬನ್ನಿ, ಈ ಪಾಪಮಯ ದೇಹವನ್ನು ನೀವಾದರೂ ಸುಟ್ಟು ಶುದ್ಧಗೊಳಿಸಿರಿ! ಈ ಮೈಯ ಮಣ್ಣಿನಿಂದ ಮುಂದೆಂದೂ ದುಷ್ಟ ಜೀವಿಗಳು ಹುಟ್ಟದಂತೆ ಸುಟ್ಟು ಬೂದಿಮಾಡಿರಿ ಇದನ್ನು! ಬನ್ನಿ, ಭೀಕರಾಕಾರದೊಡನೆ ಬನ್ನಿ! ನಾಲಿಗೆ ಚಾಚಿ ನೆಕ್ಕಿರೀ ರಕ್ಕಸನನ್ನು! (ಅಗ್ನಿ ಜ್ವಾಲೆಗಳು ಇನ್ನೂ ಹತ್ತಿರ ಹತ್ತಿರ ಬರುತ್ತವೆ. ಮಿಹಿರಕುಲ ನಿಶ್ಚಲನಾಗಿ ನಿಂತು ಅವುಗಳ ಆಗಮನವನ್ನು ನಿರೀಕ್ಷಿಸುತ್ತಾನೆ.

(ತೆರೆ ಇಳಿಯುತ್ತದೆ)

ನೋಟ ೧೩

(ತೆರೆ ಇಳಿಯುತ್ತಲೇ ಒಂದು ಬದಿಯಿಂದ ಸ್ತ್ರೀಯರೂ ಇನ್ನೊಂದು ಬದಿಯಿಂದ ಪುರುಷರೂ ಕುಣಿಯುತ್ತ ಬರುವರು. ವಿಜಯಾನಂದಭರಿತವಾಗಿರುವ ನರನಾರಿಯರ ಉಲ್ಲಾಸವೇ ಉಲ್ಲಾಸ, ಉತ್ಸಾಹವೇ ಉತ್ಸಾಹ! ಮತಿರಾಮ ಬಲರಾಮರ ಕಾಲಂತೂ ಭೂಮಿಯ ಮೇಲೆಯೇ ನಿಲ್ಲುವುದಿಲ್ಲ. ಕೆಳಗಣ ಗೀತಕ್ಕೆ ತಕ್ಕಂತೆ ಜನಪದ ನೃತ್ಯ ನಡೆಯುವುದು)

ಗೀತ

ಯುದ್ಧ ಗೆದ್ದು ಬಂದೆವು
ಹೂಣ ಮಿಕವ ಕೊಂದೆವು
ಜಯಮಾಲೆಯ ತಂದೆವು
ಜಯ ಭಾರತವೆಂದೆವು

ನಮ್ಮ ಮೇಲೆ ಬೀಳುವ
ಹಗೆಯ ಬೆನ್ನುಮೂಳೆಯ
ಬೇರುಸಹಿತ ಕೀಳುವ
ಶಕ್ತಿ ಗಳಿಸಿ ಬಾಳುವ!
ಬರಲಿ ನೂರು ಯುದ್ಧವು
ನಾವಿರುವೆವು ಸಿದ್ಧವು
ದೇಶವಿದು ಅಭೇದ್ಯವು
ಆಕ್ರಮಣ ಅಸಾಧ್ಯವು!

(ನೃತ್ಯ ನಡೆಯುತ್ತಿರುವಂತೆ ತೆರೆ ಬೀಳುವುದು. ಎಲ್ಲರೂ ಮರೆಯಾಗುವರು. ಆದರೆ ಮತಿರಾಮ ಬಲರಾಮರು ಮಾತ್ರ ತೆರೆಯ ಈಚೆಗೆ ಉಳಿಯುವರು)

ನೋಟ ೧೪

(ಮತಿರಾಮ-ಬಲರಾಮ ರಾಜಬೀದಿಯಲ್ಲಿ)

ಬಲರಾಮ : (ಮೀಸೆ ಹುರಿಗೊಳಿಸುತ್ತಾ) ಹೇಗಿದೆಯೋ ಬಲರಾಮನ ಕೈ?

ಮತಿರಾಮ : ಬಲರಾಮನ ಕೈಯೋ ಬಾಲಾದಿತ್ಯರ ಕೈಯೋ?

ಬಲರಾಮ : ಹೋಗಲಿ, ಭಾರತದ ಕೈ ಅಂದುಬಿಡೋಣ.

ಮತಿರಾಮ : ಆಗಲಿ. ಭಾರತದ ಕೈ ಬಲವಾಗಿಯೇ ಇದೆ. ಆದರೂ ಸುಮ್ಮನೆ ಸಾಯೋಕೆ ಬರ್ತಾರೆ ಭೂಪತಿಗಳು.

ಬಲರಾಮ : ಬರೋರು ಬರ್ಲಿ ನಮ್ಮ ಮುಷ್ಠಿ ಮಾತ್ರ ಗಟ್ಟಿಯಾಗಿರಲಿ! (ಬಲಗೈ ಮುಷ್ಟಿಯನ್ನು ಎತ್ತಿ ತೋರಿಸುವನು)

ಬಲರಾಮ : (ತಾನೂ ಮುಷ್ಟಿ ತೋರಿ) ಈ ಮುಷ್ಟಿ ದುಷ್ಟರಿಗೆ ಮಾರಿ!

ಬಲರಾಮ : ಶಿಷ್ಟರಿಗೆ ಉಪಕಾರಿ!

ಮತಿರಾಮ : ಇದು ಭಾರತದ ದಾರಿ!

ಬಲರಾಮ : ಹೊಡೆ ಹೊಡೆ ಜಯಭೇರಿ!

(ಹೋಗುವರು ತೆರೆ ಏಳುವುದು)

ನೋಟ ೧೫

(ಬಾಲಾದಿತ್ಯನ ಒಡ್ಡೋಲಗ. ನಯಸಾರ, ಸಮರಸಿಂಹ ಉಚಿತಾಸನಗಳಲ್ಲಿ; ರಾಜಮಾತೆ, ರಾಜ್ಯಲಕ್ಷ್ಮಿ, ಮಿತ್ರಾದೇವಿ ಗವಾಕ್ಷದಲ್ಲಿ; ಪ್ರತೀಹಾರಿಗಳು, ಸಭಾಸದರು ಅವರವರ ಸ್ಥಳಗಳಲ್ಲಿ; 'ಮಿಹಿರಕುಲ ಮರ್ದನ, ಹೂಣವನದಾವಾನಲ ಪರಬಲಭಯಂಕರ, ಪರಮಭಟ್ಟಾರಕ, ಭಾರತವೀರ ಬಾಲಾದಿತ್ಯ ಮಹಾಪ್ರಭು-ಬಹುಪರಾಕ್' ಎಂಬ ಘೋಷದೊಡನೆ ಗುರು ವಸುಬಂಧು ಸಮೇತ ಬಾಲಾದಿತ್ಯ ಬಂದು ಸಿಂಹಾಸನವನ್ನೇರಿ ಕುಳಿತುಕೊಳ್ಳುತ್ತಾನೆ; ಗುರು ವಸು ಬಂಧುಗಳು ಬಲಗಡೆಯ ಉನ್ನತಾಸನದಲ್ಲಿ ವಿರಾಜಮಾನರಾಗುತ್ತಾರೆ. ಬಾಲಾದಿತ್ಯ ಬರುತ್ತಲೇ ಎಲ್ಲರೂ ಎದ್ದು ಸ್ವಾಗತಿಸುತ್ತಾರೆ. ಗವಾಕ್ಷದಿಂದ ಹೂಮಳೆ. ಮತ್ತೆ ಪರಾಕು, ಜಯಘೋಷ, ವಿಜಯೋತ್ಸಾಹದ ವಿದ್ಯುನ್ಮಯ ವಾತಾವರಣ.)

ಬಾಲಾದಿತ್ಯ : ಗುರುಗಳೇ, ಮಂತ್ರಿ ಸೇನಾಪತಿಗಳೆ, ಸಭಾಸದರೆ, ಪ್ರಿಯ ಪ್ರಜೆಗಳೆ, ಈ ಮಹಾವಿಜಯದ ಮಹಾನಂದಮಯ ಸಮಯದಲ್ಲಿ ಈ ವಿಜಯಕ್ಕೆ ಕಾರಣರಾದ ಸೈನಿಕರ-ನಾಗರಿಕರ, ಪುರುಷರ-ಸ್ತ್ರೀಯರ, ಬಡವರ ಬಲ್ಲಿದರ-ಎಲ್ಲರ ಸಹಾಯವನ್ನು ಸ್ಮರಿಸುತ್ತೇವೆ; ಮತ್ತು ಎಲ್ಲರಿಗೆ ನಮ್ಮ ಮೆಚ್ಚಿಗೆಯನ್ನು ಸೂಚಿಸುತ್ತೇವೆ. ದೇಶವು ಎದುರಿಸಿದ ಈ ಶಕ್ತಿ ಪರೀಕ್ಷೆಯಲ್ಲಿ ಪುರುಷರಿಗೆ ಸರಿಸಮನಾಗಿ ಸ್ತ್ರೀಯರೂ ಭಾಗವಹಿಸಿದುದು ಚರಿತ್ರೆಯಲ್ಲಿ ಚಿರಸ್ಮರಣೀಯವಾಗಿ ಉಳಿಯುವುದು. (ಗವಾಕ್ಷದಲ್ಲಿ ರಾಜಮಾತೆ, ರಾಜ್ಯಲಕ್ಷ್ಮಿ, ಮಿತ್ರಾದೇವಿಯರು ಒಬ್ಬರನ್ನೊಬ್ಬರು ನೋಡಿ ನಸುನಗುವರು)

ಈ ಯುದ್ಧದ ಕಾರಣದಿಂದಾಗಿ ಪ್ರಜಾಹಿತ ಕಾರ್ಯಗಳು ಕುಂಠಿತವಾಗಿದ್ದುವು. ಇನ್ನು ಮತ್ತೆ ಆ ಕಾರ್ಯಗಳನ್ನು ತ್ವರಿತಗತಿಯಿಂದ ಮುಂದುವರಿಸಲಾಗುವುದೆಂದು ಆಶ್ವಾಸನವೀಯುತ್ತೇವೆ. ಯುದ್ಧದಲ್ಲಿ ಮಡಿದ, ಗಾಯಗೊಂಡ ಯೋಧರ ಕುಟುಂಬರಕ್ಷಣೆಯ ಸಮರ್ಪಕವಾದ ಏರ್ಪಾಟನ್ನೂ ಮಾಡಲಾಗುತ್ತಿದೆ. ಯುದ್ಧದಲ್ಲಿ ವಿಶೇಷವಾದ ಶೌರ್ಯೋತ್ಸಾಹಗಳನ್ನು ತೋರಿದ ಯೋಧರಿಗೆ ಬಹುಮಾನಗಳನ್ನೂ ಹಂಚಲಾಗಿದೆ.

ವಸುಬಂಧು : ಸಾಮ್ರಾಟ ಬಾಲಾದಿತ್ಯ, ನಮಗೂ ಒಂದು ಬಹುಮಾನ ಕೊಡುವಿರಾ?

ಬಾಲಾದಿತ್ಯ : ಇದೇನು ಗುರುವರ-ಎಂದಿಲ್ಲದ ಈ ಬಹುವಚನ ಪ್ರಯೋಗ? 'ಬಹುಮಾನ'ವೆಂಬ ಪದವನ್ನು ತಾವು ಉಪಯೋಗಿಸಬೇಕೆ? ಆಜ್ಞಾಪಿಸಿರಿ ಗುರುದೇವ-ತಮ್ಮ ಆಜ್ಞೆಯನ್ನು ಶಿರಸಾವಹಿಸಿ ಪಾಲಿಸುವೆ.

ವಸುಬಂಧು : ಹೂಣ ದೊರೆ ಹತನಾದನು. ಆದರೆ ಹೂಣ ಜನಾಂಗ ಉಳಿದಿದೆ ಅಲ್ಲವೆ?

ಬಾಲಾದಿತ್ಯ : ಯಾರು ಇಲ್ಲವೆನ್ನುವರು ಗುರುದೇವ?

ವಸುಬಂಧು : ಮಿಹಿರಕುಲನೂ ಅವನ ಸೈನಿಕರೂ ದುಷ್ಟರಾಗಿದ್ದರು. ಆದರೆ ಹೂಣರೆಲ್ಲ ದುಷ್ಟರಾಗಿರಲಾರರು, ಅಲ್ಲವೆ?

ಬಾಲಾದಿತ್ಯ : ಸಹಜ.

ವಸುಬಂಧು : ನಮಗೆ ಅವರೊಡನೆ ವೈರವಿಲ್ಲ. ಅಲ್ಲವೆ?

ಬಾಲಾದಿತ್ಯ : ಇರಲಾರದು, ಇರಬಾರದು–ಬದ್ಧವೈರ ಯಾರೊಡನೂ ಇರಬಾರದು.

ವಸುಬಂಧು : ಬುದ್ಧ ಹೇಳಿದುದೂ ಇದನ್ನೇ, ಬಾಲಾದಿತ್ಯ–ವೈರದಿಂದ ವೈರದ ಶಮನವಾಗುವುದಿಲ್ಲ, ಅವೈರದಿಂದಲೇ ವೈರವನ್ನು ಶಮನಗೊಳಿಸಬೇಕು!

ಬಾಲಾದಿತ್ಯ : ಗುರುದೇವ, ನಾನು ಈ ಬುದ್ಧವಚನವನ್ನೂ ಮರೆತಿಲ್ಲ. ಮಹಾಭಾರತದ ಈ ಸಾರೋಕ್ತಿಯನ್ನೂ ಮರೆತಿಲ್ಲ–

ಅಕ್ರೋಧೇನ ಜಯೇತ್ ಕ್ರೋಧಮಸಾಧುಂ ಸಾಧುನಾ ಜಯೇತ್।

ಜಯೇತ್ ಕದರ್ಯಂ ದಾನೇನ ಜಯೇತ್ ಸತ್ಯೇನಚಾನೃತಮ್॥

ವಸುಬಂಧು : (ಹಿಗ್ಗಿ) ಈ ತತ್ತ್ವವನ್ನು ಕಾರ್ಯರೂಪಕ್ಕಿಳಿಸುವ ಸದವಕಾಶವೊಂದು ಒದಗಿಬಂದಿದೆ ಬಾಲಾದಿತ್ಯ.

ಬಾಲಾದಿತ್ಯ : ಅಂಥ ಅವಕಾಶವನ್ನು ಎಂದೂ ಕಳೆದುಕೊಳ್ಳೆನು ಗುರುದೇವ! ಅಪ್ಪಣೆಯಾಗಲಿ.

ವಸುಬಂಧು : (ತೆರೆಯತ್ತ ಹೊರಳಿ) ಕುಮಾರಾ, ಬಾ ಬಾ ಕುಮಾರ.

ಬಕ : (ಬಂದು ವಂದಿಸಿ) ವಂದಿಸುವೆ ಗುರುದೇವ.

ವಸುಬಂಧು : ದೀರ್ಘಾಯುವಾಗು ಕುಮಾರ

ವಸುಬಂಧು : (ಅಚ್ಚರಿಯಿಂದ) ಇವನಾರ ಕುಮಾರ ಗುರುದೇವ?

ವಸುಬಂಧು : ಮಿಹಿರಕುಲನ ಕುಮಾರ (ಇದನ್ನು ಕೇಳುತ್ತಲೆ ಎಲ್ಲರ ಮುಖದ ಮೇಲೆ ವಿಚಿತ್ರ ಛಾಯೆ ಸುಳಿಯುವುದು ಅದನ್ನು ಕಂಡು) ಮಿಹಿರಕುಲನ ಮಗನೆಂದು ಸಂದೇಹಪಡದಿರಿ! ಹಿರಣ್ಯಕಶ್ಯಪನ ಹೊಟ್ಟೆಯಲ್ಲಿ ಪ್ರಹ್ಲಾದ ಹುಟ್ಟಿದಂತೆ ಮಿಹಿರಕುಲನ ಹೊಟ್ಟೆಯಲ್ಲಿ ಸತ್ಪುತ್ರನಿವ ಹುಟ್ಟಿಬಂದಿದ್ದಾನೆ. ಇವನಿಗೆ ಆಶ್ರಯ ನೀಡಿ ಹೂಣಜನಾಂಗದ ಸ್ನೇಹ ಸಂಪಾದಿಸು ಬಾಲಾದಿತ್ಯ. ಇವನು ನಿನ್ನ ಆಜ್ಞಾಧಾರಕನಾಗಿ ಬಾಳುವನು.

ಬಾಲಾದಿತ್ಯ : ಯುದ್ಧರಂಗದಲ್ಲಿ ದೊರೆತ ಭೌತಿಕ ವಿಜಯವನ್ನು ಭದ್ರಗೊಳಿಸಲು ಈ ನೈತಿಕ ವಿಜಯದ ಏರ್ಪಾಟು ಮಾಡಿರುವ ಗುರುವರ, ತಮ್ಮ ಆದೇಶದಂತೆಯೇ ನಡೆಯುವೆನು. (ಬಕನನ್ನು ಪಕ್ಕದಲ್ಲಿ ಕುಳ್ಳಿರಿಸಿ ಕೊಂಡು) ತಂದೆಯಿಲ್ಲದ ಕಂದ ನಾನೆಂದು ನೊಂದುಕೊಳ್ಳಬೇಡ ಕುಮಾರ, ನಾನಿದ್ದೇನೆ. ನಿನಗಾವ ಭೋಗಭಾಗ್ಯ ಬೇಕು ಹೇಳು.

ಬಕ : ಭಾರತದಲ್ಲಿ ಬದುಕಿರುವುದೇ ಭಾಗ್ಯ ಪ್ರಭು! ಬೇರಾವ ಭಾಗ್ಯವನ್ನು ಬಯಸಲಿ!

ವಸುಬಂಧು : (ಹಿಗ್ಗಿ) ಭಾಪು ಬಕ, ಭಾರತ ಭಕ್ತಿಯೇ ಸಾಕಾರವಾಗಿ ಹುಟ್ಟಿದಂತಿರುವೆ. ನೀನು ಇಂದಿನಿಂದ ಭಾರತೀಯ, ನಿಜವಾದ ಭಾರತೀಯ!

ಬಾಲಾದಿತ್ಯ : ನಿನ್ನ ಭಾರತಪ್ರೇಮ ನನ್ನನ್ನು ಮುಗ್ಧನನ್ನಾಗಿಸಿದೆ ಕುಮಾರ. ನಿನ್ನನ್ನು ನಿನ್ನ ತಂದೆ ಗೆದ್ದು ಕಳೆದುಕೊಂಡ ಕಾಶ್ಮೀರದ ಸಾಮಂತನನ್ನಾಗಿ ಮಾಡಿದ್ದೇನೆ, ನೀನಲ್ಲಿ ಪ್ರಜಾವತ್ಸಲನಾಗಿ ರಾಜ್ಯ ಪರಿಪಾಲನೆ ಮಾಡುತ್ತ ಪ್ರಜೆಗಳು ನಿನ್ನ ತಂದೆಯ ಕ್ರೂರ ಕೃತ್ಯಗಳನ್ನು ಮರೆಯುವಂತೆ ಮಾಡು.

ಬಕ : (ಕೈ ಜೋಡಿಸಿ) ತಮ್ಮ ಅಪ್ಪಣೆಯಂತೆ ವರ್ತಿಸುವೆನು ಮಹಾಪ್ರಭು. ಅನುಗೃಹೀತನಾದೆ.

ವಸುಬಂಧು : (ಹಿರಿಹಿರಿ ಹಿಗ್ಗಿ) ಶ್ರೀರಾಮನು ವಾಲಿಯನ್ನು ಕೊಂದು ಸುಗ್ರೀವನಿಗೆ, ರಾವಣನನ್ನು ಕೊಂದು ವಿಭೀಷಣನಿಗೆ ಪಟ್ಟಗಟ್ಟಿದಂತೆ ನೀನು ಮಿಹಿರಕುಲನನ್ನು ವಧಿಸಿ ಬಕನಿಗೆ ಪಟ್ಟಗಟ್ಟಿದೆ ಬಾಲಾದಿತ್ಯ. ನೀನು ಭಾರತವೀರ–ನಿನ್ನಿಂದ ದೇಶಕ್ಕೆ ಗೌರವ.

ಬಾಲಾದಿತ್ಯ : (ಬಾಗಿ) ಎಲ್ಲ ಗುರುಕೃಪೆ.

ವಸುಬಂಧು : ಅಲ್ಲ, ಭಗವತಿ ಭಾರತಿಯ ಕೃಪೆ.

(ತೆರೆ)

ಭಗ್ನ ನೂಪುರ

('ಶಿಲಪ್ಪಧಿಕಾರಂ' ಮಹಾಕಾವ್ಯದ

ಮುಖ್ಯ ಕಥೆಯನ್ನಾಧರಿಸಿ ರೂಪಿಸಿದ ನಾಟಕ)

ಪಾತ್ರ ಪರಿಚಯ :

ಕೋವಲನ್–ಕಾವೇರಿ ಪಟ್ಟಣದ ಆಗರ್ಭ ಶ್ರೀಮಂತ

ಕನ್ನಗಿ–ಕೋವಲನ್ ಪತ್ನಿ

ದೇವಂದಿ–ಕನ್ನಗಿಯ ಗೆಳತಿ

ಚೋಳಚಕ್ರೇಶ್ವರ

ಮಾಧವಿ–ನೃತ್ಯ ನಿಪುಣೆ

ಮಾಧವಿಯ ಮಾತೆ

ಕೌಶಿಕನ್–ಮಾಧವಿಯ ಗುರು

ದಾಸಿ

ನಾವಿಕ

ಒಡೆಯ–ಕೋವಲನ್ ಪೂರ್ವಜ

ಕವುಂದಿ ಅಡಿಗಳು–ಜೈನ ಮುನಿಗಳು

ಮಾದರಿ–ಅವರ ಶಿಷ್ಯೆ

ಅಕ್ಕಸಾಲಿಗ–

ಪಾಂಡ್ಯ ಮಹಾರಾಜ–

ದ್ವಾರಪಾಲಕ, ರಾಜಸೇವಕ ಮೊದಲಾದವರು

ಭಗ್ನ ನೂಪುರ

ನೋಟ ೧

(ಕಾವೇರಿ ಪಟ್ಟಣದಲ್ಲಿ ಸಿರಿವಂತ ಕೋವಲನ್‌ರ ಭವ್ಯಭವನ. ಅಲ್ಲಿ ನೂಪುರ ಬಿದ್ದ ಸದ್ದು; ಅದನ್ನು ಗಡಿಬಿಡಿಯಿಂದ ಎತ್ತಿಕೊಂಡ ಕೈಗಳ ಬಳೆಗಳ ಉಲಿ ಗೆಜ್ಜೆಯ ಗಿಲಿಗಿಲಿಯೊಡನೆ ಸೇರಿ ಕೇಳಿಸುವುದು)

ಕನ್ನಗಿ : (ವ್ಯಾಕುಲಳಾಗಿ) ಇದೆಂಥ ಅಶುಭಾರಂಭ? ನನ್ನ ಕುಣಿತದ ಕಲಿಕೆ ಈ ಅಪಶಕುನದೊಂದಿಗೆ ಆರಂಭವಾಗಬೇಕೆ, ದೇವಂದಿ?

ದೇವಂದಿ : ಕನ್ನಗಿ, ಇಹಲೋಕದ ಕುಬೇರ – ಮಾನಾಯಿಗನ್ ಅವರ ಮಗಳಾಗಿ ಹುಟ್ಟಿ, ಇನ್ನೊಬ್ಬ ಧನಪತಿ – ಮಾಚಾತ್ತುವಾನರ ಮಗ, ಮನ್ಮಥ ಸದೃಶ ಕೋವಲನ್‌ರ ಕೈ ಹಿಡಿದು, ಸಂಪೂರ್ಣ ಸುಖಮಯ ಜೀವನವನ್ನು ಪಡೆದಿರುವ ನಿನಗೆ ಈ ನರ್ತನದ ಹುಚ್ಚೇಕೆ ಹಿಡಿಯಿತು?

ಕನ್ನಗಿ : ನಾನು ನಿಜವಾಗಿಯೂ ಭಾಗ್ಯಶಾಲಿಯೇ, ಗೆಳತಿ. ಇಲ್ಲದಿದ್ದರೆ ರೂಪ, ಬುದ್ಧಿ, ಪರಾಕ್ರಮ, ಸಿರಿಗಳಲ್ಲಿ ಸರಿಯಿಲ್ಲದ ಕೋವಲನ್‌ರ ಕೈ ಹಿಡಿಯುತ್ತಿರಲಿಲ್ಲ ನಾನು. ಅವರನ್ನು ಎಲ್ಲದಂದದಲ್ಲಿಯೂ ಆನಂದದಲ್ಲಿರಿಸಬೇಕೆಂಬುದೇ ನನ್ನ ಬಾಳಿನ ಗುರಿ. ಈ ಗುರಿಯಲ್ಲಿ ಸಫಲತೆಯನ್ನು ಪಡೆಯಲು ನರ್ತನವನ್ನೇಕೆ, ಏನೆಲ್ಲವನ್ನೂ ಕಲಿಯಲು ಸಿದ್ಧಳು ನಾನು!

ದೇವಂದಿ : ಕೋವಲನ್‌ರ ಹರುಷಕ್ಕೆ ನಿನ್ನ ಈ ಲೋಕೋತ್ತರ ಲಾವಣ್ಯ ಸಾಲದೆ? ನಿನ್ನ ಸದ್ಗುಣರಾಶಿ ಸಾಲದೆ? ನಿನ್ನ ಶುಭಮತಿ ಸಾಲದೆ? ಶೀಲದುನ್ನತಿ ಸಾಲದೆ? ಸರಿದೊರೆಯಿಲ್ಲದ ಪ್ರೀತಿ ಸಾಲದೆ? ಸುಮ್ಮನೆ ಏಕೆ ಸಂಶಯಪಡುತ್ತಿರುವಿ ನಿನ್ನಲ್ಲಿ ನೀನು? ಸುಖದ ಅತಿಯೂ ಅಸಹನೀಯವೇನು?

ಕನ್ನಗಿ : ನನ್ನ ಬಗೆಯ ಬೇಗುದಿ ಅದಲ್ಲ ಸಖಿ. ಕ್ಷಣಮಾತ್ರವೂ ನನ್ನನ್ನು ಅಗಲಿ ಇರಲಾರದ ಕೋವಲನ್ ಇಂದು ಇಂದ್ರೋತ್ಸವ ನೃತ್ಯ ನೋಡಲು ಹೋದರು......

ದೇವಂದಿ : (ಮಧ್ಯದಲ್ಲಿಯೇ ಮಾತು ಮುರಿದು) ಇದೊಂದು ಅಪರಾಧವೇನು? ವರ್ಷಕ್ಕೊಂದೇ ಸಲ ಇಂದ್ರೋತ್ಸವ ಈ ಕಾವೇರಿ ಪಟ್ಟಣದಲ್ಲಿ. ಚೈತ್ರ ಪೌರ್ಣಿಮೆಯಿಂದ ಪ್ರಾರಂಭವಾಗಿ ಇಪ್ಪತ್ತೆಂಟು ದಿನಗಳವರೆಗೆ ನಡೆಯುವ ಈ ಮಹೋತ್ಸವ ಸಾಮ್ರಾಟರಿಂದ ಸಾಮಾನ್ಯರವರೆಗೆ ಎಲ್ಲರೂ ಭಾಗವಹಿಸಬಹುದಾದ

ವೈಶಿಷ್ಟ್ಯಪೂರ್ಣ ಉತ್ಸವವಾಗಿದೆ. ಕೋವಲನ್ನರು ಮಾತ್ರ ಭಾಗವಹಿಸಬಾರದೇನು?

ಕನ್ನಗಿ : ನನ್ನನ್ನು ತಪ್ಪಾಗಿ ತಿಳಿದುಕೊಳ್ಳದಿರು ದೇವಂದಿ. ಅವರು ಭಾಗವಹಿಸಿದರೆಂದು ಕರುಬಿಲ್ಲ ನನಗೆ- ನಾನೂ ಕಲಾವಿದೆಯಾಗಲಿಲ್ಲವಲ್ಲ ಎಂಬ ಕೊರಗಿದೆ! ಕೋವಲನ್‌ರು ಕಲಾರಸಿಕರು. ಅವರ ಈ ಕಲಾಭಿರುಚಿಯು ನನ್ನಲ್ಲಿ ಕಲಾ ನೈಪುಣ್ಯವನ್ನು ನಿರೀಕ್ಷಿಸುತ್ತಿದೆಯೆಂದು ನನಗೆನಿಸುತ್ತಿದೆ. ಅವರ ಇನ್ನುಳಿದ ಎಲ್ಲ ಆಸೆಗಳನ್ನು ಪೂರ್ಣಗೊಳಿಸಬಲ್ಲ ನಾನು ಇದೊಂದರಲ್ಲಿ ಸೋಲನ್ನೊಪ್ಪಿ ಲಜ್ಜಿತಳಾಗಬೇಕಾಗಿದೆಯಲ್ಲ-ಎಂದು ತಳಮಳಿಸುತ್ತಲಿದ್ದೇನೆ.

ದೇವಂದಿ : ಮಲ್ಲಿಗೆಯು ನನಗೆ ಕನಕಾಂಬರ ಹೂವಿನ ಬಣ್ಣವಿಲ್ಲವಲ್ಲ, ಎಂದು ಕೊರಗುತ್ತದೆ; ಕನಕಾಂಬರ ನನಗೆ ಮಲ್ಲಿಗೆಯ ಕಂಪಿಲ್ಲವಲ್ಲ ಎಂದು ಕೊರಗುತ್ತದೆ; ಎರಡೂ ಇರುವ ಕಮಲ ನಾನು ಕೆಸರಿನ ಮೇಲೆಯೇ ನಿಂತಿರಬೇಕಲ್ಲ ಎಂದು ಕೊರಗುತ್ತದೆ! ಹೀಗೆ ಎಲ್ಲರ ಜೀವನದಲ್ಲಿಯೂ ಒಂದೊಂದು ಅರಕೆಯ ಕೊರತೆ ಅನಿವಾರ್ಯ. ಈ ಅರಕೆಯ ಅಳುಕೇ ಬಾಳಿಗೊಂದು ಬಣ್ಣಿಸಲಾಗದ ಸವಿ ನೋವಿನ ಸೊಗಸನ್ನು ನೀಡುತ್ತದೆ. ಇದಕ್ಕೇಕೆ ಕಳವಳಿಸುವಿ ಕೆಳದಿ? ನೀನೂ ನಿನ್ನ ಮನದನ್ನರೊಡನೆ ಇಂದ್ರೋತ್ಸವಕ್ಕೆ ಹೋಗಬೇಕಿತ್ತು. ನವವಧುವಿನಂತೆ ಅಲಂಕೃತವಾಗಿರುವ ಕಾವೇರೀ ಪಟ್ಟಣದ ಕೇರಿ ಕೇರಿಗಳಲ್ಲೆಲ್ಲ ಸೂರೆಯಾಗಿರುವ ಸೊಬಗನ್ನು ಸವಿದು, ಚೋಳ ಚಕ್ರೇಶ್ವರರ ಅರಮನೆಯ ಅದ್ಭುತರಮ್ಯ ನೃತ್ಯಮಂಟಪದಲ್ಲಿ ಈಗ ನಡೆದಿರಬಹುದಾದ ಕಲಾದೇವಿ ಮಾಧವಿಯ ಅಪ್ರತಿಮ ನೃತ್ಯವನ್ನು ನೋಡಿ ಬರಬೇಕಿತ್ತು.

ಕನ್ನಗಿ : ಕೋವಲನ್ ಕರೆದರೆನ್ನ ದೇವಂದಿ. ಮತ್ತೆ ಮತ್ತೆ ಕರೆದರು. "ಕನ್ನಗಿ, ನೀನು ಬರದಿದ್ದರೂ ನಾನು ಹೋಗಲೇ ಬೇಕು. ನೃತ್ಯೋತ್ಸವಕ್ಕೆ ಕಲಾಪ್ರೇಮಿಯಾದ ನಾನು ಹೋಗದಿರುವುದು ಕಷ್ಟ; ನಿನ್ನನ್ನುಳಿದು ಹೋಗುವುದೂ ಕರಕಷ್ಟ! ನನ್ನೊಡನೆ ನಡೆ, ನೀನು ಬಳಿಯಲ್ಲಿದ್ದರೆ ನನಗೆ ನೃತ್ಯಾವಲೋಕನ ಹರ್ಷ ನೂರ್ಮಡಿಸುವುದು" ಎಂದು ಪದೇ ಪದೇ ಕರೆದರು.

ದೇವಂದಿ : ನೀನು ಹೋಗಲಿಲ್ಲೇಕೆ ಹಾಗಾದರೆ?

ಕನ್ನಗಿ : ನಾನು ಹೋಗಿದ್ದರೆ ಮಾಧವಿಯ ನೃತ್ಯ ಮುಗಿವವರೆಗೂ, ಆಮೇಲೆಯೂ ನನ್ನಲ್ಲಿ ಒಳದನಿಯೊಂದು, "ನೀನು ಕಲಾವಿದೆಯಲ್ಲ, ನೀನು ಕಲಾವಿದೆಯಲ್ಲ" ಎಂದು ಕ್ಷಣ ಕ್ಷಣಕ್ಕೂ ನನ್ನನ್ನು ಹಂಗಿಸುತ್ತಿತ್ತು, ಭಂಗಿಸುತ್ತಿತ್ತು! ಅದನ್ನೆಂತು ತಾಳಿಕೊಳ್ಳುವುದು ಸಖಿ, ಎಂತು ತಾಳಿಕೊಳ್ಳುವುದು? ನಾನೂ ಕಲಾವಿದೆಯಾಗಲೇಬೇಕು, ನೃತ್ಯ ಮೋಹಿನಿಯಾಗಲೇಬೆಕು, ಕೋವಲನ್‌ರ ಕಲಾರಸಿಕತೆಯನ್ನು ತಣಿಸಲೇಬೇಕು.... ಇಲ್ಲದಿದ್ದರೆ ಎಲ್ಲ ವ್ಯರ್ಥ... ಬರಬಹುದು ಅನರ್ಥ.... (ಉದ್ವೇಗದಲ್ಲಿ ಅವಳ ಕೈಯೊಳಿದ್ದ ನೂಪುರ ಮತ್ತೆ ನೆಲಕ್ಕೆ ಬೀಳುವುದು.

"ಮತ್ತೆ ಅಪಶಕುನ ಸಖಿ" ಎಂದವಳು ಅದನ್ನೆತ್ತಿಕೊಳ್ಳುತ್ತಿರುವಂತೆಯೇ ಅತ್ತ ಮಾಧವಿಯ ನೃತ್ಯ. ಅವಳ ನೂಪುರ ಧ್ವನಿ; ಈ ಮುಂದೆ ಚಕ್ರಾಭಿನಯದ ಸಂಯೋಜನೆ; ನೃತ್ಯ ಮಂಟಪ, ಕನ್ನಗಿಯ ಮನೆಗಳ ನಡುವೆ ತ್ವರಿತಗತಿಯಿಂದ ಸುತ್ತುತ್ತದೆ ಕಥೆ)

ನೋಟ ೨

(ಚೋಳಚಕ್ರೇಶ್ವರನ ಅರಮನೆಯ ನೃತ್ಯ ಮಂಟಪದಲ್ಲಿ ನೃತ್ಯ ಗೀತ ವಾದ್ಯಕ್ಕನುಗುಣವಾಗಿ ಮಾಧವಿಯ ನೃತ್ಯ –

ನನ್ನ ನೂಪುರದ ಸ್ವರದಿ

ಸುರರು ಸೆರೆಯಾಗಿಹರು

ನನ್ನ ಗತಿಯಲಿ ರತಿಯ

ಶರಣಾಗತಿ

ನನ್ನ ನೋಟದಿ ಕಟ್ಟಿ

ಕೆಡಹಿಹೆನು ನರಕುಲವ

ನನ್ನ ಹಾಸಕೆ ದಾಸ

ಇಂದ್ರನ ಮತಿ;

(ಸಾಮ್ರಾಟನಿಂದ 'ಅತಿ ಸುಂದರ, ಅತ್ಯಮೋಘ ಎಂಬ ಉದ್ಗಾರ, ಮಾಧವಿಯಿಂದ 'ಪರಮಾನುಗ್ರಹ ಪ್ರಭು' ಎಂಬ ಉತ್ತರ, ಸಭಿಕರಿಂದ ಕರತಾಡನ, ಹರ್ಷೋದ್ಗಾರ, ಅತ್ತ ಕನ್ನಗಿಯ ಮನೆಯಲ್ಲಿ)

ನೋಟ ೩

ಕನ್ನಗಿ : ಏನೆಂದಿ ದೇವಂದಿ? ನನಗೆ ಕುಣಿಯಲು ಬರುವುದಿಲ್ಲವೆ? ಕೋವಲನ್ ಮೆಚ್ಚುವಂತೆ ಕುಣಿಯದಿದ್ದರೆ ನಾನು ಕನ್ನಗಿಯೇ ಅಲ್ಲ! ಕಟ್ಟು ನೂಪುರವ, ನೋಡು ನರ್ತನವ! (ಹಾಡುತ್ತ ನರ್ತಿಸಲು ಯತ್ನಿಸುವಳು)

ಕುಣಿವೆನಿದೋ ಕೋವಲನ್

ನನ್ನ ಕಲೆಯ ಪೆರ್ಮೆ ಕಾಣ್

ನನ್ನನಗಲ್ವ ಮತಿಯ ಮಾಣ್

ಮನೆಯಿದಿನ್ನು ಇಂದ್ರಸಭೆ

ನಾನೆ ಶಚಿ–ಕಲಾಪ್ರಭೆ!

(ತಪ್ಪು ತಪ್ಪು ಹೆಜ್ಜೆಯನ್ನಿಟ್ಟು ಧೊಪ್ಪನೆ ಕೆಡೆಯುವಳು. ನೂಪುರ ನೆಲಕ್ಕೆ ಅಪ್ಪಳಿಸಿ 'ಘಲ್' ಎಂಬ ಧ್ವನಿ ಹೊಮ್ಮುವುದು. ಅದೇ ಕ್ಷಣದಲ್ಲಿ ಅತ್ತ ಮಾಧವಿಯ ಮುಂದುವರಿದ ನೃತ್ಯ)

ನೋಟ ೪

ದೂರ ಸರಿ, ದೂರ ಸರಿ,

ಯತಿ ತತಿಯೆ, ವ್ರತಿ ತತಿಯೆ

ಮಾರ ಹೌಹಾರಿಹನು

ನನ್ನ ಮುಂದೆ;

ಯಾರಿಗಿದೆ ಎಂಟೆರ್ದೆಯು

ಸಾರಲಿಕೆ ಎನ್ನೆಡೆಗೆ

ಹರಿಗಳೂ ನನ್ನ ಬಳಿ

ಕುರಿಯ ಮಂದೆ!

(ಮತ್ತೆ ಕರತಾಡನ, ಹರ್ಷೋದ್ಗಾರ. ಇತ್ತ ಕನ್ನಗಿಯ ಮನೆಯಲ್ಲಿ ಕಳವಳದ ಸ್ವರ)

ನೋಟ ೫

ಕನ್ನಗಿ : ಇನ್ನೂ ಬರಲಿಲ್ಲ ಕೋವಲನ್; ನನ್ನ ಎದೆ ಅದಿರುತ್ತಿದೆ ದೇವಂದಿ, ನನಗೇಕೋ ಭಯವಾಗುತ್ತಿದೆ! ನಿಮಿಷಾರ್ಧದಷ್ಟೂ ನನ್ನನ್ನಗಲಬೇಕಾದರೆ ವಿಹ್ವಲರಾಗುತ್ತಿದ್ದ ನನ್ನ ಕೋವಲನ್, ಗಳಿಗೆಗಳು ಕಳೆದರೂ ಮನೆಗೆ ಮರಳಲಿಲ್ಲವಲ್ಲ! ಏನಾಗಿರಬಹುದು ಸಖಿ?

ದೇವಂದಿ : ಉತ್ಸವ ಮುಗಿಯದೆ ಮಧ್ಯದಲ್ಲಿಯೇ ಎದ್ದು ಬರುವರೇನೇ ಯಾರಾದರೂ? ಕೆಲವು ಗಳಿಗೆ ಬಿಟ್ಟಿರಲಾಗದ ನೀನು ಬಹಳ ದಿನ ಬಿಟ್ಟಿರುವ

ಪ್ರಸಂಗ ಬಂದರೆ ಏನು ಮಾಡುವಿ?

ಕನ್ನಗಿ : ಯಾಕೆ ಅಶುಭ ನುಡಿಯುತ್ತಿರುವೆಯೆ, ಗಾಯದ ಮೇಲೆ ಬರೆಯನ್ನೆಳೆಯಲು? ನೀನು ಸಖಿಯೋ ಅಶುಭ ಶಿಖಿಯೋ?

(ಅತ್ತ ಮಾಧವಿಯ ಮುಂದುವರಿದ ನೃತ್ಯ)

ನೋಟ ೬

ನನ್ನ ನೂಪುರ ಸ್ವರದಿ

ಸುರರು ಸೆರೆಯಾಗಿಹರು

ನನ್ನ ಗತಿಯಲಿ ರತಿಯ ಶರಣಾಗತಿ!

ಕೋವಲನ್ : (ತನ್ನಲ್ಲಿ) ರತಿಯ ಶರಣಾಗತಿಯಷ್ಟೇ ಅಲ್ಲ, ಸರ್ವ ಶರಣಾಗತಿ! (ಅಷ್ಟರಲ್ಲಿ ಮಾಧವಿಯು ಕೋವಲನ್‌ನನ್ನು ನೋಡುವಳು, ಕೋವಲನ್ ಮಾಧವಿಯನ್ನು ನೋಡುವನು. ಇಬ್ಬರ ದೃಷ್ಟಿ ಸಂಗಮವಾಗುವುದು. ಕೋವಲನ್ ಕಂಪಿತನಾಗಿ) ನೋಡಿದಳೆ ಮಾಧವಿಯೆನ್ನ? ಹೌದು, ನೋಡಿದಳು: ಯಾರೂ ಅರಿಯದಂತೆ ನೋಡಿದಳು. ನಾನೂ ಕದ್ದು ನೋಡಿದೆ ಅವಳನ್ನು; ಅವಳ ನೋಟ ನನ್ನ ನೋಟ ಒಂದಾದವು ಒಂದು ಕ್ಷಣ; ಎನಿತು ಹೃದಯಂಗಮ ಆ ದೃಷ್ಟಿ ಸಂಗಮ! ಶಶಿಕಿರಣಕ್ಕಿಂತ ಶೀತಲವಾದ ಅವಳ ನೋಟ ಹೃದಯವನ್ನೇ ದಹಿಸುತ್ತಿರುವ ದಳ್ಳುರಿಯನ್ನು ಹುಟ್ಟಿಸಿದುದು ಎಂಥ ಅಚ್ಚರಿ!

(ಅತ್ತ ಕನ್ನಗಿ ತನ್ನ ಮನೆಯಲ್ಲಿ)

ನೋಟ ೭

ಕನ್ನಗಿ : ನನ್ನ ತಾಳ್ಮೆಯ ಬಟ್ಟಲು ಬರಿದಾಗುತ್ತಿದೆ; ನನ್ನ ಸೈರಣೆಯ ಕಟ್ಟೆ ಒಡೆಯುತ್ತಿದೆ; ನಾನಿನ್ನು ತಾಳಲಾರೆ! ಇಷ್ಟು ಹೊತ್ತು ನಡೆಯಬೇಕೆ ಆ ಹಾಳು ನೃತ್ಯ?

ದೇವಂದಿ : ಇದುವರೆಗೆ ನೀನೇ ನೃತ್ಯ ಕಲಿಯಲು ಹೆಣಗಿದೆ; ಈಗ ಅದನ್ನೇ ಹಾಳು ಎಂದು ಬೀಗಳೆಯುತ್ತಿರುವಿಯಲ್ಲ ಕನಲಿದ ಕನ್ನಗಿ? ತುಸು ತಾಳಲು ಕಲಿ; ತಾಳದಿರೆ ಬಾಳುವಿಯೆಂತು? ನಿನಗೆ ತಾಳ್ಮೆಯ ಕಲಿಸಲೆಂದೇ ಇಂದ್ರೋತ್ಸವ ಬಂದಂತಿದೆ. ಅಲ್ಲವೆ?

ಕನ್ನಗಿ : ನನ್ನದೆಯನ್ನು ಸುಡುತ್ತಿರುವ ಬೆಂಕಿಯ ಒಂದೇ ಒಂದು ಕಿಡಿ ನಿನ್ನೆದೆಗೆ ತಾಕಿದ್ದರೆ ನೀನಿಂತು ಮಾತನಾಡುತ್ತಿರಲಿಲ್ಲ ದೇವಂದಿ!

(ಅತ್ತ ಮಾಧವಿಯ ಮುಂದುವರೆದ ನೃತ್ಯ)

ನೋಟ ೮

ನನ್ನ ನೋಟದಿ ಕಟ್ಟಿ

ಕೆಡಹಿಹೆನು ನರಕುಲವ

ನನ್ನ ಹಾಸಕೆ ದಾಸ

ಇಂದ್ರನ ಮತಿ!

(ನೃತ್ಯ ನಿಲ್ಲುವುದು. ಕರತಾಡನ, ಹರ್ಷೋದ್ಗಾರ)

ಚೋಳ ಚಕ್ರವರ್ತಿ : ಸಭಾಸದರೆ, ಇದುವರೆಗಿನ ಇಂದ್ರೋತ್ಸವಗಳಲ್ಲಿ ಈ ಸಲದ ಇಂದ್ರೋತ್ಸವವು ಅಭೂತಪೂರ್ವವಾದುದೆಂದೇ ಹೇಳಬೇಕು. ಇದಕ್ಕೆ ಕಾರಣ ಕಲಾದೇವಿ ಮಾಧವಿಯ ಅತ್ಯಮೋಘ ನೃತ್ಯ; (ಪ್ರಚಂಡ ಕರತಾಡನ) ಈ ನೃತ್ಯ ಮಂಟಪದಲ್ಲಿ ನಡೆದ ನೃತ್ಯಗಳಿಗೆ ಲೆಕ್ಕವಿಲ್ಲ, ಕುಣಿದ ನೃತ್ಯ ಕಲಾವಿದರಿಗೆ ಲೆಕ್ಕವಿಲ್ಲ. ಆದರೆ ಮಾಧವಿಯ ಇಂದಿನ ನೃತ್ಯ, ನೃತ್ಯಕಲೆಗೇ ಬೆಲೆಯನ್ನು ತಂದ ನೃತ್ಯ! (ಮತ್ತೆ ಉತ್ಸಾಹದ ಕರತಾಡನ) ಕಲೆಗೆ ಬೆಲೆ ಕಟ್ಟಿದವರಿಲ್ಲ. ಹಾಗೆಂದು ಪುರಸ್ಕಾರವೀಯದಿರುವುದೂ ತರವಲ್ಲ. ಕಲೆಗೆ ತಕ್ಕ ಪುರಸ್ಕಾರವೀಯುವುದು ರಾಜ-ಪ್ರಜೆಗಳಿಗಿಬ್ಬರಿಗೂ ಕರ್ತವ್ಯ. ಆದುದರಿಂದ ಚೋಳ ಸಾಮ್ರಾಜ್ಯದ, ಅದೇಕೆ, ಇಡಿಯ ಭರತಖಂಡದ ಈ ಶ್ರೇಷ್ಠತಮ ನೃತ್ಯ ಕಲಾವಿದೆಗೆ ಈ ಸಲದ ಇಂದ್ರೋತ್ಸವದ ಸವಿನೆನಪಿಗಾಗಿ ಒಂದು ಸಾವಿರದ ಎಂಟು ಸುವರ್ಣ ನಾಣ್ಯಗಳನ್ನೂ, ಈ ದುರ್ಲಭ ಮಾಣಿಕ್ಯಗಳ ನವಹಾರವನ್ನೂ ಬಹುಮಾನವಾಗಿ ನೀಡಿದ್ದೇವೆ. (ಮತ್ತೆ ಅತ್ಯುತ್ಸಾಹದ ಕರತಾಡನ)

ಮಾಧವಿ : ಪರಮಾನುಗ್ರಹವಿದು ಪ್ರಭುವರ: ಆಜನ್ಮ ಋಣಿ ನಾನು ಚೋಳ ಚಕ್ರೇಶ್ವರರಿಗೆ! ಅನಂತ ವಂದನೆಗಳನ್ನೂ ಅರ್ಪಿಸುವೆ. ನಿರ್ಗಮಿಸಲು ಅಪ್ಪಣೆಯಾಗಬೇಕು.

ಚೋಳ ಚಕ್ರವರ್ತಿ: ಎಲ್ಲರೂ ನಿರ್ಗಮಿಸೋಣ. ಇಲ್ಲಿಗೆ ಇಂದಿನ ಕಾರ್ಯಕ್ರಮವೇ ಮುಗಿಯಿತು. ಮಾಧವಿಯ ನೃತ್ಯ ನೋಡಿದ ಮೇಲೆ ಮತ್ತೇನನ್ನು ನೋಡುವುದು?

(ಸಭಿಕರು, "ಚೋಳ ಚಕ್ರೇಶ್ವರರಿಗೆ ಜಯವಾಗಲಿ;" "ಚೋಳ ಸಾಮ್ರಾಜ್ಯ ಸ್ಥಿರವಾಗಲಿ" ಎಂದು ಉದ್ಘೋಷಿಸುತ್ತಿರುವಂತೆ ಸಭೆಯ ವಿಸರ್ಜನೆಯ ಗಡಿಬಿಡಿ ಕೇಳಿಸುವುದು. ಕೋವಲನ್ ಮಾಧವಿ ಹೋದ ಹಾದಿಯತ್ತ ನೋಡುತ್ತ ನಿಂತಿರುವನು)

ಕೋವಲನ್ : (ಉಸಿರ್ಗರೆದು) ಹೋದಳು, ಮಾಧವಿ; ಕಲಾದೇವಿ ಮಾಧವಿ, ತ್ರಿಭುವನ ಮೋಹಿನಿ ಮಾಧವಿ, ಸುರಸುಂದರಿ ಮಾಧವಿ..... ಮಾಧವಿ.... ಮಾಧವಿ

(ಅತ್ತ ಕನ್ನಗಿಯ ಮನೆಯಲ್ಲಿ)

ನೋಟ ೯

ಕನ್ನಗಿ : ನಿನ್ನ ಕನ್ನಗಿ ಕಾದಿರುವಳು ಕೋವಲನ್, ಬೇಗ ಬಾ ಕೋವಲನ್, ಚೆಲುವರಲ್ಲಿ ಚೆಲುವ ಕೋವಲನ್, ವೀರರಲ್ಲಿ ವೀರ ಕೋವಲನ್.... ಕೋವಲನ್.... ಕೋವಲನ್......;

(ತೆರೆಯಾಚೆ)

ಕೋವಲನ್ : ಮಾಧವಿ;

ಇತ್ತ ಕನ್ನಗಿ : ಕೋವಲನ್ ;

ಕೋವಲನ್ : ಮಾಧವಿ;

ಕನ್ನಗಿ : ಕೋವಲನ್; (ಹೀಗೆ 'ಮಾಧವಿ', 'ಕೋವಲನ್' ಎಂಬ ಅವರೀರ್ವರ ಕೂಗುಗಳು ಒಂದನ್ನೊಂದು ತಾಗಿ, ಸಾಗಿ ನಿಶ್ಯಬ್ದದ ಅಬ್ಧಿಯನ್ನು ಸೇರುತ್ತಿರುವಂತೆ ತುಸು ಹೊತ್ತು ತೋರಿ ಆಮೇಲೆ ನೀರವತೆ ನೆಲೆಸುವುದು. ಅತ್ತ ಮಾಧವಿಯ ಮನೆಯಲ್ಲಿ ಮಂತ್ರಾಲೋಚನೆ ಪ್ರಾರಂಭವಾಗುವುದು)

ನೋಟ ೧೦

(ಅದೇ ನಗರದ ಇನ್ನೊಂದು ಭಾಗದಲ್ಲಿ ಮಾಧವಿಯ ಮನೆ)

ಮಾಧವಿಯ ಮಾತೆ : ನಮ್ಮ ಮನೆಗೆ ಭಾಗ್ಯಲಕ್ಷ್ಮಿಯಾಗಿ ಬಂದೆ ಮಗಳೆ; ಇಷ್ಟೊಂದು ಅಷ್ಟೈಶ್ವರ್ಯವನ್ನು ಒಮ್ಮೆಗೆ ತಂದೆ, ಕುಲದ ಕೀರ್ತಿಪತಾಕೆಯಾಗಿ ನಿಂದೆ.

ಮಾಧವಿ : ನೀನಿಲ್ಲದಿದ್ದರೆ ನಾನೆಲ್ಲಿರುತ್ತಿದ್ದೆ ತಾಯೆ; ನಿನ್ನ ಹರಕೆಯ ಫಲ, ನಿನ್ನ ಹಸಾದ!

ಕೌಶಿಕನ್ : ಇದಿಲ್ಲಿಗೆ ನಿಲ್ಲಲಿ ಮಾಧವೀ ಮಾತೆ, ಇನ್ನು ಮುಂದಿನ ಮಾರ್ಗ ಯೋಚಿಸಬೇಕು. ಮಾಧವಿಯು ಇನ್ನುಮೇಲೂ ಅವಿವಾಹಿತಳಾಗಿ ಮುಂದುವರೆಯುವುದು ಅಪಾಯಕಾರಿ! ಹಲವು ಬಲಶಾಲಿಗಳು ಏಕಕಾಲಕ್ಕೆ ಇವಳ ಕೈ ಹಿಡಿಯಲು ಮುಂದೆ ಬಂದರೆಂದರೆ ನಿಶ್ಚಯವಾಗಿ ಅಪಾಯಕ್ಕೆ ಈಡಾಗುವೆವು. ಆದುದರಿಂದ ಈ ಅಮೂಲ್ಯರತ್ನವು ಆದಷ್ಟು ಬೇಗ ತನ್ನನ್ನು ರಕ್ಷಿಸಬಲ್ಲ ಬಲ್ಲಿದನೊಬ್ಬರ ಭವನ ಸೇರಬೇಕು.

ಮಾಧವಿ : ಪೂಜ್ಯ ಕೌಶಿಕನ್, ತಮಗೆ ತಾಂಬೂಲವನ್ನು ತರುವುದನ್ನೇ ಮರೆತುಬಿಟ್ಟೆ ; ಬೇಗ ಹೋಗಿ ತಾಂಬೂಲ ತಂದು ಅರ್ಪಿಸುವೆನು. (ಹೋಗುವಳು)

ಕೌಶಿಕನ್ : (ನಸುನಕ್ಕು) ಮದುವೆಯ ಪ್ರಸ್ತಾಪ ಎತ್ತುತ್ತಲೆ ಮರೆಯಾದಳು ಮಾಧವಿ! ಇದು ಅವಳ ಅಪರೋಕ್ಷ ಅನುಮೋದನೆ ನನ್ನ ಸಲಹೆಗೆ.

ಮಾತೆ : ಅನುರೂಪನಾದವನು ಬೇಕು, ಐಶ್ವರ್ಯವಂತನು ಬೇಕು, ಬಲಶಾಲಿಯಾದವನು ಬೇಕು–ಇಂಥವನನ್ನು ಎಲ್ಲಿ, ಯಾರು ಹುಡುಕಬೇಕು ಪೂಜ್ಯರೆ?

ಕೌಶಿಕನ್ : ನಾನಿದಕ್ಕೆ ಉಪಾಯ ಹುಡುಕಿದ್ದೇನೆ; ಸಾಮ್ರಾಟರಿತ್ತ ಈ ಮಾಣಿಕ್ಯ ಮಾಲೆಯನ್ನು ಮಾರಾಟಕ್ಕೆ ಕಳಿಸಬೇಕು. ಯಾರು ಇದರ ಎರಡರಷ್ಟು ಬೆಲೆ ಕೊಟ್ಟು ಕೊಳ್ಳುವರೋ ಅವರಿಗೇ ಮಾಧವಿಯನ್ನು ಕೊಟ್ಟು ಮದುವೆ ಮಾಡಲಾಗುವುದು–ಎಂದು ಘೋಷಿಸಬೇಕು; ಕೊಂಡವರಿಗೆ ಮಾಧವಿಯನ್ನು ಒಪ್ಪಿಸಿ ನಾವು ನಿಶ್ಚಿಂತರಾಗಬೇಕು.

ಮಾತೆ : ಈ ಹಾರದ ಬೆಲೆಯೋ ಅತ್ಯಧಿಕ. ಅದರ ಎರಡರಷ್ಟನ್ನು ಕೊಟ್ಟು ಯಾರು ಕೊಳ್ಳಬೇಕಿದನ್ನು ಪೂಜ್ಯರೆ? ಯಾರು ಮಾರುವವರಿದನು?

ದಾಸಿ : ನಾನು ಮಾರಿಕೊಂಡು ಬರುವೆ ಒಡತಿ. ಮಾರಿಕೊಂಡು ಬಂದರೆ ಬಹುಮಾನ ಕೊಡುವಿರಷ್ಟೆ?

ಮಾತೆ : ಧಾರಾಳವಾಗಿ ಕೊಡುವೆ. ನಿನ್ನ ಚಾತುರ್ಯದ ಪರೀಕ್ಷೆಯಾಗಲಿ. ಹೊರಡು.

(ಅವಳು "ಬಿಟ್ಟರೆ ಸಿಕ್ಕದ ಹಾರ, ಮಾಣಿಕ್ಯ ಹಾರ, ಇದರ ಎರಡರಷ್ಟು ಬೆಲೆ ಕೊಟ್ಟು ಕೊಳ್ಳುವವರಿಗೆ ಮಾಧವಿಯನ್ನು ಕೊಟ್ಟು ಮದುವೆ" ಎಂದು ಕೂಗುತ್ತ ಹೊರಡುವಳು. ಅತ್ತ ಕನ್ನಗಿಯ ಮನೆಯಲ್ಲಿ)

ನೋಟ ೧೧

ದೇವಂದಿ : ಕನ್ನಗಿ, ಆಭರಣಗಳನ್ನು ಬಿಚ್ಚಿ ಬಿಸಾಡಿದೆ, ಪರಿಮಳ ದ್ರವ್ಯಗಳನ್ನು ಆಚೆ ಕಳಿಸಿಬಿಟ್ಟೆ, ಬಿಡುಮುಡಿಯ ಬಿಟ್ಟೆ, ಮಾಸಿದ ವಸನ ತೊಟ್ಟೆ, ಅತ್ತು ಅತ್ತು ರಕ್ತ ಹರಿಸಿದೆ ಕಂಗಳಿಂದ. ಇದೆಲ್ಲವನ್ನೂ ನೋಡಿ ಸುಮ್ಮನಿದ್ದೆ. ಆದರೆ ನೀನು ಮೀಯುವುದನ್ನೇ ಬಿಟ್ಟರೆ, ಉಣ್ಣುವುದನ್ನೇ ಬಿಟ್ಟರೆ, ನಿದ್ರಿಸುವುದನ್ನೇ ಬಿಟ್ಟರೆ ನೋಡಿ ತಡೆಯಲಾರೆ ಗೆಳತಿ, ತಡೆಯಲಾರೆ! ಹೀಗಾದರೆ ಹೇಗೆ ಬದುಕುವಿ ನೀನು?

ಕನ್ನಗಿ : ಯಾರಿಗಾಗಿ ಬದುಕಲಿ ದೇವಂದಿ?

ದೇವಂದಿ : ಯಾರಿಗಾಗಿ? ನಿನ್ನ ಮುಪ್ಪಿನ ತಂದೆತಾಯಿಗಳಿಗಾಗಿ, ನನಗಾಗಿ, ನಾವಾರೂ ನೀನು ಬದುಕಲು ತಕ್ಕವರಲ್ಲವೇನು? ಆ ಕೃತಘ್ನ ಕೋವಲನ್ ಒಬ್ಬನೇ ತಕ್ಕವನೇನು?

ಕನ್ನಗಿ : ದೇವಂದಿ, ನಿನಗೆ ಕೈಮುಗಿದು ಕೇಳಿಕೊಳ್ಳುತ್ತೇನೆ. ನನ್ನ ದೈವವನ್ನು ಶಪಿಸು, ನನ್ನನ್ನು ದೂಷಿಸು, ದಯವಿಟ್ಟು ಕೋವಲನ್ ಬಗ್ಗೆ ಬಿರುನುಡಿಗಳನ್ನಾಡಬೇಡ; ಅವರನ್ನು ಹೀಗಳೆದು ಮಾತನಾಡಬೇಡ. ಅವರ ಬಗ್ಗೆ ಒಂದೇ ಒಂದು ಕೆಟ್ಟ ಮಾತನ್ನೂ ಈ ಕಿವಿಗಳಿಗೆ ಕೇಳಿಸಬೇಡ. ಅವರೆನ್ನ ಅಂತರಂಗದ ಆರಾಧ್ಯ!

ದೇವಂದಿ : ಕನ್ನಗಿ, ನೀನು ಮನುಷ್ಯಮಾತ್ರಳಲ್ಲ–ದೇವತೆ!

ಕನ್ನಗಿ : ಅಲ್ಲ ದೇವಂದಿ, ನನ್ನ ಪತಿಯ ಪ್ರೀತಿಯನ್ನು ಉಳಿಸಿಕೊಳ್ಳಲಾಗದ ಪಾಪಿ ನಾನು!

(ಇತ್ತ ಮಾಧವಿಯ ಮನೆಯಲ್ಲಿ ಸಂಭ್ರಮವೋ ಸಂಭ್ರಮ)

ನೋಟ ೧೨

ದಾಸಿ : (ಆಢ್ಯತೆಯಿಂದ) ನುಡಿದಂತೆ ನಡೆದು ತೋರಿದ್ದೇನೆ ಒಡತಿ; ಇದು ನೋಡಿ ಚಿನ್ನರನ್ನದ ರಾಶಿ ನಿಮ್ಮ ಮನೆಯ ಮುಂದೆ!

ಮಾತೆ : ಅಬ್ಬಾ, ಇಷ್ಟು, ಬೆಲೆ ಬಂದಿತೆ ಆ ಒಂದು ಹಾರಕ್ಕೆ? ಯಾರು ಕೊಂಡರು ಅದನ್ನು?

ದಾಸಿ : ಕೇಳಿ ನಿಮಗೆ, ನಿಮಗಿಂತ ಮಾಧವೀ ದೇವಿಗೆ ಹಿಡಿಸಲಾರದಷ್ಟು ಹಿಗ್ಗಾಗುವುದು.

ಮಾತೆ : (ಉತ್ಸುಕತೆಯಿಂದ) ಯಾರವರು?

ಮಾಧವಿ : (ಇನ್ನೂ ಉತ್ಸುಕತೆಯಿಂದ) ಯಾರವರು?

ದಾಸಿ : ಮೊದಲು ನನ್ನ ಬಹುಮಾನ ತೀರ್ಮಾನವಾಗಲಿ.

ಮಾಧವಿ : ಕೇಳಿದಷ್ಟು ಕೊಡುವೆ ಬೇಗ ಹೇಳೆ.

ದಾಸಿ : ಕೋವಲನ್

ಮಾಧವಿ : (ಹಿಗ್ಗಿ) ಕೋವಲನ್?

ಕೋವಲನ್ : (ಪ್ರವೇಶಿಸಿ) ಹೌದು ಕೋವಲನ್; ಒಪ್ಪಿಗೆಯೆ ಇವನ ಪಾಣಿಗ್ರಹಣಕ್ಕೆ?

ಮಾಧವಿ : (ಮಣಿದು) ಮನದಿನಿಯನಿಗೆ ಅರ್ಪಿತವೀ ತನು, ಈ ಮನ ಪ್ರಾಣ-ಯೌವನ-ಜೀವನ!

ಕೋವಲನ್ : (ನವಹಾರವನ್ನು ಮಾಧವಿಗೆ ತೊಡಿಸುತ್ತ) ಅರ್ಪಿತವೀ ನವಹಾರ ನನ್ನ ನವವಧುವಿಗೆ!

ಮಾಧವಿ: ಎರಡರಷ್ಟು ಬೆಲೆ ಕೊಟ್ಟು ಕೊಂಡು ಮತ್ತೆ ಮಾಧವಿಗೆ ಕೊಟ್ಟುಬಿಟ್ಟಿರಾ ನವಹಾರವನ್ನು, ಸಾಮ್ರಾಟರಿತ್ತ ಮಾಣಿಕ್ಯಮಾಲೆಯನ್ನು?

ಕೋವಲನ್ : ಏನನ್ನಿತ್ತರೂ ಕಡಮೆಯೇ ನಿಮ್ಮ ಮಾಧವಿಗೆ!

ಮಾಧವಿ : ನಿಮ್ಮ ಮಾಧವಿಯಲ್ಲವೆ?

ಕೋವಲನ್ : ನನ್ನ ಮಾಧವಿಯೂ ಹೌದು; ನನ್ನ ಮಾಧವಿ, ನನ್ನೊಲವಿನ ರಾಣಿ ಮಾಧವಿ!

ಮಾಧವಿ : ಧನ್ಯಳಾದೆ, ನನ್ನ ದೇವ!

ಕೋವಲನ್ : ನಾನೂ ಧನ್ಯನಾದೆ, ನನ್ನ ದೇವಿ.

ಮಾಧವಿ : ದಾಸಿ, ನೋಡುತ್ತ ನಿಂತೆಯೇಕೆ? ನಿನ್ನ ಕೆಲಸಕ್ಕೆ ನಡೆ.

ದಾಸಿ : ನನ್ನ ಬಹುಮಾನವನ್ನು ಕೊಡಿ ಒಡತಿ, ಅದರ ಸುದ್ದಿಯನ್ನೇ ಎತ್ತಲೊಲ್ಲಿರಲ್ಲ!

ಮಾತೆ : ಹೌದಲ್ಲ, ಮರೆತೇಬಿಟ್ಟೆವು ನಿನ್ನ ಬಹುಮಾನದ ವಿಷಯವನ್ನು. ನನ್ನೊಡನೆ ಬಾ, ನೀನು ಹೊರಲಾರದಷ್ಟು ಕೊಟ್ಟು ಕಳಿಸುತ್ತೇನೆ;

ದಾಸಿ : (ಹಿಗ್ಗಿ) ಹೊರಲು ನನ್ನ ಗಂಡನನ್ನೂ ಕರೆದುತರಲೆ, ಒಡತಿ?

ಮಾತೆ : ಗಂಡನೊಬ್ಬನನ್ನೇ ಅಲ್ಲ, ಮಕ್ಕಳು ಮರಿಗಳನ್ನು ಕರೆದುಕೊಂಡು ಬಾ. ಎಷ್ಟು ಕೊಟ್ಟರೂ ಸವೆಯದಷ್ಟು ಸಂಪತ್ತು ಮನೆಗೆ ಬಂದಿರುವಾಗ ನಿನ್ನಂಥ ಪ್ರಾಮಾಣಿಕ ದಾಸಿಗೆ ಕೊಡದಿರುವೆನೆ? ನಡೆ ನನ್ನೊಡನೆ; (ಇಬ್ಬರೂ ಹೋಗುವರು)

ಕೋವಲನ್: ಇವರೇಕೆ ಹೊರಟುಹೋದರು ಮಾಧವಿ-ನಮ್ಮಿಬ್ಬರನ್ನೇ ಇಲ್ಲಿ ಬಿಟ್ಟು?

ಮಾಧವಿ : (ನಗುತ್ತ) ನನಗೇನು ಗೊತ್ತು?

ಕೋವಲನ್: ನೋಟದ ಬಲೆ ಬೀಸಿ ಈ ಮೀನನ್ನು ಹಿಡಿವುದೊಂದೇ ನಿನಗೆ ಗೊತ್ತು, ಅಲ್ಲವೆ?

ಮಾಧವಿ : ನನ್ನ ನಯನಗಳಲ್ಲಿಯೇ ಮೀನಿರುವಾಗ ನಾನೇಕೆ ಮೀನು ಹಿಡಿಯಲು ಹೋಗಲಿ?

ಕೋವಲನ್: ಹಿರಿಮೀನು ಕಿರಿಮೀನನ್ನು ನುಂಗುವುದನ್ನು ಕೇಳಿದ್ದೆ. ಆದರೆ ಈಗ ಈ ಕಿರಿಮೀನುಗಳೇ ಈ ಹಿರಿಮೀನನ್ನು ಕಬಳಿಸಿದುದ ಕಂಡೆ.

(ಇಬ್ಬರೂ ನಗುವರು)

ಮಾಧವಿ : ಎದುರಿನ ಕನ್ನಡಿಯಲ್ಲಿ ಇಬ್ಬರೂ ನಕ್ಕುದನ್ನು ನೋಡಿದಿರಾ?

ಕೋವಲನ್: ನಕ್ಕುದನ್ನು ನೋಡಿದೆ; ಇನ್ನು ಅಪ್ಪುವುದನ್ನು, ಮುತ್ತಿಡುವುದನ್ನು ನೋಡುವಾಸೆ!

ಮಾಧವಿ : ನಾನು ನಿಮ್ಮ ಕೈಗೆ ಸಿಕ್ಕರೆ ತಾನೆ?

ಕೋವಲನ್ : ನೀನು ಸಿಕ್ಕದಿದ್ದರೂ ಚಿಂತೆಯಿಲ್ಲ, ಆ ಕನ್ನಡಿಯಲ್ಲಿ ಕಾಣಿಸುವವಳು ಬೇಕೇ ಬೇಕು.

ಮಾಧವಿ : (ನಗುತ್ತಾ) ಹಾಗಾದರೆ ಅವಳೊಡನೇ ಇದ್ದು ಬಿಡಿರಿ. ನಾನು ಹೊರಟೆ. (ಓಡುವಳು, ಕೋವಲನ್ "ನಾನೂ ಬರುವೆ ಬೆಂಬತ್ತಿ" ಎನ್ನುತ್ತ ಹಿಂಬಾಲಿಸುವನು. ಸ್ವಲ್ಪ ಹೊತ್ತು ಓಡಾಟದ ಸೌಂಡ್ ಎಫೆಕ್ಟ್ . ಆಮೇಲೆ ಮಾಧವಿ) ನನ್ನನ್ನು ಬಿಟ್ಟುಕೊಡಿ-ದಮ್ಮಯ್ಯ ಬಿಟ್ಟುಬಿಡಿ, ದಾಸಿ ಬರುತ್ತಿರುವ ಹಾಗಿದೆ;

ಕೋವಲನ್ : ದಾಸಿಗೇನು ಕೆಲಸವಿಲ್ಲಿ?

ದಾಸಿ : (ಧಾವಿಸಿ) ಮಾಧವೀದೇವಿಯವರೆ, ಇಲ್ಲಿ ನೋಡಿ ನನ್ನ ಬಹುಮಾನಗಳನ್ನು, ನನ್ನ ಬಡತನ ತೊಲಗಿಹೋಯಿತಿಂದು!

ಕೋವಲನ್ : ನೀನೂ ತೊಲಗೆ, ಇಲ್ಲಿಂದ;

ದಾಸಿ : ಹೊರಟುಬಿಟ್ಟೆ ಒಡೆಯ; ಗುಬ್ಬಿಯ ಮೇಲೇಕೆ ನಿಮ್ಮ ಬ್ರಹ್ಮಾಸ್ತ್ರ? (ಹೋಗುವಳು)

ಕೋವಲನ್ : ಈಗ ನಿಷ್ಕಂಟಕವಾಯಿತು ನಲ್ಮೆಯ ದಾರಿ!

ಮಾಧವಿ : ಅಮ್ಮ ಬರುತ್ತಿರುವಂತಿದೆ;

ಕೋವಲನ್ : ಯಾರೂ ಬರದಂತೆ ಇದೊ, ಬಾಗಿಲ ಮುಚ್ಚಿ ಬಿಡುವೆ! (ಬಾಗಿಲು ಮುಚ್ಚಿದ ಸದ್ದು. ಇತ್ತ ಕನ್ನಗಿಯ ಮನೆಯಲ್ಲಿ)

ನೋಟ ೧೩

(ಕ್ಷೀಣ ದೀನ ಮುದಹೀನ ಕನ್ನಗಿ, ಚಿಂತಾಕುಲ ದೇವಂದಿಯರು ಕಾಣಿಸುತ್ತಾರೆ ಕಾಣಿಸುತ್ತಾರೆ)

ದೇವಂದಿ : ದಿನದಿನಕ್ಕೂ ಕ್ಷೀಣವಾಗುತ್ತ ಹೊರಟೆ, ಕನ್ನಗಿ! ನಿನ್ನ ಮುಂಗೈ ಬಳೆಗಳು ತೋಳ ಬಳೆಗಳಾಗಿ ಬಿಟ್ಟಿವೆ! ಕೃಶವಾಗುವುದಕ್ಕೂ ಮಿತಿಯಿಲ್ಲವೆ? ಹೀಗಾದರೆ ಎಷ್ಟು ದಿನ ಜೀವ ಹಿಡಿದಿರಬಲ್ಲೆ?

ಕನ್ನಗಿ : ಅವರಿರುವವರೆಗೆ! ಅವರಿಂದ ನಾನು ಪಡೆದುದು ಒಲವಿನ ಅಮೃತವನ್ನು ದೇವಂದಿ; ಅಮೃತ-ನೀರಲ್ಲ! ಅದರ ಸಂಗೋಪನ ಶಕ್ತಿಯಲ್ಲಿ, ಸಂಜೀವಿನಿ ಶಕ್ತಿಯಲ್ಲಿ ಅವಿಶ್ವಾಸ ಬೇಡ!

ದೇವಂದಿ : ನಿನಗೆ ನಾಲ್ಕು ದಿನ ಅಮೃತ ಕುಡಿಸಿ, ಆಮೇಲೆ ನಂಜುಣಿಸುತ್ತಿರುವರಲ್ಲ ಆ ಕಲ್ಲೆದೆಯ ಕೋವಲನ್!

ಕನ್ನಗಿ : ಮತ್ತೆ ಮತ್ತೆ ಕೈಮುಗಿವೆ ನಿನಗೆ ಕೆಳದಿ, ಅವರ ಬಗ್ಗೆ ಬಿರುನುಡಿಗಳನ್ನು ಕೇಳಿಸದಿರು ಈ ಕಿವಿಗಳಿಗೆ! ನಾನು ಪಡೆದುಕೊಂಡು ಬಂದದ್ದೇ ಇಷ್ಟೆಂದು ತೋರುತ್ತಿದೆ. ಅವರೇನು ಮಾಡುವರಿದಕ್ಕೆ? ಮಾಧವಿಯೊಡನೆ ಆನಂದದಿಂದಿರುವರೆಂಬ ಸಂತಸವೇ ನನ್ನನ್ನು ಪೊರೆಯುತ್ತಿದೆ!

ದೇವಂದಿ : ನಿನ್ನನ್ನದು ಪೊರೆಯುತ್ತಿದೆ, ನನ್ನನ್ನು ಕೊರೆಯುತ್ತಿದೆ!

ಕನ್ನಗಿ : ನೀನೆ ಹೇಳಿರಲಿಲ್ಲವೆ ಹಿಂದೆ-ಒಂದಿಲ್ಲೊಂದು ಅರಕೆಯ ಕೊರತೆ ಅನಿವಾರ್ಯವೆಂದು?

ದೇವಂದಿ : ನಾನು ನಿರುತ್ತರಳಾದೆ ಸಖಿ! ನಿನ್ನ ದುಗುಡದ ದಿನಗಳು ಮುಗಿದು ಸೊಗ ಮೊಗತೋರಲಿ-ಎಂದು ಮಣಿಮೇಖಲಾದೇವಿಯನ್ನು ನಿತ್ಯ ಪ್ರಾರ್ಥಿಸುವೆ. ಇನ್ನೇನ ಮಾಡಬಲ್ಲೆ?

ಕನ್ನಗಿ : ಇದೇನು ಸಾಮಾನ್ಯ ಸಹಾಯವೇ ಸಖಿ? ನಿನಗೆ ಆಜನ್ಮಋಣಿ ನಾನು!

ದೇವಂದಿ : ಹೀಗೆಲ್ಲ ಮಾತನಾಡಿ ನನ್ನ ಹತ್ತಿಕ್ಕಿದ ದುಃಖವನ್ನು ಉಕ್ಕಿಸದಿರು ಕನ್ನಗಿ–ಉಕ್ಕಿಸದಿರು. (ಬಿಕ್ಕುವಳು, ಅದೇ ಸಮಯಕ್ಕೆ ಮಾಧವಿಯ ಮನೆಯಲ್ಲಿ ಹೆರಿಗೆಯಾಗಿ ಮಾಧವಿಯ ಹೆಣ್ಣು ಶಿಶು ಅಳುವ ಸ್ವರ)

ನೋಟ ೧೪

ದಾಸಿ : ಒಡತಿ, ಒಡತಿ–ಹೆಣ್ಣುಮಗು ಹುಟ್ಟಿತು; ನೀವು ಅಜ್ಜಿಯಾದಿರಿ. ನನಗೆ ಬಹುಮಾನ......;

ಮಾಧವಿಯ ಮಾತೆ : ಎಲ್ಲಿಗಾದರೂ ಓಡಿ ಹೋಗುವುದೇನೇ ನಿನ್ನ ಬಹುಮಾನ? ಮಗುವಿನ ಮುಖವನ್ನಾದರೂ ನೋಡಗೊಡು. (ನೋಡಿ) ಏನು ಮುದ್ದಾಗಿದೆಯೇ ತಾಯಿ, ಈ ಮಗುವಿನ ಮೊಗ!

ದಾಸಿ : ಅದಕ್ಕೇ ಅಮ್ಮನವರೇ, ನಾನು ಬಹುಮಾನ ಕೇಳಿದ್ದು.

ಮಾಧವಿಯ ಮಾತೆ : ನೀನೇ ಮಾಡಿರುವೆಯಲ್ಲವೆ ಈ ಮುದ್ದು ಮೊಗವನ್ನು?

ದಾಸಿ : ಹಾಗಲ್ಲ ಅಮ್ಮನವರೆ, ಅಕಸ್ಮಾತ್ ಅಂದಗೇಡಿ ಹುಟ್ಟಿದ್ದರೆ ನೀವೇನು ಮಾಡುತ್ತಿದ್ದಿರಿ?

ಮಾಧವಿ : ಬಾಯಿ ಮುಚ್ಚೆ. ಅವಲಕ್ಷಣ ನುಡಿಯದಿರು. ಅವರೆಲ್ಲಿ?

ದಾಸಿ : ಓಹೋ, ಇವರಿಗೆ ಅವರು ಬೇಕಾಗಿರುವಾಗ ನಾವು ನುಡಿದದ್ದು ಹೇಗೆ ರುಚಿಸಬೇಕು? ಓ ಅವರೆ, ಹೀಗೆ ಬನ್ನಿ–ನಿಮ್ಮ ಪ್ರಯತ್ನದ ಫಲ ನೋಡಿಕೊಳ್ಳಿರಿ!

ಕೋವಲನ್: (ನೋಡಿ ಹಿಗ್ಗಿ) ಸುಂದರ, ಬಹು ಸುಂದರ.

ದಾಸಿ : ಹೆಸರೇನಿಡುವಿರಿ ಒಡೆಯರೆ?

ಮಾಧವಿ : ಆಗಲೇ ಹೆಸರಿಗೆ ಓಡಿದೆಯಾ? ದೇವರು ನಿನ್ನನ್ನು ಪಾದರಸದಿಂದ ಮಾಡಿರುವನೇನೆ?

ದಾಸಿ : ಮಾಡಿದ್ದರೂ ಮಾಡಿರಬಹುದು ಒಡತಿ. ಎಲ್ಲರಂಥವಳಲ್ಲ ಈ ದಾಸಿ.

ಮಾಧವಿಯ ಮಾತೆ : ಈ ದಾಸಿ, ಬಿಕನಾಸಿ.

ದಾಸಿ : ಹೆಸರೇನೆಂದು ಕೇಳಿದ ತಪ್ಪಿಗಾಗಿ ಏನೇನು ಅನ್ನಿಸಿಕೊಳ್ಳಬೇಕು ತಾಯಿ-ಮಣಿಮೇಖಲಾದೇವಿ!

ಕೋವಲನ್ : ಮಗುವಿಗೆ ಅದೇ ಹೆಸರು ಅತ್ತೆಯವರೆ?

ಮಾಧವಿ : ಅದೇ ಹೆಸರೆ? ಏಕೆ ಇನಿಯ?

ಕೋವಲನ್ : ಹೇಳುವೆ ಕಾರಣವನ್ನು. ನನ್ನ ಪೂರ್ವಜರು ಪ್ರಸಿದ್ಧ ಹಡಗು ವ್ಯಾಪಾರಿಗಳಾಗಿದ್ದರೆಂಬುದನ್ನು ನೀನು ಬಲ್ಲೆಯಷ್ಟೆ?

ಮಾಧವಿ : ಚೆನ್ನಾಗಿ ಬಲ್ಲೆ.

ಕೋವಲನ್ : ಅವರೊಮ್ಮೆ ಹಡಗನ್ನೇರಿ ಹೊರನಾಡಿಗೆ ಹೊರಟರು-ವ್ಯಾಪಾರಕ್ಕೋಸ್ಕರ. ಹಡಗು ನಡುಗಡಲನ್ನು ಸೇರಿದಾಗ ಭಯಂಕರವಾದ ಬಿರುಗಾಳಿ ಬೀಸಿತು!

ಮಾಧವಿ : (ಹೌಹಾರಿ) ಅಯ್ಯೋ, ಮುಂದೇನಾಯಿತು?

ಕೋವಲನ್: ಮುಂದಾದುದನ್ನು ಕಾಣು ಮುಂದಿನ ಚಿತ್ರದಲ್ಲಿ. (ಫ್ಲಾಶ್ ಬ್ಯಾಕ್. ಕಡಲ ತೆರೆಗಳ ಅಬ್ಬರದ, ಬಿರುಗಾಳಿಯ ರಭಸದ, ಹಡಗಿನ ಹೊಯ್ದಾಟದ ಸೌಂಡ್ ಎಫೆಕ್ಟ್. ನಾವಿಕರ ಬೊಬ್ಬೆ)

ನಾವಿಕ : ಘಾತವಾಯಿತು ಒಡೆಯ, ಘಾತವಾಯಿತು!

ಒಡೆಯ : ಏನಾಯಿತು ನಾವಿಕ? ಹೀಗೇಕೆ ಗಾಬರಿಗೊಂಡಿರುವೆ?

ನಾವಿಕ : ಬಿರುಗಾಳಿಯ ರಭಸಕ್ಕೆ ಹಡಗು ನಮ್ಮ ಅಂಕೆಯನ್ನು ಮೀರಿ ಕಡಲ್ಬಂಡೆಯೊಂದಕ್ಕೆ ಅಪ್ಪಳಿಸಿತು; ಅಪಘಾತವಾಯಿತು; ಅನಾಹುತವಾಯಿತು!

ಒಡೆಯ : ನಿಪುಣನಾದ ನಾವಿಕ ನೀನು. ಹೇಗೋ ಹಡಗನ್ನುಳಿಸಲು ಯತ್ನಿಸು!

ನಾವಿಕ : ನಮ್ಮ ಯತ್ನಗಳೆಲ್ಲ ವಿಫಲವಾಗಿವೆ ಒಡೆಯ; ಮನುಷ್ಯರ ಶಕ್ತಿಗೆ ಮೀರಿದ ಹೊರೆಯಿದು. ನೀರೇರಿ ಬರುತ್ತಿದೆ ಹಡಗದೊಳಗೆ! ಈಗಲೋ, ಇನ್ನಾವಾಗಲೋ-ಎಂಬಂತಿದೆ ಸ್ಥಿತಿ! ದೇವರೇ ಕಾಪಾಡಬೇಕು ನಮ್ಮನ್ನು!

ಒಡೆಯ : (ಆಕಾಶದ ಕಡೆ ನೋಡುತ್ತ, ಕೈನೀಡಿ ಪ್ರಾರ್ಥನೆಯ ದನಿಯಲ್ಲಿ) ದೇವಿ, ಮಣಿಮೇಖಲೆ, ಅನವರತವೂ ನಿನ್ನನ್ನೇ ನಂಬಿ ಇದುವರೆಗೆ ಪಾರಾಗಿದ್ದೇನೆ-ಅನೇಕ ಅಪಾಯಗಳಿಂದ. ಇಂದೂ ನೀನೇ ಕರುಣಿಸಿ ಕಾಪಾಡು; ಕಾಪಾಡು ತಾಯೇ ಕಾಪಾಡು; ಕೃಪೆ ಮಾಡು, ಕಾಪಾಡು, ಮಣಿಮೇಖಲಾ ತಾಯಿ ಕಾಪಾಡು; ಜಗನ್ಮಾತೆ ಕಾಪಾಡು, ಜನ್ಮದಾತೆ ಕಾಪಾಡು. ಸಕಲತ್ರಾತೆ ಕಾಪಾಡು.....!

(ಕೆಲವು ನಿಮಿಷಗಳು ಕಳೆದ ನಂತರ)

ನಾವಿಕ : ಆಶ್ಚರ್ಯ ಎನ್ನೊಡೆಯ, ಆಶ್ಚರ್ಯ! ಒಮ್ಮೆಗೆ ಬಿರುಗಾಳಿ ನಿಂತಿತು; ಹಡಗೀಗ ನಡುಗಡ್ಡೆಯೊಂದರ ಬಳಿ ನಿಂತಿದೆ. ನಾವಿಲ್ಲಿ ಈ ರಾತ್ರಿ ಕಳೆದು, ಹಡಗು ಸರಿಪಡಿಸಿಕೊಂಡು, ನಾಳೆ ಮುಂದಕ್ಕೆ ಪ್ರಯಾಣ ಬೆಳೆಸೋಣ.

ಒಡೆಯ : ಹಾಗೆಯೇ ಆಗಲಿ ನಾವಿಕ; ಕೊನೆಗೂ ಕೈಬಿಡಲಿಲ್ಲ ಈ ಬಡಭಕ್ತನನ್ನು ದೇವಿ ಮಣಿಮೇಖಲೆ! ಎಂಥ ಕರುಣಾಮಯಿ ನೀನು, ಭಕ್ತವತ್ಸಲೆ ನೀನು; ಎಂದೆಂದಿಗೂ ನೀನೇ ನಮ್ಮ ಕುಲದೇವತೆ, ವಂಶಮಾತೆ!

(ಫ್ಲಾಶ್ ಬ್ಯಾಕ್ ಮುಗಿಯುತ್ತದೆ. ಮತ್ತೆ ಮಾಧವಿಯ ಮನೆಗೆ)

ಕೋವಲನ್ : ಅಂದಿನಿಂದ ಮಣಿಮೇಖಲೆಯೇ ನಮ್ಮ ಕುಲದೇವತೆ. ಆಕೆಯ ಹೆಸರನ್ನೇ ಮಗಳಿಗೆ ಇಡಬೇಕೆಂದು ನನ್ನ ಮನದಾಸೆ.

ಮಾಧವಿ : ನಿಮ್ಮಾಸೆಯೇ ನನ್ನಾಸೆ ನೀರ. ವಂಶಮಾತೆಯ ಹೆಸರೆಂಬುದೊಂದು, ಮುದ್ದಾದ ಹೆಸರೆಂಬುದೊಂದು–ಎರಡೂ ದೃಷ್ಟಿಯಿಂದ ಒಪ್ಪುವ ಹೆಸರು ನಮ್ಮ ಮಗಳಿಗೆ. ಮಣಿಮೇಖಲೆ, ಮಣಿಮೇಖಲೆ–ಮಾತಾಡು ಮಣಿಮೇಖಲೆ. (ಬಾಗಿ ಮುತ್ತಿಡುವಳು)

ಕೋವಲನ್ : ಮಾತಾಡುವಳಷ್ಟೇ ಅಲ್ಲ, ಹಾಡುವಳು, ಕುಣಿಯುವಳು, ಚಿತ್ರಿಸುವಳು ನನ್ನ ಮಗಳು ಮುಂದೆ! ಅದ್ವಿತೀಯ ಕಲಾವಿದೆಯಾಗುವಳು, ಮಾಧವಿಯನ್ನೂ ಮೀರುವಳು!

ಮಾಧವಿ : ನಾನು ಅದನ್ನೇ ಬಯಸುವೆ ಇನಿಯ!

ಕೋವಲನ್ : ಇಂದು ನಮ್ಮ ಜೀವನ ಆನಂದ ರಸಾಯನ. ಸ್ವರ್ಗ ಇದೆಯೋ ಇಲ್ಲವೋ ಎಂಬ ಸಂದೇಹಿಗಳು ನಮ್ಮ ಸಂಸಾರವನ್ನು ಬಂದು ನೋಡಲಿ! (ಕಾವೇರಿ ಪಟ್ಟಣದ ಡಂಗುರದವನು ಬರುತ್ತಾನೆ)

ಡಂಗುರದವ : ಕೇಳಿರಿ, ಕೇಳಿರಿ, ಕಿವಿಗೊಟ್ಟು ಕೇಳಿರಿ–ಈ ಸಲದ ಇಂದ್ರೋತ್ಸವಕ್ಕೆ ಇನ್ನೊಂದೇ ಮಾಸ ಉಳಿಯಿತು. ಎಲ್ಲರೂ ತಮ್ಮ ತಮ್ಮ ಮನೆ ಸಿಂಗರಿಸಬೇಕು; ತಳಿರು ತೋರಣಗಳನ್ನು ಕಟ್ಟಬೇಕು; ಅಂಗಳದಲ್ಲಿ ಮಂಗಳಕರ ರಂಗವಲ್ಲಿಯನ್ನು ಬರೆಯಬೇಕು; ನಾಡ ಬಾವುಟವನ್ನು ಹಾರಿಸಬೇಕು; ಸೊಬಗು ಸಿಂಗಾರಗಳಲ್ಲಿ ಕಾವೇರಿ ಪಟ್ಟಣಕ್ಕೆ ಯಾವ ಪಟ್ಟಣವೂ ಸರಿಯಲ್ಲ–ಎಂಬುದನ್ನು ತೋರಿಸಬೇಕು! ಕೇಳಿರಿ, ಕೇಳಿರಿ.......

(ಢಣ್ ಢಣ್ ಎಂದು ಡಂಗುರ ಹೊಡೆದು ಹೋಗುವನು)

ಮಾಧವಿ : ಇಂದ್ರೋತ್ಸವ ಬಂದೇಬಿಟ್ಟಿತು! ಈ ಸಲದ ಇಂದ್ರೋತ್ಸವವನ್ನು

ಎಂದಿನಂತಲ್ಲ–ವಿಶೇಷ ರೀತಿಯಲ್ಲಿ ಆಚರಿಸಬೇಕು ನಾವು.

ಕೋವಲನ್ : ಈಗಾಗಲೇ ಆಯೋಜಿಸಿದ್ದೇನೆ ನಾನು.

ಮಾಧವಿ : ಏನನ್ನು?

ಕೋವಲನ್ : ಕಾವೇರಿಯು ಕಡಲನ್ನು ಸೇರುವ ಸುಂದರ ಸನ್ನಿವೇಶದಲ್ಲಿ ಬಿಡಾರ ಹಾಕಿಸುವೆ. ಅಲ್ಲಿಯೇ ಇಂದ್ರೋತ್ಸವದ ಇಪ್ಪತ್ತೆಂಟು ದಿನಗಳನ್ನು ಕಳೆಯುವುದು–ಸಂಗೀತ, ನೃತ್ಯ, ವಿನೋದ, ವಿಹಾರಗಳಲ್ಲಿ.

ಮಾಧವಿ : ಒಳ್ಳೆಯ ಆಯೋಜನೆ. ಮಣಿಮೇಖಲೆಯ ಮೊದಲನೆಯ ಹುಟ್ಟುಹಬ್ಬವೂ ಆ ದಿನಗಳಲ್ಲಿ ಬರಬಹುದೆಂದು ತೋರುತ್ತಿದೆ. ಅದನ್ನು ಅಲ್ಲಿಯೇ ಅನುಪಮವಾಗಿ ಆಚರಿಸಬಹುದು.

ದಾಸಿ : ನನಗೂ ಬಹುಮಾನ ಬರಬಹುದು.

ಮಾಧವಿಯ ಮಾತೆ : (ರೇಗಿ) ದೇವರ ತಲೆಯ ಮೇಲೆ ಹೂ ತಪ್ಪಬಹುದು, ನಿನಗೆ ಬಹುಮಾನ ಕೊಡುವುದು ತಪ್ಪಬಹುದೆ ದಾಸೀರತ್ನವೆ?

ದಾಸಿ : ನನ್ನ ಹೆಸರಿನಲ್ಲಾದರೂ ಸರಿಯೇ, ರತ್ನ ಸಿಕ್ಕಿತು ಬಿಡಿ!

ಮಾಧವಿ : ನಮ್ಮ ಮಣಿಮೇಖಲೆಯು ನಿನಗೆ ನಿಜವಾದ ರತ್ನ ಕೊಡುವಳು–ದೊಡ್ಡವಳಾದ ಮೇಲೆ.

ದಾಸಿ : ಅವಳು ದೊಡ್ಡವಳಾಗುವಷ್ಟರಲ್ಲಿ ನಾನು ಮುದುಕಿಯಾಗುವೆ; ಆಗ ರತ್ನ ದೊರೆತು ಫಲವೇನು?

ಕೋವಲನ್ : ಈಗಲೇ ಕೊಡುವೆ. ಕೋ, ಕಟ್ಟಿಕೊಂಡು ಪಟ್ಟಣದಲ್ಲೆಲ್ಲಾ ಅಲೆದು ಬಾ! (ಅವಳು ಹೋಗುವಳು. ಎಲ್ಲರೂ ನಗುತ್ತ ಅಲ್ಲಿಂದ ತೆರಳುವರು. ತೆರೆಯೇಳುವುದು. ಹಿಂದೆ)

ನೋಟ ೧೫

(ಕಾವೇರಿ ಕಡಲನ್ನು ಸೇರುವ ತಾಣದಲ್ಲಿ ಕೋವಲನ್ ಮಾಧವಿಯರ ಬಿಡಾರ)

ಕೋವಲನ್ : ಪೂರ್ವದಿಗಂತದಲ್ಲಿ ಸಂಧ್ಯಾಸೂರ್ಯ; ನೋಡು ಮಾಧವಿ, ಬಂಗಾರ ನೀರ ಕಡಲನ್ನು! ಕಾವೇರಿಯ ನೀರು ಹೊನ್ನೀರು, ಕಡಲ ನೀರು ಬಂಗಾರ ನೀರು ! ಎಂಥ ರೋಮಾಂಚಕ ನೀರು! ಕೇಳು, ವಿಹಂಗಮ ಸಂಗೀತವನ್ನು ಕೇಳು;

ಸುಮ್ಮನಿರುವ ಸಮಯವೇ ಇದು? ಹಾಡು, ನೀನೂ ಹಾಡು ಮಾಧವಿ, ನೀನೂ ಹಾಡು!

ಮಾಧವಿ : ವೀಣೆ ಶ್ರುತಿ ಮಾಡಿ ಸಿದ್ಧವಿದೆ. ಕೊಳ್ಳಿ, ನುಡಿಸುತ್ತ ನೀವು ಮೊದಲು ಹಾಡಿ.

ಕೋವಲನ್ : ಮೊದಲು ನೀನು.

ಮಾಧವಿ : ಮೊದಲು ನೀವು.

ಕೋವಲನ್ : ಯಾವಾಗಲೂ ನಾನೇ ಸೋಲಬೇಕೇನು?

ಮಾಧವಿ : ನಾನು ಸೋಲಬೇಕೇನು?

ಕೋವಲನ್ : ಒಲವಿನಲ್ಲಿ ಸೋಲೂ ಗೆಲವೇ! ತಾ. (ವೀಣೆಯನ್ನು ನುಡಿಸುತ್ತಾ ಹಾಡತೊಡಗುವನು)

ಕಡಲರಾಜನ ರಾಣಿ,

ಕಾವೇರಿ ಜನನಿ,

ಓ ಲೋಕಕಲ್ಯಾಣಿ

ವರದಾನಿ ಕರುಣಿ!

ಕೃಷಿಕರಿಗೆ ಸುರಧೇನು

ಸುರತರುವು ಜನಕೆ;

ಸುಧೆ ಸಸ್ಯಸಂತತಿಗೆ

ರಸ! ವಿಸರ ವನಕೆ

ಹರಿಯುತಿರು, ಹರಿಯುತಿರು,

ಹರಸುತ್ತ ನಮ್ಮ,

ಬೆರೆಯುತಿರು ಕಡಲನ್ನು

ಕಾವೇರಿಯಮ್ಮ.

ಮಾಧವಿ : ಸ್ವರ್ಗೀಯ ಸಂಗೀತವಿದು ಸ್ವಾಮಿ; ನಾನು ಹಾಡಿ ಇದರ ಮಧುರ ಪರಿಣಾಮವನ್ನು ಕೆಡಿಸಬೇಕೆ?

ಕೋವಲನ್ : ಕೋವಲನ್ ಹಾಡಿದುದು ಕಬ್ಬು, ಅದರ ಮೇಲೆ ಮಾಧವಿಯ ಹಾಡಿನ ಜೇನಿಡಬೇಕೀಗ!

ಮಾಧವಿ : (ಹಾಡುವಳು-ವೀಣೆಯನ್ನು ನುಡಿಸುತ್ತ)

ನಿನ್ನದೆಯೆ ಸಾಗರವು

ನಿನ್ನೊಲವು ಶರಧಿ;

ನಿನ್ನ ಬಲ ಬೆಳ್ಗಸಕೆ

ಎಲ್ಲಿಹುದು ಪರಿಧಿ?

ಕೋವಲನ್ : (ತನ್ನಲ್ಲಿ) ಯಾರನ್ನು ಕುರಿತು ಹಾಡುತ್ತಿರುವಳಿವಳು? ಚೋಳ ಸಾಮ್ರಾಟನಿರಬಹುದೆ? (ಮಾಧವಿ ಮುಂದುವರೆಸುವಳು)

ನಿನ್ನ ಬಾಹುಗಳಲ್ಲಿ

ಭೂಮಿ ವಿಸ್ತಾರ;

ನಿನ್ನ ಮೊಗದಲಿ ಜಗದ

ಬಾಳ ಪ್ರಸ್ತಾರ!

ಕೋವಲನ್: (ಹಲ್ಲು ಕಡಿಯುತ್ತ) ಇವಳು ಅಂತರಂಗದಲ್ಲಿ ಸಾಮ್ರಾಟನಿಗೆ ಒಲಿದಿರುವುದೇ ನಿಜ. ನನ್ನ ಬಗ್ಗೆ ತೋರುವ ಒಲವು ಬರಿಯ ನಟನೆ! ಎಷ್ಟೆಂದರೂ ಬೆಲೆವೆಣ್ಣಲ್ಲವೆ ಇವಳು! ಇವಳಿಗಾಗಿ ನೈಜ ಪ್ರೇಮದ ಪುತ್ಥಳಿಯಾದ ನನ್ನ ಕನ್ನಗಿಯನ್ನು ಕೈಬಿಟ್ಟೆ! ಎಂಥ ಘಾತಕ ಘಟಿಸಿತಲ್ಲ ನನ್ನಿಂದ! (ಎದ್ದು) ಮಾಧವಿ, ನಿನ್ನ ಸಾಮ್ರಾಟನೊಡನೆ ಸುಖಿಯಾಗಿರು ನೀನು; ನಾನು ಹೊರಟೆ... (ಹೊರಡುವನು. ಮಾಧವಿಯ ವೀಣೆ ಕೈಯಿಂದ ಕಳಚುವುದು. ಧಾವಿಸಿ, ಕೋವಲನ್‌ನ ಕಾಲಿಗೆ ಬಿದ್ದು)

ಮಾಧವಿ : ಯಾವ ಸಾಮ್ರಾಟ ಸ್ವಾಮಿ, ನನ್ನೆದೆಯ ಸಾಮ್ರಾಟರು ನೀವು.....

ಕೋವಲನ್ : ಮೋಸಗಾರ್ತಿ, ಈಸುದಿನ ಮೋಸ ಹೋದುದೇ ತಪ್ಪು, ತಿಳಿಗೇಡಿತನ ನನ್ನದು! ಇನ್ನೊಮ್ಮೆ ಮೋಸ ಹೋಗಲಾರೆ; ಕನ್ನಗಿಗೆ ಇನ್ನು ಮೇಲು ದ್ರೋಹವೆಸಗಲಾರೆ; ಕನ್ನಗಿ.....ಕನ್ನಗಿ...... (ರಭಸದಿಂದ ಹೊರಡುವನು. ಮಾಧವಿಯು ಕೋವಲನ್, ಕೋವಲನ್, ಎನ್ನುತ್ತ ಹಿಂಬಾಲಿಸುವಳು)

ಕೋವಲನ್ : ಕನ್ನಗಿ;

ಮಾಧವಿ : ಕೋವಲನ್;

(ಎರಡು ಮೂರು ಬಾರಿ ಇದರ ಪುನರಾವರ್ತನ)

(ಅವರು ಮರೆಯಾಗುತ್ತಾರೆ. ಅತ್ತ ಕನ್ನಗಿಯ ಮನೆಯಲ್ಲಿ)

ನೋಟ ೧೬

ದೇವಂದಿ : ಎಂದಿಗಿಂತಲೂ ಇಂದು ದುಃಖದಲ್ಲಿ ಮುಳುಗಿರುವೆಯಲ್ಲ ಕನ್ನಗಿ? ಕಾಲಕಳೆದಂತೆ ದುಃಖದ ಒತ್ತಡ ಕಡಿಮೆಯಾಗುವುದೆಂದು ಹೇಳುತ್ತಾರೆ. ನಿನ್ನ ದುಃಖವಾದರೋ ದಿನದಿನಕ್ಕೆ ದ್ವಿಗುಣಿಸುತ್ತ ನಡೆದಿದೆ!

ಕನ್ನಗಿ : ಗಾಯದ ಮೇಲೆ ಬರೆಯಿತ್ತಂತೆ ನಿನ್ನೆ ರಾತ್ರಿ ನಾನು ಕಂಡ ಕೆಟ್ಟ ಕನಸು ನನ್ನ ಅಳಿದುಳಿದ ಸ್ಥೈರ್ಯವನ್ನು ಸುಟ್ಟು ಹಾಕಿದೆ ಸಖಿ! ಆ ಭಯಾನಕ ಸ್ವಪ್ನವನ್ನು ಎಷ್ಟು ಮರೆಯಲು ಯತ್ನಿಸಿದರೂ ಅದು ಇನ್ನಷ್ಟು ಭೀಕರವಾಗಿ ಕಣ್ಣೆದುರು ಸುಳಿಯುತ್ತಿದೆ.

ದೇವಂದಿ : ಅಂಥದೇನನ್ನು ಕಂಡೆ ಕನಸಿನಲ್ಲಿ?

ಕನ್ನಗಿ : ಹೇಳಿ ನಿನ್ನ ಹೃದಯಕ್ಕೂ ವ್ಯಥೆ ಹೊಗಿಸುವುದು ಬೇಡ ದೇವಂದಿ. ಕೆಟ್ಟ ಕನಸುಗಳನ್ನು ಬೇಕಾದಷ್ಟು ಕಂಡಿದ್ದೇನೆ; ಆದರೆ ಇಂಥ ಕೆಟ್ಟ ಕನಸನ್ನು ನಾನೆಂದೂ ಕಂಡಿರಲಿಲ್ಲ;

ದೇವಂದಿ : ಈ ದುಃಸ್ವಪ್ನದ ದುಷ್ಪರಿಣಾಮದ ಪರಿಹಾರಕ್ಕಾಗಿ ಇಂದು ಕಾವೇರೀಸಂಗಮದ ಹತ್ತಿರದಲ್ಲಿರುವ ಕಾಮದೇವನ ಗುಡಿಗೆ ಹೋಗು; ಕಾಮದೇವನನ್ನು ಪೂಜಿಸು. ನಿನಗೆ ಶುಭವಾಗುವುದು.

ಕನ್ನಗಿ : ಇಬ್ಬರು ಮೂವರು ದೇವರಿಲ್ಲ ನನಗೆ ದೇವಂದಿ; ದೇವನೊಬ್ಬನೇ ನನಗೆ–ಕೋವಲನ್!

ಕೋವಲನ್ : (ಪ್ರವೇಶಿಸಿ) ದೇವನಲ್ಲ ನಾನು ಕನ್ನಗಿ, ದುರುಳ!

ಕನ್ನಗಿ : (ಕಣ್ಣರಳಿಸಿ ನೋಡಿ ಕಾಲಿಗೆರಗಿ) ನನ್ನ ಸ್ವಾಮಿ, ನನ್ನ ದೇವರೆ, ಕೊನೆಗೂ ಹಿಂದಿರುಗಿದಿರಾ ಈ ನಿಮ್ಮ ನಿಜ ನಿವಾಸಕ್ಕೆ, ನಿಮ್ಮ ಚರಣದಾಸಿಯೆಡೆಗೆ? ನಾನಿಂದು ಧನ್ಯಳು, ನನಗಿಂದು ಮಹದಾನಂದ; ಹಿಗ್ಗಿ ನಲಿನಲಿದಾಡುವೆ; ದೇವಂದಿ, ನಾನು ಹೇಳುತ್ತಿರಲಿಲ್ಲವೆ ನನ್ನ ಸ್ವಾಮಿ ಬರುವರೆಂದು, ಬಂದೇ ಬರುವರೆಂದು?

ದೇವಂದಿ : ಪುಣ್ಯಾತ್ಮರೇ, ಇನ್ನು ಮುಂದಾದರೂ ಕನ್ನಗಿಯೊಡನೆ ಸೊಗ ಬಾಳಿರಿ. ಇದುವರೆಗಿನ ಅವಳ ದುಃಖವನ್ನು ಕಣ್ಣಾರೆ ನೋಡಿದ ನನಗೆ ಇಂದಿನ ಈ ಆನಂದವನ್ನು ನಂಬದಂತಾಗಿದೆ!

ಕೋವಲನ್: ಕನ್ನಗಿಯ ಬನ್ನದ ದಿನಗಳಲ್ಲಿ ಅವಳಿಗೆ ಸಾಂತ್ವನ ನೀಡಿ ಅವಳು ಬದುಕಿರಲು ಕಾರಣಳಾದ ಸಾಧ್ವಿ, ದೇವಂದಿ, ನಿನ್ನ ಉಪಕಾರ ಅವಿಸ್ಮರಣೀಯ. ಕನ್ನಗಿಯ ಆಣೆಯಾಗಿ ಆಶ್ವಾಸನವೀಯುತ್ತೇನೆ–ಇನ್ನು ಕನ್ನಗಿಯನ್ನು ಬಿಟ್ಟು ಇರೆ, ಇರಲಾರೆ!

ದೇವಂದಿ : ಧನ್ಯವಾದಗಳು ನಿಮಗೆ, ಕನ್ನಗಿ, ಮತ್ತೆ ಬರುವೆ

ಕನ್ನಗಿ : ನೀನು ಗೆಳತಿಯಲ್ಲ, ತಾಯಿ ನನಗೆ ದೇವಂದಿ; ಮತ್ತೆ ಮತ್ತೆ ಬರುತ್ತಿರು, ಚಿತ್ತ ಅರಳಿಸುತ್ತಿರು. (ದೇವಂದಿ ಹೋಗುವಳು)

ಕೋವಲನ್ : ಅವಿಚಾರಕ್ಕೆ ಒಳಗಾಗಿ, ಅವಿವೇಕಕ್ಕೆ ಬಲಿಯಾಗಿ ನಾನು ನಿನಗೆ ಪರಿಪರಿಯ ಕಷ್ಟ ಕೊಟ್ಟೆ ಕನ್ನಗಿ! ನನ್ನ ತಿಳಿಗೇಡಿತನದ ತಪ್ಪನ್ನು ಮನ್ನಿಸು!

ಕನ್ನಗಿ : ತಪ್ಪು ನಿಮ್ಮದಲ್ಲ ಸ್ವಾಮಿ, ಕಲಾರಾಧನೆ ಮಾಡಿ ಕಲಾರಸಿಕರಾದ ತಮಗೆ ಮನೆಯಲ್ಲಿಯೇ ತೃಪ್ತಿ ನೀಡದ ನನ್ನ ತಪ್ಪದು!

ಕೋವಲನ್ : ಇನ್ನೊಮ್ಮೆ ಆ ಮಾತಾಡದಿರು ಕನ್ನಗಿ; ಯಾವ ಕಲೆ ಕಲಿತರೇನು, ಜೀವನಕಲೆಯನ್ನು ಮರೆತವರಿಗೆ ಕಲೆಯೊಂದು ವರವಲ್ಲ, ತಾಪ! ಆ ವಿಷಯವಂತಿರಲಿ, ಇನ್ನು ಮುಂದಿನ ಜೀವನೋಪಾಯವನ್ನು ಕುರಿತು ಚರ್ಚಿಸೋಣ. ತಂದೆ ತಾಯಿಗಳಿತ್ತ ಅಪಾರ ವಿತ್ತ ಆ ಮೋಸಗಾರ್ತಿಯ ಮನೆಯಲ್ಲಿ ಕರಗಿಹೋಯಿತು! ಸಿರಿವಂತನಾಗಿ ಹೊರಬಿದ್ದು ಬರಿಗೈಯವನಾಗಿ ಹಿಂದಿರುಗಿದ್ದೇನೆ! ಚಿಂತಿಸದಿರು, ನಿನಗಾಗಿ, ನನ್ನ ಕನ್ನಗಿ, ನಿನಗಾಗಿ ನಾನು ಕೈಕೂಲಿಯನ್ನೂ ಮಾಡಬಲ್ಲೆ! ಏನಾದರೂ ಮಾಡಿ, ಎಂತಾದರೂ ತಕ್ಕಷ್ಟು ಗಳಿಸಿ ನಿನ್ನನ್ನು ನೆಮ್ಮದಿಯಿಂದಿಡಲು ಹಗಲಿರುಳು ಹೆಣಗುವೆನು.

ಕನ್ನಗಿ : ಸ್ವಾಮಿ, ಈ ಕೋಮಲ ಕರಗಳಿಂದ ಕೈಕೂಲಿಯೆ? ಬೇಡ, ನನ್ನ ತಂದೆ ತಾಯಿಗಳು ನನಗಿತ್ತ ಈ ಎರಡು ಬೆಲೆಯುಳ್ಳ ನೂಪುರಗಳಿವೆ. ಇವುಗಳಿಗೆ ಒಂದನ್ನು ಮಾರಿದರೂ ಸಣ್ಣ ವ್ಯವಹಾರಕ್ಕೆ ಸಾಕಾಗುವಷ್ಟು ಹಣ ದೊರೆಯುವುದು. ಅದರಿಂದ ಆರಂಭಿಸಿರಿ, ಚಿಕ್ಕ ವ್ಯಾಪಾರವೊಂದನ್ನು. ತಾಯಿ ಮಣಿಮೇಖಲೆಯ ದಯದಿಂದ ಕ್ರಮೇಣ ಸಿರಿ ಹಿಂದಿರುಗಬಹುದು ನಿಮ್ಮ ಮನೆಗೆ.

ಕೋವಲನ್ : (ಉಬ್ಬಿ) ಕನ್ನಗಿ, ನಿರಾಶೆಯ ನಿಶೆಯಲ್ಲಿಯೇ ಆಶೆಯ ಶಶಿ ಮೂಡಿದಂತಾಯಿತೀಗ. ಒಂದು ನೂಪುರ ನೀಡುವ ಹಣ ಸಾಕು ನನಗೆ. ಹೊಸ ವ್ಯವಹಾರ ಆರಂಭಿಸಲು. ಮೀನಿಗೆ ಈಸಲು ಕಲಿಸುವ ಅಗತ್ಯವಿಲ್ಲ. ನನಗೆ ವ್ಯಾಪಾರ ಕಲಿಸುವ ಅಗತ್ಯವಿಲ್ಲ. ರಕ್ತಗತ ನನಗದು. ನೋಡುವಿಯಂತೆ, ಈ ಕೋವಲನ್ ಕಳೆದುಕೊಳ್ಳುವುದನ್ನಷ್ಟೇ ಅಲ್ಲ, ಗಳಿಸುವುದನ್ನೂ ಬಲ್ಲನೆಂಬುದನ್ನು!

ಕನ್ನಗಿ : ಹಾಗಾದರೆ ಬೇಗ ಹೋಗಿ ಒಂದು ನೂಪುರವನ್ನು ಮಾರಿಕೊಂಡು ಬನ್ನಿರಿ. ಶುಭಸ್ಯ ಶೀಘ್ರಂ!

ಕೋವಲನ್ : ಹಿಂದೆ ಅಷ್ಟೈಶ್ವರ್ಯದಿಂದ ಮೆರೆದ ಈ ಕಾವೇರೀ ಪಟ್ಟಣದಲ್ಲಿ ಇಂದು ನಿನ್ನ ನೂಪುರ ಮಾರಲು ಹೋಗಲೆ ಕನ್ನಗಿ? ನೂಪುರ ಮಾರುವುದಿರಲಿ, ನೂಪುರ ಕೊಳ್ಳಲೂ ಹೋಗಿಲ್ಲ ನಾನು ಇದುವರೆಗೆ, ಈ ನಗರದಲ್ಲಿ! ನಾವಿನ್ನು

ಈ ನಗರದಲ್ಲಿರುವುದೇ ಬೇಡ; ಗತಕಾಲ ಕರಾಳ ಛಾಯೆಯಾಗಿ ಆವರಿಸುವುದು ನಮ್ಮನಿಲ್ಲಿ. ದೂರದ ಬೇರೂರಿಗೆ ಹೋಗಿ ಹೊಸಜೀವನ ಆರಂಭಿಸೋಣ.

ಕನ್ನಗಿ : ನಿಮ್ಮಿಷ್ಟವೇ ನನ್ನಿಷ್ಟ ಸ್ವಾಮಿ; ಬೇರೂರಿಗೇಕೆ, ಬೇರೆ ದೇಶಕ್ಕೆ ಹೊರಟರೂ ಬರುವೆ ನೆರಳಾಗಿ! (ಹೊರಡುವರು-ಇರುವ ಅಲ್ಪ ಸಾಮಾನನ್ನು ಹೆಗಲ ಮೇಲೆ ಹೊತ್ತುಕೊಂಡು ಅವರೀಗ ಮಧುರೆಯ ಮಾರ್ಗದಲ್ಲಿ. ಅದೇ ಮಾರ್ಗದಲ್ಲಿ ಹೊರಟಿದ್ದ ಅಡಿಗಳ್ ಎಂಬ ಮುನಿ ಅವರನ್ನು ನೋಡುವರು)

ನೋಟ ೧೭

ಕವುಂದಿ ಅಡಿಗಳು : ಮುಂದೆ ಮುಂದೆ ಹೊರಟಿರುವ ಈ ಸತಿಪತಿಗಳಾರಾಗಿರಬಹುದು? ಇವರನ್ನು ದೂರದಿಂದ ನೋಡಿದರೂ ಗೌರವಾನ್ವಿತ ಕುಟುಂಬಗಳಲ್ಲಿ ಜನ್ಮವೆತ್ತಿರಬೇಕೆಂದೂ, ದುರದೃಷ್ಟವಶಾತ್ ದಾರಿದ್ರ್ಯದ ದವಡೆಗೆ ಸಿಕ್ಕಿ ದಿಕ್ಕಿಲ್ಲದವರಾಗಿರಬೇಕೆಂದೂ ಭಾಸವಾಗುತ್ತಿದೆ. ಇವರಿಬ್ಬರೂ ಈ ಭಾಗಕ್ಕೆ ಅಪರಿಚಿತರೆಂಬುದೂ ವೇದ್ಯವಾಗುತ್ತಿದೆ. ಇವರಿಗೆ ನೆರವಾಗಬೇಕು ನಾನು. (ಅವರ ಬಳಿ ಸಾರಿ) ನೀವಾರು ಸೋದರ ಸೋದರಿಯರೆ, ಎಲ್ಲಿಗೆ ಹೊರಟಿರುವಿರಿ?

ಕೋವಲನ್: (ವಂದಿಸಿ) ನಮಿಸುವೆನು ಪೂಜ್ಯರೆ! ನಾವಿಬ್ಬರೂ ಕಾಲಚಕ್ರಕ್ಕೆ ಸಿಲುಕಿ ನಿರ್ಧನರಾಗಿರುವ ಸತಿಪತಿಗಳು. ನನ್ನನ್ನು ಕೋವಲನ್ ಎಂದು ಕರೆಯುತ್ತಾರೆ; ಇವಳ ಹೆಸರು ಕನ್ನಗಿ!

ಅಡಿಗಳ್ : ಕಾವೇರಿ ಪಟ್ಟಣದ ಪ್ರಸಿದ್ಧ ವರ್ತಕರಾದ ಮಾನಾಯಗನ್ ಮಾಚಾತ್ತುವಾನ್‌ರ ಮಕ್ಕಳೇ ನೀವು? ಮುತ್ತಿನ ಪಲ್ಲಕ್ಕಿ ಮೇನೆಗಳಲ್ಲಿ ಸಂಚರಿಸುತ್ತಿದ್ದ ನೀವು ಕಲ್ಲು ಮುಳ್ಳುಗಳನ್ನು ತುಳಿಯುತ್ತ ಕಾಲ್ನಡಿಗೆಯಲ್ಲಿ ಊರೂರು ಅಲೆಯುವಂತಾಯಿತೆ? ಕರ್ಮವೆ, ಕ್ರೂರ ಕರ್ಮವೆ, ಇದೇ ನಿನ್ನ ಧರ್ಮವೆ? ನೀವು ಹೊರಟಿರುವುದೆಲ್ಲಿಗೆ ಕೋವಲನ್-ಕನ್ನಗಿಯರೆ?

ಕೋವಲನ್: ಮಧುರೆಗೆ ಹೋಗಿ ಪುನರ್-ಜೀವನ ಪ್ರಾರಂಭಿಸಬೇಕೆಂದಿದ್ದೇವೆ ಪೂಜ್ಯರೆ. ಪಾಂಡ್ಯರಾಜನ ವೈಭವ-ಕೀರ್ತಿ, ನ್ಯಾಯ ಬುದ್ಧಿ, ಧರ್ಮರತಿಗಳ ಬಗ್ಗೆ ಬಹಳ ಕೇಳಿದ್ದೇವೆ. ಅವರ ರಾಜಧಾನಿಯಲ್ಲಿ ನಮಗೆ ಜೀವನೋಪಾಯ ಸಿಕ್ಕಬಹುದೆಂದು ನಂಬಿ ನಡೆದಿದ್ದೇವೆ. ಪೂಜ್ಯರ ಪ್ರಯಾಣವೆಲ್ಲಿಗೆ?

ಅಡಿಗಳ್ : ನಾನೊಬ್ಬ ಜೈನ ಸನ್ಯಾಸಿ. ಕವುಂದಿ ಅಡಿಗಳ್ ಎಂದು ಕರೆಯುತ್ತಾರೆ. ನಾನೂ ಮಧುರೆಗೆ ಹೊರಟಿದ್ದೇನೆ. ನೀವಿಬ್ಬರೇ ಈ ಅರಿಯದ ದಾರಿಯಲ್ಲಿ ಪ್ರಯಾಣ ಮಾಡುವುದು ವಿಹಿತವಲ್ಲ. ನನ್ನೊಡನೆ ನಡೆಯಿರಿ. ನಿಮಗಿಷ್ಟವಿದ್ದರೆ ದಾರಿಯಲ್ಲಿ ಆಯಾಸ ಪರಿಹಾರಾರ್ಥವಾಗಿ ನಿಮಗೆ ಜೈನಧರ್ಮದ

ತತ್ವಗಳನ್ನು ವಿವರಿಸುತ್ತೇನೆ. ನಿಮಗೆ ಆಹಾರಾದಿಗಳನ್ನು ಒದಗಿಸುವಲ್ಲಿಯೂ ನೆರವಾಗುತ್ತೇನೆ. ದಾರಿ ತಪ್ಪದಂತೆ ನೇರವಾಗಿ ಮಧುರೆಗೆ ಕರೆದೊಯ್ಯುತ್ತೇನೆ.

ಕೋವಲನ್ : ನಮಗೆ ತಾವೇ ದೇವದೂತರು ಪೂಜ್ಯರೇ! ಅತ್ಯಂತ ಸಂತೋಷದಿಂದ ತಮ್ಮೊಡನೆಯೇ ಪ್ರಯಾಣ ಮುಂದುವರಿಸುವೆವು. ದಯವಿಟ್ಟು ಧರ್ಮತತ್ವಗಳನ್ನು ತಿಳಿಸುತ್ತ ಕರೆದೊಯ್ಯಿರಿ ಮಧುರೆಗೆ. ಧರ್ಮತತ್ವ ಶ್ರವಣದಿಂದಾದರೂ ನಮ್ಮ ಕರ್ಮ ಕ್ಷಯಿಸಲಿ!

ಅಡಿಗಳ್: ಶುಭಂಭೂಯಾತ್! ನಡೆಯಿರಿ; ಸಂಜೆಯಾಗುವುದರೊಳಗಾಗಿ ಸುರಕ್ಷಿತ ಸ್ಥಾನವೊಂದನ್ನು ಸೇರೋಣ!

ಕೋವಲನ್ : ತಮ್ಮಾಣತಿಯಂತಾಗಲಿ ಪೂಜ್ಯರೆ; (ಹೊರಡುವರು ತೆರೆಯೆದ್ದಾಗ ಮಾಧವಿಯ ಮನೆ ಕಾಣಿಸುವುದು)

ನೋಟ ೧೮

ಮಾಧವಿ : (ಹಾಸಿಗೆಯ ಮೇಲೆ ಹೊರಳುತ್ತ, ನರಳುತ್ತ)-ಯಾವ ವಿಷ ನಿಮಿಷದಲ್ಲಿ ನಾನು ವೀಣೆಯನ್ನು ಕೈಗೆತ್ತಿಕೊಂಡೆನೋ, ಯಾವ ದುರ್ನಿಮಿಷದಲ್ಲಿ ಆ ಹಾಡನ್ನು ಆರಂಭಿಸಿದೆನೋ-ನನ್ನ ಸರ್ವಸ್ವ ನಾಶವಾಯಿತು! ಓ ವಿಧಿಯ ವಿಪರೀತ ವ್ಯಾಪಾರವೆ, ಓ ಕಾಲದ ಕ್ರೂರ ಲೀಲೆಯೆ-ನನ್ನನ್ನೊಮ್ಮೆಗೇ ನಂದನದಿಂದ ಎಳೆದು ರಸಾತಳಕ್ಕೆ ಒಗೆಯುವುದೆ? ನಾನಾರಿಗಾವ ಅನ್ಯಾಯವೆಸಗಿದ್ದೆ, ನಾನಾರ ಸುಖವ ಸೆಳೆದುಕೊಂಡಿದ್ದೆ, ನಾನಾರ ತುತ್ತ ಕಸಿದು ತಿಂದಿದ್ದೆ? ಯಾಕೆನ್ನ ಈ ನರಕಕ್ಕೆ ನೂಕಿದೆ ವಿಧಿಯೆ? ಓ ಕೋವಲನ್, ಒಂದು ಕ್ಷುಲ್ಲಕ ಸಂಶಯವು ಒಂದು ಪ್ರೇಮನಗರವನ್ನೇ ಸುಟ್ಟು ಬೂದಿ ಮಾಡಬಲ್ಲದೆಂಬುದನ್ನು ಸಿದ್ಧಗೊಳಿಸಲೆಂದೇ ನನ್ನ ಕೈ ಹಿಡಿದೆಯಾ? ಸಂಶಯ ತಾಳುವ ಮುನ್ನ ನನ್ನನ್ನೊಂದು ಮಾತು ಕೇಳದಷ್ಟೂ ಕೀಳಾಗಿ ಕಂಡೆನೇ ನಿನ್ನ ಕಣ್ಣಲ್ಲಿ? ತೊರೆದುಹೋಗುವ ಮುನ್ನ ನನ್ನೆದೆಯ ತೆರೆದು ತೋರಲು ಅವಕಾಶವೀಯದಷ್ಟು ಲಘುವಾಗಿ ಕಂಡಿತೇ ನನ್ನ ಪ್ರೇಮ?

ಕೌಶಿಕನ್ : ಮಗಳೆ, ಈ ರೀತಿ ಪ್ರಲಾಪಿಸುತ್ತ, ಪರಿತಪಿಸುತ್ತ ಎಷ್ಟು ದಿನ ದಹಿಸುವಿ ನಿನ್ನನ್ನೇ ನೀನು? ಮತ್ತೆ ಕೋವಲನ್ ನಿನಗೆ ದೊರೆಯನೆಂದೇ ನನ್ನ ಅಂತರಾತ್ಮ ನುಡಿಯುತ್ತಿದೆ. ನೀನು ಪಡೆದು ಬಂದುದೇ ಅಲ್ಪಾವಧಿಯ ಪ್ರೇಮವನ್ನು! ಆದುದರಿಂದ ಪರಿತಪಿಸಿ ಪ್ರಯೋಜನವಿಲ್ಲ, ವತ್ಸೆ!

ಮಾಧವಿ : ಪೂಜ್ಯರೇ, ನನಗವರು ಮತ್ತೆ ದೊರೆಯದಿದ್ದರೆ ಹೋಗಲಿ, ಅವರ ಮೇಲಿನ ನನ್ನ ಪ್ರೇಮ ಪರಿಶುದ್ಧವಾದುದು, ಕೃತ್ರಿಮತೆಯ ಲವಲೇಶವೂ

ಇಲ್ಲದುದು-ಎಂಬುದು ಅವರಿಗೆ ವೇದ್ಯವಾದರೆ ಸಾಕು ನನಗೆ; ಅವರ ಅಗಲಿಕೆಯನ್ನು ಹೇಗಾದರೂ ಸಹಿಸಬಲ್ಲೆ! ಆದರೆ ನನ್ನ ಪ್ರೇಮ ನಿಜವಾದುದಲ್ಲವೆಂಬ ಅವರ ಭಾವನೆಯನ್ನು ಸಹಿಸಲಾರೆ! ಅವರ ಈ ಭಾವನೆಯನ್ನು ಮಾರ್ಪಡಿಸುವುದು ಸಾಧ್ಯವೇ ಇಲ್ಲವೆ ಪೂಜ್ಯರೆ?

ಕೌಶಿಕನ್: ಮಾರ್ಪಡಿಸಬಹುದೆಂದು ತೋರುತ್ತಿದೆ ಮಗಳೆ, ನಿನಗಿಷ್ಟೇ ಬೇಕಾದುದೆಂದು ಬಿಂಬಿಸುವಂತೆ ನೀನವರಿಗೊಂದು ಓಲೆ ಬರೆ. ಅವರೆಲ್ಲಿದ್ದರೂ ಹುಡುಕಿ ಅದನ್ನವರಿಗೆ ಮುಟ್ಟಿಸಿ ಬರುವೆ;

ಮಾಧವಿ : ಕೃತಾರ್ಥಳಾದೆ ಪೂಜ್ಯರೆ, ಈಗಲೇ ಬರೆದು ಕೊಡುವೆ ಓಲೆಯನ್ನು. (ಅವಳು ಪತ್ರ ಬರೆಯಲು ಹೋಗುವಳು. ತೆರೆಯೆದ್ದಾಗ ಹಿಂದೆ ಮಧುರೆಯ ಹತ್ತಿರದ ಭದ್ರಕಾಳಿಯ ದೇವಾಲಯ ಕಾಣಿಸುವುದು. ಅದಕ್ಕೆ ಅನತಿ ದೂರದಲ್ಲಿ ಮಾದರಿಯ ಮನೆ. ಅಲ್ಲಿಗೆ ಕವುಂದಿ ಅಡಿಗಳೂ, ಕೋವಲನ್, ಕನ್ನಗಿ ಮಾದರಿಯರೂ ಬರುತ್ತಾರೆ)

ನೋಟ ೧೯

ಅಡಿಗಳ್ : ಮಾತೆ ಮಾದರಿ, ಮಾತೆ ಮಾದರಿ!

ಮಾದರಿ : (ಹೊರಗೆ ಬಂದು) ಯಾವಾಗ ಆಗಮಿಸಿದಿರಿ ಗುರುವರ? ಬಹಳ ದಿನಗಳಾದ ಮೇಲೆ ಈ ಬಡವಿಯ ಮನೆಗೆ ದಯಮಾಡಿಸಿದಿರಿ. ಧನ್ಯಳಾದೆನು. ಇವರಾರು?

ಅಡಿಗಳ್ : ಇವರಿಬ್ಬರೂ ಆಗರ್ಭ ಶ್ರೀಮಂತರಾಗಿ ಹುಟ್ಟಿ ಬೆಳೆದು, ಈಗ ದೈವೀ ದುರ್ವಿಲಾಸದಿಂದ ಬಡವರಾದವರು; ಇಬ್ಬರೂ ಸಾತ್ವಿಕ ಶಿರೋಮಣಿಗಳು. ಮಧುರೆಯಲ್ಲಿ ಅದೃಷ್ಟಪರೀಕ್ಷೆಗಾಗಿ ಬಂದಿದ್ದಾರೆ. ಇವರಿಗೆ ನಿನಗಿಂತ ಒಳ್ಳೆಯ ನೆರೆ ಸಿಕ್ಕಲಾರದು. ಇವರಿಗೆ ಎಡೆಯಿತ್ತು ಇವರ ಮರುಬಾಳಿಗೆ ನೆರವಾಗು.

ಮಾದರಿ : ಇಂಥವರು ನನ್ನ ನೆರೆಹೊರೆಯಾಗಿ ನನಗೆ ದೊರೆತುದು ನನ್ನ ಸುದೈವ-ಪೂಜ್ಯರೆ. ನೀವು ಇವರ ಬಗ್ಗೆ ನಿಶ್ಚಿಂತರಾಗಿರಿನ್ನು. ಇವರನ್ನು ನನ್ನ ಮಕ್ಕಳಂತೆ ನೋಡಿಕೊಳ್ಳುವೆನು.

ಅಡಿಗಳ್ : ನಿಜವಾಗಿಯೂ ನಿಶ್ಚಿಂತನಾಗಿ ಹೊರಡುವೆ ನಾನು ಭದ್ರೆ. ನಿನ್ನಂಥ ಉದಾರ ಹೃದಯಿಗಳಿಂದಲೇ ಈ ಲೋಕದಲ್ಲಿ ಮಾನವಜೀವನ ಸಹ್ಯವೆನಿಸುತ್ತದೆ. ಸುಬಕರವೆನಿಸುತ್ತದೆ. ಶುಭಂ ಭೂಯಾತ್!

ಮಾದರಿ : ತಂದೆ, ಈ ಬಡವಿಯ ಮನೆಯಲ್ಲಿ ಭೋಜನ ಮಾಡಿಯೇ

ಮುಂದುವರೆಸಿರಿ ಪ್ರಯಾಣವನ್ನು. ಈ ನನ್ನ ಮಕ್ಕಳೊಡನೆ ತಾವು ಭೋಜನ ಸ್ವೀಕರಿಸುವುದನ್ನು ಕಂಡು ಈ ಕಣ್ಣು ಕೃತಾರ್ಥವಾಗಬೇಕು.

ಅಡಿಗಳ್ : ನಿನ್ನಿಷ್ಟದಂತೆಯೇ ಆಗಲಿ ತಾಯೆ. ನೀನು ಮಾತಾಯಿ!

ಕನ್ನಗಿ : ಇಂಥ ತಾಯಿ ನಮಗೆ ಸಿಕ್ಕಿರುವುದು ನಮ್ಮ ಪುಣ್ಯ ಪೂಜ್ಯರೆ.

ಮಾದರಿ : ಎಲ್ಲ ಈ ಗುರುಗಳ ಪುಣ್ಯ. ನಡೆಯಿರಿ ಮಜ್ಜನಶಾಲೆಗೆ.

ಕೋವಲನ್ : (ತನ್ನಲ್ಲಿ) ಮಾಧವಿಯ ಮನೆಯಿಂದ ಮಾದರಿಯ ಮನೆಗೆ! ನನ್ನ ಜೀವನವೇ ವಿಚಿತ್ರವಾದುದು! ನಿಷ್ಕಾರಣವಾಗಿ ಕನ್ನಗಿಗೆ ಬನ್ನದ ಅನ್ನ ಉಣಿಸಿದೆ; ಕೌಶಿಕರು ತಂದಿತ್ತ ಮಾಧವಿಯ ಪತ್ರದ ಪ್ರಕಾರ ಮಾಧವಿಯ ಮೇಲೂ ಮಿಥ್ಯಾರೋಪ ಹೊರಿಸಿ ಅವಳನ್ನು ದುಃಖಕೂಪಕ್ಕೆ ದೂಡಿ ಬಂದೆ; ಈಗ ಈ ಮಾತಾಯಿಯ ಮನೆಗೆ ಬಂದಿದ್ದೇನೆ. ನನ್ನಿಂದ ಈ ತಾಯಿಗೂ ದುಃಖ ಸಂಭವಿಸದಿರಲಿ, ಸಂಭವಿಸದಿರಲಿ; ಕೋವಲನ್ ಕಾಲಿಟ್ಟ ಕಡೆಗೆಲ್ಲ ಕಂಬನಿ ಹರಿಯದಿರಲಿ!

ಕನ್ನಗಿ : (ತನ್ನಲ್ಲಿ) ಇನ್ನಾದರೂ ಬಿಟ್ಟುಹೋಗು ಓ ಕೆಟ್ಟ ಕನಸೆ! ಏಕೆ ನನ್ನ ಬೆನ್ನು ಹತ್ತಿ ಬರುತ್ತಿರುವೆ? ಈ ಪೂಜ್ಯ ಗುರುಗಳ, ಈ ಪುಣ್ಯ ಮಾತೆಯ ಆಣೆ ನಿನಗೆ–ತೊಲಗು, ಓ ಶನಿಯೆ, ತೊಲಗು!

(ಮಾದರಿ ತೆರವು ಮಾಡಿಕೊಟ್ಟ ಗುಡಿಸಲೊಂದರಲ್ಲಿ ಕೋವಲನ್, ಕನ್ನಗಿಯರ ಹೊಸ ಸಂಸಾರ)

ಮಾದರಿ : ಇದು ಬಹಳ ಚಿಕ್ಕ ಗುಡಿಸಲು ಪುಣ್ಯ ಜೀವಿಗಳೆ. ಬಡವಿಯಾದ ನಾನು ಇದಕ್ಕಿಂತ ಹೆಚ್ಚಿನದೇನನ್ನೂ ಕೊಡುವ ಸ್ಥಿತಿಯಲ್ಲಿಲ್ಲ. ಇದೋ, ಅಡಿಗೆ ಮಾಡಿಕೊಳ್ಳಲು ಒಂದೆರಡು ಪಾತ್ರೆಗಳು, ನಾಲ್ಕಾರು ದಿನ ಸಾಲುವಷ್ಟು ಅಕ್ಕಿ ಬೇಳೆಗಳು, ಇವನ್ನು ಸ್ವೀಕರಿಸಿ ನನ್ನನ್ನು ಧನ್ಯಳನ್ನಾಗಿ ಮಾಡಿರಿ.

ಕೋವಲನ್ : ನಿನ್ನ ಮನೆ ಚಿಕ್ಕದಿದ್ದರೇನು ತಾಯೆ, ಮನ ದೊಡ್ಡದಿದೆ–ಈ ಮಧುರಾನಗರಕ್ಕಿಂತಲೂ ದೊಡ್ಡದಿದೆ! ಅದಕ್ಕೆ ನಮಸ್ಕಾರ! ನಾವಿದನ್ನು ಗುಡಿಸಲೆಂದು ಭಾವಿಸಿಲ್ಲ, ಗುಡಿಯೆಂದು ಗೌರವಿಸುವೆವು! ಇಲ್ಲಿ ನಿಜವಾಗಿ ನಮಗೆ ಪವಿತ್ರ ಜೀವನದ ಪರಿಚಯವಾಗುವುದು.

ಕನ್ನಗಿ : ತಾಯೆ, ನಿನಗೆ ತಕ್ಕವರಾಗಲು ನಾವಿಲ್ಲಿ ತಪಿಸುವೆವು. ಆಶೀರ್ವದಿಸು!

ಮಾದರಿ : ದೇವರು ಕಲ್ಯಾಣ ಮಾಡಲಿ ನಿಮಗೆ; ಬೇಗ ಭಾಗ್ಯ ಮರಳಲಿ ನಿಮಗೆ; ಬರುವೆ. (ಹೋಗುವಳು)

ಕೋವಲನ್ : ಯಾವ ಸಾಮ್ರಾಟನಿಗೆ ಈ ತಾಯಿಗಿಂತ ದೊಡ್ಡ ಮನಸ್ಸು

ಇದ್ದೀತು ಕನ್ನಗಿ?

ಕನ್ನಗಿ : ದೊಡ್ಡವರನ್ನು ನೋಡಿದ್ದೆವು; ದೊಡ್ಡ ಮನಸ್ಸನ್ನು ನೋಡಿರಲಿಲ್ಲ; ಈಗ ನೋಡಿದೆವು! ಇದೇನು ಸಣ್ಣ ಪುಣ್ಯವೇ?

ಕೋವಲನ್ : ತಾಯಿ ಮಾದರಿಯ ತಳಿ ನೂರ್ಮಡಿಸಲಿ! ನಾನಿನ್ನು ಮಧುರಾನಗರಿಗೆ ಹೋಗಿ ಒಂದು ನೂಪುರವನ್ನು ಮಾರಿಕೊಂಡು ಬರುವೆನು. ನೀನು ಸ್ವಲ್ಪ ಹೊತ್ತು ವಿಶ್ರಮಿಸು.

ಕನ್ನಗಿ : ಜೋಕೆ, ಪರಸ್ಥಳ, ಪರಿಚಿತರಿಲ್ಲದ ಸ್ಥಳ!

ಕೋವಲನ್ : ತಾಯಿ ಮಣಿಮೇಖಲೆಯಿದ್ದಾಳೆ. ತಾಯಿ ಮಾದರಿಯಿದ್ದಾಳೆ. ಅವರ ಹರಕೆಗಳು ನನಗೆ ರಕ್ಷಾಕವಚವಾಗಿರುವವರೆಗೆ ನನಗೆ ಭಯವಿಲ್ಲ! ಕನ್ನಗಿ! ನೀನು ಗಾಬರಿಗೊಳ್ಳಬೇಡ.

(ಹೊರಡುವನು. ತೆರೆಯೆದ್ದಾಗ ಕೋವಲನ್ ಮಧುರೆಯ ರಾಜಮಾರ್ಗದಲ್ಲಿ ಕಾಣಿಸುವನು. ಅರಮನೆಯತ್ತಣಿಂದ ಅರಮನೆಯ ಅಕ್ಕಸಾಲಿಗ ಬರುತ್ತಾನೆ. ಭಯದಿಂದ ಕಪ್ಪಿಟ್ಟ ಮುಖ, ತತ್ತರಿಸುತ್ತಲಿರುವ ಕಾಲುಗಳು)

ನೋಟ ೨೦

ಅಕ್ಕಸಾಲಿಗ : ಪಾಂಡ್ಯರಾಜರ ಪಟ್ಟದ ರಾಣಿ ಪಾಂಡಿಮಾದೇವಿಯ ನೂಪುರವನ್ನೇನೋ ಕದ್ದೆ; ಅದನ್ನು ದಕ್ಕಿಸಿಕೊಳ್ಳುವುದು ಎಂತೆಂದು ಕಕ್ಕಾವಿಕ್ಕಿಯಾಗಿದ್ದೇನೆ! ರಾಜ್ಯದಲ್ಲೆಲ್ಲ ನಾನು ಕದ್ದ ನೂಪುರದ ಶೋಧನೆ ನಡೆದಿದೆ. ಸಾವಿರಾರು ಗುಪ್ತಚಾರರು ಈಗ ನಗರದ ಮೂಲೆ ಮೂಲೆಯನ್ನು ಶೋಧಿಸತೊಡಗಿದ್ದಾರೆ. ನಾನೇನಾದರೂ ಸಿಕ್ಕಿಬಿದ್ದೆನೆಂದರೆ ಮರಣದಂಡನೆಗೆ ಗುರಿಯಾಗುವೆ! ಏನು ಮಾಡಲಿ, ಯಾವ ಉಪಾಯ ಹೂಡಿ ಈ ಕುತ್ತಿನಿಂದ ಪಾರಾಗಲಿ? (ಮುಂದೆ ನೋಡಿ) ಇಲ್ಲಿ ಯಾರೋ ಬರುತ್ತಿರುವಂತಿದೆ. ವಿಚಾರಿಸಿ ನೋಡುವ. ಇವರನ್ನೇ ಬಲೆಗೆ ಹಾಕಿ ನಾನು ಪಾರಾಗಲು ಬರುವಂತಿದ್ದರೆ ಯಾಕೆ ಯತ್ನಿಸಬಾರದು?

(ಕೋವಲನ್ ಬರುವನು. ಅಕ್ಕಸಾಲಿಗ ಎದುರಾಗಿ)

ವಂದಿಸುವೆ ಬಂಧು. ನೀವಾರು, ಎಲ್ಲಿಗೆ ಹೊರಟಿರುವಿರಿ?

ಕೋವಲನ್ : ನಾನೊಂದು ನೂಪುರವನ್ನು ಮಾರಲು ಬಂದಿದ್ದೇನೆ. ಅರಮನೆಯ ಅಕ್ಕಸಾಲಿಯರು ಸಿಕ್ಕರೆ ನಿನ್ನ ಕೆಲಸವಾಗುವುದೆಂದು ಯಾರೋ ಹೇಳಿದರು. ಅವರನ್ನು ಅರಸುತ್ತಾ ಹೊರಟಿದ್ದೇನೆ.

ಅಕ್ಕಸಾಲಿ : ಸುದೈವವೆಂದರೆ ಇದಕ್ಕೆನ್ನಬೇಕು! ನಾನೇ ಅರಮನೆಯ ಅಕ್ಕಸಾಲಿಗ. ನೀವು ತಂದ ನೂಪುರವನ್ನು ತೋರಿಸಿರಿ.

ಕೋವಲನ್ : (ತೆಗೆದು) ಇದು ನಾನು ತಂದ ನೂಪುರ.

ಅಕ್ಕಸಾಲಿ : (ನೋಡಿ ಬೆರಗಾಗಿ ತನ್ನಲ್ಲಿಯೇ) ಕಣ್ಣು ಕೋರೈಸುವ ನೂಪುರ; ನಾನು ಕದ್ದ ಮಹಾರಾಣಿಯವರ ನೂಪುರಕ್ಕೂ ಇದಕ್ಕೂ ಎಷ್ಟು ಸಾಮ್ಯವಿದೆಯಲ್ಲ! ಅದೇ ಇದೆಂದರೂ ನಡೆಯುತ್ತದೆ. ಪಾರಾದೆ ಕುತ್ತಿನಿಂದ! ರಾಣಿಯವರ ನೂಪುರ ಕದ್ದ ಕಳ್ಳ ಇವನೇ ಎಂದು ಸಿದ್ಧಪಡಿಸಿ ನಾನು ಪಾರಾಗಿಬಿಡುತ್ತೇನೆ! ಸುದೈವವೆಂದರೆ ಇದಕ್ಕೆನ್ನಬೇಕು ! (ಕೋವಲನ್‌ನಿಗೆ) ಬಂಧು, ಇದು ಬಹು ಬೆಲೆಯುಳ್ಳ ನೂಪುರ. ಕೊಂಡರೆ ಇದನ್ನು ಮಹಾರಾಜರೇ ಕೊಳ್ಳಬೇಕು. ನೀನೀ ಮಂದಿರದಲ್ಲಿ ಸ್ವಲ್ಪ ಹೊತ್ತು ವಿಶ್ರಮಿಸು. ನಾನೀಗಲೇ ಮಹಾರಾಜರನ್ನು ಕಂಡು ಮಾತನಾಡಿಕೊಂಡು ಬರುವೆನು.

ಕೋವಲನ್ : ನನ್ನ ಪಾಲಿನ ಭಾಗ್ಯದೇವತೆಯಂತೆ ಬಂದಿರಿ ನೀವು! ಹೋಗಿ ಬನ್ನಿ, ನಾನಿಲ್ಲಿಯೇ ನಿಮ್ಮ ನಿರೀಕ್ಷೆಯಲ್ಲಿರುವೆನು!

ಅಕ್ಕಸಾಲಿ : ನಾನು ನಿಮ್ಮ ಪಾಲಿನ ಭಾಗ್ಯದೇವತೆಯೋ, ನೀವೂ ನನ್ನ ಪಾಲಿನ ಭಾಗ್ಯದೇವತೆಯೋ ಹೇಳಲಾರೆ ಬಂಧು! ಇದರ ಇತ್ಯರ್ಥ ಬೇಗ ಆಗಲಿದೆ! ಹೋಗಿ ಬರುವೆ.

(ಹೋಗುವನು. ತೆರೆ ಏಳುವುದು. ಹಿಂದೆ ಪಾಂಡ್ಯರಾಜನ ಅರಮನೆ ಕಾಣಿಸುವುದು. ಅಲ್ಲಿ–)

ನೋಟ ೨೧

ದ್ವಾರಪಾಲಕ : ಏ, ಅಕ್ಕಸಾಲಿ, ಈಗ ಮಹಾರಾಜರನ್ನು ಕಾಣಬೇಡ. ಪಟ್ಟದರಾಣಿ ಪಾಂಡಿಮಾದೇವಿಯವರು ಸಿಟ್ಟಿಗೆದ್ದರಂತೆ ಮಹಾರಾಜರ ಮೇಲೆ. ಮಹಾರಾಜರು ಸಿಟ್ಟಿಗೆದ್ದು ತಲೆಶೂಲೆಯೆನ್ನುತ್ತಿರುವರಂತೆ. ಇದು ಸಕಾಲವಲ್ಲ ಅವರ ಸಂದರ್ಶನಕ್ಕೆ.

ಅಕ್ಕಸಾಲಿ : ಇದು ಅತ್ಯಂತ ಸಕಾಲ ನಾನು ಬಂದಿರುವ ಕೆಲಸಕ್ಕೆ, ದ್ವಾರಪಾಲಕ. ನಾನೀಗಲೇ ನೋಡಬೇಕು ಮಹಾರಾಜರನ್ನು.

ದ್ವಾರಪಾಲಕ: ಹಾಗಾದರೆ ಹೋಗು. ಪ್ರಾಪ್ತಿಯಲ್ಲಿ ಪಾಲು; ಮರೆಯಬೇಡ!

ಅಕ್ಕಸಾಲಿ : ಎಂದಾದರೂ ಮರೆತಿದ್ದೆನೆ? (ದೇಶಾವರಿ ನಗೆ ಇಬ್ಬರಿಗೂ ಮಹಾರಾಜರ ಮುಂದೆ) ಮಹಾರಾಜರಿಗೆ ಜಯವಾಗಲಿ!

ಮಹಾರಾಜ : ನನ್ನ ತಲೆ ಸಿಡಿಯುತ್ತಿರುವಾಗ ನಿನ್ನನ್ಯಾರು ಒಳಗೆ ಬಿಟ್ಟರು?

ಅಕ್ಕಸಾಲಿ : ಅತ್ಯಂತ ಸಂತೋಷದ ಸುದ್ದಿ ತಂದಿದ್ದೇನೆ ಮಹಾಪ್ರಭು. ಮಹಾರಾಣಿಯವರ ಕಳೆದ ನೂಪುರ ಇದೋ ಸಿಕ್ಕಿದೆ. (ಕೋವಲನ್‌ನ ನೂಪುರ ತೋರಿಸುವನು) ಇದನ್ನು ಕದ್ದೊಯ್ಯುತ್ತಿದ್ದ ಕಳ್ಳನೂ ಸಿಕ್ಕಿಬಿದ್ದಿದ್ದಾನೆ! ಅವನಿಗಾವ ಶಿಕ್ಷೆ ವಿಧಿಸಬೇಕೆಂಬ ಬಗ್ಗೆ ಅಪ್ಪಣೆಯಾಗಬೇಕು.

ಮಹಾರಾಜ : ಕಳ್ಳ ನೂಪುರದೊಡನೆಯೇ ಸಿಕ್ಕಿರುವನಾದ ಕಾರಣ ಕದ್ದವನು ಅವನೇ ಎಂಬುದು ಸಿದ್ಧವಾಯಿತು. ಆದುದರಿಂದ ಮರಣದಂಡನೆಯೇ ಶಿಕ್ಷೆ.

ಅಕ್ಕಸಾಲಿ : ಅತ್ಯಂತ ಸಮರ್ಪಕವಾದ ಶಿಕ್ಷೆ ಮಹಾಪ್ರಭು. ನೂಪುರವಿಲ್ಲಿದೆ. ಸ್ವೀಕರಿಸಬೇಕು. ಈಗ ಮಹಾಪ್ರಭುಗಳ ಆಜ್ಞೆಯಂತೆ ಮರಣದಂಡನೆ ವಿಧಿಸುವ ಏರ್ಪಾಟಾಗಲಿ.

ಮಹಾರಾಜ : ರಾಜಸೇವಕರನ್ನು ಕರೆದೊಯ್ದು ನೀವೇ ಆ ಕೆಲಸ ಮುಗಿಸಿಬಿಡಿರಿ.

ಅಕ್ಕಸಾಲಿ : ಮಹಾಪ್ರಭುಗಳು ಈ ದಾಸನಲ್ಲಿ ಇರಿಸಿರುವ ವಿಶ್ವಾಸಕ್ಕಾಗಿ ಶತಶತ ವಂದನೆಗಳು.

ಮಹಾರಾಜ : ಹರಟುವುದು ಸಾಕು, ಹೋಗಿರಿನ್ನು! ನನ್ನ ತಲೆ ನೋವು ತಾಳಲಾರೆ. ರಾಜವೈದ್ಯರು ಬರಲಿ! (ತೆರೆ ಬೀಳುವುದು)

ನೋಟ ೨೨

(ರಾಜಮಾರ್ಗದಲ್ಲಿ ಅಕ್ಕಸಾಲಿ ರಾಜಸೇವಕರು ಪ್ರವೇಶಿಸುತ್ತಾರೆ. ಅಕ್ಕಸಾಲಿ ಕಳ್ಳನೆಂದು ಕೋವಲನ್‌ನನ್ನು ತೋರಿಸುತ್ತಾನೆ. ಅವನ ಮುಖ ನೋಡಿ)

ರಾಜಸೇವಕ : ಇವರನ್ನು ನೋಡಿದರೆ ಮಹನೀಯರಂತೆ ಕಾಣುತ್ತಾರೆ. ಇವರು ನೂಪುರ ಕದ್ದರೆಂದರೆ ಹೇಗೆ ಒಪ್ಪಬೇಕು ಅಕ್ಕಸಾಲಿಗಳೆ? ಇಂಥವರಿಗೆ ಮರಣದಂಡನೆ ವಿಧಿಸುವುದು ಪಾಪವಲ್ಲವೆ? ಪ್ರತ್ಯಕ್ಷವಾದರೂ ಪ್ರಮಾಣಿಸಿ ನೋಡೆಂದು ಹೇಳಿದೆ......

ಅಕ್ಕಸಾಲಿ : ನೀನೇನು ರಾಜಾಜ್ಞೆಯನ್ನು ಪಾಲಿಸಲು ಬಂದಿರುವೆಯೋ, ಅದರ ಭರ್ತ್ಸನೆ ಮಾಡಲು ಬಂದಿರುವೆಯೋ, ರಾಜಸೇವಕ? ಸಣ್ಣ ಬಾಯಿ–ದೊಡ್ಡ ಮಾತೆಂಬುದಕ್ಕೆ ಸಾಕ್ಷಿಯಾಗಿರುವೆ ನೀನು! ತಕ್ಷಣ ಶಿರಚ್ಛೇದನ ಮಾಡುವಿಯೋ ರಾಜಾಜ್ಞೆಯ ಉಲ್ಲಂಘನೆಯ ಅಪರಾಧಕ್ಕಾಗಿ ನೀನು ಶಿರಚ್ಛೇದನ ಮಾಡಿಸಿಕೊಳ್ಳುವಿಯೋ?

ರಾಜ ಸೇವಕ : ನಿಮ್ಮಂಥವರ ವೈರ ಕಟ್ಟಿಕೊಂಡು ನಾವು ಬದುಕಲಿಕ್ಕಾಗುತ್ತದೆಯೆ? ಹೊರಟೆ, ರಾಜಾಜ್ಞೆಯ ಪರಿಪಾಲನೆಗೆ? (ಇಬ್ಬರೂ ಕೋವಲನ್‌ನನ್ನು ಎಳೆದುಕೊಂಡು ಹೋಗುವರು. ನಗರದಲ್ಲೆಲ್ಲ ಗುಜು ಗುಜು)

ಒಬ್ಬ : ಎಂದಿಲ್ಲದ ಅನ್ಯಾಯ ಇಂದು ನಡೆದು ಹೋಯಿತು. ಈ ಪುಣ್ಯ ನಗರದಲ್ಲಿ! ಆ ಪುಣ್ಯಾತ್ಮ ಕೋವಲನ್‌ನನ್ನು ಏನೊಂದೂ ವಿಚಾರಣೆಯಿಲ್ಲದೆ ಕತ್ತು ಕತ್ತರಿಸಿ ಕೊಲ್ಲುವುದೆ?

ಇನ್ನೊಬ್ಬ : ಈ ಅನ್ಯಾಯದ ಸುದ್ದಿ ಕೇಳಿದವರೆಲ್ಲ ತಲ್ಲಣಿಸಿಹೋಗಿದ್ದಾರೆ ಮಿತ್ರ! ಈ ನಗರಕ್ಕೆ, ಈ ರಾಜ್ಯಕ್ಕೆ ಯಾವ ಅನಾಹುತ ಕಾದಿದೆಯೋ ಯಾರು ಬಲ್ಲರು?

ಒಬ್ಬ : ಪರಮೋಚ್ಚ ಅಧಿಕಾರದಲ್ಲಿರುವವರು ಸಾರಾಸಾರ ವಿಚಾರಮಾಡದೆ ಅಧಿಕಾರವನ್ನು ಉಪಯೋಗಿಸಿದರೆ ದೇವರೇ ಗತಿ ನಮಗೆ!

ಇನ್ನೊಬ್ಬ : ತಪ್ಪು ಎಲ್ಲರೂ ಮಾಡುತ್ತಾರೆ. ಆದರೆ ಸಾಮಾನ್ಯರು ಮಾಡುವ ತಪ್ಪಿನಿಂದ ಸಾಮಾನ್ಯ ಕೆಡುಕು ಸಂಘಟಿಸುತ್ತದೆ; ಅಸಾಮಾನ್ಯರು ಮಾಡುವ ತಪ್ಪಿನಿಂದ ಅಸಾಮಾನ್ಯವಾದ ಕೆಡುಕೇ ಒಡಮೂಡುತ್ತದೆ!

ಒಬ್ಬ : ದೇವರೇ, ಕೋಟಿ ಕೋಟಿ ಜನರ ಮೇಲೆ ಅಧಿಕಾರ ಪಡೆದವರಿಗೆ ಅದಕ್ಕೆ ತಕ್ಕ ನ್ಯಾಯಬುದ್ಧಿಯನ್ನೂ ನೀಡು! (ತೆರೆ ಏಳುತ್ತದೆ)

ನೋಟ ೨೩

(ಕಾಡಿನಲ್ಲಿ ವಧೆಯ ಸ್ಥಾನದಲ್ಲಿ ಕೋವಲನ್‌ನ ಕತ್ತು ಕತ್ತರಿಸಿಬಿದ್ದಿದೆ. ಕೋವಲನ್‌ನ ಶವದ ಮೇಲೆ ಕೆಡೆದು ಕನ್ನಗಿಯು ಶೋಕಿಸುತ್ತಿದ್ದಾಳೆ)

ಕನ್ನಗಿ : ಸ್ವಾಮಿ, ನನ್ನ ಸರ್ವಸ್ವದ ಸ್ವಾಮಿ, ನನ್ನೊಲವೆ, ನನ್ನ ಗತಿಮತಿಯೆ, ನನ್ನ ಪ್ರಾಣವೆ-ನಿರ್ದೋಷಿಯಾದ ನೀವು ಕಳವಿನ ಆರೋಪ ಹೊತ್ತು ಕೊಲೆಯಾಗುವುದೆ? ನಿಮ್ಮನ್ನು ಕಳೆದುಕೊಂಡುದಕ್ಕೆ ಶೋಕಿಸಲೆ, ನಿಮ್ಮ ಮೇಲೆ ಈ ಆರೋಪ ಬಂದುದಕ್ಕೆ ಶೋಕಿಸಲೆ, ನೀವಿಂತು ವಧೆಗೊಂಡು ಈ ಕಾಡಿನಲ್ಲಿ ಬಿದ್ದಿರುವುದಕ್ಕೆ ಶೋಕಿಸಲೆ? ಎಂತು ಸೈರಿಸಲಿ ಈ ದುರಂತವನ್ನು, ಹೇಗೆ ತಡೆದುಕೊಳ್ಳಲಿ ಉಕ್ಕುವ ದುಃಖವನ್ನು? ನನ್ನನ್ನೂ ಕರೆದೊಯ್ಯಿರಿ ಸ್ವಾಮಿ ನಿಮ್ಮೊಡನೆ, ನಾನೂ ಬರುವೆ ನಿಮ್ಮೊಡನೆ.... ಏನು, ನೀವು ನಿರಪರಾಧಿ ಎಂಬುದನ್ನು ಸಿದ್ಧಗೊಳಿಸಿ, ನಿಮಗಂಟಿದ ಅಪಕೀರ್ತಿಯನ್ನು ತೊಡೆದುಹಾಕುವವರೆಗೆ ನನಗೆ ನಿಮ್ಮೊಡನೆ ಬರಲು ಅಪ್ಪಣೆಯಿಲ್ಲವೆ? ಈ ಕಾರ್ಯ ನಾನು ಮಾಡದೆ ಬಂದರೆ ಕೊನೆಯವರೆಗೆ ನಿಮ್ಮ ಆತ್ಮ ಅಶಾಂತವಾಗಿ ಉಳಿಯುವುದೆ? ಹಾಗಾಗಗೊಡೆ ಸ್ವಾಮಿ,

ಹಾಗಾಗಬಿಡೆ! ನೀವು ನಿರ್ದೋಷಿಯೆಂದು ಸಿದ್ಧಗೊಳಿಸಿಯೇ ನಿಮ್ಮೊಡನೆ ಬರುವೆ! ಹೊರಟೆ.... ಭದ್ರಕಾಳಿಯಾಗಿ ಹೊರಟೆ. ಅಧಿಕಾರದ ಕೋಟೆಯ ಮೇಲೆ ದೈನ್ಯದ ದಾಳಿಯಾಗಿ ಹೊರಟೆ; ಅನ್ಯಾಯದ ಅರಸೊತ್ತಿಗೆಯ ಮೇಲೆ ನ್ಯಾಯನಿಷ್ಠುರತೆಯ ಪ್ರಚಂಡ ಪ್ರಹಾರವಾಗಿ ಹೊರಟೆ! (ತೆರೆಯೇಳುವುದು)

ನೋಟ ೨೪

(ನಗರ ವೀಧಿಯಲ್ಲಿ ಕೋಪೋದ್ರಿಕ್ತ ಕನ್ನಗಿಯ ಪ್ರವೇಶ. ಜನರ ಉದ್ಗಾರ)

ಒಬ್ಬ : ಯಾರೀ ರೌದ್ರ ರೂಪಿಣಿ, ಕನಲಿದ ಕಾಳಿ, ರೊಚ್ಚಿಗೆದ್ದ ದುರ್ಗೆ?

ಇನ್ನೊಬ್ಬ : ಕೋವಲನ್ ಸತಿ ಕನ್ನಗಿಯೇ ಇರಬೇಕು. ಎಂಥ ಭಯಂಕರಾಕಾರವಿದು? ಕೆದರಿದ ಕೇಶ, ಕೆಂಪಡರಿದ ಕಿಡಿಕಾರುವ ಕಣ್ಣುಗಳು, ಅವಡುಗಚ್ಚಿದ ಬಾಯಿ, ಕ್ರಾಂತಿ ಭೈರವಿಯಂತೆ ಹೊರಟಿರುವಳಲ್ಲ! ಯಾವ ದುಷ್ಪರಿಣಾಮ ಎರಗುವುದೋ ಈ ನಗರಿಯ ಮೇಲೆ!

(ತೆರೆ ಏಳುವುದು. ಹಿಂದೆ ಪಾಂಡ್ಯರಾಜನ ಅರಮನೆ)

ನೋಟ ೨೫

ಅರಮನೆಯ ದ್ವಾರಪಾಲಕ : ಯಾರಮ್ಮ ನೀನು-ಮಾರಿಯಂತೆ ತೋರುತ್ತಿರುವಿ?

ಕನ್ನಗಿ : ನಾನು ಮಾರಿಯೇ ನಿಮ್ಮ ಅಧರ್ಮದ ಅರಸನಿಗೆ!

ದ್ವಾರಪಾಲಕ : ನಾಲಗೆ ಬಿಗಿಹಿಡಿದು ಮಾತನಾಡಮ್ಮ; ಇಲ್ಲದಿದ್ದರೆ ಮಹಾರಾಜರಿಗೆ ತಿಳಿಸಬೇಕಾದೀತು ನಿನ್ನ ಉದ್ಧಟತನವನ್ನು!

ಕನ್ನಗಿ : ನೀನು ತಿಳಿಸುವ ಮೊದಲು ನಾನೇ ತಿಳಿಸುವೆ ನಿನ್ನ ಮಹಾರಾಜರಿಗೆ-ನೀವು ಅನ್ಯಾಯಿಗಳು, ಅಧರ್ಮಿಗಳು, ಅತ್ಯಾಚಾರಿಗಳು ಎಂದು. ಬಿಡು ನನ್ನನ್ನು ಒಳಗೆ!

ದ್ವಾರಪಾಲಕ : ಮಹಾರಾಜರ ಅಪ್ಪಣೆಯಿಲ್ಲದೆ ಒಳಗೆ ಬಿಡಲಾಗುವುದಿಲ್ಲ.

ಕನ್ನಗಿ : ಅಲ್ಲಿಯವರೆಗೆ ನನಗೆ ತಾಳಲಾಗುವುದಿಲ್ಲ. ನನ್ನ ಪತಿಯ ಹಂತಕನನ್ನು ನಾನೀಗಲೇ ನೋಡಬೇಕು; ನನ್ನ ಪತಿ ನಿರ್ದೋಷಿಯೆಂಬುದನ್ನು ಸಿದ್ಧ ಮಾಡಲೇಬೇಕು; ನನ್ನ ಪತಿಯ ಆತ್ಮಕ್ಕೆ ಶಾಂತಿ ನೀಡಲೇಬೇಕು! ದೂರ

ಸರಿ...... ದ್ವಾರಪಾಲಕಾ, ನಾನೀಗ ಮನುಷ್ಯಳಲ್ಲ-ಮಹಾಜ್ವಾಲೆ, ಧಗಧಗಿಸುತ್ತಿರುವ ಅಗ್ನಿಧಾರೆ (ದ್ವಾರಪಾಲಕ "ದುಡಕದಿರು ತಾಯೆ, ದುಡಕದಿರು" ಎಂದು ನುಡಿಯುತ್ತಿದ್ದರೂ ಕನ್ನಗಿ ನುಗ್ಗಿ ಒಳಗೆ ಪ್ರವೇಶಿಸುವಳು. ಪ್ರವೇಶಿಸಿ) ಎಲ್ಲಿಹನು ಪಾಪಲೇಪಿತ ಪಾಂಡ್ಯರಾಜ? ಎಲ್ಲಿಹನು ನಿರ್ದೋಷಿಯಾದ ನನ್ನ ಪತಿಯ ತಲೆ ಹೊಯ್ಸಿದ ಅನ್ಯಾಯಿ....?

ಪಾಂಡ್ಯರಾಜ : ಯಾರಮ್ಮ ನೀನು? ನಾನಾವ ಅನ್ಯಾಯ ಮಾಡಿರುವೆನು, 'ಅನ್ಯಾಯಿ'ಯೆಂದು ಕರೆಯಲು?

ಕನ್ನಗಿ : ದೊರೆಯೆ, ಯಾರ ಮಾತನೋ ನಂಬಿ ದೇವರಂತಿದ್ದ ನನ್ನ ನಿರಪರಾಧಿ ಪತಿಗೆ ಮರಣದಂಡನೆ ವಿಧಿಸಿದುದು ಅನ್ಯಾಯವಲ್ಲವೆ? ಇದು ಅನ್ಯಾಯವಲ್ಲದಿದ್ದರೆ ಇನ್ನಾವುದು ಅನ್ಯಾಯ?

ಪಾಂಡ್ಯರಾಜ : ಶೋಕಭರದಲ್ಲಿ ಸಿಕ್ಕಂತೆ ಮಾತನಾಡದಿರಮ್ಮ. ನಿನ್ನ ಪತಿ ನೂಪುರ ಕದ್ದುದು ಸುಳ್ಳೆ? ಕಳವು ಮಾಡಿದವರಿಗೆ ಶಿಕ್ಷೆ ವಿಧಿಸುವುದು ಅನ್ಯಾಯವೇ?

ಕನ್ನಗಿ : ನನ್ನ ಪತಿ ನೂಪುರ ಕದ್ದನೆಂಬುದು ಶುದ್ಧ ಸುಳ್ಳು; ಸ್ವಲ್ಪ ಸೈರಣೆಯಿಂದ ವಿಚಾರಿಸಿದ್ದರೆ ಇದರ ಸತ್ಯತೆ ತಮಗೇ ವೇದ್ಯವಾಗುತ್ತಿತ್ತು ದೊರೆಗಳೆ.

ಪಾಂಡ್ಯರಾಜ : (ನೂಪುರವನ್ನು ಮುಂದೆಸೆದು) ನೋಡಮ್ಮಾ, ಕಣ್ದೆರೆದು ನೋಡು; ಈ ನೂಪುರ ಇದೇ ಅರಮನೆಯಿಂದ ಕಳವಾದುದು; ನಿನ್ನ ಗಂಡನ ಹತ್ತಿರ ಸಿಕ್ಕಿತು. ಅಂಗೈನೆಲ್ಲಿಗೆ ಕನ್ನಡಿ ಬೇಕೆ? ನಿನ್ನ ಗಂಡನಿದನ್ನು ಕದ್ದನೆಂಬುದಕ್ಕೆ ಬೇರೆ ಸಾಕ್ಷಿ ಬೇಕೆ?

ಕನ್ನಗಿ : (ನೋಡಿ) ಇದು ಈ ಅರಮನೆಯ ನೂಪುರವಲ್ಲ ಪ್ರಭು, ನನ್ನ ನೂಪುರ. ನನಗೆ ನನ್ನ ತಂದೆ ತಾಯಿಗಳಿತ್ತ ನೂಪುರ. ಇದರ ಜೊತೆಯ ಇನ್ನೊಂದು ನೂಪುರ ನನ್ನ ಬಳಿಯಲ್ಲಿದೆ.

ಪಾಂಡ್ಯರಾಜ : (ವಿಸ್ಮಿತನಾಗಿ) ಇದು ನಿನ್ನ ನೂಪುರವೆ? ಇದಕ್ಕೆ ಆಧಾರವೇನು?

ಕನ್ನಗಿ : ಇದರಲ್ಲಿ ಮಾಣಿಕ್ಯಗಳಿವೆ; ನಿಮ್ಮ ನೂಪುರದಲ್ಲಿಯೂ ಮಾಣಿಕ್ಯಗಳಿವೆಯೆ?

ಪಾಂಡ್ಯರಾಜ : (ಗಾಬರಿಯಾಗಿ) ಇಲ್ಲ, ಅರಮನೆಯ ನೂಪುರದಲ್ಲಿ ಮುತ್ತುಗಳಿವೆ. ಇದರಲ್ಲಿ ಮಾಣಿಕ್ಯಗಳಿದ್ದುದು ನಿಜವಾದರೆ ಇದು ಅರಮನೆಯ ನೂಪುರವಲ್ಲವೆಂಬುದು ಸಿದ್ಧವಾದಂತೆ.

ಕನ್ನಗಿ : ಈಗಿಂದೀಗ ಸಿದ್ಧಮಾಡಿ ತೋರುವೆನಿದನ್ನು ಪ್ರಭುಗಳೆ.

ಇದೋ ನೋಡಿ (ನೂಪುರವನ್ನು ಸಿಂಹಾಸನಕ್ಕೆ ಅಪ್ಪಳಿಸುವಳು. ನೂಪುರ ಒಡೆದು ಥಳಥಳಸುವ ನವಮಾಣಿಕ್ಯಗಳು ಹೊರ ಚೆಲ್ಲುವುವು) ಇವುಗಳನ್ನು ನೋಡಿಯಾದರೂ ನಂಬಿರಿ ನನ್ನ ಮಾತನ್ನು ದೊರೆಗಳೆ!

ಪಾಂಡ್ಯರಾಜ : ನಂಬಿದೆ, ತಾಯೆ ನಂಬಿದೆ! ಈ ನೂಪುರ ಅರಮನೆಯದಲ್ಲ. ನಿನ್ನದೇ ಇರಬೇಕು. ನಿಷ್ಕಾರಣವಾಗಿ ನಿರಪರಾಧಿಯೊಬ್ಬನ ಮರಣದಂಡನೆಗೆ ಆಜ್ಞೆಯಿತ್ತೆ! ಇನ್ನಷ್ಟು ಪರಿಶೋಧಿಸಿ, ವಿಚಾರಣೆ ನಡೆಸಿ ನ್ಯಾಯ ನಿರ್ಣಯ ಮಾಡಿದ್ದರೆ ಆಕಾಶವೇನೂ ಕಳಚಿ ಬೀಳುತ್ತಿರಲಿಲ್ಲ. ಆದರೆ ಮಾನಸಿಕ ಸಮತೋಲನವನ್ನು ಕಳೆದುಕೊಂಡಿದ್ದ ನಾನು ದುಡುಕಿದೆ; ದುಡುಕು ಕೆಡುಕನ್ನು ತಂದಿತು! ಅನ್ಯಾಯವಾಗಿ ಒಬ್ಬ ಪುಣ್ಯಾತ್ಮನ ಹತ್ಯೆಯಾಯಿತು; ಈ ಸಿಂಹಾಸನಕ್ಕೆ ಸಾಧ್ವಿಯೊಬ್ಬಳ ನೂಪುರ ಅಪ್ಪಳಿಸಿ ಭಗ್ನವಾಯಿತು! ಇದು ಭಗ್ನ ನೂಪುರವಲ್ಲ, ನನ್ನ ಭಗ್ನ ಹೃದಯದ, ಈ ರಾಜ್ಯದ ಭಗ್ನ ನ್ಯಾಯಮೂರ್ತಿಯ ಪ್ರತೀಕ! ಕೆಟ್ಟೆ ಕೆಟ್ಟೆ! ಮನಸ್ಸು ಸ್ತಿಮಿತದಲ್ಲಿಲ್ಲದಾಗ ಮರಣದಂಡನೆಯಂಥ ಘೋರ ಶಿಕ್ಷೆಯನ್ನು ಸಾರಾಸಾರ ವಿಚಾರಿಸದೆ ವಿಧಿಸಿ ಕೆಟ್ಟೆ!

ಕನ್ನಗಿ : ಜೀವ ತೆಗೆದುಕೊಳ್ಳುವುದು ಸುಲಭ ದೊರೆಗಳೆ, ಜೀವಕೊಡುವುದು ಸುಲಭವೆ? ಯಾವ ಶಿಕ್ಷೆಗೆ ಪುನರ್ವಿಮರ್ಶೆಯ ಪರಿಹಾರವಿಲ್ಲವೋ ಆ ಶಿಕ್ಷೆಯನ್ನು ಅತ್ಯುನ್ನತ ಸ್ಥಾನದಲ್ಲಿರುವವರು ಅವಸರದಲ್ಲಿ ವಿಧಿಸಿದರೆ ಜನಗಳ ಗತಿಯೇನು? ನಿಮ್ಮ ಸಾಮ್ರಾಜ್ಯದ ಸಿರಿಯೆಲ್ಲವನ್ನೂ ಕೊಟ್ಟರೂ ನನ್ನ ಪತಿಯ ಪ್ರಾಣ ಮರಳಿ ಬರಬಲ್ಲುದೆ ಮಹಾಪ್ರಭು? ನನ್ನ ಪತಿ ಅಂತಿಂಥವರಾಗಿರಲಿಲ್ಲ. ಭೂಲೋಕದ ಕುಬೇರರೊಬ್ಬರ ಪುತ್ರರಾಗಿದ್ದರು. ನಾನೂ ಇಂಥ ಮಾಣಿಕ್ಯಭರಿತ ನೂಪುರಗಳನ್ನು ಮಗಳಿಗೆ ಕೊಡಬಲ್ಲವರ ಮಗಳಾಗಿ ಹುಟ್ಟಿದೆ. ಈಗ ಕಾಲಚಕ್ರಕ್ಕೆ ಬಲಿಯಾಗಿ ಬಡವರಾದರೇನಾಯಿತು–ನಾವೂ ರಾಜವೈಭವವನ್ನು ಅನುಭೋಗಿಸಿದವರೇ; ದಾನಧರ್ಮಾದಿಗಳನ್ನು ಮಾಡಿದವರೆ; ಪರಪೀಡನೆಯನ್ನು ಅರಿಯದವರೇ! ಕೋವಲನ್ ನಿರಪರಾಧಿಯೆಂಬುದನ್ನಾದರೂ ಒಪ್ಪಿದಿರಲ್ಲ, ಇಷ್ಟಾದರೂ ನ್ಯಾಯ ನೀಡಿದ ತಮಗೆ ಶತಶತ ವಂದನೆಗಳು!

ಪಾಂಡ್ಯರಾಜ : ಕೊಲೆಗೀಡಾದವರು ಕೋವಲನ್‌ರೆ, ಕಾವೇರೀಪಟ್ಟಣದ ಕುಬೇರ ಕೋವಲನ್‌ರೆ? ನೀನು ಕನ್ನಗಿಯೆ?

ಕನ್ನಗಿ : ಹೌದು ದೊರೆಗಳೆ, ನಾವೇ ಆ ನಿರ್ಭಾಗ್ಯರು–ಈ ರಾಜಧಾನಿಯ ಬೀದಿಯಲ್ಲಿ ಮಾನಗೆಟ್ಟು ಅಸುವಿಟ್ಟವರು ಕೋವಲನ್; ಇಲ್ಲಿಗೆ ಬಂದು ಕುಂಕುಮ ಅಳಿಸಿಕೊಂಡು ವಿಧವೆಯಾದವಳು ನಾನು–ಕನ್ನಗಿ!

ಪಾಂಡ್ಯರಾಜ : ದುಸ್ಸಹವೀ ದುಃಖ! ತಾಳಲಾರೆನೀ ಪಶ್ಚಾತ್ತಾಪದ ಬೆಂಕಿಯನ್ನು! ನಾನು ಅರಸನಾಗಿರಲು ಅಯೋಗ್ಯ, ಕನ್ನಗಿ, ಆಯೋಗ್ಯ.

ಪರಮಾಧಿಕಾರವನ್ನು ನ್ಯಾಯಸಮ್ಮತವಾಗಿ ಉಪಯೋಗಿಸಬಲ್ಲ ಪಕ್ವತೆ ನನ್ನಲ್ಲಿಲ್ಲ! ಪಾಂಡ್ಯರಾಜ ವಂಶಕ್ಕೆ ನನ್ನಿಂದ ಕಲಂಕ ತಟ್ಟಿತು. ನಾನಿನ್ನು ಈ ಕಲಂಕಿತ ಮುಖವನ್ನು ಮಂದಿಗೆ ತೋರಬಾರದು! ನಾನಿನ್ನಿರಬಾರದು; ನಾನಿನ್ನಿರಬಾರದು..... (ಕುಳಿತಲ್ಲಿಯೇ ಕುಸಿದು ಅಸು ನೀಗುವನು. ಅಂತಃಪುರದಲ್ಲಿ ಈ ಸುದ್ದಿ ಕೇಳಿ ಪಟ್ಟದರಾಣಿಯೂ ಅಸು ನೀಗಿದ ಸುದ್ದಿ ಬರುವುದು. ಶೋಕದ ಕಡಲುಕ್ಕುವುದು)

ಕನ್ನಗಿ : ನನ್ನ ಪತಿಯ ಪ್ರಾಣಕ್ಕೆ ಪ್ರತಿಯಾಗಿ ನಿಮ್ಮ ಪ್ರಾಣ ಕೊಟ್ಟಿರಾ ಪಾಂಡ್ಯರಾಜ? ನನಗಿದರಿಂದ ಸಂತೋಷವಾಗುವುದೆಂದು ತಿಳಿದಿರಾ? ಇಲ್ಲ, ದೊರೆಗಳೇ, ನಿಮ್ಮ ಬಲಿದಾನದಿಂದ ನನ್ನ ಬಗೆಯ ಬೆಂಕಿ ಆರಿಲ್ಲ. ಇನ್ನಷ್ಟು ಧಗಧಗಿಸ ತೊಡಗಿದೆ, ಮತ್ತಷ್ಟು ಪ್ರಜ್ವಲಿಸತೊಡಗಿದೆ. ತಾಳಲಾರೆನೀ ಬೆಂಕಿಯನ್ನು, ಸಹಿಸಲಾರೆನೀ ಅಂತರಂಗದ ಅಗ್ನಿಯನ್ನು! ನನ್ನನ್ನು ಸುಡುತ್ತಿರುವ ಎದೆಯುರಿಯೇ–ಈ ಮಧುರಾನಗರವನ್ನಾದರೂ ಸುಟ್ಟು ಶಾಂತವಾಗು!

ಮಾದರಿ : (ಪ್ರವೇಶಿಸಿ) ಬೆಂಕಿಯನ್ನು ಬೆಂಕಿಯಿಂದ ಆರಿಸಲು ಹೊರಟಿರುವಿಯ, ಮಗಳೆ?

ಕನ್ನಗಿ : (ಅವಳ ಅಡಿಗಳ ಮೇಲೆ ಕೆಡೆದು) ಮಾತೆ ಮಾದರಿ, ಕೋವಲನ್‌ನನ್ನೇ ಕಳೆದುಕೊಂಡಿರುವ ನಿನ್ನ ಈ ಮಗಳು ಪ್ರಜ್ಞೆಯನ್ನೂ ಕಳೆದುಕೊಂಡಿರುವುದು ಅದಾವ ಆಶ್ಚರ್ಯ? ನನ್ನ ಸರ್ವಸ್ವ ನಾಶವಾಗಿದೆ, ತಾಯೆ, ಸರ್ವಸ್ವ ನಾಶವಾಗಿದೆ!

ಮಾದರಿ : ಕೋವಲನ್ ಅಪರಾಧಿಯಲ್ಲವೆಂಬುದನ್ನು ಸಿದ್ಧಪಡಿಸಿದ ಸಾಧ್ವೀಮಣಿ, ಈ ನಗರವನ್ನು ಸುಟ್ಟು, ಒಬ್ಬರ ಸಾವಿಗಾಗಿ ಸಾವಿರ ಸಾವಿರ ನಿರಪರಾಧಿಗಳನ್ನು ಸಾವಿನ ಬಾಯಿಗೆ ತಳ್ಳಿ ನೀನಾವ ಸೌಭಾಗ್ಯವನ್ನು ಸುರಿವೆ? ಅರಿಯದೆ ಎಸಗಿದ ತಪ್ಪಿಗಾಗಿ ದೊರೆಯನ್ನು ಕ್ಷಮಿಸಿದಂತೆ, ನಿನ್ನ ಬನ್ನ ತಮ್ಮ ಬನ್ನವೆಂದೇ ಭಾವಿಸಿ ಕಣ್ಣೀರು ಸುರಿಸಿದ್ದ ಈ ನಗರ ನಿವಾಸಿಗಳನ್ನು ಕ್ಷಮಿಸಿಬಿಡು. ಈ ನಾಡಿನ ಇತಿಹಾಸದಲ್ಲಿ ನಿನ್ನ ಸ್ಥಾನ ನಿನ್ನದೇ ಆಗುವುದು. ಈ ನಾಡಿನ ನರನಾರಿಯರು ನಿನಗೆ ಗೌರವ ಗೋಪುರ ಕಟ್ಟಿಸುವರು.

ಕನ್ನಗಿ : ಕತ್ತಲುಗೂಡಿದ್ದ ನನ್ನ ಕಣ್ಣುಗಳಿಗೆ ಮತ್ತೆ ಬೆಳಕನಿತ್ತ ಮಾತೆ, ನಿನ್ನ ಆಣತಿಯಂತೆ ನಡೆವೆ. ನನ್ನ ಕೋವಲನ್ನನೇ ಇಲ್ಲದ ಜಗತ್ತಿನ ಗೊಡವೆಯಾದೂ ನನಗೇಕೆ? ನನ್ನ ಕೋವಲನ್ ಬಳಿಗೆ ಹೋಗಲು ಅನುಮತಿ ನೀಡು!

ಮಾದರಿ : ಹೋಗಿ ಬಾ, ಮಗಳೆ! ಕೋವಲನ್ ತಾನಿರುವಲ್ಲಿ ನಿನ್ನನ್ನು ಕರೆದುಕೊಳ್ಳಲಿ; ನಿಮ್ಮಿಬ್ಬರನ್ನೂ ಈ ನಾಡಿನ ದೈವ ತನ್ನೆಡೆಗೆ ಕರೆದುಕೊಳ್ಳಲಿ!

ಕನ್ನಗಿ : ಹೊರಡುವಳು–ಭಾರವಾದ ಒಂದೊಂದೇ ಹೆಜ್ಜೆಯನ್ನಿರಿಸುತ್ತ ರಾಜಸೇವಕ ಧಾವಿಸಿ ಬಂದು ಅವಳ ಒಡೆದ ನೂಪುರದ ತುಂಡುಗಳನ್ನೂ ಹೊರಗೆ ಚೆಲ್ಲಿದ ಮಾಣಿಕಗಳನ್ನೂ ತಂದು ಮುಂದಿರಿಸಿ, "ತಾಯೆ, ಇವುಗಳನ್ನು

ಸ್ವೀಕರಿಸಿರಿ" ಎಂದೆನ್ನುವನು. ಕನ್ನಗಿ ಕನಿಕರದ ನಗೆ ನಕ್ಕು: –ಇವುಗಳನ್ನು ಏನು ಮಾಡಲಿ ಮಗು? ಈ ನಗರದಲ್ಲಿ ನನ್ನಂತೆ ದುರಂತಕ್ಕೀಡಾದ ಭಗಿನಿಯರು ಬೇಕಾದಷ್ಟು ಜನರಿರಬಹುದು. ಇವುಗಳನ್ನು ಮಾರಿ ಆ ನನ್ನ ಸೋದರಿಯರಿಗೆ ನೆರವು ನೀಡಿರಿ! ಇನ್ನು ನನಗೆ ಕೋವಲನ್, ಕೇವಲ ಕೋವಲನ್, ದೇವತಾತ್ಮ ಕೋವಲನ್, ನನ್ನ ಸರ್ವಸ್ವ ಕೋವಲನ್ ಕೇವಲ ಕೋವಲನ್, ದೇವತಾತ್ಮ ಕೋವಲನ್, ನನ್ನ ಸರ್ವಸ್ವ ಕೋವಲನ್ ಸಾಕು! ಬಂದೆನಿದೋ ಕೋವಲನ್, ನೀನಿರುವಲ್ಲಿಗೆ ಕೋವಲನ್, ಎನ್ನ ದೊರೆ ಕೋವಲನ್, ಎನ್ನ ಸಿರಿ ಕೋವಲನ್.....

(ಒಮ್ಮೆಗೆ ಮಿಂಚಿನಂತೆ ಮರೆಯಾಗುವಳು. ಮಾದರಿ, ಅರಮನೆಯ ಪರಿವಾರದವರು, ಪರಿಚಾರಕರು, ನಗರ ನಿವಾಸಿಗಳು ಕಂಬದಂತೆ ನಿಂತು ಕಂಬನಿ ಮಿಡಿವರು. ತೆರೆ)

ಕಾಶ್ಮೀರದ ಕವಯಿತ್ರಿ

ಹಬ್ಬಾ ಖಾತೂನಳ ಬಾಳಿನ ಎಳೆಗಳಿಂದ ನೆಯ್ದ ನಾಟಕ

ಪಾತ್ರ ಪರಿಚಯ :

ಹಬ್ಬಾ ಖಾತೂನ–ಬಡ ಗುಡಿಸಿಲಿನಲ್ಲಿ ಹುಟ್ಟಿ ಅರಮನೆಯನ್ನು ಸೇರಿ ಕೊನೆಗೆ ವಿರಾಗಿಣಿಯಾದ ಕಾಶ್ಮೀರ ಕುಮಾರಿ

ಇಮಾಮ್–ಅವಳ ಗುರು

ಅವಳ ತಂದೆ ತಾಯಿಗಳು

ಕಮಾಲ್–ಅವಳ ಪ್ರಥಮ ಪ್ರೇಮಿ

ಅಜೀಜ್–ಅವಳ ಗಂಡ

ಯೂಸುಫ್ ಷಾಹ–ಕಾಶ್ಮೀರದ ದೊರೆ. ಹಬ್ಬಾ ಖಾತೂನಳ ಮರು ಮದುವೆ ಇವನೊಡನೆ

ಅಕಬರ–ಮೊಗಲ ಸಾಮ್ರಾಟ

ಬೀರಬಲ–ಅಕಬರನ ಅಮಾತ್ಯ

ಹಬ್ಬಾಳ ಅತ್ತೆ

ಫಾತಿಮಾ, ಸಲ್ಮಾ–ಓಣಿಯ ಹೆಂಗಸರು

ಕರೀಮ, ಕದೀರ–ಓಣಿಯ ಉಡಾಳರು

ಯೂಸುಫ್ ಷಾಹನ ವಜೀರ, ಸಾಲಾರರು ಇತ್ಯಾದಿ

ಕಾಶ್ಮೀರದ ಕವಯಿತ್ರಿ

ನೋಟ ೧

(ಕಾಶ್ಮೀರದ ಪಾನಪೂರ ಪರಗಣೆಯ ಚಂದಹಾರ್ ಗ್ರಾಮದಲ್ಲಿ ಆ ಗ್ರಾಮದ ಇಮಾಮರ ಮನೆಯಲ್ಲಿ)

ಇಮಾಮ್ : ವತ್ಸೆ, ಪವಿತ್ರ ಕುರಾಣದ ಪ್ರಕಾರ ಪ್ರತಿಯೊಬ್ಬರಿಗೂ ಒಂದೊಂದು ಗುರಿಯಿರುತ್ತದೆ. ಅಲ್ಲಾನೇ ಅವರವರನ್ನು ಅವರವರ ಗುರಿಯತ್ತ ತಿರುಗಿಸುತ್ತಾನೆ.

ಹಬ್ಬಾ ಖಾತೂನ್ : ನನ್ನ ಗುರಿ ಯಾವುದಿರಬಹುದು ಪೂಜ್ಯರೆ?

ಇಮಾಮ್ : ಇನ್ನು ನಿನ್ನ ಅಂತರಂಗದ ಕನ್ನಡಿಯಲ್ಲಿ ನೀನೇ ಕಂಡುಕೊಳ್ಳಬೇಕು ಹಬ್ಬಾ ಖಾತೂನ್.

ಹಬ್ಬಾ ಖಾತೂನ್ : ನಾನೇ ಹೇಗೆ ಕಂಡುಕೊಳ್ಳಬಲ್ಲೆ ವಂದ್ಯರೆ? ನಾನಿನ್ನೂ ಏನೂ ಅರಿಯದ ಹಸುಳೆ.

ಇಮಾಮ್ : ಸೃಷ್ಟಿಕರ್ತನ ಸಂಜ್ಞೆಗಳಿಂದ ತಿಳಿದುಕೊಳ್ಳಬೇಕಮ್ಮಾ.

ಹಬ್ಬಾ ಖಾತೂನ್ : ಅವಾವ ಸಂಜ್ಞೆಗಳು ತಂದೆ?

ಇಮಾಮ್ : ಪವಿತ್ರ ಕುರಾಣದಲ್ಲಿಯೇ ನಿನ್ನ ಪ್ರಶ್ನೆಗೆ ಉತ್ತರ ದೊರೆಯುತ್ತದೆ ಪುತ್ರಿ: "ನೋಡಿರಿ-ಸ್ವರ್ಗ ಮತ್ತು ಮರ್ತ್ಯಗಳ ಸೃಷ್ಟಿಯಲ್ಲಿ, ರಾತ್ರಿ ಹಗಲುಗಳ ರಾಟಾಳದಲ್ಲಿ, ಮಾನವನ ಸುಖಕ್ಕಾಗಿ ಸಾಗರಗಳ ಮೇಲೆ ಸಾಗುವ ಹಡಗುಗಳ ತೇಲಾಟದಲ್ಲಿ, ಆಕಾಶದಿಂದ ಸೃಷ್ಟಿಗೆ ಅಲ್ಲಾನು ಸುರಿಸುವ ವೃಷ್ಟಿಯಲ್ಲಿ, ಅ ವೃಷ್ಟಿಯು ನಿರ್ಜೀವ ಭೂಮಿಯಲ್ಲಿ ಜೀವ ಸೃಷ್ಟಿಯನ್ನು ಕೊನರಿಸುವಲ್ಲಿ, ಭೂಮಿಯ ಮೂಲಕವೇ ಅವನು ಬಗೆಬಗೆಯ ಖಗಮೃಗಗಳನ್ನು ಸೂರೆಮಾಡಿರುವಲ್ಲಿ, ಮಾರುತಗಳ ಮಾರ್ಪಾಡುಗಳಲ್ಲಿ, ಮತ್ತು ಭೂಮಿ ವ್ಯೋಮಗಳ ನಡುವೆ ಸೇವಕರಂತೆ ಓಡಾಡುವ ಮೋಡಗಳಲ್ಲಿ ಸತ್ಯವಾಗಿಯೂ ಸಂಜ್ಞೆಗಳಿವೆ ಪ್ರಾಜ್ಞರಿಗೆ!" ಆದುದರಿಂದ ಬುದ್ಧಿವಂತಳಾಗು ಭದ್ರೆ. ನೀನೂ ಅಲ್ಲಾನ ಸಂಜ್ಞೆಗಳನ್ನು, ಸಂಕೇತಗಳನ್ನು ಖಂಡಿತವಾಗಿ ಕಾಣುವಿ, ಗುರುತಿಸುವಿ, ಅರಿತುಕೊಳ್ಳುವಿ. ತದನುಸಾರವಾಗಿ ನಿನ್ನ ಗುರಿಯನ್ನು ರೂಪಿಸಿಕೊಳ್ಳುವಿ.

ಹಬ್ಬಾ ಖಾತೂನ್ : ತಮ್ಮ ಉಪದೇಶ ವ್ಯರ್ಥವಾಗದಂತೆ ಯತ್ನಿಸುವೆ ತಂದೆ. ನನ್ನ ಹಾರೈಕೆಗೆ ತಮ್ಮ ಹರಕೆ ರಕ್ಷೆಯಾಗಿರುವಾಗ ಹುಸಿಯಾಗದು ನನ್ನ ಹಂಬಲ. ಹರಸಿರಿ, ಮತ್ತೆ ಮತ್ತೆ ಹರಸಿರಿ (ಬಾಗುವಳು)

ಇಮಾಮ್ : ನಿನ್ನ ಈಪ್ಸಿತ ಈಡೇರಲಿ ವತ್ಸೆ! ಆಮೀನ್!

ನೋಟ ೨

(ಇಮಾಮರ ಮನೆಯ ಮುಂದಿನ ಬೀದಿಯಲ್ಲಿ ಇಬ್ಬರು ಹೆಂಗಳೆಯರು ಹರಟುತ್ತ ಸಾಗಿದ್ದಾರೆ)

ಸಲ್ಮಾ : ಈ ಅಬದಿ ರಾಥರನ ಮಗಳು-ಹಬ್ಬಾ ಖಾತೂನ್-ನಮ್ಮ ಮುಂದಿನ ಇಮಾಮಳಾಗುವಳೇನೇ ಫಾತಿಮಾ?

ಫಾತಿಮಾ : ಇವಳ ಓದು, ಮೌಲ್ವಿಗಳೊಡನೆ ಇವಳ ವಾದವಿವಾದ, ಇವಳಿರುವ ರೀತಿ ನೀತಿಗಳನ್ನು ನೋಡಿದರೆ ನನಗೂ ಹಾಗೆಯೇ ಎನಿಸುತ್ತದೆ ಸಲ್ಮಾ. ಈ ಚಂದಹಾರದಲ್ಲಿ ಹಿಂದೆಂದೂ ಹುಟ್ಟಿರಲಿಲ್ಲ ಹಬ್ಬಾ ಖಾತೂನಳಂಥವಳು. ಮುಂದೆಯೂ ಹುಟ್ಟುವಳೋ ಇಲ್ಲವೋ ಅಲ್ಲಾನೇ ಬಲ್ಲ!

ಸಲ್ಮಾ : ಇದರಲ್ಲಿ ಅವಳ ತಪ್ಪೇನಿಲ್ಲ ಫಾತಿಮಾ-ಅವಳ ತಂದೆ ತಾಯಿಗಳ ತಪ್ಪು ಇದು. ಹೊಸ ಹರೆಯದ ಹೊಸತಿಲಲ್ಲಿ ಇದೀಗ ಕಾಲಿರಿಸುತ್ತಿರುವ ತಮ್ಮ ಮಗಳನ್ನು, ಎಲ್ಲಿಲ್ಲದ ಚೆಲುವೆಯೆನಿಸಿರುವ ಹಬ್ಬಾ ಖಾತೂನಳನ್ನು, ಇಷ್ಟರೊಳಗಾಗಿ ತೆರೆಯ ಮರೆಯಲ್ಲಿರಬೇಕಾಗಿದ್ದ ಅವಳನ್ನು ಓದುಬರಹಗಳ ನೆಪದಿಂದ ಮೌಲ್ವಿಗಳ ಮನೆಗೆ, ಮಸೀದೆಗೆ, ಮಂದಿಯ ಮನೆಗೆ ಸಿಕ್ಕ ಸಿಕ್ಕಲ್ಲಿಗೆ ಕಳಿಸುವುದೆ? ಅವಳ ತಂದೆಗೆ ಇದು ತಿಳಿಯದಿದ್ದರೆ ಹೋಗಲಿ, ಅವಳ ತಾಯಿಗೂ ತಿಳಿಯಬಾರದೆ? ಈ ವಯಸ್ಸಿನಲ್ಲಿದ್ದಾಗ ಅವಳೂ ಮನೆ ಮನೆ ಅಲೆದಿದ್ದಳೆ? ಓದು-ವಾದಗಳಲ್ಲಿ ತೊಡಗಿದ್ದಳೆ? ಹಬ್ಬಾ ಖಾತೂನಳೇನಾದರೂ ನಾಳೆ ಹಾದಿ ತಪ್ಪಿದರೆ ಅವಳ ಮನೆಗಷ್ಟೇ ಅಲ್ಲ, ನಮ್ಮ ಊರಿಗೇ ಕಲಂಕ ತಗುಲುವುದು.

(ಅಷ್ಟರಲ್ಲಿ ಹಬ್ಬಾ ಖಾತೂನಳ ತಾಯಿ ಅತ್ತ ಬರುತ್ತಿರುವುದನ್ನು ಗಮನಿಸಿದ ಸಲ್ಮಾ ಫಾತಿಮಾಳ ಕಿವಿಯಲ್ಲಿ)

ಸಲ್ಮಾ : ಸುಮ್ಮನಿರೇ ಮಾತಿನ ಮಲ್ಲಿ. ಹಬ್ಬಾ ಖಾತೂನಳ ತಾಯಿ ಇತ್ತಲೇ ಬರುತ್ತಲಿದ್ದಾಳೆ.

ಫಾತಿಮಾ : ಬಂದರೆ ಬರಲಿ ಬಿಡು, ಇದ್ದುದನ್ನು ಇದ್ದಂತೆ ಹೇಳಲಿಕ್ಕೆ ಯಾರದೇನು ಭಯ?

ಸಲ್ಮಾ : ಕಂಡದ್ದನ್ನಾಡಿದರೆ ಕೆಂಡದಂಥ ಸಿಟ್ಟು ಜನಕ್ಕೆ ಫಾತಿಮಾ.

ಫಾತಿಮಾ : ಹಾಗೆಂದು ಕಂಡದ್ದನ್ನಾಡುವುದನ್ನು ಬಿಡಬೇಕೇನೆ?

(ಅಷ್ಟರಲ್ಲಿ ಅಲ್ಲಿಗೆ ಬಂದು ಅವರಾಡಿಕೊಂಡುದನೆಲ್ಲ ಕೇಳಿದ್ದ ಹಬ್ಬಾ ಖಾತೂನಳ ತಾಯಿ ದುರುಗುಟ್ಟಿ ನೋಡುತ್ತ)

ತಾಯಿ : ಆಡಿಕೊಳ್ಳುವುದನ್ನು ಏಕೆ ಬಿಡುವಿಯಮ್ಮ-ಬಿಡಬೇಡ! ನಿನಗೆ ಅನ್ನ ನೀರು ಇಲ್ಲದಿದ್ದರೆ ನಡೆದೀತು-ಆಡಿಕೊಳ್ಳುವುದು ಇಲ್ಲದಿದ್ದರೆ ನಡೆದೀತೆ? ಆಡಿಕೋ-ಬಿಡಬೇಡ! ಕಂಡದ್ದನಷ್ಟೇ ಏಕೆ? ಕಾಣದಿದ್ದುದನ್ನೂ ಆಡಿಕೋ! ಆಡಿಕೊಳ್ಳುವವರ ಬಾಯಿ ಮುಚ್ಚುವವರಾರು?

ಫಾತಿಮಾ : (ಕೆಣಕುವ ಸ್ವರದಲ್ಲಿ) ಆಡಿಕೊಳ್ಳುವವರ ಬಾಯಿ ಮುಚ್ಚಬೇಕಿಲ್ಲ ಅಮ್ಮನವರೇ, ಆಡಿಸಿಕೊಳ್ಳುವಂಥ ಮಗಳ ತಾಯಿಯಾದವರೇ ತಮ್ಮ ಬಾಯಿ ತಾವೇ ಮುಚ್ಚಿಕೊಂಡು ಸುಮ್ಮನಿರಬೇಕು! ಇಲ್ಲವೆ ತಮ್ಮ ಮಗಳು ತಪ್ಪುಹಾದಿ ತುಳಿಯದಂತೆ ತಿದ್ದಬೇಕು.

(ಇಷ್ಟು ಅಂದು ಸಲ್ಮಾ ಫಾತಿಮಾ ಭರಭರನೆ ಹೊರಟುಹೋಗುವರು. ಹಬ್ಬಾ ಖಾತೂನಳ ತಾಯಿಯ ಕರುಳಿಗೆ ಚೇಳು ಕುಟುಕಿದಂತಾಗುವುದು)

ತಾಯಿ : ಯಾ ಅಲ್ಲಾ, ಕೊನೆಗೂ ಈ ಕಿವಿಗಳು ಈ ಕೀಳುನುಡಿಗಳನ್ನು ಕೇಳಿಯೇ ಬಿಟ್ಟುವೆ! ಪರವರದಿಗಾರ್, ಈ ನಂಜಿನ ನುಡಿಗಳನ್ನು ಕೇಳಲೆಂದೇ ಈ ದುರ್ದೈವಿಯನ್ನು ಹುಟ್ಟಿಸಿದೆಯಾ? ಇದುವರೆಗೂ ನನ್ನ ನೆರಳಿಗೇ ನಾನಂಜಿ ಬದುಕಿದೆ. ಇದಕ್ಕೆ ಫಲ ಈ ಕೀಳುನುಡಿಗಳೆ? ನಾನಿವರಿಗೆ ನೂರು ಸಲವಲ್ಲ, ಸಾವಿರ ಸಲ ಹೇಳಿದೆ-ನಮ್ಮಮಗಳಿಗೆ ಓದುಬರಹ ಬೇಡ, ಬೇಡ ಎಂದು. ಹೆಂಗಳೆಯರ ಹಿತವಾದವನ್ನು ಗಂಡಸರಲ್ಲಿ ಕೇಳುತ್ತಾರೆ? ಅವರು ನನ್ನ ಮಾತು ಕೇಳಿದ್ದರೆ ನಾನೀ ಕೊಳಕು ಮಾತುಗಳನ್ನು ಕೇಳುತ್ತಿದ್ದೆನೆ? ಯಾ ಅಲ್ಲಾ, ಯಾ ಪರವರದಿಗಾರ್ ! (ಉದ್ವೇಗದೊಡನೆ ಹೋಗುವಳು)

ನೋಟ ೩

(ಚಂದಹಾರದ ಹೊರವಲಯದ ಹುಲ್ಲು ಮೊರಡಿಯ ಮೇಲೆ ಹಬ್ಬಾ ಖಾತೂನಳ ಸ್ವಗತಲಹರಿ)

ಹಬ್ಬಾ ಖಾತೂನ್ : ಸೃಷ್ಟಿಕರ್ತನ ಸಂಜ್ಞೆಗಳೆ, ನನಗೂ ಕಾಣಿಸಿಕೊಳ್ಳಿರಿ, ನನಗೂ ನನ್ನ ಗುರಿ ತೋರಿರಿ! ಕಾಶ್ಮೀರದಲ್ಲಿ ಸೃಷ್ಟಿಸಿರುವಷ್ಟು ಸಂಜ್ಞೆಗಳನ್ನು, ಸಂಕೇತಗಳನ್ನು ಇನ್ನೆಲ್ಲಿ ಸೃಷ್ಟಿಸಿರಬಹುದು ಸೃಷ್ಟಿಕರ್ತ? ಮರಗಳ ಹಸಿರನ್ನುಟ್ಟು,

ಮೋಡಗಳ ಮೇಖಲೆಯನ್ನು ತೊಟ್ಟು, ಹಿಮದ ಧವಳದುಪ್ಪಟವನ್ನು ಹೊದೆದಿರುವ ಹಿಮಗಿರಿಶಿಖರಗಳೇ, ನನ್ನ ಗುರಿ ಯಾವುದು ಗುರುತಿಸಿ ಹೇಳಿರಿ! ಸ್ಫಟಿಕದ ತಿಳಿಯಾದ, ಜೇನಿನಂತೆ ಸಿಹಿಯಾದ, ಸಜ್ಜನರ ಹೃದಯದಂತೆ, ಶುದ್ಧವಾದ ಸಲಿಲದ ನಿರ್ಝರಗಳೆ, ನೀರ್-ಬೀಳುಗಳೆ ಕೆರೆತೊರೆಗಳೆ ನನಗೂ ನನ್ನ ಗುರಿ ತೋರಿರಿ! ಕೇಶರದ ಹೊಲಗಳೆ, ಕಸ್ತೂರಿ ಮೃಗಗಳೆ, ಹುಲ್ಲು ಹೂವು, ಹಣ್ಣುಗಳೆ, ಮಳೆಬಿಲ್ಲಿನ ಬಣ್ಣಗಳೆ, ನವಿಲು ಗರಿಯ ಕಣ್ಣುಗಳೆ, ಗುಲ್ಮ-ಕಲ್ಲು-ಮಣ್ಣುಗಳೆ-ಸಾವಿರಸಾವಿರ ರೂಪಗಳಲ್ಲಿ ಸೂರೆಯಾಗಿರುವ ಸೃಷ್ಟಿಕರ್ತನ ಸಂಜ್ಞೆಗಳೆ, ನನಗೂ ನನ್ನ ಗುರಿ ತೋರಿರಿ! ಗುರುಗಳು ಹೇಳಿದ್ದಾರೆ, ಗುರಿ ತೋರುವವರು ನೀವೇ ಎಂದು. ಗುರಿ ತೋರಿರಿ, ಗಿರಿ ವನಗಳೆ, ಶಶಿ ಇನಗಳೆ, ರಾತ್ರಿ ದಿನಗಳೆ ಗುರಿ ತೋರಿರಿ...........

(ಇತ್ತ ಹಬ್ಬಾ ಖಾತೂನಳು ಹುಟ್ಟಿದ ಮನೆಯಲ್ಲಿ ಅವಳ ತಂದೆ ತಾಯಿಗಳ ತುರುಸಿನ ಬಿರುಸಿನ ಮಾತುಗಳು)

ತಾಯಿ : ನಿಮಗೆಷ್ಟು ಸಲ ಹೇಳಿದೆ ನಾನು-ಹಬ್ಬಾಳಿಗೆ ಓದಿಸುವುದು ಬೇಡ, ಕಲಿಸುವುದು ಬೇಡ, ಮನೆಮನೆಗೆ ಕಳಿಸುವುದು ಬೇಡವೆಂದು? ಕಿವಿಗೊಟ್ಟಿರಾ ಒಮ್ಮೆಯಾದರೂ? ನನ್ನ ಯಾವ ಮಾತಿಗೆ ಕಿವಿಗೊಟ್ಟಿರುವಿರೆಂದು ಇದಕ್ಕೆ ಕಿವಿಗೊಡುವಿರಿ ನೀವು! ನಾನೀ ಮನೆಯಲ್ಲಿರುವುದು ಮಡದಿಯಾಗಿ ಅಲ್ಲ, ಬಿಡದಿ ದೂತಿಯಾಗಿ, ಬಿಟ್ಟಿ ಆಳಾಗಿ. ಈಗ ಮಗಳ ಬಗ್ಗೆ ಮಂದಿ ಆಡಿಕೊಳ್ಳುತ್ತಿರುವುದನ್ನಾದರೂ ಕಿವಿಯಲ್ಲಿ ಹಾಕಿಕೊಳ್ಳುವಿರೋ ಇಲ್ಲವೋ?

(ಮನೆಯ ಬದಿಯ ಬೀದಿಯಲ್ಲಿ ಮತ್ತೆ ಸಲ್ಮಾ ಫಾತಿಮಾರ ಕಟುನಿಂದೆ, ವ್ಯಂಗ್ಯೋಕ್ತಿಗಳು)

ಫಾತಿಮಾ : ಈಗ ಕಿವಿಯಲ್ಲಿ ಹಾಕಿಕೊಂಡೂ ಪ್ರಯೋಜನವಿಲ್ಲ. ಸಸಿಯಾಗಿ ಬಾಗದುದು ಮರವಾಗಿ ಬಾಗೀತೆ?

ಸಲ್ಮಾ : ಊರ ಗೌರವಕ್ಕೆ ಮಾರಿಯಾಗಿ ಹುಟ್ಟಿರುವಂತಿದೆ ಈ ಹಬ್ಬಾ ಖಾತೂನ್!

(ಇಬ್ಬರೂ ಭರಭರನೆ ಹೊರಟು ಹೋಗುವರು)

ತಂದೆ : (ಅವಡುಗಚ್ಚಿ) ಆಂ-ಇಷ್ಟು ದೂರ ಹೋಗಿರುವಳೇ ಹಬ್ಬಾ? ಕೈಗೆ ಬರಲಿ ಕತ್ತಿ!

ತಾಯಿ : (ತಳ್ಳಂಕಗೊಂಡು) ಅಯ್ಯೋ, ಒಂದಕ್ಕೆ ಹತ್ತು ಹುಟ್ಟಿಸಿ, ನೂರು ಹೆಚ್ಚಿಸಿ ಹೇಳುವ ಈ ಹೊಮ್ಮಾಲಿಯರ ಮಾತಿಗೆ ಕಿವಿಗೊಡಬೇಡಿ ನಿಮ್ಮ ದಮ್ಮಯ್ಯ! ನನ್ನ ಮಗಳ ರೂಪ, ಗುಣ, ವಿದ್ಯೆ ಕೀರ್ತಿಗಳು ಇವರ ಕಿವಿಗೆ ಕಾಸಿದ ಸೀಸ! ಹಾಂ,

ಬೇಗ ಹಬ್ಬಾಳ ಮದುವೆ ಮಾಡಿಬಿಟ್ಟರೆ ಈ ಹಗರಣ ಹಿಂಗಿ ಹೋಗುತ್ತದೆ, ಇಂಗಿ ಹೋಗುತ್ತದೆ. ನೀವೇನಂತೀರಿ!

ತಂದೆ : ಮದುವೆ ಮಾಡಿಬಿಡುವುದೇ ಮೇಲಂತೀನಿ.

ತಾಯಿ : (ಹಿಗ್ಗಿ) ಬೇಗ ಮಾಡಿಬಿಡಿರಿ ಮದುವೆ. ಆಗಲಾದರೂ ಈ ಸಲ್ಮಾ ಫಾತಿಮರ ನಾಲಗೆ ಸೇದಿಹೋಗಲಿ!

ತಂದೆ : ಮದುವೆ ಮಾಡುವುದೆಂದರೆ ಮಾತನಾಡುವಷ್ಟು ಸುಲಭವೆಂದು-ಕೊಂಡಿರುವೆಯಾ? ಇನ್ನೂ ವರನ ಶೋಧವಾಗಿಲ್ಲ. ಹಣದ ಯೋಚನೆ ಮಾಡಿಲ್ಲ. ಮಾತಿನಲ್ಲಿಯೇ ಮದುವೆ ಮುಗಿಸಿಬಿಟ್ಟೆ!

ತಾಯಿ : ವರನನ್ನು ಆರಿಸಿಯಾಗಿದೆ. ಹಣವೂ ಹೆಚ್ಚು ಬೇಕಿಲ್ಲ.

ತಂದೆ : ಯಾವ ವರನನ್ನು ಆರಿಸಿಬಿಟ್ಟೆ ಇದಾಗಲೆ?

ತಾಯಿ : ನಮ್ಮ ಅಣ್ಣನ ಮಗನನ್ನೇ ಆರಿಸಿದ್ದೇನೆ. ನೀವೇನೆನ್ನುವಿರಿ?

ತಂದೆ : (ರೇಗಿ) ನಿನ್ನ ಬುದ್ಧಿಗೆ ಬೆಲೆಯೇ ಇಲ್ಲವೆನ್ನುವೆನು! ಮಂಕೆ, ಆ ಶುಂಭನಿಗೆ ಹುಂಬನಿಗೆ ನಮ್ಮ ಮುತ್ತಿನಂಥ ಮಗಳನ್ನು ಕೊಡುವುದೆ? ಮಂಗನ ಕೈಯಲ್ಲಿ ಮಾಣಿಕವನ್ನು ಕೊಡುವುದೆ? ಹಂದಿಯ ಕೊರಳಲ್ಲಿ ಚಂದನದ ಮಾಲೆ ಹಾಕುವುದೆ? ಸುತರಾಂ ಸಾಧ್ಯವಿಲ್ಲ!

(ಮನೆಯ ಬದಿಯ ಬೀದಿಯಲ್ಲಿ ಇಬ್ಬರು ಯುವಕರ ವಾಗ್ಯುದ್ಧ)

ಒಬ್ಬ : ಲೇ ಕರೀಮ-ಕದೀಮ, ನೀನು ಹಬ್ಬಾ ಖಾತೂನಳ ಮೇಲೆ ಕಣ್ಣಿಟ್ಟಿರುವೆಯೆಂದು ಕೇಳಿದ್ದೇನೆ. ಹಬ್ಬಾ ಖಾತೂನಳ ಕೈ ಹಿಡಿಯಲೆಂದೇ ಹುಟ್ಟಿರುವವನು ನಾನು ತಿಳಿಯಿತೆ? ನೀನೇನಾದರೂ ಇದಕ್ಕೆ ಅಡ್ಡ ಬಂದಿಯೋ-ಅಡ್ಡ ಸೀಳುವೆನು ನಿನ್ನನ್ನು!

ಇನ್ನೊಬ್ಬ : ನಾನೂ ಗಂಡುಸಾಗಿಯೇ ಹುಟ್ಟಿರುವೆನೋ ಕದೀರ-ಕದೀಮರಲ್ಲಿ ಕದೀಮ! ಹಬ್ಬಾ ಖಾತೂನಳು ಹುಟ್ಟಿರುವುದು ನನಗಾಗಿಯೆಂದು ನಂಬು! ನೀನೇನಾದರೂ ಅವಳ ಮೇಲೆ ಕಣ್ಣಿಟ್ಟರೆ ನಿನ್ನ ಕಣ್ಣು ಕೀಳುವೆನು. ನನ್ನ ದಾರಿಯಿಂದ ದೂರವಿರು. ಇಲ್ಲದಿದ್ದರೆ ತಿರುಗಿ ಬಾರದ ದಾರಿಗೆ ನಿನ್ನನ್ನು ಕಳಿಸುವೆನು!

(ಇಬ್ಬರೂ ಹೂಂಕರಿಸುತ್ತಾ ಹೋಗುವರು. ಹಬ್ಬಾಳ ತಾಯಿ ಹೌಹಾರುವಳು)

ತಾಯಿ : ಕೇಳಿದಿರೇನ್ರೀ ಈ ಖೂಳರ ಮಾತುಗಳನ್ನು? ಈ ಮಗಳು ಯಾವ ವಿಪತ್ತು ತರುವಳೋ ನಮಗೆ ಒಪ್ಪಿಬಿಡಿ ದಮ್ಮಯ್ಯ, ನಮ್ಮ ಅಣ್ಣನ ಮಗನನ್ನು!

ತಂದೆ : (ಗಹಗಹಿಸಿ ನಕ್ಕು) ನಿಮ್ಮ ಅಣ್ಣನ ಮಗನನ್ನು ನಾನು ಒಪ್ಪಲೆ? ನನ್ನ ಮದುವೆ ಮಾಡುವಿಯಾ ಅವನೊಡನೆ? ಮಾಡಿಕೊಳ್ಳುವಾಕೆಯನ್ನು ಒಂದು ಮಾತು ಕೇಳಬೇಡವೆ?

ತಾಯಿ : ನಿಮಗೆ ನನ್ನನ್ನು ಕೊಡುವ ಮೊದಲು ನನ್ನ ತಂದೆ ತಾಯಿಗಳು ನನ್ನನ್ನು ಕೇಳಿದ್ದರೆ?

ತಂದೆ : ಕೇಳಿದ್ದರೆ ಏನು ಮಾಡುತ್ತಿದ್ದಿ?

ತಾಯಿ : (ಏಡಿಸುವ ಧ್ವನಿಯಲ್ಲಿ) ಇಂಥ ಮೊಂಡರೊಡನೆ ಮದುವೆ ಬೇಡವೆಂದು ಮೊಂಡತನದಿಂದಲೇ ಹೇಳುತ್ತಿದ್ದೆ.

ತಂದೆ : (ರೇಗಿ) ನಾನು ಮೊಂಡನೇನೆ? ನನ್ನ ಮೊಂಡತನವನ್ನೇನು ಕಂಡೆ?

ತಾಯಿ : (ನಿಶ್ಚಯದ ಸ್ವರದಲ್ಲಿ) ಮೊಂಡರಲ್ಲದೆ ಮತ್ತೇನು? ಊರ ಮಂದಿ ಮನಬಂದಂತೆ ಆಡಿಕೊಳ್ಳುತ್ತಿದ್ದಾರೆ; ಪುಂಡ ಪೋಲಿಗಳು ನಿಮ್ಮ ಮಗಳಿಗಾಗಿ ಕತ್ತಿ ಹಿರಿಯಲು ಹಾತೊರೆಯುತ್ತಿದ್ದಾರೆ; ಹೀಗಿದ್ದೂ ನೀವು ನಮ್ಮ ಅಣ್ಣನ ಮಗ 'ಹುಂಬ', 'ಶುಂಭ' ಎಂದು ಹೀಯಾಳಿಸುತ್ತ ಕುಳಿತಿರುವಿರಿ. ಅವನಿಗಿಂತ ಒಳ್ಳೆಯವನನ್ನು ತರುವ ಎದೆಯಿದ್ದರೆ ತಂದಾದರೂ ಮಾಡಿರಿ; ತರುವ ಧೈರ್ಯವಿಲ್ಲದಿದ್ದರೆ ನಮ್ಮ ಅಣ್ಣನ ಮಗನೊಡನಾದರೂ ಮಾಡಿರಿ. ಹೇಗಾದರೂ ಮಾಡಿ ಹಬ್ಬಾಳ ಮದುವೆ ಮಾಡಿಬಿಡಿರಿ, ತಡ ಮಾಡಬೇಡಿರಿ, ದಮ್ಮಯ್ಯ, ತಡಮಾಡಬೇಡಿರಿ! ನಾನು ಈ ಕಿವಿಗಳಿಂದ ಕೇಳಬಾರದ ಮಾತುಗಳನ್ನು ಕೇಳುತ್ತ ಬಾಳಲಾರೆ, ತಾಳಲಾರೆ–ಬಾಳಲಾರೆ! (ಬಿಕ್ಕುವಳು)

ತಂದೆ : (ಸೋತ ಸ್ವರದಲ್ಲಿ) ಕೊಂಚ ಯೋಚನೆ ಮಾಡಗೋಡು ಮಹಾರಾಯಳೆ–ನಸು ಹೊತ್ತು ಸುಮ್ಮನಿರು. ಯೋಚಿಸಿ ನನ್ನ ನಿರ್ಧಾರ ತಿಳಿಸುವೆನು.

(ಅವನು ತಲೆಗೆ ಕೈಹಚ್ಚಿ ಕುಳಿತು ಜಾನಿಸುತ್ತಿರುವಂತೆ ಹೊರವಲಯದ ಹುಲ್ಲು ಮೊರಡಿಯ ಮೇಲೆ ಹಬ್ಬಾ ಖಾತೂನ ಹಾಗೂ ಕಮಾಲ್‌ರ ಮಾತು ಕತೆ ನಡೆದಿವೆ)

ಕಮಾಲ್ : ಮಾತುಕೊಡು ಮನದನ್ನೆ. ಈ ಕಮಾಲನ ಕೈಯನ್ನೇ ಹಿಡಿಯುವೆನೆಂದು ಮಾತುಕೊಡು. ಇನ್ನು ದಿನ ಎಣಿಸಲಾರೆ, ಚಣ ಗುಣಿಸಲಾರೆ. ನಾನು ಹುಚ್ಚನಾಗುವ ಮುನ್ನ ನಿನ್ನ ಒಲವಿನ ಮದ್ದನ್ನಿತ್ತು ಉಳಿಸು, ನಲಿಸು, ಹಬ್ಬಾ, 'ಹೂಂ' ಎಂದು ಹೂವರಳಿಸು ನನ್ನ ಬಾಳಬಳ್ಳಿಯಲ್ಲಿ!

ಹಬ್ಬಾ ಖಾತೂನ್ : (ದೀನ ದನಿಯಲ್ಲಿ) ಇನ್ನು ಕೆಲವೇ ದಿನ ತಾಳು ಕಮಾಲ್, ನಿನ್ನ ಒಲವಿನ ಕರೆಗೆ ಓಗೊಡುವ ಮುನ್ನ ನಾನು ನನ್ನ ಸೃಷ್ಟಿಕರ್ತನ ಸಂಜ್ಞೆಯನ್ನು ಗುರುತಿಸಿ ನನ್ನ ಗುರಿಯೇನೆಂಬುದನ್ನು ಅರಿತುಕೊಳ್ಳಬೇಕು.

ಕಮಾಲ್ : ನಿನಗಿನ್ನೂ ಸೃಷ್ಟಿಕರ್ತನ ಸಂಜ್ಞೆ ಕಂಡಿಲ್ಲವೆ ಹಬ್ಬಾ? ಅದು ನೋಡು, ಮೋಡ ಮಳೆಯನ್ನು, ಬಳ್ಳಿ ಮರವನ್ನು, ಝರಿ ತೊರೆಯನ್ನು ಅಪ್ಪಿ ಏನನ್ನು ಸಂಜ್ಞಿಸುತ್ತಿವೆ? ಸಾಗರಾಭಿಮುಖವಾಗಿ ಹೊರಟ ಹೊಳೆಗಳು ಏನನ್ನು ಹಾಡುತ್ತಿವೆ? 'ಕೂರ್ಮೆಯವರನ್ನು ಕೂಡಿಕೊಳ್ಳಿರಿ, ಒಲಿಸಿರಿ, ಒಲಿಯಿರಿ, ಒಲಿದು ನಲಿಯಿರಿ, ಒಲವಿನ ಒಸಗೆ ಮಾಡಿರಿ, ಒಲವಿನ ಗೀತ ಹಾಡಿರಿ', ಎಂದಲ್ಲವೆ? ಒಲವಿಗಿಂತಲೂ ಹಿರಿದಾದ ಗುರಿಯಿದೆಯೇ ಬಾಳಿಗೆ?

ಹಬ್ಬಾ ಖಾತೂನ್ : (ಸಂತೈಸುವ ಸ್ವರದಲ್ಲಿ) ಕೈ ಹಿಡಿಯುವುದಾದರೆ ನಿನ್ನ ಕೈಯನ್ನೇ ಹಿಡಿಯುವೆನು ಕಮಾಲ್! ಆದರೆ ಇನ್ನಷ್ಟು ಅವಕಾಶ ಕೊಡು ನನಗೆ. ಅವಸರ ಪಡಬೇಡ! ಏಕಿನಿತು ಅವಸರ? ಬೇಡ ಅವಸರ ಪ್ರಿಯಕರ!

ಕಮಾಲ್ : ಒಂದಿಲ್ಲೊಂದು ದಿನ ನನ್ನ ಕೈಯನ್ನೆ ಹಿಡಿಯುವೆನೆಂದು ಮಾತುಕೊಟ್ಟೆಯಲ್ಲ ಮನದನ್ನೆ–ಈ ಆಶ್ವಾಸನೆ ಸಾಕು ನನಗೆ. ನೀನು ನನ್ನ ಕೈಹಿಡಿವ ದಿನಕ್ಕಾಗಿ ಈ ಜನ್ಮದಲ್ಲಿ ಮಾತ್ರವಲ್ಲ, ಜನ್ಮ ಜನ್ಮಾಂತರಗಳಲ್ಲಿ ಕಾದಿರುವೆನು, ಕಾದಿರುವೆನು ಕೆಳದಿ, ಕಾದಿರುವೆನು!

(ಅತ್ತ ಹಬ್ಬಾ ಖಾತೂನಳು ಹುಟ್ಟಿದ ಮನೆಯಲ್ಲಿ ಅವಳ ತಂದೆ ತಾಯಿಯರ ಮಾತು ಮುಂದುವರಿದಿದೆ)

ತಂದೆ : ಓ ಬೇಗಮ್, ಏ ಬೇಗಮ್ ಸಾಹೀಬಾ, ಕೇಳು ನನ್ನ ಕೊನೆಯ ನಿರ್ಧಾರವನ್ನು ಇಂಥ ರೂಪರಾಶಿಯನ್ನು ನಮ್ಮಂಥವರ ಬಡವರ ಮಗಳನ್ನಾಗಿ ಹುಟ್ಟಿಸಬಾರದಾಗಿತ್ತು ಪರವರದಿಗಾರ್. ಅರಮನೆಯ ಅಲಂಕಾರವಾಗಬೇಕಾಗಿದ್ದ ಈ ರತ್ನದೀಪ ಈ ಗುಡಿಸಿಲಿನ ಬೆಳಕಾಗಿ ಬಂದಿದೆ. ಇದರ ಬೆಳಕನ್ನು ತಾಳಿಕೊಂಡು ಬಾಳಲಾರದು ಈ ಬಡಗುಡಿಸಲು; ಮುರುಕು ಗುಡಿಸಲು. ಇದು ಹೆಚ್ಚುದಿನ ಇಲ್ಲಿದ್ದರೆ ನಮಗೇ ಕುತ್ತು, ವಿಪತ್ತು! ನಿನ್ನ ಅಣ್ಣನ ಮಗ ಹಬ್ಬಾಳ ಅಡಿಯಾಳಾಗಲೂ ತಕ್ಕವನಲ್ಲ. ಆದರೆ ಏನು ಮಾಡುವುದು? ಹಬ್ಬಾಳಿಗೆ ತಕ್ಕ ವರನನ್ನು ತರುವ ತಾಕತ್ತು ನನಗಿಲ್ಲ. ಮೇಲಾಗಿ, ತರುವುದರೊಳಗಾಗಿ ಆಗಬಾರದುದು ಆಗಿಹೋದರೆ? ನಡೆಯ ಬಾರದುದು ನಡೆದುಹೋದರೆ? ಆದುದರಿಂದ ಇಂಥ ರೂಪವತಿ ಸುತೆಯನ್ನು ಹಡೆದ ತಪ್ಪಿಗಾಗಿ, ಅವಳಿಗೆ ಓದುಬರಹ ಕಲಿಸಿದ ತಪ್ಪಿಗಾಗಿ, ಅವಳಿಗೆ ಬಲ್ಲವರೊಡನೆ ಒಡನಾಟದ ಅವಕಾಶವಿತ್ತ ತಪ್ಪಿಗಾಗಿ ಅವಳನ್ನು ನಿನ್ನ ಅಣ್ಣನ ಮಗನಿಗೇ ಗಂಟು ಹಾಕಿ ಬಿಡೋಣ! ಮುಂದೆ ನಿಂತು ಅಣಕಿಸುತ್ತಿರುವ ಕುತ್ತದಿಂದ ಪಾರಾಗೋಣ!

ತಾಯಿ : (ಹಿಗ್ಗಿ ಹೀರೆಯಕಾಯಿಯಾಗಿ) ಒಮ್ಮೆಯಾದರೂ ನನ್ನ ಮಾತು ನಡೆಸಿದಿರಲ್ಲ. ನಿಮ್ಮ ಜಾಣತನವನ್ನು ಮೆಚ್ಚಿದೆ.

ತಂದೆ : ಇದು ಜಾಣತನವೋ ಕೋಣತನವೋ ಕಾಲವೇ ನಿರ್ಣಯಿಸಬೇಕು!

* * *

(ಅದೇ ಮನೆಯ ಮತ್ತೊಂದು ಕೋಣೆಯಲ್ಲಿ ಹುಂಬನೊಡನೆ ಮದುವೆ ಮಾಡಬೇಡಿರೆಂದು ಹಲುಬುತ್ತಲಿದ್ದಾಳೆ ಹಬ್ಬಾ ಖಾತೂನ್)

ಹಬ್ಬಾ ಖಾತೂನ್ : ತೊಡೆಯದಿರು ತಾಯೆ ನನ್ನ ಕೈಗಳಿಗೆ ಮದರಂಗಿಯನ್ನು! ತೊಡಿಸದಿರು ಒಡವೆಗಳನ್ನು, ಮುಡಿಸದಿರು ಹೂಗಳನ್ನು ! ಏಕೆ ಸಿಂಗರಿಸುತ್ತಿರುವಿರಿ ನನ್ನನ್ನು? ಸಿಂಗದ ಬೋನಿನಲ್ಲಿ ಹೊಗಿಸಲೆಂದೆ? ನಾನೊಲ್ಲೆ, ನಾನೊಲ್ಲೆ, ನಾನೊಲ್ಲೆ ಈ ಮದುವೆಯನ್ನು! ಕಂಡೂ ಕಂಡೂ ಕೂಪದಲ್ಲಿ–ಅಂಧಕೂಪದಲ್ಲಿ ತಳ್ಳದಿರಿ ನನ್ನನ್ನು! ಅಮ್ಮೀಜಾನ್, ಅಬ್ಬಾಜಾನ್–ನಿಮಗೆ ಸೆರೆಗೊಡ್ಡಿ ಬೇಡುವೆ–ತಪ್ಪಿಸಿರಿ ಈ ಮದುವೆಯನ್ನು! ನಿಮಗೆ ಭಾರವಾಗದಂತೆ ನೀವಿರಿಸಿದಲ್ಲಿ ನೀವಿರಿಸಿದಂತೆ ಇರುವೆ; ನಾನು ದುಡಿದು ನನ್ನ ಹೊಟ್ಟೆ ಹೊರೆವೆ; ಓದು, ಬರಹ, ಹಾಡು, ಕುಣಿತ ಎಲ್ಲ ತೊರೆವೆ–ನನ್ನನ್ನು ಈ ಕಾಡುಮೃಗದ ಕೈಗೆ ಕೊಡಬೇಡಿರಿ! ಹುಲಿಯ ಬಾಯಿಗಾದರೂ ಕೊಡಿರಿ, ಹುತ್ತದ ಹೋರಿನಲ್ಲಾದರೂ ಇಡಿರಿ, ಈ ಹುಂಬನ ಕೈಗೆ ಕೊಡಬೇಡಿರಿ! ಅಮ್ಮೀಜಾನ್, ನಿನ್ನ ಚರಣ ಚುಂಬಿಸುವೆ, ನನ್ನನ್ನು ಈ ಕೆಸರಿನ ಹೊಳೆಯಲ್ಲಿ ಎಸೆಯದಿರು, ಎಸೆಯದಿರು.... (ಗೋಗರೆವಳು)

ತಾಯಿ : ಹೀಗೆಲ್ಲ ಹಟಮಾಡದಿರು ಹಬ್ಬಾ, ಕಾಲ ಮಿಂಚಿಹೋಗಿದೆ, ಕೈಮೀರಿ ಹೋಗಿದೆ, ಮಾತು ಕೊಟ್ಟಾಗಿದೆ. ಪಾಲಿಗೆ ಬಂದುದೇ ಪರಮಭಾಗ್ಯವೆಂದು ತಿಳಿಯಬೇಕಮ್ಮಾ! ಯಾರ ಕೈಯಲ್ಲಿ ಏನಿದೆ? ಅಲ್ಲಾನ ಇಚ್ಛೆ ಏನಿದೆಯೋ ಅದೇ ಆಗುತ್ತದೆ. ಅಲ್ಲಾನ ಇಚ್ಛೆಗೆ ಎದುರಾಗಿ ನಿಲ್ಲುವೆಯಾ? ಈ ಹುಚ್ಚು ಹವ್ಯಾಸ ಬಿಟ್ಟುಬಿಡು. ಬೇಗ ಸಿದ್ಧಳಾಗು. ವರನ ಬಾರಾತ ಬರುವ ಹೊತ್ತಾಯಿತು. ಬೇಗ ಸಿದ್ಧಳಾಗು.

ಹಬ್ಬಾ ಖಾತೂನ್ : ಸಿದ್ಧಳಾಗುವೆ ತಾಯೆ, ಕರಾಳ ಕಮ್ಮರಿಯಲ್ಲಿ ಬೀಳಲು ಸಿದ್ಧಳಾಗುವೆ; ನರಕ ಕೂಪದಲ್ಲಿ ಹಾರಲು ಸಿದ್ಧಳಾಗುವೆ; ನಂಜಿನ ತೊರೆಯಲ್ಲಿ ತೇಲಲು ಸಿದ್ಧಳಾಗುವೆ! ಈ ಹುಂಬನಿಗೆ ಕೊಡಲೆಂದೇ ನನಗೆ ವಿದ್ಯೆ ಬುದ್ಧಿ ಕಲಿಸಿದಿರಾ! ಆ ಕಾಡರ ಮನೆಗೆ ಕಳಿಸುವುದಕ್ಕಿಂತ ಕಾಡಿಗೆ ಅಟ್ಟಬಾರದೆ ನನ್ನನ್ನು!

(ಮತ್ತೆ ರೋರಾಡಿ ರೋದಿಸುವಳು. ಆದರೆ ಷಹನಾಯಿಯ ಸುನಾದ ಬರಬರುತ್ತ ಹೆಚ್ಚಾಗಿ ಅವಳ ರೋದನ ಸ್ವರ ಕ್ರಮಕ್ರಮವಾಗಿ ಕಡಿಮೆಯಾಗಿ ಕೊನೆಗೆ ಕೇಳದಾಗಿಬಿಡುತ್ತದೆ)

ನೋಟ ೪

(ಹಬ್ಬಾ ಖಾತೂನಳ ಗಂಡನ ಮನೆಯಲ್ಲಿ)

ಹಬ್ಬಾಳ ಅತ್ತೆ : ಹಬ್ಬಾ, ಏ ಹಬ್ಬಾ ಮತ್ತೆ ಎಲ್ಲಿ ಹೋಗಿ ನಿಂತೆಯೇ ಮನೆಗೆ ಬಂದ ಮಾರಿ!

ಹಬ್ಬಾ : (ಅಂಜಿದ ಸ್ವರದಲ್ಲಿ) ಬಂದೆ ಅತ್ತೆಯವರೆ, ಹೊರಗೆ ಬೆಟ್ಟದ ಮುಡಿಯ ಬೆಳಕನ್ನು ನೋಡುತ್ತ ನಿಂತಿದ್ದೆ. ನೀವೂ ಬಂದು ನೋಡಿರಿ ಅತ್ತೆಯವರೆ. ಏನದರ ಸೊಗಸು, ಎನಿತದರ ಸೊಬಗು....

ಅತ್ತೆ : (ನಡುವೆ ಬಾಯಿಹಾಕಿ) ಏ ಕೆಲಸಗೇಡಿ, ಹೊತ್ತು ಗೊತ್ತು ಇಲ್ಲದೆ ಸುತ್ತು ಮುತ್ತು ನೋಡುತ್ತ ನಿಲ್ಲಲ್ಲು ಬಂದಿರುವಿಯೇನೇ ಈ ಮನೆಗೆ? ಸೊಬಗಂತೆ, ಸಿಂಗಾರವಂತೆ! ಮನೆಯ ಕೆಲಸ ಮಾಡುವುದನ್ನು ಬಿಟ್ಟು ಬೆಟ್ಟದ ಮುಡಿಯ ಬೆಳಕು ನೋಡುವಳಂತೆ ಈ ಥಳುಕಿನವಳು! ಒಳಗಿದ್ದರೆ ಏನಾದರೂ ಓದುತ್ತಾ ಕೂರುವುದು, ಹೊರಗಿದ್ದರೆ ಸೊಬಗು ನೋಡುತ್ತ ನಿಲ್ಲುವುದು– ಇದೇ ಏನು ನಿನ್ನ ಕೆಲಸ? ಹೀಗೆಲ್ಲ ಮಾಡಿ, 'ನಾನು ಕಲಿತವಳು, ನೀವು ಕಲಿಯದವರು', ಎಂದು ನಮ್ಮನ್ನು ಮೂದಲಿಸಬೇಕೆಂದಿರುವಿಯೇನು? ಇನ್ನು ನನ್ನನ್ನು ಕೇಳದೆ ಬಾಗಿಲ ಹೊರಗೆ ಕಾಲಿಟ್ಟರೆ ಆ ಕಾಲನ್ನೇ ಮುರಿದು ಹಾಕುವೆನು! ತಿಳಿಯಿತೆ?

ಹಬ್ಬಾ : ತಮ್ಮ ಅಪ್ಪಣೆಯಂತೆ ನಡೆದುಕೊಳ್ಳುವೆ, ಅತ್ತೆಯವರೆ!

ಅತ್ತೆ : ಅಪ್ಪಣೆಯಂತೆ ಅಪ್ಪಣೆ. ನೀನಿನ್ನೂ ನಾನು ಓದಿದವಳೆಂಬ ಬಿಂಕವನ್ನೇ ಬಿಡಲೊಲ್ಲೆಯಲ್ಲೆ!

ಹಬ್ಬಾ : ತಾವು ಹೇಳಿದಂತೆ ನಡೆದುಕೊಳ್ಳುವೆ, ಅತ್ತೆಯವರೆ!

ಅತ್ತೆ : ಹೇಳಿಸಿಕೊಂಡು ಮಾಡುವ ಸೊಸೆ ಅದೆಂಥ ಸೊಸೆಯೆ?

ಹಬ್ಬಾ : ಹೇಳಿಸಿಕೊಳ್ಳದೆ ಮಾಡುವೆ, ಅತ್ತೆಯವರೆ!

ಅತ್ತೆ : ಅಂದರೆ? ನಿನ್ನ ಮನಬಂದಂತೆ ಮಾಡುವಿಯೆನ್ನು!

ಹಬ್ಬಾ : (ವಿಷಯಾಂತರ ಮಾಡಿ) ಅಡುಗೆಗೆ ಇಡಲೆ ಅತ್ತೆಯವರೆ?

ಅತ್ತೆ : ಇಡು, ಅದನ್ನೂ ಕೇಳಬೇಕೇನು? ಒಳ್ಳೆಯ ಸೊಸೆ ಸಿಕ್ಕಳು ನನಗೆ! (ಭರಭರ ಒಳಗೆ ಹೋಗುವಳು)

ಹಬ್ಬಾ : (ದುಃಖ ಉಕ್ಕಿಬರಲು) ಅತ್ತೆ ಹೀಗೆ, ಪತಿಯು ಹೇಗೆ ಹೇಗೋ! ಎಂತು ಬದುಕಲಿ? ಹೇಗೆ ದಿನಗಳೆಯಲಿ? ಯಾ ಅಲ್ಲಾ, ನೀನಿರಿಸಿದಂತೆ ಇರುವೆನು, ಹುಲುಬಾಳು ಹೊರೆವೆನು ಕತ್ತಲಾಯಿತು. ದೀಪವನ್ನಾದರೂ ಹಚ್ಚುವೆನು.

(ಅವಳು ದೀಪ ಹಚ್ಚುತ್ತಿರುವಂತೆ ಆ ಮನೆಯ ಬದಿಯ ಮನೆಯಲ್ಲಿ ಹಬ್ಬಾಳ ಗೆಳತಿಯ ಹಾಡು ಮೂಡುತ್ತದೆ)

ಬೆಳಗು ಬಡವರ ಮನೆಯ ದೀಪವೆ

ದುಗುಡದೆಣ್ಣೆಯ ಕುಡಿಯುತ!

ಅಲ್ಲಿ ಬೆಳಗಿದೆ ಗುಡಿಸಲೆದೆಯೆನು
ಇಲ್ಲಿ ಉರಿ ವ್ಯಥೆ ಮಿಡಿಯುತ!
ಮಹಲ ಬೆಳಗಲುಬಹುದು ದೀಪವು
ಮುರುಕು ಮನೆಯನು ಸೇರಿದೆ!
ಮುಳ್ಳು ಬೇಲಿಯ ಮೇಲೆ ಮಲ್ಲಿಗೆ
ನೋವು-ಹೂವನ್ನು ಹೇರಿದೆ!
ಬೇಗ ಮುಗಿಯಲಿ ಬಗೆಯ ಬೇಗೆಯ
ದಿನಗಳೀ ಸುಕುಮಾರಿಗೆ-
ಚೆಲುವು ನಯಗಳ ಗೇಯಲಯಗಳ
ತನಿಯ ತಿಳಿವಿನ ತವರಿಗೆ!

(ಅತ್ತ ಹಬ್ಬಾ ತನ್ನ ಕೋಣೆಯಲ್ಲಿ ಗಂಡನ ದಾರಿಕಾಯುತ್ತ ಕುಳಿತಿದ್ದಾಳೆ)

ಹಬ್ಬಾ : ಮಧ್ಯರಾತ್ರಿ ಮೀರುತ್ತ ಬಂದಿತು ಇದುವರೆಗೂ ಬರಲಿಲ್ಲವಲ್ಲ ಇವರು! ಮತ್ತೆ ಕುಡಿದು ಮತ್ತರಾಗಿ ಎಲ್ಲಿಯಾದರೂ ಬಿದ್ದುಬಿಟ್ಟಿರಬಹುದೆ?........ ಹಗಲೆಲ್ಲ ಅತ್ತೆಯ ಬೈಗುಳಗಳನ್ನು ಕೇಳಬೇಕು, ಕರ್ಣ ಕಠೋರ ವಾಕ್ಯಗಳನ್ನು ಕೇಳಬೇಕು. ರಾತ್ರಿ ಇವರ ದಾರಿ ಕಾಯಬೇಕು! ದಾರಿ ಕಾಯ್ದುದಕ್ಕೆ ದೊರೆವ ಫಲವೋ-ಇನ್ನಷ್ಟು ಅವಾಚ್ಯ ಶಬ್ದಗಳ ಶ್ರವಣ, ಒಮ್ಮೊಮ್ಮೆ ಪ್ರಹರಣ ಕೂಡ! ಯಾ ಅಲ್ಲಾ, ನಾನು ಮಾಡಿದ ಅಪರಾಧವಾದರೂ ಏನು-ಇಂಥ ಶಿಕ್ಷೆಗೆ ನನ್ನನ್ನು ಗುರಿಮಾಡಲು? ಓದಿದುದೇ ಅಪರಾಧವೆ? ಕಲಿತದ್ದೇ ಪಾಪವೆ? ನನ್ನ ರೂಪವೇ ನನಗೆ ಶಾಪವಾಗಬೇಕೆ? ನನ್ನ ಕಲೆಯೇ ನನಗೆ ಶಿಲುಬೆಯಾಗಬೇಕೆ? ಇದೆಂಥ ವಿಧಿಯ ವೈಪರೀತ್ಯ ತಂದೆ?........ನಿದ್ದೆ ಬರುತ್ತಿದೆ. ಮಲಗಲೆ? ಮಲಗಿದುದೇ ಅಪರಾಧವಾದರೆ?... ಆದರೂ ಆಗಲಿ ನಾನಿನ್ನು ಕುಳಿತಿರಲಾರೆ! ... ಮೈ ಕೈ ನೋವು...... ರೆಪ್ಪೆ ಭಾರವಾಗುತ್ತಿವೆ. ಜೋಲಿ ಬರುತ್ತಿದೆ..... (ಮಲಗಿ ಕನಸಿನಲ್ಲಿ ಕನವರಿಸುತ್ತಾಳೆ).........ಯಾರಿವರು? ಕಮಾಲ್? ಮತ್ತೇಕೆ ಬಂದೆ ಕಮಾಲ್? ನನ್ನ ಕೈ ಹಿಡಿಯಲು ಜನ್ಮ ಜನ್ಮಾಂತರಗಳವರೆಗೆ ದಾರಿಕಾಯುವಿಯಾ? ಮುಂದಿನ ಜನ್ಮದಲ್ಲಿ ನೋಡೋಣ ಕಮಾಲ್! ಈ ಜನ್ಮದ ಇತಿಶ್ರೀ ಆಗಿಹೋಗಿದೆ! ಹೇಗಾದರೂ ಮುಗಿಸಬೇಕು ಈ ಯಾತನೆಯ ಯಾತ್ರೆಯನ್ನು! ನನ್ನನ್ನು ಮರೆತುಬಿಡು ಕಮಾಲ್! ನಾನೀಗ ಇನ್ನೊಬ್ಬರ ವಸ್ತು ಕಮಾಲ್!.... (ಚೀರಿ) ನನ್ನನ್ನು ಹೊಡೆಯಬೇಡ ಅಜೀಜ್! ಇದುವರೆಗೆ ನಿನ್ನ ದಾರಿಕಾಯ್ದು ಈಗ ತಾನೆ ಮಲಗಿದೆ ಅಜೀಜ್! ಬಹಳ ದಣಿದಿದ್ದೆ ಅಜೀಜ್...... ಇನ್ನೊಮ್ಮೆ ನೀನು ಬರುವವರೆಗೆ ನಿದ್ದೆ ಹೋಗುವುದಿಲ್ಲ

ಅಜೀಜ್! (ಬೆಚ್ಚಿ ಮೇಲೆದ್ದು) ಯಾರಿರಬಹುದು ಆ ಸ್ಫುರದ್ರೂಪಿ? ಷಹಜಾದಾನಂತೆ ಕಂಡ. ನನ್ನ ಬಳಿಗೇ ಬಂದ. ಅರ್ಥಪೂರ್ಣ ನಗೆ ಬೀರಿದ. ಮುಟ್ಟಲು ಮುಂದಾದ. ಭಯದಿಂದ ನಡುಗಿ ಮೇಲೆದ್ದೆ. ಥೂ, ಹಾಳು ಕನಸೆ, ಹಾಳಾಗಿ ಹೋಗು! ಮಲಗಿದರೆ ಕನಸಿನ ಕಾಟ. ಮಲಗುವುದೇ ಬೇಡ. ದಾರಿ ಕಾಯುತ್ತ ಕುಳಿತುಬಿಡುವೆ. ಹಬ್ಬಾ, ನಿನ್ನ ಜೀವನವೇ ಚಿರಪ್ರತೀಕ್ಷೆಯಲ್ಲವೆ? ಅಗ್ನಿಪರೀಕ್ಷೆಯಲ್ಲವೆ?

(ಹಬ್ಬಾಳ ಗಂಡ ಅಜೀಜನು ಹೊಲದಲ್ಲಿ ಹೋರೆ ಮಾಡುತ್ತಲಿದ್ದಾನೆ. ಊರ ದಾರಿಯತ್ತ ತಿರುಗಿ ಹುಬ್ಬುಗೈ ಹಚ್ಚಿ)

ಅಜೀಜ್ : ಇನ್ನೂ ಹಬ್ಬಾ ಬುತ್ತಿ ತರಲಿಲ್ಲವಲ್ಲ ಇವೊತ್ತು? ಹೊತ್ತು ನೆತ್ತಿಯ ಮೇಲೆ ಬಂದಿತು. ಹೊಟ್ಟೆಯಲ್ಲಿ ದೊಂಬರಾಟ ನಡೆದಿದೆ! ...ಹಬ್ಬಾ ಏ ಹಬ್ಬಾ

ಹಬ್ಬಾ : (ಲಗುಬಗೆಯಿಂದ ಬಂದು) ಬಂದೆ ಅಜೀಜ್.

ಅಜೀಜ್ : ಯಾಕೆ ಇಷ್ಟು ಹೊತ್ತು ಮಾಡಿದೆಯೆ ಇಂದು ಬುತ್ತಿ ತರಲು?

ಹಬ್ಬಾ : ಇಂದು ಶುಕ್ರವಾರವಲ್ಲವೆ? ನಮಾಜು ಮಾಡಿ ಬಂದೆ. ನೀನು ನಮಾಜು ಮಾಡಿದೆಯಾ?

ಅಜೀಜ್ : (ಅದಕ್ಕೆ ಉತ್ತರ ಕೊಡದೆ) ಬಿಚ್ಚು ಬೇಗ ಬುತ್ತಿ, ಬಡಿಸು ಬೇಗ ಹಬ್ಬಾ. ಕಣ್ಣು ಕತ್ತಲೆಗೂಡಿಸುತ್ತಿವೆ.

(ಹಬ್ಬಾ ಬಡಿಸುವಳು. ಅಜೀಜ್ 'ಅಹಾ, ಎಷ್ಟು ರುಚಿಯಾಗಿದೆ ಇಂದಿನ ಅಡಿಗೆ' ಎನ್ನುತ್ತ ಗಬಗಬ ತಿನ್ನತೊಡಗುವನು. ಹಬ್ಬಾ ಹೊಲದ ಚೆಲುವನ್ನು ನೋಡುತ್ತ 'ಅಹಾ ಚೆಲುವೆ, ಒಹೋ ಸೊಬಗೆ' ಎಂದು ಉದ್ಗರಿಸುತ್ತ ನಿಲ್ಲುವಳು. ಅಜೀಜ್ ಅದನ್ನು ನೋಡಿ)

ಅಜೀಜ್ : ಎಲೆ, ಏನು ನೋಡುತ್ತ ನಿಂತೆಯೆ ಗರಹೊಡೆದವರಂತೆ?

ಹಬ್ಬಾ : ಹೊಲದ ಚೆಲುವನ್ನು ನೋಡುತ್ತಲಿದ್ದೇನೆ ಅಜೀಜ್..... ಏನು ಸೊಬಗಿನ ಸುಗ್ಗಿ ಸೂರೆಯಾಗಿದೆ ಹೊಲದ ತುಂಬ! ಅಲ್ಲಿ ನೋಡು ಅಜೀಜ್.... ಆ ಹಕ್ಕಿಗಳ ಸಾಲು ಆಕಾಶಕ್ಕೆ ತೋರಣ ಕಟ್ಟಿದಂತಿದೆ. ಅಹಾ, ಹಕ್ಕಿಗಳ ಸಾಲಿನ ಮೇಲೆ ಮೋಡಗಳ ಸಾಲು, ಕಾರ್ಮೋಡಗಳ ಸಾಲು! ಎಲ ಎಲ, ಮೋಡಗಳೆಲ್ಲ ಕೂಡಿಕೊಂಡು ಹಂದರವಾಗಿಬಿಟ್ಟುವು! ಆ ಹಂದರಕ್ಕೆ ಹೂಗೊಂಚಲಾಗಿ, ಹಣ್ಣಿನ ಗೊಂಚಲಾಗಿ ತೋರುತ್ತಿದೆ ಹಕ್ಕಿಗಳ ಹಿಂಡು!

ಅಜೀಜ್ : (ಪೆಚ್ಚಾಗಿ) ಹಬ್ಬಾ, ನೀನು ಯಾವಾಗಲೂ ಏನಾದರೂ ಬಡಬಡಿಸುತ್ತಲೇ ಇರುತ್ತೀ..... ನಿನಗೇನೋ ಆಗಿದೆ ಹಬ್ಬಾ! ನಿನ್ನ ಬುದ್ಧಿ ಬರೋಬರಿ ಇಲ್ಲ. ಇವೊತ್ತು ಹಕೀಮರ ಹತ್ತಿರ ಕರೆದೊಯ್ಯಲೆ ನಿನ್ನನ್ನು?

ಹಬ್ಬಾ : (ಗಾಬರಿಯಾಗಿ) ನನಗೇನೂ ಆಗಿಲ್ಲ ಅಜೀಜ್. ನಾನು ಬಡಬಡಿಸಲಿಲ್ಲ. ಕಣ್ಣಿಗೆ ಕಂಡದ್ದನ್ನು ಬಣ್ಣಿಸಿದೆ, ಅಷ್ಟೆ.

ಅಜೀಜ್ : ನಿನ್ನ ಕಣ್ಣಿಗೆ ಕಂಡದ್ದೆಲ್ಲಾ ನನ್ನ ಕಣ್ಣಿಗೂ ಕಾಣುತ್ತದೆ ಕಣೆ! ನಾನೇಕೆ ನಿನ್ನಂತೆ ಬಡಬಡಿಸುವುದಿಲ್ಲ? ನಿನ್ನಂತೆ ನನ್ನ ಬುದ್ಧಿ ಕೆಟ್ಟಿಲ್ಲ ಅಷ್ಟೆ.... ನನ್ನ ಮಾತು ಕೇಳು ಹಬ್ಬಾ, ಇಂದು ಹಕೀಮರ ಹತ್ತಿರ ಹೋಗೋಣ. ನಿನ್ನ ಬಡಬಡಿಕೆಯನ್ನೆಲ್ಲ ಬಂದು ಮಾಡಿಬಿಡುವರು ಅವರು.

ಹಬ್ಬಾ : (ಇನ್ನಷ್ಟು ಗಾಬರಿಯಾಗಿ) ಅವರು ಬಂದು ಮಾಡುವುದೇಕೆ ನಾನೇ ಬಡಬಡಿಸುವುದನ್ನು ಬಿಟ್ಟುಬಿಡುವೆನು ಅಜೀಜ್. ನನ್ನನ್ನು ಹಕೀಮರ ಹತ್ತಿರ ಕರೆದೊಯ್ಯಬೇಡ ಅಜೀಜ್!

ಅಜೀಜ್ : (ಅವಳ ಅಂಜಿಕೆಯಿಂದ ಇನ್ನೂ ಉತ್ತೇಜಿತನಾಗಿ) ನಿನ್ನನ್ನೊಮ್ಮೆ ನೋಡಿಬಿಡಲಿ ಹಕೀಮರು, ಹಬ್ಬಾ. ನಾಡಿ ಪರೀಕ್ಷೆಯಲ್ಲಿ ಸರಿಯಿಲ್ಲದ ಹಕೀಮರವರು. ಬರೆ ಹಾಕುವದರಲ್ಲಿಯಂತೂ ಅವರ ಸರಿ ಅವರೇ. ನಿನ್ನ ಕುತ್ತಿಗೆಯ ನರಗಳ ಪರೀಕ್ಷೆಮಾಡಿ ಒಂದು ನರಕ್ಕೆ ಬರೆಹಾಕಿಬಿಟ್ಟರೆಂದರೆ ನಿನ್ನ ಬುದ್ಧಿ ಬರೋಬರಿಯಾಗಿ ಬಿಡುತ್ತದೆ. ಹಕೀಮರ ಹತ್ತಿರ ಹೋಗೋಣ ಹಬ್ಬಾ!

ಹಬ್ಬಾ : (ಮತ್ತಷ್ಟು ಗಾಬರಿಯಾಗಿ) ನನ್ನ ಬುದ್ಧಿಯೀಗ ಬರೋಬರಿಯಾಗಿಬಿಟ್ಟಿದೆ ಅಜೀಜ್. ಔಷಧವಿಲ್ಲದೆ ಕಾಯಿಲೆ ಮಾಯವಾಗಿಬಿಟ್ಟಿತು! ಇಂದಿನಿಂದ ನಾನು ಬಡಬಡಿಸುವುದನ್ನು ಬಿಟ್ಟೆ, ಬಣ್ಣಿಸುವುದನ್ನು ಬಿಟ್ಟೆ, ಎಲ್ಲವನ್ನೂ ಬಿಟ್ಟುಕೊಟ್ಟೆ ಅಜೀಜ್ ನನ್ನನ್ನು ಹಕೀಮರ ಹತ್ತಿರ ಕರೆದೊಯ್ಯಬೇಡ.

ಅಜೀಜ್ : (ಗೆಲವಿನ ದನಿಯಲ್ಲಿ) ಬಹುತ್ ಅಚ್ಛಾ! ಕೆಲವು ದಿನ ಕಾದು ನೋಡುವೆ. ಮತ್ತೆ ಬುದ್ಧಿ ಕೆಟ್ಟ ಲಕ್ಷಣ ತೋರಿದರೆ ಹಕೀಮರ ಹತ್ತಿರ ಹೋಗಿ ಬರೆ ಹಾಕಿಸಿಕೊಳ್ಳಲೇ ಬೇಕಾಗುವುದು! ತಿಳಿಯಿತೆ ಹಬ್ಬಾ?

ಹಬ್ಬಾ : ಚೆನ್ನಾಗಿ ತಿಳಿಯಿತು ಅಜೀಜ್. ನೀನು ಹೇಳಿದಂತೆ ಕೇಳುವೆನು.

ಅಜೀಜ್ : ಷಾಬಾಷ್! ಹೀಗಿರಬೇಕು ಹೆಂಡತಿ ಅಂದ್ರೆ! ನನಗೆ ನಿದ್ದೆ ಬರುತ್ತಿದೆ ಹಬ್ಬಾ. ಕುತ್ತಿಗೆಯವರೆಗೆ ಒತ್ತಿ ಒತ್ತಿ ತುಂಬಿದ್ದೇನೆ. ನಿದ್ದೆ ಸದ್ದಿಲ್ಲದೆ ಬರುತ್ತಿದೆ.

ಹಬ್ಬಾ : (ಬುತ್ತಿಯ ಬಟ್ಟೆಯನ್ನೇ ಹಾಸಿ) ಮಲಗು ಅಜೀಜ್, ನಿದ್ದೆ ಕಟ್ಟಬಾರದು, ಮಲಗಿಬಿಡು.

ಅಜೀಜ್ : (ಮಲಗುತ್ತ) ಭೇಷ್, ಭೇಷ್–ನಿನ್ನ ಬುದ್ಧಿ ಬರೋಬರಿ ಆಗಿರೋದು ನಿಜ ಹಬ್ಬಾ. ನಾನಿನ್ನು ಮಲಗುವೆ. ನೀನು?

ಹಬ್ಬಾ : ನಾನು ಹೊಲ ಕಾಯುವೆನು.

ಅಜೀಜ್ : ಬಹುತ್ ಅಚ್ಛಾ.

(ಮಲಗುವನು. ಅವನ ಗೊರಕೆಯ ಸ್ವರ ಕೇಳತೊಡಗುವುದು. ಹಬ್ಬಾ ಪಕ್ಕದ ಹುಲ್ಲು ಮೊರಡಿಯನ್ನೇರಿ ನಿಲ್ಲುವಳು. ಇದ್ದಕ್ಕಿದ್ದಂತೆ ಎಲ್ಲ ನೆನಪಾಗಿ ದುಃಖ ಉಕ್ಕಿ ಬರುವುದು, ಹೃದಯದ ವ್ಯಥೆ ಹಾಡಾಗಿ ಹರಿಯುವುದು)

ಅತ್ತೆಮನೆಯವರೊಡನೆ ಆಗದೆನಗಿನ್ನು–
ತವರಿನವರೇ ಪಾರುಮಾಡಿರೆನ್ನನ್ನು!
ಕೊಡವ ತುಂಬಲು ಹೋದೆ ಮನೆಯ ಬಿಟ್ಟು
ಕೊಡವೆ ಒಡೆಯಿತು ನನ್ನ ದೈವ ಕೆಟ್ಟು
ಕೊಡಕೆ ಕೊಡ ತಂದುಕೊಡಿ ಕರುಣವಿಟ್ಟು
ಕೊಡದ ಬೆಲೆಯಾದರೂ ಹೋಗಿ ಕೊಟ್ಟು!
ಅತ್ತೆಮನೆಯವರೊಡನೆ ಆಗದೆನಗಿನ್ನು–
ತವರಿನವರೇ ಪಾರುಮಾಡಿರೆನ್ನನ್ನು!
ನನ್ನ ಯೌವನ ಇಳಿಯತೊಡಗಿಹುದು ಈಗ
ಈ ತಿಟ್ಟು ಘಟ್ಟಗಳ ನಾನೇರಲಾರೆ
ಹರಳುಗಳ ತುಳಿಯುತ್ತ ಕಾಲಿಗೆದ್ದುವು ಗುರುಳೆ
ನನ್ನ ಗಾಯಕೆ ಉಪ್ಪು ಎರಚುವರು ಬೇರೆ!
ಅತ್ತೆಮನೆಯವರೊಡನೆ ಆಗದೆನಗಿನ್ನು–
ತವರಿನವರೇ ಪಾರುಮಾಡಿರೆನ್ನನ್ನು!
ರಾಟೆಯನು ತಿರುಹುತ್ತ ಕಣ್ಣುಮುಚ್ಚಿದುವೆನಗೆ
ಆಗ ಹರಿಯಿತು ರಾಟೆಗಿದ್ದ ದಾರ
ಅತ್ತೆಯೆಳೆದಳು ನನ್ನ ಕೂದಲುಗಳನ್ನು ಹಿಡಿದು
ಈ ದುಃಖವೆನಗಲ್ತೆ ಸಾವಿಗಿಂತಲೂ ಘೋರ?
ಅತ್ತೆಮನೆಯವರೊಡನೆ ಆಗದೆನಗಿನ್ನು–
ತವರಿನವರೇ ಪಾರುಮಾಡಿರೆನ್ನನ್ನು!

(ಹಾಡಿನ ಹೊನಲು ಹರಿಯುತ್ತಿದ್ದಂತೆ, ಅದೇ ಸಮಯಕ್ಕೆ ಆ ಮಾರ್ಗವಾಗಿ ಬಂದಿದ್ದ ಯುವರಾಜ ಯೂಸುಫ್ ಷಾಹನು ಗಾಳಿಯೊಡನೆ ತೇಲಿಬಂದ ಹಬ್ಬಾ ಖಾತೂನಳ ಹಾಡು ಕೇಳಿ ಮಾರುಹೋಗುತ್ತಾನೆ. ಅದರ ಮಧುರ ವೇದನೆಗೆ, ಅದನ್ನು ಹಾಡಿದ ಕಿನ್ನರ ಕಂಠಕ್ಕೆ, ಅದರಿಂದ ಸೂಸಿದ ಸಮ್ಮೋಹಕತೆಗೆ)

ಯೂಸುಫ್ ಷಾಹ : ಇದು ಯಾರ ಮಧುರಸ್ವರ ಮಂತ್ರಿಗಳೆ? ಈ ಕಾಶ್ಮೀರದ ಯುವರಾಜನ ಕಿವಿಗಳು ಹಿಂದೆಂದೂ ಕೇಳದಿದ್ದ ಕಿನ್ನರ ಸ್ವರವಿದು! ಶ್ರೀನಗರದ ಅರಮನೆಯಲ್ಲಿ ಕೇಳದಿದ್ದ ಈ ಕಳಕಂಠರವವನ್ನು ಈ ಹಳ್ಳಿಗಾಡಿನಲ್ಲಿ ಕೇಳಿದೆನಲ್ಲ!..... ಇದು ಮಾನವ ಸ್ವರವೋ ಅಗೋಚರ ಅಪ್ಸರೆಯ ಸಿರಿಗೊರಳ ಸ್ವರವೊ! ಇಲ್ಲವೆ ಬಯಲ ಝುಂಕಾರವೋ? ಗಾಳಿಯ ನೂಪುರದ ಝುಣತ್ಕಾರವೋ? ಕಾಮನಬಿಲ್ಲಿನ ಟಂಕಾರವೋ?....

ವಜೀರ : ಇದು ಮಾನವ ಸ್ವರವೇ ನಿಜ, ಆಲಮ್ ಪನಾಹ, ಆದರೆ ಅಸಾಮಾನ್ಯ ಮಾನವ ಸ್ವರ.

ಯೂಸುಫ್ : ಮೊದಲೇ ಮಧುರ ಸ್ವರ, ಅದಕ್ಕೆ ಮಧುರ ವೇದನೆ ಸೇರಿ ಇನ್ನೂ ಮಧುರತರವಾಗಿದೆ.

ವಜೀರ : ಅಹುದು ಜಹಾಂಪನಾಹ್, ಮಧುರ ಸ್ವರದ ಕ್ಷೀರಕ್ಕೆ ಮಧುರ ವೇದನೆಯ ಮಧು ಸೇರಿ ಕರ್ಣ ರಸಾಯನ ಸಿದ್ಧವಾದಂತಿದೆ.

ಯೂಸುಫ್ : ಬೇಷಕ್. ಹಾಡಿಗೆ ಮನಸೋತ ಹೃದಯ ಹಾಡುವವಳನ್ನು ನೋಡಲು ಹಾತೊರೆಯುತ್ತಿದೆ ವಜೀರರೇ! ಮೈ ಕೂದಲೆಲ್ಲ ಕಣ್ಣಾಗಿ ಕಾತರಿಸುತ್ತಿವೆ. ಅ ಕಾಣುವ ಮೊದಲೇ ಮನವ ಕದ್ದ ಕನ್ಯೆಯನ್ನು ನೋಡಲು!

ವಜೀರ : ತುಸು ತಾಳಿರಿ ಆಲಮ್ ಪನಾಹ, ಸ್ವರ ಮಧುರವಿದ್ದ ಮಾತ್ರಕ್ಕೆ ಮುಖವೂ ಸುಂದರವಿರಲೇ ಬೇಕಿಲ್ಲ. ಮೇಲಾಗಿ, ಸುಂದರ ಮುಖವಿದ್ದರೂ ಅದು ಇದಾಗಲೇ ಇನ್ನೊಬ್ಬರ ಸೊತ್ತಾಗಿ ಬಿಟ್ಟಿದ್ದರೆ? ಆಗಿ ಬಿಟ್ಟಿದೆಯೆಂದೇ ಸಾರುತ್ತಿದೆ ಅವಳು ಹಾಡುತ್ತಿರುವ ಹಾಡು.

(ಅಷ್ಟರಲ್ಲಿ ಹಬ್ಬಾಳ ಹಾಡಿನ ಕೊನೆಯ ಚರಣ ಕೇಳಿಸುತ್ತದೆ)

ವ್ಯಗ್ರಳಾಗಿಹೆ ನಾನು ಪ್ರಿಯಕರನಿಗಾಗಿ

ಜೀವನವೆ ಆಗಿದೆ ಅಜೀರ್ಣ ನನಗೆ!

ಹಬ್ಬಾ ಖಾತೂನಳೀ ಸಂಜ್ಞೆಯನು ಅರಿಯಿರಿ

ಹಿರಿಯ ಹೃದಯದ ನನ್ನ ತವರಿನವರೆ!

ಅತ್ತೆಮನೆಯವರೊಡನೆ ಆಗದೆನಗಿನ್ನು-

ತವರಿನವರೇ ಪಾರುಮಾಡಿರೆನ್ನನ್ನು

ಯೂಸುಫ್ : ನೀವು ಊಹಿಸಿರುವಂತೆ ಇವಳು, ಈಗಾಗಲೇ ಇನ್ನೊಬ್ಬರ ವಸ್ತುವಾಗಿರುವುದು ನಿಜ ವಜೀರರೆ.... ಆದರೆ ಅವಳ ಅತೃಪ್ತ, ಪರಿತಪ್ತ ಹೃದಯ ಇನ್ನೊಬ್ಬ ಪ್ರಿಯಕರನಿಗಾಗಿ ವ್ಯಗ್ರವಾಗಿರುವಂತಿದೆ. ಯಾರಿರಬಹುದು ಅವಳ ಆ ಪ್ರಿಯಕರ? ಅವಳಿನ್ನೂ ಇನ್ನೊಬ್ಬ ಪ್ರಿಯಕರನನ್ನು ಕಂಡುಕೊಳ್ಳದಿದ್ದರೆ ನಾನೇ ಆ ಪ್ರಿಯಕರ ಏಕಾಗಬಾರದು?

ವಜೀರ : ಏಕಾಗಬಾರದು, ಆಲಮ್ ಪನಾಹ, ಏಕಾಗಬಾರದು? ಈ ಹಳ್ಳಿಯ ಹುಡುಗಿಯ ಅದೃಷ್ಟದಲ್ಲಿ ಸುಲ್ತಾನ್ ಯೂಸುಫರ ಕೈ ಹಿಡಿದು ಶ್ರೀನಗರದ ಅರಮನೆಯನ್ನು ಅಲಂಕರಿಸುವ ಭಾಗ್ಯವಿದ್ದರೆ ಏಕಾಗಬಾರದು? ಬನ್ನಿ, ಹೋಗಿ ನೋಡೋಣ.

(ಅವರಿಬ್ಬರೂ ಮೊರಡಿಯನ್ನೇರಿ ಬರುವರು. ಹಬ್ಬಾ ಖಾತೂನಳು ಯೂಸುಫನನ್ನು ನೋಡಿ ಅವಕ್ಕಾಗುವಳು. 'ಕನಸಿನಲ್ಲಿ ಕಂಡವನು,' ಎಂಬ ಮಾತು ಅಪ್ರಯತ್ನಿತವಾಗಿ ಅವಳ ಬಾಯಿಂದ ಜಾರುವುದು. ಯೂಸುಫನಂತೂ, 'ಸುಬಹಾನಲ್ಲಾ, ಎಂಥ ರೂಪರಾಶಿಯಿದು!' ಎಂದು ಉದ್ಗರಿಸಿಬಿಡುವನು. ವಜೀರನು ಮುಂದುವರಿದು ಹಬ್ಬಾ ಖಾತೂನಳೊಡನೆ ಮಾತಿಗೆ ಮೊದಲು ಮಾಡುವನು)

ವಜೀರ : ಕಾಶ್ಮೀರದ ಭಾವೀ ಸಾಮ್ರಾಜ್ಞಿಗೆ ಸಲಾಮ್, ಸದ್ ಸಲಾಮ್!

ಹಬ್ಬಾ : (ಬೆಚ್ಚಿ) ನಾನು ಅಜೀಜನ ಹೆಂಡತಿ, ಬಡವಿ, ಅಭಾಗಿನಿ! ಸಾಮ್ರಾಜ್ಞಿ ಹೇಗಾಗಬಲ್ಲೆ ಸಭ್ಯರೆ?

ವಜೀರ : (ನಗುತ್ತ) ರೂಪರಾಣಿ ರಾಜ್ಯದ ರಾಣಿಯಾಗುವುದು ಅದಾವ ಚೋದ್ಯ ಮಲಿಕಾ? ನಿಮ್ಮ ಬಡತನವನ್ನು ಒಡೆತನದಲ್ಲಿ ಪರಿವರ್ತಿಸಲು ಕಾಶ್ಮೀರದ ಯುವರಾಜ ಯೂಸುಫ್‌ಷಾಹರು ಮುಂದೆ ಬಂದಿದ್ದಾರೆ. ಅವರ ಈ ಯೋಚನೆಯನ್ನು, ಯೋಜನೆಯನ್ನು ಸ್ವೀಕರಿಸಿರಿ!

ಹಬ್ಬಾ : (ತನ್ನಲ್ಲಿ) ರೂಪ, ರಾಜ್ಯ, ಐಶ್ವರ್ಯ, ವೈಭವ, ವಿಲಾಸಗಳಿಗೆದುರಾಗಿ ನಿಂತು ತತ್ತರಿಸದಿರು ಹೆಣ್ಣು ಹೃದಯವೇ! ಕನಸಿನಲ್ಲಿ ನಿನ್ನನ್ನು ಸೂರೆಗೊಂಡ ಗಂಡು ಗಾಡಿಯೇ ನನಸಾಗಿ ಮುಂದೆ ನಿಂತರೇನಂತೆ? ನಿನ್ನಿಚ್ಛೆಯಂತೆ ನಿರ್ಣಯ ಕೈಕೊಳ್ಳಲು ನಿನಗೆ ಸ್ವಾತಂತ್ರ್ಯವೆಲ್ಲಿದೆ? ಹತ್ತಿಕ್ಕು ನಿನ್ನ ಹಂಬಲವನ್ನು; ಅದುಮಿಬಿಡು ನಿನ್ನ ಆಕಾಂಕ್ಷೆಯನ್ನು; ತುಳಿ ನಿನ್ನ ಕಾಮನೆಯ ಕೊನರನ್ನು! (ವಜೀರನಿಗೆ) ರಾಜಮಾನ್ಯರೆ, ನಾನು ಅಜೀಜನ ಅರ್ಧಾಂಗಿಯೆಂದು ಇದಾಗಲೇ ಅರುಹಿದ್ದೇನೆ. ಹೆಚ್ಚಿಗೇನು ಹೇಳಲಿ? (ಮೊರಡಿಯಿಳಿದು ಹೋಗಿ ಅಜೀಜನನ್ನೆಬ್ಬಿಸಿ) ಏಳು, ಅಜೀಜ್, ಏಳು, ಎದ್ದೇಳು! ನಿನ್ನ ಸಿರಿಯ ದರೋಡೆಕಾರರು ಬಂದಿದ್ದಾರೆ, ಮೇಲೇಳು ಅಜೀಜ್!

ಅಜೀಜ್ : (ಕಣ್ಣೊರೆಸಿಕೊಳ್ಳುತ್ತ, ದೊಣ್ಣೆಯನ್ನೆತ್ತಿಕೊಳ್ಳುತ್ತ ಎದ್ದು) ಎಲ್ಲಿದ್ದಾರೆ ದರೋಡೆಕಾರರು, ಹರಾಮ್ ಖೋರರು? ಅವರಿಗೆ ಈ ದೊಣ್ಣೆಯ ರುಚಿ ತೋರಿಸುವೆನು.............

ವಜೀರ್ : (ಮುಂದೆ ಬಂದು ಕಂಚಿನ ಸ್ವರದಲ್ಲಿ) ಅಜೀಜ್, ಕಾಶ್ಮೀರದ ಸುಲ್ತಾನರಿಗೆ ದರೋಡೆಕಾರರೆನ್ನುವ ಧಾಷ್ಟ್ಯನಿನಗಿದೆಯೇ? ಖಬರ್‌ದಾರ್ ಅಜೀಜ್!

ಅಜೀಜ್ : (ಗಾಬರಿ, ಭಯಗಳಿಂದ ನಡುಗುತ್ತ) ಸುಲ್ತಾನರು? ನಮ್ಮ ನಾಡಿನ ಸುಲ್ತಾನರು? (ಕಾಲಿಗೆರಗಿ) ಅರಿಯದೆ ಮಾಡಿದ ಅಪರಾಧವನ್ನು ಕ್ಷಮಿಸಿರಿ, ಕ್ಷಮಿಸಿರಿ............

ವಜೀರ್ : (ದರ್ಪದಿಂದ) ತಪ್ಪುದಂಡ ಕೊಟ್ಟರೆ ಕ್ಷಮಿಸುವೆವು.........

ಅಜೀಜ್ : ಯಾವ ತಪ್ಪುದಂಡ ಒಡೆಯ?

ವಜೀರ್ : (ನಿಶ್ಚಯದ ದನಿಯಲ್ಲಿ) ನಿನ್ನ ಮಡದಿಯನ್ನು ಒಡೆಯನಿಗೆ ಒಪ್ಪಿಸುವುದೇ ಆ ತಪ್ಪುದಂಡ! ಇದಕ್ಕೆ ಒಪ್ಪಿ ಅಪರಾಧದಿಂದ ಮುಕ್ತನಾಗು. ನಿನ್ನ ಗುಡಿಸಿಲಿನಲ್ಲಿ ನವೆಯುತ್ತಿರುವ ಈ ರೂಪರತ್ನ ಈ ರಾಜ್ಯದ ರಾಜಮುಕುಟದಲ್ಲಿ ರಾರಾಜಿಸುವುದನ್ನು ನೋಡುವೆ. ಇಷ್ಟೇ ಅಲ್ಲ, ಇಗೋ–ತೆಗೆದುಕೋ ಈ ಐದು ಸಾವಿರ ಅಷರಫಿಗಳನ್ನು. ಇವುಗಳನ್ನು ಪಡೆದು ನಿನ್ನ ಬಡತನ ಒಡೆತನವಾಗುವುದು. ಏಕೆ ಮಿಕಿಮಿಕಿ ನೋಡುತ್ತ ನಿಂತಿರುವೆ ಬೆಪ್ಪನಂತೆ? ಸಮಸ್ತ ಸೈನ್ಯವೇ ಸುಲ್ತಾನರ ದಾರಿ ಕಾಯುತ್ತಿದೆ. ಕಾಶ್ಮೀರದ ಪ್ರಭುಗಳಿನ್ನು ಹೊರಡಬೇಕು. ಒಪ್ಪಿಸಿಬಿಡು ತಪ್ಪುದಂಡವನ್ನು!

ಅಜೀಜ್ : (ಸಾಸಿವೆಯ ಮೇಲೆ ಸಾಗರವನ್ನಿರಿಸಿದ ಸ್ಥಿತಿಯಲ್ಲಿ) ಐದು ಸಾವಿರ ಅಷರಫಿಗಳು! ಇಂದು ನನ್ನ ಭಾಗ್ಯದ ಬಾಗಿಲು ತೆರೆದಿರಿ ದೊರೆಗಳೆ! ನನ್ನ ಕಂಗಾಲತನ ಕರಗಿಹೋಯಿತು! ನಾನು ಧನ್ಯನಾದೆ! ಸಂತೋಷದಿಂದ ಹಬ್ಬಾಳನ್ನು ಒಡೆಯನಿಗೆ ಒಪ್ಪಿಸುವೆ! ಹಬ್ಬಾ, ಏ ಹಬ್ಬಾ, ಇಂದಿನಿಂದ ನೀನು ನನ್ನವಳಲ್ಲ, ನನ್ನ ಒಡೆಯನ ಮಡದಿ. (ಹೊರಡುವನು)

ಹಬ್ಬಾ : (ಬೆಚ್ಚಿ) ಅಜೀಜ್, ಅಜೀಜ್, ನನ್ನನ್ನು ಮಾರಿ ಹೊರಟೆಯಾ ಅಜೀಜ್? ನನಗಿಂತ ಐದು ಸಾವಿರ ಅಷರಫಿಗಳೇ ನಿನಗೆ ಪ್ರಿಯವಾದುವೇ ಅಜೀಜ್? ಯಾ ಪರವರದಿಗಾರ್, ಯಾ ಅಲ್ಲಾ!

ಅಜೀಜ್ : (ಹೋಗುತ್ತ) ಹಬ್ಬಾ, ನಿನಗಿನ್ನು ಅರಮನೆಯಲ್ಲಿ ಹಬ್ಬ ನನಗೆ ಹೊಸಮನೆಯಲ್ಲಿ ಹಬ್ಬ! (ಹೋಗುವನು).

ಯೂಸುಫ್ : (ಉಬ್ಬಿ) ಹಬ್ಬಾ, ಹಬ್ಬಾ, ಎಂಥ ಸವಿಯಾದ ಹೆಸರು–ಹಬ್ಬಾ!

ವಜೀರ್ : ಅಬ್ಬಬ್ಬಾ, ಸ್ವಲ್ಪ ಸಾವಧಾನ ಮಾಲಿಕ್ !

ಯೂಸುಫ್ : (ನಕ್ಕು) ನೀವು ಸೈನ್ಯ ಸಮೇತ ಬನ್ನಿ ವಜೀರರೇ. ನಾನೂ ಹಬ್ಬಾ ಮುಂದೆ ಹೋಗುವೆವು.

ವಜೀರ್ : (ವಿನೋದವಾಗಿ) ಬಹಳ ಮುಂದೆ ಹೋಗದಿರಿ ಮಾಲಿಕ್. ನಾವು ಬಹಳ ಹಿಂದೆ ಉಳಿದೇವು!

(ಯೂಸೂಫ್ ನಗುತ್ತ ಅಶ್ವಾರೂಢನಾಗಿ ಹಬ್ಬಾಸಮೇತ ಹೊರಡುವನು. ಕೆಲ ನಿಮಿಷ ಹುಬ್ಬುಗೈಯಾಗಿ ನೋಡಿ ವಜೀರನು ನುಡಿಯುವನು)

ವಜೀರ್ : ಯುವರಾಜರ ಜೀವನದ ಹೊಸ ಅಧ್ಯಾಯವು ಪ್ರಾರಂಭವಾಯಿತು. ಆರಂಭ ವಿಲಕ್ಷಣವಾಗಿ ಆಗಿದೆ; ಅಂತ್ಯ ಹೇಗಾಗುವುದೋ ನೋಡಬೇಕು. ಅಲ್ಲಾನ ಇಚ್ಛೆಯಂತಾಗಲಿ!

* * *

(ಶ್ರೀನಗರದಲ್ಲಿ ಷಹನಾಯಿಸ್ವರ, ಯೂಸುಫ್–ಹಬ್ಬಾರ ಮದುವೆಯ ಶುಭಸಂಭ್ರಮ. ಜನಸ್ತೋಮದ ಹರ್ಷರವ ತೆರೆಯ ಮರೆಯಲ್ಲಿ ಕೇಳಿಸಿ ಕರಗುವುದು. ಶ್ರೀನಗರದ ಭವ್ಯ ಅರಮನೆಯಲ್ಲಿ ನವವಿವಾಹಿತ ಹಬ್ಬಾ ಯೂಸುಫರು ಪ್ರೇಮೋನ್ಮಾದದಲ್ಲಿ)

ಯೂಸುಫ್ : ಇಂದೆನ್ನ ಅರಮನೆ ಜನ್ನತ್ ಮೇರೀ ಜಾನ್–ತಪ್ಪಿದೆ, ಸ್ವರ್ಗವೂ ಸಪ್ಪೆ ಇದರ ಮುಂದೆ. ಅಲ್ಲಿಯ ಹೂರರಲ್ಲಿ ಹಬ್ಬಾಳನ್ನು ಹೋಲುವ ಚೆಲುವೆಯೆಲ್ಲಿ? ಹೇಳು ಹಬ್ಬಾ, ನಿನ್ನಂಥವಳು ಅಲ್ಲಿ ಒಬ್ಬಳಾದರೂ ಇರುವಳೆ?

ಹಬ್ಬಾ : (ಮೆಲ್ನಗೆಯೊಡನೆ) ನಾವಿಬ್ಬರೂ ಸ್ವರ್ಗಕ್ಕೆ ಹೋದಾಗ ನೋಡೋಣವಂತೆ–ಇರುವರೋ ಇಲ್ಲವೋ ಎಂಬುದನ್ನು.

ಯೂಸುಫ್ : ಸ್ವರ್ಗಕ್ಕೆ ಹೋಗುವ ಮಾತೇಕೆ ಈಗ ಮನದನ್ನೆ? ನನಗೆ ಸ್ವರ್ಗವೂ ಬೇಡ, ಸ್ವರ್ಗದ ಸುಖವಸ್ತುಗಳೂ ಬೇಡ; ನೀನೆಲ್ಲಿಯೋ, ಸ್ವರ್ಗವಲ್ಲಿಯೇ ನನಗೆ!

ಹಬ್ಬಾ : ನೀನಿರುವ ಸ್ಥಳ ಸ್ವರ್ಗಕ್ಕಿಂತಲೂ ಶ್ರೇಷ್ಠ ನನಗೆ!

ಯೂಸುಫ್ : ಈ ಸಿರಿನುಡಿಯನಾಡಿದ ಸಿರಿಬಾಯಿಗೆ ಮೆಚ್ಚನೀಯಲೇಬೇಕು. ಇದೋ ಮೆಚ್ಚು ನೀನೇ ಸ್ವರ್ಗ, ನಿನ್ನ ಹಾಡೇ ಅಮೃತ ಓ ನಿನ್ನ ಹಾಡು ಕೇಳಲೇ ಇಲ್ಲವಲ್ಲ! ಹಾಡು ಹಬ್ಬಾ, ಒಂದೇ ಹಾಡು, ಇಂದೇ ಹಾಡು, ಈಗಲೇ ಹಾಡು!

ಹಬ್ಬಾ : ಊಂ ಹ್ಞ,

ಯೂಸುಫ್. ಏನು? ಹಾಡುವುದಿಲ್ಲವೆ? ಹೇಗೆ ಹಾಡದಿರುವೆಯೋ ನೋಡುವೆನು

ಹಬ್ಬಾ : ಬಲಾತ್ಕಾರದ ಹಾಡು ಬೇಕೆ ನನ್ನರಸ!

ಯೂಸುಫ್ : ಇಲ್ಲ, ನೀನಾಗಿ ಒಪ್ಪಿ ಒಲಿದು, ನಲಿದು ಹಾಡು ಹಬ್ಬಾ! ಒತ್ತಾಯದ ಹಾಡೊಂದು ಹಾಡೆ?

ಹಬ್ಬಾ : ಹಾಡದೆ ವಿಧಿಯಿಲ್ಲವಾಗಿ ಹಾಡುವೆನು ಇನಿಯ. (ಹಾಡುವಳು)

ನಿನಗಾಗಿ ಕಟ್ಟಿಹೆನು ಕುಸುಮಗುಚ್ಛವನಿಂದು
ನನ್ನ ಹೂಗಳ ಲಾಭ ಹೊಂದು!
ನಾ ನಿನ್ನ ಧಾತ್ರಿ ನೀನೆನ್ನ ಗಗನ
ನೀನೆನ್ನ ಗುಟ್ಟುಗಳ ಪಾತ್ರೆಯ ಪಿಧಾನ
ನಾನಿನ್ನ ಉಪಹಾರ ನೀನತಿಥಿಯಿಂದು
ನನ್ನ ಹೂಗಳ ಲಾಭ ಹೊಂದು!
ಕಾಳದಲಿ ದೀಪವನು ಹಚ್ಚಿದಳೂ ಲೈಲಾ
ತನ್ನಸುವ ತಾನೇ ನೀಗಿದಳು ಅಬಲಾ
ನೀನೆನ್ನ ದೀಪವು ನಾನೆ ಶಲಭವು ಇಂದು
ನನ್ನ ಹೂಗಳ ಲಾಭ ಹೊಂದು?
ಯೌವನದ ಸುಗ್ಗಿಯಿದು ಸರಿಯುತಿದೆ ಮೆಲ್ಲನೆ
ಬಾಡಿ ಹೋದಾವೆನ್ನ ಚಂಪಕವು ಸುಮ್ಮನೆ
ಬಾರೆನ್ನ ಬುಲಬುಲವೆ ಸಿಕ್ಕುದೇ ನೆಪವೆಂದು
ನನ್ನ ಹೂಗಳ ಲಾಭ ಹೊಂದು!
ನಿನ್ನ ಪಡೆದೆನು ನಾನು ಬಲು ಹುಡುಕಿ ಹುಡುಕಿ
ತೊರೆಯದಿರು ನನ್ನನ್ನು ಪ್ರಿಯಕರನೆ ದುಡುಕಿ
ಹಬ್ಬಾ ಖಾತೂನಳಲಿ ಚಡಪಡಿಕೆ ನೀನಿಂದು
ನನ್ನ ಹೂಗಳ ಲಾಭ ಹೊಂದು!

ಯೂಸುಫ್ : ಇಲ್ಲಿಗೆ ನಿಲ್ಲಿಸು ಹಬ್ಬಾ.... ನನ್ನ ಕಿವಿಗಳ ಭಾಗ್ಯಕ್ಕೆ ಕಣ್ಣು ಕರುಬುತ್ತಿವೆ. ಈಗ ಈ ಕಣ್ಣುಗಳಿಗೆ ನಿನ್ನ ಸಿರಿರೂಪ ಸವಿಯುವ ಸೌಭಾಗ್ಯ ಸಿಕ್ಕಲಿ. ಎಲ್ಲಿ, ಇತ್ತ ಮುಖ ತಿರುಗಿಸು ಆಹಾ, ಅಲ್ಲಾನಿಗೂ ಇನ್ನೊಮ್ಮೆ ಇಂಥ ಮುದ್ದುಮೊಗ ರೂಪಿಸುವುದು ಸಾಧ್ಯವಾಗುವುದೋ ಇಲ್ಲವೋ!........ದೀಪಗಳೆ, ನಿಮಗಿನ್ನೇನು ಕೆಲಸವೀಗ? ಮುಖ ಮರೆಸಿಕೊಳ್ಳಿರಿ. ಭೂಮಿಯ ಮೇಲೆ ಜನ್ನತ್ ಎಲ್ಲಿಯಾದರೂ ಇದ್ದರೆ ಅದು ಇಲ್ಲಿಯೇ, ಇಲ್ಲಿಯೇ ಇಲ್ಲಿಯೇ!.............

(ಬೆಳಗಿನ 'ಆಜಾ'- ನಮಾಜು ನಿಮಂತ್ರಣ-ಕೇಳಿ ಹಬ್ಬಾ ಎದ್ದೇಳುತ್ತಾಳೆ)

ಹಬ್ಬಾ : ಪರಮೋದ್ಧಾರನೂ ಪರಮ ದಯಾಳುವೂ ಆದ ಅಲ್ಲಾನ ಹೆಸರಿನಲ್ಲಿ ಸುಪ್ರಭಾತವಿದಕ್ಕೆ ಸ್ವಾಗತ! ಯಾ ಪರವರದಿಗಾರ್, ನಿನ್ನ ಇಚ್ಛೆಗೆ ತಲೆಬಾಗುವ ಮುಸ್ಲಿಂ ಶರಣರನ್ನಾಗಿ ಮಾಡು ನಮ್ಮನ್ನು! ನಮ್ಮ ಧರ್ಮ ಕರ್ಮಗಳನ್ನು ನೆರವೇರಿಸಲು ನಮ್ಮ ತಾಣಗಳನ್ನು ತೋರಿಸು ನಮಗೆ? ಪುನಃ ಪುನಃ ಕ್ಷಮಿಸಲು ಆಗಮಿಸುವ ಪರಮ ಕರುಣಾಳು ನೀನು. ದಯದೋರು, ಅನುಗ್ರಹಿಸು, ಸಂರಕ್ಷಿಸು.... ಲಾ ಇಲಾಹ ಇಲ್ಲಿಲ್ಲಾಹ್! (ತುಸು ತಡೆದು) ಅಲ್ಲಾನ ಸಂಜ್ಞೆ ಇನ್ನೂ ಅರ್ಥವಾಗಲಿಲ್ಲ ನನಗೆ! ಕಮಾಲನ ಒಲವಿನ ಕರೆ, ಅಜೀಜನ ಪಾಶವೀ ಪತಿತ್ವ, ಈಗ ಯೂಸುಫನ ಉನ್ಮತ್ತ ಕಾಮ! ಒಂದು ಕನಸು, ಒಂದು ಕ್ರೂರ ಕಠೋರ ವಾಸ್ತವತೆ, ಇನ್ನೊಂದು ಪ್ರಣಯದ ಹುಚ್ಚಾಟ!.... ಆ ಗುಡಿಸಲು, ಈ ಅರಮನೆ; ಆ ಕಲ್ಲೆದೆ, ಈ ಕೋಮಲತೆ; ಆ ದಟ್ಟ ದಾರಿದ್ರ್ಯ ಅಷ್ಟೈಶ್ವರ್ಯ-ಒಂದು ಅತಿರೇಕದಿಂದ ಇನ್ನೊಂದು ಅತಿರೇಕಕ್ಕೆ ಏಕೆ ತೂರುತ್ತಿಹೆ ತಂದೆ ನಿನ್ನ ಈ ಕಂದಳನ್ನು? ಏನಿದೆ ನಿನ್ನ ಉದ್ದೇಶ? ಈ ಅತಿಯಲ್ಲಿಯೆ ಹಿತವಿದೆಯೆ ನನಗೆ? ಎಲ್ಲಿಯಾದರೂ ಇರಿಸು, ಎಂತಾದರೂ ಇರಿಸು, ನಿನ್ನತ್ತ ನನ್ನ ಬಾಳು ತಿರುಗಿಸು.

(ಯೂಸುಫನೂ ಏಳುವನು. ಹಬ್ಬಾ ತನಗಿಂತ ಮೊದಲೇ ಎದ್ದಿರುವುದನ್ನು ನೋಡಿ)

ಯೂಸುಫ್ : ನನಗಿಂತ ಮೊದಲೇ ಎದ್ದುಬಿಟ್ಟೆಯಾ ಹಬ್ಬಾ? ಏಕೆ, ಇಷ್ಟು ಬೇಗನೆ ಸಾಕಾಯಿತೆ ಯೂಸುಫನ ಸಮಾಗಮ?

ಹಬ್ಬಾ : ತಪ್ಪಾಗಿ ತಿಳಿದುಕೊಳ್ಳದಿರಿ ಎನ್ನರಸ, ಎನ್ನೊಲವೆ-ಬೆಳಗಿನ 'ಅಜಾ' ಕೇಳಿ ಎಚ್ಚರವಾಯಿತು. ಪರವರದಿಗಾರನನ್ನು ನೆನೆವ ಹೊತ್ತಿನಲ್ಲಿ ಮಲಗಿರುವುದು ಉಚಿತವಲ್ಲವೆಂದು ಎದ್ದು ನಾನೂ ದೇವರನ್ನು ಧ್ಯಾನಿಸಿದೆ.

ಯೂಸುಫ್ : ನನ್ನನ್ನೇಕೆ ಎಚ್ಚರಿಸಲಿಲ್ಲ?

ಹಬ್ಬಾ : ನಿಮಗೂ ಇದು ಇಷ್ಟವಾದುದೆಂದು ಗೊತ್ತಿರಲಿಲ್ಲ. ನಾಳೆಯಿಂದ ಎಬ್ಬಿಸುವೆನು.

ಯೂಸುಫ್ : ಈ ಏರಿಕೆಯ ಯೌವನದಲ್ಲೇಕೆ ಧ್ಯಾನ ನಮಾಜುಗಳು ಹಬ್ಬಾ? ಇದಕ್ಕಾಗಿ ವಾರ್ಧಕ್ಯವಿದ್ದೇ ಇದೆ. ಈಗ ಭೋಗ, ಮುಪ್ಪಿನಲ್ಲಿ ವಿರಾಗ! ಹೇಗಿದೆ ನನ್ನ ಜೀವನ ಸಿದ್ಧಾಂತ? ಬಾ ಇನ್ನಷ್ಟು ಹೊತ್ತು ಮಲಗೋಣ.

ಹಬ್ಬಾ : ನೀವೂ ಇನ್ನು ಏಳಬೇಕು ಪ್ರಿಯತಮ! ರಾಜ್ಯಕಾರ್ಯಗಳಿಗೆ, ಪ್ರಜಾಕಾರ್ಯಗಳಿಗೆ ಸಿದ್ಧರಾಗಬೇಕಲ್ಲವೆ ಈಗ! ದರಬಾರೆ-ಖಾಸದಲ್ಲಿ ಕುಳಿತು ವಜೀರ ಸಾಲಾರರೊಡನೆ ಮಂತ್ರಾಲೋಚನೆ ಮಾಡಬೇಕು; ದರಬಾರೆ ಆಮ್‌ನಲ್ಲಿ ರತ್ನಖಚಿತ ಸಿಂಹಾಸನದ ಮೇಲೆ ಕುಳಿತು ಪ್ರಜೆಗಳ ದೂರುಗಳನ್ನು ಕೇಳಿ ನ್ಯಾಯ ನೀಡಬೇಕು; ಸಾಮಂತರಿಂದ ಕಪ್ಪ ಕಾಣಿಕೆಗಳನ್ನು ಸ್ವೀಕರಿಸಬೇಕು; ಪ್ರಜಾಹಿತ ಕಾರ್ಯಗಳನ್ನು ಮಂಜೂರು ಮಾಡಬೇಕು.............

ಯೂಸುಫ್ : (ಬೇಸರದ ದನಿಯಲ್ಲಿ) ನಮಗೇಕೆ ರಾಜ್ಯಕಾರ್ಯಗಳ ಚಿಂತೆ ಮೇರಿ ಜಾನ್, ಮಂತ್ರಿ ಸೇನಾಪತಿಗಳಿಲ್ಲವೆ? ಬಹಳ ಅಗತ್ಯದ, ಮಹತ್ವದ, ಗುರುತ್ವದ ಕಾರ್ಯವಿದ್ದರೆ ಮಾತ್ರ ನನ್ನ ನಿರ್ಣಯಕ್ಕೆ ಬರುತ್ತಾರೆ.

ಹಬ್ಬಾ : ನಿಮಗೆ ಸಲಹೆ ನೀಡುವ ಯೋಗ್ಯತೆ ನನ್ನದಲ್ಲ ಸ್ವಾಮಿ, ಆದರೆ ವಜೀರ ಸಲಾರರಿಗೆ ಎಲ್ಲ ಹೊಣೆ ಒಪ್ಪಿಸಿಬಿಡುವುದು ಒಳ್ಳೆಯದಲ್ಲವೆಂದು ತೋರುತ್ತಿದೆ. ಈ ರಾಜ್ಯದಲ್ಲಿ ವಾಸಿಸುವ ಪ್ರಜೆಗಳ ಜವಾಬ್ದಾರಿ ಮೊದಲು ನಿಮ್ಮದು, ಆಮೇಲೆ ನಿಮ್ಮ ವಜೀರ ಸಾಲಾರರದು. ನೀವೇ ನೇರವಾಗಿ ತಮ್ಮ ಯೋಗಕ್ಷೇಮ ನೋಡಿಕೊಳ್ಳಬೇಕೆಂದು ನಿಮ್ಮ ಪ್ರಜೆಗಳು ನಿರೀಕ್ಷಿಸಿದರೆ, ಅಪೇಕ್ಷಿಸಿದರೆ ತಪ್ಪೇನಿಲ್ಲ.

ಯೂಸುಫ್ : ಇದನ್ನೆಲ್ಲ ಮಾಡುತ್ತ ಕುಳಿತರೆ ನಿನ್ನೊಡನೆ ಸ್ವರ್ಗಸುಖವನ್ನು ಅನುಭವಿಸಲು ಅನುವು ಯಾವಾಗ ಸಿಕ್ಕಬೇಕು ಸಜನಿ? ನನಗೆ ರಾಜ್ಯಕಾರ್ಯ ಬೇಡ, ಪ್ರಜಾಕಾರ್ಯಬೇಡ, ಯಾವ ಕಾರ್ಯವೂ ಬೇಡ, ಯಾವ ಹೊಣೆಗಾರಿಕೆಯೂ ಬೇಡ! ನಿನ್ನೊಡಿರುವುದು, ನಿನ್ನ ಸವಿನುಡಿಗಳನ್ನು-ಸವಿಹಾಡುಗಳನ್ನು ಕೇಳುತ್ತಿರುವುದು, ನಿನ್ನನ್ನು ತೋಳುಗಳಲ್ಲಿ ತೂಗುತ್ತಿರುವುದು ಮಾತ್ರ ಬೇಕು! ನಿನ್ನನ್ನಗಲಿ ಕ್ಷಣಕಾಲ ಇರಲಾರೆ ಹಬ್ಬಾ, ಕ್ಷಣಕಾಲ ಇರಲಾರೆ!

ಹಬ್ಬಾ : ನಾನು ಬಂದು ನಿಮ್ಮನ್ನು ತಮ್ಮಿಂದ ಕಸಿದುಕೊಂಡಳೆಂದು ನಿಮ್ಮ ಪ್ರಜೆಗಳು ಶಪಿಸಿದರೆ ನನ್ನನ್ನು?

ಯೂಸುಫ್ : ಶಪಿಸಿದರೆ ಶಪಿಸಲಿ! ನಿನಗೆ ನನಗಿಂತ ನನ್ನ ಪ್ರಜೆಗಳ ಚಿಂತೆಯೇ ಹೆಚ್ಚಿರುವಂತಿದೆಯಲ್ಲ? ಮರೆತುಬಿಡು ಎಲ್ಲವನ್ನೂ ಎಲ್ಲರನ್ನೂ ಮನದನ್ನೆ! ಈ ಯೂಸುಫನನ್ನೊಬ್ಬನನ್ನು ನೆನಪಿಡು! ಬಾ ನನ್ನ ಅಪ್ಪುಗೆಗೆ ಬಂಗಾರಿಯೆ! ಎಲ್ಲಿ ಒಂದು ಹಾಡು ಹೇಳು ಹಬ್ಬಾ.... ಒಂದೇ ಹಾಡು! ರೋಮರಂಧ್ರಗಳೆಲ್ಲ ಕಿವಿಯಾಗಿವೆ ನಿನ್ನ ಹಾಡು ಕೇಳಲು! ಹಾಡು ಹಬ್ಬಾ, ಹಾಡು!

ಹಬ್ಬಾ : ನೀವು ಗಳಿಗೆಗೊಂದು ಸಲ ಹಾಡೆಂದರೆ ನಾನೆಲ್ಲಿಂದ ಹೊಸ

ಹೊಸ ಹಾಡು ತರಲಿ ನನ್ನರಸ?

ಯೂಸುಫ್ : ಹಾಡಿದ್ದೇ ಹಾಡು ಹಬ್ಬಾ, ನಿನ್ನ ಕಂಠಶ್ರೀ ಹಾಡಿದಾಗೊಮ್ಮೆ ಹೊಸ ಸವಿ ನೀಡುತ್ತದೆ ಹಳೆಯ ಹಾಡಿಗೇ!

ಹಬ್ಬಾ : ಹಾಡುವೆನು ನನ್ನ ದೊರೆಯೆ, ನಿಮಗಾಗಿ ಹಾಡದೆ ಇನ್ನಾರಿಗಾಗಿ ಹಾಡಲಿ? (ಹಾಡುವಳು).

ನಿನ್ನೊಂದೆ ನುಡಿ ನನ್ನ ಬನ್ನಗಳಿಗೌಷಧವು.......

ಯೂಸುಫ್ : (ಹಿಗ್ಗಿ) ವಾಹವ, ನನ್ನ ಭಾವನೆಗೆ ಭಾಷೆ ತೊಡಿಸಿದೆ ನೀನು ಹಬ್ಬಾ! 'ನಿನ್ನೊಂದೆ ನುಡಿ ನನ್ನ ಬನ್ನಗಳಿಗೌಷಧವು!'

ಹಬ್ಬಾ : ಹೀಗೆ ನಡುನಡುವೆ ನನ್ನ ಭಾಷೆಗೆ ನಿಮ್ಮ ಭಾಷ್ಯ ನಡೆದರೆ ನಾನು ಹಾಡುವುದು ಹೇಗೆ ಆಳ್ದ?

ಯೂಸುಫ್ : ಅಚ್ಛಾಜಿ, ನಾನು ಶಿಲೆಯಂತೆ ಕುಳಿತುಕೊಳ್ಳುವೆ. ತಡೆಯಿಲ್ಲದೆ ನಡೆಯಲಿ ನಿನ್ನ ಹಾಡು!

ಹಬ್ಬಾ : ಶಿಲೆಯಾಗಿ ಕುಳಿತರೆ ಹಾಡಿ ಪ್ರಯೋಜನವೇನು ದೊರೆಯೆ? ನಿಮ್ಮ ಕಿವಿಗಳೂ ಶಿಲೆಗಳಾದರೆ ಹೇಗೆ?

ಯೂಸುಫ್ : ಬಹಳ ಚತುರೆ ನೀನು–ಮೈಯೆಲ್ಲ ಕಲ್ಲಾಗಿ, ಕಿವಿ ಮಾತ್ರ ಶ್ರವಣಕಲೆಯ ನೆಲೆಯಾಗಿ ಕುಳಿತುಕೊಳ್ಳುವೆ. ಹಾಡು ಹಬ್ಬಾ!

ಹಬ್ಬಾ : ನಿನ್ನೊಂದೆ ನುಡಿ ನನ್ನ ಬನ್ನಗಳಿಗೌಷಧವು– ಬಾರೆನ್ನ ಪ್ರಿಯಕರನೆ ತಲೆಯೆ ಬಲಿ ನಿನಗೆ!

ಯೂಸುಫ್ : ಆಃ ಮಾರಡಾಲಾ, ಮಾರಡಾಲಾ!....... ತಲೆಯೆ ಬಲಿ ನಿನಗೆ! ಬೇಡ, ಬೇಡ ಹಬ್ಬಾ...... ತಲೆಯ ಬಲಿ ಬೇಡ ನನಗೆ! ನನ್ನ ಕೊನೆಯ ಉಸುರಿನವರೆಗೆ ಈ ಶ್ರೀಮುಖ, ನನ್ನ ಮುಂದಿರಲಿ ಈ ಶಿರ ನಿನ್ನ ಮುಂದಿರಲಿ! ನನ್ನ ಕಣ್ಣುಗಳಿಗೆ ಸಿರಿಮುಖವನ್ನೇ ನೋಡುತ್ತಿರುವ ಭಾಗ್ಯವಿರಲಿ!

ಹಬ್ಬಾ : (ಹಾಸ್ಯದಿಂದ) ಇದೆಂಥ ಶಿಲೆಯೇ ತಾಯಿ..... ಸ್ವಲ್ಪ ನೆವ ಸಿಕ್ಕರೂ ಮಾತನಾಡತೊಡಗುತ್ತದೆ!

ಯೂಸುಫ್ : (ನಕ್ಕು) ನಿನ್ನ ಹಾಡು ಮೊದಲು ಕೇಳಬೇಕೋ, ನಿನ್ನ ಮಾತು ಮೊದಲು ಕೇಳಬೇಕೋ ತಿಳಿಯದಾಗಿದೆ ನನಗೆ ಹಬ್ಬಾ! ನಿನ್ನನ್ನು ಪ್ರೀತಿಸಲು ಹೊತ್ತು ಸಾಲದೆನೆಗೆ, ತಾಕುತ್ತು ಸಾಲದೆನೆಗೆ! ಬಡವನ ಮುಂದೆ ಕಡವರನ್ನಿರಿಸಿದಂತಾಗಿದೆ ನನಗೆ!... ಹೋಗಲಿ, ಮುಂದೆ ಸಾಗಲಿ ಹಾಡು–ಹಬ್ಬಾನ ಹಾಡು, ಹರುಷದ ಹೊಳೆಗೆ ತಲೆಮೂಡು!

ಹಬ್ಬಾ : ಮತ್ತೆ ನಡುವೆ ಮಾತನಾಡಿದರೆ?

ಯೂಸುಫ್ : ಮತ್ತೆ ಹಾಡಲೇ ಬೇಡ!

ಹಬ್ಬಾ : ಮಂಜೂರ್! (ಹಾಡುವಳು)

ನಿನ್ನೊಂದೆ ನುಡಿ ನನ್ನ ಬನ್ನಗಳಿಗೌಷಧವು-
ಬಾರೆನ್ನ ಪ್ರಿಯಕರನೆ ತಲೆಯೆ ಬಲಿ ನಿನಗೆ!
ಹಾಲು ಹಣ್ಣನು ಸವಿದು ಮೇಲೆ ಸುರಿ ಸುಧೆಯನ್ನು
ಬರಿದು ಮಾಡುತಲಿರು ಹೊನ್ನ ಬಟ್ಟಲನು!
ಕಟ್ಟುವೆನು ಹೊಸ ಮಲರ ಮಾಲೆಯನು ನಾ ನಿನಗೆ
ಬಾರೆನ್ನ ಪ್ರಿಯಕರನೆ ತಲೆಯೆ ಬಲಿ ನಿನಗೆ!
ಹಾಲಿನಲಿ ಹಾಲುಮ್ಮೆ ತೊಳೆಯದಿರುವೆನೆ ನಾನು?
ತುಂಬಿ ಬಂದಿದೆ ಮನದಿ ನಿನ್ನ ನೆನಪಿನ ಜೇನು!
ಚಂದನದ ಉದಕವನು ಚಿಮುಕಿಸುವೆ ನಾ ನಿನಗೆ
ಬಾರೆನ್ನ ಪ್ರಿಯಕರನೆ ತಲೆಯೆ ಬಲಿ ನಿನಗೆ!

ಯೂಸುಫ್ : ಸುಬಹಾನಲ್ಲಾ, ಇದು ಮರ್ತ್ಯದ ಗಾನವಲ್ಲ, ಸ್ವರ್ಗದ ಸಂಗೀತ! ಹುಟ್ಟಿಸಿದ ಅಲ್ಲಾನೂ ಹಬ್ಬಾನ ಹಾಡು ಕೇಳಿ ತಲೆದೂಗುತ್ತಿರಲೇ ಬೇಕು! ಈ ಸಂಗೀತ ಸುರೆಯೇನಲ್ಲ; ಆದರೂ ಕುಡಿದಲ್ಲಿ, ಮತ್ತವಾಗಿವೆ ಮನ ಪ್ರಾಣಗಳು! ಹಬ್ಬಾ ಹಾಡುತ್ತಲೇ ಇರಲಿ ಕೇಳಿಯೇ ಇರಲಿ ಕೇಳಿಯೇ ಈ ಕಿವಿ ಕೇಳುತ್ತಲೇ ಇರಲಿ ಮೈ-ಮನ-ಪ್ರಾಣಗಳಿಗೆ ಮತ್ತು ಏರುತ್ತಲೇ ಇರಲಿ! (ಮತ್ತೆ ನಿದ್ರಾಂಗನೆಯ ತೆಕ್ಕೆಯಲ್ಲಿ ಅಮಲೇರಿದ ಯೂಸುಫ್)

ಹಬ್ಬಾ : (ತನ್ನಲ್ಲಿ) ಅಜೀಜ್ ಕುಡಿದು ಮಾತ್ರ ಮತ್ತನಾಗುತ್ತಿದ್ದ; ಯೂಸುಫ್ ಕುಡಿದು, ಕುಡಿಯದಿದ್ದಾಗ ಕೇಳಿ ಮತ್ತರಾಗುತ್ತಾರೆ! ಅದೊಂದು ತೆರ, ಇದೊಂದು ತೆರ-ಅಲ್ಲಾನ ಸೃಷ್ಟಿ ತರ ತರ!

(ಅತ್ತ ವಜೀರರ ಮನೆಯಲ್ಲಿ)

ವಜೀರ : (ಚಿಂತಾಕ್ರಾಂತನಾಗಿ) ಕಾಶ್ಮೀರದ ಸುಲ್ತಾನರಿಂದು ವಜೀರ, ಸಾಲಾರರಿಗೆ ಅಲಭ್ಯರಾಗಿಬಿಟ್ಟಿದ್ದಾರೆ! ಪ್ರಜೆಗಳ ಪಾಡೇನು? ಎಷ್ಟು ಸಲ ಈ ನಾಡು ಅನಾಯಕತೆಗೆ, ಅರಾಜಕತೆಗೆ ಈಡಾಗಬೇಕು? ದೇವತೆಗಳೂ ಕರುಬುವ ಕಾಶ್ಮೀರದಲ್ಲಿ ಬಾರಿಬಾರಿಗೆ ಬರ, ಬವರ, ಗುಲಾಮಿ, ಗರೀಬಿಗಳು ಬರುತ್ತಲೇ

ಇರಬೇಕೆ? ಈಗ ಮತ್ತೆ ಅಭದ್ರತೆಗೆ ಆಹುತಿಯಾಗುತ್ತಿರುವಂತಿದೆ ಈ ನಾಡು? ಇಂಥ ಸಮಯಕ್ಕಾಗಿಯೇ ಕಾದಿದ್ದ ಕಾಶ್ಮೀರದ ವೈರಿಗಳು ಸಮರ ಸನ್ನಾಹವನ್ನು ನಡೆಸಿರುವರೆಂದು ಬೇಹುಗಾರರ ವರದಿ ಬೇರೆ ಬಂದಿವೆ. ಇವನ್ನು ಸುಲ್ತಾನರ ಗಮನಕ್ಕೆ ತರಬೇಕೆಂದರೆ ಅವರನ್ನು ಕಾಣುವ ಅವಕಾಶವೇ ದೊರೆಯದಂತಾಗಿಬಿಟ್ಟಿದೆ! ಯಾವಾಗಲೂ ಅಂತಃಪುರದಲ್ಲಿ, ವಿಲಾಸವಿನೋದಗಳಲ್ಲಿ, ಪಾನಗಾನಗಳಲ್ಲಿ! ಇಂದೇನೋ ಈ ಹೊತ್ತಲ್ಲದ ಹೊತ್ತಿನಲ್ಲಿ ನಿದ್ರಿಸುತ್ತಿರುವರಂತೆ! ಈಗ ಸುಲ್ತಾನಾ ಹಬ್ಬಾ ಖಾತೂನರಿಗೇ ಈ ವಿಷಯ ತಿಳಿಸದೆ ವಿಧಿಯಿಲ್ಲ!

* * *

(ಹಬ್ಬಾ ಖಾತೂನಳ ಹಜಾರದಲ್ಲಿ, ಸಂಗೀತದ ಬಗ್ಗೆ ಚರ್ಚೆ)

ಹಬ್ಬಾ : ಪರ್ಶಿಯಾದ ಸಂಗೀತ ಪ್ರವೀಣರೇ, ನಿಮ್ಮ ಸಂಗೀತದ ಪಡಿಯಚ್ಚಿನಲ್ಲಿ ಕಾಶ್ಮೀರೀ ಸಂಗೀತದ ಎರಕ ಹೊಯ್ಯಬೇಕೆಂಬ ನಿಮ್ಮ ಸಲಹೆ ನಮಗೆ ಮಾನ್ಯವಿಲ್ಲ, ಕಾಶ್ಮೀರದ ಮಗಮಗಿಸುವ ಮಣ್ಣಿನಿಂದ ಹುಟ್ಟಿವೆ ಕಾಶ್ಮೀರದ ಲೋಕಗೀತೆಗಳು. ಅವುಗಳ ಸ್ವಾಭಾವಿಕ ಸಾಹಜಿಕ ವಿಕಾಸವೇ ಕಾಶ್ಮೀರೀ ಸಂಗೀತವಾಗಿ ಸೊಗಯಿಸಬೇಕು, ಶೋಭಿಸಬೇಕೆಂಬುದು ನಮ್ಮ ಅಭಿಲಾಷೆ.

ಪರ್ಶಿಯಾ ಸಂಗೀತಜ್ಞ : ಸುಲ್ತಾನಾ ಸಾಹಿಬಾ, ಲೋಕಗೀತೆಗಳು ಶಾಸ್ತ್ರೀಯ ಸಂಗೀತವಾಗಿ ವಿಕಸಿಸಬಲ್ಲುವೆ? ಶಾಸ್ತ್ರೀಯ ಸಂಗೀತ ಶಾಸ್ತ್ರೀಯ ಸಂಗೀತವೇ! ಅಲ್ಲಲ್ಲಿ ಇಷ್ಟಿಷ್ಟು ಲೋಕಗೀತೆಗಳ ಪ್ರಭಾವ ಶಾಸ್ತ್ರೀಯ ಸಂಗೀತದ ಮೇಲೆ ಆಗಿರುವುದು ಅಸಂಭವವೇನೋ ಅಲ್ಲ. ಆದರೆ ಸಮಗ್ರ ಶಾಸ್ತ್ರೀಯ ಸಂಗೀತವೆ ಗ್ರಾಮಗೀತೆಗಳ ಆಧಾರದ ಮೇಲೆ ರೂಪಿತವಾಗಬಲ್ಲುದೆಂದು ಹೇಳುವುದು ಸಾಹಸದ ಮಾತೇ ಸರಿ.

ಹಬ್ಬಾ : ನನ್ನ ಕಾಶ್ಮೀರೀ ಸಂಗೀತ ಶಾಸ್ತ್ರೀಯ ಸಂಗೀತದ ಸಿಂಹಾಸನಾರೋಹಣ ಮಾಡದಿದ್ದರೆ ಹೋಗಲಿ ಉಸ್ತಾದರೆ, ಅದು ಈ ನಾಡಿನ ಹಳ್ಳಿಗಳ ನರನಾರಿಯರ ನಾಲಗೆಗಳ ಮೇಲೆ ನಲಿದಾಡುವಂತಾದರೆ ಸಾಕು ನನಗೆ.

* * *

(ಅತ್ತ ಅಕಬರ ಬಾದಷಾಹನ ಆಪ್ತಾಲೋಚನೆ)

ಅಕಬರ್ : ಕಾಶ್ಮೀರವು ಮೊಗಲ ಸಾಮ್ರಾಜ್ಯ ಮಕುಟದ ಮಾಣಿಕವಾಗಿ ಮೆರೆವ ಹೊತ್ತು ಹತ್ತಿರಕ್ಕೆ ಬರುತ್ತಿದೆ, ಅಲ್ಲವೆ ಅಮಾತ್ಯರತ್ನ ಬೀರಬಲರೆ?

ಬೀರಬಲ್ : ಬರುತ್ತಿದೆಯೆಂದೇಕೆ, ಬಂದಿದೆಯೆಂದೇ ಭಾವಿಸಿರಿ ಜಹಾಂಪನಾಹ! ಆ ಅಮರ ಘಳಿಗೆ ಇದಾಗಲೇ ಬಂದು ತಮ್ಮ ಚರಣಗಳನ್ನು ಚುಂಬಿಸುತ್ತಿದೆ!

ಅಕಬರ್ : ತಡವೇಕೆ ಹಾಗಾದರೆ, ನಮ್ಮ ಸೈನ್ಯಕ್ಕೆ ಆಜ್ಞೆಯಿತ್ತುಬಿಡಬಹುದಲ್ಲ?

ಬೀರಬಲ್ : ತಕ್ಕ ನೆಪ ಸಿಕ್ಕುತ್ತಲೇ ಆಜ್ಞೆಯಿತ್ತು ಬಿಡೋಣ ಆಲಮ್ ಪನಾಹ! ಈ ಅವ್ಯವಸ್ಥೆ, ಅರಾಜಕತೆ, ಅಮಾನುಷ ಶೋಷಣೆ, ಅನ್ಯಾಯ, ಅಕ್ರಮಗಳನ್ನು ಸರಿಪಡಿಸಲು ಯಾರು ಬಂದರೂ ಸರಿಯೆ. ಬಂದರೆ ಸಾಕೆಂಬ ಭಾವನೆ, ಅಭಿಪ್ರಾಯ ಕಾಶ್ಮೀರದ ಪ್ರಜೆಗಳಲ್ಲಿ ಮೂಡುವವರೆಗೆ ಕಾಯೋಣ, ಕಾಶ್ಮೀರದ ಕಂದೂರಿ ತಮಗಾಗಿ ತಯಾರಾಗುತ್ತಿದೆ; ಅದು ಪಕ್ವವಾಗುವವರೆಗೆ ತಡೆಯೋಣ. ಆಕ್ರಮಣಕ್ಕೂ ಆದರ್ಶದ ಬಣ್ಣ ಬಳಿಯಬೇಕು; ಸುಲಿಗೆಗೂ ಶಾಸನದ ಸ್ವರೂಪ ನೀಡಬೇಕು ಮಹಾಪ್ರಭು!

ಅಕಬರ್ : ಸರಿಯಾದ ಸಲಹೆ ಬೀರಬಲ್ಲರಿಂದ ಬರದೆ ಇನ್ನಾರಿಂದ ಬರಬೇಕು? ಆಗಲಿ, ತಕ್ಕ ಸಮಯಕ್ಕಾಗಿ ತಡೆಯೋಣ. ಆ ಭೂಲೋಕದ ನಂದನವನ ನಮ್ಮ ಸಾಮ್ರಾಜ್ಯದಲ್ಲಿ ಸೇರ್ಪಡೆಯಾಗುವವರೆಗೆ ಸಮಾಧಾನವಾಗದು ನಮಗೆ!

ಬೀರಬಲ್ : ನಾನೂ ಅದೇ ಪ್ರಯತ್ನದಲ್ಲಿಯೇ ಇದ್ದೇನೆ ಅಲಮ್‌ಪನಾಹ್, ತಕ್ಕ ಸಮಯ ಆದಷ್ಟು ಬೇಗ ಬರುವಂತೆ ಅಲ್ಲಿನ ಅಂತರಿಕ ವ್ಯವಹಾರಗಳಲ್ಲಿ ಇದಾಗಲೇ ನಮ್ಮ ಗೂಢಾಚಾರರು ಕೈಹಾಕಿದ್ದಾರೆ.

ಅಕಬರ್ : ಬಹುತ್ ಅಚ್ಛಾ, ಬಹುತ್ ಖೂಬ್ ಬೀರಬಲಜೀ!

* * *

(ಇತ್ತ ಹಬ್ಬಾ ಖಾತೂನಳ ಹಜಾರದಲ್ಲಿ ಪ್ರತೀಹಾರಿಯ ಪ್ರವೇಶ)

ಪ್ರತೀಹಾರಿ : (ಫರಷಿ ಸಲಾಮು ಹೊಡೆದು) ಸುಲ್ತಾನಾ ಸಾಹಿಬಾ, ವಜೀರರು ತಮ್ಮ ಭೇಟಿಗಾಗಿ ಬಂದಿದ್ದಾರೆ.

ಹಬ್ಬಾ : ನನ್ನ ಭೇಟಿಗಾಗಿ? ಎಂದಿಲ್ಲದೆ ಇಂದು? ಅತಿ ಮಹತ್ವದ ಕೆಲಸವಿರಬೇಕು! ಬರಹೇಳು.

ಪ್ರತೀಹಾರಿ : ಜೋಹುಕುಮ್! (ಹೋಗುವನು)

ವಜೀರ : (ಪ್ರವೇಶಿಸಿ ಬಾಗಿ) ನನ್ನ ಬಿನ್ನಹಕ್ಕೆ ಮನ್ನಣೆಯಿತ್ತು ಸಂದರ್ಶನವಿತ್ತುದಕ್ಕಾಗಿ ಈ ಚರಣಸೇವಕನು ಚಿರಋಣಿ ತಮಗೆ ಸುಲ್ತಾನಾ ಸಾಹಿಬಾ.

ಹಬ್ಬಾ : ಅಂಥ ಪ್ರಬಲವಾದ ಕಾರಣವಿಲ್ಲದೆ ಭೇಟಿ ಬೇಡಿರಲಾರಿರಿ ನೀವು ಹೇಳಿ, ಯಾವ ಮಹತ್ತರವಾದ ಮಣಿಹ ನಿಮ್ಮನ್ನಿಲ್ಲಿಗೆ ಎಳೆದು ತಂದಿದೆ?

ವಜೀರ : ಬಿರುಗಾಳಿಯೆದ್ದು ರಾಜ್ಯದ ಹಡಗ ಹೊಯ್ದಾಡುತ್ತಲಿದೆ ಸುಲ್ತಾನಾ ಸಾಹಿಬಾ! ಸುಲ್ತಾನರಿಗೆ ಈ ಬಗ್ಗೆ ವರದಿ ಒಪ್ಪಿಸಬೇಕೆಂದರೆ ಸಮಯವೇ ಸಿಕ್ಕುತ್ತಿಲ್ಲ. ಅವರಿಗೆ ಪುರಸೊತ್ತಿಲ್ಲ. ಈ ವಿಷಯ ಇನ್ನು ಮುಂದೂಡುವಂತಿಲ್ಲ. ಆದುದರಿಂದ ತಾವಾದರೂ ಈ ವರದಿಗಳನ್ನು ಬಾದಷಹಾರ ಗಮನಕ್ಕೆ ತಂದು ರಾಜ್ಯವನ್ನು ರಕ್ಷಿಸಬೇಕೆಂದು ಬಿನ್ನವಿಸಿಕೊಳ್ಳಲು ಬಂದಿದ್ದೇನೆ. (ವರದಿಗಳನ್ನು ಮುಂದಿರಿಸುವನು)

ಹಬ್ಬಾ : ನಿಮ್ಮ ಸ್ವಾಮಿನಿಷ್ಠೆಯನ್ನೂ, ಕರ್ತವ್ಯನಿಷ್ಠೆಯನ್ನೂ ಮೆಚ್ಚಿದೆ ವಜೀರರೆ, ಅಗತ್ಯವಾಗಿ ಸುಲ್ತಾನರಿಗೆ ಈ ವರದಿಗಳನ್ನು ಸಲ್ಲಿಸಿ ಅವರ ಗಮನವನ್ನು ಈ ಗಂಭೀರವಿಷಯದತ್ತ ಹೊರಳಿಸಲು ಪ್ರಯತ್ನಿಸುವೆನು.

ವಜೀರ್ : ಧನ್ಯನಾದೆ ಸುಲ್ತಾನಾ ಸಾಹಿಬಾ–ಸಲಾಮ್, ಸದ್ ಸಲಾಮ್! **(ಹೋಗುವನು)**

ಹಬ್ಬಾ : (ವರದಿಗಳನ್ನು ಒಂದೊಂದಾಗಿ ಓದುತ್ತಾ) ಸ್ವಾರ್ಥ ಸಾಧನೆಗಾಗಿ ಸಾಮಂತರು ಏನನ್ನು ಮಾಡಲೂ ಹೇಸರಲ್ಲವೇ? ಶಿಯಾ ಸುನ್ನಿ ಪಂಗಡಗಳಲ್ಲಿ ಮತೀಯ ಗಲಭೆಗಳನ್ನು ಪ್ರಚೋದಿಸಬೇಕೆ–ಈ ನೀಚರು? ಹಿಂದೂಸ್ತಾನದ ಬಹುಭಾಗವನ್ನು ಆಕ್ರಮಿಸಿಯೂ ಅಕಬರಬಾದಷಾಹರ ಸಾಮ್ರಾಜ್ಯಲಾಲಸೆ ತೀರಿಲ್ಲವೆಂದು ತೋರುತ್ತಿದೆ–ಈಗ ಕಾಶ್ಮೀರದ ಮೇಲೆ ಕಣ್ಣಿಟ್ಟಿದ್ದಾರೆ! .... ಮುಂದೆ ಏನಾಗುವುದೋ ಅಲ್ಲಾನೇ ಬಲ್ಲ! ಯಾ ಅಲ್ಲಾ, ಎಲ್ಲಿದ್ದರೂ ವ್ಯಾಕುಲ, ವ್ಯಥೆ, ವೇದನೆ ನನ್ನ ಬೆನ್ನು ಬಿಡುತ್ತಿಲ್ಲ. ಈ ಯೂಸುಫರಂತೆ ನಿಶ್ಚಿಂತೆಯಿಂದ ಇರುವುದನ್ನಾದರೂ ಯಾಕೆ ಕಲಿಸಲಿಲ್ಲ ನೀನೆನಗೆ? ಈ ಅರಮನೆಗೇ ಬೆಂಕಿ ಹತ್ತಿದರೂ ಇವರ ಈ ನಿಶ್ಚಿಂತತೆಗೆ ಭಂಗ ಬರದೆಂದು ಭಾಸವಾಗುತ್ತಿದೆ. ಇವರು ಹೊರಬೇಕಾಗಿದ್ದ ರಾಜ್ಯರಕ್ಷಣೆಯ ಹೊಣೆಯನ್ನು ನಾನು ಹೊರಬೇಕೆ? ಹಬ್ಬಾ, ಹುಟ್ಟಿದ ಹಳ್ಳಿಯಂಥ ಇನ್ನೊಂದು ಹಳ್ಳಿಯಲ್ಲಿ ಕಮಾಲನಂಥವನ ಕೈಹಿಡಿದು ಬಾಳುವ ಭಾಗ್ಯ ನಿನಗಿಲ್ಲವಾಯಿತಲ್ಲ! ಅಲ್ಲಿ ಹಕ್ಕಿಯಂತೆ ಹಾಡುತ್ತ, ತಾಯಿ ಮಣ್ಣಿನೊಡನೆ ಆಡುತ್ತ, ಕೈಲಾದುದನ್ನು ಮಾಡುತ್ತ ಹಾಯಾಗಿರುತ್ತಿದ್ದೆ! ನಿನ್ನ ಪಾಲಿಗಿದೆ ಅಜೀಜನ ಅಮಾನುಷತೆ, ಇಲ್ಲವೆ ಈ ಅರಮನೆಯ ರೂಕ್ಷ, ಶುಷ್ಕ ರಾಜಕೀಯ! ಆಗಲಿ, ಬಂದ ಹೊರೆಗೆ ತಲೆಗೊಡುವೆನು!

(ಅಂತಃಪುರ ಪ್ರವೇಶಿಸಿ ಯೂಸುಫನನ್ನು ಎಬ್ಬಿಸಲು ಯತ್ನಿಸುವಳು)

ಪ್ರಿಯತಮ, ಓ ಪ್ರಿಯತಮ ನಿದ್ರೆಗಿದು ಹೊತ್ತಲ್ಲ ನನ್ನೊಲವೆ! ಎದ್ದೇಳು...

ಯೂಸುಫ್ : (ಕನವರಿಸುತ್ತ) ನಾಳೆ ಗುಲ್‌ಮಾರ್ಗಕ್ಕೆ ಹೋಗೋಣ ಹಬ್ಬಾ. ಈಗ ಕಾಲಿಡಲು ಕೂಡ ಸ್ಥಳವಿಲ್ಲದಂತೆ ನೆಲವೆಲ್ಲ ಹೂಗಳಾಗಿರಬಹುದಲ್ಲಿ; ಕೈಯಿಡಲು ಕೂಡ ಸ್ಥಳವಿಲ್ಲದಂತೆ ಎಲೆಯೆಲ್ಲ ಹಣ್ಣಾಗಿರಬಹುದಲ್ಲಿ! ಆ

ಹಿಮಜಾರುಬಂಡೆಯನ್ನಾಡಿ ಎಷ್ಟು ದಿನಗಳಾದುವು ನೋಡು! ಇಲ್ಲವೆ ಅಹರ್‌ಬಲ್, ಅಚ್ಛಬಲ್‌ಗಳಿಗೆ ಹೋಗೋಣವೆ? ಪಹಲ್‌ಗಾಂವಿಗೆ ಹೋಗೋಣವೆ? ಸೋನ್ ಮಾರ್ಗವೇಕೆ ಬೇಡ? ಹೋಗಲಿ ಪಹಲ್‌ಗಾಂವಿನ ನಿರ್ಝರಗಳಲ್ಲಿ ಮಿರಿಮಿರಿ ಮಿಂಚುವ ಮೀನುಗಳನ್ನು ಹಿಡಿಯೋಣ....

ಹಬ್ಬಾ : ಈ ಕನಸು, ಈ ಕನವರಿಕೆ ಸಾಕು ದೊರೆಯೆ. ಏಳಿರಿನ್ನು! ನಮ್ಮ ರಾಜ್ಯದಲ್ಲಿ ಒಳಸಂಚುಗಳು, ಹಗೆಗಳ ಹೊಂಚುಗಳು ನಡೆದಿರುವಾಗ ಕನಸು ಕಾಣುತ್ತ, ಕನವರಿಸುತ್ತ ಮಲಗಿರುವುದೆ?

ಯೂಸುಫ್ : (ಆಕಳಿಸುತ್ತ) ಯಾವ ಒಳಸಂಚುಗಳು, ಏನು ಹೊಂಚುಗಳು ಹಬ್ಬಾ?

ಹಬ್ಬಾ : (ಬೇಹುಗಾರರ ವರದಿಗಳನ್ನು ಕೈಗಿಡುತ್ತ) ಓದಿನೋಡಿ ಈ ವರದಿಗಳನ್ನು....

ಯೂಸುಫ್ : (ಬೇಸರದ ದನಿಯಲ್ಲಿ) ನೀನೇ ಓದಿ ಹೇಳು ಹಬ್ಬಾ ಈ ಹಾಳು ವರದಿಗಳನ್ನು ಯಾರು ಓದಬೇಕು ದಿನದಿನವೂ! ಓದುವ ಅಗತ್ಯವಿಲ್ಲ, ನೀನು ಓದಿರುವಿಯಲ್ಲ–ಸಾರಾಂಶ ಹೇಳಿಬಿಡು. ಅದೂ ಬೇಡ! ನನಗೆ ಗೊತ್ತಿರದ ಸಾರಾಂಶವಾದರೂ ಯಾವುದಿದೆ? 'ಅಲ್ಲಿ ದಂಗೆಯೇಳುವ ಸಂಭವವಿದೆ, ಇವರು ದಾಳಿ ಮಾಡುವ ಸಾಧ್ಯತೆಯಿದೆ, ಅವನ ಸ್ವಾಮಿನಿಷ್ಠೆ ಶಂಕಾತೀತವಲ್ಲ, ಇವನ ಮೈತ್ರಿ ನಿಜವಲ್ಲ' ಇವೇ ತಾನೆ ನಾವು ನಿತ್ಯ ಪಡೆಯುವ ವರದಿಗಳ ಹುರುಳು ತಿರುಳುಗಳು? ಈ ಬೇಹುಗಾರರು ತಮ್ಮ ಹುದ್ದೆ, ತಮಗೆ ಸಿಕ್ಕುವ ಸಂಬಳಗಳನ್ನು ಸಮರ್ಥಿಸಿಕೊಳ್ಳಲು ಏನಾದರೂ ವರದಿ ಕಳಿಸಲೇಬೇಕಷ್ಟೆ? ಸಂಚು, ಹೊಂಚುಗಳು ಇಲ್ಲದಿದ್ದರೂ ಅವುಗಳನ್ನು ಹುಟ್ಟಿಸಿಯಾದರೂ ಕಳಿಸುವರು ಈ ಬೃಹಸ್ಪತಿಗಳು! ಇವರ ವರದಿಗಳಂತೆ ವರ್ತಿಸಿದರೆ ನಾವು ಹುಚ್ಚರಮನೆ ಸೇರಬೇಕಾದೀತು! ಬಾ, ಈ ದಿನದ ಹೊಸ ಹಾಡು ಹೇಳು–ತನ್ನ ತನಿರಸದ ಹೊನಲಿನಲ್ಲಿ ಈ ವರದಿಗಳನ್ನೆಲ್ಲ ಕೊಚ್ಚಿಕೊಂಡೊಯ್ಯುವಂಥ ಹಾಡು ಹೇಳು!

ಹಬ್ಬಾ : ನಿಮ್ಮನ್ನು ಅಳುವವರ ಸಭೆಯಲ್ಲಿ ಕುಳ್ಳಿರಿಸಿದರೂ ನೀವು ಹಾಡು ಕೇಳುವುದನ್ನು ಬಿಡುವುದಿಲ್ಲವೆಂದು ತೋರುತ್ತದೆ!

ಯೂಸುಫ್ : ಯಾಕೆ ಬಿಡಬೇಕು ಹಬ್ಬಾ? ನೀನೇ ಹೇಳು, ಈ ಜಗತ್ತಿನಲ್ಲಿ ಅಳಬೇಕೆಂದರೂ ನೆಪಗಳು ಸಿಕ್ಕುತ್ತವೆ; ನಗಬೇಕೆಂದರೂ ಸಿಕ್ಕುತ್ತವೆ. ಎಂದ ಮೇಲೆ ಅಳುವುದಕ್ಕಿಂತ ನಗುವುದು, ಕೊರಗುವುದಕ್ಕಿಂತ ಕುಣಿದಾಡುವುದು ಮೇಲಲ್ಲವೆ?

ಹಬ್ಬಾ : ಸುತ್ತುಮುತ್ತಣವರು ಸುಖಿಗಳಾಗಿದ್ದರೆ ಮಾತ್ರ ನಾವೂ ಸುಖಿಗಳಾಗಿರಬಹುದು. ಎಲ್ಲರೂ ದುಃಖಿಗಳಾಗಿರುವಾಗ ನಾವಷ್ಟೇ ಹೇಗೆ ಹಿಗ್ಗಿನಿಂದಿರಬಹುದು ದೊರೆಯೆ, ನನ್ನ ಒಲವಿನ ಸಿರಿಯೆ?

ಯೂಸುಫ್ : ಮತ್ತೆ ಭ್ರಮೆಯಲ್ಲಿ ಬಿದ್ದೆ ಹಬ್ಬಾ. ಎಲ್ಲರನ್ನೂ ಸುಖಿಗಳನ್ನಾಗಿ ಮಾಡುವುದು ಯಾರಿಂದಾದರೂ ಎಂದಾದರೂ ಸಾಧ್ಯವೆ? ಎಲ್ಲರನ್ನೂ ಹುಟ್ಟಿಸಿರುವ ಅಲ್ಲನಿಗಾದರೂ ಸಾಧ್ಯವೆ? ಎಲ್ಲರೂ ಸುಖಿಗಳಾದಾಗ ಮಾತ್ರ ನಾವು ಸುಖಿಸಬೇಕೆಂಬುದು ಬಿಸಿಲುಗುದುರೆಯ ಬೆನ್ನುಹತ್ತಿ ಅಲೆದು ಬಸವಳಿದಂತೆ! ಹೀಗೆ ಮಾಡಿದರೆ ನಮಗೆ ಜೇನಿರಲಿ, ಜೇನಿಲ್ಲದ ಮೇಣ ಕೂಡ ದೊರೆಯದೆಂದು ತಿಳಿ! ಯಾಕೆ ಇಲ್ಲದ ಸಲ್ಲದ ಸಂಗತಿಗಳನ್ನೆಲ್ಲ ತಲೆಯಲ್ಲಿ ತುಂಬಿಕೊಂಡು ಇಲ್ಲದುದಕ್ಕೆ ಹಾರೈಸಿ ಇದ್ದುದನ್ನು ಕಳೆದುಕೊಳ್ಳುವೆ? ಬಾ, ಇರುವಷ್ಟು ದಿನ ಆನಂದವಾಗಿರೋಣ, ಸೃಷ್ಟಿಯ ಸಮಸ್ತ ಸುಖಗಳನ್ನೂ ಅನುಭವಿಸೋಣ!

(ಹೊರಗೆ ಗಲಭೆ, ಗಡಿಬಿಡಿ, ಗೊಂದಲ)

ವಜೀರ್ : ಕಂದಾಯ ಮಾಫಿ? ಸಾಧ್ಯವಿಲ್ಲ? ತಹಕೂಬಿಯೂ ಶಕ್ಯವಿಲ್ಲ! ಪರಿಹಾರ ಕಾರ್ಯಗಳನ್ನು ಪ್ರಾರಂಭಿಸಲು ಹಣವಿಲ್ಲ.... ನಿಮಗೆ ಧಾನ್ಯ ಕಡ ಕೊಡಲು ಧಾನ್ಯ ಸರ್ಕಾರದ ಖಜಾನೆಯಲ್ಲಿ ಬೆಳೆಯುವುದಿಲ್ಲ! ಬಂದ ಹಾದಿಯಿಂದ ಹೊರಟು ಹೋಗಿರಿ!

ಗುಂಪಿನಲ್ಲಿ ಒಬ್ಬ : ಹಸಿದು ಕಂಗಾಲಾಗಿ ಬಂದ ರೈತರಿಗೆ ಅನ್ನವಿಕ್ಕದೆ ಬಂದ ಹಾದಿಯಿಂದ ಹೋಗಿರೆನ್ನುವುದು ಯಾವ ನ್ಯಾಯ ಹುಜೂರ್?

ವಜೀರ್ : ಹುಟ್ಟಿಸಿದ ದೇವರೇ ನಿಮಗೆ ಅನ್ನ ಹಾಕದಿರುವಾಗ ನಾವೇನು ಮಾಡಲಿಕ್ಕಾಗುವುದು?

ಇನ್ನೊಬ್ಬ : (ರೇಗಿ) ನಮಗೆ ನಮ್ಮ ಸುಲ್ತಾನರನ್ನು ನೋಡಗೊಡಿರಿ. ಅವರೂ ಇದೇ ಉತ್ತರವನ್ನು ಕೊಟ್ಟರೆ ಮುಂದಿನ ದಾರಿ ಕಂಡುಕೊಳ್ಳುವೆವು.

ವಜೀರ್ : ಅಬ್ಬಾ, ಇದಾಗಲೇ ಇಷ್ಟು ಧೈರ್ಯ, ಧಾರ್ಷ್ಟ್ಯ ಬಂದಿತೆ ನಿಮಗೆ? ನೀವು ಸುಲ್ತಾನರನ್ನು ನೋಡಲಾರಿರಿ!

(ಇಷ್ಟರಲ್ಲಿ, 'ಹಸಿವೆ, ತಾಳಲಾಗದ ಹಸಿವೆ, ಪ್ರಾಣ ಹೀರುವ ಹಸಿವೆ, ಅನ್ನ ಹಾಕಿ!,' ಎಂದು ಕೂಗುತ್ತಾ ಅನೇಕರು ಅಲ್ಲಿಗೆ ಬರುವರು. ಗದ್ದಲ ಹೆಚ್ಚಾದುದನ್ನು ಕೇಳಿ ಹಬ್ಬಾ ಹೌಹಾರುವಳು)

ಹಬ್ಬಾ : ಹೊರಗೆ ಹಸಿದ ರೈತರು ಬಂದಂತಿದೆ. ನೀವು ಹೊರಗೆ ಹೋಗಿ ಅವರ ಯೋಗಕ್ಷೇಮ ಯಾಕೆ ವಿಚಾರಿಸಬಾರದು? ಅವರಿಗೆ ಅನ್ನ ಒದಗಿಸಲಾರಿರಾ?

ಯೂಸುಫ್ : ಹುಚ್ಚಿ ನೀನು ಹಬ್ಬಾ! ದೇಶಕ್ಕೆ ದೊರೆಯಾದವನು ಕೇಳಿದವರಿಗೆ ಕೇಳಿದುದನ್ನೆಲ್ಲ ಕೊಡುತ್ತ ಹೋದರೆ ಅವನು ದೊರೆಯಾಗಿ ಉಳಿಯುವನೆ? ಪುಕ್ಕಟೆಯಾಗಿ ಪ್ರಭುವಿನಿಂದ ಅನ್ನ ದೊರೆಯತೊಡಗಿದರೆ ದುಡಿಯುವುದನ್ನೇ ಬಿಟ್ಟು ಬಿಟ್ಟಾರು ರೈತರು! ಮೇಲಾಗಿ ಬಯಲು ಬಾಯಿ

ತೆರೆದರೆ ಅದಕ್ಕೆ ಅನ್ನದಾತನಾಗುವ ಕಂಬೀರನಾರು? ಇವರೆಲ್ಲರಿಗೆ ಎಲ್ಲಿಂದ ಅನ್ನ ಒದಗಿಸುವುದು? ಹುಟ್ಟಿಸಿದ ದೇವರೇನು ಮಲಗಿರುವನೆ ನನ್ನಂತೆ? ಎಲ್ಲರಿಗೂ ಅನ್ನ ಒದಗಿಸುವನು. ಯಾರಿಗೂ ಹುಲ್ಲು ಹಾಕನು! ಬಾ, ಇನ್ನೊಂದು ಮುತ್ತು ನೀಡು, ಇನ್ನೊಂದು ಗೀತೆ ಹಾಡು!

(ಮತ್ತೆ ಹೊರಗೆ ಹಸಿವೆ, ಅನ್ನ, ಸತ್ತೆ, ಕೆಟ್ಟೆ ಎಂಬ ಕೂಗು, 'ಅನ್ನಹಾಕುವಿರೋ ಕನ್ನಹಾಕಬೇಕೋ' ಎಂಬ ಸವಾಲು!)

ಹಬ್ಬಾ : (ಕಾತರಳಾಗಿ) ನಾನಾದರೂ ಹೋಗಿ ಅವರ ಯೋಗಕ್ಷೇಮ ವಿಚಾರಿಸುವೆ ಪ್ರಿಯತಮ. ನೀವು ಶ್ರಮವಹಿಸುವುದು ಬೇಡ. ನೀವು ವಿಶ್ರಮಿಸಿರಿ. (ಹೊರಡುವಳು).

ಯೂಸುಫ್ : (ಉಸಿರ್ಗರೆದು) ಅಚ್ಛಾಜಿ. ಹಮ್ ಆರಾಮ್ ಕರೇಂಗೆ! (ಮತ್ತೆ ಮುಸುಕೆಳೆದುಕೊಳ್ಳುವನು. ಹಬ್ಬಾ ಹೊರಗೆ ಬರಲು ನೆರೆದ ಜನ ಹರ್ಷಧ್ವನಿಗೈಯುವುದು- 'ಸುಲ್ತಾನಾ ಸಾಹಿಬಾ ಸಲಾಮತ್ ರಹೇ' ಎಂದು ಜಯಕಾರ ಮಾಡುವರು. ಹಬ್ಬಾ ವಜೀರರತ್ತ ತಿರುಗಿ)

ಹಬ್ಬಾ : ವಜೀರಜೀ, ಜನರಿಷ್ಟು ಹಸಿವೆಯಿಂದ ಕಂಗೆಡುವವರೆಗೆ ಯಾಕೆ ಅಲಕ್ಷ್ಯ ಮಾಡಿದಿರಿ?

ವಜೀರ್ : ಕಾಳುಗಳು ಖಜಾನೆಯಲ್ಲಿ ಬೆಳೆಯುವುದಿಲ್ಲ ಸುಲ್ತಾನಾ ಸಾಹಿಬಾ, ಅವು ಈ ರೈತರ ಹೊಲಗಳಲ್ಲಿಯೇ ಬೆಳೆಯಬೇಕು. ಅಲ್ಲಿಯೇ ಬೆಳೆಯದಿದ್ದರೆ ಎಲ್ಲಿಂದ ತರುವುದು?

ಹಬ್ಬಾ : ಇಂಥ ದುರ್ಧರ ಪ್ರಸಂಗಗಳು ಬರುವುದು ಅನಿರೀಕ್ಷಿತವೇನಲ್ಲ. ಇಂಥ ಪ್ರಸಂಗಗಳಿಗಾಗಿ ತಕ್ಕಷ್ಟು ಧಾನ್ಯ ಸಂಗ್ರಹವಿರಬಾರದೆ ಸರ್ಕಾರದ ಸ್ವಾಧೀನದಲ್ಲಿ?

ವಜೀರ್ : ಸೈನಿಕರಿಗಾಗಿ, ಸರಕಾರದ ಕರ್ಮಚಾರಿಗಳಿಗಾಗಿ ಸ್ವಲ್ಪ ಸಂಗ್ರಹವಿದೆ ಒಡತಿ. ಆದರೆ ಅದನ್ನು ರೈತರಿಗೆ ಕೊಡಲಾಗುವುದಿಲ್ಲ.

ಹಬ್ಬಾ : ಹಸಿದವರ ಜೀವ ಮೊದಲು ಉಳಿಯಲಿ ವಜೀರಜಿ. ಕಾಳು ಕಡಿಮೆ ಬಿದ್ದರೆ ಪಾತಾಳದಿಂದಲಾದರೂ ತರಿಸೋಣ! ಇವರೆಲ್ಲರಿಗೆ ಒಂದೊಂದು ದಿನದಾಹಾರವನ್ನಾದರೂ ಒದಗಿಸಿರಿ! ನೆರೆ ರಾಜ್ಯಗಳಿಂದ ಕೇಳಿದ ಬೆಲೆ ಕೊಟ್ಟು ಕಾಳುಗಳನ್ನು ತರಿಸಿರಿ; ಏನಾದರೂ ಮಾಡಿ ಮುಂದಿನ ಬೆಳೆ ಬರುವವರೆಗೆ ನಮ್ಮ ರೈತರನ್ನು ಬದುಕಿಸಿರಿ! ರೈತರೇ ಅಳಿದರೆ ರಾಜ್ಯ ಉಳಿಯುವುದೆ?

ವಜೀರ್ : ಮಹದಾಜ್ಞೆ!

(ನೆರೆದ ಜನ 'ಸುಲ್ತಾನಾ ಸಾಹಿಬಾ ಸಲಾಮತ್ ರಹೇ' ಎಂಬ ಹರ್ಷೋದ್ಗಾರ ಮಾಡುವರು)

ಒಬ್ಬ : ನಮ್ಮ ಪ್ರಾಣ ಉಳಿಸಿದ ತಾವು ತಾಯಿ ನಮಗೆ-ಹೆತ್ತ ತಾಯಿಯಷ್ಟೇ ಮಾನಿನಿಯರು ನಮಗೆ ನೀವು!

ಹಬ್ಬಾ : ನಮ್ಮೆಲ್ಲರಿಗೂ ಅಲ್ಲಾನೇ ತಂದೆ ತಾಯಿ. ಆತನನ್ನು ಸ್ಮರಿಸಿರಿ. (ಮತ್ತೆ ಜಯಘೋಷ ಮಾಡುತ್ತ ಹೊರಟು ಹೋಗುವರು)..... ಪರವರದಿಗಾರ್, ನಿನ್ನ ಮಕ್ಕಳು ತುತ್ತು ಅನ್ನಕ್ಕಾಗಿ ಬಾಯಿ ಬಾಯಿ ಬಿಡಬೇಕೆ? ಊರೂರು ಅಲೆಯಬೇಕೆ? ಎಲ್ಲೆಲ್ಲಿಂದಲೋ ಬಂದಿದ್ದ ಈ ಬಡ ರೈತರು ಹಿಡಿ ಅಕ್ಕಿ ಪಡೆದು ಹಿಗ್ಗಿ ಹಿಂದಿರುಗಿದರು! ಈ ಹಿಡಿ ಅಕ್ಕಿ ಅವರನ್ನು ಎಷ್ಟು ದಿನ ಕಾಪಾಡೀತು? ಯಾ ಅಲ್ಲಾ, ಇವರು ಮುಂದಿನ ಬೆಳೆ ಬರುವವರೆಗೆ ಬದುಕುವುದು ಹೇಗೆ? ಅರಸೊತ್ತಿಗೆಯ ಸತ್ತೆ, ಅರಮನೆಯ ಅಧಿಕಾರ ಎಷ್ಟು ಸೀಮಿತವಾದುದು! ರೈತರಿಂದ ಪಡೆಯಲು ಉಂಟು, ರೈತರಿಗೆ ಕೊಡಲು ಇಲ್ಲ! ಇದೆಲ್ಲ ಹುಸಿ, ಅಲ್ಲಾನು ನೀಡಿದರೆ ಉಂಟು, ನೀಡದಿದ್ದರೆ ಇಲ್ಲ! ಅವನು ಕೊಡದಿದ್ದರೆ ಈ ಹಿಡಿ ಅಕ್ಕಿಯಿಂದ ಯಾರು ಒಡಲು ಹೊರೆದಾರು? ಏಸು ದಿನ ಬದುಕಿಯಾರು?

(ಅತ್ತ ಸೇನಾಪತಿಯ ಸದನದ ಮುಂದೆ ಸೈನಿಕರ ಪ್ರತಿಭಟನೆ)

ಒಬ್ಬ ಸೈನಿಕ : ಸಾಲಾರಜಿ, ಸಮಯಕ್ಕೆ ಸರಿಯಾಗಿ ಸಂಬಳ ಸಿಕ್ಕುವುದಿಲ್ಲ. ಆದರೂ ಹಸಿದಾಗ ಹಿಡಿ ಧಾನ್ಯವಾದರೂ ಸಿಕ್ಕುವುದೆಂದು ಸಾಯಲು ಸಿದ್ಧರಾಗಿ ಸೈನ್ಯ ಸೇರಿದ್ದೆವು. ಈಗ ನಮಗಾಗಿ ಇರಿಸಿದ್ದ ಧಾನ್ಯವನ್ನು ರೈತರಿಗೆ ಹಂಚುತ್ತಿದ್ದೀರಿ. ನಾಳೆ ಹಸಿದ ಹೊಟ್ಟೆಯೊಡನೆ ರಣಭೂಮಿಗೆ ಹೋಗಬೇಕೇನು ನಾವು?

ಸೇನಾಪತಿ : ಇದ್ದ ಧಾನ್ಯವನ್ನೆಲ್ಲ ಎಲ್ಲಿ ಹಂಚಿದೆ. ನಿಮಗೂ ಉಳಿಸಿದೆ.

ಇನ್ನೊಬ್ಬ ಸೈನಿಕ : ಈಗ ಸಿಕ್ಕುತ್ತಿದ್ದುದೇ ಸಾಲುತ್ತಿರಲಿಲ್ಲ-ನಮ್ಮ ಕುಟುಂಬಕ್ಕೆ! ಇನ್ನು ಮುಂದೆ ದೊರೆಯುವುದು ಅರೆಹೊಟ್ಟೆಗೂ ಆಗುವುದಿಲ್ಲ.

ಸೇನಾಪತಿ : ದೇಶವೇ ಬರದ ದವಡೆಯಲ್ಲಿ ಸಿಲುಕಿರುವಾಗ ನೀವೆಲ್ಲ ನಿಮ್ಮ ನಿಮ್ಮ ಸಣ್ಣ ಪುಟ್ಟ ತೊಂದರೆಗಳನ್ನು ಸಹಿಸಿಕೊಳ್ಳಬೇಕು.

ಮತ್ತೊಬ್ಬ ಸೈನಿಕ : ಬರಗಾಲವಿಲ್ಲದಿದ್ದಾಗ ನಮಗೆ ಸಿಕ್ಕಿರುವ ಸಂಭಾವನೆಯೂ ಅಷ್ಟರಲ್ಲಿಯೇ ಇದೆ ಸಾಲಾರಜೀ!

ಸೇನಾಪತಿ : (ರೇಗಿ) ಇಂದು ನಿಮ್ಮ ನುಡಿಗಳಿಂದ ಅವಿಧೇಯತೆಯ ವಾಸನೆ ಬರುತ್ತಿದೆ! ಇದಕ್ಕೆ ಶಿಕ್ಷೆಯೇನೆಂಬುದನ್ನು ನೀವು ಮರೆತಿಲ್ಲವಷ್ಟೆ?

(ಅನಿತರಲ್ಲಿ ಕುದುರೆ ಸವಾರನೊಬ್ಬ ಓಡುತ್ತ ಬರುವನು)

ಸವಾರ : ಸಾಲಾರ ಸಾಹಿಬ್, ಘಾತವಾಯಿತು, ಮೋಸವಾಯಿತು. ಸರ್ವಸ್ವ ನಾಶವಾಯಿತು! ಅಕಬರ ಬಾದಷಹರ ದೊಡ್ಡ ದಂಡು ಕಾಶ್ಮೀರದ ಗಡಿದಾಟಿ ಒಳನುಗ್ಗಿದೆ. ಅದನ್ನು ತಡೆಯುವವರೇ ಇಲ್ಲ!

ಸೇನಾಪತಿ : ನಮ್ಮ ಸೈನಿಕರೇನು ಮಾಡುತ್ತಿದ್ದಾರೆ?

ಸವಾರ : ಅವರೆಲ್ಲ ಒಂದೇ ತುತ್ತಾದರು ದಿಲ್ಲಿಯ ದಂಡಿಗೆ!

ಸೇನಾಪತಿ : ನಮ್ಮ ಪ್ರಜೆಗಳೇನು ಮಾಡುತ್ತಿದ್ದಾರೆ?

ಸವಾರ : ಅವರೆಲ್ಲ ಅನ್ನ ಹುಡುಕುತ್ತ ಅಡವಿ ಅಲೆಯುತ್ತಿದ್ದಾರೆ!

ಸೇನಾಪತಿ : (ಮುಂದಿದ್ದ ಸೈನಿಕರಿಗೆ) ಕಾಶ್ಮೀರ ವೀರರೇ, ಈಗಿಂದೀಗಲೇ ಹೋಗಿರಿ ಶತ್ರುಗಳ ಮೇಲೆ ಸಾಗಿರಿ, ದಿಲ್ಲಿಯವರ ದವಡೆ ಮುರಿಯಿರಿ! ಸುಲ್ತಾನರಿಗೆ ಈ ಸಮಾಚಾರ ತಿಳಿಸಿ ನಾನೂ ಬಂದು ನಿಮ್ಮೊಡನೆ ಯುದ್ಧ ಮಾಡುವೆನು!

(ಸೈನಿಕರು 'ಹಸಿದ ಹೊಟ್ಟೆ ಹೊತ್ತು ಯುದ್ಧಕ್ಕೆ ಹೊರಡಿರಿ' ಎಂದು ಕಿರಿಚುತ್ತ, ವ್ಯಂಗ್ಯವಾಗಿ ನಗುತ್ತ ಹೋಗುವರು)

* * *

(ಅರಮನೆಯಲ್ಲಿ ಯೂಸುಫ್‌ಷಾಹ, ಹಬ್ಬಾ ಖಾತೂನ್, ವಜೀರ್ ಮತ್ತು ಸಾಲಾರರ ಮಂತ್ರಾಲೋಚನೆ)

ಸಾಲಾರ : ಅಕಬರ ಬಾದಷಾಹರ ಅಪಾರಸೇನೆಯೆದುರು ನಮ್ಮ ದುರ್ಬಲ ಅಸಂತೃಪ್ತ ಸೈನ್ಯ ಬಹಳ ಹೊತ್ತು ತಡೆಯದು ಒಡೆಯ!

ಯೂಸುಫ್ : (ರುಷ್ಟನಾಗಿ) ಸೈನ್ಯ ಹಾಳಾಗಿ ಹೋಗಲಿ ಸಾಲಾರರೇ. ನೀವಿರುವಿರಲ್ಲ!

ಸಾಲಾರ : (ಕಕ್ಕಾವಿಕ್ಕಿಯಾಗಿ) ನಾ......ನು.

ಯೂಸುಫ್ : ಹೌದು ನೀವೇ! ನೀವು ನನ್ನ ಸಾಲಾರ್, ನಿಮ್ಮ ಸುಲ್ತಾನರನ್ನು ರಕ್ಷಿಸುವ ಹೊಣೆ ನಿಮ್ಮದು.

ವಜೀರ : (ಸಾಲಾರರ ದುರವಸ್ಥೆಯನ್ನು ಕಂಡು): ತಮ್ಮ ಮಾರ್ಗದರ್ಶನದಂತೆ ನಡೆಯುವ ಆಜ್ಞಾಧಾರಕರು ನಾವು ಆಲಮ್‌ಪನಾಹ.

ಯೂಸುಫ್ : ಎಲ್ಲ ನಾವೇ ಮಾಡಬೇಕಿದ್ದರೆ ನಿಮ್ಮಿಬ್ಬರನ್ನೇಕೆ ನಿಯಮಿಸಕೊಳ್ಳಬೇಕಿತ್ತು ನಾವು? ನಿಮ್ಮ ಕರ್ತವ್ಯ ನಿರ್ವಹಿಸಲು ನಿಮಗೆ ಶಕ್ತಿಯಿಲ್ಲವೆ, ಸಾಮರ್ಥ್ಯವಿಲ್ಲವೆ, ಧೈರ್ಯವಿಲ್ಲವೆ, ಸ್ಥೈರ್ಯವಿಲ್ಲವೆ? ಹೇಡಿಗಳನ್ನು ಕಟ್ಟಿಕೊಂಡು ಹಾಳಾದೆ ನಾನು! (ಒಮ್ಮೆಗೇ ದೀನಸ್ವರದಲ್ಲಿ) ಎಲ್ಲಿಗೆ ಹೋಗಲೀಗ?

ಈ ಅರಮನೆ, ಈ ಅಂತಃಪುರ, ಈ ಹಬ್ಬಾ, ಈ ನಾನು–ಇಷ್ಟನ್ನಾದರೂ ಉಳಿಸಿರಿ! ಇಷ್ಟೇ ಸಾಕು ನನಗೆ! ಇದ್ದಷ್ಟರಲ್ಲಿಯೇ ತುಷ್ಟರಾಗುವುದನ್ನು ಕಲಿಯಬೇಕು ನಾವು.

ಹಬ್ಬಾ : (ಅಂಜುತ್ತ–ಅಳುಕುತ್ತ) ಅಕಬರ ಬಾದಷಾಹರೊಡನೆ ರಾಜಿಯನ್ನಾದರೂ ಏಕೆ ಮಾಡಿಕೊಳ್ಳಬಾರದು?

ಯೂಸುಫ್ : (ರೇಗಿ) ರಾಜಿ? ಛೀ, ಇನ್ನೊಮ್ಮೆ ಈ ಶಬ್ದ ನಿನ್ನ ಬಾಯಿಂದ ಬರಬಾರದು! ಅಂಗನೆಯರು ಎಷ್ಟೆಂದರೂ ಅಳ್ಳೆದೆಯವರು! ರಾಜ್ಯ, ಸಿಂಹಾಸನ, ಅರಮನೆ, ವೀರರ ಸೊತ್ತು, ಹಬ್ಬಾ, ವೀರರ ಸೊತ್ತು–ಹೇಡಿಗಳ ತುತ್ತಲ್ಲ! ಈ ಯೂಸುಫನ ಧಮನಿಗಳಲ್ಲಿ ಹರಿಯುತ್ತಿರುವುದು ಹೇಡಿಯ ರಕ್ತವಲ್ಲ, ಪರಾಕ್ರಮಮಯ ರಕ್ತ!

ಹಬ್ಬಾ : ಹಾಗಾದರೆ ಆಯುಧ ಪಾಣಿಗಳಾಗಿ ರಣಭೂಮಿಗೆ ಹೊರಡಿರಿ!

ಯೂಸುಫ್ : (ಬೆಚ್ಚಿ) ರಣಭೂಮಿಗೆ ಹೋಗಲೆ ಹಬ್ಬಾ? ಯಾಕೆ, ಇದಾಗಲೇ ಬೇಸರವಾಗಿಬಿಟ್ಟನೇನು ಈ ಯೂಸುಫನು ನಿನಗೆ? ನಾನು ಯುದ್ಧಕ್ಕೆ ಹೋಗಬೇಕಂತೆ! ಈ ವಜೀರ ಸಾಲಾರರಿಗೆ ಏನಾಗಿದೆ? ವಜೀರ ಸಾಲಾರರೇ, ಬೆಪ್ಪರಂತೆ ನಿಂತಿರುವಿರೇಕೆ? ಏಕೆ ಮಿಕಿ ಮಿಕಿ ನೋಡುತ್ತಿರುವಿರಿ? ಹೋಗಿರಿ, ತಕ್ಷಣ ಹೋಗಿರಿ, ಶತ್ರುಗಳನ್ನು ಸದೆಬಡಿದು ಬನ್ನಿರಿ, ನೆಲಸಮಮಾಡಿ ಬನ್ನಿರಿ.

ವಜೀರ್, ಸಾಲಾರ್: (ಇದೇ ನೆಪ ಸಾಕೆಂದು 'ಜೀ ಹುಜೂರ್!' ಎಂದು ಹೋಗುವರು)

ಯೂಸುಫ್ : (ಅವರು ಹೋದುದನ್ನು ನೋಡಿ ಅಟ್ಟಹಾಸದಿಂದ) ನೋಡಿದೆಯಾ ಹಬ್ಬಾ–ನನ್ನ ಪರಮ ಪ್ರತಾಪವನ್ನು! ನನಗೆ ಎದುರುತ್ತರ ಕೊಡುವ ಎದೆಯಿದೆಯೆ ಇವರಿಗೆ? ತಮ್ಮ ಹೊಣೆಯನ್ನು ನನ್ನ ಮೇಲೆ ಹೊರಿಸ ಬಂದಿದ್ದ ಈ ಹೇಡಿಗಳನ್ನು ಹೇಗೆ ಅಟ್ಟಿಬಿಟ್ಟೆ ನೋಡು! ಈ ಸಂತಸದ ಸಮಯದಲ್ಲಿ ಒಂದು ಹಾಡು ಹೇಳಿಬಿಡು–ಹೊಸ ಹಾಡು, ಈ ದಿನದ ಹೊಸ ಹಾಡು!

(ಅಷ್ಟರಲ್ಲಿ ಕೋಲಾಹಲ ದೂರದಿಂದ ಹತ್ತಿರಕ್ಕೆ ಬರುತ್ತದೆ. 'ಶ್ರೀನಗರ ಇನ್ನೇನು ಎರಡೇ ಮೈಲು–ನುಗ್ಗಿರಿ! ಜಯಮಾಲೆ ನಿಮಗಾಗಿ ಕಾದಿದೆ–ಮುನ್ನುಗ್ಗಿರಿ! ಮೊಗಲೆ ಅಜಮ್ ಅಕಬರ್ ಬಾದಷಾಹ ಸಲಾಮತ್‌ರಹೇ!' ಎಂಬ ಜಯಘೋಷಗಳು ಕ್ರಮವಾಗಿ ಗಟ್ಟಿಯಾಗಿ ಕೇಳಿಸುತ್ತವೆ. ಯೂಸುಫ್ ಹೌಹಾರಿ)

ಅಯ್ಯೋ, ಸರ್ವಸ್ವನಾಶವಾಯಿತು. ಹಬ್ಬಾ! ಇಲ್ಲಿಂದ ಕಾಲ್ತೆಗೆಯಲೇಬೇಕು! ಎಲ್ಲಿಯಾದರೂ ತಲೆಮರೆಸಿಕೊಳ್ಳಲೇ ಬೇಕು! ನಡೆ ದಾರಿ ಸಿಕ್ಕೆಡೆಗೆ (ಇಬ್ಬರೂ ಕಾಲ್ದೆಗೆಯುವರು, ಹೊರಗೆ ಕದನ ಕೋಲಾಹಲ ಮುಗಿಲು ಮುಟ್ಟುತ್ತದೆ. 'ಅಯ್ಯೋ, ರಾಜಧಾನಿ ವೈರಿಗಳ ವಶವಾಯಿತು! ಇನ್ನು ನಮ್ಮ ರಕ್ಷಕರಾರು? ನಾವು

ನಿರಪರಾಧಿಗಳು–ಕೊಲ್ಲದಿರಿ. ಕೊಲ್ಲದಿರಿ!...... ಸುಲ್ತಾನರು ಸೆರೆಸಿಕ್ಕರೆ?.......ಸೆರೆಸಿಕ್ಕ ಸುಲ್ತಾನರನ್ನು ಕೊಲ್ಲದಿರಿ, ಕೊಲ್ಲದಿರಿ! ಅಕಬರ ಬಾದಷಾಹರ ಆಜ್ಞೆಯಂತೆ ಸಶಸ್ತ್ರ ಪಹರೆಯವರೊಡನೆ ಬಂಗಾಲಕ್ಕೆ ಕಳಿಸಿಕೊಡಿ ಯೂಸುಫ್ ಷಾಹರನ್ನು! ಸುಲ್ತಾನಾ ಹಬ್ಬಾ ಖಾತೂನಳನ್ನೂ ಸೆರೆಹಿಡಿಯಿರಿ! ನಮ್ಮ ಸಾಮ್ರಾಟರಿಗೆ ತಕ್ಕ ನಜರಾನಾ ಅವಳು,....ಶ್ರೀನಗರವನ್ನು ಸುಲಿಯಿರಿ! ಸಿಕ್ಕವರನ್ನು ಸೆರೆಹಿಡಿಯಿರಿ... ಏನು, ಹಬ್ಬಾ ಖಾತೂನಳ ಪತ್ತೆ ಹತ್ತಲೊಲ್ಲದೆ? ಶ್ರೀನಗರದ ಮನೆಮನೆಯನ್ನು ಶೋಧಿಸಿರಿ, ಸುತ್ತು ಸವಾರರನ್ನು ಓಡಿಸಿರಿ! ಸುಲ್ತಾನಾ ಸಿಕ್ಕಲೇ ಬೇಕು. ಸಿಕ್ಕದಿದ್ದರೆ ನಾವು ಗೆದ್ದೂ ಸೋತಂತೆ. ಅವಳಿಗೆ ಆಶ್ರಯವಿತ್ತವರಿಗೆ ಮರಣದಂಡನೆ ವಿಧಿಸಲಾಗುವುದೆಂದು ಡಂಗುರ ಹೊಯ್ಸಿರಿ... ಎಲ್ಲಿಯೂ ಸಿಕ್ಕಲೊಲ್ಲಳೆ? ಪಕ್ಷಿ ಪಂಜರದಿಂದ ಹಾರಿಹೋಯಿತೆ? ಕೊಳ್ಳೆ ಹೊಡೆಯಿರಿ, ಕೊಳ್ಳಿ ಇಡಿರಿ, ಕೊಲ್ಲಿರಿ, ಕೊಚ್ಚಿರಿ........' (ಬರಬರುತ್ತ ಮೊಗಲ ಸೈನಿಕರ ಅಬ್ಬರ, ಶ್ರೀನಗರನಿವಾಸಿಗಳ ಹಾಹಾಕಾರ ಕಡಿಮೆಯಾಗಿ ಸ್ಮಶಾನಶಾಂತಿ ಇಳಿಯುತ್ತದೆ ಶ್ರೀನಗರದ ಮೇಲೆ) ಆ ರುದ್ರ ಮೌನ ಆಗಾಗ ಭಂಗಗೊಳ್ಳುವುದು ಹದ್ದುಗಳ ಸದ್ದಿನಿಂದ ಮಾತ್ರ.

* * *

(ಜೆಹಲಮ್ ನದಿಯ ದಂಡೆಯ ಮೇಲಿನ ಪಾಂಥ್ ಫೋರ್ ಗ್ರಾಮಕ್ಕೆ ಬರುತ್ತಾಳೆ ಹಬ್ಬಾ ಖಾತೂನ್ ರೈತರ ರಕ್ಷೆಯಲ್ಲಿ. ಈ ಚೇತೋಹಾರಿ ಸ್ಥಾನವನ್ನು ನೋಡಿ ಆನಂದಮಯಿಯಾಗಿ ಕೇಳುತ್ತಾಳೆ.)

ಹಬ್ಬಾ: ಇದು ಯಾವ ತಾಣ ನನ್ನನ್ನು ರಕ್ಷಿಸಿದ ರೈತಬಾಂಧವರೇ?

ರೈತರಲ್ಲೊಬ್ಬ : ಇದನ್ನು ಪಾಂಥ್ ಫೋರ್ ಎಂದು ಕರೆಯುತ್ತಾರೆ ಒಡತಿ.

ಹಬ್ಬಾ : ನನ್ನ ಕೊನೆಯ ದಿನಗಳನ್ನು ಕಳೆಯಲು ತಕ್ಕ ಸ್ಥಳವಿದು. ಇಲ್ಲಿ ಅಲ್ಲಾನನ್ನು ನೆನೆಯುತ್ತ ದಿನಗಳೆಯುವೆ. ಮೊಗಲ ಸಾಮ್ರಾಟರ ಸೇನೆಯ ಕಠೋರ ಆಜ್ಞೆಯನ್ನು ಸಹ ಲೆಕ್ಕಿಸದೆ ನೀವು ರಕ್ಷಿಸಿದಿರಿ ನನ್ನನ್ನು. ನಿಮ್ಮ ಉಪಕಾರವನ್ನು ಹೇಗೆ ತೀರಿಸಲಿ? ನಾನೇ ಪರಾವಲಂಬಿಯೀಗ!

ರೈತರಲ್ಲಿ ಇನ್ನೊಬ್ಬ : ಹಸಿವೆಯಿಂದ ಸಾಯುತ್ತಲಿದ್ದ ಸಾವಿರಾರು ರೈತರನ್ನು ರಕ್ಷಿಸಿದವರು ನೀವು. ನಿಮ್ಮಿಂದ ಬದುಕಿದ ನಾವು ನಿಮಗೆ ಮಾಡಿದ ಸಣ್ಣ ಸೇವೆ ಉಪಕಾರವೆ ಒಡತಿ? ಸುಖದ ಸುಪ್ಪತ್ತಿಗೆಯಲ್ಲಿದ್ದ ನೀವು ಈ ಕಾಡಿನಲ್ಲಿ, ಈ ಮುರುಕು ಗುಡಿಸಲಿನಲ್ಲಿ ಹೇಗೆ ದಿನಗಳೆಯುವಿರೋ ಅಲ್ಲಾನೇ ಬಲ್ಲ!

ಮತ್ತೊಬ್ಬ : ಅರಮನೆಯ ದೀಪ ಗುಡಿಸಿಲಿನಲ್ಲಿ ಉರಿಯುವಂತಾಯಿತೆ! ನಿಮ್ಮಂಥ ಪುಣ್ಯಾತ್ಮರಿಗೆ ಇಂಥ ಕೆಟ್ಟ ಕಾಲ ಬರಬಾರದಾಗಿದ್ದಿತು ಒಡತಿ!

ಹಬ್ಬಾ : ಅರಮನೆಗಿಂತ ನಿಮ್ಮ ಪ್ರೀತಿಯ ಪ್ರತೀಕವಾದ ಈ ಗುಡಿಸಲಿನಲ್ಲಿ ನಿಜವಾಗಿ ನೆಮ್ಮದಿಯಿಂದಿರುವೆನು ಅಣ್ಣಂದಿರೆ. ಆತ್ಮರಹಿತ ಅರಮನೆಗಿಂತ ಮಾನವೀಯತೆಯ, ಮುಗ್ಧತೆಯ, ಹೃದಯವಂತಿಕೆಯ ಸಂಕೇತದಂತಿರುವ ಈ ಗುಡಿಸಲೇ ಸ್ವರ್ಗ ನನಗೆ!

ಇನ್ನೊಬ್ಬ : ನಿಮಗೆ ಯಾವುದೇ ನೆರವು ಬೇಕೆನಿಸಿದರೂ ನಮ್ಮನ್ನು ಕರೆಯಲು ಮರೆಯಬೇಡಿ ಒಡತಿ. ನೀವಿಲ್ಲಿ ನಿಲ್ಲಲು ಒಪ್ಪಿದುದೇ ನಮ್ಮ ಭಾಗ್ಯ! ನಿಮಗೆ ಯಾವ ತೊಂದರೆಯೂ ಉಂಟಾಗದಂತೆ, ಯಾವ ಕೊರತೆಯೂ ಉಂಟಾಗದಂತೆ ನೋಡಿಕೊಳ್ಳುವೆವು.

ಹಬ್ಬಾ : ನಿಮ್ಮ ಮೇರೆಮೀರಿದ ಪ್ರೀತಿ ವಿಶ್ವಾಸಗಳಿಗಾಗಿ ನಾನು ಕೊನೆಯವರೆಗೂ ಕೃತಜ್ಞಳಾಗಿರುವೆನು ಅಣ್ಣಂದಿರೆ. ಆದರೆ ನನಗೀಗ ಅಲ್ಲಾನ ರಕ್ಷಣೆಯೊಂದೇ ಸಾಕೆನಿಸುತ್ತಿದೆ! ಇನ್ನುಳಿದ ದಿನಗಳ ಒಂದೊಂದು ನಿಮಿಷವನ್ನು ಅವನ ಸ್ಮರಣೆಯಲ್ಲಿಯೇ ಕಳೆಯಬೇಕೆಂದಿದ್ದೇನೆ. ದಯವಿಟ್ಟು ಇದಕ್ಕೆ ಅನುಮತಿ ನೀಡಿರಿ. ಆಸ್ಪದ ಕೊಡಿರಿ! ನನ್ನ ಮತ್ತು ಅಲ್ಲಾನ ನಡುವೆ ಇನ್ನಾರೂ ನಿಲ್ಲಬೇಡಿರಿ! ನಿಮ್ಮ ಪ್ರೀತಿಯ ನೆರವನ್ನು ನಿರಾಕರಿಸುತ್ತಿರುವೆನೆಂದು ಭಾವಿಸಬೇಡಿರಿ. ನನ್ನ ನಿರ್ಧಾರ ನಿಮ್ಮದೆಂದೇ ತಿಳಿದು ಅದನ್ನು ಒಪ್ಪಿರಿ.

ಮಗುದೊಬ್ಬ : ನಿಮಗೆ ಹೇಗೆ ಸರಿದೋರುವುದೋ ಹಾಗೆಯೇ ಇರಿ ಒಡತಿ.

ಹಬ್ಬಾ : 'ಒಡೆಯ ಒಡತಿ' ಎಂಬ ಪದಗಳನ್ನು ಪ್ರಯೋಗಿಸಬೇಡಿ ಅಣ್ಣಂದಿರೇ! ಯಾರಿಗೆ ಯಾರೂ ಒಡೆಯರಲ್ಲ, ಒಡತಿಯಲ್ಲ, ಎಲ್ಲರಿಗೆ ಒಡೆಯ ಒಬ್ಬನೇ-ಅಲ್ಲಾ! ಲಾ ಇಲಾಹ ಇಲ್ಲಿಲ್ಲಾಹ, ಲಾ ಇಲಾಹ ಇಲ್ಲಿಲ್ಲಾಹ! ನೀವಿನ್ನು ಹೋಗಿರಿ. ನಿಮ್ಮಂಥ ನಿರ್ಮಲಜೀವಿಗಳು ಇರುವವರೆಂದೇ ಭುವಿಗೆ, ಬಾಳಿಗೆ ಬೆಲೆಯಿದೆ!

ಇನ್ನೊಬ್ಬ : ಹೋಗಿ ಬರುವೆವು ತಾಯೆ, ನಿಮ್ಮನ್ನು ಅಲ್ಲಾನೇ ರಕ್ಷಿಸಲಿ!

ಹಬ್ಬಾ : ಹೋಗಿರಿ ಸೋದರರೆ! ನಾನಿಲ್ಲಿ ಇರುವುದನ್ನು ಯಾರಿಗೂ ಅರುಹಬೇಡಿರಿ. ನನ್ನ ಪ್ರಾಣಭಯದಿಂದ ಈ ಮಾತನ್ನು ಹೇಳುತ್ತಿಲ್ಲ. ಇಂದೇ ಅಲ್ಲಾನು ತಾನು ಕೊಟ್ಟ ನನ್ನ ಪ್ರಾಣವನ್ನು ತಿರುಗಿ ತೆಗೆದುಕೊಂಡರೂ ನನಗೆ ಸಂತೋಷವೇ! ನನ್ನ ಕಾರಣದಿಂದ ನಿಮಗೆ ತೊಂದರೆಯಾಗದಿರಲೆಂದು ಹೇಳಿದೆ! ಹೋಗಿರಿ, ಅಲ್ಲಾನ ಕರುಣೆಯಿಂದ ನಿಮ್ಮ ಬದುಕಿನ ಮೇಲೆ ಬರದ ಕರಿನೆರಳು ಬೀಳದಿರಲಿ; ಯುದ್ಧದ ಕಾರ್ಮೋಡ ಕವಿಯದಿರಲಿ; ಕಷ್ಟದ ಕಾರಿರುಳು ಮುಸುಕದಿರಲಿ; ಹೋಗಿರಿ, ಅಲ್ಲಾನ ಪ್ರೀತಿಯ ಮಕ್ಕಳೆ, ಹೋಗಿರಿ-ಮತ್ತೆ ಬರಬೇಡಿರಿ! (ರೈತರು 'ಅಲ್ವಿದಾ' ಖುದಾ ಹಾಫಿಜ್' ಎನ್ನುತ್ತ ಹೋಗುವರು. ಅವರು ಹೋದ ನಿಟ್ಟನ್ನು

ದಿಟ್ಟಿಸಿ ನೋಡಿ) ಹೋದರು! ಎಂಥ ಒಳ್ಳೆಯ ಜನರು ಹಳ್ಳಿಯ ಜನರು! ಇಂಥವರ ನಡುವೆ ಬದುಕುವ ಭಾಗ್ಯ ದೊರೆಯಲಿಲ್ಲ ಹಬ್ಬಾ ಖಾತೂನಳಿಗೆ!

(**ಕಮಾಲ್ ಪ್ರವೇಶಿಸಿ**)

ಕಮಾಲ್ : ಇನ್ನೂ ಕಾಲ ಮೀರಿಲ್ಲ ಹಬ್ಬಾ. ನೀನು ಒಪ್ಪಿದರೆ ಈಗಲೂ ಹಳ್ಳಿಯಲ್ಲಿ ನಾವಿಬ್ಬರೂ ಹಕ್ಕಿಗಳಂತೆ ಇರಬಹುದು!

ಹಬ್ಬಾ : (ಕಮಾಲನನ್ನು ನೋಡಿ ಕಕ್ಕಾವಿಕ್ಕಿಯಾಗಿ) ಯಾರು ಕಮಾಲ್? ನೀನು ಇಲ್ಲಿ? ಸೈನಿಕನ ವೇಷದಲ್ಲಿ?.....

ಕಮಾಲ್ : ಹೌದು ಹಬ್ಬಾ, ಈ ಸೈನಿಕನ ವೇಷದಲ್ಲಿರುವವನು ನಿನ್ನ ಕಮಾಲನೇ. ನಿನ್ನನ್ನು ಹೇಗಾದರೂ ಮಾಡಿ ಪಡೆಯಲೆಂದೇ ಅಕಬರ ಬಾದಷಾಹರ ಸೈನ್ಯದಲ್ಲಿ ಸೇರಿದೆ. ಒಮ್ಮೆ ಅಜೀಜನ ಮನೆಯ ಮೇಲೆ ದಾಳಿಯಿಟ್ಟೆ. ಆಗ ತಿಳಿಯಿತು, ನೀನು ಶ್ರೀನಗರದ ಅರಮನೆ ಸೇರಿದ ಸುದ್ದಿ! ಅಂದಿನಿಂದ ಹಗಲಿರುಳು ಶ್ರಮಿಸಿ ಸೈನ್ಯಾಧಿಕಾರದಲ್ಲಿ ಮೇಲೇರಿದೆ. ಬಾದಷಾಹರು ಕಾಶ್ಮೀರದ ದಂಡಯಾತ್ರೆಯನ್ನು ಕೈಕೊಳ್ಳುವ ಕಾಲಕ್ಕಾಗಿ ಕಾದಿದ್ದು ಅವರು ಕಾಶ್ಮೀರದ ದಾಳಿಗೆ ಆಣತಿ ಇತ್ತೊಡನೆ ಪ್ರಯತ್ನಪಟ್ಟು ಕಾಶ್ಮೀರಕ್ಕೆ ಹೊರಟ ಮೊಗಲ ಸೇನೆಯಲ್ಲಿ ಸೇರಿಕೊಂಡೆ. ಸುಲ್ತಾನ್ ಯೂಸುಫರು ಸೆರೆಸಿಕ್ಕರೂ ನೀನು ಅರಮನೆಯಿಂದ ಪಾರಾಗುವಂತೆ ತಂತ್ರ ಹೂಡಿ ನೆರವು ನೀಡಿದೆ. ಈಗ ನಿನ್ನೆದುರು ನಿಂತಿದ್ದೇನೆ–ನಿನ್ನ ಪ್ರೇಮಭಿಕ್ಷೆಗಾಗಿ ಜೋಳಿಗೆ ಹಿಡಿದು! ನಡೆ, ನಮ್ಮ ಹಳ್ಳಿಗೆ ಹಿಂದಿರುಗೋಣ. ನಿನ್ನ ಶ್ರೀನಗರ ಬೇಡ, ನನ್ನ ಡಿಳ್ಳಿ ಬೇಡ–ನಮ್ಮ ಹಳ್ಳಿಗೆ ಹೋಗೋಣ, ಹಾಯಾಗಿ ಇರೋಣ!

ಹಬ್ಬಾ : ನನ್ನನ್ನು ನನ್ನ ಅಲ್ಲಾನಿಂದ ಅಗಲಿಸಬೇಡ ಕಮಾಲ್, ದಯವಿಟ್ಟು ಅಗಲಿಸಬೇಡ! ಎಲ್ಲಾ ಶುಭಾಶುಭಗಳನ್ನು ಉಂಡು, ಕಹಿ ಸಿಹಿಗಳನ್ನು ಅನುಭವಿಸಿ, ಬಂಧನಗಳನ್ನು ಕಳಚಿ ಅಲ್ಲಾನನ್ನು ಅರಸಿ ಇಲ್ಲಿಗೆ ಬಂದಿದ್ದೇನೆ. ನೀನು ಹೊಸ ಬಂಧನವಾಗಿ ಬರಬೇಡ, ಸುವರ್ಣಶೃಂಖಲೆಯನ್ನು ತರಬೇಡ! ಒಲವಿಗೆ ಒಡಲ ಹಂಗೇಕೆ? ನನ್ನ ಕೈ ಹಿಡಿಯದೆಯೆ ನೀನು ನನ್ನನ್ನು ಪ್ರೀತಿಸಬಹುದಲ್ಲ. ಜನ್ಮ ಜನ್ಮಾಂತರಗಳವರೆಗೆ ನನಗಾಗಿ ಕಾಯಲು ಸಿದ್ಧನಿದ್ದ ನೀನು ಈ ಒಂದು ಜನ್ಮ ಮುಗಿಯುವವರೆಗೆ ಕಾಯಲಾರೆಯಾ?

ಕಮಾಲ್ : ಈಗ ನೀನು ಕಾಯುವ ಅಗತ್ಯ ಉಳಿದಿಲ್ಲವಲ್ಲ ಹಬ್ಬಾ, ನಮ್ಮ ಒಲವಿನ ದಾರಿಯಲ್ಲಿದ್ದ ಎಲ್ಲ ಎಡರು ಕಂಟಕಗಳೂ ಅಲ್ಲಾನ ಕೃಪೆಯಿಂದ ದೂರಾಗಿವೆ. ನಾವೇಕೆ ಕೂಡಬಾರದಿನ್ನು?

ಹಬ್ಬಾ : ಮನುಜನೊಲವಿನ ದಾರಿ ದಾಟಿ ಅಲ್ಲಾನ ಒಲವಿನ ದಾರಿಯಲ್ಲಿ ಕಾಲಿರಿಸಿದ್ದೇನೆ ನಾನೀಗ ಕಮಾಲ್! ನೀನು ನನ್ನನ್ನು ಪ್ರೀತಿಸುವುದು ನಿಜವಾದರೆ

ಅಲ್ಲಾನ ದಾರಿಯಲ್ಲಿ ಅಡ್ಡ ನಿಲ್ಲಬೇಡ, ಅಡ್ಡಿಯಾಗಬೇಡ! ನನ್ನನ್ನು ನನ್ನ ದಾರಿಗೆ ಬಿಟ್ಟು ಬಿಡು!

ಕಮಾಲ್ : ಆಗಲಿ ಹಬ್ಬಾ, ನಿನಗೆ ಇಷ್ಟವಿಲ್ಲದುದು ನನಗೂ ಇಷ್ಟವಿಲ್ಲ! ಹೊರಟೆ–ಮುಂದಿನ ಜನ್ಮದಲ್ಲಿ ಮಿಲನ, ಖುದಾ ಹಾಫಿಜ್!

ಹಬ್ಬಾ : ಖುದಾ ಹಾಫಿಜ್! (ಕಮಾಲನು ಹೋಗುವನು. ಅವನು ಹೋದ ದಾರಿಯತ್ತ ನಸು ಹೊತ್ತು ನಿಟ್ಟಿಸಿ) ಮತ್ತೊಂದು ಬಂಗಾರದ ಬೇಡಿ ಕಳಚಿತು. ಇಂದು ಬಂಧನರಹಿತಳು ನಾನು. ಸ್ವತಂತ್ರಳು ನಾನು....ಅಲ್ಲ. ಅಲ್ಲಾನ ಕರುಣೆಯ ರಸವರ್ಷಕ್ಕಾಗಿ ಕಾದಿರುವ ಕಾಳ್ಬುರ ನಾನು! ಲಾ ಇಲಾಹ ಇಲ್ಲಿಲ್ಲಾಹ, ಲಾ ಇಲಾಹ ಇಲ್ಲಿಲ್ಲಾಹ! (ಮೇಲಿನಿಂದ ಮುತ್ತಿನಂತಹ ಹನಿಗಳು ಸುರಿಯುವುವು. ತೆರೆ ಇಳಿಯುವುದು)

ನಿರ್ಬಂಧನ

ಅಕ್ಕಮಹಾದೇವಿಯ ಅಮರ ಜೀವನದ ಅರುಂಧತೀ ದರ್ಶನ

ಪಾತ್ರ ಪರಿಚಯ :

ಅಕ್ಕಮಹಾದೇವಿ

ನಿರ್ಮಲ ಸುಮತಿಯರು–ಅಕ್ಕನ ತಂದೆತಾಯಿಯರು

ಗುರುಲಿಂಗದೇವ–ಅಕ್ಕನ ಗುರು

ಕೌಶಿಕ–ಉಡುತಡಿಯ ದೊರೆ

ಅಮಾತ್ಯ–ಕೌಶಿಕನ ಮಂತ್ರಿ

ಬಸವಣ್ಣ

ನೀಲಾಂಬಿಕೆ

ಕಿನ್ನರಿಯ ಬ್ರಹ್ಮಯ್ಯ

ಪ್ರಭುದೇವ ಮತ್ತು ಇತರ ಪ್ರಮಥರು

ನಿಪುಣೆ, ಚತುರ–ಕೌಶಿಕನ ಅರಮನೆಯ ಪರಿಚಾರಿಕೆ, ಪರಿಚಾರಕರು

ಕಾಮುಕ ಇತ್ಯಾದಿ ಅಪ್ರಮುಖ ಪಾತ್ರಗಳು

ನಿರ್ಬಂಧನ

ನೋಟ ೧

ತೆರೆ ಏಳುವ ಮುನ್ನ ತೆರೆತೆರೆಯಾಗಿ ಬರುವುದು ವಚನ-ವಿತಾನ:

"ನಿನ್ನರಿಕೆಯ ನರಕವೇ ಮೋಕ್ಷ ನೋಡಯ್ಯ!

ನಿನ್ನನರಿಯದ ಮುಕ್ತಿಯೇ ನರಕ ಕಂಡಯ್ಯ!

ನೀನೊಲ್ಲದ ಸುಖವೇ ದುಃಖ ಕಂಡಯ್ಯ!

ನೀನೊಲಿದ ದುಃಖವೇ ಪರಮಸುಖ ಕಂಡಯ್ಯ!

ಚೆನ್ನಮಲ್ಲಿಕಾರ್ಜುನಯ್ಯಾ- ನೀ ಕಟ್ಟಿ ಕೆಡಹಿದ ಬಂಧನವೇ ನಿರ್ಬಂಧನವೆಂದಿಪ್ಪೆನು!"

(ತೆರೆ ಏಳುತ್ತದೆ. ತೆರೆ ಏಳುತ್ತಿರುವಂತೆ ತೋರತೊಡಗುವ ನಿರ್ಮಲ ಸುಮತಿಯರ ಮನೆಯಲ್ಲಿ ಉಕ್ಕುವ ದುಃಖದಿಂದ ಸುಕ್ಕಿರುವ ಅಕ್ಕಮಹಾದೇವಿಯ ತಂದೆ ತಾಯಿಗಳು ಇನ್ನಷ್ಟು ದಿಗ್ಭ್ರಾಂತರಾಗುವಂತೆ "ನೀ ಕಟ್ಟಿ ಕೆಡಹಿದ ಬಂಧನವೇ ನಿರ್ಬಂಧನವೆಂದಿಪ್ಪೆನಯ್ಯಾ!" ಎಂದು ಇನ್ನೊಮ್ಮೆ ಉದ್ಗರಿಸುತ್ತಾಳೆ).

ಸುಮತಿ : ಇದರರ್ಥ ಕೌಶಿಕನ ಕೈಹಿಡಿಯಲು ಮನಸ್ಸು ಕಲ್ಲು ಮಾಡುತ್ತಿರುವೆಯೆಂದೇನಮ್ಮ?

ಅಕ್ಕಮಹಾದೇವಿ : ಚೆನ್ನಮಲ್ಲಿಕಾರ್ಜುನನು ತನಗೊಲಿದವಳನ್ನು ಕೌಶಿಕನ ಅರಮನೆಗೆ ಅದೆಂತು ಕಳಿಸುವನು ನೋಡುವೆನಮ್ಮ! ಚೆನ್ನಮಲ್ಲಿಕಾರ್ಜುನನನ್ನೇ ಕೇಳುವೆನಮ್ಮ-ನಿನ್ನನೊಲಿದುದಕೆ ಇದೇ ಫಲವೇನೆಂದು! (ಉದ್ವೇಗ ಹೆಚ್ಚಲು ವಚನ ಹೊಮ್ಮುವುದು)

ಪುಣ್ಯ ಪಾಪಂಗಳನರಿಯದ ಮೊದಲು

ಭವಭವಂಗಳಲಿ ಬಂದೆನಯ್ಯಾ!

ನಂಬಿ ಶರಣುವೊಕ್ಕೆ ಕೇಳಯ್ಯಾ!

ನಿಮ್ಮನೆಂದೂ ಅಗಲದಂತೆ ಮಾಡಿ ನಡೆಯಿಸಯ್ಯಾ!

ನಿಮ್ಮ ಧರ್ಮ, ನಿಮ್ಮ ಧರ್ಮ,

ನಿಮ್ಮನೊಂದೇ ಬೇಡುವೆನು–

ಎನ್ನ ಬಂಧನ ಬಿಡುವಂತೆ ಮಾಡಯ್ಯಾ,

ಚೆನ್ನಮಲ್ಲಿಕಾರ್ಜುನಯ್ಯಾ!

ನಿರ್ಮಲ : ಮಹಾಕರುಣಿ ಮಲ್ಲಿಕಾರ್ಜುನ, ಕೃಪೆದೋರು, ಕಾಪಾಡು ಈ ನಿನ್ನ ಕಾರುಣ್ಯದ ಶಿಶುವನ್ನು, ಮಾಡದಿರು ಇವಳ ಕೌಶಿಕನ ಕಾಮಯಜ್ಞದ ಪಶುವನ್ನು!

ಸುಮತಿ : ಮಹಾಮಾತೆ ಭ್ರಮರಾಂಬೆ, ಕೌಶಿಕನ ಮನದಲ್ಲಿ ನಿಂತು ಮಹಾದೇವಿಯ ಮೂರು ಕರಾರುಗಳನ್ನು ಅವನು ಒಪ್ಪದಂತೆ ಮಾಡು, ಈ ದುರಂತ ತಪ್ಪುವಂತೆ ಮಾಡು!

ಅಕ್ಕಮಹಾದೇವಿ (ಅನನ್ಯಶರಣತೆಯೊಡನೆ)

ಆಲಿಸೆನ್ನ ಬಿನ್ನಪವ, ಲಾಲಿಸೆನ್ನ ಬಿನ್ನಪವ,

ಪಾಲಿಸೆನ್ನ ಬಿನ್ನಪವ!

ಏಕೆನ್ನ ದುಃಖವ ನೋಡೆಯಯ್ಯಾ?

ನೀನಲ್ಲದೆ ಮತ್ತಿಲ್ಲ, ಮತ್ತಿಲ್ಲ!

ನೀನೆ ಎನಗೆ ಗತಿ, ನೀನೇ ಎನಗೆ ಮತಿಯಯ್ಯಾ

ಚೆನ್ನಮಲ್ಲಿಕಾರ್ಜುನಾ!

ಸುಮತಿ : (ಕರುಳ ತಳಮಳವೆ ಸ್ವರವಾದಂತೆ) ಎತ್ತಣ ವೈಹಾಳಿಯೋ, ಎತ್ತಣ ಕೌಶಿಕನೋ–ಎತ್ತಣಿಂದ ಬಂದುದವ್ವಾ ಈ ವಿಪತ್ತು ನನ್ನ ಸುಕುಮಾರಿಗೆ! ಕಳಿಸುವುದೆ ಇವಳ ಕರಿನೀರಿಗೆ? ಕೌಶಿಕನ ರಾಜ್ಯದಲ್ಲಿರದೆ ಮರುಭೂಮಿಯಲ್ಲಾದರೂ ಮನೆಮಾಡಬಾರದಾಗಿದ್ದಿತೆ ನಾವು?

ನಿರ್ಮಲ : ದೊರೆಯನ್ನೇಕೆ ದೂರುವಿ ಸುಮತಿ? ನಮ್ಮ ದುರದೃಷ್ಟವನ್ನು ದೂರು!

ಅಕ್ಕಮಹಾದೇವಿ : (ಕಂಬನಿದುಂಬಿ) ನಿಮಗೆ ದುರದೃಷ್ಟವಾಗಿ, ಸಂಕಷ್ಟವಾಗಿ ಹುಟ್ಟಿದೆ ನಾನು ತಂದೆ! ನಾನು ಹುಟ್ಟದಿದ್ದರೆ ಅದಾವ ಅನಾಹುತವಾಗುತ್ತಿದ್ದಿತು ವಿಧಾತ? ಏಕೆ ಹುಟ್ಟಿಸಿದೆ ತಂದೆ ತಾಯಿಗಳಿಗೇ ತೊಂದರೆ ತರಲು ಈ ಅದೃಷ್ಟಹೀನಳನ್ನು?

ನಿರ್ಮಲ : (ಸಂತೈಸುತ್ತ) ಹಾಗೆ ಭಾವಿಸಬೇಡ ನಮ್ಮ ಬಾಳಿನ ಭಾಗ್ಯ ನಿಧಿಯೇ,-ನಿನ್ನನ್ನು ಪಡೆದುದಲ್ಲ ನಮ್ಮ ದುರದೃಷ್ಟ-ತಾನು ಮೋಹಿಸಿದ ವಸ್ತು ತನ್ನದಾಗಲೇಬೇಕೆಂಬ ದುರ್ಬುದ್ಧಿಯ ದೊರೆಯ ಪ್ರಜೆಗಳಾಗಿರುವುದು ನಮ್ಮ ದುರದೃಷ್ಟ!

ಗುರುಲಿಂಗದೇವರು : (ಪ್ರವೇಶಿಸುತ್ತ) ಅದು ನಿಮ್ಮ ದುರದೃಷ್ಟವಲ್ಲ, ಬಯಸಬಾರದುದನ್ನು ಬಯಸಿರುವ ಕೌಶಿಕನ ದುರದೃಷ್ಟ!

(ಅಕ್ಕಮಹಾದೇವಿ ದುಃಖದಲ್ಲಿಯೂ ಗಕ್ಕನೆದ್ದು ಗುರುವಿನಡಿಗೆ ಪೊಡಮಡುವಳು. ನಿರ್ಮಲ ಸುಮತಿಯರೂ ಅವರ ಅಡಿಗೆರಗುವರು)

ಅಕ್ಕಮಹಾದೇವಿ – (ಭಕ್ತಿ ನಿರ್ಭರತೆಯೊಡನೆ)

ನರಜನ್ಮವ ತೊಡೆದು ಹರಜನ್ಮವ ಮಾಡಿದ ಗುರುವೆ,

ಭವಬಂಧನ ಬಿಡಿಸಿ ಪರಮ ಸುಖವ ತೋರಿದ ಗುರುವೆ,

ಭವಿ ಎಂಬುದ ತೊಡೆದು ಭಕ್ತೆಯೆಂದೆನಿಸಿದ ಗುರುವೆ,

ಚೆನ್ನಮಲ್ಲಿಕಾರ್ಜುನನ ತಂದೆನ್ನ ಕೈವಶಕೆ ಕೊಟ್ಟ ಗುರುವೆ–

ಶರಣು, ಶರಣು!

ಗುರುಲಿಂಗದೇವ : (ನಸುನಗುತ್ತ) ನರಜನ್ಮವ ತೊಡೆದಿಲ್ಲ, ಹರ ಜನ್ಮವ ಮಾಡಿಲ್ಲ, ಭವಬಂಧನವನ್ನಂತೂ ಬಿಡಿಸಿಯೇ ಇಲ್ಲ! ಭಕ್ತೆಯೆಂದೆನಿಸಿಯೂ ಭವಿಯೊಡನೆ ಬಾಳುವುದು ಬರೆದಿದೆಯೆಂದು ತೋರುತ್ತಿದೆ ನಿನ್ನ ಹಣೆಯಲ್ಲಿ!

ಅಕ್ಕಮಹಾದೇವಿ : (ಹೌಹಾರಿ) ನೀವೂ ತಪ್ಪಿಸಲಾರಿರಾ ಗುರುದೇವಾ ಈ ಘೋರ ದುರಂತವನ್ನು? ತಪ್ಪಿಸಲೇ ಬೇಕು ನೀವಿದನ್ನು ಗುರುವರ! ತಪ್ಪಿಸಿ ಮಲ್ಲಿನಾಥನಿಗೆ ಒಪ್ಪಿಸಿರಿ ನಿಮ್ಮ ಈ ಹಸಾದದ ಹಸುಳೆಯನ್ನು ಗುರುಪುಂಗವ! ಒಂದಲ್ಲ, ಎರಡಲ್ಲ, ಮೂರಲ್ಲ, ನಾಲ್ಕಲ್ಲ– ಎಂಭತ್ತುನಾಲ್ಕು ಲಕ್ಷಯೋನಿಯೊಳಗೆ ಬಂದೆ ಬಂದೆ!

ಬಾರದ ಭವಂಗಳಲ್ಲಿ ಬಂದು ಬಂದು

ಶುಭಾಶುಭಂಗಳನುಂಡೆ, ಉಂಡೆ!

ಹಿಂದಣ ಜನ್ಮಂಗಳೇನಾದೊಡಾಗಲಿ–

ಇಂದು ನೀ ಕರುಣಿಸಾ, ಚೆನ್ನಮಲ್ಲಿಕಾರ್ಜುನಾ!

ಗುರುಲಿಂಗದೇವ : ಕರುಣಿಸುವನು ವತ್ಸೇ, ಕರುಣಿಸುವನು– ಕರುಣಾಮಯ

ಮಲ್ಲಿಕಾರ್ಜುನನು ಕರುಣಿಸುವನು- ಕಾಡಿನೋಡಿ ಕರುಣಿಸುವನು!

ಅಕ್ಕಮಹಾದೇವಿ : (ಅಶಂಕೆಯೊಡನೆ)

ಬಲ್ಲಿದ ಹಗೆಹವ ತೆಗೆವನ್ನಬರ!

ಬಡವನ ಹರಣ ಹೋದ ತೆರನಂತಾಯಿತ್ತು-

ನೀನು ಕಾಡಿನೋಡುವನ್ನಬರ!

ಎನಗಿದು ವಿಧಿಯೆ? ಹೇಳಾ ತಂದೆ!

ತೂರುವಾರನ್ನಬರ ಹೊಳ್ಳು ಹಾರಿಹೋದ ತೆರನಂತಾಯಿತ್ತು!

ಎನಗೆ ನೀನಾವ ಪರಿಯಲ್ಲಿ ಕರುಣಿಸುವೆಯಯ್ಯಾ-

ಚೆನ್ನಮಲ್ಲಿಕಾರ್ಜುನ!

ಗುರುಲಿಂಗದೇವ : ಅರಮನೆಯನೇ ಕರುಣಿಸಿ ಪೊರೆವ ವತ್ಸೆ! ಅಂತಿಂಥ ಮನೆಯನ್ನಲ್ಲ-ಅರಮನೆಯನ್ನು!

ಅಕ್ಕಮಹಾದೇವಿ : (ಕನಲಿ) ಅರಮನೆಯೋ ಸೆರೆಮನೆಯೋ ಗುರುದೇವ?

ಗರುಲಿಂಗದೇವ : ಅರಮನೆ ಸೆರೆಮನೆ ಹೇಗೆ ವತ್ಸೆ?

ಅಕ್ಕಮಹಾದೇವಿ :

ರತ್ನದ ಸಂಕೋಲೆಯಾದರೆ ತೊಡರಲ್ಲವೆ?

ಮುತ್ತಿನ ಬಲೆಯಾದರೆ ಬಂಧನವಲ್ಲವೆ?

ಚಿನ್ನದ ಕತ್ತಿಯಲ್ಲಿ ತಲೆಯ ಹೊಯ್ದರೆ ಸಾಯದಿಪ್ಪರೆ?

ಲೋಕದ ಭಜನೆಯ ಭಕ್ತಿಯಲ್ಲಿ ಸಿಲುಕಿದರೆ

ಜನನ ಮರಣ ಬಿಡುವುದೆ-ಚೆನ್ನಮಲ್ಲಿಕಾರ್ಜುನಾ?

ಸುಮತಿ : ಗುರುದೇವ, ಇದಾಗಲೇ ಹರನ ಕೈಹಿಡಿದ ಮಹಾದೇವಿ ನರನ ಕೈಹಿಡಿವುದು ಸಾಧ್ಯವಿಲ್ಲವೆಂದೇ ತೋರುತ್ತಿದೆ. ಈಗ ಉಳಿದಿರುವುದು ಒಂದೇ ಉಪಾಯ. ಮಹಾದೇವಿ ಹಾಕಿರುವ ಮೂರು ಕಟ್ಟುಗಳನ್ನು ಕೌಶಿಕನು ಒಪ್ಪದಂತೆ ಮಾಡುವುದೊಂದೇ ಉಪಾಯವೀಗ. ತಮ್ಮ ತಪಃಪ್ರಭಾವದಿಂದ ಹಾಗೆ ಮಾಡಿ ಮಹಾದೇವಿಯನ್ನು ಈ ವಿಪತ್ತಿನಿಂದ ಪಾರುಮಾಡಿರಿ ಗುರುವರ!

(ಅಷ್ಟರಲ್ಲಿ ಆಗಮಿಸುವನು ಕೌಶಿಕನ ಅಮಾತ್ಯ)

ಅಮಾತ್ಯ : (ಎಲ್ಲರಿಗೂ ವಂದನೆ ಸಲ್ಲಿಸಿ) ಕೌಶಿಕದೊರೆಗಳ ನಿರೂಪವನ್ನು ತಂದಿರುವೆನು ಶಿವಭಕ್ತ ಶಿವಭಕ್ತೆಯರೆ!

ಅಕ್ಕಮಹಾದೇವಿ : (ತನ್ನಲ್ಲಿ) ಕೌಶಿಕ ದೊರೆಯು ನನ್ನ ಮೂರು ನಿರ್ಬಂಧಗಳನ್ನು ನಿರಾಕರಿಸಿರುವನೆಂಬ ನಿರೂಪವನ್ನೇ ಕೇಳಿಸು ಈ ಕಿವಿಗಳಿಗೆ-ಚೆನ್ನಮಲ್ಲಿಕಾರ್ಜುನ!

ನಿರ್ಮಲ : ಯಾವ ನಿರೂಪ ಅಮಾತ್ಯರತ್ನ?

ಅಮಾತ್ಯ : ಮಹಾದೇವಿಯವರ ಮೂರು ನಿರ್ಬಂಧಗಳೂ ಮಾನ್ಯವಾಗಿವೆ ಮಹಾಪ್ರಭುಗಳಿಗೆಂಬ ನಿರೂಪ!

ಮಹಾದೇವಿ : (ಕಂಗೆಟ್ಟು) ಗುರುದೇವಾ.

ಹಿಂದಣ ಹಳ್ಳ, ಮುಂದಣ ತೊರೆ, ಸಲ್ಲುವ ಪರಿಯೆಂತು ಹೇಳಾ?

ಹಿಂದಣ ಕೆರೆ, ಮುಂದಣ ಬಲೆ, ಹದುಳವಿನ್ನೆಲ್ಲಿಯದು ಹೇಳಾ?

ಕಾಯಯ್ಯಾ, ಕಾಯಯ್ಯಾ-ಚೆನ್ನಮಲ್ಲಿಕಾರ್ಜುನಾ!

ಗುರುಲಿಂಗದೇವ : ಯಾವ ಮೂರು ನಿರ್ಬಂಧಗಳನ್ನು ಹಾಕಿದ್ದೆ ಮಹಾದೇವಿ?

ಮಹಾದೇವಿ : ಯಾವ ಆಸೆಯಿಂದ ದೊರೆ ನನ್ನನ್ನು ಮದುವೆ-ಯಾಗಬಯಸಿರುವನೋ ಆ ಆಸೆಗೇ ಆಧಾರವಿಲ್ಲದಂತೆ ಮಾಡುವ ಮೂರು ನಿರ್ಬಂಧಗಳನ್ನು ಹಾಕಿದ್ದೆ ಗುರುದೇವ. ಈ ಕಟ್ಟುಗಳಿಗೆ ಒಪ್ಪಿ ಮದುವೆಯಾಗುವುದೂ ಆಗದಿರುವುದೂ ಒಂದೇ ಎಂದು ತಿಳಿದು ಮದುವೆಯ ಹವ್ಯಾಸವನ್ನೇ ತೊರೆಯಹುದೆಂದು ತರ್ಕಿಸಿ ಈ ಕಟ್ಟುಗಳನ್ನು ಹಾಕಿದ್ದೆ. ಇಂಥ ಕಠೋರವಾದ ಕಟ್ಟುಗಳನ್ನೂ ಕೌಶಿಕ ದೊರೆ ಒಪ್ಪಬೇಕೆ? ಮುಂದೇನು ಗತಿ ಗುರುದೇವ?

ಗುರುಲಿಂಗದೇವ : ಯಾವ ಕಟ್ಟಳೆಗಳೆಂಬುದನ್ನು ಹೇಳಲೇ ಇಲ್ಲವಲ್ಲ ವತ್ಸೆ?

ಅಕ್ಕಮಹಾದೇವಿ : ಮೊದಲನೆಯ ನಿರ್ಬಂಧ-ನನ್ನ ಮನೋಧರ್ಮಕ್ಕೆ ವಿರುದ್ಧವಾದ ಬಲಾತ್ಕಾರವನ್ನು ಮಾಡಕೂಡದು; ಎರಡನೆಯದು ನನ್ನ ಭಕ್ತಿ ಸಾಧನೆಗೆ ಅಡ್ಡಬರಬಾರದು; ಮೂರನೆಯದು ನೀವೂ ಭಕ್ತಿ ಸಾಧನೆಯತ್ತ ಮನಸ್ಸು ಕೊಡಬೇಕು.

ಗುರುಲಿಂಗದೇವ : ಮೆಚ್ಚಿದೆ ಮಹಾದೇವಿ ನಿನ್ನ ಮೂರು ಕಟ್ಟುಗಳನ್ನು. ಈ ಕಟ್ಟುಗಳಿಗೆ ಕೌಶಿಕ ದೊರೆ ಒಪ್ಪಿರುವಾಗ ನಾಮಮಾತ್ರಕ್ಕೆ ನೀನವರ ಸತಿಯಾದರೆ ತಪ್ಪೇನಿಲ್ಲವೆಂದು ನನಗೆ ತೋರುತ್ತಿದೆ!

ಮಹಾದೇವಿ : (ಹೌಹಾರಿ) ನೀವೂ............ ಗುರುದೇವ........ನೀವೂ (ಮುಂದೆ ಮಾತು ಹೊರಡದಷ್ಟು ಕಂಠ ಬಿಗಿಯುವುದು)

ನಿರ್ಮಲ : ಎಂಥ ಅನಿರೀಕ್ಷಿತ ಅಭಿಮತ ತಮ್ಮದಿದು ಗುರುದೇವಾ! ಈ ಭವಿಗೆ ನೀಡಲೆಂದೇ ಭಕ್ತೆಯನ್ನಾಗಿ ಮಾಡಿದಿರಾ ನಿಮ್ಮ ಈ ನೆಚ್ಚಿನ ಮೆಚ್ಚಿನ ಶಿಷ್ಯಳನ್ನು?

ಗುರುಲಿಂಗದೇವ : ಶಿವಭಕ್ತ ನಿರ್ಮಲ, ಇದು ಚೋದ್ಯವೇನಲ್ಲ ಆದ್ಯರ ಹೃದ್ಯಪಥದಲ್ಲಿ, ಮಾನವೀಯ ಮತದಲ್ಲಿ, ಕಾರಿಕಾಲಮ್ಮೆ, ಹೇರೂರ ಹೆಂಗೂಸು, ವೈಜಕ್ಕವ್ವೆ, ಮಾಂಗಾಯಕ್ಕ ಮೊದಲಾದವರ ಚರಿತ್ರೆಯನ್ನು ಮರೆತಿರಾ? ಅವರಂತೆ ಮಹಾದೇವಿಯೂ ಭವಿಯೊಡನಿದ್ದೇ ಭವವನ್ನು ಗೆಲ್ಲಬೇಕೆಂಬುದು ಶಿವನಿಚ್ಛೆಯಿದ್ದರೆ ಯಾರೇನ ಮಾಡಲಾಗುವುದು? ಅವನಿಚ್ಛೆಗೆ ತಲೆಬಾಗುವುದು, ವ್ಯಥೆಯಲ್ಲಿ ಮಾಗುವುದು, ಸಾಧನೆಯಲ್ಲಿ ತನು ತಾನಾಗುವುದು–ಇದು ಗುರಿ, ಇದು ದಾರಿ!

ಅಮಾತ್ಯ : ಗುರುಗಳ ಅಭಿಮತ ಸಮ್ಮತವಾಗಲಿ ತಮಗೆ ಮಹಾದೇವಿಯವರೆ! ಕೌಶಿಕ ಪ್ರಭುಗಳು ನುಡಿದಂತೆ ನಡೆಯುವವರು. ನಿಮ್ಮ ಮೂರು ನಿಯಮಗಳನ್ನು ಅಕ್ಷರಶಃ ಪಾಲಿಸುವರೆಂಬಲ್ಲಿ ಅನುಮಾನ ಬೇಡ!

ಅಕ್ಕಮಹಾದೇವಿ : (ಹತಾಶಳಾಗಿ)

ಸಂಸಾರವೆಂಬುದು ಹಗೆಯಯ್ಯಾ ತಂದೆ!

ವಂಶ ವಂಶದಪ್ಪದೆ ಎನ್ನುವನರಸಿಕೊಂಡು

ಬರುತ್ತಿದೆಯಯ್ಯಾ!

ಎನ್ನುವನರಸಿಯರಸಿ

ಹಿಡಿದು ಕೊಲ್ಲುತಿದೆಯಯ್ಯಾ!

ನಿಮ್ಮ ಮೊರೆವೊಕ್ಕೆ ಕಾಯಯ್ಯಾ!

ಎನ್ನ ಬಿನ್ನಪವನವಧಾರು, ಎನ್ನ ಬಿನ್ನಪವನವಧಾರು–

ಚೆನ್ನಮಲ್ಲಿಕಾರ್ಜುನಾ!

ಗುರುಲಿಂಗದೇವ : (ಸಂತೈಸುವ ಸ್ವರದಲ್ಲಿ) ಮರುಗದಿರು ಮಗಳೆ, ನೀನು ಈ ಅಗ್ನಿಪರೀಕ್ಷೆಯಲ್ಲಿ ಉತ್ತೀರ್ಣಳಾಗಿ, ಉಜ್ವಲೋಜ್ವಲಳಾಗಿ ಹೊರಬೀಳುವೆ! ರಾಕ್ಷಸೇಶ್ವರನ ಅಶೋಕವನದಲ್ಲಿದ್ದೂ ಸೀತಾಮಾತೆ ಪರಿಪೂತೆಯಾಗಿ ಉಳಿದಂತೆ ನೀನು ಕೌಶಿಕನ ಅರಮನೆಯಲ್ಲಿದ್ದೂ ಶರಣತನವನ್ನು ಸಾಧಿಸಿ ಧರೆಗೆ ಬೆಳಕಾಗುವಿ! ನಿನ್ನಲ್ಲಿ ನಿನಗೆ ವಿಶ್ವಾಸವಿಲ್ಲವೆ? ನಿನ್ನ ಚೆನ್ನಮಲ್ಲಿಕಾರ್ಜುನನಲ್ಲಿ

ನಿನಗೆ ವಿಶ್ವಾಸವಿಲ್ಲವೆ? ನಿನ್ನ ಉದಾತ್ತ ಆದರ್ಶದಲ್ಲಿ ನಿನಗೆ ವಿಶ್ವಾಸವಿಲ್ಲವೆ? ಇದ್ದರೆ ತವರುಮನೆಯೇನು, ಅರಮನೆಯೇನು, ಸೆರೆಮನೆಯೇನು, ಊರೇನು, ಅಡವಿಯೇನು ಅರಿತ ಶರಣರಿಗೆ, ನುರಿತ ಸಾಧಕರಿಗೆ? ಯಾರುಬಲ್ಲರು, ಮಹಾದೇವಿಯನ್ನು ಸಂಸಾರಕ್ಕೆಳೆಯಲು ಹೊರಟಿರುವ ಕೌಶಿಕ ದೊರೆಗಳನ್ನೇ ಮಹಾದೇವಿಯು ಪ್ರಾಪಂಚಿಕದಿಂದ ಪರಮಾರ್ಥಕ್ಕೆಳೆಯಬಹುದು! ಈ ಒಂದು ಸಾಧ್ಯತೆಯನ್ನು ಶೋಧಿಸಿ ಸಾಧಿಸಲಾದರೂ ನೀನೀ ವಿವಾಹಕ್ಕೆ ಒಪ್ಪಿಬಿಡು ವತ್ಸೆ! ನಿನ್ನ ಪಣವೇ ಗೆಲ್ಲುವುದು ಕೊನೆಗೆ!

ಅಕ್ಕಮಹಾದೇವಿ : (ಶರಣಾಗತಿಯ ಸ್ವರದಲ್ಲಿ) ಆಗಲಿ ಗುರುದೇವ,

ಲೋಕವ ಹಿಡಿದು ಲೋಕವ ಹಿಂಗಿದಂತಿಪ್ಪೆ;

ನಿರಾಕಾರವಿಡಿದು ಸಾಕಾರದಲ್ಲಿ ನಡೆವೆ;

ಹೊರಗೆ ಬಳಸಿ ಒಳಗೆ ಮರೆದಂತಿಪ್ಪೆ;

ಬೆಂದ ನುಲಿಯಂತೆ ಹುರಿಗುಂದದಂತಿಪ್ಪೆ;

ಕೇಳಾ, ಎನ್ನದೇವ ಚೆನ್ನಮಲ್ಲಿಕಾರ್ಜುನಯ್ಯನೊಳಗಾಗಿ

ಹತ್ತರೊಡನೆ ಮತ್ತೊಬ್ಬಳಾಗಿಪ್ಪೆನಯ್ಯಾ!

ಅಮಾತ್ಯ : (ಹಿಗ್ಗಿ) ಕೌಶಿಕ ಪ್ರಭುಗಳ ಭಾಗ್ಯವೇ ಭಾಗ್ಯ! ನನಗೀಗ ಈ ಸಂತಸದ ಸಂಗತಿಯನ್ನು ಅವರಿಗೆ ತಿಳಿಸುವ ಭಾಗ್ಯ, ಪರಮಭಾಗ್ಯ! ರಾಣಿ ಮಹಾದೇವಿಯವರಿಗೆ ಮಂತ್ರಿಯ ವಿನಮ್ರ ಪ್ರಣಾಮಗಳು; ಗುರುಗಳಡಿಗಳಿಗೆ ಪ್ರಣಾಮಗಳು! (ಹೋಗುವನು)

ಅಕ್ಕಮಹಾದೇವಿ : (ವ್ಯಂಗ್ಯವಾಗಿ) ರಾಣಿ! ರಾಣಿಯಾಗುವೆಯಾ ಪ್ರಾಣಿ?

ಅಲ್ಲೆಂದೊಡೆ ಉಂಟೆಂಬುದೀ ಮಾಯೆ!

ಒಲ್ಲೆನೆಂದೊಡೆ ಬಿಡದೀ ಮಾಯೆ!

ಎನಗಿದು ವಿಧಿಯೆ?

ಚೆನ್ನಮಲ್ಲಿಕಾರ್ಜುನಯ್ಯಾ–

ಒಪ್ಪಿ ಮೊರೆವೊಕ್ಕೊಡೆ ಮತ್ತುಂಟೆ?

ಕಾಯಯ್ಯ, ಕಾಯಯ್ಯ, ಶಿವಧೋ, ಶಿವಧೋ!

(ಮಾತು ಮುಗಿಯುತ್ತಿರುವಂತೆ ತೆರೆ ಬೀಳುವುದು)

ನೋಟ ೨

(ಪುರವೀಥಿಯಲ್ಲಿ ಕೌಶಿಕನ ಅರಮನೆಯ ಚಾಕರ ಚತುರ ಮತ್ತು ಅವನ ಹೆಂಡತಿ ನಿಪುಣೆ)

ಚತುರ : ಸ್ವಲ್ಪ ಹತ್ತಿರ ಹತ್ತಿರ ಬಾರೇ ನಿಪುಣೆ, ನಿನಗೂ ರಾಣಿ ಮಹಾದೇವಿಯರ ಗಾಳಿ ಬೀಸಿತೇನು ದೂರ ದೂರ ಇರೋಕೆ?

ನಿಪುಣೆ : ಅಯ್ಯ ನನ್ನ ಚತುರ, ಬೀದ್ಯಾಗ ನಿಂತು ರಾಣೇರ ಸುದ್ದೀ ಮಾತಾಡೋವ್ನು ನೀನೆಂತ ಚತುರಾ ಅಂತೀನಿ.

ಚತುರ : ಆಡದೇನ್ಮಾಡಬೇಕು? ಪಾಪ ನಮ್ಮ ದೊರೆಗಳು, ರತ್ನದಂಥಾ ನಮ್ಮ ದೊರೆಗೋಳು ಹಗಲೂ ಇರುಳೂ ಹಾತೊರಕೊಂಡು ಕುಳಿತಾರ. ಇದರ ಪರಿವೇನು ಇಲ್ದೆ ಜಪಮಾಲಾ ಹಿಡಿದುಕೊಂಡು ಕೂತುಬಿಡೋದೇ ರಾಣಿಯವರು? ಈ ಪರಿ ಮದಿವಿ ಆದ್ರೂ ಯಾಕ ಮಾಡಿಕೋ ಬೇಕಾಗಿತ್ತು?

ನಿಪುಣೆ : ದೊರೆಗಳ ಮ್ಯಾಲೆ ಬಿದ್ದು ಮಾಡಿಕೊಂಡ್ರಲ್ಲ ಮದಿವೀನ, ಗಂಡಸರ ಜಾತೀನೇ ಹೀಗೆ....... ತಾವೇ ಹುಚ್ಚೆದ್ದು ಕುಣ್ದು ಮಾಡಿಕೊಳ್ಳೋದು – ಹಣ್ಣೇ ಹಂಬಲಿಸಿ ಮಾಡಿಕೊಂಡಿತು ಅಂತಾ ಜಂಬಾ ಕೊಚ್ಚಿಕೊಳ್ಳೋದು!

ಚತುರ : ನಮ್ಮ ಕೌಶಿಕ ದೊರೆಗಳೇ ಕುಣಿದು ಮಾಡಿಕೊಂಡರೆ ಮದಿವೀನ?

ನಿಪುಣೆ : ಕುಣಿದಲ್ಲ, ಮೊಂಡತನಮಾಡಿ, ಪಾಪ ಬಡ ತಂದೆ ತಾಯಿಗಳು ಕೊಡದೆ ಇನ್ನೇನ ಮಾಡುವರು ನಾಡಿನ ಒಡೆಯನೇ ಹಟ ಹಿಡಿದು ಕೇಳಿದಾಗ? ಅಲ್ಲಾ, ಒಲ್ಲೆನೆಂದವರ ಮ್ಯಾಲೆ ಬಲಾತ್ಕಾರಮಾಡಿ ಮದಿವಿ ಮಾಡಿಕೊಳ್ಳೋದು, ಏನು ಚೆಂದ? ರಾಜರಾದರೇನಂತೆ, ಅವರಿಗೂ ನೀತಿ ನಡಾವಳಿ ಇರಬಾರದೇನು?

ಚತುರ : (ಬೆದರಿ) ಮೆತ್ತಗೆ ಮಾತಾಡೆ ಮಾತಿನ ಮಲ್ಲಿ, ಯಾರಾದರೂ ಕೇಳಿಬಿಟ್ಟು ದೊರೆಗಳಿಗೆ ದೂರುಕೊಟ್ಟರೆ ಚಾಕರಿ ಹೋದೀತು!

ನಿಪುಣೆ : ಈ ಹಾಳು ಚಾಕರಿ ಹೋದ್ರೆ ಉಪವಾಸ ಸಾಯ್ತೀವೇನು ನಾವು? ಶಿವ ಕೊಟ್ಟ ರಟ್ಟೆ ಗಟ್ಟಿ ಇರುವಾಗ ಯಾರ ಹಂಗೇನು?

ಚತುರ : ಅಬ್ಬಾ, ಎಂತೆಂಥ ದೊಡ್ಡ ದೊಡ್ಡ ಗುಡ್ಡದಂಥಾ ಮಾತಾಡ್ತೀಯಲ್ಲೇ! ಇವೊತ್ತು ಯಾರ ಮಾರೀ ನೋಡಿ ಎದ್ದೀದಿ?

ನಿಪುಣೆ : ಯಾರ ಮಾರೀನೂ ನೋಡಿಲ್ಲ; ನಿನ್ನ ಮಾರೀನಂತೂ ಖಂಡಿತಾ ನೋಡಿಲ್ಲ. ಈ ಸುಟ್ಟ ಮಾರೀ ನೋಡಿ ಎದ್ದಿಲ್ಲಂತಾ ಇಷ್ಟು ಧೈರ್ಯದಿಂದ ಮಾತಾಡ್ತಾ ಇದೇನೆ.

ಚತುರ : ನಂದ್ಯಾಕೆ ಸುಟ್ಟು ಮಾರಿಯೇ ಸುಡದ ಮೋರೆಯವಳೆ?

ನಿಪುಣೆ : ಚಾಕರೀ ಮಾಡ್ತಿದ್ದೂ ಯಾಕಂತಾ ಕೇಳ್ತೀಯಲ್ಲೋ ಚದುರ ಚಂದ್ರಾಮ. ಚಾಕ್ರಿ ಮಾಡೋವ್ರ ಮಾರಿ ಬೆಂಕಿ ಇಲ್ದೇನೇ ಸುಟ್ಟು ಹೋಗಿರುತ್ತೆ! ಅಲ್ಲಿ ಏನಾದರೂ ಕಳೆ ಉಳಿದಿರುತ್ತೆ ಅಂತಾ ತಿಳಿದೀಯೇನು?

ಚತುರ : ಚಾಕರೀ ಯಾಕ ಶಪಿಸ್ತೀಯ? ಎಲ್ಲಾರೂ ರಾಜರಾಗಿರೋಕೆ ಆಗುತ್ತಾ?

ನಿಪುಣೆ : ನಾ ಶಪಿಸಿದ್ದು ಅರಸರ ಚಾಕರೀನ–ಉಳಿದ ಚಾಕರೀನಲ್ಲ.

ಚತುರ : ಅದ್ಯಾಕ?

ನಿಪುಣೆ : ಅರಸರ ಚಾಕರಿ ಮಾಡೋ ಮಂತ್ರಿ ದಳವಾಯಿಗಳೂ ಸತ್ವ ಕಳಕೊಂಡು ಕೌಲೆತ್ತುಗಳಾಗುತ್ತಾರೆ. ದೊರೆ ಹೇಳಿದ್ದಕ್ಕೆಲ್ಲ ತಲೆದೂಗುವುದೊಂದೇ ಅವರ ಕೆಲಸಾ. ಉಳಿದವರ ಪಾಡೇನು?

ಚತುರ : ಇವೊತ್ತು ಎಲ್ಲರಿಗೂ ಆರತಿ ಬೆಳಗುತ್ತಿರುವೆಯಲ್ಲ? ಯಾವ ದಿಕ್ಕಿನ ಗಾಳಿ ಬೀಸಿದೆ?

ನಿಪುಣೆ : ಅಲ್ಲೇನ್ರಿ ಮತ್ತೆ–ಅಕ್ಕಮಹಾದೇವಿಯರು ಒಲ್ಲೆ ಅಂದ ಕೂಡ್ಲೆ ಅರಸರಿಗೆ ಬುದ್ಧಿ ಹೇಳಿ, "ಇಂಥ ಒತ್ತಾಯದ ಮದುವೆ ಬೇಡ ದೊರೆಗಳೆ, ಇದರಿಂದ ಸುಖ ಸಿಕ್ಕದು" ಅಂತಾ ತಿಳಿಹೇಳಿ ಬಿಡಿಸೋದು ಬಿಟ್ಟು ತಾವೂ ತಂತ್ರಹೂಡಿ ಮದುವೆ ಮಾಡಿಬಿಡೋದೆ ಬಡವರ್ನ ಬೆದರಿಸಿ? ಒಲ್ಲದ ಗಂಡನ ಕೂಡ ಯಾವ ಹೆಣ್ಣು ಇದ್ದಾಳು?

ಚತುರ : (ಆಶ್ಚರ್ಯತೆಯಿಂದ) ಇರದೇನ್ಮಾಡ್ತಾಳ!

ನಿಪುಣೆ : ಏನ್ಮಾಡ್ತಾಳೋ ನೋಡ್ರಿ ಮಹಾದೇವಿ ತಾಯಿ! ಪಂಜರದಾಗಿನ ಗಿಳಿ ಯಾವಾಗ ಹಾರಿಹೋಗುತ್ತೋ ಹೇಳೋವ್ರಾರು?

ಚತುರ : (ದಂಗುಬಡಿದು) ಏನು ಪಂಜರವೋ ಏನು ಗಿಳಿಯೋ ಏನು ಹಾರಿ ಹೋಗೋದೋ–ಏನೇನೋ ಬಡಬಡಸ್ತಾ ಇದ್ದೀಯಲ್ಲೆ ಇವೊತ್ತು? ಹುಚ್ಚರ ಆಸ್ಪತ್ರೆಗಾದರೂ ಸೇರಿಸಿ ಬಿಡಲಾ ನಿನ್ನ?

ನಿಪುಣೆ : ಸುತ್ತಲೂ ಹುಚ್ಚರೇ ಇರುವಲ್ಲಿ ಜಾಣರಾಗಿರೋದೇ ಹುಚ್ಚುತನ! ಈ ಅರಮನೆಗಿಂತ ಹೆಚ್ಚಿನ ಹುಚ್ಚರ ಆಸ್ಪತ್ರೆ ಇದೆಯೇನು?

ಚತುರ : (ರೇಗಿ) ಏ ಏ ನಿಪುಣೆ, ಇನ್ನು ನೀನೇ ಬಾಯಿ ಮುಚ್ತೀಯೋ ನಾನೇ ಮುಚ್ಚಲೋ?

ನಿಪುಣೆ : ನೀನು ನನ್ನ ಬಾಯಿ ಮುಚ್ಚಬೋದು–ನನ್ನ ಮನಾ ಮುಚ್ತೀಯಾ? ಮುಚ್ಚು–ಕೆಚ್ಚಿದ್ರೆ!

ಚತುರ : ರಾಣಿ ಮಹಾದೇವಮ್ಮನೋರ ಜೊತೆ ಇದ್ದು ನಿನ್ನ ತಲೆ ಕೆಟ್ಟುಹೋಗಿದೆ. ಇನ್ನು ನೀನಲ್ಲಿಗೆ ಹೋಗ್ದಂತೆ ಮಾಡಲೇಬೇಕು. ಇಲ್ದೆ ಹೋದ್ರೆ ಈ ಗಿಣೀನೂ ಒಮ್ಮೆಲ್ಲೊಮ್ಮೆ ಪಂಜರಾ ಬಿಟ್ಟು ಹಾರಿಹೋದೀತು! ನಡೆನಡೆ ಬಡಬಡ-ತಡವಾಯ್ತು ಚಾಕರಿಗೆ!

(ಹೋಗುವರು. ತೆರೆ ಬೀಳುವುದು)

ನೋಟ ೩

(ತೆರೆಯೆದ್ದಾಗ ಕೌಶಿಕನನ್ನು ತ್ಯಜಿಸಿ ಹೊರಟಿರುವ ಅಕ್ಕಮಹಾದೇವಿ, ಅಂಗಲಾಚುತ್ತ ಹಿಂಬಾಲಿಸಿರುವ ಕೌಶಿಕ, ನಿರ್ಮಲ-ಸುಮತಿಯರು)

ಕೌಶಿಕ : (ದೈನ್ಯದಿಂದ) ದೇವಿ, ನಿನ್ನಾಣೆ, ನಿನ್ನ ಚೆನ್ನಮಲ್ಲಿಕಾರ್ಜುನನಾಣೆ. ಇನ್ನೆಂದೂ ನಿನ್ನ ಮನೋರಥಕ್ಕೆ ವಿರುದ್ಧವಾಗಿ ವರ್ತಿಸೆ ನಾನು. ಈಗ ನಡೆದ ನಿಯಮೋಲ್ಲಂಘನವನ್ನು ಮನ್ನಿಸಿ ನಿನ್ನ ಅರಮನೆಗೆ ಹಿಂದಿರುಗು, ನನಗಾಗಿ ಅಲ್ಲದಿದ್ದರೂ ನಿತ್ಯ ಅಲ್ಲಿ ನೆರೆವ ಸದ್ಭಕ್ತರ ಸದ್ಯೋನ್ಮುಕ್ತರ ಸಲುವಾಗಿಯಾದರೂ ಹಿಂದಿರುಗು!

ಅಕ್ಕಮಹಾದೇವಿ : ದೊರೆಗಳೆ,

ಸಾವಿಲ್ಲದ ಸಹಜಂಗೆ, ರೂಪಿಲ್ಲದ ಚೆಲುವಂಗೆ

ಭಯವಿಲ್ಲದ ಅಭವಂಗೆ, ನಿಶ್ಚಯದ

ನಿಶ್ಚಲಗೆ ನಾನೊಲಿದೆ!

ಚೆನ್ನಮಲ್ಲಿಕಾರ್ಜುನಂಗೊಲಿದ ಕಾರಣ

ಮಿಕ್ಕಿನವರಾರೂ ಸಂಬಂಧವಿಲ್ಲ ನನಗೆ!

ಕೌಶಿಕ : ನಮ್ಮೀರ್ವರಲ್ಲಿ ಸತಿಪತಿ ಸಂಬಂಧ ಉಳಿಯಲಿ, ಉಳಿಯದಿರಲಿ-ನನ್ನ ಅರಮನೆಗೆ ನಿನ್ನ ಸಂಬಂಧ ಉಳಿಯಲಿ ದೇವಿ! ನೀನು ಆ ಅರಮನೆಯನ್ನು ಪ್ರವೇಶಿಸುವ ಮುನ್ನ ಅದೂ ಎಲ್ಲ ಅರಮನೆಗಳಂತೆ ಒಂದು ಅರಮನೆಯಾಗಿದ್ದಿತು. ನೀನು ಅದನ್ನು ಪ್ರವೇಶಿಸಿದ ಮೇಲೆ ಅದೊಂದು ಪವಿತ್ರ ಯಾತ್ರಾಸ್ಥಾನವಾಗಿ ಪರಿಣಮಿಸಿತು ಮುಮುಕ್ಷುಗಳಿಗೆ, ಸಾಧಕರಿಗೆ, ಶರಣರಿಗೆ! ನೀನಿನ್ನೂ ಕೆಲವು ವರ್ಷ ಅಲ್ಲಿ ವಾಸಿಸಿದ್ದಾದರೆ ಆ ಅರಮನೆಯೇ ಅವಿಮುಕ್ತ ಕ್ಷೇತ್ರವಾಗಿ ಬಿಡುವುದು. ಅದಕ್ಕೆ ಆ ಭಾಗ್ಯವನ್ನು ತಪ್ಪಿಸಬೇಡ; ನೀನದನ್ನು ತೊರೆದು

ಹೋಗಬೇಡ! ಕೂಗಿ ಕರೆಯುತ್ತಿದೆ ಅದರ ಒಂದೊಂದು ಹಾಲುಗಲ್ಲು-ಕೇಳದರ ಸೊಲ್ಲು!

ಅಕ್ಕಮಹಾದೇವಿ : ದೊರೆಗಳೆ,

ಕಟ್ಟಿಹಾದ ಬಿದಿರಿನಲ್ಲಿ ಮತ್ತೆ ಕಳಲೆ ಮೂಡಬಲ್ಲುದೆ?

ಸುಟ್ಟಮಡಕೆಯ ಮುನ್ನಿನಂತೆ

ಮರಳಿ ಧರೆಯೆನಿಪ್ಪ ಬಲ್ಲುದೆ?

ತೊಟ್ಟ ಬಿಟ್ಟು ಬಿದ್ದ ಹಣ್ಣು

ಮರಳಿ ತೊಟ್ಟನಪ್ಪಬಲ್ಲುದೆ?

ಕಷ್ಟಕರ್ಮಿ ಮನುಜರು ಕಾಣದೆ ಒಂದ ನುಡಿದರೆ

ನಿಷ್ಠೆಯುಳ್ಳ ಶರಣರು ಮರಳಿ

ಮರ್ತ್ಯಕ್ಕೆ ಬಪ್ಪರೆ!

ಚೆನ್ನಮಲ್ಲಿಕಾರ್ಜುನಾ! ನನ್ನ ಚೆನ್ನಮಲ್ಲಿಕಾರ್ಜುನಾ!

ಕೌಶಿಕ : ನಿನ್ನ ಚರಮಗಮ್ಯವಾದರೂ ಯಾವುದು ದೇವಿ? ನೀನು ಹೊರಟಿರುವುದಾದರೂ ಎಲ್ಲಿಗೆ?

ಅಕ್ಕಮಹಾದೇವಿ : ಪಡೆವುದರಿದು ನರಜನ್ಮವ;

ಪಡೆವುದರಿದು ಹರಭಕ್ತಿಯ;

ಪಡೆವುದರಿದು ಗುರುಕಾರಣ್ಯವ;

ಪಡೆವುದರಿದು ಸತ್ಯಶರಣನುಭಾವವ!

ಇಂತಾಗಿ, ಚೆನ್ನಮಲ್ಲಿಕಾರ್ಜುನಯ್ಯನ ಶರಣರ ಅನುಭಾವದಲ್ಲಿ ಈಸಿ ನಲಿನಲಿದಾಡಲು ಹೊರಟಿದ್ದೇನೆ. ದಯವಿಟ್ಟು ನನ್ನನ್ನು ಹೋಗಗೊಡಿರಿ; ನನ್ನ ದಾರಿಯಲ್ಲಿ ಅಡ್ಡಗಲ್ಲಾಗಿ ನಿಲ್ಲಬೇಡಿರಿ; ನನ್ನ ಜೀವನವಾಹಿನಿಗೆ ಅಣೆಕಟ್ಟು ಕಟ್ಟಲು ಯತ್ನಿಸಬೇಡಿರಿ! ನನ್ನನ್ನು ಹೋಗಗೊಡಿರಿ, ದಾರಿ ಬಿಡಿರಿ!

ಕೌಶಿಕ : ಶರಣರ ಅನುಭಾವಗೋಷ್ಠಿ ಅನುದಿನ ನಡದೇ ಇದೆಯಲ್ಲ ದೇವಿ, ನಿನ್ನ ಅರಮನೆಯಲ್ಲಿ. ಅಲ್ಲಿ ಇನ್ನಾವ ಸೌಕರ್ಯಗಳು, ಸೌಲಭ್ಯಗಳು, ಸಲಕರಣೆಗಳು ಬೇಕು ಹೇಳು! ಎಲ್ಲವನ್ನೂ ಒದಗಿಸುವೆ; ಏನೆಲ್ಲವನ್ನೂ ಏರ್ಪಡಿಸುವೆ. ನಿನ್ನ ಅರಮನೆಯನ್ನು ತೊರೆಯದಿರು; ನಿನ್ನ ಉಡಿಗೆ ಬಿದ್ದಿದ್ದ ಭಕ್ತರನು ಮರೆಯದಿರು! ನೀನಲ್ಲಿಯೇ ಅಭಿನವ ಶ್ರೀಶೈಲವನ್ನು ಸ್ಥಾಪಿಸು! ಇದಿಷ್ಟೂ ಸಾಲದೆ ದೇವಿ?

ಅಕ್ಕಮಹಾದೇವಿ : ಸಾಲದು ದೊರೆಗಳೆ; ನನ್ನ ಆತ್ಮದ ಹಸಿವೆ ಹಿಂಗುವುದು ಅಣ್ಣ ಬಸವಣ್ಣರನ್ನು ನೋಡಿದಾಗಲೇ, ಅವರ ಅಡಿಗಳಿಗೆ ಪೊಡಮಟ್ಟಾಗಲೇ, ಅವರ ಅನುಭವ ಮಂಟಪದಲ್ಲಿ ನಡೆವ ಶರಣರ ಶಿವಾನುಭವ ಗೋಷ್ಠಿಗಳಲ್ಲಿ ಪಾಲುಗೊಂಡಾಗಲೇ, ಪರಮಗುರು ಪ್ರಭುದೇವರ ಪ್ರಸಾದವಾಣಿಯನ್ನು ಅಲಿಸಿದಾಗಲೇ, ಪ್ರಮಥ ಚಿಂತಾಮಣಿ ಚೆನ್ನಬಸವಣ್ಣನವರ ಹೊನ್ನು-ನುಡಿಗಳನ್ನು ಆಲಿಸಿದಾಗಲೇ, ಅಲ್ಲಿರುವ ಪಾವನ ಶರಣೆಯರ ಹರಕೆ ಹಸಾದಗಳನ್ನು ಹೊಂದಿದಾಗಲೇ, ಕಲ್ಯಾಣದ ಪವಿತ್ರ ಪರಿಸರದಲ್ಲಿ, ಪ್ರಕಾಶಮಯ ವಾತಾವರಣದಲ್ಲಿ ಉಸಿರಾಡಿಸಿದಾಗಲೆ!

ಕಾಯದ ಕಾರ್ಪಣ್ಯವರತಿತ್ತು:

ಕರಣಂಗಳ ಕಳವಳವಳಿದಿತ್ತು;

ಮನ ತನ್ನ ತಾರ್ಕಣೆಯ ಕಂಡು

ತಳವೆಳಗಾದುದು!

ಇನ್ನೇವೆನಿನ್ನೇವೆನಯ್ಯಾ

ನಿಮ್ಮ ಶರಣ ಬಸವಣ್ಣನ ಶ್ರೀಪಾದವ ಕಂಡಲ್ಲದೆ

ಬಯಕೆ ಬಯಲಾಗದು!

ಇನ್ನೇವೇನಿನ್ನೇವೆನಯ್ಯಾ-

ಚೆನ್ನಮಲ್ಲಿಕಾರ್ಜುನಾ?

ಕೌಶಿಕ : ನಾನೀಗ ನಿರುತ್ತರನಾದೆ ದೇವಿ. ನಿನ್ನ ದಾರಿಯಲ್ಲಿ ಅಡ್ಡಗಲ್ಲಾಗಿ ನಾನೇಕೆ, ಮೇರುಗಿರಿಯೂ ನಿಲ್ಲಲಾರದು! ನಿನ್ನ ಮಾರ್ಗದಲ್ಲಿ ಜಗದ ಪರ್ವತಗಳೆಲ್ಲ ಅಡ್ಡ ನಿಂತರೂ ಅವುಗಳನ್ನು ಕಸ ಗುಡಿಸಿದಂತೆ ಅತ್ತ ಸರಿಸಿ ಮುಂದುವರಿಯುವ ಅದ್ಭುತ ಆತ್ಮಬಲ ನಿನ್ನಲ್ಲಿದೆ! ನನ್ನ ದಾರಿಗೆ ನೀನು ಬರಲಿಲ್ಲ. ನಿನ್ನ ದಾರಿಗೆ ನಾನು ಬರಲಾಗಲಿಲ್ಲ! ಇನ್ನಾದರೂ ನಿನ್ನ ದಾರಿಗೆ ಬರಲು ಪ್ರಾಮಾಣಿಕ ಪ್ರಯತ್ನವನ್ನು ಮುಂದುವರಿಸುವೆ! ನಿನ್ನ ಪಯಣ, ಪಾವನ ಪಯಣ, ಅನುಪಮ ಪಯಣ ಮುಂದುವರಿಯಲಿ! ಸಿದ್ಧಿಶ್ರೀ ನಿನಗೆ ಮಾಲೆ ಹಾಕಲಿ! ನಿನಗೆ ಮಲ್ಲಿಕಾರ್ಜುನನ ವಲ್ಲಭೆಯಾಗುವ ಭಾಗ್ಯ ಬೇಗ ಲಭಿಸಲಿ!

ಅಕ್ಕಮಹಾದೇವಿ : ದೊರೆಗಳ ಈ ಅವರ್ಣನೀಯ ಔದಾರ್ಯಕ್ಕೆ ಶರಣು. ನಿಮಗೂ ನಿಮ್ಮ ಆರಾಧ್ಯನ ಸಾನಿಧ್ಯಸುಖ ಬೇಗ ಲಭಿಸಲಿ! ನೀವಿನ್ನು ಅರಮನೆಗೆ ಹಿಂದಿರುಗಿರಿ; ಪ್ರಜಾಪಾಲನೆಯ ಹೊಣೆಯನ್ನು ಪೂರೈಸಿರಿ! (ಕೌಶಿಕನು ಕೊನೆಯ ಸಲ ಮಹಾದೇವಿಯ ಮುಖದ ತೇಜಸ್ಸನ್ನು ನೋಡಿ ಕಣ್ಣು ಕುಕ್ಕಿದಂತಾಗಲು ಕಣ್ಣು

ತಗ್ಗಿಸಿ, ತಲೆಬಗ್ಗಿಸಿ ಹೊರಡುವನು. ಅದುವರೆಗೆ ಅದುಮಿಟ್ಟ ಉದ್ವೇಗ ಕೌಶಿಕನ ನಿರ್ಗಮನದಿಂದ ಒಮ್ಮೆಗೇ ಉಕ್ಕಿದಂತಾಗಲೂ ಸುಮತಿ ಮುಂದೆ ಧಾವಿಸಿ, ಅಕ್ಕಮಹಾದೇವಿಯನ್ನು ತೆಕ್ಕೆಯೊಳಗಾಗಿಸಿ ಮಾತಿಗೆ ಮೊದಲು ಮಾಡುವಳು)

ಸುಮತಿ : ಮಗಳೆ, ಕೌಶಿಕ ದೊರೆಗಳ ಅರಮನೆಗೆ ಹಿಂದಿರುಗದಿದ್ದರೆ ಹೋಗಲಿ, ನೀನು ಹುಟ್ಟಿದ ಮನೆಗಾದರೂ ಮರಳಿ ಹೆತ್ತ ಕರುಳಿನ ತಳಮಳವನ್ನು ಶಮನಗೊಳಿಸಮ್ಮ! ನೀನು ಇದ್ದೂರಿನ ಅರಮನೆಯಲ್ಲಿದ್ದಾಗಲೂ ಅದೆಷ್ಟೋ ದೂರದಲ್ಲಿದ್ದಂತೆ ದುಸ್ಸಹವೆನಿಸುತ್ತಿತ್ತು ನಮಗೆ; ನೀನು ಬಹುದೂರದ ಕಲ್ಯಾಣಕ್ಕೆ ಹೋದರೆ ತಲ್ಲಣಿಸದೆ ತಾಯಿಯ ಹೃದಯ? ನಮ್ಮೆಲ್ಲರನ್ನೂ ತಾಳಲಾಗದ ತಲ್ಲಣದಲ್ಲಿ ತಳ್ಳಿ ಅಷ್ಟು ದೂರ ಹೋಗಲು ಹೇಗೆ ಮನಸ್ಸು ಮಾಡಿದೆ ಮಗಳೆ? ಹೇಗೆ ಸೈರಿಸಲಿದನ್ನು? ಹೇಗೆ ಜೀವಿಸಲಿ ವ್ಯಥೆಯ ಚಿತೆಯಲ್ಲಿ?

ನಿರ್ಮಲ : ಮಗಳೆ, ನಿನ್ನ ಮನೆಯೇ ಮಠವೆಂದು ಭಾವಿಸಿ ಅಲ್ಲಿ ಎಂಥ ತಪಸ್ಸನ್ನಾದರೂ ಆಚರಿಸು; ಎಂಥ ಸತ್ಸಂಗಗಳಾದರೂ ನಡೆಸು; ಯಾವ ಅರ್ಚನೆ, ಪ್ರಾರ್ಥನೆಗಳನ್ನಾದರೂ ಪೂರೈಸು! ಆದರೆ ಹೆತ್ತ ಕರುಳಿಗೆ ಹುಡಿ ಹೊಯ್ದು ಹೊರಟು ಹೋಗಬೇಡ! ನಿನ್ನ ವೃದ್ಧ ಮಾತಾಪಿತರ ಇರವಿನ ಒಣಗಿದ ವೃಕ್ಷಕ್ಕೆ ಕಲ್ಪಲತೆಯಾಗಿ ಹಬ್ಬಿ ಹರಡಿದ್ದಿ. ಮತ್ತೆ ಆ ಬರಡು ಮರಗಳಿಗೆ ಮಲ್ಲಿಗೆ ಮಾಧವಿಯಾಗಿ ಹರಡಿ ಅಲ್ಲಿಂದಲೇ ನಿನ್ನ ಅನುಭಾವ ಪುಷ್ಪಗಳ ಸುಗಂಧವನ್ನು ಸೂಸು!

ಅಕ್ಕಮಹಾದೇವಿ: (ನಿಡುಸುಯ್ದು–ತನ್ನಲ್ಲಿಯೇ) ಇನ್ನೂ ಮುಗಿದಿಲ್ಲ ಮಾಯೆಯ ಮಾಯಾಜಾಲ! ಅಣ್ಣನವರು ಹೇಳಿಯೇ ಇದ್ದಾರೆ :

ಜನಿತಕ್ಕೆ ತಾಯಾಗಿ ಹೆತ್ತಳು ಮಾಯೆ;
ಮೋಹಕ್ಕೆ ಮಗಳಾಗಿ ಹುಟ್ಟಿದಳು ಮಾಯೆ;
ಕೂಟಕ್ಕೆ ಸ್ತ್ರೀಯಾಗಿ ಕೂಡಿದಳು ಮಾಯೆ;
ಇದಾವ ಪರಿಯಲ್ಲಿ ಕಾಡಿತ್ತು ಮಾಯೆ!
ಈ ಮಾಯೆಯ ಕಳೆವರೆ ಎನ್ನಳವಲ್ಲ–
ನೀವೆ ಬಲ್ಲಿರಿ, ಕೂಡಲಸಂಗಮದೇವಾ!

ನಿಜ. ಕಾಯಕ್ಕೆ ನೆಳಲಾಗಿ, ಪ್ರಾಣಕ್ಕೆ ಮನವಾಗಿ, ಮನಕ್ಕೆ ನೆನಹಾಗಿ, ನೆನಹಿಂಗೆ ಅರಿವಾಗಿ ಕಾಡುವ ಮಾಯೆ, ಜಗದ ಜಂಗುಳಿಗಳಿಗೆ ಬೆಂಗೋಲನೆತ್ತಿ ಕಾಡುವ ಮಾಯೆ ಸರ್ವವ್ಯಾಪಿ! ಎಂಥ ಬಲ್ಮೆ ಇದರದು? ಬಿಟ್ಟೆನೆಂದರೆ ಬಿಡದೀ ಮಾಯೆ! ಬಿಡದಿದ್ದರೆ ಬೆಂಬತ್ತಿತು ಮಾಯೆ! ಯೋಗಿಗೆ ಯೋಗಿಣಿಯಾಯಿತ್ತು ಮಾಯೆ; ಸವಣಂಗೆ ಸವಣಿಯಾಯಿತ್ತು ಮಾಯೆ; ಯತಿಗೆ ಪರಾಕಿಯಾಯಿತ್ತು

ಮಾಯೆ! ಆದರೂ ನಿನ್ನ ಮಾಯೆಗೆ ನಾನಂಜುವವಳಲ್ಲ. ನಾನಳಕುವವಳಲ್ಲ! ಚೆನ್ನಮಲ್ಲಿಕಾರ್ಜುನಾ, ನಿಮ್ಮಾಣೆ! (ತಂದೆತಾಯಿಗಳತ್ತ ತಿರುಗಿ) ಒಲವಿನ ತಂದೆತಾಯಿಯರೆ, ಸಾಗರಾಭಿಮುಖಿಯಾಗಿ ಹೊರಟ ಗಂಗೆಗೆ ಮತ್ತು ಗಂಗೋತ್ರಿಗೆ ಬಾರೆಂದು ಕರೆಯುವಂತೆ ನನ್ನನ್ನೇಕೆ ಕರೆಯುತ್ತಿರುವಿರಿ? ನಿಮ್ಮ ಮಗಳು ಚೆನ್ನಮಲ್ಲಿಕಾರ್ಜುನನ ಕೂಡುವುದು ನಿಮಗಿಷ್ಟವಿಲ್ಲವೆ?

ಸುಮತಿ : ನಿನ್ನ ಇಷ್ಟ ನಮಗೆ ಅದೆಂತು ಅನಿಷ್ಟವಾದೀತು ಮಗಳೆ? ಆದರೆ ಈ ಎಳೆವಯದಲ್ಲಿ ಏಕಾಕಿನಿಯಾಗಿ ಈ ಘೋರಾರಣ್ಯವನ್ನು ಪ್ರವೇಶಿಸಿ ಹೊರಟಿರುವೆ! ಹೇಗೆ ಪಾರಾಗುವಿ ಈ ಘೋರಾರಣ್ಯವನ್ನು? ಹೇಗೆ ಬದುಕುವಿ ಈ ಕ್ರೂರ ಕಠೋರ ಜಗತ್ತಿನಲ್ಲಿ? ಯಾರ ನೆರವನ್ನು ನೆಚ್ಚಿ ಹೊರಟಿರುವೆ ಮಗಳೆ? ಯಾರು ನಿನಗೆ ಹಸಿವಾದಾಗ ಆಹಾರ, ತೃಷೆಯಾದಾಗ ಉದಕ, ಶಯನಕ್ಕೆ ಶಯ್ಯೆಯನ್ನೊದಗಿಸುವವರು? ನನ್ನೆದೆ ಝುಲ್ಲೆನ್ನುತ್ತಿದೆ ಇದೆಲ್ಲವನ್ನೂ ನೆನೆದಾಗ!

ಅಕ್ಕಮಹಾದೇವಿ : ಇದಕ್ಕೇಕೆ ಇಷ್ಟೊಂದು ವ್ಯಾಕುಲ ತಾಯೆ, ಹಸಿವಾದೊಡೆ ಭಿಕ್ಷಾನ್ನಗಳುಂಟು; ತೃಷೆಯಾದೊಡನೆ ಕೆರೆಹಳ್ಳ ಬಾವಿಗಳುಂಟು; ಶಯನಕ್ಕೆ ಹಾಳು ದೇಗುಲಗಳುಂಟು; ಚೆನ್ನಮಲ್ಲಿಕಾರ್ಜುನಯ್ಯ ಆತ್ಮಸಂಗಾತಕ್ಕೆ ಉಂಟು! ನನಗಾವ ಕೊರತೆಯಿದೆ ತೋರು, ನನಗಾವ ಭಯವಿದೆ ಹೇಳು; ನನಗಾವ ಕಂಟಕಗಳಿವೆ ಕಾಣಿಸು!

ನಿರ್ಮಲ : ನೀನು ಲೋಕವನ್ನೇ ಎದುರಿಸಿ ಬದುಕಬಲ್ಲೆ, ನಿನ್ನ ಗುರಿಯನ್ನೂ ಮುಟ್ಟಬಲ್ಲೆ ಮಗಳೆ. ಆದರೆ ನಿನ್ನನ್ನು ಈ ರೀತಿ ಹೋಗಗೊಟ್ಟರೆ ನಮಗೆ ಜನರೇನಂದಾರು, ಏನೇನು ಆಡಿಕೊಂಡಾರು? ಇದನ್ನೂ ಸ್ವಲ್ಪ ವಿಚಾರಿಸಮ್ಮ! ನಿನ್ನ ಅಗಲಿಕೆಯ ಬಗೆಯ ಬೆಂಕಿಗೆ ನಿಂದಕರ ಕೀಳ್ನುಡಿ ನಂಜು ಕೂಡಿದರೆ ನಮ್ಮ ಬಾಳು ಗೋಳಿನ ಬುಗ್ಗೆಯಾಗದೆ?

ಅಕ್ಕಮಹಾದೇವಿ : ನೀವು ನನಗಿಂತ ತಿಳಿದವರು ತಂದೆ-ನೀವೂ ನಿಂದಾಸ್ತುತಿಗಳಿಗೆ ಇಷ್ಟೊಂದು ಮಹತ್ವವನ್ನು ಕೊಡಬೇಕೆ?

ಬೆಟ್ಟದ ಮೇಲೊಂದು ಮನೆಯ ಮಾಡಿ

ಮೃಗಗಳಿಗಂಜಿದೊಡೆಂತಯ್ಯ?

ಸಮುದ್ರದ ತಡಿಯಲ್ಲಿ ಮನೆಯ ಮಾಡಿ

ನೊರೆತೆರೆಗಳಿಗಂಜಿದೊಡೆಂತಯ್ಯ?

ಸಂತೆಯೊಳಗೊಂದು ಮನೆಯ ಮಾಡಿ

ಶಬ್ದಕ್ಕೆ ನಾಚಿದೊಡೆಂತಯ್ಯ?

ಚೆನ್ನಮಲ್ಲಿಕಾರ್ಜುನಯ್ಯ ಕೇಳಯ್ಯಾ–

ಲೋಕದೊಳಗೆ ಹುಟ್ಟಿರ್ದ ಬಳಿಕ

ಸ್ತುತಿನಿಂದೆಗಳು ಬಂದೊಡೆ ಮನದಲ್ಲಿ

ಕೋಪವ ತಾಳದೇ ಸಮಾಧಾನಿಯಾಗಿರಬೇಕು

ಗುರುಲಿಂಗದೇವ : (ಪ್ರವೇಶಿಸಿ) ಅಡಿ, ಎರಡಡಿಯ ಒಡ್ಡು ಹಾಕಿ ಮಹಾಪೂರವನ್ನು ತಡೆಯಬೇಕೆನ್ನುವ ನಿಮ್ಮ ವ್ಯರ್ಥ ಪ್ರಯತ್ನವನ್ನಿಲ್ಲಿಗೆ ನಿಲ್ಲಿಸಿರಿ. ನಿರ್ಮಲ ಸುಮತಿಯರೆ! ನೂರುಸಲ ನಿಮಗಿದಾಗಲೇ ಹೇಳಿದ್ದೇನೆ. ಈಗ ನೂರೊಂದನೆಯ ಸಲ ಹೇಳುತ್ತೇನೆ– ಮಹಾದೇವಿ ನಿಮ್ಮ ಮಗಳು ನಿಜ, ಆದರೆ ಎಲ್ಲರ ಮಗಳಂತಲ್ಲ ಈಕೆ! ಹೆಣ್ಣಿನ ಬಾಳನ್ನು ಗೌರವದ ಗೌರಿಶಂಕರಕ್ಕೇರಿಸಲು, ಹೆಣ್ಣಿನ ಸ್ವಾತಂತ್ರ್ಯ ಸಾಧನೆಗೆ ಸಿದ್ಧಿಯ ಸುವರ್ಣಕಲಶವಿಡಲು, ಹೆಣ್ಣಿನ ವ್ಯಷ್ಟಿ ಸಮಷ್ಟಿ ಜೀವನಗಳಿಗೆ ಹೊಸ ದಿಶೆಗಳನ್ನು ಹುಟ್ಟಿಸಲು ಹುಟ್ಟಿಬಂದಿರುವ ಕಾರಣಿಕ ಕನ್ಯೆ ಈ ಮಹಾದೇವಿ! ಹಿಂದೊಮ್ಮೆ ಪರ್ವತರಾಜನ ಪುತ್ರಿ ಹರನೇ ಗಂಡನಾಗಬೇಕೆಂದು ಕಟ್ಟುಗ್ರ ತಪಸ್ಸನ್ನಾಚರಿಸಿ ಹರನನ್ನೇ ವರಿಸಿದಳಷ್ಟೆ? ಇಂದು ಅದೇ ಶಪಥವನ್ನು ತೊಟ್ಟು ಅಕ್ಕಮಹಾದೇವಿ ಹೊರಟಿದ್ದಾಳೆ! ತನಗೆ ತಕ್ಕ ಪತಿಯನ್ನು ಪಡೆಯಲು ಹೊರಟಿದ್ದಾಳೆ ಮಹಾಸತಿ! ಆನಂದದಿಂದ ಆಶೀರ್ವದಿಸಿ ಕಳಿಸಿರವಳನ್ನು! ಜಗತ್ತಿನ ಎಷ್ಟು ಜನ ಮಾತಾಪಿತರಿಗೆ ಈ ರೀತಿ ತಮ್ಮ ಮಗಳನ್ನು ಕಳಿಸಿಕೊಡುವ ಮಹದ್ಭಾಗ್ಯ ದೊರೆತಿದೆ? ನಿಮ್ಮ ಅಪೂರ್ವ ಭಾಗ್ಯಕ್ಕಾಗಿ ಹೆಮ್ಮೆಯಿಂದ ಹಿರಿಹಿರಿ ಹಿಗ್ಗಬೇಕು ನೀವು–ಕುಗ್ಗಬಹುದೆ?

ಅಕ್ಕಮಹಾದೇವಿ : (ಆನಂದಪರವಶಳಾಗಿ) ಗುರುದೇವಾ, ಕರುಣೆಯ ಕಿರಣವಾಗಿ ಇಲ್ಲಿಗೂ ತೂರಿ ಬಂದಿರಾ? ನನ್ನ ತಾಯಿತಂದೆಗಳಿಗೆ ದುಃಖ ಶಮನದ ದಾರಿ ತೋರಬಂದಿರಾ?

ನಿತ್ಯವೆನ್ನೆಡೆಗೆ ನಡೆದು ಬಂದಿತ್ತು!

ಮುಕ್ತಿ ಎನ್ನೆಡೆಗೆ ನಡೆದು ಬಂದಿತ್ತು!

ಜಯ ಜಯ ಗುರುವೆ.

ನಮೋ ನಮೋ ಗುರುವೆ

ಪರಮಗುರುವೆ ನಮೋ ನಮೋ!

ಚೆನ್ನಮಲ್ಲಿಕಾರ್ಜುನನು ಎನಗೆ ತೋರಿಕೊಟ್ಟ

ಗುರುವೇ ನಮೋ ನಮೋ!

(ನಮಸ್ಕರಿಸುವಳು)

ಗುರುಲಿಂಗದೇವ : ಅನುಪಮಸಿದ್ಧಿ, ಅಭೂತಪೂರ್ವಸಿದ್ಧಿ ನಿನಗಾಗಿ ಕಾದಿದೆ ವತ್ಸೆ. ಹೋಗಿ ಬಾ! ಮಲ್ಲಿಕಾರ್ಜುನನ ಮದುವಳಿಗೆಯಾಗಿ ಹೊರಟಿರುವೆ, ಅವನ ಅರ್ಧಾಂಗಿಯಾಗಿ ಬಾಳಿ ಬೆಳಗು! ನೀನು ಹುಟ್ಟಿದ ಮನೆಯನ್ನಷ್ಟೇ ಅಲ್ಲ, ಹುಟ್ಟಿದ ನಾಡನ್ನಷ್ಟೇ ಅಲ್ಲ, ಸಮಗ್ರ ನಾರೀಕುಲವನ್ನೇ ಬೆಳಗು!

(ಆಶೀರ್ವದಿಸುವರು)

ಅಕ್ಕಮಹಾದೇವಿ : ಧನ್ಯಳಾದೆ ಗುರುಗಳೆ–ತಮ್ಮ ಆಶೀರ್ವಾದ ಅಭಯರಕ್ಷೆ ನನಗೆ! (ತಂದೆತಾಯಿಗಳಿಗೆರಗಿ) ನೀವು ನನ್ನ ನೋಂಪಿ ಸಿದ್ಧಿಸಲೆಂದು ಹರಸಿರಿ ಹಡೆದ ತಂದೆ ತಾಯಿಗಳೆ! ನಿಮ್ಮೊಡನಿದ್ದು, ನಿಮ್ಮ ಸೇವೆ ಮಾಡಿ ಹೆತ್ತ ಋಣ ತೀರಿಸುವ ಪುಣ್ಯವನ್ನು ಪಡೆದು ಬಂದಿಲ್ಲ ನಾನು, ಕ್ಷಮಿಸಿರಿ.

ಸುಮತಿ : ಯಾವ ಹೆಣ್ಣೂ ಆ ಪುಣ್ಯವನ್ನು ಪಡೆದು ಬಂದಿರುವುದಿಲ್ಲ ಮಗಳೆ. ಹೆಣ್ಣು ಹುಟ್ಟುವುದೇ ಮತ್ತೊಂದು ಮನೆಯನ್ನು ಬೆಳಗಲು. ಒಂದು ಮನೆಯನ್ನು ಮಾತ್ರ ಬೆಳಗದೆ ಅಖಂಡ ಬ್ರಹ್ಮಾಂಡವನ್ನೇ ಬೆಳಗಲು ಹೊರಟಿರುವಿ! ನಿನಗೆ ಅಭಯವಾಗಲಿ, ಜಯವಾಗಲಿ! ಹೋಗಿ ಬಾ!

ನಿರ್ಮಲ : ಎಷ್ಟು ಜನ್ಮಗಳ ಪುಣ್ಯದ ಫಲವೋ–ನೀನು ನಮಗೆ ಮಗಳಾಗಿ ಹುಟ್ಟಿದೆ ಮಹಾದೇವಿ! ನಮಗಿದೇ ಧನ್ಯತೆಯು ಸಾಕು. ಹೋಗಿ ಬಾರಮ್ಮ–ನಿನ್ನ ಹೃದಯದ ಹಂಬಲದಂತೆ ಹರನನ್ನೇ ವರಿಸಿ ಕೃತಾರ್ಥಳಾಗು.

ಗುರುಲಿಂಗದೇವ : ಅಕ್ಕನು ಹುಟ್ಟಿದುದು ನಿಮ್ಮ ಬಹುಜನ್ಮಗಳ ಪುಣ್ಯ ಫಲ ಮಾತ್ರವಲ್ಲ ನಿರ್ಮಲ ಸುಮತಿಯರೆ, ಕನ್ನಡ ನಾಡಿನ ಪುಣ್ಯವೇ ಫಲಿಸಿ ಆಕೆ ಹುಟ್ಟಿದ್ದಾಳೆ! ತನ್ನ ಮಹತ್ಸಾಧನೆಯಿಂದ ಪ್ರಪಂಚಕ್ಕೊಂದು ಪರಂಜ್ಯೋತಿಯಾಗಿ ಪ್ರಕಾಶಿಸುವಳು ನಡೆಯಿರಿನ್ನು! (ಮೂವರೂ ಹೊರಡುವರು ಹೊರಳಿ ಹೊರಳಿ ನೋಡುತ್ತ. ನಿರ್ಮಲ ಸುಮತಿಯರು ಎಷ್ಟು ತಡೆದರೂ ನಿಲ್ಲದ ಅಶ್ರುಗಳು ಅವರ ಅಕ್ಷಿಗಳನ್ನು ತುಂಬಿದುದನ್ನು ನೋಡಿದ ಅಕ್ಕಮಹಾದೇವಿಯ ಕಣ್ಣುಗಳೂ ಕಂಬನಿದುಂಬುವುವು ಕ್ಷಣಕಾಲ. ತಕ್ಷಣ ಅವುಗಳನ್ನು ಒರೆಸಿಕೊಂಡು ಸ್ವತಂತ್ರ ಧೀರಳಾಗಿ ನುಡಿಯುವಳು)

ಅಕ್ಕಮಹಾದೇವಿ : ನಿನ್ನ ಕೃಪೆಯಿಂದ ನನಗೀಗ ನಿರ್ಬಂಧನ ಮಲ್ಲಿಕಾರ್ಜುನ! ಎಷ್ಟು ಬೇಗನೆ ಕಟ್ಟುಗಳನ್ನೆಲ್ಲ ಕತ್ತರಿಸಿ ನನಗೆ ಶುದ್ಧ ಸ್ವಾತಂತ್ರ್ಯದ ವರದಾನವನ್ನು ನೀಡಿದೆ ನೀನು! ಎಂಥ ಕರುಣಿ ನೀನು! (ಸುತ್ತೆಲ್ಲ ಸೂರೆಗೊಂಡಿದ್ದ ನಿಸರ್ಗ ಸೌಂದರ್ಯವನ್ನು ನೋಡಿ ಆನಂದತುಂದಿಲಳಾಗಿ)

ದೃಶ್ಯವಾದ ರವಿಯ ಬೆಳಗು, ಆಕಾಶದ ವಿಸ್ತೀರ್ಣ,

ವಾಯುವಿನ ಚಲನೆ, ತರಗುಲ್ಮಲತಾದಿಗಳಲ್ಲಿಯ,

ತಳಿರು, ಪುಷ್ಪ? ಷಡುವರ್ಣಂಗಳೆಲ್ಲ ಹಗಲಿನ ಪ್ರಭೆ!

ಚಂದ್ರ ಪ್ರಕಾರ, ನಕ್ಷತ್ರ, ಅಗ್ನಿ, ವಿದ್ಯುತ್ ಆದಿಗಳು

ದೀಪ್ತಿಮಯವೆನಿಸಿಪ್ಪವುಗಳೆಲ್ಲ!

ಇರುಳು ನಿನ್ನ ಪೂಜೆ, ಹಗಲಿರುಳು ನಿನ್ನ ಪೂಜೆಯಲ್ಲಿ

ಎನ್ನ ಮರೆದಿಪ್ಪನಯ್ಯಾ-ಚೆನ್ನಮಲ್ಲಿಕಾರ್ಜುನ!

(ಒಮ್ಮೆಗೆ ಎಚ್ಚತ್ತವಳಂತೆ) ಪೂಜಾ ಸಮಯ ಸಮೀಪಿಸಿತು! ಪೂಜೆಗೆ ಪುಷ್ಪಗಳಿವೆ, ನೈವೇದ್ಯಕ್ಕೆ ಫಲಗಳಿವೆ ಮಲ್ಲಿನಾಥನೇ ಬೆಳೆಸಿದ ಈ ವನದಲ್ಲಿ. ಹುಬ್ಬುಗೈಯಿಟ್ಟು ನೋಡಿ) ಅಲ್ಲೊಂದು ದೇಗುಲವಿದ್ದಂತಿದೆ. ಅಲ್ಲಿ ಪೂಜೆ, ಆರೋಗಣೆ. ಅಲ್ಲಿ ಕಳೆಯುವುದು ಇಂದಿನ ಇರುಳನ್ನು! (ಪುಷ್ಪ ಫಲಗಳನ್ನೆತ್ತುತ್ತ ಯೋಚನಾಮಗ್ನಳಾಗಿ)

ಒಡಲ ಕಳವಳಕ್ಕಾಗಿ ಅಡವಿಯ ಹೊಕ್ಕೆ;

ಗಿಡುಗಿಡು ತಪ್ಪದೆ ಬೇಡಿದೆನೆನ್ನಂಗಕ್ಕೆಂದು;

ಅವು ನೀಡಿದುವು ತಮ್ಮ ಲಿಂಗಕ್ಕೆಂದು;

ಅನು ಬೇಡಿ ಭವಿಯಾದೆ, ಅವು ನೀಡಿ ಭಕ್ತರಾದುವು!

ಇನ್ನು ಬೇಡಿದೆನಾದೊಡೆ

ಚೆನ್ನಮಲ್ಲಿಕಾರ್ಜುನಯ್ಯ-ನಿಮ್ಮಾಣೆ!

ಕಾಮುಕನೊಬ್ಬ : (ಪ್ರವೇಶಿಸಿ) ಇನ್ನು ಬೇಡುವ ಅಗತ್ಯವೇ ಇಲ್ಲ, ಸುಂದರಿ! ನೀನು ನನ್ನವಳಾಗಿಬಿಟ್ಟರೆ ಬೇಡುವ ಅಗತ್ಯವೇ ಉಳಿಯುವುದಿಲ್ಲ! ಬೇಡಿದುದನ್ನೆಲ್ಲ ಬೇಡುವ ಮುನ್ನವೇ ಒದಗಿಸುವೆ! ನನ್ನನ್ನು ಸ್ವೀಕರಿಸಿ ಸುಖಿಯಾಗು!

ಅಕ್ಕಮಹಾದೇವಿ : (ತನ್ನಲ್ಲಿ) ಅರಮನೆಯನ್ನೇ ತೊರೆದು ಬಂದರೂ ಈ ಕೀಳು ಕಾಮ ಇನ್ನೂ ಬೆಂಬತ್ತಿ ಬರುತ್ತಿದೆಯಲ್ಲ! ಆಗಲಿ, ಎದೆಗೆಡದೆ ಎದುರಿಸೋಣ ಇದನ್ನೂ ! (ಅವನತ್ತ ತಿರುಗಿ)

ನೋಡುವ ಕಂಗಳಿಗೆ ರೂಪಿಂಬಾಗಿರಲು

ನೀವು ಮನನಾಚದೆ ಬಂದಿರಣ್ಣಾ!

ಕೇಳಿದ ಶ್ರೋತ್ರ ಸೊಗಸಿಗೆ ನೀವು

ಮರುಳಾಗಿ ಬಂದಿರಣ್ಣಾ!

ಮೂತ್ರವು ಬಿಂದುವೊಸರುವ ನಾಳವೆಂದು ಕಂಗಾಣದೆ

ಮುಂದುಗೆಟ್ಟು ಬಂದಿರಣ್ಣಾ!

ಬುದ್ಧಿಗೇಡಿತನದಿಂದ ಪರಮಾರ್ಥದ ಸುಖವ

ಹೋಗಲಾಡಿಸಿಕೊಂಡು ಇದಾವ ಕಾರಣವೆಂದರಿಯದೆ

ನೀವು ನರಕ ಹೇತುವೆಂದರಿತೂ

ಮನಹೇಸದೆ ಬಂದಿರಣ್ಣಾ!

ಚೆನ್ನಮಲ್ಲಿಕಾರ್ಜುನನಲ್ಲದೆ

ಮಿಕ್ಕಿಹ ಪುರುಷರೆನೆಗೆ ಸಹೋದರರು!

ಛೀ ಹೋಗಾ ಮರುಳೆ!

(ಕಾಮುಕ ಕಾಲ್ಕಿಗೆಯುವನು. ಅಕ್ಕಮಹಾದೇವಿ ಉಸಿರ್ಗರೆದು) ಹೋಯಿತು ಪೀಡೆ ತೊಲಗಿತು ಶನಿ! ಇನ್ನೂ ಯಾವ ಯಾವ ಅಗ್ನಿ ಪರೀಕ್ಷೆಗಳು ಉಳಿದಿವೆಯೋ! ಬರಲಿ, ಎಲ್ಲ ಕಠೋರ ಪರೀಕ್ಷೆಗಳೂ ಬರಲಿ! ಕಾಯದ ಮೋಹವನ್ನು, ಮರಣದ ಭಯವನ್ನು, ಭೋಗದ ಆಸೆಯನ್ನು ತೊರೆದ ಬಳಿಕ ಯಾವ ಪರೀಕ್ಷೆ ಎದುರಾದರೇನು, ಯಾವ ಶಿಕ್ಷೆ ಎದುರಾದರೇನು? (ಒಮ್ಮೆಗೆ ಕಾರ್ಮೋಡ ಕವಿದು ಕಣ್ಣು ಕೋರೈಸುವ ಕೋಲ್ಮಿಂಚು, ಮೈನಡುಗಿಸುವ ಗುಡುಗು ಸಿಡಿಲುಗಳು ತಲೆದೋರುವುವು. ಅಕ್ಕಮಹಾದೇವಿ ಎಳ್ಳಷ್ಟೂ ಧೃತಿಗೆಡೆದೆ)

ಕಿಡಿ ಕಿಡಿ ಕೆದರಿದೊಡೆ

ಎನಗೆ ಹಸಿವು ತೃಷೆ ಅಡಗಿತೆಂಬನು!

ಮುಗಿಲು ಹರಿದು ಬಿದ್ದೊಡೆ

ಎನಗೆ ಮಜ್ಜನಕ್ಕೆರೆದರೆಂಬೆನು!

ಗಿರಿ ಮೇಲೆ ಬಿದ್ದೊಡೆ

ಎನಗೆ ಪುಷ್ಪ ಪೂಜೆಯೆಂಬೆನು!

ಚೆನ್ನಮಲ್ಲಿಕಾರ್ಜುನಯ್ಯಾ-

ಶಿರ ಹರಿದು ಬಿದ್ದೊಡೆ

ಒಡಲು ಪ್ರಾಣ ನಿಮಗರ್ಪಿತವೆಂಬೆನು!

(ಕೆಲಹೊತ್ತಿನಲ್ಲಿ ನಭ ನಿರಭ್ರ ಶುಭ್ರವಾಗುವುದು. ಅಕ್ಕಮಹಾದೇವಿ ಹಾಳು ದೇಗುಲದಲ್ಲಿ ಪೂಜೆ ಪ್ರಾರಂಭಿಸುವಳು. ಅಕ್ಕನ ಆಕೃತಿ ಮಸುಕು ಮಸಕಾಗಿ ತೋರಿದರೂ ಆಕೆ ವಚಿಸುವ ಈ ವಚನ ಶ್ರೋತೃಗಳಿಗೆ ಸರಿಯಾಗಿ ಕೇಳಿಸುವುದು)

(ತೆರೆ ಕ್ರಮ ಕ್ರಮವಾಗಿ ಇಳಿಯುತ್ತ ಕೊನೆಯ ವಾಕ್ಯ ಮುಗಿವ ಹೊತ್ತಿಗೆ ಪೂರ್ತಿ ಇಳಿಯುವುದು)

ನೋಟ ೪

(ಕಲ್ಯಾಣಬೀದಿ)

ಕಿನ್ನರಿಯ ಬ್ರಹ್ಮಯ್ಯ : (ಪ್ರವೇಶಿಸಿ) ತಂದೆತಾಯಿಗಳ ಪುಣ್ಯವೋ, ಗುರುಹಿರಿಯರ ಕೃಪೆಯೋ ನಿನ್ನ ಏಳೇಳು ಜನ್ಮಗಳ ಸುಕೃತವೋ ಬ್ರಹ್ಮಯ್ಯ– ಅಕ್ಕಮಹಾದೇವಿಯನ್ನು, ಅಧ್ಯಾತ್ಮಲೋಕದ ಆಶ್ಚರ್ಯವೆಂದು, ಕರೆಯಬಹುದಾದ ಅಕ್ಕನನ್ನು ಇದಿರ್ಗೊಂಡು ಅನುಭವ ಮಂಟಪಕ್ಕೆ ಕರೆದೊಯ್ಯುವ ಮಹಾಭಾಗ್ಯ ನಿನ್ನದಾಯಿತು! ಅನುಭವ ಮಂಟಪದಲ್ಲಿ ನಡೆದ ಸಂವಿತ್‌ಪೂರ್ಣ ಸಂವಾದದಲ್ಲಿ ಅಕ್ಕನು ಪಡೆದ ಅದ್ಭುತ ವಿಜಯವನ್ನು ಕಾಣುವ ಅಪೂರ್ವಭಾಗ್ಯ ನಿನ್ನದಾಯಿತು! ಅದೆಂಥ ಅಪ್ರತಿಮ ಸಂವಾದ–ನಿನ್ನೆ ಅಲ್ಲಮಪ್ರಭು–ಅಕ್ಕಮಹಾದೇವಿಯರ ನಡುವೆ ನಡೆದ ಸಂವಾದ! ದೇವತೆಗಳೆಂಬವರು ಇದ್ದರೆ ಅವರೂ ಬೆಕ್ಕಸ ಬೆರಗಾಗಿ ಕೇಳಿರಬೇಕು ಆ ಅಮರ್ತ್ಯಪ್ರಜ್ಞೆಯ ಅನುಪಮದೀಪ್ತಿಯ ಪ್ರಭಾಪುಂಜರಂಜಿತ ಸಂವಾದವನ್ನು! ಎಂಥ ಮಿಂಚಿನಂಥ ಮಾತುಗಳನ್ನಾಡಿದಳು ಅಕ್ಕಮಹಾದೇವಿ! ಹಾವಿನ ಹಲ್ಲ ಕಳೆದು ಹಾವನಾಡಿಸಬಲ್ಲಡೆ ಹಾವಿನ ಸಂಗವೇ ಲೇಸಂತೆ; ಕಾಯದ ಗುಣವ ಕಳೆದುಳಿಯ ಬಲ್ಲೊಡೆ ಕಾಯದ ಸಂಗವೇ ಲೇಸಂತೆ; ತಾನು ನಾಮದಲ್ಲಿ ಹೆಂಗುಸಾದರೂ ಭಾವಿಸಲು ಗಂಡುರೂಪಂತೆ; ಚೆನ್ನಮಲ್ಲಿಕಾರ್ಜುನನು ಕಾಮನಕೊಂಡು ಮನಸಿಜನಾಗಿ ಉಳಿಸಿದರೆ ಆ ಮನಸಿಜನ ತಲೆಯ ಬರಹವನ್ನೇ ತಾನು ತೊಡೆದಳಂತೆ; ಸಾವಿಲ್ಲದ, ಕೇಡಿಲ್ಲದ, ರೂಪಿಲ್ಲದ, ಭವವಿಲ್ಲದ, ಭಯವಿಲ್ಲದ, ಕುರುಹಿಲ್ಲದ, ತೆರಹಿಲ್ಲದ, ಕುಲಸೀಮೆಯಿಲ್ಲದ ನಿಸ್ಸೀಮ ಚೆಲುವನಾದ ಚೆನ್ನಮಲ್ಲಿಕಾರ್ಜುನನೇ ತನಗೆ ಗಂಡನಂತೆ; ಮಿಕ್ಕಿನ ಲೋಕದ ಗಂಡಸರ ಸಂಬಂಧವಿಲ್ಲವಂತೆ! ಹದಿನಾರರ ಹರೆಯದಲ್ಲಿ ಭಕ್ತಿ–ಜ್ಞಾನ–ವೈರಾಗ್ಯಗಳ ತುಟ್ಟ ತುದಿಮುಟ್ಟಿ ಮೆರೆಯುತ್ತಿರುವ ಮಹಾದೇವಿಯಕ್ಕನು ನಿಜವಾಗಿಯೂ ಮಾನವ ಸೃಷ್ಟಿಯ ಸೋಜಿಗಗಳಲ್ಲಿ ಒಂದೆಂದು ಧಾರಾಳವಾಗಿ ಹೇಳಬಹುದು. ಇಂದು ಅಣ್ಣನವರ ಮಹಾಮನೆಯಲ್ಲಿ ಜರುಗಿರುವ ಮಹಾದೇವಿ–ಮಲ್ಲಿಕಾರ್ಜುನರ ಮದುವೆಯಲ್ಲಿ ಇನ್ನಾವ ಮಾತಿನ ಜ್ಯೋತಿರ್ಲಿಂಗ ಮೂಡಿ ತೊಳಗಿ ಬೆಳಗುವುದೋ

ಹೋಗಿ ನೋಡೋಣ. ಎಂಥ ಮದುವಳಿಗೆ, ಎಂಥ ಮದುಮಗ, ಎಂಥ ಮದುವೆ? ಈ ಮದುವೆಗೆ ಕಲ್ಯಾಣ ಮಂಟಪವಾದ ಕಲ್ಯಾಣನಗರವೆ, ನಿನ್ನಂಥಾ ಭಾಗ್ಯಶಾಲಿ ಬೇರಾವ ನಗರವಿದೆ? ಜಗದ್ಭಕ್ಷಕನಾದ ಕಾಲನು ತನ್ನ ನಾಲಗೆ ಚಾಚಿ ನೆಕ್ಕಿ ನಿನ್ನನ್ನು ನಾಶಗೊಳಿಸಿದ ಮೇಲೂ ಈ ಮದುವೆಗೆ ಹಂದರವಾದ ನಿನ್ನ ಕೀರ್ತಿ ಕಲ್ಪಾಂ-ತರಸ್ಥಾಯಿಯಾಗಿ ನಿಲ್ಲುವುದು. (ಹೋಗುವನು. ತೆರೆ ಏಳುವುದು. ಬಸವಣ್ಣನವರ ಮಹಾಮನೆಯಲ್ಲಿ ಮದುವೆಗೆ ಮುನ್ನ ವಧುಶೃಂಗಾರ ನಡೆದಿದೆ. ನೀಲಾಂಬಿಕೆ ಮಹಾದೇವಿಯ ಮುಡಿಗೆ ಮಲ್ಲಿಗೆದಂಡೆ ಮುಡಿಸುತ್ತ–)

ನೀಲಾಂಬಿಕೆ : ಮಹಾದೇವಿಯಕ್ಕ, ಇದೆಂಥ ಅನಲಂಕೃತ ಕನ್ಯಾದಾನ ಮಾಡುತಲಿದ್ದಾರೆ ನಿನ್ನನ್ನು ಪಡೆದ ತಂದೆಯವರು? (ಬಸವಣ್ಣನವರ ಕಡೆಗೆ ಅರ್ಥಪೂರ್ಣವಾಗಿ ನೋಡುವಳು)

ಬಸವ : ನೀಲಾ, ನಾನು ಪಡೆದ ಈ ದಿವ್ಯ ಪುತ್ರಿ ರತ್ನಾಭರಣಗಳನ್ನು ಸ್ವೀಕರಿಸಲು ಸಿದ್ಧಳಿದ್ದರೆ ಇಲ್ಲಿರುವ ಆಭರಣಗಳೆಲ್ಲವೂ ಅರ್ಪಿತ ಅಕ್ಕ ಮಹಾದೇವಿಗೆ. ಆಯ್ದುಕೋ ನೀನೇ; ತೊಡಿಸು ನೀನೇ! ನೋಡಿ ನನ್ನ ಕಣ್ಣುಗಳು ಕೃತಾರ್ಥವಾಗಲಿ.

(ನೀಲಾಂಬಿಕೆ ಒಂದೆರಡು ರತ್ನಾಭರಣಗಳನ್ನು ತೊಡಿಸ ಹೋಗುವಳು, ಅಕ್ಕಮಹಾದೇವಿ ಧರಿಸಲು ಒಪ್ಪದೆ)

ಅಕ್ಕಮಹಾದೇವಿ : ತಾಯೆ, ಅರಮನೆಯನ್ನೇ ತೊರೆದು ಬಂದ ನನಗೆ ಮತ್ತೆ ಈ ಹೊನ್ನಿನ ಹೊರೆಯೆ? ಮತ್ತೆ ಈ ರತ್ನದ ಸಂಕೋಲೆಯೆ? ಮತ್ತೆ ಈ ಮುತ್ತಿನ ಬಂಧನವೆ? ಮೇಲಾಗಿ ಇದು ಆಧ್ಯಾತ್ಮಿಕ ವಿವಾಹ, ಭೌತಿಕ ವಿವಾಹವಲ್ಲ. ಇದಕ್ಕೇಕೆ ಅಲಂಕಾರಗಳ ಅನಾವಶ್ಯಕ ಶೃಂಖಲೆಗಳು?

ಈ ಅಂಗ ಲಿಂಗಗಳ ಲಗ್ನಕ್ಕೆ ಬೇಕಾಗುವ ಅಲಂಕರಣವೇ ಬೇರೆ:

ಮಂಗಳವೇ ಮಜ್ಜನವೆನಗೆ:

ವಿಭೂತಿಯೇ ಒಳುಗುಂದದ ಅರಶಿನವೆನಗೆ;

ದಿಗಂಬರವೇ ದಿವ್ಯಾಂಬರವೆನಗೆ

ಶಿವಪಾದರೇಣುವೇ ಅನುಲೇಪನವೆನಗೆ:

ರುದ್ರಾಕ್ಷಿಯೇ ಮೈದೊಡಿಗೆ ಎನಗೆ;

ಶರಣರ ಪಾದಂಗಳೇ ತೊಂಡಿಲಬಾಸಿದೊವೆನಗೆ:

ಚೆನ್ನಮಲ್ಲಿಕಾರ್ಜುನನೇ ಗಂಡನೆನಗೆ;

ಆನು ಚೆನ್ನಮಲ್ಲಿಕಾರ್ಜುನಂಗೆ ಮದುವಳಿಗೆ!

ಎನಗೆ ಬೇರೆ ಶೃಂಗಾರವೇಕೆ ಹೇಳಿರವ್ವಾ?

ಬಸವ : ಇಂಥ ಅಪೂರ್ವ ಶೃಂಗಾರವನು ಇನ್ನಾವ ಮದುವಳಿಗೆ ಮಾಡಿಕೊಂಡಿದ್ದಾಳು? ನೀಲಾ, ನೀನೂ ಮಂತ್ರಿಯ ಮಗಳು: ಅಕ್ಕ ಮಹಾದೇವಿಯೂ ಈ ಮಂತ್ರಿಯ ಮಗಳು. ಆದರೆ ನೀನೆಷ್ಟು ಅಲಂಕಾರ ಮಾಡಿಕೊಂಡಿದ್ದೆ, ಎಷ್ಟು ಆಭರಣಗಳನ್ನು ಧರಿಸಿದ್ದೆ ಮದುವೆಯಲ್ಲಿ-ನೆನಪಿದೆಯೆ?

ನೀಲಾ : ನೆನಪಿದೆ ನಾಥ-ಆದರೆ ಆಗ ಅಕ್ಕಮಹಾದೇವಿ ಇರಲಿಲ್ಲವಲ್ಲ. ಇದ್ದಿದ್ದರೆ ನಾನೂ ಹರನೇ ಗಂಡನಾಗಬೇಕೆಂದು ಹಟ ಹಿಡಿಯುತಿದ್ದೆ!

ಬಸವ : (ನಕ್ಕು) ಆಗ ಅಕ್ಕಮಹಾದೇವಿ ಇರದಿದ್ದುದೇ ಲೇಸಾಯಿತು! ಇರಲಿ, ಈ ಅಭೂತಪೂರ್ವವಾದ ಆಧ್ಯಾತ್ಮಿಕ ವಿವಾಹವನ್ನು ಮಾಡುವ ವಿಧಾನವಾವುದು ಪ್ರಭುವೆ?

ಪ್ರಭುದೇವ : ಮದುವೆ ಮಾಡುವ ಪ್ರಶ್ನೆ ಉಳಿದೇ ಇಲ್ಲ ಬಸವಣ್ಣ. ಮದುವೆ ಮುಗಿದುಹೋಗಿದೆ! ನಿಮಗೆ ಆಗಿಲ್ಲವೆ ಮದುವೆ ಸಂಗಯ್ಯನೊಡನೆ? ನನಗೆ ಆಗಿಲ್ಲವೆ ಗುಹೇಶ್ವರನೊಡನೆ? ಚೆನ್ನಣ್ಣನಿಗೆ ಆಗಿಲ್ಲವೆ ಕೂಡಲಚೆನ್ನಸಂಗನೊಡನೆ? ಸಿದ್ಧರಾಮಯ್ಯನಿಗೆ ಆಗಿಲ್ಲವೆ ಕಪಿಲಸಿದ್ಧಮಲ್ಲಿಕಾರ್ಜುನನೊಡನೆ? ಅಂತೆಯೇ ಅಕ್ಕಮಹಾದೇವಿಯ ಮದುವೆಯೂ ಮಲ್ಲಿಕಾರ್ಜುನನೊಡನೆ ಆಗಿಹೋಗಿದೆ.

ಅಕ್ಕಮಹಾದೇವಿ : ಅಹುದು ತಂದೆ, ಆಗಿಹೋಗಿದೆ ಮದುವೆ

ಗುರುವೆ ತೆತ್ತಿಗನಾದ:

ಲಿಂಗವೆ ಮದುವಣಿಗನಾದ;

ಆನು ಮದುವಳಿಗೆಯಾದೆನು;

ವಸುಧೆಯ ಭಕ್ತರೆಲ್ಲರೂ ನಿಬ್ಬಣಿಗರಾದರು.!

ಕೊಟ್ಟರು ಸಾದೃಶ್ಯವಪ್ಪ ಗಂಡನ ನೋಡಿ.

ಇದು ಕಾರಣ ಚೆನ್ನಮಲ್ಲಿಕಾರ್ಜುನನು ಗಂಡನೆನಗೆ!

ನೀಲಾಂಬಿಕೆ : ನಿನ್ನ ಅಂತರಂಗದ ಮದುವೆಯನ್ನು ಬಹಿರಂಗಗೊಳಿಸಲೆಂದೇ ನಾವಿಲ್ಲಿ ನೆರೆದಿದ್ದೇವೆ ಅಕ್ಕಾ. ಉಳಿದವರು ಒಪ್ಪಲಿ ಬಿಡಲಿ, ಇಲ್ಲಿ ನೆರೆದಿರುವ ಶರಣೆಯರಿಗೆ ಸಾಂಕೇತಿಕವಾಗಿಯಾದರೂ ಬಹಿರಂಗದ ಮದುವೆಯು ನಡೆಯಲೇ ಬೇಕು. ಇದೋ, ಈ ಹಾರವನ್ನು ನಿನ್ನ ಮಲ್ಲಿಕಾರ್ಜುನನ ಕೊರಳಿಗೆ ಹಾಕು!

ಅಕ್ಕಮಹಾದೇವಿ : (ಹಾರವನ್ನು ಕೈಕೊಂಡು) ನಾನೇನೋ ಅವನಿಗೆ ಹಾರ ಹಾಕುತ್ತೇನೆ; ಆದರೆ.... (ಲಜ್ಜಾವನತಮುಖಿಯಾಗಿ) ಅವನೂ ನನಗೆ ಹಾರ ಹಾಕುವನೆ?

ನೀಲಾಂಬಿಕೆ : ಇಂದಿಲ್ಲ ನಾಳೆ ಅವನೂ ನಿನ್ನ ಕೊರಳಿಗೆ ಮಾಲೆ

ತೊಡಿಸಲೇ ಬೇಕು! ನಿನ್ನ ನಿಷ್ಠೆಯಲ್ಲಿ ನಿನಗೆ ನಂಬಿಕೆಯಿಲ್ಲವೆ? ಮೇಲಾಗಿ ಅವನು ನಿನಗೆ ಮಾಲೆ ತೊಡಿಸದಿದ್ದರೆ ಅವನ ಅರಸಿಕತೆಯೇ ಎದ್ದುಕಂಡೀತು. ಇಂಥ ಮೈಸಿರಿಯ, ಅಂತರಂಗದ ಐಸಿರಿಯ ವಧುವಿಗೆ ಒಲ್ಲೆನೆಂದರೆ ಮಲ್ಲಿಕಾರ್ಜುನನೇ ಅರಸಿಕನೆಂದು ಜಗತ್ತು ಘೋಷಿಸೀತು, ಅನುಮಾನಬೇಡ, ಮಾಲೆ ಹಾಕಿಬಿಡು!

ಶರಣೆಯರು :

ಪಚ್ಚೆಯ ನೆಲಗಟ್ಟು, ಕನಕದ ತೋರಣ,

ವಜ್ರದ ಕಂಬ, ಹವಳದ ಚಪ್ಪರವನ್ನಿಕ್ಕಿ

ಮದುವೆಯ ಮಾಡಿದರು–ಎಮ್ಮವರೆನ್ನ

ಮದುವೆಯ ಮಾಡಿದರು!

ಕಂಕಣ ಕೈದಾರೆ ಸ್ಥಿರ ಸೇಸೆಯನಿಕ್ಕಿ

ಚೆನ್ನಮಲ್ಲಿಕಾರ್ಜುನ ಗಂಡಗೆನ್ನ

ಮದುವೆಯ ಮಾಡಿದರು?

(ಎಂದು ಹಾಡುತ್ತಿರುವಂತೆ ಅಕ್ಕಮಹಾದೇವಿ ಕರದಖಂಡ ತೇಜಕ್ಕೆ ಮಾಲೆ ತೊಡಿಸುವಳು. ನೆರೆದವರೆಲ್ಲ ಬಿಲ್ವಿ ವೃಷ್ಟಿ ಮಾಡುವರು)

ಬಸವಣ್ಣ : ಮಗಳೆ, ಮಹಾದೇವಿ–ಲೋಕಾಚಾರದಂತೆ ಕೇಳುವೆ, ತಪ್ಪು ತಿಳಿದುಕೊಳ್ಳದಿರು. ನನ್ನನ್ನು ತಂದೆಯನ್ನಾಗಿ ಸ್ವೀಕರಿಸಿರುವೆ. ತಂದೆ ಮದುವೆಯಾದ ಮಗಳಿಗೆ ಬಳುವಳಿ ಕೊಡಬೇಕು– ನಿನಗೆ ನಾನಾವ ಬಳುವಳಿಯನ್ನು ಕೊಡಲಿ? ನಿಸ್ಸಂಕೋಚವಾಗಿ ಕೇಳು, ನಿನ್ನ ಮನದಾಸೆಯೇನು ಹೇಳು!

ಅಕ್ಕಮಹಾದೇವಿ : ಇನ್ನೇನ ಬಯಸಲಿ, ಇನ್ನೇನ ಬೇಡಲಿ ತಂದೆ?

ಒಡಲಿಲ್ಲದ, ನುಡಿಯಿಲ್ಲದ ಜಡೆಯಿಲ್ಲದ

ನಲ್ಲನ ಒಡಗೂಡಿ ಸುಖಿಯಾದೆ!

ಕೇಳಿರಯ್ಯಾ ಭಾಷೆ ಪೈಸರವಿಲ್ಲ;

ಓಸರಿಸೆನನ್ಯ ಕ್ಕೆ, ಆಸೆಮಾಡೆನು

ಮತ್ತೆ ಭಿನ್ನ ಸುಖಕ್ಕೆ!

ಆರಳಿದು ಮೂರಾಗಿ, ಮೂರಳಿದು ಎರಡಾಗಿ,

ಎರಡಳಿದು ಒಂದಾಗಿ ನಿಂದೆನಯ್ಯಾ!

ಬಸವಣ್ಣ ಮೊದಲಾದ ಶರಣರಿಗೆ ಶರಣಾರ್ಥಿ!

ಪ್ರಭುವಿನಿಂದ ಕೃತಕೃತ್ಯಳಾದೆನು ನಾನು!

ಮರೆಯಲಾಗದು ನಾನು ನಿಮ್ಮ ಶಿಶುವೆಂಬುದ!

ಚೆನ್ನಮಲ್ಲಿಕಾರ್ಜುನನ ಬೆರೆಸೆಂದು

ಎನ್ನ ಹರಸುತ್ತಿರುವುದು!

ಚೆನ್ನಬಸವಣ್ಣ : (ಬೆಚ್ಚಿ) ಇದೇನು ಅಕ್ಕಾ, ಇದಾಗಲೇ ಬೀಳ್ಕೊಡಿಗೆಯ ಮಾತುಗಳು! ಏನೀ ಮಾತುಗಳ ಅರ್ಥ?

ಸಿದ್ಧರಾಮ : ಇಷ್ಟು ಬೇಗ ನಮ್ಮನ್ನು ತೊರೆದು ಹೋಗುವಿಯಾ ತಾಯೆ? ಏಕಿಷ್ಟು ಅವಸರ, ಇದೆಂಥ ಆತುರ?

ನೀಲಾಂಬಿಕೆ : ಇದಾಗದು ಅಕ್ಕಾ, ಇದು ಕೂಡದು!

ಬಸವಣ್ಣ : ಇಷ್ಟು ಬೇಗ ಬೇಸರವಾದನೆ ಈ ತಂದೆ ಮಗಳೆ?

ಅಕ್ಕಮಹಾದೇವಿ : (ನೊಂದು) ಹಾಗೆನ್ನದಿರಿ ತಂದೆ, ಚೆನ್ನಮಲ್ಲಿಕಾರ್ಜುನ-ನೆನಗೊಲಿದನಾಗಿ ನಾನು ಸಂಗನ ಬಸವಣ್ಣನ ಶ್ರೀಪಾದವ ಕಂಡು ಬದುಕಿದೆ!

ಎನ್ನ ಭಕ್ತಿ ನಿಮ್ಮ ಧರ್ಮ;

ಎನ್ನ ಜ್ಞಾನ ಪ್ರಭುದೇವರ ಧರ್ಮ;

ಎನ್ನ ಪರಿಣಾಮ ಚೆನ್ನಬಸವಣ್ಣನ ಧರ್ಮ;

ಈ ಮೂವರೂ ಒಂದೊಂದು ಕೊಟ್ಟರೆನಗೆ ಮೂರು ಭಾವವಾಯಿತು.

ಈ ಮೂರನೂ ನಿಮ್ಮಲ್ಲಿ ಸಮರ್ಪಿಸಿದ ಬಳಿಕ

ಎನಗಾವ ಜಂಜಡವಿಲ್ಲ ತಂದೆ!

ಮತ್ತೆ,

ಹಿಂಡಗಲಿ ಹಿಡಿವಡೆದ ಕುಂಜರ

ತನ್ನ ವಿಂಧ್ಯವ ನೆನೆವಂತೆ ನೆನೆಯುತ್ತಿಹೆ!

ಬಂಧನಕ್ಕೆ ಬಂದ ಗಿಳಿ ತನ್ನ

ಬಂಧುವ ನೆನೆವಂತೆ ನೆನೆಯುತ್ತಿಹೆ!

ಈ ಮಹಿಮೆ ಮೈದಾಳಿದಂತಿರುವ ಮಹಾಮನೆಯಲ್ಲಿಯೂ, ಅಮೃತ-

ಮಯವಾದ ಅನುಭವ ಮಂಟಪದಲ್ಲಿಯೂ ನನಗೇಕೆ ಹೀಗೇನಿಸಬೇಕೋ ನಾನರಿಯೆ! ಆವುದೋ ಒಂದು ಅದಮ್ಯ ಅಭಿಲಾಷೆ ಎಳೆಯುತ್ತಿದೆ, ಅಗೋಚರ ಶಕ್ತಿ ಸೆಳೆಯುತ್ತಿದೆ! ಈ ಎಳೆತ ಸೆಳೆತಗಳನ್ನು ತಡೆಯುವುದು ಇನ್ನು ಎನ್ನಿಂದಾಗದೆಂದು ತೋರುತ್ತಿದೆ! ದಯವಿಟ್ಟು ನನ್ನನ್ನು ಕಳಿಸಿಕೊಡಿರಿ, ನನಗೆ ಹೋಗಗೊಡಿರಿ! ನಿಮ್ಮೆಲ್ಲರ ಅಕ್ಕರೆ ಕಕ್ಕುಲತೆಗಳ ಕಣ್ಣಿಯನ್ನು ಕಿತ್ತುಕೊಂಡು ಹೊರಟಿದೆ ಈ ಪಶು–ಪಶುಪತಿಯತ್ತ! ನನ್ನನ್ನು ತಡೆಯದಿರಿ, ನನಗೆ ಹೋಗಗೊಡಿರಿ!

ಪ್ರಭುದೇವ : ಬಸವಣ್ಣಾ, ಇನ್ನು ತಡೆದು ಪ್ರಯೋಜನವಿಲ್ಲ, ಇದೀಗ ತಡಿಯೊಡೆದ ಕಡಲು! ಇದನ್ನು ತಡೆದು ನಿಲ್ಲಿಸುವ, ಹಿಡಿದು ಮಡಗಿಸಿಕೊಳ್ಳುವ ಶಕ್ತಿಯಿರುವುದು ಶ್ರೀಗಿರಿಯೊಂದಕ್ಕೇ, ಅಲ್ಲಿಯ ಕದಳಿಯ ವನವೊಂದಕ್ಕೇ! ಹೋಗಲಿ ಅಕ್ಕ, ಸಾಗಲಿ ಅಕ್ಕ ಶ್ರೀಗಿರಿಯ ಶಿಖರಕ್ಕೆ– ಆತ್ಮನ ಊರ್ಧ್ವಮುಖೀ ಪಯಣದ ಪ್ರತೀಕವಾಗಿ! ಅಲ್ಲಿ ಕಾಣಬಾರದ ಕದಳಿಯ ವನದಲ್ಲಿ ರಮಿಸಲಿ ತನ್ನ ಅಂತರಂಗದ ಆರಾಧ್ಯನೊಡನೆ! ಲೋಕದ ಕಣ್ಣಿಗೆ ಈ ಅಲೌಕಿಕಶಕ್ತಿಯ ಸಾಧನೆ ಹೇಗಾದರೂ ಕಾಣಲಿ, ಸಿದ್ಧಿಯ ಶ್ರೀಗಿರಿಯನ್ನೇರಬೇಕೆಂಬ ಹಂಬಲವುಳ್ಳವರಿಗೆಲ್ಲ ಅಕ್ಕಮಹಾದೇವಿಯು ಶ್ರೀಶೈಲದ ಜಡೆಯ ಚಂದ್ರಬಿಂಬವಾಗಿ ತೋರುವಳು!

ಬಸವಣ್ಣ : ಅಕ್ಕನ ಇಷ್ಟ ನೆರವೇರಲಿ ಪ್ರಭುವೆ! ಆಕೆಯ ಆಧ್ಯಾತ್ಮಿಕ ದಿಗ್ವಿಜಯದಲ್ಲಿ ನಾವು ಕೈಕೊಂಡಿರುವ ಮಾನವ–ನಿರ್ಮಾಣದ ಮಹಾಪ್ರಯೋಗ ತನ್ನ ಅಮೂಲ್ಯವಾದ ಅಮೃತಫಲವನ್ನು ನೀಡಲಿರುವಾಗ ನಾವೇಕೆ ಅದಕ್ಕೆ ಅಡ್ಡಬರಬೇಕು? ಹೋಗಿ ಬಾ ಅಕ್ಕ, ಇಲ್ಲಿ ಇದ್ದಷ್ಟು ದಿನ ಎಲ್ಲರಿಗೂ ಬೆಳಕಾಗಿದ್ದೆ; ನಿನ್ನ ಅಭೀಷ್ಟವನ್ನು ಪಡೆದು ಲೋಕಕ್ಕೆ ಬೆಳಕಾಗು.

ಅಕ್ಕಮಹಾದೇವಿ : (ಎಲ್ಲರನ್ನೂ ಒಮ್ಮೆ ಕಣ್ತುಂಬ ನೋಡಿ)

ಹುಟ್ಟಿದೆ ಶ್ರೀಗುರುವಿನ ಹಸ್ತದಲ್ಲಿ;

ಬೆಳೆದೆನು ಅಸಂಖ್ಯಾತರ ಕರುಣದೊಳಗೆ;

ಭಾವವೆಂಬ ಹಾಲು, ಸುಜ್ಞಾನವೆಂಬ ತುಪ್ಪ,

ಪರಮಾರ್ಥವೆಂಬ ಸಕ್ಕರೆಯನಿಕ್ಕಿದಿರಿ ನೋಡಾ!

ಇಂತಪ್ಪ ತ್ರಿವಿಧಾಮೃತವ ದಣಿಯಲೆರೆದು ಸಲಹಿದಿರಿ!

ಎನ್ನ ವಿವಾಹವ ಮಾಡಿದಿರಿ ಸಯವಪ್ಪ ಗಂಡಗೆ ಕೊಟ್ಟು!

ಕೊಟ್ಟಮನೆಗೆ ಕಳುಹಲೆಂದು

ಅಸಂಖ್ಯಾತರೆಲ್ಲರೂ ನೆರೆದು ಬಂದಿರಿ!

(ಒಂದೊಂದು ಸಾಲಿಗೂ ಮುಂದೆ ಬರುತ್ತಿರುತ್ತಾರೆ ಎಲ್ಲರೂ. ಈ

ಸಾಲಿಗೆ ಬರುವಷ್ಟರಲ್ಲಿ ಎಲ್ಲರೂ ರಂಗದ ಮುಂಬದಿಗೆ ಬಂದಿರುತ್ತಾರೆ. ಹಿಂದೆ ಬೀದಿಯ ಪರದೆ ಇಳಿದಿರುತ್ತದೆ. ಅಕ್ಕ ಹೊರಟಳೆಂಬ ಸುದ್ದಿ ಮಿಂಚಿನಂತೆ ಹರಡಿ ಬೇರೆಯವರೂ ಹೌಹಾರಿ ತೂರಿ ಬಂದಿರುತ್ತಾರೆ. ಎಲ್ಲರ ಅಕ್ಷಿಗಳೂ ಅಶ್ರುಪೂರ್ಣವಾಗಿವೆ. ಎಲ್ಲರಿಗೂ ತಮ್ಮ ಹೊಟ್ಟೆಯ ಮಗಳೋ, ಬಡಹುಟ್ಟಿದ ಅಕ್ಕನೋ ಹೊರಟು ಹೋಗುತ್ತಿರುವ ಹಾಗೆನಿಸಿ ಕೊರಳು ಬಿಗಿದಿವೆ, ಮುಖ ಮುದುರಿವೆ; ಅಕ್ಕನ ವಚನ ಮುಂದುವರಿಯುತ್ತದೆ)

ಬಸವಣ್ಣ ಮೆಚ್ಚಲು ಒಗೆತನವಮಾಡುವೆ;

ಚೆನ್ನಮಲ್ಲಿಕಾರ್ಜುನನ ಕೈಪಿಡಿದು

ನಿಮ್ಮ ಮಂಡೆಗೆ ಹುವ್ವ ತಾಹೆನಲ್ಲಿದೆ

ಹುಲ್ಲತಾರೆನು!

ಅವಧರಿಸಿ, ನಿಮ್ಮಡಿಗಳೆಲ್ಲರು ಮರಳಿ ಬಿಜಯಂಗೈವುದು! ಶರಣಾರ್ಥಿ!

(ಮುಗಿದ ಕರಗಳೊಡನೆ ಒಂದೊಂದೇ ಅಡಿ ಮುಂದುವರಿಸುತ್ತ)

ಅಯ್ಯ, ನಿಮ್ಮ ಮಹಂತರ ಕೂಡಿದ ಸುಖವ

ಉಪಮೆಗೆ ತರಬಾರದಯ್ಯಾ!

ನಿಮ್ಮ ಮಹಂತರ ಕೂಡಿ ಅಗಲುವ

ಧಾವತಿಗಿಂತ ಮರಣವೇ ಕರಲೇಸು ಕಂಡಯ್ಯ!

(ಕೊರಳ ಸೆರೆ ಬಿಗಿದು ಮಾತು ಹೊರಡದಾಗಲು ತುಸುತಡೆದು)

ಚೆನ್ನಮಲ್ಲಿಕಾರ್ಜುನಯ್ಯಾ, ನಿಮ್ಮನರುಹಿದ

ಮಹಿಮರನಗಲಿ ನಾನು ನಿಲ್ಲಲಾರೆನಯ್ಯಾ!

(ಒಮ್ಮೆಗೆ ದಡದಡ ಹೊರಟು ಹೋಗುವಳು. ನಿಂತವರೆಲ್ಲ ನಿಂತಲ್ಲಿಯೇ ಸ್ತಂಭೀಭೂತರಾಗಿ ಕೆಲ ನಿಮಿಷ ಮೌನವಾಗಿ ನಿಲ್ಲುವರು. ಒಬ್ಬರೊಬ್ಬರ ಕಡೆಗೆ ನೋಡಿ ಕಣ್ಣೀರೊರಸಿ ಕೊಳ್ಳುವರು. ಮನಸ್ಸಿಲ್ಲದ ಮನಸ್ಸಿನಿಂದ ನೆಲದಲ್ಲಿ ನೆಟ್ಟಂತಿದ್ದ ಕಾಲುಗಳನ್ನು ಕೀಳುತ್ತ ಒಬ್ಬೊಬ್ಬರಾಗಿ ಹೊರಡುವರು. ಇದೆಲ್ಲ ನಡೆಯುತ್ತಿರುವಂತೆ ತೆರೆಯ ಹಿಂದೆ ವಚನ ಗಾಯನ)

ಬೆರಸುವರೆ ಬೇಗ ತೋರಾ!

ಹೊರ ಹಾಕದಿರಯ್ಯಾ!

ನಿಮ್ಮಲ್ಲಿಗೆ ಸಲೆಸಂದ ತೊತ್ತಾನು!

ಎನ್ನ ಹೊರಹಾಕದಿರಯ್ಯಾ!

ಚೆನ್ನಮಲ್ಲಿಕಾರ್ಜುನಯ್ಯಾ-

ನಿಮ್ಮ ನಂಬಿ ಬಳಿಯ ಬಂದೆನು!

ಇಂಬುಗೊಳ್ಳಯ್ಯ-ಬೇಗದಲಿ!

(ಈ ಹಾಡು ಮುಗಿವ ಹೊತ್ತಿಗೆ ಎಲ್ಲರೂ ಹೊರಟುಹೋಗಿರುತ್ತಾರೆ. ಈ ಶೋಕಮಯ ಸನ್ನಿವೇಶವನ್ನು ನೋಡಿದುದು ಸಾಕೆನ್ನುವಂತೆ ಬೀದಿಯ ಪರದೆ ಮೇಲಕ್ಕೆ ಏರುತ್ತದೆ. ಹಿಂದೆ ದಟ್ಟವಾದ ಹೇರಡವಿ. ಅಕ್ಕನೊಬ್ಬಳೇ ಪ್ರವೇಶಿಸುತ್ತಾಳೆ)

ಅಕ್ಕಮಹಾದೇವಿ : (ಮೆಲ್ಲ ಮೆಲ್ಲನೆ ಹೆಜ್ಜೆಯಿಡುತ್ತ) ಬಂಧನಕ್ಕೆ ಸಿಲುಕಿದ್ದ ಗಜ ಮಹಾಮನೆಯ ಆರೈಕೆ ಪಡೆದು ತನ್ನ ವಿಂಧ್ಯಕ್ಕೆ ಬಂದಿದೆಯೀಗ. ಒಂದೊಂದಾಗಿ ಬಂಧನಗಳೆಲ್ಲ ಹಿಂದಾದುವು. ಇಂದೆನಗೆ ನಿರ್ಬಂಧನ!

ಕಾಯದ ಕಳವಳವ ಕೆಡಿಸಿ,

ಮನದ ಮಾಯೆಯ ಮಾಣಿಸಿ,

ಎನ್ನ ಹರಣವ ಮೇಲೆತ್ತಿ ಸಲಹಿದೆಯಯ್ಯಾ

ಎನ್ನ ಬಂಧನವ ಬಿಡಿಸಿ

ನಿಮ್ಮತ್ತ ತೋರಿದ

ಘನವನುಪಮಿಸಬಾರದಯ್ಯಾ!

ಇರುಳೋಸರಿಸಿದ ಜಕ್ಕವಕ್ಕಿಯಂತೆ

ನಿಮ್ಮ ಶ್ರೀಪಾದವನಿಂಬುಗೊಂಡು

ಸುಖದೊಳಗೋಲಾಡುವೆನಯ್ಯಾ-

ಚೆನ್ನಮಲ್ಲಿಕಾರ್ಜುನಯ್ಯಾ!

ಕೌಶಿಕ : (ಕಾಷಾಯಾಂಬರಧಾರಿಯಾಗಿ ಪ್ರವೇಶಿಸಿ) ಗುರುಗಳಿಗೆ ಶಿರಬಾಗುವೆ.

ಅಕ್ಕಮಹಾದೇವಿ : (ಕೌಶಿಕನನ್ನು ನೋಡಿ ಕ್ಷಣಕಾಲ ಅವಕ್ಕಾಗಿ) ಯಾರು, ಕೌಶಿಕ ದೊರೆಗಳು? (ತನ್ನಲ್ಲಿ) ಎಲ್ಲ ಬಂಧನಗಳೂ ಕಳಚಿದುವೆಂದು ಇದೀಗ ಹಿಗ್ಗಿನಿಂದ ಹಾಡಿದ್ದೆ! ಇನ್ನೂ ಮಾಯೆ ಬೆನ್ನು ಬಿಟ್ಟಿಲ್ಲವೆಂದು ತೋರುತ್ತಿದೆ! ಅಡವಿ ಹೊಕ್ಕರು ಬಿಡದು, ಗಿರಿಯ ಹೊಕ್ಕರು ಬಿಡದು, ಗುಹೆಯ ಸೇರಿದರೂ ಬಿಡದು ಈ ಮಾಯೆ! (ದೊರೆಗೆ) ಇದೆಂಥ ವೇಷ ಪರಿವರ್ತನೆ ಪ್ರಭು?

ಕೌಶಿಕ : ಇದು ಬರಿ ವೇಷಪರಿವರ್ತನೆಯಲ್ಲ ಶಿವಯೋಗಿನಿ, ಇದು ಹೃದಯ ಪರಿವರ್ತನೆಯ ಕುರುಹು. ನಾನೀಗ ದೊರೆಯಲ್ಲ, ದೊರೆತನವನ್ನು ತೊರೆದು ಬಂದ ವಿರಾಗಿ!

ಅಕ್ಕಮಹಾದೇವಿ : ಪ್ರಜೆಗಳ ಗತಿ?

ಕೌಶಿಕ : ನನ್ನ ಸದ್ಗತಿಗಾಗಿ ನಾನು ಅರಸೊತ್ತಿಗೆಯನ್ನು ತೊರೆದಿರುವೆ. ಪ್ರಜೆಗಳು ತಮ್ಮ ಮುಂದಿನ ಗತಿಯ ಬಗ್ಗೆ ತಾವೇ ಯೋಚಿಸಿಕೊಳ್ಳುತ್ತಾರೆ.

ಅಕ್ಕಮಹಾದೇವಿ : ಪ್ರಜೆಗಳಲ್ಲಿ ಆ ಪ್ರಜ್ಞೆ ಜಾಗೃತವಾದಾಗ ಅವರು ಅರಸೊತ್ತಿಗೆಯ ಅಗತ್ಯವೇ ಇಲ್ಲವೆಂಬುದನ್ನು ಕಂಡುಕೊಂಡಾರು. ಅದುವರೆಗೆ ಅನಾಯಕತ್ವಕ್ಕೆ ಆಸ್ಪದವೀಯಬಾರದು. ಅದು ಅರಾಜಕತೆಗೆ ಔತಣವಿತ್ತಂತೆ. ಆದುದರಿಂದ ನಿಮ್ಮ ಉತ್ತರಾಧಿಕಾರಿಯನ್ನು ನಿಯಮಿಸಿ ನಿಮಗೆ ಬೇಕಾದ ಮಾರ್ಗ ಹಿಡಿಯಿರಿ.

ಕೌಶಿಕ : ನಿಮ್ಮ ಮಾರ್ಗವನ್ನೇ ಹಿಡಿಯಬೇಕೆಂದಿರುವೆ.

ಅಕ್ಕಮಹಾದೇವಿ : ನೀವೂ ಮಲ್ಲಿಕಾರ್ಜುನನನ್ನು ಮದುವೆಯಾಗುವಿರಾ?

ಕೌಶಿಕ : ಯಾಕಾಗಬಾರದು? ಪಶುಗಳಿಗೆಲ್ಲ ಪತಿಯಲ್ಲವೆ ಅವನು?

ಅಕ್ಕಮಹಾದೇವಿ : ಮೊದಲು ಪ್ರಜೆಗಳ ವ್ಯವಸ್ಥೆಮಾಡಿರಿ; ಆಮೇಲೆ ಯಾವ ಪತಿಯನ್ನಾದರೂ ವರಿಸಿರಿ.

ಕೌಶಿಕ : ಪ್ರಜೆಗಳ ವ್ಯವಸ್ಥೆ ಮಾಡಿ ಇಲ್ಲಿಗೆ ಬಂದು ಮಲ್ಲಿಕಾರ್ಜುನನನ್ನೇ ವರಿಸುವೆ.

ಅಕ್ಕಮಹಾದೇವಿ : ಆ ಯೋಚನೆಯನ್ನೇ ಬಿಡಿ. ನಮ್ಮಿಬ್ಬರಲ್ಲಿ ಸವತಿ ಮತ್ಸರ ಪ್ರಾರಂಭವಾದೀತು ಇಬ್ಬರೂ ಒಬ್ಬನ ಕೈ ಹಿಡಿದರೆ.

ಕೌಶಿಕ : (ನಕ್ಕು) ನಿಮಗೆ ಬೇಡವಾದರೆ ನನಗೂ ಬೇಡ. ಮಲ್ಲಿಕಾರ್ಜುನನನ್ನು ವರಿಸಗೊಡದಿದ್ದರೂ ಹರಸಿ ಕಳಿಸಿರಿ ನನ್ನನ್ನು! ಎಲ್ಲಿದ್ದರೂ ನಿಮ್ಮ ಆದರ್ಶದ ಬೆಳಕಿನಲ್ಲಿ ನನ್ನ ಬಾಳನ್ನೂ ಬೆಳಗಿಕೊಳ್ಳುವೆನು.

ಅಕ್ಕಮಹಾದೇವಿ : ಇದುವರೆಗೆ ಒಂದು ನಾಡಿಗೆ ದೊರೆಗಳಾಗಿದ್ದ ನೀವು ಇನ್ನು ಆತ್ಮಶ್ರೀರಾಜ್ಯದ ಪ್ರಭುಗಳಾಗಿ ಶೋಭಿಸಿರಿ. ಎಲ್ಲರ ಪ್ರಭು ಕೌಶಿಕನು ಪ್ರಭುವನ್ನೂ ಅಧ್ಯಾತ್ಮಪ್ರಭುವನ್ನಾಗಿ ಮಾಡದಿರುವನೆ?

ಕೌಶಿಕ : ಧನ್ಯನಾದೆನಿಂದು ನಿಮ್ಮ ಸುಬೋಧ ಸುಧೆಯಲ್ಲಿ ಮಿಂದು. (ಹೋಗುವನು)

ಅಕ್ಕಮಹಾದೇವಿ : ಇಲ್ಲಿಗಾದರೂ ಅಗ್ನಿ ಪರೀಕ್ಷೆಗಳು ಮುಗಿದುವೆಂದು ನಂಬಲೆ ಮಲ್ಲಿಕಾರ್ಜುನ? ಕಾಡಿ ನೋಡುವುದಕ್ಕೂ ಕೊನೆಯಿರಬೇಡವೆ? ಕಾಡುವೆಯೆಂದು ಬಾಡುವ ಹೂವಲ್ಲ ಇದು! ಇದಕ್ಕಿಲ್ಲ ಬಾಡುವ ಭಯ. ಇದು ಆತ್ಮಕಮಲ! ಉರಿಬರಲಿ, ಸಿರಿ ಬರಲಿ ಇದು ಸದಾ ವಿಕಸಿತವಾಗಿ, ಸದಾ ಸಸ್ಮಿತವಾಗಿ, ಸದಾ ಸುರಭಿತವಾಗಿ ಉಳಿಯುವುದು! ನಿನ್ನ ಅಡಿಗಳ ಮೇಲೆ ಉರುಳುವ ಆಸೆಯಿಂದಲೇ ಅರಳಿರುವ ಈ ಹೂವು ಜೀವದ ಹೂವು! (ಅಷ್ಟರಲ್ಲಿ ಬಿರುಗಾಳಿ ಬೀಸಿ ಭಯಾನಕವೆನಿಸುವುದು ಭೀಮಾರಣ್ಯ). ಇನ್ನೂ ಮುಗಿದಿಲ್ಲವೆಂದಂತಾಯಿತು ನಿನ್ನ ಕಾಡುವ ಚಪಲ! ಮುಗಿಯದಿರಲಿ ಮಲ್ಲಿಕಾರ್ಜುನಾ ಮುಗಿಯದಿರಲಿ ನಿನ್ನ ಕಾಡಿ ನೋಡುವ ಚಪಲ! ಅಂಜುವಳೆಂದು ತಿಳಿದಿರುವೆಯಾ ನಾನಿದಕ್ಕೆ?

ಅಂಜೆ, ಅಳುಕೆ. ಹಿಂಜರಿಯೆ!

ಆರೂ ಇಲ್ಲದವಳೆಂದು ಅಳಲುಗೊಳಬೇಡ ಕಂಡಯ್ಯಾ!

ಏನು ಮಾಡಿದೊಡೆಯೂ ಆನಂಜುವಳಲ್ಲ!

ತರಗೆಲೆಯ ಮೆದ್ದು ಆನಿಹೆನು;

ಸುರಗಿಯ ಮೇಲೊರಗಿ ಆನಿಹೆನು;

ಚೆನ್ನಮಲ್ಲಿಕಾರ್ಜುನಯ್ಯಾ,

ಕರಕರ ಕಾಡಿ ನೋಡಿದೊಡೆ

ಒಡಲನೂ ಪ್ರಾಣವನೂ

ನಿಮಗೊಪ್ಪಿಸಿ ಶುದ್ಧಳಹೆನು!

(ಬಿರುಗಾಳಿ ನಿಲ್ಲುವುದು. ಬಿರುಗಾಳಿಗೆ ತರಗೆಲೆಗಳೆಲ್ಲ ಉದುರಿ ಕಸಕೊಳೆಯಲ್ಲ ಚೆದುರಿದ ಕಾರಣ ಬನ ಬಹಳ ಚೆಲುವಾಗಿ ಕಾಣುವುದು. ಅದನು ಕಂಡು ಅಕ್ಕನ ಅಂತರಾತ್ಮ ಆನಂದಮಯವಾಗುವುದು)

ಆಹಾ, ಬೆರಗುಗೊಳಿಸುವ ಬನಸಿರಿಯೆ! ಇದು ಬರಿಯ ಬನಸಿರಿಯಾಗಿರದು; ಇದು ಅವನ ಮೈಸಿರಿಯೆ ಸರಿ ಇದು ಅವನ ಹೊರಮೈಯ ಐಸಿರಿ. (ಭಾವಪರವಶಳಾಗಿ)

ವನವೆಲ್ಲ ನೀವೇ!

ವನದೊಳಗಣ ದೇವತರುಗಳೆಲ್ಲ ನೀವೇ!

ತರುಗಳೊಳಗಾಡುವ

ಖಗಮೃಗಗಳೆಲ್ಲ ನೀವೇ!

ಚೆನ್ನಮಲ್ಲಿಕಾರ್ಜುನಾ,

ಸರ್ವಭರಿತನಾಗಿ ನೀನೆನಗೆ ಮೊಗದೋರ!

(ಸುತ್ತಲೂ ದೃಷ್ಟಿ ಪಸರಿಸುವಳು. ವಿಶ್ವಾತ್ಮನ ಅನಂತ ತೇಜಸ್ಸಿನ ತರಂಗಗಳಂತೆ, ಅನಂತ ಸೌಂದರ್ಯದ ತೆರೆಗಳಂತೆ, ಅಪಾರ ಕರುಣೆಯ ಕಿರಣಗಳಂತೆ ಸೃಷ್ಟಿಯ ಸಮಸ್ತ ಸುಂದರ ವಸ್ತುಗಳೂ ಗೋಚರಿಸುವುವು ಬಿಡಿಬಿಡಿಯಾಗಿ. ಅವುಗಳನ್ನು ಇಡಿಯಾಗಿ ನೋಡಿ ವಿಶ್ವಾತ್ಮನ ವಿಶ್ವರೂಪವನ್ನು ನೋಡುವ ಹಂಬಲ ಹಣ್ಣಾಗುವುದಿಲ್ಲ. ಆಗ ಅತೃಪ್ತ ಅಭಿಲಾಷೆ ಯಾರ ನೆರವನ್ನಾದರೂ ತೋರು ಎಂದು ಪ್ರೇರೇಪಿಸುವುದು)

ಸರ್ವಭರಿತನಾಗಿ, ಸರ್ವವ್ಯಾಪಿಯಾಗಿ ಮೊಗದೋರಲೊಲ್ಲ ಮಲ್ಲಿಕಾರ್ಜುನನಿನ್ನೂ! ಯಾರ ನೆರವನ್ನು ಕೋರಲಿ ಈ ನಿರ್ಜನಾರಣ್ಯದಲ್ಲಿ? ಕಂಡುದನೆಲ್ಲ ಕೇಳುವೆ; ಕೇಳುತ್ತ ಹೊರಡುವೆ ಗುರಿಯತ್ತ.

ಚಿಲಿಪಿಲಿ ಎಂದೋದುವ ಗಿಳಿಗಳಿರಾ,

ನೀವು ಕಾಣಿರೆ, ನೀವು ಕಾಣಿರೆ?

ಸರವೆತ್ತಿ ಪಾಡುವ ಕೋಗಿಲೆಗಳಿರಾ,

ನೀವು ಕಾಣಿರೆ, ನೀವು ಕಾಣಿರೆ?

ಎರಗಿ ಬಂದಾಡುವ ತುಂಬಿಗಳಿರಾ,

ನೀವು ಕಾಣಿರೆ, ನೀವು ಕಾಣಿರೆ?

ಕೊಳನ ತುಡಿಯೊಳಾಡುವ ಹಂಸಗಳಿರಾ,

ನೀವು ಕಾಣಿರೆ, ನೀವು ಕಾಣಿರೆ?

ಗಿರಿ ಗಹ್ವರದೊಳಾಡುವ ನವಿಲುಗಳಿರಾ,

ನೀವು ಕಾಣಿರೆ, ನೀವು ಕಾಣಿರೆ?

ಚೆನ್ನಮಲ್ಲಿಕಾರ್ಜುನನೆಲ್ಲಿರ್ದಹನೆಂದು

ನೀವು ಹೇಳಿರೆ, ನೀವು ಹೇಳಿರೆ?

ಯಾರೂ ಹೇಳಲಾರಿರಾ? ಹೇಳಲೊಲ್ಲಿರಾ? ನಿಮಗೂ ಗೊತ್ತಿಲ್ಲವೆ ಅವನ ನೆಲೆ? (ಮುಂದೆ ನೋಡಿ) ಮುಂದೆ ಕಾಣಿಸುವುದೇ ಮಲ್ಲಿಕಾರ್ಜುನನ ದಿವ್ಯ ದೇವಾಲಯವೆ? (ಮುಂದೆ ಸಾಗಿ) ಇದೋ ಮಲ್ಲಿಕಾರ್ಜುನನ ದಿವ್ಯಧಾಮ. ಇದೋ, ಮಲ್ಲಿಕಾರ್ಜುನನೇ ಮುಂದಿದ್ದಾನೆ!

ಹೊಳೆವ ಕೆಂಜೆಡೆಗಳ,

ಮಣಿ ಮುಕುಟದ,

ಒಪ್ಪುವ ಸುಲಿಪಲ್ಲ,

ನಗೆಮೊಗದ,

ಕಂಗಳ ಕಾಂತಿಯಿಂ ಈರೇಳು ಭುವನಮಂ ಬೆಳಗುವ

ದಿವ್ಯಸ್ವರೂಪನ ಕಂಡೆ ನಾನು!

ಕಂಡೆನ್ನ ಕಂಗಳ ಬರ ಹಿಂಗಿತ್ತಿಂದು!

ಗಂಡಗಂಡರನ್ನೆಲ್ಲ ಹೆಂಡಹೆಂಡರಾಗಿ ಆಳುವ

ಗುರುವನ ಕಂಡೆ ನಾನು!

ಜಗದಾದಿಶಕ್ತಿಯೊಳು ಬೆರಸಿ ಒಡನಾಡುವ

ಪರಮಗುರು ಚೆನ್ನಮಲ್ಲಿಕಾರ್ಜುನನ

ನಿಲವ ಕಂಡು ಬದುಕಿದೆನು, ಬದುಕಿದೆನು!

(ಭಾವ ಸಮಾಧಿಯಲ್ಲಿ ಕುಳಿತು ಬಿಡುವಳು ಅಕ್ಕ. ಇತ್ತ ಇಬ್ಬರು ಅರ್ಚಕರು ಅಕ್ಕನ ಅತುಲ ತೇಜಸ್ಸನ್ನೂ, ಅನಿರ್ವಚನೀಯ ಆತ್ಮಶ್ರೀಯನ್ನು ಕಂಡು ದುರಾಲೋಚನೆಯೊಂದಕ್ಕೆ ತೊಡಗುವರು).

ಅರ್ಚಕ ೧ : ಯಾರೀ ಮಾತಾಯಿ? ಪರ್ವತ ಮಲ್ಲಯ್ಯನ ದರ್ಶನಕ್ಕೆ ಬಂದ ಲಕ್ಷಾವಧಿ ಭಕ್ತರನ್ನು ನೋಡಿದ್ದೇವೆ. ಸ್ವಾಮಿಗಳನ್ನು, ಸಂನ್ಯಾಸಿಗಳನ್ನು, ಯೋಗಿಗಳನ್ನು, ವಿರಾಗಿಗಳನ್ನು ನೋಡಿದ್ದೇವೆ. ಈ ಮಾತಾಯಿಯ ಮುಖದ ಮೇಲಿನ ದಿವ್ಯ ತೇಜಸ್ಸನ್ನು ಇದುವರೆಗೂ ನೋಡಿರಲಿಲ್ಲವಲ್ಲ!

ಅರ್ಚಕ ೨ : ನಿಜ, ಈಕೆ ಮಹಾಮಹಿಮಳೇ ಇರಬೇಕು; ಈ ಮಹಾನುಭಾವಳನ್ನು ಏನಾದರೂ ಮಾಡಿ ನಮ್ಮ ಬಲೆಯಲ್ಲಿ ಹಾಕಿಕೊಂಡುಬಿಟ್ಟರೆ ನಮ್ಮ ಬಡತನವೇ ಬಯಲಾಗುವುದು.

ಆರ್ಚಕ ೧ : ಅದು ಹೇಗೆ?

ಅರ್ಚಕ ೨ : ಇಷ್ಟು ತಿಳಿಯದ ನೀನು ಅರ್ಚಕ ಹೇಗಾದಿಯೋ? ಹಾವು ತೋರಿ ಹಾಲ ಬೇಡುವಂತೆ ಈ ಮಹಾತ್ಮಳನ್ನು ತೋರಿ ಹಣ ಸುಲಿಯಬೇಕು ಭಕ್ತರಿಂದ. ಈಕೆಗೆ ಆಶ್ರಮ ಕಟ್ಟಿಸುವುದಿದೆ, ಬಂದ ಭಕ್ತರ ಆದರಾತಿಥ್ಯ ನಿರ್ವಹಿಸುವುದಿದೆ–ಎಂದು ಏನೇನೋ ಮಂಕುಬೂದಿ ಎರಚಿ ದುಡ್ಡು ದೋಚಿಕೊಳ್ಳಬೇಕು.

ಅರ್ಚಕ ೧ : ಬಹಳ ಬುದ್ಧಿವಂತ ಕಣೋ ನೀನು! ಈ ಹಂಚಿಕೆಯನ್ನು ಕಾರ್ಯರೂಪಕ್ಕೆ ತಂದೇಬಿಡೋಣ. ಆಮೇಲೆ ಕೇಳುವುದೇನಿದೆ, ದಿನಾಲು ಹೋಳಿಗೆ ತುಪ್ಪ–

ಅರ್ಚಕ ೧ : ಹೊಡಿ ನಮ್ಮಪ್ಪ!

(ಅಕ್ಕನ ಸಮಾಧಿ ಸಡಿಲುವುದು. ಕಣ್ದೆರೆದಾಗ ಇಬ್ಬರೂ ಅರ್ಚಕರು ಕೈಮುಗಿದು ನಿಂತುದನ್ನು ಕಾಣುವಳು)

ಅಕ್ಕಮಹಾದೇವಿ : ನೀವಾರು ತಂದೆ?

ಅರ್ಚಕ ೧ : ನಾವು ಈ ಶ್ರೀಗಿರಿ ಮಲ್ಲಿಕಾರ್ಜುನನ ಅರ್ಚಕರು ತಾಯೆ. ಈ ಮೊದಲು ಇಲ್ಲಿಗೆ ಆಗಮಿಸಿದ ಅಸಂಖ್ಯ ಯತಿಗಳನ್ನೂ, ವ್ರತಿಗಳನ್ನೂ, ಸಿದ್ಧರನ್ನೂ, ಸಾಧ್ಯರನ್ನೂ ನೋಡಿದ್ದೇವೆ. ನಿಮ್ಮ ಈ ದಿವ್ಯ ತೇಜಸ್ಸನ್ನು ಯಾರಲ್ಲಿಯೂ ಕಂಡಿರಲಿಲ್ಲ. ಬಡವರ ಮನೆಗೆ ಭಾಗ್ಯದೇವತೆ ಬಂದಂತೆ ಬಂದಿರುವಿರಿ. ತಮಗಿಲ್ಲಿ ತಂಗುವ, ಪೂಜೆ ಪ್ರಾರ್ಥನಾದಿಗಳ, ತಮ್ಮ ದರ್ಶನಕ್ಕೆ ಬರುವ ಭಕ್ತಾದಿಗಳ ಆದರಾತಿಥ್ಯದ ಎಲ್ಲ ವ್ಯವಸ್ಥೆಗಳನ್ನು ನಾವೇ ನಿಂತು ಮಾಡುವೆವು. ತಾವು ಈ ಸೇವಾಭಾಗ್ಯವನ್ನು ಈ ಪಾಮರರಿಗೆ ನೀಡಬೇಕೆಂದು ಬೇಡಿಕೊಳ್ಳುತ್ತೇವೆ!

ಅಕ್ಕಮಹಾದೇವಿ : (ತನ್ನಲ್ಲಿ) ತವರುಮನೆಯನ್ನು, ಕೌಶಿಕನ ಅರಮನೆಯನ್ನು, ಅಣ್ಣನ ಮಹಾಮನೆಯನ್ನು ತೊರೆದು ಗಿರಿಯ ಸೇರಿ ಬಂದರೂ ಬಿಡದಾಯಿತೆ. ಬಂಧನಕ್ಕೆಳೆಯಲೇಬೇಕೆಂಬ ಬಿದಿಯ ಸಂಚು? ಪ್ರಲೋಭನವೆ, ನೀನು ಯಾವ ಯಾವ ವೇಷ ಧರಿಸಿ ಬರುವೆ, ಯಾವ ಯಾವ ರೂಪ ತೊಟ್ಟು ಬರುವೆಯೆಂಬುದ ಯಾರು ಲೆಕ್ಕ ಮಾಡಬೇಕು? ಇಲ್ಲಿಗೂ ನೀನು ಬಂದಿರುವಿ! ಇನ್ನು ನಾನಿಲ್ಲಿರಕೂಡದು! ಇಲ್ಲಿಯೂ ನನಗೆ ನಿರ್ಬಂಧನ ಸಿಕ್ಕದು, ಸಿಕ್ಕಿದುದೂ ದಕ್ಕದು! ಪ್ರಭು ಹೇಳಿದ ಕಾಣಬಾರದ ಕದಳಿಯಲ್ಲಿಯೇ ನನಗದು ಸಿಕ್ಕೀತು. ಅಲ್ಲಿಗೇ ಮುಗಿಯಲಿದೆ ಈ ಪಯಣ! ಇಲ್ಲಿಗೆ ಸಾಕು ಈ ಸ್ಥಾನ. (ಅರ್ಚಕರಿಗೆ) ಅಯ್ಯಾ, ನಿಮ್ಮ ಅಪೇಕ್ಷೆಯನ್ನು ಪೂರ್ಣಗೊಳಿಸುವುದು, ನನಗೆ ಸಾಧ್ಯವಿಲ್ಲದ ವಿಷಯ. ನಾನು ಹೊರಟಿರುವುದು ಕದಳಿಗೆ. ಅದನ್ನು ತಲುಪುವವರೆಗೆ ವಿರಾಮವಿಲ್ಲ ನನಗೆ. ಅಲ್ಲಿಗೆ ಸೇರಿದ ಮೇಲೆಯೇ ನನ್ನ ಆತ್ಮಕ್ಕೆ ಶಾಂತಿ.

ಅರ್ಚಕ ೨ : ಬಹಳ ದುಸ್ಸಾಧ್ಯವಾದ ಸ್ಥಳವದು ತಾಯೆ. ಹೇಗೆ ಹೋಗುವಿರಿ ಅಲ್ಲಿಗೆ? ನಾವಾರಾದರೂ ಜೊತೆಗೆ ಬರಬೇಕೆ?

ಅಕ್ಕಮಹಾದೇವಿ : ಎಲ್ಲರನ್ನೂ, ಎಲ್ಲವನ್ನೂ ಹಿಂದುಳಿಸಿ ಮಲ್ಲಯ್ಯನೊಬ್ಬನನ್ನು ಜೊತೆಗುಳಿಸಿಕೊಂಡಿದ್ದೇನೆ. ನೀವಿಲ್ಲಿಯೇ ನಿಲ್ಲಿರಿ. ನಿಮಗಿಲ್ಲಿ ಇನ್ನೂ ಕೆಲವನ್ನು ಬಿಟ್ಟು ಹೋಗುತ್ತೇನೆ.

(ಒಂದೊಂದೇ ಹೆಜ್ಜೆಯಿಡುತ್ತ ಕೆಳಗಣ ವಚನ ಹೇಳುತ್ತ ಹೊರಡುವಳು)

ಹಸಿವೇ ನೀನು ನಿಲ್ಲು, ನಿಲ್ಲು !

ತೃಷೆಯೇ ನೀನು ನಿಲ್ಲು, ನಿಲ್ಲು !

ನಿದ್ರೆಯೇ ನೀನು ನಿಲ್ಲು, ನಿಲ್ಲು !

ಕಾಮವೇ ನೀನು ನಿಲ್ಲು, ನಿಲ್ಲು !

ಕ್ರೋಧವೇ ನೀನು ನಿಲ್ಲು, ನಿಲ್ಲು !

ಮೋಹವೇ ನೀನು ನಿಲ್ಲು, ನಿಲ್ಲು !

ಲೋಭವೇ ನೀನು ನಿಲ್ಲು, ನಿಲ್ಲು !

ಮದವೇ ನೀನು ನಿಲ್ಲು, ನಿಲ್ಲು !

ಮಚ್ಚರವೇ ನೀನು ನಿಲ್ಲು, ನಿಲ್ಲು !

ಸಚರಾಚರವೇ ನೀನು ನಿಲ್ಲು, ನಿಲ್ಲು !

ನಾನು ಚೆನ್ನಮಲ್ಲಿಕಾರ್ಜುನನ ದೇವರ

ಅವಸರದ ಓಲೆಯನ್ನೊಯ್ಯುತ್ತಲಿದ್ದೇನೆ!

(ವೇಗವಾಗಿ ಹೋಗಿಬಿಡುವಳು. ಅರ್ಚಕರು ಅವಾಕ್ಕಾಗಿ ನಿಲ್ಲುವರು ಕೊಂಚ ಹೊತ್ತು. ಆಮೇಲೆ ದೇವಾಲಯದೊಳಕ್ಕೆ ಹೋಗುವರು. ತೆರೆ ನಿಧಾನವಾಗಿ ಏಳುವುದು. ಕದಳಿಯ ವನ ಕಂಗೊಳಿಸುವುದು. ಅದರ ಮಧ್ಯದ ಶಿಲಾಪೀಠದ ಮೇಲೆ ಧ್ಯಾನಮಗ್ನ ಮಹಾದೇವಿ ಕಾಣಿಸುವಳು. ತೆರೆ ಎದ್ದ ಮೇಲೆ ಅರ್ಧನಿಮೀಲಿತನಯನೆಯಗಿ ನೋಡಿ ಹರುಷವುಕ್ಕಿ ಹಾಡುವಳು)

ಕದಳಿಯೆಂಬುದು ತನು, ಕದಳಿಯೆಂಬುದು ಮನ,

ಕದಳಿಯೆಂಬುದು ವಿಷಯಂಗಳು;

ಕದಳಿಯೆಂಬುದು ಭವ ಘೋರಾರಣ್ಯ!

ಕದಳಿಯೆಂಬುದು ಗೆದ್ದು ಬದುಕಿ ಬಂದು
ಕದಳಿಯ ಬನದಲ್ಲಿ ಭವಹರನ ಕಂಡೆನು!
"ಭವಗೆಟ್ಟು ಬಂದೆಯಾ ಮಗಳೆ" ಎಂದು
ಕರುಣದಿಂದ ತೆಗೆದು ಬಿಗಿಯಪ್ಪಿದಡೆ,
ಚೆನ್ನಮಲ್ಲಿಕಾರ್ಜುನನ
ಹೃದಯಕಮಲದಲ್ಲಿ ಅಡಗಿದೆನು!

(ಮತ್ತೆ ಧ್ಯಾನಮಗ್ನಳಾಗುವಳು. ಮಹಾದೇವಿ-ನೈಜನಿರ್ಬಂಧನದ ಪರಿಸರದಲ್ಲಿ. ತೆರೆ ಬೀಳುವುದು)

ಭ್ರಮರ ದೂತ

ಭ್ರಮರ ದೂತ

ನಿರೂಪಕ : ಮಧುರೆಯಿಂದ ಗೋಕುಲಕ್ಕೆ ಹೋಗುವ ಹಾದಿಯಲ್ಲಿ ಹಾದಿಕಾರನೊಬ್ಬ. ಮಥುರ ನಿವಾಸಿಯೆಂಬುದು ಅವನು ಗುನುಗುನಿಸುತಲಿದ್ದ ಹಾಡಿನಿಂದಲೇ ಗೊತ್ತಾಗುತ್ತದೆ.

ಹಾದಿಕಾರ : ಕಂಸ ಕುಲವ ಧ್ವಂಸಗೊಳಿಸೆ

ಕೃಷ್ಣ ಬಂದ ಮಥುರೆಗೆ

ಕ್ರೌರ್ಯಯುಗವು ಮುಗಿದು ಬಂತು

ಧರ್ಮಯುಗವು ಮಥುರೆಗೆ!

ಬಂಧನಗಳು ಕಳೆದು ಜನಕೆ

ಬಂದುದಣ್ಣ ಬಿಡುಗಡೆ

ಉಸಿರುಗಟ್ಟುವಂಥ ಸ್ಥಿತಿಗೆ

ತಂದುದಣ್ಣ ನಿಲುಗಡೆ!

ನಿರೂಪಕ : ಬದಿಯ ಹಳುವಿನಲ್ಲಿದ್ದ ಸುಮನೆ, ಯಮುನೆ, ಕಲ್ಯಾಣಿ, ಶುಕವಾಣಿಯರಿಗೆ ಮಥುರೆಯ ಶಬ್ದ ಕಿವಿಗೆ ಬಿದ್ದು ಕುತೂಹಲ ಕೆರಳಿ ತವಕ ತುಳುಕುತ್ತಿರಲು ಬಂದು ದಾರಿಕಾರನನ್ನು ಎದುರುಗೊಳ್ಳುತ್ತಾರೆ.

ಸುಮನೆ : ಮಥುರಾನಗರಿಯ ನಾಗರಿಕ ಬಂಧುವಿಗೆ ಸ್ವಾಗತ!

ಯಮುನೆ : ಸ್ವಾಗತ, ಸುಸ್ವಾಗತ.

ಹಾದಿಕಾರ : ನೀವಾರು ಸುಭಾಷಿಣಿಯರು?

ಕಲ್ಯಾಣಿ : ನಾನು ಕಲ್ಯಾಣಿ, ಇವಳು ಶುಕವಾಣಿ, ಅವರು ಯಮುನೆ ಸುಮನೆಯರು. ನಾವು ನಾಲ್ವರೂ ಗೋಕುಲದ ಗೋಪಿಯರು.

ಹಾದಿಕಾರ : ನನ್ನನ್ನು ಇಷ್ಟೊಂದು ಹಾರ್ದಿಕವಾಗಿ ಸ್ವಾಗತಿಸಲು ಕಾರಣ?

ಶುಕವಾಣಿ : ನೀವು ಮಥುರೆಯವರೆಂದು ಊಹಿಸಿದೆವು. ನಿಜವಷ್ಟೆ?

ಹಾದಿಕಾರ : ಅಹುದು.

ಶುಕವಾಣಿ : ಅದಕ್ಕೇ ಈ ಸಂಭ್ರಮದ ಸ್ವಾಗತ. ಈಗ ಮಥುರೆಯಲ್ಲಿರುವ ಕೃಷ್ಣನ ಸುದ್ದಿಯನ್ನೇನಾದರೂ ತಂದಿದ್ದರೂ ತಂದಿರಬಹುದೆಂದು ನಿಮ್ಮನ್ನು ತಡೆದೆವು. ಕ್ಷಮೆಯಿರಲಿ.

ಹಾದಿಕಾರ : ಮಥುರಾನಾಥ ಶ್ರೀಕೃಷ್ಣರನ್ನು ಕೃಷ್ಣನೆಂದು ಏಕವಚನದಿಂದಲೇ ಕರೆದಿರಲು ಇಷ್ಟೊಂದು ಸಲಿಗೆಯ ಅಧಿಕಾರ ನಿಮಗೆಂತು ಬಂತು?

ಸುಮನೆ: ಕೃಷ್ಣ ಮಥುರಾನಾಥನಾಗುವ ಮುನ್ನ ಗೋಕುಲನಾಥನಾಗಿರಲಿಲ್ಲವೆ?

ಹಾದಿಕಾರ : ಇರಬಹುದು. ಈ ಗೋಕುಲದವರೆಲ್ಲ ಅವರನ್ನು ಏಕವಚನದಿಂದಲೇ ಕರೆಯುವರೇನು?

ಯಮುನೆ : ಎಲ್ಲರೂ ಏಕೆ ಕರೆದಾರು? ಸಾಕಿ ಬೆಳೆಸಿದ ನಂದ ಯಶೋದೆಯರು ಮತ್ತು ನಾವು ಗೋಪಿಯರು ಈ ಅಧಿಕಾರ ಚಲಾಯಿಸುತ್ತೇವೆ.

ಹಾದಿಕಾರ : ತಂದೆ-ತಾಯಿಗಳಿಗೆ ಈ ಅಧಿಕಾರ ಸಹಜ. ನಿಮಗೆ ಹೇಗೆ ಬಂದಿತು ಈ ಅಧಿಕಾರ?

ಕಲ್ಯಾಣಿ : ಬೇಕೆಂತಲೇ ಬೆದಕಿ ಕೇಳುತ್ತಿರುವಿರಲ್ಲ? ಇಷ್ಟು ತಿಳಿಯದೆ? ಇದು ಒಲವಿನ ಅಧಿಕಾರ!

ಹಾದಿಕಾರ : (ಬೆಚ್ಚಿ) ನೀವೆಲ್ಲರೂ ಶ್ರೀಕೃಷ್ಣನ ಪ್ರೇಯಸಿಯರೆ?

ಶುಕವಾಣಿ : ನಾವಷ್ಟೇ ಅಲ್ಲ, ಗೋಕುಲದ ತುಂಬ ಬೇರೆ ಗೋಪಿಯರಿದ್ದಾರೆ. ಗೋಪಿಯರ ಕಣ್ಮಣಿ ರಾಧೆಯಿದ್ದಾಳೆ.

ಹಾದಿಕಾರ : ಅಬ್ಬಾ, ಒಬ್ಬ ಪ್ರೇಮಿಗೆ ಇಷ್ಟೊಂದು ಪ್ರೇಯಸಿಯರು? ಎಂತಲೇ ಮುರಾರಿ ಇಲ್ಲಿಂದ ಪರಾರಿಯಾಗಿರಬೇಕು?

ಸುಮನೆ : ಬಿಟ್ಟು ಓಡಿಹೋಗುವಂಥರಾಗಿ ಕಂಡೆವೆ ನಿಮಗೆ ನಾವು?

ಹಾದಿಕಾರ : ಛೆ! ಛೆ!-ನಿಮ್ಮಂಥ ರೂಪವತಿಯರನ್ನು ಬಿಟ್ಟು ಹೋಗಬಹುದೆ? ನಾನೇ ಶ್ರೀಕೃಷ್ಣನಾಗಿದ್ದರೆ ಖಂಡಿತ ನಿಮ್ಮನ್ನು ಬಿಟ್ಟು ಹೋಗುತ್ತಿರಲಿಲ್ಲ!

ಯಮುನೆ : (ಸಿಟ್ಟಿನಿಂದ) ನಗರನಿವಾಸಿಗಳಿಗೆ ನಾಲಗೆ ಚಪಲವಾಗಿರುವುದು ಸ್ವಾಭಾವಿಕ!

ಹಾದಿಕಾರ : ಇದು ನಾಲಗೆಯ ಚಾಪಲ್ಯವಲ್ಲ, ಚೈತ್ಯಾಕ್ಷಿಯರೆ. ಇಪ್ಪುದರ ಒಪ್ಪಿಗೆ. ನಿಮ್ಮನ್ನು ಪ್ರೇಯಸಿಯರನ್ನಾಗಿ ಪಡೆದ ಶ್ರೀಕೃಷ್ಣ ಅದೆಂಥ ಅದೃಷ್ಟಶಾಲಿ!

ಕಲ್ಯಾಣಿ : ಕೃಷ್ಣನಿಗೂ ಹೀಗೆನ್ನಿಸಿದ್ದರೆ ಹೋಗಿ ಇಷ್ಟು ದಿನಗಳಾದರೂ ಹೊರಳಿ ಬರುವುದಿರಲಿ, ಕುಶಲವಾರ್ತೆಯನ್ನೂ ಕಳಿಸದ ಕಲ್ಲೆದೆಯವನಾಗುತ್ತಿದ್ದನೆ?

ಹಾದಿಕಾರ : ಮಥುರೆಗೆ ಹೋದಾಗಿನಿಂದ ಅವರ ಸುದ್ದಿಯನ್ನೇ ಕೇಳಿಲ್ಲವೆ ನೀವು?

ಸುಮನೆ : ಎಲ್ಲರೂ ಕೇಳಿರುವ ಸುದ್ದಿಗಳನ್ನು ನಾವು ಕೇಳಿದ್ದೇವೆ. ಮದ್ದಾನೆ ಕುವಲಯಪೀಡವನ್ನು ಕೊಂದುದು. ಚಾಣೂರನಂಥ ಜಗಜ್ಜಟ್ಟಿಯನ್ನು ಸಾಯಿಸಿದುದು, ಕ್ರೂರ ಕಂಸನನ್ನು ವಧಿಸಿದುದು, ಮಥುರೆಯನ್ನು ಗೆದ್ದುದು-ಇತ್ಯಾದಿ ಸುದ್ದಿಗಳನ್ನು ನಾವೂ ಕೇಳಿದ್ದೇವೆ.

ಹಾದಿಕಾರ : ಪಾಪ, ನೀವು ಶ್ರೀಕೃಷ್ಣನು ಗೆದ್ದ ಸುದ್ದಿಗಳನ್ನಷ್ಟೇ ಕೇಳಿರುವಿರಿ, ಅವರನ್ನೇ ಗೆದ್ದವಳ ಸುದ್ದಿಯನ್ನು ಕೇಳಿಯೇ ಇಲ್ಲ!

ಗೋಪಿಯರೆಲ್ಲ : (ಕಾತರದ ಸ್ವರದಲ್ಲಿ) ಕೃಷ್ಣನನ್ನು ಗೆದ್ದವಳು? ಯಾರವಳು? ಬೇಗ ಹೇಳು ಪಥಿಕ ಬೇಗ ಹೇಳು! ನಮಗಿಂತ ಚೆಲುವೆಯಾಗಿರುವಳೆ ಅವಳು?

ಹಾದಿಕಾರ : ಹೌದು, ಅವಳೊಬ್ಬ ಅಪ್ರತಿಮ ಸುಂದರಿ.

ಗೋಪಿಯರು : ಅಯ್ಯೋ ಕೆಟ್ಟೆವು!

ಹಾದಿಕಾರ : ಅವಳ ರೂಪವರ್ಣನೆಯನ್ನಷ್ಟು ಕೇಳಿರಿ, ಸುಮ್ಮನೆ ಬಡಬಡಿಸಬೇಡಿರಿ.

ಗೋಪಿಯರು : ವರ್ಣಿಸು ಪಥಿಕ, ಅವಳ ಲೋಕೋತ್ತರ ಲಾವಣ್ಯವನ್ನು ಬಣ್ಣಿಸು!

ಹಾದಿಕಾರ : ಅವಳು ತ್ರಿಭಂಗಿಯ ಶ್ರೀಕೃಷ್ಣರಿಗೆ ತ್ರಿವಕ್ರಿ. ಬೆನ್ನು ಬಗ್ಗಿದ ಗೂನಿ, ಕಂಸದಾಸಿ...

ಯಮುನೆ : ಸಾಕಿಷ್ಟು ಪಥಿಕ, ಸಾಕು ಸಾಕು! ಆ ನೀಲಮೇಘ ಶ್ಯಾಮಸುಂದರ ವನಮಾಲಿ,

ಸುಮನೆ : ಆ ಜಗನ್ಮೋಹನ ಪೀತಾಂಬರಧಾರಿ,

ಕಲ್ಯಾಣಿ : ಮುರಲೀಮೋಹನ ವಿಪಿನವಿಹಾರಿ,

ಶುಕ್ರವಾಣಿ : ಮಯೂರ ಮುಕುಟ ಪರಿಶೋಭಿತ ಗಿರಿಧಾರಿ ಒಬ್ಬ ದಾಸಿಗೆ ಮನಸೋತನೆ? ಕೇಳಲಾರೆ.

ಯಮುನೆ : ಒಬ್ಬ ಗೂನಿಗೆ ಒಲಿದನೆ? ತಾಳಲಾರೆ!

ಕಲ್ಯಾಣಿ : ತ್ರಿವಕ್ರೆಯ ಬಲೆಗೆ ಬೀಳಲೆಂದೇ ನಮ್ಮೆಲ್ಲರನ್ನೂ ತೊರೆದು ಹೋದನೆ?

ಶುಕವಾಣಿ : ಯಾವ ಮೋಡಿ ಮಾಡಿದಳೋ ಆ ಹಾಳು ಗೂನಿ!

ಹಾದಿಕಾರ : ವೃಥಾ ಕುಬ್ಜೆಯನ್ನು ದೂಷಿಸದಿರಿ ಗೋಪಿಯರೆ–ಅವಳಾವ ಮೋಡಿಯನ್ನೂ ಮಾಡಿಲ್ಲ; ಕುತಂತ್ರವನ್ನೂ ಹೂಡಿಲ್ಲ; ಮೇಲೆ ಬಿದ್ದು ಬೇಡಿಲ್ಲ!

ಸುಮನೆ : ಕೃಷ್ಣನೇ ಅವಳನ್ನು ಹುಡುಕಿಕೊಂಡು ಹೋದನೆ?

ಯಮುನೆ : ಕೃಷ್ಣ ತನ್ನ ಸೌಂದರ್ಯಪ್ರಜ್ಞೆಯನ್ನೇ ಕಳೆದುಕೊಂಡನೆ?

ಕಲ್ಯಾಣಿ : ನಮ್ಮನ್ನು ಮರೆತರೆ ಮರೆಯಲಿ, ರಾಧೆಯನ್ನೂ ಮರೆತುಬಿಟ್ಟನೆ?

ಶುಕವಾಣಿ : ಹೇಸದೆ ದಾಸಿಯ ಸಂಗ ಮಾಡಿದನೆ?

ಹಾದಿಕಾರ : ನಡೆದುದನ್ನು ನಡೆದಂತೆ ಹೇಳಲೆ?

ಗೋಪಿಯರೆಲ್ಲ : ಹೇಳು ಪಥಿಕ, ಹೇಳು! ಬೇಗ ಹೇಳು!

ಹಾದಿಕಾರ : ಶ್ರೀಕೃಷ್ಣ ಬಲರಾಮರು ಮಥುರಾನಗರಿಯನ್ನು ಪ್ರವೇಶಿಸಿ ರಾಜಮಾರ್ಗಕ್ಕೆ ಬರುತ್ತಲೇ ಮಥುರಾ ನಿವಾಸಿಗಳ ಹಿಗ್ಗಿನ ಕಡಲು ಉಕ್ಕೇರಿತು. ನೇಗೆಯವನೊಬ್ಬ ಸ್ವಸಂತೋಷದಿಂದ ಅವರಿಗೆ ಹೊಸ ಬಟ್ಟೆಗಳನ್ನು ಕೊಟ್ಟ; ಹೂವಾಡಿಗನೊಬ್ಬ ಅವರಿಗೆ ಹೊಸ ಹೂಮಾಲೆಗಳನ್ನು ಹಾಕಿದ. ಆ ಮೇಲೆ ಬಂದಳು ಈ ಗಂಧದ ಹುಡುಗಿ. ಗೂನಿಯಾದರೂ ಬಲು ಬೆಡಗಿ. ಶ್ರೀಕೃಷ್ಣ ಶ್ರೀಗಂಧ ಬೇಡುತ್ತಲೆ, ಇದಕ್ಕೆ ನಿನಗಿಂತ ತಕ್ಕವರಾರು ಸುಂದರಾಂಗ! ತೆಗೆದುಕೊಳ್ಳಿರಿ, ನೀವಿಬ್ಬರೂ ನಿಮಗೆ ಸಾಕೆನಿಸುವಷ್ಟು ಈ ಶ್ರೀಗಂಧ ಲೇಪಿಸಿಕೊಳ್ಳಿರಿ–ಎಂದು ಗಂಧದ ಬಟ್ಟಲನ್ನೇ ಕೊಟ್ಟು ಬಿಟ್ಟಳಾಕೆ. ಸಂತುಷ್ಟರಾದ ಶ್ರೀಕೃಷ್ಣರು ಅವಳ ಪಾದಗಳನ್ನು ತಮ್ಮ ಪಾದಗಳಿಂದ ಮೆಟ್ಟಿ ಅವಳ ಗಲ್ಲವನ್ನು ತಮ್ಮ ಕರಕಮಲಗಳಿಂದ ಹಿಡಿದು ಮೇಲೆತ್ತಿದರು. ಅವಳ ಗೂನು ಮಾಯವಾಗಿಬಿಟ್ಟಿತು.

ಗೋಪಿಯರು : ಇಲ್ಲಿ ಇದಕ್ಕೂ ದೊಡ್ಡ ಅದ್ಭುತಗಳನ್ನು ತೋರಿದ್ದ ನಮ್ಮ ಕೃಷ್ಣನಿಗೆ ಇದಾವ ಘನ ವಿಷಯ? ಮುಂದೇನಾಯಿತು ಪಥಿಕ?

ಹಾದಿಕಾರ : ಶ್ರೀಕೃಷ್ಣರ ಈ ಮಹದುಪಕಾರವನ್ನು ಅವರಿಗೆ ಮೀಸಲ ಮೈಯನ್ನೊಪ್ಪಿಸಿ ತೀರಿಸ ಬಯಸಿದಳು ಆ ಸುರಸುಂದರಿ. ಬಂದ ಕೆಲಸ ಮುಗಿದ ಮೇಲೆ ನಿನ್ನ ಮನೆಗೇ ಬರುವೆನೆಂದು ವಚನವಿತ್ತು ಹೊರಟರು ಬಲರಾಮ ಶ್ರೀಕೃಷ್ಣರು. ಅವರು ಹೋದತ್ತ ಅನಿಮಿಷನಯನೆಯಾಗಿ ನಿಂತಳು ಆ ಚೆನ್ನಿ. ಅವಳೆಂಥ ಧನ್ಯೆ?

ಸುಮನೆ : (ಕಾತರ ಸ್ವರದಲ್ಲಿ) ಅವಳ ಮನೆಗೆ ಹೋಗಿಯೂ ಬಿಟ್ಟನೆ ಕೃಷ್ಣ?

ಹಾದಿಕಾರ : ಇದಾಗಲೆ ಹೋಗಿರಬಹುದು. ಹೋಗಿರದಿದ್ದರೆ ಇಷ್ಟರಲ್ಲಿಯೇ ಹೋಗಿರಬಹುದು, ಹೋದರೆ ತಪ್ಪೇನಿಲ್ಲ.

ಯಮುನೆ : (ರೇಗಿ) ಗಂಡಸರೇನು ಮಾಡಿದರೂ ತಪ್ಪಲ್ಲ!

ಕಲ್ಯಾಣಿ : (ವ್ಯಂಗ್ಯವಾಗಿ) ಗಂಡಸರು ಎಷ್ಟು ಮಹಿಳೆಯರನ್ನು ಮೋಸಗೊಳಿಸಿದರೂ ಅದು ತಪ್ಪಲ್ಲ. ಅವರಿಗೊಲಿದ ಮುಗ್ಧ ಯುವತಿಯರದೇ ತಪ್ಪು.

ಶುಕವಾಣಿ : ಎಷ್ಟೆಂದರೂ ಹೆಣ್ಣು ಬೆಪ್ಪು!

ಸುಮನೆ : ಆ ಕುಬ್ಜೆಯ ಬಗೆಗೆ ನಮಗೆ ಸವತಿಮತ್ಸರ ಸಹಜವಾದರೂ ಅವಳ ಬಗ್ಗೆ ಹೆಮ್ಮೆಯೂ ಹುಟ್ಟಿದೆ ನನಗೆ.

ಯಮುನೆ : ಅದಾವ ಹೆಮ್ಮೆ?

ಸುಮನೆ : ಈ ಬೆಪ್ಪುಗಳ ಮೂಗಿಗೆ ತುಪ್ಪ ಹಚ್ಚಿ ಹೋದ ಆ ಮೋಸಗಾರನ ಮೂಗಿಗೇ ತುಪ್ಪ ಹಚ್ಚಿದಳಲ್ಲ, ಎಂಬ ಹೆಮ್ಮೆ!

ಕಲ್ಯಾಣಿ : ಅವಳಿಗೂ ಈ ಠಕ್ಕ ಕೈಕೊಡುವುದಿಲ್ಲವೆಂದು ಯಾವ ವಿಶ್ವಾಸದಿಂದ ಹೇಳುವಿ, ಸುಮನೆ?

ಸುಮನೆ : ಯಾರು ಬಲ್ಲರು, ಕೊಟ್ಟರೂ ಕೊಡಬಹುದು!

ಶುಕವಾಣಿ : ಇದೇ ವೇಗದಲ್ಲಿ ಕೃಷ್ಣನ ಪ್ರೇಮಯಾತ್ರೆ ಮುಂದುವರೆದರೆ ಅನತಿ ದೂರದಲ್ಲಿಯೇ ಸಾವಿರಾರು ಸತಿಯರು ಆದರೂ ಆಗಬಹುದು ಅವನಿಗೆ!

ಯಮುನೆ : ಆದರೂ ಆಗಬಹುದು. ಯಾವುದು ಅಸಾಧ್ಯ ಈ ಮಾಯಾವಿಗೆ?

ಹಾದಿಕಾರ : ಮಾಯಾವಿಯೆನ್ನದಿರಿ ಮುಗ್ಧೆಯರೆ. ಬಂಧನದಲ್ಲಿದ್ದ ತಂದೆ ತಾಯಿಗಳನ್ನೂ, ಕಂಸನ ರಾಜ್ಯದ ಸಮಸ್ತರನ್ನೂ ಸಂಕೋಲೆಯಿಂದ ಬಿಡಿಸಿದ ಅವರು ತಾವೇ ಸಿಂಹಾಸನವೇರಬಹುದಿತ್ತಲ್ಲ? ಹಾಗೆ ಮಾಡದೆ ವೃದ್ಧ ಉಗ್ರಸೇನರನ್ನು ಸಿಂಹಾಸನದ ಮೇಲೆ ಕೂಡ್ರಿಸಿ ತಾವು ಕುಬ್ಜೆಯಂಥ ದಾಸಿಯ ಪ್ರೇಮವನ್ನು ಸ್ವೀಕರಿಸಿದರು. ಕುಬ್ಜೆಯ ಶುದ್ಧ ಪ್ರೇಮವನ್ನು ಗುರುತಿಸಿದರು.........

ಗೋಪಿಯರು : ಕುಬ್ಜೆ! ಕುಬ್ಜೆ! ಕುಬ್ಜೆ! ಸಾಕು ನಿಮ್ಮ ಕುಬ್ಜೆಯ ಗುಣಗಾನ! ನೀವು ಅವಳ ಬಂಧು ಬಳಗದವರಾಗಿರಬೇಕು! ಹೊರಡಿರಿ ಮುಂದಕ್ಕೆ! ನಗರದವರು ನಂಬಿಕೆಗೆ ಅರ್ಹರಲ್ಲ!

ಹಾದಿಕಾರ : ಕಂಡದ್ದನಾಡಿದರೆ ಕೆಂಡದಂಥ ಸಿಟ್ಟು! ಸಾಕು ನಿಮ್ಮೊಡನೆ ಹರಟೆ. ನಾನು ಹೊರಟೆ. (ಹೋಗುತ್ತ) ಪರಸ್ಪರ ಮತ್ಸರವೆನಿತೂ ಇಲ್ಲದ ಪ್ರೇಯಸಿಯರಿವರು ಎಂಥ ಪವಿತ್ರಾತ್ಮರು! (ಹೋಗುವನು)

ಸುಮನೆ : ಹೋದ ಪುಣ್ಯಾತ್ಮ! ಉರಿವ ಗಾಯಕ್ಕೆ ಉಪ್ಪೆರಚಿ ಹೋದ!

ಯಮುನೆ : ಆ ಗೂನಿಯ ತುತ್ತೂರಿ ಊದಿ ಹೋದ.

ಕಲ್ಯಾಣಿ : ನೀವಿನ್ನು ಕೃಷ್ಣನನ್ನು ಮರೆತುಬಿಡಿರಿ, ಎಂದು ಅಪರೋಕ್ಷವಾಗಿ ಹೇಳಿ ಹೋದ!

ಶುಕವಾಣಿ : ನಿಮಗಿನ್ನು ವಿಯೋಗವೇ ಜೀವನಯೋಗವೆಂದು ಸೂಚಿಸಿ ಹೋದ!

ಯಮುನೆ : ಕೃಷ್ಣನಿನ್ನು ಬರುವುದೇ ಇಲ್ಲವೇ ಇಲ್ಲಿಗೆ? ಹಾಗಾದರೆ ನಮ್ಮ ಗತಿಯೇನು ಗೆಳತಿ?

ಕಲ್ಯಾಣಿ : ಬರುವನೆಂಬ ಭ್ರಮೆ ನಿನಗಿನ್ನೂ ಇದೆಯೆ?

ಯಮುನೆ : ಕೃಷ್ಣನನ್ನು ನಂಬಿ ಕೆಟ್ಟೆವು!

ರಾಧೆ : (ಪ್ರವೇಶಿಸಿ) ಕೃಷ್ಣನನ್ನು ನಂಬಿ ಕೆಟ್ಟವರೂ ಉಂಟೆ, ಯಮುನೆ?

ಯಮುನೆ : (ಸಂಭ್ರಮ) ಸಮಯಕ್ಕೆ ಸರಿಯಾಗಿ ಬಂದೆ ರಾಧೆ! ನೀನೇ ಹೇಳು, ಕುಬ್ಜೆಯೆಂಬ ದಾಸಿಯ ಗೂನನ್ನು ತೊಲಗಿಸಿ, ಅವಳ ಪ್ರೇಮಪಾಶದಲ್ಲಿ ಬಂಧಿತನಾಗಿರುವ ಕೃಷ್ಣನನ್ನು ನಂಬಿ ನಾವು ಕೆಟ್ಟಿಲ್ಲವೆ?

ರಾಧೆ : (ಸಹರ್ಷ) ಕೃಷ್ಣನಿಗೆ ಕುಬ್ಜೆಯೆಂಬ ಪ್ರೇಯಸಿ ಸಿಕ್ಕಿರುವಳೆ? ಆನಂದದ ಸುದ್ದಿಯಿದು!

ಯಮುನೆ : (ಚಕಿತಳಾಗಿ) ಏನು ಇದು ಆನಂದದ ಸುದ್ದಿಯೆ? ರಾಧೆ ನಿನಗೇನಾಗಿದೆ?

ರಾಧೆ : ನಿಜವಾಗಿಯೂ ಆನಂದದ ಸುದ್ದಿಯಿದು, ಯಮುನೆ! ಕಾಂಚನ ನಗರಿಯೆಂದು ಹೆಸರಾಗಿರುವ ಮಥುರೆಯಲ್ಲಿ, ಸ್ವಾರ್ಥವೇ ಸರ್ವಸ್ವವಾಗಿರುವ ಜನರ ಮಧ್ಯದಲ್ಲಿ ನಮ್ಮ ಕೃಷ್ಣನಿಗೆ ಒಲವಿನ ಸೊದೆಯನ್ನು ಉಣಿಸಿ ಜೋಕೆಯಿಂದ ಆರೈಕೆ ಮಾಡುವವಳು ಒಬ್ಬಳಾದರೂ ಸಿಕ್ಕಳಲ್ಲ. ಇನ್ನು ಕೃಷ್ಣನ ಬಗ್ಗೆ ನಾನು ನಿಶ್ಚಿಂತಳಾದೆ. ದೇವರು ಕುಬ್ಜೆಯ ಪ್ರೇಮಕ್ಕೆ ಕೃಷ್ಣನನ್ನು ಎಲ್ಲ ಅಪಾಯಗಳಿಂದಲೂ ತಪ್ಪಿಸಿ, ಅವನ ಜೀವನವನ್ನು ಮಧುಮಯಗೊಳಿಸುವ ಶಕ್ತಿಯನ್ನು ಕರುಣಿಸಲಿ.

ಯಮುನೆ : (ಆಳುತ್ತಾ ರೇಗಿ) ಕುಬ್ಜೆಗಾಗಿಯೇ ಕೃಷ್ಣನನ್ನು ಮುದ್ದುಮಾಡಿ ಬೆಳೆಸಿದೆವೆ?

ರಾಧೆ : ಹುಚ್ಚಿ, ನಾವು ಕೃಷ್ಣನನ್ನು ಬೆಳೆಸಿದೆವೋ, ಕೃಷ್ಣ ನಮ್ಮನ್ನು ಬೆಳೆಸಿದನೊ? ಎಂಥ ದಿವ್ಯ ಪ್ರೇಮಕ್ಕೆ ಪರಿಚಯಿಸಿದನು ನಮ್ಮನಾಥ! ಅವನಿಲ್ಲದಿದ್ದರೆ ಅವನೆಲ್ಲಿದ್ದರೂ, ಯಾರೊಡನಿದ್ದರೂ ನಮ್ಮ ಅಂತರಂಗದ ಆರಾಧ್ಯನೆಂದೇ ಆದರಿಸುವ ಮಹೋನ್ನತ ಪ್ರೇಮವನ್ನು ಪಡೆಯುತ್ತಿದ್ದೆವೆ?

ಯಮುನೆ : ಹಾಗಾದರೆ ಅವನಿನ್ನು ಬರುವುದಿಲ್ಲವೆಂದೇ ನಂಬಿ ಕಂಬನಿ ಸರ ಪವಣಿಸುತ್ತ ಕೂಡ್ರಬೇಕೆ ನಾವು ಇನ್ನು?

ರಾಧೆ : ಬರುವುದಿಲ್ಲವೆಂಬ ಅಪನಂಬಿಕೆಯೇಕೆ ನಿನಗೆ? ಅವನು ಹೋಗುವಾಗ ಹಾಡಿದ ಹೃದಯಸ್ಪರ್ಶಿ ಗೀತೆಯನ್ನು ಮರೆತೆಯಾ? ಬನ್ನಿ, ಅದನ್ನು ಹಾಡುತ್ತ ರಾಸನೃತ್ಯವಾಡೋಣ, ವಿಯೋಗ ವ್ಯಥೆಯ ಮರೆಯೋಣ. (ಎಲ್ಲರೂ ಹಾಡುತ್ತ ಕುಣಿಯುವರು.)

ಮರೆಯಬಲ್ಲೆನೆ–ನಿಮ್ಮ
ತೊರೆಯಬಲ್ಲೆನೆ?
ಮರತೆನಾದೊಡೊಲಿದ ನಿಮ್ಮ, ಮರೆ–
ತಂತೆ ನನ್ನ ನಾನೆ!
ಮರೆಯಬಲ್ಲೆನೆ–ನಿಮ್ಮ
ತೊರೆಯಬಲ್ಲೆನೆ?
ನಾನು ನೀವು ನಲಿದ ನೆಲ
ಬನಬನದಲ್ಲಿ ಸುಳಿದ ನೆಲ
ನೀವು ನನ್ನ ಒಲಿದ ನೆಲ
ಪುಣ್ಯಭೂಮಿ ಗೋಕುಲ
ಇರಬಲ್ಲೆನೆ ಇದನು ಬಿಟ್ಟು?
ಮರಳಿ ಬರುವೆನೆ–ನಾನು
ನಿಮ್ಮ ತೊರೆವೆನೆ?
ಈ ಪಾವನ ಧರೆಯೆ ಸಾಕ್ಷಿ
ಗೋವರ್ಧನ ಗಿರಿಯೆ ಸಾಕ್ಷಿ
ವೃಂದಾವನ ಸಿರಿಯೆ ಸಾಕ್ಷಿ

ಯಮುನೆಯ ತೆರೆ ತೆರೆಯೆ ಸಾಕ್ಷಿ

ಇರಲಾರೆನು ನಿಮ್ಮನುಳಿದು

ಮರಳಿ ಬರುವೆನೆ–ನಾನು

ನಿಮ್ಮ ಮರೆವೆನೆ?

(ತೆರೆ)

ನಿರೂಪಕ : ಕಂಸನ ಅರಮನೆಯಲ್ಲಿ ಮಲಗಿದ್ದ ಕೃಷ್ಣನಿಗೆ ಆ ರಾತ್ರಿ ನಿದ್ರೆಯೇ ಇಲ್ಲ! ಗೋಕುಲದ ನೆನಪುಗಳು ಮುತ್ತಿಗೆ ಹಾಕಿದವು ಜಾಗೃತಾವಸ್ಥೆಗೆ; ನಂದ ಯಶೋಧೆಯರ ವಾತ್ಸಲ್ಯವೀಚಿಗಳು ಮೈದಡವಿ ಮುದ್ದಾಡಿದುವು ಸ್ವಪ್ನಾವಸ್ಥೆಯಲ್ಲಿ; ಗೋಪಿಯರ, ಅವರಲ್ಲೂ ರಾಧೆಯ ಪ್ರಣಯ ಪ್ರಸಂಗಗಳು ದಾಳಿಯಿಟ್ಟುವು ಸುಷುಪ್ತಿಯಲ್ಲಿ! ಬೆಳಗಿನ ಜಾವದಲ್ಲಿ ಕನವರಿಸಿದ ಕೃಷ್ಣ.

ಕೃಷ್ಣ : ಗೋಕುಲದ ಗೋವುಗಳೆ, ಪಾವಿತ್ರ್ಯದ ಹೂವುಗಳೆ. ನಾನು ನಿಮ್ಮನ್ನು ಮರೆತಿಲ್ಲ! ಗೋಕುಲದ ಗೋಪಿಯರೆ, ನಿಜಪ್ರೇಮರೂಪೆಯರೆ, ನಾನು ನಿಮ್ಮನ್ನು ಮರೆಯಲಾರೆ! ತಂದೆ ತಾಯಿ ನಂದ ಯಶೋಧೆಯರೆ, ವಾತ್ಸಲ್ಯಾಂಬೋಧಿಯರೆ, ನಿಮ್ಮನ್ನು ನಾನು ಮರೆಯಬಲ್ಲೆನೆ? ರಾಜ್ಯ ಕಾರ್ಯಗಳ ಹುದುಲಿನಲ್ಲಿ ಸಿಕ್ಕು ಒದ್ದಾಡುತ್ತಲಿದ್ದೇನೆ; ಒದ್ದಾಡಿದಷ್ಟು ಆಳಕ್ಕೆ ಇಳಿಯುತ್ತಲಿದ್ದೇನೆ! ಎಂದಿಗೆ ಇದರಿಂದ ಬಿಡುಗಡೆ ಪಡೆವೆನೋ –– ಎಂದಿಗೆ ಕರುಳಿನ ಹಂದರದ ನೆರಳನ್ನು ಪಡೆವೆನೋ! ಹಡೆದ ತಂದೆ ತಾಯಿಯರನ್ನು ಬಿಡಿಸ ಬಂದೆ, ಪಡೆದ ತಂದೆ ತಾಯಿಯರಿಗೆ ಎರವಾದೆ! ಅವರ ಪ್ರೀತಿಗೆ ಪ್ರತಿಯುಂಟೆ? ಅವರ ಯೋಗಕ್ಷೇಮವನ್ನಾದರೂ ತಿಳಿದುಕೊಳ್ಳಬೇಕು. ಅವರನ್ನು ನಾನು ನೆನೆಯದ ಕ್ಷಣವೇ ಇಲ್ಲವೆಂಬುದನ್ನು ಅವರಿಗೆ ತಿಳಿಯಪಡಿಸಿ ಅವರಿಗೆ ಸ್ವಲ್ಪವಾದರೂ ಸಾಂತ್ವನವನ್ನು ನೀಡಬೇಕು. ಯಾರನ್ನು ಕಳಿಸಲಿ ಈ ಕೆಲಸಕ್ಕೆ? ಇನ್ನಾರನ್ನು? ಉದ್ಧವನನ್ನೇ ಕಳಿಸುವೆ. ನನ್ನ ಪ್ರಿಯಸಖ ಉದ್ಧವನೇ ಈ ನಯಕಾಯಕಕ್ಕೆ ತಕ್ಕವನು.

ನಿರೂಪಕ : ಅನಿತರಲ್ಲಿ ಹಾಡೊಂದು ಅಲೆಅಲೆಯಾಗಿ ಬಂದು ಕೃಷ್ಣನ ಕಿವಿಗಳಿಗೆ ಮುತ್ತಿಡುತ್ತದೆ. ಪುಲಕಿತನಾಗಿಬಿಡುತ್ತಾನೆ ಕೃಷ್ಣ.

ಹಾಡು

ಎನ್ನ ಒಲವಿನ ಬಳ್ಳಿ

ನನ್ನ ಕಂಬಳಿಯಲ್ಲಿ

ಹುಲುಸಾಗಿ ಬೆಳೆಯುತಿದೆ–

ಕೃಷ್ಣ, ಕೃಷ್ಣ!

ಕಂಬನಿಯ ಸುರಿಸುತಲಿ

ನಿನ್ನ ದರುಶನಕಾಗಿ

ಲೋಹದ ಸತೃಷ್ಣವಿವು–

ಕೃಷ್ಣ, ಕೃಷ್ಣ!

ಬಳ್ಳಿ ಮಲರಲು ಬೇಕೆ

ನಿನ್ನ ತುಟಿಗಳ ಸೋಕು

ಸ್ನಿಗ್ಧದೃಷ್ಟಿಯ ಸರಿಯು–

ಕೃಷ್ಣ, ಕೃಷ್ಣ!

ಬಳ್ಳಿಗಾಶ್ರಯ ಬೇಕು

ಪ್ರೇಮತರುವಾಗಿ ಬಾ–

ಕೃಷ್ಣ, ಕೃಷ್ಣ!

ಕೃಷ್ಣ : ಎಂಥ ಸುಂದರ ಗೀತೆಯಿದು! ಯಾರು ರಚಿಸಿರಬಹುದು? ಹಾಡಿದವರಾರು? ನೋಡಿಬರುವೆ.

ನಿರೂಪಕ : ಹೊರಡಲು ಅಣಿಯಾದ ಕೃಷ್ಣನನ್ನು ಕಂಡ ದೂತನೊಬ್ಬ ಧಾವಿಸಿ ನುಡಿಯುತ್ತಾನೆ.

ದೂತ : ಅಯ್ಯೋ, ಇದಕೂ ನೀವೇ ಓಗಬೇಕಾ ಒಡ್ಯಾ? ಓಗಿ ಕರಕೊಂಡ ಬರ್ಲಾ?

ಕೃಷ್ಣ : ಹಾಡು ರಚಿಸಿದವರಾರು, ಹಾಡಿದವರಾರು–ತಿಳಿದುಕೊಂಡು ಬಾ–ಇಷ್ಟೇ ಸಾಕು.

ದೂತ : ಅಂಗೆ ಆಗ್ಲಿ ಒಡ್ಯಾ (ಹೋಗುವನು)

ಕೃಷ್ಣ : (ನಿಟ್ಟುಸಿರುಬಿಟ್ಟು) ಗೋಕುಲದಲ್ಲಿ ಹಾಲು ಹೀರದ ಹೋರಿ ಕುರುವಿನಂತೆ ಬೇಕಾದಾಗ ಬೇಕಾದಲ್ಲಿ ಓಡಾಡುತ್ತಲಿದ್ದ ನಾನು ಈಗ ದೂತನ ನೀತಿಬೋಧೆಗೆ ಕಿವಿಗೊಡಬೇಕು! ಶಿಷ್ಟರಕ್ಷಣೆಗಾಗಿ ಬಂದ ನಾನೇ ಶಿಷ್ಟಾಚಾರದ ಕಟ್ಟುಗಳಿಗೆ ಒಳಗಾಗಬೇಕಾಯಿತಲ್ಲ! ಇದು ಅರಮನೆಯಲ್ಲ, ಸೆರೆಮನೆ ನನಗೆ! ಮತ್ತೆ

ಎಂದು ಗೋಕುಲದ ಬನಬನಗಳಲ್ಲಿ ಸ್ವೇಚ್ಛೆಯಿಂದ ಸಂಚರಿಸುವೆನೋ, ಯಮುನಾ ತೀರದಲ್ಲಿ ಗೋಪಿಯರೊಡನೆ ರಾಸನೃತ್ಯ ಗೈಯುವೆನೊ, ತಾಯಿ ಯಶೋದೆ ತುತ್ತು ಮಾಡಿ ತಿನಿಸುತ್ತಿದ್ದ ಬೆಣ್ಣೆ ರೊಟ್ಟಿ ತಿನ್ನುವೆನೊ!

ದೂತ : (ಮರಳಿ) ಅಡಿದೋರು ಗೋಕುಲ್ದ ಗೋಪಾಲರಂತೆ. ಆಡು ಕಟ್ಟಿರೋದು ರಾದಮ್ಮ ಅಂತೆ ಒಡ್ಯಾ!

ಕೃಷ್ಣ : ಸರಿ ಹೋಗು, (ಹೋದ ಮೇಲೆ) ಗೋಪಾಲ! ರಾಧೆ! ಗೋಪಾಲ... ರಾಧೆ..

ಉದ್ಧವ : (ಪ್ರವೇಶಿಸಿ) ಮಥುರಾನಾಥರಿನ್ನೂ ಮೃದುತಲ್ಪದಲ್ಲಿಯೇ ಇದ್ದಾರೆ ಇಂದು?

ಕೃಷ್ಣ : ನಿನ್ನನ್ನೇ ನೆನೆಯುತ್ತಲಿದ್ದೆ ಉದ್ಧವ. ನಿನಗೆ ನೂರು ವರ್ಷ ಆಯುಷ್ಯ!

ಉದ್ಧವ : ನೆನೆದ ಕಾರಣ?

ಕೃಷ್ಣ : ಜೀವದ ಗೆಳೆಯ, ಇಂದು ಗೋಕುಲದ ಎಳೆತ, ಸಾಕು ತಾಯಿತಂದೆಯರ ಸೆಳೆತ ಬಹಳ ಬಲವಾಗಿಬಿಟ್ಟಿದೆ.

ಉದ್ಧವ : ಗೋಪಿಯರ ಸೆಳೆತ ಸಡಿಲಾಗಿಬಿಟ್ಟಿತೆ ಕುಬ್ಜೆ ದೊರೆತ ಮೇಲೆ?

ಕೃಷ್ಣ : ಅದು ಹೇಗೆ ಸಾಧ್ಯ? ಕುಬ್ಜೆಯೂ ಗೋಪಿಯರಲ್ಲೊಬ್ಬಳು–ನನ್ನ ದೃಷ್ಟಿಯಲ್ಲಿ.

ಉದ್ಧವ : ನಿನಗೆ ಒಲಿದವರೆಲ್ಲ ನಿನ್ನ ಗೋಪಿಯರೆಂದು ಭಾವಿಸಿಬಿಟ್ಟರೆ 'ಸರ್ವಂ ಗೋಪೀಮಯಂ ಜಗತ್' ಎಂದು ಉದ್ಗರಿಸುವ ಕಾಲ ದೂರ ಉಳಿಯದು!

ಕೃಷ್ಣ : ಪರಿಹಾಸ್ಯಕ್ಕಿದು ಸಮಯವಲ್ಲ ಉದ್ಧವ. ನನಗಾಗಿ ನೀನೀಗ ನಂದಗೋಕುಲಕ್ಕೆ ಹೋಗಲೇಬೇಕು.

ಉದ್ಧವ : ಯಾಕೆ?

ಕೃಷ್ಣ : ನಾನು ಗೋಕುಲ ಬಿಟ್ಟು ಬರುವಾಗ ಬೇಗ ಬರುವೆನೆಂದವರಿಗೆ ಮಾತು ಕೊಟ್ಟು ಬಂದಿದ್ದೆ. ಮಾತಿನಂತೆ ನಡೆಯಲಾಗಲಿಲ್ಲ! ಅವರೇನೆಂದು–ಕೊಂಡಿರುವರೋ, ಎಷ್ಟು ನೊಂದುಕೊಂಡಿರುವರೋ! ನೀನು ಹೋಗಿ ತಂದೆ–ತಾಯಿ ನಂದ–ಯಶೋದೆಯರಿಗೆ, ಗೆಳತಿಯರಾದ ಗೋಪಿಯರಿಗೆ, ಗೆಳೆಯರಾದ ಗೋಪಾಲಕರಿಗೆ ನಾನು ಕ್ಷೇಮವಾಗಿರುವೆನೆಂಬ ಸುದ್ದಿ ತಿಳಿಸಿ, ಸಾಂತ್ವನಪರ ಮಾತುಗಳನ್ನಾಡಿ ಅವರನ್ನು ಆದಷ್ಟು ಸಮಾಧಾನಗೊಳಿಸಿ ಬಾ.

ಉದ್ಧವ : ನೀನೇ ಏಕೆ ಒಂದು ದಿನದ ಮಟ್ಟಿಗೆ ಹೋಗಿ ಬರಬಾರದು? ಗೋಕುಲವಿಲ್ಲಿಗೆ ದೂರವೇನಿಲ್ಲ. ನಿನ್ನ ಮನಕ್ಕೆ ದೂರವಾಗಿದ್ದರೆ ಆ ಮಾತು ಬೇರೆ!

ಕೃಷ್ಣ : ಮನಕ್ಕೆ ದೂರವಾಗಿದ್ದರೆ ಇಷ್ಟೇಕೆ ಚಡಪಡಿಸುತ್ತಿದ್ದೆ, ತಳಮಳಿಸುತ್ತಿದ್ದೆ? ಕಂಸ ಧ್ವಂಸವಾಗುತ್ತಲೇ ಕಂಟಕರಹಿತವಾಯಿತು ಜನಹಿತಪಥವೆಂದು ತಿಳಿದಿರುವೆಯಾ? ಮಹಾಭಾರತ ಯುದ್ಧ ಮುಗಿವವರೆಗೆ ದುಷ್ಟ ಶಿಕ್ಷಣ ರಕ್ಷಣ ಕಾರ್ಯ ಮುಗಿಯಲಾರದು! ಅಲ್ಲಿಯವರೆಗೆ.........

ಉದ್ಧವ : ಅಲ್ಲಿಯವರೆಗೆ ಬೆಂಕಿಯಲ್ಲದ ಬೆಂಕಿಯಲ್ಲಿ ದಹಿಸುತ್ತಿರಬೇಕು ನಿನ್ನನ್ನೊಲಿದವರೆಲ್ಲರೂ!

ಕೃಷ್ಣ : ಒಲವು ಕರ್ತವ್ಯಗಳ ಸಂಘರ್ಷದಲ್ಲಿ ಒಲವು ಕರ್ತವ್ಯಕ್ಕೆ ಬಲಿಯಾದುದು ನನ್ನ ವೈಯಕ್ತಿಕ ದುರಂತ, ಉದ್ಧವ!

ಉದ್ಧವ : ಇದನ್ನರಿತೇ ನಾನು ಒಲವಿನ ಬಲೆಯಲ್ಲಿ ಸಿಲುಕದೆ ಜ್ಞಾನದ ಆಶ್ರಯ ಪಡೆದುಕೊಂಡಿದ್ದೇನೆ, ಕೃಷ್ಣ!

ಕೃಷ್ಣ : ಒಲವಿಲ್ಲದ ಜೀವನ ಪರಿಮಳವಿಲ್ಲದ ಪುಷ್ಪ, ತನಿರಸವಿಲ್ಲದ ಹಣ್ಣು, ದೇವರಿಲ್ಲದ ಗುಡಿ ಉದ್ಧವ!

ಉದ್ಧವ : ಹಾಗಾದರೆ ಒಲವಿನ ಕರೆಗೆ ಓಗೊಟ್ಟು ಹೋಗು ಗೋಕುಲಕ್ಕೆ! ಇತ್ತ ಅರಮನೆಯನ್ನು ತೊರೆಯಲು ಮನಸ್ಸಿಲ್ಲ; ಅತ್ತ ಗೋಕುಲದ ಮಣ್ಣಿನ ಮನೆಯನ್ನು ಮರೆಯಲೂ ಮನಸ್ಸಿಲ್ಲ ನಿನಗೆ! ಹಳ್ಳಿಯ ಬೆಳಕೂ ಬೇಕು, ನಗರದ ಥಳುಕೂ ಬೇಕೆಂದರೆ ಹೇಗೆ? ಜ್ಞಾನಿಯಾದವನಿಗೆ ಎಲ್ಲ ಒಂದೆ. ನಿನ್ನಂತೆ ಪ್ರೇಮಿಯಾದವನ ಬದುಕು ಹಳವಂಡದ ಹೊಂಡ; ಬೇಗುದಿಯ ಬೆಂಕಿಯ ಕುಂಡ!

ಕೃಷ್ಣ : ನನ್ನನ್ನು ನಿನ್ನ ಜ್ಞಾನಮಾರ್ಗಕ್ಕೆ ತಿರುಗಿಸಲು ನಿನ್ನಿಂದಾಗಲಿಲ್ಲ. ಆ ಯಶೋದೆ ನಂದರನ್ನು, ಗೋಪಿಯರನ್ನು ಈ ಮಾರ್ಗಕ್ಕೆಳೆದು ಪುಣ್ಯ ಕಟ್ಟಿಕೋ! ಜ್ಞಾನ ನೀಡುವ ಸ್ಥಿತಪ್ರಜ್ಞೆಯಿಂದ ಅವರು ಪ್ರೇಮ ನೀಡುವ ವೇದನೆಯನ್ನು ಮರೆತುಬಿಟ್ಟರೆ ನನಗೆ ನೆಮ್ಮದಿ.

ಉದ್ಧವ : ಪ್ರಯತ್ನಿಸಿ ನೋಡುವೆ, ನಿನ್ನ ಸದಾಶಯ ನನಗೆ ಬೆಂಬಲವಾಗಿರಲಿ!

ಕೃಷ್ಣ : ಹೋಗಿ ಬಾ, ನಿನಗೆ ಜಯವಾಗಲಿ. (ಹೋದ ಮೇಲೆ) ನೀನೂ ಪ್ರೇಮಿಯಾಗಿ ಹಿಂದಿರುಗುವೆ ಉದ್ಧವ! ನಿನ್ನ ಅರಿವಿನ ಹಮ್ಮು ಯಮುನೆಯಲ್ಲಿ ತೇಲಿಹೋಗಿ ನನ್ನ ಗೋಪಿಯರ ಪವಿತ್ರ ಪ್ರೇಮ ನಿನ್ನಲ್ಲೂ ಅಂಕುರಿಸಲಿದೆ. ಹೋಗಿ ಬಾ, ಗೋಪಿಯರ ಪ್ರೇಮಧರ್ಮಕ್ಕೆ ಬಾಗಿ ಬಾ.

* * *

ನಿರೂಪಕ : ಉದ್ಧವ ನಂದಗೋಕುಲವನ್ನು ತಲುಪಿದಾಗ ಗೋಧೂಳೀ ಸಮಯ. ತಂತಮ್ಮ ಮನೆಗಳಿಗೆ ಮರಳುತಲಿದ್ದ ಹಸುಗಳ ಖುರರೇಣುರಂಜಿತ ರಥದಲ್ಲಿದ್ದ ಉದ್ಧವ ಸಾಂಧ್ಯಸ್ವರ್ಣಿಮೆಯಿಂದ ಸೊಬಗೇರಿದ್ದ ಗೋಕುಲದ ನಿಸರ್ಗದ ರಮಣೀಯತೆಯನ್ನು ನೋಡಿ ನವಿರಾಂತ. ತಾಯ ಬರವನ್ನು ನೋಡಿ ಓಡಿ ಬಂದ ಕರುಗಳು, ಕರುಗಳನ್ನು ನೋಡಿ ಕೆಚ್ಚಲು ತೊರೆಯುತ್ತಲಿದ್ದ ತುರುಗಳು, ಗೂಡು ಸೇರುತ್ತಲಿದ್ದ ತರ ತರದ ಪಕ್ಷಿಗಳು, ಬಣ್ಣ ಬಣ್ಣದ ಹೂಗಳು, ಮನೆಯ ಕಂಬಿಗಳ ಮೇಲೆ ನಲಿಯುತ್ತಲಿದ್ದ ನವಿಲುಗಳು, ಮನೆಮನೆಯ ಪೂಜಾಲಯಗಳಿಂದ ಬರುತ್ತಲಿದ್ದ ಪ್ರಾರ್ಥನಾ ಸ್ವರಗಳು, ಪರಿಮಳಗಳು ಮಥುರೆಯ ಹೃದಯಹೀನ ಕೃತಕ ಪರಿಸರವನ್ನೇ ಕಂಡಿದ್ದ ಉದ್ಧವನ ಕಂಗಳ ಬರ ಹಿಂಗುವಂತೆ ಮಾಡಿದುವು. ಬೆರಗುಗಣ್ಣುಗಳಿಂದ ಬಂಗಾರದ ರಥವನ್ನು ನೋಡಿದ್ದ ನಂದ-ಯಶೋಧೆಯರಿಗೆ ಬಂದವನು ಕೃಷ್ಣಸಖನೆಂಬುದು ಗೊತ್ತಾಗುತ್ತದೆ. ಗೊತ್ತಾಗುತ್ತಲೇ ಹಿಡಿಸಲಾರದಷ್ಟು ಹಿಗ್ಗಾಯಿತವರಿಗೆ. ಸೀಮೆಯರಿಯದ ಸಂತಸದೊಂದಿಗೆ ಬರಮಾಡಿಕೊಂಡರು. ರಾತ್ರಿ ಭೋಜನಾನಂತರ ಅವರ ಸುಖಸಂಕಥಾವಿನೋದ ಪ್ರಾರಂಭವಾಯಿತು.

ನಂದ : ನನ್ನ ಮಾನನೀಯ ಮಿತ್ರ ವಸುದೇವನೀಗ ಬಂಧನವಿಮುಕ್ತನಾಗಿ ಸಪುತ್ರ ಸಪರಿವಾರ ಸುಖವಾಗಿರುವನಷ್ಟೆ? ನನ್ನ ಪುತ್ರ ಕೃಷ್ಣ, ಮಾತಾ ಪಿತ, ಸಖ, ಸಹೃದಯರ ಸಂಗದಲ್ಲಿದ್ದೂ ನಮ್ಮ ಗೋವುಗಳನ್ನು, ಗೋಪ-ಗೋಪಿಯರನ್ನೂ, ವ್ರಜ, ವೃಂದಾವನ ಗೋವರ್ಧನಗಳನ್ನೂ ಆಗಾಗ ನೆನೆಸುವನೆ?

ಉದ್ಧವ : ಕೃಷ್ಣನ ತನು ಮಥುರೆಯಲ್ಲಿ, ಮನ ಗೋಕುಲದಲ್ಲಿ ತಂದೆ! ಗೋಕುಲಕ್ಕೆ ಯಾವಾಗ ಹೋದೇನೋ ಎಂದು ಹಗಲಿರುಳು ಹಂಬಲಿಸುತ್ತಲಿದ್ದಾನೆ ಆತ. ಪಾಪ, ಇನ್ನೂ ಮುಗಿಯದ ಲೋಕಕಲ್ಯಾಣ ಕಾರ್ಯವನ್ನು ಅರ್ಧಕ್ಕೆ ಬಿಟ್ಟು ಬರಲಾರದವನಾಗಿದ್ದಾನೆ. ಅವಕಾಶ ಸಿಕ್ಕುತ್ತಲೇ ಓಡಿ ಬರುವನಿಲ್ಲಿಗೆ!

ಯಶೋದೆ : ನಿಜವಾಗಿ ಬರುವನೆ ಕೃಷ್ಣ? ಮುನ್ನಿನಂತೆ ನನ್ನ ಕೈಯಿಂದ ಬೆಣ್ಣೆ, ರೊಟ್ಟಿ ತಿನ್ನುವನೆ? ನನ್ನೆದುರು ಕೊಳಲು ನುಡಿಸುತ್ತ ಕುಣಿಯುವನೆ? ತನ್ನ ಕೋಮಲ ಕರಗಳನ್ನು ನನ್ನ ಕೊರಳಿಗೆ ತೊಡಿಸಿ ಲಲ್ಲೆಗೈಯ್ವನೆ? ಎಂದು ಪಡೆಯಲಿರುವೆ ಆ ಭಾಗ್ಯವನ್ನು ನಾನು? ಎಂದು ನೋಡಲಿರುವೆ ಆ ಮಹಾದಿನವನ್ನು ನಾನು?

ನಂದ : ಕೃಷ್ಣ ಸಾಕಿದ್ದ ಗೋವುಗಳನ್ನು ಕಂಡಾಗ, ಅವನಾಡಿದ ಸ್ಥಳಗಳನ್ನು ನೋಡಿದಾಗ, ಅವನಲ್ಲಿ ಮೆರೆದ ಮಹಿಮೆಗಳನ್ನು ನೆನೆದಾಗ, ಗೋವರ್ಧನ ಗಿರಿಗೆ ಹೋದಾಗ ಕೃಷ್ಣನೇ ನಮ್ಮ ಕಣ್ಮುಂದೆ ನಿಂತಂತೆ ಭಾಸವಾಗುತ್ತದೆ, ಮಾನದ!

ಯಶೋದೆ : ನಾನಂತೂ ಈ ಮನೆಯ ಕಣಕಣದಲ್ಲಿ ಕೃಷ್ಣನನ್ನು ಕಾಣುತ್ತೇನೆ, ರಾಧೆಯ ಕಂಬನಿಗಳಲ್ಲಿ ಕೃಷ್ಣನನ್ನು ಕಾಣುತ್ತೇನೆ. ಕೃಷ್ಣ ಹೋದಾಗಿನಿಂದ

ಮ್ಲಾನವದನವಾಗಿರುವ ಈ ಹಸುಗಳ ನಿಟ್ಟುಸಿರಿನಲ್ಲಿ ಕೃಷ್ಣನನ್ನು ಕಾಣುತ್ತೇನೆ...

ಉದ್ಧವ : ನಿನ್ನ ಕಂಬನಿಗಳಲ್ಲಿ ಹಿಂದೆಂದೂ ಕಾಣದಿದ್ದ ಸತ್ಯವೊಂದನ್ನು ಕಂಡುಕೊಂಡೆ ತಾಯೆ: ಹೆಣ್ಣು ಮಾಯೆಯಿರಬಹುದು; ತಾಯಿ ಮಾಯೆಯಲ್ಲ! ತಾಯಿ ದೇವರು!

ನಿರೂಪಕ : ಮಾತು ನಡೆದಿರುವಾಗಲೇ ಮೊಸರು ಕಡೆವ ಸ್ವರ ಬಳೆಗಳ ಮೆಲ್ಲುಲಿಯೊಡನೆ ಬೆರೆತು ಕೇಳತೊಡಗುತ್ತದೆ. ಜೊತೆಗೆ "ಕೊಂಡಾಡಿರೆ–ಗೋಕುಲ–ಕೃಷ್ಣನ ಕೊಂಡಾಡಿರೆ! ಗೋಕುಲ ಕೃಷ್ಣನ, ಗೋಪಾಲ ಕೃಷ್ಣನ, ವ್ರಜ ಬಾಲ ಕೃಷ್ಣನ ಕೊಂಡಾಡಿರೆ" –ಎಂಬ ಹಾಡಿನ ನಾದ ಮಾಧುರ್ಯವೂ ತೇಲಿ ಬರುತ್ತದೆ. ಅದನ್ನಾಲಿಸಿ ಆಹ್ಲಾದಮಯನಾಗುತ್ತಾನೆ ಉದ್ಧವ. ನಂದ ಯಶೋಧೆಯರ ಮನೆಯ ಮುಂದಿದ್ದ ಹೊಳೆಹೊಳೆವ ಹೊಂದೇರನ್ನು ನೋಡಿದ ಗೋಪಿಯರ ಕುತೂಹಲ ಕೆರಳುತ್ತದೆ. ಬಂದು ಉದ್ಧವನನ್ನು ನೋಡಿ ಕೃಷ್ಣನಂತೆಯೇ ಕಂಡ ಅವನು ಕೃಷ್ಣನ ಗೆಳೆಯನೆಂದು ತಿಳಿದುಬರಲು ಅವನನ್ನು ಮುತ್ತಿ ಪ್ರಶ್ನೆಗಳ ಮಳೆಗರೆಯುತ್ತಾರೆ.

ಸುಮನೆ : ನಮ್ಮ ಕೃಷ್ಣ ಕುಶಲನಾಗಿರುವನೆ, ಆರ್ಯ?

ಯಮುನೆ : ನಮ್ಮ ಗೋಕುಲವನ್ನೂ, ನಮ್ಮನ್ನೂ ನೆನೆಸುವನೆ, ಇಲ್ಲ ಮರೆತಿರುವನೆ?

ಕಲ್ಯಾಣಿ : ಅಷ್ಟೈಶ್ವರ್ಯದಲ್ಲಿ ಲೋಲಾಡುತ್ತಿರುವ ಕೃಷ್ಣ ಈ ಹಳ್ಳಿಯ ಹುಡುಗಿಯರನ್ನು ಹೇಗೆ ನೆನಪಿಟ್ಟಾನು?

ಶುಕವಾಣಿ : ನಾವೆಲ್ಲ ಅವನವರೆಂದು ಕೊಚ್ಚಿಕೊಂಡರೆ, ಅವನ ಈಗಿನ ಸ್ಥಾನಕ್ಕೆ ಚ್ಯುತಿ ಬರದೆ? ಈಗ ಅವನೊಂದಿಗಿರುವ ನಗರಸುಂದರಿಯರು ನಗರೆ?

ಸುಮನೆ : ಇವರು ನಿರುತ್ತರಕುಮಾರರಾಗಿ ನಿಂತಿರುವರಲ್ಲ! ನಾವು ಕೃಷ್ಣನ ಸಖಿಯರೆನ್ನುವುದು ಇವರಿಗೂ ಸಮ್ಮತವಲ್ಲವೇನೋ!

ಉದ್ಧವ : ಸುಮ್ಮನೆ ಸಂಶಯ ಪಡಬೇಡಿರಿ ಪ್ರೇಮೋಪಾಸಕಿಯರೆ, ಪೂಜ್ಯರಾದ ನಂದ ಯಶೋದೆಯರೆ, ನಿಮ್ಮ ಕ್ಷೇಮ ಸಮಾಚಾರವನ್ನು ತಿಳಿದುಕೊಂಡು ಬರಲೆಂದೇ ಕೃಷ್ಣ ನನ್ನನ್ನು ಕಳಿಸಿದ್ದಾನೆ!

ಯಮುನೆ : ಕೃಷ್ಣನೇ ಬರಬಹುದಾಗಿತ್ತಲ್ಲ, ನಮಗೆ ಮಾತುಕೊಟ್ಟಂತೆ?

ಉದ್ಧವ : ರಾಜ್ಯಕಾರ್ಯಗಳ ಜಂಜಾಟದಲ್ಲಿ ಸಿಕ್ಕಿದ್ದಾನೆ ನನ್ನ ಸಖ. ಸ್ವಲ್ಪ ಬಿಡುವಾಗುತ್ತಲೇ ಬಂದುಬಿಡುವನು.

ನಿರೂಪಕ : ಈ ಮಾತು ಮುಗಿಯುವಷ್ಟರಲ್ಲಿ ಭ್ರಮರವೊಂದು ಗುಂಜನ

ಗೈಯುತ್ತ ಬರುತ್ತದೆ. ಸುಮನೆಯ ಪದಗಳು ಪದ್ಮವೆಂದೇ ಭ್ರಮಿಸಿ ಪಾದವೊಂದರ ಮೇಲೆ ಕುಳಿತು ಝೇಂಕರಿಸತೊಡಗುತ್ತದೆ.

ಸುಮನೆ : ಎಲ್ಲಿಂದ ಬಂದೆ, ಏಕೆ ಬಂದೆ ಭ್ರಮರವೆ?

ಶ್ಯಾಮವರ್ಣ ಸುಮನೋಹರ

ಪೀತರೇಖೆ ಪೀತಾಂಬರ

ಗುಂಜಾರವ ಮುರಲಿಯ ಸ್ವರ

ಕೃಷ್ಣನೇ ನಿಜ ಈ ಭ್ರಮರ!

ಯಮುನೆ :

ಒಂದಲರಿನ ಮಧುವ ಹೀರಿ

ಇನ್ನೊಂದರ ಬಳಿಗೆ ಸಾರಿ

ನಲಿವುದುಭಯ ವ್ಯವಹಾರ

ಕೃಷ್ಣನೆ ನಿಜ ಈ ಭ್ರಮರ!

ಕಲ್ಯಾಣಿ : ಕೃಷ್ಣನಲ್ಲದಿದ್ದರೂ ಅವನ ದೂತನಾದರೂ ಆಗಿರಲೇ ಬೇಕು ಈ ಭ್ರಮರ! ಏಕೆ ಕಳಿಸಿರಬಹುದು ಕೃಷ್ಣನಿದನ್ನು? 'ಅಂದಿನಕ್ರೂರನೆಂಬ ಕ್ರೂರನು ಮರಳಿ ಬಂದನೊ?'

ರಾಗ : ದೇಶಿ ತಾಳ : ಅಷ್ಟತಾಳ

ಭೃಂಗಾ ನಿನ್ನಟ್ಟಿದನೇ ಶ್ರೀರಂಗ ಮಧುರೆಲಿ ನಿಂದು

ಅಂಗಜಲುಬ್ಧಕ ಪೂಗೋಗಲಂಗಳ ತಡೆಯನಿಕ್ಕಿ!

ಅಂಗನೇರೆಂಬೋ ಹುಲ್ಲೆ ಮೃಗಂಗಳಿಗೆ ಗುರಿಯಿಟ್ಟು

ಹಿಂಗಿಸುತ್ತೈಧಾನೆ ಅಸುವ ಕಿತವಾ!

ಶುಕವಾಣಿ:

ನಿನ್ನ ನೋಡೆ ನಮ್ಮ ಅಚ್ಚುತನ್ನ ಕಂಡಂತಾಯಿತಯ್ಯ

ಚೆನ್ನಿಗರರಸ ಕುಶಲೋನ್ನತಿಯೊಳಿಹನೇನೋ!

ಚಿಣ್ಣತನ ಮೊದಲಾಗದನ್ನು ಕಿತವ ಬಲ್ಲೆವೋ

ಗನ್ನಗಾರ ಚಿತ್ತ ಚೋರನ್ನ ಶ್ರೀಹರಿಯಾ!

ಸುಮನೆ :

ಅಂದೆಮ್ಮೊಳು ರಾಸಕ್ರೀಡೆಯಿಂದ ಬಂದಪರಾಧವ

ನೊಂದನೆಣಿಸದೆ ಸಲಹೆಂದು ಬಿನ್ನೈಸಿ ಸಾಷ್ಟಾಂಗದಿಂದ

ವಂದಿಪೆವೋ ಭಕ್ತ ಬಂಧುವಿಗೆ ನಮ್ಮ ಹೃದಯ

ಮಂದಿರದೊಳೆಂಟೆಂದಿರೆಂದು ಚೇತನಾ!

ಉದ್ಧವ : ಕೃಷ್ಣನ ಮೇಲೆ ಆಕ್ಷೇಪಣೆಗಳ, ಆಪಾದನೆಗಳ, ಆಕ್ರೋಶಗಳ ಸುರಿಮಳೆಯನ್ನೇ ಸುರಿಯುವಿರಿ ನೀವು ಎಂದು ಭಾವಿಸಿ ಬಂದಿದ್ದೆ. ಈಗ ನೀವು ಕೃಷ್ಣನ ಕುಶಲೋನ್ನತಿಗಾಗಿ ಹೃದಯಮಂದಿರದಲ್ಲಿಯೇ ಆ ಮಧುರ ಪ್ರಾಣೇಶನಿಗೆ ಪ್ರಣಯದಾರತಿ ಪೂಜೆ ಸಲ್ಲಿಸಲಿಕ್ಕಾಗಿ, ಸ್ವಾಪರಾಧ ಕ್ಷಮಾಪನಕ್ಕಾಗಿ ಉತ್ಕಂಠಿತರಾಗಿರುವುದನ್ನು ನೋಡಿ ಬೆರಗಾಗಿದ್ದೇನೆ. ಇಂಥ ನಿಷ್ಕಾಮ ಪ್ರೇಮವೂ ಅಲ್ಲಲ್ಲಿ ಇದೆಯಲ್ಲ–ಎಂದು ಉಲ್ಲಸಿತನಾಗಿದ್ದೇನೆ. ಆದರೆ ಒಂದು ಸಂಶಯ ಬಾಧಿಸುತ್ತಿದೆ. ಅದನ್ನು ನಿವಾರಿಸಿರಿ.

ಸುಮನೆ : ಅದಾವ ಸಂಶಯ, ಆರ್ಯ?

ಉದ್ಧವ : ನಿಮ್ಮ ಪ್ರೇಮ ನಿಮಗಿತ್ತಿರುವುದು ದಹಿಸುವ ವಿರಹವನ್ನು ಮಾತ್ರ. ಇದರಲ್ಲಿಯೇ ಎಂತು ಸಂತೋಷಿಸುವಿರಿ ನೀವು?

ಸುಮನೆ : ಮನುಷ್ಯರನ್ನು ಪ್ರೀತಿಸುವುದನ್ನು ಬಿಟ್ಟು ಗ್ರಂಥಗಳನ್ನು ಪ್ರೀತಿಸಲು ಪ್ರಾರಂಭಿಸಿರುವ, ಸತ್ತವರ ಸಂಗದಲ್ಲಿ ಹೊತ್ತುಗಳೆವ ನಿಮ್ಮಂಥ ಜ್ಞಾನೋಪಾಸಕರಿಗೆ ಇದು ಹೇಗೆ ತಿಳಿಯಬೇಕು?

ಯಮುನೆ :

ಪ್ರೀತಿಯೆಂದರೇನೆಂಬುದ

ನೀನರಿಯದವ

ಹೇ ಉದ್ಧವ!

ಹೇಗೆ ಅರಿವೆ ಅದು ನೀಡುವ

ಸುಡುವ ಸೌಖ್ಯವ?

ಸುಮನೆ :

ದೀಪಶಿಖೆಗೆ ಮುತ್ತನಿಡುವ ಶಾಖವನ್ನು ಕೇಳು!

ಹಾಲಿನೊಡನೆ ಬೆರೆತು ಸುಡುವ

ಸಲಿಲವನ್ನು ಕೇಳು!

ಕಲ್ಯಾಣಿ :

ಕೇತಕಿಯನೆ ನೆಕ್ಕಿ ನರಳ್ವ

ಭೃಂಗವನ್ನು ಕೇಳು!

ವೀಣೆಗೊಲಿದು ಬಾಣ ಪಡೆವ

ಕುರಂಗವನ್ನು ಕೇಳು!

ಶುಕವಾಣಿ :

ದಹನವೇಕೆ, ಮರಣ ಸಹಿತ

ಸಂತಸಕರ ಪ್ರೇಮದಿ!

ಪ್ರೀತಿಸಿ ನೋಡೊಮ್ಮೆ ನೀನು–

ಸದಾ ಸುಖಿಪೆ ಪ್ರೇಮದಿ!

ಉದ್ಧವ : ನಾನು ಪ್ರೀತಿಸಬಲ್ಲೆನೋ ಇಲ್ಲವೋ ನಾನರಿಯೆ ಪ್ರೇಮಯೋಗಿನಿಯರೆ, ಒಂದನ್ನಂತೂ ಒಪ್ಪುತ್ತೇನೆ. ತಾಯಿ ಯಶೋದೆಯನ್ನು ಕಂಡಾಗ 'ಹೆಣ್ಣು ಮಾಯೆಯಿರಬಹುದು, ತಾಯಿ ಮಾಯೆಯಲ್ಲ, ಎಂಬ ತೀರ್ಮಾನಕ್ಕೆ ಬಂದಿದ್ದೆ, ಈಗ ನಿಮ್ಮ ನಿರ್ಮಲ ಪ್ರೇಮವನ್ನು ನೋಡಿ ಪ್ರೇಮೋಪಾಸಕಿಯರೂ ಮಾಯೆಯಲ್ಲ–ಎಂಬ ನಿರ್ಣಯಕ್ಕೆ ಬಂದಿದ್ದೇನೆ. ಪ್ರೇಮದ ಪ್ರಸಾದ ಸೇವಿಸಿದ ಗಂಡೂ ಮಾಯೆಯಲ್ಲ, ಹೆಣ್ಣೂ ಮಾಯೆಯಲ್ಲ! ಪ್ರೇಮವಿಲ್ಲದೆಯೇ ಆ ಪರಮ ಪ್ರೇಮ ಸ್ವರೂಪವನ್ನು ಒಲಿಸಬಲ್ಲೆನೆಂಬ ಭ್ರಮೆಯೇ ಮಾಯೆ! ಇಂದು ನಿಮ್ಮಿಂದ ನಾರದ ನಿರೂಪಿತ ಗುಣರಹಿತ, ಕಾಮನಾರಹಿತ, ಪ್ರತಿಕ್ಷಣ ವರ್ಧಮಾನ, ಅವಿಚ್ಛಿನ್ನ, ಸೂಕ್ಷ್ಮತರ ಅನುಭವರೂಪೀ ಪ್ರೇಮದ ರಹಸ್ಯವನ್ನು ತಿಳಿದುಕೊಂಡೆ. ಇದಕ್ಕಾಗಿ ನಿಮಗೆ ಧನ್ಯವಾದಗಳು! ಭ್ರಮರ ನಿಮಿತ್ತ ದೊರೆತ ಇದು 'ಭ್ರಮರಗೀತೆ' ಯೆಂದು ಪ್ರಸಿದ್ಧವಾಗುವುದು.

ಸುಮನೆ : ಇದರ ಶ್ರೇಯಸ್ಸೆಲ್ಲ ಕೃಷ್ಣನಿಗೆ ಸಲ್ಲಬೇಕು, ಆರ್ಯ! ಅವನಲ್ಲವೆ ನಮಗಿಂಥ ಪವಿತ್ರ ಪ್ರೇಮವನ್ನು ನೀಡಿದವನು?

ಉದ್ಧವ : ಈ ಪವಿತ್ರ ಪ್ರೇಮ ನನ್ನ ಹೃದಯವನ್ನೂ ಪ್ರವೇಶಿಸುವಂತೆ ಹರಸಲಿ ನನ್ನನ್ನು ಪಾವನ ಪ್ರೇಮೋಪಾಸಕಿಯರೇ. ನಾನಿನ್ನು ಮಥುರೆಗೆ ಮರಳಿ ಕೃಷ್ಣನಿಗೆ ವರದಿ ಒಪ್ಪಿಸುವೆನು! (ಹೊರಡುವನು. ಹಾದಿಯಲ್ಲಿ ಹಾಡಿಕೊಳ್ಳುವನು.)

ಇವರ ಅಡಿಯ ಹುಡಿ

ತಳೆದ ಗೋಕುಲದಿ

ಗುಲ್ಮಗಿಲ್ಮವಾಗಿ

ನನಗೆ ಜನನವು

ಬರಲಿ ಜೀವನವು

ನೈಜ ನಲ್ಮೆಗಾಗಿ

ನಿರೂಪಕ : ಉದ್ಧವನ ಹಾಡು ಮುಗಿದಾಗ ರಥ ಕೃಷ್ಣನ ಅರಮನೆಯ ಮುಂದೆ ನಿಂತಿರುತ್ತದೆ. ಕೃಷ್ಣ ದ್ವಾರದತ್ತ ಧಾವಿಸುತ್ತಾನೆ–ಉದ್ಧವನೇ ಬಂದಿರಬೇಕೆಂದು ಭಾವಿಸಿ. ಉದ್ಧವನನ್ನು ಕಾಣುತ್ತಲೇ ಬಿಗಿಯಾಗಿ ಅಪ್ಪಿ ನುಡಿಯುತ್ತಾನೆ.

ಕೃಷ್ಣ : ಎಷ್ಟು ತಡವಾಗಿ ಬಂದೆಯಲ್ಲ ಉದ್ಧವ. ನೀನು ತಂದ ಗೋಕುಲ ವಾರ್ತೆಗಳನ್ನು ಕೇಳಲು ನನ್ನ ಮೈ ಕೂದಲೆಲ್ಲ ಕಿವಿಯಾಗಿ ನಿಂತಿವೆ! ನಿನ್ನ ಮುಖದ ಮೇಲಿನ ಎಂದಿಲ್ಲದ ಪ್ರಸನ್ನತೆಯೇ ಸೂಚಿಸುತ್ತಿದೆ–ನೀನು ಗೆದ್ದು ಬಂದಿರುವೆಯೆಂದು. ನನ್ನ ಊಹೆ ನಿಜ ತಾನೆ?

ಉದ್ಧವ : ನನ್ನ ಸುದೈವದಿಂದ ಗೆದ್ದು ಬಂದಿಲ್ಲ, ಸೋತು ಬಂದಿದ್ದೇನೆ ಪರಮಗುರುವೆ.

ಕೃಷ್ಣ : ಪರಮಗುರು? ಏನು ಹಾಗೆಂದರೆ?

ಉದ್ಧವ : ಗುರುವಿನ ಗುರು ಪರಮಗುರು! ಗೋಪಿಯರು ನನ್ನ ಗುರು; ನೀನು ಗೋಪಿಯರ ಗುರು–ನನ್ನ ಗುಗ್ಗುರು!

ಕೃಷ್ಣ : ನಿನ್ನನಲ್ಲಿಗೆ ಕಳಿಸಿ ಗೋಪಿಯರಿಂದ ಸೋಲಿಸಿದೆನೆಂದು ಸಿಟ್ಟಾಗಿರುವೆಯಾ ನನ್ನ ಮೇಲೆ?

ಉದ್ಧವ : ಸಿಟ್ಟೆಲ್ಲಿಯದು ಸರ್ವಾಧಾರ? ಮತ್ತೆ ಗೋಕುಲಕ್ಕೆ ಕಳಿಸು ನನ್ನನ್ನು; ಮತ್ತೆ ಹುಟ್ಟಿಸುವುದಾದರೆ ಗೋಕುಲದಲ್ಲಿಯೇ ಗೋಪಿಯಾಗಿ ಹುಟ್ಟಿಸು ನನ್ನನ್ನು! ಅದು ಸಾಧ್ಯವಿಲ್ಲದಿದ್ದರೆ ಅಲ್ಲಿ ನವಿಲಾಗಿ ಹುಟ್ಟಿಸಿ ನಿನ್ನ ಮಯೂರ ಮುಕುಟಕ್ಕೆ ನವಿಲುಗರಿಯನ್ನಾಗಿ ಮಾಡಿಕೋ; ಅಲ್ಲಿ ತುಳಸಿಯನ್ನಾಗಿ ಹುಟ್ಟಿಸಿ ನಿನಗೆ ತುಳಸೀಮಾಲೆ ಮಾಡಿಕೋ. ಆ ಗೋಪೀಪಾದರೇಣುಪವಿತ್ರೀಕೃತ ಪುಣ್ಯಭೂಮಿಯಲ್ಲಿ ಹುಟ್ಟಿಸಿ ಏನನ್ನಾದರೂ ಮಾಡಿಕೋ!

ಕೃಷ್ಣ : ಇದರರ್ಥ ಅವರು ಜ್ಞಾನಮಾರ್ಗಕ್ಕೆ ಬರಲಿಲ್ಲ; ನೀನೇ ಅವರ ಪ್ರೇಮಮಾರ್ಗ ಹಿಡಿದೆಯೆಂದ ಹಾಗಾಯಿತು.

ಉದ್ಧವ : ನಿಜ, ನನ್ನ ಜ್ಞಾನೋಪದೇಶ ಅವರನ್ನು ಸ್ಪರ್ಶಿಸಲೂ ಸಮರ್ಥವಾಗಲಿಲ್ಲ; ನಾನೇ ನನ್ನ ಜ್ಞಾನನೌಕೆಯನ್ನು ಅವರ ಪ್ರೇಮಸಾಗರದಲ್ಲಿ ಮುಳುಗಿಸಿಬಿಟ್ಟು ಮಥುರೆಗೆ ಮರಳಿದೆ! ಕರುಣೆಯೆಂಬರು ನಿನ್ನ. ಇದು ನಿಜವಿದ್ದರೆ

ನೀನೀಗಲೇ ಗೋಕುಲಕ್ಕೆ ಹೋಗು! ನಿನ್ನ ಅಗಲಿಕೆಯಲ್ಲಿ ಕೊರಗಿ ಸೊರಗುತ್ತಲಿರುವ ಗೋಕುಲ ನಿವಾಸಿಗಳ, ಗೋವುಗಳ, ಗೋಪತಿಗಳ, ಮುಖ್ಯವಾಗಿ ನಂದ ಯಶೋದೆ ಗೋಪಿಯರ ಪರಿತಾಪವನ್ನು ಪರಿಹರಿಸು!

ಕೃಷ್ಣ : ನಾನು ಹೋಗಬಲ್ಲೆನೆಂದು ನಿನಗೆನ್ನಿಸುತ್ತಿದ್ದರೆ ಈಗಲೇ ಹೊರಟೆ. ಕಂಸನ ಕ್ರೌರ್ಯದಿಂದ ಮುಕ್ತರಾಗಿರುವ ಈ ಜನಕೋಟಿಯನ್ನು ಜರಾಸಂಧಾದಿಗಳ ಕ್ರೌರ್ಯಕ್ಕೆ ತುತ್ತು ಮಾಡಿ ಹೋಗುವುದಾದರೆ ಹೋಗೋಣ; ಕೋಟಿ ಕೋಟಿ ಜನರ ಗತಿಯೇನಾದರೂ ಅಗಲಿ, ನಾವು ವೃಂದಾವನ ವಿಹಾರಿಗಳಾಗೋಣ; ಕುಸುಮಭರಿತ ಕುಂಜಗಳಲ್ಲಿ ಕುಳಿತು ಕೊಳಲನ್ನೂದುತ್ತ ಕಾಲ ಕಳೆಯೋಣ!

ಉದ್ಧವ : ಇದು ಹೇಗೆ ಸಾಧ್ಯ ಕೃಷ್ಣ? ಕಂಸನಿಗಿಂತ ಕ್ರೂರರ ಕೈಗೆ ಜನತೆಯನ್ನು ಒಪ್ಪಿಸುವುದಾದರೆ ಕಂಸನನ್ನು ಕೊಂದು ಇವರನ್ನು ಬಂಧನದಿಂದ ಬಿಡಿಸಿದುದು ವ್ಯರ್ಥವಾಗುವುದಿಲ್ಲವೆ?

ಕೃಷ್ಣ : ಶ್ರೀಸಾಮಾನ್ಯರ ಸ್ವಾತಂತ್ರ್ಯ ಉಳಿಯಲೆಂದು ನನ್ನ ಗೋಕುಲ ದಿನಗಳ ಸ್ವಾತಂತ್ರ್ಯವನ್ನೇ ಆಹುತಿ ಕೊಟ್ಟು ಇಲ್ಲಿ ಕುಳಿತಿದ್ದೇನೆ; ಅವರು ಒಲಿದು ನಲಿದು ಬಾಳಲೆಂದು ನನ್ನ ಒಲವಿಗೇ ತಿಲಾಂಜಲಿಯನ್ನು ಇತ್ತು ಚಿರವಿರಹಿಯಾಗಿ ಪರಿತಪಿಸುತ್ತಲಿದ್ದೇನೆ! ರಾಜ್ಯಸೂತ್ರಗಳನ್ನು ಕೈಗೆ ತೆಗೆದುಕೊಳ್ಳದೆ ಗ್ರಾಮ ನಿವಾಸಿಗಳ ಹಿತರಕ್ಷಣೆ ಸಾಧ್ಯವಿಲ್ಲವೆಂದು ಗ್ರಾಮ ಜೀವನ ಗಂಗೆಯನ್ನು ತೊರೆದು ಈ ನಗರಜೀವನದ ಕೆಸರಿನಲ್ಲಿ ಸಿಕ್ಕಿಬಿದ್ದಿದ್ದೇನೆ!

ಉದ್ಧವ : ಎಂಥ ಲೋಕಕಲ್ಯಾಣಾಕಾಂಕ್ಷಿ ನೀನು! ನಿನ್ನಂಥವರು ನಿನ್ನಂತೆ ಕೆಲವು ಕಾಲ ಗ್ರಾಮವೊಂದರಲ್ಲಿ ಗ್ರಾಮನಿವಾಸಿಗಳೊಡನೆ ಬೆರೆತು ಬಾಳಿ ಉನ್ನತಾಧಿಕಾರಕ್ಕೆ ಬರಬೇಕು! ಆಗ ಒಂದು ಗ್ರಾಮದ ಉದ್ಧಾರವಲ್ಲ, ಸರ್ವ ಗ್ರಾಮಗಳ ಅಭ್ಯುದಯ ಸಾಧ್ಯವಾಗುತ್ತದೆ.

ಕೃಷ್ಣ : ಇದು ನಿಜ. ನನ್ನ ಬಾಲ್ಯ ಗ್ರಾಮವಾಸಿಗಳ ಮಧ್ಯದಲ್ಲಿ ಕಳೆಯುವಂತೆ ಮಾಡಿದ ಕಂಸ ನನಗೆ ಉಪಕಾರವನ್ನೇ ಮಾಡಿದನೆಂದು ಹೇಳಬೇಕು. ಇಲ್ಲದಿದ್ದರೆ ಅರಮನೆಯಲ್ಲಿದ್ದೂ ಮುರುಕು ಮನೆಗಳಲ್ಲಿರುವ ಗ್ರಾಮ ಬಾಂಧವರನ್ನು ನೆನೆಯುತ್ತಿರಲಿಲ್ಲ ನಾನು! ನಂದ ಯಶೋದೆಯರು ನನ್ನ ಸಾಕು ತಂದೆ ತಾಯಿ ಮಾತ್ರವಲ್ಲ, ಗೋಪಿಯರು ನನ್ನ ಗೆಳತಿಯರು ಮಾತ್ರವಲ್ಲ–ಯಾರೂ ಗಮನಿಸದ ಹಳ್ಳಗಳಲ್ಲಿರುವ ಹಳ್ಳಿಗರ ಸ್ಮರಣೆ ನನಗೆ ಬರುವಂತೆ ಮಾಡುವ ಗ್ರಾಮವ್ಯೋಮದ ದಿವ್ಯತಾರೆಗಳು.

ಉದ್ಧವ : ಎಲ್ಲರ ಲೇಸಿಗೋಸುಗ ತಮ್ಮ ಅಪೂರ್ವ ಭಾಗ್ಯಕ್ಕೆ–ನಿನ್ನ ಸಾಮೀಪ್ಯಕ್ಕೆ–ಎರವಾದ ಹಿರಿಯ ಚೇತನಗಳವು! ಸರ್ವರ ಹಿತಕ್ಕಾಗಿ ಓರ್ವರೋ, ಕೆಲವರೋ ತಮ್ಮ ಸೀಮಿತ ಹಿತವನ್ನು ಬಲಿಕೊಡಲೇಬೇಕು. ಉದ್ಧವ! ಓರ್ವನ

ಹಿತಕ್ಕಾಗಿ ಸರ್ವರೂ ಬಲಿಯಾಗುತ್ತಲಿದ್ದ ಕಾಲ ಹೋಗಿ ಸರ್ವರ ಹಿತದಲ್ಲಿಯೇ ಓರ್ವನ ಹಿತವೂ ಅವಿತಿದೆಯೆಂದು ಅರಿತು ಆಚರಿಸುವ ಕಾಲ ಬರಬೇಕು. ಅ ಕಾಲ ಬರಲೆಂದೇ ನನ್ನ ವೈಯಕ್ತಿಕ ಒಲವುಗಳನ್ನು ತೊರೆದೆ; ಕಂಸನನ್ನು ಕೊಂದೆ. ಇನ್ನೂ ದುಷ್ಟಸಂಹಾರ ಶಿಷ್ಟ ಪರಿಪಾಲನೆಗಳನ್ನು ಮುಂದುವರಿಸುವೆ. ಈ ಕಾರ್ಯಕ್ಕಾಗಿ ನನ್ನನ್ನು ಬಿಟ್ಟುಕೊಟ್ಟ ನಂದ ಯಶೋದೆಯರಿಗೆ ನಾನು ಎಂದೆಂದಿಗೂ ಋಣಿ! ಗೋಪಿಯರ ತ್ಯಾಗವನ್ನೆಂತು ಬಣ್ಣಿಸಲಿ?

ಉದ್ಧವ : ನಾನೇ ಬಣ್ಣಿಸುವೆ.

ವಂದೇ ನಂದ ಬ್ರಜಸ್ತ್ರೀಣಾಂ ಪಾದರೇಣುಮಭೀಕಣಶಃ।

ಯಾಸಾಂ ಹರಿಕಥೋದ್ಗೀತಂ ಪುನಾತಿ ಭುವನತ್ರಯಮ್॥

* * *

ನೇಯಬೇಕು, ರಾಮನ ನೆನೆಯಬೇಕು

ನಿರೂಪಕ : ಹದಿನಾಲ್ಕನೆಯ ಶತಮಾನದ ಉಷಃಕಾಲ. ವಾರಾಣಸಿಯಾಗ ಮಹಾತ್ಮ ರಮಾನಂದರ ವಾಣಿಗೆ ಕಿವಿಗೊಟ್ಟಿತ್ತು. ದೂರ ದೂರದವರೆಗೆ ಅವರ ಕೀರ್ತಿ ಹರಡಿತ್ತು. ನಿತ್ಯ ಪ್ರಾತಃಕಾಲದಲ್ಲಿ ಗಂಗಾಸ್ನಾನ ಮಾಡಿ ಮುಂದಿನ ಕಾರ್ಯಗಳನ್ನು ಆರಂಭಿಸುತ್ತಿದ್ದರು ಅವರು. ಒಂದು ದಿನ ಹೊತ್ತಾರೆ ಎಂದು ಗಂಗಾತೀರಕ್ಕೆ ಬಂದಿದ್ದಾರೆ; ಗಂಗಾಸ್ತೋತ್ರ ಪಠಿಸುತ್ತ ಗಂಗಾಘಾಟದ ಮೆಟ್ಟಲುಗಳನ್ನಿಳಿಯತೊಡಗಿದ್ದಾರೆ. (ಗಂಗಾತರಂಗಸಂಗೀತದ ತೆರೆಗಳೊಡನೆ ತೇಲಿ ಬಂದ ಹಾಗೆ ಸ್ತವನ ಗಾಯನ)

ರಮಾನಂದ:

ದೇವಿ ಸುರೇಶ್ವರಿ ಭಗವತಿ ಗಂಗೇ

ತ್ರಿಭುವನ ತಾರಿಣಿ ತರಲ ತರಂಗೇ

ಶಂಕರ ಮೌಳಿ ವಿಹಾರಿಣಿ ವಿಮಲೇ

ಮಮಮತಿರಾಸ್ತಾ ತವ ಪದಕಮಲೇ

ಭೋ ಭುವನೇಶ್ವರಿ ಪುಣ್ಯೇ ಧನ್ಯೇ

ದೇವಿ ದ್ರವಮಯಿ ಮುನಿವರ ಕನ್ಯೇ

...(ಬೆಚ್ಚಿ) ಇದಾರ ಮೇಲೆ ಕಾಲಿಟ್ಟುಬಿಟ್ಟೆ ನಾನು? ಮನುಜ ಶರೀರದ ಮೇಲೆಯೇ ಕಾಲಿಟ್ಟಿರುವಂತಿದೆಯಲ್ಲ! (ಕಾಲನ್ನು ಆಚೆ ತಳ್ಳಿದ ಶಬ್ದ; ಮೆಟ್ಟಿಲಿನ ಮೇಲೆ ಮಲಗಿದ್ದವನನ್ನು ಹಿಡಿದೆತ್ತಿದ ಶಬ್ದ) ಯಾರು ನೀನು ಬಾಲಕ? ನಿನ್ನ ಮೇಲೆಯೇ ಕಾಲಿರಿಸಿಬಿಟ್ಟೆನಲ್ಲ! ರಾಮ ರಾಮ!

ಬಾಲಕ : ನನ್ನ ಗುರುಗಳು ನನಗೆ ದೊರಕಿದರು. ಮಾನ್ಯನಾದೆ; ರಾಮನಾಮಮಂತ್ರ ನನಗೆ ದೊರೆಯಿತು, ಧನ್ಯನಾದೆ.

ರಮಾನಂದ : ನೀನು ಯಾರೆಂದು ನನಗೆ ಹೇಳದೆಯೇ ನನ್ನನ್ನು ಗುರುವೆಂದು ಗ್ರಹಿಸಿಬಿಟ್ಟೆಯಾ ಬಾಲಕ? ನಿನಗಿಷ್ಟವಾದವರನ್ನು ಗುರುವೆಂದು ಸ್ವೀಕರಿಸುವ ಸ್ವಾತಂತ್ರ್ಯ ನಿನಗಿರುವ ಹಾಗೆ ನನಗಿಷ್ಟವಾದವರನ್ನೇ ಶಿಷ್ಯರನ್ನಾಗಿ ಸ್ವೀಕರಿಸುವ ಸ್ವಾತಂತ್ರ್ಯ ನನಗೂ ಇದೆಯಷ್ಟೆ? ನೀನಾರು ಹೇಳು.

ಬಾಲಕ : ನಾನಾರೆಂಬುದು ನನಗೇ ತಿಳಿದಿಲ್ಲ, ಗುರುಗಳೆ; ಅದನ್ನು ತಿಳಿದುಕೊಳ್ಳಲೆಂದೇ ತಮ್ಮ ಶಿಷ್ಯನಾಗಿದ್ದೇನೆ. ಇಂದು ಈ ಪವಿತ್ರ ಗಂಗಾಮಾತೆಯ ಪಾವನತೀರದಲ್ಲಿ, ಮನವನ್ನು ಬೆಳಗುವ ಈ ಬೆಳಗಿನ ಜಾವದಲ್ಲಿ ನನಗೆ ಗುರು ದೊರೆತುದು ನನ್ನ ಭಾಗ್ಯ.

ರಮಾನಂದ : ನಿನ್ನ ವಯಸ್ಸಿಗೆ ಮೀರಿದ ಜಿಜ್ಞಾಸೆ ನಿನ್ನಲ್ಲಿ ಅಂಕುರಿಸಿರುವುದು ಆಶ್ಚರ್ಯ, ಬಾಲಕ. ನಿನ್ನಂಥವರನ್ನು ಶಿಷ್ಯರನ್ನಾಗಿ ಸ್ವೀಕರಿಸಲು ಯಾವ ಗುರುವಿಗೂ ಆಕ್ಷೇಪವಿರಲಾರದು. ಆದರೂ ನಿನ್ನ ತಂದೆ ತಾಯಿಗಳ ಬಗ್ಗೆ ತಿಳಿದುಕೊಳ್ಳಬೇಡವೆ ನಾನು? ನೀನು ನನ್ನ ಶಿಷ್ಯನಾಗಲು ಅವರ ಒಪ್ಪಿಗೆ ಇದೆಯೆ, ಇಲ್ಲವೆ-ಎಂಬುದನ್ನು ಅರಿತುಕೊಳ್ಳಬೇಡವೆ ನಾನು?

ಬಾಲಕ : ತಮಗೆ ತಿಳಿಯದುದೂ ಇದೆಯೆ ಗುರುದೇವ? ತಮ್ಮ ಒಳಗನ್ನೇ ಕೇಳಿ ತಿಳಿದುಕೊಳ್ಳಲಾರಿರಾ? ತಾವು ಕರೆದರೆ ತಮ್ಮ ಕಣ್ಮುಂದೆ ಸುಳಿಯದಿರುವುವೆ ನನ್ನ ಹುಟ್ಟು ಬೆಳವಿಗೆಗಳ ಪುಟ್ಟ ಘಟನೆಗಳು?

ರಮಾನಂದ : (ಕನಿಕರಿಸಿ) ಇವು ಕಟು ಘಟನೆಗಳೇ ಇರಬೇಕು. ಅಂತೆಯೇ ಅವುಗಳನ್ನು ವಿವರಿಸಲು ಸಂಕೋಚ ನಿನಗೆ. ಆಗಲಿ, ಅಂತರಂಗದ ಅಕ್ಷಿಯನ್ನು ತೆರೆದು ನಾನೇ ಕಂಡುಕೊಳ್ಳುವೆನು.

* * *

ಪೀರ : ವರನ ಠೀವಿಯೆಂದರೆ ನಮ್ಮ ನೀರೂನಂತಿರಬೇಕು ನೋಡು ನೂರ್.

ನೂರ್ : ಠೀವಿ ಸಹಜ ಪೀರ, ನೀಮಾನಂಥ ಪತ್ನೀರತ್ನ ಸಿಕ್ಕವರಿಗೆ.

ಪೀರ : ಈ ದಿಬ್ಬಣದಲ್ಲಿ ನೂರಾರು ಜನರಿದ್ದೇವೆ. ಯಾರಿಗೆ ಇಂಥ ಸೌಭಾಗ್ಯ ಸಿಕ್ಕಿದೆ?

ನೂರ್ : ಹೊಸ ಹೆಂಡತಿಯೊಡನೆ ಮೊದಲಸಲ ಹೊರಟಾಗ ಯಾವ ಗಂಡಸಿಗೂ ಠೀವಿ ಸಹಜ. ನೀರೂನಿಗೋ, ನಾರೀಮಣಿಯೇ ಹೆಂಡತಿಯಾಗಿ ದೊರೆತಿದ್ದಾಳೆ. ಠೀವಿಗೆ ಕೋಡು ಮೂಡವೆ?

ನೀರೂ : ನಿಮ್ಮೆದುರು ನನ್ನ ಠೀವಿಯೆ, ಗೆಳೆಯರೆ? ಗೆಳೆಯರಿಗಿಂತ ಹಿರಿದಾದುದೇನಿದೆ ಲೋಕದಲ್ಲಿ?

ಪೀರ: ನೀರೂ ನಮ್ಮ ಗೆಳೆತನದ ಒರೆಗಲ್ಲಾಗಿ ನಿನ್ನ ಮನೆಸೇರಲಿದ್ದಾಳೆ. ಕಾದು ನೋಡೋಣ ನಮ್ಮ ಗೆಳೆತನ ಎಷ್ಟು ಗಟ್ಟಿ ಎಂಬುದನ್ನು.

ನೂರ್ : ಇದೋ, ಲಹರ್‌ತಾರಾ ಕುಂಟೆ ಬಂದಿತು. ಇಲ್ಲೆ ನೀರು ಕುಡಿದು,

ಸ್ವಲ್ಪ ವಿಶ್ರಮಿಸಿಕೊಂಡು ಮುಂದೆ ಸಾಗೋಣ.

ಪೀರ : ಹಾಗೆಯೇ ಆಗಲಿ. (ನೀರು ಕಲಕಿದ ಸದ್ದು) ಎಷ್ಟು ತಂಪಾಗಿದೆ ನೀರು!

ನೂರ್ : (ನೀರು ಕುಡಿದ ಶಬ್ದ) ಸೀಯಾಳದಂತೆ ಸಿಹಿಯೂ ಆಗಿದೆ ಪೀರ್.

ನೀರೂ : ನೂರ್, ಪೀರ್, ಅದೇನು ಆ ಜೊಂಡಿನ ಮಧ್ಯದಲ್ಲಿ ಚಿಂದಿ ಸುತ್ತಿದ ಜೀವ? ಆಹಾ, ಮುದ್ದಾದ ಮಗು. ಇಂಥ ಹಾಲುಗಲ್ಲದ ಹಸುಳೆಯನ್ನು ಹೀಗೆ ತೊರೆದು ಹೋದವರು ಯಾರೇ ಇರಲಿ, ಅವರು ಅಭಾಗ್ಯರೇ ಸರಿ.

ನೂರ್ : ಇದು ಅಲ್ಲಾಹನು ನಿನಗಿತ್ತಿರುವ ಮದುವೆಯ ಕಾಣಿಕೆ ನೀರೂ. ಏನೊಂದೂ ತೊಂದರೆಯಿಲ್ಲದೆ ತಂದೆಯಾಗಿಬಿಟ್ಟೆ ನೀನು ; ಕೋ, ಕಂದನನ್ನು.

ನೀರೂ : ನೀಮಾ ಒಪ್ಪಿದರೆ......

ನೀಮಾ : ಅನಾಥ ಮಕ್ಕಳ ಪಾಲನೆ ಪೋಷಣೆ ಅಲ್ಲಾನಿಗೆ ಪ್ರಿಯವಾದುದು. ತಂದುಕೊಡಿ ಕಂದನನ್ನು, ನನ್ನ ಹೊಟ್ಟೆಯಲ್ಲಿ ಹುಟ್ಟಿದ ಮಗನೆಂದೇ ಸಾಕಿ ಬೆಳೆಸುವೆನು.

ನೀರೂ : ತಾಯ್ತನವೇ ತನುತೊಟ್ಟು ಬಂದಂತಿರುವೆ ನೀನು, ನೀಮಾ.

ನೀಮಾ : ಮದುವೆಯಾಗುತ್ತಲೇ ನನ್ನನ್ನು ತಾಯಿಯನ್ನಾಗಿ ಮಾಡಿದ ಅಲ್ಲಾಹನು ದೊಡ್ಡವನು.

ನೀರೂ : ಅಲ್ಲಾ ಹೋ ಅಕಬರ್

ನೀಮಾ : ಅಂತೆಯೇ ನನ್ನ ಮಗನನ್ನು ಕಬೀರನೆಂದು ಕರೆಯಬೇಕೆಂದಿದ್ದೇನೆ.

ನೀರೂ : ಬಹುತ್ ಅಚ್ಛಾ; ಬಹಳ ಒಳ್ಳೆಯ ಹೆಸರು, ಕಬೀರ್, ಕಬೀರ್ (ಮುತ್ತಿಟ್ಟ ಸದ್ದು) ಮತ್ತೆ (ಮುನ್ನಿನ ನೋಟ–ಗಂಗಾತೀರದಲ್ಲಿ)

* * *

ರಮಾನಂದ : ನಿನ್ನ ಜನ್ಮದಾತರು ಯಾರೆಂಬುದು ತಿಳಿಯದಿದ್ದರೂ ನಿನ್ನ ಸಾಕು ತಾಯಿ ತಂದೆಯರಾರೆಂಬುದು ತಿಳಿಯಿತು ಬಾಲಕ ಕಬೀರ. ಬಹಳ ಒಳ್ಳೆಯ ಸಾಕು ತಾಯಿತಂದೆಯರ ವಾತ್ಸಲ್ಯವನ್ನುಂಡು ಬೆಳೆದಿರುವ ನೀನು ಜಿಜ್ಞಾಸುವೂ, ಮುಮುಕ್ಷುವೂ, ಭಗವದ್ಭಕ್ತನೂ ಆಗಿರುವುದು ಅಚ್ಚರಿಯೇನಲ್ಲ. ನಿನ್ನನ್ನು ಸಂತೋಷದಿಂದ ಶಿಷ್ಯನನ್ನಾಗಿ ಪರಿಗ್ರಹಿಸಿದ್ದೇನೆ.

ಕಬೀರ : ಧನ್ಯನಾದೆ ಗುರುವರ. ನನ್ನ ಕುಲವನ್ನು ನೋಡದೆ ಒಲವನ್ನು ನೋಡಿ ನನ್ನನ್ನು ಶಿಷ್ಯನನ್ನಾಗಿ ಸ್ವೀಕರಿಸಿದ ತಾವು ನಿಜವಾಗಿಯೂ ಮಹಾತ್ಮರು.

ನನಗೆ ತಮ್ಮ ಸನ್ನಿಧಿಯಲ್ಲಿಯೆ ಇದ್ದು ತಮ್ಮ ಸೇವೆ ಮಾಡಲು ಅನುಮತಿ ನೀಡಬೇಕೆಂದು ಬೇಡಿಕೊಳ್ಳುವೆ.

ರಮಾನಂದ : ಬೇಡ ಕಬೀರ, ನೀನೂ ಸಂನ್ಯಾಸಿಯಾಗುವುದು ಬೇಡ. ಸಂನ್ಯಾಸಿಯಾಗದೆ ಸದ್ಗತಿಯಿಲ್ಲವೆಂಬ ಭಾವನೆ ಸಂಸಾರಿಗಳಲ್ಲಿ ತಲೆದೋರಬಾರದು ನೀನು ಸಂಸಾರದಲ್ಲಿದ್ದೇ ಸ್ವಪರ ಸದ್ಗತಿ ಸಾಧಿಸಿ ಸಂಸಾರಿಗಳಿಗೆ ಆದರ್ಶವಾಗಬೇಕು. ನೀನು ನಿನ್ನ ತಂದೆ ತಾಯಿಯರೊಡನೆಯೇ ಇದ್ದು ಅವರೊಡನೆ ನೇಯಬೆಕು, ರಾಮನ ನೆನೆಯಬೇಕು.

ಕಬೀರ : ರಾಮಭಕ್ತಿ ಗುರಿ, ಸಂಸಾರ ದಾರಿ. ಗುರಿ, ದಾರಿ ಎರಡನ್ನೂ ತೋರಿದ ಗುರುದೇವ, ತಾವು ತೋರಿದ ದಾರಿಯಲ್ಲಿಯೇ ನಡೆದು, ತಾವು ತಿಳಿಸಿದ ಗುರಿಯನ್ನು ಮುಟ್ಟಲು ಪೂರ್ಣ ಪ್ರಯತ್ನ ಮಾಡುವೆನು. ತಮ್ಮ ಆಶೀರ್ವಾದರೂಪೀ ಶ್ರೀರಾಮ ಸದಾ ನನ್ನನ್ನು ಸನ್ಮಾರ್ಗದಲ್ಲಿ ನಡೆಸುತ್ತಿರಲಿ.

ರಮಾನಂದ : ಶ್ರೀರಾಮನೇ ನಿನಗೆ ಶ್ರೀರಕ್ಷೆ. ಸಾಧಕನಾಗು, ಸಿದ್ಧನಾಗು, ಸಂಬುದ್ಧನಾಗು!

ಕಬೀರ : ಅನುಗೃಹೀತನಾದೆನು. ಹೋಗಿ ಬರುವೆ; ಮತ್ತೆ ಮತ್ತೆ ಬರುವೆ ಗುರುವಿನ ಬಳಿಗೆ.

ರಮಾನಂದ : ನೀನೇ ಗುರುವಾಗಲಿರುವಿ ಕಬೀರ. ಅದುವರೆಗೆ ಬೇಕೆನ್ನಿಸಿದಾಗ ಬಾ ಇಲ್ಲಿಗೆ. ನೀನೆಲ್ಲಿದ್ದರೂ ನಾನು ನಿನ್ನೊಡನೆಯೇ ಇರುವೆನೆಂದು ತಿಳಿ. ಇರುವತನಕ ನೀನು ನೇಯಬೇಕು, ರಾಮನ ನೆನೆಯಬೇಕು.

ಕಬೀರ : ನೇಯುವೆ, ರಾಮನ ನೆನೆಯುವೆ; ನೇಯುವೆ, ರಾಮನ ನೆನೆಯುವೆ. (ಹೋಗುವನು)

ನಿರೂಪಕ : ತುಂಬ ಪ್ರಸನ್ನಚಿತ್ತನಾಗಿ ಮನೆಗೆ ಮರಳಿದ ಕಬೀರ, ಹೀರಾ ಪಾಯೋ ಗಾಂಠಿ ಗತಿಯಾಯೋ... ಬಾರ್ ಬಾರ್ ವಾಕೋ ಕ್ಯೋಂ ಖೋಲೇ... ಎಂದರೆ, "ವಜ್ರವೇ ಸಿಕ್ಕಿತು, ಗಂಟು ಕಟ್ಟಿ ಇಟ್ಟುಕೊಂಡೆ. ಮತ್ತೆ ಮತ್ತೆ ತೆರೆದೇಕೆ ನೋಡಲಿ ಅದನ್ನು?" ಎಂದು ಹಾಡಿಕೊಂಡ. ಗುರುಗಳ ಆದೇಶದಂತೆ ನೇಯುವುದೂ. ರಾಮನನ್ನು ನೆನೆಯುವುದೂ ಜೊತೆ ಜೊತೆಯಾಗಿ ನಡೆದುವು. ತಂದೆ ತಾಯಿಯರಿಗೆ ಮಗನ ಕಾಯಕನಿಷ್ಠೆ ಹಿರಿ ಹಿರಿ ಹಿಗ್ಗುವಂತೆ ಮಾಡಿದರೂ ಅವನ ರಾಮಭಕ್ತಿ ಆತಂಕಕಾರಿಯೆನಿಸಿರಬಹುದು. ತಂದೆ ನೀರೂ, ತಾಯಿ ನೀಮಾರೊಡನೆ ಈ ರೀತಿ ವಾದ ನಡೆದಿದ್ದರೂ ನಡೆದಿರಬಹುದು.

ನೀಮಾ : ಬೇಟಾ, ಮನೆಯ ಕಾಯಕವಾದ ನೇಕಾರಿಕೆಯಲ್ಲಿ ನಿನಗಿರುವ ನಿಷ್ಠೆ ನಮಗೆ ಹಿಗ್ಗಿನ ಬುಗ್ಗೆಯೆನಿಸಿದೆ; ಆದರೆ ರಹೀಮನನ್ನು ನೆನೆಯಬೇಕಾದ ನೀನು ರಾಮನನ್ನು ನೆನೆಯುತ್ತಿರುವುದು ನಮ್ಮ ಕುಗ್ಗಿಗೆ ಕಾರಣವಾಗಿದೆಯಲ್ಲ.

ಕಬೀರ : ಅಮ್ಮೀಜಾನ್, ರಾಮ-ರಹೀಮರು ಒಂದೇ. ಅವರಲ್ಲಿ ನನಗೆ ಭೇದವೇ ತೋರುತ್ತಿಲ್ಲ. ಇಬ್ಬರು ಜಗದೀಶರು ಎಲ್ಲಿಂದ ಬಂದರು? ಜಗದೀಶನೊಬ್ಬನೇ. ಅವನು ಅಲ್ಲಾ, ರಾಮ, ಕರೀಮ, ಕೇಶವ, ಹರಿ, ಹಜರತ ಎಂಬ ಹಲವು ಹೆಸರು ತಳೆದನು. ಚಿನ್ನ ಒಂದೇ, ಆಭರಣಗಳು ಅನೇಕ. ಅದರಂತೆ ದೇವರು. ಬೇರೆಯೆಂಬ ಭಾವವಿಲ್ಲ. ಆ ಭಾವ ಸಲ್ಲ. ಹೇಳಲಿಕ್ಕೆ ಎರಡು, ಕೇಳಲಿಕ್ಕೆ ಎರಡು-ಎಂದು ಅಂಗೀಕರಿಸಲಾಯಿತಾಗಲಿ ವಾಸ್ತವಿಕವಾಗಿ ಎರಡಿಲ್ಲ. ಒಂದೇ ನಮಾಜು ಒಂದೇ ಪೂಜೆ. ಭೇದವಿಲ್ಲ. ಅವನು ಒಬ್ಬನೇ. ಅವನೇ ಮಹಾದೇವ, ಅವನೇ ಮಹಮ್ಮದ, ಅವನೇ ಬ್ರಹ್ಮ, ಅವನೇ ಅದಮ ಎಂದು ತಿಳಿ. ಒಬ್ಬನಿಗೆ ಹಿಂದೂ ಎನ್ನುತ್ತಾರೆ. ಒಬ್ಬನಿಗೆ ತುರುಕ ಎನ್ನುತ್ತಾರೆ. ಇಬ್ಬರೂ ಒಂದೇ ಭೂಮಿಯ ಮೇಲೆ ಇರುತ್ತಾರೆ. ವೇದ ಓದುವವರು ಕೆಲವರು, ಕುರಾನ್ ಓದುವವರು ಕೆಲವರು. ಅವರು ಪಂಡಿತರು, ಇವರು ಮೌಲಾಗಳು. ಇಬ್ಬರೂ ಭ್ರಮಿಸಿದ್ದಾರೆ, ಮರೆತಿದ್ದಾರೆ. ಯಾರಿಗೂ ರಾಮನಾಗಲಿ ರಹೀಮನಾಗಲಿ ಸಿಕ್ಕಿಲ್ಲ.

ನೀರೂ : ದಾರಿ ತಪ್ಪಿ ಮಾತನಾಡಬೇಡ, ಬೇಟಾ ಪಂಡಿತರಿಗೂ ಮೌಲಾಗಳಿಗೂ ದೇವರು ದೊರೆಯದಿದ್ದರೆ ಯಾರಿಗೆ ದೊರೆಯುವನೆಂದು ತಿಳಿದಿರುವೆ?

ಕಬೀರ : ನನ್ನ ಗುರುಗಳು ಹೇಳಿರುವಂತೆ ನೇಯುತ್ತಲೇ ರಾಮನನ್ನು ನೆನೆಯುತ್ತ ಹೋದರೆ ನಿನಗೂ ದೊರೆಯುವನು ಅಬ್ಬಾಜಾನ್. ರಾಮನನ್ನು ನೆನೆಯಲು ಸಂಕೋಚವೆನಿಸಿದರೆ ರಹೀಮನನ್ನು ನೆನೆ.

ನೀರೂ : ದೇವರನ್ನು ಪಡೆಯುವುದು ಇಷ್ಟು ಸುಲಭವೆ, ಬೇಟಾ? ಇದು ನಮ್ಮಂಥ ಸಂಸಾರಿಕರಿಗೆ, ಪಾಮರರಿಗೆ ಸಾಧ್ಯವಲ್ಲದ ವಿಷಯವೆಂದು ನಾನು ತಿಳಿದಿದ್ದೆ.

ಕಬೀರ : ಹಾಗೆ ನಾವು ತಿಳಿಯುವಂತೆ ಮಾಡಿದವರೇ ಪಂಡಿತರು, ಮೌಲಾಗಳು. ತಮ್ಮ ಪ್ರತಿಷ್ಠೆಯನ್ನು ಬೆಳೆಸಿಕೊಳ್ಳಲು, ತಮ್ಮ ಸ್ವಾರ್ಥವನ್ನು ಸಾಧಿಸಿಕೊಳ್ಳಲು ಅವರು ದೇವರೆಂದರೆ ಸಾಮಾನ್ಯರಿಗೆ ದುರ್ಲಭನೆಂದು ಪ್ರಚಾರ ಮಾಡಿದ್ದಾರೆ. ನಿಜವಾಗಿ ನೋಡಿದರೆ ಜೀವಿಗೆ ದೇವನಷ್ಟು ಸಮೀಪವಿರುವವರು ಇನ್ನಾರೂ ಇಲ್ಲ. ತಂದೆ ತಾಯಿಗಳಾದ ನೀವೂ ಸ್ವಲ್ಪ ದೂರದಲ್ಲಿಯೇ ಕುಳಿತಿರುವಿರಿ; ಆದರೆ ನನ್ನ ರಾಮ ನನ್ನಲ್ಲಿಯೇ ನನ್ನ ಉಸಿರಿನ ಉಸಿರಾಗಿ, ಕರೆದರೆ ಸಾಕು 'ಓ' ಎನ್ನುವ ಕರುಣಾಳುವಾಗಿ ಕುಳಿತಿದ್ದಾನೆ. ನಿನ್ನಲ್ಲಿಯೂ ಹಾಗೆಯೇ, ಅಮ್ಮಿಜಾನ್‌ನಳಲ್ಲೂ ಹಾಗೆಯೇ.

ನೀರೂ : ಮನೆಯಲ್ಲಿದ್ದುಕೊಂಡೇ, ಮನೆಗೆಲಸ ಮಾಡುತ್ತಲೇ ದೇವರನ್ನು ಕಾಣಬಹುದೆಂದರೆ ನಂಬದಾಗಿದೆ ನನ್ನ ಮನ.

ಕಬೀರ : ಮನೆ ಬಿಟ್ಟು ಹೋದವರೇ ದಾರಿ ತಪ್ಪುವರು ಅಬ್ಬಾಜಾನ್. ದಾರಿ ತಪ್ಪಿದವರನ್ನು ಮನೆಗೆ ಕರೆದುಕೊಂಡು ಬರುವವರೇ ನಮಗೆ ಪ್ರಿಯರು. ಮನೆಯಲ್ಲಿಯೇ ಯೋಗ, ಮನೆಯಲ್ಲಿಯೇ ಭೋಗ. ಮನೆಯನ್ನು ಬಿಟ್ಟು ವನಕ್ಕೆ ಹೋಗಬೇಕಿಲ್ಲ. ವನಕ್ಕೆ ಹೋದರೆ ದುಃಖ ಜನಿಸುವುದು. ಅದನ್ನೆಲ್ಲಿಡುವಿರಿ? ಮನೆಯಲ್ಲಿ ಮುಕ್ತಿ. ಮನೆಯಲ್ಲಿ ವಸ್ತು, ವಸ್ತುವಿನಲ್ಲಿ ಮನೆ. ಮನೆಯಲ್ಲಿಯೇ ವಸ್ತುವನ್ನು ದೊರಕಿಸಿರಿ. ನೇಯಿರಿ. ಉಳಿದ ವಿಚಾರಗಳನ್ನು ಬಿಡಿರಿ.

ನೀರೂ : ಅಲ್ಲಾನನ್ನು ಪಡೆಯುವುದು ಇಷ್ಟು ಸುಲಭವಾದುದೆಂಬುದನ್ನು ನಿನಗೆ ತೋರಿಸಿಕೊಟ್ಟ ನಿನ್ನ ಗುರು ನಿಜವಾಗಿಯೂ ಸದ್ಗುರು. ನಮಗೂ ಅವರು ತೋರಿದ ದಾರಿ ಗೊತ್ತಾಯಿತು. ಇನ್ನು ನಮಗೂ ಇದೇ ದಾರಿ.

ನೀಮಾ : ಅಡುಗೆ ಮಾಡುತ್ತ ಅಲ್ಲಾನನ್ನ ನೆನೆಯುವೆ; ನೂಲುತ್ತ ರಹೀಮನನ್ನು ನೆನೆಯುವೆ; ನೇಯುತ್ತ ಕರೀಮನನ್ನು ನೆನೆಯುವೆ. ಎಂಥ ದೊಡ್ಡ ಗುರಿಗೆ ಎಂಥ ಸುಲಭ ದಾರಿ!

* * *

ನಿರೂಪಕ : ಕಬೀರನ ಸದ್ದಿಲ್ಲದ ಸಾಧನೆ ಸಾಗಿತು. ಅಷ್ಟೇ ಸದ್ದಿಲ್ಲದೆ. ಅವನ ಬೆಳ್ಜಸವೂ ಬೆಳೆಯ ತೊಡಗಿತು. ಕಬ್ಬಿಗೆ ಜೇನಿಟ್ಟಂತೆ ಕುರಿತೋದದ ಕಬೀರ ಅಪ್ರಯತ್ನಿತವಾಗಿ ದೋಹೆಗಳನ್ನೂ, 'ಸಬದ'ಗಳನ್ನೂ 'ರಮೈನೀ'ಗಳನ್ನೂ ಉಸಿರ ತೊಡಗಿದ. ದೋಹಾಗಳು ಅನುಭವ ಸೂಕ್ತಿಗಳು. 'ಸಾಖಿ' ಎಂದೂ ಇವುಗಳನ್ನು ಕರೆಯಲಾಗಿದೆ. 'ಸಬದ'ಗಳು ಹಾಡುಗಬ್ಬಗಳು, 'ರಮೈನಿ' ಗಳು ಕಬೀರನ ಕಾವ್ಯ ಪ್ರತಿಭೆಯ ಪತಾಕೆಗಳು. ಭಕ್ತನ ಹೃದಯದ ಭಾವಪರವಶತೆ ಹೃದಯಂಗಮವಾಗಿ ಹೊರಹೊಮ್ಮಿದೆ ಈ ಭಜನೆಗಳಲ್ಲಿ. ಅವನ ಅನುಯಾಯಿಗಳು ಇವುಗಳನ್ನು ಶ್ರದ್ಧೆಯಿಂದ ಬರೆದಿಟ್ಟುಕೊಂಡರು. ಇವುಗಳ ಪರಿಣಾಮರಮಣೀಯತೆಗೆ ಮಾರುಹೋದ ಶ್ರೀಸಾಮಾನ್ಯರು ಇವುಗಳನ್ನು ಹಾಡಿ ಹಿಗ್ಗತೊಡಗಿದರು. ಹೀಗೆ:

ಕೂಡು ಹಾಡು : ಮೂಲ : ತೋಕೋ ಪೀವ ಮಿಲೇಂಗೆ ಘುಂಟ ಖೋಲರೇ

ಖಂಡಿತ ಕಾಣುವೆ ನಿನ್ನ ಪ್ರಿಯನ ನೀ
ತೆರೆ ತೆರೆ ಅಂತರ ಪಟವ
ಒಡೆಯನಿರುವನು ಎಲ್ಲರಲ್ಲಿಯೂ
ಏಕೆ ನುಡಿವೆ ಕಟು ವಚನ?
ಯಾಕೆ ಹಣದ, ಹರೆಯದ ಹೆಮ್ಮೆ

ಪಂಚರಂಗಿ ತನು ಮಿಥ್ಯೆ

ಜ್ಯೋತಿ ಬೆಳಗಿಸು ಶೂನ್ಯ ಮಹಲಿನಲಿ

ಅಲೆಯಬೇಡ ಅಳಲುತ್ತ!

ರಂಗಮಹಲಿ ಹುಡುಕಿ ಬಿಟ್ಟೆನು

ನನ್ನ ಮೂಲ್ಯ ಪ್ರಿಯನನ್ನು

ಕಬೀರ ಹೇಳುವ ಇದೆ ಆನಂದವು,

ಕೇಳುವೆ ಅನಹದ ಧ್ವನಿಯನ್ನು

ನಿರೂಪಕ : ಕಬೀರನ ರಚನೆಗಳು ಜನಪ್ರಿಯವಾಗಲು ಅನೇಕ ಕಾರಣಗಳಿವೆ. ಮೊದಲನೆಯದಾಗಿ, ಭಾರತದ ಭಕ್ತಿಮಾರ್ಗ, ಸೂಫೀ ಪಂಥ, ನಾಥ ಪಂಥ, ಯೋಗದರ್ಶನ ಇತ್ಯಾದಿಗಳ ಸಾರವನ್ನು ಹೀರಿ ಸಿದ್ಧವಾಗಿದ್ದ ಅವನ ಸಮನ್ವಯದರ್ಶನ, ಸಮತ್ವದೃಷ್ಟಿ, ಸುವರ್ಣಮಧ್ಯಮ ಮಾರ್ಗಗಳು; ಎರಡನೆಯದಾಗಿ, ಮುನ್ನಿನ ದಾರ್ಶನಿಕ–ಧಾರ್ಮಿಕ ಪ್ರಭಾವಗಳಿಗೆ ಒಳಗಾಗಿಯೂ ನಿರಂಕುಶ ಮತಿತ್ವವನ್ನುಳಿಸಿ ಬೆಳೆಸಿಕೊಂಡು, ಸ್ವತಂತ್ರ ಚಿಂತನೆಯ ಕಾಂತಿಯಿಂದ ಕಳಕಳಿಸುವ ಅವನ ಕೃತಿಗಳ ಕಾಣ್ಕೆ; ಮೂರನೆಯದಾಗಿ, ಧರ್ಮಾಡಂಬರಗಳು, ಅಂಧ ವಿಶ್ವಾಸಗಳು, ಸ್ಪೃಶ್ಯಾಸ್ಪೃಶ್ಯ ಭಾವನೆಯು ಕಪಟಾಚರಣೆಗಳು ಎಲ್ಲಿಯೇ ಕಂಡರೂ ಖಂಡಿಸಿದ ಕೆಚ್ಚು; ನಾಲ್ಕನೆಯದಾಗಿ ನಿಷ್ಕಾಮಭಕ್ತಿಯ, ಸಹನಶೀಲತೆಯ, ಸತ್ಸಂಗದ, ಮಾನವೀಕರಣದ, ಅಂತರಜಾತೀಯ ಸಾಮರಸ್ಯದ ಪ್ರಭಾವಪೂರ್ಣ ಪ್ರಚಾರ; ಐದನೆಯದಾಗಿ, ವ್ರಜ, ರಾಜಸ್ಥಾನೀ, ಖಡೀಬೋಲಿ, ಅವಧಿ, ಭೋಜಪುರಿ ಇತ್ಯಾದಿ ಭಾಷಾಭೇದಗಳ ಸಮುಚಿತ ಬೆರಕೆಯಿಂದ ವಿನೂತನ ಭಾಷಾಶೈಲಿಯೊಂದನ್ನು ಸೃಷ್ಟಿಸಿಕೊಂಡುದು; ಅರನೆಯದಾಗಿ, ಕಣ್ಣಾರೆ ಕಂಡದ್ದನ್ನು ಹೇಳಿದುದು, ಸರಳವಿದ್ದುದನ್ನು ಜಟಿಲವಾಗಿಸದೆ, ತೊಡಕಾಗಿದ್ದುದನ್ನು ಬಿಡಿಸಿ ಹೇಳಿದುದು, ಧರ್ಮದ ದಳ್ಳಾಳಿಗಳ ಕರಾಳ ಕಪಿಮುಷ್ಟಿಯಿಂದ ಮುಗ್ಧಜನರನ್ನು ಪಾರುಮಾಡಿ ತಮ್ಮ ತಮ್ಮ ಮನೆಗಳಲ್ಲಿಯೇ, ತಮ್ಮ ತಮ್ಮ ಕಾಯಕ ಮಾಡುತ್ತಲೇ ಸದ್ಗತಿ ಪಡೆವ ದಾರಿಯನ್ನು ಅವರಿಗೆ ತೋರಿದುದು; ಕೊನೆಯದಾಗಿ, ತನ್ನದೇ ಆದ ಮತವನ್ನೋ ಪಂಥವನ್ನೋ ಪ್ರವರ್ತಿಸಲು ಪ್ರಯತ್ನಿಸದಿದ್ದುದು. ಇಲ್ಲಿ ಕೇಳಿ:

ಕೂಡು ಹಾಡು : ಧರ್ಮಿಯಲ್ಲ ನಾ–

ನಧರ್ಮಿಯಲ್ಲ ನಾ,

ಅಲ್ಲ ಸಂನ್ಯಾಸಿ ಕಾಮುಕನು

ಒಡೆಯನಲ್ಲ ನಾ

ಗುಲಾಮನಲ್ಲ ನಾ

ಅಲ್ಲ ಸ್ವತಂತ್ರ-ಬಂಧಿತನು

ವಿರಕ್ತನಲ್ಲ ನಾ

ಲೋಭಿಯಲ್ಲ ನಾ

ಅಲ್ಲ ಸಂಗಿ-ನಿಸ್ಸಂಗಿ

ಹೋಗೆನು ಸ್ವರ್ಗಕೆ

ಹೋಗೆನು ನರಕಕೆ

ಕ್ರಿಯಾತೀತ ನಾ ಕ್ರಿಯೆ ಮಾಡಿ

ವಿರಳವೀ ಪರಿಯ

ಆತ್ಮದ ಅರಿವು

ಯಾರಿಗಿದೆಯೊ ಅವನಮರ

ಪ್ರಸಾರ ಮಾಡನು

ಹೊಸತು ಮತವನು

ಇರುವುದ ಕೆಡಿಸ ಕಬೀರ

ನಿರೂಪಕ : ಕಬೀರನ ಮನೆಯೆ ಮಠವಾಯಿತು. ಬೆಳಗಿನಿಂದ ಸಂಜೆಯವರೆಗೆ ಸತ್ಸಂಗ. ಹಗಲೂಟ ಆದರೆ ಅಯಿತು, ಇಲ್ಲವಾದರೆ ಇಲ್ಲ. ಊಟಕ್ಕೆ ಕರೆದರೆ ಆಗ ಹಾಜರಿರುವ ಎಲ್ಲರನ್ನೂ ತನ್ನ ಪತಿ ಊಟಕ್ಕೆ ಕರೆಯುವೆನೆಂಬುದನ್ನು ಅರಿತಿದ್ದ ಕಬೀರನ ಪತ್ನಿ ಜನರಿರುವಾಗ ಅವನನ್ನು ಊಟಕ್ಕೆ ಕರೆಯುತ್ತಿರಲಿಲ್ಲ. ಕಬೀರನ ಸುತ್ತು ಮುತ್ತು ಜನರಿಲ್ಲದ ಸಮಯವೂ ಇರುತ್ತಿರಲಿಲ್ಲ. ಅವನ ಹೆಂಡತಿ ಒಳಗೊಳಗೇ ತಳಮಳಿಸುತ್ತಿದ್ದಳು. ಎಲ್ಲರನ್ನು ಎಬ್ಬಿಸಿದರೆ ಅವರೆಲ್ಲರಿಗೆ ಸಾಲುವಷ್ಟು ಆಹಾರ ಮನೆಯೊಳಗಿಲ್ಲ; ಎಬ್ಬಿಸದಿದ್ದರೆ ಪತಿಗೆ ಉಪವಾಸ. ಒಂದು ದಿನ ಬೆಳಗಿನಿಂದ ರಾತ್ರಿಯವರೆಗೆ ಜನರು ಬಂದೇ ಬಂದರು. ಇನ್ನು ಪತಿಯನ್ನು ಊಟಕ್ಕೆ ಎಬ್ಬಿಸಬೇಕೆನ್ನುವಷ್ಟರಲ್ಲಿ ಇನ್ನೊಬ್ಬ ದುಃಖಿ ಬಂದನು. ಯಾರನ್ನು ನೋಡಿದರೂ ದುಃಖಿಗಳನ್ನೇ ನೋಡಿದೆನೆಂದು ನುಡಿದಿರುವ ಕಬೀರ ಅಪರಾತ್ರಿಯಲ್ಲಿಯೂ ಆ ದುಃಖಿಯನ್ನು ನಗೆಮೊಗದೊಡನೆಯೇ ಸ್ವಾಗತಿಸಿದ. ಮುಂದೆ ನಡೆದುದು ಹೀಗೆ:

ಕಬೀರ : ಬಾ, ಬಂಧು, ಇಷ್ಟು ಅಪರಾತ್ರಿಯಲ್ಲಿ ಬರಬೇಕಾದರೆ ಯಾವುದೋ ಕಠಿನ ಸಮಸ್ಯೆ ಎದುರಾಗಿರಬೇಕು ನಿಮಗೆ.

ಕಬೀರಪತ್ನಿ : ನಿಮಗೆ ಎಲ್ಲರ ಸಮಸ್ಯೆಗಳ ಬಗೆಗೂ ಸಹಾನುಭೂತಿಯಿದೆ. ನನ್ನ ಸಮಸ್ಯೆಯ ಬಗ್ಗೆ ಒಮ್ಮೆಯಾದರೂ ವಿಚಾರಿಸಿರುವಿರಾ?

ಕಬೀರ : ಹಗಲಿರುಳೂ ಇಲ್ಲಿಯೇ ಇರುತ್ತೇನೆ. ನಿನ್ನ ಸಮಸ್ಯೆ ಯಾವುದೆಂಬುದನ್ನು ನೀನು ನನಗೆ ಹೇಳಲೇ ಇಲ್ಲವಲ್ಲ.

ಕಬೀರ ಪತ್ನಿ : ಹೇಳದಿದ್ದರೆ ತಿಳಿಯದಂಥ ಸಮಸ್ಯೆಯೇನಲ್ಲ ನನ್ನದು. ಯಾವಾಗ ತಿಳಿದುಕೊಳ್ಳುವಿರೋ ತಿಳಿದುಕೊಳ್ಳಿರಿ. (ಸಿಡುಕಿನಿಂದ ಹೋಗುವಳು)

ಕಬೀರ : ಹೇಳು ಬಂಧು, ಯಾವ ಪ್ರಶ್ನೆ ನಿಮ್ಮ ತಲೆ ತಿನ್ನುತ್ತಿದೆ?

ಆಗಂತಕ : ಅಷ್ಟೊಂದು ಮಹತ್ವದ ಪ್ರಶ್ನೆಯೇನಿಲ್ಲ ಸಂತಶಿರೋಮಣಿ. ಆದರೂ ಅದಕ್ಕೆ ಉತ್ತರ ದೊರೆತರೆ ನನ್ನ ಬಾಳಿಗೆ ನೆಮ್ಮದಿ.

ಕಬೀರ : ಉತ್ತರ ಹುಡುಕೋಣ. ಆದರೆ ಉತ್ತರ ದೊರೆಯಲಿಲ್ಲವೆಂದು ನೆಮ್ಮದಿ ಕಳೆದುಕೊಳ್ಳುವುದು ಬೇಡ. ಈ ಜಗತ್ತೇ ಹೀಗೆ, ಜೀವನವೇ ಹೀಗೆ, ಈ ಕ್ಷಣ ಉಪ್ಪು ಮರುಕ್ಷಣದಲ್ಲಿ ಸಿಹಿ.

ಕಬೀರ ಪತ್ನಿ : (ನೇಪಥ್ಯದಲ್ಲಿಯೇ) ಇದರ ಪರೀಕ್ಷೆ ಮಾಡಿಯೇ ಬಿಡುವೆ. ಹೇಗೂ ಎರಡು ಬಟ್ಟಲು ಹಾಲಿದೆ. ಸಾಕಷ್ಟು ಉಪ್ಪು ಬೆರೆಸಿ ಕೊಟ್ಟು ಇವರನ್ನು ಒರೆಗೆ ಹಚ್ಚಿಬಿಡುವೆ. (ಪ್ರಕಟ) ಯೋಗಿಗಳೇ, ಇದಿಷ್ಟು ಹಾಲನ್ನಾದರೂ ಕುಡಿದು ನಿಮ್ಮ ಎಂದೂ ಮುಗಿಯದ ಮಾತನ್ನು ಮುಂದುವರಿಸಿರಿ. (ಹಾಲಿಟ್ಟು ಹೋಗುವಳು)

ಕಬೀರ : ಹಾಲು ಕುಡಿ ಬಂಧು.

ಆಗಂತುಕ : (ಸ್ವಲ್ಪ ಕುಡಿದು ಸ್ವಗತ) ಎಷ್ಟು ಕಹಿಯಾಗಿದೆ ಇದು! ಹೇಗೆ ಕುಡಿಯುವುದಪ್ಪ. ಕಬೀರದಾಸರೇನೋ ಹರ್ಷಚಿತ್ತರಾಗಿಯೇ ಕುಡಿಯುತ್ತಲ್ಲಿದ್ದಾರೆ. ಮರೆತು ನನ್ನ ಹಾಲಿನಲ್ಲಿ ಮಾತ್ರ ಸಕ್ಕರೆಗೆ ಬದಲಾಗಿ ಇನ್ನೇನನ್ನಾದರೂ ಬೆರೆಸಿ ಬಿಟ್ಟಿರಬಹುದೆ?

ಕಬೀರ ಪತ್ನಿ : ಸಕ್ಕರೆ ಸಾಕಾಯಿತೆ?

ಕಬೀರ : ನನಗಂತೂ ಸಾಕಷ್ಟಿತ್ತು. ಅವರನ್ನು ಕೇಳು.

ಕಬೀರ ಪತ್ನಿ : ಕೇಳುವುದೇನು, ಅವರ ಬಟ್ಟಲಿನಲ್ಲಿ ಹಾಲು ಹಾಗೆಯೇ ಇದೆ. ಸಕ್ಕರೆ ಕಡಿಮೆಯಾಗಿರಲೇಬೇಕು. ಕೊಳ್ಳಿ. (ಮತ್ತಷ್ಟು ಉಪ್ಪು ಬೆರಸಿ ಹೋಗುತ್ತ) ಇಂಥ ಪುಂಡ ಪೋಕರಿಗಳಿಗೆ, ಹೆಂಡತಿಯೊಡನೆ ಬಾಳುವೆ ಮಾಡಲಾಗದ ಕೇಡಿಗಳಿಗೆ ಈ ಮನೆಯೊಂದು ಮಠವಾಗಿದೆ. ಯಾರು ಉಂಡರೇನು, ಉಪವಾಸವಿದ್ದರೇನು ; ಇವರಿಗೆ ಇಲ್ಲಿ ನಡೆಯಬೇಕು ಉಪಚಾರ.

ಕಬೀರ : ನಿಮ್ಮ ಪ್ರಶ್ನೆಗೆ ಉತ್ತರ ದೊರೆಯಿತೆ?

ಆಗಂತುಕ : ದೊರೆಯಿತು ಸ್ವಾಮಿ: ಸತ್ಸಂಗ ಸೇರದ, ಸದಾ ದುರುಗುಟ್ಟುವ ಚಂಡಿಯಂಥ ಹೆಂಡತಿಯೇ ನನ್ನ ಪ್ರಶ್ನೆ ಕೂಡ. ನಿಮ್ಮ ಹಾಲಿನಲ್ಲಿಯೂ ಉಪ್ಪನ್ನೇ ಹಾಕಿರಬೇಕು. ನೀವು ನಗುನಗುತ್ತಲೇ ಕುಡಿದಿರಿ. ನಾನು ಮಾತ್ರ ಮುಖ ಕಿವುಚಿಕೊಂಡೆ.

ಕಬೀರ : ಜೀವನದಲ್ಲಿ ಇವೆಲ್ಲ ಇದ್ದದ್ದೇ. ಇವನ್ನು ಮನಸ್ಸಿಗೆ ಹಚ್ಚಿಕೊಳ್ಳಬಾರದು ಬಂಧು. ಇವುಗಳಿಗೆ ತಾಳ್ಮೆಯೇ ತರಣೋಪಾಯ.

ಆಗಂತುಕ : ಜೀವನವನ್ನು ಎದುರಿಸುವುದು ಹೇಗೆಂಬುದು ತಿಳಿಯಿತು; ಮರಣವನ್ನೆಂತು ಎದುರಿಸುವುದು?

ಕಬೀರ : ಮರಣ ನಿಶ್ಚಿತ, ಅದರ ಆಗಮನ ಅನಿಶ್ಚಿತ. ಯಾವಾಗ ಬಂದರೂ ಅದನ್ನು ಸ್ವಾಗತಿಸಲು ಸಿದ್ಧನಾಗಿರಬೇಕು. ತೋಟಗಾರ ತೋಟಕ್ಕೆ ಬರುತ್ತಾನೆ, ಮೊಗ್ಗುಗಳು ಅರಳುತ್ತಿವೆ: "ಇಂದವನು ಅರಳಿದ ಹೂಗಳನ್ನು ಕಿತ್ತುಕೊಳ್ಳುತ್ತಾನೆ; ನಾಳೆ ನಮ್ಮ ಸರದಿ". ಹೀಗೆ ಸಾವು ನಿಶ್ಚಿತವೆಂದರಿತು ಅದನ್ನು ಸ್ವಾಗತಿಸಲು ಸದಾ ಸಿದ್ಧನಾಗಿರಬೇಕು.

ಆಗಂತುಕ : ವಸ್ತುಸ್ಥಿತಿ ಹೀಗಿದ್ದೂ ನಾವು ಚಿರಂಜೀವಿಗಳೆಂದು ಕೆಲವರು ಗರ್ವಿಸುವರಲ್ಲ.

ಕಬೀರ : ಅವರ ಬಗ್ಗೆ ಹೀಗೆ ಹೇಳಬೇಕಾಗುತ್ತದೆ: ಮಣ್ಣು ಕುಂಬಾರನಿಗೆ ಹೇಳಿತು, "ನನ್ನನ್ನು ಏಕೆ ತುಳಿಯುತ್ತೀಯೆ? ಒಂದು ಕಾಲ ಬರುತ್ತದೆ, ಆಗ ನಾನು ನಿನ್ನನ್ನು ತುಳಿಯುವೆನು" ಎಂದು. ಮೇಲಾಗಿ ನನ್ನೊಬ್ಬನಿಗೇ ಮೃಷ, ಮುಪ್ಪು, ಆಪತ್ತುಗಳಿದ್ದಿದ್ದರೆ ನಾನು ಅಂಜಬೇಕು. ಆದರೆ ಇವು ಎಲ್ಲರಿಗೂ ಇವೆಯಲ್ಲ. ಆದ್ದರಿಂದ ಯಾರೇಕೆ ಇವುಗಳಿಗೆ ಅಂಜಬೇಕು?

ಆಗಂತುಕ : ನನ್ನ ಪ್ರಶ್ನೆಗಳಿಗೆಲ್ಲ ಸರಿಯಾದ ಉತ್ತರ ನೀಡಿದಿರಿ. ಕೃತಜ್ಞತೆಗಳು.

ಕಬೀರ : ರಾಮನಿಗೆ ಸಲ್ಲಲಿ ಈ ಕೃತಜ್ಞತೆಗಳು. ಇನ್ನು ನಿಮ್ಮ ಕೈ ಕೆಲಸಮಾಡಲಿ, ಮನ ರಾಮನನ್ನು ನೆನೆಯಲಿ.

* * *

ನಿರೂಪಕ : "ಸ್ವಾಮಿ, ಇಷ್ಟು ಮಾತ್ರ ಕೊಡು, ನನ್ನ ಪರಿವಾರದ ಪೋಷಣೆಯಾಗಬೇಕು, ನಾನೂ ಹಸಿದಿರಬಾರದು, ಮನೆಗೆ ಬಂದ ಸಾಧುಗಳೂ ಹಸಿದು ಹೋಗಬಾರದು, ಎಂಬುದಷ್ಟೇ ಕಬೀರನ ಕೋರಿಕೆ, ದೇವನಲ್ಲಿ. ಇಷ್ಟೂ ನಿರಾಂತಕವಾಗಿ ನಡೆಯುತ್ತಿತ್ತೆಂದು ಹೇಳಲಾಗದು. ನೇಯ್ದುದು, ಅದೂ ಅನ್ಯಮನಸ್ಕನಾಗಿ ನೇಯ್ದುದು ಪರಿವಾರಕ್ಕೂ ಅತಿಥಿ ಅಭ್ಯಾಗತರಿಗೂ ಹೇಗೆ ಸಾಲಬೇಕು? ಮೇಲಾಗಿ, ಇದು ಅವನ ಗುರಿಯೇ ಆಗಿರಲಿಲ್ಲ. ಅವನ ವೃತ್ತಿಯ ತಾತ್ವಿಕ ತಳಹದಿಯೇ ಹಾಗಿತ್ತು.

ಕೂಡು ಹಾಡು : ಮೂಲ: ಝುನಿ ಝುನಿ ಬಿನಿ ಛದರಿಯಾ

ತೆಳ್ಳನೆ ತೆಳ್ಳನೆ ಚಾದರ ನೆಯ್ದಿದೆ
ಏನುದ್ದೇಶವು ಇದಕೆ?
ಅಡ್ಡೆಳೆ ಯಾವುದು, ಉದ್ದೆಳೆ ಯಾವುದು,
ಯಾವ ತಂತು ಈ ಚಾದರಕೆ?
ಇಡಾ ಪಿಂಗಳ ಉದ್ದೆಳೆ, ಅಡ್ಡೆಳೆ
ಸುಷುಮ್ನೆಯೆಂಬ ನಾಡಿ
ಅಷ್ಟಕಮಲದಲಿ ತಿರುಗುವ ರಾಟೆ
ಪಂಚತ್ವ ತ್ರಿಗುಣವ ಕೂಡಿ
ಹತ್ತು ತಿಂಗಳು ಹಿಡಿದುವು ಸ್ವಾಮಿಗೆ
ಬಡಿದು ನೆಯ್ಯಲಿದನು
ಸುರ-ನರ ಮುನಿಗಳೂ ಹೊದ್ದು ಹೊದ್ದು ಬಲು
ಹೊಲಸು ಮಾಡಿದರು ಇದನು
ಜತನದಿ ಹೊದ್ದು ಕಬೀರನು ಕೊಟ್ಟನು
ಇದ್ದಂತೆಯೇ ಸ್ವಾಮಿಗಿದನು.

ನಿರೂಪಕ : "ಯಾವ ಕುಲದಲ್ಲಿ ಭಕ್ತನು ಜನಿಸುವನೋ ಆ ಕುಲವೇ ಭಾಗ್ಯಶಾಲಿಯಾದುದು" ಎಂದು ನಂಬಿ ನಡೆದ ಕಬೀರ ಜಾತ್ಯತೀತತೆಯ ಜ್ಯೋತಿರ್ಧರ, ಆ ಕುಲ ಆ ವರ್ಣದ್ದು, ಈ ವರ್ಣದ್ದು ಎಂದು ಗಣಿಸಬೇಡಿರಿ. ಬಡವ ಬಲ್ಲಿದ ಎಂದು ಎಣಿಸಬೇಡಿರಿ, ಅದು ತನ್ನ ನಿರ್ಮಲ ಪರಿಮಳದಿಂದ ಪೂತವಾದುದಾಗಬೇಕು. ಬ್ರಾಹ್ಮಣ, ಕ್ಷತ್ರಿಯ, ವೈಶ್ಯ, ಶೂದ್ರ, ಯಾರೂ ಭಕ್ತನಿಗೆ ಸಮಾನರಾದವರಲ್ಲ. ಯಾವ ಊರು, ಯಾವ ತಾಣ ಭಕ್ತನ ಸಂಗವನ್ನು ಪಡೆಯುವುದೋ ಅದು ಪವಿತ್ರವಾಗುವುದು, ಧನ್ಯವಾಗುವುದು. ನಾಮವನ್ನು ಜಪಿಸುವುದರಿಂದ ಅವನು ತನ್ನ ಉದ್ಧಾರವನ್ನು ಮಾಡಿಕೊಳ್ಳುವುದಲ್ಲದೆ ತನ್ನ ಕುಲವನ್ನೂ ಉದ್ಧರಿಸುವನು; ಮತ್ತು ನೀರಿನಲ್ಲಿ ತಾವರೆಯು ಇರುವಂತೆ ಇರುವನು. ಪ್ರಪಂಚದಲ್ಲಿ ಎಲ್ಲ ಜನರು ಸಹ ಇದರಂತೆ ಇರಬೇಕೆಂದು ಕಬೀರನು ಹೇಳುತ್ತಾನೆ. ಹೀಗೆ ಸಾರಿದ ಕಬೀರನಿಗೆ ನಾವು ಕಿವಿಗೊಟ್ಟರೆ ಮತೀಯ ಸೌಹಾರ್ದ, ಗುಣಗೌರವದ ಅಸ್ತಿವಾರದ ಮೇಲೆ ನಿಂತ ಭಕ್ತಸಮಾಜ, ಜೀವನವನ್ನು ತಿರಸ್ಕರಿಸದೆ

ನಿರ್ಮಲೀಕರಿಸಿ ಬಾಳುವ ಬುದ್ಧಿ ಸುಲಭವಾಗಿ ಅಳವಡುವುವು. ಆದರೆ ನಾಯಿಯ ಬಾಲದಂತಿರುವ ಮಾನವ ಸಮಾಜ ಕಬೀರ ಬದುಕಿರುವಾಗಲೂ ತನ್ನ ಡೊಂಕನ್ನು ತಿದ್ದಿಕೊಳ್ಳಲಿಲ್ಲವೇನೋ.

ಕೂಡು ಹಾಡು : ಅಂಜಿಕೆ ಬರುತಿದೆ

ನಗೆಯೂ ಬರುತಿದೆ

ವಿಚಿತ್ರ ಕಾಲವು ಬಂತು

ಸೂಳೆಗೆ ಚಿನ್ನವು,

ಒಕ್ಕೆನ್ನಿಯನ್ನವು

ಸಾಧುಗೆ ಸಿಗದಾಯ್ತು!

ಹರಿಕಥೆಯಿದ್ದರೆ

ಉದ್ದಕ್ಕು ನಿದ್ದೆಯು

ಚೈನಿಗೆ ನಿದ್ರೆಯೆ ಹೋಯ್ತು

ಭಂಗಿಗೆ ನಮನ

ತಂಬಾಕು ಸೇವನ

ಗಾಂಜಾ ಪೂಜೆಯ ವಸ್ತು!

ಗುರುಚರಣಾಮೃತ

ನೇಮ ತಿರಸ್ಕೃತ

ಕುಡಿಯೆ ಸೆರೆಯ ಬಲು ಖುಷಿಯು

ತಿರುಗು ಮುರುಗು ನಡೆ

ಜಗದಲಿ ಎಲ್ಲೆಡೆ

ಅಂತೆಯೆ ಅಂಜಿದೆ ಅಸುವು!

ನಿರೂಪಕ : ಕಬೀರ ಬದುಕಿದ್ದಾಗ ಅವನ ಬೋಧೆಗೆ ಕಿವಿಗೊಡದ ಹಿಂದುಗಳೂ, ಮುಸಲ್ಮಾನರೂ ಅವನು ದೇಹವಿಟ್ಟಾಗ ಅವನ ಶವ ಸಂಸ್ಕಾರದ ಹಕ್ಕಿಗಾಗಿ ಹೊಡೆದಾಡಿದರಂತೆ.

ಹಿಂದುಗಳು : ಕಬೀರ ರಮಾನಂದರ ಶಿಷ್ಯ; ಆದುದರಿಂದ ಹಿಂದೂ ಪದ್ಧತಿಯಂತೆ ಅವನ ಶವಕ್ಕೆ ಅಗ್ನಿಸಂಸ್ಕಾರವಾಗಬೇಕು.

ಮುಸಲ್ಮಾನರು: ಕಬೀರನ ತಂದೆ ತಾಯಿಗಳು ಮುಸಲ್ಮಾನರು. ಆದುದರಿಂದ ಮುಸ್ಲಿಂ ಪದ್ಧತಿಯಂತೆ ಅವನ ಶವ ದಫನವಾಗಬೇಕು.

ನಿರೂಪಕ : ಇಬ್ಬರೂ ಸಾಕಾಗುವವರೆಗೆ ಜಗಳಾಡಿದ ಮೇಲೆ ಕಬೀರನ ಶವಕ್ಕೆ ಹೊದಿಸಿದ್ದ ಹಚ್ಚಡ ತೆಗೆದು ನೋಡಲು ಅಲ್ಲಿ ಸೌರಭ ಸೂಸುವ ಹೂಗಳು ಮಾತ್ರ ಇದ್ದುವಂತೆ. ಅಲ್ಲಿ ಅವು ಇದ್ದುವೋ ಇಲ್ಲವೋ–ಆದರೆ ಅವರ ಕೃತಿಕುಸುಮಗಳು ಮಾತ್ರ ಇಂದಿಗೂ ಬಳಿಗೆ ಬಂದವರಿಗೆ ಸಿರಿಗಂಪನ್ನು ಸೂಸುತ್ತ ಉಳಿದಿವೆ. ಉಳಿಯುವುವು ಕೊನೆಯವರೆಗೆ. ಜಾತೀಯತೆಯ ದುರ್ಗಂಧ ಹರಡಿರುವೆಡೆಗಳಲ್ಲಿ ಈ ಕೃತಿಕುಸುಮಗಳ ಪರಿಮಳವನ್ನು ಹಬ್ಬಿಸಬೇಕು. ಸಂಕುಚಿತತೆಯ ದುರ್ವಾಸನೆ ತುಂಬಿರುವ ತಾಣಗಳಲ್ಲಿ ಇವುಗಳ ಅಮರದ ಸುಗಂಧವನ್ನು ಪಸರಿಸಬೇಕು. ಆಗ ಅವನ ಕನಸಿನ ಜಾತಿಮುಕ್ತ ಭಕ್ತಸಮಾಜ ಮೈದೋರೀತು.

ಮಹಾದೇವಿ ಮಾರಯ್ಯ

ಕಲ್ಯಾಣದ ಹೊರಬದಿಯಲ್ಲಿ ಸಾಧಾರಣ ಕುಟೀರವೊಂದು. ಮಹಾದೇವಿ-ಮೋಳಿಗೆಯ ಮಾರಯ್ಯನವರು ಮಾತನಾಡುತ್ತಲಿದ್ದಾರೆ.

ಮಾರಯ್ಯ: ಮಾಂಡವ್ಯಪುರದ ಅರಮನೆಯನ್ನು ತೊರೆದು ಈ ಕುಟೀರವನ್ನರಸಿ ಬಂದೆ ಮಹಾದೇವಿ. ನಿನಗಿಲ್ಲಿ ಹಾಸಲು ಬಡತನ, ಹೊದೆಯಲೂ ಬಡತನ. ಹೇಗೆ ಸಹಿಸುವಿಯೋ ಈ ಕರಕಷ್ಟದ ಇರವನ್ನು.

ಮಹಾದೇವಿ: ಆ ಅರಮನೆಯಲ್ಲಿ ದೊರೆಯದ ನೆಮ್ಮದಿ ಈ ಕಿರಿಯ ಕುಟೀರದಲ್ಲಿ ಸಿಕ್ಕಿದೆ ನನಗೆ, ನನ್ನಾಳ್ದ. ಆ ಅರಮನೆ ಸೆರೆಮನೆಯೆನಿಸಿದ್ದಿತು ನನಗೆ. ನಿನಗೂ ಹಾಗೆನ್ನಿಸಿದ್ದರಿಂದಲೇ ನೀನದನ್ನು ತೊರೆದು ಬಂದೆಯಲ್ಲವೆ? ನೀನು ತೊರೆದುದನ್ನು ನಾನೆಂತು ತೊರೆಯದಿರಬಲ್ಲೆ? ಮನೆಯ ಸಿರಿ ಸಾಕಾಗಿ ಮನದ ಸಿರಿಯನ್ನರಸಿ ಬಂದಿಲ್ಲವೆ ನಾವು ಈ ಅಣ್ಣನ ಕಲ್ಯಾಣಕ್ಕೆ?

ಮಾರಯ್ಯ: ಆದರೂ ನೀನು ಮಗ ಲಿಂಗಾರತಿಯೊಡನೆ ಸುಖವಾಗಿರಬಹುದಿತ್ತೆಂದು ಈಗಲೂ ನನಗೆ ಆಗಾಗ ಅನ್ನಿಸುತ್ತದೆ. ನೀನಂತೂ ನಡುಬೀದಿಯಲ್ಲಿ ನಿರ್ವಾಣವಾದರೆ ಮಾತ್ರ ಕರೆದೊಯ್ಯುವೆನೆಂದು ನನ್ನ ನಿರ್ಬಂಧಕ್ಕೂ ಸಿದ್ಧಳಾಗಿಬಿಟ್ಟೆ. ವಿಧಿಯಿಲ್ಲದೆ ಸಂಗಡ ಕರೆತರಬೇಕಾಯಿತು. ಈ ಬಡತನದ ಬಾಳಿಗೆ ಈಡು ಮಾಡಬೇಕಾಯಿತು ನಿನ್ನನ್ನು. ಕಾಶ್ಮೀರದಿಂದ ಕಲ್ಯಾಣದವರೆಗಿನ ಹಲವು ನೂರು ಹರಿದಾರಿಗಳ ಪ್ರವಾಸವನ್ನು ಕಲ್ಲುಮುಳ್ಳುಗಳನ್ನು ತುಳಿಯುತ್ತ ಕಾಲ್ನಡಿಗೆಯಲ್ಲಿಯೇ ನನ್ನೊಡನೆ ಮುಗಿಸಿದೆ. ನಿನ್ನ ಕುಸುಮ ಕೋಮಲ ಕಾಯ ಜರ್ಜರಿತವಾಗಿರಬೇಕು.

ಮಹಾದೇವಿ: ಭಕ್ತಜನ ಭಾಗ್ಯಶುಭೋದಯ ಬಸವಣ್ಣನವರ ಪ್ರಸನ್ನ ವದನವನ್ನು ನಿನ್ನೆ ನೋಡಿದಾಗಲೇ ಮೈನೋವೆಲ್ಲ ಮಾಯವಾಗಿಬಿಟ್ಟಿತು ಸ್ವಾಮಿ. ಎಂಥ ಅದ್ಭುತ ಅನುಭವ ಅದು! ಇಂಥ ಒಂದು ಅನುಭವಕ್ಕಾಗಿ ಸಾವಿರ ಅರಸೊತ್ತಿಗೆಗಳನ್ನು ನಿವಾಳಿಸಿ ಚೆಲ್ಲಬಹುದೆನಿಸಿತು ನನಗೆ. ಅಂತೆಯೇ ಭಾರತದ ಎಲ್ಲ ಭಾಗಗಳಿಂದ ಭಕ್ತಿ ಭ್ರಮರಗಳು ಈ ಆತ್ಮಕಮಲದತ್ತ ಧಾವಿಸುತ್ತಲಿವೆ.

ಮಾರಯ್ಯ: ಎಷ್ಟು ಲಕ್ಷ ಭ್ರಮರಗಳು ಮುತ್ತಿ ಆಸ್ವಾದಿಸಿದರೂ ಅರೆಯಾಗದ ಪ್ರೀತಿ ಮಕರಂದ ಈ ಅನುಪಮ ಆತ್ಮಕಮಲದ್ದು. ಸವಿದಷ್ಟೂ, ಸಾವಿರ ಮಡಿ ಹೆಚ್ಚುವ ಮಮತೆಯ ಮಕರಂದವಿದು. ನಾನಂತೂ ಮಾರುಹೋಗಿಬಿಟ್ಟಿದ್ದೇನೆ ಈ ಮಾಹಾತ್ಮ್ಯದ ಮಕರಂದಕ್ಕೆ.

ಎನ್ನ ಅವಿವು ಮರವು ಬಸವಂಗರ್ಪಿತ

ಎನ್ನ ಆಹಾರ ವಿಚಾರ ಬಸವಂಗರ್ಪಿತ

ಎನ್ನ ಭಾವ ನಿರ್ಭಾವ ಬಸವಂಗರ್ಪಿತ

ಎನ್ನ ಅಂತರಂಗ ಬಹಿರಂಗ ಬಸವಂಗರ್ಪಿತ

ನೀ ನಾನೆಂಬುದು ಬಸವಂಗರ್ಪಿತ

ಇಂತು ಬಸವಣ್ಣಂಗೆ ಎನ್ನ ನಿವೇದಿಸಿದೆನಾಗಿ

ಉಭಯವೆಂಬುದು ಇಲ್ಲವಾದೆ

ಆವ ಅವಲಂಬನವೂ ಇಲ್ಲದೆ

ನಿರಾಲಂಬದಲ್ಲಿ ನಿಜನಿವಾಸಿಯಾಗಿರ್ದೆನಯ್ಯಾ

ನಿಃಕಳಂಕ ಮಲ್ಲಿಕಾರ್ಜುನಾ!

ಮಹಾದೇವಿ: ಈ ವಚನದ ಅಕ್ಷರಕ್ಷರವನ್ನೂ ಅನುಮೋದಿಸುತ್ತೇನೆ ನಾಥ. ಈಗ ಕಾಯಕದ ಕರೆಗೆ ಕಿವಿಗೊಡಿರಿ. ನಾನು ದಾಸೋಹದ ಮಣಿಹಕ್ಕೆ ಅಣಿಯಾಗುತ್ತೇನೆ.

ಮಾರಯ್ಯ: ಹೊರಟೆ, ಕಟ್ಟಿಗೆಗಳನ್ನು ತಿರಿಯಲು ಕಾಡಿಗೆ, ಸೈಪಿನ ಸೊಬಗಿನ ಬೀಡಿಗೆ. **(ತೆರೆ)**

ಸ್ಥಳ : ಕಲ್ಯಾಣದ ಬೀದಿ. ಇಬ್ಬರು ಜಂಗಮರ ಪ್ರವೇಶ

ಗುರಯ್ಯ: ಜಂಗಮಯ್ಯ, ಬಸವಣ್ಣನವರ ಮಹಾಮನೆಯಲ್ಲಿ ಬಗೆಬಗೆಯ ಪ್ರಸಾದ ಸವಿದಿದ್ದೇವೆ. ಸೊಡ್ಡಳ ಬಾಚರಸರ, ಸಿದ್ಧರಸರ ಭವ್ಯ ಭವನಗಳ ಭಕ್ಷ್ಯ ಭೋಜ್ಯಗಳನ್ನು ಆಸ್ವಾದಿಸಿದ್ದೇವೆ. ಆದರೆ ಇಂದು ಮೋಳಿಗೆ ಮಾರಯ್ಯನವರ ಕುಟೀರದಲ್ಲಿ, ಮಾತೆ ಮಹಾದೇವಿಯವರು ಮಾಡಿ ನೀಡಿದ ಅಂಬಲಿ ಶಿವದಾನಗಳ ರುಚಿಯನ್ನು ಇನ್ನೆಲ್ಲಿಯೂ ಕಾಣಲಿಲ್ಲವಲ್ಲ! ಅದು ಅಂಬಲಿಯಲ್ಲ, ಅಮೃತ; ಅದು ಶಿವದಾನವಲ್ಲ, ಸುಧೆ.

ಜಂಗಮಯ್ಯ: ಮೋಳಿಗೆಯ್ಯ ಮಹಾದೇವಿಯರು ಮಹಾನುಭಾವರಪ್ಪ! ರಾಜ ವೈಭವವನ್ನೇ ತೃಣಸಮಾನವಾಗಿ ಕಂಡು ತ್ಯಜಿಸಿ ಬಂದ ಮಹಾ ಶರಣಶರಣೆಯರು. ರಾಜದಂಡವನ್ನು ಹಿಡಿದಿದ್ದ ಕೈ ಕೊಡಲಿಯನ್ನು ಹಿಡಿದು ಕಡಿಯುತ್ತಿದೆ ಕಾಡಿನಲ್ಲಿ; ದಾಸಿಯರು ಬಡಿಸುತ್ತಿದ್ದ ದೇವಾನ್ನವನ್ನು ಉಣ್ಣುತ್ತಿದ್ದ ಕೈ ಕುಟ್ಟಿ ಬೀಸಿ ಅಂಬಲಿಯನ್ನು ಅಡುತ್ತಲಿದೆ ದಾಸೋಹಕ್ಕಾಗಿ! ಇಂಥ ಕಾಯಕ ಯೋಗಿಗಳ ದಾಸೋಹಜೀವಿಗಳ ಅಂಬಲಿ ಅಮೃತೋಪಮವಾಗದೆ? ನಡೆ, ಇಂದೂ ಅಲ್ಲಿಗೇ ಹೋಗಿ ಅಂಬಲಿಯ ಅಮೃತ ಸುರಿಯೋಣ.

ಗುರಯ್ಯ: ಶಿವನು ಚೋಳ ಸಾಮ್ರಾಟನ ರಾಜಾನ್ನವನ್ನುಳಿದು ಮಾದಾರ ಚೆನ್ನಯ್ಯನ ಅಂಬಲಿಯನ್ನು ಸುರಿದು ಸಂತುಷ್ಟನಾದನೆಂದು ಕೇಳಿದ್ದೇವೆ; ಈಗ ನಾವೇ ಬಸವಣ್ಣನವರ ದೇವಾನ್ನವನ್ನುಳಿದು ಮಹಾದೇವಿ-ಮಾರಯ್ಯರ ಅಂಬಲಿ ಅರಸಿಕೊಂಡು ಹೊರಟಿದ್ದೇವೆ. (ನಿರ್ಗಮನ)

ಬಸವಣ್ಣನವರ ಪ್ರವೇಶ

ಬಸವಣ್ಣ: ಎಲ್ಲರ ಬಾಯಲ್ಲಿಯೂ ಮಹಾದೇವಿ-ಮಾರಯ್ಯನವರ ಅಂಬಲಿಯ ಅನನ್ಯ ರುಚಿಯ ಪ್ರಶಂಸೆ. ಅದೆಂಥ ದಿವ್ಯರುಚಿಯಿರಬಹುದು ಅದಕ್ಕೆ? ಬಸವನ ಮಹಾಮನೆಯ ಆರೋಗಣೆಯನ್ನು ಧಿಕ್ಕರಿಸಿ ಈ ಶರಣಕುಲದೀಪಕರ ಅಂಬಲಿಗೆ ಹಾತೊರೆದು ಜಂಗಮಪುಂಗವರು ಇವರ ಪರ್ಣಕುಟಿಗೆ, ಪುಣ್ಯಕುಟಿಗೆ ಧಾವಿಸಬೇಕಾದರೆ ಅದರ ರುಚಿ ಅನಿರ್ವಚನೀಯವಾದುದೇ ಆಗಿರಬೇಕು. ನಾನೂ ಸವಿದು ಧನ್ಯನಾಗುವೆ ಅದನ್ನು.... ಎದುರಿಗೇ ಕಾಣಿಸುತ್ತಿದೆ ಅವರ ಪರಮ ಪಾವನ ಕುಟೀರ. ಇದರ ಮುಂದೆ ಸಾವಿರ ಅರಮನೆಗಳನ್ನು ಇಳಿದೆಗೆದು ಎಸೆಯಬೇಕು. ಈ ಕುಟೀರವನ್ನು ಕಂಡವನೇ ಕೃತಾರ್ಥನು; ಈ ಕುಟೀರದ ಸನಿಹಕ್ಕೆ ಸುಳಿದವನೇ ಧನ್ಯನು; ಈ ಕುಟೀರದ ಮೇಲೆ ಹಾದುಬರುವ ಗಾಳಿ ಸೋಂಕಿದವನೇ ಮಾನ್ಯನು. (ಸಮೀಪಕ್ಕೆ ಹೋಗಿ), ಮಾತೆ ಮಹಾದೇವಿ....

ಮಹಾದೇವಿ: (ಬಾಗಿಲ ತೆರೆದು) ಯಾರು ಅಣ್ಣನವರೆ, ಭಕ್ತರ ಭಾಗ್ಯನಿಧಿ ಬಸವಣ್ಣನವರೆ? ಕರೆಸಿದ್ದರೆ ನಾವೇ ಬರುತ್ತಿದ್ದೆವಲ್ಲ ಮಹಾಮನೆಗೆ? ತಾವು ಈ ಬಡವರ ಗುಡಿಸಲನ್ನು ಹುಡುಕಿಕೊಂಡು ನಡೆದು ಬರುವುದೇ?

ಬಸವಣ್ಣ: ಸಪಾದಲಕ್ಷ ರಾಜ್ಯವನ್ನು, ಅರಮನೆ, ಸಿರಿಸಂಪದಗಳನ್ನು ತೊರೆದು ಬಂದ ನೀವು ಬಡವರೆ ತಾಯೆ? ಬಡವರ ಕಡವರ ನೀವು. ನಿಮ್ಮ ಮುಂದೆ ಇನ್ನೂ ಮಂತ್ರಿಪದ ಭೋಗಿಸುತ್ತಿರುವ ನಾನೇ ಬಡವ. ಮನೆಯಿಂದ ಅಲ್ಲ, ಮನದಿಂದ ಬಡವ. ಜಗತ್ತಿನ ಇತಿಹಾಸದಲ್ಲಿಯೇ ನಿಮ್ಮ ಸರ್ವಸ್ವತ್ಯಾಗಕ್ಕೆ, ಸ್ವಪ್ರೇರಣೆಯಿಂದ, ಸ್ವಸಂತೋಷದಿಂದ ಶ್ರಮಜೀವನ ಸ್ವೀಕರಣಕ್ಕೆ, ಕಾಯಕ-ದಾಸೋಹಗಳ ಉದಾತ್ತೀಕರಣಕ್ಕೆ ಸಾಟಿಯಿಲ್ಲ. ನಿಮ್ಮನ್ನು ನೋಡಲು ನಾನೇಕೆ, ಕೂಡಲಸಂಗನೇ ಓಡಿ ಬರಬೇಕು.

ಮಹಾದೇವಿ: ಹೊಗಳಿಕೆಯ ಹೊನ್ನಶೂಲ ಬೇಡವೆಂದ ತಾವು ನಮ್ಮಂಥ ಬಡಪಾಯಿಗಳ ಮೇಲೆ ಅದನ್ನು ಉಪಯೋಗಿಸಬಹುದೆ? ನಾವು ಮಾಂಡವ್ಯಪುರದ ಅರಮನೆಯಲ್ಲಿಯೇ ತಾವು ಈ ಮಹಾಮನೆಯಲ್ಲಿ ಇರುವಂತೆ ಇರಲು ಕಲಿತಿದ್ದರೆ ನಾವೇಕೆ ಅದನ್ನು ತೊರೆದು ಬರುತ್ತಿದ್ದೆವು? ನಮಗೆ ಸಿರಿ ಸೆರೆಯಾಯಿತು; ನಿಮಗೆ ಅದೇ ಸಕಲ ಸದ್ಗತಿಗೆ ದಾರಿಯಾಯಿತು.

ಬಸವಣ್ಣ: ಮಾಂಡವ್ಯಪುರದ ಹಾನಿ ಕಲ್ಯಾಣದ ಲಾಭವಾಯಿತು ತಾಯೆ. ಶರಣರ ಜನಾಂದೋಲನಕ್ಕೆ ಸಾವಿರ ಸಾವಿರ ಆನೆಗಳ ಶಕ್ತಿ ಬಂದಿತು ನಿಮ್ಮ ಬರವಿನಿಂದ. ಇರಲಿ, ಬರಿ ಮಾತುಗಳನ್ನೇ ಮುಂದುವರೆಸುವಿರೋ, ಹಸಿದಿರುವ ಲಿಂಗದೇವನಿಗೆ ಉಣಬಡಿಸುವಿರೋ?

ಮಹಾದೇವಿ: ಅಂಬಲಿ ಸಿದ್ಧವಿದೆ ಅಣ್ಣನವರೆ. ಅದನ್ನು ತಮಗೆ ಹೇಗೆ ಬಡಿಸುವುದೆಂದು ಅಳುಕಿಗೆ ಒಳಗಾಗಿದ್ದೇನೆ. ಮಹಾಮಂತ್ರಿಗಳಿಗೆ ಅಂಬಲಿ, ಮಜ್ಜಿಗೆಸಾರು ಯಾವ ಕೈಯಿಂದ ಬಡಿಸಲಿ?

ಬಸವಣ್ಣ: ಕಾಶ್ಮೀರದ ರಾಜ-ರಾಣಿಯಾಗಿದ್ದವರಿಗೆ ಸಲ್ಲುವ ಈ ಅಂಬಲಿ ಈ ಮಂತ್ರಿಗೆ ಸಲ್ಲದೆ ತಾಯೆ? ಇದರ ರುಚಿಗೆ ಮನಸೋತ ಶರಣರು ನನ್ನ ಮನೆಯ ಆರೋಗಣೆಯನ್ನೇ ಮರೆತುಬಿಟ್ಟಿದ್ದಾರೆ. ಬೇಗ ತನ್ನಿ ನನಗೂ ಆ ದಿವ್ಯ ಪ್ರಸಾದವನ್ನು.

ಮಹಾದೇವಿ: ಇದೀಗ ತರುವೆ ಅಣ್ಣನವರೆ. ಇದೋ ಉದಕ; ಕೈಕಾಲು ಮುಖ ತೊಳೆದುಕೊಳ್ಳಿರಿ. ಅಷ್ಟರಲ್ಲಿಯೇ ತರುವೆ ಅಂಬಲಿ ಶಿವದಾನಗಳನ್ನು.

ಬಸವಣ್ಣ: (ಕೈಕಾಲು ಮುಖ ತೊಳೆದುಕೊಳ್ಳುತ್ತಾ) ಈ ನೆಲದ ಮೇಲೆ, ಈ ಹುಲ್ಲುಚಾಪೆಯ ಮೇಲೆ ಮಲಗುತ್ತಲಿದ್ದಾರೆ ಹಂಸತೂಲಿಕಾತಲ್ಪದ ಮೇಲೆ ಪವಡಿಸುತ್ತಲಿದ್ದ ಈ ಮಹೌಜನರು. ಈ ಮಣ್ಣಿನ ಪಾತ್ರೆಗಳಲ್ಲಿ ಅಂಬಲಿ ಸೇವಿಸುತ್ತಲಿದ್ದಾರೆ ಚಿನ್ನದ ತಟ್ಟೆಗಳಲ್ಲಿ ರಾಜಾನ್ನವನ್ನು ಸವಿಯುತ್ತಲಿದ್ದ ಈ ಮಹಾನುಭಾವರು. ಕಷ್ಟಪಟ್ಟು ತಂದ ಕಟ್ಟಿಗೆ ಹೊರೆಯಿಂದ ಎಷ್ಟು ಬರುತ್ತಿರಬೇಕು ಇವರಿಗೆ? ಅಷ್ಟರಲ್ಲಿಯೇ ಇವರ ಆರೋಗಣೆ ನಡೆಯಬೇಕು, ದಾಸೋಹವೂ ನಡೆಯಬೇಕು. ಎಂದಾದರೂ ಮಳೆಗಾಳಿಗಳು ಕಾಡಿಗೆ ಹೋಗುವುದನ್ನು ತಡೆದರೆ? ಅಂಥ ಪ್ರಸಂಗಗಳಿಗಾಗಿ ಆಪದ್ಧನವೆಂದು ಎರಡೆರಡು ಸಾವಿರ ಹೊನ್ನುಗಳ ಈ ಎರಡು ಜಾಳಿಗೆಗಳನ್ನು ಇಲ್ಲಿ ಇರಿಸಿ ಹೋಗುವೆ. ನೋಡಲಾರೆ ಇವರ ಈ ಕಡುಬಡತನದ, ಕರಕಷ್ಟದ ಬಾಳುವೆಯನ್ನು. (ಇರಿಸಿದಂತೆ ಸದ್ದು)

ಮಹಾದೇವಿ: ಸ್ವೀಕರಿಸಬೇಕು ಶರಣಸರೋಜಸಂಕುಲಸಹಸ್ರಕರರೆ, ಶಿವನ ಆರೋಗಣೆಯಿಂದ ಮಹಾಶರಣ ಚೆನ್ನಯ್ಯನವರ ಅಂಬಲಿ ಅಮರಕೀರ್ತಿಯನ್ನು ಪಡೆದಂತೆ ತಮ್ಮ ಪರುಷ ಹಸ್ತದ ಸೋಂಕಿನಿಂದ ನಮ್ಮ ಅಂಬಲಿಯೂ ಧನ್ಯವಾಗಲಿ.

ಬಸವಣ್ಣ: (ಅಂಬಲಿ ಸುರಿವ ಸದ್ದು) ಮಾತಾಯಿ ಮಹಾದೇವಿ, ಇದು ನಿಜಕ್ಕೂ ಅಮೃತ, ನಾನು ಇಂಥ ಪೀಯೂಷವನ್ನು ಇದುವರೆಗೆ ಸವಿದಿರಲೇ ಇಲ್ಲ. ಇಂದಿದನ್ನು ಸೇವಿಸಿ ಧನ್ಯನಾದೆ. ಬಸವನ ಮಹಾಮನೆಯ ಆರೋಗಣೆಯನ್ನು ತೊರೆದು ಶರಣರು ಇಲ್ಲಿಗೇಕೆ ಧಾವಿಸುವರೆಂಬುದರ ಗುಟ್ಟು ಇಂದು ತಿಳಿಯಿತು ನನಗೆ. ಮಾರಯ್ಯನವರು ಬರಲು ಇನ್ನೂ ತಡವಾಗುವುದೆಂದು ತೋರುತ್ತಿದೆ. ನಾನು ನನ್ನ ಕಾಯಕಕ್ಕೆ ಹೊರಡುವೆ. ಶರಣು, ಶಿವಶರಣು.

ಮಹಾದೇವಿ: ಈ ಕುಟೀರಕ್ಕಷ್ಟೇ ಅಲ್ಲ, ಎಲ್ಲ ಬಡವರ ಕುಟೀರಗಳಿಗೆ, ಈ ಅಂಬಲಿಗಷ್ಟೇ ಅಲ್ಲ, ಎಲ್ಲ ಬಡವರ ಅಂಬಲಿಗೆ ಘನತೆ ಗೌರವಗಳನ್ನಿತ್ತಿರಿ, ಅಣ್ಣನವರೆ! ನಿಮ್ಮ ಶ್ರೀಪಾದಗಳಿಗೆ ಸಾವಿರ ಸಾವಿರ ಶರಣು.

ಕಾಡಿನಲ್ಲಿ ಮಾರಯ್ಯನವರ ಕಾಯಕ

ಮಾರಯ್ಯ: (ಕಟ್ಟಿಗೆಗಳನ್ನು ತುಂಡರಿಸಿ ಹೊರೆ ಕಟ್ಟುವ ಸದ್ದು) ಓಹೋ, ದಿನಕ್ಕಿಂತ ದೊಡ್ಡದಾಯಿತು ಈ ಕಟ್ಟಿಗೆ ಹೊರೆ. ಯಾಕೆ ಹೀಗಾಯಿತು? ನನ್ನ ಮನದಲ್ಲಿ ಅತ್ಯಾಶೆಯೇನಾದರೂ ಅಂಕುರಿಸಿಬಿಟ್ಟಿತೆ? ತನಗೆ ಬೇಕಾದುದಕ್ಕಿಂತ ಹೆಚ್ಚಿನದನ್ನು ಎಲ್ಲಿಂದಲೂ ಪಡೆಯಕೂಡದೆಂಬುದು ಅಣ್ಣನ, ಶರಣರ ಶಿವತತ್ತ್ವ! ನಿಸರ್ಗದಿಂದಲೂ ಹಿತಮಿತವಾಗಿಯೇ ಪಡೆಯಬೇಕು ನಾವು. ನಿಸರ್ಗವನ್ನು ರಕ್ಷಿಸಿಯೇ ನಮ್ಮನ್ನೂ ರಕ್ಷಿಸಿಕೊಳ್ಳಬೇಕು. ಪೂಜೆಗೂ ಪತ್ರೆ ಪುಷ್ಪಗಳನ್ನು ಹೆಚ್ಚು ತಂದು ಕೆಡಿಸಬಾರದು, ಆದಷ್ಟು ತಾವಾಗಿಯೇ ಉದುರಿ ಬಿದ್ದವುಗಳನ್ನು ಆರಿಸಿ ತರಬೇಕೆಂಬುದು ಶರಣರ ನಿಯಮ. ನಾನೇಕೆ ಇಂದು ಹೆಚ್ಚಿನ ಕಟ್ಟಿಗೆಗಳನ್ನು ಕಡಿದೆ? ಇಂದೇಕೆ ಅರಿವುಗೇಡಿಯಾದೆ? ಅಸಂಗ್ರಹವ್ರತಕ್ಕೆ, ದಾಸೋಹತತ್ತ್ವಕ್ಕೆ ಭಂಗ ತಂದೆ? ಎಲ್ಲಿ ಏನು ಪ್ರಮಾದ ಜರುಗಿದೆ? ನನ್ನಿಂದಲೋ, ಮಹಾದೇವಿಯಿಂದಲೋ ಏನೇ ಪ್ರಮಾದವಾಗಿದ್ದರೂ ಕ್ಷಮಿಸು ನಿಃಕಳಂಕ ಮಲ್ಲಿಕಾರ್ಜುನಾ! ಪಶು ಪಕ್ಷಿಗಳಿಗೆ, ಕ್ರಿಮಿಕೀಟಗಳಿಗೆ ನರೋರಗಾದಿ ಅಸಂಖ್ಯ ಜೀವಿಗಳಿಗೆ ಆಶ್ರಯ ನೀಡುವ ಕಾಡೆ, ನಿನಗಿಂದು ನಾನು ಅಪಕಾರ ಮಾಡಿದ್ದೇನೆ. ಹೆಚ್ಚು ಸೌದೆ ಸಂಗ್ರಹಿಸಿದ್ದೇನೆ. ನನ್ನನ್ನು ಕ್ಷಮಿಸು. ನಾಳೆ ದಿನಕ್ಕಿಂತ ಕಡಿಮೆ ಸಂಗ್ರಹಿಸಿ ತಪ್ಪನ್ನು ತಿದ್ದಿಕೊಳ್ಳುವೆನು (ಕುಟೀರಕ್ಕೆ ಬಂದು ಬಾಗಿಲ ತಟ್ಟಿ) ಮಹಾದೇವಿ ಮಹಾದೇವಿ.

ಮಹಾದೇವಿ: (ಲಗುಬಗೆಯಿಂದ ಬಾಗಿಲ ತೆರೆದು) ಇಂದೇಕೆ ತಡಮಾಡಿದಿರಿ ಸ್ವಾಮಿ? ಬೇಗ ಪ್ರಸಾದ ಸ್ವೀಕರಿಸಿರಿ. ಅಂಬಲಿ ಆರುವ ಮುನ್ನ ಆರೋಗಿಸಿರಿ.

ಮಾರಯ್ಯ: ಇಂದು ಸೌದೆ ಹೆಚ್ಚು ತಂದು ಬಿಟ್ಟೆ ಮಹಾದೇವಿ. ಎಲ್ಲಿಯೋ ಏನೋ ಪ್ರಮಾದ ಘಟಿಸಿರಬೇಕೆಂಬ ಸಂಶಯ ಕಾಡುತ್ತಲಿದೆ ನನ್ನನ್ನು. ಈ ಬಗ್ಗೆ ಆಮೇಲೆ ಆಲೋಚಿಸೋಣ. ಈಗ ಪ್ರಸಾದ ಸ್ವೀಕರಿಸೋಣ ಇಬ್ಬರೂ! ಕೈಕಾಲು ಮುಖ ತೊಳೆದುಕೊಂಡು ಇದೀಗ ಬರುವೆ. (ಹೊನ್ನ ಜಾಳಿಗೆಗಳನ್ನು ಎಡಹಿ ನಾಣ್ಯಗಳ ಸ್ವರ) ಇವೇನು ಇಲ್ಲಿ ಬಿದ್ದಿರುವುವು? ಕುಟೀರಕ್ಕೆ ಯಾರಾದರೂ ಪ್ರಸಾದಿಕರು ಬಂದಿದ್ದರೆ?

ಮಹಾದೇವಿ: ಯಾರೇಕೆ, ಅಣ್ಣನವರೇ ಬಂದಿದ್ದರು. ಕಾಡಿ ಬೇಡಿ ನಮ್ಮ ಅಂಬಲಿ ಶಿವದಾನಗಳನ್ನು ಸೇವಿಸಿ ಅವು ಅಮೃತೋಪಮವಾಗಿವೆಯೆಂದು ಕೊಂಡಾಡುತ್ತ ಹೋದರು. ಅವರೇ ಇವುಗಳನ್ನು ಇಲ್ಲಿರಿಸಿದರೋ ಏನೋ

ನಾನರಿಯೆ.

ಮಾರಯ್ಯ: ಇದರಲ್ಲಿ ಸಂಶಯವೇಕೆ, ಅವರೇ ಇರಿಸಿ ಹೋಗಿರುವರು ಇವುಗಳನ್ನು. ನಾವು ಬಡವರಲ್ಲವೆ? ನಮ್ಮ ಬಡತನವನ್ನು ಕಂಡು ಕನಿಕರಿಸಿ ಈ ಹೊನ್ನನಿರಿಸಿ ಹೋಗಿದ್ದಾರೆ. ನಾನು ಕಾಡಿನಲ್ಲಿ ಹೆಚ್ಚು ಸೌದೆ ಸಂಗ್ರಹಿಸಿದಾಗಲೇ ಎಲ್ಲಿಯೋ ಯಾವುದೋ ಪ್ರಮಾದ ಘಟಿಸಿದೆಯೆಂದು ಎನ್ನಿಸಿತ್ತು. ಈಗ ಆ ಪ್ರಮಾದವಾವುದೆಂಬುದು ತಿಳಿಯಿತು.

ಮಹಾದೇವಿ: ಇದರಲ್ಲಿ ಪ್ರಮಾದವೇನು ಬಂತು ಸ್ವಾಮಿ? ದಯವೇ ಧರ್ಮದ ಮೂಲ, ದಯವಿರಬೇಕು ಸಕಲ ಪ್ರಾಣಿಗಳೆಲ್ಲರಲ್ಲಿ, ಎಂದು ನುಡಿದು, ಅದರಂತೆಯೇ ನಡೆಯುತ್ತಲಿರುವ ಅಣ್ಣನವರು ನಮ್ಮ ದಯನೀಯ ಸ್ಥಿತಿಯನ್ನು ನೋಡಿ ದಯೆ ತೋರಿದ್ದಾರೆ. ಅಷ್ಟೆ.

ಮಾರಯ್ಯ: ನಿನ್ನ ಅಣ್ಣನವರ ಮೇಲಿನ ಅಭಿಮಾನ ಅವರ ತಪ್ಪಿನ ಮೇಲೆ ತೆರೆ ಎಳೆಯದಿರಲಿ, ಮಹಾದೇವಿ. ಸಪಾದಲಕ್ಷ ರಾಜ್ಯವನ್ನೇ ತೊರೆದು ಬಂದಿರುವ ನಮಗೆ ಇನ್ನೂ ಹೊನ್ನಿನಾಶೆ ಇದೆಯೆಂದು ಅಣ್ಣನವರು ಹೇಗೆ ಊಹಿಸಿದರು? ಇಂಥ ಎಷ್ಟು ಲಕ್ಷ ಹೊನ್ನುಗಳನ್ನು ತ್ಯಜಿಸಿ ಬಂದಿದ್ದೇವೆ ನಾವು? ಮೇಲಾಗಿ,

'ಆನೆ, ಕುದುರೆ, ಬಂಡಿ, ಭಂಡಾರವಿದ್ದಡೇನೋ,

ತಾನುಂಬುದು ಹಿಡಿಯಕ್ಕಿ, ಒಂದಾವಿನ ಹಾಲು, ಮಲಗುವುದರ್ಧ ಮಂಚ

ಈ ಹುರುಳಿಲ್ಲದ ಸಿರಿಯ ಮೆಚ್ಚಿ ಕೆಡಬೇಡ ಮನುಜಾ'

ಎಂದು ನಮಗೆ ನಾವೇ ಎಚ್ಚರಿಸಿಕೊಂಡಿಲ್ಲವೆ? ಮತ್ತೇಕೆ ಸಿರಿಯ ಸಹವಾಸ? ಇದನ್ನು ಸ್ವೀಕರಿಸುವುದೆಂದರೆ ಕಾಯಕಕ್ಕೆ ಅಪಮಾನ ಮಾಡಿದಂತಲ್ಲವೆ. ವಲ್ಲಭೆ?

(ತೆರೆ)

ಜಂಗಮರ ಪ್ರವೇಶ

ಗುರಯ್ಯ: ಲಿಂಗಯ್ಯ, ಅದ್ಭುತದ ಮೇಲೆ ಅದ್ಭುತ ನಡೆದಿದೆಯಲ್ಲ ಮಹಾಶರಣ ಮಾರಯ್ಯನವರ, ಮಹಾಶರಣೆ ಮಹಾದೇವಿಯಮ್ಮನವರ ಪುಟ್ಟ ಕುಟೀರದಲ್ಲಿ! ಒಂದು ಕಟ್ಟಿಗೆ ಹೊರೆ ಮಾರಿ ಬರುವ ಒಂದು ಒಕ್ಕುಳ ಭತ್ತದಿಂದ ಬಂದ ಭಕ್ತರಿಗೆಲ್ಲ ದಾಸೋಹ ನಡೆಸುವುದಲ್ಲದೆ ಈಗ ಪ್ರತಿಯೊಬ್ಬರಿಗೂ ಪ್ರಸಾದದೊಡನೆ ಒಂದೊಂದು ಹೊನ್ನನ್ನೂ ಕೊಟ್ಟು ಕಳಿಸುತ್ತಲಿದ್ದಾರೆ. ಎಲ್ಲಿಂದ ಬರುವವು ಈ ಹೊನ್ನುಗಳು ಅವರಿಗೆ? ಮಗ ಲಿಂಗಾರತಿಯು ಕಳಿಸುತ್ತಿರಬಹುದೆ?

ಲಿಂಗಯ್ಯ: ನೀನು ಕೇಳಿಲ್ಲವೇನು ಗುರುಯ್ಯ, ಬಸವಣ್ಣನವರು ಮಾರಯ್ಯನವರಿಲ್ಲದಾಗ ಅವರ ಕುಟೀರಕ್ಕೆ ಹೋಗಿ, ಅವರ ಕಡುಬಡತನವನ್ನು ನೋಡಿ ನೊಂದು, ಮಹಾದೇವಿಯಮ್ಮನವರಿಗೆ ಗೊತ್ತಾಗದಂತೆ ಎರಡು ಸಾವಿರ ಹೊನ್ನುಗಳ ಎರಡು ಜಾಳಿಗೆಗಳನ್ನಿರಿಸಿ ಹೋದರಂತೆ. ದುಡಿಯದೆ ಪಡೆಯುವದು, ತನ್ನ ಅಗತ್ಯಕ್ಕಿಂತ ಹೆಚ್ಚು ಪಡೆಯುವದು ಕಾಯಕ ಸಿದ್ಧಾಂತಕ್ಕೆ ವಿರುದ್ಧವಾದುದೆಂದು ಅವರಿಬ್ಬರೂ ಒಮ್ಮತದಿಂದ ಆ ಹೊನ್ನುಗಳನ್ನು ನಮ್ಮಂಥವರಿಗೆ ನೀಡುತ್ತ ನಡೆದಿದ್ದಾರೆ. ಇವರ ನಿಸ್ಪೃಹತೆಯೇ ನಿಸ್ಪೃಹತೆ, ಇವರ ತ್ಯಾಗವೇ ತ್ಯಾಗ! ಅಲ್ಲವೆ ಜಂಗಮಯ್ಯ?

ಜಂಗಮಯ್ಯ: ಇಂಥದನ್ನು ನಾನಂತೂ ಈ ಹಿಂದೆ ಕೇಳಿಲ್ಲ, ಮುಂದಿನವರೂ ಕೇಳುವರೋ ಇಲ್ಲವೋ, ಕೇಳುವುದಿರಲಿ, ಕಣ್ಣಾರೆ ಕಂಡು ಅವರ ಅಂಬಲಿ ಸೇವಿಸಿದ ನಾವೇ ಧನ್ಯರು.

ಬಸವಣ್ಣನವರ ಪ್ರವೇಶ

ಬಸವಣ್ಣ: ಎಂಥ ಅರಿವುಗೇಡಿತನ ನನ್ನದು! ಉದ್ದೇಶಪೂರ್ವಕವಾಗಿಯೇ ಬಡತನವನ್ನು ಅಪ್ಪಿಕೊಂಡಿದ್ದ, ಕಾಯಕಜೀವನವನ್ನು ಒಪ್ಪಿಕೊಂಡಿದದ ಈ ಮಹಾಶರಣ ಶರಣೆಯರ ಬಡತನ ನಿವಾರಿಸ ಹೋಗಿ ನನ್ನ ಬುದ್ಧಿಯ ಬಡತನವನ್ನು ಬಯಲಿಗೆಳೆದುಕೊಂಡೆ! ಮನೆ ನೋಡಾ ಬಡವರು, ಮನ ನೋಡಾ ಸಿರಿವಂತರು, ಎಂಬ ನನ್ನ ವಚನವನ್ನೇ ನಾನು ಮರೆತು ಬಿಟ್ಟೆ! ಈ ತಪ್ಪನ್ನು ಒಪ್ಪಿಕೊಂಡು ಇವರಲ್ಲಿ ಕ್ಷಮೆಯ ಭಿಕ್ಷೆ ಬೇಡುವುದೊಂದೇ ದಾರಿ ನನಗೆ. ಹಾಗೆಯೇ ಮಾಡುವೆ. (ಹೋಗಿ ಬಾಗಿಲು ತಟ್ಟುವ ಸದ್ದು).

ಮಾರಯ್ಯ: (ಬಾಗಿಲ ತೆರೆದು) ಯಾರು? ಅಣ್ಣನವರೇ! ಎಂಥ ಮಹದ್ಭಾಗ್ಯ ನಮ್ಮದು? ದಯಮಾಡಿಸಿರಿ, ಅಣ್ಣನವರೆ. ಈ ಪುಟ್ಟ ಕುಟೀರ ಎರಡನೆಯ ಸಲ ತಮ್ಮ ಪಾದಧೂಳಿಯಿಂದ ಪವಿತ್ರವಾಗುತ್ತಲಿದೆ.

ಬಸವಣ್ಣ: (ಮಾರಯ್ಯನವರ ಪಾದಗಳ ಮೇಲೆ ಧೊಪ್ಪನೆ ಕೆಡೆದು) ನನ್ನ ತಪ್ಪನ್ನು ಕ್ಷಮಿಸಿ ಬಿಡಿರಿ ಎನ್ನಯ್ಯ ಮಾರಯ್ಯನವರೆ! ಕೊನೆಗೂ ನನ್ನಿಂದ ನಾನು ಉಳ್ಳವ, ಕೊಡುವವ ಎಂಬ ಭಾವನೆ ತೊಲಗಲಿಲ್ಲ. ನಿಮ್ಮಂಥ ಮಹಾಶರಣರ ಇರವಿನ ಅರಿವಾಗಲಿಲ್ಲ.

ಮಾರಯ್ಯ: (ಅಣ್ಣನವರನ್ನು ಮೇಲೆತ್ತಿ) ಇದೇನನ್ನು ಮಾಡಿಬಿಟ್ಟಿರಿ ಅಣ್ಣನವರೇ! ತಪ್ಪನ್ನು ಒಪ್ಪಿದರೆ ಸಾಕು. ತಪ್ಪು ಯಾರು ಮಾಡುವುದಿಲ್ಲ? ತಮ್ಮಂಥ ಮಹಾನುಭಾವರು ಕೂಡಲೇ ಒಪ್ಪಿಕೊಳ್ಳುತ್ತಾರೆ. ಅನ್ಯರು ತಪ್ಪನ್ನೇ ಸಮರ್ಥಿಸಿಕೊಳ್ಳುತ್ತ ತಪ್ಪಿನಿಂದ ತಪ್ಪಿನತ್ತ ಸಾಗುತ್ತಾರೆ. ನನ್ನ ನಿಲುವು ಇದು.

“ತನ್ನಲ್ಲಿ ಬಂದ ಗುಣದೋಷವ

ಅನ್ಯರು ನುಡಿದರೆಂದು ಭಿನ್ನವ ಮಾಡಿ ನೋವನ್ನಕ್ಕ

ಭಕ್ತಂಗೆ ಸತ್ಯವಿಲ್ಲ, ವಿರಕ್ತಂಗೆ ಜ್ಞಾನವಿಲ್ಲ.

ನಾನು ಇವನಾಡಿ ನೊಂದಹರೆಂಬ ಭಾವ ಎನಗಿಲ್ಲ

ಕಣ್ಣಿನೊಳಗಣ ಕಸ, ಕಾಲೊಳಗಣ ಮುಳ್ಳು

ಆವ ಬಗೆಯಿಂದ ಹೋದರದು ಲೇಸು–ನಿಃಕಳಂಕ ಮಲ್ಲಿಕಾರ್ಜುನಾ.”

ಬಸವಣ್ಣ: ಇವು ನುಡಿಗಳಲ್ಲ. ಮುತ್ತಿನಹಾರ ಮಾರಯ್ಯನವರೆ! ಇಂಥ ನುಡಿಗಳನ್ನು ಇನ್ನಷ್ಟು ನುಡಿದು ನನಗೆ ದಾರಿ ತೋರಿರಿ.

ಮಾರಯ್ಯ: ನಾನಾರು ತಮಗೆ ದಾರಿ ತೋರುವವನು ಶರಣ ಕುಲತಿಲಕರೆ.

“ಬಯಲು ಬತ್ತಲೆಯಾದಡೆ ಹೊದ್ದಿಸುವರಿನ್ನಾರೋ?

ಏರಿ ನೀರು ಕುಡಿದಡೆ ಬಿಡಿಸುವರಿನ್ನಾರೋ?

ಮಹಾಮೇರು ನಡೆವಡೆ ಪಥಕ್ಕೆ ಇಂಬುಗೊಡುವರಿನ್ನಾರೋ?

ಅರಿದವ ಮರೆದವನಾದರೆ ಅರಿವ ಹೇಳುವನಿನ್ನಾರೋ?

ನಿಮ್ಮ ನಿಜವ ನೀವೇ ಬಲ್ಲಿರಿ, ನಿಃಕಳಂಕ ಮಲ್ಲಿಕಾರ್ಜುನಾ”!

ಇಷ್ಟೇ ನನ್ನ ನಮ್ರ ಬಿನ್ನಹ ಅಣ್ಣನವರೆ, ನಿಮ್ಮ ನುಡಿ ನಡೆಗಳು ಕೇವಲ ನಿಮ್ಮವಲ್ಲ. ಅವುಗಳಂತೆ ತಮ್ಮ ನಡೆನುಡಿಗಳನ್ನು ರೂಪಿಸಿಕೊಳ್ಳುವವರು ಕೋಟಿ ಕೋಟಿ ಜನರು. ಆದುದರಿಂದ ತಾವು ಎಷ್ಟು ಎಚ್ಚರಿಕೆ ವಹಿಸಿದರೂ ಕಡಿಮೆಯೆ.

ಬಸವಣ್ಣ: ತಪ್ಪನ್ನೂ ಒಪ್ಪಿದೆ, ಈ ಅಮೃತವಚನವನ್ನೂ ಒಪ್ಪಿದೆ ಮಾರಯ್ಯನವರೆ. ಇನ್ನು ಈ ಪವಿತ್ರವಚನ ದಾರಿ ದೀಪ ನನಗೆ. ಬರುವೆ ಮಾರಯ್ಯನವರೆ. ಬರುವೆ ಮಹಾದೇವಿಯಮ್ಮನವರೆ. ಶತಶತ ಶರಣು ಶರಣಾರ್ಥಿಗಳು ನಿಮಗೆ (ಹೋಗುತ್ತ)”

“ಭಕ್ತಿವಿಶೇಷವನ ಮಾಡುವರೆ ಹತ್ತು ಬೆರಳುಗಳುಂಟು;

ಹಾಸಿ ದುಡಿದರೆ ತನಗುಂಟು ತನ್ನ ಪ್ರಮಥರಿಗುಂಟು.

ಮಾರಿತಂದೆಗಳಂತೆ ಎನಗೇತಕಹುದಯ್ಯ?

ರತ್ನದ ಸಂಕಲೆಯನಿಕ್ಕಿ ಕಾಡಿದೆ–ಕೂಡಲಸಂಗಮದೇವಾ”

ಮಹಾದೇವಿ: ಈ ಕಿರಿಯ ಕುಟೀರ ಈ ಮಹಾಮೇರುವನ್ನು ಎರಡು ಸಲ ಒಳಗೊಂಡಿತಲ್ಲ! ಏನಿದಚ್ಚರಿ!

ಮಾರಯ್ಯ: ಇದು ಈ ಕುಟೀರದ ಗರಿಮೆಯಲ್ಲ, ಇದನ್ನು ಪ್ರವೇಶಿಸಿದ ಆ ಮಹಾಮೇರುವಿನ ಮಹಿಮೆ.

ಜಂಗಮರ ಪ್ರವೇಶ

ಗುರಯ್ಯ: (ಗಾಬರಿಯ ದನಿಯಲ್ಲಿ) ಬಸವಣ್ಣನವರು ಕೂಡಲಸಂಗಮಕ್ಕೆ ಹೊರಟು ಹೋದರಂತೆ

ಲಿಂಗಯ್ಯ: ಪ್ರಭುದೇವರು ಎಂದೋ ಕದಳಿಗೆ ಹೊರಟು ಹೋಗಿದ್ದಾರೆ, ಗುರಯ್ಯ.

ಜಂಗಮಯ್ಯ: ಅಕ್ಕಮಹಾದೇವಿಯರು ಅದಕ್ಕೂ ಮೊದಲು ಹೋಗಿಲ್ಲವೆ, ಲಿಂಗಯ್ಯ?

ಗುರಯ್ಯ: ಈಗ ನಾವೇನ ಮಾಡುವದು ಜಂಗಮಯ್ಯ? ಅಳಿದುಳಿದ ಶರಣರು ಚಿಕ್ಕದಣ್ಣಾಯಕ ಚೆನ್ನಬಸವಣ್ಣನವರ ನೇತೃತ್ವದಲ್ಲಿ ಉಳಿವೆಯತ್ತ ಹೊರಟುಹೋದರಂತೆ.

ಜಂಗಮಯ್ಯ: ನಮಗೀಗ ಮಾರಯ್ಯ-ಮಹಾದೇವಿಯಮ್ಮನವರೇ ಗತಿ. ಅವರೇನ ಮಾಡುವರೋ ಅದನ್ನೇ ನಾವೂ ಮಾಡೋಣ. ನಡೆಯಿರಿ, ಅವರ ಕುಟೀರದತ್ತ.

ಮಹಾದೇವಿ: ಮಾರಯ್ಯನವರ ಕುಟೀರ

ಮಾರಯ್ಯ: ಮಹಾದೇವಿ,

"ಊರು ಕೆಟ್ಟು ಸೂರೆಮಾಡುವಲ್ಲಿ ಆರಿಗಾರೂ ಇಲ್ಲ.

ಬಸವಣ್ಣ ಸಂಗಮಕ್ಕೆ, ಚೆನ್ನಬಸವಣ್ಣ ಉಳುವಿಗೆ

ಪ್ರಭು ಕದಳಿಗೆ, ಮಿಕ್ಕಾದ ಪ್ರಮಥರೆಲ್ಲರೂ

ತಮ್ಮ ತಮ್ಮ ಲಕ್ಷ್ಯ ಭಾವಕ್ಕೆ ಮುಕ್ತಿಯನೆಯ್ದಿಹರು

ನನಗೊಂದು ಬಟ್ಟೆಯ ಹೇಳಾ, ನಿಃಕಳಂಕ ಮಲ್ಲಿಕಾರ್ಜುನಾ?

ಎಂದು ಒರಲುತ್ತ ಕಾದಿದ್ದೇನೆ. ದಾರಿ ತೋರದಾಗಿದೆ. ನೀನೇ ದಾರಿ ತೋರು ಈಗ. ನಾನೇಕೆ ಬಂದೆ ಸುಖವ ಬಿಟ್ಟು? ಬಂದುದಕ್ಕೆ ಒಂದೂ ಆಗಲಿಲ್ಲ. ಕೈಲಾಸದ ಬಟ್ಟೆಯನರಸಲಿಲ್ಲ.

ಮಹಾದೇವಿ: ಮಾಡಿದ ಭಕ್ತಿಗೆ ಕೈಲಾಸಕ್ಕೆ ಹೋದೆಹೆನೆಂಬುದು ಕೈಕೂಲಿ!.....

ಸಕಲ ದೇಶ ಕೋಶ ವಾಸ ಭಂಡಾರ ಸವಾಲಕ್ಷ ಮುಂತಾದ ಸಂಬಂಧ ಸ್ತ್ರೀಯರ ಬಿಟ್ಟು ಬಂದೆನೆಂಬ ಕೈಕೂರಿಯೆ ನಿಮ್ಮ ಭಕ್ತಿ?

ಕೂಟಕ್ಕೆ, ಕುರುಹಾದುದನರಿಯದೆ,

ಆತ್ಮಕ್ಕೆ ಅರಿವಾದುದನರಿಯದೆ ಬಂದನೆಂಬ

ಕೈಲಾಸವೆಂಬ ಸೂತ್ರದ ಒಳಗಿಗೆ ಮನಸೋತಿರಲ್ಲಾ!

ಕೈಯಲ್ಲಿ ಜ್ಯೋತಿಯ ಹಿಡಿದು ಕತ್ತಲೆ ಎನಲೇತಕ್ಕೆ?

ಪರುಷ ಕೈಯ್ಯಲ್ಲಿದ್ದು ಕೂಲಿಯ ಮಾಡಲೇತಕ್ಕೆ?

ಕ್ಷುತ್ತು ನಿವೃತ್ತಿಯಾದವಂಗೆ ಕಟ್ಟೋಗರದ ಹೊರೆಯ ಹೊರಲೇತಕ್ಕೆ?

ನಿತ್ಯ ಅನಿತ್ಯವ ತಿಳಿದು ಮರ್ತ್ಯ ಕೈಲಾಸವೆಂಬುದು ಭಕ್ತರಿಗೆ ಮುಕ್ತಿಯಲ್ಲ!

ಅಲ್ಲಿ ಇಲ್ಲಿ ಎಂಬ ಗೆಲ್ಲಗೂಳಿತನ ಬೇಡ.

ಎನ್ನಯ್ಯಪ್ರಿಯ ಇಮ್ಮಡಿ ನಿಃಕಳಂಕ ಮಲ್ಲಿಕಾರ್ಜುನ

ಅಲ್ಲಿ, ಇಲ್ಲಿ, ಎಲ್ಲಿಯೂ ತಾನೆ.

ಮಾರಯ್ಯ: ಇದು ಸರಿ, ಮಹಾದೇವಿ, ಶಿವಜಗನ್ಮಯತ್ವವನ್ನು ಒಪ್ಪುವವನಿಗೆ ಅವನಿಲ್ಲದೆಡೆಯಲ್ಲಿ? 'ನೆಲ ತಳವಾರನಾದಡೆ ಕಳ್ಳಂಗೆ ಹೋಗಲೆಡೆಯುಂಟೆ? ಸರ್ವಾಂಗಲಿಂಗಿಗೆ ಅನರ್ಪಿತವುಂಟೆ? ಆದರೂ ಕೈವಲ್ಯವೆಂಬುದು ಕನಸಾಗಿಯೇ ಉಳಿಯಿತೇನೋ!

ಮಹಾದೇವಿ: ಆತ್ಮ ನಿಶ್ಚಯವಾದಲ್ಲಿಯೇ ಕೈವಲ್ಯ, ನಾಥ. ತತ್ತ್ವವನರಿದಲ್ಲಿಯೇ ಒಳಗು. ಈ ಗುಣ ಸದಮಲಭಕ್ತನ ಮುಕ್ತಿ–ಎನ್ನಯ್ಯಪ್ರಿಯ ಇಮ್ಮಡಿ ನಿಃಕಳಂಕ ಮಲ್ಲಿಕಾರ್ಜುನನಿಕ್ಕಿದ ಗೊತ್ತು.

ಮಾರಯ್ಯ: ಎನ್ನ ಗೊತ್ತು ಗುರಿ ತೋರಿದ ಮುಕ್ತ್ಯಾಂಗನೆ, ಮಹಾದೇವಿ, ನಿನ್ನ ಪಡೆದ ನಾನು ಧನ್ಯ.

ಮಹಾದೇವಿ: ನಿಮ್ಮನ್ನು ಪಡೆದ ನಾನೂ ಧನ್ಯಳು.

ಮಾರಯ್ಯ:

"ಕಾಯ ಸಮಾಧಿಯನೊಲ್ಲೆ

ನೆನಹು ಸಮಾಧಿಯನೊಲ್ಲೆ

ಕೈಲಾಸವೆಂಬ ಭವಸಾಗರವನೊಲ್ಲೆ!

ಎನ್ನ ಅಲ್ಲಿಗೆ ಇಲ್ಲಿಗೆ ಎಂದೆಳೆಯದೆ

ನಿನ್ನಲ್ಲಿ ಕೂಟಸ್ಥನ ಮಾಡು– ನಿಃಕಳಂಕ ಮಲ್ಲಿಕಾರ್ಜುನಾ."

ಇಬ್ಬರೂ–

ತಾನಳಿದು ಮತ್ತೆ ತಾನಾದುದ ಕಂಡೆ;

ತಾನಾಗಿ ಮತ್ತೆ ಅಳಿದುದ ಕಂಡೆ;

ಏನೂ ಇಲ್ಲದೆ ನೀನಾಗಿ ಮತ್ತೆ ನಾನಾದುದ ಕಂಡೆ;

ನಿಃಕಳಂಕ ಮಲ್ಲಿಕಾರ್ಜುನಲಿಂಗದಲ್ಲಿ ನಿಶ್ಚಿಂತನಾಗಿ."

ಅಮೀರ ಖುಸ್ರೋ

ನೋಟ ೧

(ದೆಹಲಿಯ ಕೆಲವು ವಿಶೇಷ ಸ್ವರಗಳು; ತರುವಾಯ ಯಮುನೆಯ ತರಂಗ ಸಂಗೀತ)

ಯಮುನೆ : ನಿದ್ದೆ ತಿಳಿದು ಎದ್ದೆಯಾ ದೆಹಲಿ?

ದೆಹಲಿ : ಇನ್ನೂ ಮಂಜಿನ ಮುಸುಕಿರುವುದನ್ನು ಕಂಡು ಇನ್ನೂ ಮಲಗಿರುವೆನೆಂದು ತಿಳಿದೆಯಾ, ಯಮುನೆ?

ಯಮುನೆ : ಇಲ್ಲ, ಇನ್ನೂ ಯಾವುದೋ ಹಳೆಯ ಘಟನೆಯ ಕನಸು ಕಾಣುತ್ತಿರಬಹುದೆಂದು ಊಹಿಸಿದ್ದೆ. ಕನಸುಗಳಿಗಾವ ಕೊರತೆ ನಿನಗೆ? ಪಾಂಡವರ ಕಾಲದಿಂದ ಇಂದಿನವರೆಗೆ ನೀನು ನೋಡಿದ ದಾಳಿಗಳ ಧಾಳಾಧೂಳಿಗಳೊ, ಯುದ್ಧಗಳೊ, ಕೊಲೆ ಸುಲಿಗೆಗಳೊ, ಸಾಮ್ರಾಜ್ಯಗಳ ಉತ್ಥಾನ ಪತನಗಳೊ, ಕೃಷ್ಣ ಕಾರಸ್ಥಾನಗಳೊ........

ದೆಹಲಿ : ನಿಲ್ಲಿಸು ನಿಲ್ಲಿಸು ಯಮುನೆ, ನಾನು ಘೋರ ಘಟನೆಗಳನ್ನು ಮಾತ್ರ ನೋಡಿರುವೆನೆಂದು ನನ್ನ ಬದಿಯಲ್ಲಿಯೇ ಹರಿವ ನೀನೂ ಭಾವಿಸಬೇಕೆ? ಹಾಗೆ ನೋಡಿದರೆ ನಿನ್ನ ಮಹಾಪೂರಗಳೂ ನನ್ನನ್ನು ಹಲವು ಸಲ ಘೋರ ವಿಪತ್ತುಗಳಿಗೆ ಗುರಿ ಮಾಡಿವೆ. ಆದುದರಿಂದಲೋ ಏನೋ, ನೀನೂ ಭೀಕರ ಘಟನೆಗಳನ್ನು ಮಾತ್ರ ನೆನಪಿಟ್ಟಿರುವೆ.

ಯಮುನೆ : ಮನ್ನಿಸೆನ್ನನು ಗೆಳತಿ, ರುದ್ರ ಭಯಂಕರ ಘಟನೆಗಳಂತೆ ಶಿವಮನೋಹರ ಘಟನೆಗಳನ್ನೂ ನೀನು ನೋಡಿರುವೆಯೆಂಬುದನ್ನು ನಾನು ಮರೆತಿಲ್ಲ. ನೀನು ನೋಡಿದ ಚೇತೋಹರ ಘಟನೆಗಳಲ್ಲಿ ಇಂದಿಗೂ ನೆನೆದರೆ ತನು ಪುಲಕಿತವಾಗುವಂತೆ ಮಾಡುವ ಒಂದೇ ಒಂದು ಘಟನೆಯನ್ನು ವಿವರಿಸುವಿಯಾ?

ದೆಹಲಿ : ಸಂತಸದೊಡನೆ ವಿವರಿಸುವೆ. ಅದು ಹದಿಮೂರನೆಯ ಶತಮಾನ. ಆಗ ನಾನು ಏಷ್ಯದ ಅದ್ಭುತ ನಗರ, ವಿಶ್ವದ ವೈಶಿಷ್ಟ್ಯಪೂರ್ಣ ನಗರ. ಆ ಹೊತ್ತಿಗೆ ಪೂರ್ವದ ಸಾಂಸ್ಕೃತಿಕ ಕೇಂದ್ರಗಳಾಗಿದ್ದ ಬಗದಾದ್, ಬೊಖಾರಾ, ಸಮರಕಂದ, ಹಿರಾತ, ಬಲೂಖಗಳು ಹಾಳುಬಿದ್ದಿದ್ದವು.

ಯಮುನೆ : ಯಾಕೆ ಸಖಿ?

ದೆಹಲಿ: ಚಂಡಮಾರುಗಳಂತೆ ಬರುತ್ತಿದ್ದ ಮಂಗೋಲರ ಪ್ರಚಂಡ ದಾಳಿಗಳಿಂದ. ಆ ದಾಳಿಗಳ ರಭಸವನ್ನೇನು ಹೇಳುವುದು? ಸಿರಾಮ ಹಾಗೂ

ಕರಾಕೋರಮ್ ಪರ್ವತಾವಳಿಗಳಿಂದ ಮಂಗೋಲರ ದಂಡುಗಳು ಹೊರಟವೆಂದರೆ ಹೋದಲ್ಲೆಲ್ಲ ವಿನಾಶದ ವಿತಂಡ ತಾಂಡವ. (Sound efects to demonstrate the ferocity of their attacks and devastation caused by them)

ಯಮುನೆ : ಸಾಕು ಈ ಕರ್ಣಕಠೋರ ಕರ್ಕಶ ಸ್ವರ! ಇದೇ ನಿನಗೆ ರೋಮಾಂಚನಕಾರಕ ಘಟನೆಯೇನೆ ದೆಹಲೀದೇವಿ?

ದೆಹಲಿ : ಇದಲ್ಲ ಗೆಳತಿ, ಈ ದೈತ್ಯದಳಗಳ ತೊತ್ತಳದುಳಿತಕ್ಕೆ ಸಿಕ್ಕಿ ತತ್ತರಿಸಿ ಹೋಗಿದ್ದವರಿಗೆ – ಶ್ರೀಸಾಮಾನ್ಯರಿಗೆ, ಸೈನಿಕರಿಗೆ, ಕವಿಗಳಿಗೆ, ಪಂಡಿತರಿಗೆ, ವಿವಿಧಕಳಾಮಂಡಿತರಿಗೆ ಆಶ್ರಯವಿತ್ತ ಹೆಮ್ಮೆ, ಹಿರಿಮೆ ನನ್ನದಾಯಿತು ಆಗ. ಅದನ್ನು ನೆನೆದಾಗೊಮ್ಮೆ ನನಗೆ ನವಿರೇಳುತ್ತದೆ.

ಯಮುನೆ : ದಾಳಿಕಾರರಿಗೂ ದಯೆತೋರಿ ಆಶ್ರಯವಿತ್ತ ಅಗ್ಗಳಿಕೆ ದೆಹಲಿಯದೆಂಬುದನ್ನು ಒಪ್ಪದವರಾರು?

ದೆಹಲಿ : ಇದು ನನ್ನ ಅಗ್ಗಳಿಕೆಯಲ್ಲ ಗೆಳತಿ, ನನ್ನ ನಿನ್ನ ತಾಯಿ ಭಾರತಮಾತೆಯ ಹೆಗ್ಗಳಿಕೆಯಿದು ಗೆಳತಿ.

ಯಮುನೆ : ಸತ್ಯಸ್ಯ ಸತ್ಯವಿದು. ಇಂಥ ತಾಯಿಯ ಮಕ್ಕಳಾಗಿರುವುದು ನಮ್ಮ ಭಾಗ್ಯವಿಶೇಷ. ಇರಲಿ, ಆಗ ಅಷ್ಟೊಂದು ಜನ ನಿನ್ನ ಆಶ್ರಯ ಬೇಡಿ ಬಂದರಲ್ಲ– ಅವರಲ್ಲಿ ಯಾರ ಬರವು ನಿನಗೆ ಹೆಚ್ಚಿನ ಹಿಗ್ಗನ್ನು ನೀಡಿತು?

ದೆಹಲಿ : ತುರ್ಕರ ಲಾಚೀನ್ ಪಂಗಡದ ಅಮೀರ ಸೈಫುದ್ದೀನ ಮಹಮೂದರ ಬರವು ನನಗೆ ಅತೀವ ಆನಂದವನ್ನುಂಟುಮಾಡಿತು.

ಯಮುನೆ : ಯಾಕೆ?

ದೆಹಲಿ : ಅವನೊಬ್ಬ ಪ್ರತಿಭಾಸಂಪನ್ನ ವ್ಯಕ್ತಿಯೆಂದಲ್ಲ, ಬಂದೊಡನೆಯೆ ಸುಲ್ತಾನ ಆಲ್ತಮಷರ ಗಮನ ಸೆಳೆದು ಅವರ ವಿಶೇಷ ಮಂಡಲಿಯಲ್ಲಿ ಸಮ್ಮಿಲಿತನಾದನೆಂದಲ್ಲ. ಈ ದೇಶಕ್ಕೆ ತನ್ನ ಮಗ ಅಮೀರ ಖುಸ್ರೋನನ್ನು ಕೊಟ್ಟನೆಂದು.

ಯಮುನೆ : ಅದೇಕೆ ಆನಂದದಾಯಕ, ಅಮೀರ ಖುಸ್ರೋ?

ದೆಹಲಿ : ಅಂದಿನ ಘಟನಾವಳಿ ನಿನ್ನ ಮನದ ಕಣ್ಣಿನ ಮುಂದೆ ಸುರುಳಿ ಬಿಚ್ಚುತ್ತಿದೆ ನೋಡು.

ನೋಟ ೨

ನಿರೂಪಕ : ಕ್ರಿ.ಶ. ೧೨೫೩. ಪಟಿಯಾಲಿ ಎಂಬ ಪುಟ್ಟ ಗ್ರಾಮದಲ್ಲಿ ಅದ್ಭುತ

ಪ್ರತಿಭೆಯೊಂದರ ಉದಯ. (ಆಗತಾನೆ ಹುಟ್ಟಿದ ಅಮೀರ ಖುಸ್ರೋವಿನ ಅಳುವ ಸ್ವರ)

ದಾದಿ : (ಸಂಭ್ರಮದೊಡನೆ) ಬೇಗಮ ಸಾಹಿಬಾ, ಬೇಗಮ ಸಾಹಿಬಾ, ಗಂಡು ಮಗು, ಗಂಡು ಮಗು!

ಬೇಗಮ್ : ಅಲ್ಲಾನ ಕರುಣೆ ದಾದಿ–ಎಲ್ಲಿ ಮುಖ ತೋರಿಸು.

ದಾದಿ : ನೋಡಿರಿ ಬೇಗಮ್, ತಂದೆ ತುರ್ಕರಾದರೂ ಹಿಂದವಿ ಮುಖ ಹೇಗಿದೆ.

ಬೇಗಮ್ : ತಂದೆ ತುರ್ಕರಾದರೇನಾಯಿತು, ನಾನು ಈ ದೇಶದವಳು. ನನ್ನ ಮಗ ಈ ದೇಶದ ಸುಪುತ್ರನಾಗಿಯೇ ಬೆಳೆಯಲಿ, ಈ ದೇಶಕ್ಕೆ ಕೀರ್ತಿ ತರಲಿ.

ದಾದಿ : ದೆಹಲಿಯ ಮಹಲಿನಲ್ಲಿ ಹುಟ್ಟಿದೆ ಈ ಪುಟ್ಟ, ಪಟಿಯಾಲೀ ಗ್ರಾಮದಲ್ಲಿ, ಗಂಗಾತೀರದ ಈ ಪುಣ್ಯ ಗ್ರಾಮದಲ್ಲಿ, ಹುಟ್ಟಿದ ಈ ಸುಕುಮಾರ ಈ ದೇಶಕ್ಕೆ ಕೀರ್ತಿ ತರಲೇಬೇಕು ಬೇಗಮ್! ಇಂದು ಈ ಗ್ರಾಮದ ಜನರಿಗಷ್ಟೇ ಅಲ್ಲ, ನಮ್ಮ ಜಿಲ್ಲೆ ಏಟಾದ ಜನರಿಗೆಲ್ಲ ಅನಂದವೇ.

ಬೇಗಮ್ : ಆನಂದ! ಬೇಗ ಇವರಿಗೆ ಈ ಸುದ್ದಿ ಮುಟ್ಟಿಸಬೇಕು.

ದಾದಿ : ಈ ಇವರು ಯಾರು ಬೇಗಮ್?

ಬೇಗಮ್ : ನಿನಗೂ 'ಇವರು' ಎನ್ನಿಸಿಕೊಳ್ಳುವವರು ಇಲ್ಲವೇನೇ?

ದಾದಿ : ಇದ್ದರೂ ನಾನು 'ಇವರು' ಎನ್ನುವುದಿಲ್ಲ ಬೇಗಮ್. ಏನೆನ್ನುವೆ ಗೊತ್ತಾ? 'ಇವನು' ಇಲ್ಲ, ಇಲ್ಲ–'ಇದು' ಎನ್ನುತ್ತೇನೆ.

ಬೇಗಮ್ : ಹೋಗೇ, ಹೊಯ್ಮಾಲಿ, (ಮಗು ಮತ್ತೆ ಅಳತೊಡಗುವುದು, ಅಳಬೇಡ ಕಂದಾ, ಎನ್ನ ಆನಂದಾ–ಳೊಳೊಳೊಳೊಳೊ..ಆಯಿ, ಆಯಿ....)

ನೋಟ ೩

ನಿರೂಪಕ : ನಾಲ್ಕು ವರ್ಷದ ಬಾಲಕ ಅಮೀರ ಖುಸ್ರೋ ತಂದೆಯೊಡನೆ ಹಜರತ್ ನಿಜಾಮುದ್ದೀನ ಔಲಿಯಾ ಅವರ ಸನ್ನಿಧಿಯಲ್ಲಿ.

ಅಮೀರ ಸೈಫುದ್ದೀನ್ ಮಹಮೂದ : ತಮ್ಮ ಅನುಗ್ರಹ ಆಶೀರ್ವಾದಗಳಿಗಾಗಿ ನನ್ನ ನಾಲ್ಕು ವರ್ಷಗಳ ಮಗ ಅಬುಲಹಸನ್ ಯಾಮೀನುದ್ದೀನ ಖುಸ್ರೋನನ್ನು

ಕರೆತಂದಿದ್ದೇನೆ ಪೂಜ್ಯರೆ. ಸುಲ್ತಾನ್ ಉಲ ಮಷಾಯರ್ ಶೇಖ ನಿಜಾಮುದ್ದೀನ ಔಲಿಯ ಅವರ ಅನುಗ್ರಹವಿಲ್ಲದೆ ಅವನು ದೊಡ್ಡವನಾಗಲಾರ, ದೊಡ್ಡತನ ಪಡೆಯಲಾರ.

ಹಜರತ ನಿ. ಔಲಿಯಾ: ಅಲ್ಲಾಹನ ಅನುಗ್ರಹ ಬೇಡಿರಿ, ರಸೂಲಲ್ಲಾಹರ ಆಶೀರ್ವಾದವನ್ನು ಬೇಡಿರಿ ಅಮೀರ ಸೈಫುದ್ದೀನ ಮಹಮೂದರೆ.

ಅಮೀರ : ಅವರ ಅನುಗ್ರಹ ಆಶೀರ್ವಾದಗಳೂ ಬೇಕು, ತಮ್ಮ ಕೃಪೆಯೂ ಬೇಕು, ಮಹಾತ್ಮರೆ! ತಮ್ಮನ್ನು ಕಡಗಣಿಸಿದ ಇಮಾದುಲ್‌ಮುಲ್ಕರ ಮಗನ ಅವಸ್ಥೆ ಏನಾಯಿತೆಂಬುದನ್ನು ಮರೆಯುವುದು ಹೇಗೆ? ಮಹಬೂಬ-ಎ-ಇಲಾಹಿ' ಎನಿಸಿರುವ ತಮ್ಮ ಕೃಪೆ ಅಮೃತ, ಕ್ರೋಧ ಅಗ್ನಿ.

ಹಜರತ : ಗುರು ಖ್ವಾಜಾ ಮೈನುದ್ದೀನ್ ಅವರ ಕರುಣೆಯದು ಅಮೀರರೆ. ಅದಂತಿರಲಿ, ನಿಮ್ಮ ಮಗ ಬಹುಮುಖ ಪ್ರತಿಭೆಯ ಮಹಾಕವಿ, ಮಹಾ ಮಾನವನಾಗುವನೆಂದು ನನ್ನ ಅಂತರಾತ್ಮ ನುಡಿಯುತ್ತಿದೆ. ನನ್ನ ಆಶೀರ್ವಾದ ಇವನಿಗಿದೆ, ಇರುವುದು ಕೊನೆಯವರೆಗೆ. ನೀವು ಈ ಬಗ್ಗೆ ನಿಶ್ಚಿಂತರಾಗಿರಿ.

ಅಮೀರ : ಧನ್ಯನಾದೆ ಮಹಿಮರೆ. ಮಗು, ಮಣಿ ಈ ಮಹಾತ್ಮರಿಗೆ.

ಖುಸ್ರೋ : ಸಲಾಮು ಸಲ್ಲಿಸುವೆ ಗುರುಗಳೆ.

ಹಜರತ : ಬಾ ತುರ್ಕೀ ಬಚ್ಚಾ; ನಿನ್ನ ಉತ್ತರೋತ್ತರೋತ್ಕರ್ಷದ ಹೊಣೆ ನನ್ನದು.

ನೋಟ ೪

ನಿರೂಪಕ : ಅಮೀರ ಸೈಫುದ್ದೀನ್ ಮಹಮೂದರ ಮಹಲಿನಲ್ಲಿ ಶೋಕನದಿಗೆ ಮಹಾಪೂರ ಬಂದಿದೆ. ಎಂಟು ವರ್ಷಗಳ ಮಗನನ್ನು ಬಿಟ್ಟು ಅಮೀರ ಸೈಫುದ್ದೀನ್ ಮಹಮೂದರು ಮರಣವನ್ನಪ್ಪಿದ್ದಾರೆ.

ಬೇಗಮ್ : (ಬಿಕ್ಕಿ ಬಿಕ್ಕಿ ಅಳುತ್ತ) ಇದೇನನ್ನು ಮಾಡಿಬಿಟ್ಟೆ ಪರವರದಿಗಾರ! ಇತ್ತ ಎಂಟು ವರ್ಷದ ಮಗನನ್ನು ಶಾಲೆಗೆ ಸೇರಿಸಿ, ಅತ್ತ ಅವನ ತಂದೆಯನ್ನು ಕಸಿದುಕೊಳ್ಳುವುದೆ? ಇದಾವ ನ್ಯಾಯ ರಹೀಮ? ಇದೆಂಥ ನ್ಯಾಯ ಕರೀಮ? ಈ ಎಂಟು ವರ್ಷದ ಮಗುವನ್ನು ಅನಾಥನನ್ನಾಗಿ ಮಾಡಿ ಯಾವ ದಿವ್ಯೋದ್ದೇಶ ಪೂರೈಸಿದೆ ರಬ್‌ಉಲ್ ಅಲಮೀನ್? ಈಗ ನಾನೇನು ಮಾಡಲಿ? ಎಂತು ಜೀವಿಸಲಿ? ಎಂತು ಈ ಅನಾಥ ಮಗುವನ್ನು ಬೆಳಸಿ ದೊಡ್ಡವನನ್ನಾಗಿ ಮಾಡಲಿ? ಪ್ರಿಯತಮ, ಇವನನ್ನು ಬಹಳ ದೊಡ್ಡವನನ್ನಾಗಿ ಮಾಡಬೇಕೆಂದು ಬಹಳ

ದೊಡ್ಡ ದೊಡ್ಡ ಯೋಜನೆಗಳನ್ನು ಹಾಕಿಕೊಂಡಿದ್ದಿರಲ್ಲ? ಅವೆಲ್ಲವನ್ನೂ ಇಲ್ಲಿಯೆ ಬಿಟ್ಟು ಪೈಗಂಬರವಾಸಿಗಳಾದಿರಾ? ಆ ಯೋಜನೆಗಳನ್ನು ಎಲ್ಲಿಗೊಯ್ದು ಎಸೆದು ಬರಲಿ? ಹೇಳು, ಪ್ರಿಯಕರ, ಏಕೆ ಸುಮ್ಮನಿರುವೆ? ಎಲ್ಲಿ ಎಸೆದು ಬರಲಿ ನಿನ್ನ ಯೋಜನೆಗಳನ್ನು?

ಇಮಾದುಲ್‌ಮುಲ್ಕ್ : (ಪ್ರವೇಶಿಸಿ) ಎಲ್ಲಿಯೂ ಎಸೆಯದಿರು ಮಗಳೆ! ಅವು ಎಸೆಯುವಂಥ ಯೋಜನೆಗಳಲ್ಲ. ಅವು ನಿನ್ನ ಮಗನ, ನನ್ನ ಮೊಮ್ಮಗನ, ಈ ದೇಶದ ಸುಕುಮಾರನೊಬ್ಬನ ಪ್ರತಿಭಾವಿಕಾಸಕ್ಕೆ ಸಂಬಂಧಿಸಿದ ಅಮೂಲ್ಯ ಯೋಜನೆಗಳು. ಹಜರತ್ ನಿಜಾಮುದ್ದೀನ್ ಔಲಿಯಾ ಅವರು ಇವನೊಬ್ಬ ಬಹುಮುಖ ಪ್ರತಿಭೆಯ ಮಹಾಕವಿ, ಮಹಾಮಾನವನಾಗುವನೆಂದು ಹೇಳಿದುದನ್ನು ಮರೆತೆಯಾ? ಪ್ರತಿಭೆ ಉದಿಸುವುದೇ ಅಪರೂಪ. ಬಹುಮುಖ ಪ್ರತಿಭೆ ಉದಿಸುವುದಂತೂ ಆಗೊಮ್ಮೆ ಈಗೊಮ್ಮೆ. ಆದುದರಿಂದ ಯಾವುದಕ್ಕೆ ಅಡೆತಡೆ ಬಂದರೂ ಪ್ರತಿಭಾವಿಕಾಸಕ್ಕೆ ಬರಕೂಡದು. ಪ್ರತಿಭಾಸಂಹಾರ ಪಂಚ ಮಹಾಪಾತಕಗಳಿಗಿಂತಲೂ ದೊಡ್ಡ ಪಾತಕ. ನಿನ್ನ ಮಗನ ಲಾಲನೆ ಪೋಷಣೆಗಳ ಜೊತೆಗೆ ಅವನನ್ನು ಮಹಾಮಾನವನನ್ನಾಗಿ ಮಾಡುವ ಹೊಣೆ ನನ್ನದು. ನೀನೂ, ನಿನ್ನ ಮಗೂ ಇನ್ನು ನನ್ನ ಮನೆಯಲ್ಲಿ ಇರಬೇಕು.

ಬೇಗಮ್ : ನಿಮ್ಮ ವೃದ್ಧಾಪ್ಯದಲ್ಲಿ ನಮ್ಮ ಭಾರವನ್ನೂ ನಿಮ್ಮ ಮೇಲೆ ಹೊರಿಸಬೇಕಾಯಿತಲ್ಲ, ಅಬ್ಬಾಜಾನ್! ನನ್ನಂಥ ಅಭಾಗಿನಿಯು ನಿಮಗೆ ಮಗಳಾಗಿ ಹುಟ್ಟಬಾರದಾಗಿತ್ತು.

ಇಮಾದುಲ್ ಮುಲ್ಕ್ : ಗಂಧದ ಕೊರಡನ್ನೇತೆಯ್ಯುವರು ತನಯೆ, ಜಾಲಿಯ ಕೊರಡನ್ನಲ್ಲ. ಪುಟವಿಕ್ಕುವರು ಚಿನ್ನಕ್ಕೆ, ಹಿತ್ತಾಳೆಗಲ್ಲ. ಹಿಂಡಿ ಕಾಸುವರು ಕಬ್ಬಿನ ಹಾಲನ್ನು, ಕಳ್ಳಿಯ ಹಾಲನ್ನಲ್ಲ. ಸತ್ವಶಾಲಿಗಳ ಶಕ್ತಿ ವಿಕಸನವಾಗಲೆಂದೇ ಅವರಿಗೆ ವಿಧವಿಧದ ಅಗ್ನಿಪರೀಕ್ಷೆಗಳು, ಸತ್ವಹೀನರಿಗಲ್ಲ. ನಿನ್ನ ಮಗ ಸತ್ವಶಾಲಿಯೆಂದು ದೈವ ಅವನನ್ನು ಅಗ್ನಿಪರೀಕ್ಷೆಗಳಿಗೆ ಒಳಗಾಗಿಸುತ್ತಿದೆ. ಅವನು ಅವುಗಳಲ್ಲಿ ವಿದಗ್ಧನಾಗಿಯೇ ಸಿದ್ಧಪುರುಷನಾಗುವನು. ನಾನೂ ಇವನಿಗೆ ಈ ದೇಶ ಒದಗಿಸಬಹುದಾದ ಉತ್ತಮೋತ್ತಮ ವಿದ್ಯಾಭ್ಯಾಸವನ್ನು ಒದಗಿಸುವೆನು. ಬುದ್ಧಿಮತ್ತೆಯಲ್ಲಿ ವರಿಷ್ಠರಾದವರ, ಕಲೆ ಶಾಸ್ತ್ರಗಳಲ್ಲಿ ಗರಿಷ್ಠರಾದವರ ಸಂಗ ಸಹವಾಸಗಳನ್ನು ಒದಗಿಸುವೆನು. ಇವನ ಸರ್ವಶಕ್ತಿಗಳ ವಿಕಸನಕ್ಕೆ ಸರ್ವ ಅವಕಾಶಗಳನ್ನು ಕಲ್ಪಿಸುವೆನು. ಧೈರ್ಯವಾಗಿರು, ಧೀರ ಪುತ್ರಿ.

ಬೇಗಮ್ : (ಗದ್ಗದಿತಳಾಗಿ) ಅಬ್ಬಾಜಾನ್, ಅಬ್ಬಾಜಾನ್, ನೀವು ನನ್ನ ತಂದೆ ಮಾತ್ರವಲ್ಲ; ನನ್ನ ಪಾಲಿನ ದೇವದೂತರು!

ನಿರೂಪಕ : ಉದಾರಹೃದಯಿಯಾಗಿದ್ದ ಇಮಾದುಲ್ ಮುಲ್ಕನು ತನ್ನ

ಮಗಳಿಗೆ ಮಾತುಕೊಟ್ಟಂತೆ ತನ್ನ ಮೊಮ್ಮಗ ಖುಸ್ರೋನಿಗೆ ಶ್ರೇಷ್ಠತಮ ಶಿಕ್ಷಣ ಕೊಡಿಸಿದ. ಅವನ ಪ್ರತಿಭೆಯ ಪೂರ್ಣ ವಿಕಾಸಕ್ಕೆ ಎಲ್ಲ ಅವಕಾಶಗಳನ್ನೂ ಒದಗಿಸಿದ. ಕಿಶೋರಾವಸ್ಥೆಯಲ್ಲಿಯೇ ಫಾರಸಿ ಮಹಾಕವಿಗಳ ಅಧ್ಯಯನವನ್ನು ಆರಂಭಿಸಿದ್ದ ಅಮೀರ ಖುಸ್ರೋ ಸಣ್ಣ ವಯಸ್ಸಿನಲ್ಲಿಯೇ 'ಚುಟುಕ'ಗಳಂಥ ಸಣ್ಣ ಕವಿತೆಗಳ ರಚನೆಗೆ ಕೈಯಿಕ್ಕಿದ. ಗುರು ಖ್ವಾಜಾ ನಿಜಾಮುದ್ದೀನರಿಂದ ಪ್ರೇರಿತನಾಗಿ ೧೨೬೬ರಲ್ಲಿಯೇ ಅವನು ಕವನ ರಚನೆಗೆ ಮೊದಲು ಮಾಡಿದ; ಅತ್ತ ಮಹಾಕವಿ ಡಾಂಟೇ ಹುಟ್ಟಿದ. ಇಪ್ಪತ್ತನೆಯ ವರ್ಷದಲ್ಲಿ ಕಾಲಿಡುವ ಮೊದಲೇ ಪ್ರಥಮ ಕಾವ್ಯ ಸಂಗ್ರಹ "ತುಹಫತ್ ಉಸ್ ಸಗೀರ್" ಪ್ರಕಟಿಸಿದ. ಅದರ ಮುನ್ನುಡಿಯಲ್ಲಿ ಉದ್ಘೋಷಿಸಿದ: ನನ್ನ ಹಾಲು ಹಲ್ಲುಗಳು ಉದುರುತ್ತಿದ್ದಂತೆ ನನ್ನ ಬಾಯಿಂದ ಕವಿತೆಗಳು ಮುತ್ತುಗಳಂತೆ ಉದುರುತ್ತಿದ್ದುವು ಎಂದು. ಅವನ ಪ್ರಖರ, ಸಂವೇದನಶೀಲ, ಜೀವಂತ ಹಾಗೂ ಜ್ವಲಂತ ವ್ಯಕ್ತಿತ್ವ ಕಾವ್ಯರಚನೆಯಿಂದ ತೃಪ್ತವಾಗದೇ ಸಂಗೀತ ಮೊದಲಾದ ಹಲವು ಕಲೆಗಳಲ್ಲಿ, ರಾಜನೀತಿ ಮೊದಲಾದ ಹಲವು ಶಾಸ್ತ್ರಗಳಲ್ಲಿ, ಫಾರಸಿ, ಸಂಸ್ಕೃತ, ಹಿಂದವಿ ಮೊದಲಾದ ಹಲವು ಭಾಷೆಗಳಲ್ಲಿ ಪರಿಣತಿಯನ್ನು ಪಡೆಯುತ್ತ ನಡೆದಿದ್ದಿತು. ರಾಜಾಸ್ಥಾನದಿಂದ ರಂಕರ ಗುಡಿಸಲುಗಳವರೆಗೆ ಅವನ ಹೆಸರಿನ ಪರಿಮಳ ಹರಡಿತು. ಇದೇ ಸಮಯಕ್ಕೆ ದೈವ ಇನ್ನೊಂದು ಆಘಾತಕ್ಕೆ ಈಡು ಮಾಡಿತು ಅವನನ್ನು ಇಮಾದುಲ್ ಮುಲ್ಕನನ್ನು ಕಸಿದುಕೊಂಡಿತು.

(ಇಮಾದುಲ್‌ಮುಲ್ಕರ ಮಹಲಿನಲ್ಲಿ ಗೋಗರೆಯುತ್ತಿರುವ ಖುಸ್ರೋ ಹಾಗೂ ಅವನ ತಾಯಿ)

ಬೇಗಮ್ : (ಬಿಕ್ಕಿಸುತ್ತ) ಅಬ್ಬಾಜಾನ್, ನೀವೂ ಬಿಟ್ಟು ಹೊರಟಿರಾ ನಿಮ್ಮ ಈ ಅನಾಥ ಮಗಳು, ಮೊಮ್ಮಗನನ್ನು? ನೀವಿಲ್ಲದ ಈ ಜಗತ್ತಿನಲ್ಲಿ ನಮಗೆ ಬದುಕಲು ಸ್ಥಳವೆಲ್ಲಿ ಅಬ್ಬಾಜಿ? ನಿಮ್ಮ ವಾತ್ಸಲ್ಯವೇ ಎಲ್ಲ ದುಃಖಗಳನ್ನು ನುಂಗಿಕೊಂಡು ಜೀವ ಹಿಡಿದುಕೊಂಡಿರುವ ಶಕ್ತಿಯನ್ನು ನೀಡಿದ್ದಿತು ನಮಗೆ. ಇನ್ನಾವ ಶಕ್ತಿ ಎತ್ತಿ ಹಿಡಿದು ಹೊರೆಯಬೇಕೆಮ್ಮನ್ನು ತಂದೆ? ನಿಮ್ಮ ಮೊಮ್ಮಗನನ್ನು ಮಹಾಕವಿಯನ್ನಾಗಿ, ಮಹಾಮಾನವನನ್ನಾಗಿ ಮಾಡಿಯೇ ತೀರುವೆನೆಂದು ಪಣತೊಟ್ಟಿದ್ದಿರಿ ಅಬ್ಬಾಜಿ. ಈ ಕಾರ್ಯ ಮುಗಿವ ಮುನ್ನವೇ ಹೊರಟುಹೋದಿರಿ ಅಬ್ಬಾಜಿ!

ಖುಸ್ರೋ : ನಾನಾ, ನಾನಾರೀತಿಗಳಿಂದ ನನ್ನ ಉತ್ಕರ್ಷದ ನೆಲಗಟ್ಟು ಕಟ್ಟಿದ ನಾನಾ, ನಿಮ್ಮನ್ನುಳಿದು ನಾನು ಹೇಗೆ ಜೀವಿಸಲಿ? ನಿಮ್ಮಿಂದ ಈ ದೆಹಲಿಯಲ್ಲಿ ರಾಜರಿಂದ ರಂಕರವರೆಗೆ ನನಗೆ ಮನ್ನಣೆ ದೊರೆಯತೊಡಗಿದ್ದಿತು. ನೀವೇ ನೀರು ಹಾಕಿ ಬೆಳೆಸಿದ ಈ ಮರ ಈಗ ಕಾಯಿ ಬಿಡತೊಡಗಿದೆ. ಅವು ಹಣ್ಣಾಗುವ ಮೊದಲೇ ನೀವು ಮಣ್ಣಾಗುವುದೇ ನಾನಾ?

ಬೇಗಮ್ : ಇನ್ನೆಲ್ಲಿಯ ಹಣ್ಣು ಮಗ? ಇನ್ನು ಯಾವ ಬಿರುಗಾಳಿಗೆ ಈ ಮರದ ಕಾಯಿಗಳು ಉದುರಿ ಯಾರ ಬಾಯಿ ಸೇರುವುವೋ ಯಾರು ಬಲ್ಲರು? ಇದು ಈಗ ಕಾವಲಿಲ್ಲದ ಮರ, ರಕ್ಷಕರಿಲ್ಲದ ಮರ. ಇದರ ಕಾಯಿಗಳು ಹಾಳಾಗಿ ಹೋಗಲಿ, ಮರವಾದರೂ ಉಳಿದರೆ ಸಾಕು ಮಗ. ಅಯ್ಯೋ, ಮರಕ್ಕೇ ಧಕ್ಕೆ ಬಂದರೆ ನನ್ನ ಗತಿ? (ಬಿಕ್ಕುತ್ತಾಳೆ)

ಖುಸ್ರೋ : (ಧೀರನಾಗಿ) ಇಂಥ ಅಮಂಗಲ ಶಬ್ದಗಳು ನಿನ್ನ ಬಾಯಿಂದ ಬರಬೇಕೆ ಅಮ್ಮಿನ್? ಗುರು ನಿಜಾಮುದ್ದೀನರ ಈ ವರಪುತ್ರ ಗಾಳಿ ಬೀಸಿದರೆ ಸಾಕು, ಮುರಿದು ಬೀಳುವ ಮರವೆಂಬಂತೆ ಕಂಡನೆ ನಿನಗೆ? ಎದೆಗುಂದಬೇಡ ಅಂಬೆ, ನಿನ್ನ ಮಗ ಇದಾಗಲೇ ಹಲವು ವಿದ್ಯೆ ಕಲೆಗಳನ್ನು, ಹಲವು ಭಾಷೆಗಳನ್ನು ಕಲಿತಿದ್ದಾನೆ. ಇದಾಗಲೇ ನಿನ್ನ ಮಗನ ಹೆಸರು ದೆಹಲಿಯಲ್ಲಿ ಮಹಲುಗಳಿಂದ ಗುಡಿಸಲುಗಳವರೆಗೆ ಮನೆ ಮಾತಾಗಿದೆ. ಮೇಲಾಗಿ, ಯಾರು ಕೈಬಿಟ್ಟರೂ ಈ ದೇಶ ನನ್ನ ಕೈಬಿಡದೆಂದು ತಿಳಿ ತಾಯೆ. ನಾನೀ ದೇಶವನ್ನೇ ನಂಬಿದ್ದೇನೆ. ಈ ದೇಶವನ್ನು, ದೇಶವಾಸಿಗಳನ್ನು, ಇಲ್ಲಿಯ ಗಿರಿ ತೊರೆಗಳನ್ನು, ಪಶು ಪಕ್ಷಿಗಳನ್ನು, ಲತೆ ವೃಕ್ಷಗಳನ್ನು, ಇಲ್ಲಿ ಪ್ರತಿಯೊಂದು ವಸ್ತುವನ್ನೂ ಪ್ರೀತಿಸುತ್ತಿದ್ದೇನೆ. ಪ್ರಗಾಢವಾಗಿ ಪ್ರೀತಿಸುತ್ತಿದ್ದೇನೆ. ಆದುದರಿಂದ ನನ್ನ ಪ್ರೀತಿಗೆ ಪ್ರತಿಯಾಗಿ ಈ ದೇಶಬಾಂಧವರಿಂದ ಪ್ರೀತಿಯೇ ನನಗೆ ದೊರೆವುದೆಂಬ ನಂಬಿಕೆ ನನಗಿದೆ ತಾಯೆ. ನೋಡುವಿಯಂತೆ ನಿನ್ನ ಮಗನ ಅದ್ಭುತ ಸಾಹಸವನ್ನು! ಬಹುಬೇಗ ಒಳ್ಳೆಯ ಕೆಲಸವೊಂದನ್ನು ಪಡೆದು ಈ ಮನೆಯ ಹೊಣೆ ಹೊರುವ ಶಕ್ತಿಯನ್ನು ಪಡೆಯುತ್ತಾನೆ ಅವನು.

ಬೇಗಮ್ : ನನ್ನ ಧೀರ ಪುತ್ರಾ, ಇನ್ನು ನಿನ್ನಲ್ಲಿಯೇ ನಾನು ನಿನ್ನ ನಾನಾನನ್ನು, ಅಬ್ಬಾನನ್ನು ಏನೆಲ್ಲವನ್ನೂ ಕಾಣಬೇಕಪ್ಪಾ!

ಖುಸ್ರೋ : ನಿನ್ನ ನಿರೀಕ್ಷೆಗೆ ತಕ್ಕಂತೆ ನಡೆದುಕೊಳ್ಳುವೆ ತಾಯೆ.

ನೋಟ ೬

ನಿರೂಪಕ : ಬಹುಬೇಗ ಮಲಿಕ್ ವಜ್ಜೂ ಎಂದು ಖ್ಯಾತನಾಗಿದ್ದ ಅಲ್ಲಾವುದ್ದೀನ ಕರಲೂಖಾನರ ಆಶ್ರಯ ಯುವಕ ಖುಸ್ರೋನಿಗೆ ದೊರೆಯಿತು. ದೊರೆ ಬಲಬನನ ಅಣ್ಣನ ಮಗನಾಗಿದ್ದ ಇವನು ವೀರತೆಗೆ, ಉದಾರತೆಗೆ ಹೆಸರಾದವನು. ತರುಣ ಖುಸ್ರೋನಿಗೆ ಅವನೊಬ್ಬ ಆದರ್ಶ ಆಶ್ರಯದಾತನಾಗಿ ಕಂಡನು. ಅವನೂ ಖುಸ್ರೋನನ್ನು ಹಾರ್ದಿಕವಾಗಿ ಪ್ರೀತಿಸುತ್ತಿದ್ದ. ಆದರೆ ಖುಸ್ರೋನ ಅಗ್ನಿ ಪರೀಕ್ಷೆಗಳು ಇನ್ನೂ ಮುಗಿದಿರಲಿಲ್ಲ. ಬಹು ದಿನಗಳೇನೂ ಗತಿಸಿರಲಿಲ್ಲ. ಆಕಸ್ಮಿಕ ಘಟನೆಯೊಂದು ಕಾರಣವಾಗಿ ಅವರಿಬ್ಬರಲ್ಲಿ ಮನಸ್ತಾಪದ ಕಿಡಿ ಸಿಡಿಯಿತು. ಖುಸ್ರೋನಿಗೆ ಅಲ್ಲಿ ಮುಂದುವರಿಯಲು ಮನಸ್ಸಾಗದೆ ಪ್ರತ್ಯಯವನ್ನುಳಿಸಿಕೊಂಡು

ಹೊರಬಿದ್ದ. ಆಮೇಲೆ ದೊರೆ ಬಲಬನನ ಎರಡನೆಯ ಮಗ ರಾಜಕುಮಾರ ಬುಗರಾಖಾನರ ಆಶ್ರಯ ಸಿಕ್ಕಿತವನಿಗೆ. ಅವನೊಡನೆ ತುಗರಿಲನ ಬಂಡಾಯವನ್ನು ಬಗ್ಗುಬಡಿಯಲು ವಂಗದೊಳಗಣ ಲಖನೌತಿಗೆ ಹೋದ. ಆಶ್ರಯದಾತನ ವಿಜಯವನ್ನು ವರ್ಣಿಸುವ 'ಫತಹನಾಮಾ' ಕಾವ್ಯವನ್ನೂ ಬರೆದ. ಆದರೆ ದೈವ ಅಲ್ಲಿಯೂ ಇರಗೊಡಲಿಲ್ಲ ಅವನನ್ನು. ಅಲ್ಲಿಯ ಆರ್ದ್ರ ಹವೆ ಒಗ್ಗದೇ ದೆಹಲಿಗೆ ಬಂದುಬಿಟ್ಟನವನು. ಅಷ್ಟರಲ್ಲಿ ಅದೃಷ್ಟ ಮತ್ತೆ ಕಣ್ದೆರೆಯಿತು. ದೊರೆ ಬಲಬನನ ಹಿರಿಯ ಮಗ, ಮುಲ್ತಾನದ ರಾಜ್ಯಪಾಲ ರಾಜಕುಮಾರ ಮಹಮ್ಮದ್‌ನ ಆಶ್ರಯ ಅವನಿಗೆ ಸಿಕ್ಕಿತು. ಸಿಕ್ಕಿದುದು ಹೀಗೆ–

(ಬಲಬನನ ಅರಮನೆಯ ಒಂದು ಭಾಗ; ರಾಜಕುಮಾರ ಮಹಮ್ಮದ, ಅಮೀರ ಖುಸ್ರೋರ ಹೃದಯಸಂವಾದ ಸಾಗಿದೆ.)

ಖುಸ್ರೋ : ತಮ್ಮ ದಯಾದೃಷ್ಟಿ ನನ್ನ ಮೇಲೆ ಬಿದ್ದುದೆಂತು ದೊರೆಗಳೆ?

ರಾಜ ಕು : ನನಗೆ ಕವಿಗಳಲ್ಲಿ, ವಿದ್ವಜ್ಜನರಲ್ಲಿ ಅತೀವ ಆಸಕ್ತಿಯಿರುವುದು ನಿಮಗೆ ಗೊತ್ತಿಲ್ಲವೆ ಕವಿರಾಜ?

ಖುಸ್ರೋ : ಗೊತ್ತು ಪ್ರಭು, ಆದರೆ ತಮ್ಮ ಗಮನಕ್ಕೆ ಬರುವಷ್ಟು ಹಿರಿಯ ಕವಿ ನಾನಲ್ಲ. ತಾವು ಕವಿರಾಜನೆಂದು ನನ್ನನ್ನು ಕರೆದುದು ತಮ್ಮ ಹೃದಯದ ಹಿರಿಮೆಯ ಗುರುತಾಗಲಿ ನನ್ನ ಕಾವ್ಯಶಕ್ತಿಯ ಗರಿಮೆಯ ದ್ಯೋತಕವಲ್ಲ.

ರಾಜ ಕು : ನೀವು ಕವಿರಾಜರೆಂಬುದು ನನ್ನ ಅಭಿಪ್ರಾಯ ಮಾತ್ರವಲ್ಲ ಅಮೀರರೇ, ಕವಿಶೇಖರ ಷೇಖ್ 'ಸಾದಿ' ಅವರ ಅಭಿಪ್ರಾಯವೂ ಆಗಿದೆ.

ಖುಸ್ರೋ : (ಚಕಿತನಾಗಿ) ಏನು? ಕವಿಗುರು ಸಾದಿ ಅವರ ಅಭಿಪ್ರಾಯವೇ ದೊರೆಗಳೆ?

ರಾಜ ಕು : ಹೌದು, ಅವರೇ ಬರೆದ ಈ ಓಲೆ ಓದಿರಿ–(ಕೊಡುವನು)

ಖುಸ್ರೋ : ಸಾದಿಯವರೇ ಬರೆದ ಓಲೆ! ಎಂಥ ಸುದೈವ ನನ್ನದು! ಇದನ್ನು ಓದುವ ಮೊದಲು ತಲೆಯ ಮೇಲೇರಿಸಿಕೊಳ್ಳುವೆ. ಹೃದಯಕ್ಕೆ ಅವಚಿಕೊಳ್ಳುವೆ. (ಓದುವನು) ರಾಜಕುಮಾರರೆ, ತಮ್ಮ ಆಸ್ಥಾನ ಕವಿಯಾಗಲು ಅಮಂತ್ರಿಸಿದ್ದೀರಿ. ಕೃತಜ್ಞತೆಗಳು; ನಾನು ಈಗ ತೀರ ಮುಪ್ಪಾಗಿದ್ದೇನೆ. ಭಾರತದವರೆಗಿನ ಪ್ರವಾಸವು ನನ್ನಿಂದ ಸಾಧ್ಯವಾಗಲಾರದು. ಅಲ್ಲದೆ ಭಾರತದೊಳಗೇ ಅಮೀರ ಖುಸ್ರೋನಂಥ ಓರ್ವ ಪ್ರತಿಭಾನ್ವಿತ ಕವಿ ಇರುವಾಗ ನಾನು ಭಾರತಕ್ಕೆ ಬರುವ ಅವಶ್ಯಕತೆಯಿದೆಯೆಂದು ನನಗೆನ್ನಿಸುವುದಿಲ್ಲ. (ಆನಂದತುಂದಿಲನಾಗಿ) ಗುರು ನಿಜಾಮುದ್ದೀನ ಔಲಿಯಾ, ನನಗೆ ಈ ಗೌರವವನ್ನು, ಈ ಆನಂದವನ್ನು, ಈ ಧನ್ಯತೆಯನ್ನು ತಾಳಿಕೊಳ್ಳುವ ಶಕ್ತಿ ನೀಡು. ನನ್ನ ಶಕ್ತಿಗೆ ಮೀರಿದ ಮನ್ನಣೆಯಿದು. ಕವಿಗುರು 'ಸಾದಿ' ಅವರೆಲ್ಲಿ? ನಾನೆಲ್ಲಿ? ಧನ್ಯನಾದೆನೆಂದು ದೊರೆಗಳೆ!

ರಾಜ ಕು : ನಿಮ್ಮಂಥ ಆಸ್ಥಾನಕವಿಯನ್ನು ಪಡೆದು ನಾನೂ ಧನ್ಯನಾದೆ. ನಾಳೆ ಮುಲ್ತಾನಿಗೆ ಪ್ರಯಾಣ. ಸಿದ್ಧರಾಗಿರಿ.

ಖುಸ್ರೋ : ತಮ್ಮ ಆಜ್ಞಾನುವರ್ತಿ ನಾನು ಪ್ರಭುಗಳೆ.

ನೋಟ ೭

ನಿರೂಪಕ : ಮುಲ್ತಾನದಲ್ಲಿ ಐದು ವರ್ಷಗಳನ್ನು ಕಳೆದ ಖುಸ್ರೋ ಅವನ ಶಬ್ದಗಳಲ್ಲಿಯೇ ಹೇಳುವುದಾದರೆ ಐದು ವರ್ಷಗಳಲ್ಲಿ ಮುಲ್ತಾನದ ಐದು ನದಿಗಳನ್ನು ತನ್ನ ಸುಖದ ಪದಗಳಲ್ಲಿ ತುಂಬಿದ. ಆದರೆ ಅಲ್ಲಿಗೂ ಬಂದಿತು ದುರ್ದೈವದ ದುರ್ವಿಲಾಸ! ಮಂಗೋಲರೊಡನೆ ನಡೆದ ಸಾಮಾನ್ಯ ಸಂಘರ್ಷವೊಂದರಲ್ಲಿ ರಾಜಕುಮಾರ ಮಹಮೂದ ಮೃತನಾದ. ಖುಸ್ರೋ ಸೆರೆಯಾಳಾದ. ಕಾರಾಗಾರದಿಂದ ಹೇಗೋ ಪಾರಾದ. ತನ್ನ ಸ್ನೇಹಪರ ಆಶ್ರಯದಾತ ರಾಜಕುಮಾರ ಮಹಮೂದನ ಬಗ್ಗೆ ಒಂದು ಅತ್ಯಂತ ಮರ್ಮಸ್ಪರ್ಶಿಯಾದ ಶೋಕಗೀತೆ ಬರೆದ. ಕೇಳಿದವರ ಕಲ್ಲೆದೆಗಳನ್ನೂ ಕರಗಿಸುವಂತಹ ಆ ಶೋಕಗೀತೆಯನ್ನು ದೆಹಲಿಯ ನಿವಾಸಿಗಳು ಓಣಿಓಣಿಗಳಲ್ಲಿ ಹಾಡಿ ಕಂಬನಿಗರೆದರು. ಸ್ವಯಂ ಬಲಬನನೇ ಅದನ್ನು ಇಚ್ಛೆಪಟ್ಟು ಕೇಳಿ ಮೂರ್ಛಿತನಾದ. ಆ ಮೇಲೆ ಆ ಕಾಲದ ಇನ್ನೊಬ್ಬ ಉದಾರ ಸರದಾರ ಅಮೀರ ಅಲಿ ಸರಜಾನದಾರರಲ್ಲಿ ಆಶ್ರಯ. ಅವರೊಡನೆ ಅವಧಕ್ಕೆ ಪ್ರಯಾಣ. ಅಲ್ಲಿ ಎರಡು ವರ್ಷ ದೆಹಲಿಯನ್ನೇ ನೆನೆಯುತ್ತ ವಿರಹಿಯಂತೆ ವಾಸ. ಆಮೇಲೆ ಮತ್ತೆ ದೆಹಲಿಗೆ ಬಂದ. ಎರಡು ದಿನಗಳಲ್ಲಿಯೇ ಆಗಿನ ಸುಲ್ತಾನ ಕೈಕೂಬಾದನಿಂದ ಆಸ್ಥಾನಕ್ಕೆ ಕರೆ. ದೆಹಲಿಯ ದರಬಾರದಲ್ಲಿ ಅವನ ಪ್ರಥಮ ನಿಯುಕ್ತಿ. ಇದಾದರೂ ಸುಲಲಿತವಾಗಿ ಸಾಗಿತೆ? ಮುಂದಿನ ಕಥೆ ಕೇಳಿ.

(ಲಖನೌತಿಯಲ್ಲಿ ಬುಗರಾಖಾನರ ಮಹಲಿನಲ್ಲಿ)

ಗುಪ್ತಚಾರ : ಅಲಮ್ ಪನಾಹ, ತಮ್ಮ ಆಜ್ಞೆಯಂತೆ ದೆಹಲಿಯಲ್ಲಿ ಗುಪ್ತನಾಗಿ ಸಂಚರಿಸಿ ತಮ್ಮ ಸುಪುತ್ರ ಸುಲ್ತಾನ ಕೈಕೂಬಾದರ ರಾಜ್ಯಾಡಳಿತದ ಬಗ್ಗೆ ರಹಸ್ಯ ವರದಿಯನ್ನು ತಂದಿದ್ದೇನೆ.

ಬುಗರಾಖಾನ : ಓದಿ ಹೇಳದನ್ನು ಗುಪ್ತಚಾರ

ಗುಪ್ತಚಾರ : ಓದಲು ಭಯವಾಗುತ್ತಿದೆ ಖಾವಂದ.

ಬುಗರಾಖಾನ : ಭಯಬೇಡ, ಗುಪ್ತಚಾರ. ನಿನ್ನ ಕರ್ತವ್ಯದಂತೆ ನೀನು ಸತ್ಯಸಂಗತಿಗಳನ್ನೇ ಸಂಗ್ರಹಿಸಿರಲು ಸಾಕು. ಪ್ರಾಮಾಣಿಕವಾಗಿ ಕರ್ತವ್ಯ ನಿರ್ವಹಿಸುವವರಿಗೆ ಭಯವಿರಲಾರದು ಬುಗ್ರಾಖಾನನ ದರಬಾರದಲ್ಲಿ. ಭಯವಿರುವಲ್ಲಿ ಪ್ರಾಮಾಣಿಕತೆಯಿರುವುದು ದುಸ್ಸಾಧ್ಯ. ಪ್ರಾಮಾಣಿಕತೆಯಿರದಲ್ಲಿ

ಒಳ್ಳೆಯ ಆಡಳಿತ ಅಸಾಧ್ಯ. ಒಳ್ಳೆಯ ಆಡಳಿತವಿರದಲ್ಲಿ ಅರಸೊತ್ತಿಗೆಗೆ ಗಂಡಾಂತರ! ಓದು, ಇದ್ದುದನ್ನು ಇದ್ದಂತೆ ಓದು.

ಗುಪ್ತಚಾರ : (ಓದುವವನು) ಶರೀರಸುಖವೇ ಸುಲ್ತಾನರ ಪರಮಾದರ್ಶವಿರುವಂತಿದೆ. ಅಂತೆಯೇ ಅವರ ಅರಮನೆಯಷ್ಟೇ ಅಲ್ಲ, ದೆಹಲಿ ನಗರವೇ ಭೋಗ-ವಿಲಾಸಗಳ ಬೀಡಾಗಿಬಿಟ್ಟಿದೆ. ಪ್ರತಿಯೊಂದು ಗೋಡೆಯ ನೆರಳಿನಲ್ಲಿಯೂ ನರ್ತಕಿಯರು; ಪ್ರತಿಯೊಂದು ಭವನದೊಳಗೂ ಸುಂದರ ಶರೀರಗಳ ಕೋಲ್ಮಿಂಚುಗಳು! ಸುರೆ ಹಾಗೂ ಸುಂದರ ಸ್ತ್ರೀಯರೇ ಸರ್ವರಿಗೂ ಸಾರ ಸರ್ವಸ್ವವೆನಿಸಿರುವಂತಿದೆ. ಸುಲ್ತಾನರಿಗೋ, ರಾಜ್ಯ ನಿರ್ವಹಣೆಯ ವಿಷಯಗಳಿಗೆ ಸಮಯವೇ ಇಲ್ಲ................

ಬುಗರಾಖಾನ : ಸಾಕಿಷ್ಟು ಸುವಾರ್ತೆ ಗುಪ್ತಚಾರ. ನೀನು ಹೋಗು.

ಗುಪ್ತಚಾರ : ಮಹದಾಜ್ಞೆ ಖಾವಂದ (ಹೋಗುವವನು)

ಬುಗರಾಖಾನ : ಇನ್ನು ತಡೆಯಲಾಗದು, ತಡೆಯಬಾರದು, ಕುತುಬುದ್ದೀನ್ ಐಬಕ್, ಅಲ್ತಮಷ್ ಬಲಬನರ ಹಾಗೂ ನನ್ನ ಶ್ರಮ-ಸ್ವೇದ-ರಕ್ತಗಳಿಂದ ಕಟ್ಟಿರುವ ಈ ರಾಜ್ಯ ವಿನಾಶದ ದವಡೆಯತ್ತ ಧಾವಿಸುತ್ತಿರುವುದನ್ನು ತಿಳಿದೂ ಇನ್ನೂ ತಡೆಯಕೂಡದು! ಕೈಕುಬಾದ ನನ್ನ ಮಗ ನಿಜ. ಆದರೆ ಇವನಿಂದ ಈ ರಾಜ್ಯದ ಸಮಾಧಿಯಾದರೆ ಅಪಕೀರ್ತಿ ಅವನಿಗೊಬ್ಬನಿಗೇ ಅಲ್ಲ, ನನಗೂ ಅಂಟುವುದು. ಇದನ್ನು ತಪ್ಪಿಸಲೇಬೇಕು. ಸೇನಾಪತಿಗಳೇ.

ಸೇನಾಪತಿ : (ಬಾಗಿ) ಪ್ರಭು.

ಬುಗರಾಖಾನ್ : ನಾಳೆ ದೆಹಲಿಯ ಮೇಲೆ ದಂಡಯಾತ್ರೆ!

ಸೇನಾಪತಿ : ಹುಜೂರ್, ತಮ್ಮ ಸುಪುತ್ರರ ಮೇಲೆ!

ಬುಗರಾಖಾನ್ : ಹೌದು, ನಮ್ಮ ಕುಪುತ್ರನ ಮೇಲೆ.

ನೋಟ ೮

ನಿರೂಪಕ : ಇನ್ನೇನು, ಯುದ್ಧಭೂಮಿಯಲ್ಲಿ ತಂದೆ ಮಕ್ಕಳಿಬ್ಬರೂ ಒಬ್ಬರನ್ನೊಬ್ಬರು ಸಂಧಿಸಬೇಕು. ಅಷ್ಟರಲ್ಲಿ ಹಿರಿಯ ಹಿತೈಷಿಗಳ ಕೈವಾಡದಿಂದ ಯುದ್ಧ ತಪ್ಪಿ ತಂದೆ ಮಗ ಒಂದಾದರು. ಖುಸ್ರೋಗೆ ಖುಷಿಯೋ ಖುಷಿ. ಈ ಅವಿಸ್ಮರಣೀಯ ಘಟನೆಯನ್ನು ತನ್ನ ಪ್ರಸಿದ್ಧ ಮಸನವಿ ಕಿರನುಸ್ಸಾದೈನ್‌ದಲ್ಲಿ ಹೃದಯಂಗಮವಾಗಿ ಚಿತ್ರಿಸಿದ. ಆದರೆ ತಂದೆ ಮಗ ಒಂದಾದ ಆನಂದವೂ ಬಹಳ ದಿನ ಉಳಿಯಲಿಲ್ಲ. ಭಾರತದಲ್ಲಿ ಜನ್ಮವೆತ್ತಿದ್ದ ಮುಸಲ್ಮಾನರು ತುರ್ಕರ ಆಳ್ವಿಕೆಯನ್ನು

ಕೊನೆಗೊಳಿಸಲು ಜಲಾಲುದ್ದೀನ್ ಖಿಲಜಿಯ ನೇತೃತ್ವದಲ್ಲಿ ಸಂಘಟಿತರಾಗುತ್ತಲೇ ಇದ್ದರು. ಶಿಥಿಲ ಜೀವನದಿಂದ ಶಿಥಿಲಶರೀರನಾಗಿ ಕೈಕುಬಾದ ಹಾಸಿಗೆ ಹಿಡಿಯಲು ಅವರು ಯುದ್ಧ ಸಾರಿದರು. ಭೀಷಣ ಯುದ್ಧ ಜರುಗಿ ಕೈಕುಬಾದ ಹತನಾದ. ಗುಲಾಮ ವಂಶದ ಆಳಿಕೆ ಕೊನೆಗಂಡಿತು. ಖಿಲಜಿ ವಂಶದ ಆಳಿಕೆ ಆರಂಭವಾಯಿತು-ಜಲಾಲುದ್ದೀನ ಖಿಲಜಿಯ ಸಿಂಹಾಸನಾರೋಹಣದೊಡನೆ! ಈಗ ಹಜರತ ನಿಜಾಮುದ್ದೀನ ಔಲಿಯಾರ ಖಾನಕಾಹವನ್ನಷ್ಟು ಸಂದರ್ಶಿಸೋಣ.

(ಹಜರತ ಔಲಿಯಾ ಅವರ ಖಾನಕಾಹದಲ್ಲಿ)

ಹಜರತ ಔಲಿಯಾ : ಮತ್ತೇನು ಹೊಸಸುದ್ದಿ ತುರ್ಕಿ ಬಚ್ಚಾ? ಹೊಸ ಖಿಲಜಿ ವಂಶದ ದೊರೆ ಏನೆನ್ನುತ್ತಾನೆ?

ಖುಸ್ರೋ : ಸುಲ್ತಾನ ಜಲಾಲುದ್ದೀನ ಖಿಲಜಿಯವರೂ ನನ್ನ ಮೇಲೆ ಕೃಪಾಕಟಾಕ್ಷ ಬೀರಿದ್ದಾರೆ, ಗುರುವರ. ನನ್ನನ್ನು ಮುಸಹಫ್‌ದಾರನನ್ನಾಗಿ ನಿಯಮಿಸಿ ವರ್ಷಕ್ಕೆ ೧೨೦೦ ಟಂಕೆಗಳ ವೇತನವನ್ನು ಗೊತ್ತುಮಾಡಿದ್ದಾರೆ. ನನ್ನನ್ನು ತಮ್ಮ ನದೀಮರಲ್ಲಿಯೂ ಸೇರಿಸಿಕೊಂಡಿದ್ದಾರೆ.

ಹ. ಔಲಿಯಾ : ಏನು ಮೋಡಿ ಇದೆಯಪ್ಪಾ ನಿನ್ನಲ್ಲಿ, ಯಾರು ರಾಜರಾದರೂ ನಿನ್ನನ್ನು ಬಿಡುವುದಿಲ್ಲ. ಯಾಕೋ ಅರಸರಿಗೆ ನಾವೆಂದರೇ ಸೇರಿಕೆಯಿಲ್ಲ.

ಖುಸ್ರೋ : ಅವರೇನೋ ತಮ್ಮನ್ನೂ ತಮ್ಮ ದರಬಾರಕ್ಕೆ ಸೇರಿಸಿಕೊಳ್ಳಲು ಆತುರರಾಗಿದ್ದಾರೆ ಗುರುದೇವ. ತಾವು ಸೇರಬೇಕಲ್ಲ! ಸುಲ್ತಾನ ಘಿಯಾಸುದ್ದೀನ್ ಬಲಬನರು ಪ್ರಧಾನ ಇಮಾಮ ಪದವಿಯನ್ನು ನೀಡಿದಾಗ ಅದನ್ನು ನಿರಾಕರಿಸಿದ್ದ ಮೌಲಾನಾ ಕಮಾಲುದ್ದೀನ್ ಜಹೀದರಿಂದ ವೈರಾಗ್ಯದೀಕ್ಷೆ ಪಡೆದವರು ತಾವು; ಸೂಫೀಸಂತಶ್ರೇಷ್ಠ ಶೇಖ ಫರೀದ ಗಂಜ ಶಕರ ಅವರಿಂದ ಅನುಗ್ರಹ ಪಡೆದು ಅಧ್ಯಾತ್ಮ ಸಾಮ್ರಾಜ್ಯದ ಚಕ್ರವರ್ತಿಗಳಾದವರು ತಾವು. ಸಿಂಹಾಸನ ಕಿರೀಟಗಳಿಲ್ಲದ ಷಹನ್‌ಷಾಹರು! ಬಾದಶಹರಿಗೂ ತಮ್ಮ ಚರಣಧೂಳಿಯ ಅಗತ್ಯವಿದೆ.

ಹ. ಔಲಿಯಾ : ನಾವು ಹೋಗುವುದಿಲ್ಲವೆಂದೇ ನಮ್ಮ ಮೇಲೆ ಸಿಟ್ಟಪ್ಪಾ ಅವರಿಗೆ! ನನ್ನ ಮೇಲಿನ ಸಿಟ್ಟನ್ನು ನನ್ನ ಶಿಷ್ಯನೆಂದು ನಿನ್ನ ಮೇಲೆಯೂ ಸುರಿಸದಿದ್ದರೆ ಸಾಕು. ನೀನೇನೋ ನನ್ನ ಗುರುಗಳು ನನ್ನ ಮೇಲೆ ಮುನಿದಿದ್ದಾಗ ರಾಗಬಸಂತದಲ್ಲಿ ನಿನ್ನ ರುಚಿರ ರಚನೆಯೊಂದನ್ನು ಅವರೆದುರು ಹಾಡಿ ನನ್ನ ಗುರು ಕೋಪವನ್ನು ನಿವಾರಿಸಿದೆ. ನಿನ್ನ ಮೇಲೆ ಆಳರಸರಲ್ಲಿ ಯಾರಾದರೂ ಮುನಿದರೆ ನಾನೆಂತು ಅವರ ಸಿಟ್ಟು ಇಳಿಸಲಪ್ಪಾ?

ಖುಸ್ರೋ : ತಮ್ಮ ಶಿಷ್ಯನೆಂದು ತಿಳಿದೂ ನನ್ನ ಮೇಲೆ ರೇಗಲಾರರು ಯಾರೂ ಗುರುವರ! ರೇಗಿದರೆ ಆಗುವ ಪರಿಣಾಮವೇನೆಂಬುದು ಅವರಿಗೆ ಗೊತ್ತಿದೆ. ಒಂದು ವೇಳೆ ಯಾರಾದರೂ ರೊಚ್ಚಿಗೆದ್ದರೂ ನನಗಾವ ಭಯ? ಅವರ ದರಬಾರದ

ಸೇವೆಯನ್ನು ಕಹಿಪದಾರ್ಥವೆಂದು ಬಿಸಾಡಿ ತಮ್ಮ ದರಬಾರದ ಸೇವೆಯಲ್ಲಿಯೇ ಉಳಿದುಬಿಡುವೆನು.

ಹ. ಔಲಿಯಾ : ಈಗೇನು ಕಡಿಮೆ ಸೇವೆ ಮಾಡುತ್ತಿರುವಿಯೇನಪ್ಪಾ? ನಿನ್ನಂಥ ಶಿಷ್ಯ ಸಿಕ್ಕ ನಾನೇ ಧನ್ಯನು.

ಖುಸ್ರೋ : ತಮ್ಮಂಥ ಗುರುಗಳು ಸಿಕ್ಕ ನಾನು ಧನ್ಯನಲ್ಲವೆ ಗುರುದೇವ?

ಹ. ಔಲಿಯಾ : ಅದು ನಿನಗೆ ಬಿಟ್ಟ ಮಾತು. ನನ್ನ ಮಟ್ಟಿಗೆ ಹೇಳುವುದಾದರೆ, ನಾನು ಎಲ್ಲರಿಂದಲೂ ಬೇಸರಿಸುವೆ; ನನ್ನ ಬಗ್ಗೆಯೂ ಬೇಸತ್ತುಕೊಳ್ಳುವೆ. ಆದರೆ ಖುಸ್ರೋನ ಬಗ್ಗೆ ಬೇಸತ್ತುಕೊಳ್ಳಲಾರೆ! ನನ್ನ ಕೊರಳಮೇಲೆ ಗರಗಸವಿಟ್ಟು 'ಖುಸ್ರೋ'ನನ್ನು ತ್ಯಜಿಸಿ ಎಂದು ಹೇಳಿದರೆ, ಕೊರಳನ್ನೇ ಬಿಟ್ಟುಕೊಟ್ಟೇನು, ಖುಸ್ರೋನನ್ನು ಬಿಡಲಾರೆ! ನಾನು ಅಲ್ಲಾಹನ ಬಳಿಗೆ ಹೋದಾಗ "ಏನು ತಂದಿರುವೆ ಔಲಿಯಾ?" ಎಂದು ಅಲ್ಲಾಹ ನನ್ನನ್ನು ಕೇಳಿದರೆ "ಖುಸ್ರೋನನ್ನು ತಂದಿರುವೆ ತಂದೆ" ಎಂದು ಉತ್ತರವೀಯುವೆನು..............

ಖುಸ್ರೋ : (ಉದ್ವಿಗ್ನನಾಗಿ) ಸಾಕು ಗುರುದೇವಾ, ಈ ಕೃಪೆಯ ಸುರಿಮಳೆ ಸಾಕು! ನನಗೆ ಉಸಿರುಗಟ್ಟುತ್ತಿದೆ! ಇಷ್ಟೊಂದು ಕೃಪಾವೃಷ್ಟಿಯನ್ನು, ದಯೆಯ ಧಾರೆಯನ್ನು ತಾಳಿಕೊಳ್ಳುವ ಶಕ್ತಿಯನ್ನಾದರೂ ಮೊದಲು ನೀಡಿರಿ ಗುರುವರ!

ಹ. ಔಲಿಯಾ : ಇನ್ನೂ ನಾನು ನೀನು ಬೇರೆಯೆಂದು ಭಾವಿಸಿರುವೆಯೇನಪ್ಪಾ, ನಾನು ನಿನಗೆ ಶಕ್ತಿ ನೀಡಲು? ಇಸ್ಲಾಂ ಧರ್ಮ ಅನುಮತಿ ಕೊಡುತ್ತಿದ್ದರೆ ನನ್ನನ್ನೂ ನಿನ್ನನ್ನೂ ಒಂದೇ ಸಮಾಧಿಯಲ್ಲಿ ಇರಿಸಬೇಕೆಂದು ಮೃತ್ಯುಪತ್ರ ಬರೆದಿಡುತ್ತಿದ್ದೆ!

ಖುಸ್ರೋ : ನಾನು ಈ ವಿಷಯ ಮುಂದುವರಿಸಿದಂತೆಲ್ಲ ನನ್ನ ಮೇಲೆ ತಮ್ಮ ವಾತ್ಸಲ್ಯವರ್ಷ ಹೆಚ್ಚುತ್ತಲೇ ಹೋಗುತ್ತಿದೆ. ಆದುದರಿಂದ ವಿಷಯಾಂತರಕ್ಕೆ ಅನುಮತಿ ಬೇಡುವೆ ಗುರುವರ!

ಹ. ಔಲಿಯಾ : ಮತ್ತಾವ ವಿಷಯ ತುರ್ಕುಲ್ಲಾಹ.

ಖುಸ್ರೋ : ದೊರೆ ಜಲಾಲುದ್ದೀನ ಖಿಲಜಿ ಅವರು ತಮಗೊಂದು ಗ್ರಾಮವನ್ನು ದಾನ ಮಾಡಬೇಕೆಂದಿದ್ದಾರೆ. ದಯವಿಟ್ಟು ಸ್ವೀಕರಿಸಬೇಕು.

ಹ. ಔಲಿಯಾ : ನನಗೆ ಅಲ್ಲಾಹ ಎಲ್ಲವನ್ನು ಕೊಟ್ಟಿದ್ದಾನೆ ತುರ್ಕುಲ್ಲಾಹ. ಬೇರೆ ಯಾರೂ ಏನೂ ಕೊಡುವುದು ಬೇಡ. ನಿನ್ನ ರಾಜಸೇವಾಕಾರ್ಯಕ್ಕೆ ಹೊತ್ತಾಯಿತೆಂದು ತೋರುತ್ತಿದೆ. ನೀನಿನ್ನು ಹೊರಡು. ರಾಜಸೇವೆ, ಜನಸೇವೆ, ಗುರುಸೇವೆಗಳನ್ನು ಒಂದಕ್ಕೂ ಊಣೆಯ ಬರದಂತೆ ನಿನ್ನಂತೆ ನಡೆಸಿದವರು ಇನ್ನುಂಟೆ?

ಖುಸ್ರೋ : ಚರಣ ಚುಂಬಿಸುವೆ ಗುರುದೇವ. ಮತ್ತೆ ಸಾಯಂಕಾಲ ಬರುವೆ 'ಇಷಾ'ದ ವರೆಗೂ ಇರುವೆ.

ನೋಟ ೯

ನಿರೂಪಕ : ಜಲಾಲುದ್ದೀನನ ರಾತ್ರಿಯ ಮಹಫಿಲುಗಳ ಬಗ್ಗೆ ತತ್ಕಾಲೀನ ಖ್ಯಾತ ಇತಿಹಾಸಕಾರ ಜಿಯಾವುದ್ದೀನ್ ಬರನಿ ಬರೆದಿರುವುದು ಹೀಗಿದೆ: 'ಸಾಕಿ' ಬಟ್ಟಲು ತುಂಬುತ್ತಲೆ ಸುಂದರ ಕಿಶೋರ ಲಲನೆಯರು ನೃತ್ಯ ಪ್ರಾರಂಭಿಸುತ್ತಿದ್ದರು. ಅಮೀರ ಖುಸ್ರೋನ ಗಜಲುಗಳ ಸ್ವರಲಹರಿಗಳು ಹರಿಯತೊಡಗುತ್ತಿದ್ದವು. ಇಂಥ ಸಭೆಗಳು ಈ ಲೋಕದಲ್ಲಿಯೇ ನಡೆಯಬಲ್ಲುವೆಂದು ಕಲ್ಪಿಸಲೂ ಸಾಧ್ಯವಿಲ್ಲ. ಆ ಗಜಲುಗಳ ಗುಂಜನ ಕೇಳಿ ನಿಷ್ಪ್ರಾಣ ವಸ್ತುಗಳಿಗೂ ಪ್ರಾಣ ಬರುತ್ತಿದ್ದಿತು; ದುಃಖಿತರ ಮನಗಳೂ ಅರಳುತ್ತಿದ್ದವು. ಎಪ್ಪತ್ತು ವರ್ಷಗಳ ವಯದಲ್ಲಿ ಇದನ್ನು ನಡೆಸುತ್ತಿದ್ದ ಆ ದೊರೆ ಯೌವನದಲ್ಲಿ ಅದೆಷ್ಟು ರಸಿಕನಾಗಿರಬೇಕು? ರಸಿಕತೆಗೆ ವಯದ ನಿರ್ಬಂಧವಾದರೂ ಏಕೆ? ಈ ಕಾಲದ ಇನ್ನೊಂದು ಘಟನೆ ಗಮನಾರ್ಹವಾದುದು. ಖುಸ್ರೋನ ಮುನ್ನಿನ ಆಶ್ರಯದಾತ ಮಲಿಕ ಛಜ್ಜೋ ಜಲಾಲುದ್ದೀನ ಖಿಲಜಿಯ ವಿರುದ್ಧ ಬಂಡಾಯ ಸಾರಿದ. ಆ ಯುದ್ಧದಲ್ಲಿ ಖುಸ್ರೋ ತನ್ನ ಆಗಿನ ಆಶ್ರಯದಾತ ಜಲಾಲುದ್ದೀನನೊಡನಿದ್ದ. ಛಜ್ಜೋನ ಕೈಗಳಿಗೆ ಕೋಳ ತೊಡಿಸಿ ಕರೆತಂದುದನ್ನು ಕಣ್ಣಾರೆ ನೋಡಿದ! ಆ ವಿಜಯದ ಬಗ್ಗೆ 'ಮಫ್ತಾ ಉಲ್-ಫುತೂಹ' ಕಾವ್ಯ ಬರೆದ. ಅದರಲ್ಲಿ ಛಜ್ಜೋನ ಬಗ್ಗೆ ಬದ್‌ಅಹದ್-ವಚನ ಪಾಲಿಸದವ ಎಂದು ಮಾತ್ರ ಬರೆದ. ಮುಂದಿನ ದೊರೆ ಅಲ್ಲಾವುದ್ದೀನ ಖಿಲಿಜಿಯ ದರಬಾರದಲ್ಲಿಯೂ ಗೌರವಾನ್ವಿತ ವ್ಯಕ್ತಿಯಾಗಿ ಮುಂದುವರಿದ. ಇದು ಅವನ ಅತ್ಯಂತ ರಚನಾಪ್ರಧಾನ ಕಾಲ. ಆಗ ಅವನು ಹಿಂದೆಂದೂ ಹಾಡದಂಥ ಹಾಡುಗಳನ್ನು ಬರೆದ; ಮುಂದೆಯೂ ಮರೆಯದಂಥ ಕಾವ್ಯಗಳನ್ನು ಬರೆದ! ಸಂಗೀತದಲ್ಲಂತೂ ಆ ಕಾಲದ ಶಿಖರ ಸಂಗೀತಗಾರ ಗೋಪಾಲ ನಾಯಕರನ್ನೇ ಯುಕ್ತಿಯಿಂದ ಸೋಲಿಸಿದ. ಪಂಚ ಪ್ರೇಮಾಖ್ಯಾನಕ ಮಸನವಿಗಳನ್ನೂ, ಆಯಿನಾ ಎ ಸಿಕಂದರೀ, ಮತಲಾ-ಉಲ್ ಅನವರ್, ಶೀರೀನ ಖುಸರೋ, ಮಜನೂಂ-ಲೈಲಾ ಮತ್ತು ಹಪ್ತ್ ಬಡಿಪ್ತ್‌ಗಳನ್ನು ಬರೆದ. ಖಜಾಯಿನುಲ್ ಫಾತೂಹ್ ಮತ್ತು ಏಜಾಜೆ ಖುಸರವಿ ಎಂಬ ಎರಡು ಗದ್ಯಗ್ರಂಥಗಳನ್ನು ಬರೆದ. ಖಿಜರಖಾನ್ ಹಾಗೂ ದೇವಲದೇವಿಯರ ಪ್ರೇಮ ಸಂಬಂಧಗಳನ್ನು ಬಣ್ಣಿಸುವ ಆಷಿಕಾ ಅನ್ನು ಉಲ್ಲೇಖಿಸದಿರುವುದು ಹೇಗೆ? ಇದೆಲ್ಲ ಸರಿ : ಈ ಹಿಗ್ಗಿನ ಹಾಲಿಗೂ ಹುಳಿ ಹಿಂಡಲಿಲ್ಲವೆ ದೈವ, ಅವನ ತಾಯಿಯನ್ನು ಕಸಿದುಕೊಂಡು, ಸಹೋದರ ಮುಬಾರಕನನ್ನು ಕಸಿದುಕೊಂಡು?

ಖುಸ್ರೋ : (ಶೋಕಿಸುತ್ತ) ಮಮತೆಯೇ ಮೈವೆತ್ತು ಬಂದಂತಿದ್ದ ಮಾತೆ, ನಿನ್ನ ವಾತ್ಸಲ್ಯದ ನೆರಳಿನಲ್ಲಿ ನನಗಾಗುವ ನೋವುಗಳನ್ನೆಲ್ಲ ನುಂಗಿ ನಗುತ್ತಲೇ ಬದುಕಿದ್ದೆ. ಇನ್ನು ನನ್ನ ಬನ್ನಗಳ ಬೆಂಕಿಗೆ ತಣ್ಣೀರೆರಚುವವರಾರು? ಲೋಕವೇನೋ ನಾನು ಬಹಳ ಸುಖಿಯೆಂದು ತಿಳಿದಿದೆ. ಆದರೆ ನನ್ನ ಮೂಕ ಶೋಕ ಅವರಿಗೆಂತು ತಿಳಿಯಬೇಕು ತಾಯೆ? ತಿಳಿದು ಸಂತೈಸುತ್ತಿದ್ದ ನೀನೇ ನನ್ನ ಪಾಲಿಗೆ ಇಂದು ಇಲ್ಲವಾದೆ, ಇಲ್ಲವಾದೆ. ಬಡತನ ಮತ್ತು ಅವಶ್ಯಕತೆಗಳೇ ಹೆಚ್ಚಾಗಿರುವ ನನಗೆ ಹಗಲು ರಾತ್ರಿ ಚಿಂತೆಗಳು ಮುತ್ತಿ ಕಾಡುತ್ತಿವೆ. ನನ್ನ ಅಗತ್ಯಗಳ ಪೂರೈಕೆಗಾಗಿ ನನ್ನಂತೆಯೇ ಇರುವ ಇನ್ನೋರ್ವನ ಮುಂದೆ ಕೈಯೊಡ್ಡಬೇಕಾಗಿದೆ! ಅವರು ಕೊಡುವ ಹಣ ಅವರು ನನಗೆ ನೀಡಿದ ಕೃಪೆಯೆಂದೇ ಅವರು ತಿಳಿದಿದ್ದಾರೆ. ಅವರೆಂದೂ ನನ್ನ ಶ್ರಮವನ್ನು ಗಣಿಸಿಲ್ಲ. ನನ್ನ ಶ್ರಮ ಕತ್ತೆಯಂತೆ ಎಲ್ಲ ಹೊರೆಯನ್ನು ಹೊತ್ತು ತಂದು ಇಳಿಸಿದ ಮೇಲೆ ಕೆಲವು ಒಣ ದಂಟುಗಳನ್ನು ಕತ್ತೆಯ ಮುಂದೆ ಚೆಲ್ಲುವಂತಿದೆ ನನ್ನ ಪರಿಸ್ಥಿತಿ! ನೀನು ಸ್ವರ್ಗದಿಂದಲೇ ಸಾಂತ್ವನ ನೀಡುತ್ತಿರು ನನಗೆ ತಾಯೆ! ಮುಬಾರಕನನ್ನು ಅಲ್ಲಿಯೇ ಕಾಪಾಡುತ್ತಿರು. ಗುರುವಿನ ಆಶೀರ್ವಾದವೊಂದೇ ಈಗ ನನಗುಳಿದಿರುವ ವಜ್ರರಕ್ಷೆ! ಇಲ್ಲಿ ಇರುವಷ್ಟು ದಿನವೂ ಈ ದೇಶದ, ಈ ದೇಶದ ಜನರ, ಗುರುವಿನ ಸೇವೆ ಮಾಡಿ ನಿನಗೆ ಕೀರ್ತಿ ತರುವೆ ತಾಯೆ, ಕೀರ್ತಿ ತರುವೆ!

ನೋಟ ೧೦

ನಿರೂಪಕ : ಅಲ್ಲಾವುದ್ದೀನನ ತರುವಾಯ ಮುಬಾರಕ ಖಿಲಜಿಯ ನಿಶ್ಯಕ್ತ ರಾಜ್ಯಭಾರ. ಅವನ ಕಾಲದಲ್ಲಿಯೂ ಖುಸರೊನಿಂದ ಒಂದು ಪ್ರಸಿದ್ಧ ಮಸನವಿ 'ನೂಹೆ ನಿಪಹ'ದ ರಚನೆ. ಖುಸರೋ ಖಾನ್ ಎಂಬವನಿಂದ ಮುಬಾರಕ ಖಿಲಜಿಯ ಕೊಲೆ, ಖಿಲಜಿ ವಂಶದ ಆಳಿಕೆಯ ಅಂತ್ಯ, ಗಯಾಸುದ್ದೀನ ತೊಘಲಕನ ಸಿಂಹಾಸನಾರೋಹಣದೊಡನೆ ತೊಘಲಕ ವಂಶದ ಆಳಿಕೆಯ ಆರಂಭ. "ತೊಘಲಕ –ನಾಮಾ"ದ ರಚನೆ. ಒಂದು ಅತ್ಯಂತ ಉಲ್ಲೇಖನೀಯ ಘಟನೆಯೆಂದರೆ ಖುಸರೋ ರಾಜಕುಮಾರ ಉಲಗಖಾನರೊಂದಿಗೆ ದೇವಗಿರಿಗೆ ದಂಡಯಾತ್ರೆ ಹೋದುದು.

ಖುಸ್ರೋ : ಏನು ಚಂದವಿದು. ಏನು ಚಂದವಿದು ರಾಜಕುಮಾರರೇ! ದೇವಗಿರಿಯು ನಿಜವಾಗಿಯೂ ದಿವ್ಯ ಸೌಂದರ್ಯದ ಸಿರಿಯು! ಇದೇಕೆ ಈ ದೇಶದ ರಾಜಧಾನಿಯಾಗಲಿಲ್ಲ?

ರಾಜ ಕು : ಉತ್ತರದವರು ದಕ್ಷಿಣಕ್ಕೆ ಬಂದು ನೋಡಿದ್ದರಲ್ಲವೆ ಇಂತಹ ಚೆಲುವಿನ ತಾಣವನ್ನು ಆರಿಸುವ ಪ್ರಶ್ನೆ ಉದ್ಭವಿಸುವುದು?

ಖುಸ್ರೋ : ನಾವೇನೋ ಶಸ್ತ್ರಾಸ್ತ್ರಗಳಿಂದ ದಕ್ಷಿಣವನ್ನು ಗೆದ್ದೆವು ಪ್ರಭು; ಆದರೆ ದಕ್ಷಿಣವು ನಮ್ಮನ್ನು ತನ್ನ ಸ್ವಯಂಭು ಸೌಂದರ್ಯದಿಂದ ಗೆದ್ದಂತಿದೆ!

ರಾಜ ಕು : ನಿಜ ನುಡಿದಿರಿ ಮಲಿಕುಷ್ಟು ಅರಾ. ನಾವು ಗೆದ್ದು ಸೋತಿದ್ದೇವೆ; ದಕ್ಷಿಣವು ಸೋತು ಗೆದ್ದಿದೆ.

ಖುಸ್ರೋ : ಇಲ್ಲಿಯ ಬಾಳೆಯೋ ಚಂದಿರನ ತುಂಡು; ಇಲ್ಲಿಯ ಬಟ್ಟೆಯೋ, ಚಂದಿರನ ಚರ್ಮಕ್ಕಿಂತ ತೆಳುವು, ಚೆಲುವು; ಇಲ್ಲಿಯ ಮಾವೋ, ಜೇನು ತುಂಬಿದ ಸಿಂಪು; ಇಲ್ಲಿಯ ಶಿಲ್ಪಕೃತಿಗಳೋ, ಪರ್ಸಿಯಾದ ಪ್ರಸಿದ್ಧ ಶಿಲ್ಪಿ ಮಾನಿಯನ್ನೂ ನಾಚಿಸುವಂತಹವು! ಇನ್ನು ಇಲ್ಲಿಯ ಚೆಲುವೆಯರ ಬಗ್ಗೆ ಹೇಳಲೇನು?

ರಾಜ ಕು : ನಿಮ್ಮಂಥ ವರಕವಿಗಳು ಹೇಳದಿದ್ದರೆ ಯಾರು ಹೇಳಬೇಕು?

ಖುಸ್ರೋ : ಹೇಳಿದರೆ ಹಾಳಾಗುವುದು ಈ ಚೆಲುವಿನ ಸಿರಿ ದೊರೆಗಳೆ! ಎಲ್ಲಿ ಮಾತು ಸೋತು ಹಿಂದಿರುಗುವದೋ ಆ ಪರಿಯ ಸೊಬಗಿದು!

ರಾಜ ಕು : ಇನ್ನು ಹೆಚ್ಚು ಕಾಲ ಇಲ್ಲಿದ್ದರೆ ದಿಲ್ಲಿಯನ್ನೇ ಮರೆತುಬಿಟ್ಟೇವು! ನಾಳೆ ದಿಲ್ಲಿಯತ್ತ ಪಯಣ.

ಖುಸ್ರೋ : ಸಕಾಲಿಕ ಸಲಹೆ, ರಾಜಕುಮಾರ ಉಲಗಖಾನರು ದೇವಗಿರಿಯ ದೇವಲರಾಣಿಯೊಬ್ಬಳಲ್ಲಿ ಅನುರಕ್ತರಾಗುವ ಮೊದಲೇ ಇಲ್ಲಿಂದ ಹೊರಟು ಬಿಡಬೇಕು. (ನಗೆ)

ನೋಟ ೧೧

ನಿರೂಪಕ : ಮುಲ್ತಾನದಿಂದ ಲಖನೌತಿಯವರೆಗೆ. ದೆಹಲಿಯಿಂದ ದೇವಗಿರಿಯವರೆಗೆ ಈ ದೇಶದ ಬಹುಭಾಗವನ್ನು ನೋಡಿ, ಎಲ್ಲ ಭಾಗಗಳ ಭಾಷೆ, ಜನ, ಜೀವ-ಜಂತು, ರೀತಿ-ರೂಢಿ, ತರು-ಲತಾದಿಗಳ ಬಗ್ಗೆ ಆಳವಾದ ಅನುಭವವನ್ನು ಪಡೆದು ಯಾವುದನ್ನೂ ಉಪೇಕ್ಷಿಸದೆ, ಯಾವುದನ್ನೂ ಬಹು ದೊಡ್ಡದೆಂದು ಭಾವಿಸದೆ, ಬಾದಶಹರಿಂದ ಬಡಬಗ್ಗರವರೆಗೆ, ದರಬಾರಗಳಿಂದ ಖಾನಕಾಹಗಳವರೆಗೆ ಎಲ್ಲ ಜನ, ಎಲ್ಲ ಸಮ್ಮಿಲನಗಳಲ್ಲಿ ಸಮರಸನಾಗಿ ಸೇರಿ, ಎಲ್ಲರನ್ನೂ ಎಲ್ಲವನ್ನೂ ಸಮಾನವಾಗಿ ಪ್ರೀತಿಸಿದ ಈ ಪ್ರತಿಭಾಶಾಲಿ ಕವಿ, ಗದ್ಯಲೇಖಕ, ಇತಿಹಾಸಕಾರ, ಸೈನಿಕ ಮುತ್ಸದ್ಧಿ, ಸೂಫೀ, ಸಂಗೀತಜ್ಞ, ಬಹುಭಾಷಾ ಪಾರಂಗತ ಮಾನವತಾವಾದಿ ಖುಸ್ರೋ ಭಾರತೀಯತೆಯ ಬುನಾದಿಯನ್ನು ಭದ್ರಪಡಿಸಿದ. ಜದೀನ ರಸೂಲ ಆಮದಾ ಕೆ ಜಮದಾಯೆ ದೀನ ಹುಬ್ಬೆ ವತನ ಹಸ್ತ ಜ ಈಮಾನ ಬಯಕೀನ್, ಎಂದರೆ, ದೇಶವನ್ನು ಪ್ರೀತಿಸುವುದು ನಿಶ್ಚಯವಾಗಿ ಧರ್ಮದ ಒಂದು ಅಂಗವು; ಧಾರ್ಮಿಕ ಜನರಿಗೆ ಖಂಡಿತವಾಗಿ ಇದು ಈಶ್ವರೀಯ

ಆದೇಶವು ಎಂದು ಸಾರಿದ. "ಭಾರತವೇ ಸ್ವರ್ಗ" ಎಂದು ಘೋಷಿಸಿ ಅದನ್ನು ಸಮರ್ಥಿಸಲು ಸಬಲ ಕಾರಣಗಳನ್ನು-ಎಂದರೆ ಇಲ್ಲಿಯ ಜ್ಞಾನ-ವಿಜ್ಞಾನಗಳು, ಶ್ರೇಷ್ಠ ಸಂಗೀತ, ಸುಂದರ ಸ್ತ್ರೀಯರು, ಪಂಚತಂತ್ರದ ಕಥೆಗಳು, ತರತರದ ಹಣ್ಣುಗಳು, ತಾಂಬೂಲ ಇತ್ಯಾದಿಗಳನ್ನು ಕೊಟ್ಟಿದ್ದಾನೆ. ತನ್ನ ಅಮರಕೃತಿ ನೂಹಸಿಫರನಲ್ಲಿ ಎಲ್ಲಕ್ಕಿಂತ ಮಿಗಿಲಾಗಿ, ಭಾರತೀಯತೆಯ, ಭಾರತೀಯ ಭಾಷೆಗಳ ಮಹತಿಯ ಸುಳಿವ ಶಾಸನದಂತಿರುವ ಈ ಹಾಡನ್ನು ಹೇಳಿ ಹೋಗಿದ್ದಾನೆ:

ಸಿಂಧೀ ವ ಲಾಹೋರಿ ವ ಕಶ್ಮೀರಿ ವ ಕಬರ್

ದ್ವಾರಸಮುದ್ರೀ ವ ತೆಲಂಗೀ ವ ಗುಜರ್

ಮಾಬರೀ ವ ಗೋರೀ ವ ಬಂಗಾಲ ವ ಅವಧ್

ದೆಹಲಿ ವ ಪೈರಾಂ ಮನಿಷ್ ಅಂದರ ಹಮಾ ಹದ

ಈಂ ಹಮಾ ಹಿಂದವೀಸ್ತ್ ಕಜ ಅಯೂಮೆ ಕುಹನ್

ಜೋಕಿ ಇಬಾರತ್ ಕಮ ಅಜಾಂ ನಿಸ್ತ್ ದರಿ

ಹರ ಕಿ ಬೆಹತಹರೇನ್ ಬಿದಾನದ ಹಕ್ ಅನ್

ಇದರ ಅರ್ಥ : ಭಾರತದ ವಿವಿಧ ಭಾಷೆಗಳು-ಸಿಂಧಿ, ಲಾಹೋರಿ (ಪಂಜಾಬಿ) ಕಾಶ್ಮೀರಿ, ಕಬರೀ, ದ್ವಾರಸಮುದ್ರೀ (ಕನ್ನಡ) ತೆಲಂಗಿ (ತೆಲುಗು) ಗುಜರೀ (ಗುಜರಾಥಿ) ಮಾಬರಿ (ಮಲಬಾರಿ-ಮಲಯಾಳಿ) ಗೋರಿ (ಓರಿಯಾ) ಬಂಗಾಲಿ, ಅವಧ್ (ಲಖನವಿ) ಹಾಗೂ ದೆಹಲಿಯ ಭಾಷೆಗಳು ಬಹಳ ಪ್ರಾಚೀನವಾದವುಗಳು. ಇವುಗಳಲ್ಲಿರುವ ಸಾಹಿತ್ಯವು ಫಾರಸೀ ಸಾಹಿತ್ಯಕ್ಕಿಂತ ಕಡಿಮೆಯದಲ್ಲ. ತನ್ನ ತಂದೆ ತುರ್ಕನಾದರೂ ತನ್ನ ಭಾಷೆ ಹಿಂದವಿಯೆಂದು ಹೇಳಿದ. ಹಿಂದೀ ಹಾಗೂ ಉರ್ದು ಭಾಷೆಗಳೆರಡಕ್ಕೂ ಆದ್ಯ ಪ್ರವರ್ತಕನೆನಿಸಿಕೊಂಡಿರುವ ನವ ಸಂಸ್ಕೃತವನ್ನೊಳಗೊಂಡ ಅನೇಕ ಭಾಷೆಗಳನ್ನು ಕಲಿತು ಅನೇಕ ಭಾಷಾಜ್ಞಾನ ಈ ದೇಶದಲ್ಲಿ ಅನಿವಾರ್ಯವೆಂದು ಅಪರೋಕ್ಷವಾಗಿ ಸಾರಿದ. ಮೇಲ್ಕಾಣಿಸಿದ ಈ ದೇಶದ ಎಲ್ಲ ಭಾಷೆಗಳೂ ಫಾರಸೀ ಭಾಷೆಯಷ್ಟೇ ಸಮೃದ್ಧವೆಂದು ಘೋಷಿಸಿದ ಖುಸರೋ ಈ ದೇಶಕ್ಕೆ ಸರ್ವಮಾನ್ಯವಾಗಬಲ್ಲ ಭಾಷಾನೀತಿಯೊಂದನ್ನು ರೂಪಿಸಿ ಹೋಗಿದ್ದಾನೆ, ಈ ನಾಡಹಾಡಿನಂತಹ ಗೀತೆಯಲ್ಲಿ.

ನೋಟ ೧೨

(ಹಜರತ್ ಔಲಿಯಾ ಅವರ ಖಾನಕಾಹದಲ್ಲಿ)

ಹಜರತ್ ಔಲಿಯಾ : (ನರಳುತ್ತ, ಹಾಸಿಗೆಯಲ್ಲಿ ಹೊರಳುತ್ತ) ನನಗೆ

ಅಲ್ಲಾಹನಿಂದ ಕರೆ ಬಂದಿದೆ. ನಾನಿನ್ನು ಹೊರಡಬೇಕು. ತುರ್ಕುಲ್ಲಾಹ ಇನ್ನೂ ಬರಲಿಲ್ಲವಲ್ಲ? ಅವನನ್ನುಳಿದು ಸ್ವರ್ಗದಲ್ಲಿಯೂ ಕಾಲಿಡೆ ನಾನು.

ಶಿಷ್ಯ : ವಂಗ ಪ್ರದೇಶಕ್ಕೆ ವಿಜಯ ಯಾತ್ರೆಗಾಗಿ ಹೋದವರು ಇನ್ನೂ ಬಂದಿಲ್ಲ ಗುರುವರ. ಇನ್ನೇನು ಬರಬಹುದು. ತಾವು ಈಗಲೇ ಅಲ್ಲಾಹ ಬಳಿ ಹೊರಟರೆ ನಮ್ಮ ಗತಿಯೇನು ಗುರುದೇವ?

ಹಜರತ್ ಔಲಿಯಾ : ಸೂಫೀ ಪಂಥದ, ಚಿಷ್ತಿ ಸಂಪ್ರದಾಯದ ಜಾತ್ಯತೀತ, ವರ್ಗವಿರಹಿತ ಮಾವನ ಪ್ರೇಮ, ನಿರ್ಗತಿಕರ ಅನಾಥರ ಸೇವೆ, ಸರ್ವಧರ್ಮ ಸಮಭಾವ, ಸರ್ವಸಮಾನತೆ, ಸಹೋದರತೆಗಳೇ ನಿಮಗೆ ಗತಿಮತಿಯಾಗಲಿ. ನನಗೀಗ ೯೫ ವರ್ಷಗಳು ತುಂಬಿದುವು. ಇನ್ನೂ ನಿಮ್ಮ ಮಧ್ಯದಲ್ಲಿ ನಾನಿರಬಲ್ಲೆನೆ? ನಾನಿರಲಾರೆ ನನ್ನ ಮರಣಾನಂತರ ತುರ್ಕುಲ್ಲಾಹನೂ ಇರಲಾರ. ಅವನನ್ನು ನನ್ನ ಸಮಾಧಿಯ ಸಮೀಪಕ್ಕೆ ಬರಗೊಡಬೇಡಿರಿ. ಸಮಾಧಿಗೆ ಅಪ್ಪಳಿಸಿ ತಲೆ ಒಡೆದುಕೊಂಡಾನು! ಆದರೆ ಅವನ ಸಮಾಧಿಯನ್ನು ನನ್ನ ಸಮಾಧಿಗೆ ಸಮೀಪದಲ್ಲೇ ಮಾಡಿರಿ. ಮುಂದೆ ಮೊದಲ ಹೂ ಅವನಿಗೆ; ನಂತರ ನನಗೆ. ಯಾರಿದ್ದರೇನು ಇಲ್ಲದಿದ್ದರೇನು ಅಂತರ್‌ಜಾತೀಯ ಸಾಮರಸ್ಯವನ್ನು ಉಳಿಸಿ ಬೆಳೆಸಲು ನನ್ನ ಶಿಷ್ಯರೆಲ್ಲರೂ ಹೆಣಗಲಿ! ನೀತಿಯ, ಪ್ರೀತಿಯ, ದಲಿತರ, ದರಿದ್ರರ ಬಗ್ಗೆ ಸಹಾನುಭೂತಿಯ, ಸೇವಾರತಿಯ ಬಾಳನ್ನವರು ಬಾಳಲಿ, ಇನ್ನು ಅಲ್ಲಾಹನತ್ತ ಪಯಣ. ಲಾ ಇಲಾಹ ಇಲ್ಲಿಲ್ಲಾಹ–ಲಾ ಇಲಾಹ ಇಲ್ಲಿಲ್ಲಾಹ (ಕಣ್ಮುಚ್ಚುವರು)

ಶಿಷ್ಯರು : ಕುರಾಣ ಷರೀಫ್ ಓದುವರು.

ನೋಟ ೧೩

ನಿರೂಪಕ : ಹಗಲಿರುಳೆನ್ನದೆ, ಹಸಿವೆ–ನೀರಡಿಕೆಯೆನ್ನದೆ ದೆಹಲಿಗೆ ಧಾವಿಸಿದ ಖುಸರೋ. ಗುರು ಔಲಿಯಾ ಪೈಗಂಬರವಾಸಿಗಳಾದರೆಂಬ ಸುದ್ದಿ ತಿಳಿಯುತ್ತಲೇ ಗುರು ಸಮಾಧಿಯೆಡೆಗೆ ಓಡಿದ. ದೂರದಲ್ಲಿಯೇ ಗುರ್ವಾಜ್ಞೆಯಂತೆ ತಡೆದರು ಶಿಷ್ಯರು. ಅಲ್ಲಿಂದಲೇ ಹೊಮ್ಮಿತು ಈ ಶೋಕವೇ ಶ್ಲೋಕವಾದ ದ್ವಿಪದಿ.

ಗೋರೀ ಸೋಯೇ ಸೇಜ ಪರ್ ಮುಖ ಪರ ಡಾರೆ ಕೇಶ

ಚಲ ಖುಸರೋ ಘರ್ ಅಪನೆ ರೈನ ಭಯಿ ಸಬ ದೇಶ

ಅಂದದ ಹೂಗಳ ಹಾಸಿಗೆಯಲ್ಲಿ ಚಿರನಿದ್ರೆ ಚಾರುಪ್ರಿಯನಿಗೆ

ಅಂಧಕಾರವೇ ಎಲ್ಲೆಡೆ ಕವಿದಿದೆ! ನಡೆ ಖುಸರೋ ನಿನ್ನಯ ಮನೆಗೆ.

ಖುಸ್ರೋ : ನಾನಿಲ್ಲದೆ ಸ್ವರ್ಗದಲ್ಲಿಯೂ ಕಾಲಿಡೆನೆಂದಿದ್ದಿರಿ ಗುರುದೇವ;

ನಾನಿಲ್ಲದೆ ಹೇಗೆ ಹೊರಟುಹೋದಿರಿ ಹೇಳಿ ಸ್ವರ್ಗಕ್ಕೆ? ತಪ್ಪು ನನ್ನದೇ. ಕವಡೆ ಕವಡೆಗಾಗಿ ಕಾತರಿಸುತ್ತಿದ್ದ ನನಗೆ ಈ ಮಹಾತ್ಮನ ಅನುಗ್ರಹದಿಂದ ಏನೆಲ್ಲವೂ ದೊರೆಯಿತು. ಆದರೂ ನನಗೆ ತೃಪ್ತಿಯಾಗಲಿಲ್ಲ. ಈ ಹಾಳು ಸುಲ್ತಾನನ ಸೇವೆಯನ್ನು ನಿಲ್ಲಿಸಿ ಗುರುಸೇವೆಯಲ್ಲಿ ಮಗ್ನನಾಗಲಿಲ್ಲ. ಧನ ಮಾನ ಸ್ಥಾನಗಳ ದುರಾಶೆಯೇ ನನ್ನನ್ನು ಕೊನೆಯ ದಿನಗಳಲ್ಲಿ ನನ್ನ ಗುರುಗಳಿಂದ ಅಗಲಿಸಿತು.ಸೇವಕರೇ, ನನ್ನ ಸಂಪತ್ತನ್ನೆಲ್ಲ ದೀನದಲಿತರಿಗೆ ದಾನಮಾಡಿರಿ. ನನ್ನದೆನ್ನುವ ತುಣುಕು ಹೆಂಚೂ ಉಳಿಯದಂತೆ ಎಲ್ಲವನ್ನೂ ಬಡವರಿಗೆ ಕೊಟ್ಟುಬಿಡಿರಿ. ಇದುವರೆಗೆ ದಿವ್ಯಾತ್ಮವೊಂದು ದೈಹಿಕವಾಗಿ ಕಾಣುತ್ತಿತ್ತು. ಆಶೀರ್ವದಿಸುತ್ತಿತ್ತು. ಈಗ ಅದು ಇಲ್ಲವಾಗಿದೆ. ಇನ್ನು ಬದುಕಿ ಫಲವೇನು?..... ಇನ್ನು ಬದುಕಿ ಫಲವೇನು?....

ನೋಟ ೧೪

ನಿರೂಪಕ : ಕ್ರಿ.ಶ. ೧೩೨೫ ಏಪ್ರಿಲ್ ೩ ರಂದು ಗುರುಗಳು ಪೈಗಂಬರವಾಸಿಗಳಾದರು. ಅದೇ ವ್ಯಥೆಯಲ್ಲಿ ಕೊರಗಿ ಕೊರಗಿ ಅವರಶಿಷ್ಯ ಖುಸರೋ ಅದೇ ವರ್ಷ ಸಪ್ಟೆಂಬರ್ ೨೬ರಂದು ಗುರುಸಮಾಧಿಗೆ ಸಮೀಪದಲ್ಲಿ ಸಮಾಧಿಸ್ಥರಾದರು. ಎಂಥ ಗುರು-ಎಂಥ ಶಿಷ್ಯ; ಎಂಥ ಜೀವನ ಎಂಥ ಆದರ್ಶ! ಹಜರತ್ ಔಲಿಯಾರ ಉರಸು ಇಂದಿಗೂ ಹಿಂದೂ ಮುಸಲ್ಮಾನರ ಸಂಯುಕ್ತ ಸುಪರ್ವವಾಗಿ ಜರುಗುತ್ತಿದ್ದರೆ ಖುಸರೋನ ಕಾವ್ಯಗಳ ದುಂದುಭಿ ದೆಹಲಿಯಿಂದ ತಾಷಕಂತದವರೆಗೆ ದೇಶವಿದೇಶಗಳ ಪಂಡಿತ ಮಂಡಳಿಗಳಲ್ಲಿ, ಪಾಮರ ಗೋಷ್ಠಿಗಳಲ್ಲಿ ಮೊಳಗುತ್ತಿದೆ. ಖುಸರೋ ಗಜಲ, ಮಸನವಿ, ಕಸೀದಾ ಹಾಗೂ ರುಬಾಯಿಗಳೆಲ್ಲವನ್ನೂ ರಚಿಸಿದ ಅಪ್ರತಿಮ ಪ್ರತಿಭಾಶಾಲಿ. ಇಂಥ ಮಹಾಕವಿಯಾಗುವುದರೊಡನೆ ಅವನು ಆಡುಭಾಷೆಯೊಂದನ್ನು ಕವಿತೆಯ ಮಾಧ್ಯಮವನ್ನಾಗಿ ಮಾಡಿ ಶ್ರೀಸಾಮಾನ್ಯರಿಗಾಗಿ ಕವಾಲಿ, ತರಾನಾ, ಪಹೇಲಿ, ದೋಹೇ, ದೋಸುಖನೇ, ಗಜಲು ಇತ್ಯಾದಿಗಳನ್ನು ರಚಿಸಿ ಜನತೆಯ ಕವಿಯೂ ಆಗಿ ಕಳೆದ ಏಳುನೂರು ವರ್ಷಗಳಿಂದ ಕೋಟಿ ಕೋಟಿ ಜನಸಾಮಾನ್ಯರ ನಾಲಿಗೆಗಳ ಮೇಲೆ ನರ್ತಿಸುತ್ತಿರುವುದು ಕಾವ್ಯದ ಇತಿಹಾಸದಲ್ಲಿಯೇ ಅದ್ಭುತ ಸಾಧನೆಯೆಂದು ಹೇಳಬೇಕು. ಇಲ್ಲಿಗೆ ಮುಗಿಯಲಿಲ್ಲ ಇವನ ಸಾಧನೆ. ಸಂಗೀತದಲ್ಲಿಯೂ ಹೊಸ ಪ್ರಯೋಗಗಳನ್ನು ಮಾಡಿದ! ಹೊಸ ಸಂಗೀತ ಪದ್ಧತಿಯೊಂದನ್ನು ರೂಪಿಸಿದ ; ಹೊಸ ರಾಗಗಳನ್ನು ರಚಿಸಿದ. ಹೊಸ ವಾದ್ಯಗಳನ್ನು ಹುಟ್ಟಿಸಿದ ಹಿರಿಮೆ ಅವನದು. ಎರಡು ಹಿರಿಯ ಸಂಸ್ಕೃತಿಗಳ ಶ್ರೇಷ್ಠ ಗುಣಗಳ ಸಂಗಮವಾಗಿದ್ದ ಅವನು. ಒಟ್ಟಿನಲ್ಲಿ ಅವನು ಭಾರತಕ್ಕೆ ಹೊಸ ಕೀರ್ತಿಯನ್ನು, ಭಾರತೀಯತೆಗೆ ಹೊಸ ಬಲವನ್ನು, ಭಾರತೀಯರಿಗೆ ಸಹಜೀವನದ ಸಂದೇಶವನ್ನು ನೀಡಿದ ಸಮನ್ವಯ ಸಾಧಕ, ನವೋದಯದ ನಾಯಕ.

ನೋಟ ೧೫

(ಮತ್ತೆ ದೆಹಲಿಯ ವಿಶೇಷ ಸ್ವರಗಳು; ಯಮುನಾಜಲ ಕಲಕಲರವ)

ಯಮುನೆ : ಇಷ್ಟೆಲ್ಲ ಕೇಳಿಯೂ ಖುಸರೋ ಎಂಥ ಯುಗದ ಪ್ರವರ್ತಕನೆಂಬುದೇ ಸರಿಯಾಗಿ ಗೊತ್ತಾಗಲಿಲ್ಲ ಸಖಿ.

ದೆಹಲಿ : ಗೆಳತಿ ಯಮುನೆ, ಈ ಘಟನಾಚಕ್ರದ ಚಿತ್ರವನ್ನು ಸರಿಯಾಗಿ ತೆರೆಗಣ್ಣುಗಳಿಂದ ನೀನು ನೋಡಲಿಲ್ಲವೆಂದು ತೋರುತ್ತಿದೆ. ದಡ-ಗಿವಿಗಳಿಂದ ಕೇಳಲೂ ಇಲ್ಲವೆ? ಅವನದೊಂದು ದ್ವಿಪದಿಯನ್ನು ಕಿವಿಗೊಟ್ಟು ಕೇಳು.

ನಾ ತುರ್ಕ ಕರದ ಬರ ಹಿಂದೂ ಜಫಾಯ

ನಾ ಹಿಂದೂ ರಾ ಮುಖಾಲಿಫ್ ಬೂದ ರಾಯೆ

(ತುರ್ಕ ಮುಸಲ್ಮಾನರು ಹಿಂದೂಗಳ ಮೇಲೆ ದಬ್ಬಾಳಿಕೆ ಮಾಡುವುದಿಲ್ಲ. ಮತ್ತು ಹಿಂದೂಗಳು ತುರ್ಕರನ್ನು ವಿರೋಧಿಸುವುದಿಲ್ಲ) ಖುಸರೋ ಇಂಥ ಹಿಂದೂ ಮುಸಲ್ಮಾನ ಮೈತ್ರಿಯುಗದ, ಮಾನವತಾಯುಗದ, ಭಾರತೀಯತೆಯ ಯುಗದ, ನೂತನ ಪ್ರಯೋಗಾವಿಷ್ಕಾರಗಳ ಯುಗದ, ಸಮನ್ವಯ ಯುಗದ, ಶ್ರೀಸಾಮಾನ್ಯರ ಯುಗದ, ಭಾಷಾ ಬಾಂಧವ್ಯದ, ಸರ್ವಭಾಷಾ ಸಮದೃಷ್ಟಿಯ ಯುಗದ ಸಮರ್ಥಕ, ಆರಾಧಕ.

ಯಮುನೆ : ಅಂಥ ಯುಗ ಮೊಗವೆತ್ತಿತೇ ಇಲ್ಲಿ ವಾಸ್ತವದಲ್ಲಿ?

ದೆಹಲಿ : ನೋಡು ಯಮುನೆ, ನಿನ್ನಲ್ಲಿ ನೀರಿಗೆ ಬರವಿದೆಯೆ?

ಯಮುನೆ : ಇಲ್ಲ.

ದೆಹಲಿ : ಹೀಗಿದ್ದೂ ಯಾರಾದರೂ ನಿನ್ನ ತೀರದಲ್ಲಿಯೇ ನಿಂತು ನೀರಡಿಕೆ, ನೀರಡಿಕೆಯೆಂದು ಬೊಬ್ಬೆಯಿಟ್ಟರೆ ನೀನೇನು ಮಾಡುವೆ? ಕೈಗೊಂಡು ಕುಡಿವವರಿಗೆ ತಾನೆ ನಿನ್ನ ನೀರು?

ಯಮುನೆ : ಹೌದು.

ದೆಹಲಿ : ಕೈಗೊಂಡು ಕುಡಿಯದೆ ಯಮುನೆಯಲ್ಲಿ ನೀರೇ ಇಲ್ಲವೆಂದು ವಾದಿಸಿದರೆ ನೀನೇನು ಮಾಡುವೆ?

ಯಮುನೆ : ಕಲ್ಲೋಲ ಕಲಕಲದಲ್ಲಿ ನಕ್ಕುಬಿಡುವೆ.

ದೆಹಲಿ : ಖುಸರೋನ ವಿಚಾರಧಾರೆಯೂ ನಿನ್ನಂತೆ ಪಾವನ ಪ್ರವಾಹವಾಗಿ ಹರಿಯುತ್ತಿದೆ. ಅದರ ನೀರು ತೆಗೆದುಕೊಂಡು ಭಾರತೀಯರೆಲ್ಲ ಕುಡಿದರೆ ಅಂದೇ ಇಲ್ಲಿ ಅವನ ಕನಸಿನ ಯುಗ ಪ್ರಾರಂಭವಾಗುತ್ತದೆ. ಇದೇನು ನಿನ್ನ ತರಂಗಗಳು ಏನನ್ನೋ ಹಾಡುತ್ತಿರುವಂತಿದೆ?

ಯಮುನೆ : ನಿತ್ಯ ನನ್ನಿಂದ ನೀರೊಯ್ಯುವ ನಾರಿಯರು ಏನನ್ನೋ ಹಾಡುತ್ತಲಿರುತ್ತಾರೆ. ಅದನ್ನು ನನ್ನ ತೆರೆಗಳು ಮರುಳಿಸುತ್ತಿರಬಹುದೀಗ. ದೆಹಲಿ, ಚೆನ್ನಾಗಿ ಆಲಿಸು. ಇದು ಖುಸರೋನ ಹಾಡು, ಸಾಮಾನ್ಯ ಲಲನೆಯರ ಲಸನ್ನಾಟ್ಯಮಂಚದಲ್ಲಿ ಲಲಿತ ಲಾಸ್ಯಗೈಯುವ ಹಾಡು

ಬಹುತ ಕಠಿನ ಹೈ ಡಗರ ಪನಘಟಕಿ

ಕೈಸೇ ಮೈ ಭರ ಲಾವೂಂ ಮಧುವಾಸೇ ಮಟಕೀ

ಪನಿಯಾ ಭರನ ಕೋ ಮೈಂ ಜೋ ಗಯಿ ಥೀ

ದೌಡ ಝುಪಟ ಮೋರಿ ಮಟಕೀ ಟಪಕೀ

ಬಹುತ್ ಕಠಿನ ಹೈ ಡಗರ ಪನಘಟಕೀ

ಖುಸರೋ ನಿಜಾಮಕೆ ಬಲಬಲ ಜೀಯೇ

ಲಾಜ ರಖೋ ಮೋರೆ ಘೂಂಘಟ್ ಪಟಕೀ

ಬಹುತ್ ಕಠಿನ ಹೈ ಡಗರ ಪನ ಘಟಕಿ

ದೆಹಲಿ : ಎಂಥ ಮಧುರ ಭಾಷೆ. ಎಂಥ ಸುಂದರ ಭಾವ. ಇದನ್ನು ಅವನೇ ತನ್ನ ಕಿನ್ನರಕಂಠದಿಂದ ಹಾಡಿದ್ದರೆ ಅದೆಷ್ಟು ಸರ್ವ ಸಮ್ಮೋಹಕವಾಗಿರುತ್ತಿದ್ದಿತೋ! ಅಂತೆಯೇ ಸುಲ್ತಾನರಿಂದ ಸಾಮಾನ್ಯರವರೆಗೆ ಎಲ್ಲರ ಆದರಾಭಿಮಾನಗಳನ್ನು ಗಳಿಸಿದ್ದನವನು. ರಾಜದರಬಾರಗಳಲ್ಲಿ ಖಿಲ್ಲತ್ತುಗಳನ್ನು ಸ್ವೀಕರಿಸುವಾಗಿನ ಸಂತೋಷಕ್ಕಿಂತ ವಸಂತಪಂಚಮಿಯ ಉತ್ಸವದಲ್ಲಿ ಹಾಡುತ್ತ, ಕುಣಿಯುತ್ತ ಗುಲಾಲು ಎರಚುವುದರಲ್ಲಿ ಹೆಚ್ಚಿನ ಸಂತೋಷವನ್ನು ಪಡೆಯುತ್ತಿದ್ದನವನು. ತನ್ನ ಗುರುಗಳೊಡನೆ ವಸಂತಪಂಚಮಿ, ಫೂಲವಾಲೋಂಕಿ ಸೈರ ಈ ಹಬ್ಬಗಳು ಹಿಂದೂ ಮುಸಲ್ಮಾನರಿಬ್ಬರೂ ಸೇರಿ ಆಚರಿಸುವ ರಾಷ್ಟ್ರೀಯ ಹಬ್ಬಗಳಾಗುವಂತೆ ಮಾಡಿದನವನು.

ಯಮುನೆ : ಏನಿದು ದೆಹಲಿ? ನಿನ್ನತ್ತಣಿಂದ ಈಗ ಉಲ್ಲಾಸ ಘೋಷಗಳು ಕೇಳತೊಡಗಿವೆ?

ದೆಹಲಿ : ಓ ಮರೆತೆ; ಇಂದು ವಸಂತ ಪಂಚಮಿ. ಸುಗ್ಗಿಯ ಸ್ವಾಗತ. ಹಿಂದೂ ಮುಸಲ್ಮಾನರಿಬ್ಬರೂ ಸೇರಿ ಸಂಯುಕ್ತವಾಗಿ ಆಚರಿಸುತ್ತಲಿರುವರಿದನ್ನು. ಬಹುಶಃ ಖುಸರೋನ ಇನ್ನೊಂದು ಹಾಡನ್ನು ನಾವೀಗ ಕೇಳಬಹುದು. ಖುಸರೋ ಮೃತನಾಗಿಲ್ಲ; ಬದುಕಿದ್ದಾನೆ –ಇಂಥ ಉತ್ಸವಗಳಲ್ಲಿ ಕೋಟಿ ಕೋಟಿ ಜನರ ಹೃದಯಗಳಲ್ಲಿ.

ಯಮುನೆ : ಸಾಕು ನಿನ್ನ ಸಂಭಾಷಣೆ–ಕೇಳು–ಸಮೂಹಗಾನ :

ಆಜ ರಂಗ ಹೈ

ಐ ಮಾಂ ರಂಗ ಹೈ

ಮೋರೇ ಮಹಬೂಬ ಕೆ ಘರ ರಂಗ ಹೈ

ಸಜನ ಮಿಲಾನಾ ಅಯ್ ಸಜನ ಮಿಲಾನಾ

ಮೋರೆ ಘರ ಆಜ ರಂಗ ಹೈ

ಆಜ ರಂಗ ಹೈ

ಮೋಹೆ ಪೀರ ಪಾಯೋ ನಿಜಾಮುದ್ದೀನ ಔಲಿಯಾ

ನಿಜಾಮುದ್ದೀನ ಔಲಿಯಾ ನಿಜಾಮುದ್ದೀನ ಔಲಿಯಾ

ಆಯ ಮಾಂ ರಂಗ ಹೈ

ನಿಜಾಮುದ್ದೀನ ಔಲಿಯಾ ಜಗ ಉಜಿಯಾರ

ಜಗ ಉಜಿಯಾರಾ ವಹ ಜೋ ಜಗ ಉಜಿಯಾರ

ಅವರ್ ಮಾಂ ರಂಗ ಹೈ

ಆಜ್ ರಂಗ ಹೈ ಮಾಂ ರಂಗ ಹೈ

■■

ಅನುಬಂಧಗಳು

ಅನುಬಂಧ ೧

ಪ್ರಕಾಶಕರ ಮಾತು

ನಮ್ಮ ತಂದೆಯವರು ಲಿಂಗೈಕ್ಯರಾದ ಮೇಲೆ ಅವರ ಮೂರು ಆಧುನಿಕ ವಚನ ಸಂಕಲನಗಳನ್ನು 'ಸಮಗ್ರ ವಚನಗಳು' ಎನ್ನುವ ಶೀರ್ಷಿಕೆಯಲ್ಲಿಯೂ, ಅವರ ಎಂಟು ಕವನ ಸಂಕಲನಗಳನ್ನು 'ಸಮಗ್ರ ಕಾವ್ಯ' ಎನ್ನುವ ಶೀರ್ಷಿಕೆಯಲ್ಲಿಯೂ ಶ್ರೀಗಿರಿ ಪ್ರಕಾಶನದ ಮೂಲಕ ಹೊರತಂದಿದ್ದೆವು. ಅವು ನಮ್ಮ ನಿರೀಕ್ಷೆ ಮೀರಿ ಸಹೃದಯ ಓದುಗರಿಂದ ಮೆಚ್ಚುಗೆ ಗಳಿಸಿದವು. ಈ ಉತ್ಸಾಹದ ಭರದಲ್ಲಿ ನಾವೀಗ ನಮ್ಮ ತಂದೆಯವರ 'ಸಮಗ್ರ ನಾಟಕಗಳು' ಕೃತಿಯನ್ನು ಹೊರ ತರುತ್ತಿದ್ದೇವೆ. ಈ ನಾಟಕಗಳು ನಮ್ಮ ತಂದೆಯವರ ಐದು ದಶಕಗಳ ಬರಹಗಳಾಗಿವೆ. ಅವರಿಗೆ ಅತ್ಯಂತ ಪ್ರಿಯವಾದ ಸಾಹಿತ್ಯ ಪ್ರಕಾರಗಳಲ್ಲಿ ನಾಟಕವೂ ಒಂದು. ಅವರು ಬಿ.ಎ. ಓದುತ್ತಿದ್ದಾಗಲೇ ಬಸವಣ್ಣನವರ ಬದುಕನ್ನು ನಾಟಕಕ್ಕೆ ಅಳವಡಿಸುವ ಒಂದು ಮಹತ್ವದ ಪ್ರಯತ್ನ ನಡೆಸಿದರು. ಆ ಪ್ರಯೋಗ ಕನ್ನಡಕ್ಕೆ ಹೊಸದು, ಬಹುಶಃ ಮೊದಲನೆಯದು. ಬಸವಣ್ಣನವರನ್ನು ಕುರಿತು ಬಂದ ಕಾವ್ಯ, ಪುರಾಣ ಹಾಗೂ ಸ್ವತಃ ಬಸವಣ್ಣನವರೇ ಬರೆದ ವಚನಗಳನ್ನು ಆಧರಿಸಿ 'ಆತ್ಮಾರ್ಪಣ' ಎನ್ನುವ ನಾಟಕ ಬರೆದು (೧೯೪೨) ಅದನ್ನು ಗೆಳೆಯರ ಜೊತೆ ಸೇರಿ ರಂಗಪ್ರಯೋಗ ಮಾಡಿ ಅದರಲ್ಲಿ ಬಸವಣ್ಣನ ಪಾತ್ರವನ್ನು ತಾವೇ ನಿರ್ವಹಿಸಿ ರಂಗಪ್ರೇಮಿಗಳ ಮೆಚ್ಚುಗೆಗೆ ಪಾತ್ರರಾದರು. ಆ ಮೊದಲ ನಾಟಕಕ್ಕೆ ದೊರೆತ ಪ್ರೋತ್ಸಾಹ ಅಭೂತಪೂರ್ವವಾದುದು. ಅವರ ಈ ನಾಟಕಕ್ಕೆ ರಂಗಪ್ರೇಮಿಗಳು ಸುವರ್ಣ ಪದಕವನ್ನು ಕೊಟ್ಟು ಹರೆಯದ ನಮ್ಮ ತಂದೆಯವರನ್ನು ಸನ್ಮಾನಿಸಿದ್ದು ಅವರ ಬದುಕಿನಲ್ಲಿ ಸ್ಮರಣೀಯ ಘಟನೆ. ನಮ್ಮ ತಂದೆಯವರು ವೃತ್ತಿರಂಗಭೂಮಿಯಿಂದ ಪ್ರಭಾವಿತರಾಗಿ ನಾಟಕ ರಚನೆ ಪ್ರಾರಂಭಿಸಿದರೂ ಅವರು ಆಧುನಿಕ ರಂಗಪ್ರಯೋಗಗಳ ಕಡೆಗೂ ಗಮನ ಹರಿಸಿದರು. ಆ ಪ್ರಯೋಗಗಳಲ್ಲಿ ಬಾನುಲಿಗೆ ಬರೆದ ರೂಪಕಗಳು ಹೆಚ್ಚಿನ ಸಂಖ್ಯೆಯಲ್ಲಿವೆ. ಅವರ ನಾಟಕಗಳ ಕಥಾವಸ್ತು ಕರ್ನಾಟಕಕ್ಕೇ ಸೀಮಿತವಾಗದೆ ಭಾರತ, ಕಾಶ್ಮೀರ, ಪರ್ಷಿಯಾ, ಇಂಗ್ಲೆಂಡ್–ಹೀಗೆ ವಿಶ್ವವ್ಯಾಪಿಯಾಗಿದೆ. ಅವರು ಕರ್ನಾಟಕದ ಮಹಾನ್ ಶರಣ ಶರಣೆಯರ ಬದುಕನ್ನು ಕುರಿತು, ಗುಪ್ತಸಾಮ್ರಾಟ ನರಸಿಂಹ ಬಾಲಾದಿತ್ಯನನ್ನು ಕುರಿತು, ತಮಿಳಿನ ಶಿಲಪ್ಪದಿಕಾರಂ ಮಹಾಕಾವ್ಯವನ್ನು

ಆಧರಿಸಿ, ಉರ್ದೂ : ಫಾರಸೀ ಕಾವ್ಯ ಕಥೆಯನ್ನು ಆಧರಿಸಿ, ಮಹಾಮಾನವ ಬರ್ನಾರ್ಡ್ ಷಾನ ಬದುಕು–ಚಿಂತನೆಗಳಿಂದ ಪ್ರಭಾವಿತರಾಗಿ, ಗಾಂಧೀಜಿಯವರ ಚಿಂತನೆಗಳಿಂದ ಪ್ರಭಾವಿತರಾಗಿ, ಉರ್ದೂ ಹಿಂದಿ ಕವಿ ಅಮೀರ್ ಖುಸ್ರೋನ ಜೀವನವನ್ನು ಆಧರಿಸಿ, ಮಹಾತ್ಮಾ ಕಬೀರನ ಭಕ್ತಿಮಯವಾದ ಬದುಕನ್ನು ಆಧರಿಸಿ, ಕಾಶ್ಮೀರದ ಕವಯಿತ್ರಿ ಹಬ್ಬಾ ಖಾತೂನ್‌ಳ ದುರಂತ ಬದುಕನ್ನು ಆಧರಿಸಿ, ಇಂಗ್ಲಿಷ್ ಕವಿ ಥಾಮಸ್ ಹುಡ್‌ನ ಪ್ರಸಿದ್ಧ ಶೋಕಗೀತೆಯಿಂದ ಪ್ರಭಾವಿತರಾಗಿ, ಹಿಂದೀ ಭಕ್ತಿಕಾವ್ಯದ ಒಂದು ಕಿರು ಸೆಲೆಯಾದ ಭ್ರಮರಗೀತ್ ಪರಂಪರೆಯಿಂದ ಪ್ರಭಾವಿತರಾಗಿ ನಾಟಕಗಳನ್ನು ಬರೆದ ನಮ್ಮ ತಂದೆಯವರು ಕರ್ನಾಟಕ–ಭಾರತ–ವಿಶ್ವವನ್ನು ಪ್ರತಿನಿಧಿಸುವ ಪಾತ್ರಗಳನ್ನು ಜೀವಂತವಾಗಿ ಬಾನುಲಿ ರೂಪಕಗಳ ಮೂಲಕ ಪರಿಚಯಿಸಿದರು. ಅವರ ಮೂರು ನಾಟಕಗಳು–ಮಧುಮಹೋತ್ಸವ, ತುಂಗಭದ್ರ–ಮಂಗಲೆ, ರಜತರೇಖೆ–ನಿರ್ದಿಷ್ಟ ಕಥಾವಸ್ತುವನ್ನು ಒಳಗೊಂಡಿರದ ವಿಶಿಷ್ಟ ಪ್ರಯೋಗಗಳು. ಈ ರೂಪಕಗಳಲ್ಲಿ ಅವರ ಕವಿಮನದ ಭಾವವಿತಾನವನ್ನು ಗುರುತಿಸಬಹುದು.

ನಮ್ಮ ತಂದೆಯವರ ನಿಧನಾನಂತರ ನಾವು ಶ್ರೀಗಿರಿ ಪ್ರಕಾಶನದ ವತಿಯಿಂದ ಹೊರತರುತ್ತಿರುವ ಐದನೆಯ ಗ್ರಂಥ 'ಸಮಗ್ರ ನಾಟಕಗಳು'. 'ಆತ್ಮಾರ್ಪಣೆ' ೧೯೪೨ರಲ್ಲಿ ಪ್ರಕಟವಾಯಿತು. ಅವರ ನಾಟಕಗಳೆಲ್ಲವೂ ನಮ್ಮಲ್ಲಿರಲಿಲ್ಲ. ಅವುಗಳಿಗಾಗಿ ನಾವು ತೀವ್ರ ಶೋಧ ನಡೆಸಿದೆವು. ನಮ್ಮ ಹಿರಿಯ ಅಕ್ಕ ಶ್ರೀಮತಿ ವಿಜಯಾ ನಂದೀಶ್ವರ ಹಾಗೂ ಶ್ರೀ ಕೆ.ಎನ್.ಎಂ. ನಂದೀಶ್ವರ ಅವರು ನಮಗೆ 'ಭ್ರಮರದೂತ' ನಾಟಕವನ್ನು ದೊರಕಿಸಿಕೊಟ್ಟರಷ್ಟೇ ಅಲ್ಲದೆ 'ಸಮಗ್ರ ನಾಟಕಗಳು' ಪ್ರಕಟಣೆಯ ಸಂದರ್ಭದಲ್ಲಿ ನಮ್ಮನ್ನು ಪ್ರೋತ್ಸಾಹಿಸಿ ಮಾರ್ಗದರ್ಶನ ಮಾಡಿದರು. 'ಪದ್ಮಶ್ರೀ' ಬಿ. ಶಿವಮೂರ್ತಿಶಾಸ್ತ್ರಿಗಳ ಮಕ್ಕಳಾದ ಶ್ರೀ ರೇಣುಕಾ ಪ್ರಸಾದ್‌ರವರು ತಮ್ಮ ತಂದೆಯವರು ಸಂಗ್ರಹಿಸಿದ್ದ ಪುಸ್ತಕಗಳನ್ನೆಲ್ಲ ಬಸವ ಸಮಿತಿಗೆ ದಾನಮಾಡಿದ್ದರು. ಆ ಸಂಗ್ರಹದಲ್ಲಿ ನಾವು 'ಆತ್ಮಾರ್ಪಣೆ'ಯನ್ನ ಹುಡುಕಿ ತೆಗೆದೆವು. ಈ ಕೃತಿ ದೊರಕಿಸಿಕೊಟ್ಟದ್ದಕ್ಕಾಗಿ ನಾವು ಶ್ರೀ ರೇಣುಕಾ ಪ್ರಸಾದ್ ಹಾಗೂ ಬಸವ ಸಮಿತಿಗೆ ಆಭಾರಿಯಾಗಿರುವೆವು. 'ರಜತರೇಖೆ' ನಾಟಕವನ್ನು ನಾವು ಧಾರವಾಡದ ಕರ್ನಾಟಕ ಕಾಲೇಜಿನ ಗ್ರಂಥಾಲಯದಿಂದ ಪಡೆದೆವು. ಇದನ್ನು ದೊರಕಿಸಿಕೊಡಲು ನಮಗೆ ಡಾ. ಭದ್ರೇಶ್ ವಸ್ತ್ರದ ಹಾಗೂ ಶ್ರೀ ಮೂಗಿ ರಾಜಶೇಖರ್ ನೆರವಾದರು. ಹೆಸರಾಂತ ಬರಹಗಾರ್ತಿ, ಕವಯತ್ರಿ ಹಾಗೂ ಗಾಯಕಿಯಾದ ಶ್ರೀಮತಿ ರೇಣುಕಾ ರಾಜಶೇಖರ್‌ರವರು 'ಸಮಗ್ರ ನಾಟಕಗಳು' ಕೃತಿಯನ್ನು ಹೊರತರುವಲ್ಲಿ ಮೌಲಿಕವಾದ ನೆರವು ನೀಡಿರುವರು. ಈ ಸಮಗ್ರ ನಾಟಕ ಸಂಪುಟವನ್ನು ಸಿದ್ಧಪಡಿಸುವಲ್ಲಿ ನಮ್ಮ ಆತ್ಮೀಯರಾದ ಡಾ. ಎಸ್. ವಿದ್ಯಾಶಂಕರ ಅವರು ವಿಶೇಷವಾಗಿ ಶ್ರಮಿಸಿರುವರು. ಇದರ ಡಿಟಿಪಿ ಮಾಡಿದವರು ವರ್ಷಿಣಿ ಗ್ರಾಫಿಕ್ಸ್‌ರವರು. ಇದನ್ನು ಸುಂದರವಾಗಿ ಮುದ್ರಿಸಿದವರು

ಸ್ನೇಹಾ ಪ್ರಿಂಟರ್ಸ್‌ರವರು. ಈ ಕೃತಿಗೆ ಕಳಶಪ್ರಾಯವಾದ ಮುನ್ನುಡಿಯ ತಿಲಕವಿಟ್ಟವರು ನಾಡಿನ ಖ್ಯಾತ ವಿದ್ವಾಂಸರಾದ ಪ್ರೊ. ಸಿದ್ಧಲಿಂಗ ಪಟ್ಟಣಶೆಟ್ಟಿ ಅವರು. ಅವರು ನಮ್ಮ ತಂದೆಯವರ ಪ್ರೀತಿಯ ಗೆಳೆಯರು. ಆ ಅಭಿಮಾನದಿಂದ ಅವರ ಎಲ್ಲ ನಾಟಕಗಳನ್ನೂ ಆಮೂಲಾಗ್ರವಾಗಿ ಓದಿ ದೀರ್ಘವಾದ ಮುನ್ನುಡಿ ಬರೆದಿರುವರು. ಇಷ್ಟು ಹೃದಯಸ್ಪರ್ಶಿಯಾಗಿ ನಮ್ಮ ತಂದೆಯವರ ನಾಟಕಗಳ ಬಗೆಗೆ ಪ್ರಸ್ತಾಪಿಸಿರುವುದು ನಮಗೆ ಸಂತೋಷವನ್ನುಂಟುಮಾಡಿದೆ. ಈ ಕೃತಿಗೆ ಸುಂದರವಾದ ರಕ್ಷಾಪತ್ರ ವಿನ್ಯಾಸ ಮಾಡಿದವರು ಖ್ಯಾತ ಕಲಾವಿದ ಶ್ರೀ ಮೋನಪ್ಪನವರು. ಈ ಎಲ್ಲ ಮಹನೀಯರಿಗೂ ನಮ್ಮ ಅಂತಃಕರಣದ ಕೃತಜ್ಞತೆಗಳು.

ನಮ್ಮ ತಂದೆಯವರು ಬರೆದಿರುವ ಕೃತಿಗಳೆಲ್ಲವನ್ನು ವ್ಯವಸ್ಥಿತವಾಗಿ ಆಯಾ ಸಾಹಿತ್ಯ ಪ್ರಕಾರಗಳಲ್ಲಿ ಸೇರಿಸಿ ಓದುಗರಿಗೆ ಅವರ ಸಮಗ್ರ ಕೃತಿಗಳು ದೊರೆಯಲಿ ಎನ್ನುವ ಸದುದ್ದೇಶದಿಂದ ನನ್ನೊಂದಿಗೆ ನನ್ನ ಪತ್ನಿ ಶ್ರೀಮತಿ ಲತಾ ಪುರಾಣಿಕ ಅವರು ಸಮನಾಗಿ ದುಡಿದಿರುವರು. ನಮ್ಮ ಪ್ರಾಮಾಣಿಕ ಪ್ರಯತ್ನದಿಂದ ಓದುಗರು ಹಾಗೂ ನಮ್ಮ ತಂದೆಯವರ ಅಭಿಮಾನಿಗಳು ಸಂತೋಷಗೊಂಡರೆ ನಮ್ಮ ಶ್ರಮ ಸಾರ್ಥಕವಾದಂತೆ. ಮುಂದೆಯೂ ನಮ್ಮ ಪ್ರಯತ್ನಕ್ಕೆ ಸಾಹಿತ್ಯಾಸಕ್ತರ ಬೆಂಬಲವಿದೆಯೆಂದು ಭಾವಿಸುವೆವು.

– ಪ್ರಸನ್ನಕುಮಾರ್ ಪುರಾಣಿಕ

ಅನುಬಂಧ ೨

ATMARPANE
FOREWORD

This delightful and thought-provoking play, "Atmarpana" or "Self-immolation", by my esteemed friend "Kavyananda", is a welcome addition to the store of literature that is rapidly growing round that great Renaissance that convulsed and churned the entire Karnataka and the surrounding areas in the twelfth Century. A problem play as it is, it is all the more welcome in this "Yuga-Sandhi"- when great events are happening confronting the bewildered human being with several complex problems relating to the eternal verities and values of life. As the title of the play shows the central theme round which the author has skilfully woven his plots is the spirit of self-abnegation (or "Thyaga", which, according to the Upanishads, is the only way leading to Perfection and Deliverance) which moved the great heroes of that revolution to deeds of imperishable glory. The hero of this play is the central figure of that Renaissance. The Kannadigas who claim this universal figure for themselves, call him in the affectionae terms as Basavanna, though he is better known in literature as Basawaraja or Basaveshwara.

The life history of this great savant is shrouded in mystery. The several conflicting versions and all sorts of legends that have sprung round his name by reason of efflux of time have intensified this mystery. But it is gratifying to note that some important inscriptions which have been recently unearthed, together with the revival of the great 'Vachana' literature have contributed not a little towards clearing up this mystery. The following brief outline of the major events in the life of this great soul will be found useful in following and appereciating the main theme that is being portrayed in this drama. Born in a pious Brahmin family in or about A. D. 1132 in Ingaleshwar-Bagewadi in the modern Bijapur District, Basaveshwar raised the standard of revolt against the established tradition even in

his boyhood by discarding ritualistic and over-formal observances. He went in search of Divine Light and settled down in the holy shrine of Sangameshwar at the confluence of the Krishna and Malapahari. In the beautiful and picturesque surroundings of that holy place he spent his time in divine joy and meditation along with his sister, Nagalambika, studying the hidden secrets of life at the feet of his Guru, Jatavedamuni, But soon the call for action came. This call for the redemption of humanity proved irresistible to this fiery soul and he entered into active life as the Prime Minister of King Bijjala, who was then occupying the great Chalukyan Throne at Kalyan.

A new spirit was then throbbing the life of the nation. The national soul was awake even prior to the advent of Basaveshwar and was struggling to free itself from the age-long-evil that ruled society in the name of religion. The society was sick of the decaying and degenerating traditional dogma whcih was hampering the spontaneous flow of elemental passions and human insincts. People were clamouring for a living and human religion-a religion of the heart and not of the head.Basaveshwar, who was the embodiment of this new spirit, gave such a strong and dynamic impetus to this new movement that ere long he was able to bring about a new order of things and inaugurate a new era. He breathed a new life over the chaos of the human heart and brought it to symmetry and order. He infused an undying hope n the minds of the lowly and the down trodden by scoffing at the idea that God-consciousness can be achieved only by the chosen few. He proclaimed that the gates of heaven are open to all, irrespective of caste or creed, provided one has the will and necessary discipline to achieve God-head. Under his banner rallied thousands of thousands of men and women, fired with the Zeal of holiness, fortified with the eternal hope in the Lord and nerved to courage by their sympathy for the poor, the fallen and the down-trodden. These noble heroes of the new order went over the lengh and breadth of the land preaching his gospel of Diving Love.

The Society discovered the Soul and surrendered itself to its spontaneity, as this new message of hope and consequent awakening spread to all strata of society. The old order brooked all this as it felt itself helpless against the surging wave of awakened consciousness. But the inclusion in the new fold the so-called untouchables and the bold and revolutionary idea of a matrimonial

alliance between and 'untouchable', Haralayya and an orthodox Brahmin, Madhuvayya shocked the susceptibilities of the old order. The inevitable clash occurred. The cry of religion being in danger was raised by interested persons. There was revolution which, unfortunately for this Messenger of Love and Peace, ended in bloodshed and regicide. This tragic turn of events naturally broke the heart of this great apostle of "ahimsa". He became disgusted with the world which could not come up to his level. He responded to the call of his inner voice and sought refuge in the lord of his heart at Sangameshwar. Such is the bare outline of the life of this great soul who dedicated his life for the emancipation of humanity from earthly miseries. He combined in him-self a fiery prophet, a philosopher, a poet, a political and a socio-religious reformer and above all, a true servant of humanity. Equality of all living beings and an equal opportunity for all to live in happiness, peace and harmony in this world and to attain God-consciousness through such living-this epitomises the teachings of this great preceptor who came into this world in an age which had forgotten these fundamental principles of true humanity. Though a wide gulf of eight centuries yawns between the age of Basaweshwar and our present age his message appeals to the modern mind so intensely and applies to modern conditions so vividly that we are apt to forget this long efflux of time. It is this feature that gives his illustrious preceptor a unique place in the galaxy of world teachers. Karnataka is justly proud of this great contribution of hers to the betterment of the World.

I heartily congratulate the author of this drama or the success he has achieved in portraying that never-to-be forgotten event in the history of the Karnataka. Besides having had the pleasure of going through this play, I had also the opportunity of witnessing its being staged by the members of the Veerashiva Taruna Sangha, at Hyderabad, and I dare say the performance was a unique success, creating a profound influence on the audience. The style used is simple and vigorous. The author has made free and lavish use of the "Vachanas" and they have greatly enriched the general tone of the drama. He has thus rendered a valuable service in popularising the Vachana literature which is bringing about an imperceptible revolution in the thought and culture of the Karnataka people. The verbal suppleness of the 'Vachanas' gives them a quiet inimitable and enchanting cadence, which is all their own and the author has made use of them to the best advantage, giving them their

proper setting. He has also set to music some of the well-known 'Vachanas'. Another unique feature that appeals to the readers and the audience alike is the rich fund of racy humour that sets off the rather serious tone that naturally pervades this problem play. I am sure that this unique play will have the warm reception of the Kannadigas that it richly deserves.

Kurnool **-T.H.M. SADASIVAYYA, M.A., B.L.**

15-11-41 **(The Madras Judicial Service)**

ಸಮ್ಮೇಳನಾಧ್ಯಕ್ಷರ ಶುಭಾಕಾಂಕ್ಷೆ

'ಆತ್ಮಾರ್ಪಣ' ವೆಂಬುವ ನಾಟಕವನ್ನು ಆದಿಯಿಂದ ಅಂತ್ಯದವರೆಗೆ ಓದಿ ನೋಡಿ ಬಹಳ ಸಂತೋಷವಾಯಿತು. ಹೈದರಾಬಾದಿನಲ್ಲಿರತಕ್ಕ ವೀರಶೈವ ವಿದ್ಯಾರ್ಥಿಗಳ ಉತ್ಸಾಹವೂ, ಅವರ ಸಮಾಜಾಭಿಮಾನವೂ, ಪ್ರಶಂಸನೀಯವಾಗಿರುತ್ತದೆ. ಈ ತರುಣರ ಮಾಲಿಕೆಯಲ್ಲಿ ಮಧ್ಯಮಣಿಯಂತಿರತಕ್ಕ 'ಸಿದ್ಧಯ್ಯ ಪುರಾಣಿಕ' ಇವರೇ ಆತ್ಮಾರ್ಪಣವನ್ನು ರಚಿಸಿದವರು. ನಾಟಕದೊಳಗೆ ಸಂದರ್ಭಕ್ಕೆ ಅನುಸರಿಸಿ ವಚನಗಳನ್ನು ಜೋಡಿಸಿರುವದು ಇವರ ಕುಶಲತನವನ್ನು ತೋರಿಸುತ್ತದೆ. ಈ ತರುಣ ಕವಿಗಳು ಮುಂದೆ ಪ್ರತಿಭಾಸಂಪನ್ನರಾದ ಕವಿಗಳಾಗಿ ಕರ್ಣಾಟಕದ ತುಂಬೆಲ್ಲ ಕೀರ್ತಿಶಾಲಿಗಳಾಗುವ ಸುಯೋಗವನ್ನು ದೇವರು ಒದಗಿಸಿಕೊಡಲೆಂದು ಹಾರೈಸುತ್ತೇನೆ. ಇವರ ಮಾರ್ಗವನ್ನ ನುಸರಿಸಿ ಉಳಿದ ತರುಣರೂ ಕೂಡ ತಮ್ಮ ಜೀವನದಲ್ಲಿ ಒಂದಾದರೂ ಗ್ರಂಥವನ್ನು ರಚಿಸಿಯೇ ತೀರುವೆನೆಂಬುವ ಪ್ರತಿಜ್ಞಾಬದ್ಧರಾಗಿ ಕಾರ್ಯವನ್ನು ಮಾಡಿದರೆ ವೀರಶೈವ ಸಾಹಿತ್ಯವು ಕರ್ನಾಟಕದಲ್ಲಿ ಅಜರಾಮರವಾಗಿ ಉಳಿಯುವುದು. 'ಆತ್ಮಾರ್ಪಣ'ದ ಬಗ್ಗೆ ಒಂದೆರಡು ಮಾತುಗಳನ್ನು ಹೇಳುವ ಸುಯೋಗವನ್ನು ಒದಗಿಸಿಕೊಟದಕ್ಕೆ ಶ್ರೀ ಸಿದ್ಧಯ್ಯನವರಿಗೆ ತುಂಬಾ ಕೃತಜ್ಞನಾಗಿರುತ್ತೇನೆ.

ವ್ಯಾಕರಣತೀರ್ಥ ಚಂದ್ರಶೇಖರಶಾಸ್ತ್ರಿಗಳು

ಪ್ರಿನ್ಸಿಪಾಲ್ ಎಸ್.ಎಸ್. ಕಾಲೇಜು

೨೫ನೇ ಕನ್ನಡ ಸಾಹಿತ್ಯ ಸಮ್ಮೇಳನಾಧ್ಯಕ್ಷರು

ಅಭಿಪ್ರಾಯಗಳು

ಆತ್ಮಾರ್ಪಣವೆಂಬ ಅಣ್ಣ, ಬಸವಣ್ಣನವರ ನಾಟಕವನ್ನು ಓದಿ ಆನಂದ ಲಹರಿಯಲ್ಲಿ ನಲಿದಾಡಿರುವೆನು. ಇದನ್ನು ಬರೆದವರು ಉತ್ಸಾಹಿ ತರುಣರಾದ ಕಾವ್ಯಾನಂದರು.

ಇವರು ಉಭಯ ಭಾಷೆಗಳಲ್ಲಿ ಪರಿಜ್ಞಾನ ಉಳ್ಳವರಾಗಿರುವರಲ್ಲದೆ ರಾಜಕೀಯ ಭಾಷೆಗಳಾದ ಆಂಗ್ಲ, ಉರ್ದು ವಿದ್ಯೆಗಳಲ್ಲಿ ಪ್ರಧಾನಪರೀಕ್ಷೆಯನ್ನು ಕೊಡಲು ಕುಳಿತಿರುವರು. ಅಭ್ಯಾಸ ಕಾಲದಲ್ಲಿ ಪಂಡಿತ, ಪಾಮರರಿಗೆ ಒಪ್ಪುವಂತೆ ನಾಟಕದ ಕಟ್ಟು, ನಿಟ್ಟುಗಳನ್ನು ಕೈಬಿಡದೆ ಬರೆಯುವದೆಂದರೆ ಸಾಮಾನ್ಯವಾದ ಕೆಲಸವಲ್ಲ.

ಅಣ್ಣ ಬಸವಣ್ಣನವರ ಜೀವನವು ಕಾವ್ಯಮಯವಾಗಿದೆ. ಕಾವ್ಯಾನಂದರು ಬಸವಣ್ಣನವರು ಗೈದ ಸಾಮಾಜಿಕ ಚಿತ್ರವನ್ನು ರಂಗಸ್ಥಲದಲ್ಲಿ ಸುವರ್ಣಮಯವನ್ನಾಗಿ ಮಾಡಬೇಕೆಂದು ಬಗೆದಿರುವರು. ವೇಷಕ್ಕೆ ತಕ್ಕ ಭಾಷೆಯನ್ನು ಕಲ್ಪಿಸಿದ್ದಾರೆ. ಭಕ್ತಿ ಭಂಡಾರಿಯಾದ ಬಸವರಸರ ಭಕ್ತಿರಸವು ತುಂಬಿ ತುಳುಕುವುದಲ್ಲದೆ ನವವಿಧವಾದ ರಸಗಳ ಝುರಿಯಲ್ಲಿ ಸಂದರ್ಭಾನುಸಾರವಾಗಿ ಪ್ರಯೋಗಿಸಿರುವ ವಚನಗಳೆಂಬ ತನಿವಣ್ಣಿನ ಕರಣೆಗಳನ್ನು ವೆರಸಿ ರಸಾಸ್ವಾದನೆಯಲ್ಲಿ ತಲೆದೂಗುವಂತೆ ಮಾಡಿರುವ ಪದ್ಯದ ರಚನೆಯನ್ನು ಕಂಡರೆ ಪರಮಸಂತೋಷವಾಗುತ್ತದೆ. ಒಟ್ಟಿನ ಮೇಲೆ ಬಸವಣ್ಣನವರ ಸಮಾಜಸೇವೆಯ ಚಿತ್ರವನ್ನು ಬೈಲಿಗೆಳೆದು ಜಾತಿಭೂತವನ್ನು ಬಡಿದೆಬ್ಬಿಸಿ ಲಿಂಗಿಗಳೆಲ್ಲರೂ ಸಂಗಮನಾಥನೆಂದು ಹೇಳಿ ಮಾನವಧರ್ಮದ ಸಮಾನತೆಯ ಪ್ರೇಮದಕಟ್ಟೆಯನ್ನು ಕಟ್ಟಿರುವರು. ಪರಂತು ಮಹಾನುಭಾವ ಬಸವಣ್ಣನವರ ವಿಷಯಕವಾಗಿ ಅನೇಕರು ಅನಂತ ಗ್ರಂಥಗಳನ್ನು ಬರೆದಿರುವರು. ಅವುಗಳಲ್ಲಿ ಯಾರದು ಹಿರಿದು, ಯಾರದು ಕಿರಿದೆಂದು ಹೇಳಲಿಕ್ಕೆ ಬರುವುದಿಲ್ಲ. ರಸಾಸ್ವಾದನವು ಪಿಂಡ ಪಿಂಡಗಳಲ್ಲಿ ಭಿನ್ನ ಭಿನ್ನವಾಗಿರುವದು. ಕಾವ್ಯಾನಂದರು ರಚಿಸಿದ ಆತ್ಮಾರ್ಪಣವು ಆನಂದಮಯವಾಗಿದೆ, ಸಮಾಜಕ್ಕೆ ಉಪಕಾರವಾಗಿದೆ, ಲೇಖವು ಸುಲಿದ ಬಾಳಿಹಣ್ಣಿನಂತೆ ಸರಳವಾಗಿದೆ. ಗ್ರಂಥಕರ್ತರ ಶ್ರಮವನ್ನು ಸಾಫಲ್ಯಗೊಳಿಸುವದಕ್ಕಾಗಿ ಪ್ರತಿಯೊಬ್ಬ ಲಿಂಗವಂತನು ಇದನ್ನು ಅವಶ್ಯ ಸಂಗ್ರಹಿಸಬೇಕೆಂದು ಸೂಚಿಸುತ್ತೇನೆ.

–ಬಸವರಾಜಶಾಸ್ತ್ರೀ ನಾಯ್ಕಲ್

ಗೋಡ್ಯಾಳ ಮಠೀಯ

ಹಾರೈಕೆ

ಶ್ರೀಮಾನ್ ಪುರಾಣಿಕ ಸಿದ್ಧಯ್ಯನವರು ಬರೆದಿರುವ 'ಆತ್ಮಾರ್ಪಣ' ಎಂಬ ನಾಟಕವನ್ನು ನಾನು ಓದಿ ನೋಡಿದೆನು. ಲೇಖಕರು ಶರಣರ ದಿವ್ಯಚಾರಿತ್ರ್ಯವನ್ನು ಬಹುಸ್ವಾರಸ್ಯವಾಗಿಯೂ, ಪರಿಣಾಮಕಾರಿಯಾಗಿಯೂ ಚಿತ್ರಿಸಿದ್ದಾರೆ. ಭಾಷೆಯು ಹೃದಯಂಗಮವಾಗಿದೆ. ರಂಗಭೂಮಿಯ ಮೇಲೆ ಇದು ಬರಬೇಕಾದುದು ಅಗತ್ಯ. ಪ್ರಸಿದ್ಧ ಸಾಹಿತಿಗಳಾಗುವ ಈ ಲೇಖಕ ಮಹಾರಾಯರಿಂದ ಇಂಥ ಕೃತಿಗಳು ಹೆಚ್ಚಾಗಿ ಶಿವಶರಣರ ದಿವ್ಯತತ್ವಗಳು ಪ್ರಸಾರವಾಗಲೆಂದು ಹಾರೈಸುತ್ತೇನೆ.

–ಹರ್ಡೇಕರ್ ಮಂಜಪ್ಪ

ಭಾರತವೀರ

ಮಿಹಿರಕುಲ ಮತ್ತು ಅನಂತರದ ಹೂಣರು

ಕಲ್ಹಣನ ರಾಜತರಂಗಿಣಿಯಲ್ಲಿ ಐತಿಹಾಸಿಕ ದೃಷ್ಟಿಯಿಂದ ನಾವು ಪುನಃ ಒಂದು ಮುಖ್ಯ ಘಟ್ಟವನ್ನು ತಲುಪುವುದು ವಸುಕುಲನ ಪುತ್ರ ಮಿಹಿರಕುಲನ ಆಳ್ವಿಕೆಯಲ್ಲಿ. ಅವನು ಹೇಳುವ ಬಿಳಿಯ ಹೂಣದೊರೆ ಮಿಹಿರಕುಲನಲ್ಲದೆ ಬೇರೆಯಲ್ಲ. ಶಾಸನಗಳು ಮತ್ತಿತರ ಆಧಾರಗಳ ಪ್ರಕಾರ ಕ್ರಿ.ಶ. ೫೧೫ರಲ್ಲಿ ಮಿಹಿರಕುಲನು ತನ್ನ ತಂದೆ ತೋರಮಾನನಿದ್ದ ಕಾಬೂಲು ಕಣಿವೆಯಿಂದ ಮಧ್ಯಭಾರತದವರೆಗೆ ಹರಡಿಕೊಂಡು ವಿಸ್ತಾರವಾದ ಸಾಮ್ರಾಜ್ಯಕ್ಕೆ ಅರಸನಾದನು.

ಹಿಮುಂಗ್‌ರು ಅಥವ ಸಂಸ್ಕೃತ ಕಾವ್ಯಗಳಲ್ಲಿ ಉಕ್ತರಾದ ಹೂಣರು ನಮ್ಮ ದೃಕ್ಪಥಕ್ಕೆ ಕ್ರಿ. ಪೂ. ೧೬೫ರಲ್ಲಿ ಬರುವರು. ಅದೇ ವೇಳೆಗೆ ಅವರು ಯು-ಎಚಿ ಎಂಬ ಒಂದು ಜನಾಂಗವನ್ನು ಚೀನಾದ ವಾಯುವ್ಯಭಾಗದಲ್ಲಿದ್ದ ಅವರ ನೆಲೆಯಿಂದ ಸೋಲಿಸಿ ಅಟ್ಟಿಬಿಟ್ಟರು. ಕಾಲಕ್ರಮೇಣ ಹೂಣರು ಪಶ್ಚಿಮದ ಕಡೆಗೆ ಸರಿಯಲಾರಂಭಿಸಿದರು. ಅವರಲ್ಲಿ ಒಂದು ಶಾಖೆ ಆಕ್ಸಸ್ ನದಿಯ ಕಣಿವೆಯ ಕಡೆಗೆ ಹೊರಟಿತು. ಇನ್ನೊಂದು ಶಾಖೆ ಯೂರೋಪನ್ನು ಸೇರಿ ತಮ್ಮ ಕೈರಾತ ಕ್ರೌರ್ಯಕ್ಕಾಗಿ ಶಾಶ್ವತವಾದ ಅಪಕೀರ್ತಿಯನ್ನು ಪಡೆಯಿತು.

ಕ್ರಿಸ್ತಶಕ ೪೨೦ರ ನಂತರ ಆಕ್ಸಸ್ ನದಿಯ ಕಂದರದಲ್ಲಿದ್ದ ಹೂಣರು ದಕ್ಷಿಣಕ್ಕೆ ತಿರುಗಿ ಕ್ರಮೇಣ ಆಫ್ಘಾನಿಸ್ತಾನವನ್ನೂ ಭಾರತದ ವಾಯುವ್ಯ ಕಣಿವೆಗಳನ್ನೂ ದಾಟಿ ಹಿಂದೂಸ್ಥಾನವನ್ನು ಪ್ರವೇಶಿಸಿದರು, ಗುಪ್ತಸಾಮ್ರಾಜ್ಯದ ಪಶ್ಚಿಮದ ಗಡಿನಾಡನ್ನು ಮುತ್ತಿದ್ದರೂ ಸಹ ಅವರು ಸ್ಕಂದಗುಪ್ತನ ಯುದ್ಧ ಕೌಶಲದಿಂದ ಪರಾಜಿತರಾಗಿ ಹಿಮ್ಮೆಟ್ಟಿದರು. ಅನಂತರ ಕ್ರಿಸ್ತಶಕ ೪೮೪ರವೇಳೆಗೆ ಗುಂಪು ಗುಂಪಾಗಿ ತೋರಮಾನನ ನಾಯಕತ್ವದಲ್ಲಿ ಹೊರಟು ಮಸಗುತ್ತ ಗುಪ್ತಸಾಮ್ರಾಜ್ಯದ ಅವನತಿಗೆ ಪ್ರಧಾನ ಕಾರಣರಾದರು.

ಕಲ್ಹಣ ಮತ್ತು ಭಾರತದಲ್ಲಿ ಪ್ರಚಲಿತವಿರುವ ಐತಿಹ್ಯಗಳ ಪ್ರಕಾರ ಮಿಹಿರಕುಲನು ನಿರ್ದಯನೂ ಕ್ರೂರಿಯೂ ಆದ ಸರ್ವಾಧಿಕಾರಿ. ಆತನಿಗೆ ಪೈಶಾಚಿಕ ಹೇಯ ಕೃತ್ಯಗಳಲ್ಲಿ ಆನಂದ. ಹ್ಯೂಎನ್ ತ್ಸಾಂಗನೂ ಸಹ ತನ್ನ ಬರವಣಿಗೆಯಲ್ಲಿ ಇವನ ಮತ್ತು ಇವನ ರಾಜಧಾನಿಯಾದ ಸಾಕಲ (ಪಂಜಾಬಿನಲ್ಲಿರುವ ಸಿಯಾಲ್‌ಕೋಟ್)ದ ವರ್ಣನೆ ಮಾಡುತ್ತ ಅವನ ನಿರ್ದಯ ಸ್ವಭಾವವನ್ನೂ ಮತ್ತು ಅವನು ಶಾಂತಿಪ್ರಿಯರಾದ ಬೌದ್ಧ ಭಿಕ್ಷುಗಳಿಗೆ ಕೊಡುತ್ತಿದ್ದ ಹಿಂಸೆಗಳನ್ನೂ ಕುರಿತು ಬರೆದಿದ್ದಾನೆ. ಬೌದ್ಧ ಸ್ತೂಪಗಳನ್ನು ಕೊಳ್ಳೆಹೊಡೆದು ನಾಶಮಾಡುವುದು ಅವನ ರೂಢಿಯಾಗಿದ್ದಿತು.

ಮಿಹಿರಕುಲನಿಗೆ ಬಹುಕಾಲ ಆಳುವ ಭಾಗ್ಯವಿರಲಿಲ್ಲ. ಇಬ್ಬರು ಶೂರರಾದ

ಅರಸರಿಂದ ಆತನು ಸೋಲು ಅಪಮಾನಗಳನ್ನು ಅನುಭವಿಸಬೇಕಾಯಿತು. ಭಾರತದಲ್ಲಿ ಅವನ ಪ್ರಾಬಲ್ಯ ಇದರಿಂದ ನಷ್ಟವಾಯಿತು.[೧] ಮಾಳವದ ಅರಸು ಯಶೋಧರ್ಮನು ಮಿಹಿರಕುಲನ ಸೈನ್ಯವನ್ನು ಸೋಲಿಸಿ ಆತನ ಪ್ರಾಬಲ್ಯವನ್ನು ಮುರಿದರೆ, ಮಗಧವನ್ನಾಳುತ್ತಿದ್ದ ಗುಪ್ತವಂಶದ ಬಾಲಾದಿತ್ಯನು ಮಿಹಿರಕುಲನನ್ನು ಸೋಲಿಸಿ ಸೆರೆಹಿಡಿದನು. ರಾಜಮಾತೆಯ ದಯೆಯಿಂದ ಬಿಡುಗಡೆಯನ್ನು ಹೊಂದಿದ ಮಿಹಿರಕುಲ ಶೈವಮತದ ಪೋಷಕನಂತೆ ವರ್ತಿಸುತ್ತ ಸ್ವಲ್ಪ ಕಾಲ ಕಾಶ್ಮೀರದಲ್ಲಿ ರಕ್ಷಣೆಯನ್ನು ಪಡೆದನು. ಕಾಲಕ್ರಮದಲ್ಲಿ ಅರಸನ ದಯಾಪರತೆಯನ್ನು ದುರುಪಯೋಗಪಡಿಸಿಕೊಂಡು ತನ್ನ ಕುತಂತ್ರಗಳಿಂದ ಕಾಶ್ಮೀರದ ಸಿಂಹಾಸನವನ್ನು ಆಕ್ರಮಿಸಿಕೊಂಡನು.

ಕಲ್ಹಣನು ಮಿಹಿರಕುಲನ ದಂಡಯಾತ್ರೆಗಳ ಬಗ್ಗೆ ಪ್ರಸ್ತಾಪಿಸುತ್ತ, ಆತನು ಸಿಲೋನಿನ ರಾಜನನ್ನು ಜಯಿಸಿದ್ದನೆಂದೂ, ಕರ್ಣಾಟಕ, ತಂಜಾವೂರು ಮತ್ತು ಮಧ್ಯ ಗುಜರಾತಿನ ಆಳರಸರನ್ನು ತಮ್ಮ ಸಾಮಂತರನ್ನಾಗಿಸಿಕೊಂಡಿದ್ದನೆಂದೂ ಹೇಳುತ್ತಾನೆ.

ಮಿಹಿರಕುಲನ ಕ್ರೌರ್ಯವನ್ನು ಚಿತ್ರಿಸುತ್ತ, 'ಅವನ ಬರುವಿಕೆಯನ್ನು ಆಗಸದಲ್ಲಿ ಗುಂಪು ಗುಂಪಾಗಿ, ಮಂಡಲಾಕಾರವಾಗಿ ಹಾರಿ ಬರುವ ಹದ್ದು ಕಾಗೆಗಳೇ ಸೂಚಿಸುತ್ತಿದ್ದುವು. ಅವು ಅವನನ್ನು ಸುತ್ತುವರಿದು ಬರುತ್ತಿದ್ದ ಅವನ ಸೈನ್ಯವು ತುಂಡರಿಸಿ ಚೆಲ್ಲುತ್ತಿದ್ದ ಜೀವಿಗಳನ್ನು ಭಕ್ಷಿಸಲು ಕಾತರವಾಗಿರುತ್ತಿದ್ದವು.[೨] ಅವನು ಕ್ರೌರ್ಯದ ಆನಂದವನ್ನು ಕಾಣುವಷ್ಟು ಅಧೋಗತಿಗೆ ಇಳಿದಿದ್ದ. ಅವನೊಮ್ಮೆ ಪೀರ್‌ಪಂಜಲ್ ಕಣಿವೆಯನ್ನು ದಾಟುವಾಗ ಒಂದು ಆನೆ ಕಾಲುಜಾರಿ ಪ್ರಪಾತಕ್ಕೆ ಉರುಳಿತು. ಅದರ ಚೀರಾಟ ಆರ್ತನಾದಗಳು ಈ ಹುಚ್ಚುದೊರೆಯ ಕಿವಿಗೆ ಎಂತಹ ರಂಜನೆಯನ್ನು ಉಂಟುಮಾಡಿದುವೆಂದರೆ, ಅವನು ಇನ್ನೂ ನೂರು ಆನೆಗಳನ್ನು ಆ ಪ್ರಪಾತಕ್ಕೆ ತನ್ನ ಸೈನಿಕರಿಂದ ತಳ್ಳಿಸಿ ಆ ದೃಶ್ಯವನ್ನು ನೋಡಿ ನಲಿದ. ಅಂದಿನಿಂದ ಇಂದಿಗೂ ಆ ಸ್ಥಳಕ್ಕೆ 'ಹಸ್ತಿವಾಂಜ್' ಎಂದು ಕರೆಯುತ್ತಾರೆ. (ಹಸ್ತಿ=ಆನೆ; ವಂಶನ=ನಾಶಕ)

ಇನ್ನೊಂದು ಕಥೆ ಮಿಹಿರಕುಲನ ನಿರ್ದಯತೆಯನ್ನು ಚೆನ್ನಾಗಿ ಸಾರುತ್ತದೆ ಒಂದು ಕಾಲುವೆಯ ಹಾದಿಯನ್ನು ಬದಲಿಸಬೇಕಾಗಿತ್ತು. ಆದರೆ ಅದರ ದಾರಿಯಲ್ಲಿ ಒಂದು ದೊಡ್ಡ ಬಂಡೆ ಅಡ್ಡಿಯಾಗಿ ನಿಂತಿತ್ತು. ಇದರಿಂದ ಮಿಹಿರಕುಲನಿಗೆ ಕ್ರೂರವಾದ ಹೊಸದೊಂದು ಆಲೋಚನೆ ಹೊಳೆಯಿತು. ಮರುದಿನ ಅ ದೊರೆ

೧ ಶ್ರೀ ಆರ್.ಸಿ. ಮುಜುಮುದಾರರ ಪ್ರಾಚೀನ ಭಾರತ, ಪುಟ ೨೫೪–೫೫.

೨ ಕಲ್ಹಣನ ರಾಜತರಂಗಿಣಿ.

ಡಂಗೂರ ಹೊಯ್ಯಿಸಿ, 'ಕಳೆದ ಇರುಳು ತನಗೆ ಕನಸಾಯಿತೆಂದೂ, ಅದರ ಪ್ರಕಾರ ಆ ಬಂಡೆಯಲ್ಲಿ ಒಬ್ಬ ಯಕ್ಷಿಣಿ ವಾಸಮಾಡುತ್ತಿದ್ದಾಳೆಂದೂ, ಪತಿವ್ರತೆಯಾದ ಸ್ತ್ರೀಯ ಸ್ಪರ್ಶದಿಂದ ಆ ಬಂಡೆ ದಾರಿಬಿಡುವುದೆಂದೂ, ಅದರಿಂದ ಸುತ್ತು ಮುತ್ತಲಿನ ಕುಲೀನ ಸ್ತ್ರೀಯರೆಲ್ಲ ಬಂದು ಆ ಕಲ್ಲುಬಂಡೆಯನ್ನು ಸ್ಪರ್ಶಿಸಬೇಕೆಂದೂ' ಆಜ್ಞೆಮಾಡಿದ. ಎಂತೆಂತಹ ಸದ್ವಂಶ ಸಂಭೂತೆಯರಾದ ವನಿತೆಯರು ಬಂದು ಮುಟ್ಟಿದರೂ ಆ ಬಂಡೆ ಸರಿಯಲಿಲ್ಲ. ಕೊನೆಗೆ ಚಂದ್ರಾವತಿ ಎಂಬ ಒಬ್ಬ ಕುಂಬಾರನ ಮಡದಿ ಬಂದು ಮುಟ್ಟಿದಾಗ ಆ ಬಂಡೆ ದೂರಕ್ಕೆ ಚಿಮ್ಮಿ ದಾರಿಕೊಟ್ಟಿತು. ಇದನ್ನೇ ನೆಪಮಾಡಿಕೊಂಡು ನಿಷ್ಠುರನಾದ ಆ ಅರಸ ಸಾವಿರಾರು ಜನ ಅಸಹಾಯಕರಾದ ಸ್ತ್ರೀಯರನ್ನೂ ಅವರ ಮಕ್ಕಳು, ಗಂಡಂದಿರು, ಅಣ್ಣ ತಮ್ಮಂದಿರನ್ನು ಕಗ್ಗೊಲೆ ಮಾಡಿಸಿದ. 'ಕಾರಣಗಳೇನಿದ್ದರೂ ಇಂತಹ ಸಾಮೂಹಿಕ ಕಗ್ಗೊಲೆ ಪರಮಪಾತಕ' ಎಂದು ಕಲ್ಹಣ ಆಕ್ರೋಶಗೊಂಡಿದ್ದಾನೆ.

ಆರ್ಯದೇಶದ ಜನರನ್ನು ಕೊಲ್ಲಿಸಿದ ಮೇಲೆ ಮಿಹಿರಕುಲನು ಪ್ರಾಯಶ್ಚಿತ್ತ ಮಾಡಿಕೊಂಡುದರಿಂದ ಅವನ ನಿರ್ದಯತೆಯನ್ನು ಸ್ವಲ್ಪಮಟ್ಟಿಗೆ ಮನ್ನಿಸಬಹುದೆಂದು ಅಂದಿನ ಕೆಲವು ಚರಿತ್ರೆಕಾರರು ಅಭಿಪ್ರಾಯಪಟ್ಟಂತೆ ನಮಗೆ ರಾಜತರಂಗಿಣಿಯಿಂದ ತಿಳಿದುಬರುತ್ತದೆ. ಜತೆಗೆ ಅವನು ಕಾಶ್ಮೀರದಲ್ಲಿ ಮ್ಲೇಚ್ಛಮತಗಳ ಅಶುದ್ಧ ಪ್ರಭಾವದಿಂದ ಖಿಲವಾಗುತ್ತಿದ್ದ ಶೈವಧರ್ಮವನ್ನು ಉಜ್ಜೀವಿಸಿ ಹೆಸರುವಾಸಿಯಾದನು. ಐತಿಹ್ಯಗಳು, ಲಾಂಛನಗಳು ಮತ್ತು ನಾಣ್ಯಗಳು ಮಿಹಿರಕುಲನಿಗೆ ಇದ್ದ ಶೈವಮತ ಪಕ್ಷಪಾತವನ್ನು ನಿಸ್ಸಂದೇಹವಾಗಿ ಸಾರುತ್ತವೆ. ರಾಜತರಂಗಿಣಿಯಲ್ಲಿ ಸುಳಿದ ಇತರ ಇತಿಹಾಸಜ್ಞರ ಅಭಿಪ್ರಾಯಗಳನ್ನು ಬೇರೆ ಆಧಾರಗಳೂ ಸ್ವಲ್ಪಮಟ್ಟಿಗೆ ಸಮರ್ಥಿಸುತ್ತವೆ.

ಮಿಹಿರಕುಲನು ಶ್ರೀನಗರದ ಬಳಿಯಲ್ಲಿ ಒಂದು ಶಿವಾಲಯವನ್ನು ಕಟ್ಟಿಸಿ, ಹೊಳದ (ವುಲಾರ್ ಪರ್ಗಣ) ಎಂಬಲ್ಲಿ ಒಂದು ನಗರವನ್ನು ನಿರ್ಮಿಸಿ ಅದಕ್ಕೆ ಮಿಹಿರಪುರ ಎಂದು ಹೆಸರಿಟ್ಟನು. ಆತನು ವಿಜಯೇಶ್ವರದ ಬಳಿ ಒಂದು ಸಾವಿರ ಅಗ್ರಹಾರಗಳನ್ನೂ ಮತ್ತು ಭೂಮಿಯನ್ನೂ ದಾನಕೊಡಲು ಮುಂದೆ ಬಂದಾಗ, ಕಾಶ್ಮೀರದ ಬ್ರಾಹ್ಮಣರು ಆ ಕ್ರೂರಿಯಾದ ಅರಸನ ದಾನವನ್ನು ತಿರಸ್ಕರಿಸಿದರು. ಹೀಗಾಗಿ ವಂಶದಲ್ಲಿ ಸ್ವಲ್ಪ ಕೀಳಾದ ಗಾಂಧಾರದ ಬ್ರಾಹ್ಮಣರಿಗೆ ಅವುಗಳನ್ನು ದಾನ ಮಾಡಬೇಕಾಯಿತು.

ಆಗಾಗ್ಗೆ ಉಲ್ಬಣಗೊಂಡು ಅವನನ್ನು ಉದ್ರೇಕಕ್ಕೆ ಒಳಗುಮಾಡುತ್ತಿದ್ದ ವ್ಯಾಧಿಯಿಂದ ಬೇಸತ್ತು ಮಿಹಿರಕುಲ ಆತ್ಮಹತ್ಯೆಮಾಡಿಕೊಂಡು ತನ್ನ ಜೀವಿತಕ್ಕೆ ಇತಿ ಎಂದನು. ಅಂದರೆ ವಿಸ್ತಾರವಾದ ಒಂದು ಹೋಮಾಗ್ನಿಯನ್ನು ತನ್ನ ಸ್ವಹಸ್ತದಿಂದಲೇ ಸ್ಥಾಪಿಸಿ ತನ್ನನ್ನೇ ಅದಕ್ಕೆ ಆಹುತಿಯಾಗಿ ಅರ್ಪಿಸಿಕೊಂಡನು. ಆ ವೇಳೆಯಲ್ಲಿ 'ತನ್ನ ಪಾಲಿಗೂ ನಿರ್ದಯನಾಗಿಯೇ ಇದ್ದುದರಿಂದ ಕ್ರೂರಿಯಾದರೂ ಮಿಹಿರಕುಲನು

ಮುಕ್ತಿ ಪಡೆದನು' ಎಂಬ ಆಕಾಶವಾಣಿಯಾಯಿತೆಂದು ಪ್ರತೀತಿ ಇದೆ. ಅವನಿಗೆ ಮುಕ್ತಿ ದೊರೆಯಿತೋ ಇಲ್ಲವೋ, ಪೈಶಾಚಿಕ ಕೃತ್ಯಗಳಲ್ಲಿ ಮಗ್ನನಾದ ಈ ಕ್ರೂರ ದೊರೆಯಿಂದ ದೇಶವಂತೂ ಮುಕ್ತವಾಯಿತು.

ಮಿಹಿರಕುಲನ ನಂತರ ಇತರ ಹೂಣ ಅರಸರು ಕಾಶ್ಮೀರವನ್ನು ಆಳಿದಂತೆ ಕಂಡುಬರುತ್ತದೆ. ರಾಜತರಂಗಿಣೀ ಇದನ್ನು ಸ್ಪಷ್ಟವಾಗಿ ಹೇಳದಿದ್ದರೂ ಅನಂತರದ ಅರಸರ, ಹೂಣರ ಹೆಸರನ್ನು ಹೋಲುವ ಅಪೂರ್ವವಾದ ಹೆಸರುಗಳು, ಮತ್ತು ಅವರ ಶೈವನಿಷ್ಠೆಯ ಮೂಲಕ ನಾವು ಊಹಿಸಬಹುದು. ಬೌದ್ಧ ಮತದ ಶಕ್ತಿ ಮತ್ತು ಪ್ರಭಾವ ಬಹುಮಟ್ಟಿಗೆ ಇಳಿಮುಖವಾಗಲು ಇವರು ಶೈವಧರ್ಮಕ್ಕೆ ಕೊಟ್ಟ ಪೋಷಣೆಯೇ ಕಾರಣ.

ಮಿಹಿರಕುಲನ ಪುತ್ರನೂ ಹೂಣ ಸಾಮ್ರಾಜ್ಯದ ಉತ್ತರಾಧಿಕಾರಿಯೂ ಆದ ಬಕನನ್ನು ಕಲ್ಹಣನು ಸದ್ಗುಣಿಯಾದ ರಾಜಕುವರನೆಂದು ಪ್ರಶಂಸಿಸಿದ್ದಾನೆ. ಅವನು ಬಕೇಶ ಎಂಬ ಹೆಸರಿನ ಒಂದು ಶಿವಾಲಯವನ್ನು ಕಟ್ಟಿಸಿ ಒಂದು ಕಾಲುವೆಯನ್ನು ತೋಡಿಸಿದನು. ಕಲ್ಹಣನಿಗೆ ಸಮಕಾಲೀನವಾದ ಒಂದು ದಂತಕಥೆ ಮಾಟಗಾತಿಯೊಬ್ಬಳ ಮಾಟದ ಪ್ರಭಾವದಿಂದ ಬಕನು ಸತ್ತನೆಂದು ತಿಳಿಸುತ್ತದೆ.

–ಶ್ರೀ ಪಿ. ಎನ್. ಕೆ. ಬಾಮ್‌ಜೈ (Bamazi) ಅವರ

'ಕಾಶ್ಮೀರದ ಇತಿಹಾಸ'ದಿಂದ

ಹೂಣರು

ಕ್ರಿಸ್ತಪೂರ್ವ ಎರಡನೆಯ ಶತಮಾನಕ್ಕೂ ಮುಂಚೆಯೇ ಅಲೆಮಾರಿಗಳಾದ ಹೂಣರು ಚೀನಾದ ಗಡಿಗಳಲ್ಲಿ ವಾಸಿಸುತ್ತಿದ್ದರು. ಅವರ ಮತ್ತು ಅವರಂತೆಯೇ ಅಲೆಮಾರಿಗಳಾದ ಯುಚಿ (Yueh-chi) ಜನಾಂಗಗಳಲ್ಲಿ ಜರುಗಿದ ಜಗಳ ಕ್ರಿಸ್ತಶಕ ಒಂದನೇ ಶತಮಾನದಲ್ಲಿ ಶಕರ ಮತ್ತು ಕುಶಾನರ ಭಾರತದ ದಾಳಿಗೆ ಕಾರಣವಾಯಿತು. ಅನಂತರ ಹೂಣರೂ ಯುಚಿ ಜನಾಂಗದಂತೆ ಪಶ್ಚಿಮದ ಕಡೆ ವಲಸೆ ಹೊರಟರು. ಅಲ್ಲಿ ಈ ಪ್ರವಾಹ ಎರಡು ಕವಲೊಡೆದು ಒಂದು ಭಾಗ ವೋಲ್ಗಾ ನದಿಯ ಕಡೆಗೂ, ಇನ್ನೊಂದು ಆಕ್ಸಸ್ ನದಿಯ ಕಡೆಗೂ ಹೊರಟಿತು. ಮೊದಲನೆ ಭಾಗದವರ ಚಟುವಟಿಕೆ ರೋಮನ್ ಇತಿಹಾಸದಲ್ಲಿ ಚೆನ್ನಾಗಿ ವ್ಯಕ್ತವಾಗುತ್ತದೆ. ಆಕ್ಸಸ್ ಕಣಿವೆಯ ಹೂಣರು ಜುವಾನ್–ಜುವಾನ್ (Jaun-Jaun) ಜನಾಂಗದ ದಾಸ್ಯದ ನೊಗವನ್ನು ಕೊಡವಿ ಕ್ರಿಸ್ತಶಕ ಐದನೇ ಶತಮಾನದ ವೇಳೆಗೆ ತುಂಬಾ ಪ್ರಬಲರಾದರು. ಅವರು ತಮ್ಮ ಅರಸರ ವಂಶದ ಹೆಸರುಗಳಾದ ಯೆ–ಥ (ye-tha), ಹೆಪ್ತಾಲೈಟ್ಸ್ (Hephtha-Lites) ಎಂಬ ಹೆಸರುಗಳಿಂದ ಪ್ರಸಿದ್ಧರಾದರು. ಗ್ರೀಕರು ಅವರನ್ನು ಬಿಳಿಯ ಹೂಣರು ಎಂದು ಕರೆದಿದ್ದಾರೆ.

ಆಕ್ಸಸ್ ಕಣಿವೆಯಿಂದ ಈ ಬಿಳಿಯ ಹೂಣರು ಪರ್ಶಿಯ ಮತ್ತು ಭಾರತದ ಕಡೆಗೆ ಹೊರಟರು. ಹಿಂದುಕುಷ್ ಪರ್ವತವನ್ನು ದಾಟಿ ಗಾಂಧಾರದೇಶವನ್ನು ಆಕ್ರಮಿಸಿದರು. ಆದರೆ ಅಲ್ಲಿಂದ ಮುಂದಿನ ಪಯಣ ಸ್ಕಂದಗುಪ್ತನಿಂದ ತಡೆಹಿಡಿಯಲ್ಪಟ್ಟಿತು. ಅವನು ಅವರನ್ನು ಕ್ರಿಸ್ತಶಕ ೪೬೦ ರಲ್ಲಿಯೇ ತಲೆಬಾಗುವಂತೆ ಸದೆಬಡಿದ. ಆದರೆ ಪರ್ಶಿಯ ದೇಶವು ಮಾತ್ರ ಅವರ ದಾಳಿಯನ್ನು ತಡೆಯಲಿಲ್ಲ. ಕ್ರಿಸ್ತಶಕ ೪೮೪ ರಲ್ಲಿ ಪರ್ಶಿಯನ್ನರನ್ನು ಸೋಲಿಸಿ ಅವರ ದೊರೆಯನ್ನು ಕೊಂದರು. ಈ ವಿಜಯ ಅವರ ಶಕ್ತಿ ಮತ್ತು ಪ್ರತಿಷ್ಠೆ ಇನ್ನೂ ವರ್ಧಿಸುವಂತೆ ಮಾಡಿತು. ಕ್ರಿಸ್ತಶಕ ಐದನೇ ಶತಮಾನದ ಕೊನೆಯ ವೇಳೆಗೆ ಅವರು ದೊಡ್ಡ ಸಾಮ್ರಾಜ್ಯವನ್ನು ಆಳುತ್ತಿದ್ದರು. ಬಾಲ್ಕ್ (Balkh) ಅವರ ರಾಜಧಾನಿಯಾಗಿತ್ತು.

ಕ್ರಿಸ್ತಶಕ ಐದನೇ ಶತಮಾನದ ಕೊನೆ ಅಥವಾ ಆರನೇ ಶತಮಾನದ ಮೊದಲ ವೇಳೆಗೆ ಅವರ ಮುಖಂಡನಾದ ತೋರಮಾನನು ಪಂಜಾಬಿನಿಂದ ಮುಂದುವರಿದು ಪಶ್ಚಿಮ ಭಾರತದ ಬಹುಭಾಗವನ್ನು ಗೆದ್ದು ಇರಾನ್ (Eran) –(ಮಧ್ಯ ಪ್ರದೇಶದ ಸೌಗರ್ (Saugor)Šಅನ್ನು ತನ್ನ ರಾಜ್ಯದಲ್ಲಿ ಸೇರಿಸಿಕೊಂಡ.

ತೋರಮಾನನನ್ನೇ ಸಾಮಾನ್ಯವಾಗಿ ಹೂಣರ ನಾಯಕ ಎಂದು ಭಾವಿಸಬಹುದು. ಅವನ ನಾಣ್ಯಗಳು ಅವನ ವಿದೇಶೀ ಮೂಲವನ್ನೂ ಮತ್ತು ಉತ್ತರ ಪ್ರದೇಶ, ರಾಜಪುತಾನ, ಪಂಜಾಬ್ ಮತ್ತು ಕಾಶ್ಮೀರಗಳ ಒಡೆತನವನ್ನೂ ಸೂಚಿಸುತ್ತವೆ. ಅವನ ಮೂಲಪುರುಷರು ಬಹುಶಃ ಗಾಂಧಾರವನ್ನು ಆಳುತ್ತಿದ್ದರು. ಆ ನೆಲೆಯಿಂದಲೇ ಅವನು ಭಾರತವನ್ನು ಗೆಲ್ಲಲೂ ಹೊರಟಿರಬಹುದು. ಆದರೆ ನಮಗೆ ಚಾರಿತ್ರಿಕವಾಗಿ ಸ್ವಲ್ಪವೇ ಸ್ವಲ್ಪ ಮಾಹಿತಿ ಇದರ ಬಗ್ಗೆ ಸಿಕ್ಕಿದೆ. ಜೈನ ಗ್ರಂಥವೊಂದರ ಪ್ರಕಾರ ಅವನು ಜೈನಧರ್ಮವನ್ನು ಸ್ವೀಕರಿಸಿ ಪಂಜಾಬಿನ ಚಂದ್ರಭಾಗಾ ನದಿಯ ತೀರದ ಪವ್ವಯಾ (Pavvaiya) ನಗರದಲ್ಲಿದ್ದನೆಂದು ತಿಳಿದುಬರುತ್ತದೆ.೧

ತೋರಮಾನನ ನಂತರ ಅವನ ಮಗ ಮಿಹಿರಕುಲ ಪಟ್ಟಕ್ಕೆ ಬಂದನು. ಇವನು ಬಹುಶಃ ಕ್ರಿಸ್ತಶಕ ೫೧೫ ರಲ್ಲಿ ಸಿಂಹಾಸನವನ್ನೇರಿರಬೇಕು. ಹ್ಯೂಯೆನ್‌ತ್ಸಾಂಗ್‌ನ ಪ್ರಕಾರ ಅವನ ರಾಜಧಾನಿ ಸಾಢಕಲ. ಅವನು ಭಾರತವನ್ನು ಆಳುತ್ತಿದ್ದ.

ಕಾಶ್ಮೀರ ದೊರೆಗಳ ಚರಿತ್ರೆಯಾದ 'ರಾಜತರಂಗಿಣಿ' ಮಿಹಿರಕುಲನನ್ನು ಪ್ರಬಲನಾದ ದೊರೆಯೆಂದೂ, ಅವನು ಕಾಶ್ಮೀರ, ಗಾಂಧಾರಗಳನ್ನು ಆಳುತ್ತಿದ್ದನೆಂದೂ, ಅವನು ದಕ್ಷಿಣ ಇಂಡಿಯ ಮತ್ತು ಸಿಲೋನ್‌ಗಳನ್ನು ಗೆದ್ದನೆಂದೂ ಹೇಳುತ್ತದೆ. ಅವನನ್ನು ಅತಿ ಕ್ರೂರಿಯೆಂದು ಬಣ್ಣಿಸಿ, ಅವನ ಅನೇಕ ಮನೋವೇಧಕ ಕ್ರೌರ್ಯದ ಕಥೆಗಳನ್ನು ವಿವರವಾಗಿ ಆ ಗ್ರಂಥ ಹೇಳಿದೆ. ಆ ಗ್ರಂಥದ ಕಥೆಗಳು ಹ್ಯೂಯೆನ್‌ತ್ಸಾಂಗನ ಹೇಳಿಕೆಗಳನ್ನು ಸಮರ್ಥಿಸುತ್ತವೆ. ಆದರೆ ಕಾಲದ ವಿಚಾರದಲ್ಲಿ ಇವೆರಡಕ್ಕೂ ಸ್ವಲ್ಪ ಭೇದವಿದೆ. ಆದರೂ ಈ ರಾಜತರಂಗಿಣಿಯನ್ನೇ ಚಾರಿತ್ರಿಕ ಮಾಹಿತಿಗಳಿಗೆ ಯೋಗ್ಯ ಮೂಲವೆಂದು ಭಾವಿಸಬಹುದು.

ಕ್ರಿಸ್ತಶಕ ೫೨೦ರಲ್ಲಿ ಗಾಂಧಾರವನ್ನಾಳುತ್ತಿದ್ದ ಹೂಣದೊರೆಯ ಆಸ್ಥಾನದಲ್ಲಿದ್ದ ಸಂಗ್‌ಯುನ್ ಎಂಬ ಚೀನಾ ರಾಯಭಾರಿಯ ಬರವಣಿಗೆ ನಮಗೆ ಹೂಣ ಸಾಮ್ರಾಜ್ಯದ ಪ್ರಭಾವ ಪ್ರಾಬಲ್ಯಗಳ ಒಟ್ಟು ನೋಟವನ್ನು ಕೊಡುತ್ತದೆ ತನಗಿಂತ ಎರಡು ಶತಮಾನಗಳು ಮುಂಚಿನಿಂದಲೇ ಆ ಪ್ರದೇಶವನ್ನು ಆಕ್ರಮಿಸಿಕೊಂಡು ವಿಜೃಂಭಿಸುತ್ತಿದ್ದ ಹೂಣವಂಶವನ್ನು ಕುರಿತು ಹೇಳಿದನಂತರ ಅವನು ತಾನು ಕಂಡ ಅರಸನ ಒಡ್ಡೋಲಗವನ್ನು ಹೀಗೆ ಬಣ್ಣಿಸುತ್ತಾನೆ :

೧ ಈ ಗ್ರಂಥ 'ಕುವಲಮಾಲ' ರಚಿತವಾದದ್ದು ಶಕವರ್ಷ ಏಳನೂರು (ಕ್ರಿಸ್ತಶಕ ೭೭೮).

"ಈ ರಾಜನ ಮನೋಧರ್ಮ ಕ್ರೂರವಾಗಿಯೂ ಪ್ರತೀಕಾರ ಮನೋಭಾವವನ್ನುಳ್ಳದ್ದಾಗಿಯೂ ಇದೆ. ಈತನು ಸಾಧಾರಣವಾಗಿ ಅನಾಗರೀಕ ಹೇಯ ಕೃತ್ಯಗಳಲ್ಲಿ ತೊಡಗಿರುತ್ತಾನೆ. ಈತನು ಬೌದ್ಧಧರ್ಮವನ್ನು ನಂಬದೆ ಭೂತಾರಾಧನೆಯಲ್ಲಿ ಮಗ್ನನಾಗಿರುವನು. ಯಾರ ಸಹಾಯವನ್ನೂ ಕೋರದೆ ತನ್ನೊಬ್ಬನ ಶಕ್ತಿಯನ್ನೇ ನಂಬಿ ಅವನು ಕಾಶ್ಮೀರದ ರಾಜನೊಡನೆ ಗಡಿವಿವಾದದಲ್ಲಿ ತೊಡಗಿ ಯುದ್ಧ ಹೂಡಿದ್ದಾನೆ. ಮೂರುವರ್ಷಗಳಿಂದ ಗಡಿ ಪ್ರದೇಶಗಳನ್ನು ಆಕ್ರಮಿಸಿಕೊಳ್ಳುತ್ತ ಅವನು ತನ್ನ ಚಟುವಟಿಕೆಗಳನ್ನು ನಡೆಸಿಯೇ ಇದ್ದಾನೆ. ಅವನ ಬಳಿ ಏಳುನೂರು ಮಧಿಸಿದ ಆನೆಗಳಿವೆ. ಎಷ್ಟೋ ವೇಳೆ ಗಡಿನಾಡುಗಳಲ್ಲೇ ಬಿಡಾರಹೂಡಿ ಅವನು ರಾಜಧಾನಿಗೆ ಬರುತ್ತಲೇ ಇರಲಿಲ್ಲ."

ಸಂಗ್‌ಯುನ್ ಕಂಡ ದೊರೆ ಬಹುಶಃ ಮಿಹಿರಕುಲನೇ ಇರಬೇಕು. ಮಿಹಿರಕುಲನಿಗೆ ಗೊಲ್ಲಾಸ್ ಎಂಬ ಇನ್ನೊಂದು ಹೆಸರೂ ಇದೆ. ಅವನು ಕಾಶ್ಮೀರ, ಗಾಂಧಾರ ದೇಶಗಳನ್ನು ಆಳುತ್ತಿದ್ದನು. ಕ್ರಮೇಣ ಅವನ ಪ್ರಾಬಲ್ಯ ಬೆಳೆಯಿತು ಎಂಬುದು ಇನ್ನೂ ಇತರ ಚರಿತ್ರಕಾರರ ಬರವಣಿಗೆಗಳಿಂದ ಗೊತ್ತಾಗುತ್ತದೆ.

ತೋರಮಾನನು ಇರಾನ್‌ವರೆಗೆ ಮುಂದೊತ್ತಿಕೊಂಡು ಬಂದರೂ ಅವನ ಪ್ರಾಬಲ್ಯಕ್ಕೆ ಬಹುಶಃ ಭಾನುಗುಪ್ತನಿಂದ ಧಕ್ಕೆ ಉಂಟಾಗಿ ಸಿಂಧೂನದಿಯೇ ಅವನ ಸಾಮ್ರಾಜ್ಯದ ಎಲ್ಲೆಯಾದುದು ಕಂಡುಬರುತ್ತದೆ. ಆದರೆ ಮಹತ್ವಾಕಾಂಕ್ಷಿಯಾದ ಮಿಹಿರಕುಲನು ತನ್ನ ತಂದೆಯ ಯೋಜನೆಗಳನ್ನು ಪುನರುಜ್ಜೀವಿಸಿ ತನ್ನ ಸಾಮರ್ಥ್ಯದಿಂದ ಅವುಗಳಲ್ಲಿ ಎಷ್ಟನ್ನೋ ಸಾಧಿಸಿದನು. ಉತ್ತರ ಭಾರತದ ಬಹುಭಾಗ ಅವನ ಸಾಮ್ರಾಜ್ಯವಾಗಿ ಗ್ವಾಲಿಯರ್‌ನಿಂದ ಮುಂದಕ್ಕೂ ಹರಡಿತ್ತು. ಇದಕ್ಕೆ ಕ್ರಿಸ್ತಶಕ ೫೩೦ರ ಒಂದು ಶಾಸನ ಸಾಕ್ಷಿಯಾಗಿದೆ. ಹ್ಯೂಯೆನ್‌ತ್ಸಾಂಗ್ ಮತ್ತು ಗ್ರೀಸಿನ ಕಾಸ್‌ಮಾಸ್ ಎಂಬ ಇಬ್ಬರು ಇತಿಹಾಸಕಾರರು ಇವನನ್ನು ಹಿಂದೂಸ್ಥಾನದ ರಾಜನೆಂದೂ, ಸಂಪೂರ್ಣ ಭಾರತವನ್ನು ವಶಪಡಿಸಿಕೊಂಡವನು ಎಂದು ಕರೆದರೂ, ಅನತಿಕಾಲದಲ್ಲೇ ಭಾರತದ ಇಬ್ಬರು ಶೂರ ಅರಸರಾದ ಯಶೋಧರ್ಮ ಮತ್ತು ನರಸಿಂಹಗುಪ್ತ ಬಾಲಾದಿತ್ಯರು ಮಿಹಿರಕುಲನ ಅವನತಿಗೆ ಕಾರಣರಾದರು.

ಯಶೋಧರ್ಮನ ಅಗ್ಗಳಿಕೆ ಎಂತಹುದೆಂದರೆ "ಸ್ಥಾಣುವನ್ನುಳಿದು ಮತ್ತಾರಿಗೂ ತಲೆಬಾಗದ ಮಿಹಿರಕುಲನನ್ನೇ ತನ್ನ ಪದಾಕ್ರಾಂತನನ್ನಾಗಿ ಮಾಡಿಕೊಂಡವನು. ಮಿಹಿರಕುಲನಾದರೋ ದುರ್ಗಮವಾದ ಕೋಟೆ ಎಂದು ಬೀಗುತ್ತಿದ್ದ ಹಿಮಾಲಯವನ್ನು ತನ್ನ ಬಾಹುಬಲದಿಂದ ಜಗ್ಗಿಸಿದವನು. ಯಶೋಧರ್ಮನೊಡನೆ ಮಿಹಿರಕುಲನು ನಡೆಸುತ್ತಿದ್ದ ಹೋರಾಟಕ್ಕೆ ಸುಂಗ್‌ಯುನ್‌ನ ಬರವಣಿಗೆ ಮತ್ತೊಂದು ಸಾಕ್ಷಿಯಾಗಿದೆ. ಪ್ರಚಂಡಶಕ್ತಿ ಉತ್ಸಾಹಗಳಿಂದ ಭಾರತದ ಒಳಭಾಗಕ್ಕೆ ನುಗ್ಗಿಬರುತ್ತಿದ್ದ ಮಿಹಿರಕುಲನನ್ನು

ಶೂರನೂ ಮಹತ್ವಾಕಾಂಕ್ಷಿಯೂ ಆದ ಯಶೋಧರ್ಮನು ತಡೆದನು. ಮಿಹಿರಕುಲನು ಸೋತರೂ ಅವನ ಸಾಮ್ರಾಜ್ಯವಾಗಲೀ ಶಕ್ತಿಯಾಗಲೀ ನಾಶವಾಗಲಿಲ್ಲ. ಯಶೋಧರ್ಮನ ಇಳಿಗಾಲವನ್ನು ಕಾಯುತ್ತಿದ್ದ ಆತನು ಪುನಃ ಅವಕಾಶ ಸಾಧಿಸಿ ಮುನ್ನುಗ್ಗಿದನು.

ಆಗ ಗುಪ್ತ ಸಾಮ್ರಾಜ್ಯವನ್ನು ನರಸಿಂಹಗುಪ್ತ ಬಾಲಾದಿತ್ಯನು ಆಳುತ್ತಿದ್ದಂತೆ ಕಂಡುಬರುತ್ತದೆ. ಆದರೆ ಆಗ ಅನೇಕ ಸಾಮಂತರಾಜರು ಬುಧಗುಪ್ತನ ಆಳ್ವಿಕೆಯ ನಂತರ ಶಿಥಿಲವಾಗಿದ್ದ ಗುಪ್ತ ಸಮ್ರಾಜ್ಯದಿಂದ ಸಿಡಿದು ಸ್ವತಂತ್ರರಾಗಿದ್ದರು. ಅವರಲ್ಲಿ ಮಾಳವದೇಶದ ಯಶೋಧರ್ಮನೂ ಒಬ್ಬ. ಅವನು ಸುತ್ತಮುತ್ತಲಿನ ಅರಸರನ್ನು ಗೆದ್ದು ಪ್ರಬಲಿಸಿಕೊಂಡು, ಮಿಹಿರಕುಲನನ್ನು ಎದುರಿಸಿ ಅವನನ್ನು ಗೆದ್ದಿದ್ದನು. ಇದರಿಂದ ಅವನು ಇನ್ನೂ ಪ್ರಾಮುಖ್ಯ ಪ್ರಾಬಲ್ಯಗಳನ್ನು ಪಡೆದು ಗುಪ್ತ ಸಾಮ್ರಾಜ್ಯದ ಮೇಲೆ ದಂಡೆತ್ತಿ ಹೋಗಿ ನರಸಿಂಹಗುಪ್ತ ಬಾಲಾದಿತ್ಯನನ್ನು ಒಮ್ಮೆ ಸೋಲಿಸಿದನು. ಆದರೆ ಇದರಿಂದ ಗುಪ್ತ ಸಾಮ್ರಾಜ್ಯ ಹಾಳಾಗಲೂ ಇಲ್ಲ, ಯಶೋಧರ್ಮನ ವಶಕ್ಕೆ ಬರಲೂ ಇಲ್ಲ. ಆದರೆ ಅದು ಸ್ವಲ್ಪಮಟ್ಟಿಗೆ ಬಲಗುಂದಿತು. ಮಿಹಿರಕುಲನು ಈ ಸಮಯವನ್ನು ಸಾಧಿಸಿ ಬಾಲಾದಿತ್ಯನ ಮೇಲೆ ದಂಡೆತ್ತಿ ಬಂದು ಅವನನ್ನು ಜಯಿಸಿದನು. ಹ್ಯೂಯೆನ್‌ತ್ಸಾಂಗ್‌ನ ಪ್ರಕಾರ ಹೇಳುವುದಾದರೆ ಅವನು ಸ್ವಲ್ಪಕಾಲ ಮಿಹಿರಕುಲನಿಗೆ ಸಾಮಂತನಾಗಿ ಕಪ್ಪವನ್ನು ಕೊಡುತ್ತಿದ್ದನು. ಆದರೆ ಕಾಲಕ್ರಮದಲ್ಲಿ ಮಿಹಿರಕುಲನು ಬೌದ್ಧ ಧರ್ಮವನ್ನು ನಾಶಮಾಡಲು ತೊಡಗಿದ್ದನ್ನು ಕಂಡು ನರಸಿಂಹಗುಪ್ತನು ಕುಪಿತನಾಗಿ ಅವನ ಮೇಲೆ ಯುದ್ಧವನ್ನು ಘೋಷಿಸಿದನು. ಹ್ಯೂಯೆನ್‌ತ್ಸಾಂಗನ ಬರವಣಿಗೆ ಇಲ್ಲಿ ವಿವರವಾಗಿದೆ.

“ಮಗಧದ ಅರಸನಾದ ಬಾಲಾದಿತ್ಯನಿಗೆ ಬೌದ್ಧಧರ್ಮದಲ್ಲಿ ಅಪಾರವಾದ ನಂಬುಗೆ. ಮಿಹಿರಕುಲನು ಬೌದ್ಧರನ್ನು ಹಿಂಸಿಸುತ್ತಿದ್ದುದನ್ನೂ ಅವನ ದುಷ್ಕೃತ್ಯಗಳನ್ನೂ ಕೇಳಿ ಆತನು ತನ್ನ ಗಡಿಗಳನ್ನು ಭದ್ರಪಡಿಸಿಕೊಂಡು, ಪೊಗದಿ ಕೊಡುವುದನ್ನು ನಿಲ್ಲಿಸಿದನು. ಮಿಹಿರಕುಲ ತನ್ನ ರಾಜ್ಯದ ಮೇಲೆ ಧಾಳಿಯಿಟ್ಟಾಗ ಬಾಲಾದಿತ್ಯನು ಸೈನ್ಯ ಸಮೇತನಾಗಿ ಹಿಮ್ಮೆಟ್ಟಿ ದ್ವೀಪವೊಂದರಲ್ಲಿ ರಕ್ಷಣೆಯನ್ನು ಪಡೆದನು. ಮಿಹಿರಕುಲನು ತನ್ನ ಸೈನ್ಯದ ಬಹುಭಾಗವನ್ನು ತನ್ನ ತಮ್ಮನ ಕೈವಶಮಾಡಿ ತಾನು ಉಳಿದ ಸೈನ್ಯದೊಡನೆ ನಾವೆಗಳಲ್ಲಿ ಕುಳಿತು ದ್ವೀಪವನ್ನು ಹೊಕ್ಕನು. ಆಗ ನರಸಿಂಹಗುಪ್ತ ಬಾಲಾದಿತ್ಯನು ಒಂದು ಆಯಕಟ್ಟಿನ ಸ್ಥಳದಲ್ಲಿ ಮಿಹಿರಕುಲನ ಮೇಲೆ ಬಿದ್ದು ಅವನನ್ನು ಸೋಲಿಸಿ, ಸೆರೆಹಿಡಿದನು. ಮಿಹಿರಕುಲನನ್ನು ವಿಚಾರಣೆ ನಡೆಸಿ ವಧಿಸಬೇಕೆಂದಿದ್ದಾಗ ಬಾಲಾದಿತ್ಯನ ತಾಯಿ ಮಧ್ಯೆ ಪ್ರವೇಶಿಸಿ ಅವನಿಗೆ ಕ್ಷಮಾದಾನ ಮಾಡಿಸಿದಳು. ಕ್ಷಮಾದಾನ ಪಡೆದ ಮಿಹಿರಕುಲ ಹಿಂತಿರುಗಿ ಹೋದಾಗ ಅವನ ತಮ್ಮನು ತಾನೇ ಸಿಂಹಾಸನವನ್ನೇರಿ ಸಾಮ್ರಾಜ್ಯವನ್ನೆಲ್ಲ ವಶಪಡಿಸಿಕೊಂಡಿದ್ದನು. ಆಗ

ಮಿಹಿರಕುಲನು ಕಾಶ್ಮೀರದಲ್ಲೊಂದು ಕೋಟೆಯನ್ನು ಗೆದ್ದು, ನಂತರ ದಂಗೆ ಎಬ್ಬಿಸಿ, ಕಾಶ್ಮೀರದರಸನನ್ನು ಕೊಂದು ತಾನೇ ರಾಜನಾದನು.

ಅನಂತರ ಅವನು ಗಾಂಧಾರದ ಮೇಲೆ ಯುದ್ಧವನ್ನು ಸಾರಿ, ಅಲ್ಲಿ ಅರಸನನ್ನೂ ಅವನ ವಂಶವನ್ನೂ ನಾಶಮಾಡಿ, ಅಲ್ಲಿನ ಸ್ತೂಪಗಳನ್ನೂ ಸಂಘಾರಾಮಗಳನ್ನೂ ನೆಲಸಮ ಮಾಡಿ, ದೇಶದ ಸಂಪತ್ತನ್ನೆಲ್ಲ ಕೊಳ್ಳೆಹೊಡೆದು ಹಿಂತಿರುಗಿದನು. ಆದರೇನು ಅ ಒಂದು ವರ್ಷ ಪೂರೈಸುವುದರಲ್ಲಿಯೇ ಸಾವನ್ನೈದಿದನು."

ಉತ್ಪ್ರೇಕ್ಷೆಗಳಿಂದ ಕೂಡಿದ ಹ್ಯೂಯೆನ್‌ತ್ಸಾಂಗನ ಬರವಣಿಗೆಗಳನ್ನು ನಂಬುವುದು ಕಷ್ಟವಾದರೂ-ಗುಪ್ತ ಸಾಮ್ರಾಜ್ಯವನ್ನೂ, ಭಾರತವನ್ನೂ ಹೂಣರ ದಾಳಿಯಿಂದ ಕಾಪಾಡಿದ ಕೀರ್ತಿ ನರಸಿಂಹಗುಪ್ತ ಬಾಲಾದಿತ್ಯನಿಗೆ ಸಲ್ಲುತ್ತದೆ ಎಂಬುದನ್ನು ನಿಸ್ಸಂದೇಹವಾಗಿ ನಂಬಬಹುದು.

-ಭಾರತೀಯ ವಿದ್ಯಾಭವನದ ಪ್ರಕಟಣೆ

'ದಿ ಕ್ಲಾಸಿಕಲ್ ಏಜ್' ಎಂಬ ಗ್ರಂಥದಿಂದ ಸಂಗ್ರಹಿತ

ಅನುಬಂಧ ೩

ಆತ್ಮಾರ್ಪಣ
ನನ್ನ ನಿವೇದನ

ಕರುನಾಡಿನ ಕಮಲಪತ್ರಾಸನದ ಮೇಲೆ ಕಾಲಿಟ್ಟು ಜನಹೃದಯದ ರತ್ನ ಸಿಂಹಾಸನದ ಮೇಲೆ ರಾರಾಜಿಸುತ್ತಲಿರುವ ಬಸವಣ್ಣನವರಿಗೆ ದೊರೆತ ಸನ್ಮಾನವೆಂದರೆ ಕರ್ನಾಟಕಕ್ಕೆ ಬಂದ ಕೀರ್ತಿ; ಅವರ ತತ್ತ್ವಗಳಿಗೆ ದೊರೆತ ಮಾನ್ಯತೆಯು ಕನ್ನಡನಾಡಿಗೆ ದೊರೆತ ಗುರುತ್ವ; ಅವರ ಜೀವನವು ವಿಶ್ವಸಂಸ್ಕೃತಿಗೆ ಕನ್ನಡವು ನೀಡಿದ ಕಾಣಿಕೆ. ನೋಡಿದಷ್ಟೂ ನವೋನವವಾಗಿ ತೋರುವ "ಅಣ್ಣ" ನ ದಿವ್ಯ ಭವ್ಯ ಮೂರ್ತಿಸ್ವರೂಪದ ಪರಿಚಯವು ಕನ್ನಡ ಜನತೆಗೇ ಸರಿಯಾಗಿ 'ಆಗಬೇಕಾದಷ್ಟು' ಆಗಬೇಕಾಗಿರುವುದರ ಅತ್ಯಲ್ಪಭಾಗದಷ್ಟು ಸಹ ಆಗಿಲ್ಲ ಅನ್ಯಪ್ರಾಂತಗಳಿಗೆ, ಪರರಾಷ್ಟ್ರಗಳಿಗೆ ಆಗುವ ಆಶೆಯೆಲ್ಲಿ? ಆಶೆಯಿದ್ದುದೇ ಆದರೆ ಅದು ತನ್ನಿಂದ ತಾನೇ ಸಫಲವಾಗುವುದೆ? ಯುರೋಪದ ವಿವಿಧ ಭಾಷೆಗಳಲ್ಲಿ ಒಬ್ಬ ಷೇಕ್ಸಪಿಯರ್ ಮಹಾಕವಿಯನ್ನು ಕುರಿತು ಬರೆದ ಗ್ರಂಥಗಳೇ ಕನ್ನಡದಲ್ಲಿ ಇದುವರೆಗೆ ಅಚ್ಚಾಗಿರುವ ಗ್ರಂಥರಾಶಿಗೆ ಸರಿಹೋಗಬಹುದೇನೊ! ಪಾಶ್ಚಾತ್ಯರ ಮಾತಂತಿರಲಿ–ಕುಮಾರವ್ಯಾಸನ ಕಾಲದಲ್ಲಿಯೇ "ರಾಮಾಯಣದ ಕವಿಗಳ ಭಾರದಲಿ ಫಣಿರಾಯ ತಿಣಿಕಿದ" ರೂ, ಮುದ್ದಣನು ಹೇಳುವಂತೆ ಬ್ರಹ್ಮಲೋಕದಿಂದ ಕೆಳಗಿಳಿದ 'ಪಂಚವಿಂಶತಿಸಾಹಸ್ರ ರಾಮಾಯಣ'ಗಳಿದ್ದರೂ ಹೊಸ ರಾಮಾಯಣಗಳೂ, ಭಾರತಗಳೂ, ಗೀತಾವೃತ್ತಿಗಳೂ ಹುಟ್ಟುವುದು ನಿಂತಿಲ್ಲ. ಸಮಗ್ರ ರಾಮಾಯಣ ಭಾರತ ಭಾಗವತಗಳಲ್ಲದೆ ಅವುಗಳ ಬೇರೆ ಬೇರೆ ಸಂದರ್ಭ ಸನ್ನಿವೇಶಗಳನ್ನಾಶ್ರಯಿಸಿ ಬರೆದ ವಿವಿಧ ಜಾತಿಯ ಸಾಹಿತ್ಯ ರೂಪಗಳು ಬೆಳೆಯುತ್ತಲಿವೆ. ಇದು ಸಂಸ್ಕೃತಿಯ ಸಜೀವತೆಗೆ ಸಾಕ್ಷಿ.

ಬಸವಾದಿ ಶಿವಶರಣರ ಬಗ್ಗೆ ಇದಾಗಲೇ ಬೇಸರ ಹುಟ್ಟಿದಂತಿದೆ. "ಇದೇನು? ಯಾರು ಬರೆದರೂ ಇದೇ ಹೌದಲ್ಲೊ? ಬಸವಣ್ಣ ದೊಡ್ಡಾತ, ಶಿವಶರಣರು ದೊಡ್ಡವರು, ಇಷ್ಟು ತಿಳಿಸಲು ಎಷ್ಟು ಪುಸ್ತಕ ಬೇಕು?" ಎಂಬ ಆಕ್ಷೇಪ ಅಲ್ಲಲ್ಲಿ ಕೇಳಬರುತ್ತಲಿದೆ. ಇದಕ್ಕೆ ನನ್ನ ನಮ್ರ ಉತ್ತರ: "ತುಸು ವಿಚಾರಿಸಿ ಅಣ್ಣಂದಿರೆ! 'ಬಸವನ ಬಳಗ'ದ ಬಗ್ಗೆ ನೀವು ಮಾಡಿರುವ ಘನ ಕಾರ್ಯವಾದರೂ ಆವುದು? ನಾಲ್ಕಾರು ಗ್ರಂಥಗಳು, ಹಲಕೆಲವು ಲೇಖಗಳು, ವರ್ಷಕ್ಕೊಮ್ಮೆ ಜಯಂತಿಯ

ಉಪನ್ಯಾಸಗಳು–ಇವಿಷ್ಟು ಸಾಕೆ? ಕಬೀರ, ತುಕಾರಾಮ, ಚೈತನ್ಯ–ಅಷ್ಟೇಕೆ? ಮೊನ್ನಿನವರಾದ ರಾಮತೀರ್ಥ, ರಾಮಕೃಷ್ಣರಷ್ಟು ಸಹ ಪರದೇಶ ಪ್ರಸಿದ್ಧಿಗೆ ಪಾತ್ರವಿಲ್ಲವೆ ಅವರು? ಕನ್ನಡ ನಾಡಿನಲ್ಲಿ, ಕನ್ನಡದಲ್ಲಿ ಪ್ರಪಂಚದ ಧಾರ್ಮಿಕ ಸಾಹಿತ್ಯದಲ್ಲಿಯೇ ಅನ್ಯಾಸದೃಶವಾದ ಕ್ರಾಂತಿಯೊಂದನ್ನು ಮಾಡಿದ, ವಿಶ್ವ ಧರ್ಮದ ಪ್ರಯೋಗವೊಂದನ್ನು ಮಾಡಿ ನೋಡಿದ, ಮಾನವ ಜಾತಿಯೊಂದು ಇರುವವರೆಗೆ ಮೇಲೆ ಮೇಲೆ ತಲೆದೋರಬಹುದಾದ ಜಟಿಲ ಸಮಸ್ಯೆಗಳು ಕೆಲವನ್ನು ಬಿಡಿಸುವುದರಲ್ಲಿ ಕೃತಕಾರ್ಯರಾದ, ವಿಶ್ವಶಾಂತಿಗೆ ತಳಹದಿಯಾಗಬಹುದಾದ ನೀತಿ ನಿಯಮಗಳನ್ನು ನಿಲುಕಿಸಿದ, ಇಂದು ಮಾನವಜನಾಂಗದ ಬಹುರೂಪಿಣೀ ವಿದ್ಯೆ ವಿಜ್ಞಾನಗಳು ಸಾಸಿರ ದಿಕ್ಕಿನಲ್ಲಿ ಸಾಸಿರ ಕಣ್ಣುಗಳಿಂದ ಅರಸಿ ತೊಳಲುತ್ತಲಿರುವ ಮಾನವ್ಯದ ಮೂಲಭೂತ ತತ್ವಗಳ ಸಾಧನೆಯಲ್ಲಿಯೇ ಸರ್ವಾರ್ಪಣ ಮಾಡಿ ಸರ್ವ ವಂದ್ಯರಾದ ಶರಣರು ಕನ್ನಡನಾಡಿನ ಚಿನ್ನದ ಚೌಕಟ್ಟಿನಲ್ಲಿಯೇ ಸೀಮಿತರಾಗಿ ಉಳಿಯಬೇಕೆ? ಅದೇಕೆ?–ಕನ್ನಡನಾಡಿನಲ್ಲಿಯೇ ಹಳ್ಳಿಗರಲ್ಲಿ, ಸಾಮಾನ್ಯ ಜನತೆಯಲ್ಲಿ ನೂರಕ್ಕೆ ಎಷ್ಟು ಜನರಿಗೆ ಶಿವಶರಣರ ಸ್ವರೂಪದರ್ಶನವಾಗಿದೆ? ಅವರ ವ್ಯಕ್ತಿತ್ವದ ಸಾಕ್ಷಾತ್ಕಾರವಾಗಿದೆ? ಇದಕ್ಕೆ ಯಾರು ಹೊಣೆಗಾರರು? ವಿಚಾರಿಸಿರಿ ಅಣ್ಣಂದಿರೆ!''

ಕನ್ನಡ ಜನತೆಯ ರಕ್ತದಲ್ಲೆಲ್ಲ ಶರಣ ಸಂಸ್ಕೃತಿಯ ಬಹ್ವಂಶವು 'ಸಸಿಯೊಳಗಣ ರಸದ ರುಚಿಯಂತೆ, ನನೆಯೊಳಗಣ ಪರಿಮಳದಂತೆ' ಹುಟ್ಟಿನೊಡನೆಯೇ ಹರಡಿಕೊಂಡು ಬಂದಿದೆ; ನಮ್ಮ ಜನತೆಯ ಸಂಸ್ಕೃತಿಯಲ್ಲಿ ಅವರಿಗೆ ತಿಳಿಯದೆಯೇ ಶರಣ ಸಂಸ್ಕೃತಿಯ ಉತ್ತಮಾಂಶಗಳು ತಾಯಿಬೇರುಗಳಂತೆ ಸಾರಜನಕಗಳಾಗಿ ಸೇರಿಕೊಂಡಿವೆ. ಆದರೆ ಅವೆಲ್ಲ ಈಗ ಅನೇಕ ಕಾಲದ ತಿಳಿವಿಲ್ಲದ ಕುರುಡು ನಂಬಿಕೆಯ ಆಚರಣದಿಂದಾಗಿ 'dreary desert sand of dead habits' ಆಗಿವೆ. ಅವುಗಳ ಮೇಲೆ ಕಾಲಕ್ರಮದಲ್ಲಿ ಕವಿದಿರುವ ಅಂಥ ಆಚರಣದ ಮಂಕನ್ನು ತೆಗೆದು, ಅವುಗಳ ನಿಜರೂಪದರ್ಶನ ಮಾಡಿಸಿ, ಅವರ ಬದುಕಿಗೆ ಹೊಸ ಮೆರುಗನ್ನೂ ಮೇಲ್ಮೆಯನ್ನೂ ತಂದುಕೊಡುವ ಕಾರ್ಯ ದೊಡ್ಡದಿದೆ.

ಜನತೆಯವರೆಗೆ ಶರಣಾಸಂಸ್ಕೃತಿಯ ಸೌರಭವನ್ನು ತೂರಿ ಒಯ್ಯುವ ಸಾಧನವೆಂದರೆ ಅವರ ಅರಿವಿನ ಮಟ್ಟಕ್ಕೆ ನಿಲುಕುವ ನಾಟಕಗಳು. ಈಗ ಅವರ ಸಂಪರ್ಕದಲ್ಲಿ ವಿಶೇಷವಾಗಿರುವುವು ಯಕ್ಷಗಾನಗಳು, ಇತ್ತೀಚಿನ ಹಲ ಕೆಲವು 'ಹಂಡ ಬಂಡ ಜಾತಿಯ' ನಾಟಕಗಳು. ಅದರಲ್ಲೂ ಹಳ್ಳಿ ಹಳ್ಳಿಗೆ ಹೆಸರಾದುವೆಂದರೆ 'ಭಸ್ಮಾಸುರ ಮೋಹಿನಿ' 'ವಿರಾಟಪರ್ವ' 'ಲಂಕಾದಹನ' 'ಕೃಷ್ಣಪಾರಿಜಾತ' 'ಹಿರಣ್ಯಕಶಿಪು' ಇತ್ಯಾದಿ. ಇವು ಎಷ್ಟರಮಟ್ಟಿಗೆ ಜನತೆಯ ಬದುಕನ್ನು ತಿದ್ದಿವೆ, ಅವರ ಸಾಂಸ್ಕೃತಿಕ, ನೈತಿಕ ಅಂತಸ್ತನ್ನು ಎತ್ತರಿಸಿವೆಯೆಂಬುದಕ್ಕೆ ಇವುಗಳನ್ನು ಆಡಿ ಆಡಿ ಹೊಲಮನೆ ಹಾಳುಮಾಡಿಕೊಂಡ ಹಳ್ಳಿಗಳೇ ನಿದರ್ಶನ. ಅವರ ಅಭಿರುಚಿಯ ದಿಕ್ಕನ್ನು ಬದಲಿಸುವ, ಅವರ ಬದುಕನ್ನು ತಿಕ್ಕಿ ತೊಳೆದು ಹೊಸದಾಗಿ ಹುಡಿಗೊಳಿಸುವ, ಅವರ ಅರಿವಿಗೂ ಆನಂದಕ್ಕೂ ಅನ್ನವಿಕ್ಕುವ ಅವಶ್ಯಕತೆಯು

ಎಂದಿಗಿಂತಲೂ ಇಂದು ತೀವ್ರತರವಾಗಿದೆ. ಅದರಲ್ಲೂ ಹೊಸ ಕಥೆಗಳನ್ನು ಹೆಣೆಯುವುದಕ್ಕಿಂತ ಹಿಂದಿನ ಪ್ರಸಿದ್ಧ ಪುರುಷರ ಕಥೆ ಚರಿತೆಗಳನ್ನೇ ಇಂದಿನ ಸಮಸ್ಯೆಗಳಿಗೆ ಹವಣು ಮೀರದಂತೆ, ಕೃತ್ರಿಮತೆ ಕಂಡುಬರದಂತೆ ಔಚಿತ್ಯವನ್ನರಿತು ಹೊಂದಿಸಿ ಬರೆದ ನಾಟಕಗಳಿಂದ ನಾಡಿನ ನಾಡಿಗಳ ಮಿಡಿತ ಬಡಿತಗಳನ್ನೂ ಅವರಿಗೆ ತಿಳಿಸಿಕೊಡಬಹುದು. ಹೀಗಾದರೆ ಎರಡರ ಲಾಭ. ಈ ನಾಟಕವು ಆ ದಿಕ್ಕಿನಲ್ಲಿ ಅಳಿಲು ಸೇವೆ.

ಜನತೆಯ ಅಭಿರುಚಿಗೆ ಈ ನಾಟಕವು ಒಗ್ಗಬೇಕಾದರೆ ಕಾಲವೂ ಶ್ರಮವೂ ಬೇಕೆಂಬುದನ್ನು ಬಲ್ಲೆ. ಅದಕ್ಕಾಗಿ ಅವರಿಗಾಗಿಯೇ ತುಸುಮಟ್ಟಿಗೆ ಅತಿಯೆನಿಸಬಹುದಾದ ಹಾಸ್ಯವನ್ನು ಜೋಡಿಸಿದೆ ಇದರಲ್ಲಿ. ಹಾಸ್ಯದ 'ಪಾಚಕಡೋಝು' ಅರಿವಿನ ಅನ್ನವನ್ನು ಅರಗಿಸಲು ಅತ್ಯವಶ್ಯ. ಇನ್ನು ಬೌದ್ಧಿಕ ವರ್ಗಗಳಿಗೆ ಇದರಲ್ಲಿ ಏನೂ ಇಲ್ಲವೆನ್ನುವಂತಿಲ್ಲ. ಅವರಿಗೆ ಇದರ ಹಾಸ್ಯವು ಹೆಚ್ಚಾಗಿ ಕಂಡರೂ ಪ್ರತಿ ಪುಟದಲ್ಲಿಯೂ ಇಣಿಕಿಹಾಕುವ ಶರಣರ ವಿಚಾರಕಿರಣಗಳು ಅವರನ್ನು ಮೋಹಿಸದಿರವು. ಹೀಗೆ ಪ್ರಯೋಗಪ್ರಧಾನವಾದ ಈ ದೃಶ್ಯಕಾವ್ಯವು ಸಾಹಿತ್ಯ ಗುಣಗಳ ಸಾಂದ್ರತೆಯಿಂದ ಶ್ರಾವ್ಯಕಾವ್ಯವಾಗಿ ವಿಚಾರವಂತರಿಗೂ ಆನಂದ ಪ್ರದವಾಗುವಂತೆ ಪ್ರಯತ್ನಿಸಿರುವ ಲೇಖಕನ ಉದ್ದೇಶವು ಎಷ್ಟರಮಟ್ಟಿಗೆ ಈಡೇರಿರುವುದೋ- ಸಹೃದಯ ರಸಿಕರ, ವಿಮರ್ಶಕರ ನಿರ್ಣಯಕ್ಕೆ ಬಿಟ್ಟ ಮಾತು.

ಕಲೆಗಾಗಿ ಕಲೆಯೆನ್ನುವವರು ಎಲ್ಲ ಕಾಲದಲ್ಲಿಯೂ ಉಂಟು. 'ಪಂಡಿತರುಂ ವಿವಿಧಕಳಾಮಂಡಿತರುಂ ಕೇಳತಕ್ಕ' ಸತ್ಕೃತಿಗಳೇ ಬೇಕೆಂದು ನಮ್ಮಲ್ಲಿಯೂ, " There is no such thing as poetry and literature for the masses" ಎಂದು ಜೀನ್ ಕಾಕಟೇನಂಥವರೂ ``...literature should stand by itself, of itself and for itself" ಎಂದು ಆಸ್ಕರ್ ವಾಯಿಲ್ಡ ನಂಥವರೂ ವಾದಿಸಿದ್ದುಂಟು. ಇದರ ವಿರುದ್ಧ ಎಲ್ಲ ಕಾಲಗಳಲ್ಲಿ ಪ್ರತಿಭಟನೆಯೂ ಹುಟ್ಟಿದುದುಂಟು. ನಮ್ಮದಂತೂ ಜನತೆಯ ಯುಗ. ಜನತೆಯಲ್ಲಿ ತಿಳಿವನ್ನೂ, ತತ್ವಗಳನ್ನೂ, ಹೊಸಯುಗದ ವಿಚಾರ, ನೀತಿ, ಆಶೆ, ಆದರ್ಶಗಳನ್ನೂ, ಹಿಂದಿನ ಸಂಸ್ಕೃತಿಯ ಸತ್ವಸಾರವನ್ನೂ ಹರಡಿ ನಾಡಿನ ಸಮಸ್ಯೆಗಳಲ್ಲಿ ಅವರಿಗೆ ಆಸಕ್ತಿಯನ್ನು ಹುಟ್ಟಿಸಿ ಪ್ರಗತಿಪಥದಲ್ಲಿ ಎಳೆದುತರುವ ಪ್ರಗತಿ- ಶೀಲ ಸಾಹಿತ್ಯವು ಇಂದು ಹೆಚ್ಚಾಗಿ ಬೇಕಾಗಿದೆ. ಒಂದು ನಾಡಿನ ಒಂದು ಕಾಲದ ಸಮಾಜದ ಒಂದು ಪರಿಸ್ಥಿತಿಯ ಒಂದು ಸಮಸ್ಯೆಯನ್ನೋ ಸನ್ನಿವೇಶವನ್ನೊ ಚಿತ್ರಿಸಿ ತಮ್ಮ ಕೃತಿಗಳನ್ನು ಕ್ಷಣಿಕೋಪಯೋಗಿ ಹಾಗೂ ಅಲ್ಪಾಯುಗಳನ್ನಾಗಿ ಮಾಡದೆ ಸಾರ್ವದೇಶಿಕ ಸಾರ್ವಕಾಲಿಕ ವಸ್ತುಗಳಾದ ಪ್ರೇಮ, ಸತ್ಯ, ಸೌಂದರ್ಯ, ಯುದ್ಧ ಇತ್ಯಾದಿಗಳನ್ನು ಕುರಿತು ಬರೆದು ಅಮರಜೀವಿಗಳಾಗಬೇಕೆಂಬ ಬಯಕೆಯುಳ್ಳವರು, ಆ ಬಯಕೆಗೆ ತಕ್ಕ ಬಲವುಳ್ಳವರು. ಬಲಕ್ಕೆ ತಕ್ಕ ಅನುಕೂಲತೆ, ಸಾಧನ ಸಂಪತ್ತಿಯುಳ್ಳವರು ಹಾಗೆ ಅವಶ್ಯವಾಗಿ ಮಾಡಲಿ. ಆದರೆ ಜನತೆಯು ಇವುಗಳಿಂದ ದೂರವಿರದಿರಲಿ. "ಬಲ್ಲವರು ಇದ್ದು ಬಲವಿಲ್ಲ-ಸಾಹಿತ್ಯವೆಲ್ಲರಿಗೆ

ಇಲ್ಲ." ಎಂದು ಸರ್ವಜ್ಞನು ತಳಮಳಗೊಂಡಂತೆ ನಮ್ಮ ಪಾಡೂ ಆಗದಿರಲಿ. ಹಿಂದೀ ಕವಿಯೊಬ್ಬನ ಹಾಡಿದು:– "ಆಜ ಸತ್ಯ ಶಿವಸುಂದರ ಕರತಾ ನಹಿಂ ಹೃದಯ ಆಕರ್ಷಿತ । ಸಭ್ಯ, ಶಿಷ್ಟ, ಜಾಸಂಸ್ಕೃತ ಲಗತೆ ಮನಕೋ ಕೇವಲ ಕುತ್ಸಿತ ॥ ಧರ್ಮನೀತಿ ಜಾಸದಾಚಾರಕಾ ಮೂಲ್ಯಾಂಕನ ಹೈ ಜನಹಿತ । ಸತ್ಯನಹಿಂವಹ, ಜನತಾಸೇಜೋ ನಹಿಂ ಪ್ರಾಣಸಂಬಂಧಿತ ॥ ಆಜ ಸತ್ಯ ಶಿವ ಸುಂದರ ಕೇವಲ ವರ್ಗೋಂ ಮೇಹ್ಯೆಂ ಸೀಮಿತ । ಊರ್ಧ್ವ ಮೂಲ ಸಂಸ್ಕೃತಿಕೋ ಹೋನಾ ಅಧೋಮೂಲ ಹೈ ನಿಶ್ಚಿತ! ॥" ಕಾರಣ ಇಂದು ಸಾಹಿತ್ಯದ ಅಂತರ್ವಾಣಿಯು When wilt thou save the poeple O God of Mercy? When? The people! Lord, the people Not thrones and crowns, but men!* ಎಂದು ಉಗ್ಗಡಿಸುತ್ತಲಿದೆ. ಇಂಥ ಹೊತ್ತಿನಲ್ಲಿ ನಾಟಕದ ಕಾರ್ಯವಾವುದು? ನಾಟಕಕಾರನ ಕರ್ತವ್ಯವಾವುದು?

ಇಬ್ಸೇನನ ವಿಷಯವಾಗಿ ಬರ್ನಾರ್ಡ ಷಾನು ಬರೆದುದೇ ಇಂದಿನ ನಾಟಕಕಾರರಲ್ಲಿ ಬಹು ಸಂಖ್ಯಾಕರ ಆದರ್ಶವಾಗಿರಬೇಕೆಂದು ತೋರುತ್ತದೆ. "What we might have learned from Ibsen was that our fashionable dramatic material was worn out as far as cultivated modern people are concerned; that what really interests such people on the stage is not what we call action, but stories of lives, discussaion of conduct unveiling of motives, conflicts of characters in talk, laying bare of souls, discovery of pitfalls in short illuminatin of life." ಈ ಜೀವನೋಜ್ವಲತೆಯ ಕಾರ್ಯವನ್ನು ನಾಟಕವು ಮಾಡಬೇಕಾದರೆ ಸಂಸ್ಕಾರಯುಕ್ತ (cultivated) ಜನತೆ ಬೇಕು. ಜನತೆ ಸಂಸ್ಕಾರಯುಕ್ತವಾಗಬೇಕಾದರೆ ನಾಟಕವು ಅವರ ಶಿಕ್ಷಣಕ್ಕಾಗಿ ಸಜ್ಜಾಗಬೇಕು. ಒಂದಿಲ್ಲದೆ ಇನ್ನೊಂದು ಬದುಕಲಾರದು. ಇದೂ ಒಂದು ಸಮಸ್ಯೆಯೇ.

ಕನ್ನಡ ನಾಟಕಗಳಲ್ಲೀಗ ನವೀನ ಪರೀಕ್ಷಾ ಪ್ರಯತ್ನಗಳು ಬಹುಮುಖವಾಗಿ ನಡೆದಿವೆ. ಪೌರಾಣಿಕ, ಸಾಮಾಜಿಕ, ಐತಿಹಾಸಿಕ ನಾಟಕಗಳೂ, ಹಾಸ್ಯ, ಸಂಗೀತ, ಗದ್ಯ, ಪದ್ಯ, ನೃತ್ಯನಾಟಕಗಳೂ ಹುಟ್ಟಿಯೂ, ಹುಟ್ಟುತ್ತಲೂ ಇವೆ. ಇದಿನ್ನೂ ಅನುಕರಣ–ಪರಿವರ್ತನ–ಯುಗ. ಕನ್ನಡದ್ದೇ ಆದ ನಾಟ್ಯಪ್ರತಿಭೆಯು ರೂಪಗೊಳ್ಳಬೇಕಾದರೆ ಇನ್ನೂ ಕಾಲಬೇಕು, ಪರೀಕ್ಷೆ, ಪರಿಶ್ರಮ, ಪ್ರಯತ್ನಗಳು ಬೇಕು. ಈ ನಾಟಕವೂ ಅಂಥದೊಂದು ಪ್ರಯತ್ನ. ಪಾಶ್ಚಾತ್ಯ ಸಾಹಿತ್ಯದಲ್ಲಿ ಹೆಚ್ಚು ಪ್ರಚಲಿತವಿರುವ ಸಮಸ್ಯಾಮೂಲಕ ನಾಟಕ (Problem Play) ಗಳ ಜಾತಿಗೆ ಸೇರಿದುದು. ಹೊಸ ಪ್ರಯತ್ನ – ಕಸುಗಾಯಿಯಂತೆ ಒಗರು ಹೊಗರಿರಬಹುದು.

---

* Ebenezer Elliot-Peoples Anthem

ಕಳೆದ ೮-೧೦ ವರ್ಷಗಳಿಂದಲೂ ಬಸವಣ್ಣನವರ ಬಗ್ಗೆ ಏನೇ ಬರೆದಿರಲಿ, ಓದುವ ಚಟ ನನಗೆ. ಹಿಂದಿನ ಇಂದಿನ ಬಸವ ಸಾಹಿತ್ಯ ಹಾಗೂ ವಚನ ಸಾಹಿತ್ಯಗಳನ್ನು ಓದಿ ಮುಗಿಸಿದುದಾಯಿತು. ಈ ವ್ಯಾಸಂಗಕ್ಕೊಂದು ಮೂರ್ತಸ್ವರೂಪವನ್ನು ಕೊಡುವ ಆಶೆಯಿದ್ದಿತು. ಹೋದವರ್ಷದ ಇಲ್ಲಿಯ ತರುಣ ಸಂಘದ ಅವಸರದ ವಾರ್ಷಿಕೋತ್ಸವವು ಸದವಕಾಶವನ್ನು ಒದಗಿಸಿ ಕೊಟ್ಟಿದ್ದು. ನಾಟಕ ನಾಲ್ಕಾರೇ ದಿನಗಳಲ್ಲಿ ಬರೆಯಬೇಕಾಗಿ ಬಂದುದರಿಂದಲೂ, ಬರೆಯುವಾಗ ಕಾರ್ಯಬಾಹುಳ್ಯ, ಮುದ್ರಣವಾಗಬಹುದೆಂಬ ಕಲ್ಪನೆಯಿಲ್ಲದಿರುವಿಕೆ, ನಟವರ್ಗ, ಪ್ರೇಕ್ಷಕವರ್ಗ, ರಂಗ ರಚನೆಯ ಅನಾನುಕೂಲತೆಗಳು, ಗ್ರಂಥಗಳ ಅಭಾವ ಇವೆಲ್ಲ ತೊಂದರೆಗಳಿಂದಲೂ ನಾಟಕ ಹೇಗೋ ಬರೆದು ಮುಗಿಸಿ ನನ್ನ ಗೆಳೆಯರೊಡನೆ ಅಭಿನಯಿಸಿದುದಾಯಿತು. ಭಿನ್ನ ಭಿನ್ನ ಭಾಷೆಗಳನ್ನಾಡುವ ಪ್ರೇಕ್ಷಕವರ್ಗವಿದ್ದರೂ ನಾಟಕವು ಕಲ್ಪನಾತೀತವಾಗಿ ಯಶಸ್ವಿಯಾಯಿತು. ಈ ಮೊದಲು ಒಂದೆರಡು ನಾಟಕಗಳನ್ನು ಬರೆದು ಕಲಬುರಗಿಯಲ್ಲಿ ನನ್ನ ಗೆಳೆಯರೊಡನೆ ಅಭಿನಯಿಸಿದೆ. ಆದರೆ ಹೈದರಾಬಾದದಂಥ ಪಟ್ಟಣದಲ್ಲಿ ಕನ್ನಡ ನಾಟಕಕ್ಕೆ ನೂರಕ್ಕೆ ನೂರರಷ್ಟು ಯಶಸ್ಸು ದೊರೆತುದು ಇದೇ ಮೊದಲನೆಯ ಸಲ. ಮರುದಿನ ಊರ ತುಂಬ ನಾಟಕದ ಪ್ರಶಂಸೆ! ಉತ್ಸವಕ್ಕೆ ಅಧ್ಯಕ್ಷರಾಗಿ ಬಂದಿದ್ದ ಡಾಕ್ಟರ್ ಕಂಠಿಯವರೂ, ಅತಿಥಿಗಳಾಗಿ ಬಂದಿದ್ದ ನ್ಯಾಯಮೂರ್ತಿ T.H.M. ಸದಾಶಿವಯ್ಯನವರೂ ಬಹುವಾಗಿ ಪ್ರಶಂಸಿಸಿ "ನಾಟಕ ಮುದ್ರಣವಾಗಲೇಬೇಕು, ತೀವ್ರ ತಿದ್ದಿ ಅಚ್ಚಿಗೆ ಅಣಿಮಾಡಿರಿ" ಎಂದು ಆಣತಿಯಿತ್ತರು. ನನಗೆ ಮಂಕುಹಿಡಿಯಿತು - ಪ್ರಕಟನೆಗಾಗಿ ಬರೆಯದ ನಾಟಕವನ್ನು ಪ್ರಕಟಿಸಬೇಕಾಗಿ ಬಂದುದಕ್ಕೆ. ಸಾವಧಾನವಾಗಿ ಅಭ್ಯಾಸ ಮಾಡುತ್ತ ತೊಡೆದು ಹಾಕುವುದೂ ತಿದ್ದುವುದೂ, ಮತ್ತೆ ಕಾಟುಹಾಕಿ ತಿದ್ದುವುದೂ ನಡೆಯಿತು. ಮೊದಲು ಚಂದಕಂಡಂತೆ ಚೆಲ್ಲಾಪಿಲ್ಲಿಯಾಗಿ ಹೆಣೆದಿದ್ದ ನಾಟಕವನ್ನು ಒಂದು ರೂಪಕ್ಕೆ ತಂದು ನಿಲ್ಲಿಸಿದೆ. ಬಸವಣ್ಣನವರ ಬಗ್ಗೆ ದೊರೆಯುವ ಎಲ್ಲ ಗ್ರಂಥಗಳಿಂದ ವಾದಗ್ರಸ್ತ ವಿಷಯಗಳನ್ನುಳಿದು ಪುರಾಣಗಳಲ್ಲಿಯೂ ವಚನಗಳಲ್ಲಿಯೂ ಅವಿರೋಧವಾಗಿ ಬರುವ ನಾಟಕೀಯ ಅಂಶಗಳನ್ನು ಆಯ್ದುಕೊಂಡು ಮೊದಲಿನ ಚೌಕಟ್ಟಿನಲ್ಲಿಯೆ ಸೇರಿಸಲಾಯಿತು. ಉಪಯೋಗಿಸಿಕೊಂಡ ವಸ್ತು ಒಂದು ಸಮಗ್ರ ಚಳವಳಿಯ ಇತಿಹಾಸ, ಕಾಲವು ಬಸವಣ್ಣನವರ ಜನನದಿಂದ ಐಕ್ಯದವರೆಗೆ, ಬರುವ ವ್ಯಕ್ತಿಗಳು ಅನೇಕ ಜನ, ವಿಷಯ ನಡೆದುದು ಸಂಗಮೇಶ್ವರ ಬಾಗೇವಾಡಿ ಸೊನ್ನಲಾಪುರಗಳಿಂದ ಕಲ್ಯಾಣದಾಚೆಯವರೆಗೆ, ನಾಟಕದ ಕಾಲ ನಿಯತ - ನನ್ನ ಶಕ್ತಿ ಸೀಮಿತ! ಹೀಗಾಗಿ ಇದರಲ್ಲಿ ಬರುವ ಎಲ್ಲ ಪಾತ್ರಗಳ ವ್ಯಕ್ತಿಚಿತ್ರಗಳೂ ತಿದ್ದಿ ಮಾಡಿದ ಮೂರ್ತಿಗಳಂತಾಗಲೀ, ಬಣ್ಣದುಂಬಿದ ಚಿತ್ರಗಳಂತಾಗಲೀ ಸುಸ್ಪಷ್ಟ ಪರಿಪೂರ್ಣವಾಗಿರದೆ ಒಂದೊಂದೂ ಅಪೂರ್ಣವಾಗಿ ತೋರಬಹುದು. ಕೆಲವಾದರೂ ರೇಖಾಚಿತ್ರಗಳನಿತು ಭಾವಜ್ಞರನ್ನು ತಲೆದೂಗಿಸಿದರೆ ಸಾಕು.

ನಾಟಕದ ನಾಯಕರಾದ ಬಸವಣ್ಣನವರನ್ನು ಅವರ ಜೀವನದ ವಿವಿಧ

ರಂಗಗಳಲ್ಲಿ ಬಾಲನಾಗಿ, ಮಗನಾಗಿ, ಶಿಷ್ಯನಾಗಿ, ಅಣ್ಣನಾಗಿ, ಪತಿಯಾಗಿ, ಭಕ್ತನಾಗಿ, ವಿಶ್ವಪ್ರೇಮಿಯಾಗಿ, ಸಾಧಕನಾಗಿ, ಸುಧಾರಕನಾಗಿ, ಮಂತ್ರಿಯಾಗಿ, ಮಾರ್ಗದರ್ಶಕ ಪ್ರವಾದಿಯಾಗಿ, ಎಲ್ಲಕ್ಕಿಂತ ಹೆಚ್ಚಾಗಿ ಜನತೆಯ ಉದ್ಧಾರಮೂರ್ತಿಯಾಗಿ, ಆದರ್ಶವಾದಿಯಾಗಿ-ನಿಲ್ಲಿಸಿ ನೋಡಿ ಹಿಗ್ಗಿ ನಲಿದಾಡಿದ್ದೇನೆ. ಆತನ ಕೌಟುಂಬಿಕ, ಸಾಮಾಜಿಕ, ರಾಜಕೀಯ, ಆಂತರಿಕ-ಆಧ್ಯಾತ್ಮಿಕ ಜೀವನಗಳ ಮೇಲೆ ಸಾಧ್ಯವಿದ್ದಷ್ಟು ಬೆಳಕು ಚೆಲ್ಲಲು ಹೆಣಗಿದ್ದೇನೆ. ಹೀಗೆ ಮಾಡುವಾಗ ಇಂದಿನವರೆಗೆ ಕೇವಲ ಇಂದಿನವೆಂದು ತೋರಬಹುದಾದ ಅನೇಕ ಸಮಸ್ಯೆಗಳಿಗೂ, ಸಾರ್ವಕಾಲಿಕವಾದ ಕೆಲವು ತೊಡಕು ಗಂಟುಗಳಿಗೂ ಶರಣರ ನಡೆನುಡಿಗಳಿಂದಲೇ ಉತ್ತರಗಳನ್ನು ಹೊರಡಿಸುವ ಸಾಹಸ ಮಾಡಿದ್ದೇನೆ. ಈ ಸಮಸ್ಯೆಗಳು ಬಲುಮೆಯಿಂದ ಆರೋಪಿತವಾದವುಗಳೂ, ಉತ್ತರಗಳು ಜುಲುಮೆಯಿಂದ ಎಳೆದು ತಂದವೂ ಎಂದು ಯಾರೂ ಶಂಕಿಸಲಾರರು. ಅವು ವಸ್ತುವಿನ ಬೆಳವಣಿಗೆಯಲ್ಲಿ ಸಹಜವಾಗಿಯೇ ಮೋರೆ ಚಾಚಿವೆ-ಶರಣರ ವಚನಗಳಲ್ಲಿಯೇ ಉಗಮ ಹೊಂದಿವೆ. ಒಂದು ಮಾತು! ಎಷ್ಟು ತಿದ್ದಿದರೇನು? ಮೊದಲಿನದನ್ನು ಹರಿದು ಹಾಕಿ ಹೊಸದನ್ನು ಬರೆಯಲಾರೆವಷ್ಟೆ? ಜವಹರಲಾಲರೂ ಈ ಇರುಕಿಗೆ ಸಿಕ್ಕಿಲ್ಲವೆ? "But I cannot tear up what I have writtern and start afresh." ದೋಷಗಳು ಅನೇಕ ಬಗೆಯವು ಅನೇಕವಾಗಿರಬಹುದು. ಹಿತೈಷಿಗಳಾದ ಬಲ್ಲವರು ತೋರಿದಲ್ಲಿ ದ್ವಿತೀಯ ಸಂಸ್ಕರಣದಲ್ಲಿ-ಅದು ಹೊರಡುವ ಪ್ರಸಂಗ ಬಂದಿತಾದರೆ ಸರಿಪಡಿಸಲು ಬರುತ್ತದೆ.

ನಾಟಕವನ್ನಾಡಿದ ಎಲ್ಲ ನಟರಿಗೂ ಒಂದೊಂದು ರೌಪ್ಯ ಪದಕವನ್ನು ಕೊಟ್ಟು ಪ್ರೋತ್ಸಾಹಿಸಿದರು ಶ್ರೀ ಎಲ್. ಜಿ. ಹೊಂಬಳ್ ಅವರು. ನನಗೊಂದು ಸುವರ್ಣ ಪದಕವನ್ನು ಕೊಟ್ಟು ಗೌರವಿಸಿದರು ಶ್ರೀಮತಿ ಮೈನಾತಾಯಿ ಖೇಣಿ ಅವರು. ಪುಸ್ತಕ ಪ್ರಕಟನೆಗೆ ಪ್ರೋತ್ಸಾಹಕರಾಗಿ ಬೆಲೆಯುಳ್ಳ ಮುನ್ನುಡಿಯನ್ನು ಬರೆದು ಕೊಟ್ಟವರು ನ್ಯಾಯಮೂರ್ತಿ ಶ್ರೀ ಸದಾಶಿವಯ್ಯನವರು. ಮುದ್ರಣವೆಚ್ಚದ ಬಹುಭಾಗವನ್ನು ದಾನಮಾಡಿದವರು ಶ್ರೀಮಾನ್ ಹಣಮಂತರಾಯರು ಪಾಟೀಲ ಅವರು. ಬೇರೆ ಸಹಾಯ ಮಾಡಿದವರು ಶ್ರೀಮಾನ್ ಶ್ರೀನಿವಾಸರಾವ್ ಮದನೂರಕರ್ ಹಾಯ್ ಕೋರ್ಟ ವಕೀಲ, ಶ್ರೀಮಾನ್ ಚೆನ್ನಪ್ಪನವರು ಕಮ್ಮಾರ, ಶ್ರೀ ಸ್ವಾಮಿ ಉದಗೀರ ಇವರು. ಆಲಮಟ್ಟಿಗೆ ಕರೆಸಿಕೊಂಡು ಮಮತೆಯಿಂದ ಪೂರ್ಣ ನಾಟಕ ಓದಿಸಿ ಸಲಹೆಗಳನ್ನು ಕೊಟ್ಟು ಸದಭಿಪ್ರಾಯವನ್ನು ಕೊಟ್ಟು ಪ್ರೋತ್ಸಾಹಿಸಿದವರು ಹರ್ಡೆಕರ್ ಮಂಜಪ್ಪಣ್ಣನವರು. ಮುಖ್ಯಭಾಗಗಳನ್ನು ಓದಿಸಿ ತತ್ವವಿವೇಚನೆಯಲ್ಲಿ ಸಲಹೆ ಕೊಟ್ಟವರು ತತ್ವಜ್ಞಾನನಿಧಿಗಳಾದ ನವಕಲ್ಯಾಣಮಠದ ಶ್ರೀ ಶ್ರೀ ಕುಮಾರ ಸ್ವಾಮಿಗಳವರು. ಶ್ರೀಮಾನ್ ಕೊಪ್ಪಳ ವೀರಭದ್ರಪ್ಪನವರನ್ನೂ ಇಲ್ಲಿ ನೆನೆಯುವುದು ಅವಶ್ಯ. ಪಂ. ಚಂದ್ರಶೇಖರ ಶಾಸ್ತ್ರಿಗಳವರ ಬೆಲೆಯುಳ್ಳ ಶುಭಾಕಾಂಕ್ಷೆ ಗ್ರಂಥಕ್ಕೊಂದು ಶೋಭೆ. ಅವರಸರದಲ್ಲಿ ಅನೇಕ ಸೌಲಭ್ಯಗಳೊಡನೆ

ಅಂದವಾಗಿ ಮುದ್ರಿಸಿಕೊಟ್ಟವರು ಪಂ. ಬಸವರಾಜಶಾಸ್ತ್ರಿಗಳವರು ನಾಯಕಲ್. ಪ್ರೂಫ್ ತಿದ್ದುವ ಕಾರ್ಯದಲ್ಲಿ ನೆರವಾದವರು ಡಾಕ್ಟರ್ ಕಂಠಿ ಅವರು. ವಚನಗಳಿಗೂ, ಸ್ವತಂತ್ರಗೀತೆಗಳಿಗೂ ರಾಗ ತಾಳಗಳನ್ನು ಕೂಡಿಸಿಕೊಟ್ಟವರು ಗಾಯನ ಕೋಕಿಲ ಬಸವರಾಜ ಗವಾಯಿಗಳು. ಮೊದಲಿನಿಂದ ತುದಿಯವರೆಗೆ ನಾಟಕದ ಮುದ್ರಣಕ್ಕೆ ನಡಕಟ್ಟಿ ನಿಂತವರು ಶ್ರೀಮಾನ್ ಅನ್ನಪೂರ್ಣಸ್ವಾಮಿಗಳವರು. ನಾಟಕವನ್ನು ಮೇಲೆ ಮೇಲೆ ಓದಿ ಹಾಸ್ಯ ಭಾಗಗಳನ್ನು ತಿದ್ದಿ ಬೆಳೆಸಿದವರು ನನ್ನ ಪೂಜ್ಯ ತಂದೆಯವರು. ಬೇರೆ ಬೇರೆ ರೀತಿಯಲ್ಲಿ ನೆರವಾದ ನನ್ನ ಗೆಳೆಯರ ಗುಂಪು ದೊಡ್ಡದು ಎಲ್ಲರಿಗೂ ವಂದನೆಗಳು.

ಕನ್ನಡ ನುಡಿದೋಟದ ಮಡಿಗಳಲ್ಲಿ ಹೊಸ ಬೀಜಗಳು ಹಲವನ್ನು ಚೆಲ್ಲಬೇಕೆಂಬ ಛಲವಿದೆ. 'ಉರ್ದು ಸಾಹಿತ್ಯಸಾರ', 'ಚೇತರಿಸಿಕೊಂಡೆದ್ದ ಚೀನಾ' ಅಲ್ಲಮಪ್ರಭುವಿನ ಅದ್ಭುತ ಮೂರ್ತಿಸ್ವರೂಪವನ್ನು ಚಿತ್ರಿಸುವ ನೃತ್ಯ ಗೀತ ಪ್ರಧಾನ ನಾಟಕವೊಂದು, 'ಮಹಾಕವಿ ಇಕ್ಬಾಲ್' ಇವಿಷ್ಟು ಗ್ರಂಥಗಳನ್ನು ಕನ್ನಡ 'ವಾಗ್ದೇವಿಯ ಭಂಡಾರ'ಕ್ಕೆ ಸೇರಿಸಬೇಕೆಂಬ ಹವ್ಯಾಸ. ಪ್ರಥಮ ಕವನಸಂಗ್ರಹ 'ಜಲಪಾತ' ಹಾಗೂ ಅಕ್ಕಮಹಾದೇವಿಯ ನಾವೀನ್ಯಪೂರ್ಣ ನಾಟಕ 'ಸಮರತಿ'ಗಳು ಅಚ್ಚಿನ ಮನೆಗೆ ಹೊರಡಲು ಅಣಿಯಾಗಲಿವೆ. ಇವೆಲ್ಲವೂ ಬೈಲಿಗೆ ಬರುವುದೂ ಬಿಡುವುದೂ 'ಆತ್ಮಾರ್ಪಣ'ಕ್ಕೆ ದೊರೆಯುವ ಪುರಸ್ಕಾರ, ಸಹಾನುಭೂತಿಗಳನ್ನವಲಂಬಿಸಿದೆ.

–ಕಾವ್ಯಾನಂದ

ರಜತರೇಖೆ

ಮೊದಲ್ಮಾತು

ಹೈದರಾಬಾದು ಬೆಂಗಳೂರುಗಳ ಆಕಾಶವಾಣಿ ಕೇಂದ್ರಗಳಿಗಾಗಿ ಕಳೆದ ಹತ್ತು ಹನ್ನೆರಡು ವರ್ಷಗಳಲ್ಲಿ ನಾನು ಬರೆದ ಬಾನುಲಿ ರೂಪಕಗಳ ಸಂಗ್ರಹ 'ರಜತರೇಖೆ' ಕನ್ನಡ ನಾಡಿನ ಎಲ್ಲ ಭಾಗಗಳಲ್ಲಿ ಜನಪ್ರಿಯತೆ ಗಳಿಸಿದ ಗೀತರೂಪಕ 'ಗಿರಿಜಾ ಕಲ್ಯಾಣ'ವೂ ಈ ಸಂಗ್ರಹದಲ್ಲಿ ಸೇರಿದೆ. ಇವುಗಳನ್ನು ನನ್ನಿಂದ ಬರೆಸಿದ ಆಕಾಶವಾಣಿಯ ಅಧಿಕಾರಿಗಳಿಗೂ, ಇವುಗಳನ್ನು ಪುಸ್ತಕ ರೂಪದಲ್ಲಿ ಪ್ರಕಟಿಸಲು ಮುಂದೆ ಬಂದ ಧಾರವಾಡದ 'ಸಹಕಾರಿ ಸಾಹಿತ್ಯ ಸಮಿತಿ'ಯವರಿಗೂ, ವಿಶೇಷವಾಗಿ ಅದರ ಅಧ್ಯಕ್ಷರಾದ ಪ್ರಾಧ್ಯಾಪಕ ಹಾಲಪ್ಪನವರಿಗೂ ನನ್ನ ನಮನಗಳು.

ಓದುಗರಿದನ್ನು ಮೆಚ್ಚಿದರೆ ನನಗದೇ ಮೆಚ್ಚು.

ಸಿದ್ಧಯ್ಯ ಪುರಾಣಿಕ

ಬೆಂಗಳೂರು

೨೮-೨-೧೯೬೨

ಭರತವೀರ

ಬರೆದವನ ಬಿನ್ನಹ

ಸಾವಿರಾರು ವರ್ಷಗಳ ಹಿಂದೆಯೇ ಎಚ್ಚರಿಸಿದರು ಮಹಾಪುರುಷ ವೇದವ್ಯಾಸರು: 'ಇಯಮಾಪತ್ಸಮುತ್ಪನ್ನಾ ಪರಿಚಕ್ರಭಯಂ ಮಹತ್!'–ಎಂದು. ಅಂದಿನಿಂದ ಇಂದಿನವರೆಗೆ ಈ ದೇಶಕ್ಕೆ ಪರಿಚಕ್ರಭಯ, ಅಪತ್ತು ಉತ್ಪನ್ನವಾಗುತ್ತಲೇ ಬಂದಿವೆ. ಇಂಥ ಸಂಪದ್ಭರಿತ ದೇಶಕ್ಕೆ ಆಪತ್ತು ಬರದೆ ಇನ್ನೆಂಥ ದೇಶಕ್ಕೆ ಬರಬೇಕು?

ಆದಿಯಿಂದಲೂ ಎಲ್ಲ ಸುಲಿಗೆಗಾರರ ದುರಾಶಾಪೂರಿತ ದೃಷ್ಟಿ ಈ ದೇಶದ ಮೇಲೆ! ಪೀತವರ್ಣದವರು, ಶ್ವೇತವರ್ಣದವರು, ಏಷ್ಯಾದವರು, ಯುರೋಪಿನವರು–ಎಲ್ಲರೂ ಏರಿ ಬಂದರು ಈ ದೇಶದ ಮೇಲೆ. ಇಂದೂ ಏರಿ ಬಂದಿದ್ದಾರೆ ಚೀಣೀಯರು!

ಈ ದುರಾಕ್ರಮಣಕಾರರ ದಾಳಿಗಳನ್ನು ಭಾರತವು ಎದುರಿಸುತ್ತಲೇ ಬಂದಿದೆ–ಎದೆಗಾರಿಕೆಯೊಡನೆ. ಸೃಷ್ಟಿಯ ನಿಯಮದಂತೆ ಕೆಲವು ಸಲ ಭಾರತ ಗೆದ್ದಿದೆ, ಕೆಲವು ಸಲ ಬಿದ್ದಿದೆ. ಏಳುಬೀಳುಗಳೆರಡನ್ನೂ ಅನುಭವಿಸದವರಾರು? ಕಾಲಚಕ್ರ ಉರುಳಿದಂತೆ ಚಕ್ರಾಧಿಪತ್ಯಗಳೂ ಉರುಳುತ್ತವೆ. ಏರಿದುದು ಇಳಿಯುತ್ತದೆ. ಇಳಿದುದು ಮತ್ತೆ ಏರುತ್ತದೆ.

ಆದರೆ ಭಾರತೀಯರ ಮಟ್ಟಿಗೆ ಹೇಳುವುದಾದರೆ ಅವರ ಸಾಹಸ ಪರಾಕ್ರಮಗಳ, ವಿಜಯ ವೈಭವಗಳ ತೇಜೋಮಯ ಇತಿಹಾಸ ಮಸುಳಿಸಿ ಪರಾಜಯ ಪರಂಪರೆಯ ಹೃದಯ ವಿದ್ರಾವಕ ಇತಿಹಾಸವೇ ಎದ್ದು ಕಾಣಿಸುತ್ತಿದೆ. ನಾವು ಗೆದ್ದುದಕ್ಕಿಂತ ನಾವು ಸೋತುದೇ ಹೆಚ್ಚಾಗಿ ನಮಗೆ ಕಾಣುವಂತಾಗಿರುವುದು ನಾವು ನಮ್ಮ ಇತಿಹಾಸವನ್ನು ನಿರ್ಲಕ್ಷಿಸಿರುವುದಕ್ಕೆ ಸಾಕ್ಷಿ.

ಈಗಲಾದರೂ ನಾವು ನಮ್ಮ ವಿಜಯಗಳ ಉತ್ಸಾಹವರ್ಧಕ, ಸಾಹಸೋತ್ತೇಜಕ ಘಟನೆಗಳನ್ನು ವೀರ್ಯವತ್ತಾಗಿ ಚಿತ್ರಿಸಿ ನಮ್ಮ ಯುವಜನಾಂಗದಲ್ಲಿ ಎಂಥ ಗಂಡಾಂತರವನ್ನೂ ಎದುರಿಸಿ ಚೆದುರಿಸಬಲ್ಲ ಮನೋದಾರ್ಢ್ಯವನ್ನು, ಕೆಚ್ಚೆದೆಯನ್ನು, ಕಲಿತನವನ್ನು, ಸಾಹಸಪ್ರಿಯತೆಯನ್ನು ಪ್ರಚೋದಿಸಬೇಕು.

ಭಾರತದ ಭವಿತವ್ಯವಿಂದು ಹಿಮಾಲಯದ ತಕ್ಕಡಿಯಲ್ಲಿ ತೂಗಾಡುತ್ತಲಿದೆ! ನಾವು ನಲ್ವತ್ತುನಾಲ್ಕು ಕೋಟಿ ಜನರೊಂದು ಕಡೆಗೆ, ನಮಗಿಂತಲೂ ನಮ್ಮ ಅರ್ಧದಷ್ಟು ಹೆಚ್ಚಿರುವ ಚೀಣೀಯರು ಇನ್ನೊಂದು ಕಡೆಗೆ ನಿಂತು ಬಲಾಬಲಗಳ, ಸತ್ವದ, ಸಾಹಸದ ಪರೀಕ್ಷೆಯಲ್ಲಿ ತೊಡಗಿದ್ದೇವೆ. ಈ ದುರ್ಧರ ಪ್ರಸಂಗದಲ್ಲಿ, ದಾರುಣ ಸನ್ನಿವೇಶದಲ್ಲಿ ಮತ್ತೆ ಮಹರ್ಷಿ ವೇದವ್ಯಾಸರ ಅಭಯವಾಣಿ ನಮ್ಮ ಕರ್ಣಗಳಲ್ಲಿ ನಿನದಿಸುತ್ತಲಿದೆ:

ಅರಯೋ ಯೇ ಸಮುತ್ಥಾಯ ಬಹುಭಿರ್ದಸ್ಯುಭಿಃ ಸಹ।

ಇದಮಾತ್ಮವಧಾಯೈವ ರಾಷ್ಟ್ರಮಿಚ್ಛಂತಿ ಬಾಧಿತುಮ್॥*

(ಬಹು ಸಂಖ್ಯಾಕ ದಸ್ಯುಗಳು ನಮ್ಮ ರಾಷ್ಟ್ರವನ್ನು ಬಾಧಿಸಲು ಬಂದಿದ್ದಾರೆ! ಆದರೆ ಅವರು ಆತ್ಮವಧೆಗಾಗಿಯೇ ಬಂದಿದ್ದಾರೆ! ಇದರಲ್ಲಿ ಅವರೇ ನಾಶವಾಗುತ್ತಾರೆ!)

ಆದರೆ ಈ ಅಭಯವಾಣಿ ಸತ್ಯವಾಗಬೇಕಾದರೆ ನಮ್ಮಲ್ಲಿ ಸತ್ವೋದ್ರೇಕವಾಗಬೇಕು. ವೀರಾವೇಶ ಉಕ್ಕಬೇಕು, ರಾಷ್ಟ್ರ ರಕ್ಷಣೆಗಾಗಿ ಶಸ್ತ್ರದೀಕ್ಷೆ ಪಡೆದು ಸಿಂಹನಾದಗೈಯುವ ಸಾಹಸ ಭೀಮತನ ಸಿಡಿದೇಳಬೇಕು.

ಇದನ್ನು ಸಾಧ್ಯವಾಗಿಸುವಲ್ಲಿ ನಮ್ಮ ವಿಜಯಗಳನ್ನು ವರ್ಣಿಸುವ ಸಾಹಿತ್ಯ ಸಹಕಾರಿಯಾಗುತ್ತದೆ. ಆ ದಿಶೆಯಲ್ಲಿ ಅಲ್ಪ ಪ್ರಯತ್ನವೊಂದು ಈ ಕೃತಿ.

೧೯೬೨ರ ಅಕ್ಟೋಬರ್ ೨೦ನೆಯ ದಿನಾಂಕ! ಇದ್ದಕ್ಕಿದ್ದಂತೆ ಹಿಮಾಲಯದ ಶಾಂತಿ ಕದಡಿ ಸಿಡಿಮದ್ದಿನ ನಾತ ಹರಡಿತು ನೀಫಾ ಲದ್ದಾಖಗಳಲ್ಲಿ! ಚೀಣೀಯರ ಯುದ್ಧದಾಹ ಸ್ನೇಹದ ಹೃದಯಕ್ಕೇ ಗುಂಡಿಟ್ಟು ಹೊಡೆಯಿತು! ವಿಶ್ವದ ಇತಿಹಾಸದಲ್ಲಿಯೇ ಇಂಥ ವಿಶ್ವಾಸಘಾತದ ಪ್ರಸಂಗಗಳು ವಿರಳ! ಈ ಘಟನೆ ನಡೆದ ಎರಡು ದಿನಗಳಲ್ಲಿಯೇ ರಾಷ್ಟ್ರನಾಯಕ ಪಂಡಿತ ಜವಹರಲಾಲ ನೆಹರು ಅವರು ಭಾರತದ ವಾರ್ತಾಮಂತ್ರಿಗಳ ಸಭೆಯನ್ನು ಉದ್ದೇಶಿಸಿ ಮಾತನಾಡಿದಾಗ ಉಪಸ್ಥಿತನಾಗಿರುವ ಭಾಗ್ಯ ನನಗೆ ಲಭಿಸಿತು. ರಾಷ್ಟ್ರದ ಧಮನಿಗಳಲ್ಲಿ ವಿದ್ಯುದೂರ್ಮಿಗಳು ನರ್ತಿಸತೊಡಗಿದ ಆ ಅವಿಸ್ಮರಣೀಯ ಪ್ರಸಂಗ ಮನದ ಮೇಲೆ ತನ್ನ ವಜ್ರದ ಮುದ್ರೆಯನ್ನು ಮೂಡಿಸಿತು. ರಾಷ್ಟ್ರ ರಕ್ಷಣೆಯ ಪ್ರಯತ್ನಗಳಿಗೆ ನೆರವಾಗಬಲ್ಲ ನಾಟಕವೊಂದನ್ನು ಬರೆಯಬೇಕೆಂಬ ಸಂಕಲ್ಪ ಆಗಲೇ ಉದಿಸಿತು ಮನದಲ್ಲಿ.

---

* ಮಹಾಭಾರತ : ಶಾಂತಿಪರ್ವ, ಅಧ್ಯಾಯ ೮೨, ಶ್ಲೋಕ ೨೮.

ಭಾರತದ ಇತಿಹಾಸದ ಮೇಲೆ ಉಪಲಬ್ಧವಿದ್ದ ಉದ್ಗ್ರಂಥಗಳನ್ನೆಲ್ಲ ಉಚಿತ ವಸ್ತುವಿನ ಶೋಧಕ್ಕಾಗಿ ಓದಿದುದಾಯಿತು. ಇಂದಿನ ಪರಿಸ್ಥಿತಿಗೆ ಎಲ್ಲ ದೃಷ್ಟಿಯಿಂದಲೂ ಹೊಂದಿಕೊಳ್ಳಬಲ್ಲ ವಸ್ತುವನ್ನೇ ಹುಡುಕಬೇಕೆಂಬ ಹಟ ಆರು ತಿಂಗಳುಗಳ ಅವಧಿಯಲ್ಲಿ ಫಲಿಸಿತು. ಮಿಹಿರಕುಲನನ್ನು ಎರಡು ಸಲ ಸೋಲಿಸಿದ ಬಾಲಾದಿತ್ಯನ ಮೇಲಾದ ವಸ್ತು ಹಸ್ತಗತವಾಯಿತು. ಅವನ ಐತಿಹಾಸಿಕತೆಯ ಬಗ್ಗೆ ಒಬ್ಬಿಬ್ಬ ಇತಿಹಾಸಕಾರರಲ್ಲಿ ಮತಭೇದವಿದ್ದರೂ ಮಿಹಿರಕುಲನ ಪರಾಜಯ ನಿಸ್ಸಂದೇಹವಾದುದೆಂಬ ಬಗ್ಗೆ ಎರಡು ಅಭಿಪ್ರಾಯ ಕಂಡುಬರಲಿಲ್ಲ. ಅವನನ್ನು ಯಾರು ಸೋಲಿಸಿದರೆಂಬುದು ಅಷ್ಟು ಮಹತ್ವದ್ದಾಗಿ ನನಗೆ ತೋರಲಿಲ್ಲ. ಸೋಲಿಸಿದವನು ಭಾರತದ ವೀರ ಭೂಪಾಲನೊಬ್ಬ. ಅವನ ಹೆಸರು ಬಾಲಾದಿತ್ಯನಾಗಿರಲಿ, ಬಿಡಲಿ–ಬಾಲಾದಿತ್ಯನೆಂದೇ ನಂಬಿ ನಾಟಕ ಬರೆದಲ್ಲಿ ಪ್ರಮಾದವೇನಿಲ್ಲ. ಮೇಲಾಗಿ, ಬಾಲಾದಿತ್ಯನೇ ಆ ಭರತವೀರನೆಂಬುದಕ್ಕೆ ಆಧಾರಗಳು ಇಲ್ಲದಿಲ್ಲ. ಅನುಬಂಧದಲ್ಲಿ ಕೊಟ್ಟಿರುವ ಅವತರಣಿಕೆಗಳಿಂದ ಈ ಸಂಗತಿ ಸ್ಪಷ್ಟವಾಗುವುದು. ಆದುದರಿಂದ ಅವನನ್ನೇ ಈ ನಾಟಕದ ನಾಯಕನನ್ನಾಗಿ ಆಯ್ದು ನಾಟಕ ನೆಯ್ದಿದ್ದೇನೆ. ಈ ನಾಟಕದ ಇನ್ನು ಕೆಲವು ಪಾತ್ರಗಳನ್ನೂ ಇದೇ ಮಾನದಂಡದಿಂದ ಪರೀಕ್ಷಿಸಿ ಪರಿಗ್ರಹಿಸಿದ್ದೇನೆ, ಇಲ್ಲವೆ ಕಲ್ಪಿಸಿಕೊಂಡಿದ್ದೇನೆ.

ಈ ನಾಟಕ ಮುಖ್ಯವಾಗಿ ರಾಷ್ಟ್ರರಕ್ಷಣೆಯ ಪ್ರಯತ್ನಗಳಿಗೆ ಪ್ರಚೋದಕವಾಗಲೆಂಬ ಉದ್ದೇಶದಿಂದ ಬರೆದುದು. ಚೀಣೀಯರ ದುರಾಕ್ರಮಣದಿಂದ ರಾಷ್ಟ್ರದಲ್ಲಿ ಉದ್ಭವಿಸಿರುವ ಐಕ್ಯಮತ್ಯ ಬಂಧು ಭಾವನೆಗಳು ಬಲಗೊಂಡು ನಿರಂತರವಾಗಿ ನಾಡಿಗರಲ್ಲಿ ನೆಲೆಗೊಳ್ಳಬೇಕಾದರೆ ಇಂಥ ನಾಟಕಗಳನ್ನು ಆಗಾಗ ಅಭಿನಯಿಸುವುದು ಅಗತ್ಯವಾದುದು–ಎಂಬ ನಂಬಿಕೆ ನನ್ನಲ್ಲಿ ನಿಂತು ಈ ನಾಟಕವನ್ನು ಬರೆಸಿದೆ. ಪ್ರಯೋಗಾನಂತರವೇ ಇದರ ಪರಿಣಾಮಕಾರಿತ್ವ ಪ್ರಕಟವಾಗಬೇಕು* ಇದು ದೋಷರಹಿತವಾದ ಕೃತಿಯೆಂಬ ಹುಸಿ ಹೆಮ್ಮೆ ನನಗಿಲ್ಲ. ಪ್ರಾಜ್ಞರು ದೋಷಗಳನ್ನು ಎತ್ತಿ ತೋರಿದಾಗಲೂ ಅವುಗಳನ್ನು ಒಪ್ಪಿಕೊಂಡು ಸರಿಪಡಿಸಿಕೊಳ್ಳಕೂಡದೆಂಬ ಮೊಂಡುತನವೂ ನನ್ನಲ್ಲಿಲ್ಲ. ಇದನ್ನು ಓದಿ ಕೆಲರಿಗೆ, ಕೇಳಿ ಕೆಲರಿಗೆ, ರಂಗಭೂಮಿಯ ಮೇಲೆ ನೋಡಿ ಇನ್ನು ಕೆಲವರಿಗೆ ಮೆಚ್ಚಿಗೆಯಾದರೆ ನಾನಿದನ್ನು ಬರೆದ ಶ್ರಮ ಸಾರ್ಥಕವಾಯಿತೆಂದು ಭಾವಿಸುತ್ತೇನೆ.

---

* ಬೆಂಗಳೂರು ಧಾರವಾಡಗಳಲ್ಲಿ ಕಲಾವಿಲಾಸಿಗಳಿದನ್ನು ರಂಗಭೂಮಿಯ ಮೇಲೆ ಅಭಿನಯಿಸಿ ತೋರಿಸಿ ಇದರ ಪರಿಣಾಮಕಾರಿತ್ವವನ್ನು ಸಿದ್ಧಪಡಿಸಿದ್ದಾರೆ. ಅವರಿಗೆ ನನ್ನ ಕೃತಜ್ಞತೆಯ ಕಾಣಿಕೆ.

ಈ ನಾಟಕವನ್ನು ಬರೆಯಬೇಕೆಂಬ ಬಯಕೆಯ ಸಸಿಗೆ ನೀರೆರೆದು ಬೆಳೆಸಿದವರು ಬೆಂಗಳೂರಿನ ಸೆಕ್ರೆಟೇರಿಯಟ್ ಕ್ಲಬ್ಬಿನ ನಾಟಕ ವಿಭಾಗದ ಸ್ನೇಹಿತರು. ಅವರಲ್ಲಿಯೂ ಹೆಚ್ಚು ಆಸಕ್ತಿವಹಿಸಿದವರು ಕ್ಲಬ್ಬಿನ ಕಾರ್ಯದರ್ಶಿಯವರಾದ ಶ್ರೀ ಬಿ. ಚನ್ನಬಸಪ್ಪನವರು, ಕ್ಲಬ್ಬಿನ ನಾಟಕ ವಿಭಾಗದ ಜೀವನಾಡಿ ಶ್ರೀ ಆರ್. ಎಸ್. ರಾಮರಾಯರು. ಶ್ರೀ ರಾಮರಾಯರಂತೂ ಸಲಹೆಗಳನ್ನು ನೀಡಿ ಸಹಕರಿಸಿದ್ದಾರೆ. ಇವರೆಲ್ಲರನ್ನೂ ಇಲ್ಲಿ ನೆನೆಯುವುದು ನನ್ನ ಕರ್ತವ್ಯ.

ಇದರ ಪ್ರಕಟಣೆಯ ಉದ್ದೇಶವೇ ನನಗಿರಲ್ಲಿಲ್ಲ. ಆದರೆ ನನ್ನ ಅನಿಮಿತ್ತ ಬಂಧುಗಳೊಬ್ಬರು ಇಂಥದೊಂದು ನಾಟಕ ಈಗ ಪ್ರಕಟವಾಗುವುದು ಅಗತ್ಯವೆಂದು ಆಗ್ರಹ ಹಿಡಿದು, ಯೋಗ್ಯ ಪ್ರಕಾಶಕರನ್ನೂ ಒದಗಿಸಿಕೊಟ್ಟು ಇದರ ಪ್ರಕಟನೆಗೆ ಮುಖ್ಯ ಕಾರಣರಾಗಿದ್ದಾರೆ. ಅವರನ್ನೂ ಈ ಸಂದರ್ಭದಲ್ಲಿ ಕೃತಜ್ಞತೆಯೊಡನೆ ಸ್ಮರಿಸಿ ಕನ್ನಡ ಸರಸ್ವತಿಯ ಶ್ರೀಚರಣಗಳಿಗೆ ಈ ಕೃತಿ ಕುಸುಮವನ್ನು ಸಮರ್ಪಿಸುತ್ತೇನೆ.

–ಸಿದ್ಧಯ್ಯ ಪುರಾಣಿಕ

ಬೆಂಗಳೂರು
೩೧–೮–೧೯೬೩

ಭಗ್ನ ನೂಪುರ
ನಿವೇದನ

ನನ್ನ 'ಗಿರಿಜಾಕಲ್ಯಾಣ' ರಾಷ್ಟ್ರೀಯ ಪ್ರಸಾರಕ್ಕಾಗಿ ಆಯ್ಕೆಗೊಂಡು ಭಾರತದ ಎಲ್ಲ ಭಾಷೆಗಳ ಆಕಾಶವಾಣಿ ಕೇಂದ್ರಗಳಿಂದ ಪ್ರಸಾರವಾದ ಪ್ರಪ್ರಥಮ ಕನ್ನಡ ಗೇಯನಾಟಕವಾದಾಗ ಪ್ರಸಾರನಾಟಕಗಳಲ್ಲಿ ನನಗಿದ್ದ ಆಸಕ್ತಿ ಆತ್ಮವಿಶ್ವಾಸವಾಗಿ ಪರಿಣಮಿಸಿತು, ಬಾನುಲಿಯ ಬೇಡಿಕೆ ಬಂದಾಗಲೆಲ್ಲ ಬರೆಯುತ್ತಲೇ ಬಂದಿದ್ದೇನೆ ರೇಡಿಯೋ ನಾಟಕಗಳನ್ನು.

ಇವುಗಳಲ್ಲಿ ಕೆಲವು ಬಹಳ ಹಿಂದೆಯೇ 'ರಜತರೇಖೆ' ಎಂಬ ಹೆಸರು ಹೊತ್ತು ಧಾರವಾಡದ ಸಹಕಾರೀ ಸಾಹಿತ್ಯ ಪ್ರಕಾಶನದ ಮೂಲಕ ಬೆಳಕು ಕಂಡುವು. ಅಲ್ಲಿಂದೀಚೆಗೆ ನನ್ನ ಅನೇಕ ಪ್ರಸಾರ ನಾಟಕಗಳು ಆಕಾಶವಾಣಿಯಿಂದ ಪ್ರಸಾರವಾಗಿವೆ, ಇವುಗಳಿಗೆ ಶ್ರೋತೃಗಳಿಂದ ಮೆಚ್ಚೋಲೆಗಳೂ ಬಂದಿವೆಯೆಂದು ಕೇಳಿದ್ದೇನೆ. ಆದರೆ ಇವುಗಳನ್ನು ಪುಸ್ತಕ ರೂಪದಲ್ಲಿ ಪ್ರಕಟಿಸುವ ಯೋಚನೆಯೇ ನನಗಿಲ್ಲದುದರಿಂದ ಕೆಲವು ನಾಟಕಗಳ ಹಸ್ತಪ್ರತಿಗಳೇ ನಷ್ಟವಾಗಿ ಹೋದುವು. 'ಮೋಹನಮಂತ್ರ' ಮೊದಲಾದ ನಾಟಕಗಳನ್ನು ಕೇಳಿದವರು ಕೆಲವರು ಈಗಲೂ ಆಗಾಗ್ಗೆ ಅವುಗಳ ಬಗ್ಗೆ ಪ್ರಸನ್ನತೆಯೊಡನೆ ಪ್ರಸ್ತಾಪಿಸಿ ಅವುಗಳನ್ನು ಅಚ್ಚಿಸುವುದು ಅಗತ್ಯವೆಂಬ ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ. ಹೀಗಿದ್ದೂ ಕಳೆದುಹೋದ ಅಗತ್ಯವೆಂಬ ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ. ಹೀಗಿದ್ದೂ ಕಳೆದುಹೋದ ಹಸ್ತಪ್ರತಿಗಳ ಬಗ್ಗೆ ನಾನು ತಲೆಕೆಡಿಸಿಕೊಂಡಿರಲಿಲ್ಲ; ಉಪಲಬ್ಧವಿರುರ ಹಸ್ತಪ್ರತಿಗಳ ಪ್ರಕಟನೆಯ ಬಗ್ಗೆ ಯೋಚಿಸಿಯೂ ಇರಲಿಲ್ಲ.

ಆದರೆ 'ಕರ್ನಾಟಕ ಟ್ರೇಡಿಂಗ್ ಏಜೆನ್ಸೀಸ್' ಪ್ರಕಟನಾಲಯದ ಮಿತ್ರರ ಒತ್ತಾಯಕ್ಕೆ ಒಳಗಾಗಿ ಈಗ ಮೂರೂ ಆಯ್ದ ಬಾನುಲಿ ನಾಟಕಗಳ ಪ್ರಕಟನೆಗೆ ಒಪ್ಪಿದ್ದೇನೆ. ಈ ಮೂರು ನಾಟಕಗಳನ್ನು ತುಂಬಿ ನಿಂತಿರುವವರು ಮೂವರು ಮಹಾಮಹಿಳೆಯರು–ತಮಿಳುನಾಡಿನ ಕನ್ನಗಿ, ಕಾಶ್ಮೀರದ ಹಬ್ಬಾಖಾತೂನ್ ಮತ್ತು ಕರ್ನಾಟಕದ ಅಕ್ಕಮಹಾದೇವಿ! ಮೂವರ ವ್ಯಕ್ತಿತ್ವವೂ ಮೂದೆರನಾದುದು, ವೈಶಿಷ್ಟ್ಯಪೂರ್ಣವಾದುದು, ಉದ್ದೀಪನಕಾರಿಯಾದುದು. ಕನ್ನಗಿಯ ಕೆಚ್ಚು, ಹೆಬ್ಬಾಳ ಏರಿಳಿತಗಳ ಸರಿಗಮ, ಅಕ್ಕನ ಸತಿ–ಪತಿ–ಭಾವದ ಪರಾಕಾಷ್ಠೆ–ಒಂದೊಂದೂ

ರೋಮಾಂಚನಕಾರಕ! ನನಗೆ ಬರುವಷ್ಟು ಭಾಷೆಗಳಲ್ಲಿರುವ ಸಾಹಿತ್ಯಗಳಲ್ಲಿ ನನಗೆ ಸಾಧ್ಯವಾದಷ್ಟು ಕೃತಿಗಳನ್ನು ಓದಿ ಸ್ತ್ರೀ ಸತ್ವದ ಸಹಸ್ರ ಮುಖಗಳನ್ನು ಕಂಡುಕೊಳ್ಳಲು ಪ್ರಯತ್ನಿಸಿದ್ದೇನೆ. ಬಹಳ ಹಿಂದೆ ನನ್ನಮನಸ್ಸನ್ನು ಸೆರೆ ಹಿಡಿದ ಕಾರ್ಡಿನಲ್ ನ್ಯೂಮನ್ನನ ಈ ವಾಕ್ಯ ಇದಕ್ಕೆ ಪ್ರೇರಕ :

"If the soul is to go on into higher spiritual blessedness, it must become woman; yes, how ever manly that mayest be among men."

ಇದರೊಡನೆ ಶಿವಶರಣರು ಹೆಣ್ಣಿಗಿತ್ತ ಗೌರವದ ಸ್ಥಾನವನ್ನು ಅರಿತ ಮೇಲೆ ಆತ್ಮವನ್ನು ಹೆಣ್ಣಾಗಿಸಿಕೊಳ್ಳುವ ಹಂಬಲ ಇನ್ನೂ ಹೆಚ್ಚಿತು. ಅದರ ಫಲವೇ ಈ ಮೂರು ನಾಟಕಗಳು. ಇವುಗಳಲ್ಲಿ ಭಾರತದ ಮೂರು ವಿಭಿನ್ನ ರಾಜ್ಯಗಳ ಮೂವರು ಮಹಾವನಿತೆಯರನ್ನು ಮೂಡಿಸಿದ ತೃಪ್ತಿ ನನ್ನದು; ಇವುಗಳ ಬಗ್ಗೆ ತೀರ್ಪು ಓದುಗರದು. ಇವುಗಳನ್ನು ಅವರ ಉಡಿಗಳಲ್ಲಿ ಇರಿಸುವ ಮುನ್ನ ಆಕಾಶವಾಣಿಗೆ, ಪ್ರಕಾಶಕರಿಗೆ, ಮುದ್ರಕರಿಗೆ ವಂದಿಸುತ್ತೇನೆ.

– ಸಿದ್ಧಯ್ಯ ಪುರಾಣಿಕ

ಶ್ರೀ ಗಿರಿ
೪/೫ ಅ, ಆಲಿ ಆಸ್ಕರ್ ರಸ್ತೆ,
ಬೆಂಗಳೂರು-೫೬೦ ೦೫೨.

ಅನುಬಂಧ ೪

ಡಾ. ಸಿದ್ಧಯ್ಯ ಪುರಾಣಿಕರ ಜೀವನ ವಿವರ

ಇಸವಿ	ಘಟನೆಗಳು
೧೯೧೮	ಜನನ, ೧೮.೬.೧೯೧೮, ಕೊಪ್ಪಳ ಜಿಲ್ಲೆಯ ಯಲಬುರಗಿ ತಾಲ್ಲೂಕ್, ದ್ಯಾಂಪುರದಲ್ಲಿ ತಂದೆ ಕಲ್ಲಿನಾಥಶಾಸ್ತ್ರಿಯವರು, ತಾಯಿ ದಾನಮ್ಮನವರು.
೧೯೩೨	'ಬೆಳಗು' ಕವನ ರಚನೆ
೧೯೩೭	ಹರ್ಡೇಕರ ಮಂಜಪ್ಪನವರೊಂದಿಗೆ ಅಲಮಟ್ಟಿಯಲ್ಲಿ ವಾಸ
೧೯೪೩	ತಹಸೀಲ್ದಾರ ತರಬೇತಿ, ನಾಂದೇಡ, ಹೈದರಾಬಾದ್
೧೯೪೪	ವಿವಾಹ (೧೧.೫.೧೯೪೪)ರಲ್ಲಿ ವಿವಾಹ, ಗಿರಿಜಾದೇವಿಯ ವರೋಡನ್
೧೯೪೪	ಅಸಿಸ್ಟೆಂಟ್ ಕಲೆಕ್ಟರ್, ನಾಂದೇಡ
೧೯೪೫	ಅಸಿಸ್ಟೆಂಟ್ ಕಲೆಕ್ಟರ್, ಲ್ಯಾಂಡ್ ರಿಕಾರ್ಡ್ಸ ವಿಭಾಗ, ಗುಲಬರ್ಗಾ
೧೯೪೮	ಅಸಿಸ್ಟೆಂಟ್ ಕಮಿಷನರ್ (ಜಾಗೀರಾತ್)
೧೯೫೧	ಅಸಿಸ್ಟೆಂಟ್ ರೆವಿನ್ಯೂ ಸೆಕ್ರೆಟರಿ, ಹೈದರಾಬಾದ್ ಸಂಸ್ಥಾನ
೧೯೫೨	ಸ್ಥಾನಿಕ ಸ್ವರಾಜ್ಯ ಆಡಳಿತ ಸಚಿವರ ಕಾರ್ಯದರ್ಶಿ
೧೯೫೩	ಕೃಷಿ ಯೋಜನೆ ಹಾಗು ಪೂರೈಕೆ ಇಲಾಖೆಯ ಸಚಿವರ, ಕಾರ್ಯದರ್ಶಿ
೧೯೫೫	ಡೆಪ್ಯೂಟಿ ಕಲೆಕ್ಟರ್, ತಾಂಡೂರ
೧೯೫೭	ಡೆಪ್ಯೂಟಿ ಕಲೆಕ್ಟರ್, ಯಾದಗಿರಿ
೧೯೫೮	ಭಾರತೀಯ ನಾಗರಿಕ ಸೇವೆ (ಐ.ಎ.ಎಸ್.)
೧೯೬೦	ವಿದ್ಯಾಇಲಾಖೆಯ ಡೆಪ್ಯೂಟಿ ಸೆಕ್ರೆಟರಿ

೧೯೬೨	ನಿರ್ದೇಶಕರು, ವಾರ್ತಾ ಮತ್ತು ಪ್ರವಾಸೋದ್ಯಮ ಇಲಾಖೆ
೧೯೬೪	ಅರ್ಥಶಾಖೆಯಲ್ಲಿ ಡೆಪ್ಯೂಟಿ ಸೆಕ್ರೆಟರಿ, ಚಿನ್ನ ನಿಯಂತ್ರಣಾಧಿಕಾರಿ
೧೯೬೫	ಡೆಪ್ಯೂಟಿ ಕಮಿಷನರ್, ಮಡಿಕೇರಿ
೧೯೬೭	ಸಾರಿಗೆ ಕಮಿಷನರ್, ಬೆಂಗಳೂರು
೧೯೭೦	ಡೆಪ್ಯೂಟಿ ಕಮಿಷನರ್, ಬೆಳಗಾವಿ
೧೯೭೨	ಲೇಬರ್ ಕಮಿಷನರ್, ಬೆಂಗಳೂರು
೧೯೭೪	ರಾಜ್ಯ ಸಾಹಿತ್ಯ ಅಕಾಡೆಮಿ ಪ್ರಶಸ್ತಿ
೧೯೭೫	ಕರ್ನಾಟಕ ವಿಶ್ವವಿದ್ಯಾಲಯದ ಗೌರವ ಡಾಕ್ಟರೇಟ್ ಪದವಿ
೧೯೭೬	ನಿವೃತ್ತಿ ಹಾಗೂ ವಿಶ್ರಾಂತಿ ಜೀವನ
೧೯೭೮	'ವಚನೋದ್ಯಾನ'ಕ್ಕೆ ರಾಜ್ಯ ಸಾಹಿತ್ಯ ಅಕಾಡೆಮಿಯ ಅತ್ಯುತ್ತಮ ಪುಸ್ತಕ ಪುರಸ್ಕಾರ
೧೯೭೯	ಬಸವ ಸಮಿತಿಯ ಸಂಶೋಧನ ಮತ್ತು ಪ್ರಕಟಣ ವಿಭಾಗದ ನಿರ್ದೇಶಕ; ಬಸವ ಪಥ (ಕನ್ನಡ ಮಾಸಿಕ), ಬಸವ ಜರ್ನಲ್ (ಇಂಗ್ಲೀಷ್ ತ್ರೈಮಾಸಿಕ) ಪತ್ರಿಕೆಗಳ ಪ್ರಧಾನ ಸಂಪಾದಕ.
೧೯೮೦	ಬಿಲ್ವಾರ ಪ್ರಶಸ್ತಿ (ಭಾರತೀಯ ಭಾಷಾ ಪರಿಷತ್ತು ಕಲ್ಕತ್ತಾ) 'ವಚನೋದ್ಯಾನ' ಕೃತಿಗೆ
೧೯೮೧	ಮಾಳವಾಡ ಪ್ರಶಸ್ತಿ (ಕರ್ನಾಟಕ ವಿಶ್ವವಿದ್ಯಾಲಯ)
೧೯೮೧	ರಾಜ್ಯಮಟ್ಟದ ಅಭಿನಂದನ ಸಮಿತಿಯ ಸತ್ಕಾರ, ಅಭಿನಂದನ ಗ್ರಂಥ, ನಿಧಿ ಸಮರ್ಪಣೆ
೧೯೮೩	'ವಚನ ನಂದನ' ಪ್ರಕಟಣೆ
೧೯೮೫	ದ್ವಿತೀಯ ಮಕ್ಕಳ ಸಾಹಿತ್ಯ ಸಮ್ಮೇಳನ (ಧಾರವಾಡ)ದ ಅಧ್ಯಕ್ಷರು
೧೯೮೭	ಗುಲ್ಬರ್ಗಾದಲ್ಲಿ ನಡೆದ ಕನ್ನಡ ಸಾಹಿತ್ಯ ಪರಿಷತ್ತಿನ ೫೮ನೆಯ ಅಖಿಲಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರು.
೧೯೯೪	'ವಚನ ಬ್ರಹ್ಮ' ಬಿರುದು–ಕಲಾಜ್ಯೋಗಿ ಸ್ನೇಹಿತರ ಸಂಘ ಹಾಗೂ ಸರ್ವಜ್ಞ ಕಲಾನಿಕೇತನ, ಬೆಂಗಳೂರು
೧೯೯೪	ಮರಣ (೫.೯.೧೯೯೪)

ಅನುಬಂಧ ೫

ಡಾ. ಸಿದ್ಧಯ್ಯ ಪುರಾಣಿಕರ ಸಾಹಿತ್ಯಸೂಚಿ

ಕವನ ಸಂಕಲನಗಳು

೧.	ಜಲಪಾತ	ಸಂಗಡಿಗರ ಸಮಿತಿ, ರಾಯಚೂರು	೧೯೫೩, ೬೪
೨.	ಕರುಣಾಶ್ರಾವಣ	ಸಹಜೀವನ ಪ್ರಕಾಶನ, ಕಾಚೀಗೂಡಾ ಹೈದರಾಬಾದ್ ದಕ್ಷಿಣ ಶ್ರೀ ಶಕ್ತಿ ಎಲೆಕ್ಟ್ರಿಕ್ ಪ್ರೆಸ್, ಕೃಷ್ಣಮೂರ್ತಿ ಪುರಂ, ಮೈಸೂರು–೪	೧೯೫೫, ೬೭
೩.	ಮಾನಸ ಸರೋವರ	ಶಾರದಾ ಪ್ರಕಟನಾಲಯ, ಬೆಂಗಳೂರು	೧೯೫೯
೪.	ಕಲ್ಲೋಲ ಮಾಲೆ	ತಾರಾಗ್ರಂಥ ಪ್ರಕಾಶನ, ಧಾರವಾಡ	೧೯೬೮
೫.	ಮೊದಲು ಮಾನವನಾಗು	ತಾರಾಗ್ರಂಥ ಪ್ರಕಾಶನ, ಧಾರವಾಡ	೧೯೬೯
೬.	ಚರಗ	ಶ್ರೀಗಿರಿ ಪ್ರಕಾಶನ, ಕುಡಿ–೩	೧೯೮೭
೭.	ಹಾಲ್ದೆನೆ	ಅನುಪಮ ಪ್ರಕಾಶನ, ಅಥಣಿ	೧೯೯೦
೮.	ಮರುಳಸಿದ್ಧನ ಕಂತೆ	ಶ್ರೀಗಿರಿ ಪ್ರಕಾಶನ ಬೆಂಗಳೂರು, ಕುಡಿ–೭	೧೯೯೧ ೧೯೭೭
೯.	ಸಮಗ್ರ ಕಾವ್ಯ	ಶ್ರೀಗಿರಿ ಪ್ರಕಾಶನ, ಬೆಂಗಳೂರು	೨೦೦೮

ವಚನ ಸಂಗ್ರಹಗಳು:

೧.	ವಚನೋದ್ಯಾನ	ಶ್ರೀಗಿರಿ ಪ್ರಕಾಶನ, ಬೆಂಗಳೂರು	೧೯೭೭, ೨೦೦೦ ೨೦೧೦, ೨೦೧೮
೨.	ವಚನ ನಂದನ	ಶ್ರೀಗಿರಿ ಪ್ರಕಾಶನ, ಬೆಂಗಳೂರು	೧೯೮೩, ೨೦೦೦
೩.	ವಚನಾರಾಮ	ಶ್ರೀ ಅನ್ನದಾನ ವಿಜಯ ವಿದ್ಯಾ ಪ್ರಸಾರಕ ಸಮಿತಿ, ನರೇಗಲ್ಲ	೧೯೯೨
೪.	ಸಮಗ್ರ ವಚನ	ಶ್ರೀಗಿರಿ ಪ್ರಕಾಶನ, ಬೆಂಗಳೂರು	೨೦೦೯

ನಾಟಕಗಳು:

೧.	ಆತ್ಮಾರ್ಪಣ	ಹೈದರಾಬಾದು ವೀರಶೈವ ತರುಣ ಸಂಘ	೧೯೪೨
೨.	ಭಾರತ ವೀರ	ನರೇಶ್ ಅಂಡ್ ಕಂಪನಿ, ಮೌಂಟ್ ಜಾಯ್ ರಸ್ತೆ, ಬೆಂಗಳೂರು–೧೯	೧೯೬೩ ೬೪, ೬೭
೩.	ರಜತ ರೇಖೆ	ಶ್ರೀ ಎಂ. ಬಿ. ತರುಮರಿ ಕಾರ್ಯದರ್ಶಿ, ಕರ್ನಾಟಕ ಸಹಕಾರಿ ಸಾಹಿತ್ಯ ಸಂಘ ಲಿಮಿಟೆಡ್, ಧಾರವಾಡ	೧೯೬೨ ೬೫
೪.	ಭಗ್ನ ನೂಪುರ	ಕರ್ನಾಟಕ ಟ್ರೇಡಿಂಗ್ ಏಜನ್ಸೀಸ್, ಬನಶಂಕರಿ ಎರಡನೇ ಹಂತ, ಬೆಂಗಳೂರು–೭೦	೧೯೮೪

೫. ಸಮಗ್ರ ನಾಟಕಗಳುಶ್ರೀಗಿರಿ ಪ್ರಕಾಶನ, ಬೆಂಗಳೂರು ೨೦೧೦

ಕಥಾ ಸಂಕಲನಗಳು:

೧.	ಕಥಾಮಂಜರಿ	ಸತ್ಯಾಶ್ರಯ ಪ್ರಕಾಶನ	
		ಮಂದಿರ ಹೈದ್ರಾಬಾದ್	೧೯೫೧
೨.	ತುಷಾರ ಹಾರ	ಶ್ರೀ ಗಿರಿ ಪ್ರಕಾಶನ, ಬೆಂ.	೧೯೮೭

ಕಾದಂಬರಿ:

೧.	ತ್ರಿಭುವನ ಮಲ್ಲ	ಗುರು ಕುಮಾರಿ ಪ್ರಕಾಶನ,	೧೯೬೪
		೨೨೨೪ ಬಸವೇಶ್ವರ,	೧೯೮೧
		ನಾಲ್ಕನೇ ಅಡ್ಡರಸ್ತೆ	೧೯೮೫
		ಮೈಸೂರು–೫೭೦ ೦೦೪	

ಮಕ್ಕಳ ಸಾಹಿತ್ಯ:

೧.	ತುಪ್ಪಾ ರೊಟ್ಟಿ	ಕರ್ನಾಟಕ ಸಹಕಾರಿ	
	ಗೇ ಗೇಗೇ	ಪ್ರಕಾಶನ ಮಂದಿರ	೧೯೬೪, ೭೩
೨.	ಗಿಲ್ ಗಿಲ್	ಭಾರತೀ ಸಾಹಿಯ	
	ಗಿಲಗಚ್ಚಿ	ಭಂಡಾರ, ವಿಜಾಪೂರ	೧೯೭೮
೩.	ತಿರುಗೆಲೆತಿರುಗೆಲೆ	ಭಾರತೀ ಸಾಹಿತ್ಯ ಭಂಡಾರ,	
	ತಿರುಗುಯ್ಯಾಲೆ	ವಿಜಾಪೂರ	೧೯೮೧, ೧೯೮೯
೪.	ಬಣ್ಣ ಬಣ್ಣದ	ನಿರ್ಮಲ ಪ್ರಕಾಶನ,	
	ಓಕುಳಿ	ರಾಮಲಕ್ಷ್ಮಣ ನಿಲಯ,	೧೯೮೭
		ಕೆ.ಆರ್. ಬಡಾವಣೆ, ತಿಪಟೂರು	
೫.	ಭಾರತವೆಲಕೆ	ಶ್ರೀಗಿರಿ ಪ್ರಕಾಶನ,	
	ಬಾವುಟವೊಂದೇ	ಬೆಂಗಳೂರು, ಕುಡಿ–೭	೧೯೯೧
೬.	ಸಮಗ್ರ ಮಕ್ಕಳ	ಶ್ರೀಗಿರಿ ಪ್ರಕಾಶನ	೨೦೧೬
	ಸಾಹಿತ್ಯ	ಬೆಂಗಳೂರು	

೭.	ಮಕ್ಕಳ ಹಾಡುಗಳು	ಹೇಮಂತ ಸಾಹಿತ್ಯ ಬೆಂಗಳೂರು	೨೦೧೮

ಮಕ್ಕಳ ನಾಟಕ:

೧.	ನ್ಯಾಯ ನಿರ್ಣಯ	ಭಾರತಿ ಸಾಹಿತ್ಯ ಭಂಡಾರ, ವಿಜಾಪೂರ	೧೯೮೬

ಮಕ್ಕಳ ಪ್ರವಾಸ ಸಾಹಿತ್ಯ

೧.	ಮಕ್ಕಳ ಲೋಕ	ಭಾರತೀ ಸಾಹಿತ್ಯ ಭಂಡಾರೆ ಸಂಚಾರ ವಿಜಾಪುರ	೧೯೮೯

ಜೀವನ ಚರಿತೆಗಳು:

೧.	ಶರಣ ಚರಿತಾಮೃತ	ವಯಸ್ಕರ ಶಿಕ್ಷಣ ಸಮಿತಿ, ಮೈಸೂರು	೧೯೬೪ ೭೭, ೯೨
		ಕನ್ನಡ ಮತ್ತು ಸಂಸ್ಕೃತಿ ಇಲಾಖೆ	೨೦೧೦ ೨೦೧೩
೨.	ಸಿದ್ಧರಾಮ	ಭಾರತ-ಭಾರತಿ ಪುಸ್ತಕ ಸಂಪದ, ಬೆಂಗಳೂರು-೧೯	೧೯೭೪
೩.	ಬಸವಣ್ಣನವರ ಜೀವನ ಹಾಗೂ ಸಂದೇಶ	ಪ್ರಸಾರಾಂಗ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ	೧೯೭೭
೪.	ನಜೀರ್ ಅಕಬರಾಬಾದಿ	ಸಾಹಿತ್ಯ ಆಕಾಡೆಮಿ, ನವದೆಹಲಿ	೧೯೭೮
೫.	ಹರ್ಡೇಕರ ಮಂಜಪ್ಪ ಶ್ರೀ	ವೀರಶೈವ ಅಧ್ಯಯನ ಸಂಸ್ಥೆ, ತೋಂಟದಾರ್ಯ ಸಂಸ್ಥಾನ ಮಠ, ಗದಗ	೧೯೭೮
೬.	ಮಿರ್ಜಾ ಗಾಲಿಬ್	ಭಾರತ-ಭಾರತಿ ಪುಸ್ತಕ ಸಂಪದ, ಬೆಂಗಳೂರು-೧೯	೧೯೭೯

೭.	ಮಹಾದೇವಿ	ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ	೧೯೮೨ ೨೦೦೩
೮.	ಅಲ್ಲಮ ಪ್ರಭು	ಬಸವ ಸಮಿತಿ, ಬೆಂಗಳೂರು-೧	೧೯೮೯

ಸಂಪಾದಿತ ಕೃತಿಗಳು:

೧.	ಸುಬೋಧ ಸಾರ		೧೯೩೬,೫೧
೨.	ಶ್ರೀಕಾರ	ಕರ್ನಾಟಕ ಸಾಹಿತ್ಯ ಮಂದಿರ, ಹೈದರಾಬಾದ್	೧೯೫೪
೩.	ಪ್ರಬಂಧ ಮಾಲೆ	ಕರ್ನಾಟಕ ಸಾಹಿತ್ಯ ಮಂದಿರ ಹೈದರಾಬಾದ್	೧೯೫೪
೪.	ಪದ್ಯ ರತ್ನಾಕರ		
೫.	ಮಹಾತ್ಮ ಕನಕದಾಸರ ಪ್ರಶಸ್ತಿ	ರಾಜ್ಯಸಮಿತಿ, ಶ್ರೀ ಕನಕದಾಸರ ನಾಲ್ಕನೇ ಶತಮಾನೋತ್ಸವ, ಬೆಂಗಳೂರು	೧೯೬೫
೬.	ಶರಣ ಪ್ರಸಾವ	ನೃಪತುಂಗ ಪ್ರಕಾಶನ, ಕಲಬುರ್ಗಿ	೧೯೬೯
೭.	ಸಿದ್ಧಗಂಗಾಶ್ರೀ	ಶ್ರೀ ಮನ್ನಿರಂಜನ ಪ್ರಣವಸ್ವರೂಪಿ ಡಾ. ಶಿವಕುಮಾರ ಸ್ವಾಮಿಗಳ ಅಭಿನಂದನ ಗ್ರಂಥ ಸಮಿತಿ	೧೯೮೧
೮.	ಮಣಿಹ	ಬಿ.ಎಂ. ಶ್ರೀ ಸ್ಮಾರಕ ಪ್ರತಿಷ್ಠಾನ (ರಿ) ೫೪ 'ಅರವಿಂದ' ೩ನೆಯ ಅಡ್ಡಬೀದಿ, ಗವಿಪುರಂ ವಿಸ್ತರಣ, ಬೆಂಗಳೂರು	೧೯೮೨
೯.	ಬಸವದರ್ಶನ (ಹಿಂದಿ)	ಬಸವ ಸಮಿತಿ, ಬಸವ ಭವನ, ಬಸವೇಶ್ವರ ವೃತ್ತ, ಬೆಂಗಳೂರು	೧೯೮೩
೧೦	ಬಸವ ಮತ್ತು ದಲಿತೋದಯ	ಬಸವ ಸಮಿತಿ, ಬಸವ ಭವನ, ಬಸವೇಶ್ವರ ವೃತ್ತ ಬೆಂಗಳೂರು.	೧೯೮೩

೧೧	ಬಸವ ಮತ್ತು ವಿಚಾರವಾದ	ಬಸವ ಸಮಿತಿ, ಬಸವ ಭವನ, ಬಸವೇಶ್ವರ ವೃತ್ತ ಬೆಂಗಳೂರು	೧೯೮೪
೧೨	ಮಳೆಯರಾಜ ಚಾರಿತ್ರ್ಯ	ಶ್ರೀಗಿರಿ ಪ್ರಕಾಶನ, ಬೆಂಗಳೂರು	೧೯೮೯

ಇತರ ಕೃತಿಗಳು:

೧.	ವಿಕಾಸವಾಣಿ	ಸಹಜೀವನ ಪ್ರಕಾಶನ, ಕಾಚಿಗೂಡಾ, ಹೈದರಾಬಾದ್	೧೯೫೫
೨.	ಗ್ರಾಮ ಸ್ವರಾಜ್ಯ	ಸಹ್ಯಾದ್ರಿ ಪ್ರಕಾಶನ ೧೯೮೨	
೩.	ಚಿಂತನ ಲಹರಿ	ಶ್ರೀಗಿರಿ ಪ್ರಕಾಶನ, ಬೆಂಗಳೂರು, ೩೦–೫	೧೯೮೯
೪.	ಶರಣಸರಣಿ	ತರಳಬಾಳು ಪ್ರಕಾಶನ, ಸಿರಿಗೆರೆ	೧೯೯೨

ಆಯ್ದ ಕವನಗಳು

೧.	ಕಾವ್ಯಾನಂದರ ಆಯ್ದ ಕವನಗಳು	ನರೇಶ್ ಅಂಡ್ ಕಂಪನಿ, ಹನುಮಂತನಗರ, ಬೆಂಗಳೂರು	೧೯೮೨
೨.	ಆಯ್ದ ಕವನಗಳು	ಕನ್ನಡ ಮತ್ತು ಸಂಸ್ಕೃತಿ ಇಲಾಖೆ (ವಿಶ್ವಕನ್ನಡ ಸಮ್ಮೇಳನ, ಬೆಂಗಳೂರು)	೧೯೮೨
೩.	ಕಾವ್ಯಾನಂದರ ಕವಿತೆಗಳು	ಕನ್ನಡ ಪುಸ್ತಕ ಪ್ರಾಧಿಕಾರ ಬೆಂಗಳೂರು	೨೦೦೧

ಡಾ. ಸಿದ್ಧಯ್ಯ ಪುರಾಣಿಕರ ಬಗ್ಗೆ ಪ್ರಕಟಿತ ಕೃತಿಗಳು

೧. ಕಾವ್ಯಶ್ರೀ ಕಾವ್ಯಾನಂದ	ಸತ್ಯಾನಂದ, ಮೇಘಮಿತ್ರ ಸಂಭಾವನಾ ಗ್ರಂಥ ಕಾವ್ಯಾನಂದ ಸಮಿತಿ ಬಿಜಾಪೂರ	೧೯೬೯
೨. ಜೀವನ ವಿಕಾಸ ವಿಶೇಷ ಸಂಚಿಕೆ	ಸಂ. ಸಹ ನಿರ್ದೇಶಕರು, ಶಿಕ್ಷಣ ಇಲಾಖೆ, ಕಲಬುರ್ಗಿ, ಸಂಪುಟ ೬, ಸಂಚಿಕೆ ೮–೯	೧೯೭೩
೩. ಕಾವ್ಯಾನಂದ	ಮಿರ್ಜಿ ಅಣ್ಣಾರಾಯ, ಕೃಷ್ಣ ಕೊಲ್ಹಾರ ಕುಲಕರ್ಣಿ, ಚಂದ್ರಗಂಗಾ ಜ್ಞಾನಪೀಠ, ಶೇಡಬಾಳ	೧೯೭೩
೪. ಕಾವ್ಯಾನಂದ	ಸಾ.ಶಿ. ಮರುಳಯ್ಯ, ಸಿದ್ಧಯ್ಯ ಪುರಾಣಿಕರ ಅಭಿನಂದನ ಸಮಿತಿ, ಚಾಮರಾಜಪೇಟೆ, ಬೆಂಗಳೂರು–೧೮	೧೯೮೧
೫. ಸಹೃದಯ	ಟಿ.ಆರ್. ಮಹದೇವಯ್ಯ, ಪುರಾಣಿಕರ ಅಭಿನಂದನಾ ಸಮಿತಿ, ಬೆಂಗಳೂರು–೧೮	೧೯೮೧
೬. ಸಾಹಿತಿಗಳ ಸಂಗದಲ್ಲಿ	ಲೇ : ದೇಜಗೌ	೧೯೮೧
೭. ಕಾವ್ಯಾನಂದರ ಕಾವ್ಯ	ವೃಷಭೇಂದ್ರ ಅರ್ಕಸಾಲಿ ಸಂಕ್ರಮಣ ಪ್ರಕಾಶನ, ಧಾರವಾಡ	೧೯೮೭
೮. ಸಿದ್ಧಯ್ಯ ಪುರಾಣಿಕ	ಜಿ.ಎಸ್. ಸಿದ್ಧಲಿಂಗಯ್ಯ, ವೀರಶೈವ ಅಧ್ಯಯನ ಸಂಸ್ಥೆ, ಗದಗ	೧೯೯೫
೯. ಡಾ.ಸಿದ್ಧಯ್ಯಪುರಾಣಿಕರ ಕೃತಿಗಳು	ಎನ್.ಬಿ. ಬುಳ್ಳಾ, ಜ್ಯೋತಿಶ್ರೀ ಪ್ರಕಾಶನ, ಮಾಣಿಕೇಶ್ವರಿ ನಗರ, ಗುಲಬರ್ಗಾ	೧೯೯೯
೧೦. ಕಾವ್ಯಾನಂದ	ಡಾ. ಚೆನ್ನಬಸವ ಹಿರೇಮಠ ಪ್ರಸಾರಾಂಗ, ಗುಲಬರ್ಗಾ ವಿಶ್ವವಿದ್ಯಾಲಯ ಗುಲಬರ್ಗಾ – ೫೮೫ ೧೦೬	೨೦೦೫
೧೧. ಕಾವ್ಯಾನಂದರ ಬದುಕು ಮತ್ತು ಕಾವ್ಯ	ಡಾ. ಪ್ರಕಾಶಗಿರಿ ಮಲ್ಲನವರ ಕನ್ನಡ ಸಾಹಿತ್ಯ ಪರಿಷತ್ತು ಬೆಂಗಳೂರು	೨೦೧೮

ಅನುಬಂಧ ೬



ಆತ್ಮಾರ್ಪಣೆ ನಾಟಕವು ೧೯೪೨ರಲ್ಲಿ ಹೈದರಾಬಾದಿನ ವೀರಶೈವ ತರುಣ ಸಂಘದವರಿಂದ ಅಭಿನಯಿಸಲಾಯಿತು.

ಆತ್ಮಾರ್ಪಣೆ ನಾಟಕದಲ್ಲಿ ಭಾಗವಹಿಸಿದ್ದವರ ವಿವರ

ನಿಂತಿರುವವರು :

೧. ಶ್ರೀ ನೀಲಕಂಠರಾವ ಪಾಟೀಲ (ಚೆನ್ನಬಸವಣ್ಣನವರ ಪಾತ್ರದಲ್ಲಿ) – ೨ನೆಯವರು

೨. ಡಾ.ಕೆ. ಮುದ್ದಣ್ಣ (ಶೀಲವಂತನ ಪಾತ್ರದಲ್ಲಿ) – ೪ನೆಯವರು

ಕುರ್ಚಿಯಲ್ಲಿ ಕುಳಿತಿರುವವರು :

೧. ಶ್ರೀ ಎನ್.ಎಸ್. ಪಾಟೀಲ ಗೂಗಲ್ (ಮಧುವರಸನ ಪಾತ್ರದಲ್ಲಿ) – ೨ನೆಯವರು

೨. ಶ್ರೀ ಸಿ.ಎಸ್. ಇನಾಂದಾರ (ಬಿಜ್ಜಳನ ಪಾತ್ರದಲ್ಲಿ) – ೩ನೆಯವರು

೩. ಶ್ರೀ ಗುರುಶಾಂತಯ್ಯನವರು (ಕೊಂಡೆಯ ಮಂಚಣ್ಣನ ಪಾತ್ರದಲ್ಲಿ) – ೪ನೆಯವರು

೪. ಶ್ರೀ ಕೆ.ಆರ್. ಹಿರೇಮಠ (ಬಲದೇವನ ಪಾತ್ರದಲ್ಲಿ) – ೫ನೆಯವರು

೫. ಡಾ. ಸಿದ್ಧಯ್ಯ ಪುರಾಣಿಕ (ಬಸವೇಶ್ವರರ ಪಾತ್ರದಲ್ಲಿ) – ೬ನೆಯವರು

೬. ಶ್ರೀ ಕೆ. ಬಸವಣ್ಣ (ಪ್ರಭುದೇವರ ಪಾತ್ರದಲ್ಲಿ) – ೭ನೆಯವರು

ಕೆಳಗೆ ಕುಳಿತಿರುವವರು :

೧. ಶ್ರೀ ಜಿ.ಎಸ್. ಹಿರೇಮಠರು (ಹರಳಯ್ಯನ ಪಾತ್ರದಲ್ಲಿ) – ಮೊದಲನೆಯವರು

೨. ಶ್ರೀಮತಿ ಹೊಂಬಳ ಗಿರಿಜಾದೇವಿ (ಗಂಗಾಂಬಿಕೆಯ ಪಾತ್ರದಲ್ಲಿ) – ೩ನೆಯವರು

೩. ಶ್ರೀಮತಿ ಸುಶೀಲ ಪಾಟೀಲ (ನೀಲಾಂಬಿಕೆಯ ಪಾತ್ರದಲ್ಲಿ) – ೫ನೆಯವರು

‘ಗಿರಿಜಾ ಕಲ್ಯಾಣ : ವಿಶೇಷ ಸಂಗೀತ ರೂಪಕ’ವನ್ನು ಬೆಂಗಳೂರಿನ ಹಂಸಧ್ವನಿ ಕ್ರಿಯೇಷನ್ಸ್ ಸಂಸ್ಥೆಯವರು ತಮ್ಮ ೧೧ನೇ ವಾರ್ಷಿಕೋತ್ಸವದ ವಿಶೇಷ ಆಕರ್ಷಣೆಯಾಗಿ ಡಿಸೆಂಬರ್ ೨೦೧೦ರಲ್ಲಿ ಪ್ರಸ್ತುತಪಡಿಸಿದರು.

ಗಿರಿಜಾ ಕಲ್ಯಾಣ : ವಿಶೇಷ ಸಂಗೀತರೂಪಕ

ಬೆಂಗಳೂರಿನ ಸಂಗೀತ ರಸಿಕರಿಗೆ ಹಂಸಧ್ವನಿಯ ಈ ವರ್ಷದ ಕೊಡುಗೆ ಪ್ರಸಿದ್ಧ ಸಾಹಿತಿ ಲಿಂ॥ ಸಿದ್ಧಯ್ಯ ಪುರಾಣಿಕರು ರಚಿಸಿರುವ ಸಂಗೀತ ರೂಪಕ 'ಗಿರಿಜಾ ಕಲ್ಯಾಣ'. ಇದಕ್ಕೆ ಸಂಗೀತಕಲಾರತ್ನ ವಿ॥ ಎಸ್. ಕೃಷ್ಣಮೂರ್ತಿಯವರ ಸಂಗೀತ.

ಬೆಂಗಳೂರು ಆಕಾಶವಾಣಿಗಾಗಿ ೧೯೬೧ರಲ್ಲಿ ಡಾ॥ ಸಿದ್ಧಯ್ಯ ಪುರಾಣಿಕರು ಹಾಗೂ ಶ್ರೀ ಎಸ್. ಕೃಷ್ಣಮೂರ್ತಿಗಳ ಸಾಹಿತ್ಯ-ಸಂಗೀತಗಳ ಸುಮಧುರ ಸಹಯೋಗದಲ್ಲಿ ರಚಿತವಾದದ್ದು 'ಗಿರಿಜಾ ಕಲ್ಯಾಣ'. ಶಾಸ್ತ್ರೀಯತೆಯಿಂದ ಕೂಡಿ, ಶಾಸ್ತ್ರೀಯ ರಾಗಗಳನ್ನೇ ಬಳಸಿ ಸಾಹಿತ್ಯದ ಭಾವವನ್ನು ಜನರಿಗೆ ಹೇಗೆ ಮುಟ್ಟಿಸಬಹುದೆನ್ನುವುದಕ್ಕೆ, ಹಾಗೆಯೇ ಶಾಸ್ತ್ರೀಯ ರಾಗಗಳ ಮಟ್ಟಿಗೆ ಹೊಂದುವಂತೆ, ಜನರಿಗೂ ಸುಲಭವಾಗಿ ತಿಳಿಯುವಂತೆ ಸುಲಲಿತ ಸಾಹಿತ್ಯ ಹೇಗೆ ರಚಿತವಾಗಬಹುದೆನ್ನುವುದಕ್ಕೆ ಈ ಸಹಯೋಗ ಒಂದು ಯಶಸ್ವೀ ಉದಾಹರಣೆ. ೧೯೬೧ರಲ್ಲಿ ಈ ಗೀತರೂಪಕ ಮೊದಲಬಾರಿಗೆ ವೇದಿಕೆಯಮೇಲೆ ಪ್ರಯೋಗಗೊಂಡಾಗ ಅಂದಿನ ಪ್ರಮುಖ ಸಂಗೀತಗಾರರೆಲ್ಲ ಸ್ವತಃ ಪಾತ್ರಧರಿಸಿ ಬಂದು ಹಾಡಿದ್ದು ಇನ್ನೊಂದು ವಿಶೇಷ. ಶಾಸ್ತ್ರೀಯ ಸಂಗೀತದ ಆಧಾರದ ಮೇಲೆಯೇ ಹೊಸರೀತಿಯ ಕಾರ್ಯಕ್ರಮವನ್ನು ನೀಡುತ್ತಾ ಬಂದಿರುವ ಹಂಸಧ್ವನಿ ಕ್ರಿಯೇಷನ್ಸ್ ಸಂಸ್ಥೆಗೆ, ಅಂದಿನ ಸಂಗೀತ-ಸಾಹಿತ್ಯಗಳ ಮಧುರ ಸಮ್ಮಿಲನವನ್ನು ನೆನಪಿಸಿಕೊಡುವ 'ಗಿರಿಜಾ ಕಲ್ಯಾಣ', ಸಂಗೀತರೂಪಕವನ್ನು ಮತ್ತೆ ವೇದಿಕೆಗೆ ತರುವುದು ಬಹುದಿನಗಳ ಕನಸು. ವಿ॥ ಎಂ.ಎಸ್. ಶೀಲಾರವರ ನಿರ್ದೇಶನದಲ್ಲಿ ರೂಪುಗೊಂಡ ಈ ಕನಸು, ವಿ॥ ಗೀತಾ ರಮಾನಂದ್ ಅವರ ನಿರ್ಮಾಣ ನಿರ್ವಹಣೆಯ ಸಹಕಾರದೊಂದಿಗೆ ಹಂಸಧ್ವನಿಯ ೧೧ನೆಯ ವಾರ್ಷಿಕೋತ್ಸವದಲ್ಲಿ ಸಾಕಾರವಾಯಿತು. ಗಾಯನದಲ್ಲಿ ವಿದುಷಿಯರಾದ ಎಂ.ಎಸ್. ಶೀಲಾ, ಕಲಾವತಿ ಅವಧೂತ್, ರಂಜನಿ ವೆಂಕಟೇಶ್; ವಿದ್ವಾನ್‌ಗಳಾದ ಎಂ.ಆರ್. ಶ್ರೀನಿಧಿ, ಸುಚೇತನ್ ರಂಗಸ್ವಾಮಿ, ಕೆ.ವಿ. ಕೃಷ್ಣಪ್ರಸಾದ್, ವಿನಯ್ ಎಸ್. ಆರ್, ಅದಮ್ಯ ಆರ್, ಹಾಗೂ ವಿ॥ ಎಂ.ಎಸ್. ಶೀಲಾ ಅವರ ಶಿಷ್ಯವೃಂದ, ವಾದ್ಯಸಹಕಾರದಲ್ಲಿ ವಿ ಗೋಪಾಲ್ (ವೀಣೆ), ಜೆ.ಕೆ. ಶ್ರೀಧರ್ (ಪಿಟೀಲು), ಅಮಿತ್ ನಾಡಿಗ್ (ಕೊಳಲು), ಅದಮ್ಯ ಆರ್ (ಮೃದಂಗ), ಆದರ್ಶ್‌ಶೆಣೈ (ತಬಲಾ), ಅಶ್ವಿನ್ ಕುಮಾರ್ (ಕೀಬೋರ್ಡ್)

ಹಾಗೂ ಮಂಜುನಾಥ್ ಎನ್.ಎಸ್. (ರಿದಂ ಪ್ಯಾಡ್ಸ್) ಪಾಲ್ಗೊಂಡಿದ್ದ ಈ ಕಾರ್ಯಕ್ರಮ ಕೇಳುಗರನ್ನು ಬೇರೊಂದು ಲೋಕಕ್ಕೇ ಕರೆದೊಯ್ದಿತ್ತು. ಅತ್ಯಂತ ಯಶಸ್ವಿಯಾಗಿ ಪ್ರಸ್ತುತಗೊಂಡು ಜನಮನ್ನಣೆಯನ್ನು ಪಡೆದ ಈ ಕಾರ್ಯಕ್ರಮ ಸ್ವತಃ ಶ್ರೀ ಎಸ್ ಕೃಷ್ಣಮೂರ್ತಿಗಳು ಹಾಗೂ ಡಾ॥ ಸಿದ್ಧಯ್ಯ ಪುರಾಣಿಕರ ಕುಟುಂಬವರ್ಗದ ಉಪಸ್ಥಿತಿಯಲ್ಲಿ ಹಾಗೂ ೧೯೬೧ರಲ್ಲಿ ಈ ಗೀತರೂಪಕದಲ್ಲಿ ಭಾಗವಹಿಸಿ ಅದರ ಸ್ವರಲಿಪಿ-ಸಾಹಿತ್ಯವನ್ನು ಜತನದಿಂದ ಕಾಪಿಟ್ಟು ಹಂಸಧ್ವನಿಗೆ ನೀಡಿದ ಡಾ॥ ಎಚ್.ಎಸ್. ಅನಸೂಯಾ ಕುಲಕರ್ಣಿಯವರ ಉಪಸ್ಥಿನಿತಿಯಲ್ಲಿ ನಡೆದದ್ದು ಹಂಸಧ್ವನಿಗೆ ಇನ್ನೂ ಹೆಚ್ಚಿನ ಸಂತೋಷವನ್ನು ಕೊಡುವ ಸಂಗತಿ. ಎಲ್ಲಾ ಕಲಾವಿದರ ಸಹಕಾರದಿಂದ ಸಾಧ್ಯವಾದ ಈ ಪ್ರಯತ್ನ ಮತ್ತೆ ಈ ಕಾರ್ಯಕ್ರಮವನ್ನು ಪ್ರಸ್ತುತಪಡಿಸಲು ಶ್ರೋತೃಗಳ ಬೇಡಿಕೆಯೂ ಕಾರಣವಾಗಿದೆ.